VEC, Library
002923

ವೇಣುಗೋಪಾಲ
ಸೊರಬ

ಜೀವ ಜೀವಂತ

VEC, Library
002923

29

VIJAYA EVENING COLLEGE.
LIBRARY
BANGALORE-4.
ACCN. NO 2923
SECTION
COST 4-00
Date 19.1.72 Librarian.

ಜೀವ ಜೀವಂತ

ಕವನ ಸಂಗ್ರಹ

ವೇಣುಗೋಪಾಲ ಸೊರಬ

ಸವಿತಾ ಪ್ರಕಾಶನ

ಕನಕಪುರ : : ಬೆಂಗಳೂರು ಜಿಲ್ಲೆ

' Jeeva Jeevantha '— a collection of Poems in Kannada by Venugopala Sorab, Published by Savitha Prakashana, Kanakapura, Bangalore District. Pages 56. Price Rs. 4.

© Author.

ಹೊದಿಕೆ : ಬಾ. ಕಿ. ನ.

ಬೆಲೆ : ನಾಲ್ಕು ರೂಪಾಯಿ

ಮುದ್ರಕರು : ಲಿಪಿ ಮುದ್ರಣ, ಬೆಂಗಳೂರು-4.

ಪ ರಿ ವಿ ಡಿ

ಜೀವ ಜೀವಂತ	9
ಗೋಪುರ ಕವಿತೆ ೧	10
ಗೋಪುರ ಕವಿತೆ ೨	12
ಗೋಪುರ ಕವಿತೆ ೩	14
ಬೀಜ ಕವನ ೧	16
ಬೀಜ ಕವನ ೨	17
ಬೀಜ ಕವನ ೩	19
ಬೀಜ ಕವನ ೪	21
ಬಿರುಸು ಮಳೆ	23
ಸಂಘರ್ಷ	25
ಮಿಲನ	27
ನಿರರ್ಥಕ	29
ಎದುರಿಗೇ ಕುಳಿತು	30
ಕನ್ನಡಿ ಮೀನು	31
ಮಲ್ಲಿ	32
ಒಂದು ಚಿತ್ರ	34
ಪ್ರಭಾತ ಪೇರಿ	35
ಕಿವಿ ಮಾತು	37
ಯುರೋಪಿಗೆ ನೆಗಡಿಯಾದಾಗ....	39
ನಕ್ಸಲೀಯನಿಗೊಂದು ಪತ್ರ	41
ಕ್ರುದ್ಧ ಯುವಜನ	43
ಪ್ರಾರ್ಥನೆ	45
ಎಸ್ರಾ ಪೌಂಡ್	46
ಸ್ಪರ್ಶ ಕವಿತೆ	47
ಅಸತೋ ಮಾ...	48
ಕಾರ್ತಿಕದ ಉತ್ಸವ	49
ನಚಿಕೇತ ಪ್ರಜ್ಞೆ	50
ಮಣ್ಣು ಸಿದ್ಧಾಂತ	51

ತಿದ್ದುಪಡಿ

ಪುಟ	ತಪ್ಪು	ಸರಿ
22	ನಕ್ಷತ್ರದಂಡೆ	ನಕ್ಷತ್ರದುಡೆ
23	ಉರಿಯಳಿಳಿ	ಬರಿಯಳಿಳಿ
52	ಭುವರಾಹ	ಭೂವರಾಹ
27	ದೇವಯಾನಿಯೇ	ದೇವಯಾನಿಯೊ
30	ಗುಲಾಬಿ ವಿರಚಿದ	ಗುಲಾಬಿ ಪರಚಿದ
31	ಕಾಲು ಕಾವಳು	ಕುಲುಕುವಳು
31	ಚಿನ್ನಾಟವಾಡುವಳು	ಚಿನ್ನಾಟವಾಡುವಳು
31	ತಿಳದ ತಾತ	ತಿಳಿದ ತಾತ
37	ಪ್ರೀಯ ಮೋಹನ್‌ದಾಸ್	ಪ್ರಿಯ ಮೋಹನ್‌ದಾಸ್
38	ಕೊನೆಯಲ್ಲಿ 'ನಮಸ್ಕಾರ' ಎಂದು ಸೇರಿಸಿಕೊಳ್ಳಬೇಕು.	
45	ಎಸ್ರಾ ಸೌಂಡು	ಎಸ್ರಾ ಪೌಂಡ್
45	ಸ್ವಗರ	ಸ್ವರ್ಗ
46	ನಭಶ್ಚುಂಬಿಗಳು	ನಭಶ್ಚುಂಬಿಗಳು
46	ಬಿಚ್ಕಿದ	ಬಿಚ್ಚಿದ
47	ವಿಸ್ಕೃತಿ	ವಿಸ್ಮೃತಿ
48	ಹೋದ ಸಮಗ್ರ	ಹೋದಸಮಗ್ರ
48	ಅಬ್ಬೆವ ಹಾರಿ	ಅಬ್ಬೆವಹಾರಿ

ಜೀವ ಜೀವಂತ

ತಲೆ ತಿರುಳು ಮಿದುಳಷ್ಟೆ ? ಅಲ್ಲ—
ಮೈಯಿನದು ಜೀವ ಜೀವಂತ :
ತಲೆ ಕಾದೂ ಕಾದೂ ಸಿಡಿದು ಹೋಗಲಿ ;
ಭೂತ ಚೇಷ್ಟೆಯು ಧೂಳಿಧೂಮದಲಿ
ಮೇಘ ಮೋಹಕ ವರ್ಣ ಪ್ರತಿಫಲಿಸಲಿ.

ತಲೆ ತಿರುಳು ಮಿದುಳಷ್ಟೆ ? ಅಲ್ಲ—
ಯಂತ್ರಾಚ್ಛಾದಿತ ನೀಲಿ ಬೆಳಕಿನಲಿ
ರಕ್ತಮಯ ಚಿತ್ರಗಳು ತಲೆತುಂಬಲಿ ;
ಬೀಜಾಂಕುರದ ಕರುಳಿನೆಲೆಗಳಲಿ
ಬಾಲಕೃಷ್ಣನು ಅರಳಿ ಗಮಗಮಿಸಲಿ !

ತಲೆ ತಿರುಳು ಮಿದುಳಷ್ಟೆ ? ಅಲ್ಲ—
ಬೇರುಬೇರಿನ ಗಂಟು ಸಡಿಲಾಗಲಿ ;
ನಾಡಿನಾಡಿಗಳಲ್ಲಿ ದೀಪ ಬೆಳಗಿರಲಿ.
ವಕ್ರ ಜೀವನಬಂಧ ನುಡಿ ಮುತ್ತನಾಯ್ದು
ಯಂತ್ರ ಮಂತ್ರಗಳಲ್ಲಿ ಚೆಂಡಾಡಲಿ !

ತಲೆತಿರುಳು ಮಿದುಳಷ್ಟೆ ? ಅಲ್ಲ—
ಮೈಯಿನದು ಜೀವ ಜೀವಂತ :
ಯಂತ್ರಾಚ್ಛಾದಿತ ನೀಲಿ ಬೆಳಕಿನಲಿ
ನಾಡಿನಾಡಿಗಳಲ್ಲಿ ದೀಪ ಬೆಳಗಿರಲಿ
ತೊನ್ನು ತುಣುಕಲಿ ವೀರ್ಯ ಮೋಚದಿರಲಿ.

ಗೋಪುರ ಕವಿತೆ ೧

ನಾವು ಕೂಡ
ನೇರ
ನಿಂತಿರುವ
ಸ್ತಂಭ :
ಇರಬಹುದು ಕುತ್ಬಮೀನಾರ
ಐಫಿಲ್ ಗೋಪುರ
ಯಾವುದೊ ಪಗೋಡ
ಪಿರಿವಿಡ್ಡು
ಉದ್ದೇಶ : ದೇಶ ಕಾಲ ಆಕಾಶ
ಗಳನರಿತು
ಅಳೆಯಬೇಕೆಂದು ; ಕೂಡಿಸಿ
ಕೊಂಡು
ಹೊಂಡವನೆಲ್ಲ ಹೊಂಡುಹೊಯ್ದು ;
ಅಲ್ಲಲ್ಲೆಕುಯ್ದು
ಆಯತಪ್ಪಿ
ಬಟ್ಟೆಯು ಬಿಚ್ಚಿ
ಕೊಳೆಯುಬಾರದು ಇಲ್ಲ
ಹಣ್ಣಾಗಬಾರದು
ಹಾಗೆ
ಬಿರುಕು
ಛಿದ್ರ ವಿಚ್ಛಿದ್ರ ದರಿದ್ರ
ಮೈ ಕೈ ನೋವು ಹರಿದಾಡಿ
ಹಾವುಗೆ
ಯ ಮೇಲೆ

ಮುಳ್ಳು ಮೆಟ್ಟಿದ
ಕದವ ತಟ್ಟಿದ
ನಾವು ಕೂಡ
ಪೀಸಾಗೋಪುರ
ಶೀಶಮಂಜಿಲಿನ ಗೋಪುರ
ಆದಿಮಧ್ಯಾಂತಗಳ
ತುಂಬಿ ನಿಂತಿರುವ ಮಂಪರ.

ಗೋಪುರ ಕವಿತೆ ೨

ಜಹಜುಗಳ ನಡೆಗೆ ಬೆಳಕು
ಬೀರುವಸ್ತಂಭ
ಲ್ಯಾಟ್‌ಹೌಸು ಎನಿಸುವ ಜಂಬ
ಆಕಾಶಯಾನದ
ನಿಮಗೆ
ನಮಗೆ
ಏತರ ಸಂಬಂಧ ?
ಢೋಂಗು
ಹೊಡೆದೂ ಕೂಡ
ಒಂದೊಂದು ಸಲ
ನಂಬಿಕಸ್ಥ
ನ
ಹಾಗೆ
ನಟಿಸಿ
ಎಲ್ಲರಲ್ಲೂ ಗಳಿಸಿ ವಿಶ್ವಾಸ
ನಿಷ್ಠೂರ ಅಪ್ಪಿಷ್ಟು
ಇರಬಹುದು
ತೆರೆಚಿಮ್ಮುವುದು ತುಂತುರಿನ
ಮಳೆಗರೆದು
ನನಗೆ ತಂಪು
ದಡದ ಸರಕಿನ ವಿವಿಧ
ಕರ್ಮಲೇಪದ
ಅನುಲೇಪನದ ಸ್ಪಿರಿಟ್ಟು !
ಗುಡ್ಡತುದಿ

ಯಲಿ ಉರಿವ
ಬೆಂಕಿಯು ಹಾಗೆ ಹಾಗೆ
ಸ್ವಪ್ರತಿಷ್ಠೆಗೆ
ತಲೆಯು ಮಣಿ
ಮಾಡಿ
ನಾನು ಬೆಳಕಿನ ಬಿಂಬ
ಕಡಲ ಕುದಿತದಲಿ
ಬಿಂಬ
ಕಾಣೆಲಾರೆ
ಮಣಿಯಲಾರೆ

ಗೋಪುರ ಕವಿತೆ ೩

ಈ ಮಿನಾರತ್ತು
ಹಗಲಿ
ಗಿಂತಲೂ
ಕಾಳಕಪ್ಪು
ರಾತ್ರಿಯಲ್ಲಿ
ನಾಲ್ಕು ಮಡಿ ಬೆಳೆದಂತೆ
ಉದ್ದ
ಇನ್ನಷ್ಟು ಉದ್ದ
ಬೆಳುದಿಂಗಳಿನ ಗಾಳಿ
ತೇರಿಸಲಿ
ಬೀಡು
ಅಪ್ಸರಾ ವೃಂದಕ್ಕೆ
ಕೆಳಗೆ
ನಿಂತು ನೋಡುವ ನಮಗೆ
ಉಸಿರು ಕಟ್ಟುವ
ಎದೆಯು ಹೆಪ್ಪುಗಟ್ಟಿಸುವ
ಮೃದು ನರ್ತನ
ಸೂಕ್ಷ್ಮಾತಿ ಸೂಕ್ಷ್ಮ
ವರ್ತನ
ಆ ತುಡಿತ
ಶಹನಾಯಿ ಉಲಿತ
ಸಿಂಪಿನೊಳಗಿನ ಮುತ್ತು
ಕುಲುಕಿದ
ಸಂಭ್ರಮ

ಯಾರೊ ? ಅವರಾರೊ ?
ಬಂದು
ಹೋಗುವುದೇಕೊ ?
ನಮ್ಮ ಶಿಖರದ ಬೆಂಕಿ
ಉರಿಸಿ
ಹೋಗುವುದೇಕೊ ?
ಈ ಇದರೊಡನೆ
ಮಿನಾರತ್ತಿನಲಿ
ಉರಿಯುವ ದೀಪ
ನಮಗೆಲ್ಲ ಕರೆಕೊಡುವ
ಯಾವುದೊ
ನಿರೂಪ ?

ಬೀಜ ಕವನ ೧

ಇಲ್ಲಿ ಇಲ್ಲಿದೆ ಬಾರೊ ಸುಕುಮಾರ
ಕಿವಿಯಲ್ಲಿ ಊದಿದವರಾರೊ
ಅಂತೂ
ಗಾಳಿಗುಂಟ ನಡೆದೆ
ಕಡೆದೆ
ಏನೇನೊ
ಹುಟ್ಟಿಬರಬಹುದೆಂದು
ಅವ್ಯಕ್ತವೆಂದು
ಅಶರೀರವೆಂದು
ಹೇಳಿದುದನೆಲ್ಲ
ಕಣ್ಣುಚಾಚಿ
ಪರೀಕ್ಷಿಸಿದೆ ;
ನಿತ್ಯಾನಂದ
ಸಂಭೂತಿಯಲ್ಲಿ
ಬೀಜಗತ
ದ್ವಿದಳ ಮೈಥುನ
ಕಣ್ಣುತಿವಿದು
ಅನುಭವಿಸಿದೆ
ಬಿಟ್ಟಕಣ್ಣು ಬಿಡುವಾಗಿ
ತೆರವಾಗಿ :
ದೂರದೂರ ಸರಿಯುವ
ಕತ್ತಲಿನವಸ್ಥೆಯಲಿ
ತೆರೆಸೆರಗು ನೊರೆಬೆರಗು
ನಾವೆ ತಟವಟದಲ್ಲಿ
ಹೆಣ್ಣು ಮೊಗವ ;
ನಾಭಿಯಾಳಕ್ಕಿಳಿದು
ಬೀಜ ಕತ್ತಲಿನಲ್ಲಿ
ಮಡುವಿನ ಸ್ನಾಯುಸ್ನೇಹದಲಿ
ಪಡೆದೆ ಸಾಕಲ್ಯವ.

ಬೀಜ ಕವನ ೨

ದ್ವಿದಳ ಪ್ರವೃತ್ತಿ
ಅನಂಗ ಪ್ರಕೃತಿ
ಸಿಡಿದೇಳುವುದಕೂ
ಮೊದಲೆ
ಮೊಲೆ ಸೀಪಿ
ಹವಳದ ಸಾಮುತಿ ;
ಹಸುರೆಲೆ ಮೇಲೆ
ಮೊಳಕೆ ನೆಲದಾಳಕ್ಕೆ
ಎರಡನೂ ಹೀರಿ ಬೆಳೆಯುವ
ಕಸಬುಗಾರಿಕೆ
ಕಲಿಕೆ ಸಮವಾಯ :
ಅಲ್ಲಿಗೂ
ಆತ್ಮ ಶಿಖಿ ಕೈನೆಲ್ಲಿ
ಜಗವಲ್ಲಿ
ಹೂವರಳಿ
ಹಿಗ್ಗು ಹಿಗ್ಗು
ಮೈನುಗ್ಗು
ಕಾಣದ ಕುಗ್ಗುತನ
ನೊಣೆದು
ಬಯಲು ಬೇಸರಿಕೆ
ಕನವರಿಕೆ
ತೇವವಾಡುವ ಕಣ್ಣು

ಮಣ್ಣು
ನಿರ್ಮತ್ಸರದಲ್ಲಿ
ವ್ಯಕ್ತಿ ಕೈಚೆಲ್ಲಿ
ಸ್ನಿಗ್ಧ ಮಡು—
ತೆರೆ ಎಣಿಸಿ ಗೆರೆ ಎಣಿಸಿ
ಹಸುರಿನಪವರ್ತನಕೆ
ದೇಹ ಸೌಷ್ಠವದಲ್ಲಿ
ಬೀಜ ಪ್ರವೃತ್ತಿ
ಪ್ರಕೃತಿ ಮಡುಶಾಂತಿ.

:

ಬೀಜ ಕವನ ೩

ಹಿಂದುಹಿಂದಕ್ಕೆ
ಸೆಳೆಯುತಿದೆ :
ಹೊರಮೈಯ
ಕಾಳಿಕೆಯ ಕಿತ್ತೊಗೆದು
ಮೂಲಕತ್ತಲ
ಕರೆಗೆ ಕರೆಯಾಗಿ
ಒರೆಯಾಗಿ
ಮುಚ್ಚಿಕೊಳ್ಳುತಿದೆ
ಬೆಳಕುಳ್ಳದನ್ನು
ಹಂಗಿಸಿ
ಹಲವು ಬಣ್ಣಗಳ
ಭಂಗಿಸಿ : ಅನ್ಯತ್ರವೇನೆಲ್ಲ—
ವನ್ನೂ
ಥಳಿಸಿ
ಕತ್ತಲ ಮೃದುಲ
ಸ್ಪರ್ಶದಲಿ
ಕತ್ತಲು ಕಂಪು
ಹರಡಿ ಎಲ್ಲೆಲ್ಲೂ
ಹೆಣ್ಣಾಗಿ
ಕಣ್ಣು
ಪಾಪೆಯ ಚಿತ್ರ
ವೈಚಿತ್ರ್ಯ
ಕತ್ತಲಲ್ಲೂ ವೀರ್ಯ

ಸಂಕ್ಷಿಪ್ತ
ಕಾಡಿಗೆಗೆ ಕಣ್ಣರಳಿಸಿ
ಕಸ್ತೂರಿ ಗಂಧದಲಿ
ನಾಡಿ ನಾಡಿಗಳಲ್ಲಿ
ಕೈಕುಲುಕಿ
ಸಂಕರವಾಗಿ
ದಲದಲದ ಶಯ್ಯೆಯಲಿ
ದುಂಬಿ
ಕಾವಳ ಬದುಕು ಸೆರೆಯಾಗಿ.

ಬೀಜ ಕವನ ೪

ಕತ್ತಲು ಘನಿಸಿ
ಮೂಲಧಾತು ಪ್ರಪತ್ತಿ
ವಿಸ್ಮೃತಿ
ಚಾರುಘನ
ವಿಲೋಮ
ಕಂಪನ
ವಿಪಂಚಿ ಕ್ವಣನ
ನೀರು ಚಿಮ್ಮುತ್ತಿದ್ದು
ಸಾವಯುವ ಸ್ಪರ್ಶ
ಸಂಗಸಾಕ್ಷಿ
ಸಂಭಾವ್ಯ
ನಿಷ್ಕ್ರಿಯ ಬಿಂಬ
ಪ್ರಕಾಶ ಪ್ರಸಕ್ತಿ
ಕಾತರಿಸಿ
ಕೋದ ಕರಿಮಣಿ
ದಿನಮಣಿ ಕೆರಳಿಸಿ
ವಿಸರ್ಜಿಸಿ
ನಿರೀಂದ್ರಿಯ ಚಿತ್ತ
ವ್ಯವಹರಿಸಿ
ಮೈಯಲ್ಲೆಲ್ಲ
ಹರಿಯುತಿದೆ
ಕೊರೆಯುತಿದೆ

ಕರೆವ ಕಾಳಿಕೆಯಾಗಿ
　　　　　　　　ನಕ್ಷತ್ರ ದಂಡೆಯಲ್ಲಿ
ಬೀಜ ಗುಡಿಯಲ್ಲಿ
　　　　　　　　ಸಾವಿರ ಬಾರಿ
　　　　　　　　　　　　ಎದೆಯಲ್ಲಿ
ಪ್ರಕಟ ಪ್ರಭಾತ
　　　　　　　　ಪದಾಘಾತ ?
　　　　　　　　　　　　ಸ್ವೈರಾಪಘಾತ ?

ಬಿರುಸು ಮಳೆ

ಕಾದ ಹೆಂಚಿನ ಮೇಲೆ ಬಿರುಸಿನ ಮಳೆ
ಇರಬಹುದು ಮಹಿಳೆ
ಉರಿಯಳೆಳೆಳೆ
ಗೋಡೆಗೆ
ಹೊ
ಡೆ
ಯು
ವ
ಮೊ
ಳೆ

ಯಾವೊಬ್ಬ ಇಂದ್ರನೊ ವರುಣನೊ
ಯಾವೊಬ್ಬ ರಂಭೆಯೋ
ಊರ್ವಶಿಯೋ
ಬಾ
ಯಿ
ಬ
ಡ
ಕೊಂ
ಡು
ಅಯ್ಯಯ್ಯೊ

ಒಳಗೊ ಭಾರಿ ಸೆಕೆ ಕುಚ್ಚಿ ಬಟ್ಟೆಯ ಬಿಚ್ಚಿ
ಬೋನಿನ ಹುಲಿಗಾಯಕ್ಕೆ ಉಪ್ಪು ಹಚ್ಚಿ
ವಿಲಿವಿಲಿ ನಾಲಗೆ ಹಚ್ಚಿ

ಆ
ಪ್ರಾ
ಯ
ನ
ವಿ
ನಿ
ಸಿ
ಹುಚ್ಚಿ ಹುಚ್ಚಿ

ಮಳೆಗೆ ನಾನು ಸೆರೆ ; ನನಗೆ ಮಳೆ ಸೆರೆಯೆ ?
ಕತ್ತಲೆ ಮಳೆಯಾಗಿ ಸುರಿದಿದೆಯೆ ?
ಇದೇನು ಮಳೆ ಎಂದೆಯೋ
ಅವಳು
ಕಿ
ಲ
ಕಿ
ಲ
ನಕ್ಕು
ಮೈಯೆಲ್ಲ
ತೊಯ್ದಿದೆಯೆ ?

ಸಂಘರ್ಷ

ಇವಳು—
ನಡಮುರಿದು ಕೈಗೊಂದು ಕಡ್ಡಿ ಕೊಟ್ಟರೂ
ತೇಲಬಲ್ಲಳು ಗಾಳಿಯಲ್ಲಿ,
ದಾಂಗುಡಿಯ ತಿಳಿಹಸುರು ಮುರಿತದಲ್ಲಿ–
ಲಲಿತಾಂಗಿ ಒಟ್ಟಿನಲ್ಲಿ !
ಚಂದ್ರ ಮೈಯಿನ ಇವಳು
ನುಣುಪು ನಾಜೂಕುಗಳ ತನ್ನ ಕಣ್ಣ ಬಟ್ಟಲಿನಿಂದ
ಭುವರಾಹನನು ಕಂಡಂತೆ ನನ್ನತ್ತ
ಹಾಲು ಚೆಲ್ಲುವಳು–ಅದು ಹರಿದು ಹೊಳೆಯಾಗಿ
ಹರಿಗೋಲಾಗಿ ನನಗೆ ಹುಟ್ಟಿಲ್ಲ.
ತೇಲುವಂತೆ ಮಾಡಿದೆ ಹೇಗೋ
ಹಾಗೇ ನಾನೂ ಪಟ ಬಿಚ್ಚಲಾರದೆ ಹಾಗೋ
ಹೀಗೋ ಸುರುಳಿ ಸುರುಳಿಗಳಾಗಿ
ತೆರೆಯೊಡನೆ ನಡೆದ ಸಂಘರ್ಷದಲಿ
ತೂರು-ತುಂತುರು ಚಿಮ್ಮಿ ಮುದ್ದಾಡಿ
ನಿಧಾನದಲ್ಲಿ ಮೈದಳೆಯುವೆನು.
ಬೆಂಬಿದ್ದು ಬರುವ ಹಿಂಡು ಸಾಲನು ಕಂಡು
ನಿನ್ನೊಳೈಕ್ಯವಾಗುವೆನೆಂದು
ಮಾತು ಕೊಟ್ಟಂತೆನಿಸಿ ಬೆವರುವೆನು.

ನಾಲ್ಕು ಜನ ಜೊತೆಗೂಡಿ
ಕಾಫಿ ಕುಡಿವಾಗ ಚುಟುಕ ಹಾರಿಸುವಾಗ
ವೇದ ವೇದಾಂತಗಳ ಕ್ರೋಢೀಕರಿಸಿ

ರುಚಿಗೆ ತಕ್ಕಂತೆ ಮಾರ್ಪಡಿಸುವ ಬಡಿಸುವ
ಸೊಬಗ ಮೆಚ್ಚುವರು ಬಹಳ ಜನ
ಚುಚ್ಚುವರು ಕೆಲವು ಜನ ಆತ್ಮೀಯರು.

ಅವರಿಗಿದೆಲ್ಲ ಗೊತ್ತೆಂದು ತಿಳಿದಿದ್ದಿ ಏನು ?
ಗೊತ್ತಿಲ್ಲ ಎಂದು ಅಣಕು ನುಡಿದಿದ್ದಿ ಏನು ?
ನನ್ನ-ನಿನ್ನ ನಡುವಣ ಹುಟ್ಟು
ಕಾಮನ ಬಿಲ್ಲಂ ಮೂಡುವುದು
ಮಳೆನಿಂತು ಚೆಲುವು ಮೈತುಂಬಿದಾಗ.

ಮಿಲನ

ಬಲ್ಬು ಝಗ ಝಗ !
ಜೀವ–ಸಾಣೆಗೊಡ್ಡುವ ಪ್ರಯೋಗ
ಶರಧಿಯಾಳದ ರಸಾತಳದ
ಜಡ ಜಂಜಡದ ನಿರ್ಲೇಪ ತಳೆದ ರತ್ನ

ಜಾಗೃತದ ಜಗಲಿಯಲ್ಲಿ ಬೆಳಕು ಸ್ನಾನದಲ್ಲಿ
ಬೀಜ ಸ್ವರೂಪ ಕಳೆದೊಗೆದು
ನಿರ್ಲಕ್ಷತೆಯ ಬೂದಿರಾಶಿಯಲಿ
ಉಳಿವುದೇ ಕಾವು ? ಕಾವು ಬಿಗಿ ಹಿಡಿದರೇ
ಲಲಿತ ದಳಗಳ ಬದುಕು ; ತುಡುಕು ದೃಷ್ಟಿಯ
ರೆಪ್ಪೆಯ ಕೊನೆಯ ಆರ್ದ್ರ
ಕೆಂಪು ಬಿಳುಪು ಕನಕಾಂಬರ ನೀಲಿ ಹಳದಿ
ಕೆಂಪು ಬಣ್ಣದಲ್ಲಿ ; ಬಣ್ಣ ಆಕೃತಿಯಲ್ಲಿ
ಕದಡಿ ಹರಡುವ ಕಲ್ಪನಾ ಸಾಮ್ರಾಜ್ಯ

ಅದಕದಕೆ ತಕ್ಕ ಕ್ಲಿಯೋಪ್ಯಾಟ್ರಳೊ ? ಊರ್ವಶಿಯೋ ?
ದೇವಯಾನಿಯೇ ? ಶಕುಂತಲೆಯೊ ? ಪದ್ಮಿನಿಯೊ ?

ಬಲ್ಬು ಬೆಳಗುವುದು ಒಂದೊಂದಪೂರ್ವಕ್ಷಣ

ಆಯುಸ್ಕಾಂತದನುಭವ ಕೋಶದಲಿ
ವೀರ್ಯ ತುಂಬಿದ ಘಳಿಗೆ ಮೃದು ಮೃದುಲ
ಶಿಖರ ತಲೆಕೆಳಗಾಗಿ ಬೆಟ್ಟ ಬೆಳೆದಂತೆ ಅನುಭವ
ಮೈಯೆಲ್ಲ ನವೋನವ

ಸುಡು ಬಿಸಾಡು ಜಾಗೃತದ ನಿಷ್ಕ್ರಿಯ ಚೀಲ
ತೊಡ ಹೊರಡು ಸಂವೇದೀಶೀಲ—
ಸರ್ವಾಂಗೀಣ ಚೆಲುವು ಮೈ ಚಿಗರಿ ಚಿರತೆಯು
ಸಿಂಹಿಣಿಯು ಹುಲಿಯು ಬೆಕ್ಕಿನ ಬೆಲೆಯು

ಸೀರೆ ನಿರಿಗೆಯು ಹಾವು ಮೈ ಮುರಿತದಲಿ
ಸೊಬಗು ಸಿಂಪಡಿಸಿತ್ತು ಸಂಜೆವೂತು

ನಿರರ್ಥಕ

ನನಗೆ ಒಳಗೇ ಇಲ್ಲದಿರುವಾಗ
ನಿನಗಿದ್ದರೂ ಏನು ?
ಆ ಮಾತನ್ನಾಡ ಬೇಡ ನನ್ನ ಎದುರು.
ನಿನಗಿಲ್ಲಿ ದೊರೆಯುವುದಿಲ್ಲ ನಿನ್ನ ಬಸಿರು
ತುಂಬುವ ಬೀಜ, ತೇಜ.

ನಾನೊಬ್ಬ ಖೊಟ್ಟಿ
ಹಾಗಿದ್ದೂ ಸಂಗ ಮಾಡಿದ್ದೇನೆ.
ತಿಳಿವಿಲ್ಲದ ಜನರ ಕೂಡಿ
ತಳಿವಿಲ್ಲದ ಜನರ ರಾಡಿ
ಕಲಕಿದ್ದೇನೆ—

ಅವರಂ ಯಾರು ಅನ್ನುತ್ತಿಯೊ ?
ಬಿಡು, ನಿನಗೆ ಬಗೆ ಹರಿಯುವುದಿಲ್ಲ
ಆ ವಿಷಯ
ಇರುವ ವಿಷಯ
ಕಣ್ಣಲ್ಲಿ ದೀಪ ಹೊತ್ತಿಸಿದ ಹಾಗೆ
ಎನ್ನುತ್ತೀಯಲ್ಲ

ಅದೇ ನನಗೆ ಅರ್ಥವಾಗುವುದಿಲ್ಲ.
ಅಷ್ಟಕ್ಕೂ ನನ್ನ ನೆರಳನ್ನೇ ನಾನು
ಪೂರೈಸುತಿರುವಾಗ,

ಬಸಿರೇಕೆ ? ಹಬ್ಬಿ ಹಸರಿಸದ ಕಸವೇಕೆ ?
ಕೊರಳು–ಕೊರಳನು ತಬ್ಬುತಿರುವ
ಕಾವು ಅಷ್ಟೇ ಸಾಕೇ !

ಎದುರಿಗೇ ಕುಳಿತು...

ಎದುರಿಗೇ ಕುಳಿತು ಕಣ್ಣು ಮಿಟುಕಿಸುವಳು
ಕೈಚಾಚಿದರೆ ನಿಲುಕುವ ಹುಡುಗಿ
ಚಾಚಲಾರದೆ ಮಿಡುಕಿ ಮಿಡುಕಿ
ನಾನು ನಿಲುಕಲಾರದ ಅವಳು ಪರದೆಯಾಗುವಳು
ಅಗರು ಬತ್ತಿಯ ದಟ್ಟ ಹೊಗೆಯಾಡುವಳು
ಕಂಠದಲಿ ಒತ್ತಿ ಹಿಡಿಯುವಳು

ತಿಪ್ಪೆ ಬೆಳೆದಂತೆ ಬೆಳೆದರೂ ಗೊತ್ತಾಗದಂತೆ
ಹರಡಿಕೊಂಡಿರುವ ಹಲವು
ರೆಂಬೆ ಕೊಂಬೆಗಳ ಉಲಿಪ – ಕಲಹ
ನನಗೆ ಎದೆ ತುಂಬ ಹರಡಿದ ಮುಳ್ಳು
ಇವಳು ಹುಡುಗಿಯೊ ಇಲ್ಲ ಕಾಡು ಕಂಟಿಯೊ
ಮೈತುಂಬ ಹರಿದಾಡುವಳೆ ತುಂಬಿದ ಹೊಳೆ

ನೆರೆದವಳು ಕೋಟಿ ಕಂಠಗಳಾಗಿ ಕಾಡಿದ
ಹುಡುಗಿ ಹಳದಿ ಅರಳಿದ ಎದೆಯು
ತೊಡೆ ಕೊಂಬೆಗಳಲಿ ಹುದುಗಿಸಿ ಚೆಲ್ಲಿ
ಗುಲಾಬಿ ವಿರಚಿದ ಮುಖವ ಮುಂದೂಡಿಯೂ
ದೂಡಲಾರದ ಸೊಗಸು ಮುಡಿಗಟ್ಟಿದವಳು
ಇವಳು ಕರೆದರೆ ಬೇಡ ಎನ್ನುವ ಮರುಳ

ಎಲ್ಲ ಕಾಲಕ್ಕೂ ಇವಳು ಹೆಣ್ಣು ಎದೆಯು
ವೈಶಾಲ್ಯತೆಯು ಮೆರಸಿ ನಡುವಿನಲಿ ಇಕ್ಕಟ್ಟು
ಹಗಲು ಸಂಜೆಗಳಲ್ಲಿ ಸೇತುವೆಯು ಕೆಳಗೆ ಮರಳಿನ ಶಯ್ಯೆ
ಮೈಯ ಬಳಸುವ ಹೊಗರು ಭಾರವೆನಿಸಿ ಬೆಳಗಾಗುತ್ತ
ಬಾರದ ಹುಡುಗಿ ಬಾರದ ಹುಡುಗಿ ಬಾರದ ಹುಡುಗಿ
ಬರಿ ಕನಸು ಬುರುಗಿನ ಕನಸು ಬರಡು ಕನಸು.

ಕನ್ನಡಿ ಮೀನು

ಗಂಟೆತಳದ ಪಾಯಿಜಾಮಕ್ಕೆ ಕಿಂಕಿಣಿ ಕಟ್ಟಿ
ಹೆಜ್ಜೆ ಮೂಡದ ಮೀನು ನಡಿಗೆಯಲಿ ಕಾಲುಕಾವಳು
ಕನಸುಗಣ್ಣಿನ ಚಿತ್ರ ಮೈತುಂಬ ಹಳದಿ ಹುಡಿ ಹರಡಿ
ಷಾಂಪೂ ಹಚ್ಚಿ ತಿಕ್ಕಿದ ಕೇಶ ಬಿಳಿಲು ಬಿಳಿಲಾಗಿ
ಹೆಗಲಿಂದ ಇಳಿದಷ್ಟು ಹೊಗೆಯು ಸಹಜಾತಿ.

ಒಡಲೊಳಗೆಯೊ, ಇಲ್ಲ ತಿದಿಯಾಡುವೆದೆಯಲ್ಲೊ
ಇಲ್ಲ ಕನ್ನಡಿ ಬೆಂಕಿ ತಾತನದೆ ಎದೆಯಲ್ಲೊ
ಎಲ್ಲಿನದೊ ಬೆಂಕಿ ದೇಹಾದ್ಯಂತ ಹೊತ್ತಿ
ಕಾಡುಗಿಚ್ಚಿಗೆ ಇವಳೆ ಎದುರಿನ ಬೆಂಕಿ ?
ಬಿಗಿದು ಕಟ್ಟಿದ ಮುಡಿಯ ಕೋಡಿ ಧುಮುಕಿದಳೆ ಜಾಹ್ನವಿ ?

ಬೆಳಗು ನಡು ಮಧ್ಯಾಹ್ನ ಸಂಜೆ ಮಂಗಳಾರತಿ ವೇಳೆ
ಬಾರಿಸಿದ ಗಂಟೆ ಕಿರುಗಂಟೆ, ತಾತಯ್ಯನದು ಶ್ರೀಕಾರದೂಟೆ
ಆ ತಂಟೆಯೊಡನೆ ಚೆನ್ನಾಟವಾಡುವಳು ಕನ್ನಡಿ ಮೀನು ;
ಉರಿವ ಎಣ್ಣೆಯ ತೊಟ್ಟು ಬೀಳುವ್ರದು ನಕ್ಷತ್ರಕಣೆ ಎನುವ
ತಾತನದು ಮೈಮರವೆಗೊಡ್ಡಿದ ಹುಲ್ಲುಹೊದಿಸಿದ ಗುಡಿ.

ತಾತ–ಮೊಮ್ಮಗಳು ; ಬಂಧ ಕಲ್ಪಿಸಿದ ವೀರ್ಯ ದಾಟಿಸಿದ
ನಡು ಪೀಳಿಗೆಯ ತಕ್ಕ ಗಾತ್ರದ ಲವಲವಿಕೆ ಮೃತ್ಯುಗತ :
ಮೃತ್ಯುವೇನೆಂದು ತಿಳದ ತಾತ ; ತಿಳಿಯದ ಹುಡುಗಿ !
ದೇವರ ಪೂಜೆ ಮಂಟಪದ ದೀಪದೆಸೆಳುಗಳಲ್ಲಿ ಹಳದಿ
ಕೆಂಪಾಗಿ ತಾತನಿಗೆ ಜೀವನದನೆಂಟು ; ಹುಡುಗಿಗೊ ಕನ್ನಡಿ ಕಪಾಟು.

ಮಲ್ಲಿ

ಉದ್ದಾನ ಉದ್ದನ್ನ ಹುಡುಗಿ
ಉದ್ದಿನ ಮೂಟೆಯ ಹುಡುಗಿ
ಆಟೋರಿಕ್ಷಾದ ನಡಗಿ.

ಬಯಕೆ ಬೇಸರಿಕೆ ಇಲ್ಲದ ಬಸವಿ
ನೈಸು – ನಾಜೂಕು ಇಲ್ಲದ ಹಡದಿ
ಮೈಯ ಮಾಲೀಸು ಮಾಡದ ತುಡುಗಿ

ಜೀವನದ ಚದುರಂಗಿ ಹಾಸು
ಕಪ್ಪು ಚೌಕುಳಿ ಎಲ್ಲ ಇವಳದೇ ಗ್ರಾಸು
ಬಾಳು ಮೂರಾಬಟ್ಟೆ ಆದದ್ದೆ ತ್ರಾಸು

ಬೆಳಗಾಗಲಿಲ್ಲ ಇವಳಿಗೆ ; ಮೋಹಿನಿ
ರೂಪ ಕಂಡರಿಯಳು, ಅಲ್ಲ ಶೂರ್ಪನಖಿ —
ಇವಳ ಅದೃಷ್ಟ ಮಾತ್ರ ಬರಿಯ ಬಿಕನಾಸಿ.

ಈಗಿವಳು ಮುದುಕಿ ; ಮೊಲೆಬತ್ತಿ
ತೊಡೆಯ ಕಾಮನ ಬೇರು ಸೆಲೆಬತ್ತಿ
ಇವಳ ನೆತ್ತಿಯ ಬಿಳಿಲಿಗೊಂದೊಂದು ಪ್ರಣಯದ ಕೊತ್ತಿ

ಪ್ರಾಣ ಬಿಡುವಾಗಲೂ, ಮೆಚ್ಚಿ ಕೈಬಿಟ್ಟವರ
ಎದೆಯಲ್ಲಿ ಅವಲಕ್ಕಿ ಕುಟ್ಟಿ ; ಕೈಕೊಟ್ಟವರ
ಮುಂಜುಟ್ಟಿನಲ್ಲಿ ನಡುಕಟ್ಟಿ – ಇವಳು ಬಂಗಾರ.

ಕಪ್ಪಾನ ಕಪ್ಪಗುಡ್ಡದ ಹಿಂದೆ
ನುಸುಳಿ ಹೋಯಿತು ಕುರಿಮಂದೆ
ಈ ಉದ್ದಾನ ಹುಡುಗಿ ನಮಗೆ ನೆನಪೊಂದೆ

ಉದ್ದಾನ ಉದ್ದನ್ನ ಹುಡುಗಿ
ಉದ್ದಿನ ಮೂಟೆಯ ಹುಡುಗಿ
ಮೈತುಂಬ ಹರಡಿದ ಪ್ರೀತಿ – ಹಡದಿ

ಒಂದು ಚಿತ್ರ

ಮೊನ್ನೆ ಬೀದಿಯ ಕಡೆಗೆ ಕಣ್ಣು ಹಾಯಿಸಿ ನಿಂತೆ :
ನುಣುಪು ಹನಿಯೊಡೆದು ನಾಜೂಕಾಗಿ ಮಳೆಬಂತು.
ತಿಳಿದೊ ತಿಳಿಯದೆಯೊ ಮೆಚ್ಚಿಯೋ ಬೆಚ್ಚಿಯೋ
ನಿರ್ವಿಣ್ಣಳಾಗಿ ಹರೆಯದ ಹೆಣ್ಣು ಚಲಿಸುತ್ತಿತ್ತು.

ಆ ಚಲಾವಣೆಗೆ ಬೆಲೆ ನಿರ್ಧಾರ ಗಂಡಿನ ಪಕಳೆ
ಹೆಜ್ಜೆ ಹೆಜ್ಜೆಗೂ ಅನುಸರಿಸಿ ಬಿರಿಯುವ ಬಂಡು
ಬೇಡವೆನ್ನದ ಅವಳು, ಬೇಕೆನ್ನದ ಊರ್ವಶಿ
ಅವಳು ನಡೆದು ಅವನು ನಡೆದು ಮಳೆಯೊ ಬಿರುಸಾಯ್ತು.

ಹಿಂದೆ ಬೆಚ್ಚಗೆ ಯಾರೊ ಉಸಿರೆಳೆದು ಬಂದಂತೆ
ತಿರುಗಿ ನೋಡಿದ ಹೆಣ್ಣು, ಅವಗೆ ಬಂಗಾರ ಜಿಂಕೆ
ಅವಳ ಕಣ್ಣಿನ ನುಡಿಗೆ ಪ್ರತಿಸ್ಪಂದನದ ಉಕ್ಕು
ಅಲ್ಲೆ ಮರದಡಿ ನಿಂತರಿಬ್ಬರೂ ಛಾಪೆಯ ಕೊಟ್ಟು.

ಮಳೆ ನಿಂತು ಬೀಳ್ಕೊಡಲು ಸಮಯ ; ಮನಸಿಲ್ಲ —
ವ್ಯವಹಾರ ಮತ್ತೆ ಶುರುವಾಗಿ ಕೊನೆಯೆಂಬುದಿಲ್ಲ.

ಪ್ರಭಾತ ಫೇರಿ

ಬೆಳಗು ತುಂಬುವುದು ಮೈಯ –
ನೆಚ್ಚರಿಕೆಯಲಿ. ನೆಚ್ಚಿಕೆಯ ಗೆಳತಿ
ಜರಾಸಂಧನ ಮೈಹೋಳು ಗೋಳು ಹುಯ್ದು ಹುಯ್ಯಿಸಿಕೊಂಡು
ಸುಸ್ತು ಹೊಡೆದಂತೆ, ನೀಡವದ ಮುಖದಲ್ಲಿ
ಒಕ್ಕಲಗಿತ್ತಿ ಬಂದೆಬ್ಬಿಸಿದ ಮೇಲಕ್ಕೆ
ಅಲ್ಲಿಗೂ ಕೂಡ ಕಿವಿಕಚ್ಚಿ ಭಾರವ ನಟಿಸಿ
ಹೊರಡುವಳು. ಮುಚ್ಚಿದ ಕಿಟಿಕಿ
ತೆರೆಮರೆಯ ಬೆಳಕನ್ನಿಷ್ಟು ವಂದರಿ ಆಡಿ
ಬ್ಲೇಡಿನ ಕೆಲಸ ಗಲ್ಲದ ಮೇಲೆ
ನಡೆದಂತೆ ನುಣ್ಣಗೆ ಸಕ್ಕರೆಯ ಕನಸು.

ನೀನೆದ್ದು ವದರುವೆ ಬೆಡ್‌ಷೀಟು
ಮೈ ಮುರಿವೆ ಅತ್ತಿತ್ತ ಕಣ್ಣನ್ನು ಚೆಲ್ಲಿ ಬೆದರುವೆ
ಎಂಬ ಎಲಿಯಟ್ಟನ ನುಡಿಗೆ ಕಿವಿಗೊಟ್ಟು
ಹೊರಗೆ ವಾಹನದ ಸುಳಿವು ಪತ್ರಿಕೆಯ
ಅರೆಬೆಂದ ಮಸಾಲೆಯ ಮೂಗು ಬಿಚ್ಚುವ ನರಳು ನೋವು
ಬೇಕೋ ಬೇಡವೋ ಹಾಗೂ ಹೀಗೂ
ಸಂಪು ಚಳವಳ ಎಲ್ಲ ಮುಗಿದ ಬೀದಿಯ
ಪ್ರಭಾತ ಫೇರಿ ಸಿಟಿ ಬಸ್ಸಿನಲಿ ಬಸ್ಸು ಸ್ಟಾಪಿನಲಿ
ಕ್ಯಾಸೆಂಡ್ರ ಕಂಪಂತಹುದೆ ದೌರ್ಜನ್ಯ ; ದಂತಕತೆ
ಬೆದ್ದು ಕಾಫಿಯು ಹೀರುವ ಅಸಹಾಯಕತೆ.

ಏನೋ ಆಗಿದೆ ಅಂತೂ ಉರುಳುತಿದೆ ಸರ್ಕಾರ
ವಾರಕ್ಕೇಳು ದಿನವೂ ನಡೆಯುತಿದೆ ಚಮತ್ಕಾರ

ಯಾವ ಕಾವ್ಯಾರಾಮು ? ಯಾವ ಸಿನೇರಾಮು ?
ಹತ್ತು ಗಂಟೆಯ ದುಡಿತ – ಗಂಡು ಹೆಣ್ಣೆಂಬ ಭೇದವಿಲ್ಲದೆಯೆ
ಎಲ್ಲ ಕೊರಳಿಗೆ ಬಿದ್ದ ಸತುವಿನ ಪದಕ
ಸಂಜೆ ಮನೆವರೆಗೂ ಬರಲೆಬೇಕೇ ಚಿನ್ನ ?

ಬಿಟ್ಟು ಏಳಲೆಬೇಕೆ ಹಾಸಿಗೆಯನ್ನ ?
ಒಡಹುಟ್ಟು ನೀನಲ್ಲದಿದ್ದರೂ ಜೀವಕ್ಕಂ —
ಟಿರುವ ನಿನ್ನನ್ನ ಹೊಂದಿ ಬಾಳಲೇ ಬೇಕೆ ?
ಸಕಲ ಗುಣ ಸಂಪನ್ನ (ಬೇವಾರ್ಸಿ) ನಾನೂ ?

ಕಿವಿಮಾತು

ಪ್ರಿಯ ಮೋಹನದಾಸ್,
ದೇಶ ಕಾಲಗಳ ದಟ್ಟಿ-ಉತ್ತರೀಯಗಳನ್ನು
ಕಳಚಿ ನಿಂತಿರುವ ನಿಮಗೆ
ಹೇಗನ್ನಿಸುವುದೊ ? ನಮಗೆ ಮಾತ್ರ
ಆಪ್ಯಾಯಮಾನ ನಿಮ್ಮ ಜನ್ಮ ಶತಮಾನೋತ್ಸವ
ನಮ್ಮ ಹತಮಾನೋತ್ಸವ.

ಪುನರುತ್ಥಾನ ನೀವು ಮರೆಯಲಿಲ್ಲ
ಪವಾಡಗಳ ಮಾಲೆ ಪ್ರದರ್ಶಿಸಲಿಲ್ಲ
ರಾಜಕೀಯದ ಹಸಬೆ ಚೀಲವನು ಹೆಗಲಿಗೇರಿಸಿ
ವಜನ ಹೆಚ್ಚಾಗಿ ಜಗ್ಗಿದರೂನು
ತಲೆಯೆತ್ತಿ ನಡೆದಿರಿ–ಇಲ್ಲ ಅಂದರೆ
ನಿಮ್ಮ ಹೃದಯ ವೈಶಾಲ್ಯ, ಪ್ರಾಯೋಗಿಕ ಕುತೂಹಲ
'ಬಳಸಿ ಬ್ರಹ್ಮಚಾರಿ' ನಿಷ್ಠೆ, ಆಗೀಗಿನ ಕುಚೇಷ್ಟೆ
ಯಾರಿಗೆ ಸ್ವಾಮಿೊ, ಮನಸ್ಸಿಗೆ ಬರುತ್ತಿತ್ತು ?
ಸ್ವಾಮಿ, ಯಾರಿಗೆ ಪ್ರಿಯವಾಗುತ್ತಿತ್ತು ?
ಕುಟುಂಬ ಯೋಜನೆಯ ಪ್ರಚಾರದಂತೆ
ಎಲ್ಲೆಲ್ಲೂ ನಿಮ್ಮ ಚಿತ್ರ ಹೇಗೆ ಸ್ವಾಮಿೊ ಕಾಣಸಿಗುತ್ತಿತ್ತು ?
ಗಾಂಧಿ ಅಂದರೆ ನಮ್ಮ ಮನೆಯ ಜಗುಲಿಯಷ್ಟೇ
ನಮಗೆ ಬಳಕೆ ಪ್ರೀಯ ಮೋಹನ್‌ದಾಸ್
ಬೇರೆಯುವರ ಹಾರಾಟ ಭಕ್ತಿ ಪೂಜೆ ಟೀಕೆ ಟಿಪ್ಪಣಿಗಳ
ಬಾಲಂಗೋಚಿ ಹೊತ್ತು ಹಾರುತಿದೆ ಗಾಂಧಿಪಟ
ಗಾಂಧಿ ಎಂಬ ಹೆಸರಿನ ಮಂತ್ರ
ಯಾವ ಯಾವುದೋ ನಾಲಗೆ ಮೇಲೆ ಹೊರಳಿ

ಆಗಿದೆಯೇನೋ ದುರ್ಮಂತ್ರ.
ಅಹಿಂಸೆ ಸತ್ಯಾಗ್ರಹಗಳ ಬೀಜೋಪದೇಶ
ನೀವು ಕೊಟ್ಟಿದ್ದು ಸಿಡಿದು ಬೆಂಕಿ ಹೊಗೆಕಾರಿ
ದೇಶದೆಲ್ಲೆಡೆ ಅಪಸ್ಮಾರ ಬಡಿದಂತೆ
ಕಾವು ಕಳಚಿದ ಕೊಡಲಿ ಹಿಡಿದು ಕಡಿಯು ಹೊರಟಂತೆ
ನಾವೆಲ್ಲ ಕಡಿತಲೆಯ ವೀರರು
ಮಹಾನುಭಾವರೆ, ನೀವು ಅಲ್ಲೇ ಇರಿ; ಬೋನು ಬಿಟ್ಟು
ಹೊರಕ್ಕೆ ಬರಬೇಡಿ.

ನಿಮ್ಮ ಸಾಧನೆ ನಿಮಗೆ ಹಿರಿದಲ್ಲ
(ಪೂರ್ಣವೂ ಆಗಿರಲಿಲ್ಲ)
ನಿಮ್ಮ ಸಾಧನೆ ನಮಗೂ ಕೂಡ ಹಿರಿದಲ್ಲ
ಎಂದು ಕಾರ್ಯತಃ ಮಾಡಿ ತೋರಿಸುತ್ತಿದ್ದೇವೆ
ಕಾಲು ಕೆರೆದು ಕೂತಿದ್ದೇವೆ
ಅರೆಬೆತ್ತಲೆಯ ಫಕೀರ ಇಂದಿಗೂ ನೀವು ನಮಗೆ !
ಹೋಗಯ್ಯ ಹೋಗಿರಿ ಎಲ್ಲಾದರೂ ಹಾಳು ಗುಡಿಯಲ್ಲಿ
ಮಲಗಿ, ಬಾಯ್ಗೆ ಬಂದದ್ದ ಗಳಹಿರಿ.
ಇಲ್ಲಿ ಬೆಚ್ಚಗೆ ನಮ್ಮ ಪಾಡಿಗೆ ನಾವಿರುತ್ತೇವೆ,
ಮಹಾಶಯ ದೂರ ಸರಿಯಯ್ಯ !

ನನ್ನ ಕೇಳಿದರೆ ನಿಮ್ಮ ಆಳ ವೈಶಾಲ್ಯ
ಘನವಾದದ್ದೇ !
ಸಾಗರ ಎಷ್ಟೇ ದೊಡ್ಡದಾದರೇನು, ಅದಕ್ಕೆ ತಕ್ಕಂತೆ
ನೀವೂ ಒಂದು ಮತ್ಸ್ಯವೊ ಕೂರ್ಮವೊ ಇದ್ದೀರ.
ಸಾಕ್ರೆಟೀಸನ, ಪ್ಲೇಟೋವಿನ, ಸಿದ್ಧಾರ್ಥನ
ಸೂಕ್ಷ್ಮ ಬೌದ್ಧಿಕ ಶೀಲ ದಕ್ಕಲಿಲ್ಲ ನಿಮಗೆ ?
ಭೀಷ್ಮನ ಅವಸಾನ ನಿಮಗೆ ಕೈಸೆರೆಯಾಗಿ
ಔನ್ನತ್ಯದಲ್ಲಿ ಪೀಡಿತರಾಗಿ
ನೀವು ನೊಂದ ನೋವೇ ನಿಮಗೆ ದೊಡ್ಡ ಕೊಡುಗೆ
ಶಿಖಂಡಿಗಳ ಹಿಂಡು ನಮ್ಮ ಕೊಡುಗೆ.

ಯುರೋಪಿಗೆ ನೆಗಡಿಯಾದಾಗ....

ಯುರೋಪಿಗೆ ನೆಗಡಿಯಾದಾಗ ಫ್ರಾನ್ಸು ಸೀನುತ್ತದೆ—
ಭಾರತಕ್ಕೆ ನೆಗಡಿಯಾಗುವುದಕ್ಕೂ ಮೊದಲೇ
ಬಂಗಾಳ ಎಷ್ಟೆಷ್ಟೊ ಸೀನುಗಳ ಅಭಿನಯಿಸುತ್ತದೆ—
ಈ ಚಾಳಿ ಕೇವಲ ನೂರು ವರ್ಷಗಳ ಸಂಪ್ರದಾಯ
ಆರ್ಯಾವರ್ತಕ್ಕೆ ಪೂರ್ವದಲ್ಲಿದ್ದು, ಅನುಭವಿಸಿತ್ತು ದೂರದಿಂದಲೇ
ಕುರುಕ್ಷೇತ್ರದಿಂದೆದ್ದು ಅಪ್ಪಳಿಸಿ ಹೊರಬಿದ್ದ ಆನೆ ಅಲೆಗಳ ಬಡಿತ.
ವಾಯುವ್ಯದಿಂದ ಹರಿದು ಬಂದದ್ದು ಮಡುವಾಯಿತೆ ? ಚೈತನ್ಯ ಹೊಸಹೊಸದು
ಮುಂದಕ್ಕೆ ಠಾಕೂರರು, ಬಾಬುಗಳು, ಚ್ಯಾತರ್‌ಜ್ಯಗಳು,
ಬ್ಯಾನರ್‌ಜ್ಯಗಳು : ರಾಮಕೃಷ್ಣರು, ವಿವೇಕಾನಂದ ;
ಪ್ರಾಕ್ ಚಾರಿತ್ರ್ಯಕಾಲದ ಘನಿತ ಮೌಢ್ಯವ ಸೀಳಿ ನೆಲದಿಂದ
ಬೆಂಕಿ ಚಿಮ್ಮಿದ ಸೊಗಸು—ಉನ್ಮಾದ ಮತ್ತು ಭಂಗಿ—
ಸೇವನೆಯು, ಅಫೀಮು ಧೋರಣೆಯು, ಹೋಮ-ಧೂಮಗಳ
ಆಧ್ಯಾತ್ಮ. ಗಲಿಬಿಲಿಯು ಗಂಟೆ ಜಾಗಟೆ ಶಕ್ತಿಪ್ರೇರಕ.
ಆನಂದ ಮಠದ ಸ್ವಾತಂತ್ರ್ಯ ಯುದ್ಧ ಸಂಗ್ರಾಮಸಂನ್ಯಾಸಿ ಘೋಷ.

೨

ಆ ಉನ್ಮಾದ ಹೆಚ್ಚಾಗಿ, ಹೆಚ್ಚಿ ಹೋಳಾಗಿ, ಬಿಸಿರಕ್ತದ ಪಿಪಾಸು—
ಚಂಡಿ ಆರಾಧಕರ ನಾಲಗೆಯು ತಿನಿಸು ತುರುಚಾಗಿ ಭೀಕರತೆ.
ಒಡೆದು ಎರಡಾದ ಬದುಕು, ನಿರ್ವೀರ್ಯ, ನಿಸ್ತೇಜ ನಿರ್ಬೀಜ ನಿಗರಿ ನಿಲ್ಲುವ
ಬಿರುಕು—
ಒಳಮೈಯ ನೆಲದಾಳದಲಿ ಸಮತೆಯುಗಾದಿ ಗುಡುಗಾಡಿ ರಕ್ತಧ್ವಜ
ಭೋರಿಡುತ ಚೀರಿಡುತ ಪಾರ್ಶ್ವವಾಯುವಿನ ಉಡಾಫಿಸಂಚಕಾರ.
ಮಾರ್ಕ್ಸ್ ಎಂಜಲ್ಸ್ ಲೆನಿನ್ ಸ್ಟಾಲಿನ್ ಟ್ರಾಟ್‌ಸ್ಕಿ ಮಾವೊ—ಈ ಉದ್ರೇಕಕಾರಿ

ಕ್ಷಣ ಬದುಕಾಗಿ ಕ್ಷಣಸಾವಾಗಿ, ಗಂಡಾಂತರದ ಉರುಳಾಗಿ, ಕುಡುಗೋಲು
ಸುತ್ತಿಗೆಯನೆತ್ತಿ ರಕ್ತ ಚಿಮ್ಮುತಿದೆ, ಯುವರಕ್ತ ಘೂರ್ಣಿಸುತಿದೆ, ಹಸಿದು
ಹಮ್ಮಯಿಸುತಿದೆ, ಒಡೆದ ಲಾಂದ್ರ, ಮುರಿದ ಬೆಂಚು, ಕ್ರಮವರಿತು ಬೆಂಕಿಬಿದ್ದ
ಗುಡಿಸಿಲು, ಬಿಸಿಲು ಮಾಡ ; ಸಂಭ್ರಮದ ಘೇರಾವೋಧರನ ಸಂಪುಮುಷ್ಕರ ಬಂದ್
ಚಳವಳಿ ಗೆರಿಲ್ಲಾಯುದ್ಧ ಹಿಂಸಾತ್ಮಕ ಪ್ರದರ್ಶನ ಕಪ್ಪು ಬಾವುಟ ಆವುಟ—
ಕೆಲಸವಿಲ್ಲದ ಗಿರಣಿ, ಬೆಂಕಿಬಿದ್ದ ಬೆಳೆದ ಹೊಲ, ಕಂಬಿ ತಪ್ಪಿದ ರೈಲು ಕೆಂಪುಬಸ್ಸು ;
ಬಂಗಾಳ ವಿಧವಿಧದ ರೋಗಗಳ ಜನ್ಮದಾಯಿನಿ ; ಉಸಿರಾಟ ತಿಳಿಯದೆಯೆ
ಎದೆ ಬಂಜರಿನ ಕಣ್ಣುಮಂಪರಿನ ಸಿಳ್ಳುಕಾಕುಗಳ ಅಸ್ಪಷ್ಟ ಮಹಡಿಯು ಮಂಕುದೀಪ.

೩

ಬೇರೆಲ್ಲ ಕಡೆಗಳಿಗಿಂತ ಮೊದಲಿಲ್ಲಿ ಕೆಂಪು ಚೀನದ ಡ್ರೇಗನ್, ಬೆಂಕಿ
ಉಗುಳುತ್ತ, ಕಚ್ಚೆತೊಟ್ಟ ಬಂಗಾಳಿಗಳ ಬೆಂಗಾವಲಿಗೆ ನಿಂತು
ಮಣ್ಣು ರಕ್ತದಲಿ ಮಿದ್ದಿದೆ. ಕಂಠದವರೆಗೂ ಬಂದದ್ದು ಹೊಟ್ಟೆಯಲ್ಲೇ ಕರಗಿ
ಬರಿಯ ನಾಲಗೆ ಕಣ್ಣು ತುಟಿ ಮುಖದ ಮಾಂಸಖಂಡಗಳು ಹುಬ್ಬುಸಹ
ಒದ್ದಾಡಿದಂತೆ, ಗಂಟಲಿಗೆ ಕೈಹಾಕಿದಂತೆ, ಏನೇನೋ ಹೇಳುವುದಕೆಂದು
ಬಾಯ್ತೆರೆದು ಒದ್ದಾಡುತಿದೆ ಬಂಗಾಳ. ಬಂಗಾಳಿನೇತಾ ? ಬಂಗಾಳೀ ಗುರು ?
ನಮಗೇನ ಹೇಳುವೆ ಬಂಗಾಳ ? ನಿನಗೆ ಹೇಳುವುದಾಗದೆ ಬಂಗಾಳ ?
ನಿನಗೆ ನೋವು ಹತ್ತಿದೆ ಎಂದು ಭಾವಿಸಲೇನೆ ? ವಿಕೃತ ಪಾಷಂಡ ಹುಟ್ಟೀತು
ಎಂದು ಹೆದರಲೇನೆ ? ನಿನಗೆ ನೋವೆಂಬುದೇ ಇಲ್ಲ, ಎನ್ನುವಂತಿಲ್ಲ.
ಜ್ಞಾನ ತಪ್ಪಿದ ನಿನ್ನ ಸ್ಥಿತಿ ನೋವಿಗೆ ಹೊರತು ಗಾಳಿ ಹೊಕ್ಕಿದ ಗೂಳಿ —
ನಿನ್ನ ಬದುಕಿನ ಸ್ವಪ್ನ ಭುಗ್ಗೆಂದು ಹೊತ್ತಿ ನಿದ್ದೆ – ನೀರಡಿಕೆ ಕಾಣದೆಯೆ
ನಿನಗೆ ವಕ್ಕರಿಸಿರುವ ದುರುದುಂಬಿತನಕೆ ಹೊಣೆ ಯಾರು ? ರಕ್ತಬಸಿದಿರುವ
ಅನೀಮಿಯದ ಬಂಗಾಳಿ ಹುಡುಗಿಯರು ಹೆಣ್ಣು ಮಾರ್ಕೆಟ್ಟಿನಲಿ ಬಲು ದುಬಾರಿ.
ಗೃಹಕೃತ್ಯದಸಲು ವ್ಯವಹಾರಕ್ಕೆ ಬೇಕೀಗ ರುಂಡಮಾಲಿನಿ ಒಬ್ಬ ಕಾರುಭಾರಿ.

ನಕ್ಸಲೀಯನಿಗೊಂದು ಪತ್ರ

ಪ್ರಿಯ ಕಾಮ್ರೇಡ್,

ಮೂಲೆಗೊಂದು ಹೆಸರಾಗಿ, ಹೆಸರಿಗೂ ಕಡೆಯಾಗಿ ಇದ್ದ
ನಕ್ಸಲ್‌ಬಾರಿ, ಈಗ ಪ್ರಪಂಚದಾದ್ಯಂತ ಮೊಳಗುತಿದೆ ರಣಭೇರಿ
ನಿನ್ನಿಂದಾಗಿ, ನೀನು ನೀಡಿದ ರಕ್ತ ಬಲಿದಾನದಿಂದಾಗಿ
ಹೆಸರೇನು ಬಂತು ಕಾಮ್ರೇಡ್ ? ಹೆಸರಲ್ಲಿ ರಕ್ತ ಸುರಿಸುವುದು
ಆ ಅಜ್ಞಾತಗ್ರಾಮ, ಪಾಪ ಕಣ್ಣೀರಿಟ್ಟು ಕೊರಗುತಿದೆ —
ನೀನೇನೆನುವೆ ರಕ್ತ ಪಿಪಾಸು ? ಸಾಲದೆಂದೆನುವೆ,
ತಲೆಯೊಲೆದು ನಗುವೆ, ವಿಕೃತ ಚೇಷ್ಟೆಯಕೈದು ಬೀಸುತ್ತ.

ಪ್ರಿಯ ಕಾಮ್ರೇಡ್,

ನೀನಿರಬಹುದು ಕನುಸನ್ಯಾಲ್, ಚಾರು ಮಜುಮದಾರ್
ನಾಗೀರೆಡ್ಡಿ, ಮತ್ತೆ ಯಾವುದೋ ತಲೆಹೋಕ....
ನೆಲಕೆ ಬಿದ್ದವರ, ಮಣ್ಣು ಕಚ್ಚಿದ ಜನರ ಗೋಳುಕರೆ ವಿಪ್ಲವತೆ
ನಿನಗೆ ತಂದೆ ತಾಯಿಗಳ ಮಾತಾಗಿ. ಅಣ್ಣ ತಂಗಿಯರ ಒಡನುಡಿಯಾಗಿ
ಕೇಳಿ ಬರಲಿಲ್ಲ ; ಅದು ಬಂದದ್ದು ಮಾವೋ ಶಂಖದಿಂದೊಂದೆ ?
ನಿನಗೆ ಕಿವಿಯಿಲ್ಲ ಕಣ್ಣಿಲ್ಲ ಎನ್ನುವುದೂ ಒಡ್ಡುತನ —
ಒಡ್ಡು ಹಾಕದೆ ದಕ್ಕಲಾರದು ರೊಚ್ಚಿನ ಬರಿಯ ಆರ್ಭಟದ ಹುಚ್ಚಿನ ಉಕ್ಕು

ಪ್ರಿಯ ಕಾಮ್ರೇಡ್,

ಕತ್ತಲಲ್ಲಿ ಬೆಳೆದೆ ; ಕಿಟಕಿ ಬಾಗಿಲು ಮುರಿದು ಬೀದಿಗೆದೆ —
ಯೊಡ್ಡಿ ಚಾಚಿರುವೆ ರಾಕ್ಷಸ ಹಸ್ತ ; ಕಪಾಟು ಕಿತ್ತೊಗೆದು
ತಳದ ನೆಲ ಮೇಲು ಮಾಳಿಗೆ ಎಲ್ಲ ಸಿಡಿದು, ಬೀದಿಬೇಲಿಗೆ ತೂಗಿದೆ
ರಕ್ತ ರುಂಡ ;

ಅದೆ ನಿನಗೆ ನಕ್ಷತ್ರವಾಗಿ ಕರೆಯುತಿದೆ ರಕ್ತವುಡುವನು ಹಾಯ್ದು ಬಾರೆಂದು?
ರಕ್ತ ಪುಸ್ತಕದ ತುಂಬ ರಕ್ತಕಾರುವ ರುಂಡ ಮುಂಡ ಕೈಕಾಲುಗಳು
ಆದರಲ್ಲೆ ಕಟ್ಟುವ ನಿನ್ನ ಸೌಧ, ಯಾರಿಗೆ ನೆರಳು ?
ಮುಳಿ ಆಳಕ್ಕೆ ನೆಟ್ಟಚಳಿ, ಯಾರ ಪಾಲಿಗೆ ಹೇಳು ಕೋಗಿಲೆಯ ಕೊರಳು ?

ಪ್ರಿಯ ಕಾಮ್ರೇಡ್,

ನಿನ್ನೊಂದಿಗಲ್ಲ ಜಗಳ ; ಜಗಳ ನಿನ್ನ ಆದರ್ಶದೊಂದಿಗೆ
ಬೆಳಕು ಹರಿಯುವ ಮುನ್ನವೆ ರಕ್ತ ಬೆಳಗಿಗೆ ಕಪಳೆ ಒಡಿದು
ನಿಂತಿರುವ ಕತ್ತಲಪಿಂಡ, ನಿನಗಿಲ್ಲ ಬೆಳಕಿಗೆ ಬೆಲೆ ?
ಕಾಡು ಬಾಂಬುಗಳ ಕರಾಳ ಬೆಳೆಗೆ ಕುಡುಗೋಲು ಹರಿತದ ಧಾಟಿ ?—
"ಪೂರ್ವ ಕೆಂಪಾಗಿದೆ ಪೂರ್ವ ಕೆಂಪಾಗಿದೆ ಪೂರ್ವ ಕೆಂಪಾಗಿದೆ"
ಆಹಹ! ಸ್ವೋಪಗ್ರಹದ ನಿನ್ನ ಮಾತಿನ ಒಡಕುದನಿಬಿಳಲು
ಅದು ಬೀಜ ಒಡೆಯುವ ಮೊಳಕೆ ಸಾಹಸವಲ್ಲ, ತಿಳಿಯಿತೆ ಕಾಮ್ರೇಡ್ ?

ಸ್ವಸ್ತಿ
ನಿನ್ನ ಕುಲಬಾಂಧವ

ಕ್ರುದ್ಧ ಯುವಜನ

ನಮಗೆ ಯಾರೂ ಇಲ್ಲ ; ನಮಗೆ ನಾವೂ ಇಲ್ಲ.
ಬಿಟ್ಟು ಬಂದಿದ್ದೇವೆ ಕಗ್ಗವಿಯ ಹೊಳೆಹಳ್ಳಗಳ ಬದಿಯ
ದಟ್ಟ ಬೆಳವಣಿಗೆಗಳ ಕಾಡ ಕಡಿದು, ಹಾಳು ಹುಪ್ಪಟೆಯ ಕಂಡು
ಕಾಡುಪ್ರಾಣಿಗಳ ಸಖ್ಯವ ಬೆಳಸಿ
ಹುಲಿಯ ಬೆನ್ನೇರಿದ್ದೇವೆ ; ಆನೆ ಹಿಂಡುಗಳ ಕೂಡಿ ಕೆಲೆದಿದ್ದೇವೆ.
ತೃಪ್ತಿ ಇಲ್ಲದೆ ನವೆದು ಮಲೆತಿದ್ದೇವೆ
ಹುಲಿಯ ಕಣ್ಣಲ್ಲಿ ಪಂಜು ಹೊತ್ತಿಸಿ ಹಿರಿದು
ಕಾಲ ಪಂಜಗಳಲ್ಲಿ ಗೀರಿ ಬರೆದಿದ್ದೇವೆ ರಕ್ತಕಾವ್ಯ.
ಕೂಗು ಬಂಡೆಯ ಕಾಡ ಕಗ್ಗವಿಯ ಅಸ್ಪರ್ಶ ಗಹ್ವರ ಮೊರೆದು
ವಿಪ್ಲವಿಸಿ ತಡಕಾಡುವಂತೆ ಘೀಳಿಟ್ಟಿದ್ದೇವೆ, ಮೊರೆದಿದ್ದೇವೆ.
ಪ್ರತಿಭಟಿಸಿ, ಅನುರಣಿಸಿ. ಕಾಣದುದ ಕಾಣಿಸಿಕೊಂಡು
ರಕ್ತದುಂಡೆಗಳ ಮಾಯಾಜಾಲದಲ್ಲಿ ಮನವ ಕೆದಕುತ್ತ
ಮೋಹಿಸುತ್ತ ತುಯ್ದಿದ್ದೇವೆ, ಎಲ್ಲೆಗಳ ಕಾಣದಿರುವ
ಎಲ್ಲಿಂದೆಲ್ಲಿಗೋ, ಎಲ್ಲಿಗೋ ?

ನಿಮಗೆ ಎಲ್ಲ ಸ್ಪಷ್ಟ ಗೋಚರಿಸುವುದು : ಕಾಂಕ್ರೀಟು
ಮಾರ್ಗಗಳ ಆಚೀಚೆ ಬದಿಯಣ ಹಲವು ಮಜಲಿನ ಸೌಧಗಳು
ಬೇರು ಕಾಂಡ ಎಲೆ ಚಿಗುರು ಹೂವು ಕಾಯಿ ಹಣ್ಣು ;
ಪರಾಗರೇಣುಗಳಿಂದ ಹಣ್ಣ ಬೀಜಗಳ ವರೆಗೂ —
ನಮಗೆ ಹಾಗಲ್ಲ. ಕುದಿಯುವುದು ಅಗ್ನಿಮುಖಿ :
ಹಲವು ಬಣ್ಣದ ಗೀರುಚೌಕುಳಿ ವರ್ತುಲ ಬರಿಯ ಬಟ್ಟೆಗಳಿಗೆ ?
ಅದು ನಮ್ಮ ಮನಸ್ಸು ; ನಮ್ಮ ಕೇಶದ ಹರಡು ಬಿಚ್ಚು ಕುಚ್ಚು ;

ಮೈಗೆ ಮೈ ತಾಕಿದರೆ ವಿದ್ಯುಲ್ಲತೆಗಳೆಲ್ಲ ಬಿಗಿಯುವುವು,
ಹ್ಯಾಶಿಷೊ, ಡೋಪೊ, ಅಫೀಮೊ ? ತಾರಕಕೇರಿ ಕಳೆಯುವುದು
ಮಂಪರು, ಜಂಪರು. ಸೊಂಪಿನ ನಾವು ಕಡುಕಂಪಿಗರು,
ಬಿಡಿರಿ, ಯಾಕೆ ಆಡಿಕೊಳ್ಳುತ್ತೀರಿ ? ನಮಗೇನೂ ನಿಮ್ಮ ಬಗೆಗೆ
ಯೋಚನೆ ಇಲ್ಲ. ನೀವು ನಮ್ಮ ಕೈಬಿಟ್ಟರೋ ಉಳಿಯುತ್ತೀರಿ.
ನಮಗೊ ? ಉಳಿಯಬೇಕೆಂಬುದೇನೂ ಇಲ್ಲ.

ಪ್ರಾರ್ಥನೆ

ಪ್ರಾರ್ಥನೆ – ದೇವ ಮಂದಿರದ ಔತಣ, ಯಕ್ಷಪ್ರಾಯ
ತನ್ನ ಹುಟ್ಟುವಿಕೆಗೆಳೆವ ನರನೊಳಾಡುವ ಬ್ರಹ್ಮದುಸಿರು
ಜೀವಾತ್ಮ ತಾತ್ಪರ್ಯ. ತೀರ್ಥಯಾತ್ರೆಯಲಿ ಹೃದಯ
ನೆಲ ಮುಗಿಲು ಮೊಳಗಿಸುವ ಧರ್ಮ ಪಂಥಗಳ ಡಮರು,
ಸರ್ವಶಕ್ತನ ಕುರಿತು ಯಂತ್ರ, ಪಾಪಿಗಳ ಕಾರಾಗೃಹ
ತಿರುಗು ಮುರುಗಾದ ಸಿಡಿಲು, ಕ್ರಿಸ್ತನೆದೆ ಹೊಕ್ಕಿರುವ ಈಟಿ!
ಆರು ದಿನಗಳ ಬಳಿಕೆ ಜಗವ ಮಾರ್ಪಡಿಸುವೊಂದೇ ಗಂಟೆ!
ಎಲ್ಲವನು ಕೆರಳಿಸುವ ನಡುಗಿಸುವ ಒಂದು ರಾಗ ಸಮೂಹ.

ನಯವಾದ ಶಾಂತಿಯುತವಾದ ಪ್ರಿಯವಾದ ಆನಂದ
ಉನ್ನತೋನ್ನತವಾದ ಹಸಾದ, ಉತ್ಕೃಷ್ಟವಾದ ನಲ್ಮೆ
ಸಾಮಾನ್ಯತೆಯು ಸ್ವಗರ, ತಕ್ಕ ಉಡುಪಿನ ಮನುಷ್ಯ
ಕ್ಷೀರ ಪಥ, ನಂದನೋದ್ಯಾನದಲ್ಲಿನ ಗರುಡ
ನಕ್ಷತ್ರದಾಚೆ ಮುಟ್ಟುವ ಗುಡಿಯ ಘಂಟಾನಾದ, ಆತ್ಮದ ರಕ್ತ
ಸಾಂಬಾರು ಬೆಳೆವ ನೆಲ; ಅರ್ಥವಾದಂತದೇನೋ!

—ಜಾರ್ಜ್ ಹರ್ಬರ್ಟ್

ಎಸಾಪ್ರ ಸೌಂಡ್

ನೀನೊಂದು ಕೋಟೆ–ಮೂಟೆ ಭಾವಗಳನೊತ್ತರಿಸಿ
ಕುಲುಕಿ ತುಂಬಿದ ಹೂರಣದ ಸಂಕೀರ್ಣ ವೈವಿಧ್ಯ.
ನಿನ್ನ ಕೋಟೆಯ ಮನೆಯ ಕಂದಕಗಳು ನಭಶ್ಚುಂಬಿಗಳು
ತಿತ್ತಿರಿಕುಣಿದು ಸ್ವಪ್ನ ಮಾರ್ಗದ ಬೆಳದಿಂಗಳಿನಲ್ಲಿ
ಮಂಜು ಮಿಶ್ರಿತ ಮಳೆ. ಕಾಲದೇಶ ವ್ಯಾಪ್ತಿ ನಿನ್ನ ಕಬಂಧ ಬಾಹುವಿನಲ್ಲಿ
ಓರೆಕೋರೆಗಳನೊಳಕೊಂಡು ನಿನ್ನದೇ ಆದ ಅಮೋಘ ಓಘ,
ಯೂಲಿಯುಸಿಸ್ಸನ ನೌಕೆ ಪೀಕಿಂಗಿನಲಿ ತಡೆದು ತುಂಬಿಕೊಂಡು
ಕನ್‌ಪ್ಯೂಷಸ್ಸನ ಕುಂಗ ಶಾಂಗರ ಸರಕು. ಹೇರು.
ಮಾರ್ಕ್ಸ್ ಜೇಮ್ಸ್ ಅಡಾಮ್ಸ್ ಡಾಂಟೆ ವರ್ಜಿಲರಿಗೂ ನ್ಯೂಯಾರ್ಕಿಗೂ
ಕೂಡ ಸಮಸಮಾನ ಸ್ಥಾನ ತಾರ್ಕಣೆಯ ಕೋಣೆಯಲಿ
ಅಲ್ಲಿ ನಮಗೆ ಕಾಣುವ ಅಸ್ತವ್ಯಸ್ತದಲ್ಲಿ.

ನಿನ್ನ ಕಾವ್ಯ ಬದುಕಿನೆಲ್ಲವನು ಒಳಕೊಂಡ
ಸೂಕ್ಷ್ಮ ತುಡಿತದ ಅಮರ ಶ್ವಾಸದ ನವ್ಯ–
ಲೋ ಅಣ್ಣಯ್ಯ, ಆ್ಯಬ್ಸ್ಟ್ರ್ಯಾಕ್ಟಿನ
ನಾಗರಿಕ ಶಿಲ್ಪವನು ಕಬಳಿಸಿ ಹಬ್ಬಿ ಹರಡಿರುವ
"ಅರಣ್ಯಕರ ಮೌನ ಮಂತ್ರ ಬಿಚ್ಚಿದ ಬಟ್ಟೆ."

ಇಷ್ಟಾಗಿಯೂ ನಿನ್ನ ನಯಗಾರಿಕೆಯ
ತಿಳಿಯಲಾಗದೆಯೆ ತೊಳಲುವೆನೇನು ನಾನು ?

ಸ್ಪರ್ಶ ಕವಿತೆ

ದೂರದ ಮಾವನಲ್ಲಯ್ಯ ಚಂದ್ರಮ ನೀನೀಗ ನಮಗೆ !
ಬಹುದಿನದಿಂದಲೂ ನಡೆದುಬಂದ ಆತ್ಮೀಯ ಕೆಳೆ ಪುಟಗೊಂಡು
ಈ ಯುಗದ ಮೈಲಿಗಲ್ಲು ವಜ್ರ ವೈಢೂರ್ಯಕ್ಕೂ ಮಿಗಿಲು
ನಿನಗೆ ನಾವು ನಮಗೆ ನೀನು ಕೊಟ್ಟುಕೊಂಡ ಬಳುವಳಿ.
ನಿನ್ನ ಮೇಲ್ಮೈ ಬಿಂಬಿಸುವ ಬೆಳಕು ಮೋಹಕವೆಂದೇ
ಪ್ರಣಯ ಲೋಕದ ನಿನ್ನ ಕಲ್ಪನೆಗೆ ಮುತ್ತಿರುವ ನಾವು ಚಿಟ್ಟೆ.
ನಿನ್ನ ಮೈ ಜಡತೆ ವೃದ್ಧಿಸಿ ಕಟ್ಟುಕತೆ ಲೋಕಕ್ಕೆ ಗಡೀಪಾರು ಮಾಡಿದ್ದ
ಕುರುಡು ನಂಬಿಕೆಯ ಕೋಡು ಕಳಚಿ ಹಗುರ ಮಾಡಿದ್ದೇವೆ ಮಾವ.
ಆದರೂ ನಿನ್ನ ಜನ್ಮವೆ ಒಂದು ಅಭೇದ್ಯ ಒಗಟೆ – ಅದೆ ನಮ್ಮನೂ
ನಮ್ಮ ಭೂಮಿಯನೂ ಮುಚ್ಚಿರುವ ವಿಸ್ಮೃತಿಯ ವಿಸ್ಮಯದ ತೊಗಟೆ.

ಅಸತೋ ಮಾ...

ಕಾಡುಗತ್ತಲು ಕಣಿವೆ, ಚಿಂತನೆ ಝರಿಯ ತಳಪಾಯ
ತಿಳಿನೀರು ತೂಕಡಿಕೆಗಿಷ್ಟು ಅಫೀಮು ಸಂಪ್ರದಾಯ
ಇಲ್ಲಿಯೂ ವಿದ್ಯುದಾಗಾರ ಸೃಷ್ಟಿಸಿದ ಸ್ವಪ್ನಾಸ್ಪತ್ರೆ
ಮೈ ಖಂಡಖಂಡವೂ ಕುಯ್ದು ಸೇರಿಸುವ ಜಾಣಜಾತ್ರೆ.

ದಟ್ಟ ನೆರಳಿನ ಕಣಿವೆ, ಹರಿಯುವುದೆಲ್ಲಿಯೋ ಬೆಳಕು
ಗೆರೆಗೆರೆಯಾಗಿ ಜೇಡಬಲೆ ಹೊಗೆ ತುಂಬಿ ಏನೊ ಅಳುಕು
ಹಿಂದೆ ಬಂದವರಾರೊ ಬಿಟ್ಟು ಹೋಗಿದ್ದಕ್ಕೆ ಗುರುತಾಗಿ
ಉಳಿಸಿ ಹೋದ ಸಮಗ್ರ ಸಾಮಗ್ರಿ ಒಂದೆರಡಾಗಿ ನಮ್ಮದಾಗಿ.

ಕಡಿದಾದರೂ ಕಣಿವೆ ಇಳಿಜಾರು ಅಬ್ಬೆವ ಹಾರಿ ಜಾಡು
ಪ್ರವಾಸದಲ್ಲೆಲ್ಲ ಅವಿಸ್ಮರಣೀಯ ಹಣ್ಣುಹಂಪಲು ಪಾಡು
ಟಾರ್ಚಿನಿಂದೊದಗಿದ ಬೆಳಕು ಮಂಜರಿಯಲ್ಲಿ ದೇಹ ವ್ಯವಸ್ಥೆ
ತೆರೆಮೇಲೆ ಬಿಡಿಸಿದ ಹಾಗೆ, ಗರಿಬಿಡಿಸಿ ಕೇದಗೆ ವಿವಕ್ಷೆ.

ಚೆಲುವಾದರೂ ಕಣಿವೆ ಆಗೀಗ ಭೂತ ಸಂಚಾರ ಸಂಚಕಾರ
ಸಂಯಮರಹಿತ ತಿಳಿನೀರಿನಲ್ಲಿ ರಕ್ತ ಪ್ರವಾಹ ರಾತ್ರಿಂಚರ
ಗೆರೆಗೆರೆಯಾಗಿ ಜೇಡಬಲೆ ಹೊಗೆತುಂಬಿ ಮೂಳೆದಿಬ್ಬಣಕೆ
ಉಸಿರುಗಟ್ಟಿ ಊದುವ ಕಹಳೆ ಕಣಿವೆ ಪ್ರತಿಧ್ವನಿಸಿ ನೂತನಕೆ.

ಕಾರ್ತಿಕದ ಉತ್ಸವ

ಜ್ಯೋತಿರ್ ಮುಹೂರ್ತದಲಿ ಅಡಿಯಿಟ್ಟ ವಾಮನ
ಅಕಸ್ಮಾತ್ ಘಟನೆಯಲ್ಲೂ ಸಂಪುಟರಳಿ ಕಾಮನ
ನಿಸ್ಪೃಕ ರೋಗಿ ಕಾಣಬಾರದ ಕಣ್ಣಾಚೆಗಿನ ಕತ್ತಲೆಯಲ್ಲಿ
ಬುಗ್ಗೆ ಬುಗ್ಗೆ ಹೋಳಿಯೋಕುಳಿ ಸಿಡಿದು ಬೃಂದೆ ಬಳಿ.

ಹಿಂದಿನಿಂದಲೂ ನಡೆದು ಬಂದಂಥದೆಲ್ಲ ಹೊಸ ಹೊಸತು
ಹೊಸೆದ ಕಗ್ಗದ ನೂಲು ಗಂಟುಗಚಡಿಯಲಿ ಮುಮ್ಮಾತು
ನೀಲಿ ಕನ್ನಡಕದಾಚೆಗಿನ ಕೋರೈಸುವಂತಹ ಬೆಳಕು
ಹೆಜ್ಜೆಯಿಟ್ಟಲ್ಲೆಲ್ಲ ಹೂವು ಗಮಗಮಸಿ ನಿರ್ವಾಣದೊಳಗು.

ತೆಳು ಪದರದಲಿ ಹರಿವ ಧಾತು ಉದ್ಧರಿಸಿ ಶುಕ್ಲಕಾಂತಿಯಲಿ
ಗಲ್ಲ ತುಂಬಿದ ಕೆಂಚಗಿನ ಉಸಿರು ಮಾರ್ದವತೆ ನೀಲದಲಿ
ಕರಗಿ ಕಣ್ಣಿಂದ ಸಿಡಿದ ಹೊಳಪು ಮೈ ಆರತಿಯು ಸಂನ್ಯಾಸಕೆ
ಶಿಂಪಾಪಾತ ಶಿವ ಸಾಕ್ಷಿಯಲಿ ನೊರೆನೊರೆಯು ಸ್ವರ್ಣಲತೆ.

ಮುಸುಕನೋಸರಿಸಿ ಸುಮುಹೂರ್ತದಲಿ ಅಡಿಯಿಟ್ಟ ವಾಮನ
ನಕ್ಷತ್ರಾವಕಾಶದಲ್ಲಿ ನೀಲಿಪದ ಕರಗಿ ಸಂಪುಟವರಳಿ ಕಾಮನ
ಕಣ್ಣುಮುಚ್ಚಾಲೆಯಲಿ ನಿರುಪದ್ರವದ ಸಂತೋಷಕೇಳಿಯಲಿ
ಬುಗ್ಗೆ ಬುಗ್ಗೆಯು ಹೋಳಿಯೋಕುಳಿಯೊಡೆದು ಸಹರದಲ್ಲಿ.

ನಚಿಕೇತ ಪ್ರಜ್ಞೆ

ಆದರ್ಶಗಳ ಮೂಟೆ ಕಟ್ಟಿಟ್ಟು ಮೈ ಒದರಿ ನಿಲ್ಲುವೆ ಸಪೂರ
ನಚಿಕೇತ ಮುಗ್ಧತೆಯಲ್ಲಿ ಕಾದು ನೋಡುವೆನು ಮೃತ್ಯುವಪಾರ,
ಸೃಷ್ಟಿಯೋಜನೆಯ ಸಹಸ್ರಾವತಾರಗಳ ನಿಗೂಢ ಚಿತ್ರಮಯವಾಗಿ
ಪಿಂಛ ಬಿಚ್ಚಿದ ನವಿಲು ಕುಣಿದವರೋ ಒಳಿತು, ಆರಾಮವಾಗಿ.

ತಿಳಿತರಂಗದ ಸ್ವಚ್ಛ ಕಲ್ಹಾರಗಳು ಮರಳು ನುಣುಪಾಗಿ ಹರಿದು
ಅವ್ಯಕ್ತಾವಕಾಶದಲ್ಲಿ ಗಾಜುಕಿಂಡಿಗಳಲ್ಲಿ ತೋರಿ ಬರುತಿದ್ದು
ವ್ಯಕ್ತಿ ವ್ಯಕ್ತಿಗಳ ಮುಖಚರ್ಯೆ ಬಿಡಿಸಿ ನೋಡದಿದ್ದರು ಸರಿಯೆ
ಹಿಮ್ಮಡದ ಗುರುತು ಹೇಳಿದೊಂದೆರಡು ನುಡಿ, ಆತ್ಮೀಯವೆ ?

ಚಿಂತನಾತೀತ ವ್ಯಸನಾತೀತ ಬದುಕು, ಭಾಗ್ಯದ ಸೆಳಕು ಹೊಳಕು
ಎಲ್ಲೆಡೆಯಿಂದಲೂ ಹೊರಟ ಬೆಳಕು, ಕೇಂದ್ರೀಕೃತ ಚುಳುಕು
ಭೂತ ಭವಿಷ್ಯದಾನಂತ ಆ ಮರಣಾಂತ ರೇಸಿಮೆ ನೂಲು ನೂಲು
ಸ್ಪರ್ಶ ರಸ ಗಂಧಾತೀತ ಕಾಲಕೂಟೋದ್ರಿಕ್ತ ಶಿವಪಥ.

ನಚಿಕೇತ ಪ್ರಜ್ಞೆ ಬಾಗಿಲು ತಟ್ಟಿ ಮೃತ್ಯುಮುಖ ಸಂದರ್ಶನ–
ಅವ್ಯವಹಾರದೇಕಾಂತ ಮಂಚಸಿಂಗಾರದಲಿ ಕುಸುಮಗಂಧಿ ಸುದರ್ಶನ–
ಸಲ್ಲೇಖನ ವ್ರತಿಯುಳಿದ ಬಂಡೆ ಬಿಸಿಲಿಗೆ ಕಾದು ಸೀಳು ಹೋಳೊಡೆದು
ಮುಕ್ತಿ ಚವರಿಯ ಸೇವೆ ನಿರುತ್ಸಾಹಶೈವ ಸಂಪರ್ಕ ಬಾನೊಡೆದು,

2923
VIJAYA EVENING COLLEGE LIBRARY
BANGALORE-4.

ಮಣ್ಣು ಸಿದ್ಧಾಂತ

ನಮ್ಮದಾದ ಮಣ್ಣು ಕರೆಯುತ್ತದೆ:
ಅತ್ತು ತೊಟ್ಟಿಲನು ತುಂಬಿದ್ದು, ಕೇಕೆ ಹಾಕಿ
ಮೂರುರುಳು ಬಿದ್ದು ಮೇಲೆದ್ದು ಕುಳಿತದ್ದು
ನೆನಪಿಡದ ಮಗ್ಗಿ ಎಡವುತ್ತ ಅಂಗೈಗೆ ಬಿದ್ದೇಟು
ಕಣ್ಣೀರನೊತ್ತರಿಸಿ ತರಿಸಿದ್ದು
ಎಲ್ಲ ಮಣ್ಣಲ್ಲದೆ ಮತ್ತೇನು ?

ಲಂಗೋಟಿ ತೊಳೆದು ತೀರ್ಥ ಸಿಂಪಡಿಸಿಕೊಂಡಿದ್ದು
ತುದಿಗಾಲಿನಲಿ ನಿಂತು ಅರುಂಧತಿಯ ಕಾಣದೆಯೆ ಅರಸಿದ್ದು
ಕಂಡೆ ಕಂಡೆ ಎಂದು ಪ್ರತಿಧ್ವನಿಸಿ ಕಣ್ಣು ಕಾಣದೆಯೆ ಅನುಭವಿಸಿದ್ದು
ಟೀಸ್ಕ್ವಯರನ್ನೆ ಕೈಬಿಟ್ಟು ಗೆರೆ ಎಳೆದು
ಇಟ್ಟಿಗೆಯ ಸುಡಿಸಿದ್ದು
ಸುಡುಗಾಡ ಸಿದ್ಧ ಎನಿಸಿದ್ದು
ಎಲ್ಲ ಮಣ್ಣಲ್ಲದೆ ಮತ್ತೇನು ?

ಬಿಟ್ಟ ಕಣ್ಣು ಬಟ್ಟ ಕಣ್ಣು ತೆರೆದು ಬಂದವರ ಕಣ್ಣಿಗೆ
ಮಣ್ಣು ತೂರಿದ್ದು
ಒಂದು ಕಣ್ಣಿಗೆ ಸುಣ್ಣ, ಇನ್ನೊಂದು ಕಣ್ಣಿಗೆ ಮಣ್ಣು
ಎಂಬ ಖ್ಯಾತಿ ಗಳಿಸಿದ್ದು
ಮಣ್ಣಿಂದ ಎದ್ದದ್ದು ಧೂಳು, ಧೂಳ ಬೆನ್ನೇರಿದರೆ
ಸುಂಟರಗಾಳಿ ಸವ್ವಾರಿ ಮಾಡಿದರೆ
ಹೆಂಚು ಹಾರಿಸಿ ನಗ್ನ ಎದೆಗಳ ಪ್ರದರ್ಶನಕ್ಕೆ
ಅಣಿ ಮಾಡಿದರೆ
ಟೋಪಿ ತಲೆಗಳ ಜೇಡಿ ಮಣ್ಣು ವಿವಿಧಾಕೃತಿಯು
ಓಟು ನೋಟುಗಳ ಚರಂಡಿ ಕನಸು ಮೈವಾಚಿದರೆ

ಆ ಮಣ್ಣಿನಲ್ಲೇ ಬಾಳು ಸಾರ್ಥಕ್ಯ ಪಡೆಯಲಾರದೆ ?
ಎಂಬಂಥದೆಲ್ಲ ಎಲ್ಲ ಮಣ್ಣಲ್ಲದೆ ಮತ್ತೇನು ?

ತಕ್ಕಡಿಯು ಹಿಡಿದು ತುಕಡಿ ಕಜ್ಜಾಯ ತೂಗಿದ್ದು
ಬೀಜದಾಕಳಿಕೆ ಟಿಸಿಲೊಡೆದು ಆಕಾಶ ತಬ್ಬಿದ್ದು
ಸ್ನೋ ಪೌಡರಿನ ಲೇಪ ಬಳಿದದ್ದು
ಕಾಲುವೆಯ ನೀರಿನಲ್ಲಿ ಮೀನುಗಳನರಸಿದ್ದು
ಆ ಮೀನುಗಳು ನಕ್ಕು ಕುಣಿದು ಜಿಗಿದು ಹಾರಾಡಿ
ಹೊಟ್ಟೆಗಾಧಾರವಾದದ್ದು
ವಿಕೃತದ ಆರ್ತನಾದದಲಿ ಹಸಿಮಾಂಸ ಹೊಗೆಯಾಡಿದ್ದು
ಎಲ್ಲ ಮಣ್ಣಲ್ಲದೆ ಮತ್ತೇನು ?

ಈ ಭೂಮಿ ಮಣ್ಣು ; ಮಣ್ಣು ತಿರುಗಿದ್ದೇ ಕಾಲ–
ನನಗೂ ವಕ್ಕರಿಸೀತೊ ಏನೋ ಕಾಲ ?
ಬಾಚಿ ಕರೆದೀತೇನು ಮಣ್ಣು ?
ನನ್ನ ಜೀವಿತದ ಕಾಲ ಮಣ್ಣು ಕನಸಾಗಿ
–ಹಿಂದಿನ ಚರಿತ್ರೆ ಏನು ? ಮುಂದಿನ ಪ್ರಗತಿ ಏನು ?–
ನನಗಿದೋ ಈ ಮಣ್ಣು ಕರೆಯುತ್ತಿದೆ
ಮಣ್ಣು ವಾಸನೆ ಹೊಡೆದು ಮೊಳೆ ಹೊಡೆದು
ಈ ನೆಲಕ್ಕೆ ನನ್ನನ್ನು ಬಂಧಿಸಿ ಇಡುತ್ತಿದೆ.

ಭೂತವಾಗಬಹುದೆಂಬ ಅನುಮಾನ ನಿಮಗೇನು ಬೇಡ
ವರ್ತಮಾನದ ಮಣ್ಣು ನಾನು–
ಈ ವರ್ತಮಾನವೇ ಮಣ್ಣು
ಭೂತ ಭವಿಷ್ಯತ್‌ಗಳನು ಕಿತ್ತೊಗೆದ ಮಣ್ಣು.

ಈ ಕುಲಾವಿಯಲ್ಲಿ ನನ್ನ ತಲೆ
ಈ ಕುಳಿಯಲ್ಲಿ ನನ್ನ ದೇಹ
ಅಸ್ತಿತ್ವವಿಲ್ಲದ ಅಸ್ತಿ–ಸ್ವಸ್ತಿ ಇಲ್ಲದ ವಸ್ತಿ
ಈ ವರ್ತಮಾನವೇ ಮಣ್ಣು
ನಾನು ಮಣ್ಣು.



ವೇಣುಗೋಪಾಲ ಸೊರಬ, ಜನನ: **1937** ದೇವನ ಹಳ್ಳಿ

ಮೊದಲ ಕವನ ಸಂಗ್ರಹ

'ಮುಸುಕು-ನಸುಕು'–1966

ಈಗ, ರೂರಲ್ ಕಾಲೇಜ್ ಕನಕಪುರದಲ್ಲಿ
ಪ್ರಾಧ್ಯಾಪಕರು.

'ಜೀವ - ಜೀವಂತ' ಇವರ ಎರಡನೇ ಕವನ ಸಂಗ್ರಹ

21149-K

ಶ್ರೀ ಯು. ಎಸ್. ಕೃಷ್ಣರಾವ್, ಶ್ರೀ ಅಯಣ್ಣದೇವ ಅಂಗಡಿಯವರು,
ಶ್ರೀಮತಿ ಯು. ಎಸ್. ಕೃಷ್ಣರಾವ್
ಯೆಹೂದಿ ಮೆನುಹಿನ್ ಮತ್ತು ಅವರ ತಂಗಿ ಹೆಚ್. ಸಿಬಾ ರವರೊಡನೆ

3268

L 1149-K

ಮುನ್ನುಡಿ

ಈಚೆಗೆ ನನ್ನ ಅಕ್ಕತಂಗಿಯರು ಕನ್ನಡದಲ್ಲಿ ಸಾಕಷ್ಟು ಲಲಿತವಾಙ್ಮಯವನ್ನು ಪ್ರಕಟಿಸುತ್ತಲಿದ್ದಾರೆ. ಅದರಲ್ಲಿಯೂ ಕತೆ, ಕಾದಂಬರಿಗಳ ವಿಷಯದಲ್ಲಿ ಹಲವರು ಒಳ್ಳೆ ಮೇಲುಗೈಯನ್ನು ತೋರಿದ್ದಾರೆ. ಆದರೆ ಇನ್ನೂ ನಮ್ಮಲ್ಲಿ ಪ್ರವಾಸವಾಙ್ಮಯ ಕಡಿಮೆಯೆಂದೇ ಹೇಳಬಹುದು. ಅದರಲ್ಲಿಯೂ ಮಹಿಳೆಯರು ಬರೆದುದು ತೀರಾ ವಿರಳ. ಕದಾಚಿತ್ ಇಷ್ಟು ವಿಸ್ತಾರವಾಗಿ ಒಬ್ಬ ಮಹಿಳಾಮಣಿ ಬರೆದ ಪ್ರವಾಸ ವರ್ಣನೆ ಇದೇ ಮೊದಲು. ಮೇಲಾಗಿ ಇದನ್ನು ಬರೆದವಳು ಓರ್ವ ಕಲಾವಿದೆ. ಸಾಮಾನ್ಯರ ದೃಷ್ಟಿಗಿಂತ ಕವಿಯ ದೃಷ್ಟಿ, ಕಲಾವಿದನ ದೃಷ್ಟಿ ಬರೀ ಬೇರೆಯಲ್ಲ, ಅದು ರಸವತ್ತಾದುದೂ ರಸಿಕವಾದುದೂ ಇರುವುದು ಸ್ವಾಭಾವಿಕ. ಅಲ್ಲದೆ ಚಂದ್ರಭಾಗಾದೇವಿ ಸ್ವತಃ ಕಲಾವಿದೆಯಾಗಿ ಇರುವುದಲ್ಲದೆ ನರ್ತನ, ಅಭಿನಯ, ಹೊಸ ರಚನೆ ಮುಂತಾದುವುಗಳಲ್ಲಿ ತಮ್ಮದೇ ಆದ ನಿರ್ಮಾಪಕ ಶಕ್ತಿಯನ್ನೂ ತೋರಿ ಹೆಸರುವಾಸಿಯಾದ ಯು. ಎಸ್. ಕೃಷ್ಣರಾವ್ ಇವರ ಗೃಹಿಣಿ. ಇಲ್ಲಿ ಕಾಳಿದಾಸನ ಪ್ರಸಿದ್ಧ ಉಕ್ತಿ ನೆನಪಾಗದೆ ಇರದು. ಆದರ್ಶ ಗೃಹಿಣಿಯ ವರ್ಣನೆ ಮಾಡುತ್ತ 'ಗೃಹಿಣೀ....ಪ್ರಿಯ ಶಿಷ್ಯಾ ಲಲಿತೇ ಕಲಾವಿದೆ', ಎಂದು ಹೇಳಿದ್ದಾನೆ ಕವಿಕುಲ ಶ್ರೇಷ್ಠ !

ಕಾವ್ಯ, ಕತೆ, ಕಾದಂಬರಿಗಳನ್ನು ಬರೆಯುವಾಗ ಲೇಖಕನು ತನ್ನ ಕಲ್ಪನಾ ಶಕ್ತಿಗೆ ಪೂರ್ಣ ಅವಕಾಶ ಕೊಡಬಲ್ಲನು. ಆದರೆ ಪ್ರವಾಸ ವರ್ಣನೆಯ ಕಥಾವಸ್ತು ವಾಸ್ತವ ಸೃಷ್ಟಿಯಲ್ಲಿಯ ಪಾತ್ರಗಳು, ಭೌಗೋಲಿಕ ಪ್ರದೇಶಗಳು, ಘಟನೆಗಳು ಇವು ನಿರ್ದಿಷ್ಟವಾದವುಗಳೇ ಇರುವುದರಿಂದ ಅವುಗಳನ್ನು ಮನೋವೇಧಕವಾಗಿ ರೂಪಿಸುವುದು ಸ್ವಲ್ಪ ಕಷ್ಟವೇ. ಆದರೆ ವಿವಿಧತೆ, ಸತ್ಯಸೃಷ್ಟಿಯ ಬಲ ಹಾಗೂ ಅನುಭವದ ಮೆರುಗು ಇವು ಪ್ರವಾಸ ವರ್ಣನೆಗಳಿಗೆ ವಿಶೇಷ ಮಹತ್ವವನ್ನು ಪೂರೈಸಬಲ್ಲವು. ಜನಸಾಮಾನ್ಯರು ದೇಶದೇಶಾಂತರಗಳಿಗೆ ಹೋಗಲರಿಯರು. ಅಷ್ಟು ಅವಕಾಶ, ಧನ, ಸಹಾಯ ಸಹಕಾರಾದಿಗಳನ್ನು ಎಲ್ಲರೂ ಪಡೆಯರು. ಅವರಿಗೆ ಪ್ರವಾಸ ವರ್ಣನೆ ಜ್ಞಾನ ರೂಪವಾಗಿಯೂ ಸಹಾಯಕವಾಗುವುದು.

' ಗೆಜ್ಜೆಯ ಹೆಜ್ಜೆ ನುಡಿ ' ಇದು ಕೇವಲ ಪ್ರವಾಸ ವರ್ಣನೆಯಲ್ಲ. ಇದರಲ್ಲಿ ಹಲವಾರು ವಿಶೇಷತೆಗಳಿರುವುವು. ಇದು ಒಂದು ಪ್ರಸಿದ್ಧ ಕನ್ನಡ ಕಲಾವಿದ ದಂಪತಿಗಳು ಮೂರು ವರುಷ ಜಾಗೃತಿಕ ಕಲಾಯಾತ್ರೆಯನ್ನು ಕೈಕೊಂಡಿರುವ ಕಾಲದಲ್ಲಿ

ಬರೆದ ಪ್ರವಾಸ ಚರಿತ್ರೆ. ತಂದೆ ಪಡುಕೋಣೆ ರಮಾನಂದರು ತನಗೆ ಸೂಚನಾರೂಪ ಸ್ಫೂರ್ತಿ ಕೊಟ್ಟರೆಂದು ಮಗಳು 'ಪಿತೃದೇವೋಭವ' ಎಂಬ ಪೂಜ್ಯ ಭಾವನೆಯಿಂದ ಹೇಳುವಳು. ಅನೇಕಾನೇಕ ಟೀಕೆ ಟಿಪ್ಪಣಿಗಳನ್ನು ರಾಶಿರಾಶಿಯಾಗಿ ಬರೆದಿಟ್ಟು ಆಮೇಲೆ ಸೋಶಿ ಬರೆದ ಪುಸ್ತಕವಲ್ಲ ಇದು. ಆಗಿಂದಾಗಲೆ, ಅವತ್ತಿನದವತ್ತೆ ಪತ್ರ ರೂಪದಲ್ಲಿಯೋ, ದಿನಚರಿ ರೂಪದಲ್ಲಿಯೋ ಬರೆದು ಭಾರತಕ್ಕೆ ಕಳಿಸಿದುದನ್ನು ಆಮೇಲೆ ಹಿಂಡಿ ತೆಗೆದ ರಸವಿದು. ಆ ಮೂಲ ಪತ್ರಗಳನ್ನೂ ಲೇಖಗಳನ್ನೂ ಭಾರತಕ್ಕೆ ಬಂದ ದಿನವೇ ಓದಿ ಸುಖಪಟ್ಟವರೂ ಹಲವಾರು ಆಪ್ತಸ್ನೇಹಿತರು ಇದ್ದಾರೆ. ಕವಿಗಳೆಂದರೆ ಕವಿಗಳೂ, ಲೇಖಕರೆಂದರೆ ಲೇಖಕರೂ, ವಾಙ್ಮಿಗಳೆಂದರೆ ವಾಙ್ಮಿಗಳೂ, ವಿಮರ್ಶಕರೆಂದರೆ ಅದೂ ಸೈ. ಈ ಬಹು ಗುಣಗಳಿಂದ ಯುಕ್ತರಾದ ರಾಜರತ್ನಂ ಇವರ ಆಶೀರ್ವಾದವೂ ಈ ಪುಸ್ತಕಕ್ಕೆ ದೊರೆತಿದೆ. ಆಧುನಿಕ ಲೇಖಕಿಯರಲ್ಲಿ ಗಣ್ಯರೆನಿಸುವ ಶಾಂತಾ ದಿವಾಕರ ಇವರೂ ಹಸ್ತಪ್ರತಿಯನ್ನು ನೋಡಿ ಉತ್ತೇಜನ ಕೊಟ್ಟಿದ್ದಾರೆ.

ಹೀಗೆ ಈ ಪುಸ್ತಕ ಓದುಗರಿಗೆ ಹಲವಾರು ದೃಷ್ಟಿಯಿಂದ ಆಮಂತ್ರಿಸುತ್ತಿದೆ ಎಂದು ಹೇಳಲು ಅಡ್ಡಿ ಇಲ್ಲ. ಪ್ರವಾಸವಾಙ್ಮಯಕ್ಕೆ ಅದರಲ್ಲಿಯೂ ಓರ್ವ ಕಲಾವಿದೆ ಬರೆದುದು ಎಂಬ ಮಾತಿನ ಮೂಲಕ ಇದೊಂದು ಒಳ್ಳೆ ಕಾಣಿಕೆ. ಕನ್ನಡಿಗರಿಗೆ ಇದೊಂದು ಅಭಿಮಾನದ ಸಂಗತಿಯೂ ಅಹುದು. ಇದರ ಲಾಭವನ್ನು ಅನೇಕರು ಪಡೆದು ಆನಂದವನ್ನನುಭವಿಸುವರೆಂದು ನಂಬಿದ್ದೇನೆ.

ಬೆಂಗಳೂರು
೬–೧೦–೧೯೭೧

ರಂಗನಾಥ ದಿವಾಕರ.

ಲೇಖಕಿಯ ನಾಲ್ಕು ಮಾತು

"ಗೆಜ್ಜೆಯ ಹೆಜ್ಜೆ ನುಡಿ" ಯ ಹುಟ್ಟು, ಹಾಗೂ ಮೊದಲ ತೊದಲು ಹೇಗಾಯಿತು? ಎಂಬುದನ್ನು ಓದುಗರಿಗೆ ತಿಳಿಸಬಯಸುತ್ತೇನೆ. ಮೈಸೂರು ಸರಕಾರ ಪತಿಯವರನ್ನೂ (ಶ್ರೀ ಯು. ಎಸ್. ಕೃಷ್ಣರಾವ್) ನನ್ನನ್ನೂ ಕಲಾ ರಾಯಭಾರಿಗಳಾಗಿ 'ಲಂಡನ್ನಿನ ಏಷಿಯನ್ ಮ್ಯೂಸಿಕ್ ಸರ್ಕಲ್' ನ ಆಶ್ರಯದಲ್ಲಿ ಒಂದು ವರ್ಷ ಕೆಲಸ ಮಾಡಲು, ಆ ಸಂಸ್ಥೆಯ ನಿರ್ಮಾಪಕ–ನಿರ್ದೇಶಕರಾದ ಶ್ರೀ ಅಯ್ಯಣ್ಣ ದೇವ ಅಂಗಡಿಯವರ ಕರೆಯ ಮೇರೆಗೆ ಕಳುಹಿಸಿದಾಗ 1965ನೇ ಇಸವಿ ಅಕ್ಟೋಬರ್ ತಿಂಗಳು. ಜನ್ಮವೆಲ್ಲ ತಪಸ್ಸು ಮಾಡಿ ಆಸೆ ಪಡೆದ ಅವಕಾಶ ಸಿಕ್ಕಿ, ನಮ್ಮ ಆಕಾಂಕ್ಷೆ ಅಂದು ನೆರವೇರಿತ್ತು.

ಬೆಂಗಳೂರು ವಿಮಾನ ನಿಲ್ದಾಣದಲ್ಲಿ, ವಿಮಾನ ಹತ್ತುವ ಸಮಯ ಪೂಜ್ಯ ತಂದೆಯವರು, (ಶ್ರೀ ಪಡುಕೋಣೆ ರಮಾನಂದರಾಯರು) "ನಿಮ್ಮ ದಿನಚರಿಯನ್ನು ತಪ್ಪದೆ ಬರೆ" ಎಂದು ಉಪದೇಶಿಸಿದಾಗ, "ದಿನಚರಿ ಬರೆಯಲು ಆಗುತ್ತೋ ಇಲ್ಲವೋ– ನಿಮಗೆಲ್ಲರಿಗೂ ಪತ್ರ ಬರೆಯುವುದು ಹೇಗೂ ಒತ್ತಾಯದ ಕೆಲಸವಿದೆ. ಅವುಗಳಲ್ಲೇ ಎಲ್ಲವನ್ನೂ ಬರೆಯುತ್ತೇನೆ" ಎಂದು ಮಾತು ಕೊಟ್ಟು ಹೊರಟಿದ್ದೆ.

ಅಂತೆಯೇ ಅಂದು, 1965ನೇ ಇಸವಿ ಅಕ್ಟೋಬರ್ ತಿಂಗಳಲ್ಲಿ, ವಿಮಾನ ಭಾರತ ಬಿಟ್ಟು ಪಾಶ್ಚಾತ್ಯಕ್ಕೆ ಹಾರಿ – ಮತ್ತೆ 1968ನೇ ಇಸವಿ ಜೂನ್ ತಿಂಗಳಲ್ಲಿ ಪುನಃ ಭಾರತ ತಲುಪುವವರೆಗೆ, ಮನೆಯಲ್ಲಿನ ಹೆತ್ತವರಿಗೂ, ಮಕ್ಕಳಿಗೂ ತಪ್ಪದೆ ಬರೆಯುತ್ತಲಿದ್ದೆ. 'ಪಿಕ್ಚರ್ ಪೋಸ್ಟ್ ಕಾರ್ಡ್' ಗಳಲ್ಲೂ ಆವಾಗಾವಾಗ ಏನನ್ನಾದರೂ ಗೀಚಿ ಕಳುಹಿಸುತ್ತಲಿದ್ದೆ. ಮನಸ್ಸಿಗೆ ತತ್‌ಕ್ಷಣ ಬಂದುದೆಲ್ಲವನ್ನೂ, ಕಣ್ಣಿಗೆ ಕಂಡದ್ದೆಲ್ಲವನ್ನೂ ಮುಚ್ಚುಮರೆಯಿಲ್ಲದೆ ಬರೆದೆ; ಕೆಲವೊಮ್ಮೆ ದಿನಚರಿಯನ್ನೂ ಕಳುಹಿಸುತ್ತಲಿದ್ದೆ. ಆ ಬರೆಹವೆಲ್ಲ ಇಂಗ್ಲಿಷ್ ಭಾಷೆಯಲ್ಲಿತ್ತು.

"ನಿನ್ನ ಪತ್ರಗಳು ಓದಲು ಸ್ವಾರಸ್ಯವಾಗಿವೆ. ಮನೆಯವರು ಮಾತ್ರವಲ್ಲ, ಇತರರೂ ಓದಿ ಆನಂದಪಡುವಂತಿವೆ". ಎಂದು ಪೂಜ್ಯ ತಂದೆಯವರು, ಅವುಗಳನ್ನು ಟಪ್ಪಾಲಲ್ಲಿ ಬಂದಂತೆ, ಟೈಪ್‌ಮಾಡಿ, ಕೆಲವು ಕಾರ್ಬನ್ ಕಾಪಿಗಳನ್ನು ತೆಗೆದು, ಒಂದನ್ನು ನನ್ನ ಅಜ್ಜನವರಿಗೆ (ದಿವಂಗತ ಶ್ರೀ ಮೊಳಹಳ್ಳಿ ಶಿವರಾಯರು) ಮದ್ರಾಸಿಗೆ,

ಇನ್ನೊಂದನ್ನು ಬೊಂಬಾಯಿಯಲ್ಲಿದ್ದ ನನ್ನ ತಮ್ಮ, ತಂಗಿಯಂದಿರಿಗೆ, ಮತ್ತೊಂದನ್ನು ನಮ್ಮ ಇತರ ಹತ್ತಿರದ ಬಂಧು ಬಳಗದವರಿಗೆ ತಲಪುವಂತೆ ಏರ್ಪಾಡು ಮಾಡಿದ್ದರು. ಆದ್ಯ ಪತ್ರಗಳನ್ನೂ ಅವುಗಳ ಆದ್ಯ ಪ್ರತಿಗಳನ್ನೂ ಮನೆಯಲ್ಲಿ ಕಾದಿರಿಸಿಕೊಂಡಿದ್ದರು. ನಾವು ಆಗಾಗ್ಗೆ ಕಳುಹಿಸುತ್ತಲಿದ್ದ ಪ್ರಕಟಣಾ ಘೋಷಣೆಗಳನ್ನೂ (Publicity Materials) ಹಾಗೂ ಪತ್ರಿಕಾ ಸಂದೇಶ – ವಿಮರ್ಶೆಗಳನ್ನೂ (Press Reviews) ಹೊಸ ರಟ್ಟಿನ ಪುಸ್ತಕಗಳಲ್ಲಿ (Album) ಅಂಟಿಸಿ ತುಂಬಿಸಿದ್ದರು. ಇಂತಹ ಆದರ್ಶ ತಂದೆಯನ್ನು ಪಡೆದ ನಾನು ಭಾಗ್ಯಶಾಲಿ. ನನ್ನ ಪತ್ರಗಳಲ್ಲಿ ಒಂದೂ ಕಳೆದು ಹೋಗದಂತೆ ಕಾಪಾಡಿ ಕಾದಿರಿಸಿದ್ದ ಆ ಋಣವನ್ನು ಈ ನನ್ನ ಜನ್ಮದಲ್ಲಿ ತೀರಿಸ ಲಾರೆ. ಕೃತಜ್ಞತೆ, ವಂದನೆ, ಅಭಿನಂದನೆ ಮುಂತಾದ ಶಬ್ದಗಳು ಅವರ ವಿಷಯದಲ್ಲಿ ಉಪಯೋಗಕ್ಕೆ ಬಾರದ ಅರ್ಥವಿಲ್ಲದ ಶಬ್ದಗಳು. ದೇವರು ಅವರಿಗೆ ಆಯುರಾ ರೋಗ್ಯ ಕೊಟ್ಟು ಕಾಪಾಡಲಿ ಎಂದು ಬೇಡುತ್ತೇನೆ.

"ನಿಮ್ಮ ಪತ್ರಗಳನ್ನು ಯಾರಾದರೂ ಪ್ರಕಟಿಸಬಹುದಿತ್ತು. ಅವು ವಿಶ್ವಕ್ಕೇ ವಿಶಾಸಲಾದುವು" ಎಂದು ಯಾವಾಗಲೂ ಪೂಜ್ಯ ತಂದೆಯವರು ಹೇಳುತ್ತಲೇ ಇದ್ದರು. ಒಮ್ಮೆ ಶ್ರೀ ಜಿ. ಬಿ. ಜೋಷಿಯವರು ತಂದೆಯವರನ್ನು ಕಾಣಲು ನಮ್ಮ ಮನೆಗೆ ಬಂದಿದ್ದರು. ಅವರೊಡನೆಯೂ ತಂದೆಯವರು ಈ ಮಾತೆತ್ತಿದರು. "ಇಂಗ್ಲಿಷ್‌ನಲ್ಲಿ ಇದ್ದುದನ್ನು ಕನ್ನಡಕ್ಕೆ ಪರಿವರ್ತಿಸಿದರೆ ಮನೋಹರ ಗ್ರಂಥಮಾಲೆ ಯಲ್ಲಿ ಪ್ರಕಟಿಸಲು ಸಾಧ್ಯವಾಗಬಹುದು" ಎಂದು ಅವರು ಅಂದ ಮಾತು ಆಶಾಜನಕ ವಾಯಿತು. ಅವರು ನನ್ನ ಪತ್ರಗಳಲ್ಲಿ ತೋರಿದ ಆಸಕ್ತಿಯ ಉಪಕಾರವನ್ನು ಇಂದು ಸ್ಮರಿಸುತ್ತೇನೆ. ಅಂದಿನಿಂದ ಪೂಜ್ಯ ತಂದೆಯವರ ಸಲಹೆಯ ಮೇರೆಗೆ ನಾನು ಆ ಪತ್ರ ಗಳನ್ನು ಕನ್ನಡಕ್ಕೆ ರೂಪಾಂತರಿಸಲು ಆರಂಭಿಸಿದೆ. " ಗೆಜ್ಜೆಯ ಹೆಜ್ಜೆ ನುಡಿ " ಯು ಜನ್ಮ ತಾಳಿತು. ಕೆಲಸ ನಿಧಾನವಾಯಿತು. ಕಾರಣ ಅಮ್ಮನವರ (ದಿವಂಗತ ಶ್ರೀಮತಿ ಪಡುಕೋಣೆ ಸೀತಾದೇವಿ) ಕಾಹಿಲೆ. 1969ನೇ ಇಸವಿಯ ಹೆಚ್ಚು ಭಾಗ ವೆಲ್ಲ ಅವರ ಬಳಿ ಕಳೆಯಬೇಕಾದ ಕಾರಣ, ಕನ್ನಡ ರೂಪಾಂತರ ಕುಂಟುತ್ತಾ ಮುಂದೆ ಸಾಗಿತು. ಒಂದು ವರ್ಷ ಕಾಲ ಭೀಕರ ಕ್ಯಾನ್ಸರ್ ಕಾಹಿಲೆಯಿಂದ ನರಳಿ 1969ನೇ ಇಸವಿ ಡಿಸೆಂಬರ್ 11ನೇ ತಾರೀಖಿನ ದಿನ ಪೂಜ್ಯ ಅಮ್ಮನವರು ದೈವಾಧೀನರಾದರು.

1970ನೇ ಇಸವಿಯ ಆರಂಭದಿಂದ, ಹಠದಿಂದ ಎಂಬಂತೆ ಕೂತು ಇಂಗ್ಲಿಷ್ ಪತ್ರಗಳ ರೂಪಾಂತರ ಬರೆದು ಮುಗಿಸಿದೆ. ಮೊಟ್ಟಮೊದಲು ರೂಪಾಂತರಿಸಿದ ಕೆಲವು ಪತ್ರಗಳನ್ನು ಅಣ್ಣನ ಸಮಾನರಾದ ಶ್ರೀ ಜಿ. ಪಿ. ರಾಜರತ್ನಂರವರಿಗೆ ಓದಲು ಕೊಟ್ಟು, ಅವರ ಅಭಿಪ್ರಾಯ, ಸಲಹೆಗಳನ್ನು ಕೇಳಿಕೊಂಡೆವು. ಅವರು, " ತಾಯಿ ಯಾದವಳೊಬ್ಬಳು ಈ ರೀತಿ ಬರೆಯದೆ ಇನ್ಯಾರಿಂದ ಈ ಬರಹ ಸಾಧ್ಯ ? " ಎಂದು

ಒಪ್ಪಿ, ಧೈರ್ಯ ಕೊಟ್ಟರು. ಅಂದು ನನಗೆ ಸಿಕ್ಕಿದ ಮನಸ್ಥೈರ್ಯಕ್ಕೆ ನಾನು ಅವರನ್ನು ಅಂತಃಕರಣದಿಂದ ಅಭಿನಂದಿಸುತ್ತೇನೆ.

ಬರಹದ ಹಸ್ತಪ್ರತಿಯನ್ನು ತಯಾರಿಸಲು, ಕಾಹಿಲೆಯ ಕಾರಣವಿದ್ದರೂ ತೊಂದರೆ ಕೊಡದೆ ಸಹಾಯ ಮಾಡಿದ ಶ್ರೀ ಮಧ್ಯಸ್ಥ ಶ್ರೀನಿವಾಸರಾಯರಿಗೆ ನನ್ನ ವಂದನೆಗಳು. ಅವರ ಅನಾರೋಗ್ಯದ ಕಷ್ಟವನ್ನು ಕಂಡು, ಅವರಿಗೆ ತೊಂದರೆ ಕೊಡ ಲಾರದೆ, ಉಳಿದ ಅನೇಕ ಪತ್ರಗಳ ಪ್ರತಿ ತೆಗೆಯಲು ಶ್ರೀ ಹೆಚ್. ಎನ್. ದ್ವಾರಕಾನಾಥ್ ರವರಿಗೆ ಒಪ್ಪಿಸಿದಾಗ ಅದು ಒಂದು ಸುಸಂದರ್ಭವೇ ಆಯಿತು. ನಾನು ಬರೆದ ಕನ್ನಡ ಭಾಷೆಯಲ್ಲಿನ ಕೆಲವು ಕೊರತೆಗಳನ್ನು ಕಿತ್ತು, ಕೆಲವು ವಿಷಯಗಳು ಸ್ಪಷ್ಟವಾಗುವಂತೆ ತಿದ್ದಿ ಸಹಕಾರ ನೀಡಿದ ಈ ಪ್ರತಿಭಾನ್ವಿತ ತರುಣನಿಗೆ ನನ್ನ ಕೃತಜ್ಞತೆಗಳು.

"ಏನೇ ಇರಲಿ, ಹೇಗೂ ಇರಲಿ, ಕಷ್ಟವೋ, ನಷ್ಟವೋ – ನಿನ್ನ ಪುಸ್ತಕ ಅಚ್ಚಾಗದೆ ಇರಲು ಬಿಡಲಾರೆ!" ಎಂದು ಪತಿಯವರು ಕೊಟ್ಟ ಆಶ್ವಾಸನೆಗೆ ಮತ್ತು ಹಠಕ್ಕೆ ನಾನು ಚಿರಋಣಿ. ಅವರ ಸಹಾಯ, ಸಹಾನುಭೂತಿ, ಸ್ಫೂರ್ತಿ ಮತ್ತು ಪ್ರೋತ್ಸಾಹಕ್ಕೆ ಆಜೀವಪರ್ಯಂತ ಆಭಾರಿಯಾಗಿದ್ದೇನೆ.

ಪತ್ರಗಳಲ್ಲಿನ ವಿಷಯಗಳು, ಅಂದು ಯಾವ ದೃಷ್ಟಿಯಿಂದ ನಾನು ಬರೆದೆನೋ ಅವು ಇಂದು ಬೇರೆಯಾಗಿರಬಹುದು. ಇನ್ನೊಮ್ಮೆ ಪಾಶ್ಚಾತ್ಯಕ್ಕೆ ಹೋದರೆ ಮತ್ತೊಂದು ಅಭಿಪ್ರಾಯವಾಗಬಹುದು. ಆದರೆ ಯಾವುದನ್ನೂ ನಾನು ಹೆಚ್ಚು ಕಮ್ಮಿ ಮಾಡದೆ ಆ ಪತ್ರಗಳನ್ನು ಅಂತೆಯೇ ಕನ್ನಡಕ್ಕೆ ಪರಿವರ್ತಿಸಿದ್ದೇನೆ. ಮೊದಲ ಅಭಿಪ್ರಾಯಗಳಲ್ಲಿರುವ ಸ್ವಾರಸ್ಯ ಮತ್ತೊಮ್ಮೆ ಸಿಗುವುದಿಲ್ಲ; ಅವು ಎಂದೂ ಹೊಸ ತಾಗಿದ್ದು ಶಕ್ತಿಯುತವಾಗಿರುತ್ತವೆ. ಪ್ರಪಂಚವು ಬದಲಾಯಿಸುತ್ತಲೇ ಇರುತ್ತದೆ. ಅದೂ ಒಂದು ಸೃಷ್ಟಿಯ ಸ್ವಾಭಾವಿಕ ನಿಯಮವೇ ತಾನೇ?

ಅಲ್ಲದೆ, ನಾನು ಕಂಡ ಪಾಶ್ಚಾತ್ಯ ಅಥವಾ ಭೂಲೋಕ ನನ್ನ ದೃಷ್ಟಿಯಿಂದ– ಅಂದರೆ ಹೆಂಗಸಿನ ದೃಷ್ಟಿಯಿಂದ. ಈ ದೃಷ್ಟಿ ಗಂಡಸರ ದೃಷ್ಟಿಗಿಂತ ಖಂಡಿತವಾಗಿ ಅತಿ ಬೇರೆಯಾಗಿರುತ್ತದೆ. ಸ್ತ್ರೀಯೋರ್ವರು ಅದನ್ನು ಓದಿದರೆ ಆಗುವ ಪರಿಣಾಮ ವನ್ನು ತಿಳಿಯಲು, ಒಮ್ಮೆ "ಗೆಜ್ಜೆಯ ಹೆಜ್ಜೆ ನುಡಿ" ಯ ಹಸ್ತಪ್ರತಿಯನ್ನು ಶ್ರೀಮತಿ ಶಾಂತಾ ಎ. ದಿವಾಕರ್‌ರವರಿಗೆ ಓದಲು ಕೊಟ್ಟೆ. ಅವರು ಅದನ್ನು ಓದಿ, ಮೆಚ್ಚಿ, ಹುರಿದುಂಬಿಸಿ, ಪ್ರಕಟಿಸಲು ಖಂಡಿತ ಪ್ರಯತ್ನಿಸಬೇಕೆಂಬ ಸಲಹೆ ಕೊಟ್ಟದ್ದಕ್ಕೆ ಅವರನ್ನು ಹೃತ್ಪೂರ್ವಕ ವಂದಿಸುತ್ತೇನೆ.

ನಮ್ಮ ಕಲೆಯ ಹೊಗಳುವಿಕೆಯ ತುತ್ತೂರಿ ಈ ಪತ್ರಗಳಲ್ಲಿ ಅಲ್ಲಲ್ಲಿ ಮೊಳಗು ತ್ತಲೇ ಇರುತ್ತದೆ ನಿಜ. "Blow your own Trumpet" ಎಂಬ ಕಠಿಣ

ವಿಮರ್ಶೆ ನನ್ನ ಪಾಲಿಗೆ ಸಿಗುವ ಸಂಭವವಿದೆ. ಆದರೆ, ನಾನು, ನಮ್ಮ ಕಲೆಯ ವಿಷಯವಾಗಿ, ಅದರ ಶ್ರೇಯಸ್ಸು ಮತ್ತು ಯಶಸ್ಸನ್ನೂ ಸುಖ–ದುಃಖಗಳನ್ನೂ ಹೆತ್ತವರಿಗೆ ಮತ್ತು ನನ್ನ ಮಕ್ಕಳಿಗೆ ತಿಳಿಸದೆ ಇನ್ನು ಯಾರಿಗೆ ತಿಳಿಸಲಿ ? ನಮ್ಮ ಪ್ರವಾಸದ ಸುದ್ದಿ, ಕೀರ್ತಿ, ಕಲಾ ಜೀವನದಲ್ಲಿ ಅನುಭವಿಸಿದ ಕಹಿ–ಸಿಹಿಗಳು ಅವರಿಗೆ ಕೊಟ್ಟಷ್ಟು ಆತ್ಮೀಯತೆ, ತೃಪ್ತಿ, ಸಂತೋಷ ಇತರರಿಗೆ ಕೊಡಬಲ್ಲುವೇ? ಆದ್ದರಿಂದ, ಅವರ ದೃಷ್ಟಿಯಿಂದ ಈ ಪತ್ರಗಳನ್ನು ಓದಿದರೆ, ಓದುಗರಿಗೆ ಸಿಗುವ ಭಾವನೆ ಬೇರೆಯಾಗಬಹುದು ಎಂಬ ಆಸೆ ನನಗಿದೆ.

" ಗೆಜ್ಜೆಯ ಹೆಜ್ಜೆ ನುಡಿ " ಯ ಪ್ರಕಟಣೆಗೆ ಆಸಕ್ತಿ ತೋರಿಸಿದ ಶ್ರೀಮತಿ ಶಾಂತಾ ಎ. ದಿವಾಕರ್‌ರವರ ಇಚ್ಛೆಯಂತೆ ಓಮ್ಮೆ ನಾವು ಶ್ರೀ ಆರ್. ಆರ್. ದಿವಾಕರ್‌ರವರನ್ನು ಭೆಟ್ಟಿಮಾಡಿ, ಅವರು ನಡೆಸುತ್ತಿರುವ " ಲೋಕ ಶಿಕ್ಷಣ ಮಾಲೆ " ಯಲ್ಲಿ ಪ್ರಕಾಶನ ಸಾಧ್ಯವೇ? ಎಂದು ಕೇಳಿಕೊಂಡೆವು. ಅವರು ಆ ಪತ್ರಗಳಲ್ಲಿ ಕೆಲವನ್ನು ಓದಿ, ಮರುದಿನವೇ ಪ್ರಕಾಶನಕ್ಕೆ ಒಪ್ಪಿಗೆ ಕೊಟ್ಟದ್ದು ನಮಗೆ ನಂಬಲಸಾಧ್ಯವಾಯಿತು. ನಮಗೆ ಅತ್ಯಾನಂದ ಕೊಟ್ಟು, ನಮ್ಮ ಹಿರಿಯಾಸೆಯೊಂದನ್ನು ಸಫಲ ಮಾಡಿಕೊಟ್ಟ ಆ ಪೂಜ್ಯ ಮಹನೀಯರ ಸಹಾಯ, ಪ್ರೋತ್ಸಾಹ ಎಂದೆಂದಿಗೂ ಮರೆಯಲಾರೆವು. ಅಲ್ಲದೆ, ಈ ಪುಸ್ತಕಕ್ಕೆ ಮುನ್ನುಡಿಯನ್ನು ಬರೆದು ಆಶೀರ್ವಾದ ಮಾಡಿದುದಕ್ಕೆ ಅವರಿಗೆ ನಮ್ಮ ಗೌರವಪೂರ್ವಕ ಕೃತಜ್ಞತೆ ಅರ್ಪಿಸುತ್ತೇನೆ.

ಈ ಪುಸ್ತಕ ಅಚ್ಚಾಗಲು ನೆರವು ನೀಡಿದ "ಲೋಕ ಶಿಕ್ಷಣ ಮಾಲೆ" ಯವರಿಗೆ ನಾವು ಆಭಾರಿಯಾಗಿದ್ದೇವೆ.

"ಗೆಜ್ಜೆಯ ಹೆಜ್ಜೆ ನುಡಿ" ನನ್ನ ಮೊದಲ ಪ್ರಯತ್ನ. ಇಷ್ಟು ದಿನ ಕೆಲವು ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುತ್ತಿದ್ದ ನಾನು, ಈ ನನ್ನ ಮೊದಲ ಪ್ರಯತ್ನವನ್ನು ಓದುಗರ ಮುಂದಿಟ್ಟು, ಹಿರಿಯರ ಆಶೀರ್ವಾದವನ್ನೂ, ಕಿರಿಯರ ಉತ್ತೇಜನವನ್ನೂ ಬಯಸುತ್ತಿದ್ದೇನೆ.

ಬೆಂಗಳೂರು
ವಿಜಯದಶಮಿ, 1971

ಇತಿ,
ಚಂದ್ರಭಾಗಾದೇವಿ.

॥ ಶ್ರೀ ಗಣಾಧಿಪತಯೇ ನಮಃ ॥

ಗೆಜ್ಜೆಯ ಹೆಜ್ಜೆ ನುಡಿ

ಕೆರೆವೆಲ್ ವಿಮಾನದಲ್ಲಿ–ಬೆಂಗಳೂರಿನಿಂದ ಮುಂಬಯಿಗೆ

21–10–1965ರಲ್ಲಿ 7–45 — 9–30 ಬೆಳಿಗ್ಗೆ

ನಮ್ಮ ಮನೆ "ರುಕ್ಮಿಣಿ" ಯನ್ನು ಬಿಟ್ಟು ಹೋಗುವಾಗ ಚಿ|| ಜಯದೇವ ನಮ್ಮ ಕಾಲು ಮುಟ್ಟಿ ನಮಸ್ಕಾರ ಮಾಡಿ, ನಮ್ಮನ್ನು ತಬ್ಬಿಕೊಂಡು "ಸುಖವಾಗಿ ಸುತ್ತಾಡಿಕೊಂಡು ಬನ್ನಿ" ಎಂದು ಆಶಿಸಿದ. ಮಗ ಜಯದೇವನ ತಲೆಯ ಮೇಲೆ ಮನೆಯ ಎಲ್ಲ ಜವಾಬ್ದಾರಿ........ತಮ್ಮನ ಓದು........ಎಲ್ಲವನ್ನೂ ಹೊರೆಹೊರಿಸಿ ನಾವು ಹೊರಟಿದ್ದೆವು. ಅವನು ಮಗುವಿದ್ದಾಗ........ಹುಟ್ಟಿದೊಡನೆ ಬರೆ 5 ಪೌಂಡು ತೂಕವಿದ್ದ ಮಗುವಿನ, ಚಿಕ್ಕದಾದರೂ ಅಗಲವಾದ ಎದೆಯನ್ನು ತಟ್ಟಿ "ತುಂಬಾ ಬಲಾಢ್ಯ ಗಂಡು!" ಎಂದು ನಾನು ಹೆಮ್ಮೆ ಪಡಲಿಲ್ಲವೇ? ಅಂದಿನ ಆ 'ಬಲಾಢ್ಯ ಗಂಡು' ಇಂದು ನಮಗೆ ನಿಜವಾದ ಶಕ್ತಿ, ಬೆಂಬಲ....ವಿಚಾರಶೀಲ ಯುವಕ.... ತಿಳುವಳಿಕೆಯಿರುವ ಮಗು....ಅಲ್ಲದೆ ವಿವೇಕ, ಜ್ಞಾನವಿರುವ ಜ್ಯೇಷ್ಠಪುತ್ರ.

ಮಗು ಶಿವದೇವ ಕಣ್ಣೀರನ್ನು ತಡೆದು ಮೂಕನಾಗಿದ್ದ. ಅವನೊಂದು ದೇವರ ಅಚ್ಚರಿಯ ಸೃಷ್ಟಿ. ಚಿಕ್ಕಂದಿನಿಂದಲೂ ಮನಸ್ಸಿನ ಯಾವ ಭಾವನೆಗಳನ್ನೂ ತೋರ್ಪಡಿಸದೆ, ಎಲ್ಲವನ್ನೂ ಹತೋಟಿಯಲ್ಲಿಟ್ಟುಕೊಂಡು ಆಂತರಿಕವಾಗಿಯೇ ಕೊರಗುವ ಮಗು. ....ಘನ ವ್ಯಕ್ತಿತ್ವವುಳ್ಳ ವಿಶ್ವಾಸಾರ್ಹನಾದ ಯುವಕ. ಕಾರ್ಯಸಾಧಕ....ಶ್ರಮವಿಲ್ಲದೆ ದುಡಿಯುವ ಸ್ವಭಾವ. ಇನ್ನು ಕೆಲವೇ ತಿಂಗಳುಗಳಲ್ಲಿ ಇಂಜಿನಿಯರಿಂಗ್ ಪದವೀ ಪರೀಕ್ಷೆಗೆ ಕಟ್ಟುವವನಿದ್ದ. ಅವನ ಮೊದಲನೇ ರ್‍ಯಾಂಕಿಗೆ ಆಶೀರ್ವದಿಸಿದೆ. S. S. L. C. ಯಿಂದ ಇಂದಿನವರೆಗೂ ರ್‍ಯಾಂಕುಗಳನ್ನು ಪಡೆದು ಓದು ಮುಂದುವರಿಸಿದ್ದ. ನಾವು ಹೆಮ್ಮೆ ಪಡುವಂತಹ ಮಗ. ನಮಗೆ ಈ ಇಬ್ಬರು ಗಂಡು ಮಕ್ಕಳ ಭಾಗ್ಯವನ್ನು ಕರುಣಿಸಿದುದಕ್ಕೆ ದೇವರನ್ನು ಮನಃಪೂರ್ವಕವಾಗಿ ಕೃತಜ್ಞತೆಯಿಂದ ನಮಸ್ಕರಿಸಿದೆ.

ಶ್ರೀ. ತಂದೆಯವರ ಆಶೀರ್ವಾದವನ್ನು ಪಡೆಯುವಾಗ ಅವರು ನೀರು ತುಂಬಿದ ಕಣ್ಣುಗಳಿಂದ ನನ್ನನ್ನು ಬೀಳ್ಕೊಟ್ಟು ಹಣೆಯನ್ನು ಮುತ್ತಿಕ್ಕಿದರು. ವಿಮಾನ ನಿಲ್ದಾಣದಲ್ಲಿ ನಮ್ಮನ್ನು ಬೀಳ್ಕೊಡಲು ನಮ್ಮ ಸಂಗೀತಗಾರರೂ ಬಂದು ಹಾರ, ಹಣ್ಣು ಗಳನ್ನು ಒಪ್ಪಿಸಿ ಕಣ್ಣೀರಿಟ್ಟರು. ಅಡಿಗೆಗಿದ್ದ ಗೌರಿಯೂ ಬಂದಿದ್ದಳು. ವರ್ಷಗಟ್ಟಲೆ ದಿನರಾತ್ರಿ ಎಂಬಂತೆ ಬಿಡುವಿಲ್ಲದೆ ಕೆಲಸ ಮಾಡಿ ನಮ್ಮ ಮನೆಯನ್ನೂ ಮಕ್ಕಳನ್ನೂ ಕಾಪಾಡಿಕೊಂಡು ಬಂದ ನಂಬಿಗಸ್ಥ ಹೆಂಗಸು, "ಕಷ್ಟವೋ ನಷ್ಟವೋ, ನೀವು ಹಿಂದಿರುಗಿ ಬರುವವರೆಗೆ ನಿಮ್ಮ ಮಕ್ಕಳನ್ನು ನೋಡಿಕೊಂಡಿರುತ್ತೇನೆ" ಎಂದು ಆಶ್ವಾಸನೆ ಕೊಟ್ಟಳು........

ಬೀಳ್ಕೊಡುವ ಸಮಯ ಅತಿ ಕಷ್ಟಕರವಾಯಿತು. ಮನಸ್ಸು ತುಂಬಾ ವ್ಯಥೆ ಪಟ್ಟಿತು. ಆದರೆ ಪರದೇಶಗಳ ಪ್ರವಾಸ ನಮ್ಮ ಎಷ್ಟು ವರುಷಗಳ ತಪಸ್ಸಿನ ಫಲ! ಶೂನ್ಯ ಹಂಬಲದ ಅಂತ್ಯ....ಉದಾತ್ತ ಧ್ಯೇಯಗಳ ಪರಿಣಾಮ! ಜೀವನದಲ್ಲಿ ಕಲಾ ಪ್ರಚಾರದ ಶ್ರೇಷ್ಠ ಕಾರ್ಯವನ್ನು ನಮ್ಮ ಸಮಕಾಲೀನ ಭಾರತದ ಎಲ್ಲಾ ಕಲಾವಿದರೂ ಪರದೇಶದಲ್ಲಿ ನಡೆಸಿಕೊಂಡು ಬಂದಿರುವರು. ನಮಗೆ ಅಂತಹ ಅವಕಾಶ ಸಿಗಲಿಲ್ಲ ವೆಂಬ ಚಿಂತೆಯಿತ್ತು. ಆ ಹಂಬಲ....ಆ ಕನಸು ಇಂದು ನೆನಸಾಗಿದೆ. ನಾವಿಬ್ಬರೂ ಸಂತೋಷಪಡುವಂತಹ ಸಮಯ. ಆದರೂ ಆಪ್ತೇಷ್ಟರನ್ನು ಅಗಲಿ ಹೋಗುವಾಗ ಕರುಳು ಕಿತ್ತುಹೋಗುವಂತಾಯಿತು.........

ಕೆರೆವೆಲ್ ಹತ್ತುವ ಸಮಯದಲ್ಲಿ ಚಿ|| ಜಯದೇವ ನನ್ನ ಕೈಯಲ್ಲಿ ಒಂದು ಪುಸ್ತಕವನ್ನು ಕೊಟ್ಟ. ವಿಮಾನ ಬಿಟ್ಟೊಡನೆ ಅದನ್ನು ತೆರೆದು ನೋಡಿದೆ. "Travel in Europe" (ಯೂರೋಪಿನಲ್ಲಿ ಪ್ರವಾಸ) ಎಂಬ ಪುಸ್ತಕ. ಮೊದಲ ಪುಟದಲ್ಲಿ ತನ್ನ ಹಸ್ತಾಕ್ಷರದಲ್ಲಿ ಹೀಗೆ ಬರೆದಿದ್ದ: "ಸರಾಸರಿ ಅರ್ಧ ಶತಮಾನವನ್ನು ಭಾರತದಲ್ಲಿ ಕಳೆದ ನೀವು ಇನ್ನುಳಿದ ಅರ್ಧ ಶತಮಾನವನ್ನು ಜಗತ್ತಿನ ಇತರ ದೇಶಗಳಲ್ಲಿ ಕಲೆಗೋಸ್ಕರ ಕಳೆಯಿರಿ". ಗದ್ಗದ ಕಂಠದಿಂದ ಓದಿದೆ. ನಮ್ಮ ಕಲೆಯ ಪ್ರಚಾರ ಯಶಸ್ವಿಯಾಗಲಿ ಎಂದು ದೇವರಿಗೆ ಮೊರೆಯಿಟ್ಟೆ, ನಮ್ಮ ಕಾರ್ಯಗಳನ್ನೆಲ್ಲಾ ಸಫಲ ಮಾಡು ಎಂದು ಪ್ರಾರ್ಥಿಸಿದೆ....

ಅಲ್ಲೋಲ ಕಲ್ಲೋಲವಾದ ಮನಸ್ಸು ಸ್ತಿಮಿತಕ್ಕೆ ಬರುವ ಮೊದಲೇ ಮುಂಬಯಿಯನ್ನು ಸೇರಿದೆವು....ಸೆಂಟರಿಷ್ಟರ ಭೇಟಿ....ಅಂದು ಸಾಯಂಕಾಲ ಮುಂಬಯಿನ ನಾಟ್ಯ ಸಂಘದವರು ('Dancers' Guild') ನಮಗಾಗಿ ಒಂದು ಸ್ವಾಗತ ಸಮಾರಂಭ–ಸತ್ಕಾರ ಕೂಟ–ಬೀಳ್ಕೊಡುವ ಸಂದರ್ಭವನ್ನು ಏರ್ಪಡಿಸಿದ್ದರು. ಸ್ವಾಗತ ಭಾಷಣವಾದ ಮೇಲೆ ಪತಿಯವರು ಮಾತನಾಡಿದರು. ನಮ್ಮ ಕಲಾ ಜೀವನದ 'ಬೇವು–ಬೆಲ್ಲ'ದ ದರ್ಶನವನ್ನು ಅಲ್ಲಿ ನೆರೆದಿದ್ದ ಕಲಾವೃಂದಕ್ಕೆ ಮಾಡಿಕೊಟ್ಟು,

ನಮ್ಮ ಭವಿಷ್ಯದ ಕನಸುಗಳನ್ನು ಸ್ಪಷ್ಟಪಡಿಸಿದರು. ನಮ್ಮ ಕಲಾ ಜೀವನದ ವಿಮರ್ಶೆ ಮಾಡುತ್ತಾ ಕಲೆಯ ಅಭಿವೃದ್ಧಿ ಅಂದಿನಿಂದ ಇಂದಿನವರೆಗೆ ಹೇಗೆ ಸಾಗಿದೆ ಎಂದು ವಿವರಿಸಿದರು. ಅವರು ಮಾತನಾಡುತ್ತಿರುವಾಗ ನಮ್ಮ ಜೀವನದ ಮುಖ್ಯ ಘಟನೆಗಳೆಲ್ಲಾ ನನ್ನ ಕಣ್ಣಮುಂದೆ ಹಾದು ಹೋದಂತಾಯಿತು. "ನನ್ನಾಕೆ ಹೇಗೆ ಹುಟ್ಟು ನರ್ತಕಿ, (Born Dancer) ತಾನು ಹೇಗೆ ರೂಪಿಸಲ್ಪಟ್ಟ ನರ್ತಕ (Made Dancer)" ಎಂದು ವಿನೋದವಾಗಿ ತಿಳಿಸಿದರು. ಜಯದೇವ ಒಮ್ಮೆ "ತಾನು Made Engineer (M. E.), ಶಿವದೇವ Born Engineer (B. E.) " ಎಂದು ವಿನೋದಕ್ಕಾಗಿ ಹೇಳಿದ ಮಾತನ್ನೂ ಈ ಸಂದರ್ಭದಲ್ಲಿ ನೆನಸಿ ಸಭಿಕರನ್ನು ನಗಿಸಿದರು....ಅಂದಿನ ದಿನ ಒಂದು ಚಂದದ ದಿನ ನಮಗೆ....

ಬೋಯಿಂಗ್ 'ನಂದಾದೇವಿ' ವಿಮಾನದಲ್ಲಿ

AIR INDIA FLIGHT 121-

ದೆಹಲಿ – ಮುಂಬಯಿ – ಪಾಶ್ಚಾತ್ಯ ಹಾರಾಟ

1965ರ ಅಕ್ಟೋಬರ್ ದಿನಾಂಕ 23 ಅಂತೂ ಉದಯಿಸಿತು. ಬೆಳಗ್ಗೆ 5–30 ಗಂಟೆಗೆ ಸಮಯಕ್ಕೆ ಮುಂಚಿತವಾಗಿ ಮುಂಬಯಿಯ ಸಾಂಟಾಕ್ರೂಸ್ (Santa Cruz) ವಿಮಾನ ನಿಲ್ದಾಣವನ್ನು ಸೇರಿದೆವು. ನನ್ನ ತಮ್ಮ ಶಂಕ್ರು ತನ್ನ ಮಗ ಮೈತ್ರೇಯನೊಡನೆ ಬಂದು ನಮ್ಮನ್ನು ಬೀಳ್ಕೊಟ್ಟು ನಮ್ಮ ಪ್ರವಾಸ ಸಫಲವಾಗಿ ಸಾಗಲಿ ಎಂದು ಅಭಿನಂದಿಸಿದನು. ಬೋಯಿಂಗ್ ವಿಮಾನ "ನಂದಾದೇವಿ" ಯನ್ನು ಹತ್ತಲು ಹೊರಟೆವು.

"ನಂದಾದೇವಿ" ಸುಂದರ ವಿಮಾನ. ಶ್ರೀ ರವಿಶಂಕರರ ಸಿತಾರ್ ಸಂಗೀತ ಅಲೆಅಲೆಯಾಗಿ ಸಣ್ಣ ದನಿಯಲ್ಲಿ ತೇಲಾಡುತ್ತಿತ್ತು. ಭಾರತದ ಸ್ಫೂರ್ತಿಯನ್ನೇ ವಿಮಾನದಲ್ಲಿ ತುಂಬಿದ್ದರು. ನೃತ್ಯ ಭಂಗಿಗಳು, ಭಾರತೀಯ ಕಲಾಕೃತಿಯ ರೂಪು ರೇಖೆಗಳು ವಿಮಾನವೆಲ್ಲವನ್ನೂ ಅಲಂಕರಿಸಿದ್ದವು. ವಿಮಾನ ಹಾರಾಟ ಮುಂಬಯಿ ಯಿಂದ ಜಿನೀವಾವರೆಗೆ ವೇಗವಾಗಿಯೂ, ನಿಶ್ಶಬ್ದವಾಗಿಯೂ ಸುಖಕರವಾಗಿಯೂ ಸಾಗಿತು. ಬೇರೂಟ್‌ನ್ನು ಸೇರುವಾಗ್ಗೆ ಆಕಾಶದಲ್ಲಿ ಪೂರ್ಣ ಕಾಮನಬಿಲ್ಲು ನಮ್ಮನ್ನು ಸ್ವಾಗತಿಸುತ್ತಿತ್ತು. ಬೇರೂಟಿನ ವಿಮಾನ ನಿಲ್ದಾಣ ಭೂಮಧ್ಯ ಸಮುದ್ರದ ದಂಡೆ ಯಲ್ಲಿದೆ. ಈ ಸಮುದ್ರ 'ಈಜೀಯನ್ ಸಾಗರವೋ' (Aegean Sea) ಅಥವಾ ಮೆಡಿಟರೇನಿಯನ್ (Mediterranean Sea) ಸಾಗರವೋ ಈಗ ನನಗೆ ತಿಳಿಯದು.

ಮಧ್ಯಾಹ್ನ 2 ಗಂಟೆಗೆ ಪುನಃ ವಿಮಾನ ಬೇರೂಟನ್ನು ಬಿಟ್ಟು ಹಾರಿತು. ನಮ್ಮ ಗಡಿಯಾರಗಳನ್ನು ಒಂದು ಗಂಟೆ ಹಿಂದೆ ಮಾಡಲು ಹೇಳಿದರು. ಈ 'ಸಮಯ'ದ ವ್ಯತ್ಯಾಸದಿಂದಾಗಿ ನಾವು ಸಹಜವಾಗಿ ಊಟ ತಿಂಡಿ ತಿನ್ನುವ ವೇಳೆಗೆ ಹೊಟ್ಟೆಯ ಹಸಿವನ್ನು ಹತೋಟಿಯಲ್ಲಿಡಲು ತುಸು ಕಷ್ಟವಾಯಿತು. ಜಿನೀವಾ ಸೇರುವಾಗ ದೀಪಾವಳಿ ರಾತ್ರಿಯಾದ್ದರಿಂದ ಮಲಗುವ ವೇಳೆಗೆ ಪೂರ್ತಿ 24 ಗಂಟೆ ಕಾಲ ಎಚ್ಚರ ವಿದ್ದಂತಾಯಿತು ! ಅದರ ದಣಿವು ನಮಗೆ ಎರಡು ದಿನಗಳವರೆಗೆ ಹೋಗಲಿಲ್ಲ !....

* * * *

ಜಿನೀವಾ (ಸ್ವಿಟ್ಜರ್ಲೆಂಡ್)
25–10–1965

ಮುದ್ದು ಜಯದೇವ್,

....ವಿಮಾನ ಜಿನೀವಾ ಹತ್ತಿರ ಬರುತ್ತಿದ್ದಂತೆ ನಿಸರ್ಗ ಸೌಂದರ್ಯ ಬಹಳ ಆಕರ್ಷಣೀಯವಾಗಿತ್ತು. ಶರದೃತುವಿನ ಸಮಯ. ಗಿಡಮರಗಳೆಲ್ಲಾ ಹಳದಿ, ಕಂದು ಅಥವಾ ಎಳೀ ಹಳದಿ ಬಣ್ಣಗಳನ್ನು ಪಡೆದಿದ್ದುವು. ಗಗನ ಮಂಡಲದಿಂದ ಕಂಡುಬರುವ ಈ ಹಕ್ಕಿನೋಟ ಬಹಳ ರಮಣೀಯ. ನಮ್ಮ ವಿಮಾನ ಅನೇಕ ಸರೋವರಗಳ ಮೇಲೆ ಹಾರಾಡಿ ಕೊನೆಗೆ 5 ಗಂಟೆಗೆ ಸರಿಯಾಗಿ (ಜಿನೀವಾ ಸಮಯ) ಇಲ್ಲಿನ ಅತಿ ದೊಡ್ಡದಾದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಸೇರಿತು.

ನಮ್ಮ ಆತಿಥ್ಯಕಾರರು (Hosts) ನಮ್ಮನ್ನು ಭೇಟಿ ಮಾಡಿ ಟ್ಯಾಕ್ಸಿನಲ್ಲಿ ತಮ್ಮ ಮನೆಗೆ ಕರೆದುಕೊಂಡು ಹೋದರು. ಸುಂದರವಾದ ಪೀಠೋಪಕರಣಗಳಿಂದ (Furuiture) ಸಜ್ಜುಗೊಳಿಸಿದ ಚೊಕ್ಕಟವಾದ ಮನೆ. ಎಲ್ಲಾ ಸೌಕರ್ಯಗಳುಳ್ಳ ಅಂತಹ ಮನೆಯನ್ನು ನೋಡುವುದೇ ನಮಗೆ ಹೊಸತಾದ ಅನುಭವ. ಬಾಡಿಗೆ ಮನೆ ಮಾಡುವವರಿಗೆ ಮನೆಯ ಮಾಲೀಕರು ಎಲ್ಲಾ ಅನುಕೂಲತೆಗಳನ್ನೂ ಒದಗಿಸಿ ಕೊಡುತ್ತಾರೆ. ನೆಲದ ಮೇಲೆ ಹಾಸುವ ಕಂಬಳಿಗಳಿಂದ ಕಿಟಕಿಗಳನ್ನು ಮುಚ್ಚುವ ಫರದೆಗಳನ್ನು ಕೂಡ. ಹೊಸ ಮನೆಯನ್ನು ಸೇರುವಾಗ ಕೈಬೀಸಿ ಹೋಗಿ ಸಂಸಾರವನ್ನು ಹೂಡಬಹುದು! ಆಹಾರವೆಲ್ಲ ಹೆಚ್ಚಾಗಿ ಇಲ್ಲಿ ಡಬ್ಬಿಗಳಲ್ಲೂ ಪೊಟ್ಟಣಗಳಲ್ಲೂ ಸಿಗುತ್ತದೆ. ದಪ್ಪವಾದ ಹಾಲನ್ನು ಕೂಡಾ ಪೊಟ್ಟಣಗಳಲ್ಲೇ ಮಾರುತ್ತಾರೆ! ಅಷ್ಟು ದಪ್ಪವಾದ ಹಾಲನ್ನು ನಾವು ಕಂಡೇ ಇರಲಿಲ್ಲ. ಇದನ್ನು ಕಂಡು ನಾವು ಭಾರತದ ಮಕ್ಕಳನ್ನು ನೆನೆಸಿಕೊಂಡೆವು. ಅಲ್ಲಿನ ಮಕ್ಕಳಿಗೆ ದಿನಕ್ಕೆ ಒಂದು ಲೋಟ ನೀರು ಹಾಲು ಕೂಡಾ ಸಿಗುವುದು ಎಷ್ಟು ದುರ್ಲಭ! ಇಲ್ಲಿ ಹಾಲನ್ನು ನೀರು ಕುಡಿಯುವಂತೆ ಮಿತಿ ಇಲ್ಲದೆ ಕುಡಿಯುವ ಪದ್ಧತಿ.

ಇಲ್ಲಿ ಅಡಿಗೆ ಮಾಡುವುದೆಂದರೆ ಆಟವಾಡಿದಷ್ಟು ಸುಲಭ. ಆಧುನಿಕ ಯಂತ್ರೋಪಕರಣಗಳ ಸಹಾಯದಿಂದ, ಅಡಿಗೆ ಮನೆಯ ಸಲಕರಣೆ ಸೌಕರ್ಯಗಳಿಂದ, ಬೇಕಾದ ಪದಾರ್ಥಗಳು ತೊಂದರೆ ಇಲ್ಲದೆ ಸಿಗುವುದರಿಂದ ಬಯಸಿದ ಅಡಿಗೆಯನ್ನು ಕ್ಷಣದಲ್ಲಿಯೇ ಮಾಡಿಮುಗಿಸಿ ಭೋಜನಕ್ಕೆ ಅಣಿಗೊಳಿಸಬಹುದು. ಇಲ್ಲಿ ಕೆಲಸಕ್ಕೆ ಆಳುಗಳೆಂಬುವರೇ ಇಲ್ಲ. ಸಂಬಳ ಕೊಡಲು ಅನುಕೂಲವಿದ್ದವರ ಮನೆಗೆ ವಾರಕ್ಕೊಮ್ಮೆ ಮನೆಗೆಲಸ ಮಾಡುವವರು ಬರುತ್ತಾರೆ. ಆದರೆ ಅವರು ಆಳುಗಳಲ್ಲ, 'ಸಹಾಯಕರು' (Helpers) ಎಂಬ ನಾಮಧೇಯ ಉಳ್ಳವರು. ಅವರೂ ಸಾಕಷ್ಟು ಅನುಕೂಲಸ್ಥ

ರಾಗಿ ತಮ್ಮದೇ ಮೋಟಾರು ಬಂಡಿಗಳಲ್ಲಿ ಬಂದು ಕೆಲಸ ಮಾಡಿ ಹೋಗುತ್ತಾರೆ. ವಾರಕ್ಕೊಮ್ಮೆ ಅವರು ಕೆಲಸಕ್ಕಾಗಿ ಬಂದರೂ ಮನೆಯು ಅಚ್ಚುಕಟ್ಟಾಗಿರುತ್ತದೆ. ಏಕೆಂದರೆ ಇಲ್ಲಿ ಧೂಳು, ಕಸ, ಕಡ್ಡಿ ಇಲ್ಲ. ಇರುವೆ, ನೊಣ, ಸೊಳ್ಳೆ ಕಾಟ ಇಲ್ಲವೇ ಇಲ್ಲ. ಇಲ್ಲಿನ ಶುಚಿತ್ವ ಹೆಸರುವಾಸಿಯಾಗಿದೆ.

ಜಿನೀವಾ ಊರು ತುಂಬಾ ಶಿಸ್ತುಬದ್ಧತೆಯ ಊರು. ನಾಯಿಗಳು ಬೊಗಳುವುದಿಲ್ಲ, ಮಕ್ಕಳು ಅಳುವುದಿಲ್ಲ, ಜನರು ಒಬ್ಬರೊಡನೆ ಇನ್ನೊಬ್ಬರು ಮಾತನಾಡುವುದಿಲ್ಲ, ನೆರೆಹೊರೆಯವರು ವಿಚಾರಿಸುವುದಿಲ್ಲ. ಹಾಲಿನವನು, ಪತ್ರಿಕೆ ತರುವವನು ಬಾಗಿಲನ್ನು ತಟ್ಟುವುದೂ ಇಲ್ಲ. ತಮ್ಮ ತಮ್ಮ ಸರಕನ್ನು ಬಾಗಿಲಲ್ಲಿಟ್ಟು ಹೋಗುತ್ತಾರೆ, ಅಷ್ಟೇ. ಎಲ್ಲ ವ್ಯಾಪಾರಕ್ಕೆ ನಾವೇ ಮನೆ ಬಿಟ್ಟು ಆಚೆ ಹೋಗಬೇಕು. ಮನೆಗೆ ಯಾರೂ ಬಂದು ಹೋಗುವ ಪದ್ಧತಿ ಇಲ್ಲ. ಕರೆದರೆ ಮಾತ್ರ ಅತಿಥಿಗಳು. ಅನಿರೀಕ್ಷಿತ ಅತಿಥಿಗಳ ಬರುವಿಕೆ ಇಲ್ಲವೇ ಇಲ್ಲ. ದಾರಿಯಲ್ಲಿ ಮೋಟಾರು ಗಾಡಿಗಳು ರಭಸದಿಂದ ಓಡಾಡುವ ಶಬ್ದವೊಂದೇ ಕಿವಿಯ ಮೇಲೆ ಹಗಲಿರುಳು ಬೀಳುತ್ತದಲ್ಲದೆ ಬೇರಾವ ಸದ್ದೂ ಕೇಳಿ ಬರುವುದಿಲ್ಲ. ಸ್ವಿಸ್ (Swiss) ಜನರು ಘನ ಗಾಂಭೀರ್ಯದ ನಿಗ್ರಹ ಶಕ್ತಿಯುಳ್ಳ ಜನ, ಸಂಪ್ರದಾಯ ಬದ್ಧತೆಯ ಜನ....

ಜಿನೀವಾ ನಾನು ಊಹಿಸಿದಂತೆಯೇ ಇತ್ತು....ಯೂರೋಪಿನ ನಮ್ಮ ಮೊದಲ ನಗರದ ಅನುಭವ....ಆಧುನಿಕ ನಾಗರಿಕತೆಯ ಸುಖದ ಅಂತಸ್ತು. ಪ್ರತಿಯೊಂದು ಮನೆಯಲ್ಲೂ ಒಂದಕ್ಕೂ ಮೀರಿ ಕಾರುಗಳಿವೆಯಂತೆ. ದಾರಿಯಲ್ಲಿ ಪಾದಚಾರಿಗಳೇ ಇಲ್ಲ ! ಟೆಲಿಫೋನ್ ಮಾಡಿದರೆ ಕೂಡಲೇ ಮನೆಯ ಬಾಗಿಲಿಗೆ ಹೊಸ ವಾಹನವೊಂದು ಟ್ಯಾಕ್ಸಿಯಾಗಿ ಬರುತ್ತದೆ. ವಾಹನದೊಳಗೆ ಛಳಿಯನ್ನು ದೂರಮಾಡಲು ಬಿಸಿ ಹವೆಯನ್ನು ಕೊಡುವ ಉಪಕರಣಗಳಿವೆ. ರೇಡಿಯೋ ಸಂಗೀತ ಸಹಜವಾಗಿ ಇರುತ್ತದೆ.

ನಾವು ಒಮ್ಮೆ ರೈಲು ದಾರಿಯಾಗಿ ಸ್ವಿಸ್ ಮಾದರಿಯ ಒಂದು ಚಿಕ್ಕ ಹಳ್ಳಿಗೆ ಹೋದೆವು. ದಾರಿಯಲ್ಲಿನ ನಿಸರ್ಗದ ದೃಶ್ಯ ಅದ್ಭುತವಾಗಿತ್ತು. ದ್ರಾಕ್ಷೆ ಹಣ್ಣು ಬೆಳೆಸುವ ಏರುತಗ್ಗು ಮೈದಾನ ಪ್ರದೇಶಗಳು ತುಂಬಾ ಆಕರ್ಷಣೀಯವಾಗಿದ್ದವು. ಹವೆ ಮಾತ್ರ ಹಿಂಸೆಯಾಗಿತ್ತು. ಅಲ್ಲಿನ ಸರೋವರದ ಮತ್ತಿತರ ನೈಸರ್ಗಿಕ ದೃಶ್ಯಗಳ ಅಂದಚಂದವನ್ನು ಅನುಭವಿಸಲು ಛಳಿಯ ಆತಂಕ ಮಿತಿಮೀರಿತ್ತು. ಸಾಯಂಕಾಲವಾದೊಡನೆ ಇಬ್ಬನಿ (Fog) ಎಲ್ಲೆಲ್ಲೂ ಹಬ್ಬಿಕೊಂಡು ಕೆಲವೇ ಅಡಿಗಳ ಮುಂದೆ ಕೂಡಾ ಏನೂ ಕಾಣದಾಯಿತು. ಪುಣ್ಯವಶಾತ್ ಕಟ್ಟಡಗಳ ಒಳಗೆಲ್ಲ ಹವೆಯನ್ನು ಯಂತ್ರೋಪಕರಣಗಳ ಮೂಲಕ ಬೆಚ್ಚಗಿಡುವುದರಿಂದ ಹೊರಗೆ ಎಷ್ಟೇ ಚಳಿಯಿದ್ದರೂ ಕಟ್ಟಡಗಳ ಒಳಗೆ ಬೆಂಗಳೂರಿನ ಮನೆಗಳೊಳಗಿರುವಂತೆ ಹವೆ ಅನುಕೂಲವಾಗಿರುತ್ತಿತ್ತು.

ಮೊನ್ನೆ ಇಲ್ಲಿನ ಆಧುನಿಕ ಕಟ್ಟಡವಾದ "ಹೋಟೆಲ್ ಕಾಂಟಿನೆಂಟಲ್" (Hotel Continental) ನಲ್ಲಿ ಶ್ರೀ ರವಿಶಂಕರ್‌ರವರ ಸಿತಾರ ವಾದನವನ್ನು ಕೇಳಿದೆವು. ಈ ಮಹಾ ಉಪಹಾರ ಮಂದಿರ ನಾಜೂಕಾದ ಆಧುನಿಕ ಭೋಗ ಪರಾಯಣ ಸ್ಥಳ, ಅತಿ ಮನೋಹರವಾದ ಕಟ್ಟಡ. ರಂಗಮಂದಿರದಲ್ಲಿ ಶ್ರೀ ರವಿ ಶಂಕರರವರ ದೈವೀಕ ಸಂಗೀತವನ್ನು ಕೇಳಲು ಜನರು ಕಿಕ್ಕಿರಿದು ನೆರೆದಿದ್ದರು. ಭಾರತೀಯ ಅಗರ್‌ಬತ್ತಿಗಳ ಹೊಗೆ ವಾತಾವರಣವನ್ನೆಲ್ಲಾ ತುಂಬಿ ಆಹ್ಲಾದವನ್ನು ಕೊಡುತ್ತಿತ್ತು. ಶ್ರೀ ರವಿಶಂಕರರು ಪಾಶ್ಚಾತ್ಯದಲ್ಲಿ ಒಬ್ಬ ಯುಗಪುರುಷರಾಗಿ ಮೆರೆ ಯುತ್ತಿದ್ದಾರೆ. ಸಿತಾರ್ ಅಂದರೆ ರವಿಶಂಕರರು, ರವಿಶಂಕರರೆಂದರೆ ಸಿತಾರ್. ಅಷ್ಟು ಖ್ಯಾತಿ ಅವರದು. ಅವರನ್ನು ಮೊಟ್ಟಮೊದಲು ಪಾಶ್ಚಾತ್ಯಕ್ಕೆ ಕರೆಸಿದವರು ನಮ್ಮ ನ್ನೀಗ ಕರೆಸಿದ ಲಂಡನ್ನಿನ ಏಶಿಯನ್ ಮ್ಯೂಸಿಕ್ ಸರ್ಕಲಿನವರೇ (Asian Music Circle) ಆಗ ಯಾರೂ ಇಲ್ಲಿ ಅವರ ಹೆಸರನ್ನು ಕೇಳಿದ್ದಿಲ್ಲವಂತೆ....ಅಂದು ಆ ಸಭೆಯಲ್ಲಿ ಅನೇಕಾನೇಕ ಆಧುನಿಕ ವೇಷಭೂಷಣಗಳನ್ನೂ ಮುಖ ಸೌಂದ ರ್ಯೋಪಕರಣಗಳನ್ನೂ ಸುಗಂಧ ದ್ರವ್ಯಗಳನ್ನೂ ಕಂಡೆವು, ತಿಳಿದೆವು, ಅನುಭವಿಸಿದೆವು. ಇಷ್ಟೆಲ್ಲ ಉಡುಪುತೊಡಪುಗಳ ವೈವಿಧ್ಯ ಅಲ್ಲಿದ್ದರೂ ಭಾರತೀಯರಾದ ನಾವು ಬಂದೊಡನೆ ನಮ್ಮ ಗಂಡಸರ 'ಶರವಾನಿ' ಗಳನ್ನೂ ನಮ್ಮ ಸೀರೆಗಳನ್ನೂ ಕಂಡು ಸಂತೋಷ ವ್ಯಕ್ತಪಡಿಸಿದರು. ಇನ್ನುಳಿದ ವಿಷಯಗಳು ಮತ್ತೊಮ್ಮೆ....

—ಇತಿ ನಿನ್ನ
ಅಮ್ಮ.

* * * *

ಜಿನೀವಾ
28–10–1965

ನನ್ನ ಮುದ್ದು ಶಿವದೇವ್,

........ಇಲ್ಲಿ ಹವೆ ಅಸಾಧಾರಣ ತಣ್ಣಗೆ....ಚಳಿ ಎಷ್ಟು ಉಣ್ಣೆ ಬಟ್ಟೆ ಹಾಕಿ ಕೊಂಡರೂ ಚಳಿಯನ್ನು ತಡೆಯುವುದಕ್ಕೆ ಆಗುವುದಿಲ್ಲ. ಮಾತಾಡುವಾಗ ಬಾಯಿಂದ ಉಸಿರು ಉಗಿಯಂತೆ ಬಂದು ನಾವು ಬೆಂಕಿ ಕಾರುವ ಡ್ರೆಗನ್ (Dragon) ಪ್ರಾಣಿ ಗಳಂತೆ ಕಾಣುತ್ತೇವೆ !....ನಮ್ಮ ಸ್ನೇಹಿತರು ನಮ್ಮನ್ನು ತಮ್ಮ ಕಾರಿನಲ್ಲಿ ಜಿನೀವಾ ದರ್ಶನಕ್ಕೆಂದು ಕರಕೊಂಡು ಹೋದರು. ವಿಶ್ವಸಂಸ್ಥೆ U. N. ಕಟ್ಟಡ, W. H. O. ಮುಖ್ಯ ಠಾಣ್ಯ (ಹಳೆಯ ಲೀಗ್ ಆಫ್ ನೇಶನ್ಸ್ ಕಟ್ಟಡ) ಸರಕಾರೀ ಮನೆಗಳು ಅಂತರ ರಾಷ್ಟ್ರೀಯ ರೆಡ್‌ಕ್ರಾಸ್ ಕಟ್ಟಡ, I. L. O. ಕಟ್ಟಡ ಮುಂತಾದುವನ್ನು ಹಾದುಹೋದೆವು. ಇವಲ್ಲದೆ ಜಿನೀವಾದಲ್ಲಿ ವಾಸಮಾಡುತ್ತಿರುವ ಲೋಕದ ಅತಿ

ಶ್ರೀಮಂತರ ದೊಡ್ಡ ದೊಡ್ಡ ಅರಮನೆಗಳನ್ನು ನೋಡಿದೆವು. ಈ ಅಂತಸ್ತಿನ ಜನರು ಜಿನೀವಾ ಸರೋವರದ ಸುತ್ತಲೂ ವಾಸಿಸುತ್ತಾರೆ. ಮನೋಹರವಾದ ತೋಟಗಳು ....ನಾನಾವಿಧದ ಮರಗಳು....ಬಣ್ಣ ಬಣ್ಣಗಳ ಹೂಗಳು ಇವೆಲ್ಲ ಕಣ್ಮನಗಳನ್ನು ಸೂರೆ ಗೊಳ್ಳುತ್ತವೆ. ಜಿನೀವಾದ ಸುತ್ತಲಿನ ನಿಸರ್ಗವನ್ನು ನೋಡಲು ಹೋದಾಗ ಮನೋ ರಂಜಕವಾದ ಚಿಕ್ಕ ಚಿಕ್ಕ 'ಶಾಲೇ' ಗಳನ್ನು (Chalet) – ಗುಡ್ಡ ಅಥವಾ ಗ್ರಾಮಾಂತರ ಪ್ರದೇಶಗಳಲ್ಲಿ ವಾಸಮಾಡಲು ಸ್ವಿಸ್ ಜನರು ಮರಮುಟ್ಟುಗಳಿಂದ ಕಟ್ಟಿದ ಮನೆಗಳು ಘನಗಂಭೀರವಾಗಿ ಕಾಣುವ "ಶಟೋ" ಗಳನ್ನೂ (Chateau) ಶ್ರೀಮಂತರು ವಾಸಿಸುವ ದುರ್ಗಗಳನ್ನು ನೋಡಿದೆವು. ಮೈದಾನಗಳಲ್ಲೆಲ್ಲ ಮೇಯು ತ್ತಿರುವ ಆರೋಗ್ಯ ಪುಷ್ಟಿಗಳಿಂದ ಕೂಡಿದ ದನಗಳು....ದಾರಿಯಲ್ಲಿ ಅಲ್ಲಲ್ಲಿ ಮೀನು ಹಿಡಿಯುವ ಸ್ಥಳಗಳು....ಹಿಮದಲ್ಲಿ ಜಾರಾಟ (Skating) ಅಲ್ಲದೆ ದೂರದಲ್ಲಿ ಶೋಭಿಸುತ್ತಿರುವ ಮೊಂಬ್ಲ್ಯಾಂ ಪರ್ವತ (Mont Blanc) ಮೊದಲಾದ ದೃಶ್ಯ ಗಳು ತುಂಬಾ ಆನಂದವನ್ನುಂಟುಮಾಡಿದವು. ಪರ್ವತಶ್ರೇಣಿಯ ದೃಶ್ಯಗಳನ್ನೂ ಜಾರಾಟದ ಹಿಮದ ಕಣಿವೆಗಳನ್ನೂ ಸರಿಯಾಗಿ ನೋಡುವಂತೆ ನಾವು 'ಟೆಲಿಸೀಜ್' (Telesiege) ತಂತಿಗಳ ಮೂಲಕ ಚಲಿಸುವ ಚಿಕ್ಕ ಚಿಕ್ಕ ಬುಟ್ಟಿಗಳಂತಹ ಗಾಡಿ ಗಳಿರುವ ಪ್ರಯಾಣ ಸೌಕರ್ಯ) ದಾರಿಯಿಂದಾಗಿ ಹೋದೆವು. ಇಲ್ಲಿ ಜೀವನವನ್ನು ತುಂಬಾ ಉನ್ನತಮಟ್ಟಕ್ಕೆ ಅಭಿವೃದ್ಧಿಸಿ ಪರಮಾವಧಿಗೆ ತರಲು ಜನರು ಪ್ರಯತ್ನಿಸುತ್ತಿ ದ್ದಾರೆ. ಎಲ್ಲವನ್ನೂ ಒಂದು ನಿರ್ದಿಷ್ಟ ಪ್ರಮಾಣಕ್ಕೆ ತಂದಿರಿಸಿದ್ದಾರೆ.

ನಿಮ್ಮನ್ನೆಲ್ಲ ಪದೇ ಪದೇ ಜ್ಞಾಪಿಸಿಕೊಳ್ಳುತ್ತಿದ್ದೇವೆ.

—ಇತಿ ನಿನ್ನ
ಅಮ್ಮ.

* * * *

ಜಿನಿವಾ
30–10–1965

ನನ್ನ ಮುದ್ದು ಜಯದೇವ್,

ನಿನ್ನೆ ನಿನ್ನ ಹುಟ್ಟಿದ ಹಬ್ಬವಲ್ಲವೇ ? ಅರುಣೋದಯವಾಗುವಾಗಲೇ ನಿನ್ನನ್ನು ಜ್ಞಾಪಿಸಿ, ದೇಶ ಖಂಡಗಳನ್ನು, ಸಾಗರಗಳನ್ನು ಮನಸ್ಸಿನಲ್ಲಿ ಹಾದು ನಿನ್ನನ್ನು ಅಪ್ಪಿ ಕೊಂಡು, "ನೂರು ವರ್ಷ ಬಾಳು !" ಎಂದು ಆಶೀರ್ವದಿಸಿದೆವು. ಭವಿಷ್ಯ ನಿನ್ನ ಜೀವನದಲ್ಲಿ ಭವ್ಯವಾಗಿರಲಿ ಮಗು ! ನಿನ್ನ ಕನಸುಗಳೆಲ್ಲ ನಿಜವಾಗಲಿ ! ದೇವರು ನಿನಗೆ ಎಲ್ಲ ರೀತಿಯಿಂದ ಒಳ್ಳೆಯದು ಮಾಡಲಿ ಎಂದು ಪ್ರಾರ್ಥಿಸಿದೆವು. ನಿನ್ನ

ಹುಟ್ಟು ಹಬ್ಬಕ್ಕೆ ಏನಾದರೂ ಉಡುಗೊರೆ ಕೊಡಬೇಕೆಂದು ಆಸೆ! ಕೈಯಲ್ಲಿ ಕಾಸಿಲ್ಲ. ಕಳಿಸಿದರೂ 150% ತೆರಿಗೆ ಅಲ್ಲಿ ನೀನು ಕಟ್ಟಬೇಕು. ಅಂತೂ ಮನಸ್ಸು ತಡೆಯ ಲಾರದೆ ಸ್ವಲ್ಪ ಗಿಣ್ಣು (Cheese) ಕಳುಹಿಸಿದ್ದೇವೆ. ಸ್ವಿಟ್ಜರ್‌ಲ್ಯಾಂಡ್ ಹಾಲು, ಹಾಲಿನ ಎಲ್ಲಾ ಪದಾರ್ಥಗಳಿಗೆ ಖ್ಯಾತಿ ಪಡೆದಿದೆಯಲ್ಲವೇ ? ಇಲ್ಲಿನ ಮಕ್ಕಳು ಎಷ್ಟು ಗುಂಡು ಗುಂಡಗೆ, ಮುದ್ದಾಗಿವೆ! ಹಾಲಿನ ಪ್ರಭಾವ ಇಲ್ಲಿನ ಜನರ ಆರೋಗ್ಯ ಎದ್ದು ಕಾಣುತ್ತದೆ!

ನೀನು ನನಗೆ ಪಾಶ್ಚಾತ್ಯ ದೇಶಗಳ ಪರಿಚಯವನ್ನು ಮಾಡಿಕೊಡಲು ಎಷ್ಟೊಂದು ಕಷ್ಟಪಟ್ಟೆ. ಇಲ್ಲಿನ ಹವೆ, ಆಹಾರ, ಜನತೆ, ರೂಢಿ ಸಂಪ್ರದಾಯಗಳು, ಭಾಷೆ ಇತ್ಯಾದಿ ಎಲ್ಲವನ್ನೂ ಕುರಿತು. ಎಲ್ಲಿ ಹೋದರೂ ಫ್ರೆಂಚ್–ಫ್ರೆಂಚ್–ಫ್ರೆಂಚ್ ಭಾಷೆ ಇಲ್ಲಿ. ಇಂಗ್ಲೀಷು ಪ್ರಯೋಜನವೇ ಇಲ್ಲ. ನೀನು ಕೊಟ್ಟ ಮುನ್ಸೂಚನೆ ಸಲಹೆಗಳಿಂದಾಗಿ ಸ್ವಿಟ್ಜರ್‌ಲ್ಯಾಂಡ್ ನಮಗೆ ಹೊಸತೆಂಬ ಭಾವನೆಯೇ ಇಲ್ಲ. ನಮ್ಮನ್ನು ಕಂಡು ನಾವಿಲ್ಲಿ ಅನೇಕ ಸಲ ಬಂದಿರಬೇಕೆಂದು ಎಲ್ಲರೂ ತಿಳಿದಿದ್ದಾರೆ!

ನೀನು ಬಯಸಿದಂತೆ ನಾವಿಲ್ಲಿ ಸುಖ ಸಂತೋಷದಲ್ಲಿದ್ದೇವೆ. ಇನ್ನೆರಡು ದಿನಗಳಲ್ಲಿ ನಮ್ಮ ಇಲ್ಲಿನ ಹತ್ತು ದಿನಗಳ ಪ್ರವಾಸ ಮುಗಿಯುತ್ತದೆ. ಹಳೇ ಜಿನೀವಾವನ್ನು ಸುತ್ತಾಡಿಕೊಂಡು ಬಂದೆವು. ನಮ್ಮ ಆತಿಥ್ಯಕಾರರು ನಮ್ಮನ್ನು ಬೀಳ್ಕೊಡುವ ಕೂಟವೊಂದನ್ನು ಏರ್ಪಡಿಸಿರುವರು. ಆಗ ನಮಗೆ ಸಾಧಾರಣ 40–50 ಜನರ ಭೇಟಿಯಾಗಬಹುದು. ಆಮೇಲೆ 'ಏರ್ ಫ್ರಾನ್ಸ್' (Air France) ವಿಮಾನದ ಮೂಲಕ ಪ್ಯಾರಿಸ್ (Paris) – Gay Paree ಗೆ ಪ್ರಯಾಣ!

—ಇತಿ ನಿನ್ನ
ಅಮ್ಮ.

* * * *

ಪ್ಯಾರಿಸ್
1–11–1965

ಮುದ್ದು ಮಕ್ಕಳಿರಾ,

ಅಂತೂ ನಾವು 'Gay Paree', ಗೆಲವು ನಲುವಿನ ಪ್ಯಾರಿಸ್ ನಗರವನ್ನು ಸೇರಿದೆವು. ಎಂತಹ ನಗರ ಈ ಪ್ಯಾರಿಸ್! ತುಂಬಾ ಉಲ್ಲಾಸಯುಕ್ತ ಜನತೆ. ಎಂತಹ ಸ್ನೇಹಪರ ಸಹಾನುಭೂತಿಯುಳ್ಳ ಜನರು! ಸ್ವಾರಸ್ಯವುಳ್ಳ ಜಾಗೃತವಾದ ನಗರ....

'ನಮ್ಮ ಏರ್ ಫ್ರಾನ್ಸ್' ವಿಮಾನ ಪ್ಯಾರಿಸ್ಸಿನ ಚಕ್ರವ್ಯೂಹದಂತಹ ನಿಲ್ದಾಣಕ್ಕೆ ಬಂದು ನಿಂತೊಡನೆಯೇ ನಮ್ಮ ಆತಿಥ್ಯಕಾರಳು (Hostess) ನಮ್ಮನ್ನು ಹಾರ್ದಿಕವಾಗಿ ಸ್ವಾಗತಿಸಿ, ಬರುತ್ತಿರುವ ಮಳೆಯನ್ನೂ ಗಮನಿಸದೆ ತನ್ನ ಕಾರಿನಲ್ಲಿ ನೇರವಾಗಿ ನಮ್ಮನ್ನು "ಐಫೆಲ್ ಟವರ್" (Eiffel Tower) ಮುಂದೆ ನಿಲ್ಲಿಸಿದಳು! ಎಂತಹ ದೃಶ್ಯ! ಐಫೆಲ್ ಟವರ್ ಯಂತ್ರ ಶಿಲ್ಪದ ಒಂದು ಅದ್ವಿತೀಯವಾದ ಕೌತುಕ! (Engineering Marvel) ಕ್ರಿ. ಶ. 1880 ರಲ್ಲಿ ಕಟ್ಟಿದ ಈ ಐಫೆಲ್ ಟವರ್ ಮಾನವನ ಸಾಧನೆಯ ಒಂದು ದೃಷ್ಟಾಂತವಾಗಿದೆ. ಅದನ್ನು ನಂಬಲು, ಆದರ ಗುಣಗ್ರಹಣ ಮಾಡಿಕೊಳ್ಳಲು ಅದನ್ನು ನೋಡಿಯೇ ತೀರಬೇಕು. ಅಲ್ಲಿಂದ ಆಕೆ ನಮ್ಮನ್ನು ಪ್ಯಾರಿಸ್ ನಗರದ ಕೆಲವು ಸಂಭ್ರಮದ ರಸ್ತೆಗಳಲ್ಲಿ ಕರೆದುಕೊಂಡು ಹೋಗಿ 'ಆರ್ಕ್ ದ ಟ್ರೈಯಂಫ್' (Arc de Triumph) 'ಜೋನ್ ಆಫ್ ಆರ್ಕ್'ಳ ಪ್ರತಿಮೆ (Joan of Arc Statue) ವಿಶ್ವ ಪ್ರಖ್ಯಾತ 'ಲೀಡೋ ನೈಟ್ ಕ್ಲಬ್' (Lido Night Club) ಅನೇಕ ಸರ್ಕಾರಿ ಕಟ್ಟಡಗಳು 'ನೋತ್ರ ಡಾಮ್ ಕೆತಿಡ್ರಲ್' (Notre Dame Cathedral) 'ದಿ ಲೂವ್ರ' (The Louvre) 'ಪ್ಲಾಸ್ ಡೆಲಾ ಕೊಂಕಾರ್ಡ್' (Place de la Concorde) ಮುಂತಾದುವುಗಳನ್ನು ತೋರಿಸಿದಳು. ಮುದ್ದು ಮಕ್ಕಳೇ! ನಾನಂತೂ ಪ್ಯಾರಿಸ್ಸನ್ನು ನನ್ನ ಕಣ್ಣುಗಳಿಂದ ನೋಡುತ್ತಿರಲಿಲ್ಲ. ನಿಮ್ಮ ಕಣ್ಣುಗಳಿಂದ ನೋಡುತ್ತಿದ್ದೆ. ಬಲವಾದ ಗಾಳಿ ಬೀಸುತ್ತಿದ್ದ ಕಾರಣ ಶರತ್ಕಾಲದ ಹಳದಿ ಎಲೆಗಳು ಚಲ್ಲಾಪಿಲ್ಲಿಯಾಗಿ ಚದರಿ ಒಂದು ಮಾಯೆಯನ್ನೇ ರಚಿಸುತ್ತಿದ್ದುವು.

ಅಂದು ರಾತ್ರಿ ನಮ್ಮ ಆತಿಥ್ಯಕಾರಳು 17ನೇ ಶತಮಾನದ ಪ್ರಾಚೀನ ಒಂದು ಉಪಹಾರ ಗೃಹಕ್ಕೆ ಊಟಕ್ಕೆ ಕರಕೊಂಡು ಹೋದಳು. 17ನೇ ಶತಮಾನದಲ್ಲಿ ಅದೇ ಜಾಗದಲ್ಲಿ ಅಂದಿನ ಪ್ರಸಿದ್ಧ ಸಾಹಿತಿ ಮೊಲಿಯೇ (Moliere) ತನ್ನ ಕೃತಿಗಳನ್ನು ಗಟ್ಟಿಯಾಗಿ ಓದಿ ಅಲ್ಲಿ ಸೇರಿದ ಜನರನ್ನು ರಂಜಿಸುತ್ತಿದ್ದನಂತೆ. ಊಟಕ್ಕೆ ಮುಂಚೆ ಪತಿಯವರು ತುಂಬಾ ಬಾಯಾರಿದ ಕಾರಣ ನೀರನ್ನು ಕೇಳಲು ಅಲ್ಲಿನ ಪರಿಚಾರಿಕೆಗೆ ತುಂಬಾ ಆಶ್ಚರ್ಯವಾಯಿತು. ಇಲ್ಲಿ ಬಾಯಾರಿದರೆ ಯಾರೂ ನೀರನ್ನು ಕುಡಿಯುವುದಿಲ್ಲವಂತೆ! ನೀರಿನ ಬದಲು 'ವೈನ'ನ್ನೇ ಕುಡಿಯುವ ಪದ್ಧತಿ! ನಾನಾ ತರದ 'ವೈನು'ಗಳು ಇಲ್ಲಿ ಅಗ್ಗದಲ್ಲಿ ಸಿಗುತ್ತವೆ. ಹಲವೊಮ್ಮೆ ಇಲ್ಲಿನ ಕುಡಿಯುವ ನೀರಿಗೆ ವೈನಿಗಿಂತ ಹೆಚ್ಚು ಬೆಲೆಯಿರುತ್ತದೆ!

ನಮ್ಮ ಆತಿಥ್ಯಕಾರಳು ಇಂಗ್ಲಿಷು ಹೆಂಗಸು. ಆಕೆಗೆ ಭಾರತೀಯರು, ಭಾರತ ದೇಶವೆಂದರೆ ತುಂಬಾ ಪ್ರೇಮ, ಅಭಿಮಾನ, ಪ್ಯಾರಿಸ್ಸಿನ ಕೆಲವು ಮುಖ್ಯ ದೃಶ್ಯಗಳ ಪರಿಚಯವನ್ನು ನಮಗೆ ಮಾಡಿಕೊಟ್ಟು ನಂತರ ನಮ್ಮನ್ನು ಆದರದಿಂದ ತನ್ನ ಮನೆಗೆ

ಕರೆದುಕೊಂಡು ಹೋಗಿ ಮಹಡಿಯ ಮೇಲಿನ ಒಂದು ಕೋಣೆಯನ್ನು ನಮಗಾಗಿ ಬಿಟ್ಟುಕೊಟ್ಟರು. ಹೆಂಚಿನ ಹೊದಿಕೆಯಿದ್ದ ಹಳೇ ವಾಸ್ತುಶಿಲ್ಪದ ವಿಶಿಷ್ಟ ಫ್ರೆಂಚ್ ಕಟ್ಟಡದ ಮೇಲಿನ ಮಹಡಿ ಆಕೆಯದಾಗಿತ್ತು. ಛಳಿಗಾಲದ ಆರಂಭದ ಗಾಳಿ ಕಿಟಕಿಗಳಿಂದ ತೂರಿಕೊಂಡು ಒಳಗೆ ಬರುತ್ತಿತ್ತು. ಗಿಡಮರಗಳು ಹಗಲು ರಾತ್ರಿಯೆನ್ನದೆ ತಮ್ಮ ಎಲೆಗಳನ್ನು ಉದುರಿಸುವುದನ್ನು ನಾವು ಕಿಟಕಿಯೊಳಗಿಂದ ಕಾಣುತ್ತಿದ್ದೆವು. ಆ ದೃಶ್ಯ ವಾಲ್ಟ್ ಡಿಸ್ನಿ (Walt Disney) ಚೈಕೊವ್ಸ್ಕಿ (Tchaikovsky) ಅವರ ಸಂಗೀತವನ್ನು ಹಿನ್ನೆಲೆಯಾಗಿಟ್ಟುಕೊಂಡು ರಚಿಸಿದ 'ಫೆಂಟೇಸಿಯಾ' (Fantasia) ಚಿತ್ರಪಠದ ನೆನಪು ತರುತ್ತಿತ್ತು. ನಮಗೆ ಸೇಬು ಮರಗಳ ಹತ್ತಿರದ ಮೊದಲ ದರ್ಶನವಾದುದು ಇಲ್ಲಿ. ಮರ ತುಂಬಾ ಸೇಬು ಹಣ್ಣುಗಳು. ಕಿಟಕಿಯೊಳಗಿಂದ ನಾವು ಕಾಣುತ್ತಿರುವ ಮತ್ತೊಂದು ಆಕರ್ಷಕ ದೃಶ್ಯವೆಂದರೆ, ಮದಾಮ್ ಪೊಂಪಾಡೋರ್ (Madame Pompadour) ಸುತ್ತಾಡಿ ವಿಹರಿಸುತ್ತಿದ್ದ ಇತಿಹಾಸ ಪ್ರಸಿದ್ಧಿ ಪಡೆದ ತೋಟಗಳು. ಮನೆಯಲ್ಲಿನ ತೋಟ ಭಾರತೀಯರಾದ ನಮಗೆ ತುಂಬಾ ಸ್ವಾರಸ್ಯವುಳ್ಳದ್ದಾಗಿತ್ತು. ಪಾಶ್ಚಾತ್ಯ ಹಣ್ಣು ಹಂಪಲುಗಳಾದ ಸ್ಟ್ರಾಬೆರ್ರಿ (Strawberry), ರೆಸ್ಬರ್ರಿ (Raspberry) ಬ್ಲ್ಯಾಕ್ ಬೆರ್ರಿ (Black berry) ಕಪ್ಪು ಮತ್ತು ಕೆಂಪು ದ್ರಾಕ್ಷೆ (Currants) ಮೊದಲಾದುವು ಅಲ್ಲಿ ಸಮೃದ್ಧಿಯಿಂದ ಬೆಳೆಯುತ್ತಿದ್ದುವು. ತರಕಾರಿ ತೋಟದಲ್ಲಿ ಕೆಂಪು ಎಲೆಕೋಸು, ಲೆಟಿಸ್ ಸೊಪ್ಪು (Lettuce) ಹೂಕೋಸು, ಆಲೂಗಡ್ಡೆ ಮೊದಲಾದುವು ಬೆಳೆಯುತ್ತಿದ್ದುವು.

ಫ್ರೆಂಚ್ ಜನರು ಸ್ವಿಸ್ ಜನರಿಂದ ಅದೆಷ್ಟು ಬೇರೆಯಾಗಿರುವರೆಂಬ ಭಾವನೆ ನಮಗೆ ಫ್ರಾನ್ಸ್ ದೇಶದ ಮೊಟ್ಟ ಮೊದಲ ಅನುಭವದಿಂದ ತಿಳಿದುಬಂತು. ಸ್ವಿಟ್ಜರ್ ಲ್ಯಾಂಡಿನಲ್ಲಿ ನಾವು ಹತ್ತು ದಿನವಿದ್ದರೂ ಅಲ್ಲಿ ಯಾವ ಸ್ವಿಸ್ ಮನುಷ್ಯನ ಭೇಟಿಯೂ ನಮಗೆ ಸಾಧ್ಯವಾಗಲಿಲ್ಲ. ಆದರೆ ಇಲ್ಲಿ ನಾವು ಮನೆಗೆ ಬಂದಾಕ್ಷಣ ನಮ್ಮ ಆತಿಥ್ಯಗಾರ್ತಿ ನಮ್ಮನ್ನು ಮನೆಯ ಮಾಲೀಕರಲ್ಲಿ ಕರಕೊಂಡು ಹೋಗಿ ಅವರ ಭೇಟಿ ಮಾಡಿಸಿಕೊಟ್ಟಳು. ಅಲ್ಲಿ ಅವರ ಸಂಸಾರ, ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಇತ್ಯಾದಿ ಎಲ್ಲರೂ ಸೇರಿ ಮೇಜಿನ ಸುತ್ತ ಕುಳಿತುಕೊಂಡು ಊಟಕ್ಕೆ ಸಿದ್ಧರಾಗಿದ್ದರು. ಆ ದೃಶ್ಯ ನನಗೆ ಚಿ|| ಜಯದೇವನು ಒಂದು ಪುಸ್ತಕದಲ್ಲಿ ತೋರಿಸಿದ ಒಂದು ವಿಶಿಷ್ಟ ಫ್ರೆಂಚ್ ದೃಶ್ಯವಂತೆಯೇ ಇತ್ತು. ಮೇಜು ತುಂಬಾ ಆಹಾರ, ಮುಖ್ಯವಾಗಿ ಗಜ ಗಜ ಉದ್ದವಿರುವ ಅವರ 'ಬ್ರೆಡ್ಡು' ಮತ್ತು ಕೆಂಪು, ಬಿಳೀ 'ವೈನು' ಗಳ ಬುಡ್ಡಿಗಳು. ಒಂದು ಸಂಸಾರವು ನಕ್ಕು ನಲಿದು ಉಣ್ಣುವ ದೃಶ್ಯ. ನಮ್ಮ ಆತಿಥ್ಯಗಾರಳ

"ಭಾರತೀಯ ಸ್ನೇಹಿತರು" ಎಂಬ ಅಭಿಮಾನದಿಂದ ಅವರು ನಮ್ಮನ್ನು ಆದರದಿಂದ ಸ್ವಾಗತಿಸಿ ಸತ್ಕರಿಸಿದರು....

ಇತಿ ನಿನ್ನ
ಅಮ್ಮ.

*   *   *   *

ಪ್ಯಾರಿಸ್
6-11-1965

ಪ್ರಿಯ ತಂದೆಯೇ,

ಪ್ಯಾರಿಸ್ಸಿನ ವಾರ್ಸಾಯ್ (Versailles) ನೋಡುವಾಗ ಚರಿತ್ರೆಯೆಂದರೆ ಇಷ್ಟವಿದ್ದ ನಿಮ್ಮ ನೆನಪಾಯಿತು. ವಾರ್ಸಾಯ್ ಒಂದು ಪ್ರಖ್ಯಾತ ಚಾರಿತ್ರಿಕ ಸ್ಥಳ. ಅದು 16-17ನೇ ಶತಮಾನದ ಪಾಶ್ಚಾತ್ಯ ಕಲಾ ಸಂಸ್ಕೃತಿಗೆ ಖ್ಯಾತಿ ಪಡೆದಿದೆ. ನಮ್ಮ ಮುಘಲರ ಕಾಲದ ಅದ್ಭುತ ಸಂಸ್ಕೃತಿಯನ್ನು ತಿಳಿದರೆ ನಮಗಾಗುವ ಅನುಭವವೇ ಅಲ್ಲಿಯೂ ಆಯಿತು. ಫ್ರಾನ್ಸ್ ದೇಶದ ಅರಸರು ವಿಹರಿಸುತ್ತಿದ್ದ ವಿನೋದಿಸುತ್ತಿದ್ದ ಸ್ಥಳ. ಆ ಕಾಲದ ಅವರ ವೈಭವ, ಫ್ರೆಂಚ್ ದರಬಾರಿನ ಪಿತೂರಿಗಳು ಮುಂತಾದುವುಗಳೆಲ್ಲ ಕಣ್ಣುಮುಂದೆ ಹಾದುಹೋಗುವ ದೃಶ್ಯಗಳಾದುವು. ನಾವು ಆ ಅರಮನೆಯಲ್ಲಿನ ವಿಶೇಷವಾಗಿ ಅಲಂಕಾರವಾಗಿದ್ದ ಕೋಣೆಗಳನ್ನೆಲ್ಲಾ ಸುತ್ತಾಡಿದೆವು. ಸುಖ ಸಂಪತ್ತಿನಿಂದ ಕೂಡಿದ ಅತಿ ರಮ್ಯವಾದ ಕೊಠಡಿಗಳ ಬಣ್ಣ ಬಣ್ಣದ ಚಾವಡಿಗಳನ್ನು ನೋಡಿದೆವು. ಹಚ್ಚ ಹಸುರಾಗಿದ್ದ ತೋಟಗಳನ್ನೂ ರಮಣೀಯವಾದ ಸರೋವರಗಳನ್ನೂ ನೋಡಿದೆವು. ಅಲ್ಲಿ ಒಂದು ಕೃತಕ ಸರೋವರವಿದೆ. ಅದರ ಮುಂದಿನ ಚಾವಡಿಯಿಂದ ಲೂಯಿ 14 ಮತ್ತು ಲೂಯಿ 15 ಅರಸರುಗಳು ರಾಜಾಂಗಣದಲ್ಲಿ ನೆರೆದಿರುವ ಜನರಿಗೆ ಭೇಟಿಕೊಟ್ಟು ಅವರೊಡನೆ ಮಾತನಾಡುತ್ತಿದ್ದರಂತೆ. ಅಲ್ಲಿನ ರಾಜಾಂಗಣ ನಮ್ಮ ಬೇಲೂರು ದೇವಾಲಯದ ರಾಜಾಂಗಣದಂತೆ ವಿಸ್ತಾರವಾಗಿದೆ. ಅರಮನೆ ಅತಿ ವಿಶಾಲವಾಗಿದ್ದು ಪ್ರತಿಯೊಂದು ಕೋಣೆಯೂ ಒಂದಲ್ಲ ಒಂದು ಚಾರಿತ್ರಿಕ ಘಟನಾ ಸ್ಥಳವಾಗಿದೆ. ಕ್ರಿ. ಶ. 1919ರಲ್ಲಿ ವಾರ್ಸಾಯ ಒಪ್ಪಂದವನ್ನು ಸಹಿ ಮಾಡಿದ ಕೊಠಡಿ, ಹಾಗೂ ಮಾರಿ ಎಂಟೋನೈಟ್ (Marie Antoinette) ಹಿಂದಿನ ಮೆಟ್ಟಿಲುಗಳಿಂದ ನುಗ್ಗಿಕೊಂಡು ಬಂದ ಕ್ರಾಂತಿಕಾರರಿಗೆ ಶರಣು ಹೋದ ಕೋಣೆ–ಇವೆಲ್ಲವನ್ನೂ ನೋಡಿದೆವು........

ಒಮ್ಮೆ ನಮ್ಮ ಸ್ನೇಹಿತರೊಬ್ಬರು ತಮ್ಮದೊಂದು ದೊಡ್ಡ ವಾಹನವನ್ನು ತೆಗೆದುಕೊಂಡು ಬಂದು ಗಂಟೆಗೆ 90 ಮೈಲುಗಳ ವೇಗದಲ್ಲಿ 'ಶಾರ್ತ್ರ' (Chartre)

ಎಂಬ ಊರಿನ ದೊಡ್ಡ ಕೆಥಿಡ್ರಲ್ (Cathedral) ತೋರಿಸಲು ನಮ್ಮನ್ನು ಕರ ಕೊಂಡು ಹೋದರು. ದಾರಿಯಲ್ಲಿ ಪ್ರಖ್ಯಾತ ಸಂಗೀತ ರಚನಾಕಾರನಾದ (Composer) ರೆಾವೆಲ್ (Ravel) ಎಂಬಾತನು ವಾಸವಾಗಿದ್ದ, ಜೀವಿಸಿದ್ದ, ಕೊನೆಗೆ ಮೃತನಾಗಿದ್ದ ಕಟ್ಟಡವನ್ನು ದಾಟಿದೆವು. ಹಾಗೂ ಗ್ಲೋಸ್ಟರ್ (Gloucester) ಮಹಾಶಯನು ವಾಸವಾಗಿದ್ದ ಸ್ಥಳವನ್ನೂ ಮತ್ತಿತರ ಚಾರಿತ್ರಿಕ ಸಂಬಂಧವುಳ್ಳ ಅನೇಕ ಪ್ರದೇಶಗಳನ್ನೂ ಕಂಡೆವು. ಕಾಡುದಾರಿಯಾಗಿ ನಮ್ಮ ಪ್ರಯಾಣ ಸಾಗಿದ ಕಾರಣ ಫ್ರಾನ್ಸ್ ದೇಶದ ನೈಜ ಸ್ವಭಾವವನ್ನು ನೋಡಿದಂತಾ ಯಿತು. ದಾರಿಯಲ್ಲಿ ಅನೇಕರು ಕುದುರೆ ಸವಾರಿ ಮಾಡಿ ಹೋಗುವ ದೃಶ್ಯ ನೋಡಲು ಚೆನ್ನಾಗಿತ್ತು. ಅಲ್ಲಲ್ಲಿ ಆಧುನಿಕ ರೀತಿಯಲ್ಲಿ ದವಸ ಧಾನ್ಯ ಬೆಳೆಸುವ ವಿಧಾನಗಳನ್ನು ಕಂಡೆವು........

ಒಮ್ಮೆ ಪ್ಯಾರಿಸ್ಸಿನ ಲೋಕಪ್ರಖ್ಯಾತ ನೋತರ್‌ದಾಮ್ ಕೆಥಿಡ್ರಲ್ (Notre Dame Cathedral) ನಲ್ಲಿ ಭಾನುವಾರ ಜರಗುವ ಕ್ರೈಸ್ತರ ಪ್ರಾರ್ಥನೆಗೆ ಹೋದೆವು. ನೋತರ್‌ದಾಮದ ಗೂನುಬೆನ್ನಿನ ಅಷ್ಟಾವಕ್ರ (Hunch Back) ಬಾರಿಸುತ್ತಿರುವ ದೊಡ್ಡ ಗಂಟೆಯನ್ನು ನೋಡಿ ಮೈಯೆಲ್ಲಾ ರೋಮಾಂಚನ ವಾಯಿತು. ಎಂತಹ ಅದ್ಭುತ ಇಗರ್ಜಿ! ಒಳಗಡೆ ಎಂತಹ ದೈವಿಕ ವಾತಾವರಣ, ನಿಶ್ಶಬ್ದತೆ, ಗಾಂಭೀರ್ಯ! ಆ ಇಗರ್ಜಿಯ ತುದಿಯವರೆಗೆ ಹತ್ತಿ ಪ್ಯಾರಿಸ್ ನಗರದ ಹಕ್ಕಿ ನೋಟವನ್ನು ಪಡೆದೆವು. ಆದರೆ ಅಂದು ಆ ಎತ್ತರದಲ್ಲಿ ತಡೆಯಲಾರದ ಛಳಿ, ಗಾಳಿ ಇತ್ತು. ಕೈಕಾಲುಗಳ ಅರಿವೆಯೇ ಹೋಯಿತು. ಅವಯವಗಳೆಲ್ಲ ಛಳಿ ಯಿಂದ ನೋಯಲು ಆರಂಭಿಸಿದುವು. ಇಲ್ಲೀಗ ಮಂಜುಗಡ್ಡೆ ಕಟ್ಟುವ ಛಳಿ. (Freezing Cold) ಇನ್ನು ಕೆಲವು ದಿನಗಳಲ್ಲಿ –10°c ಆಗುವ ಸಂಭವ. ಮನೆ ಯೊಳಗೆ ಯಂತ್ರೋಪಕರಣಗಳಿಂದಲಾಗಲಿ, ಉರಿಯುವ ಬೆಂಕಿಯಿಂದಾಗಲಿ ಬಿಸಿ ಯಾದ ಹವೆಯನ್ನು ಒದಗಿಸಿಕೊಳ್ಳುತ್ತಾರೆ. ಜನರು ಹಾಲಿನ ಬಾಟಲಿಗಳನ್ನು ಕಿಟಕಿಯಾಚೆ ಇಡುತ್ತಾರೆ. ಹೊರಗಿನ ಹವೆ ನೈಜ ರಿಫ್ರಿಜರೇಟರ್ (Refrigerator) ಇದ್ದಂತಿದೆ!........

ಇತಿ ನಿಮ್ಮ
ಚಂದಮ್ಮ.

* * * *

ಪ್ಯಾರಿಸ್
9–11–1965

ಮುದ್ದು ಮಕ್ಕಳೇ,

ನಾವು ಸ್ವಿಟ್ಜರ್‌ಲ್ಯಾಂಡಿನಲ್ಲಿರುವಾಗ ಗಡಿದಾಟಿ ಗಡಿಯಲ್ಲಿರುವ ಒಂದು ಫ್ರೆಂಚ್ ಹಳ್ಳಿಯನ್ನು ನೋಡಿ ಬಂದಿದೇವಲ್ಲವೇ? ನಮ್ಮ ಸ್ನೇಹಿತರೊಬ್ಬರು ಇಲ್ಲಿಂದಲೂ

ನಮ್ಮನ್ನು ಒಂದು ಫ್ರೆಂಚ್ ಹಳ್ಳಿಗೆ ಕರೆದುಕೊಂಡು ಹೋದರು. ಇಲ್ಲಿನ ಹಳ್ಳಿಗಳು ನಾವು ತಿಳಿದುಕೊಂಡಂತೆ ಹಳ್ಳಿಗಳಲ್ಲ, ಅವೆಲ್ಲಾ ಆಧುನಿಕ ಪಟ್ಟಣಗಳಂತಿವೆ. ಚೆಲುವಿನ ಬೀಡುಗಳು: ದಾರಿಯಲ್ಲಿ ಚಿಕ್ಕ ಚಿಕ್ಕ ಉಪಹಾರ ಗೃಹಗಳನ್ನೂ, ವೈನು ಪ್ರೆಸ್ಸುಗಳನ್ನೂ (ದ್ರಾಕ್ಷೆ ಹಣ್ಣಿನಿಂದ ದ್ರಾಕ್ಷಾರಸವನ್ನು ತೆಗೆಯುವ ಯಂತ್ರಗಳು) ದ್ರಾಕ್ಷೆ ಸೇಬು ಭರಿತ ತೋಟಗಳನ್ನೂ ಕಂಡು ಆನಂದಪಟ್ಟೆವು. ಚೊಕ್ಕಟವಾಗಿ ಅಂದವಾಗಿದ್ದ ಮನೆಗಳೆಲ್ಲಾ ಹೂಗಳಿಂದ ಅಲಂಕೃತವಾಗಿದ್ದುವು. ಜೀವನ ಕ್ರಮದಲ್ಲಿ ಅಂದವನ್ನು ಬಯಸುವ ಜನ ಇವರು. ಅಂದು ಫ್ರಾನ್ಸಿನ ಒಂದು ನೈಜ ಮುಖವನ್ನು ನೋಡಿದೆವು. ನಮಗೆ ಬೇಕಾದ ಅಡಿಗೆಯನ್ನು ನಮ್ಮ ಮೇಜಿನ ಹತ್ತಿರದಲ್ಲಿಯೇ ಒಂದು ಚಿಕ್ಕ ಗಾಡಿಯಲ್ಲಿ ಬಿಸಿಬಿಸಿಯಾಗಿ ತಯಾರಿಸಿ ನಗುನಗುತ್ತ ನಮಗೆ ಬಡಿಸಿದ ಊಟವನ್ನು ಮುಗಿಸಿ ಮನೆಗೆ ಹಿಂತಿರುಗಿ ಬಂದೆವು ಜಯದೇವ್, ಎಲ್ಲವೂ ನೀನು ನಮಗೆ ಮುಂದಾಗಿ ವರ್ಣಿಸಿದಂತೆಯೇ ಇತ್ತು. ನಿನ್ನ ಮಾತುಗಳು ಇನ್ನೂ ನನ್ನ ಕಿವಿಯಲ್ಲಿವೆ. ಇಲ್ಲಿನ ಆಹಾರ ವೈವಿಧ್ಯವನ್ನು ಕಂಡಂತೆಲ್ಲ ನಿಮ್ಮ ಜ್ಞಾಪಕವಾಗುತ್ತಿದೆ. ಆದರೆ ನೀವಿನ್ನೂ ಯುವಕರು. ಸದ್ಯದಲ್ಲೇ ಈ ದೇಶಗಳಿಗೆ ಬರುವಿರಂತೆ.

ಪ್ಯಾರಿಸ್ ನಗರ ಹತ್ತಿರ ಬರುತ್ತಾ ದಾರಿಯುದ್ದಕ್ಕೂ ನಾಲ್ಕು ಸಾಲಾಗಿ ವಾಹನಗಳು ಓಡಾಡುತ್ತಿದ್ದವು. ಇಲ್ಲಿ ವಾಹನಗಳ ಓಡಾಟ ಒಂದು ಅಚ್ಚರಿಯ ದೃಶ್ಯ. ಯಾವ ವಾಹನಕಾರನೂ 'ಹಾರ್ನ್' ಮಾಡುವುದಿಲ್ಲ. ಗದ್ದಲವಿಲ್ಲ. ಮೋಟಾರು ಮೆಶಿನ್ನಿನ ಧ್ವನಿ ಮಾತ್ರ ಕೇಳಿ ಬರುತ್ತದೆ. ವಾಹನಗಳ ಓಡಾಟವನ್ನು ಸ್ತಿಮಿತದಲ್ಲಿಡಲು ಅಲ್ಲಲ್ಲಿ 'ಆಟೊಮೆಟಿಕ್ ಸಿಗ್ನಲು' ಗಳಿವೆ. (Automatic Signals). ಕಾರನ್ನು ನಿಲ್ಲಿಸಲು ಒಂದು ಜಾಗ ಸಿಗುವುದು ತುಂಬಾ ಕಷ್ಟವೇ. ಇಲ್ಲಿನ ಜನರ ಸಾಮಾನ್ಯ ವಿನೋದದ ಮಾತೆಂದರೆ, ಹೊರಗಿನ ಊಟಕ್ಕೆ ಹೋಗಬೇಕಾದರೆ ಊಟ ಮಾಡುವ ಸ್ಥಳವನ್ನು ಎಂದೂ ಆಯ್ದುಕೊಳ್ಳಲಿಕ್ಕೆ ಸಾಧ್ಯವಿಲ್ಲ. ಕಾರನ್ನು ನಿಲ್ಲಿಸಲು ಎಲ್ಲಿ ಜಾಗ ಸಿಗುವುದೋ ಆ ಜಾಗದ ಹತ್ತಿರವಿರುವ ಹೋಟಲಿನಲ್ಲೆ ಊಟ ಮಾಡಬೇಕಾಗಿದೆ ಎಂದು! ಒಂದೊಂದು ಕಾರಿನಲ್ಲಿ ಒಬ್ಬೊಬ್ಬರೇ ಹೋಗಿ ವಾಹನಗಳ ಓಡಾಟದ ಗೊಂದಲದಲ್ಲಿ ಸಿಕ್ಕಿಕೊಂಡು ಬವಣೆಪಡುವುದನ್ನು ನೋಡಿದರೆ ಒಂದು ಬಸ್ಸು 100–150 ಕಾರುಗಳಲ್ಲಿನ ಜನರನ್ನು ಒಮ್ಮೆ ಕರಕೊಂಡು ಹೋದರೆ ಅನುಕೂಲವಲ್ಲವೇ ಎಂದೆನಿಸುತ್ತದೆ. ಊರುಬಿಟ್ಟು ಆಚೆ ಓಡಾಡುವ ವಾಹನಗಳಿಗೆ ಬೇರೆಯೇ ರಸ್ತೆ, ಹೆದ್ದಾರಿಗಳಿವೆ. ಈ ರಸ್ತೆಗಳಲ್ಲಿ ಪಾದಚಾರಿಗಳಿಗೆ ಪ್ರವೇಶವೇ ಇಲ್ಲ. ವಾಹನಗಳು ಮಧ್ಯೆ ಎಲ್ಲಿಯೂ ನಿಲ್ಲದೆ ಮುಂದಕ್ಕೆ ಅತಿ ವೇಗದಿಂದ ಸಾಗುತ್ತಿರಲೇ ಬೇಕು. ಹಿಂದಕ್ಕೆ ಬರಲಾಗುವುದಿಲ್ಲ. ಅಲ್ಲಿನ ಟ್ರಾಫಿಕ್ (Traffic) ಸಂಕೇತಗಳು ಬಹಳ ಚೆನ್ನಾಗಿವೆ. ಪ್ಯಾರಿಸ್ ನಗರದೊಳಗೂ ರಸ್ತೆಯನ್ನು ದಾಟುವಾಗ ಪಾದಚಾರಿಗಳು ಬಹಳ ಜಾಗರೂಕತೆಯಿಂದಿರಬೇಕಾಗುತ್ತದೆ. ಸ್ವಲ್ಪ ಆಪ್ಪಿ

ತಪ್ಪಿದರೆ ಅತಿ ವೇಗವಾಗಿ ಓಡಾಡುವ ವಾಹನಗಳ ಅಡಿಬಿದ್ದು ಸಾಯುವುದು ಖಂಡಿತ, ಹಾಗೆ ಸತ್ತರೆ ವಾಹನಕಾರರು ಜವಾಬ್ದಾರರಲ್ಲ, ಸತ್ತವರದೇ ತಪ್ಪು!

ಇಲ್ಲಿಯ ಜನರ ದಿನನಿತ್ಯದ ಜೀವನದಲ್ಲಿ ವಿದ್ಯುತ್ ಶಾಸ್ತ್ರದ (Electronics) ಉಪಯೋಗ ಬಹಳವಾಗಿದೆ. ಇಲ್ಲಿನ ವಿಜ್ಞಾನ ಶಾಸ್ತ್ರದ ಅಭಿವೃದ್ಧಿಯನ್ನು ನೋಡಿದಂತೆ ವಿಜ್ಞಾನವನ್ನು ಪ್ರೀತಿಸುವ ನಿಮ್ಮ ನೆನಪು ಆಗಾಗ್ಗೆ ಆಗುತ್ತಲೇ ಇದೆ. ಅಂಗಡಿಗಳಲ್ಲೆಲ್ಲ ಎಣಿಕೆಯ ಯಂತ್ರಗಳು (Computers) ಎಲ್ಲೆಲ್ಲೂ ಸ್ವಯಂಚಾಲಿತ ಯಂತ್ರಗಳು (Automatic Machines) ಆಹಾರ ಪದಾರ್ಥಗಳಿಂದ ಹಿಡಿದು ಸಾಮಾನ್ಯ ಜೀವನಕ್ಕೆ ಬೇಕಾದ ಯಾವ ಸರಕನ್ನೂ ಈ ಸ್ವಯಂಚಾಲಿತ ಯಂತ್ರಗಳು ಒದಗಿಸಿಕೊಡುತ್ತವೆ. ಮಾನವ ಸಂಪರ್ಕವೇ ಇಲ್ಲ. ಅಂಗಡಿಗಳಲ್ಲಿ ನಾವೇ ನಮಗೆ ಬೇಕಾದ ಸಾಮಾನುಗಳನ್ನು ಹೆಕ್ಕಿ ತೆಗೆದುಕೊಂಡು ಚಲಿಸುತ್ತಿರುವ ಒಂದು ಹಲಗೆ ಮೇಲಿಟ್ಟರೆ, ಒಬ್ಬ ಹೆಂಗಸು ಎಣಿಕೆಯ ಯಂತ್ರದ ಸಹಾಯದಿಂದ ಎಲ್ಲದರ ದರವನ್ನು ಕೂಡಿಸಿ ಒಂದು ನಿಮಿಷದೊಳಗೆ 'ಬಿಲ್ಲ' ನ್ನು ತಯಾರಿಸಿ ಕೊಡುತ್ತಾಳೆ! ಈ ಸಲಕರಣೆಗಳ ಸಹಾಯ ಇಲ್ಲಿನ ಜನರಿಗೆ ಎಷ್ಟು ರೂಢಿಯಾಗಿದೆಯೆಂದರೆ ಅನೇಕರಿಗೆ ಇಲ್ಲಿ ಬಾಯಿ ಲೆಕ್ಕ (ಗಣಿತ) ಮರೆತುಹೋಗಿದೆ!

ರಸ್ತೆಗಳೆಲ್ಲಾ ಇಲ್ಲೆಷ್ಟು ಶುಚಿಯಾಗಿವೆ! ಒಂದು ಚೂರು ಕಸವೂ ಇರುವುದಿಲ್ಲ. ಕೈಯಲ್ಲಿದ್ದ ಬೇಡವಾದ ಒಂದು ಕಾಗದದ ಚೂರನ್ನು ಕೂಡಾ ಬಿಸಾಡಲು ನಾವದನ್ನು ಅದಕ್ಕಾಗಿಯೇ ಇಟ್ಟಿರುವ ಕಸದ ಬುಟ್ಟಿಗಳಲ್ಲಿ ಹಾಕಬೇಕೇ ಹೊರತು ಸಿಕ್ಕಾಪಟ್ಟೆ ಎಸೆದರೆ ಶಿಕ್ಷೆಗೆ ಗುರಿಯಾಗುತ್ತೇವೆ! ಈ ಕಸದ ಬುಟ್ಟಿಗಳನ್ನು ಪೌರಸಭೆಯ ಖಾತೆ ಖಾಲಿ ಮಾಡುವುದು ರಾತ್ರಿಯಾದ ಮೇಲೆಯೇ ಅಂತೆ. ಹಗಲೆಲ್ಲಾ ಚಂದದ ನಗರದ ಅಂದವನ್ನು ಕೆಡಿಸಬಾರದೆಂದು!........

ಇತಿ ನಿಮ್ಮ
ಅಮ್ಮ.

* * * *

ಪ್ಯಾರಿಸ್
15–11–1965

ಮುದ್ದು ಅಮ್ಮ,

....ಇಲ್ಲಿ ವಯಸ್ಸು ಜನರನ್ನು ಮುದಿ ಮಾಡುವುದಿಲ್ಲ, ಕುಗ್ಗಿಸುವುದಿಲ್ಲ. ತಮ್ಮ ವಯಸ್ಸನ್ನು ಮೀರಿ ಜನತೆ ಜೀವನದಲ್ಲಿ ಆಸಕ್ತಿ ಪಡೆದು ವಿಷಯಾಭಿಲಾಷೆಯ ಆನಂದದಿಂದ ಕಾಲಕಳೆಯುತ್ತಾರೆ. ಇಲ್ಲಿನ ಹೆಂಗಸರನ್ನು ಕಂಡರೆ ನನಗೆ ತುಂಬಾ ಅಭಿ

ಮಾನ. ಅವರಲ್ಲಿ ಎಂತಹ ಧೈರ್ಯ, ಸ್ಥೈರ್ಯ, ಸಾಧನೆ! ಎಂತಹ ಶಕ್ತಿವಂತ ಸ್ತ್ರೀಯರು........ಅದ್ಭುತವಾದ ಸ್ತ್ರೀತ್ವ........ತುಂಬು ಜೀವನ. ಮನೆಗೆಲಸವನ್ನೂ ಮಾಡಿ ಕಾರು ನಡೆಸಿ ಅಂಗಡಿಯಿಂದ ಮನೆಗೆ ಬೇಕಾಗುವ ಸಾಮಾನುಗಳೆಲ್ಲವನ್ನೂ ತಂದು, ತಮ್ಮ ಸಹಜವಾದ ಅಂದ ಚಂದ ಸೌಂದರ್ಯಗಳಿಗೂ ಗಮನ ಕೊಡುತ್ತಾರೆ. ಕೂದಲನ್ನು ಚೊಕ್ಕಟವಾಗಿಟ್ಟುಕೊಳ್ಳುವುದು, ಉಗುರುಗಳನ್ನು ಅಂದವಾಗಿ ಬೆಳೆಸಿ, ಕತ್ತರಿಸಿ ಬಣ್ಣ ಬಳೆಯುವುದು, ಕಣ್ಣು ಮುಖಗಳಿಗೆ ಬೇಕಾದ ಸೌಂದರ್ಯವನ್ನು ಕೊಟ್ಟು ಬಹಳ ಅಚ್ಚುಕಟ್ಟಾಗಿ ಎಲ್ಲಾ ಸಾಮಾಜಿಕ ಕಾರ್ಯಕ್ರಮಗಳಿಗೆ ಹೋಗುತ್ತಾರೆ. ಬಾಹ್ಯ ಜೀವನದಲ್ಲೂ ತುಂಬಾ ಆಸಕ್ತಿ ಪಡುತ್ತಾರೆ. ನಮ್ಮ ದೇಶದಲ್ಲಿ ಫ್ಯಾಷನ್ (Fashion) ಮಾಡುವ ಜನರೇ ಬೇರೆ. ಮನೆಗೆಲಸ ಮಾಡಿ ಮನೆಯೊಳಗೇನೇ ಇರುವ ಹೆಂಗಸರೇ ಬೇರೆ. ಇವೆರಡನ್ನು ಕೂಡಿಸಿ ಜೀವನ ನಡೆಸುವವರು ಅತಿವಿರಳ. ಇದಲ್ಲದೆ ಇಲ್ಲಿನ ಜನ ತುಂಬಾ ನಿಷ್ಕಾಮವಂತ ಜನ—ಶ್ರಮ ಜೀವನಕ್ಕೆ ಹೆದರುವುದಿಲ್ಲ. ಆಳುಗಳು ಇಲ್ಲಿಲ್ಲವೆಂದ ಮೇಲೆ ಒಂದು ಮನೆಯಲ್ಲಿ ಎಷ್ಟೊಂದು ಕೆಲಸವಿರುತ್ತದೆ! ಅದೆಲ್ಲವನ್ನೂ ಇವರು ಉಲ್ಲಾಸದಿಂದಲೇ ನೆರವೇರಿಸುತ್ತಾರೆ.

ಚಿ|| ಜಯದೇವ ಸೂಚಿಸಿದಂತೆ ನಾವಿಬ್ಬರು ಒಮ್ಮೆ "ಲುಕ್ಷೆಂ ಬುರ್ಗ್" Luxembourg) ತೋಟಕ್ಕೆ ನಡೆದುಕೊಂಡೇ ಹೋದೆವು. ಛಳಿಗಾಲ ಆದ್ದರಿಂದ ಅಲ್ಲಿನ ಎಲ್ಲ ಗಿಡಮರಗಳೂ ತಮ್ಮ ಎಲೆಗಳನ್ನು ಉದುರಿಸಿ ಬೆತ್ತಲೆಯಾಗಿ ನಿಂತಿದ್ದವು! ದಾರಿಯಲ್ಲೆಲ್ಲಾ ಅನೇಕ ಪ್ರತಿಮೆಗಳನ್ನು (Statues) ನೋಡಿದೆವು. ಅವು ಎಲ್ಲವೂ ಬೆತ್ತಲೆ! ಆದರೆ ಛಳಿಗಾಲವಾದುದರಿಂದ ಜನರು ಮಾತ್ರ ತಲೆಯಿಂದ ಕಾಲ ತುದಿಯವರೆಗೆ ಉಣ್ಣೆ ಬಟ್ಟೆಯ ಪೋಷಾಕು ಹಾಕಿಕೊಂಡು ಛಳಿಯನ್ನು ಎದುರಿಸಬೇಕಾಗುತ್ತದೆ!

ಪ್ಯಾರಿಸ್ ವಿನೋದ ವಿಷಯಗಳಿಗೆ ವಿಶ್ವಪ್ರಖ್ಯಾತವಿದ್ದಂತೆ ಲಲಿತ ಕಲೆ, ಚಾರಿತ್ರಿಕ ಹಾಗೂ ಪ್ರಜ್ಞಾಶಾಲಿ ವಿಷಯಗಳಿಗೂ, ವಸ್ತು ಸಂಗ್ರಹಾಲಯಗಳಿಗೂ, ವಸ್ತು ಪ್ರದರ್ಶನಗಳಿಗೂ (Museums) ಅಷ್ಟೇ ಪ್ರಸಿದ್ಧವಾಗಿದೆ. ಜೀವನ ಉನ್ನತಮಟ್ಟದ ವಿಷಯಗಳ ಗಣಿಯಾಗಿದೆ, ಕೇಂದ್ರವಾಗಿದೆ....ಇಲ್ಲಿನ ಖ್ಯಾತಿಪಡೆದ "ಸೊರ್ಬೋನ್" (Sorbonne) ವಿಶ್ವವಿದ್ಯಾಲಯವನ್ನು ನೋಡಿದೆವು. ಜಗತ್ಪ್ರಖ್ಯಾತಿ ಪಡೆದ ಮದಾಂ ಕ್ಯೂರಿ (Madame Curie) ಓದಿದ ವಿದ್ಯಾಕ್ಷೇತ್ರ. ಅಲ್ಲಿನ ವಾತಾವರಣದಲ್ಲೇ ಪ್ರತಿಭೆ, ಆಸೆ, ಧ್ಯೇಯ, ಆಸಕ್ತಿ, ಆತುರತೆ ಇದೆ. ನಾವೊಂದು ಉಪಾಹಾರ ಗೃಹದಲ್ಲಿ ಕುಳಿತುಕೊಂಡಿರುವಾಗ ನಮ್ಮ ಮುಂದೆ ವಿಶ್ವವಿದ್ಯಾಲಯದ ಯುವಕ-ಯುವತಿಯರು ಓಡಾಡುವುದನ್ನು ಕಂಡು ತುಂಬಾ ಸಂತೋಷವಾಯಿತು.

ಪ್ಯಾರಿಸ್ಸಿನಲ್ಲಿ ಚಿತ್ರಕಾರರೂ (Artist Painters) ಚಿತ್ರಾಸಕ್ತಿಯುಳ್ಳ ಜನರೂ ತುಂಬಾ ಇರುವರು. ಹೊಸ ಹೊಸ ಚಿತ್ರಪ್ರದರ್ಶನಗಳು ಪ್ರತಿದಿನವೆಂಬಂತೆ ಜರುಗುತ್ತವೆ. ಹೊಸ ಚಿತ್ರಕಾರರೂ, ಅವರಿಗಿಂತ ಇನ್ನೂ ಹೊಸಬರೂ, ಚಿತ್ರ ಪ್ರದರ್ಶನಗಳನ್ನು ಕೊಡುವಂತೆ ಅನೇಕ ಶ್ರೀಮಂತರು ಪ್ರೋತ್ಸಾಹ ನೀಡುತ್ತಾರೆ. ಪ್ರತಿಯೊಂದು ಮನೆಯಲ್ಲಿಯೂ ಆದ್ಯ (Original) ಚಿತ್ರಗಳು ಇರಲೇಬೇಕು. ನಮ್ಮ ಆತಿಥ್ಯಗಾರ್ತಿ ನಮ್ಮನ್ನೊಮ್ಮೆ ಚಿತ್ರಗಾರರು ಸುಳಿದಾಡುವ "ಮೋಮಾರ್ತ್ರ್" (Monmartre) ಎಂಬ ಸಂಚಾರ ಸ್ಥಳಕ್ಕೆ ಕರಕೊಂಡು ಹೋದರು. ಗಡ್ಡ, ಮೀಸೆ ಬೆಳೆಸಿ, ಉದ್ದವಾದ ಕೂದಲನ್ನು ಬಿಟ್ಟು, ವಿನೋದಕರವಾದ ಉಡುಪನ್ನು ಧರಿಸಿದ್ದ, ನೋಡಲು ಅಸಹಜವಾದ, ತಂಡತಂಡವಾಗಿ ಕೆಲಸ ಮಾಡುತ್ತಿರುವ ಚಿತ್ರ ಗಾರರ ಗುಂಪುಗಳನ್ನು ನುಗ್ಗಿ ನೋಡಿದೆವು. ಅನೇಕ ಇತರ ಚಿತ್ರಗಾರರು ಮಾರ್ಗದ ನೆಲಗಚ್ಚಿನಲ್ಲಿ (Pavement) ತಮ್ಮ ಚಿತ್ರಗಳನ್ನು ಬಿಡಿಸಿ, ದಾರಿ ಹಾದು ಹೋಗುವವರಿಗೆ ಆ ಚಿತ್ರಗಳನ್ನು ಮಾರಿ, ಬಂದ ಕಾಸಿನಿಂದ ಅಕ್ಕಪಕ್ಕದಲ್ಲಿರುವ ಉಪಾಹಾರ ಗೃಹಗಳಲ್ಲಿ ವಿಶ್ರಾಂತಿ ಪಡೆಯುವುದನ್ನು ಕಂಡೆವು. ಒಬ್ಬ ಚಿತ್ರಗಾರ ನನ್ನನ್ನು ಚಿತ್ರಿಸುವೆನೆಂದು ಹಟ ಹಿಡಿದನು. "ಎಷ್ಟು ಬೆಲೆ?" ಎಂದದ್ದಕ್ಕೆ "10 ಫ್ರೆಂಕುಗಳು" ಎಂದನು. ಭಾರತ ಬಿಟ್ಟು ಬರುವಾಗ 3 ಪೌಂಡುಗಳನ್ನು ತೆಗೆದುಕೊಂಡು ಬಂದ ನಮಗೆ ಒಂದು ಚಿತ್ರದ ಮೇಲೆ ಅಷ್ಟು ಹಣವನ್ನು ಹಾಕಲು ಸಾಧ್ಯವಿರಲಿಲ್ಲ. ಇನ್ನೊಬ್ಬ ಚಿತ್ರಗಾರನು ನಮ್ಮನ್ನು ನೋಡಿ, "ಹಿಂದೂ ದೇಶವನ್ನು ನೋಡಲು ಆಸೆಯಿತ್ತು. ಆದರೆ ನಿಮ್ಮ ದೇಶ ಬಡದೇಶ ಎಂದು ಯಾರೋ ಹೇಳಿದರು. ಆದ್ದರಿಂದ ಹೋಗಲಿಲ್ಲ." ಎಂದನು. "ಚಿತ್ರಗಳನ್ನು ಕೊಂಡುಕೊಳ್ಳಲು ನಮ್ಮದು ಬಡದೇಶವಿರಬಹುದು. ಆದರೆ ಹೊಟ್ಟೆಗೆ ಆಹಾರ ಸಾಕಷ್ಟು ಸಿಗುತ್ತದೆ. ಅತಿಥಿ ಸತ್ಕಾರ ನಮ್ಮ ರಾಷ್ಟ್ರೀಯ ಗುಣ. ಖಂಡಿತ ಬನ್ನಿ" ಎಂದೆವು.

ಮೋಮಾರ್ತ್ರ್‌ದಲ್ಲಿನ ಚಿಕ್ಕ ಚಿಕ್ಕ ಗಲ್ಲಿಗಳನ್ನೆಲ್ಲಾ ಹಾದು ಚಿತ್ರಗಾರರ ಚಾವಡಿಗಳನ್ನೆಲ್ಲ ನೋಡಿ, ಅಲ್ಲಿಯ ಚಿತ್ರಪ್ರದರ್ಶನಗಳನ್ನೆಲ್ಲಾ ಮೆಚ್ಚಿ, ಅಲ್ಲಿನ ಜನರ ಜೀವನ ಕ್ರಮವನ್ನೂ ವ್ಯಕ್ತಿತ್ವವನ್ನೂ ಮನನ ಮಾಡಿದೆವು. ಅಂದು ನಾವಲ್ಲಿ ಕಳೆದ ದಿನ ತುಂಬಾ ರಸವತ್ತಾಗಿತ್ತು.

ಚಿತ್ರಕಲೆ ಇಲ್ಲಿನ ಜನರ ಉಸಿರಾಗಿದೆ. ಸಾಮಾನ್ಯವಾಗಿ ಇಲ್ಲಿನ ಜನರು ಲಲಿತ ಕಲೆಗಳನ್ನೇ ಹೆಚ್ಚಾಗಿ ಚರ್ಚಿಸುವುದು ದಿನ ನಿತ್ಯದ ರೂಢಿ. ಇದು ಈ ಫ್ರಾನ್ಸ್ ದೇಶದ ರಾಷ್ಟ್ರೀಯ ಗುಣವೆನ್ನಬಹುದು. ಕಲಾವಿದರನೇಕರು ಉಪಹಾರ ಗೃಹಗಳಲ್ಲಿ ಸೇರಿ ಬೆಳಗ್ಗಿನವರೆಗೆ ಕಲೆಗಳನ್ನು ಕುರಿತು ಚರ್ಚಿಸುತ್ತಾ, ಬಿಸಿಬಿಸಿಯಾದ ಈರುಳ್ಳಿ ಸಾರನ್ನು (Soup) ಸೇವಿಸುತ್ತಾ ಇರುವುದು ಇಲ್ಲಿನ ಒಂದು ಸರ್ವ ಸಾಧಾರಣ ದೃಶ್ಯ.

ಪ್ಯಾರಿಸ್ಸಿನಲ್ಲಿ ರಾತ್ರಿಯಾಗುವುದಿಲ್ಲ. ರಾತ್ರಿಯೆಂಬುದು ಇಲ್ಲವೇ ಇಲ್ಲ ಎನ್ನಬಹುದು. ಇಲ್ಲಿನ ಜನರಿಗೆ ಹಗಲು ರಾತ್ರಿ 24 ಗಂಟೆಗಳೂ ತಮ್ಮ ಚಟುವಟಿಕೆಗಳಿಗೆ ಸಾಲದಾಗಿವೆ !........

ಇತಿ ನಿಮ್ಮ
ಚಂದಮ್ಮ.

*   *   *   *

ಪ್ಯಾರಿಸ್
18–11–1965

ಪ್ರಿಯ ತಂದೆಯೇ,

........ನಮ್ಮ ಆತಿಥ್ಯಗಾರ್ತಿ ತನ್ನ ಸ್ನೇಹಿತರ ಸಹಾಯದಿಂದ ಪಾಶ್ಚಾತ್ಯದಲ್ಲಿನ ನಮ್ಮ ಮೊದಲನೇ ಕಾರ್ಯಕ್ರಮವನ್ನು ಇಲ್ಲಿನ "ನೇಟೋ" ಗಾಯನ ಕೂಟದಲ್ಲಿ (NATO Music Circle) ಏರ್ಪಡಿಸಿದರು. ನಾವಲ್ಲಿ ಕೊಟ್ಟ ಪ್ರದರ್ಶನ ಉಪನ್ಯಾಸ (Demonstration Lecture) ಎಷ್ಟು ಯಶಸ್ವಿಯಾಯಿತೆಂದರೆ ಸಭಿಕರೆಲ್ಲಾ ನಮ್ಮಿಂದ ಮತ್ತೊಂದು ಉಪನ್ಯಾಸವನ್ನು ಅಲ್ಲಿ ಜರುಗಿಸಬೇಕೆಂದು ತುಂಬಾ ಹಟ ಹಿಡಿದರು. ಇದರಿಂದಾಗಿ ಒಂದು ವಾರದ ನಂತರ ಅದೇ ಸ್ಥಳದಲ್ಲಿ ನಾವು ಮತ್ತೊಂದು ಪ್ರದರ್ಶನ–ಉಪನ್ಯಾಸವನ್ನು ಕೊಡಬೇಕಾಯಿತು. ಅಲ್ಲಿ ಈ ವರ್ಷ ನಡೆದ ಕಾರ್ಯಕ್ರಮಗಳಲ್ಲೆಲ್ಲ ನಮ್ಮದೇ ಅತಿ ಉತ್ತಮವಾಗಿತ್ತೆಂದು ಎಲ್ಲರೂ ಹೊಗಳಿದರು, ನಮ್ಮ ದೇಶದಲ್ಲಿ ನಾವೆಂದೂ ಅಂತಹ ಕರತಾಡನವನ್ನೂ ಮೆಚ್ಚಿಕೆಯನ್ನೂ ಕೇಳಿರಲಿಲ್ಲ. ಭಾರತದಲ್ಲಿ ಪರದೇಶದ ಕಲಾವಿದರಿಗೆ ಮಾತ್ರ ಅಂತಹ ಕರತಾಡನವನ್ನು ಕೊಡುವುದನ್ನು ನಾವು ಕಂಡಿದ್ದೆವು, ಕೇಳಿ ಆಶ್ಚರ್ಯಪಟ್ಟಿದ್ದೆವು. ಅಂದಿನ ನಮ್ಮ ಮೊದಲ ಅನುಭವ ವಿಚಿತ್ರವಾಗಿ ನಮಗೆ ಕಂಡಿತು.

ಉಪನ್ಯಾಸವಾದ ಮೇಲೆ ಅಲ್ಲಿಯ ಬ್ರಿಟಿಷ್ ರಾಯಭಾರಿ (British Ambassador to France) ನಾವು ಊಟ ಮಾಡುತ್ತಿದ್ದ ವೇಳೆಗೆ ನಮ್ಮ ಮೇಜಿನ ಬಳಿ ಬಂದು ನಮ್ಮನ್ನು ಅಭಿನಂದಿಸಿ, " ಈಗಾದರೆ ಇಂಡಿಯಾ ನೇಟೋ (NATO) ಗೆ ಸೇರಬೇಕು!" ಎಂದು ನಗುತ್ತಾ ಹೇಳಿದರು. ನಮ್ಮ ಮೊದಲ ಪಾಶ್ಚಾತ್ಯ ಕಾರ್ಯಕ್ರಮ ನೇಟೋ ಆಶ್ರಯದಲ್ಲಿ ನೆರವೇರಿದ್ದು ಕೌತುಕದ ವಿಷಯವಲ್ಲವೇ ? ಇದಾದ ಮೇಲೆ ನಮ್ಮ ಇಂಡಿಯಾದ ರಾಯಭಾರಿಯವರ ಮನೆಯಲ್ಲಿ ನಮಗೊಂದು ಸ್ವಾಗತ ಸಮಾ

ರಂಭದ ಸಂದರ್ಭ ಒದಗಿತು. ಆ ಸಮಯದಲ್ಲಿ ಅವರು ಮೈಸೂರು ಸರಕಾರವನ್ನು ಹೊಗಳಿ, ಸಾಂಸ್ಕೃತಿಕ ಕೆಲಸದಲ್ಲಿ ಮೇಲ್ಪಂಜ್ತಿಯನ್ನು ಹಾಕಿ ಕೊಟ್ಟಿದ್ದಕ್ಕೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ತಮ್ಮ ತಮ್ಮ ಸಂಸ್ಥಾನಗಳ ಕಲಾವಿದರನ್ನು ಇಂತಹ ಸಾಂಸ್ಕೃತಿಕ ಕಾರ್ಯಗಳಿಗಾಗಿ ಪರದೇಶಗಳಿಗೆ ಕಳುಹಿಸುವ ಯೋಜನೆಯನ್ನು ಮೈಸೂರೇ ಮೊದಲಾಗಿ ಕಾರ್ಯರೂಪಕ್ಕೆ ತಂದುದು ಸ್ತುತ್ಯ ಎಂದು ಹೇಳಿದರು.

ಪ್ಯಾರಿಸ್ ಎಂಬ ಶಬ್ದದಲ್ಲಿ ನಿಜವಾಗಿಯೂ ಒಂದು ಮಾಯಾಜಾಲವಿದೆ, ಇಂದ್ರಜಾಲವಿದೆ. ನಾವು ಈ ನಗರವನ್ನು ಬಹುತೋಮುಖವಾಗಿ ನೋಡಿ ಆನಂದಿಸಿದ್ದೇವೆ. ಇಲ್ಲಿನ ಸಂಸ್ಕೃತಿ, ಪ್ರಬುದ್ಧ ವಾತಾವರಣ, ವೈವಿಧ್ಯ, ವೈಶಿಷ್ಟ್ಯ ಇವುಗಳ ಪರಿಚಯ ಮಾಡಿಕೊಂಡೆವು. ಒಮ್ಮೆ ನಾವು ಒಂದು ಗುಪ್ತವಾಗಿದ್ದ ಸ್ಥಳಕ್ಕೆ ವಿನೋದಕ್ಕಾಗಿ ಹೋದೆವು. ಅದೊಂದು ವಿಚಿತ್ರ ಸ್ಥಳವಾಗಿತ್ತು. ಚತುರೋಕ್ತಿ, ಪರಿಹಾಸ್ಯ, ವಿಕಟಾನುಕರಣ, ಸ್ವಾರಸ್ಯವಾದ ಗೂಢ ವೃತ್ತಾಂತಗಳು, ಸಂಭಾಷಣೆಗಳು, ಮಾತುಗಳಲ್ಲಿನ ವಿನೋದ, ಹಾಸ್ಯ, ಕ್ಷಣಿಕದಲ್ಲಿ ಚಿತ್ರಿಸುವ ಚಿತ್ರಕಲೆ (Cartoons) ರಾಜಕೀಯ ಸಂಗತಿಗಳನ್ನು ಕುರಿತು ಪರಿಹಾಸ್ಯ, ಕುಚೇಷ್ಟೆ ಇವೆಲ್ಲವೂ ಅಲ್ಲಿ ಲೀಲಾಜಾಲದಿಂದ ನೆರವೇರುತ್ತಿದ್ದುವು. ಫ್ರೆಂಚ್ ಭಾಷೆ ಬಲ್ಲವರಿಗೆ, ಫ್ರೆಂಚ್ ಸಾಹಿತ್ಯ ತಿಳಿದವರಿಗೆ, ಅಲ್ಲದೆ ಕಲೆಯಲ್ಲಿನ ಮತ್ತು ರಾಜಕೀಯದ ದಿನನಿತ್ಯದ ಆಗು ಹೋಗುಗಳನ್ನು ಅರಿತವರಿಗೆ ಈ ವಿಚಿತ್ರ ಸ್ಥಳ ಅತ್ಯಂತ ಆನಂದವನ್ನು ನೀಡುತ್ತದೆ. ಎಂಬುದರಲ್ಲಿ ಸಂಶಯವಿಲ್ಲ. ಸಾಧಾರಣ ನಮ್ಮ ಬೆಂಗಳೂರಿನ ಹಿರಣ್ಣಯ್ಯನವರ ನಾಟಕಗಳಂತೆ.

ಪ್ಯಾರಿಸ್ಸಿನ ಜಗತ್ಪ್ರಖ್ಯಾತ ರಾತ್ರಿಯ ವಿನೋದಗಳನ್ನೂ ನೋಡಿದೆವು. “ಫೊಲೀ ಬರ್ಜೇ” (Folies Bergere) “ಲಿಡೋ ನೈಟ್ ಕ್ಲಬ್” (Lido Night Club) ಇತ್ಯಾದಿ ರೋಮಾಂಚನಗೊಳಿಸುವ ಸಂಸ್ಥೆಗಳಿಗೆ ಸಾಮಾನ್ಯ ಜನರು ಹೋಗುವಂತಿಲ್ಲ. ಅವೆಲ್ಲ ತುಂಬಾ ವೈಭವದ ಮಂದಿರಗಳು. ಕೈತುಂಬಾ ಹಣವನ್ನು ಹಿಡಿದು ಒಳಗೆ ಹೋಗಬೇಕು. ಪುಣ್ಯವಶಾತ್ ಪ್ಯಾರಿಸ್ಸಿನಲ್ಲಿ ನಮ್ಮ ಶಿಷ್ಯವೃಂದದಲ್ಲಿ ಒಬ್ಬ ಧನಿಕ ಶಿಷ್ಯೆಯೊಬ್ಬರಿದ್ದರು. ಆಕೆ ನಮ್ಮನ್ನು ಆ ಎರಡೂ ವೈಭವ ಸ್ಥಳಗಳಿಗೆ ಕರಕೊಂಡು ಹೋದರು. ಎಂತಹ ಸಂಭ್ರಮದ ದೃಶ್ಯಗಳು! ವಿನೋದದ ಪರಮಾವಧಿಯನ್ನು ಪಡೆದ ವಿವಿಧ ವಿನೋದಾವಳಿಯ ದೃಶ್ಯಗಳು! ಉನ್ನತ ಮಟ್ಟವನ್ನು ಮುಟ್ಟಿರುವ ಎಂತಹ ಆಡಂಬರದ ವಿನೋದಗಳು! ಸೌಂದರ್ಯೋಪಾಸನೆಯ ಕಲಶಪ್ರಾಯ ಸಂಸ್ಥೆಗಳು. ಕಣ್ಣನ್ನು ಮಿಸಿ ಮಿಸಿ ಮಾಡಿ ನಮ್ಮನ್ನು ನಾವೇ ಮರೆತಂತೆ ಮಾಡಿದುವು. ಆದರೆ ಆ ವಿನೋದಗಳ ಪರಿಣಾಮ ಕ್ಷಣಿಕ

ವಾದುದು. ಮಂದಿರವನ್ನು ಬಿಟ್ಟು ಹೊರಗೆ ಬಂದೊಡನೆ ಆ ಆನಂದದ ಅನುಭವ ಕೂಡಲೇ ಮಾಯವಾಗುವುದು. ಏಕೆಂದರೆ ಅದೆಲ್ಲ ಬರೀ ವಿಷಯಭರಿತ ವಿಜೃಂಭಣೆ, ಮನಸ್ಸು ಹೃದಯವನ್ನು ಮುಟ್ಟುವಂತಹ ವಸ್ತುಗಳಲ್ಲ. ಅಂತೆಯೇ ಆ ಅನುಭವ ವೆಲ್ಲ ಕ್ಷಣಿಕ. ಆದರೆ ಅಲ್ಲಿ ಇರುವವರೆಗೆ ವರ್ಣಿಸಲಾಗದ ಸಂತೋಷ, ಸ್ವರ್ಗಸುಖ.

ನಾವೊಮ್ಮೆ "ಸ್ಟ್ರಿಪ್ ಟೀಸ್" (Strip Tease) ಅಂದರೆ ಮೆಲ್ಲ ಮೆಲ್ಲನೆ ನಗ್ನರಾಗಿ ಜನರನ್ನು ಪೀಡಿಸುವ ದೃಶ್ಯವನ್ನು ನೋಡಲು ಹೋದೆವು. ಜನರು ಮಂದಿರ ದೊಳಗೆ ಕಿಕ್ಕಿರಿದು ತುಂಬಿದ್ದರು. ಅಲ್ಲಿ ಒಬ್ಬಳು ಫ್ರೆಂಚ್ ಹೆಂಗಸು ಭಾರತೀಯ ನೃತ್ಯ ಸಂಗೀತಕ್ಕೆ ಸರಿಯಾಗಿ ತಾನು ಹೊದ್ದುಕೊಂಡಿರುವ ಒಂದೊಂದು ವಸ್ತ್ರವನ್ನು ಕಳಚುತ್ತ ಕೊನೆಗೆ ಪೂರ್ಣ ನಗ್ನತೆಯನ್ನು ಹೊಂದುವುದನ್ನು ಕಂಡೆವು. ಮನಸ್ಸು ತುಂಬಾ ನೊಂದಿತು. ಹೊಟ್ಟೆಪಾಡಿಗಾಗಿ ಇಂತಹವರು ಕೈಕೊಂಡ ಈ ಕಸುಬಿಗಾಗಿ ತುಂಬಾ ವ್ಯಥೆಪಟ್ಟೆವು. ಆದರೆ ಇಂತಹ ಸ್ತ್ರೀಯರಲ್ಲಿ ಅನೇಕರು ಈ ರೀತಿ ತಮ್ಮ ನಗ್ನತೆಯನ್ನು ಪ್ರದರ್ಶಿಸುತ್ತಿದ್ದರೂ ಸ್ವಭಾವತಃ ತುಂಬಾ ಶೀಲವಂತರಿರುವರಂತೆ. ಹಣ ಸಂಪಾದನೆಗಾಗಿ ಈ ಕಸುಬನ್ನು ದೇಹಭಾವವಿಲ್ಲದೆ ಕೈಕೊಂಡು ಮರ್ಯಾದೆ ಯಿಂದ ತಮ್ಮ ಸಂಸಾರ ಸಾಗಿಸುವವರೂ ಇದ್ದಾರಂತೆ........

ಇತಿ ನಿಮ್ಮ
ಚಂದಮ್ಮ.

* * * *

ಪ್ಯಾರಿಸ್
21-11-1965

ಮುದ್ದು ಮಕ್ಕಳಿರಾ,

ಪಾಶ್ಚಾತ್ಯದ ಮೊದಲ "ಬ್ಯಾಲೆ" (Ballet, ನೃತ್ಯನಾಟಕ) ಯನ್ನು ನೋಡಿ ದೆವು! ಅದೂ ಪ್ರಸಿದ್ಧ ನೃತ್ಯ ಸಂಸ್ಥೆ ಔಸ್ಟ್ರೇಲಿಯನ್ ಬ್ಯಾಲೆ ಕಂಪೆನಿಯ (Australian Ballet Company) "ರೆಮೊಂಡಾ" (Raymonda) ಎಂಬ ನೃತ್ಯ ನಾಟಕ! ಪಾಶ್ಚಾತ್ಯದಲ್ಲೆಲ್ಲಾ ಅತ್ಯಂತ ಹೆಸರುವಾಸಿಯಾದ ನರ್ತನ ಜತೆ ಫೋಂಟೇನ್-ನುರೆಯಫ್ (Fonteyn Nureyev) ನರ್ತಿಸುವ ಬ್ಯಾಲೆ! ಅದನ್ನು ಪ್ಯಾರಿಸ್ಸಿನ ಶ್ರೇಷ್ಠ ನೃತ್ಯ ಮಂದಿರವಾದ "ಥಿಯೇಟರ್ ದೆ ಶಾನ್ಸ್ ಎಲೀಸೆ" (Theatre Des Champs Elysees) ನಲ್ಲಿ ಪ್ರದರ್ಶಿಸಿದರು. ಈ ನೃತ್ಯ ಮಂದಿರ ತುಂಬಾ ಅಲಂಕಾರಪ್ರಾಯವಾಗಿ ಅದ್ಭುತಪ್ರಾಯವಾಗಿ, ಭೂಷಣ

ಪ್ರಾಯವಾಗಿದೆ. ಕುರ್ಚಿಗಳಿಗೆಲ್ಲಾ ಕೆಂಪು ಮಕಮಲ್ಲಿನ ಹೊದ್ದಿಕೆ. ಎಲ್ಲಿ ಕಾಲಿಟ್ಟರೂ ಕಾಲಡಿಯಲ್ಲಿ ದಪ್ಪವಾದ ರತ್ನಕಂಬಳಿ. ಮಂದಿರದ ಗುಮ್ಮಟದಲ್ಲಿ ರಷ್ಯಾದ ವಿಖ್ಯಾತ ಚಿತ್ರಗಾರ ಶಿಗೋಲ್ (Chagall) ಚಿತ್ರಿಸಿದ ಚಿತ್ರಗಳಿವೆ. ಆ ಗುಮ್ಮಟದ ಮಧ್ಯದಿಂದ ಪ್ರಾಚೀನ ಗಾಜಿನ ಒಂದು ಅತಿ ದೊಡ್ಡ ದೀಪಗುಚ್ಛ (Chandelier) ನೇತಾಡುತ್ತಿದೆ. ಆ ಭವ್ಯ ನಾಟ್ಯ ಮಂದಿರದಿಂದ ಸುತ್ತಲೂ ವರ್ತುಲಾಕಾರದ ಮಹಡಿಗಳು, ಅಲ್ಲಿ ಕುಳಿತಿರುವ ಆಧುನಿಕ ವೈಯಾರದ ಮಹಿಳೆಯರು ಕೈಯಲ್ಲಿ ಭೂಷಣಪ್ರಾಯವಾದ ದುರ್ಬೀನನ್ನು ಹಿಡಿದು ಆಟ ನೋಡುತ್ತಿದ್ದರು. ಪ್ಯಾರಿಸ್ ನಗರದ ಉತ್ತಮ ಉಡುಪು ವೈಯ್ಯಾರಗಳನ್ನು (Fashions) ನೀವೇ ಊಹಿಸಿಕೊಳ್ಳಬೇಕು, ನನಗೆ ಅವುಗಳನ್ನು ವರ್ಣಿಸಲಸಾಧ್ಯ! ನಾಟ್ಯ ಮಂದಿರ ಪ್ರೇಕ್ಷಕರಿಂದ ಪೂರ್ತಿ ತುಂಬಿತ್ತು. ಆದರೆ ದೈವವಶಾತ್ ನಮಗೆ ಕೊನೆಯ ಎರಡು ಟಿಕೆಟ್‌ಗಳು ಮಹಡಿಯಲ್ಲಿ ಸಿಕ್ಕಿದುವು. ನಾವು ಕುಳಿತಲ್ಲಿಂದ ನೃತ್ಯಗಳ ಅಂದವಾದ ಜೋಡಣೆಗಳು (Choreography) ಬಹಳ ಚೆನ್ನಾಗಿ ಕಾಣುತ್ತಿದ್ದುವು. ನೃತ್ಯ ಕಲಾವಿದರ ಪಂಗಡಗಳು ರಂಗಸ್ಥಳದ ಮೇಲೆ ವಿಧವಿಧವಾಗಿ ನರ್ತಿಸಿ ರಚಿಸುತ್ತಿದ್ದ ಆಕೃತಿಗಳು ತುಂಬಾ ಆಕರ್ಷಣೀಯವಾಗಿದ್ದುವು. ರಂಗಸ್ಥಳದ ಮೇಲೆ ಒಂದೇ ಸಲ 150 ನೃತ್ಯಗಾರರು ನರ್ತಿಸುವುದನ್ನು ನಾವು ಕಂಡುದು ಇದೇ ಮೊದಲು. ರಂಗಸ್ಥಳಕ್ಕೆ ಮುಂದಿರುವ ಕಣಿವೆ (Pit) ಯಲ್ಲಿ ಸುಮಾರು 75 ಮಂದಿ ಸಂಗೀತಗಾರರು ಹೃದಯಂಗಮವಾದ ಸಂಗೀತವನ್ನು ಬಾರಿಸುತ್ತಿದ್ದರು. ನಾವು ನಿಜವಾದ ಸಾಂಪ್ರದಾಯಿಕ "ಬ್ಯಾಲೆ" ಯನ್ನು ಕಂಡುದು ಇದೇ ಮೊದಲು. ಮಾರ್ಗೊ ಫೊಂಟೇನ್ ನರ್ತಿಸುವ ಲಾಸ್ಯ ನೃತ್ಯವನ್ನೂ, ಬುಗುರಿಯಂತೆ ತಿರುಗುವ ಅವಳ ನೃತ್ಯ ವೈಶಿಷ್ಟ್ಯವನ್ನೂ, ಸಿಂಹದಂತೆ ಎಗರಿ ಚಿಗುರಿ ಹಾರುವ ನುರೆಯೆಫ್ ಕುಣಿಯುವ ಆಕಾಶಚಾರಿಗಳು ತುಂಬಿದ ನೃತ್ಯವನ್ನೂ ಕಣ್ತುಂಬ ನೋಡಿ ಆನಂದಪಟ್ಟೆವು. ನಮಗದು ಮರೆಯಲಾಗದ ಒಂದು ಅನುಭವವಾಯಿತು. ಮನಸ್ಸಿನ ಚಿತ್ರಪಟದಲ್ಲಿ ಅದು ಅಚ್ಚಳಿಯದೆ ಉಳಿದಿದೆ.

ಆ ನೃತ್ಯ ಕಲಾವಿದರು ಪಟ್ಟಪಡುವ ಶ್ರಮಕ್ಕೆ ತಕ್ಕ ಪ್ರತಿಫಲವೆಂಬಂತೆ ಜನತೆ ಅವರಿಗೆ ಕೊಡುವ ಪ್ರೋತ್ಸಾಹ, ಉತ್ತೇಜನ ನಾವು ನಮ್ಮ ಜನ್ಮದಲ್ಲಿ ಕಂಡಿರಲಿಲ್ಲ. ಪ್ರೇಕ್ಷಕರು ತಮ್ಮ ಕರತಾಡನವನ್ನು ನಿಲ್ಲಿಸದೆ, ಮುಖ್ಯ ನೃತ್ಯ ಕಲಾವಿದರನ್ನು ರಂಗಸ್ಥಳದ ಮೇಲೆ ಅನೇಕಾನೇಕ ಸಲ ಕರೆತರಿಸಿ ತಮ್ಮ ಉತ್ಸಾಹ ಸಂತೋಷಗಳನ್ನು ವ್ಯಕ್ತಪಡಿಸುತ್ತಿದ್ದರು. ಇದಲ್ಲದೆ ಅವರು ಒಬ್ಬರ ಹಿಂದೆ ಒಬ್ಬರು ಬಂದು ಕಲಾವಿದರಿಗೆ ತಾವು ತಂದ ಪುಷ್ಪಗುಚ್ಛಗಳನ್ನು ಅರ್ಪಿಸಲಾರಂಭಿಸಿದರು. ಸ್ವಲ್ಪದರಲ್ಲಿಯೇ ರಂಗಸ್ಥಳ ಹೂಗಳಿಂದ ತುಂಬಿ ಒಂದು ಹೂದೋಟದಂತೆ ಕಾಣಲು ಆರಂಭವಾಯಿತು! ಆಗಿನ ಹವಾಗುಣದಿಂದಾಗಿ ಗುಲಾಬಿ ಹೂಗಳಿಗೆ

ತುಂಬಾ ಕ್ರಯ, ಒಂದೊಂದು ಹೂವಿಗೆ ಸುಮಾರು 3 ಫ್ರೆಂಕ್‌ಗಳನ್ನು (ಸಾಧಾರಣ 3 ರೂಪಾಯಿ) ಕೊಡಬೇಕಾಗಿ ಬಂದಿದ್ದರೂ ಬ್ಯಾಲೆಯಿಂದ ತೃಪ್ತರಾದ ಪ್ರೇಕ್ಷಕರು ಅವನ್ನು ಕೊಂಡು ಕೊಂಡು ತಾವು ಮೆಚ್ಚಿದ ನೃತ್ಯ ಕಲಾವಿದರ ಕಾಲಡಿಯಲ್ಲಿ ಅರ್ಪಿಸುತ್ತಿದ್ದರು! ಅವರಿಗೆ ಕಲಾವಿದರನ್ನು ಕಂಡರೆ ಅಷ್ಟು ಭಕ್ತಿ, ವಿಶ್ವಾಸ, ಅವರು ದೇವಾಂಶ ಮಾನವರೆಂದು ಅವರ ಭಾವನೆ. ನಿಜವಾಗಿ ಕಲಾವಿದರಿಗೆ ಪಾಶ್ಚಾತ್ಯದಲ್ಲಿ ಎಷ್ಟೊಂದು ಮಾನ ಮರ್ಯಾದೆ! ಸಮಾಜದಲ್ಲಿ ಎಂತಹ ಅಗ್ರಸ್ಥಾನ ಅವರಿಗೆ! ಅವರೆಲ್ಲಾ ಅದ್ವಿತೀಯ ವ್ಯಕ್ತಿಗಳೆಂದು ಸಾಧಾರಣ ಅಲ್ಲಿನ ಎಲ್ಲ ಜನತೆಯ ಭಾವನೆ. ಅನೇಕ ವಿಧವಾದ ಶ್ಲಾಘನೆಗಳಿಂದ ಅವರು ಕಲಾವಿದರನ್ನು ಪೂಜಿಸುತ್ತಾರೆ. ನಮಗಂತು, ಆ ನೃತ್ಯ ರಂಗಮಂದಿರದಲ್ಲಿ ನಡೆದ ಅಮೋಘ ನೃತ್ಯ, ಕಲಾವಿದರಿಗೆ ಜನತೆ ತೋರಿಸಿದ ಅಸಾಧಾರಣವಾದ ಸನ್ಮಾನ, ಆ ಭವ್ಯ ರಂಗಮಂದಿರ, ರಂಗಮಂದಿರದಲ್ಲಿ ಕಿಕ್ಕಿರಿದು ತುಂಬಿದ ಪ್ಯಾರಿಸ್ ನಗರದ ಆಧುನಿಕ ಸಮಾಜ ಗಣ್ಯರು, ಅವರ ನಡವಳಿಕೆ ಇತ್ಯಾದಿ ನೋಡಿ, ಇದೆಲ್ಲಾ ಕನಸೋ ನೆನಸೋ ಎಂಬ ಹಾಗಾಯಿತು........

ಪ್ಯಾರಿಸ್ಸಿನ ವಿಷಯ ವಿಚಾರಗಳನ್ನು ಹೇಗೆ ಬರೆಯಬೇಕು, ಎಲ್ಲಿಂದ ಎತ್ತ ಬರೆಯಬೇಕು, ಎಂದು ತೋಚದಾಗಿದೆ. ಪ್ಯಾರಿಸ್ ನಗರ ನೆಲವು ಗೆಲವಿನ ನಗರ. ವಿನೋದಮಯ ನಗರ. ಇಲ್ಲಿನ ವಿಶಾಲವಾದ ರಸ್ತೆಗಳ ಅಕ್ಕಪಕ್ಕದ ಪುಷ್ಪಭರಿತ ಮರಗಳ ಸಾಲುಗಳ ವಿಷಯವಾಗಿ ಬರೆಯಲೋ, ಲೂವ್ರ (Louvre) ಮ್ಯೂಸಿಯಮ್ಮಿನಲ್ಲಿ ಮಾಯಾವಿ ಮಂದಹಾಸ ನಗೆಯನ್ನು ಎಂದೆಂದಿಗೂ ಬೀರುತ್ತಿರುವ "ಮೊನಾ ಲಿಸಾ" (Mona Lisa) ಚಿತ್ರವನ್ನು ಕುರಿತು ಬರೆಯಲೋ, ಅಥವಾ ನಗರದ ಇನ್ನೂ ಅನೇಕಾನೇಕ ವೈಶಿಷ್ಟ್ಯಭರಿತ ವಿಷಯಗಳನ್ನು ಕುರಿತು ಬರೆಯಲೋ, ಒಂದೂ ತಿಳಿಯದು. ಸುಮಾರು ಒಂದು ತಿಂಗಳ ಕಾಲ ನಾವು ಹುಚ್ಚರಂತೆ ಪ್ಯಾರಿಸ್ಸನ್ನು ಪುಡಿ ಮಾಡಿದೆವು. ಇಲ್ಲಿ ವಾಸಿಸುತ್ತಿರುವ ನಮ್ಮ ಶಿಷ್ಯಂದಿರು ತಮ್ಮ ತನು, ಮನ ಧನಗಳನ್ನು ನಮ್ಮ ಪ್ಯಾರಿಸ್ ದರ್ಶನಕ್ಕಾಗಿ ನೀಡಿದುದು ನಮ್ಮ ಪುಣ್ಯ. ನಮ್ಮ ಶಿಷ್ಯೆಯೊಬ್ಬಳು ಇಲ್ಲೊಂದು ತನ್ನ ನೃತ್ಯ ಪ್ರದರ್ಶನವನ್ನು ಕೊಡುತ್ತಿದ್ದಾಗ ನಮ್ಮನ್ನು ಆದರದಿಂದ ಸಭಿಕರ ಮುಂದೆ ಗೌರವಿಸಿ, ತಾನು ಹೆಮ್ಮೆಪಡುವ ತನ್ನ ಗುರುಗಳೆಂದು ಹೇಳಿದರು. ಆ ನೃತ್ಯ ಪ್ರದರ್ಶನವಾದ ಮೇಲೆ ಪ್ರೇಕ್ಷಕರಲ್ಲೊಬ್ಬರು ನಮ್ಮೊಡನೆ ಕಾಲು ಗೆಜ್ಜೆಗಳ ವಿಚಾರವಾಗಿ ಚರ್ಚೆ ನಡೆಸಿದರು. ಗೆಜ್ಜೆಗಳನ್ನು ಕಾಲಿಗೆ ಕಟ್ಟುವುದು ದೃಷ್ಟಿ ಪರಿಹಾರಕ್ಕಾಗಿಯಲ್ಲವೇ? ಎಂದು ವಿಚಾರಿಸಿದರು. ಅವರಿಗೆ ನಮ್ಮ ಭರತನಾಟ್ಯದ ಗೆಜ್ಜೆಪೂಜೆಯ ವಿಚಾರವನ್ನು ತಿಳಿಸಿದೆವು. ಎತ್ತು, ಎಮ್ಮೆ, ಹಸುಗಳ ಕತ್ತಿಗೆ ಕಟ್ಟುವ ಗೆಜ್ಜೆಗಳು ದೃಷ್ಟಿ ಪರಿಹಾರಕ್ಕಿರಬಹುದು. ನೃತ್ಯಗಾರರ

ಕಾಲಿಗೆ ಕಟ್ಟುವ ಗೆಜ್ಜೆಗಳು ಹಾಗಲ್ಲ ಎಂಬುದಾಗಿ ಹೇಳಿ ಅವರ ಮನಸ್ಸಿನ ತಪ್ಪು ಭಾವನೆಯನ್ನು ಅಳಿಸಿದೆವು........

ಅಂತೂ ಪ್ಯಾರಿಸ್ ಪ್ರವಾಸ ಮುಗಿಯುತ್ತಾ ಬಂತು! ಇನ್ನು B. E. A. ವಿಮಾನದ ಮೂಲಕ ಲಂಡನ್ನಿಗೆ ಹೋಗುವ ದಿನ ಹತ್ತಿರ ಬಂತು. ಭಾರತದ ನೃತ್ಯ ಕಲೆಯ ಅಂದಚಂದವನ್ನೂ ಅದರ ಶ್ರೀಮಂತಿಕೆಯನ್ನೂ ಇಲ್ಲಿನ ಕೆಲವು ಜನರಿಗಾದರೂ ತಿಳಿಸಿದ ತೃಪ್ತ ಮನಸ್ಸಿನಿಂದ ನಾವು ಪ್ಯಾರಿಸ್ಸನ್ನು ಬಿಡುವೆವು.

ಇತಿ ನಿಮ್ಮ

ಅಮ್ಮ.

ಫ್ರಾನ್ಸಿನಿಂದ—ಇಂಗ್ಲೆಂಡಿಗೆ

BRITISH EUROPEAN AIRWAYS

ಲಂಡನ್ನಿನ ಮೊದಲ ಅಭಿಪ್ರಾಯಗಳು

ನಾವು B. E. A. (British European Airways) ಮೂಲಕ ಲಂಡನ್ ನಗರವನ್ನು ಸಾಯಂಕಾಲ ಸೇರಿದೆವು. ಗಡಿಯಾರವನ್ನು ಅಲ್ಲಿನ ಸಮಯಕ್ಕೆ ಸರಿಯಾಗಿ ಒಂದು ಗಂಟೆ ಹಿಂದೆ ಮಾಡಬೇಕಾಗಿ ಬಂತು. (ಪ್ಯಾರಿಸ್ಸನ್ನು ಸಾಯಂಕಾಲ 8-40ಕ್ಕೆ ಬಿಟ್ಟು ಲಂಡನ್ನನ್ನು ಸಾಯಂಕಾಲ 8-30ಕ್ಕೆ ಸೇರಿದೆವು!) ಪ್ಯಾರಿಸ್ಸನ್ನು ಬಿಟ್ಟಕೂಡಲೇ ವಿಮಾನದಿಂದ ಕೆಳಗೆ ನೋಡಿದಾಗ ಅಲ್ಲಿನ ದೀಪಗಳಿಂದ ಇಡೀ ನಗರವು ಬಣ್ಣಬಣ್ಣದ ಅಮೂಲ್ಯ ರತ್ನ ವೈಢೂರ್ಯಗಳಿಂದ ಕೆತ್ತಲ್ಪಟ್ಟ ಒಂದು ರತ್ನ ಕಂಬಳಿಯಂತೆ ಕಾಣುತ್ತಿತ್ತು. ಲಂಡನ್ ಹತ್ತಿರ ಬರುವಾಗ ಅಲ್ಲಿ ಹರಡಿದ ಮಂಜನ್ನು (Fog) ಕೊರೆದು ಮಿನುಗುವ ದೀಪಗಳು ಹಳದಿಯಾಗಿದ್ದು ಅನೇಕ ರತ್ನಮಾಲೆಗಳಂತೆ ಕಾಣುತ್ತಿದ್ದುವು.

ನಮ್ಮನ್ನು ಇಂಗ್ಲೆಂಡಿಗೆ ಬರಮಾಡಿಕೊಂಡಿದ್ದ ಏಷಿಯನ್ ಮ್ಯೂಸಿಕ್ ಸರ್ಕಲ್ಲಿನ (Asian Music Circle) ಸ್ಥಾಪಕ ಕಾರ್ಯದರ್ಶಿಗಳಾಗಿದ್ದ ಶ್ರೀ ಅಯನ ದೇವ ಅಂಗಡಿಯವರ ಕುಟುಂಬ ನಮ್ಮನ್ನು ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿ ತಮ್ಮ ವಾಸಸ್ಥಾನಕ್ಕೆ ಕರೆದುಕೊಂಡು ಹೋದರು. ದಾರಿಯಲ್ಲಿ ನಮ್ಮ ಕುತೂಹಲ ದೃಷ್ಟಿ ಹಲವಾರು ವಿಚಿತ್ರ ದೃಶ್ಯಗಳನ್ನು ಕಂಡಿತು. ಭೂಮಿಯ ಒಳಗೆ ಚಲಿಸುವ ರೈಲುಗಳ ನಿಲ್ದಾಣಗಳು; ವಾಹನಗಳ ಚಲನೆಗೆ ಅನುಕೂಲವಾಗುವಂತೆ ಕಟ್ಟಲ್ಪಟ್ಟ ರಸ್ತೆಗಳ ಮೇಲೆ ರಸ್ತೆಗಳು; ಬ್ರಿಟನ್ನಿನ ವಾಸ್ತುಶಿಲ್ಪ; ಫ್ರೆಂಚ್ ಭಾಷೆಯು ಹೋಗಿ ಇಂಗ್ಲಿಷು ನಮ್ಮ ಕಿವಿಯ ಮೇಲೆ ಎಲ್ಲ ಕಡೆಯಿಂದಲೂ ಬಿದ್ದುದು; ಭಾರತದಲ್ಲಿದ್ದಂತೆ ಎಡಗಡೆಯಲ್ಲಿ ವಾಹನಗಳು ಸಂಚರಿಸುವ ಕ್ರಮ ಇತ್ಯಾದಿ, ಇವೆಲ್ಲವೂ ನಮಗೆ ಆನಂದವನ್ನು ಕೊಟ್ಟುವು. ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯಿಂದಾಗಿ ನಮಗೆ ಈ ಜನರ ರೂಢಿ ಸಂಪ್ರದಾಯಗಳು ಅಲ್ಪಸ್ವಲ್ಪ ತಿಳಿದು ಬಂದುದ್ದರಿಂದ ಈ ದೇಶ ನಮಗೆ ಫ್ರಾನ್ಸಿನಷ್ಟು ಅಪರಿಚಿತವಾದುದಲ್ಲವೆಂಬ ಭರವಸೆ ಸ್ವಲ್ಪ ಸಮಯದಲ್ಲೇ

ಸಿಕ್ಕಿತು. ಬ್ರಿಟಿಷ್ ಸಾಮ್ರಾಜ್ಯದ ಅನುಭವವಿದ್ದ ನಮಗೆ ಈ ದೇಶ ಪರಿಚಿತವಾದ ದೇಶವೆಂತಲೇ ತೋರಿತು.

* * * *

ಲಂಡನ್
28 – 11 – 1965

ಮುದ್ದು ಮಕ್ಕಳೇ,

........A. M. C. ಕೇಂದ್ರ ಸ್ಥಾನದಲ್ಲಿ ನಮಗೊಂದು ಅಂದವಾದ ಕೋಣೆಯನ್ನು ಮಹಡಿಯ ಮೇಲೆ ಬಿಟ್ಟುಕೊಟ್ಟಿದ್ದಾರೆ. ಕಿಟಕಿಯಿಂದ ಕಾಣುತ್ತಿದ್ದ ದೃಶ್ಯ ಒಂದು ಹಸುರಾದ ಮೈದಾನ. ಸೇಬಿನ ಮರಗಳಿಂದ ಸೇಬುಗಳು ಒಂದೊಂದಾಗಿ ಉರುಳುವುದನ್ನು ನೋಡುತ್ತೇವೆ! ಶಾಂತತೆ, ಭದ್ರತೆ, ಅನುಕೂಲತೆಯ ಕಲಾ ವಾತಾವರಣವಿರುವ ಈ ಸ್ಥಳದಲ್ಲಿ ನಾವಿಲ್ಲಿ ಬಂದ ಕೆಲಸ ಕಾರ್ಯಗಳನ್ನು ಶೀಘ್ರದಲ್ಲಿಯೇ ಆರಂಭಿಸಲಿದ್ದೇವೆ. ನಮ್ಮ ಪ್ಯಾರಿಸ್ ಪ್ರವಾಸ ನಮ್ಮನ್ನು ದಣುವಿನಿಂದ ತೀರಾ ಸೋಲಿಸಿತ್ತು. ಈಗ ಅಲ್ಲಿಂದ ಬಿಡುಗಡೆ ಹೊಂದಿ ಇಲ್ಲಿ ಆರಾಮವಾಗಿದ್ದೇವೆ. ಈ ಮನೆ ನಮ್ಮ ಬೆಂಗಳೂರಿನ ಮನೆಯಿದ್ದಂತೆ ಇದೆ, ಅನುಕೂಲವಾಗಿ, ಸ್ವತಂತ್ರವಾಗಿ. ಹವೆಯು ಬ್ರಿಟಿಷ್ ಹವೆ–ಕತ್ತಲೆ, ಮೊಬ್ಬು, ಮಳೆ ಹನಿಯುತ್ತಾ ಇದೆ, ಮಂಜು ಕಟ್ಟುವ ಛಳಿ. ಮನೆಯೊಳಗೆ ಸೆಂಟ್ರಲ್ ಹೀಟಿಂಗ್ (Central Heating) ಕೇಂದ್ರೀಯ ಶಾಖ ನಿಯಂತ್ರಣ ಸೌಲಭ್ಯ ಇರುವುದರಿಂದ ಬೆಚ್ಚಗಿನ, ಹಿತಕರವಾದ ನಮಗೆ ಒಗ್ಗುವ ವಾತಾವರಣವಿದೆ. ಇಲ್ಲಿ ಮಧ್ಯಾಹ್ನ 4 ಗಂಟೆಗೇ ಕತ್ತಲಾಗುತ್ತದೆ. ಕತ್ತಲೆಯೊಡನೆ ಛಳಿ ಮತ್ತು ಮಂಜು ಬೀಳುವಿಕೆಗೆ ಪ್ರಾರಂಭ. ಉತ್ಸಾಹ ಶೂನ್ಯ ಹವೆಯಾಗಿದ್ದರೂ ನಮ್ಮ ಕೆಲಸಕ್ಕೆ ಇದು ಉಪಯುಕ್ತವಾದ ಹವೆಯೆಂದು ಬಗೆದಿದ್ದೇವೆ........ಈ ಮನೆಯಲ್ಲಿ ಪೂರ್ವ ಪಾಶ್ಚಾತ್ಯ ಸಂಸ್ಕೃತಿಗಳು ಮಿಲನವಾಗಿವೆ.

ಶ್ರೀ ಅಂಗಡಿಯವರು ನಮ್ಮ ಕಲೆಗೆ ಅಗತ್ಯವಿದ್ದ ಅವಕಾಶಗಳನ್ನು ಕಲ್ಪಿಸಿಕೊಡಲು ಕಷ್ಟಪಡುತ್ತಿದ್ದಾರೆ. ನೃತ್ಯ ತರಗತಿಗಳು ಆರಂಭವಾಗಿದ್ದು ಅವನ್ನು ನಡೆಸುವ ಕೆಲಸವನ್ನು ಕೈಗೊಂಡಿದ್ದೇವೆ. ಸಾಯಂಕಾಲ ಬಿಡುವಿದ್ದಾಗ ಮನೆಯಲ್ಲೇ ಕುಳಿತುಕೊಂಡು ಟೆಲಿವಿಝನ್ (Television) ನೋಡುತ್ತೇವೆ. ಅದರಲ್ಲಿ ವಿನೋದ ಕಾರ್ಯಕ್ರಮಗಳನ್ನು ನೋಡುತ್ತಿದ್ದಂತೆ ನಿಮ್ಮನ್ನೆಲ್ಲಾ ಬಹಳವಾಗಿ ಜ್ಞಾಪಿಸಿಕೊಳ್ಳುತ್ತೇವೆ; ಮುಖ್ಯವಾಗಿ ತಂದೆಯವರನ್ನು. ಅವರು ಟೆಲಿವಿಝನನ್ನು ತುಂಬಾ ಮೆಚ್ಚು

ತ್ತಿದ್ದರು. ವಯಸ್ಸಾದವರಿಗೆ ಮತ್ತು ಮನೆಬಿಟ್ಟು ಹೊರಗೆ ಹೋಗಲು ಅವಕಾಶ ಸಿಗದ ನಮ್ಮ ಅಡಿಗೆಯಾಕೆ ಗೌರಿಯಂತಹವರಿಗೆ ಟೆಲಿವಿಝನ್ ಒಂದು ವರವೇ ಸರಿ. ಮನೆಯೊಳಗೇ ಇದ್ದು ಕಣ್ಣುಮುಂದೆ ಹಾದುಹೋಗುವ ವಿವಿಧ ವಿನೋದಾವಳಿಗಳನ್ನೂ ಮನರಂಜಿಸುವ ದೃಶ್ಯಗಳನ್ನೂ ನೋಡುತ್ತಾ ಕಾಲಕಳೆಯಬಹುದು. ಅಲ್ಲದೆ ದೈನಿಕ ಪತ್ರಿಕೆಗಳನ್ನು ಓದಲು ಸಮಯ ಸಿಗದೆ ಇರುವವರೂ ಈ ಟೆಲಿವಿಝನ್ ಮೂಲಕ ಲೋಕದ ಕ್ಷಣಕ್ಷಣದ ಹೊಸ ಸುದ್ದಿ, ಜಗತ್ತಿನ ಎಲ್ಲ ವರ್ತಮಾನಗಳನ್ನು ತಿಳಿದು ಕೊಳ್ಳಬಹುದು........

ಇತಿ ನಿಮ್ಮ
ಅಮ್ಮ.

*　　*　　*　　*

ಲಂಡನ್
30–11–1965

ಮುದ್ದು ಅಮ್ಮ,

........ನಮ್ಮ ಊಟ ತಿಂಡಿಗಳ ವಿಚಾರವಾಗಿ ಯೋಚಿಸುತ್ತೀರಲ್ಲವೇ? ಈ ನಗರದಲ್ಲಿ ಎಲ್ಲ ಜನಾಂಗಗಳಿಗೆ ಬೇಕಾದ ಆಹಾರ ಪದಾರ್ಥಗಳು ಸಿಗುತ್ತವೆ. ನಮ್ಮ ಭಾರತೀಯ ಅಡಿಗೆಗೆ ಬೇಕಾಗುವ ಸಾಮಾನುಗಳು ಯಥೇಷ್ಟವಾಗಿ ಇಲ್ಲಿ ದೊರೆಯುತ್ತವೆ. ಭಾರತದಲ್ಲಿ ಕೂಡ ಈಗ ನೋಡಲು ಅಪರೂಪವಾದ ಪದಾರ್ಥಗಳು ಇಲ್ಲಿ ಸುಲಭವಾಗಿ ಸಿಗುತ್ತವೆ. ಅಲ್ಲದೆ ಇವು ನಮ್ಮ ದೇಶದಲ್ಲಿ ಸಿಕ್ಕುವ ಸರಕಿಗಿಂತ ಚೆನ್ನಾಗಿರುತ್ತವೆ. ಬೇಳೆಯನ್ನು ಮಾಡಬೇಕಂತಿಲ್ಲ. ಅಕ್ಕಿಯನ್ನು ಸೋಸಬೇಕಂತಿಲ್ಲ. ಎಲ್ಲವನ್ನೂ ಮೊದಲೇ ಶುಚಿಮಾಡಿ ಪ್ಲಾಸ್ಟಿಕ್ ಚೀಲಗಳಲ್ಲಿಟ್ಟು ಮಾರುತ್ತಾರೆ. ಹಾಗೆ ಮಾಡದಿದ್ದರೆ ಇಲ್ಲಿನ ಅಂಗಡಿದಾರರಿಗೆ ತಮ್ಮ ಸರಕನ್ನು ಮಾರಲು ಸರ್ಕಾರದವರು ಅನುಮತಿ (Licence) ಕೊಡುವುದಿಲ್ಲವಂತೆ. ಅಕ್ಕಿಯನ್ನು ತೊಳೆಯದೆ ಕೂಡಾ ಚೀಲದಿಂದ ಹಾಗೆಯೇ ಕುದಿಯುವ ನೀರಿನಲ್ಲಿ ಹಾಕಿ ಅನ್ನ ಮಾಡಬಹುದು. ಅಷ್ಟು ಶುಚಿಯಾದ, ಒಳ್ಳೆ ಘಮಘಮಿಸುವ ಅಕ್ಕಿ. ಈ ಅನ್ನಕ್ಕೆ ಹಾಲು ಸಕ್ಕರೆ ಬೆರೆಸಿದರೆ ಪಾಯಸದಂತೆ ರುಚಿಕರವಾಗಿರುತ್ತದೆ. ಇಲ್ಲಿ ಆಹಾರದ ಅಭಾವವೇನೂ ಇಲ್ಲ. ಎಷ್ಟು ಬೇಕಾದರೂ ಸಿಗುತ್ತದೆ. ಏನು ಬೇಕಾದರೂ ಸಿಗುತ್ತದೆ. ಹಾಲಿನ ಬುಡ್ಡಿಗಳನ್ನು ಪ್ರತಿಯೊಂದು ಮನೆಯ ಮುಂದೆ ದಿನ ಬೆಳಗುವ ಮೊದಲೇ ಸಾಲು ಸಾಲಾಗಿ ಇಟ್ಟು ಹೋಗುವ ವಾಹನಗಳಿವೆ. ರಸ್ತೆಗಳಲ್ಲೆಲ್ಲಾ ಹಾಲನ್ನು ಮಾರುವ "ಒಟೊಮೆಟ್ಸ್" (Automats ಸ್ವಯಂ ಚಲನ ಯಂತ್ರಗಳು) ಇವೆ. ಆರು ಪೆನ್ನಿನ

ನಾಣ್ಯ (ಸಾ. 38 ಪೈಸೆ) ಈ ಯಂತ್ರದಲ್ಲಿ ಹಾಕಿದರೆ ರಟ್ಟಿನ ಒಂದು ಚೀಲದಲ್ಲಿ ದಪ್ಪವಾದ ಹಾಲು ಸಿಗುತ್ತದೆ. ಬಾಯಾರಿದರೆ ದಾರಿಯಲ್ಲಿ ಸಿಗುವ ಈ ಹಾಲನ್ನು ಕುಡಿದು ಚೀಲವನ್ನು ಬಿಸಾಡುತ್ತಾರೆ. ನೀರಿನಂತೆ ಸಿಗುವ ಅನುಕೂಲತೆ ಇಲ್ಲಿ ಹಾಲಿಗಿದೆ!

ಫ್ರಾನ್ಸಿನಲ್ಲಿದ್ದಂತೆ ಇಲ್ಲಿಯೂ ಸಹ ಕೆಲಸಕ್ಕೆ ಆಳುಗಳಿಲ್ಲ. ಮನೆಗೆಲಸವನ್ನು ಮಾಡಲು ಮನೆಯವರೆಲ್ಲರೂ ಸಿದ್ಧರಾಗಿರಬೇಕು. ಲಕ್ಷಾಧೀಶರ ಮನೆಗಳಲ್ಲೂ ಮನೆಗೆಲಸವನ್ನು ಅವರೇ ಮಾಡಬೇಕು. ನಮ್ಮ ಭಾರತದಲ್ಲಿ ಲಕ್ಷಾಧೀಶರ ಪತ್ನಿಯರು ಮುಸುರೆ ತಿಕ್ಕುವದನ್ನು ನಾವೆಂದಾದರೂ ಕಾಣುತ್ತೇವೆಯೇ? ಗಂಡಸರು ಕೂಡ ಇಲ್ಲಿ ಮನೆಗೆಲಸ ಮಾಡಲೇಬೇಕಾಗುತ್ತದೆ. ಅಡಿಗೆ ಮಾಡುವುದರಿಂದ ಹಿಡಿದು, ಪಾತ್ರೆ ತೊಳೆಯುವದು, ಬಟ್ಟೆ ಒಗೆಯುವುದು, ಇಸ್ತ್ರಿಮಾಡುವುದು, ಮನೆ ಗುಡಿಸಿ ಶುಚಿಯಾಗಿಡುವುದು ಇತ್ಯಾದಿ ಎಲ್ಲವನ್ನು ಮನೆಯ ಹೆಂಗಸರು, ಗಂಡಸರು, ಮಕ್ಕಳು ಕೂಡಿ ಮಾಡುವುದು ಇಲ್ಲಿನ ದಿನ ನಿತ್ಯದ ರೂಢಿ. ನೀವೆಂದೋ ಬರೆದ "ಕಟುಕ ರೋಹಿಣಿ ಸಂವತ್ಸರದಲ್ಲಿ" ಎಂಬ ನಾಟಕದ ಜ್ಞಾಪಕವಾಗುತ್ತದೆ. "1999 AD" ಎಂಬ ಇಂಗ್ಲಿಷ್ ಚಲಚಿತ್ರವನ್ನು ಅನುಸರಿಸಿ ನೀವು ಬರೆದ ಆ ನಾಟಕದಲ್ಲಿ ಗಂಡಸರು ಮನೆಗೆಲಸ ಮಾಡಿಕೊಂಡಿದ್ದು ಮನೆಯ ಹೆಂಗಸರು ಹೊರಗಿನ ವ್ಯವಹಾರಗಳಲ್ಲಿ, ಕ್ಲಬ್ಬು, ಸಮಾಜ ಇತ್ಯಾದಿಗಳಲ್ಲಿ ಮೆರೆದಾಡುವುದು ಅತಿ ಅಸಹ್ಯಕರವೆಂದು ತೋರುತ್ತಿತ್ತು. ಆದರೆ ಅದೀಗ, ಮುಖ್ಯವಾಗಿ ಇಲ್ಲಿನ ರೂಢಿ ಸಂಪ್ರದಾಯಗಳನ್ನು ನೋಡಿದರೆ, ಅಷ್ಟು ವಿಚಿತ್ರವೆಂದು ಕಾಣುವುದಿಲ್ಲ. ಇಲ್ಲಿ ಗಂಡಸರಿಗೂ ಹೆಂಗಸರಿಗೂ ಇರುವ ಸಮಾನತೆಯ ಕಾರಣದಿಂದಲೂ ಎಲ್ಲರೂ ಎಲ್ಲವನ್ನೂ ಮಾಡಬೇಕಾಗಿ ಬರುವುದರಿಂದಲೂ ಜೀವನ ಯಾವಾಗಲೂ ಒಂದು ಹೋರಾಟದಂತಿದೆ. ಇದಕ್ಕೂ ನಮ್ಮ ಭಾರತದ ಮನೆಯೊಳಗೆ ಸಾಧಾರಣವಾಗಿರುವ ವಾತಾವರಣಕ್ಕೂ ಅದೆಷ್ಟು ವ್ಯತ್ಯಾಸವಿದೆ! ನಮ್ಮಲ್ಲಿ ದುಡಿದು, ದಣಿದು ಬರುವ ಗಂಡಂದಿರನ್ನು ಆದರದಿಂದ ಸ್ವಾಗತಿಸಿ ಅವರನ್ನು ಆರಾಮವಾಗಿರಿಸಿ, ಬಿಸಿ ಬಿಸಿಯಾದ ಅಡಿಗೆ ಬಡಿಸಿ, 'ಯಜಮಾನರು' ಎಂಬ ಮರ್ಯಾದೆಯಿಂದ ಮನೆಯಾಕೆ ನೋಡಿಕೊಳ್ಳುವುದು ನಮ್ಮ ಸ್ತ್ರೀಯರ ಧರ್ಮವೆಂದು ನಾವು ತಿಳಿದುಕೊಳ್ಳುತ್ತೇವೆ. ಆದರೆ ಇಲ್ಲಿ ಹಾಗಲ್ಲ. ಮನೆಯ 'ಯಜಮಾನ'ನು ಎಷ್ಟೇ ದಣಿದು ಮನೆಗೆ ಬರಲಿ, ಅವನು ಕೂಡಲೆ ಮನೆಗೆಲಸಕ್ಕೆ ಸಿದ್ಧನಾಗಿರಬೇಕು. ಮಾಸಿದ ಪಾತ್ರೆಗಳನ್ನಾದರೂ ಕನಿಷ್ಟ ಪಕ್ಷಕ್ಕೆ ತೊಳೆಯಬೇಕು! ಭಾರತದಲ್ಲಿ ಸ್ತ್ರೀಯರಿಗೆ ಸ್ವಾತಂತ್ರ್ಯವಿಲ್ಲವೆಂಬ ತಪ್ಪು ಭಾವನೆ ಇಲ್ಲಿನ ಜನರಿಗಿದೆ. ಸ್ತ್ರೀ ನಮ್ಮ ದೇಶದಲ್ಲಿ ಗೃಹಲಕ್ಷ್ಮಿಯಾಗಿ ಮನೆಯೊಳಗೆ ಒಡತಿಯಾಗಿ ಸಂಸಾರದ ಅಭಿವೃದ್ಧಿಗೆ ಮೂಲವ್ಯಕ್ತಿ; ಅವಳಿಗಿರುವ ಗೌರವ, ಸ್ವಾತಂತ್ರ್ಯ ಇತರರು ಅಸೂಯೆ ಪಡುವಂತಿದೆ. ನಮ್ಮಲ್ಲಿ

ಮನೆಯಾಕೆಗೆ ಇರುವ ಈ ಅಂತಸ್ತು, ಸಮಾಜ ಕೊಡುವ ಗೌರವ, ಬೆಂಬಲ – ಇವೆಲ್ಲ ಪರದೇಶಿಯರಿಗೆ ಕಾಣದ ವಸ್ತುಗಳು........

ಇಲ್ಲಿನ ಜೀವನ ಯಾವಾಗಲೂ ರಭಸದ ಒಂದು ಮುನ್ನುಗ್ಗು, ಹುಚ್ಚು ಆತುರದ ನುಗ್ಗು ನೂಕಲು. ಪ್ರತಿಯೊಂದಕ್ಕೂ ಅವಸರವಸರ, ಯಾವುದಕ್ಕಾಗಿ, ಏತಕ್ಕಾಗಿ, ಯಾರಿಗಾಗಿ ಎಂದು ಯಾರಿಗೂ ತಿಳಿಯದು. ಮನೆ ಗೆಲಸದ ಅನುಕೂಲತೆಗೆ ಬೇಕಾದ ವಿದ್ಯುಚ್ಛಕ್ತಿಯ ಸಲಕರಣಗಳಿವೆ. ದಿನ ನಿತ್ಯದ ಕೆಲಸಕ್ಕಾಗಿ ಹಲವಾರು ಉಪಕರಣಗಳಿವೆ. ಆದರೆ ಈ ಉಪಕರಣಗಳನ್ನು–ಯಂತ್ರ ಗಳನ್ನು–ಚಲಿಸಲು ಮನುಷ್ಯರೇ ಬೇಕಲ್ಲವೇ? ಅವುಗಳ ಸಹಾಯದಿಂದ ಅನೇಕಾನೇಕ ಕೆಲಸಗಳನ್ನು ನಿಮಿಷಾರ್ಧದಲ್ಲಿ ಕುಶಲತೆಯಿಂದ ಮಾಡಲು ಸಾಧ್ಯವಿದ್ದರೂ ಜನರಿಗೆ ಇಲ್ಲಿ ಬಿಡುವೇ ಇಲ್ಲ! ಒಂದು ನಿಮಿಷ ಕೂಡ ಬಿಡುವಿಲ್ಲ ಎಂದರೆ ಆಶ್ಚರ್ಯವೇ ಸರಿ. ಹಾಯಾಗಿ ಒಮ್ಮೆ ಕುಳಿತುಕೊಂಡು ಒಂದಿಷ್ಟು ಹರಟೆ ಹೊಡೆಯಲು ಕೂಡ ಅವರಿಗೆ ಸಮಯವಿಲ್ಲ, ಒಮ್ಮೊಮ್ಮೆ ಇವರ ಸ್ಥಿತಿಗೆ "ಅಯ್ಯೋ, ಪಾಪ" ಎನಿಸುತ್ತದೆ ನಮಗೆ!........

ಇತಿ ನಿಮ್ಮ
ಚಂದಮ್ಮ.

*　　*　　*　　*

ಲಂಡನ್
7–12–1965

ಮುದ್ದು ಮಕ್ಕಳೇ,

ನಾವು ಲಂಡನ್ನಿಗೆ ಬಂದರೂ ಊರೊಳಗಿನ ನಮ್ಮ ಪ್ರಯಾಣ ಭೂಗರ್ಭ ವಾಗಿಯೇ ಇದ್ದುದರಿಂದ ನಮಗೆ ಲಂಡನ್ನಿನ ಸರಿಯಾದ ದರ್ಶನವೇ ಆಗಿರಲಿಲ್ಲ! ನಾವೊಮ್ಮೆ ಲಂಡನ್ ನೋಡಲು ಬಸ್ಸು ದಾರಿಯಾಗಿ ಹೋದೆವು. ಹೊರಟ ಸ್ವಲ್ಪ ಹೊತ್ತಿನಲ್ಲೇ ಕತ್ತಲೆ ಕವಿಯಿತು. ಮಂಜು (Fog) ತುಂಬಿತು. ಕಣ್ಣ ಎದುರಿಗೆ ಒಂದು ಬಿಳೀ ಪರದೆಯಂತಿದ್ದ ಮಂಜು ಮೆಲ್ಲಮೆಲ್ಲಗೆ ಮೇಲಕ್ಕೆ ಹೋದ ನಂತರ ನಮಗೆ ಮುಂದೆ ಕಾಣಲು ಅವಕಾಶವಾಯಿತು. ಮಂಜು ಇರುವ ಸಮಯ ಲಂಡನ್ನಿನ ವಾಹನಗಳ ಚಲಾವಣೆ ಪೂರ್ತಿ ನಿಂತು ಹೋಗುತ್ತದೆ. ಮುಂದೆ ದಾರಿಯೇ ಕಾಣ ದಿದ್ದರೆ ಅವನ್ನು ಚಲಿಸುವುದು ಹೇಗೆ? ಇಲ್ಲಿನ ಜನರಿಗೆ ಹವೆಯನ್ನು ಕುರಿತು ಮಾತ ನಾಡುವುದು ಒಂದು ವಿಶಿಷ್ಟ ಗುಣವಾಗಿದೆ. ಅದೊಂದು ರಾಷ್ಟ್ರೀಯ ಅಭ್ಯಾಸವಾಗಿ

ಬಿಟ್ಟಿದೆ. ಸಂಭಾಷಣೆಯನ್ನು ಆರಂಭ ಮಾಡುವಾಗ ಹವೆಯನ್ನೇ ಚರ್ಚಿಸುತ್ತಾರೆ. ಬಸ್ಸುಗಳಲ್ಲಿ, ಅಂಗಡಿಗಳಲ್ಲಿ, ದಾರಿಯಲ್ಲಿ ನಡೆಯುತ್ತಿರುವಾಗ, ಒಬ್ಬರು ಇನ್ನೊಬ್ಬರನ್ನು ಭೇಟಿಯಾದಾಗ, ಎಲ್ಲೆಲ್ಲಿಯೂ ನಾವು ಮೊದಲು ಕೇಳುವುದು ಹವೆಯನ್ನು ಕುರಿತ ಮಾತು. ಏತಕ್ಕೆ ಬ್ರಿಟಿಷರು ಎಂದೂ ಹವೆಯನ್ನು ಕುರಿತು ಮಾತನಾಡುವುದು ಎಂಬುದನ್ನು ನಾವು ಲಂಡನ್ನಿಗೆ ಬಂದ ಮೇಲೆ ತಿಳಿದೆವು. ಇದರಲ್ಲಿ ಆಶ್ಚರ್ಯವಿಲ್ಲ. ಇಲ್ಲಿ ಹವೆ ಇಂದು ಇದ್ದಂತೆ ನಾಳೆ ಇರುವುದಿಲ್ಲ. ಬೆಳಿಗ್ಗೆ ಇದ್ದ ಹವೆ ಸಾಯಂಕಾಲ ಇರುವುದಿಲ್ಲ. ಯಾವಾಗಲೂ ಅದು ಅಸ್ಥಿರ. ಹೀಗಾಗಿ ಕ್ಷಣ ಕ್ಷಣಕ್ಕೆ ಎಂಬಂತೆ ಬದಲಾಗುವ ಹವೆಯನ್ನು ಕುರಿತು ಮಾತನಾಡಲು ಯಾವಾಗಲೂ ಅವಕಾಶವಿರುತ್ತದೆ. ಬೆಳಿಗ್ಗೆ ಎದ್ದ ಕೂಡಲೇ ಕಿಟಕಿಯ ಪರದೆಗಳನ್ನು ಪಕ್ಕಕ್ಕೆ ಸರಿಸಿದರೆ ತಕ್ಷಣ ಅಂದಿನ ಹವಾಮಾನದ ಗುಣ ಲಕ್ಷಣಗಳ ಅಲ್ಪ ಸ್ವಲ್ಪ ಅರಿವಾಗುತ್ತದೆ. ಒಮ್ಮೊಮ್ಮೆ ಮರಗಳ ಮೇಲೆ, ಮನೆಯ ಮೇಲ್ಛಾವಣಿಯ ಮೇಲೆ ಹಿಮದ ಗಡ್ಡೆಗಳನ್ನು ನೋಡುತ್ತೇವೆ. ಒಮ್ಮೆ ಮಂಜು, ಒಮ್ಮೆ ತುಂತುರು ಹನಿ, ಕೆಲವೊಮ್ಮೆ ಬಿಸಿಲು, ಹೆಚ್ಚಾಗಿ ಮಳೆ, ಮೊಬ್ಬು, ಕತ್ತಲೆ—ಇದು ಲಂಡನ್.

ಮಳೆಯಲ್ಲೇ ನಾವು ಮಹಾರಾಣಿ ಎಲಿಜಬೆತ್ II ರ ಅರಮನೆಯನ್ನು ನೋಡಿದೆವು. ಅದನ್ನು ನೋಡಿ ನಮಗಂತೂ ತುಂಬಾ ನಿರಾಶೆಯಾಯಿತು. ಹೊರಗಿನಿಂದ ನೋಡಲು ಅದು ನಮ್ಮ ಮೈಸೂರ್‌ಬ್ಯಾಂಕ್ ಕಟ್ಟಡದಂತಿತ್ತು. ಅದಕ್ಕೆ ಹೋಲಿಸಿದರೆ ನಮ್ಮ ಮೈಸೂರು ಮಹಾರಾಜರ ಅರಮನೆ ವೈಭವದ ಅರಮನೆಯೇ. ಆದರೆ ಬ್ರಿಟಿಷ್ ರಾಜ್ಯದ ಅರಸರ ಚಕ್ರಾಧಿಪತ್ಯದ ಚರಿತ್ರೆಯನ್ನು ಓದಿ ತಿಳಿದ ನಮಗೆ ಆ ಅರಮನೆಯಲ್ಲಿ ಹಿಂದಿನ ಕಾಲದಿಂದ ವಾಸಿಸಿದ್ದ, ಪ್ರೀತಿಸಿದ್ದ, ಮರಣ ಹೊಂದಿದ್ದ ಅನೇಕಾನೇಕ ರಾಜ್ಯಪಾಲರ ನೆನಪಾಗಿ, ನಮ್ಮ ಮನಸ್ಸು ಚರಿತ್ರೆಯ ಒಂದು ಅತಿ ದೊಡ್ಡ ಪ್ರಪಂಚದಲ್ಲೇ ಹಾರಾಡಿತು.

ಸೆಂಟ್ ಜೇಮ್ಸ್ (St. James) ಪಾರ್ಕಿನಲ್ಲಿ ಸ್ವೇಚ್ಛೆಯಾಗಿ ಸುತ್ತಾಡಿದೆವು. ಎಂತಹ ಶಾಂತ ವಾತಾವರಣ! ಶಾಂತವಾಗಿ ಹರಿಯದ ಒಂದು ನದಿ, ಎರಡೂ ದಂಡೆಗಳಲ್ಲಿ 'ವೀಪಿಂಗ್ ವಿಲ್ಲೋ' ಗಿಡಗಳ (Weeping Willow) ಒಂದು ಬಗೆಯ ಹಬ್ಬು ಗಿಡ ಬೀಳಲುಗಳ ನಿಶ್ಶಬ್ದತೆ, ಛಳಿಗಾಲವಾದುದರಿಂದ ಎಲೆಗಳೆಲ್ಲಾ ಉದುರಿ ಅಸ್ಥಿಪಂಜರಗಳಂತೆ ನಿಂತಿರುವ ಮರಗಳು, ಅವುಗಳ ಮೇಲೆ ಹರಡಿರುವ ಮಂಜು, ನದಿಯಲ್ಲಿ ಸುಲಲಿತವಾಗಿ ತೇಲಿಕೊಂಡು ಹೋಗುತ್ತಿರುವ ಹಂಸಗಳು, ಎಲ್ಲಿ ನೋಡಿದರೂ ಲಾಸ್ಯವಾಗಿ ಹಾರಾಡುತ್ತಿರುವ ಹಕ್ಕಿಗಳ ಗುಂಪು ಗುಂಪುಗಳು. ಸುತ್ತಾಡಲು ಬಂದ ಜನರು ಈ ಹಕ್ಕಿಗಳಿಗೆ ಕಾಳನ್ನೆಸೆದು ಆನಂದ ಪಡುತ್ತಾರೆ. ಎಂತಹ ಗಾಂಭೀರ್ಯದ, ಅಂದದ, ಶಾಂತತೆಯ ದೃಶ್ಯ.

ಲಂಡನ್ ನಗರ ಸುಮಾರು ನಮ್ಮ ಬೊಂಬಾಯಿ ನಗರವಂತಿದೆ. ಆದರೆ ಇಲ್ಲಿನ ಶುಚಿತ್ವ ನಾವು ಮೆಚ್ಚುವಂತಿದೆ. ಅಷ್ಟೊಂದು ಗದ್ದಲವೂ ಜನಸಂದಣಿಯೂ ಇಲ್ಲ. ಆದರೆ ಪ್ಯಾರಿಸಿನಲ್ಲಿದ್ದ ಹಾಗೆ ಸಾಲು ಮರಗಳ ವಿಶಾಲವಾದ ವಿಹಾರ ಮಾರ್ಗಗಳಿಲ್ಲ (Boulevards, ಬುಲೆವಾರಗಳು). ಅಲ್ಲಿರುವ ಹಾಗೆ ರಸ್ತೆಗಳು ಅಗಲವಾಗಿಯೂ ಇಲ್ಲ. ವಾಹನಗಳ ಚಲಾವಣೆಯೂ (Traffic) ಅಲ್ಲಿರುವುದಕ್ಕಿಂತ ಕಡಿಮೆ. ಇಲ್ಲಿನ ದೊಡ್ಡದಾದ ಎತ್ತರವಿರುವ ಕರಿಯ ಟ್ಯಾಕ್ಸಿಗಳನ್ನು ಕಂಡರೆ ನನಗೆ ತುಂಬಾ ಇಷ್ಟ. ಅವುಗಳ ಒಳಗೆ ತುಂಬಾ ಜಾಗವಿರುತ್ತದೆ. ಸಾಮಾನು ಇಡಲು ಡ್ರೈವರನ ಪಕ್ಕ ಅನುಕೂಲವಾದ ಸ್ಥಳವಿರುತ್ತದೆ. ಟ್ಯಾಕ್ಸಿಯ ಗಾಜಿಗೆ ಕಪ್ಪು ಬಣ್ಣವಿರುವುದರಿಂದ ಒಳಗಿದ್ದವರು ಹೊರಗೆ ನೋಡಬಹುದೇ ವಿನಹ ಹೊರಗಿನವರಿಗೆ ಒಳಗಡೆ ಏನೇನೂ ಕಾಣಿಸುವಂತಿಲ್ಲ. ಇಲ್ಲಿನ ಬಸ್ ಸರ್ವಿಸ್ ಕೂಡ ತುಂಬಾ ಅನುಕೂಲವಾಗಿದೆ. ಕೆಂಪು ಬಣ್ಣದ ಡಬ್ಬಲ್ ಡೆಕ್ಕರ್ ಬಸ್ಸುಗಳು. ಬಸ್ಸಿನಲ್ಲಿ ಕಂಡಕ್ಟರ್ ನಗುನಗುತ್ತಾ ಹಾಸ್ಯ ಮಾಡುತ್ತಾ ಪ್ರಯಾಣಿಕರನ್ನು ಟಿಕೆಟ್ಟಿಗಾಗಿ ವಿಚಾರಿಸುತ್ತಾನೆ. ಟಿಕೆಟ್ಟು ಕೊಡಲು ಅಥವಾ ಕೊಳ್ಳಲು ಸಮಯ ಸಾಲದಿದ್ದರೆ, ಪ್ರಯಾಣಿಕರು ಇಳಿಯುವ ಹೊತ್ತಿಗೆ ಪಕ್ಕದಲ್ಲಿ ಕುಳಿತವರ ಹತ್ತಿರ ಟಿಕೆಟ್ಟಿನ ದುಡ್ಡನ್ನು ಕೊಟ್ಟು ಇಳಿಯುತ್ತಾರೆ. ಕಂಡಕ್ಟರನು ಆಮೇಲೆ ಆ ದುಡ್ಡನ್ನು ಈಸುಕೊಂಡು ಟಿಕೆಟ್ಟನ್ನು ತೆಗೆದು ಅಲ್ಲೇ ಹರಿದು ಬಿಸಾಡುತ್ತಾನೆ. ಈ ಪ್ರಾಮಾಣಿಕತೆಗೆ ನಾವು ತುಂಬಾ ಮೆಚ್ಚಿದೆವು. ದೂರದೂರದ ಪ್ರಯಾಣಕ್ಕಾಗಿ ಹಸುರು ಬಣ್ಣದ ಬಸ್ಸುಗಳಿವೆ. ಅವು ಅತಿ ವೇಗದ ಓಟದಿಂದ ಒಂದು ಊರಿಂದ ಇನ್ನೊಂದು ಊರಿಗೆ ನಿಲ್ಲದೆ ಧಾವಿಸುತ್ತವೆ.

ಇಲ್ಲಿನ ಭೂಗರ್ಭ ರೈಲು ಮಾರ್ಗ ಪ್ಯಾರಿಸಿನಲ್ಲಿದ್ದಂತಿಲ್ಲ. ಪ್ಯಾರಿಸಿನಲ್ಲಿ ಅವು ಅತಿ ಸುಂದರವಾಗಿವೆ. ಅಲ್ಲಿ ನಿಮಿಷಕ್ಕೊಂದು ರೈಲು ಬಂದು ಪ್ರಯಾಣಿಕರನ್ನು ಸಾಗಿಸುತ್ತದೆ. ಸ್ವತಶ್ಚಲನದ (Automatic) ಬಾಗಿಲುಗಳಿದ್ದು ರೈಲು ನಿಲ್ಲುವ ಸಮಯ ಹೊಸ ಪ್ರಯಾಣಿಕರು ಪ್ಲ್ಯಾಟ್‌ಫಾರ್ಮಿಗೆ ಬಾರದ ಹಾಗೆ ಮುಚ್ಚುತ್ತವೆ. ಇಳಿದ ಪ್ರಯಾಣಿಕರು ಹೊರಗೆ ಹೋಗುವ ವೇಳೆಗೆ ಅವು ತೆರೆಯುತ್ತವೆ. ಆದ್ದರಿಂದ ಬರುವ ಹೋಗುವ ಜನರ ನೂಕು ನುಗ್ಗಲಾಟ ಇಲ್ಲವೇ ಇಲ್ಲ. ಪ್ರಯಾಣಿಕರ ಅನುಕೂಲತೆಗೆ ಎಲ್ಲೆಲ್ಲೂ ದಾರಿ ತೋರಿಸುವ ಸಂಜ್ಞೆಗಳಿವೆ. ಒಂದು ಚಿಕ್ಕ ಮಗು ಕೂಡ ಈ ಸಂಜ್ಞೆಗಳ ಆಧಾರದಿಂದ ಪ್ರಯಾಣ ಮಾಡಲು ಸಾಧ್ಯವಿದೆ. ಜನರು ಈ ಸಂಜ್ಞೆಗಳಿಗೆ ವಿಧೇಯರಾಗಿ ವರ್ತಿಸುತ್ತಾರೆ. ಲಂಡನ್‌ನ ಭೂಗರ್ಭ ರೈಲುಮಾರ್ಗ ಬೇರೆ ವಿಧವಾಗಿದೆ.

ಇಲ್ಲಿ, ಭೂಗರ್ಭದೊಳಗಿನ ಈ ರೈಲು ಮಾರ್ಗಗಳು ಇಂಜನಿಯರಿಂಗ್

ವಿದ್ಯೆಯ ಅತ್ಯಾಶ್ಚರ್ಯಪಡಿಸುವ ನಿರ್ಮಾಣಗಳು. ಲಂಡನ್ನಿನ ಛಳಿಗಾಲದಲ್ಲಿ ಈ ರೈಲುಮಾರ್ಗವಾಗಿ ಹೋಗುವುದೇ ವಿಹಿತ. ಖರ್ಚು ಕಮ್ಮಿ, ವೇಗ ಹೆಚ್ಚು, ಅಲ್ಲದೆ ಭೂಗರ್ಭದಲ್ಲಿ ಛಳಿ ಕಾಟವಿಲ್ಲ, ಬೆಚ್ಚಗಿರುತ್ತದೆ. ಕೆಲವು ರೈಲು ನಿಲ್ದಾಣಗಳು ಎಷ್ಟು ವಿಸ್ತಾರವಾಗಿವೆಯೆಂದರೆ ನಾವು ಭೂಮಿಯ ಒಳಗಿದ್ದೇವೆ ಎಂಬ ಭಾವನೆಯೇ ಬರುವುದಿಲ್ಲ. ಈ ನಿಲ್ದಾಣಗಳಲ್ಲಿ ವ್ಯಾಪಾರಕ್ಕೆ ಬೇಕುಬೇಕಾದ ಅಂಗಡಿಗಳ ಸಾಲುಗಳಿರುತ್ತವೆ. ಇಂತಹ ನಿಲ್ದಾಣಗಳು ಒಂದರ ಮೇಲೆ ಇನ್ನೊಂದಿರುವುದು ವಿಚಿತ್ರವಲ್ಲವೇ? ಬೇರೆ ಬೇರೆಯಾಗಿದ್ದ ಈ ನಿಲ್ದಾಣಗಳನ್ನು ಜೋಡಿಸಲು ಎಸ್ಕಲೇಟರ್‌ಗಳು (Escalator ನಿಂತಲ್ಲೇ ಜನರನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಒಯ್ಯುವ ವಿಧಾನ) ಇರುವುದರಿಂದ ಜನರಿಗೆ ಮೆಟ್ಟಲು ಹತ್ತುವ ದಣುವಿಲ್ಲ. ಈ 'ಎಸ್ಕಲೇಟರು'ಗಳ ಮೇಲಿಂದ ಕೆಳಗೆ ನೋಡಿದಲ್ಲಿ ಒಂದು ಗುಡ್ಡದ ತುದಿಯಿಂದ ಕೆಳಗೆ ನೋಡಿದಂತೆ ಭಾಸವಾಗುತ್ತದೆ. ಥೇಮ್ಸ್ (Thames) ನದಿಯ ಅಡಿಯಲ್ಲಿಯೂ ಒಂದು ರೈಲು ದಾರಿ ಓಡುತ್ತಿದೆ ಎಂದೊಬ್ಬರು ನನಗೆ ತಿಳಿಸಿದಾಗ ನಾನದನ್ನು ಮೊದಲು ನಂಬಲೇ ಇಲ್ಲ. ಈ ಭೂಗರ್ಭ ರೈಲು ಮಾರ್ಗಗಳಲ್ಲಿ ರೈಲು ಅಪಘಾತಗಳು ಆಗುವುದಿಲ್ಲವಂತೆ! ಆಗಿಲ್ಲವಂತೆ!

ಲಂಡನ್ ನಗರದ ಭೂಮಿಯ ಅಡಿಯಲ್ಲಿ ವಿಧವಿಧವಾದ ಜೀವನ ನಡೆಯುತ್ತದೆ. ಬಹಳ ಜನ ಭೂಮಿಯ ಒಳಗಿನ ಮನೆಗಳಲ್ಲಿ ವಾಸಮಾಡುತ್ತಾರೆ. ಹಲವಾರು ಚಿತ್ರಮಂದಿರಗಳೂ, ರಂಗಮಂದಿರಗಳೂ, ವ್ಯಾಪಾರಸ್ಥಳಗಳೂ ಭೂಗರ್ಭದಲ್ಲಿವೆ. ಮೇಲೆ ರಸ್ತೆಗಳಲ್ಲಿ ನಡೆಯುವಾಗ ಇವುಗಳ ಇರವು ಗೊತ್ತಾಗುತ್ತದೆ. ಆ ಕಟ್ಟಡಗಳಿಗೆ ಬೆಳಕು, ಗಾಳಿ ಕೊಡುವ ಕಿಟಕಿಗಳನ್ನು ರಸ್ತೆಯ ಮೇಲೆ ಕಾಣಬಹುದು. ವಾಹನಗಳು ಬಿಡುವಿಲ್ಲದೆ ಓಡಾಡುವ ರಸ್ತೆಗಳನ್ನು ದಾಟಲು ಪಾದಚಾರಿಗಳಿಗೆ ಅನುಕೂಲವಾಗುವಂತೆ ನೆಲವನ್ನು ಕೊರೆದು ಮಾಡಿದ ಕಾಲುದಾರಿಗಳೂ, ಸುರಂಗ ಮಾರ್ಗಗಳೂ ಇವೆ. ನಾವೊಂದು ರಶ್ಯಿಯನ್ ಬ್ಯಾಲೆಯ 'ಸ್ಲೀಪಿಂಗ್ ಬ್ಯೂಟಿ' (Sleeping Beauty) ಎಂಬ ಚಿತ್ರವನ್ನು ನೋಡಿದುದು ಭೂಗರ್ಭದೊಳಗಿನ ಒಂದು ಚಿತ್ರ ಮಂದಿರದಲ್ಲೇ. ಲೆನಿನ್‌ಗ್ರಾಡಿನ ಕಿರೋಫ್ ಬ್ಯಾಲೆಯ ಮುಖ್ಯಸ್ಥನಾದ ಕಾನ್‌ಸ್ಟಂಟನ್ ಸರ್ಗೆಯೆಫ್ (Konstanten Sergeyev) ಎಂಬಾತನು ರಚಿಸಿದ ಈ ಬ್ಯಾಲೆ ನೋಡಲು ಅತ್ಯಂತ ಮನೋಹರವಾಗಿತ್ತು. ಆ ರಂಗಮಂದಿರವೂ ಒಂದು ಕನಸಿನ ಮಂದಿರದಂತೆ ರಮ್ಯವಾಗಿತ್ತು. ರಸ್ತೆಯಿಂದ ಕೆಳಗೆ ಇಳಿಯುತ್ತಲೇ ಮೆಟ್ಟಲುಗಳ ಮೇಲೆ ಅಂದವಾದ ದಪ್ಪ ಹೊದಿಕೆಯನ್ನು ಹಾಸಿ ಬೆಚ್ಚಗೆ ಮಾಡಿದ್ದರು. ಇಳಿದು ಕೆಳಗೆ ಹೋಗುತ್ತಲೇ ಒಂದು ಹೊಸ ಪ್ರಪಂಚ ವಿಸ್ತಾರವೇ ನಮಗೆ ಕಂಡಿತು. ಇಂತಹ ಇನ್ನೂ ಎಷ್ಟು ಕಟ್ಟಡಗಳು ಭೂಗರ್ಭ

ದೊಳಗೆ ಇವೆಯೋ, ದೇವರೇ ಬಲ್ಲ. ಲಂಡನ್ ನಗರ ನಿಜಕ್ಕೂ ಒಂದು ಭೂತಾಕಾರ ವಿಸ್ತಾರದ ಅತಿ ದೊಡ್ಡ ಅಂತರರಾಷ್ಟ್ರೀಯ ನಗರ.

ಲಂಡನ್ನಿನಲ್ಲಿ ಒಂದು ತುದಿಯಿಂದ ಇನ್ನೊಂದು ತುದಿಗೆ ಹೋಗಬೇಕಾದರೆ ಅತಿ ವೇಗದ ವಾಹನಗಳಲ್ಲೂ ಗಂಟೆಗಟ್ಲೆ ಪ್ರಯಾಣ ಮಾಡಬೇಕಾಗುವುದು. ಲಂಡನ್ನಿಗೆ ಆದಿ ಅಂತ್ಯವಿಲ್ಲ. ಯಾರೋ ಒಮ್ಮೆ ಅಂದಂತೆ – "ಲಂಡನ್ ನಗರದ ಬೇಸರ ಬಂದರೆ ನಿಮಗೆ ಜೀವನದಲ್ಲಿ ಬೇಸರ ಬಂದಂತೆಯೇ ಸರಿ!" ಎಂದು.

ಇತಿ ನಿನ್ನ
ಅಮ್ಮ.

*　　*　　*　　*

ಲಂಡನ್
25–12–1965

ಮುದ್ದು ಅಮ್ಮ,

ನಿಮ್ಮ ಪತ್ರ ಕೈಸೇರಿತು. ಎಷ್ಟು ಸಲ ಅದನ್ನೋದಿದೆ ಎಂದು ನನಗೆ ತಿಳಿಯದು. ಮನೆಯ ಎಲ್ಲ ವಿಷಯಗಳನ್ನು ಕುರಿತು ಎಷ್ಟು ಕೂಲಂಕುಷವಾಗಿ ಬರೆದಿದ್ದೀರಿ! ತುಂಬಾ ಸ್ವಾರಸ್ಯವುಳ್ಳ ನಿಮ್ಮ ಉದ್ದದ ಪತ್ರವನ್ನೋದಿ ನಮ್ಮ ಮನೆಯ ಅಂಗಳದ ಕಲ್ಲಿನ ಆಸನದ ಮೇಲೆ ಕುಳಿತು ನೀವೂ ನಾನೂ ಹರಟೆ ಹೊಡೆದಂತೆ ಅನುಭವವಾಯಿತು. ಮನೆಗೆ ಈಗಲೇ ಹಾರಿಹೋಗೋಣವೇ ಎಂಬ ಆಸೆಯಾಯಿತು. ಇದೇ ರೀತಿ ಆಗಾಗ್ಗೆ ಪತ್ರ ಬರೆಯಿರಿ ಅಮ್ಮ.

ಕ್ರಿಸ್‌ಮಸ್ ಹಬ್ಬವನ್ನು ನಾವೀಸಲ ಇಂಗ್ಲೆಂಡಿನಲ್ಲಿ, ಲಂಡನ್ನಿನಲ್ಲಿ, ಕಳೆಯುವಂತಾಯಿತು. ಇಂಗ್ಲಿಷರ ಒಂದು ಕುಟುಂಬದವರು ಜರುಗಿಸಿದ ಈ ಹಬ್ಬದಲ್ಲಿ ನಾನು ಕುತೂಹಲವಾಗಿ ಭಾಗವಹಿಸಿದೆ. ಬೆಳಗಾದೊಡನೆ ಮನೆಯ ಮಕ್ಕಳು ಸಂತೋಷದಿಂದ ಗದ್ದಲಮಾಡುವುದನ್ನು ಕೇಳಿದೆ. ರಾತ್ರಿ ಹೊತ್ತು ಅವರು ನಿದ್ದೆ ಹೋದಾಗ ಅವರಮ್ಮನು ಹಾಸಿಗೆಗೆ ತಗಲಿ ಹಾಕಿದ್ದ ಕಾಲುಚೀಲಗಳೊಳಗೆ ಅವರಿಗಾಗಿ ತುಂಬಿಸಿಟ್ಟಿದ್ದ ಹಬ್ಬದ ಉಡುಗೊರೆಗಳನ್ನು ಬೆಳಿಗ್ಗೆ ಎದ್ದಾಕ್ಷಣ ನೋಡಿ ಸಂತಸದಿಂದ ಹಾಕಿದ ಮಕ್ಕಳ ಕೇಕೆ! ದೀಪಾವಳಿ ದಿನ ನಮ್ಮ ಮಕ್ಕಳು ಬೆಳಗಾಗುವ ಮೊದಲೇ ಸಡಗರದಿಂದ ಏಳುವಂತೆ ಈ ಹಬ್ಬದ ದಿನ ಇಲ್ಲಿಯ ಮಕ್ಕಳು ತಮ್ಮ ತಮ್ಮ ಉಡುಗೊರೆಗಳಿಗಾಗಿ ಬೇಗನೆ ಎದ್ದು ಬಿಡುತ್ತಾರೆ. ಕ್ರಿಸ್‌ಮಸ್ ಮರವನ್ನಂತೂ

ವಿದ್ಯುಚ್ಛಕ್ತಿ ದೀಪಗಳ ತೋರಣಗಳಿಂದ ಅಲಂಕಾರವಾಗಿ ಸಿಂಗರಿಸುತ್ತಾರೆ – ನಾವು ನಮ್ಮ ಹಬ್ಬದ ದಿನಗಳಲ್ಲಿ ದೇವರ ಮಂಟಪವನ್ನು ಸಿಂಗರಿಸುವಂತೆ. ಕ್ರಿಸ್‌ಮಸ್ ಕಾರ್ಡುಗಳನ್ನು ಎಲ್ಲ ಕೋಣೆಗಳಲ್ಲೂ ತೂಗು ಹಾಕುತ್ತಾರೆ.

ಹಬ್ಬದ ಊಟದಲ್ಲಿ ಮನೆಯವರೆಲ್ಲ ಕೂಡಿ 25 ಪೌಂಡು ತೂಕದ ಒಂದು ದೊಡ್ಡ ಟರ್ಕಿ ಹಕ್ಕಿಯನ್ನು ಬೇಯಿಸಿ ಭುಜಿಸಿದರು. ಟರ್ಕಿ ಹಕ್ಕಿಯನ್ನು ಭುಜಿಸುವುದು ಈ ಹಬ್ಬದ ಒಂದು ವಿಶಿಷ್ಟ ಸಂಪ್ರದಾಯ. ಇದಲ್ಲದೆ ದೊಡ್ಡ ಗಾತ್ರದ ಒಂದು ಕ್ರಿಸ್‌ಮಸ್ ಕೇಕನ್ನು (Cake) ಮಾಡಿಟ್ಟಿದ್ದರು. ಊಟದ ಸಮಯ ಅದರ ಮೇಲೆ ಬ್ರಾಂದಿಯನ್ನು (Brandy) ಚಿಮುಕಿಸಿ ಅದಕ್ಕೆ ಕಿಚ್ಚನ್ನು ಹತ್ತಿಸಿದರು. ಈ ಭಕ್ಷ್ಯ ವಿಶೇಷದೊಳಗೆ ನಾಣ್ಯಗಳನ್ನು ಹಾಕಿರುತ್ತಾರೆ. ಅದೃಷ್ಟವಂತರಿಗೆ ಮಾತ್ರ ಅದನ್ನು ತಿನ್ನುವಾಗ ಈ ನಾಣ್ಯಗಳು ಸಿಕ್ಕುವುವಂತೆ ! ಬೇಕಾದಷ್ಟು ಹಣ್ಣು ಹಂಪಲನ್ನು ಮೇಜಿನ ಮೇಲಿಟ್ಟಿದ್ದರು. ಅದೇ ರೀತಿ ಬೇಕುಬೇಕಾದ ಪಾನೀಯಗಳೂ ಇದ್ದುವು. ಈ ಹಬ್ಬದ ಊಟ ಮಧ್ಯಾಹ್ನ 1–30 ಗಂಟೆಗೆ ಆರಂಭವಾಗಿ 3–30 ಗಂಟೆಯವರೆಗೆ ಸಾಗಿತು. ಊಟದ ಸಂಭ್ರಮದಲ್ಲಿ ರಾಣಿ ಎಲಿಝಬೆತ್ತಳು ಅಂದು ರಾಷ್ಟ್ರಕ್ಕೆ ನೀಡುವ ಕ್ರಿಸ್‌ಮಸ್ ಸಂದೇಶವನ್ನು ಟೆಲಿವಿಝನಿನಲ್ಲಿ ಕೇಳಲು ನಾವು ಮರತೇ ಬಿಟ್ಟೆವು.

ಎಷ್ಟೋ ದಿನಗಳ ಮುಂಚಿತವಾಗಿ ಇಲ್ಲಿನ ಜನರೆಲ್ಲ ಈ ಹಬ್ಬವನ್ನು ಎದುರು ನೋಡುವ ಉತ್ಸಾಹ, ಸಡಗರ ; ತಮ್ಮ ತಮ್ಮ ಆಪ್ತೇಷ್ಟರಿಗೆಲ್ಲ ಹಬ್ಬದ ಶುಭಾಶಯಗಳನ್ನು ತಪ್ಪದೆ ಕಳಿಸಲು ಅವರು ಪಡುವ ಜಾಗರೂಕತೆ; ಕುಟುಂಬದವರೆಲ್ಲರೂ ಹಬ್ಬದ ದಿನ ಒಟ್ಟಿಗೆ ಸೇರಿ, ಒಬ್ಬರಿಗೊಬ್ಬರು ಶುಭಾಶಯವನ್ನು ಬಯಸಿ, ಉಡುಗೊರೆಗಳನ್ನು ಕೊಟ್ಟು ಅಥವಾ ಸ್ವೀಕರಿಸಿ, ಸುಖಸಂತೋಷದಿಂದ ಹಬ್ಬವನ್ನು ಆಚರಿಸುವ ಆತ್ಮೀಯ ರೀತಿ ಕ್ರಮಗಳು; ಹತ್ತಿರವಿಲ್ಲದ ತಮ್ಮ ತಮ್ಮ ಆಪ್ತೇಷ್ಟರನ್ನು ಕುರಿತು ಮಾಡುವ ಸವಿನೆನವರಿಕೆಗಳು, ಅವರಿಗಾಗಿ ಪ್ರತ್ಯೇಕಿಸಿಡುವ ಉಡುಗೊರೆಗಳು ; ಹಬ್ಬದ ಕೀರ್ತನೆಗಳನ್ನು ಹಾಡುವ ಕೀರ್ತನಕಾರರು (Xmas Carol Singers) ತಂಡ ತಂಡವಾಗಿ ಮನೆಯ ಮುಂದೆ ಬಂದು ಹಾಡುವುದು ; ಪ್ರಾರ್ಥನಾ ಮಂದಿರಗಳಲ್ಲಿ ಘನ ಗಂಭೀರವಾಗಿ ನಡೆಯುವ ಪ್ರಾರ್ಥನಾ ಕ್ರಮಗಳು ಇವೆಲ್ಲವೂ ಈ ಸಮಯ ಅತ್ಯಂತ ಸುಂದರವಾದ, ಮನಸ್ಸಿನೊಳಗೆ ಯಾವಾಗಲೂ ನಿಲ್ಲುವ ದೃಶ್ಯಗಳು.

ಈ ಸಮಯದಲ್ಲಿ ಎಲ್ಲೆಲ್ಲೂ ನಡೆಯುವ ವಿನೋದದ ಕಾರ್ಯಕ್ರಮಗಳಿಗೆ ಅಂತ್ಯವೇ ಇಲ್ಲ. ರಾತ್ರಿ ವಿನೋದ ಮಂದಿರಗಳಲ್ಲೊಂದಾದ ಇಲ್ಲಿನ ಈವ್ (Eve) ಎಂಬ ಮಂದಿರ ಪ್ಯಾರಿಸಿನ ಅದ್ಭುತವಾದ ರಾತ್ರಿ ಮಂದಿರಗಳನ್ನು ಮೀರಿಸುತ್ತದೆ ಎಂಬುದಾಗಿ ಹೇಳುತ್ತಾರೆ. ಜಾನಪದ ಗೀತೆಗಳನ್ನು ಹಾಡುವ ಸ್ಥಳಗಳು, ಜೂಜಾಡುವ ಸ್ಥಳಗಳು, ಮಕ್ಕಳಿ

ಗಾಗಿ ಏರ್ಪಡಿಸಿರುವ ಹಾಸ್ಯ ವಿನೋದಗಳು, ಆಟಗಳು, ಕಾರ್ಟೂನ್ (Cartoon) ಚಿತ್ರಗಳನ್ನು ತೋರಿಸುವ ಚಲನ ಚಿತ್ರಮಂದಿರಗಳು ಇತ್ಯಾದಿ, ಇತ್ಯಾದಿ ಯಾವುದು ಇಲ್ಲ, ಯಾವುದು ಬೇಕು ಎಲ್ಲವೂ ಇದೆ ಈ ಲಂಡನ್ನಿನಲ್ಲಿ! ವಿನೋದ ಕಾರ್ಯಕ್ರಮ ಗಳನ್ನೆಲ್ಲಾ ನೋಡಿ ಆನಂದಿಸಲು ಮಾತ್ರ ಸಮಯ ಒಂದೇ ಇರುವುದಿಲ್ಲ.

ಲಂಡನ್ ನಗರಕ್ಕೆ ಬರುವವರು ಡಿಸೆಂಬರ್ ತಿಂಗಳಲ್ಲಿ ಬರಬೇಕು. ಹಗಲು ರಾತ್ರಿಯೆನ್ನದೆ ಈ ಇಡೀ ವಿಶಾಲವಾದ ನಗರ ಕಣ್ಣು ಕುಕ್ಕುವ ವಿಜೃಂಭಣೆಯಿಂದ ಮೆರೆಯುತ್ತದೆ. ಅಂಗಡಿಗಳಲ್ಲೆಲ್ಲ ಮನಸ್ಸೋಲಿಸುವ, ಕಣ್ಣಿಗೆ ಹಬ್ಬವಾಗಿರುವ ಬೇಕುಬೇಕಾದ ವಸ್ತುಗಳನ್ನು ಶೇಖರಿಸಿ ಅಲಂಕೃತವಾಗಿ ಪ್ರದರ್ಶಿಸುತ್ತಾರೆ. ಜನರು ತಮಗಿಷ್ಟವಾದ ವಸ್ತುಗಳನ್ನು ಕೊಂಡುಕೊಳ್ಳುವ ಸಮಯವನ್ನು ತುಂಬಾ ಆನಂದದಾಯಕವಾಗುವಂತೆ ಈ ಅಂಗಡಿಗಳೆಲ್ಲವೂ ಪ್ರಯತ್ನಿಸುತ್ತವೆ. ದಾರಿ, ರಸ್ತೆ ಗಳಲ್ಲೆಲ್ಲ ವಿದ್ಯುಚ್ಛಕ್ತಿ ದೀಪಗಳ ಅಲಂಕಾರಗಳು, ತೋರಣಗಳ ವೈಭವ, ಕ್ರಿಸ್‌ಮಸ್ ವೃಕ್ಷಗಳ (holly) ನಿತ್ಯ ಹಸನಾದ ಗಿಡಗಳ ಅಂದ ಚಂದ. ನಮ್ಮ ಹಬ್ಬದ ದಿನ ಗಳಲ್ಲಿ ಕಾಲುದಾರಿಯಲ್ಲಿ ಕುಳಿತು ಬಾಳೆಮರ, ಮಾವಿನ ಸೊಪ್ಪು ಮಾರುವಂತೆ ವಿಧ ವಿಧದ ವೃಕ್ಷಗಳನ್ನು ಇಲ್ಲಿ ಮಾರುತ್ತಾರೆ. .... ಚಿಕ್ಕ ಮಕ್ಕಳು, ಯುವಕ-ಯುವತಿಯರು ಉಡುಗೊರೆಯ ಕಟ್ಟುಗಳನ್ನು ಕೈಯಲ್ಲಿ ಹಿಡಿದುಕೊಂಡು ನಗುತ್ತಾ ಓಡಾಡುವ ದೃಶ್ಯ........ಹೆತ್ತವರು ಜೀವನದ ಮೆರುಗನ್ನು ಅನುಭವಿಸಿ, ತೃಪ್ತಿಯಿಂದ ನಡೆಯುವ ದೃಶ್ಯ........ಹಬ್ಬದ ಔತಣವಾದ ಮೇಲೆ ಮನೆಯ ಸಂಸಾರವೆಲ್ಲ ಕ್ರಿಸ್‌ಮಸ್ ಮರದ ಸುತ್ತಲೂ ಸೇರಿಕೊಂಡು, ಮರದಿಂದ ತೂಗುತ್ತಿದ್ದ, ಮರದಡಿಯಲ್ಲಿ ಇಟ್ಟ ಒಂದೊಂದೇ ಕಟ್ಟನ್ನು ಬಿಚ್ಚಿ ಒಬ್ಬರಿಗೊಬ್ಬರು, ಆನಂದದಿಂದ, ಪ್ರೀತಿಯಿಂದ ಅನಿರೀಕ್ಷಿತ ಉಡುಗೊರೆಯನ್ನು ಕೊಡುವ ದೃಶ್ಯ ಚಂದದ ದೃಶ್ಯ, ಇವನ್ನೆಲ್ಲ ಥಕ್ಕನೆ ಮರೆಯುವಂತಿಲ್ಲ. ಈ ಸಮಯದಲ್ಲಿ ಇಲ್ಲಿ ಕುಟುಂಬ ವಾತ್ಸಲ್ಯ, ಪ್ರೇಮ, ಒಗ್ಗಟ್ಟು, ಪರಸ್ಪರ ಅನ್ಯೋನ್ಯತೆ, ತುಂಬಿ ತುಳುಕಾಡುತ್ತಿವೆ. ಈ ಬಿನ್ನಾಣದ ಹಾರ್ದಿಕವಾದ, ಭಾವೋದ್ರೇಕವಾದ ದೃಶ್ಯ ನಮಗೆ ಕಣ್ಣಿಗೊಂದು ಹಬ್ಬವಾಗಿತ್ತು.

ಆದರೆ........ಈ ಕ್ರಿಸ್‌ಮಸ್ ಹಬ್ಬದ ಆಚರಣೆಯಲ್ಲಿ ನಮಗೆ ಕಂಡುಬಂದ ಒಂದೇ ಒಂದು ಕೊರತೆಯೆಂದರೆ, ಅದರಲ್ಲಿ ಸ್ವಲ್ಪವೂ ಧಾರ್ಮಿಕ ಸಂಬಂಧವಿಲ್ಲದಿರು ವುದು ; ಬರೇ ಪ್ರಾಪಂಚಿಕ ವಿಷಯಗಳ ಮೇಲೆ ನಿರ್ಮಾಣ ಮಾಡಿದಂತಿತ್ತು, ಈ ಹಬ್ಬ. ಹಬ್ಬದ ದಿನ ಚರ್ಚಿಗೆ (Church) ಹೋಗಿ ಅನೇಕ ಮಂದಿ ಪ್ರಾರ್ಥಿಸುವ ರಂತೆ. ಆದರೆ ಮನೆಯೊಳಗೆ ಆಚರಿಸಿದ ಈ ಹಬ್ಬ ಯಾವ ರೀತಿಯ ಧಾರ್ಮಿಕ ಲೇಪ ವನ್ನೂ ಪಡೆದಂತಿರಲ್ಲಿಲ್ಲ. ನಮ್ಮ ಗೋಕುಲಾಷ್ಟಮಿ, ಗಣೇಶೋತ್ಸವ ಮುಂತಾದ ಹಲ ವಾರು ಹಬ್ಬಗಳಲ್ಲಿ ಎಷ್ಟು ಧಾರ್ಮಿಕ ಸಂಪ್ರದಾಯಗಳಿವೆ, ಅದೆಷ್ಟು ಆಧ್ಯಾತ್ಮಿಕ ಭಾವನೆ

ಗಳಿಂದ ಕೂಡಿರುತ್ತವೆ! ಹಿಂದುಗಳಿಗೆಲ್ಲಾ ಸಾಧಾರಣವಾಗಿ ಮನೆಯಲ್ಲೇ ದೇವರ ಮನೆ ಇರುವ ಕಾರಣ ನಮ್ಮ ಹಬ್ಬಗಳೆಲ್ಲ ದೇವರ ಮುಂದೆಯೇ ನಡೆಯುತ್ತವೆ. ಈ ಕ್ರಿಸ್ ಮಸ್ ಹಬ್ಬದ ಸಮಯ ಚರ್ಚಿಗೆ (Church) ಹೋಗದವರು ಹೆಚ್ಚಿನ ಮಂದಿ ಇಂಥ ವರೇ ಇರುವರು--ಮನೆಯಲ್ಲೇ ಕುಳಿತುಕೊಂಡು ಪ್ರಾಪಂಚಿಕ ವಿಷಯಗಳಲ್ಲಿ ಮಗ್ನ ರಾಗಿ ಆನಂದವನ್ನು ಪಡೆಯುತ್ತಾರೆ. ಇದು ನಮಗೆ ವಿಚಿತ್ರವೆನಿಸಿತು.

........ನೀವೂ, ತೀ. ತಂದೆಯವರೂ ನಮಗೆ ನಮ್ಮ ಮದುವೆಯ ನಿಶ್ಚಿತ ದಿನದ ರಜತೋತ್ಸವಕ್ಕಾಗಿ ಕಳಿಸಿದ ಆಶೀರ್ವಾದಗಳಿಗಾಗಿ ನಾವು ಧನ್ಯರು. ನಮ್ಮ ಮದುವೆಯ ರಜತೋತ್ಸವವನ್ನು ನಾವು ಲಂಡನಿನಲ್ಲಿ ಆಚರಿಸುವೆವೆಂದು ಯಾರು ಊಹಿಸಿದ್ದರು ?

ಇತಿ ನಿಮ್ಮ

ಚಂದಮ್ಮ.

*　　*　　*　　*

ಲಂಡನ್

28-12-1965

ಮುದ್ದು ಮಕ್ಕಳೇ,

........ದಶಂಬರ 25 ಪೂರ್ತಿ ರಜಾ ದಿನ, 26, 27, ಅರ್ಧ ರಜಾ ದಿನಗಳು ಲಂಡನ್ನಿನಲ್ಲಿ. ಇದರಿಂದಾಗಿ ಎಲ್ಲೆಲ್ಲಿಯೂ ನಿಶ್ಶಬ್ದತೆ, ಶಾಂತತೆ ; ಬಸ್ಸುಗಳು, ಸುರಂಗ ರೈಲುಗಳು, ಸಿನಿಮಾ ಮಂದಿರಗಳು ನಡೆಯುವುದಿಲ್ಲ. ಎಲ್ಲರಿಗೂ ರಜೆ. ಎಲ್ಲರೂ ಮನೆಯೊಳಗೇ ಕುಳಿತುಕೊಂಡು ಮನೆಯವರೊಡನೆ ಸಂತೋಷದಿಂದ ಕಾಲ ಹರಣ ಮಾಡುವ ದಿನಗಳು.

ಲಂಡನ್ ಬಂದು ಸೇರಿದ ಹೊಸತರಲ್ಲಿ ಇಲ್ಲಿಯ ರಂಗಭೂಮಿಯ ವೈವಿಧ್ಯದ ತಿಳಿವಾಯಿತು. ರಂಗಭೂಮಿ ನಾಟಕಗಳು ಇಲ್ಲಿ ಅದ್ವಿತೀಯವಾದುವು. ಕೆಲವೊಮ್ಮೆ ಒಂದೊಂದು ನಾಟಕ ವರ್ಷಗಟ್ಟಲೆ ನಡೆಯುತ್ತಿರುತ್ತದೆ. ಸಂಗೀತ ನಾಟಕಗಳೂ, ಇತರ ವಿಧದ ಅನೇಕಾನೇಕ ನಾಟಕಗಳೂ ಅಲ್ಲದೆ ಷೇಕ್ಸ್ಪಿಯರಿನ ನಾಟಕಗಳಿಗೆ ಮೀಸಲಾಗಿರುವ ಪ್ರತ್ಯೇಕ ಒಂದು ರಂಗಮಂದಿರವಿದೆ. ನೂರಾರು ರಂಗಮಂದಿರ ಗಳಲ್ಲಿ। ನೂರಾರು ನಾಟಕಗಳು ಪ್ರತಿದಿನ ಪ್ರದರ್ಶಿಸಲ್ಪಡುತ್ತವೆ. ನಮ್ಮ ನಮ್ಮ ನೆಚ್ಚಿನ ಕಥೆ, ಪಾತ್ರಧಾರಿಗಳು, ಕಥಾ ನಿರೂಪಣೆ ಇತ್ಯಾದಿ ಆರಿಸಿ ಹೋಗಲು ಎಷ್ಟು

ಅನುಕೂಲ! ಲೆಕ್ಕವಿಲ್ಲದ ಚಲಚ್ಚಿತ್ರ ಮಂದಿರಗಳೂ ಇವೆ. ಚಲನಚಿತ್ರಗಳನ್ನು ನಾವು ಬೆಂಗಳೂರಿನಲ್ಲಿ ನೋಡಬಹುದು. ಆದ್ದರಿಂದ ನಾವಿಲ್ಲಿ ನಾಟಕಗಳನ್ನೇ ಹೆಚ್ಚಾಗಿ ನೋಡುತ್ತೇವೆ. ಜಯದೇವ್, ನೀನು ನಾಟಕ ಕ್ಷೇತ್ರದಲ್ಲಿ ಒಳ್ಳೆಯ ಹೆಸರನ್ನು ಮಾಡುತ್ತಿರುವೆಯೆಂದು ತೀ. ತಂದೆಯವರು ತಿಳಿಸಿದ್ದರು, ತುಂಬಾ ಹೆಮ್ಮೆಯ ವಿಷಯ. ಇಲ್ಲಿನ ನಾಟಕಗಳನ್ನು ನೋಡುತ್ತಿದ್ದಂತೆ ನಿನ್ನ ನೆನಪಾಗುತ್ತದೆ. ಅವನ್ನು ನೋಡಿ ನೀನೆಷ್ಟು ಸಂತೋಷಪಡುತ್ತಿದ್ದೆ! ಆದರೆ ನೀನು ಸದ್ಯದಲ್ಲೇ ಲಂಡನ್ನಿಗೆ ಬರುವವನಿದ್ದೀ ಎಂದು ಸಮಾಧಾನ. ಬಿಡುವು ಮಾಡಿಕೊಂಡು ಇಲ್ಲಿನ ಕೆಲವು ಅಮೋಘ ನಾಟಕಗಳನ್ನು ನೋಡಲು ಮರೆಯಬೇಡ. ಇತ್ತೀಚೆಗೆ ಇಲ್ಲಿ ನಾಟಕಗಳು ನಂಬಲಾರದ ಪ್ರೋತ್ಸಾಹ ಪಡೆದಿವೆ. ವರ್ತಕತನ ವ್ಯಾಪಾರಕ್ಕೆ ಹೆಸರಾದ ಲಂಡನ್ ನಗರದಲ್ಲಿ ಕಣ್ತೆರೆಯುವುದರೊಳಗೆ ಎಂಬಂತೆ ರಂಗಭೂಮಿ ಈಗ ತಾನೇ ಊಹಿಸಲಾಗದ ಯಶಸ್ಸನ್ನು ಪಡೆದಿದೆ. ವೆಸ್ಟ್ ಎಂಡಿನ (West End) ಪ್ರಸಿದ್ಧ ನಟ–ನಟಿಯರು ಇಂದಿನಂತೆ ಹಿಂದೆಂದೂ ಜನರ ಮನಸ್ಸೆಳೆಯುತ್ತಿರಲಿಲ್ಲವಂತೆ. ನಾಟಕ ಕಲೆಯನ್ನು ಒಂದು ಅತ್ಯುತ್ತಮ ಸ್ಥಿತಿಗೆ ತಂದಿರಿಸಿದ್ದಾರೆ. ರಂಗಸಜ್ಜಿಕೆ, ದಿಗ್ದರ್ಶನ, ನಟನೆ, ವಾಗ್ಜಾಲ, ರಂಗಮಂದಿರದ ಶಬ್ದಗ್ರಹಣ, ಬೆಳಕಿನ ನಿರ್ವಹಣೆ ಎಲ್ಲವೂ ತುಂಬಾ ಮೆಚ್ಚುವಂತಿದೆ. ಒಮ್ಮೆ ರಂಗಮಂದಿರದೊಳಗೆ ಪ್ರವೇಶಿಸಿದೊಡನೆ ಒಂದು ಮಾಯಾ ಪ್ರಪಂಚದೊಳಗೆ ನುಗ್ಗಿದಂತೆ ಭಾಸವಾಗುತ್ತದೆ.

ರಂಗಮಂದಿರಗಳಲ್ಲಿ ಯಾವ ಜಾಗದಲ್ಲಿ ಕೂತರೂ ನಾಟಕವನ್ನು ಅನುಕೂಲವಾಗಿ ನೋಡುವಂತೆ ಕಟ್ಟಲ್ಪಟ್ಟಿವೆ. ನೋಡುವುದು ಮಾತ್ರವಲ್ಲ, ಪಾತ್ರಧಾರಿಗಳು ಆಡುವ ಪ್ರತಿಯೊಂದು ಶಬ್ದವೂ ಸ್ಪಷ್ಟವಾಗಿ ಕೇಳಿಬರುತ್ತದೆ. 'ಮೈಕು'ಗಳ ಅಗತ್ಯವೇ ಕಂಡುಬರುವುದಿಲ್ಲ. ಸ್ಪಷ್ಟವಾಗಿ ಮಾತನಾಡಲು ಕಂಠವನ್ನು ತರಬೇತು ಮಾಡುವ ಸಾಧನೆಯೇ ಪ್ರತ್ಯೇಕವಿದೆ. ಪಾತ್ರಧಾರಿಯು ಪ್ರೇಕ್ಷಕರಿಗೆ ಬೆನ್ನುಮಾಡಿ ಮಾತನಾಡಿದರೂ ಅವನು ಆಡಿದ ಯಾವ ಶಬ್ದವನ್ನೂ ನಾವು ಕಳೆದುಕೊಳ್ಳುವುದಿಲ್ಲ. ಪ್ರಸಿದ್ಧ ಚಿತ್ರಕಲಾವಿದರೂ ತಮ್ಮ ಜೀವನದ ಉಸಿರೇ ರಂಗಸ್ಥಳ ಎಂಬಂತೆ ನಾಟಕಗಳಲ್ಲಿ ಅತ್ಯಾಸಕ್ತಿಯಿಂದ ಕೆಲಸ ಮಾಡುವುದರಿಂದ ನಾಟಕಗಳಿಗೆ ಇರುವ ಪ್ರೋತ್ಸಾಹ ಇಲ್ಲಿ ಚಲನಚಿತ್ರಕ್ಕೆ ಇರುವುದಿಲ್ಲ. ಒಂದು ನಾಟಕ ವರ್ಷಗಟ್ಟಲೆ ಯಶಸ್ವಿಯಾಗಿ ನಡೆದರೂ ಈ ಕಲಾವಿದರು ಬೇಸರಿಸದೆ ತಮ್ಮ ಸೇವೆ ಮಾಡುತ್ತಾರೆ. ಆಗಾಥಾಕ್ರಿಸ್ಟಿಯ "The Mousetrap" – "ದಿ ಮೌಸ್‌ಟ್ರೆಪ್" ಎಂಬ ನಾಟಕ ಇಲ್ಲಿ ಈಗ 15ನೇ ವರ್ಷ ನಡೆಯುತ್ತಿದೆ! ರಂಗಸಜ್ಜಿಕೆಯಲ್ಲಿ ಕೃತ್ರಿಮತೆ ಇಲ್ಲ. ಆದರೆ ಇತ್ತೀಚಿನ ಕೆಲವು ಆಧುನಿಕ ನಾಟಕಗಳಲ್ಲಿನ ಸಂಭಾಷಣೆಗಳಲ್ಲಿ ಏನೂ ತಿರುಳು ಇದ್ದಂತೆ ಇರುವುದಿಲ್ಲ. ಸಾಹಿತ್ಯವೂ ಉನ್ನತ ಮಟ್ಟದಲ್ಲಿರುವುದಿಲ್ಲ. ನಾಟಕಕ್ಕೆ ಯಾವ ಗುರಿಯೂ ಇರುವುದಿಲ್ಲ. ಯಾವ ಸಂದೇಶವೂ ಇರುವುದಿಲ್ಲ. ಆದರೂ ಇಲ್ಲಿನ ನಾಟಕ ಕಲೆ

ಪರಮಾವಧಿ ಪಡೆದಿದೆ. ಕಲೆಗೆ ಲಂಡನ್ ನಗರವೇ ಕೇಂದ್ರ! ಇದೇ ಕಲಾಗಾರರ ಕೇಂದ್ರ! ನನಗಂತೂ ಈ ವಿಷಯಕ್ಕಾಗಿ ಚಾರ್ಲ್ಸ್ ಡಿಕನ್ಸ್ (Charles Dickens) ವರ್ಣಿಸಿದ ಲಂಡನ್ ನಗರ ತುಂಬಾ ಪ್ರಿಯವಾಗಿದೆ. ಮನರಂಜಕ ಕಾರ್ಯ ಕ್ಷೇತ್ರದಲ್ಲಿ ನಾಟಕಗಳಲ್ಲದೆ, ಬೊಂಬೆಯಾಟಗಳೂ ಸರ್ಕಸ್ಸುಗಳೂ ಎಲ್ಲಾ ವಿಧದ ಗಾನಮಂದಿರಗಳೂ ಇವೆ. ಪ್ರತಿದಿನ ಇಲ್ಲಿ ವಿನೋದವನ್ನೊದಗಿಸುವ ಸುಸಂದರ್ಭ ಗಳು ಒಂದಲ್ಲ, ಎರಡಲ್ಲ, ಸಾವಿರಾರು ಇವೆ........

ನಿನ್ನ ಹೊಸ ಕಾರ್ಯರಂಗದ ಚಟುವಟಿಕೆಗಳಿಗೆ ನಮ್ಮ ಆಶೀರ್ವಾದಗಳು. ಆಗಾಗ್ಯೆ ಬರೆಯುತ್ತಿರಿ.

ಇತಿ ನಿಮ್ಮ
ಅಮ್ಮ.

* * * *

ಲಂಡನ್
30–12–1965

ಪ್ರಿಯ ತಂದೆಯೇ,

ನಾವು ನಿಮ್ಮ ಹುಟ್ಟಿದ ದಿನದ ಹಬ್ಬಕ್ಕಾಗಿ ಕಳುಹಿಸಿದ ಶುಭಾಶಯಗಳು ನಿಮಗೆ ಸಿಕ್ಕಿರಬೇಕಲ್ಲವೇ ?........

ಕ್ರಿಸ್‌ಮಸ್ ಮುಗಿದ ಮೇಲೆ ನಮಗೆ ಅನೇಕ ಸತ್ಕಾರ ಕೂಟಗಳಿಗೆ ಆಮಂತ್ರಣ ವಿತ್ತು. ಈ ಕೂಟಗಳಲ್ಲಂತೂ ಕೆಲವು ವಿಚಿತ್ರ ಅನುಭವಗಳು ಸಿಕ್ಕಿದವು. ಒಬ್ಬ ಕಲಾವಿದನ ಸತ್ಕಾರ ಕೂಟದಲ್ಲಿ ಆಮಂತ್ರಿತರಾದ ಹೆಚ್ಚಿನ ಮಂದಿ ಅತಿಥಿಗಳು ವಿಸ್ಮಯಕಾರಕ ಜನರಾಗಿದ್ದರು—ಪೋಷಾಕಿನಲ್ಲಿ, ತಲೆಕೂದಲಲ್ಲಿ, ಮಾತುಕತೆಯಲ್ಲಿ, ನಡತೆಯಲ್ಲಿ ಎಲ್ಲದರಲ್ಲಿ ವಿಚಿತ್ರವಿತ್ತು. ಯಾರಲ್ಲಿಯೂ ಸಾಮಾನ್ಯತೆ, ಸಹಜತೆ ಇರಲಿಲ್ಲ. ಇಲ್ಲಿನ ಯುವಕ ಪಂಗಡಗಳೆಲ್ಲ ಇತ್ತೀಚೆಗೆ ಸಾಂಪ್ರದಾಯದ ಬಿಗುವನ್ನು ಬಹುಮಟ್ಟಿಗೆ ಕಳಚಿಕೊಂಡು ಸ್ವೇಚ್ಛಾಪರವಾಗಿವೆ. ಹಿಂದಿನ ಕಾಲದಲ್ಲಿ ಜನರು ಸಂಪ್ರದಾಯಕ್ಕೆ ಎದುರಾಗಿ ವರ್ತಿಸುತ್ತಿದ್ದರೆ ಅದು ಯಾವುದಾದರೂ ಉಚ್ಚ ಧ್ಯೇಯ ಕ್ಕಾಗಿರುತ್ತಿತ್ತು. ಆದರೆ ಈಗ ಈ ಯುವಕ ಜನರ ಸಾಂಪ್ರದಾಯ ಬದ್ಧವಲ್ಲದ ನಡತೆ ತೀರಾ ಸ್ವಾರ್ಥಪರವಾಗಿದೆ. ನಮಗಂತೂ ಅವರ ಈ ರೀತಿಯ ವರ್ತನೆ, ಅನುಚಿತ ಶೃಂಗಾರ ಚೇಷ್ಟೆಗಳು ಎಲ್ಲಾ ತೀರ ಅನಾವಶ್ಯಕವೆಂದೆನಿಸಿತು. ನಾವು ಯೂರೋಪನ್ನು ಸೇರಿದೊಡನೆ ನಮ್ಮ ಶಿಷ್ಯೆಯೊಬ್ಬಳು–ಪಾಶ್ಚಾತ್ಯ ಸ್ತ್ರೀ – "ಜೀವನದ

ಹೋರಾಟದಲ್ಲೇ ಮುಳುಗಿರುವ ಪಾಶ್ಚಾತ್ಯ ನಾಗರೀಕತೆಯ ಅರಣ್ಯಕ್ಕೆ ಸುಸ್ವಾಗತ!" ಎಂದಿದ್ದಳು. ಆಗ ನಮಗೆ ಆಕೆಯ ಮಾತಿನ ಅರ್ಥವಾಗಲಿಲ್ಲ. ಈಗ ಅರ್ಥ ವಾಗುತ್ತಾ ಇದೆ. ಈ ಸತ್ಕಾರ ಕೂಟಗಳಲ್ಲಿ ನಾವು ಸಹಜವಾಗಿ ವಿಧವಿಧದ ಜನರನ್ನು ಕಂಡೆವು. ಒಮ್ಮೆ ಒಬ್ಬ ಪಾಶ್ಚಿಮಾತ್ಯ ನಮ್ಮೊಡನೆ ಅಂದಿದ್ದ. "ಪ್ರಾಪಂಚಿಕ ವಿಷಯಗಳನ್ನು ಅನುಭವಿಸುವುದರಲ್ಲಿ ನಮಗೆ ಸರಿಸಮಾನರಿಲ್ಲ. ಭವಿ ತವ್ಯತೆಯ ಯಾವ ಅನುಭವವೂ ನಮಗೆ ಹೊಸತೆಂದು ಕಾಣಲಿಕ್ಕಿಲ್ಲ. ಆದರೆ ನನಗೆ ಒಮ್ಮೊಮ್ಮೆ ಅನ್ನಿಸುತ್ತದೆ, ನಾವು ಜೀವನದ ಅಂತಃಸತ್ವ, ಮೂಲವನ್ನೇ ಕಳೆದು ಕೊಂಡಿದ್ದೇವೆ" ಎಂದು........

ಇಂತಹ ಅನೇಕ ಕೂಟಗಳಲ್ಲಿ ನಮ್ಮ ಭಾರತ, ಭಾರತೀಯ ವ್ಯವಹಾರಗಳ ವಿಚಾರ ಇತ್ಯಾದಿ ಮಾತುಕತೆಗಳಲ್ಲಿ ಬರುವುದು ಅನಿವಾರ್ಯ. ಈ ದೇಶದಲ್ಲಿ ನಮ್ಮ ದೇಶವನ್ನು ಕುರಿತು ಇರುವ ಅಜ್ಞಾನ ಅಪಾರವಾಗಿದೆ. ನಮ್ಮ ದೇಶದ ನೈಜ ರೂಪ ದರ್ಶನಗಳನ್ನು ವಿವರಿಸಿ ಅವರ ಮನಸ್ಸಿನ ಕತ್ತಲೆಯನ್ನು ನಿವಾರಿಸಲು ನಾವು ಯಾವಾಗಲೂ ಪ್ರಯತ್ನಿಸುತ್ತಿದ್ದೇವೆ. ಆದರೆ ಯಾವನಾದರೂ ನಮ್ಮ ಭಾರತ ದೇಶವನ್ನು ಭೇಟಿ ಮಾಡಿದ ವಿನಹ ನಮ್ಮ ದೇಶದ ಜೀವಾಳವನ್ನು ಸರಿಯಾಗಿ ತಿಳಿದು ಕೊಳ್ಳಲು ಅವನಿಗೆ ಸಾಧ್ಯವೇ? ನಮ್ಮ ದೇಶ ಎಷ್ಟೊಂದು ದೊಡ್ಡ ದೇಶ! ಎಷ್ಟೊಂದು ಭಾಷೆಗಳು, ಜಾತಿ ಭೇದಗಳು. ಸಾಂಪ್ರದಾಯ ರೀತಿಗಳು, ಆಹಾರ ಪದ್ಧತಿಗಳು, ಕಲೆಗಳು! ನಮ್ಮಲ್ಲಿ ಎಲ್ಲವೂ ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಬದಲಾವಣೆ ಹೊಂದುತ್ತವೆ, ನಮ್ಮ ದೇಶ ಯೂರೋಪು ಖಂಡದಂತೆ ವಿಶಾಲವಾಗಿದೆ, ವೈವಿಧ್ಯ ದಿಂದ ತುಂಬಿದೆ, ತುಂಬಾ ಸ್ವಾರಸ್ಯವುಳ್ಳದ್ದಾಗಿದೆ ಎಂದು ಹೇಳಿದರೆ ಅವರು ತಿಳಿದು ಕೊಳ್ಳುವುದು ಹೇಗೆ? ಕುರುಡನೊಬ್ಬನಿಗೆ ಗುಲಾಬಿ ಹೂವನ್ನು ವರ್ಣಿಸುವುದಾ ದರೂ ಹೇಗೆ?

ಭಾರತದ ವಿಷಯ ಮಾತನಾಡುತ್ತಿದ್ದಂತೆಲ್ಲ ನಮ್ಮ ಗಂಟಲು ಕಟ್ಟಿ ಗದ್ಗದ ವಾಗುತ್ತದೆ. ಭಾರತದ ಆಹಾರ ಪರಿಸ್ಥಿತಿಯ ವಿಷಯ ಒಂದು ಸಮಾಚಾರ ಚಿತ್ರ ವನ್ನು ನೋಡಿದೆವು. ನಮ್ಮಲ್ಲಿನ ಆಹಾರದ ಪರಿಸ್ಥಿತಿಯನ್ನು ನೋಡಿ ಕಣ್ಣಲ್ಲಿ ನೀರು ಬಂತು. ನಮ್ಮ ದೇಶದಲ್ಲಿನ ಆಹಾರದ ಅಭಾವಕ್ಕೂ ಇಲ್ಲಿನ ಸಮೃದ್ಧಿಗೂ ಅಜ ಗಜಾಂತರ ವ್ಯತ್ಯಾಸ. ಮಿಕ್ಕಿದ ಆಹಾರವನ್ನು ತಿನ್ನಲು ಇಲ್ಲಿ ಹಸಿದ ಆಳುಗಳೂ ಇಲ್ಲ, ಬೇಡುವ ಜನತೆಯೂ ಇಲ್ಲ. ತಟ್ಟೆಯಲ್ಲಿ ಬಿಟ್ಟ ಜಾಸ್ತಿ ತಿಂಡಿಯನ್ನು ತಿನ್ನಲು ಪ್ರಾಣಿ ವರ್ಗವೂ ಇಲ್ಲ. ಆಹಾರವನ್ನು ಚರಂಡಿಗೆ ತೇಲಿಸಿ ಬಿಡುತ್ತಾರೆ. ಪ್ರಾಣಿ ಗಳಿಗೆ ಕೂಡ ಡಬ್ಬಿಗಳನ್ನು ಒಡೆದು ಹೊಸ ಆಹಾರವನ್ನೇ ಹಾಕಬೇಕು. ಬೆಕ್ಕಿನ ಆಹಾರ, ನಾಯಿಯ ಆಹಾರ ಎಂದು ಆರೋಗ್ಯಕರ ಆಹಾರ ಪ್ರತ್ಯೇಕವಾಗಿಯೇ ಮಾರಲ್ಪಡುತ್ತದೆ. ಇಲ್ಲಿನ ಜನರು ಈ ರೀತಿ ಆಹಾರವನ್ನು ತಿರಸ್ಕರಿಸಿ ಚರಂಡಿಗಳಲ್ಲಿ ಬಿಸಾಡುವುದನ್ನು ನೋಡಿದರೆ, ತಮ್ಮ ಯುದ್ಧ ಕಾಲದ ನಿಕಟ ಪರಿಸ್ಥಿತಿಯನ್ನು

ಅವರು ಅಷ್ಟು ಬೇಗನೆ ಮರೆತರೇ ಎಂದೆನಿಸುವುದು. ಭಾರತದ ಆಹಾರ ಅಭಾವದ ದರ್ಶನ ಒಂದನ್ನು ಟೆಲಿವಿಝುನ್ನಿನಲ್ಲಿ ನೋಡಿದೆವು. ಅದು ನಿಜವಾಗಿ ತುಂಬಾ ಹೃದಯದ್ರಾವಕವಾಗಿತ್ತು. ನಮ್ಮಲ್ಲಿ ಆಹಾರದ ಅಭಾವ ಮುಖ್ಯವಾಗಿ ಅತಿಯಾದ ಜನಸಂಖ್ಯೆಯಿಂದಾಗಿ ಎಂದು ತಿಳಿಸಿದ್ದರು. ಅಲಹಾಬಾದ್ ಸಂಗಮಕ್ಕೆ ಸೇರಿದ ಅಸಾಧಾರಣವಾದ ಜನಸಮೂಹವನ್ನು ತೋರಿಸಿದರು. ಧಾರ್ಮಿಕ ಆಲಸ್ಯತನದ ದೃಶ್ಯಗಳು, ಅಂದರೆ ಧರ್ಮಬೋಧೆ ಮಾಡುವವರು ಯಾವ ಕೆಲಸವನ್ನೂ ಮಾಡದೆ ಆಲಸಿಕರಾಗಿ ಒಂದೆಡೆ ಕುಳಿತುಕೊಂಡಿರುವುದು ; ಬರೇ ಮಂತ್ರಗಳನ್ನು ಜಪಿಸುತ್ತಾ ಕಾಲಹರಣ ಮಾಡುತ್ತಿರುವುದು ; ಭಿಕ್ಷೆ ಬೇಡುತ್ತಿರುವವರ ಕೂಟಗಳು, ಅವರು ಕೊಡುತ್ತಿರುವ ಕಾಟಗಳು ; ಗದ್ದೆಗಳಲ್ಲಿ, ಕಸದ ತೊಟ್ಟಿಗಳಲ್ಲಿ ಆಹಾರಕ್ಕಾಗಿ ಪ್ರಾಣಿಗಳೂ ಮನುಷ್ಯನೂ ಕಾದಾಡುವ ದೃಶ್ಯಗಳೂ – ಇದೆಲ್ಲಾ ನೋಡಿ ದುಃಖ ತಡೆಯಲಾರದಾಯಿತು. ಹೃದಯವು ನೋವುಪಟ್ಟು ಈ ಸ್ಥಿತಿಯನ್ನು ಒಪ್ಪಿಕೊಳ್ಳಬೇಕಾಯಿತು. ನಾಚಿಕೆ ಪಡುವಂತಾಯಿತು. ಇಂತಹ ಚಿತ್ರಗಳನ್ನು ನೋಡಿದರೆ ಯಾವ ಪ್ರವಾಸಿಯೂ (Tourist) ಭಾರತಕ್ಕೆ ಭೇಟಿ ಕೊಡಬೇಕಾದರೆ ಅನೇಕ ಸಲ ಯೋಚಿಸಬೇಕಾಗಿದೆ.

ಇಲ್ಲಿನ ಈ ಶ್ರೀಮಂತ ದೇಶಗಳು – ಈ ಇಂಗ್ಲೆಂಡು, ಈ ಯೂರೋಪು, – ಈ ಪಾಶ್ಚಾತ್ಯ ದೇಶಗಳು– ನಮ್ಮ ಭಾರತದ ಪರಿಸ್ಥಿತಿಯನ್ನು ಕುರಿತು ಏನು ಪರಿಗಣಿಸುತ್ತಾರೋ, ಉದಾಹರಣೆಗಾಗಿ, ಈ ದೇಶ, ಇಂಗ್ಲೆಂಡು, ಭಿಕ್ಷುಕರಿಲ್ಲದ ದೇಶ, ಆಹಾರ ಸಮೃದ್ಧಿಯಿರುವ ದೇಶ. ಬೇಕುಬೇಕಾದ ಆಹಾರ ಪದಾರ್ಥಗಳನ್ನು ಶೇಖರಿಸಿಕೊಂಡು ವಿನಿಯೋಗಿಸುವ ಈ ದೇಶದಲ್ಲಿ ಮನುಷ್ಯನು ಮೈಯ ಬೊಜ್ಜನ್ನು ಬೆಳೆಸಿ ಅದೇ ಪ್ರಮುಖ ರೋಗದಿಂದ ನರಳುತ್ತಿರುವುದು ಸರ್ವಸಾಧಾರಣವಾಗಿದೆ. ಈ ಬೊಜ್ಜು (Obesity) ಬೆಳೆಸುವಿಕೆಯನ್ನು ತಡೆಯುವುದು ಇವರಿಗೆ ಅಸಾಧ್ಯವಾಗಿದೆ. ಇಲ್ಲಿ ಎಂತಹ ಬಡ ಮನುಷ್ಯನಿಗೂ ದಿನಕ್ಕೆ ಒಂದು ಬುಡ್ಡಿ ಹಾಲು, ಹೊಟ್ಟೆಗೆ ಸಾಕಷ್ಟು ರೊಟ್ಟಿ (Bread) ಅನಾಯಾಸವಾಗಿ ಸಿಗುತ್ತದೆ. ಇಲ್ಲಿನ ಬಡತನ ಪರಸ್ಪರ ಹೋಲಿಕೆಯ ಮೇಲೆ ಹೊಂದಿಕೊಂಡಿದೆ. ಇಲ್ಲಿ ಬಡ ಮನುಷ್ಯನೆಂದರೆ ಬೇಡುವವನಲ್ಲ. ಟೆಲಿವಿಝುನ್ ಇಲ್ಲದಿದ್ದರೆ, ಓಡಾಡಲು ಕಾರು ಇಲ್ಲದಿದ್ದರೆ ಮನೆಯೊಳಗೆ ಬೆಚ್ಚಗಿಡುವ ಉಪಕರಣಗಳ ಕೇಂದ್ರವಿಲ್ಲದಿದ್ದರೆ (Central Heating System) ಬಡವರು ಅಷ್ಟೆ ! ಭಿಕ್ಷೆ ಬೇಡುವುದನ್ನು ಇಲ್ಲಿ ನಿಷೇಧಿಸಿದೆ. ಆದರೆ ಹಣದ ಆತಂಕವಿದ್ದವರು ಬೀದಿಗಳಲ್ಲಿ, ಮನೆಗಳ ಮುಂದೆ ಸಂಗೀತ ಹಾಡಿಯೋ ಇಲ್ಲವೇ ಯಾವುದಾದರೊಂದು ವಾದ್ಯವನ್ನು ಬಾರಿಸಿಯೋ, ಇಲ್ಲವೆ ಕಾಲುದಾರಿಗಳಲ್ಲಿ ಚಿತ್ರಗಳನ್ನು ಬಿಡಿಸಿಯೋ ತಮಗೆ ಬೇಕಾದ ಹಣವನ್ನು ಸಂಪಾದಿಸುತ್ತಾರೆ.

ನಮ್ಮಲ್ಲಿ ಹಸಿವು ಹೇಗೆ ಒಂದು ಅಸಹ್ಯವಾದ ಸಾಮಾಜಿಕ ಲಕ್ಷಣವೋ ಹಾಗೆಯೇ ಇಲ್ಲಿ ಛಳಿಯನ್ನು ಎದುರಿಸಲು ಉಣ್ಣೆ ಬಟ್ಟೆ, ಕಾವು ಕೊಡುವ ಉಪಕರಣಗಳಿಲ್ಲದಿರುವುದು ಅಷ್ಟೇ ಅವಲಕ್ಷಣವಾಗಿದೆ. ನಾವು ಹಸಿದ ಬಡವನಿಗೆ ಹೊಟ್ಟೆಗೆ ಹಾಕುವಂತೆ ಇಲ್ಲಿ ಛಳಿಯಿಂದ ಪೀಡಿತನಾದವನಿಗೆ ಜೆಂಕಿಯ ಶಾಖ ಕೊಡುವರು. ಛಳಿ ಎಂಬುದು ಭೀಕರ ವಿಷಯ. ಹೇಮಂತ ಕಾಲದಲ್ಲಿ ಇಲ್ಲಿಯ ಛಳಿಯನ್ನು ತಡೆಯುವುದೆಂದರೆ ಅಸಾಧ್ಯದ ಮಾತು. ಇಲ್ಲಿ ಬಂದ ಮೇಲೆ ನಮಗೆ ತಿಳಿಯಿತು, ಇಂಗ್ಲೀಷು ಜನರ "Warmth of heart and hearth" ಎಂಬ ಅರ್ಥಗರ್ಭಿತ ಮಾತು (ಹೃದಯದ ಮತ್ತು ಒಲೆಯ ಬೆಚ್ಚನೆ, ಸ್ನೇಹಪರತೆ). ತಲೆಯಿಂದ ಕಾಲಿನವರೆಗೆ ಉಣ್ಣೆಬಟ್ಟೆ ಧರಿಸಿಕೊಂಡೇ ಮನೆಯ ಹೊರಗೆ ಹೋಗಬೇಕಾಗುತ್ತದೆ. ಅದೊಂದು ದೊಡ್ಡ ಸಂಭ್ರಮವೇ ಸರಿ. ಎಣಿಸಿದ ಕೂಡಲೇ ಇಲ್ಲಿನ ಅಸಾಧ್ಯ ಛಳಿಯಲ್ಲಿ ಹೊರಗೆ ಹೋಗುವಂತಿಲ್ಲ. ಛಳಿಯನ್ನು ಎದುರಿಸಲು ಮೈಯನ್ನು ತುಂಬಾ ಭದ್ರಪಡಿಸಬೇಕು. ಈ ಛಳಿಗಾಲದಲ್ಲಿ ಹೊರಗೆ ಅಡ್ಡಾಡುವ ಜನರನ್ನು ನೋಡಿದರೆ ಅವರು ವಿಚಿತ್ರ ಮೃಗಗಳಂತೆ ಕಾಣುತ್ತಾರೆ.—ಪಶುರೋಮ – ಚರ್ಮಗಳ (Fur) ಟೋಪಿಗಳು, ಕೈಚೀಲಗಳು, ಹುಲಿ ಚಿರತೆಗಳ ರೋಮ – ಚರ್ಮಗಳಿಂದ ಮಾಡಿದ ಹೊದಿಕೆ, ಕಾಲಿಗೆ ಹುಲಿ ಚರ್ಮದ ರಕ್ಷೆಗಳು ಇವನ್ನೆಲ್ಲ ಹಾಕಿಕೊಂಡು ಈ ಮಾನವರು ಪ್ರಾಣಿಗಳ ಅವಯವಗಳನ್ನು ಪಡೆದವರಂತೆ ಕಾಣುತ್ತಾರೆ! ತಲೆಕೂದಲಂತೂ ಎಂದೂ ಸುರಕ್ಷಿತವಾಗಿರುವುದಿಲ್ಲ — ಅಥವಾ ಜನರಿಗೆ ಬೇಕಿಲ್ಲವೋ. ಆಧುನಿಕ ಜನತೆಯ ಲಕ್ಷಣ ವಿಚಿತ್ರವಾಗಿದೆ. "ಭಾರತೀಯ ಸ್ತ್ರೀಯರು ಭಾರತದಲ್ಲಿ ನೋಡಲು ಲಕ್ಷಣವಾಗಿರುತ್ತಾರೆ. ಇಲ್ಲಿ ಬದಲಾಯಿಸುತ್ತಾರೆ," ಎಂದು ಒಮ್ಮೆ ಬ್ರಿಟಿಷ್ ಪುರುಷನೆಂದನು. ನಿಜ! ಛಳಿಯ ಅವಾಂತರದಿಂದ ನೈಜ ಲಕ್ಷಣಗಳನ್ನೇ ಬದಲಾಯಿಸಬೇಕಾಗುತ್ತದೆ. ಭಾರತದ ಸೀರೆ ಛಳಿ ತಡೆದುಕೊಳ್ಳಲಾರದು. ಕೋಟು, ಟೋಪಿ, ಕೈಚೀಲ ಹಾಕಿಕೊಂಡ ಮೇಲೆ, ಸೀರೆಯೇ ಮರೆಯಾದ ಮೇಲೆ ಭಾರತದ ಸ್ತ್ರೀ ತನ್ನ ಬಾಹ್ಯ ಸ್ವರೂಪವನ್ನೇ ಕಳೆದುಕೊಳ್ಳುವುದಿಲ್ಲವೇ?

ಇತಿ ನಿಮ್ಮ

ಚಂದಮ್ಮ.

* * * *

ಲಂಡನ್

21 – 11 – 1966

ಪ್ರೀತಿಯ ಅಮ್ಮ, ಅಪ್ಪ,

........ನಾವು ಕನ್ನಡಿಗರು, ಕನ್ನಡ ದೇಶದಿಂದ ಬಂದವರೆಂದು A. M. C. ಯವರು ಇಲ್ಲಿಯ 'ಕನ್ನಡಿಗರ ಕೂಟ' ದಲ್ಲಿ ನಮಗೊಂದು ಸ್ವಾಗತವನ್ನೇರ್ಪಡಿಸಿ

ದರು. ಲಂಡನ್ನಿನಲ್ಲಿ ಹಾಗೂ ಲಂಡನ್ನಿನ ಹೊರಗೆ ಸಾವಿರಾರು ಭಾರತೀಯರಿದ್ದಾರೆ. ಇಲ್ಲಿಷ್ಟು ಹಿಂದೂ ಜನ ಸಂಖ್ಯೆಯಿದ್ದರೂ ಅವರಿಗಿಲ್ಲಿ ಒಂದು ದೇವಾಲಯವಿಲ್ಲ; ಒಟ್ಟುಗೂಡಿ ಒಂದು ಹಬ್ಬವನ್ನಾಚರಿಸಲು ಒಂದು ಮಂದಿರವಿಲ್ಲ. ಇಲ್ಲಿನ ಭಾರತೀಯರು ಪಂಗಡ ಪಂಗಡಗಳಾಗಿ ಜೀವಿಸುತ್ತಿದ್ದಾರೆ. ಇಲ್ಲಿ ಲಂಡನ್ನಿನಲ್ಲೇ ನೂರಾರು ಕನ್ನಡಿಗರಿದ್ದರೂ 'ಕನ್ನಡಿಗರ ಕೂಟ' ಎಂಬುದು ನಾಚಿಕೆ ಪಡುವಂತಹ ಸಂಸ್ಥೆಯಾಗಿತ್ತು. ಬೆರಳಿನಿಂದ ಎಣಿಸುವಷ್ಟು ಕೆಲವೇ ಕೆಲವು ಜನರು ಬಂದು ಸೇರಿದ್ದರು. ಆಹಾರ, ತಿಂಡಿ, ತೀರ್ಥವಾದ ಮೇಲೆ ಒಂದೆರಡು ಭಾಷಣಗಳಾದುವು. ಬೇಸರದ ಸಂಗತಿಯೇನೆಂದರೆ ಇಲ್ಲಿ ಭಾರತೀಯರು ಭಾರತೀಯರಾಗಿರುವುದಿಲ್ಲ. ಕನ್ನಡಿಗರು, ಬಂಗಾಲಿಗಳು, ಪಂಜಾಬಿಗಳು, ಮಹಾರಾಷ್ಟ್ರೀಯರು ಇತ್ಯಾದಿ ಆಗಿ ಬೇರೆ ಬೇರೆಯಾಗಿರುತ್ತಾರೆ. ಇಲ್ಲಿ ಬಂದು ನೆಲಸಿದ ಭಾರತೀಯರು ತಾವೆಲ್ಲ ಭಾರತೀಯರು ಒಂದೇ ಜನಾಂಗದವರು ಎಂದು ತಿಳಿದುಕೊಂಡು ತಮ್ಮ ತಮ್ಮ ಜಾತಿ, ಮತ, ಭಾಷೆಗಳನ್ನು ಬದಿಗಿಟ್ಟುಕೊಂಡಿದ್ದರೆ ನಮ್ಮ ದೇಶಕ್ಕೂ ಎಷ್ಟು ಹಿತವಾಗುತ್ತಿತ್ತು ! ಅಲ್ಲದೆ ಇಲ್ಲಿ ಭಾರತೀಯರು ನಮ್ಮ ದೇಶದಲ್ಲಿದ್ದಂತೆ ಇರುವುದಿಲ್ಲ. ವಿಚಿತ್ರವಾಗಿದ್ದಾರೆ. ನಮ್ಮ ದೇಶದ ಆದರಾತಿಥ್ಯ ಸಹಾನುಭೂತಿಗಳನ್ನು ಕಳೆದುಕೊಂಡಿದ್ದಾರೆ. ಇಲ್ಲಿನ ಜೀವನ, ಸಂಸ್ಕೃತಿಗೆ ಹೊಂದಿಕೊಂಡು ತಮ್ಮ ತಮ್ಮಷ್ಟಕ್ಕೇ ಚಿಕ್ಕಿನ ಬಿಡಾರದ ಜೀವನ ನಡೆಸುತ್ತಿದ್ದಾರೆ. ನಮ್ಮನ್ನು ಕಂಡು ಒಮ್ಮೆ ಊಟಕ್ಕೆ ಬರಬೇಕೆಂದು ನಮ್ಮ ಹಲವಾರು ಪರಿಚಿತರು ಅಂದರು. ಆದರೆ ಅದು ಬರೇ ಬಾಯುಪಚಾರದ ಮಾತೆಂದೂ ನಮಗೆ ಸ್ವಲ್ಪ ಸಮಯದಲ್ಲೇ ತಿಳಿದು ಬಂತು. ಇದುವರೆಗೆ ಅವರ್ಯಾರೂ ವಾಸ್ತವವಾಗಿ ಕರೆಯಲಿಲ್ಲ! ಇಲ್ಲಿ ಮನೆಗೆಲಸವನ್ನು ಮನೆಯವರೇ ಮಾಡಿಕೊಳ್ಳಬೇಕಾದುದರಿಂದ ಅತಿಥಿಗಳನ್ನು ಕರೆದರೆ ಈ ಕೆಲಸ ಮತ್ತಷ್ಟು ಹೆಚ್ಚಾಗುವುದೆಂದು ಅವರಿಗೆ ಹೆದರಿಕೆ; ಆದರೆ ಇಲ್ಲಿನ ನಮ್ಮ ಬ್ರಿಟಿಷ್ ಸ್ನೇಹಿತರಲ್ಲನೇಕರು ಈಗಾಗಲೇ ನಮ್ಮನ್ನು ಆದರದಿಂದ ಬರಮಾಡಿಕೊಂಡು ಆತಿಥ್ಯ ಸತ್ಕಾರಗಳನ್ನು ನೀಡಿದ್ದಾರೆ. ಅವರಿಗೆ ಈ ವಿಧದ ಅತಿಥಿ ಸತ್ಕಾರ ಅಭ್ಯಾಸವಾಗಿದೆ.

ಮೊನ್ನೆ ಸಾರಸ್ವತರು ವಾಸಿಸುತ್ತಿರುವ ಲಂಡನ್ನಿನ ಒಂದು ಬಡಾವಣೆಗೆ ಹೋಗಿದ್ದೆವು. ಎಲ್ಲರಿಗೂ ಕಾರು, ಮನೆ, ಆಧುನಿಕ ಉಪಕರಣಗಳೆಲ್ಲವೂ ಇದ್ದು ಜೀವನವು ಸುಖವಾಗಿದೆ. ಭಾರತವನ್ನು ಒಂದು ನಿಮಿಷಕ್ಕೂ ಜ್ಞಾಪಿಸುವಂತಿಲ್ಲ, ಅಂತಿದೆ ಅವರ ಜೀವನ. ಅವರಲ್ಲಿ ಕೆಲವರ ಜೊತೆಗೆ ಹೋಗಿ ಮಾರ್ಕೆಟ್ ಸ್ಥಳಗಳನ್ನೆಲ್ಲ ನೋಡಿಕೊಂಡು ಬಂದೆವು. ಇಲ್ಲಿ ಸಿಗುವಂತಹ ಪದಾರ್ಥಗಳನ್ನೂ ವಸ್ತುಗಳನ್ನೂ ಕಂಡರೆ ಮಕ್ಕಳ ನೆನಪು ಬಹಳ ಆಗುತ್ತಿದೆ. ಮಗು ಶಿವದೇವನಿಗೆ ಒಂದು ಚಿಕ್ಕ ಟೇಪ್ ರಿಕಾರ್ಡರನ್ನಾದರೂ ಕಳಿಸಬೇಕೆನ್ನಿಸುತ್ತದೆ. ಅವನದನ್ನು ಕಳಚಿ, ಜೋಡಿಸಿ, ಅದರ ವಿಷಯವನ್ನೆಲ್ಲ ಅರಿತು ತಾನೇ ಒಂದು ಟೇಪ್ ರಿಕಾರ್ಡರನ್ನು ಮನೆಯಲ್ಲೇ ಖಂಡಿತ

ಮಾಡುತ್ತಿದ್ದನು. ಅವನು ತನ್ನ 12–13ನೇ ವಯಸ್ಸಿನಲ್ಲೇ ಜಪಾನಿನ 'ಸೋನಿ' ಟ್ರಾನ್ಸಿಸ್ಟರ್ ರೇಡಿಯೋವನ್ನು ಪರೀಕ್ಷಿಸಿ ತಾನೇ ಒಂದು ಚಿಕ್ಕ ಟ್ರಾನ್ಸಿಸ್ಟರನ್ನು ಮನೆಯಲ್ಲೇ ರಚಿಸಿಲ್ಲವೇ? ಬಿಸಾಡಿದ ಸಿಗಾರ್ ಪೆಟ್ಟಿಗೆಗಳಲ್ಲಿಯೂ ಸಾಬೂನು ಪೆಟ್ಟಿಗೆಗಳಲ್ಲೂ ಅವನು ನಿರ್ಮಿಸಿದ ವಿಧವಿಧವಾದ ಚಿಕ್ಕ ರೇಡಿಯೋ ಸೆಟ್ಟುಗಳನ್ನು ಕಂಡು ನಾವೆಷ್ಟು ಹೆಮ್ಮೆ ಪಟ್ಟಿದ್ದೇವೆ! ಬೆಂಗಳೂರಿನ ಸಿಟಿ ಮಾರ್ಕೆಟ್ ಗುಜಲಿ ಯಿಂದ B. E. L. ನವರು ಬಿಸಾಡಿದ ಹಳೇ ಟ್ರಾನ್ಸಿಸ್ಟರ್‌ಗಳನ್ನು ಹೆಕ್ಕಿ ತೆಗೆದು ಅವನ್ನು ಅಗ್ಗ ಬೆಲೆಗೆ ಕೊಂಡುಕೊಂಡು, ತನ್ನ ಬುದ್ಧಿ ಚಾತುರ್ಯದಿಂದ, ತೀವ್ರವಾದ ಜ್ಞಾನದಿಂದ, ನಿರ್ಮಿಸಿದ ಅಂದದ ಟ್ರಾನ್ಸಿಸ್ಟರ್‌ಗಳಂತೆ ಅವನು ನಿಜವಾಗಿಯೂ ಒಂದು ಟೇಪ್ ರೆಕಾರ್ಡರನ್ನು ಮಾಡುತ್ತಿದ್ದನು. ಭಾರತದಲ್ಲಿ ಸಿಗದೆ ಇರುವ ಇಂತಹ ವಿಷಯಗಳು ಇಲ್ಲಿ ಧಾರಾಳ. ಆದರೆ ಒಮ್ಮೊಮ್ಮೆ ನನಗನಿಸುತ್ತದೆ, ಅವು ಸಿಗದಿರುವುದೇ ಮೇಲು ಎಂದು. ಶಿವದೇವನು ಇಲ್ಲಿದ್ದರೆ ದುಡ್ಡು ಬಿಸುಟು ಟ್ರಾನ್ಸಿ ಸ್ಟರ್ ರೇಡಿಯೋವನ್ನು ಕೊಂಡುಕೊಳ್ಳುತ್ತಿದ್ದನು. ಅಲ್ಲಿ ಸುಲಭವಾಗಿ ಸಿಗದೆ ಇದ್ದ ಕಾರಣ ಅವನು ಮನೆಯಲ್ಲೇ ಮಾಡುವಂತಾಯಿತು. ಇಲ್ಲಿ ಯುವಕ ಜನಾಂಗ ವನ್ನು ಕಂಡರೆ ಇಲ್ಲಿನ ಈ ಅಭಿವೃದ್ಧಿ ಎಲ್ಲಿ ತಲುಪಬಹುದೆಂದು ಗೊತ್ತಾಗುವುದಿಲ್ಲ. ಇಲ್ಲಿಯ ಮಕ್ಕಳಿಗೆ ಯಾವುದರಲ್ಲಿಯೂ ತೃಪ್ತಿಯೆಂಬುದಿಲ್ಲ. ಬೇಕಾದ್ದೆಲ್ಲ ಸಿಗುವ ಕಾರಣ ಏನು ಬೇಕು ಎಂದೂ ತಿಳಿಯಲಾರದು. ನಮ್ಮ ದೇಶದಲ್ಲಿ ಮಕ್ಕಳು ಗೋಲಿ ಯಾಟವಾಡಿ, 3 ಕಾಸಿನ ಗಾಳಿಪಟ ಹಾರಾಡಿಸಿ ಪಡುವ ಆನಂದ ಇಲ್ಲಿಯ ಮಕ್ಕಳಿಗೆ ಎಂತಹ ಬೆಲೆಬಾಳುವ ವಸ್ತುವೂ ಕೊಡಲಾರದು. ಸಾಗರದಂತಿರುವ ಇಲ್ಲಿನ ಸಿರಿವಂತ ವಸ್ತು ಭಂಡಾರಗಳಿಂದ ಯಾವುದನ್ನು ಆರಿಸಬೇಕೆಂದು ತಿಳಿಯುವುದೇ ಒಂದು ಜಾಣ ತನ. ಇದನ್ನೆಲ್ಲ ಯೋಚಿಸುತ್ತ ಇತ್ತಿತ್ತಲಾಗಿ ನಾನು ತುಂಬಾ ತತ್ವಜ್ಞಾನಿಯಾಗು ತ್ತಿದ್ದೇನೆ! ಆಧುನಿಕ 'ಅದು–ಇದು' ಎಂದುಕೊಳ್ಳುವುದರಲ್ಲಿ ಅಂತ್ಯವಿರುವುದಿಲ್ಲ. ಅವುಗಳಿಲ್ಲದೆ ಜೀವನ ನಡೆಸಲು ಸಾಧ್ಯವಿಲ್ಲವೇ ಎನ್ನಿಸುತ್ತದೆ. ಇಲ್ಲಿಯ ಈ ಆಧು ನಿಕ ವ್ಯವಹಾರಗಳ ಪರಿಚಯವಾಗುತ್ತಿರುವಾಗಲೆಲ್ಲ ನನ್ನ ಮನಸ್ಸು ನಮ್ಮ ಹಳೆಯ ವಸ್ತುಗಳ ಕಡೆಗೆ, ಸಂಪ್ರದಾಯಗಳ ಕಡೆಗೆ ಒಲಿಯುತ್ತದೆ. 'ಸರಳ ಜೀವನ, ಉಚ್ಚ ವಿಚಾರ ಸರಣಿ' ಇದಕ್ಕಿಂತ ಜೀವನದಲ್ಲಿ ಹೆಚ್ಚೇನಿದೆ?

ಅಂತೂ ಈ ಪಾಶ್ಚಾತ್ಯ ದೇಶಗಳಲ್ಲೆಲ್ಲಾ ಜೀವನಕ್ರಮ ಒಂದೇ ಮಟ್ಟಕ್ಕೆ ಏರಿದೆ. ಎಲ್ಲವೂ ಒಂದೇ ಸಮಾನತ್ವಕ್ಕೆ ಬರುವಂತಿದೆ. ಇಲ್ಲಿನ ಯಾಂತ್ರಿಕ ಜೀವನ ದಲ್ಲಿ ಮನುಷ್ಯನೇ ಸಿಕ್ಕಿಹಾಕಿಕೊಂಡಂತಿದೆ. ನೃತ್ಯ ಕಲೆಯಲ್ಲೂ ಒಂದು ಯಾಂತ್ರಿಕ ಸರಿಸಮಾನತ್ವವನ್ನು ತರಲು ಇಲ್ಲಿನ ಕಲಾವಿದರು ಆಶಿಸುತ್ತಾರೆ! 'ಗುರುಗಳಿಲ್ಲದೇ ನೃತ್ಯ ಕಲಿಯಿರಿ!' ಎಂದು ಹೇಳುವ ಪುಸ್ತಕಗಳನ್ನೂ ಅಚ್ಚು ಮಾಡುತ್ತಿದ್ದಾರೆ. ಸಂಗೀತವನ್ನು ಬರೆದಿಡುವಂತೆ ಇಲ್ಲಿನ ನೃತ್ಯಕಲೆಯನ್ನೂ ಬರೆದಿಟ್ಟು ವಿದ್ಯಾರ್ಥಿಗಳು

ಅವನ್ನೋದಿ ಅವುಗಳಲ್ಲಿ ಕೊಟ್ಟಿರುವ ಚಿತ್ರಗಳನ್ನು ಅನುಸರಿಸಿ, ಕೈಗಳು ಯಾವ ಎತ್ತರದಲ್ಲಿ ಯಾವ ಕೋನದಲ್ಲಿರಬೇಕು, 'ಕಾಲುಗಳು ಯಾವ ರೀತಿಯಲ್ಲಿರಬೇಕು, ಹೆಜ್ಜೆ ಹೇಗೆ ಹಾಕಬೇಕು, ಎಂದೆಲ್ಲ ಕನ್ನಡಿ ಮುಂದೆ ನಿಂತುಕೊಂಡು ತಮ್ಮ ತಮ್ಮ ಷ್ಟಕ್ಕೇ ಅಭ್ಯಾಸ ಮಾಡುವುದನ್ನು ಕಂಡು ಮನಸ್ಸು ಬಹಳ ನೊಂದಿತು. ವ್ಯಕ್ತಿತ್ವದ ಸ್ಫೂರ್ತಿಯ ಕಳೆಯನ್ನು ಅಳಿಸಿ ಬರೇ ಮೈಯ ಅವಯವಗಳಿಂದ ಕುಣಿಯುವ ಈ ನೃತ್ಯ ಒಂದು ಕಲೆಯೇ ಎಂದು ಅನ್ನಿಸುತ್ತದೆ. ಗುತ್ತಿಗೆಯ ಸನ್ನದಿನ ಆಹಾರ (Patent Food) ಒಂದೇ ಮಾದರಿಯ ಡಬ್ಬಿಗಳಲ್ಲಿ ಹೇರಳವಾಗಿ ಬರುವಂತೆ ಇಂತಹ ಸಾವಿರಾರು ನೃತ್ಯಗಾರರು ಈ ರೀತಿಯಲ್ಲಿ ರಚಿಸಲ್ಪಡುತ್ತಾರೆ. ಬ್ಯಾಲೆ ನೃತ್ಯಕ್ಕೆ ಇದೆಲ್ಲ ಸರಿಹೋಗುತ್ತಿದೆಯೇನೋ. ಆದರೆ ಭಾರತೀಯ ನೃತ್ಯಗಳಿಗೂ ಈ ರೀತಿಯ ಅಭ್ಯಾಸ ಕ್ರಮ ಬರುವಂತಿದ್ದರೆ !

ಭವಿಷ್ಯದ ಸುಂದರ ಕನಸುಗಳನ್ನು ಕಾಣುತ್ತಿರುವ ನಮ್ಮ ಮಕ್ಕಳಿಗೆ ಇದನ್ನೆಲ್ಲ ಓದಿ ಮನಸ್ಸಿಗೆ ಎಷ್ಟು ಬೇಸರವಾಗುವುದೋ. ಆದರೆ ನನ್ನ ಅಭಿಪ್ರಾಯಗಳನ್ನು ಇಲ್ಲಿ ಮನಸ್ಸಿಗೆ ಬಂದಂತೆ ಗೀಚಿ ಹಾಕಿದ್ದೇನೆ, ಕ್ಷಮಿಸಿ........

ಇತಿ ನಿಮ್ಮ

ಚಂದಮ್ಮ.

*   *   *   *

ಲಂಡನ್
28–1–1966

ಆತ್ಮೀಯರೇ,

ಇಂಗ್ಲೆಂಡಿನಲ್ಲಿ ನಮ್ಮ ಮೊದಲ ಪ್ರವಾಸ, ಆ ಪ್ರಯಾಣ, ನಮಗೊಂದು ಹೊಸ ಅನುಭವ. ನಮ್ಮ ಭಾರತದಲ್ಲಿ ಸಾಮಾನ್ಯವಾಗಿ ನಾವು ಪ್ರಯಾಣ ಮಾಡು ವಂತಿರಲಿಲ್ಲ. ಇಲ್ಲಿ ರೈಲ್ವೆ ನಿಲ್ದಾಣಗಳಲ್ಲಿ ಪೋರ್ಟರ್ (Porter ಹಮಾಲಿ) ಗಳೆಂಬ ಮಾತೇ ಇಲ್ಲ. ಇದ್ದರೂ ನಮ್ಮ ಶಕ್ತಿಮೀರಿ ಹಣ ಕೊಡಬೇಕಾಗುತ್ತದೆ. ಹೆಚ್ಚಾಗಿ ಇಲ್ಲಿಯ ಜನರು ಕಾರುಗಳಲ್ಲಿ ಇಲ್ಲವೇ ವಿಮಾನಗಳಲ್ಲಿ ಪ್ರಯಾಣ ಮಾಡು ವುದರಿಂದ ಬ್ರಿಟಿಷ್ ರೈಲುಗಳಲ್ಲಿ ಪ್ರಯಾಣಿಕರು ಬಹಳ ಕಮ್ಮಿ. ಈ ಬ್ರಿಟಿಷ್ ರೈಲುಗಳು ಖಂಡಿತ ನಷ್ಟದಲ್ಲಿಯೇ ಕೆಲಸ ಮಾಡುವಂತಿದೆ. ಇದಕ್ಕಾಗಿ ಟಿಕೆಟ್ಟಿನ ದರವನ್ನು ಹೆಚ್ಚು ಮಾಡಿದ್ದಾರೆ. ಒಮ್ಮೊಮ್ಮೆ ಇಡೀ ರೈಲು ಖಾಲಿಯಾಗಿ ಹೋಗು

ವುದನ್ನು ನಂಬುತ್ತೀರಾ? ನಿಲ್ದಾಣಗಳಲ್ಲಿ ಜನರ ಸುಳಿವಿಲ್ಲ. ತಿಂಡಿ ತೀರ್ಥ ಮಾರುವವರ ಗದ್ದಲವಿಲ್ಲ. ಗಾಡಿಯೊಳಗೆ ಆಹಾರ ಹೊತ್ತು ಮಾರುವವರ (Pedlars) ಹಾಡಿ ಬೇಡುವವರ ಕಾಟವಿಲ್ಲ.

ಭಾರತದಿಂದ ಬಂದ ನಮಗೆ ಇಲ್ಲಿ ರೈಲು ಪ್ರಯಾಣ ಎಷ್ಟು ಸುಖಕರವಾಗಿ ಕಂಡುಬಂತು! ದೂರದೊಂದು ಊರಿಗೆ ರೈಲು ಪ್ರಯಾಣ ಮಾಡಿ, ಅಲ್ಲಿ ನೃತ್ಯ ಪ್ರದರ್ಶನ ಕೊಟ್ಟು ಕೂಡಲೇ ಅದೇ ದಾರಿಯಾಗಿ ಮನೆಗೆ ಬಂದು ಸೇರಿದರೂ ಆಯಾಸವಿರುವುದಿಲ್ಲ. ಭಾರತದಲ್ಲಿ ಇದನ್ನು ಸಾಧಿಸುವುದು ತುಂಬಾ ಪ್ರಯಾಸಕರ. ಹಲವು ದಿನಗಳ ಮುಂಚಿತವಾಗಿಯೇ ಟಿಕೆಟ್ಟನ್ನು ಕಾದಿರಿಸಬೇಕು. ಅನಾನುಕೂಲತೆಯ ಪ್ರಯಾಣ, ಗದ್ದಲದ ರೈಲು ಗಾಡಿಗಳು, ಪ್ರಯಾಣ ಮಾಡುವಾಗ ಧೂಳು, ಕಲ್ಲಿದ್ದಲು, ಕಪ್ಪುಹೊಗೆ ಮುಂತಾದ ಅವಾಂತರಗಳು. ನಿಲ್ದಾಣಕ್ಕೆ ಹೋಗಬೇಕಾದರೆ ಜಟ್ಕಾ ಗಾಡಿಯವನ ಅಥವಾ ಟ್ಯಾಕ್ಸಿಯವನ ಹತ್ತಿರ ದರಕ್ಕೆ ಕಾದಾಡಬೇಕು. ಆಮೇಲೆ ರೈಲು ನಿಲ್ದಾಣದಲ್ಲಿ ಹಮಾಲರ (Porters) ಹತ್ತಿರ ವಾಗ್ವಾದ........ಗಾಡಿಯೊಳಗೆ ಸ್ಥಳವನ್ನು ಮೊದಲೇ ಕಾದಿರಿಸಿದ್ದರೂ ಅದಕ್ಕಾಗಿ ಸಂವಾದ, ಚರ್ಚೆ (ಅಂದರೆ ಒಮ್ಮೊಮ್ಮೆ ಭಾರತದ ಇಡೀ ಜನಸಂಖ್ಯೆ ರೈಲು ಗಾಡಿಗಳಲ್ಲಿ ಸೇರಿದಂತಿರುತ್ತದೆ!) ಗಾಡಿಯೊಳಗೆ ಜನರ ಬಿಡುವಿಲ್ಲದ ಗಲಾಟೆ, ತಿಂಡಿ ಹೊತ್ತು ಮಾರುವವರ ಮತ್ತು ಭಿಕ್ಷುಕರ ಗಲಾಟೆ – ಇವೆಲ್ಲ ನಮಗೆ ತಿಳಿದೇ ಇದೆಯಲ್ಲ! ಈ ಘಟನೆಗಳನ್ನೆಲ್ಲ ಎದುರಿಸಿ ನಮ್ಮ ಪ್ರಯಾಣ ಮುಗಿಯುವಾಗ ನಮ್ಮಲ್ಲಿ ಯಾವ ಚೈತನ್ಯವೂ ಉಳಿಯುವುದಿಲ್ಲ. ಮನಸ್ಸೂ, ಮೈಯ್ಯೂ ಸುಸ್ತಾಗಿರುತ್ತವೆ. ಇಲ್ಲಿ ಹಾಗಲ್ಲ. ರೈಲು ಪ್ರಯಾಣ ಅತಿ ಸುಲಭ, ಸರಳ. ಇಡೀ ರೈಲು ಬಂಡಿ ಹಲವಾರು ಕೋಣೆಗಳಿರುವ ಒಂದು ದೊಡ್ಡ ಮನೆಯಂತೆಯೇ ಇದ್ದು, ಅದರ ಒಂದು ತುದಿಯಿಂದ ಇನ್ನೊಂದು ತುದಿಯವರೆಗೆ ಪಕ್ಕದ ಜಗಲಿಯಲ್ಲಿ ಸುಖವಾಗಿ ಅಡ್ಡಾಡುತ್ತಿರಬಹುದು. ಹಸಿವಾದಾಗ ತಿಂಡಿಕೊಡುವ ಊಟದ ಗಾಡಿಗೆ ಹೋಗಿ ನಮಗಿಷ್ಟವಾದ ಆಹಾರವನ್ನು ಕೇಳಿ ಶಾಂತತೆಯಿಂದ ತಿನ್ನಬಹುದು. ಆರ್ಡರ್ (Order) ಕೊಟ್ಟ ಕೂಡಲೇ ಅಡಿಗೆ ಮಾಡಿ ಬಿಸಿಯಾದ ಊಟವನ್ನು ತಯಾರಿಸಲು ಅವರು ಸಿದ್ಧರಿರುತ್ತಾರೆ. ಅವರು ಕೊಡುವ ಆಹಾರವು ಎಷ್ಟೊಂದು ಶುಚಿಯಾಗಿ, ರುಚಿಯಾಗಿ, ತೃಪ್ತಿಕರವಾಗಿರುತ್ತದೆ! ಎಲ್ಲವೂ ಪ್ಲಾಸ್ಟಿಕ್ (Plastic) ಚೀಲಗಳಲ್ಲಿ ಕಟ್ಟಿರುವುದರಿಂದ ಆರೋಗ್ಯಕರವಾಗಿಯೂ ಇರುತ್ತದೆ. ರೈಲಿನ ಧೂಳು, ಮಸಿ ಇಲ್ಲದಿರುವುದರಿಂದ ಇಲ್ಲಿ ಊಟ ಮಾಡುವುದು ಒಂದು ಅತಿ ತೃಪ್ತಿಕರ, ಸಡಗರದ ಕಾರ್ಯಕ್ರಮವೇ.

ಇಲ್ಲಿ ರೈಲು ಬಹುಮಟ್ಟಿಗೆ ಖಾಲಿಯಾಗಿಯೇ ಇರುವುದರಿಂದ ಪ್ರಯಾಣಿಕರು

ಆರಾಮವಾಗಿ ಕೈಕಾಲು ಚಾಚಿ ವಿಶ್ರಮಿಸಲು ಅವಕಾಶವಿದೆ. ನೃತ್ಯ ಪ್ರದರ್ಶನ ವಾದೊಡನೆ ನಾನು ಮುಖದ ಬಣ್ಣವನ್ನು ಅಳಿಸದೆ ರೈಲು ಪ್ರಯಾಣ ಮಾಡುವಾಗ ರೈಲಿನಲ್ಲೇ ಅದನ್ನು ಅಳಿಸುತ್ತೇನೆ. ಇಲ್ಲಿ ಸಾಮಾನ್ಯವಾಗಿ ಎಲ್ಲಾ ಹೆಂಗಸರೂ ಸಹಜವಾಗಿ ಮುಖಕ್ಕೆ ಬಣ್ಣ ಬಳೆದುಕೊಂಡು, ಕಣ್ಣು, ಹುಬ್ಬು ತುಟಿಗಳಿಗೆ ಬಣ್ಣ ಹಚ್ಚಿಕೊಳ್ಳುವುದರಿಂದ ನನ್ನ ಮುಖದ ಬಣ್ಣ ಅವರಿಗೆ ವಿಚಿತ್ರವಾಗಿ ಕಾಣುವುದಿಲ್ಲ. ಬಳಿದ ಬಣ್ಣವನ್ನು ಅಳಿಸಲು ರೈಲಿನಲ್ಲಿನ ಸ್ವಚ್ಛ ಗೃಹವೂ ತುಂಬಾ ಅನುಕೂಲವಾಗಿರುತ್ತದೆ. ಅಲ್ಲಿ ಸೋಪು, ಬಿಸಿನೀರು, ಮಡಿವಾಳನ ಒಗೆತದ ಟವೆಲುಗಳು ಎಲ್ಲವೂ ಇರುವುದರಿಂದ ನಾವು ರೈಲಿನಲ್ಲಿ ಪ್ರಯಾಣ ಮಾಡುತ್ತೇವೆ. ಎಂಬುದನ್ನು ಕೂಡಾ ಮರೆಯುತ್ತೇವೆ. ರೈಲು ಗಾಡಿಯಂತೂ ಎಷ್ಟು ವೇಗವಾಗಿ ಹೋಗುವುದೆಂದರೆ ಇಲ್ಲಿನ ಜನರು ಪ್ರಯಾಣಕ್ಕೆ ಎಷ್ಟು ಸಮಯ ಬೇಕಾಗುವುದು ಎಂದು ತಿಳಿಸುತ್ತಾರೆಯೇ ವಿನಹ ಎಷ್ಟು ದೂರವಿದೆಯೆಂದು ತಿಳಿಸಲಾರರು! ಇಲ್ಲಿ 'ಸಮಯ' ಎಂಬುದು ಪ್ರತಿಯೊಬ್ಬರ ಜೀವನದಲ್ಲಿ ಅತಿಮುಖ್ಯವಾದ ವಿಷಯ. 'ಸಮಯ' ವನ್ನು ಇಲ್ಲಿ ತಮ್ಮ 'ವೈರಿ' ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ರೈಲು ಗಾಡಿಗಳು ನಿಶ್ಚಿತ ಸಮಯಕ್ಕೆ ಸರಿಯಾಗಿ ಹೊರಟು ನಿಶ್ಚಿತ ಸಮಯಕ್ಕೇನೇ ನಿಶ್ಚಿತ ನಿಲ್ದಾಣಗಳನ್ನು ಸೇರುತ್ತವೆ. ರೈಲು ಬಿಡುವ ಅಥವಾ ತಲುಪುವ ಸಮಯ 4–16 ಗಂಟೆ ಎಂದು ವೇಳಾಪಟ್ಟಿಯಲ್ಲಿ ಸೂಚಿಸಿದ್ದರೆ ಗಾಡಿ ಖಂಡಿತವಾಗಿ 4–17ಕ್ಕೆ ಇಲ್ಲವೆ 4–15ಕ್ಕೆ ಸೇರದೆ ಸರಿಯಾಗಿ 4-16ಕ್ಕೇನೇ ಸೇರುವುದು ಆಶ್ಚರ್ಯವಲ್ಲವೇ?

ಇರುವೆಯಂತೆ ನಿಧಾನವಾಗಿ ಪ್ರಯಾಣ ಮಾಡಿ ರೂಢಿಯಿರುವ ನಮಗೆ ಈ ವಿಧದ ವೇಗ ಅಥವಾ ಸಮಯದ ಅತಿ ಮಹತ್ವವಾದ ಬೆಲೆ, ಇವುಗಳ ಅರಿವು ಇರುವುದಿಲ್ಲ. ನಮ್ಮ ದೇಶದಲ್ಲಿ ರೈಲು ಬಂಡಿಗಳು ಕ್ಲುಪ್ತ ಸಮಯಕ್ಕೆ ಬಂದು ನಿಲ್ದಾಣವನ್ನು ಸೇರಿದರೆ ಅದೊಂದು ಪವಾಡವೆಂತಲೇ ನಾವು ತಿಳಿಯಬೇಕು. ಹಾಗೆಯೇ ಇಲ್ಲಿನ ರೈಲು ನಿಲ್ದಾಣಗಳಲ್ಲಿ ಜನರಹಿತ ದೃಶ್ಯ ನಮಗೆ ಹೊಸತು. ತಿಂಡಿ, ತೀರ್ಥದ ಮೆಷಿನ್ನುಗಳು ನಿಲ್ದಾಣದಲ್ಲಿ ಅಲ್ಲಲ್ಲಿ ಇರುತ್ತವೆ. ಸಕ್ಕರೆ ಸಹಿತ ಅಥವಾ ರಹಿತ ಕಾಫಿ ಅಥವಾ ಟೀ ಹಾಗೆಯೇ ಹಾಲು ಹಾಕಿರುವ, ಹಾಕದ ಕಾಫಿ ಅಥವಾ ಟೀ ಎಲ್ಲವೂ (Machine) ಮೆಶಿನ್ ಕೊಡುತ್ತದೆ. ಹಣ ಹಾಕಿ ಬೇಕಾದುದನ್ನು ಅವುಗಳಿಂದ ಪಡೆಯಬಹುದು. ನಮ್ಮ ದೇಶದಲ್ಲಿರುವ ರೈಲು ನಿಲ್ದಾಣಗಳಲ್ಲಿರುವ ಗಲಭೆ, ಗದ್ದಲಗಳಿಲ್ಲ, ಮಾರಾಟ ಮಾಡುವವರ ಹಿಂಸೆ, ಗಾಡಿಗಳಲ್ಲಿ ನಡೆಯುತ್ತಿರುವ ಸ್ವಾರಸ್ಯವುಳ್ಳ ಸಂಭಾಷಣೆ, ಇವು ಯಾವುವೂ ಇಲ್ಲ. ಇಲ್ಲಿ ಪ್ರಯಾಣ ಎಂಬುದೇ ಒಂದು ಸುಖಸಾಧನ (Luxury). ಅದರಲ್ಲೂ "ಪುಲ್‌ಮ್ಯಾನ್" (Pullman) ರೈಲುಗಳು ವಿಮಾನಗಳಂತಿದ್ದು ಅನೇಕ ಸೌಕರ್ಯಗಳನ್ನು ನೀಡುತ್ತವೆ. ಕುಳಿತು

ಕೊಂಡಲ್ಲಿ ಕರೆಗಂಟೆಯನ್ನು ಅಮುಕಿದರೆ ಬೇಕಾದುದನ್ನು ಕೇಳಿಕೊಡಲು ಒಬ್ಬ ವ್ಯಕ್ತಿ ಯಾವಾಗಲೂ ಸಿದ್ಧ.

ರೈಲುಗಳಲ್ಲಿ ರಾತ್ರಿ ಪ್ರಯಾಣವೂ ತುಂಬಾ ಸುಖಕರವಾಗಿರುತ್ತದೆ. ಪ್ರಯಾಣಕ್ಕೆ ಬೇಕಾದ ಹಿತಕರವಾದ ಹಾಸಿಗೆ, ಮೆತ್ತನೆಯ ತಲೆದಿಂಬುಗಳು ಧೋಬಿಕಾನೆಯಿಂದ ಹೊಸತಾಗಿ ಒಗೆದು ಬಂದ ಬಿಳೀ ಬಟ್ಟೆಗಳು ಇವುಗಳಿಂದೆಲ್ಲ ಹಾಸಿಗೆ ಸಿದ್ಧವಾಗಿರುತ್ತದೆ. ಓದುವುದಕ್ಕೆ ತಲೆದಿಂಬಿನ ಹತ್ತಿರ ದೀಪ, ಕುಡಿಯುವುದಕ್ಕೆ ತಣ್ಣಗಿರುವ ನೀರನ್ನು ಹತ್ತಿರವಿರುವ ರಿಫ್ರಿಜರೇಟರ್ (Refrigerator) ನಲ್ಲಿಡುತ್ತಾರೆ. ಮುಖ ಕೈತೊಳೆಯುವುದಕ್ಕೆ ನೀರು ಜೋಗುಣಿ (Wash Basin), ಸಾಬೂನು ಸ್ವಚ್ಛ ಟವೆಲುಗಳಿರುತ್ತವೆ. ಗಾಡಿಯೊಳಗಿನ ಹವೆಯನ್ನು ನಮಗೆ ಬೇಕಾದ ಹಾಗೆ ತಣ್ಣಗೆ ಅಥವಾ ಬೆಚ್ಚಗೆ ಮಾಡಲು ತಕ್ಕ ಸಲಕರಣೆಯೂ ಇದೆ. ರೈಲು ಬೆಳಕು ಹರಿಯುವ ಮೊದಲೇ ನಿಲ್ದಾಣವನ್ನು ಸೇರಿದ್ದರೂ ಪ್ರಯಾಣಿಕರು ಗಾಡಿಯೊಳಗೇ ಮಲಗಿದ್ದು ಬೆಳಗಾದ ಮೇಲೆ ರೈಲ್ವೆಯವರು ಕೊಡುವ ಬಿಸಿ ಕಾಫಿ, ಬಿಸ್ಕತ್ತು ತಿಂದು, ಆರಾಮವಾಗಿ ಎದ್ದು ತಮ್ಮ ಊರನ್ನು ಸೇರಿ ಆಯಾ ಕೆಲಸಗಳಿಗೆ ದಣುವಿಲ್ಲದೆ ಹೋಗಲು ಸಾಧ್ಯವಿದೆ.

ಶೆಫೀಲ್ಡಿನಲ್ಲಿ ನಮ್ಮ ನೃತ್ಯ ಪ್ರದರ್ಶನ ಈ ದೇಶದಲ್ಲಿ ಮೊದಲನೆಯದಾಗಿತ್ತು. ಬೆಂಚುಗಳನ್ನು ಜೋಡಿಸಿ ರಂಗಸ್ಥಳವನ್ನು ಮಾಡಿದ್ದರು! ಪರದೆಗಳಿರಲಿಲ್ಲ! ಹೀಗಾಗಿ ನೃತ್ಯ ಪ್ರದರ್ಶನವನ್ನು ಉಪನ್ಯಾಸ ಪ್ರದರ್ಶನವಾಗಿ (Lecture Demonstration) ಮಾರ್ಪಾಟು ಮಾಡಿದೆವು. ಅದು ತುಂಬಾ ಯಶಸ್ವಿಯಾಯಿತು. ಸಭಿಕರಲ್ಲಿ ಮಿಶ್ರ ಜನತೆ ಇತ್ತು.—ಭಾರತೀಯರು, ಪಾಶ್ಚಾತ್ಯರು, ಇಂಡಿಯಾದ ಡೆಪ್ಯುಟಿ ಹೈಕಮಿಷನರಾದ ಶ್ರೀ ಪಿ. ಎನ್. ಹಕ್ಸರ್ ಇವರೂ ಸಭೆಯಲ್ಲಿದ್ದರು. ಪತಿಯವರು ನಮ್ಮ ಮೊದಲ ನೃತ್ಯವನ್ನು ವರ್ಣಿಸಿದೊಡನೆಯೇ ಜನರು ತಮ್ಮ ಮೆಚ್ಚಿಗೆಯನ್ನು ಸೂಚಿಸಿದರು. ನೃತ್ಯಗಳ ಅರ್ಥ, ಅಂದ ಚಂದ ತಿಳಿಯಲು ಅವರ ವರ್ಣನೆ ತುಂಬಾ ಚೆನ್ನಾಗಿತ್ತು. ಪ್ರದರ್ಶನ ಮುಗಿದೊಡನೆ ಕೆಲವರು, "ಭಾರತೀಯ ನೃತ್ಯಗಳು ಇಷ್ಟು ಸುಂದರವಾಗಿವೆಯೆಂದು ನಾವು ತಿಳಿದಿರಲಿಲ್ಲ!" ಎಂದರು. ಇನ್ನೂ ಕೆಲವರು "ಇಷ್ಟು ಸೌಂದರ್ಯವುಳ್ಳ ಇಂತಹ ಕಲೆಯನ್ನು ನಾವೆಂದೂ ನೋಡಿಲ್ಲ!" ಎಂದರು. ಇನ್ನೂ ಕೆಲವರು, "ಈ ವೈವಿಧ್ಯದ ಭವ್ಯಕಲೆ ನಿಜವಾಗಿಯೂ ಭಾರತೀಯ ಕಲೆಯೇ?" ಎಂದು ಆಶ್ಚರ್ಯಪಟ್ಟರು.

ಫೆಬ್ರುವರಿ ದಿನಾಂಕ 1ಕ್ಕೆ A. M. C. ಅವರು ನಮ್ಮ ಮೊದಲ ಸಾರ್ವಜನಿಕ ನೃತ್ಯ ಪ್ರದರ್ಶನವನ್ನು ಲಂಡನ್ನಿನ C. W. I. ಯಲ್ಲಿ (Commonwealth Institute) ಏರ್ಪಡಿಸಿರುವರು ಎಂದು ನಿಮಗೆ ತಿಳಿಸಿರುವೆನೋ ಇಲ್ಲವೋ ಆ ಪ್ರದ

ರ್ಶನವನ್ನು ಯಶಸ್ವಿಯಾಗಿ ಮಾಡಲು ನಮಗೆ ಸಾಕಷ್ಟು ಧೈರ್ಯ ಬರುವಂತೆ ಈ ಶೆಫೀಲ್ಡಿನ ನೃತ್ಯವು ಒಂದು ರೀತಿಯಲ್ಲಿ ನಮಗೆ ಡ್ರೆಸ್ ರೀಹರ್ಸಲ್ ಆಗಿತ್ತು. (Dress Rehearsal) (ಮುಖ್ಯ ಪ್ರದರ್ಶನದ ಒಂದೆರಡು ದಿನ ಮೊದಲು ನಾಟ್ಯ ಕಾರರು ಉಡಿಗೆ ತೊಡಿಗೆಗಳನ್ನು ಧರಿಸಿಕೊಂಡು ಮಾಡುವ ಅಭ್ಯಾಸ) ಅಲ್ಲಿ ನಾವು "ದಶಾವತಾರ" "ಶ್ರೀನಾಥ ಮೋಹಿನಿ ರೂಪ" ಮುಂತಾದ ನರ್ತನಗಳನ್ನು ಮಾಡಿ ಜನರ ಪ್ರೋತ್ಸಾಹವನ್ನು ಪಡೆದು ತೃಪ್ತರಾದೆವು, ಮುಂದಿನ ನಮ್ಮ ದೊಡ್ಡ ಪ್ರದರ್ಶನಕ್ಕೆ ಧೈರ್ಯ ಪಡೆದೆವು.

ಬೆಂಗಳೂರಿನಲ್ಲಿ ನಮ್ಮ ಎಲ್ಲ ನೃತ್ಯಗಳನ್ನೂ ನಮ್ಮ ವಿದ್ಯಾರ್ಥಿಗಳೇ ಹೆಚ್ಚಾಗಿ ಮಾಡುತ್ತಿದ್ದರು. ಜಂಟಿ ನೃತ್ಯಗಳಲ್ಲಿ (Duets) ಮಾತ್ರ ನಾನು ಭಾಗವಹಿಸು ತ್ತಿದ್ದೆ. ವಿದ್ಯಾರ್ಥಿಯರು ನಮ್ಮ ಜೊತೆಯಲ್ಲಿ ಯಾವಾಗಲೂ ಇರುವುದಿಲ್ಲ; ಅಲ್ಲದೆ ಮದುವೆಯಾದ ಮೇಲೆ ಅವರಿಗೆ ನರ್ತಿಸಲು ಅವಕಾಶವೂ ಸಿಗಲಾರದೆಂದು ಗ್ರಹಿಸಿ ಎಲ್ಲ ಪ್ರದರ್ಶನಗಳಲ್ಲೂ ಅವರೇ ಹೆಚ್ಚಾಗಿ ನರ್ತಿಸುವಂತೆ ಪ್ರೋತ್ಸಾಹ ಕೊಡುತ್ತಿ ದ್ದೆವು. 'ಶ್ರೀನಾಥ ಮೋಹಿನಿ ರೂಪ' ವನ್ನು ರಚಿಸಿದ ಮೇಲೆ ಪತಿಯವರು ಒಮ್ಮೆ ನನ್ನನ್ನು ಕುರಿತು "ನೀನು ಈ ರಚನೆ ನರ್ತಿಸುವುದನ್ನು ನೋಡುವ ಆಸೆ" ಎಂದಿ ದ್ದರು. "ಈಗ ನಮ್ಮ ಶಿಷ್ಯೆಯರು ಮಾಡಲಿ, ನಾನು ಯಾವಾಗಲೂ ನಿಮ್ಮ ಜೊತೆ ಇದ್ದೇನಲ್ಲವೇ ? ಅವರ್‍ಯಾರೂ ನಮ್ಮ ಸಹಾಯಕ್ಕೆ ಇಲ್ಲದಿರುವ ಸಂದರ್ಭಗಳಲ್ಲಿ ನಾನು ಮಾಡಲೇಬೇಕಲ್ಲವೇ ?" ಎಂದು ಅವರಿಗೆ ಆಶ್ವಾಸನೆ ಕೊಟ್ಟಿದ್ದೆ. ಈಗ ಇಲ್ಲಿ, ಇಂಗ್ಲೆಂಡಿಗೆ ಬಂದ ವೇಲೆ ಸುಮಾರು ಆರು ವಾರಗಳ ಕಾಲ ದಿನ ರಾತ್ರಿ ಶ್ರಮಪಟ್ಟು ಎಲ್ಲಾ ನೃತ್ಯಗಳನ್ನೂ ಪ್ರದರ್ಶಿಸಲು ಕಷ್ಟಪಟ್ಟೆ. ಟೇಪ್ ರಿಕಾರ್ಡು ಮಾಡಿದ ಸಂಗೀತಕ್ಕೆ ನರ್ತಿಸುವುದೂ ನಮಗೆ ಹೊಸದಾಗಿತ್ತು. ನಮ್ಮ ಕಲಾ ಜೀವನದಲ್ಲಿ ರಿಕಾರ್ಡು ಮಾಡಿದ ಸಂಗೀತಕ್ಕೆ ಕುಣಿಯುವುದು ಇಲ್ಲೇ ಮೊದಲು. ಬೆಂಗಳೂರಿನ ನಮ್ಮ ಸಂಗೀತಗಾರರ ಹಿಮ್ಮೇಳದ ಸ್ಫೂರ್ತಿದಾಯಕ ಸಂಗೀತವಿಲ್ಲದೆ ಅದು ಸಪ್ಪೆ ಯಾಗಿ ತೋರಿಬಂತು. ತವರದ ಡಬ್ಬಿಗಳಲ್ಲಿನ ಆಹಾರದಂತೆ (Tinned Food) ನಿರಸವಾಗಿ ಕಂಡು ಬಂತು. ಆದರೆ ಈ ರಿಕಾರ್ಡು ಮಾಡಿದ ಸಂಗೀತದ ವಿನಹ ನಮಗೆ ಬೇರೆ ಉಪಾಯವಿಲ್ಲ. ಕ್ರಮೇಣ ಅದರ ಅಭ್ಯಾಸವಾಗುತ್ತ ಬಂದಿದೆ. ನಾವಿಬ್ಬರೇ ಯಾವ ವಿದ್ಯಾರ್ಥಿಯ ಸಹಾಯವೂ ಇಲ್ಲದೆ ಪೂರ್ಣ ಪ್ರದರ್ಶನಗಳನ್ನು ಕೊಡಲು ಈಗ ಸಿದ್ಧರಾಗಿದ್ದೇವೆ.

ಲಂಡನ್ನಿನಲ್ಲಿ ನಮ್ಮ ಮೊದಲ ನೃತ್ಯ ಉಪನ್ಯಾಸವು ಹೆಂಪ್ಸ್ಟೆಡ್ ಕಲಾ ಕೂಟದ (Hampsted Art Circle) ಕಲಾವಿದರಿಗಾಗಿ ಏರ್ಪಾಡಾಯಿತು. ಆ ದಿನ ಅಲ್ಲಿ ಸೇರಿದ್ದ ಸಭೆ ಚಿಕ್ಕದಾಗಿದ್ದರೂ ಸೇರಿದವರೆಲ್ಲ ಪ್ರತಿಭಾವಂತ ಕಲಾ

ವಿದರು, ಪ್ರಜ್ಞಾವಂತರು, ಕಲೆಯಲ್ಲಿ ವಿಶೇಷವಾದ ಅಭಿರುಚಿಯಿದ್ದು ಭಾರತೀಯ ನೃತ್ಯಕಲೆಯನ್ನು ನೋಡಲು ಆಸೆಪಟ್ಟು ಉತ್ಸುಕತೆಯಿಂದ ಬಂದವರು. ಪತಿಯವರು ಅಂಥವರ ಸಮಕ್ಷತೆಯಿಂದ ಸ್ಫೂರ್ತಿಹೊಂದಿ ಭಾರತೀಯ ನೃತ್ಯಕಲೆಯ ಮೇಲೆ ಒಂದು ಅಮೋಘ ಭಾಷಣವನ್ನಿತ್ತರು. ಕಲೆಯ ಶಾಸ್ತ್ರದ ಬಿಗು, ಸಂಪ್ರದಾಯ ಬದ್ಧತೆಯ ಸಪ್ಪೆ ತೆಗೆಯಲೆಂಬಂತೆ ನಾನೊಂದು ಅತಿ ಭರ್ಜರಿ ಸೀರೆಯನ್ನುಟ್ಟು ಪತಿಯವರ ವಿವರಣೆಗಳಿಗೆ ಸರಿಯಾಗಿ ನೃತ್ಯ ಪ್ರದರ್ಶನವನ್ನು ಮಾಡಿ ತೋರಿಸಿದೆ. ಎಲ್ಲರೂ ತುಂಬಾ ಸಂತೋಷಪಟ್ಟರು. ಈ ನೃತ್ಯ ಉಪನ್ಯಾಸವಾದ ಮೇಲೆ ಪ್ರೇಕ್ಷಕರು ಅನೇಕಾನೇಕ ಚತುರ ಪ್ರಶ್ನೆಗಳನ್ನು ಕೇಳಿದರು. ಹೆಚ್ಚಾಗಿ ನಮ್ಮ ದೇವಸ್ಥಾನಗಳಲ್ಲಿನ ನೃತ್ಯಕಲೆ, ದೇವದಾಸಿಯರ ವಿಚಾರ, ಭರತನಾಟ್ಯದ ಮೇಲೆ ಇರುವ ಧಾರ್ಮಿಕ ಪ್ರಭಾವ, ಪುರಾಣ ಕಥೆಗಳ ಮೂಲಕ ಹಿಂದೂ ಅಧ್ಯಾತ್ಮ ಮೊದಲಾದುವನ್ನು ಕುರಿತು ಅವರ ಪ್ರಶ್ನೆಗಳಿದ್ದುವು. ಕೊನೆಗೆ ಯೋಗಸಾಧನೆಯ ವಿಷಯ ಕೇಳಿಯೇ ಕೇಳಬೇಕು.

ನಮ್ಮ ಫೆಬ್ರವರಿ ಒಂದರ ದೊಡ್ಡ ಪ್ರದರ್ಶನಕ್ಕಾಗಿ ತುಂಬಾ ಅಭ್ಯಾಸ ಮಾಡುತ್ತಲಿದ್ದೇವೆ........ ಹಿರಿಯರ ಆಶೀರ್ವಾದವನ್ನು ಬೇಡುತ್ತೇವೆ. ಮಕ್ಕಳಿಗೆ ಆಶೀರ್ವಾದಗಳು.

ಇತಿ ನಿಮ್ಮ

ಚಂದಮ್ಮ.

* * * *

ಲಂಡನ್

3 – 2 – 1966

ಮುದ್ದು ಅಮ್ಮ,

ನಿಮ್ಮ ಕಾಗದ ಈಗತಾನೇ ಕೈಸೇರಿತು. ನೀವು ಕೂಡಲೇ ಜವಾಬು ಹಾಕಬೇಕೆಂದು ಕೇಳಿಕೊಂಡದ್ದಕ್ಕೆ ಇದನ್ನು ಅವಸರದಲ್ಲಿ ಬರೆಯುತ್ತಲಿದ್ದೇನೆ. ಇಂದು ಸಾಯಂಕಾಲ ನಮ್ಮ ನೃತ್ಯ ಉಪನ್ಯಾಸವನ್ನು ಇಲ್ಲಿ ಒಂದು ಪ್ರಮುಖ ಪಂಗಡಕ್ಕೆ ಕೊಡಲು ಸಿದ್ಧರಾಗುತ್ತಿದ್ದೇವೆ. ನಾಳೆ ನಾವು ಲೀಡ್ಸಿಗೆ (Leeds) ಹೋಗಿ 6ನೇ ತಾರೀಕಿಗೆ ಹಿಂದಿರುಗುತ್ತೇವೆ.

ನಮ್ಮ ಒಂದನೆಯ ದಿನಾಂಕದ ನೃತ್ಯ ಪ್ರದರ್ಶನ ಎಣಿಸಲಾರದಷ್ಟು ಯಶಸ್ವಿಯಾಯಿತು. ಇದರ ಜೊತೆಗೆ ಇಲ್ಲಿನ ಪ್ರಖ್ಯಾತ ನೃತ್ಯ ವಿಮರ್ಶಕರ ಟೀಕೆಯನ್ನು

ಎಡದಿಂದ ಬಲಕ್ಕೆ :

ಪ್ರಸಿದ್ಧ ಬ್ಯಾಲೆ ನೃತ್ಯಗಾತಿ ಬೆರಿಲ್‌ಗ್ರೇ, ವಿಶ್ವವಿಖ್ಯಾತ ರಾಮುಗೋಪಾಲ್ ಶ್ರೀಮತಿ ಚಂದ್ರಭಾಗಾ, ಶ್ರೀ ಅಯಣ್ಣದೇವ ಅಂಗಡಿಯವರು, ಶ್ರೀ ಯು. ಎಸ್. ಕೃಷ್ಣರಾವ್, ಮತ್ತು ಶ್ರೀಮತಿ ಪೆಟ್ರಿಶಿಯಾ ಅಂಗಡಿಯವರು- ಲಂಡನ್‌ನಲ್ಲಿ ಮೊದಲ ಪ್ರದರ್ಶನವಾದೊಡನೆ ತೆಗೆದ ಚಿತ್ರ

ಕಳಿಸಿದ್ದೇನೆ. ಅವರು ನನಗೆ ಕೊಟ್ಟ ಶ್ಲಾಘನೆ ಈ ತನಕ ಯಾರೂ ಮೀರಿಸಿಲ್ಲ, ಇನ್ನುಮುಂದೆ ಮೀರಿಸುವಂತೆಯೂ ಇಲ್ಲವೆಂದು ಶ್ರೀ ರಾಮಗೋಪಾಲರು ಅನ್ನುತ್ತಿದ್ದಾರೆ. ನನ್ನ 'ಮೋಹಿನಿ ರೂಪ' ನೃತ್ಯ ತಾನೆಂದೂ ಮರೆಯುವಂತಿಲ್ಲ ಎಂದೂ ಹೇಳುತ್ತಿದ್ದಾರೆ. ನಿಜ, 'ಮೋಹಿನಿ ರೂಪ' ದ ಹಾಡು ಎಂತಹ ಸ್ಫೂರ್ತಿದಾಯಕ ಹಾಡು! ನನ್ನ ಬಾಲ್ಯದಿಂದ ಅದನ್ನು ನಿಮ್ಮ ಬಾಯಿಂದ ಕೇಳಿ ತುಂಬಾ ಮೆಚ್ಚಿಕೊಂಡು ಅದನ್ನು ನರ್ತಿಸಬೇಕೆಂದು ಆಸೆಪಟ್ಟಿದ್ದೆ. ನನಗೆ ಗೊತ್ತಿದ್ದ ಮಟ್ಟಿಗೆ ಈ ಹಾಡಿನ ಸಾಹಿತ್ಯ ಎಲ್ಲೂ ಅಚ್ಚಾಗಿರಲಿಲ್ಲ. ಹೀಗಾಗಿ ಅದನ್ನು ನಿಮ್ಮಿಂದಲೇ ತರಿಸಿದೆ. ಆದರೆ ಅದನ್ನು ಪತಿರಾಯರಿಗೆ ಕೊಟ್ಟಾಗ ಅವರು "ಇದರಲ್ಲಿ ಸಾಹಿತ್ಯ ಬಹಳವಿದೆ, ನೃತ್ಯಕ್ಕೆ ಕಷ್ಟ" ಎಂದರು. ಆದರೂ ಅವರನ್ನು ಕಾಡಿ, ಬೇಡಿ ಎಂಬಂತೆ ಅದನ್ನು ನೃತ್ಯಕ್ಕೆ ಅಳವಡಿಸಿಕೊಳ್ಳುವಂತೆ ಮಾಡಿದೆ. ಅವರು ರಚಿಸಿದ 'ಮೋಹಿನಿ ರೂಪ' ದ ನೃತ್ಯವು ನಿಜವಾಗಿಯೂ ಎಷ್ಟು ಮನಮೋಹಕವಾಯಿತು! ಅವರು ರಚಿಸಿರುವ ಅನೇಕಾನೇಕ ನೃತ್ಯರೂಪಕಗಳಲ್ಲಿ ಅದು ಅದ್ವಿತೀಯವಾಯಿತು. ನಿಜಕ್ಕೂ ಅವರದನ್ನು ರಚಿಸುತ್ತಿದ್ದಾಗ ಅವರಲ್ಲೊಂದು ಪ್ರತಿಭಾನ್ವಿತ ಸ್ಫೂರ್ತಿ ಮೂಡಿತ್ತೆಂಬುದರಲ್ಲಿ ಸಂಶಯವಿಲ್ಲ. ಪುರಂದರದಾಸರ ಶಬ್ದ ಮಾಯಾಜಾಲ ಅಷ್ಟಿದೆ ಆ ಹಾಡಿನಲ್ಲಿ. ನಮ್ಮ ದೇಶದಲ್ಲಿ ನಮ್ಮ ಶಿಷ್ಯೆ ಗಾಯತ್ರಿ ಅದನ್ನು ಮೊದಲು ನರ್ತಿಸುವ ಹೊತ್ತಿಗೆ ನನ್ನ ಕಣ್ಣುಗಳಿಂದ ಆನಂದ ಬಾಷ್ಪಗಳು ಬಂದಿದ್ದುವು. ಅಂತೂ ಲಂಡನ್ನಿನಲ್ಲಿ ನಾನದನ್ನು ಮೊನ್ನೆ ನರ್ತಿಸಿದಾಗ ನನ್ನನ್ನು ನಾನೇ ಮರೆತೆ! ಆ ಹಾಡಿನ ಪದ ಜೋಡಣೆ, ಅರ್ಥಗಳಿಂದ, ತುಂಬಾ ಸ್ಫೂರ್ತಿಗೊಂಡು ನನ್ನಾತ್ಮಕ್ಕೆ ತೃಪ್ತಿಯಾಗುವಂತೆ ಕುಣಿದೆ! ನಿಮ್ಮ ಪೂರ್ಣ ಆಶೀರ್ವಾದದಿಂದ ಈ ನೃತ್ಯ ನನಗೀಗ ಹೆಸರು ತಂದಿದೆ. ರಾಮಗೋಪಾಲರ ಮತ್ತು ಅಯನದೇವ ಅಂಗಡಿಯವರ ಸಂತೋಷಕ್ಕಂತೂ ತುದಿ ಮೊದಲಿಲ್ಲ. ನಾನು ಗಳಿಸಿದ ಹೆಮ್ಮೆಯ ವಿಮರ್ಶೆಗಳು ನಿಜಕ್ಕೂ ಭಾರತೀಯ ಇತರ ನೃತ್ಯಗಾತಿಯರಿಗೆ ವಿಶೇಷ ಅಸೂಯೆಯನ್ನು ತರುವಂತಿದೆ ಎಂದವರು ಹೇಳುತ್ತಿದ್ದಾರೆ! ಏಕೆಂದರೆ ಇದೇ ಪ್ರಖ್ಯಾತ ವಿಮರ್ಶಕರು ಇಲ್ಲಿ ಬಂದು ನರ್ತಿಸಿದ ಭಾರತೀಯ ನೃತ್ಯಗಾತಿಯರನ್ನೆಲ್ಲಾ ವಿಮರ್ಶಿಸಿದ್ದಾರೆ. ಇಂತಹ ಅಮೋಘ ಶ್ಲಾಘನೆಯನ್ನು ಅವರ್‍ಯಾರಿಗೂ ನೀಡಲಿಲ್ಲವಂತೆ. "ಚಂದಮ್ಮಾ, ಈ ಅಮರವಾದ ವಿಮರ್ಶೆ ನಿನಗೆ ಯಾವಾಗಲೂ ನಿನ್ನ ನರ್ತನ ಪ್ರದರ್ಶನಗಳಲ್ಲಿ ಸ್ಫೂರ್ತಿ ಕೊಡುವಂತಾಗಲಿ!" ಎಂದು ರಾಮಗೋಪಾಲರು ಆಶಿಸಿದರು. "ಚಂದಮ್ಮಾ, ನಿಮ್ಮನ್ನು ನಾನಿಲ್ಲಿಗೆ ಕರತರದಿದ್ದರೆ ನಿಮ್ಮಂಥ ಕಲಾವಿದರು ಸಾಕಷ್ಟು ಪ್ರೋತ್ಸಾಹವಿಲ್ಲದೆ ಭಾರತದಲ್ಲಿ ನಿಧಾನವಾಗಿ ಅದೃಶ್ಯರಾಗುತ್ತಿದ್ದಿರಿ ಎಂಬ ಅರಿವು ನನಗಾದಾಗ ಕರುಳು ಕಿತ್ತು ಹೋಗುವಂತಾಗುತ್ತದೆ. ನನ್ನ ಕೈಲಾದಷ್ಟು ಪ್ರೋತ್ಸಾಹ ನಿಮಗೆ ಕೊಡಲು ಹಟ ಹಿಡಿದಿದ್ದೇನೆ. ಈ ಕೀರ್ತಿಗೆ ಕಾರಣರೆಲ್ಲ ನೀವೇ. ಈ ಅದ್ಭುತ ಕಲೆ ನಿಮ್ಮಲ್ಲಿ ಹುದುಗಿತ್ತು. ಇದನ್ನಿಲ್ಲಿ ಬೆಳಕಿಗೆ ತರಲು ನಾನು ಕಾರಣಭೂತನಾದೆ, ಅಷ್ಟೇ" ಎಂದು

ಅಂಗಡಿಯವರು ಹೇಳಿದರು. ಕಲಾ ವಿಷಯಗಳಿಗೆ ಮೀಸಲಾಗಿದ್ದ ಇಂಗ್ಲೆಂಡಿನ ಪ್ರಸಿದ್ಧ ಪತ್ರಿಕೆಯಾದ "ಸ್ಟೇಜ್ ಮತ್ತು ಟೆಲಿವಿಝನ್" (Stage and Television) ಇದರ ವಿಮರ್ಶಕರು ನಮ್ಮ ಪ್ರದರ್ಶನವನ್ನು ವಿಮರ್ಶಿಸುತ್ತ ಹೀಗೆ ಬರೆದಿರುವರು : "'ಮೋಹಿನಿ ರೂಪ' ದಂತಹ ನೃತ್ಯರಚನೆ ನನ್ನ ಅನುಭವದಲ್ಲಿ ಅತ್ಯುತ್ತಮವಾದ ಒಂದು ಅನುಭವ. ನಾನಿಂತಹ ಅನುಭವವನ್ನು ಯಾವ ನೃತ್ಯ ವನ್ನು ನೋಡಿದಾಗಲೂ – ಅದು ಪಾಶ್ಚಾತ್ಯ ನೃತ್ಯವಿರಲಿ, ಪೂರ್ವದ ನೃತ್ಯವಿರಲಿ – ಇದುವರೆಗೂ ಅನುಭವಿಸಿದ್ದಿರಲಿಲ್ಲ........" ಎಂದು. ಇಲ್ಲಿನ ಪ್ರಖ್ಯಾತ ಬ್ಯಾಲೆ ನೃತ್ಯಗಾತಿ (Ballerina) ಬೆರಿಲ್ ಗ್ರೇ (Beryl Grey) ಎಂಬಾಕೆ ನಮ್ಮ ಪ್ರದ ರ್ಶನ ಮುಗಿದೊಡನೆ ಬಂದು ನಮ್ಮನ್ನು ಅಪ್ಪಿ, ಮುತ್ತಿಕ್ಕಿ, "ನೀವು ಭಾರತೀಯ ನೃತ್ಯ ಕಲಾವಿದರು, ಎಷ್ಟು ಅದೃಷ್ಟಶಾಲಿಗಳು ! ನೀವು ನಿಮ್ಮ ನೃತ್ಯವನ್ನು ಹೃದಯದಿಂದ ಮಾಡಬಲ್ಲಿರಿ; ನಾವು ನಮ್ಮ ಅವಯುವಗಳಿಂದ ಮಾತ್ರ ನರ್ತಿಸಬಲ್ಲೆವು !" ಎಂದು ಹೊಗಳಿದರು. "ಭರತ ನಾಟ್ಯಕ್ಕೆ ಅಗತ್ಯವಾಗಿ ಬೇಕಾಗಿದ್ದ ಸಂಗೀತಗಾರರ ನೆರವು ಇಲ್ಲದೆ, ಬರೀ 'ಟೇಪ್' ಸಂಗೀತದ ಸಹಾಯದಿಂದ ಅದ್ಭುತವಾದ ಭರತ ನಾಟ್ಯವನ್ನು ಒಬ್ಬರು, ಇಬ್ಬರು, ಮೂವರು ವ್ಯಕ್ತಿಗಳಿಗೆ ಅಳವಡಿಸಿ ಪ್ರದರ್ಶನವನ್ನು ನೀವು ಕೊಟ್ಟಿದ್ದು ನಿಜವಾಗಿಯೂ ನಂಬಲಾರದಂತಾಗಿದೆ", ಎಂದು ಮತ್ತೊಬ್ಬ ಪತ್ರಿಕೋ ದ್ಯೋಗಿ ಅಂದರು........ಅಂತೂ ಈ ಯಶಸ್ಸು ಕನಸಿನಲ್ಲಿ ಕಂಡಂತಿದೆ!........

ಅಗತ್ಯವಾಗಿಯೂ ಫೆಬ್ರುವರಿ 19 ರಂದು 'ಅರಿಸಿನ ಕುಂಕುಮ' ವನ್ನು ಸಂಭ್ರಮ ದಿಂದ ನೆರವೇರಿಸಬೇಕು ! ನಮ್ಮ ಮದುವೆಯ ರಜತ ಮಹೋತ್ಸವಕ್ಕಿಂತ ಮುಖ್ಯ ವಾಗಿ ಅದು ನಿಮ್ಮ ಮದುವೆಯ ಸುವರ್ಣ ಮಹೋತ್ಸವವಲ್ಲವೇ ?

ಇತಿ ನಿಮ್ಮ

ಚಂದಮ್ಮ.

* * * *

ಲಂಡನ್

I4 - 2 – 1966 ಮಧ್ಯಾಹ್ನ

ಮುದ್ದು ಮಗು ಶಿವದೇವ್,

ಇಂದು ನೀನು ಹುಟ್ಟಿದ ಹಬ್ಬವಲ್ಲವೇ? ನಾನು ಈಗ ನಿನ್ನ ಜೊತೆಗೇನೇ ಇದ್ದೇನೆ. ಇಂದಿನ ಶುಭದ ದಿನ ನಿನ್ನನ್ನು ಗಟ್ಟಿಯಾಗಿ ಅಪ್ಪಿಕೊಂಡು, ನಿನ್ನ ಎತ್ತರವನ್ನು ತಲುಪಬಲ್ಲೆನಾದರೆ, ಮುತ್ತಿಕ್ಕಬೇಕೆನ್ನಿಸುತ್ತದೆ! ದೇವರು ನಿನ್ನನ್ನು ಸದಾ ಕಾಪಾಡಲಿ ಮಗು ! ನೂರಾರು ವರ್ಷ ಬಾಳು.

3263
VIJAYA EVENING COLLEGE LIBRARY
BANGALORE-4

20 ವರ್ಷಗಳ ಹಿಂದೆ 1946 ರಲ್ಲಿ ನಿನ್ನನ್ನು ನಮಗೆ ವರವಾಗಿ ಕೊಟ್ಟ ಪರಮಾತ್ಮನಿಗೆ ಕೃತಜ್ಞರಾಗಿದ್ದೇವೆ. ನಿನಗೆ ಆಯುರಾರೋಗ್ಯ ಧನ ಸಂಪತ್ತನ್ನು ನೀಡಿ ಪರಮಾತ್ಮನು ಕಾಪಾಡಲಿ. ಇನ್ನೇನನ್ನೂ ಹೇಳಲು ಅಶಕ್ತಳು. ಇಂದು ಬೆಳಗ್ಗಿನಿಂದ ನಿನ್ನ ನೆನಪಾಗಿ ಅಳುತ್ತಿದ್ದೇನೆ. ನಿನ್ನ ಜೊತೆ ಇರಬೇಕೆಂದು ಮನಸ್ಸು ಬಹಳ ಕಾಡುತ್ತಿದೆ. ತೋಟದಿಂದ ಗರಿಕೆ ಹುಲ್ಲನ್ನು ತಂದು (ಇಲ್ಲೀಗ ಈ ಹವೆಗೆ ಹೂಗಳು ಆಗುವುದಿಲ್ಲ). ನಾವು ನಮ್ಮ ಜೊತೆ ತಂದ ಶ್ರೀ ಗಣಪತಿಯನ್ನು ಅಲಂಕರಿಸಿ, ಊದುಬತ್ತಿಯನ್ನುರಿಸಿ, ನಿನಗೋಸ್ಕರ ಪ್ರಾರ್ಥಿಸಿದೆ.

ಈ ವರ್ಷ ನಿನ್ನ ಜೀವನದಲ್ಲಿ ಒಂದು ಮುಖ್ಯವಾದ ಗಡಿ, ನೀನು ಪದವೀಧರನಾಗಲಿರುವೆ. ನಿನ್ನ ಮನಸ್ಸಿನ ಕನಸುಗಳೆಲ್ಲಾ ನೆನಸಾಗಲಿ ಮಗು. ನೀನು 1946 ಫೆಬ್ರವರಿ 14 ರಂದು 1–38 ಮಧ್ಯಾಹ್ನ ಹುಟ್ಟಿದ ಘಳಿಗೆಯಿಂದ ಇಂದಿನವರೆಗಿನ ಇಪ್ಪತ್ತು ವರ್ಷಗಳೆಲ್ಲವೂ ನನ್ನ ಮನಸ್ಸಿನ ಮುಂದೆ ಅಚ್ಚಳಿಯದೆ ಬಂದು ಹಾದುವು. ನಿನ್ನ ಹುಟ್ಟು ಹಾಗೆಯೇ ಕಲಾ ಕ್ಷೇತ್ರದಲ್ಲಿ ನಾವು ಅನುಭವಿಸಿದ ಕಷ್ಟನಷ್ಟಗಳು.... ಕಲೆಗಾಗಿ ನಮ್ಮ ಧ್ಯೇಯಗಳು....ಹೆಣಗಾಟ....ಹಲವೊಮ್ಮೆ 3–5 ತಿಂಗಳ ಮಗುವಾದ ನಿನ್ನನ್ನು ಸಮಯಕ್ಕೆ ಸರಿಯಾಗಿ ಉಣಿಸದೆ ಕಲೆಗಾಗಿ ನೀಡಿದ ಜೀವನ....ಕಷ್ಟವಾದ ಪ್ರಯಾಣ ಪ್ರವಾಸಗಳು....ಮುಂಬಯಿಯಲ್ಲಿ ಸಾರಸ್ವತ ಸಂಘದ ಸಹಾಯಾರ್ಥವಾಗಿ ಕೊಟ್ಟ ನೃತ್ಯ ಪ್ರದರ್ಶನದ ಅನಂತರ ನನಗೂ ನಿನಗೂ ಬಂದ ಕಠಿಣ ಕಾಯಿಲೆ, ಗಂಡಾಂತರಗಳು....ಅನಾರೋಗ್ಯದ ನರಳುವಿಕೆ....ಈ ಎಲ್ಲ ಕಾರಣಗಳಿಂದ ಒಂದು ವರ್ಷಕಾಲ ನಾನು ನೃತ್ಯವನ್ನು ಬಿಟ್ಟು ಸಂಸಾರದ ಕಡೆಗೆ ಪೂರ್ಣ ಗಮನವಿಟ್ಟುದು....ಆರ್ಥಿಕ ಅನಾನುಕೂಲತೆ, ಸಂಕಷ್ಟಗಳು....ಕೊನೆ ಕೊನೆಗೆ ಪತಿಯವರು ಕಲೆಬಿಟ್ಟು ಪುನಃ ಕಾಲೇಜು ಕೆಲಸಕ್ಕೆ ಸೇರಿದುದು....ಅಂದು ಬೆಂಗಳೂರಿನ ಆ ಮನೆಯನ್ನು ಗಣಹೋಮ ಮಾಡಿ ಪ್ರವೇಶ ಮಾಡಿದಾಗ, ಎಲ್ಲವನ್ನು ಕಳೆದುಕೊಂಡರೂ ನಮ್ಮಲ್ಲಿ ನೀನು ಮತ್ತು ನಿನ್ನ ಅಣ್ಣ, ನೀವಿಬ್ಬರೇ ನಮ್ಮ ನಿಧಿಗಳೆಂದು ಭಾವಿಸಿದ ದಿನಗಳು....ನಿಮ್ಮಿಬ್ಬರನ್ನು ಪ್ರೇಮದಿಂದ, ಜಾಗರೂಕತೆಯಿಂದ ಭದ್ರವಾಗಿ ಬೆಳೆಸಿದಂತೆ, ಕಲಾ ಪ್ರಪಂಚವನ್ನೂ ಕ್ರಮೇಣ ತೆರೆದು ಅದರೊಳಗೆ ಕಾಲಿಡಲು ಧೈರ್ಯಪಟ್ಟೆವು. ಮಗೂ, ನಿನ್ನ ಬೆಳವಣಿಗೆ ನಮ್ಮ ಕಲೆಯ ಬೆಳವಣಿಗೆಯೂ ಖಂಡಿತ ಅಹುದು !

ನೀನು ಮೊದಲು 'ಮಕ್ಕಳ ಮಂಟಪ'ಕ್ಕೆ ಹೋಗಿ ಅತ್ತು ಮನೆಗೆ ಓಡಿಬಂದುದು, ನಿನ್ನ ಅಣ್ಣ ನಿನಗೆ ಪೆಪ್ಪರ್‌ಮಿಂಟ್ ಕೊಟ್ಟು ಪುನಃ ಮಂಟಪಕ್ಕೆ ಕಳುಹಿಸಿದುದು. ಆದರೂ ಪುನಃ ಮರುದಿನ ಶಾಲೆಗೆ ಹೋಗಲಾರೆನೆಂದು ನೀನು ಅತ್ತಾಗ, ನೀನು ಪಡುವ ದುಃಖವನ್ನು ಸಹಿಸಲಾರದೆ, ನಿನ್ನನ್ನು ಅಗಲಲಾರದೆ ನಾನೇ ಮನೆಯಲ್ಲಿ

ನಿನಗೆ ಪಾಠ ಆರಂಭಿಸಿದುದು....ವಿದ್ಯೆಯ ಸಿಹಿ ತಿಳಿದೊಡನೆಯೇ ನೀನು ಶಾಲೆಗೆ ನಗುತ್ತ ಹೋದುದು....ನಿನ್ನ ವಿದ್ಯಾರ್ಜನೆ....ನಿನ್ನ ಶಾಂತ ಸ್ವಭಾವದ ಬೆಳವಣಿಗೆ.... ನಿನ್ನ S. S. L. C. ರ್‍ಯಾಂಕ್ ಬರುವವರೆಗೆ ನಿನ್ನ ಮೇಧಾಶಕ್ತಿಯ ನಿಜವಾದ ಅರಿವು ನಮಗಾಗದಿದ್ದುದು....ಅನಂತರ ಇಂದಿನವರೆಗೆ ನೀನು ವಿಶ್ವವಿದ್ಯಾನಿಲಯದ ಪ್ರತಿಯೊಂದು ಪರೀಕ್ಷೆಯಲ್ಲಿ ಗಳಿಸಿದ ರ್‍ಯಾಂಕುಗಳು, ವಿದ್ಯಾರ್ಥಿವೇತನಗಳು....ನಮಗೆ ಒಂದು ಕಾಸೂ ಖರ್ಚು ಇಲ್ಲದೆ ನೀನೀವರೆಗೆ ನಡೆಸಿಕೊಂಡು ಬಂದ ನಿನ್ನ ವಿದ್ಯಾಭ್ಯಾಸ........

ಇನ್ನು ಒಂದೆರಡು ತಿಂಗಳಲ್ಲಿ ನೀನು ಪದವೀಧರನಾಗುವೆ. ನೀನು ನಮ್ಮ ಅಮೂಲ್ಯ ಮಗು. ನೀನೀಗ ಭಾರತವನ್ನು ಬಿಟ್ಟು ನಿನ್ನ ಮುಂದಿನ ವಿದ್ಯಾಭ್ಯಾಸಕ್ಕಾಗಿ ಪರದೇಶಕ್ಕೆ ಹೋಗುವುದು ನನಗೆ ಖಂಡಿತ ಇಷ್ಟವಿಲ್ಲ. ಹೊರಗೆ ಜಗತ್ತು ಅಸಹ್ಯವಾಗಿದೆ ಮಗು. ನೀನು ಈವರೆಗೆ ಬೆಳೆದು ಬಂದ ರೀತಿ ದೈವಿಕವಾಗಿದೆ. ಪರದೇಶಗಳ ವಾತಾವರಣ ನಿನ್ನನ್ನು ಹಾಳುಮಾಡಬಹುದೆಂಬ ಭೀತಿಯಿದೆ ನನಗೆ. ಜಗತ್ತಿನ ಹಲವಾರು ಅನುಭವಗಳಿಗೆ ನೀನಿನ್ನೂ ಚಿಕ್ಕವನು. ನಿನ್ನ M. E. ಯನ್ನು ನೀನು ಬೆಂಗಳೂರಿನಲ್ಲೇ ಮಾಡಬಹುದು. ಅದಾಗುವಾಗ ನೀನು ಸಾಕಷ್ಟು ದೊಡ್ಡವನಾಗುವೆ. ಆನಂತರ ನೀನು ಇನ್ನೂ ದೊಡ್ಡ ಪದವಿಗಳನ್ನೂ ಸಾಧಿಸಬೇಕು ಎಂಬ ಆಸೆಯಾದರೆ ಆಗ ನೀನು ಪರದೇಶಗಳಿಗೆ ಹೋಗುವೆಯಂತೆ.

ನಿನ್ನ ಹುಟ್ಟಿದ ಹಬ್ಬಕ್ಕೆ ನಾವು ಕಳುಹಿಸಿದ Philishave Electric Shaver (ಕ್ಷೌರ ಮಾಡಿಕೊಳ್ಳುವ ವಿದ್ಯುಚ್ಛಕ್ತಿಯ ಸಲಕರಣೆ) ಇಷ್ಟರಲ್ಲಿ ತಲುಪಿರಬೇಕಲ್ಲವೇ ? ಅದಕ್ಕಿಂತ ಹೆಚ್ಚಾಗಿ, ನನ್ನ ಕಲೆಯನ್ನು ಕುರಿತು ಈಗಾಗಲೇ ಪ್ರಕಟವಾದ ಕೆಲವು ವಿಮರ್ಶೆಗಳನ್ನು ಇದರೊಂದಿಗೆ ಕಳುಹಿಸುತ್ತೇನೆ. ಇವು ನಾನೀಗ ನಿನಗಾಗಿ ಕೊಡುವ ಅಮೂಲ್ಯ ಉಡುಗೊರೆ. ಇವನ್ನು ತುಂಬಾ ಅಭಿಮಾನದಿಂದ ನಿಮಗೆ ಕಳಿಸುತ್ತಿದ್ದೇನೆ. ನಮ್ಮ ಮಕ್ಕಳಾದ ನೀವು ನಮ್ಮ ಕಲಾಭಿವೃದ್ಧಿಗೆ ಯಾವ ಅಡ್ಡಿ ಆತಂಕಗಳನ್ನೂ ತಾರದೆ ಇದ್ದುದರಿಂದ ಇಂದು ಈ ಕೀರ್ತಿ ನಮ್ಮ ಪಾಲಿಗೆ ಬಂದಂತೆ ನಿಮ್ಮ ಪಾಲಿಗೂ ಸೇರಿದೆ.

ನಿನ್ನ B. E. ಪರೀಕ್ಷೆಯ ತಾರೀಖುಗಳು ಗೊತ್ತಾದ ತಕ್ಷಣ ನಮಗೆ ತಿಳಿಸು ಮಗೂ.

ಇತಿ

ಅಮ್ಮನ ಆಶೀರ್ವಾದಗಳು.

* * * *

ಲಂಡನ್
23-2-1966

ಮುದ್ದು ಶಿವದೇವ್,

19ನೇ ತಾರೀಖಿನಂದು ನನ್ನ ಮನಸ್ಸೆಲ್ಲ 'ರುಕ್ಮಿಣಿ' ಯಲ್ಲಿತ್ತು. ನಮ್ಮ ತಾಯಿ 'ಅರಸಿನ ಕುಂಕುಮ' ವನ್ನು ವಿಜೃಂಭಣೆಯಿಂದ ಜರುಗಿಸಿರಬೇಕಲ್ಲವೇ ? ನಿನ್ನ ಕಾಗದವನ್ನೋದಿ ಕಣ್ಣಲ್ಲಿ ಆನಂದಬಾಷ್ಪಗಳು ಉಕ್ಕಿಬಂದುವು. ನಿನ್ನ ಕಾಗದವೇ ನಮಗೊಂದು ಉಡುಗೊರೆಯಾಯಿತು. ಅಂತೂ ನಮ್ಮ ಮದುವೆಯ ರಜತಮಹೋತ್ಸವವನ್ನು ಪರದೇಶದಲ್ಲಿ ಜರುಗಿಸುವೆವೆಂದು ನಾವೆಂದೂ ಎಣಿಸಿರಲಿಲ್ಲ. ಅಲ್ಲದೆ ಆ ಸಮಯ ಜಯದೇವನೂ ನಮ್ಮ ಜೊತೆ ಇಲ್ಲಿದ್ದುದು ಆಶ್ಚರ್ಯವೇ ಆಶ್ಚರ್ಯ ! 18ನೇ ತಾರೀಖು ರಾತ್ರಿ 12 ಗಂಟೆಗೆ ಜಯದೇವನು ನಮ್ಮಿಬ್ಬರನ್ನೂ ಅಪ್ಪಿಕೊಂಡು ಮುತ್ತಿಕ್ಕಿ ನಮ್ಮನ್ನು ಅಭಿನಂದಿಸಿದ್ದು ಎಷ್ಟೊಂದು ಆನಂದದ ವಿಷಯ ! ಮರುದಿನ ಬೆಳಿಗ್ಗೆ ಈ ಮನೆಯಲ್ಲಿ ಮೇಜಿನ ಮೇಲೆ ಅಂದವಾದ ಒಂದು ದೊಡ್ಡ ಕೇಕನ್ನು ಇಟ್ಟಿದ್ದರು. ಬೆಳ್ಳಿಯ ರೇಖೆಯಿಂದ ("Congratulations!") ಎಂದು ಅದರ ಮೇಲೆ ಕೆತ್ತಲ್ಪಟ್ಟಿತ್ತು. ಮೇಲೆ 25 ಎಂಬ ಅಂಕೆಯೂ ಇತ್ತು. ಜಯದೇವನ ಮುಂದೆಯೇ ಅದನ್ನು ಕತ್ತರಿಸಿ ನಿಮ್ಮನ್ನೆಲ್ಲ ಜ್ಞಾಪಿಸಿಕೊಂಡು ತಿಂದೆವು. ಹಲವು ಕಡೆಗಳಿಂದ ಹಲವಾರು ಶುಭಾಶಯಗಳು ಬಂದಿದ್ದುವು. ನಮ್ಮ ಪ್ಯಾರಿಸ್ಸಿನ ಶಿಷ್ಯೆ ಹೀಗೆ ಬರೆದಿರುವಳು: "ನೀವೊಂದು ವಿಧದ 'ಟೆಂಡೇಮ್' (Tandem, ಇಬ್ಬರೂ ಸೇರಿ ನಡೆಸುವ ಬೈಸಿಕಲ್ಲು) ಅಲ್ಲವೇ ? ಅಧ್ಯಾತ್ಮಿಕ ಟೆಂಡೆಮ್; ನೀವಿಬ್ಬರೂ ಒಂದೇ ದಿಕ್ಕಿಗೆ ನೋಡುವ ದಂಪತಿಗಳಲ್ಲವೇ ? ಅದೇ ದಂಪತಿಗಳಲ್ಲಿರಬೇಕಾದ ಶ್ರೇಷ್ಠತೆ, ನಾನು ಇದುವರೆವಿಗೂ ಕಂಡ ದಂಪತಿಗಳಲ್ಲಿ ಒಬ್ಬರು ಇನ್ನೊಬ್ಬರಿಂದ ಬೇರೆ ನೋಡುತ್ತಾರೆ, ಅಥವಾ ಒಬ್ಬರಿಗೊಬ್ಬರು ದುರುಗುಟ್ಟಿ ನೋಡುತ್ತಾರೆ. ಆದರೆ ನಿಮ್ಮಂತೆ ಒಂದೇ ದಿಕ್ಕಿಗೆ ಇಬ್ಬರೂ ನೋಡುತ್ತ ಬಾಳುತ್ತಿರುವ ದಂಪತಿಗಳು ತೀರ ಅಪರೂಪ........" ನಮ್ಮ ಜೀವನದ ಏರುತಗ್ಗುಗಳಲ್ಲಿ, ಸುಖದುಃಖಗಳಲ್ಲಿ ಸಮನಾಗಿ ಭಾಗವಹಿಸಿ, ಒಬ್ಬರಿಗೊಬ್ಬರು ಅನ್ಯೋನ್ಯತೆ ಹೊಂದಿಕೊಂಡು, ದೇವರ ಕೃಪೆಯಿಂದ ನಾವಿಬ್ಬರೂ ಸುಖದಾಂಪತ್ಯ ಪಡೆದಿದ್ದೇವೆ. ನೀವಿಬ್ಬರೂ ಅದರ ಫಲವೆಂಬಂತೆ ನಮಗೆ ಸಮಾಧಾನ, ತೃಪ್ತಿ.

ಅಂತೂ 19 ರಂದು ನಮ್ಮ ರಜತ ಮಹೋತ್ಸವ ಮನೋಹರ ರೀತಿಯಿಂದ ಸಾಗಿತು. ಅಂದೇ ಸಾಯಂಕಾಲ ಎಸ್ಸೆಕ್ಸ್ (Essex) ಎಂಬಲ್ಲಿ ನಮ್ಮ ನೃತ್ಯ ಪ್ರದರ್ಶನವಿತ್ತು. ನಮ್ಮ ಮದುವೆಯ ಸಮಯ, ಮದುವೆಯ ರಜತ ಮಹೋತ್ಸವಕ್ಕೂ ನಾವಿಬ್ಬರೂ ಜೊತೆಯಲ್ಲಿ ನರ್ತಿಸುವೆವೆಂದು ಎಣಿಸಿರಲಿಲ್ಲ. ಸಂಜೆಯತನಕ

ಜಯದೇವ ನಮ್ಮ ಜತೆಯಲ್ಲಿದ್ದು ನಾವು ಎಸ್ಸೆಕ್ಸಿಗೆ ಹೋಗುವ ಮುನ್ನ ನಮ್ಮನ್ನು ಬೀಳ್ಕೊಟ್ಟು ಬ್ರಿಸ್ಟಲಿಗೆ (Bristol) ಹೋದ. ಅವನಿಲ್ಲಿ ಬಂದಾಗಿನಿಂದ ನಮ್ಮ ಜೀವನ ಇಲ್ಲಿ ತುಂಬು ಜೀವನದಂತಿದೆ. ನಿನಗೆ ಮಾತ್ರ ಪರೀಕ್ಷೆಯ ಸಮಯ ಅವನ ನೆರವು ಇರುವುದಿಲ್ಲವೆಂದು ಬೇಸರ. ಪುಣ್ಯವಶಾತ್ ಅಪ್ಪ, ಅಮ್ಮ ನಿನ್ನ ಜೊತೆಯಲ್ಲಿರುವುದು ದೈವ ಸಹಾಯ........

ಜಯದೇವ ಇಲ್ಲಿ ಬಂದ ದಿನ ಹವೆಯು ಎಷ್ಟು ಕೆಟ್ಟಿತ್ತು! ಮಂಜು, ಮೊಬ್ಬು, ಅವನ ವಿಮಾನ, ನಿಲ್ದಾಣಕ್ಕೆ ಹೊತ್ತು ಮೀರಿ ಬಂತು. ಮರುದಿನವೇ ಭಾಭಾರವರು ಪ್ರಯಾಣ ಮಾಡಿದ ವಿಮಾನ ಭಯಂಕರವಾದ ಅಪಘಾತಕ್ಕೆ ತುತ್ತಾಯಿತಲ್ಲವೇ? ಯಮಪಾಶದ ದುರ್ಧರವಾದ ಸೆಳೆತ!

ನನ್ನ ಮಗ ಭಾರತದಿಂದ ಬರುವವನಿದ್ದಾನೆಂದು ನಾನಂದ ದಿನ ನೃತ್ಯ ತರಗತಿಯಲ್ಲಿ ವಿದ್ಯಾರ್ಥಿನಿಯರು, "ಒಬ್ಬಂಟಿಗನಾಗಿ ಬರುವನೇ?" ಎಂದು ಕೇಳಿದರು. ಅವರ ಪ್ರಶ್ನೆಗೆ ಅವರೇ ಉತ್ತರ ಕೊಡುವಂತೆ, "ಒಬ್ಬನಾಗಿ ಬಂದರೇನಂತೆ? ಏರ್ ಹೋಸ್ಟೆಸ್ (Air Hostess) ಮಕ್ಕಳನ್ನು ಸುರಕ್ಷಿತವಾಗಿ ಕರಕೊಂಡು ಬರುತ್ತಾರೆ" ಎಂದು ಧೈರ್ಯ ಕೊಟ್ಟರು! ನನ್ನ ಮಗ ಚಿಕ್ಕ ಮಗುವೆಂದು ಇಲ್ಲಿ ಎಲ್ಲರೂ ತಿಳಿದುಕೊಂಡಿದ್ದಾರೆ. ಏರ್ ಹೊಸ್ಟೆಸ್‌ಗಳನ್ನು ತನ್ನ ಕಾಲಮೇಲೆ ಕೂರಿಸಿಕೊಳ್ಳುವ ವಯಸ್ಸು ಜಯದೇವನಿಗೆಂದು ನನ್ನನ್ನು ನೋಡಿದವರು ನಂಬುವುದಿಲ್ಲ. ನಮ್ಮ ಮದುವೆಯ ರಜತ ಮಹೋತ್ಸವದ ವಿಷಯವಾಗಿಯೂ ನಾವು ಹೆಚ್ಚಾಗಿ ಯಾರಿಗೂ ತಿಳಿಸಿರಲಿಲ್ಲ. ಗೊತ್ತಿದ್ದವರು ನಮಗೆ ತೀರಾ ಚಿಕ್ಕ ವಯಸ್ಸಿನಲ್ಲೇ ಭಾರತದ ಸಂಪ್ರದಾಯದ ಪ್ರಕಾರ ಮದುವೆಯಾಗಿದ್ದಿರಬೇಕೆಂದು ಊಹಿಸುತ್ತಾರೆ! ಅಂತೂ ನಮ್ಮ ಮಕ್ಕಳು, ಮಕ್ಕಳ ವಿಷಯ ನಾವೀ ಕಲಾ ಪ್ರಪಂಚದಲ್ಲಿ ಮಾತನಾಡುವಂತಿಲ್ಲ. ನಾವು ಅಂತರರಾಷ್ಟ್ರೀಯ ಕಲಾ ಜಗತ್ತಿನಲ್ಲಿ ಮೆರೆಯಬೇಕಾದರೆ ನಮ್ಮ ಮಕ್ಕಳನ್ನೂ, ಅವರ ವಯಸ್ಸನ್ನೂ ಮರೆಯಾಗಿಡಬೇಕಾಗಿದೆ. ಒಮ್ಮೊಮ್ಮೆ ಬಹಳ ಬೇಸರವಾಗುತ್ತದೆ. ಆದರೆ ಕಲೆಗೆ ಒಂದು ಮಾಯೆಯಿದೆ; ಈ ಕಲಾ ಪ್ರಪಂಚದ ಮಾಯೆಯ ಆವರಣವನ್ನು ಪ್ರಾಪಂಚಿಕ ದೃಷ್ಟಿಯಿಂದ ನಾವೀಗ ಕೆಡಿಸಬಾರದು. ಸಂಸಾರ ಬೇರೆ, ಕಲಾ ಸೇವೆ ಬೇರೆ ಎಂದು ತಿಳಿದು ಎರಡು ಮುಖವಾಗಿ ನಾವಿಲ್ಲಿ ಜೀವಿಸುತ್ತಿದ್ದೇವೆ.

—ಇತಿ ನಿನ್ನ
ಅಮ್ಮ.

* * * *

ಲಂಡನ್
25 – 2 – 1966

ಆತ್ಮೀಯರೇ,

....ಇತ್ತೀಚೆಗೆ ಲಂಡನ್ನಿನ ವಿಧವಿಧದ ವಿನೋದಗಳನ್ನು ನೋಡುವ ಅವಕಾಶ ಸಿಕ್ಕಿತು. ಮೊನ್ನೆ ಒಂದು ಹೆಸರುವಾಸಿಯಾದ ಬ್ಯಾಲೆಯನ್ನು ನೋಡಿದೆವು. ಬ್ಯಾಲೆಯನ್ನು ನಾವು ಹೆಚ್ಚು ಹೆಚ್ಚಾಗಿ ನೋಡುತ್ತಿದ್ದಂತೆ ಅದೊಂದು ಆಡಂಬರದ ಅಹಂ ಮಮತೆಯಿಂದ ಕೂಡಿದ ಕಲೆಯೆಂದು ಭಾಸವಾಗುತ್ತದೆ. ಏಕೆಂದರೆ, ಒಂದು ಬ್ಯಾಲೆ ನಡೆಯುತ್ತಿರುವ ಸಮಯ, ಮುಖ್ಯ ನೃತ್ಯಗಾರನ ಅಥವಾ ನೃತ್ಯಗಾತಿಯ ಒಂಟಿ ಇಲ್ಲವೆ ದ್ವಯಂ ನೃತ್ಯ ಮುಗಿಯುತ್ತಲೇ ಪ್ರೇಕ್ಷಕರು ಕೈ ಚಪ್ಪಾಳೆ ತಟ್ಟುತ್ತಿದ್ದಂತೆ, ಅವರು ರಂಗಸ್ಥಳಕ್ಕೆ ಬಂದು ಪ್ರೇಕ್ಷಕ ವೃಂದವನ್ನು ವಂದಿಸುವುದು ನಮಗೆ ಚೋದ್ಯವೆನಿಸುತ್ತದೆ. ಅವರು ಈ ರೀತಿಯಾಗಿ ಬಂದಾಗ ಬ್ಯಾಲೆ ಜಗತ್ತಿನ ಪ್ರಸಿದ್ಧ ವ್ಯಕ್ತಿಗಳಾಗಿ ಬರುತ್ತಾರೆಯೇ ವಿನಹ ಬ್ಯಾಲೆಯ ಪಾತ್ರಧಾರಿಗಳಾಗಿ ಅಲ್ಲ. ಈ ವರ್ತನೆಯಿಂದ ಬ್ಯಾಲೆಯ ಕಥಾಸರಣಿಯು ಕಡಿದು ಹೋಗುತ್ತದೆ. ನಮ್ಮ ನೃತ್ಯ ನಾಟಕಗಳಲ್ಲಿ ಕಲಾವಿದರು ತಮ್ಮ ವ್ಯಕ್ತಿತ್ವವನ್ನು ಮರೆತು ತಾವು ನರ್ತಿಸುವ ಪಾತ್ರಗಳಲ್ಲಿ ಪೂರ್ಣ ಐಕ್ಯತೆಯನ್ನು ಹೊಂದುತ್ತಾರೆ.

ಕಲಾವಿದರ ಆರಾಧನೆ (Hero Worship) ಹಾಗೂ ಕಲೆಯ ರಸಾಸ್ವಾದನೆ ಇಲ್ಲಿಯ ಜನರಲ್ಲಿ ಒಂದು ಹುಚ್ಚು ಎನ್ನಬಹುದು. ಬ್ಯಾಲೆ ಪ್ರದರ್ಶನ ಮುಗಿದ ಮೇಲೆ ಕೈಗಳು ಊದಿಕೊಳ್ಳುವವರೆಗೂ ಚಪ್ಪಾಳೆ ತಟ್ಟಿ ಮುಖ್ಯ ಕಲಾವಿದರನ್ನು ರಂಗಭೂಮಿಯ ಮೇಲೆ 20–25 ಸಲ ಬರುವಂತೆ ಮಾಡುತ್ತಾರೆ! ಪ್ರೇಕ್ಷಕ ವೃಂದವೆಲ್ಲ ಉನ್ಮಾದಿತರಾಗುತ್ತಾರೆ. ರಂಗಭೂಮಿ ದೊಡ್ಡ ದೊಡ್ಡ ಹೂ ಗುಚ್ಛಗಳಿಂದ ತುಂಬಿ ಹೋಗುತ್ತದೆ—ಒಲಿದ ಪ್ರೇಕ್ಷಕರ ಕಾಣಿಕೆಯ ಫಲ! ಈ ವಿಧದ ಕಲೋಪಾಸನೆ ಇದ್ದರೆ ಯಾವ ಕಲಾವಿದನಿಗೂ ಒಂದು ಹೊಸಜೀವ, ಸ್ಫೂರ್ತಿ ಬಂದಂತಾಗುವುದಿಲ್ಲವೇ ? ಅಂತೂ ಬ್ಯಾಲೆಯು ಶ್ರೀಮಂತರಿಗೆ ಸೇರಿದ ಕಲೆ. ಆಧುನಿಕ ಜಗತ್ತಿನಲ್ಲಿ ಆರ್ಥಿಕ ಅಭಿವೃದ್ಧಿ ಪಡೆದ ಜನಾಂಗಗಳು ವಿನೋದಿಸುವ ಕಲೆ. ಇಂತಹ ದೊಡ್ಡ ದೊಡ್ಡ ಬ್ಯಾಲೆ ಕೂಟಗಳನ್ನು ನಡೆಸಿಕೊಂಡು ಬರಲು ಸಾಮಾನ್ಯರಿಗೆ ಸಾಧ್ಯವಿಲ್ಲ. ಬ್ಯಾಲೆಯ ಕಲಾವಿದರು ಗಾಜಿನ ಪಂಜರದಲ್ಲಿನ ಅಮೂಲ್ಯ ವ್ಯಕ್ತಿಗಳು. ಆದರೂ ಈ ಪಾಶ್ಚಾತ್ಯ ಕಲೆಯಿಂದ ನಾವು ಕೆಲವು ಗಹನ ವಿಷಯಗಳನ್ನು ಕಲಿತುಕೊಳ್ಳಬೇಕಾಗಿದೆ. ಇಲ್ಲಿ ಸುಮಾರು ನೂರರಿಂದ ನೂರೈವತ್ತು ನೃತ್ಯಗಾರರು ತಮ್ಮ ವ್ಯಕ್ತಿತ್ವವನ್ನು ಹತೋಟಿಯಲ್ಲಿಟ್ಟುಕೊಂಡು, ಒಂದೇ ಗುರಿಯಿಂದ ಗುಂಪು ನೃತ್ಯಗಳಲ್ಲಿ ಒಂದೇ

ಸಮನಾಗಿ ನರ್ತಿಸಿ ಪ್ರೇಕ್ಷಕರಿಗೆ ಆನಂದವೀಯುತ್ತಾರೆ. ಭಾರತದಲ್ಲಿ ಒಂದೇ ಮಟ್ಟ ದಲ್ಲಿರುವ ಇಬ್ಬರು ಕಲಾವಿದರು ಕೂಡ ಒಟ್ಟುಗೂಡಿ ಒಂದೇ ರೀತಿಯಲ್ಲಿ ಎರಡು ಮೂರು ನೃತ್ಯ ಚಲನೆಗಳನ್ನು ಕೂಡ ಮಾಡುವುದು ಅಸಾಧ್ಯದ ಮಾತು !

ಲಂಡನ್ನಿನ 'ಸೆವಿಲ್ ಥಿಯೇಟರಿ' ನಲ್ಲಿ (Saville Theatre) ಜಗತ್ಪ್ರಸಿದ್ಧ ಮಾರ್ತಾ ಗ್ರೆಹೆಂ (Martha Graham) ಮತ್ತು ಸಂಗಡದವರ ಅದ್ಭುತ ನೃತ್ಯಕಲೆ ನೋಡಲು ಹೋದೆವು. ನಮ್ಮಲ್ಲಿ ಉತ್ಸಾಹವು ಉಕ್ಕಿ ಹರಿಯುತ್ತಿತ್ತು. ಸುಮಾರು 78 ವರ್ಷದ ಮಾರ್ತಾ ಗ್ರೆಹೆಂ ಒಬ್ಬ ಕ್ರಾಂತಿಕಾರಕ ವ್ಯಕ್ತಿ. ಅಲ್ಲದೆ ಲೋಕದ ಎಲ್ಲ ನೃತ್ಯ ಕಲಾವಿದರಿಗೆ ಸದಾ ಸ್ಫೂರ್ತಿ ನೀಡುವ ಚಿರಸ್ವರೂಪಿ. ಆಕೆಯ ಆಧುನಿಕ ಬ್ಯಾಲೆ ಶಾಸ್ತ್ರೀಯ ಬ್ಯಾಲೆಗಿಂತ ವಿಶೇಷ ರೀತಿಯಿಂದ ಭಿನ್ನವಾಗಿದ್ದು ಅದಕ್ಕಿಂತಲೂ ಹೆಚ್ಚಾದ ಜನಾದರಣೀಯವನ್ನು ಪಡೆದಿದೆ. ಅವರು ಕಲ್ಪಿಸಿದ ಈ ಆಧುನಿಕ ಬ್ಯಾಲೆ ಶಾಸ್ತ್ರೀಯ ಬ್ಯಾಲೆಗೆ ವಿರುದ್ಧವಾಗಿದೆ. ಪುರುಷರು ವೀರಸಿಂಹಗಳಂತೆ ನರ್ತಿಸುತ್ತಾರೆ. ಅವರ ಓಜಸ್ವೀ ನೃತ್ಯವು ಶಕ್ತಿಯುತವಾಗಿದೆ, ಗಂಭೀರವಾಗಿದೆ. ವೀರಾವೇಶದಿಂದ ತುಂಬಿದೆ. ಆದರೂ ಅವು ತುಂಬು ಲಾಲಿತ್ಯದ ನೃತ್ಯಗಳು. ಶಾಸ್ತ್ರೀಯ ಬ್ಯಾಲೆ ಯಲ್ಲಿಯಾದರೋ ಗಂಡಸರ ನೃತ್ಯದಲ್ಲಿಯೂ ಹೆಣ್ಣುತನದ ಛಾಯೆ ಇರುತ್ತದೆ. ಈ ಆಧುನಿಕ ಬ್ಯಾಲೆಯಲ್ಲಿ ಹಾಗಿಲ್ಲ. ಪುರುಷರು ಪುರುಷರಂತೆಯೇ ನರ್ತಿಸುವುದು ನೋಡಲು ಚೆನ್ನಾಗಿರುತ್ತದೆ. ಇದರಲ್ಲಿ ಹೆಚ್ಚಾದ ಕಟ್ಟುನಿಟ್ಟಳೆ, ಸಂಪ್ರದಾಯ, ಶಾಸ್ತ್ರಬದ್ಧತೆ ಇಲ್ಲ. ಕೇವಲ ಮಾನವನ ಅಸ್ತಿತ್ವದ–ಮನೋಭಾವದ ಮೂರ್ತಿಮಂತ ಚಲನೆಗಳಾಗಿವೆ. ಆದರೆ ಇಲ್ಲೂ, ಪ್ರತಿಯೊಂದು ಚಲನೆಗೂ ಒಂದು ಪ್ರಮಾಣ ಇರಲೇ ಬೇಕು. ಆಧುನಿಕ ಬ್ಯಾಲೆ ನೃತ್ಯಕ್ಕೆ ತುಂಬಾ ಶ್ರಮವಿದೆ. ಅವರು ಮಾಡುವ ಪ್ರತಿಯೊಂದು ಚಲನೆಯಲ್ಲೂ ಒಂದು ನಿರ್ದಿಷ್ಟತೆ ಇದೆ ಎನ್ನಬಹುದು. ಅವರ ನರ್ತನದಲ್ಲಿ ಮಾನವನ ಆತ್ಮವು ಅಭಿವ್ಯಕ್ತಿಗಾಗಿ ಹಾತೊರೆಯುತ್ತಿರುವುದನ್ನು ಕಾಣು ತ್ತೇವೆ. ಅವನ್ನು ಚಲನೆಗಳ ಮೂಲಕ ವ್ಯಕ್ತಪಡಿಸಲು ಮಾರ್ತಾ ಗ್ರೆಹೆಂ ಆದಿಶಕ್ತಿ ಯಾಗಿ ಅನೇಕ ಹೃದಯಗಳಿಂದ, ಹಲವು ವಿಧಗಳಾಗಿ ಪ್ರಕಟಗೊಳಿಸುವ ಪ್ರಯತ್ನ ಮಾಡಿದ ಅಪೂರ್ವ ಮಹಿಳೆ. ಅವರೇ ಸ್ವತಃ ತಮ್ಮ ಇಳಿವಯಸ್ಸಿನಲ್ಲಿ ಕೂಡ ಕಲಾ ಜಗತ್ತಿನಲ್ಲಿ ತಲೆಯೆತ್ತಿ ನಿಂತ ಮಹಾ ಕಲೆಗಾರ್ತಿ. ನೃತ್ಯ ಪ್ರದರ್ಶಿಸಲು ಕಲಾವಿದ ರಿಗೆ ವಯಸ್ಸಾಗುವುದು ಉಂಟೆ? ಎಂಬುದನ್ನು ಅವರ ಜೀವಮಾನದಿಂದ ಪಾಠ ಕಲಿಯಬೇಕು. ದೇಹ ಸಂಬಂಧವಾದ ಅನೇಕ ತಡೆಕಟ್ಟುಗಳಿದ್ದರೂ ಆಕೆ ತನ್ನ ಅಂತರ್ಗತ ಮನೋಭಾವಗಳನ್ನು ವ್ಯಕ್ತಪಡಿಸಿ ಪ್ರಕೃತಿ ಸ್ವಭಾವವನ್ನು ಎದುರಿಸು ವಂತಿದೆ. ಈ ಸಂದರ್ಭದಲ್ಲಿ ನಮ್ಮ ಸ್ನೇಹಿತರೊಬ್ಬರು ನಮಗೊಮ್ಮೆ ತಿಳಿಸಿದ ಮಾತು ನೆನಪಿಗೆ ಬರುತ್ತದೆ. ಶಾಸ್ತ್ರೀಯ ಖ್ಯಾತಿಯ 'ರೋಮಿಯೋ ಮತ್ತು ಜುಲಿಯಟ್' ಪ್ರದರ್ಶನದಲ್ಲಿ ಹದಿನಾಲ್ಕು ವಯಸ್ಸಿನ ಜೂಲಿಯಟ್‌ಳ ಪಾತ್ರವನ್ನು

ಧರಿಸಬೇಕಾದ ನೃತ್ಯ ಕಲಾವಿದೆಗೆ ಸುಮಾರು ನಲ್ವತ್ತು ವಯಸ್ಸಾದರೂ ಆಗಿರ ಬೇಕಂತೆ – ಅಂದರೆ........ಪ್ರೇಮದ ಅಪ್ರತಿಮ ಮೋಹಕತೆಯನ್ನು ಸ್ಪಾದಿಸಿದ ಕಿಶೋರಿ ಜೂಲಿಯಟ್‌ಳ ಮನೋಭಾವಗಳನ್ನು ಹೊರಗೆಡಿಸಲಿಕ್ಕೆ ಅನುಭವಯುಕ್ತ ಪ್ರಾಯಸ್ಥ ನೃತ್ಯಗಾತಿಗೇ ಸಾಧ್ಯವಲ್ಲದೆ ಹದಿನಾಲ್ಕು ವಯಸ್ಸಿನ ಯಾವ ಬಾಲೆಗೂ ಸಾಧ್ಯವಿಲ್ಲವಂತೆ! ತುಂಬಾ ವಿಚಾರಶೀಲ, ವಿಶಾಲ ದೃಷ್ಟಿಯಿದು. ನಾನಿದನ್ನು ಖಂಡಿತ ಅನುಮೋದಿಸುತ್ತೇನೆ.

ನೃತ್ಯರಂಗದಲ್ಲಿ ಅನೇಕಾನೇಕ ವರ್ಷ ಸವೆದು ಅನೇಕ ಅನುಭವಗಳನ್ನು ಪಡೆದಿದ್ದೇನೆ. ಆದರೆ ಇಲ್ಲಿ, ಈ ಇಂಗ್ಲೆಂಡಿನಲ್ಲಿ, A. M. C. ಯವರ ಆಶ್ರಯದಲ್ಲಿ ಈ ನನ್ನ ವಯಸ್ಸಿನಲ್ಲಿ ನನ್ನ ಕಲೆಗೆ ಒಂದು ವಿಶೇಷ ರೀತಿಯ ಮೆರುಗು ಬರಬೇಕೆ? ನೃತ್ಯಗಾತಿಯೊಬ್ಬಳ ಕಲಾ ಜೀವನದ ಕೊನೆಯ ಅಧ್ಯಾಯಗಳಲ್ಲಿ ಎಂಬಂತೆ ನನಗೆ ಸಿಕ್ಕಿದ ಹೆಸರು, ಪ್ರಸಿದ್ಧಿ ಅತ್ಯಾಶ್ಚರ್ಯವೆನಿಸುತ್ತದೆ. ಭಾರತದಲ್ಲಿ ಇತರ ಕಲಾವಿದೆಯರು ತಮ್ಮ ನೃತ್ಯ ಜೀವನದ ಮೊದಲ ದಿನಗಳಲ್ಲೇ ಯಶಸ್ಸನ್ನೂ ಖ್ಯಾತಿಯನ್ನೂ ಪಡೆಯುವುದು ಸರ್ವೇ ಸಾಮಾನ್ಯ. ಆದರೆ ಇಲ್ಲಿ, ಈ ನನ್ನ ಪ್ರಾಯದಲ್ಲಿ ನನ್ನ ಕಲೆ ಒಂದು ಉತ್ತುಂಗ ಶಿಖರಕ್ಕೆ ತಲುಪಿ ವಿಶೇಷ ಜನಾದರಣೀಯವಾದುದು ಒಂದು ಅಪರೂಪದ ಸಂಗತಿಯೇ! ಜೀವನದಲ್ಲಿ ಉಚ್ಚ ಧ್ಯೇಯಗಳನ್ನು ಕಾರ್ಯರೂಪಕ್ಕೆ ತರುವಾಗ ಎಂತಹ ಕಷ್ಟನಷ್ಟಗಳು ಬಂದೊದಗಿದ್ದರೂ ಒಂದಲ್ಲ ಒಂದು ದಿನ ಅವು ಸುಗಮವಾಗಿ ಫಲಿಸುವುವು ಎಂಬುದಕ್ಕೆ ನಮ್ಮ ಉದಾಹರಣೆಯನ್ನೇ ಕೊಡಬಲ್ಲೆ. ನೃತ್ಯಕಲೆಗೇ ಮುಡುಪಾಗಿಟ್ಟಿರುವ ನಮ್ಮ ಜೀವನವನ್ನು ಸೂಕ್ಷ್ಮವಾಗಿ ಅರಿತ ನನ್ನ ತಂಗಿ ಯಶೋಧರಾ ಮೊನ್ನೆ ತನ್ನ ಕಾಗದದಲ್ಲಿ ಹೀಗೆ ಬರೆದಿದ್ದಳು. "ನಿಮ್ಮ ಜೀವನದಲ್ಲಿ ಯಾವ ದುರಾದೃಷ್ಟಗಳು ಬಂದರೂ ಅವನ್ನು ಧೈರ್ಯದಿಂದ ಎದುರಿಸಿ ಅವನ್ನೇ ಯಶಸ್ಸನ್ನಾಗಿ ಮಾಡಿಕೊಳ್ಳುವ ಶಕ್ತಿ ನೀವಿಬ್ಬರೂ ಪಡೆದಿದ್ದೀರಿ........ಜೀವನವನ್ನು ಚಾತುರ್ಯದಿಂದ ಗೆಲ್ಲುವ ಸಾಮರ್ಥ್ಯ ನಿಮ್ಮಲ್ಲಿದೆ".

ಇದಕ್ಕೆ ಕಾರಣವಿದೆ. ನಾವಿಬ್ಬರೂ ಒಬ್ಬರಲ್ಲೊಬ್ಬರು ಪೂರಕ ಭಾಗಗಳಾಗಿದ್ದೇವೆ. ಅಂದರೆ ಪರಸ್ಪರ ಶಕ್ತಿ ಪಡೆದಿದ್ದೇವೆ. ಪತಿಯವರ ವ್ಯಕ್ತಿತ್ವದಲ್ಲಿ ಮರೆಯಾಗದ ಗುಣ ವಿಶೇಷಗಳು ಮರೆಯಾಗಿ ನನ್ನಲ್ಲಿವೆ. ಅಂತೆಯೇ ನನ್ನ ಕೆಲವು ಗುಣ ವಿಶೇಷಗಳಿಂದ ಅವರ ಚೇತನವೂ ಪ್ರಚೋದಿತವಾಗಿಯೇ ಇದೆ. ಆದುದರಿಂದ ನಾವು ಜೋಡಿಯಾಗಿ ಸಾಧಿಸಿರುವ ಕಲೆ ಪ್ರಪೂರ್ಣವಾಗಿದೆ. ನಮ್ಮ A. M. C. ಯ ಡೈರೆಕ್ಟರು "ಚಂದಮ್ಮಾ, ನೀನು ನರ್ತಿಸುವಾಗ ನಿನ್ನ ಜೀವನವನ್ನೇ ಕಲೆಗಾಗಿ ಮೀಸಲಾದ ಚೈತನ್ಯದಿಂದ ನರ್ತಿಸುವೆ. ಇ....ಗೆ ರೂಪ ಸೌಂದರ್ಯ, ಯಾ....ಗೆ ವಿಶೇಷ ನೃತ್ಯ ಶಕ್ತಿ, ರೀ....ಗೆ ವಿವಿಧ ಗುಣಗಳ ಕಲಾ ನಿಪುಣತೆ, ಬಾ....ಗೆ ಭಾವಾಭಿ

ನಯು ಇದ್ದರೆ, ನಿನಗೆ........ಚಂದಮ್ಮಾ... ....ಕಲೆಗಾಗಿ ಆತ್ಮಾರ್ಪಣೆಯಿದೆ. ಅದನ್ನು ಯಾವತ್ತೂ ಕಳೆದುಕೊಳ್ಳಬೇಡ. ಅದೇ ನಿನ್ನ ಕಲೆಯ ಸಿರಿ, ಸಂಪತ್ತು, ಸುಗುಣ ನಿಧಿ"........ಎಂದು ನನ್ನ ಕಲೆಗೆ ಚಿರಂತನ ಸ್ಫೂರ್ತಿ ನೀಡುತ್ತಾರೆ. ನಮ್ಮ ಜೀವನದ ಒಂದು ಹಿರಿಯ ಆಸೆಯನ್ನು ಪೂರೈಸಿ, ನಮ್ಮ ಕಲೆಯನ್ನು ಇಲ್ಲಿ ಬೆಳಗುವಂತೆ ಮಾಡಿದ ಅವರಿಗೂ, ನಮ್ಮ ಯಶಸ್ಸನ್ನು ಮೆಚ್ಚಿ ಆನಂದಿಸಿರುವ ಮೈಸೂರು ಸರಕಾರದವರಿಗೂ ನಾವು ಚಿರಋಣಿಗಳು.

ನಮ್ಮ ನೃತ್ಯ ಪ್ರದರ್ಶನಗಳನ್ನು ವಿವಿಧ ಸಂಗಡಗಳಿಗೆ ಕೊಡುವುದು ನಮಗೀಗ ಒಂದು ದಿನಚರಿಯಾದುದರಿಂದ ನಮಗದರಿಂದ ಸಂತೋಷವೂ ಇಲ್ಲ........ಬೇಸರವೂ ಇಲ್ಲ........ದಣಿವೂ ಇಲ್ಲ!........ನಮ್ಮ ಮುಖ್ಯ ಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರು ನಮಗೆ ಆಹ್ಲಾದಕರವಾದ ಕಾಗದವೊಂದನ್ನು ಬರೆಯುತ್ತ ನಮ್ಮ ಫಲಪೂರಿತ ಕಾರ್ಯಕ್ರಮಗಳನ್ನು ಕುರಿತು ತುಂಬಾ ಹೆಮ್ಮೆ ಪಟ್ಟಿದ್ದಾರೆ. ಮುಂದಕ್ಕೂ ಅದೇ ರೀತಿ ನಮ್ಮ ಕಾರ್ಯಕಲಾಪಗಳು ಸಾಗಲಿ ಎಂದು ಆಶಿಸಿದ್ದಾರೆ. ಪರಮಾತ್ಮನು ಅಂತೆಯೇ ನಡೆಸಲಿ!........

ಇತಿ ನಿಮ್ಮ
ಚಂದಮ್ಮ.

*   *   *   *

ಲಂಡನ್
6 – 3 –1 966

ನನ್ನ ಆತ್ಮೀಯರೇ,

.... A. M. C. ಯವರು ವಾರಕ್ಕೊಮ್ಮೆ ಕೇಂಬ್ರಿಡ್ಜಿನಲ್ಲಿ (Cambridge) ನೃತ್ಯ ತರಗತಿಗಳನ್ನು ಏರ್ಪಡಿಸಿದ್ದಾರೆ. ಜೆ. ಜೆ. ಥಾಮ್ಸನ್, (J. J. Thompson) ಕೆವಿಂಡಿಶ್, (Cavendish) ನ್ಯೂಟನ್, (Newton) ಹಾರ್ವೆ (Harvey) ಮೊದಲಾದ ಅನೇಕ ಪ್ರಸಿದ್ಧ ವಿಜ್ಞಾನ ಶಾಸ್ತ್ರಜ್ಞರನ್ನು ನಿರ್ಮಿಸಿದ ಈ ಪ್ರಖ್ಯಾತ ವಿಶ್ವವಿದ್ಯಾನಿಲಯ ಕ್ಷೇತ್ರದಲ್ಲಿ ಇಂದಿಗೂ ಒಂದು ತರಹ ಜಿಜ್ಞಾಸೆಯ ವಾತಾವರಣವಿದೆ. ಅಕ್ಕಪಕ್ಕದ ನಿಸರ್ಗವು ಕೂಡ ರಮ್ಯವಾಗಿದ್ದು, ಶಾಂತವಾಗಿದ್ದು ಅಲ್ಲಿನ ಶಿಷ್ಯವರ್ಗಕ್ಕೆ ಅವರವರು ಆರಿಸಿಕೊಂಡ ವಿಷಯಗಳ ಶೋಧನೆಗೆ, ಪರಿಶೋಧನೆಗೆ ಬಹಳ ಅನುಕೂಲವಾಗಿದೆ. ನಮಗಂತೂ ಅಲ್ಲಿಗೆ ಹೋಗಿ ನೃತ್ಯಪಾಠ ಹೇಳಿಕೊಡುವುದು ಅತ್ಯಂತ ಸಂತೋಷದ ಕೆಲಸ. ಈಗಾಗಲೇ 11–15 ಮಂದಿ ಶಿಷ್ಯರು ತರಗತಿಗೆ

ಸೇರಿದ್ದಾರೆ. ಇವರೆಲ್ಲರೂ ಬ್ರಿಟಿಷರೇ. ಅವರೆಲ್ಲರಿಗೂ ಭಾರತದೇಶ, ಭಾರತೀಯರೆಂದರೆ ಬಹಳ ಇಷ್ಟ. ಅವರಲ್ಲಿ ಅನೇಕರು ಭಾರತೀಯ ಅಧ್ಯಾತ್ಮವನ್ನೂ ಧರ್ಮವನ್ನೂ ತಿಳಿದವರೇ. ಕೆಲವರು ಶ್ರೀ ಅರವಿಂದ ಘೋಷರವರ, ಶ್ರೀರಮಣಮಹರ್ಷಿಯವರ ಅಧ್ಯಾತ್ಮಿಕ ವಿಚಾರಗಳನ್ನೂ ತಿಳಿದುಕೊಂಡಿರುವರು. ಒಬ್ಬಿಬ್ಬರು ಹಿಂದೂ ಹೆಸರುಗಳನ್ನು ಇಟ್ಟುಕೊಂಡಿದ್ದಾರೆ. ನಾನು ಸ್ವಾಮಿ ರಾಮದಾಸರ ಮೊಮ್ಮಗಳೆಂದು ತಿಳಿದು ಆಶ್ಚರ್ಯಪಟ್ಟು, 'ಸ್ವಾಮಿ ರಾಮದಾಸರ ಅಧ್ಯಾತ್ಮಿಕ ಶಕ್ತಿ ನನ್ನ ನರಗಳಲ್ಲಿಯೂ ಹರಿಯುತ್ತಿರಬೇಕೆಂದು' ನನ್ನನ್ನು ವಿಶೇಷ ಅಭಿಮಾನದಿಂದ ಕಾಣುತ್ತಿದ್ದಾರೆ! ಇಲ್ಲಿ ಸಾಮಾನ್ಯವಾಗಿ ಹಿಂದೂ ಅಧ್ಯಾತ್ಮವನ್ನು ಪಠಿಸುವವರು ಹಲವರಿದ್ದಾರೆ. ಇಲ್ಲಿನ ಅಂದದ, ಚೆಂದದ, ಹೆಣ್ಣುಮಕ್ಕಳು ಕೂಡ ಅಂತಹ ಅಧ್ಯಾತ್ಮಿಕ ಗ್ರಂಥಗಳನ್ನು ಚರ್ಚಿಸುವುದನ್ನು ಕಂಡು ಪತಿಯವರು ತಮಾಷೆಗೆ "ರಮಣ ಮಹರ್ಷಿಯನ್ನು ಚರ್ಚಿಸುವ ಬದಲು, ವಾತ್ಸಾಯನನ ವಿಷಯ ಇವರು ಕೊಂಚ ಮಾತನಾಡಬಾರದೇ ?" ಎಂದು ಹೇಳುತ್ತಾರೆ!

ನಮ್ಮ ಅನೇಕ ಬ್ರಿಟಿಷ್ ಸ್ನೇಹಿತರು ನಮ್ಮಿಂದ ಭಾರತದ ವಿಷಯಗಳನ್ನು ಮತ್ತೂ ಮತ್ತೂ ತಿಳಿದುಕೊಳ್ಳಲು ಆಸೆಪಡುತ್ತಾರೆ. ನಮ್ಮ ಸಂಸ್ಕೃತಿ, ಧರ್ಮ, ಪುರಾಣ ಕಥೆಗಳು ಇವುಗಳ ವಿಷಯ ಎಷ್ಟು ಹೇಳಿದರೂ ಇವರಿಗೆ ಸಾಲದು. ನಮ್ಮಲ್ಲಿ ಮನೆಯಲ್ಲಿನ ಅಜ್ಜಿ, ಮುತ್ತಜ್ಜಿಯರು ಸಾಯಂಕಾಲದ ಸಮಯ ಮಕ್ಕಳಿಗೆ ಪುರಾಣ ಕಥೆಗಳನ್ನು ಹೇಳಿ ಮಲಗಿಸುವರೆಂಬ ವೃತ್ತಾಂತವನ್ನು ಕೇಳಿ ತುಂಬಾ ಆನಂದಪಡುತ್ತಾರೆ. ಇಲ್ಲಿನ ಮಕ್ಕಳಿಗೆ ಅವರ ದೇಶದ ಸಾಂಸ್ಕೃತಿಕ ಸಂಬಂಧವಿರುವುದಿಲ್ಲ. ಅವು ಬೆಳೆಯುತ್ತಿದ್ದಂತೆ ತಮ್ಮ ತಮ್ಮ ಜೀವನವನ್ನು ತಾವೇ ಜವಾಬ್ದಾರಿಯಿಂದ ರೂಪಿಸಿಕೊಳ್ಳಬೇಕಾಗಿದೆ. ಶಾಲೆಗಳಲ್ಲಿ ಸಾಮಾನ್ಯವಾಗಿ ಪಾಠ ಹೇಳಿಕೊಡುವುದಿಲ್ಲವಂತೆ. ಮಕ್ಕಳು ಕೇಳುವ ಅನೇಕಾನೇಕ ಪ್ರಶ್ನೆಗಳನ್ನು ಉತ್ತರಿಸುವುದೇ ಪಾಠ; ಅಷ್ಟೇ ಶಾಲೆಯ ಕರ್ತವ್ಯವಂತೆ. ಈ ರೀತಿಯ ಶಿಕ್ಷಣ ಕ್ರಮದಲ್ಲಿ ಮನಸ್ಸಿನ ಧಾರ್ಮಿಕ ಬೆಳವಣಿಗೆಗೆ ಅವಕಾಶವಿಲ್ಲ. ಶಿಸ್ತು ಎಲ್ಲಿ ? ಎಂದು ನಮಗನಿಸುತ್ತದೆ. ಶಾಲೆಯ ಮಕ್ಕಳಿಗೆ ವ್ಯಾವಹಾರಿಕ ಶಿಕ್ಷಣ (Practical Training) ಬೇಕಾದಷ್ಟು ದೊರೆಯುತ್ತದೆ. ಆದರೆ ಅವರ ಕಲ್ಪನಾಶಕ್ತಿಯ ಬೆಳವಣಿಗೆಗೆ ಯಾವ ರೀತಿಯ ಸಹಾಯವೂ ಇಲ್ಲದೆ ಆ ಶಕ್ತಿಯನ್ನೇ ಅಳಿಸಿಬಿಟ್ಟಂತಾಗಿದೆ. ವಿಚಿತ್ರವಾಗಿದೆ, ಈ ವಿದ್ಯಾಭ್ಯಾಸ ಪ್ರಯೋಗ!

ಕಲಾ ಸಂಸ್ಥೆಗಳಲ್ಲೂ, ನೃತ್ಯ ಸಂಘಗಳಲ್ಲೂ ನೃತ್ಯ ಕಲೆಯ ವಿಷಯ ಉಪನ್ಯಾಸ ಕೊಡುವುದು ನಮಗೆ ಬಹಳ ಪ್ರೀತಿಯ ಕೆಲಸವಾಗಿದೆ. ಏಕೆಂದರೆ ಇಂತಹ ಸಂಸ್ಥೆಗಳಲ್ಲಿ ಒಂದು ತರದ ಸುಸಂಸ್ಕೃತಿ, ಜ್ಞಾನದ ಆರಾಧನೆ, ವಿದ್ಯಾರ್ಜನೆ ಇವೆಲ್ಲ ತುಂಬಿ ತುಳುಕಾಡುತ್ತಿದೆ; ನೃತ್ಯಾಭಿನಯಕ್ಕೆ ಉದಾಹರಣಾರ್ಥವಾಗಿ ಕೆಲವು ವಾಕ್ಯ

ಗಳನ್ನು ಕೊಡಿ ಎಂದು ಪ್ರೇಕ್ಷಕ ವರ್ಗವನ್ನು ಕೇಳಿದರೆ ಕೂಡಲೇ ಕೆಲವರು ಶೇಕ್ಸ್‌ಫಿಯರ್, ಮಿಲ್ಟನ್, ಕೀಟ್ಸ್ ಮೊದಲಾದ ಕವಿಶ್ರೇಷ್ಠರ ಕವಿತಾ ವಾಕ್ಯಗಳನ್ನೇ ಕೊಡುತ್ತಾರೆ. ಉಪನ್ಯಾಸವಾದ ಮೇಲೆ ನಮ್ಮ ನೃತ್ಯ ಕಲೆಯ ಅಂದ ಮತ್ತು ಅದರ ದಿವ್ಯ ರಹಸ್ಯವನ್ನು ತಿಳಿಸಿದುದಕ್ಕಾಗಿ ಕೃತಜ್ಞತೆಯನ್ನು ತೋರಿಸುತ್ತಾರೆ. ಅವರು ಪತಿಯುವರನ್ನು ಕುರಿತು "ನೀವಿಷ್ಟು ಸ್ನೇಹಪರ ಹಾಗೂ ಹಾರ್ದಿಕವಾಗಿ ಕೊಟ್ಟ ಉಪನ್ಯಾಸ- ನಿಮ್ಮ ವ್ಯಕ್ತಿತ್ವದ ಆತ್ಮೀಯತೆ, ಮತ್ತು ನಿಮ್ಮ ಪತ್ನಿಯ ಲಾಲಿತ್ಯ ಹಾಗೂ ಸೊಬಗು–ಇವೆಲ್ಲ ನಿಮ್ಮ ಕಲೆಯ ವಿಷಯ ಇನ್ನೂ ಹೆಚ್ಚು ಹೆಚ್ಚಾಗಿ ತಿಳಿದುಕೊಳ್ಳಲು ಸ್ಫೂರ್ತಿದಾಯಕವಾಗಿದೆ. ನಿಮ್ಮ ಉಪನ್ಯಾಸದಿಂದ ನಮ್ಮ ಜೀವನದಲ್ಲಿ ಹೊಸತೊಂದು ಶಕ್ತಿ, ಹೊಸತೊಂದು ಬೆಳಕು ಮೂಡುತ್ತಿದೆ" ಎನ್ನುತ್ತಾರೆ.

ಟ್ರೆಂಟ್ ಪಾರ್ಕ್ ಕಾಲೇಜಿನಲ್ಲಿ (Trent Park College) ನಮ್ಮ ಉಪನ್ಯಾಸಕ್ಕೆ ದೀಪಾಲಂಕಾರಗಳಿಂದ ಸಜ್ಜುಗೊಳಿಸಿದ ಒಂದು ಒಳ್ಳೇ ರಂಗಸ್ಥಳ, ರಂಗಮಂದಿರವಿತ್ತು. ರಂಗಸ್ಥಳದ ಫಳಫಳಿಸುವ ಮರದ ನೆಲವನ್ನು ಕಾಲೇಜಿನ ವಿದ್ಯಾರ್ಥಿಗಳೇ ಗುಡಿಸಿ, ಒರಸಿ ಸಿದ್ಧಪಡಿಸಿದ್ದರು. ಸಾಧಾರಣ 300 ಮಂದಿ ಉಪನ್ಯಾಸವನ್ನು ಕೇಳಲು ಬಂದಿದ್ದರು. ಅಂದಿನ ನಮ್ಮ ನೃತ್ಯ – ಉಪನ್ಯಾಸ "ನಮ್ಮ ಪ್ರಾಚೀನ ನೃತ್ಯಕಲೆಯ ತಿರುಳು ಮತ್ತು ಅದರ ದೈನಂದಿನ ಅಭ್ಯಾಸ ಕ್ರಮಗಳು" ಎಂಬುದಾಗಿತ್ತು. ಅಲ್ಲಿ ನೆರೆದ ಜ್ಞಾನವಂತ ಸಭಿಕರು ಅದನ್ನು ಕೇಳಿ ತುಂಬಾ ಸಂತೋಷಪಟ್ಟರು.

ಹೆಕ್ನೀ (Hackney) ಎಂಬಲ್ಲಿ ನಮ್ಮ ನೃತ್ಯ – ಉಪನ್ಯಾಸವನ್ನು ಕೇಳಿದ ಮೇಲೆ ಅಲ್ಲಿನ ಪತ್ರಿಕೆಯ ಬಾತ್ಮಿದಾರರು ಹೀಗೆಂದು ಬರೆದರು; "ಬರೇ ಒಂದು ಜತೆ ತಟ್ಟುಕೋಲು ಮತ್ತು ಒಂದು ಜತೆ ಕೈತಾಳಗಳಿಂದ ದೂರದ ಏಶಿಯಾದಿಂದ ದಂಪತಿಗಳಿಬ್ಬರು ಬಂದು ಹೆಕ್ನೀ ಪ್ರೇಕ್ಷಕರಿಗೆ ಮತ್ತೊಂದು ಸುಂದರವಾದ ಜಗತ್ತಿನ ದರ್ಶನ ಲಾಭವನ್ನು ಕೊಟ್ಟರು. ಉಪನ್ಯಾಸವು ಸುಸ್ಪಷ್ಟವಾಗಿತ್ತಲ್ಲದೆ ನಮ್ಮನ್ನು ಅದರಲ್ಲಿ ಮಗ್ನಗೊಳಿಸುವಂತೆ ಇತ್ತು. ಶ್ರೀ ರಾಯರು ಉಪನ್ಯಾಸ ಕೊಡುತ್ತಿದ್ದಂತೆ ಅವರ ಪತ್ನಿ ಅಭಿನಯ ಯುಕ್ತವಾಗಿ ಎಲ್ಲಾ ನೃತ್ಯಗಳನ್ನೂ ಅದ್ವಿತೀಯವಾಗಿ ಪ್ರದರ್ಶಿಸಿದರು........"

"ಮುದ್ರೆಗಳ ಅರ್ಥ–ಹಸ್ತ ಮುದ್ರೆಗಳೆಂದರೇನು ! ಎಂಬ ವಿಷಯವಾಗಿ ಮಾತನಾಡಲು 'ಬ್ಯಾಲೆ ಕ್ಲಬ್ಬಿನ' (Ballet Club) ಕೆಲವು ಮಂದಿ ಕಲಾಸಕ್ತಿಯುಳ್ಳವರು ನಮ್ಮನ್ನು ಆಹ್ವಾನಿಸಿದ್ದರು. ಅವರಿಗೆ ಬೇಕಾಗಿದ್ದುದು ನೃತ್ಯಕಲೆಯ ಅಭ್ಯಾಸದ ವಿಚಾರವಲ್ಲ – ಶಾಸ್ತ್ರೀಯ ಜ್ಞಾನ. ಭರತನಾಟ್ಯದ ಶಾಸ್ತ್ರದ ವಿಚಾರವಾಗಿ ಮಾತನಾಡಿ, ಅಭಿನಯ, ಸಂಚಾರಿ ಭಾವಗಳು, ಭಂಗಿಗಳು ಮುಂತಾದುವುಗಳನ್ನು

ವಿವರಿಸಿದೆವು. ಉಪನ್ಯಾಸವಾದ ಮೇಲೆ, "ನಿಮ್ಮ ನೃತ್ಯಕಲೆ ತುಂಬಾ ಗಡುಸಾದ ವಿಷಯ. ಒಂದೇ ದಿನ ಅದರ ಪರಿಚಯ ಮಾಡಿಕೊಳ್ಳಲು ತಲೆಬಿಸಿಯಾಗುವುದು" ಅಂದರು. ನಾವು ಅವರಿಗಾಗಿ ವಾರಕ್ಕೊಮ್ಮೆ ಎಂಬಂತೆ ಒಂದು ಉಪನ್ಯಾಸ ಮಾಲೆಯನ್ನು ಕೊಡಲು ಸಿದ್ಧರಿದ್ದೆವು. ಆದರೆ ಇಲ್ಲಿನ ಜನರಿಗೆ ಕೆಲಸದಿಂದ ಬಿಡುವು ಎಂಬ ಮಾತೇ ಇಲ್ಲ. ಅವರಿಗೆ ಯಾವಾಗಲೂ ಸಮಯದ ಅಭಾವ!........

ಇತಿ ನಿಮ್ಮ

ಚಂದಮ್ಮ.

* * * *

ಲಂಡನ್

7 – 3 – 1966

ಮುದ್ದು ಮಕ್ಕಳೇ,

........ಕೆಲವು ವಾರಗಳಿಂದ ನಾವು ತುಂಬಾ ಕೆಲಸದ ಭರದಲ್ಲಿದ್ದೇವೆ. ಇತ್ತೀಚೆಗೆ ಹಲವಾರು ನೃತ್ಯ ಪ್ರದರ್ಶನಗಳನ್ನೂ ನೃತ್ಯ ಉಪನ್ಯಾಸಗಳನ್ನೂ ಕೊಟ್ಟೆವು. ಹಾರ್ನಿಮ್ಯಾನ್ ಮ್ಯೂಸಿಯಮಿನಲ್ಲಿ (Horniman Museum) ಪತಿಯವರು ಕೊಟ್ಟ ಉಪನ್ಯಾಸ ತುಂಬಾ ಸ್ವಾರಸ್ಯವುಳ್ಳದ್ದಾಗಿತ್ತು. ಈ ಮ್ಯುಸೀಯಮ್‌ನವರು ಉಪನ್ಯಾಸವನ್ನು ಕುರಿತು ಜಾಹೀರಾತುಗಳನ್ನು ಹೆಚ್ಚಾಗಿ ಕಳಿಸದಿದ್ದರೂ ಮಂದಿರವು ಜನರಿಂದ ಕಿಕ್ಕಿರಿದು ತುಂಬಿತ್ತು. ಸುಮಾರು ನೂರು ಮಂದಿ ಜನರು ಉಪನ್ಯಾಸವನ್ನು ನಿಂತುಕೊಂಡೇ ಕೇಳಬೇಕಾಯಿತು. ಪತಿಯವರ ಉಪನ್ಯಾಸ "ಭಾರತದ ದೇವಾಲಯಗಳಲ್ಲಿನ ನೃತ್ಯಗಳು" ಎಂದಿತ್ತು. ಅಲ್ಲಿನ ಪ್ರೇಕ್ಷಕರ ಆದರದ ಪ್ರೋತ್ಸಾಹ ವಿಶೇಷವಾಗಿ ನಾವು ಮೆಚ್ಚುವಂತಿತ್ತು. ಅವರ ಮೆಚ್ಚುಗೆಯ ಕರ ತಾಡನ ನಮ್ಮನ್ನು ಪೇಚಾಟಕ್ಕಿಡುವಷ್ಟು (Embarrassment) ವಿಶೇಷವಾಗಿತ್ತು. ಬೆಂಗಳೂರಿನಲ್ಲಿದ್ದಾಗ ನಾವು ನಮ್ಮ ಕಲೆಯನ್ನು ಹೊರ ದೇಶಗಳಲ್ಲಿ ಯಾವ ರೀತಿಯಲ್ಲಿ ಪ್ರದರ್ಶಿಸಬೇಕು ಮತ್ತು ಯಾವ ವಿಧದ ಪ್ರೋತ್ಸಾಹ ನಾವು ಪಡೆಯಬೇಕು ಎಂದೆಲ್ಲ ನಾವು ಕಲ್ಪಿಸಿಕೊಂಡಿದ್ದೆವೋ ಆ ಕನಸುಗಳೆಲ್ಲ ಅಂದು ನೆನಸಾದುವು! ಆ ಮ್ಯೂಸಿಯಂ ನಮ್ಮ ನೃತ್ಯ ಪ್ರದರ್ಶನಕ್ಕೂ ಉಪನ್ಯಾಸಕ್ಕೂ ಯೋಗ್ಯ ಸ್ಥಳವಾಗಿತ್ತು. ಅಂದು ನಮ್ಮ ತಾಳದ ಜೋಡಿಯನ್ನು ತೆಗೆದುಕೊಂಡು ಹೋಗಲು ನಾವು ಮರೆತಿದ್ದೆವು. ಆದರೆ ಮ್ಯೂಸಿಯಂನಲ್ಲಿ ಪ್ರದರ್ಶನಕ್ಕಿಟ್ಟ ಒಂದು

ಜೋಡಿ ತಾಳವನ್ನೂ ಒಂದು ಜೋಡಿ ತಟ್ಟು ಕೋಲುಗಳನ್ನೂ ಮ್ಯೂಸಿಯಮ್ಮಿನ ಸಂಗೀತ ಖಾತೆಯ ಮೇಲ್ವಿಚಾರಕರು ಕೂಡಲೇ ನಮಗೆ ಒದಗಿಸಿ ಕೊಟ್ಟರು!

ರಿಚ್‌ಮಂಡ್ (Richmond) ಎಂಬಲ್ಲಿ 'ನ್ಯೂ ಎಟ್ಲಾಂಟೀಸ್ ಫೌಂಡೇಷನ್' ('New Atlantis Foundation') ಎಂಬುದೊಂದು ಸಂಸ್ಥೆಯಿದೆ. ಕಲಾವಿದರು, ಕಲೋಪಾಸಕರು ಶಾಸ್ತ್ರಜ್ಞರು, ವಿಜ್ಞಾನಿಗಳು ಕೂಡುವ ಈ ಸಂಸ್ಥೆ ಥೆಮ್ಸ್ (Thames River) ನದಿಯನ್ನು ಪಕ್ಷಿನೋಟದಿಂದ ನೋಡುವಂತಿರುವ ಒಂದು ಎತ್ತರ ವಾದ ಪ್ರದೇಶದಲ್ಲಿದೆ. ಈ ಸಂಸ್ಥೆಯಲ್ಲಿ ಯುವಕ ಜನರೂ ವೃದ್ಧರೂ ಸೇರಿಕೊಂಡಿ ದ್ದಾರೆ. ಎಲ್ಲರಿಗೂ ಇಡೀ ಜಗತ್ತಿನ ಕಲೆ, ಅಧ್ಯಾತ್ಮ, ಮತ, ಧರ್ಮ ಮತ್ತು ವಿಜ್ಞಾನಗಳಲ್ಲಿ ವಿಶೇಷ ಆಸಕ್ತಿ. ಅವರ ಈ ಸಂಸ್ಥೆಯ 'ನೊರಫೋಕ್ ಲಾಡ್ಜ್' (Norfolk Lodge) ಎಂಬ ಕಟ್ಟಡದಲ್ಲಿ ಮೂರು ದೊಡ್ಡ ಕೊಠಡಿ ತುಂಬಾ ಕಲೆ, ಅಧ್ಯಾತ್ಮ ಮತ್ತು ವಿಜ್ಞಾನಗಳ ಮೇಲೆ ಮುಖ್ಯವಾದ ಗ್ರಂಥಗಳನ್ನೆಲ್ಲ ಸಂಗ್ರಹಿಸಿ ಒಂದು ಅಮೂಲ್ಯವಾದ ಪುಸ್ತಕ ಭಂಡಾರವನ್ನಿಟ್ಟುಕೊಂಡಿದ್ದಾರೆ. ಇದರ ಆಶ್ರಯ ದಲ್ಲಿ ಕೊಟ್ಟ ನೃತ್ಯೋಪನ್ಯಾಸ ನಾವೆಂದೂ ಮರೆಯಲಾಗದ ಒಂದು ಸುಸಂದರ್ಭ. ನಾವು ನಮ್ಮ ಭಾರತೀಯ ನೃತ್ಯಕಲೆಯನ್ನು A. M. C. ಯವರ ಮೂಲಕ ಪ್ರಚಾರ ಮಾಡುವ ಅಮೂಲ್ಯ ಕಾರ್ಯವನ್ನು ಅವರು ಬಹಳವಾಗಿ ಮೆಚ್ಚಿಕೊಂಡರು. "ಭಾರತೀಯ ನೃತ್ಯಕಲೆ ಜೀವನವನ್ನು ಪ್ರತಿಬಿಂಬಿಸುವ ಕಲೆ. ನಮ್ಮ 'ಬ್ಯಾಲೆ' ನೃತ್ಯ ಅದನ್ನು ಸಾಧಿಸಲಾರದು" ಎಂದು ಪ್ರೇಕ್ಷಕರಲ್ಲಿ ಹಲವರು ಅಭಿಪ್ರಾಯಪಟ್ಟರು. ಉಪನ್ಯಾಸವಾದ ಮೇಲೆ ನಾವು ಅಲ್ಲೇ ಅವರಿಂದಲೇ ತಯಾರಿಸಲ್ಪಟ್ಟ ಭಾರತೀಯ ಊಟವನ್ನು ಊಟ ಮಾಡಿದೆವು. ಈ ಸಂಘದವರ ಒಂದು ವಿಶಿಷ್ಟ ಪದ್ಧತಿ ಯೇನೆಂದರೆ: ಯಾವ ದೇಶದಿಂದ ಉಪನ್ಯಾಸಕರು ಬರುವರೋ ಆ ದೇಶದವರ ಅಡಿಗೆ ಯನ್ನೇ ಮಾಡಿ ಅವರಿಗೆ ಬಡಿಸುವುದು! ಇದು ವಿಶೇಷವಲ್ಲವೇ? ಊಟ ಮಾಡು ತ್ತಿದ್ದ ವೇಳೆಗೆ ಕಲೆಗೆ ಸಂಬಂಧಪಟ್ಟ ಅನೇಕ ವಿಷಯಗಳನ್ನು ಕುರಿತು ವಿಚಾರ ವಿನಿ ಮಯವಾಯಿತು.

ಒಮ್ಮೆ ಒಂದು ಕಾಲೇಜಿನಲ್ಲಿ ನಮ್ಮ ಉಪನ್ಯಾಸದ ಕಾರ್ಯಕ್ರಮವಿತ್ತು. ಅಂದು ನಾವಲ್ಲಿ ಹೋದಾಗ ರಂಗಮಂದಿರದೊಳಗಲ್ಲದೆ ರಂಗಸ್ಥಳದ ಮೇಲೂ ತುಂಬಾ ಕುರ್ಚಿ ಗಳನ್ನು ವರ್ತುಲಾಕಾರದಲ್ಲಿಟ್ಟಿದ್ದರು. ಮಧ್ಯದಲ್ಲಿ ಒಂದಿಷ್ಟು ಜಾಗವನ್ನು ನಮ ಗಾಗಿ ಖಾಲಿ ಇಟ್ಟಿದ್ದರು. ಇದೇನು ವ್ಯವಸ್ಥೆ ಎಂದು ಕೇಳಿದ್ದಕ್ಕೆ, "ಹೋದ ವಾರ ಭಾರತೀಯ ಸಂಗೀತ ಕಾರ್ಯಕ್ರಮಕ್ಕೆ ನಾವು ಹೀಗೆಯೇ ಏರ್ಪಾಡು ಮಾಡಿದ್ದೆವು" ಎಂಬ ಸರಳ ಉತ್ತರ ಬಂತು. ಅಂದರೆ ಅವರು ಭಾರತೀಯ ನೃತ್ಯವನ್ನು ಖಂಡಿತ ವಾಗಿಯೂ ನೋಡಿಲ್ಲವೆಂದು ತಿಳಿದೆವು. ನೃತ್ಯ ನೋಡಲು ಪ್ರೇಕ್ಷಕರೆಲ್ಲ ರಂಗಮಂದಿರ

ದಲ್ಲಿರಬೇಕು, ರಂಗಸ್ಥಳದ ಮೇಲೆ ನರ್ತಕರು ಇರಬೇಕು, ಎಂದು ತಿಳಿಸಿದಾಕ್ಷಣ ಅಲ್ಲಿನ ಕೆಲವು ವಿದ್ಯಾರ್ಥಿಗಳು ಕೂಡಲೇ ಮುಂದೆ ಬಂದು ಕೊಂಚ ಸಮಯದೊಳಗೇ ಇಡೀ ವಾತಾವರಣವನ್ನು ಬದಲಾಯಿಸಿ ನಮಗೆ ಅನುಕೂಲವಾದ ಏರ್ಪಾಡನ್ನು ಮಾಡಿದರು. ಸುಮಾರು ನೂರು ಮಂದಿ ಕಲಾ ವಿದ್ಯಾರ್ಥಿಗಳು ನಮ್ಮ ನೃತ್ಯ ಕಲೆಯ ವಿಷಯವನ್ನು ಕೇಳುತ್ತ ಮೈಮರೆತು ಕುಳಿತರು. ಉಪನ್ಯಾಸವಾದ ಮೇಲೆ ಅವರ ಪ್ರಶ್ನಾವಳಿಯು ತುಂಬಾ ಸ್ವಾರಸ್ಯವುಳ್ಳದ್ದಾಗಿತ್ತು. ಪತಿಯವರು ಬಹಳ ಸಂತೋಷದಿಂದ ಅವರಿಗೆಲ್ಲ ತೃಪ್ತಿಯಾಗುವಂತೆ ಅವರ ಪ್ರಶ್ನೆಗಳನ್ನು ಉತ್ತರಿಸಿದರು. ಇಂತಹ ಕುತೂಹಲ ಪ್ರೇಕ್ಷಕ ವರ್ಗಕ್ಕೆ ನಮ್ಮ ನೃತ್ಯಕಲೆಯನ್ನು ಕುರಿತು ಒಂದಿಷ್ಟು ವಿದ್ಯಾದಾನ ಮಾಡಿದುದಕ್ಕಾಗಿ ಅಂದಿನ ದಿನ ಸಾರ್ಥಕವಾಯಿತೆಂದು ನಾವು ತೃಪ್ತಿ ಪಟ್ಟೆವು.

ನಾವು 'ಕಿಂಗ್ಸ್ಲೀ ಹಾಲಿ' ನಲ್ಲಿ (Kingsley Hall) ಕೊಟ್ಟ ನೃತ್ಯೋಪನ್ಯಾಸ ಚಿರಸ್ಮರಣೀಯವಾದುದು. ನಮಗೆ ಭಾರತೀಯರಿಗೆ ಆ ಸ್ಥಳ ಪುಣ್ಯ ಕ್ಷೇತ್ರವಾಗಿದೆ. ಕ್ರಿ. ಶ. 1931 ರಲ್ಲಿ ಮಹಾತ್ಮ ಗಾಂಧಿಯವರು 'ರೌಂಡ್ ಟೇಬಲ್ ಕಾನ್ಫರೆನ್ಸಿಗೆ' (Round Table Conference) ಮೊದಲ ಸಾರಿ ಲಂಡನ್ನಿಗೆ ಬಂದಾಗ ಇದೇ ಕಿಂಗ್ಸ್ಲೀ ಹಾಲಿನಲ್ಲಿ ಅವರು ವಾಸಿಸಿದ್ದರಂತೆ. ಕಿಂಗ್ಸ್ಲೀ ಹಾಲ್ ಲಂಡನ್ನಿನ ಈಸ್ಟ್ ಎಂಡಿನಲ್ಲಿದೆ (East End), ಅಂದರೆ ಇಲ್ಲಿಯ 'ಬಡಜನರ' ಬಡಾವಣೆಯಲ್ಲಿ. ಶ್ರೀಮಂತ ಜನರೆಲ್ಲ ವೆಸ್ಟ್ ಎಂಡಿನಲ್ಲಿರುವಂತೆ (West End) ಕೆಳಗಿನ ಅಂತಸ್ತಿನ ಜನರೆಲ್ಲ ಈ ಈಸ್ಟ್ ಎಂಡಿನಲ್ಲಿರುವರಂತೆ. ಮಹಾತ್ಮ ಗಾಂಧಿಯವರನ್ನು ನೋಡಲು ಪ್ರಸಿದ್ಧ ಜನರು, ಶ್ರೀಮಂತರು, ರಾಜಮನೆತದವರು, ಸರಕಾರದ ಪ್ರಮುಖ ವ್ಯಕ್ತಿಗಳು, ಕೀರ್ತಿಶಾಲಿ ಕಲಾವಿದರು ಇವರೆಲ್ಲರೂ ತಮ್ಮ ಶ್ರೀಮಂತ ಬಡಾವಣೆಯಾದ ವೆಸ್ಟ್ ಎಂಡಿನಿಂದ ದೊಡ್ಡ ದೊಡ್ಡ ಕಾರುಗಳಲ್ಲಿ ಬರುತ್ತಿದ್ದರಂತೆ. ಇಂದಿಗೂ ಕಿಂಗ್ಸ್ಲೀ ಹಾಲಿನಲ್ಲಿ ಮಹಾತ್ಮಾ ಗಾಂಧಿಯವರು ವಾಸವಾಗಿದ್ದ ಕೊಠಡಿಯು ಇಲ್ಲಿಯ ಎಲ್ಲ ಪ್ರವಾಸಿಗಳಿಗೆ ಒಂದು ಪ್ರೇಕ್ಷಣೀಯ ಸ್ಥಳವಾಗಿದೆ.........

ನಮ್ಮ ಉಪನ್ಯಾಸವಿದ್ದ ಸಂಜೆ ನಮಗೆ ಆದರದ ಸ್ವಾಗತವಿತ್ತರು. ಒಂದು ದೊಡ್ಡ ಕೋಣೆಯೊಳಗೆ ನಮ್ಮ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಅಲ್ಲಿ ವಿದ್ಯುಚ್ಛಕ್ತಿ ದೀಪಗಳು ಬೇಡವೆಂದರು. ಯಾವ ಕಾಲು ಆಸನಗಳೂ ಇರಲಿಲ್ಲ. ಪ್ರೇಕ್ಷಕರು ಕುಳಿತುಕೊಳ್ಳಲು ನೆಲದ ಮೇಲೆ ಚಾಪೆಗಳನ್ನೂ ಕಂಬಳಿಗಳನ್ನೂ ಹಾಸಿದ್ದರು. ಒರಗಲು ದಿಂಬುಗಳನ್ನಿಟ್ಟಿದ್ದರು. ಬೆಳಗಿನ ಪೂರೈಕೆಗಾಗಿ ಕೋಣೆಯ ಗೋಡೆಗಳಲ್ಲೆಲ್ಲ ಮೇಣದ ಬತ್ತಿಗಳನ್ನು ಹಚ್ಚಿಸಿ ಇಟ್ಟಿದ್ದರು. ಅಗರಬತ್ತಿಗಳನ್ನುರಿಸಿ ವಾತಾವರಣವೆಲ್ಲ ಘಮಘಮಿಸುವಂತೆ ಮಾಡಿದ್ದರು. ಕೋಣೆಯ ಒಳಗೆ ಕಾಲಿಟ್ಟೊಡನೆಯೇ ಕಲೆಗೆ

ಬೇಕಾದ ಸ್ಫೂರ್ತಿಯನ್ನು ನಾವು ಪಡೆಯುವಂತಾಯಿತು. ಪ್ರೇಕ್ಷಕ ವೃಂದದಲ್ಲಿ ಚಿತ್ರಕಲಾವಿದರು, ನೃತ್ಯಗಾರರು, ದೊಡ್ಡ ವಿದ್ವಾಂಸರುಗಳು, ಛಾಯಾ ಪ್ರಪಂಚದ ಧುರೀಣರು, ರಜತಪರದೆಯ ಕಲಾವಿದರು, ನೃತ್ಯ ಜಗತ್ತಿನಲ್ಲಿ ಮೆರೆಯುತ್ತಿರುವ ಇಂದಿನ ಅನೇಕ ಕಲಾವಿದರು ಇತ್ಯಾದಿ ವಿವಿಧ ಲಲಿತ ಕಲೆಗಳ ಕಲೋಪಾಸಕರೆಲ್ಲ ಸೇರಿದ್ದರು. ನಮ್ಮ ಉಪನ್ಯಾಸದಲ್ಲಿ ನೃತ್ಯಕಲೆಯ ತಳಹದಿಯಿಂದ ಆರಂಭಿಸಿ ಮೆಲ್ಲಗೆ ಪೂರ್ಣ ಪರಿಚಯವನ್ನು ಕೊಟ್ಟು ನಮ್ಮ ಸಂಪ್ರದಾಯಬದ್ಧ ಶಾಸ್ತ್ರೀಯ ಕಲೆಯ ಲಾವಣ್ಯವನ್ನೂ ಸೌಂದರ್ಯವನ್ನೂ ಅವರ ಕಣ್ಣಮುಂದೆ ಕಟ್ಟಿ ನಿಲ್ಲುವಂತೆ ಮಾಡಿದೆವು. ಪತಿಯವರು ಮಾತನಾಡುತ್ತಿದ್ದಂತೆ ಅವರ ವಿಚಾರಗಳು ಸ್ಫುಟವಾಗುವಂತೆ ನಾನು ನರ್ತಿಸಿ, ಕೆಲವೊಮ್ಮೆ ಅವರೂ ನಾನೂ ಜೊತೆಯಾಗಿ ನರ್ತಿಸಿ ಉಪನ್ಯಾಸಕ್ಕೆ ವಿಶೇಷ ಕಳೆಯನ್ನು ಕೊಟ್ಟೆವು. ಜಗತ್ಪ್ರಸಿದ್ಧ ನೃತ್ಯ ಕಲಾವಿದ ಶ್ರೀರಾಮ ಗೋಪಾಲರು ಉಪನ್ಯಾಸವು ಮುಗಿದ ನಂತರ ನಮ್ಮೊಡನೆ "ನೀವು ಕಲೆಗಾಗಿ ಮಿತಿ ಮೀರಿ ಶ್ರಮಪಡುತ್ತೀರಿ. ಅಗತ್ಯವಿಲ್ಲ. ಇದೇ ರೀತಿ ನೀವು ಮುಂದೆಯೂ ನಡೆದರೆ ನಿಮ್ಮನ್ನು ನೀವೇ ಕಳೆದುಕೊಳ್ಳುತ್ತೀರಿ, ಕರಗಿಹೋಗುವಿರಿ, ಎಚ್ಚರಿಕೆ !" ಎಂದು ಸ್ನೇಹ ಪೂರ್ವಕವಾಗಿ ನಮಗೆ ಎಚ್ಚರಿಕೆ ಕೊಟ್ಟರು. ಆದರೆ ಅವರು ಹೇಳಿದ ಮಾತನ್ನು ನಾವು ಮೆಲುಕಾಡುತ್ತಿದ್ದಂತೆ ನಮಗಿಬ್ಬರಿಗೂ ಒಂದು ವಿಷಯ ಸ್ಪಷ್ಟವಾಯಿತು. ನಮಗೆ ನಮ್ಮ ಈ ಕಾರ್ಯಸಾಧನೆಯಲ್ಲಿರುವ ಅಭಿರುಚಿ ಮತ್ತು ಹುರುಪು ಒಂದು ಅಕ್ಷಯವಾದ ನಿಧಿಯಾಗಿರಬಹುದೆಂದು ತಿಳಿದುಕೊಂಡೆವು. ಮನುಷ್ಯನನ್ನು ಪರೀಕ್ಷೆಮಾಡುವ ಸಮಯದಲ್ಲಿ ಅವನಲ್ಲಿ ಹುದುಗಿಕೊಂಡಿರುವ ಎಷ್ಟೊಂದು ಸಾಹಸ ಸಾಮರ್ಥ್ಯಗಳು ಬಹಿರಂಗಕ್ಕೆ ಬರುತ್ತವೆ ಎಂಬ ಸೋಜಿಗದ ಸಂಗತಿಯನ್ನು ಚೆನ್ನಾಗಿ ಮನಗಂಡೆವು........

ಇತಿ ನಿನ್ನ

ಅಮ್ಮ.

* * * *

ಲಂಡನ್

16-3-1966

ಆತ್ಮೀಯರೇ,

'ರುಕ್ಮಿಣಿ' ಯಿಂದ ಪತ್ರವಿಲ್ಲದೆ ನಿರಾಶೆಯಾಗಿದೆ. ಎಲ್ಲರೂ ಕ್ಷೇಮ ತಾನೇ ? ಒಂದು ವಾರದಿಂದ ನಿಮ್ಮ ಪತ್ರವನ್ನು ನಿರೀಕ್ಷಿಸುತ್ತಿದ್ದೇನೆ. ದಯವಿಟ್ಟು ಈ ಕಾಗದ ಕಂಡ ಕೂಡಲೇ ಬರೆಯಿರಿ – ಯಾರಾದರೊಬ್ಬರು ಬರೆಯಿರಿ !

ಇಲ್ಲಿನ ಹವೆ ಈಗ ವಸಂತಋತುವಿಗೆ ಬದಲಾಯಿಸುತ್ತಿದೆ. ನೆಲದಿಂದ ಎಲ್ಲಿಂದಲೋ ಎಂಬಂತೆ ಎಲೆಗಳಿಲ್ಲದೇನೇ ಹೂಗಳು ತಲೆಯೆತ್ತುತ್ತಿವೆ! ಹಚ್ಚ ಹಸು ರಾದ ಮೈದಾನಗಳಲ್ಲಿ ಈ ಬಣ್ಣಬಣ್ಣದ ಹೂಗಳನ್ನು ಕಂಡರೆ ಅವನ್ನು ಯಾರೋ ಮಣ್ಣಲ್ಲಿ ಹೂತಿರುವಂತೆ ಭಾಸವಾಗುತ್ತದೆ. ಈ ದೃಶ್ಯ ಎಷ್ಟು ಚಂದ! ಗಿಡಮರ ಗಳಲ್ಲಿ ಎಲೆಗಳೇ ಇರುವುದಿಲ್ಲ – ಬರಿಯ ಹೂಗಳು ಮಾತ್ರ! ಹೂ ಗೊಂಚಲುಗಳು ಎಲ್ಲೆಲ್ಲೂ ಕಾಣಬರುತ್ತವೆ. ಇನ್ನು ಕೆಲವು ವಾರಗಳ ಅನಂತರ ಎಲೆಗಳು ನಿಧಾನ ವಾಗಿ ಚಿಗುರುತ್ತವೆ. ಇಲ್ಲಿನ ಮೈದಾನಗಳಂತೂ ರತ್ನಕಂಬಳಿಗಳಂತೆ ಕಾಣುತ್ತವೆ. ಯಾವ ಹುಳು, ನೊಣ, ನುಸಿ ಇಲ್ಲದಿರುವುದು ಭಾರತದಿಂದ ಬಂದಿರುವ ನಮಗೆ ಹೊಸ ಅನುಭವ. ಇಲ್ಲಿ ಜಿರಲೆ, ಇಲಿ, ಇರುವೆ ಕೂಡಾ ಪ್ರಾಣಿ ಸಂಗ್ರಹಾಲಯದಲ್ಲಿ (Zoo) ಮಾತ್ರ ಕಾಣುವ ಜೀವಿಗಳು! ಹೌದು, ವಸಂತಋತುವಿದು ಈಗಿಲ್ಲಿ. ಇದರ ಮೊದಲ ಸಂಕೇತವಾಗಿ ಎಲ್ಲಿ ನೋಡಿದರೂ ಹಳದಿ ವರ್ಣದ ಡೆಫೋಡಿಲ್ (Daffodil) ಹೂಗಳು ಸ್ವೇಚ್ಛಾಪರವಾಗಿ ತಲೆಯೆತ್ತಿ ತೂಗುತ್ತಿರುವ ದೃಶ್ಯ.

ನಾವು ಡೆವನ್‌ಶಾಯರ್ (Devonshire) ಗೆ ನಮ್ಮ ನೃತ್ಯ ಪ್ರದರ್ಶನಕ್ಕಾಗಿ ಹೋಗಿದ್ದೆವು. ದಾರಿಯಲ್ಲಿ ಪ್ಯಾನ್ (Pine – ದೇವದಾರ (?) ಮರ) ಮತ್ತು 'ಮರುಗುವ' ಹಬ್ಬೆಯ ಗಿಡಗಳಲ್ಲಿ (Weeping Willow) 'ರೊಬಿನ್' ಹಕ್ಕಿಗಳು (Robins) ಮತ್ತು ನೀಲಕಂಠ ಪಕ್ಷಿಗಳು (Magpies) ಇಂಪಾಗಿ ಹಾಡುತ್ತಿರುವು ದನ್ನು ಕೇಳಿದೆವು. ಮರಗಳಲ್ಲಿ ನಂಬಲಸಾಧ್ಯವಾದ ಅತಿ ದೊಡ್ಡ ಹೂಗಳು ಅರಳು ತ್ತಿವೆ. ಎಲೆಗಳೇ ಕಾಣದಿರುವ ಈ ದೊಡ್ಡ ಮರಗಳಲ್ಲಿ ಕಮಲದಂತಿರುವ ದೊಡ್ಡ ಹೂಗಳು ಅರಳುವ ದೃಶವನ್ನು ನೋಡಲು ನೂರಾರು ಮೈಲಿಗಳಿಂದ ಜನರು ಪ್ರಯಾಣ ಬೆಳೆಸಿ ಬರುವವರಿದ್ದಾರೆ. ಮೆಗ್ನೋಲಿಯಾ (Magnolia) ಎಂಬ ಈ ಹೂವನ್ನು ನಾನೆಂದೂ ಮರೆಯುವಂತಿಲ್ಲ. ವಿವಿಧ ಹೂಗಳಂತೂ ಸಮೃದ್ಧಿಯಾಗಿವೆ. ಬಹು ರಮಣೀಯ ದೃಶ್ಯ. ಗುಲಾಬಿ ಹೂಗಳು ಕಾಡು ಹೂಗಳಂತೆ ಎಲ್ಲೆಲ್ಲೂ ಅರಳಿ ಮನ ಸ್ಸಿಗೆ ತುಂಬಾ ಸಂತೋಷವನ್ನೀಯುತ್ತಿವೆ. ದೊಡ್ಡ ದೊಡ್ಡ ಗುಲಾಬಿ ಹೂಗಳ ಗೊಂಚಲು ಗೊಂಚಲುಗಳು ಈ ರೀತಿ ಬೆಳೆಯುವುದು ತಮ್ಮ ಜನ್ಮಸಿದ್ಧ ಹಕ್ಕು ಎಂಬಂತೆ ಹೆಮ್ಮೆಯಿಂದ ಮೆರೆದು ನಮಗೆ ಅಚ್ಚರಿಯ ಸುಂದರ ದೃಶ್ಯವನ್ನು ಒದಗಿಸು ತ್ತವೆ. ಇಲ್ಲಿ ಹೂ ತೋಟಗಳಿಗೆ ಬೇಲಿ ಕಟ್ಟುವುದಿಲ್ಲ. ತಿನ್ನಲು ಮೇಕೆ, ಹಸುವಿಲ್ಲ. ಕಂಡರೂ ಕಾಣದೆ ಇದ್ದರೂ ಕದಿಯುವ ಜನರಿಲ್ಲ. ಬೆಂಗಳೂರಿನಲ್ಲಿದ್ದಂತೆ "ದೇವರಿಗೆ" ಎಂದು ಹೂ ಕದಿಯುವವರಿಲ್ಲ.

ಇಂಗ್ಲೆಂಡಿನ ದಕ್ಷಿಣದಲ್ಲಿರುವ ಎಕ್ಸೇಟರ್ (Exeter) ಎಂಬ ಪಟ್ಟಣಕ್ಕೆ ಹೋದೆವು. ಅದು ಇಂಗ್ಲಿಷ್ ಚೆನಲಿನ (English Channel) ದಡದಲ್ಲಿದೆ.

ಸಮುದ್ರ ನೀಲಿ ನೀಲಿಯಾಗಿ ಅಂದವಾಗಿ ಕಾಣುತ್ತಿತ್ತು. ಎಕ್ಸೇಟರಿನಲ್ಲಿ ಈಯನ್ ಹಂಟರ್ (Ian Hunter) ಉದ್ಘಾಟಿಸಿದ ಲಲಿತ ಕಲೆಗಳ ಉತ್ಸವದಲ್ಲಿ (Art Festival) ಪ್ರದರ್ಶನವಿತ್ತು. ಅಲ್ಲಿಯವರು ಭಾರತೀಯ ನೃತ್ಯಗಳನ್ನು ಎಂದೂ ನೋಡಿದ್ದವರಲ್ಲ. ಆದ್ದರಿಂದ ನಮ್ಮ ಕಾರ್ಯಕ್ರಮಕ್ಕೆ ಯಾವ ಅನುಕೂಲತೆಗಳು ಬೇಕೆಂಬುದು ಅವರಿಗೆ ತಿಳಿದಿರಲಿಲ್ಲ. ಆದರೆ ನಾವು ಹೇಳಿದ ಅನಂತರ ಎಲ್ಲ ಅನು ಕೂಲತೆಗಳನ್ನೂ ಒದಗಿಸಿ ಕೊಟ್ಟರು. ರಂಗಮಂದಿರದಲ್ಲಿ ಐರೋಪ್ಯರು ಕಿಕ್ಕಿರಿದು ಸೇರಿದ್ದರು. ಆಸಕ್ತಿಯಿಂದ, ಕುತೂಹಲದಿಂದ, ಆನಂದದಿಂದ ಒಂದು ನಿಮಿಷಕ್ಕೂ ಕದಲದೆ ನಮ್ಮ ಕಾರ್ಯಕ್ರಮವನ್ನು ಪೂರ್ತಿಯಾಗಿ ನೋಡಿದರು. ಪತಿಯವರು ಮುನ್ನುಡಿಯಾಗಿ ಭಾರತೀಯ ನೃತ್ಯಗಳ ಸಂಬಂಧ ಸ್ವಲ್ಪ ಮಾತನಾಡಿ ಅನಂತರ ಪ್ರತಿಯೊಂದು ನರ್ತನವನ್ನೂ ಪ್ರಾರಂಭದಲ್ಲಿ ವಿವರಿಸಿ ಹೇಳುವ ಕ್ರಮವನ್ನು ಅವರು ತುಂಬಾ ಮೆಚ್ಚಿಕೊಂಡರು. ಅಂದು ಅವರಿಗೂ ನಮಗೂ ಜೀವನದಲ್ಲಿನ ಒಂದು ಅಪೂರ್ವ ಸುಸಂದರ್ಭವಾಗಿತ್ತು. ನಮ್ಮ ಬಣ್ಣ ಬಣ್ಣದ ವೇಷಭೂಷಣಗಳನ್ನು ಕಂಡು ಆಶ್ಚರ್ಯಚಕಿತರಾದರು. ಕೆಲವು ಚಿತ್ರಗಾರರು ನಾವು ನರ್ತಿಸುವ ಸಮಯ ದಲ್ಲಿ ನಮ್ಮನ್ನು ಚಿತ್ರಿಸುವುದನ್ನು ಕಂಡೆವು. (ಇಂತಹ ಎರಡು ಚಿತ್ರಗಳು ನಮಗೆ ಆಮೇಲೆ ಕಾಣಿಕೆಯಾಗಿ ಬಂದಿವೆ.) ನಮ್ಮ ಬಣ್ಣ ಸಂಪತ್ತಿನ ವೇಷಭೂಷಣ ಗಳನ್ನು ಕುರಿತು ಗಣ್ಯ ವ್ಯಕ್ತಿಯೊಬ್ಬರು ಹೀಗೆಂದರು : "ಬಣ್ಣದ ಟೆಲಿವಿಝನ್ ಬರಲಿ, ಅನಂತರ ನೀವು ಟಿ. ವಿ. ಯಲ್ಲಿ ತುಂಬಾ ಪ್ರಸಿದ್ಧಿ ಪಡೆಯುವಿರಿ. ಟಿ. ವಿ. ಗೆ ಅತ್ಯಂತ ಭೂಷಣಪ್ರಾಯವಾಗಿದೆ ನಿಮ್ಮ ಸೊಗಸಿನ ಕಲೆ. ಬ್ಯಾಲೆ ಪ್ರದರ್ಶನಕ್ಕೆ ವಿಶಾಲವಾದ ರಂಗಸ್ಥಳ ಅಗತ್ಯವಿರುವುದರಿಂದ ಅದು ಟಿ. ವಿ. ಪ್ರದರ್ಶನಕ್ಕೆ ನಿಮ್ಮ ಕಲೆಯಷ್ಟು ಅನುಕೂಲವಾಗಿಲ್ಲ". ನೃತ್ಯ ಪ್ರದರ್ಶನವಾದ ಮೇಲೆ ಹಲವಾರು ಹೊಸ ಗೆಳೆಯರೊಂದಿಗೆ ಊಟ ಉಪಹಾರ. ಕಲೆಯ ವಿಷಯವಾಗಿ ತುಂಬಾ ಮಾತುಕತೆ, ಅವರ ಕುತೂಹಲದ ಪ್ರಶ್ನೆಗಳು ಎಂದಿನಂತೆ ಹಲವಾರು, ಉದಾಹರಣೆ ಗಾಗಿ. "ನೀವು ಪಾಶ್ಚಾತ್ಯರಿಗಾಗಿ ನಿಮ್ಮ ಕಲೆಯನ್ನು ಬದಲಾಯಿಸುತ್ತೀರಾ ?" ("ಇಲ್ಲ, ಆದರೆ ಮತ್ತೆ ಮತ್ತೆ ಪುನರಾವರ್ತಿಯಾಗಿ ಬರುವ ಸಂಚಲನವನ್ನು ಕಡಿಮೆ ಮಾಡುತ್ತೇವೆ.")

ಭಾರತದಲ್ಲಿ ರಾತ್ರಿಯೆಲ್ಲ ನಡೆಯುವ ನೃತ್ಯ ಪ್ರದರ್ಶನಗಳನ್ನು ನೋಡುವ ತಾಳ್ಮೆ ಉತ್ಸಾಹ ಇಲ್ಲಿಯವರಿಗೆ ಹೇಗೆ ಬರಲು ಸಾಧ್ಯ? ಇಲ್ಲಿನವರೆಲ್ಲ 'ಸಮಯ' ಪಿಶಾಚಿಯ ಪಂಜರದೊಳಗಿನ ಕೈದಿಗಳು. ಅವರಿಗೆ ಅವಿಶ್ರಾಂತತೆ (Restlessness) ಒಂದು ಸಾಂಕ್ರಾಮಿಕ ರೋಗದಂತಿದೆ. ಭಾರತೀಯರು ಗಂಟೆಗಟ್ಟಲೆ ಕುಳಿತು ಆರಾಮವಾಗಿ ಸೌಂದರ್ಯೋಪಾಸನೆಯನ್ನು ಮಾಡುವ ಶಕ್ತಿಯನ್ನು ಹೊಂದಿರುವ ರೆಂದು ಕೇಳಿದ ಇಲ್ಲಿನ ಅನೇಕರು ಅಸೂಯೆ ಪಡುವಂತಿದೆ. ಸಂಭಾಷಣೆ ಬೆಳೆ

ಯುತ್ತ ಸಹಜವಾಗಿ 'ಬ್ಯಾಲೆ' ಮತ್ತು 'ಭಾರತೀಯ ನೃತ್ಯ' ಇವುಗಳ ಹೋಲಿಕೆಗೆ ಸರಿಯಿತು. ಈ ಕೆಲವು ವಿಚಾರಗಳು ಹೊರಬಂದುವು ; ಭಾರತೀಯ ನೃತ್ಯವು ಜೀವನದ ಒಂದು ಪ್ರತಿಬಿಂಬವೇ ಸರಿ....ನೃತ್ಯ ಪ್ರದರ್ಶನವು ಯೋಗ್ಯವಾಗಿದ್ದರೆ ಪ್ರೇಕ್ಷಕರಲ್ಲಿ ಒಮ್ಮೆಯೇ ಒಂದೇ ಸಮನಾಗಿ ಮನಸ್ಸಿಗೂ, ಹೃದಯಕ್ಕೂ, ಆತ್ಮಕ್ಕೂ ವಿಶೇಷ ಪರಿಣಾಮವಾಗುತ್ತದೆ....ನೃತ್ಯವು ಸಾರ್ವಜನಿಕ (Universal) ಭಾಷೆ. ಅಲ್ಲದೆ ಕಲೆಗೆ ಮೇರೆ ಇಲ್ಲ........ಮನೋಭಾವಗಳು ಎಲ್ಲರಲ್ಲಿಯೂ ಒಂದೇಯಾಗಿರುವ ಕಾರಣ ನಮ್ಮ ಕಲೆಯ ಭಾವಗಳು ಪಾಶ್ಚಾತ್ಯರನ್ನು ರಾಜಕೀಯಕ್ಕಿಂತ ಹೆಚ್ಚಾಗಿ ನಮ್ಮ ದೇಶದ ಕಡೆಗೆ ಆಕರ್ಷಿಸುತ್ತವೆ....ನಮ್ಮ ನೃತ್ಯಕ್ಕೆ ಹೋಲಿಸಿದರೆ 'ಬ್ಯಾಲೆ' ಶ್ರೀಮಂತಿಕೆಯ (Aristocratic) ಕೃತಕ ರೂಪದ (Sophisticated) ಕಲೆ. ಅದನ್ನು ಪಾಶ್ಚಾತ್ಯದ ಶ್ರೀಮಂತ ಸಮಾಜದವರು ಮಾತ್ರ ಕಾಪಾಡಿಕೊಂಡು ಬರಲು ಸಾಧ್ಯ. ಬ್ಯಾಲೆಯು ಹೊರಗಿನ ಸಂಪರ್ಕವನ್ನಿಟ್ಟುಕೊಳ್ಳದೆ ತನ್ನ ತನ್ನೊಳಗೇನೇ ಬೆರೆತು, ಕಲೆತು ಬಲಹೀನವಾಗಿದೆ. ಅದರಲ್ಲಿ ಹೊಸ ಚೇತನವಿಲ್ಲ, ಹೊಸ ಉಸಿರಿಲ್ಲ. ಅಂತೆಯೇ ಹೊಸ ಸೃಷ್ಟಿಯಿಲ್ಲ. ಈ ಕಾರಣದಿಂದ ಪಾಶ್ಚಾತ್ಯರು ಈಗ ಇತರ ದೇಶಗಳ ಕಲೆಯ ಕಡೆಗೆ, ಹೆಚ್ಚಾಗಿ ನಮ್ಮ ಭಾರತದ ಕಡೆಗೆ, ತಮ್ಮ ಗಮನವನ್ನು ಕೊಡುತ್ತಾರೆ. ಆಫ್ರಿಕಾಖಂಡದ ಬಡಿತದ ಆದಿವಾದ್ಯಗಳು (Primitive percussion Instruments) ಕೂಡ ಅವರ ಮನಸ್ಸನ್ನು ಸೆಳೆಯುತ್ತಿದೆ–ಇತ್ಯಾದಿ. ಅಂತೂ ಈ ಮಾತುಕತೆ ತುಂಬಾ ಸ್ವಾರಸ್ಯವುಳ್ಳದ್ದಾಗಿತ್ತು.

ಎಕ್ಸೇಟರಿನಲ್ಲಿ ನಾವೊಂದು ಆಧುನಿಕ ಬ್ಯಾಲೆ ಪ್ರದರ್ಶನವನ್ನು ನೋಡಿದೆವು. ನಮಗಂತೂ ಅದೊಂದು ಬರೇ ಬಾಹ್ಯಾಡಂಬರದ ಆಳವಿಲ್ಲದ ನೃತ್ಯವೆಂದು ತೋರಿತು. ನಾಟ್ಯದಲ್ಲಿ ಸಂಪ್ರದಾಯದ ಕಟ್ಟುನಿಟ್ಟಿರಲಿಲ್ಲ. ನನ್ನ ಚಿಕ್ಕಂದಿನಲ್ಲಿ ನನ್ನ ಮೊದಲ ನೃತ್ಯ ಗುರುಗಳಾದ ಶ್ರೀ ಶಿವರಾಮ ಕಾರಂತರು ಸಾಧಿಸುತ್ತಿದ್ದ ಸ್ವೇಚ್ಛಾಪರ ರಚನಾತ್ಮಕ ನೃತ್ಯದ ಜ್ಞಾಪಕವಾಯಿತು. ಆದರೆ ಕಾರಂತರು ಆಯ್ದುಕೊಳ್ಳುತ್ತಿದ್ದ ಕಥಾವಸ್ತುಗಳಲ್ಲಿ ಯಾವುದಾದರೊಂದು ಸಾರ್ವತ್ರಿಕ ಸತ್ಯ ಹುದುಗಿಕೊಂಡಿರುತ್ತಿತ್ತು. ಇಲ್ಲವೇ ಅವು ಉಪಮಾ ರೂಪಕಗಳಾಗಿರುತ್ತಿದ್ದುವು. (Allegorical). ಈ ಆಧುನಿಕ ಬ್ಯಾಲೆಯಲ್ಲಿ ನೃತ್ಯಗಾರರು ಮನಸ್ಸು ಬಂದಂತೆ ಸ್ವೇಚ್ಛಾಪರರಾಗಿ, ಆದರೆ ಶಾಸ್ತ್ರೀಯ ಸಂಗೀತಕ್ಕೆ ಸರಿಯಾಗಿ ಕುಣಿಯುತ್ತಾರೆ. ಬರಿಯ ದೇಹ ಸಂಬಂಧವಾದ ನೃತ್ಯ ಜೋಡಣೆಗಳನ್ನು ಮಾತ್ರ ಒದಗಿಸುತ್ತಾರೆ. ಯಾವ ಸಮಯದಲ್ಲೂ ಮನಸ್ಸನ್ನಾಗಲಿ ಹೃದಯವನ್ನಾಗಲಿ ಮುಟ್ಟುವುದಿಲ್ಲ. ಪ್ರೇಕ್ಷಕರಲ್ಲಿ ಕ್ಷಣಿಕ ಆನಂದ ಕೊಡಬಲ್ಲ ಅಂದವಾದ ನೃತ್ಯಗಳಲ್ಲದೆ ಶಾಶ್ವತ ಅನುಭವ ಕೊಡುವಂಥವುಗಳಲ್ಲ....

ನಮ್ಮ ಮನಸ್ಸೆಲ್ಲ ಈಗ ಶಿವದೇವನೊಡನಿದೆ. ಅವನ ಪರೀಕ್ಷೆಯ ಸಮಯ,

ಹೇಗೆ ಮಾಡಿದ್ದಾನೆಂದು ದಯವಿಟ್ಟು ತಿಳಿಸಿ. ನಮ್ಮ ಚಿಕ್ಕ ಗಣಪತಿಯೊಡನೆ ಅವನ ಯಶಸ್ಸಿಗಾಗಿ ಬೇಡುತ್ತಿದ್ದೇವೆ. ಈಗ ಶ್ರೀ ಗಣಪತಿಯನ್ನು ಗರಿಕೆ ಹುಲ್ಲು ಮಾತ್ರ ವಲ್ಲ – ಪಾಶ್ಚಾತ್ಯದ ವಿಧವಿಧವಾದ ಹೂಗಳಿಂದ ಅಲಂಕರಿಸುತ್ತಿದ್ದೇನೆ. ಈಗ ಯೂರೋಪಿನಲ್ಲಿರುವ ನನ್ನ ಗಣಪತಿಗೆ ಪಾಶ್ಚಾತ್ಯ ಹೂಗಳು ತುಂಬಾ ಸಿಗುತ್ತವೆ!........

ಇತಿ ನಿಮ್ಮ

ಚಂದಮ್ಮ.

*   *   *   *

ಲಂಡನ್

20 – 3 – 1966

ಮುದ್ದು ಮಕ್ಕಳೇ,

A. M. C. ಯವರು ನಮಗೆ ವಿಧಿಸಿದ ಚತುರ್ಮುಖದ ಕಾರ್ಯಗಳಲ್ಲಿ ನಾವು ಇತ್ತೀಚೆಗೆ ತುಂಬಾ ಶ್ರಮಪಡುತ್ತಿದ್ದೇವೆ. ಉಪನ್ಯಾಸಗಳನ್ನು ಕೊಡುವುದು, ನೃತ್ಯ ಪಾಠ ಹೇಳಿಕೊಡುವುದು, ನೃತ್ಯ ಪ್ರದರ್ಶನಗಳನ್ನು ಕೊಡುವುದು – ಇವು ನಮಗೆ ಬಿಡುವಿಲ್ಲದ ಕೆಲಸಗಳಾಗಿವೆ. ಆದರೆ ಇವೆಲ್ಲಾ ನಮಗೆ ತುಂಬಾ ಸಂತೋಷ ತೃಪ್ತಿಗಳನ್ನು ಕೊಡುವ ಕೆಲಸಗಳು. ಅವನ್ನು ಉತ್ಸುಕತೆ, ಉಲ್ಲಾಸಗಳಿಂದ ನೆರ ವೇರಿಸುತ್ತಿದ್ದೇವೆ. A. M. C. ಇಲ್ಲೊಂದು ಗಣ್ಯ ಸಾಂಸ್ಕೃತಿಕ ಸಂಘವಾಗಿದ್ದು ಏಷಿಯದ, ಮುಖ್ಯವಾಗಿ ಭಾರತೀಯ, ಕಲೆಗಳನ್ನು ಪಾಶ್ಚಾತ್ಯರಲ್ಲಿ ಪ್ರಚಾರಗೊಳಿ ಸುವ ಶ್ಲಾಘನೀಯ ಕಾರ್ಯವನ್ನು ಕೈಗೊಂಡಿದೆ. ಮೂಲೆ ಮೂಲೆಗಳಲ್ಲಿ ಭಾರ ತೀಯ ನೃತ್ಯಗಳ ಹೆಸರನ್ನೇ ಕೇಳದಿರುವ, ಇಲ್ಲವೆ ಅವನ್ನು ನೋಡದೆ ಇರುವ ಜನತೆ ನಮ್ಮ ಆಗಮನವನ್ನು ಅತ್ಯಂತ ಆತುರತೆಯಿಂದ ನಿರೀಕ್ಷಿಸಿ ನಮ್ಮ ಪ್ರದರ್ಶನಗಳನ್ನು ನೋಡುವ ಸುಸಂದರ್ಭವನ್ನು ಕಳೆದುಕೊಳ್ಳುವುದಿಲ್ಲ. ಭಾರತೀಯ ಸಂಗೀತ ತಕ್ಕ ಮಟ್ಟಿಗೆ ಪ್ರಚಾರದಲ್ಲಿದ್ದರೂ ಇಲ್ಲಿನ ಹಲವರು ಕಣ್ಣಿನಿಂದ ಸಿತಾರವನ್ನಾಗಲೀ ಒಂದು ಜತೆ ತಬಲವನ್ನಾಗಲೀ ನೋಡಿಲ್ಲ! A. M. C. ಯವರು ಭಾರತೀಯ ಸಂಗೀತಗಾರ ರನ್ನೋ, ನೃತ್ಯಕಲಾವಿದರನ್ನೋ ಅಂತಹ ಮೂಲೆ ಮೂಲೆಗಳಿಗೆ ಕಳುಹಿಸದೆ ಇರುತ್ತಿ ದ್ದರೆ ಅಲ್ಲಿನ ಉತ್ಸುಕ ಜನತೆಗೆ ನಮ್ಮ ಕಲೆಗಳು ಕನ್ನಡಿಯೊಳಗಿನ ಗಂಟಿನಂತಿರುತ್ತಿ ದ್ದುವು. A. M. C. ಸ್ಥಾಪನೆಯಾದ ಮೊದಲ ದಿನಗಳಲ್ಲಿ ಅಲಿ ಅಕ್ಬರ್ ಖಾನ್, ರವಿಶಂಕರ್ ಮೊದಲಾದ ಶ್ರೇಷ್ಠ ಸಂಗೀತಗಾರರ ಕಛೇರಿಗಳನ್ನು ಇಂಗ್ಲೆಂಡಿನಲ್ಲಿ ಏರ್ಪಡಿಸುವ ಸಮಯದಲ್ಲಿ ಒಂದು ಚಿಕ್ಕ ಮಂದಿರವನ್ನು ಕೂಡ ಪ್ರೇಕ್ಷಕರಿಂದ ತುಂಬಿ

ಸುವುದು ತುಂಬಾ ಕಷ್ಟತರವಾಗಿತ್ತಂತೆ. ಆಗ ಜನರಿಗೆ ಭಾರತದ ಸಂಗೀತದ ಸಂಪರ್ಕವಿರಲಿಲ್ಲ. ಈಗ ಪಾಶ್ಚಾತ್ಯ ಜನರಿಗೆ ಭಾರತೀಯ ಸಂಗೀತದ ಹುಚ್ಚು ಹಿಡಿದಿದೆ ಎನ್ನಬಹುದು. ಇಂದು ರವಿಶಂಕರರು 3,500 ಜನರು ಸೇರಲು ಸಾಧ್ಯವಾದ ಲಂಡನ್ನಿನ ರಾಯಲ್ ಫೆಸ್ಟಿವಲ್ ಹಾಲಿನಲ್ಲಿ ((Royal Festival Hall) ಒಂದು ಕಚೇರಿಯನ್ನು ಇಟ್ಟುಕೊಂಡರೆ, ಅದರ ನಿಶ್ಚಿತ ತಾರೀಖಿನ ಹಲವು ವಾರಗಳ ಮುಂಚಿತವಾಗಿಯೇ ಎಲ್ಲ ಪ್ರವೇಶ ಟಿಕೆಟ್ಟುಗಳೂ ಮಾರಿ ಹೋಗುತ್ತವೆ! ಅಷ್ಟಿದೆ ರವಿಶಂಕರರ ಸಂಗೀತದ ಪ್ರಭಾವ ಇಲ್ಲಿ!........

ನಾವು ಲಂಡನ್ನಿಗೆ ಬಂದಾಗಿನಿಂದ ಇಲ್ಲಿನ ಸುತ್ತಮುತ್ತಲಿನ ಊರುಗಳನ್ನೆಲ್ಲ ಸಂದರ್ಶಿಸಿ ನಮ್ಮ ಭಾರತೀಯ ನೃತ್ಯಗಳ ಅಂದಚೆಂದವನ್ನು ಪ್ರಸಾರ ಮಾಡುತ್ತಿದ್ದೇವೆ. ನಾವೀಗಲೇ ಇಲ್ಲಿ ಎಷ್ಟೊಂದು ಪ್ರಯಾಣ ಕೈಗೊಂಡಿದ್ದೇವೆಂದರೆ ಇಲ್ಲಿನ ಸ್ಥಳೀಯರು ಕೂಡಾ ತಮ್ಮ ದೇಶವನ್ನು ನಾವು ನೋಡಿದಷ್ಟು ನೋಡಿಲ್ಲವಂತೆ! ಎಲ್ಲಿ ಜನರು ನಮ್ಮ ನೃತ್ಯಗಳನ್ನು ನೋಡಿಲ್ಲವೋ ಅಲ್ಲಿ ಹೋಗಿ ಪ್ರದರ್ಶನಗಳನ್ನು ಕೊಡುವುದು ನಮಗೆ ಪ್ರಿಯವಾದ ಕೆಲಸ. ನಮ್ಮ ಮೈಸೂರು ಪ್ರಾಂತ್ಯದಲ್ಲಿ ಕೂಡ ನಮ್ಮ ನೃತ್ಯ ಜೀವನದ ಮೊದಲ ದಿನಗಳಲ್ಲಿ ನಾವು ಇದೇ ರೀತಿಯ ಕಾರ್ಯರಂಗಕ್ಕೆ ಇಳಿದಿದ್ದೆವು. ಆಗ ಅದೊಂದು ನಮ್ಮ ಅಗ್ರಗಾಮಿ ಕಾರ್ಯಸಾಧನೆಯಾಗಿತ್ತು. ಆಗ ನಾವು ಮೈಸೂರು ಪ್ರಾಂತ್ಯದಲ್ಲಿ ಎಲ್ಲೆಲ್ಲೂ ಹೋಗಿ, ಯಾವ ಸಂದರ್ಭವೇ ಆಗಲಿ, ಯಾವ ಕಾರಣವೇ ಇರಲಿ, ಯಾವ ವಿಧದ ಪ್ರೇಕ್ಷಕ ವೃಂದವೇ ಆಗಲಿ, ಒಮ್ಮೊಮ್ಮೆ ತೀರ ಚಿಕ್ಕ ಹಳ್ಳಿಗಳಿಗೂ ಪ್ರಯಾಣ ಮಾಡಿ, ಜಾನುವಾರ ಪ್ರದರ್ಶನಗಳಲ್ಲಿ ಕೂಡ, ನಮ್ಮ ನೃತ್ಯ ಪ್ರದರ್ಶನಗಳನ್ನು ಕೊಟ್ಟು ಧರ್ಮ ಪ್ರಚಾರಕರ ಹುರುಪು ಹುಮ್ಮಸ್ಸಿನಿಂದ (Missionary Zeal) ಎಂಬಂತೆ ನಮ್ಮ ತನುಮನ ಧನಗಳನ್ನು ಕಲೆಗಾಗಿ ನೀಡಿದ ನೆನಪು ಈಗ ಆಗುತ್ತಿದೆ. ಏಕೆಂದರೆ ಅದೇ ರೀತಿಯ ಕೆಲಸವನ್ನು ನಾವಿಲ್ಲಿ ಈಗ ಪಾಶ್ಚಾತ್ಯರಿಗಾಗಿ ಮಾಡುತ್ತಿದ್ದೇವೆ! ಊರೂರು ಪ್ರಯಾಣ ಮಾಡಿ, ಭಾರತೀಯ ನೃತ್ಯಕಲೆಗೆ ಅವರ ಮನಸ್ಸನ್ನು ತಿರುಗಿಸಿ, ಅವರಲ್ಲಿ ಸೌಂದರ್ಯೋಪಾಸನೆಯ ಆತುರವನ್ನು ಕೆದರಿ, ನೃತ್ಯ ಜಗತ್ತಿನ ಅಪಾರ ವೈಭವಯುಕ್ತ ಸಾಂಪ್ರದಾಯಿಕ ವಿಷಯಗಳನ್ನು ಅವರಿಗೆ ಮುಂದಟ್ಟು ಮಾಡಿ, ಪುನಃ ಪ್ರಯಾಣ ಮಾಡಿ, ಕುಣಿದು, ಮತ್ತೆ ಪ್ರಯಾಣ ಮಾಡಿ, ಕಲೆಯನ್ನು ಕುರಿತು ಮಾತನಾಡಿ ಪುನಃ ಕುಣಿದು, ಈ ರೀತಿಯಲ್ಲಿ ಕಾಲವನ್ನು ಉಪಯುಕ್ತವಾಗಿ ಕಳೆಯುವುದರಲ್ಲಿ ನಮಗೆ ಸ್ಫೂರ್ತಿಯಿದೆ. ನಮ್ಮ ಜೀವನದ ಧ್ಯೇಯಗಳನ್ನು ಸಫಲವಾಗಿ ಸಾಧಿಸುತ್ತಿದ್ದೇವೆ ಎಂಬ ತೃಪ್ತಿಯಿದೆ. ಕೆಲಸದಲ್ಲಿ ಅನಾನುಕೂಲತೆಗಳಿದ್ದರೂ ಅವು ಹೆಚ್ಚಾಗಿ ಗಮನಕ್ಕೆ ಬರುವುದಿಲ್ಲ. ನಿಜವಾಗಿ ಈ ಕೆಲಸದಿಂದ ನಮಗೆ ಸಿಗುವ ಆನಂದ ವರ್ಣಿಸಲಾಗದು. ಒಮ್ಮೆ ನಮ್ಮ ಆಪ್ತ ಶಿಷ್ಯರೊಬ್ಬರು ನಮ್ಮನ್ನು ಕುರಿತು ಹೇಳಿದ ವಿಚಾರಶೀಲ ಮಾತು

ಗಳು ಈ ಸಮಯದಲ್ಲಿ ನೆನಪಿಗೆ ಬರುತ್ತದೆ. "ನಿಮ್ಮ ನೃತ್ಯ ಪ್ರದರ್ಶನಗಳಿಂದ ನೀವು ಕಲಾರಂಗದ ಸಹೃದಯರಲ್ಲಿ ತುಂಬಾ ಕಲಾಸಕ್ತಿಯನ್ನು ಉಂಟು ಮಾಡುತ್ತಿದ್ದೀರಿ, ನಿಜ. ಆದರೆ ನಿಮಗೆ ಇದರಿಂದ ಏನು ಪ್ರಯೋಜನ? ನಿಮಗೆ ಸಲ್ಲತಕ್ಕ ಸಹಾಯವೂ ನಿಮಗೆ ಸಿಗುವುದಿಲ್ಲ. ನೀವು ಭೂಮಿಯನ್ನು ಅಗೆದು ಬೀಜವನ್ನು ನೆಟ್ಟು ಗಿಡವನ್ನು ಬೆಳೆಸುವುದರಲ್ಲಿ ನಿಮ್ಮ ಕಾಯವನ್ನು ಸವೆಯಿಸುತ್ತೀರಿ. ಆದರೆ ಹೂವು ಬಿಟ್ಟು ಹಣ್ಣು ಬರುವ ವೇಳೆಗೆ ಅದನ್ನು ಭುಜಿಸುವುದು ನೀವಲ್ಲ, ಇತರರು! ನೀವು ಭಾರತದಲ್ಲಿದ್ದರೂ, ಇಂಗ್ಲೆಂಡಿನಲ್ಲಿದ್ದರೂ ಅಥವಾ ಬೇರೆ ಎಲ್ಲಿದ್ದರೂ ನಿಮ್ಮ ಹಣೆಯ ಬರಹವು ಒಂದೇ---ಕಷ್ಟ ಜೀವನ, ನಿಸ್ವಾರ್ಥ ಶ್ರಮ. ಮರ, ನದಿ, ಸನ್ಯಾಸಿ, ಕಲಾವಿದ—ಇವರೆಲ್ಲ ತಮ್ಮ ಜೀವನವನ್ನು ಅನ್ಯರ ಹಿತಕ್ಕಾಗಿ ಮುಡುಪಾಗಿ ಇಟ್ಟುಕೊಂಡವರಲ್ಲವೇ?........" ಎಂದು ಹೇಳಿದ ಮಾತುಗಳು ಎಷ್ಟು ಅರ್ಥಗರ್ಭಿತ, ಎಷ್ಟು ಸತ್ಯದ ಮಾತುಗಳು!....

ಇತಿ ನಿಮ್ಮ
ಅಮ್ಮ.

* * * *

ಲಂಡನ್
23-3-1966

ಮುದ್ದು ಮಕ್ಕಳೇ,

—ಇತ್ತೀಚೆಗೆ ನಮಗೆ ತುಂಬಾ ಕೆಲಸ. ಕಾಗದ ಬರೆಯಲು ತಡವಾದರೆ ಕ್ಷಮಿಸಿ. ಆಗಾಗ್ಗೆ ಲಂಡನ್ ಬಿಟ್ಟು ಪ್ರಯಾಣ ಮಾಡುವುದರಿಂದ ಬಿಡುವೇ ಇಲ್ಲ. ಇಲ್ಲಿನ ಪ್ರಯಾಣದಲ್ಲಿ ಸುಖ ಸೌಲಭ್ಯಗಳಿದ್ದರೂ ಒಂದು ಸಂಗತಿಯು ಮಟ್ಟಿಗೆ ಅದು ವಿಚಿತ್ರವಾಗಿದೆ. ಇಲ್ಲಿ ಪೋರ್ಟರುಗಳೂ ಕೂಲಿಗಳೂ ಇಲ್ಲದ ಕಾರಣ ಪ್ರಯಾಣಿಕರು ತಮ್ಮ ತಮ್ಮ ಸಾಮಾನುಗಳನ್ನು ತಾವೇ ಹೊತ್ತುಕೊಂಡು ಹೋಗಬೇಕಾಗಿದೆ. ಅತಿ ಕಮ್ಮಿಯಾದ ಕೆಲವೇ ಅಗತ್ಯವಾದ ಸಾಮಾನುಗಳನ್ನು ತೆಗೆದುಕೊಂಡು ಪ್ರಯಾಣ ಮಾಡುತ್ತಾರೆ. ಅವು ತುಂಬಾ ಭಾರವಾಗಿದ್ದರೆ ತಮ್ಮ ಪೆಟ್ಟಿಗೆಗಳಿಗೆ ಚಿಕ್ಕ ಚಿಕ್ಕ ಗಾಲಿಗಳನ್ನು ಸಿಕ್ಕಿಸಿಕೊಂಡು ಅವನ್ನು ಉರುಳಿಸಿಕೊಂಡು ಮುಂದಕ್ಕೆ ಸಾಗಿಸುತ್ತಾರೆ. ಮುಖ್ಯವಾಗಿ ಹೆಂಗಸರು ಮತ್ತು ಮುದುಕರು ಈ ರೀತಿ ಮಾಡುತ್ತಾರೆ.

ಇಲ್ಲಿ ಕಾಯಕಕ್ಕೆ ತುಂಬಾ ಗೌರವವಿದೆ. (Dignity of Labour) ಸಣ್ಣ ಪುಟ್ಟ ಕೂಲಿ ಕೆಲಸಗಳನ್ನಾರೂ ಗೌರವಕ್ಕೆ ಕಡಿಮೆಯೆಂದು ತಿಳಿಯದೆ ಮಾಡುವುದು

ಇಲ್ಲಿನ ಪದ್ಧತಿ. ಮನೆಗಳಲ್ಲಿ ಬಚ್ಚಲು ಮನೆ, ಕಕ್ಕಸುಗಳನ್ನು ತೊಳೆಯುವ ಕೆಲಸವನ್ನು ಕೂಡ ನಾಚಿಕೆ ಅಥವಾ ಅಸಹ್ಯಪಡದೆ ಮನೆಯವರೇ ತಮ್ಮ ಕರ್ತವ್ಯವೆಂದು ಮಾಡುತ್ತಾರೆ. ಇತರರು ಈ ಕೆಲಸ ಮಾಡುವುದಿದ್ದರೆ ಅದು ಹಣ ಸಂಪಾದನೆಗೆ ಒಳ್ಳೇ ದಾರಿ. ನಮ್ಮ ದೇಶದಲ್ಲಿ ಈ ಕೆಲಸವನ್ನು ನಮ್ಮ ನಮ್ಮ ಮನೆಗಳಲ್ಲಿ ಮಾಡಲು ಮಾತ್ರ ಸಾಧ್ಯ. ಇತರರ ಮನೆಗಳಲ್ಲಿ ಎಂದೂ ಮಾಡಲಿಕ್ಕಿಲ್ಲ. ಅದು ಅಗೌರವವಲ್ಲವೇ? ಇಲ್ಲಿ ಅಂತಹ ಕೆಲಸ ಮಾಡಿ ಸಾಕಷ್ಟು ಹಣ ಸಂಪಾದಿಸಿ ಮನೆ ಕಟ್ಟಿಸಿದವರೂ ಇದ್ದಾರೆ! ಈ ಸಾಮಾಜಿಕ ಪದ್ಧತಿಯಿಂದಾಗಿ ಜನರು ಒಂದು ಚಿಕ್ಕ ಕೆಲಸಕ್ಕೂ ಹಣದ ರೂಪದಲ್ಲಿ ಪ್ರತಿಫಲವನ್ನು ಅಪೇಕ್ಷಿಸುತ್ತಾರೆ. ಹೆತ್ತವರು ಹಲವೊಮ್ಮೆ ಮಕ್ಕಳಿಂದ ಮನೆಗೆಲಸ ಮಾಡಿಸಿ ಅವರಿಗೆ ಹಣ ಕೊಡುವ ಪದ್ಧತಿಯೂ ಇದೆ! ಅಂದ ಮೇಲೆ ಮಕ್ಕಳು ತಮ್ಮ ತಮ್ಮ ಮನೆಗಳಲ್ಲಿ ಕೂಡ ಕೆಲಸ ಮಾಡಿದ ಅನಂತರ ಹಣವನ್ನು ಅಪೇಕ್ಷಿಸುವುದು ವಿಚಿತ್ರವಲ್ಲವೇ? ಹಣ ಕೊಡದಿದ್ದರೆ ಕೆಲಸಗಳೆಲ್ಲ ಬಾಕಿ! ಇಲ್ಲಿ ಉಚಿತ ಶ್ರಮವೆಂಬ ಮಾತೇ ಇಲ್ಲ! ನಮ್ಮ ದೇಶದಲ್ಲಿ ಏನೂ ಸಂಪಾದಿಸಲು ಯೋಗ್ಯತೆ ಇಲ್ಲದವರು ಕೂಡ ಈ ದೇಶಕ್ಕೆ ಬಂದು ಗೈಮೆಯಿಂದ ಹಣ ಗಳಿಸುತ್ತಾರೆ. ನಮ್ಮ ದೇಶದಲ್ಲಿನ ಅಪಾರ ಜನ ಸಂಖ್ಯೆಯಿಂದಾಗಿ ಹಣ ಸಂಪಾದಿಸುವುದು ಬಹುಕಷ್ಟ. ವಿದ್ಯಾಭ್ಯಾಸ, ಯಾಂತ್ರಿಕ ತರಬೇತು ಪಡೆದವರಿಗೆ ಅವರ ಯೋಗ್ಯತೆಗೆ ಸರಿಯಾಗಿ ಉದ್ಯೋಗ ದೊರಕಿ ಬೇರೆ ಬೇರೆ ವಿಧದ ಸಾಮಾಜಿಕ ಅಂತಸ್ತು ಉಂಟಾಗುತ್ತದೆ. ಶಿಕ್ಷಣವಿಲ್ಲದ ಜನ ಬರೇ ಕೂಲಿ ಕೆಲಸ ಮಾಡಿ ದಿನಕ್ಕೆ ಒಂದೂಟವನ್ನು ಮಾತ್ರ ಮಾಡಿ ಬದುಕಿರುತ್ತಾರೆ. ಆದರೆ ಇಲ್ಲಿ ಅನೇಕ ಭಾರತೀಯರು ಅದೇ ಕೂಲಿ ಕೆಲಸ ಮಾಡಿ ಶ್ರೀಮಂತರಾಗುತ್ತಾರೆ. ಕೆಲವರು ಒಳ್ಳೆಯ ವಿದ್ಯಾರ್ಜನೆ ಮಾಡಿಕೊಂಡು ಇಂಜಿನಿಯರುಗಳೂ ಡಾಕ್ಟರುಗಳೂ ಆಗಿ ಕೈತುಂಬಾ ಹಣವನ್ನೂ ಕೀರ್ತಿಯನ್ನೂ ಪಡೆಯುತ್ತಾರೆ. ಇವರು ನಮ್ಮ ದೇಶಕ್ಕೆ ಹಿಂದಿರುಗಿ ಹೋಗಿದ್ದರೆ ಎಷ್ಟು ಒಳಿತಾಗುತ್ತಿತ್ತು! ಆದರೆ ಇವರಿಗಿಲ್ಲಿ ಸಿಗುವ ಪ್ರತಿಫಲ ಅನುಕೂಲತೆಗಳು ಅಲ್ಲೆಲ್ಲಿ ಸಾಧ್ಯ? ಆದುದರಿಂದ ಅವರು ತಮ್ಮ ಜೀವಮಾನವೆಲ್ಲ ಇಲ್ಲೇ ಕಳೆಯಲು ಇಚ್ಛಿಸುತ್ತಾರೆ.

ಇಲ್ಲಿ ಯಾವ ಮನುಷ್ಯನೂ ಸಂಕೋಚವಿಲ್ಲದೆ ಜೀವಿಸಬಹುದು. ಅಂಗವಿಕಲರಿಗೂ ಜೀವನದಲ್ಲಿ ಒಂದು ಅಂತಸ್ತಿದೆ. ಲಂಡನ್ನಿನಲ್ಲಿ ಅಂಗವಿಕಲರು ನಡೆಸುವ ಮೋಟಾರು ಗಾಡಿಗಳು ಬೇರೆಯೇ ಇವೆ. ಅವರ ಅಂಗ ಹೀನತೆಗೆ ಸರಿಯಾಗಿ ಈ ಗಾಡಿಗಳನ್ನು ನಿರ್ಮಿಸಿರುತ್ತಾರೆ! ದೈಹಿಕ ನ್ಯೂನತೆಗಳಿಂದ ಕೂಡಿದ ಈ ಜನರು ಕೂಡ ಸ್ವತಂತ್ರರಾಗಿ ನಾಚಿಕೆ ಪಡದೆ ಇತರ ಸಾಮಾನ್ಯ ಜನರಂತೆಯೇ ಜೀವನವನ್ನು ನಡೆಸುವುದು ನಮಗೆ ತುಂಬಾ ಆಶ್ಚರ್ಯದ ಸಂಗತಿ. ಕೆಲವೊಮ್ಮೆ ಅವರ ಜೀವನ ತುಂಬಾ ಮಹತ್ತಿನ ಜೀವನವಾಗಿಯೂ ಇರುತ್ತದೆ. ಕುರುಡರು ಕೂಡ ವಿಶಿಷ್ಟ ತರ

ಬೇತು ಪಡೆದ ನಾಯಿಗಳ ಸಹಾಯದಿಂದ ಇತರ ಎಲ್ಲಾ ಜನರಂತೆ ರಸ್ತೆಯ ಪಕ್ಕ ದಾರಿಯ ನೂಕು ನುಗ್ಗಲಿನಲ್ಲಿ ಚಲಿಸಬಲ್ಲರು. ಕುರುಡನ ನಾಯಿ ಪಾದಚಾರಿಗಳು ರಸ್ತೆ ದಾಟುವ ಗುರುತಿನವರೆಗೆ ಕರೆದೊಯ್ಯುತ್ತದೆ. ಅಲ್ಲಿಂದ ಯಾರಾದರೊಬ್ಬ ಪುಣ್ಯಾತ್ಮ ಅವನನ್ನು ನಾಯಿಯೊಂದಿಗೆ ರಸ್ತೆ ದಾಟಿಸುತ್ತಾನೆ. ಅಲ್ಲಿಂದ ಮತ್ತೊಮ್ಮೆ ಅದೇ ನಾಯಿ ತನ್ನ ಕುರುಡ ಯಜಮಾನನನ್ನು ಭೂಗರ್ಭದೊಳಗಿನ ರೈಲುಗಾಡಿ ನಿಲ್ದಾಣಕ್ಕೂ ಚಲಿಸುವ ಮಹಡಿ ಮೆಟ್ಟಿಲುಗಳಿಗೂ (Escalators) ಕರೆದೊಯ್ಯುತ್ತದೆ. ರೈಲು ಗಾಡಿಗಳಲ್ಲಿ ಕುರುಡರು ಬ್ರೈಯಿಲ್ ಪದ್ಧತಿ ಪ್ರಕಾರ (Braille System) ಅಚ್ಚು ಹಾಕಿದ ವಾರ್ತಾ ಪತ್ರಿಕೆಯನ್ನು ಓದುತ್ತಿದ್ದಂತೆ ಅವನ ನಾಯಿ ಎಚ್ಚರಿಕೆಯಿಂದಿದ್ದು ಅವನು ಸೇರಬೇಕಾದ ನಿಲ್ದಾಣ ಬಂದೊಡನೆ ಎದ್ದು ತನ್ನ ಯಜಮಾನನನ್ನು ಗಾಡಿಯ ಹೊರಗೆ ಬರುವಂತೆ ಮಾಡಿ, ದಾರಿ ತೋರಿಸಿ, ಕರೆದೊಯ್ಯುತ್ತದೆ! ಎಂತಹ ವಿಚಿತ್ರ ದೃಶ್ಯ! ಇಂತಹ ಒಂಟಿ ಜೀವನದ ಕುರುಡ ಕುಂಟರು ಕೂಡ ಸ್ವಾವಲಂಬನದ ಜೀವನದಲ್ಲಿ ಧೈರ್ಯಗೆಡದೆ ಇರುವುದನ್ನು ಕಂಡರೆ ಅದೆಷ್ಟು ಸಂತೋಷವೂ ಆಶ್ಚರ್ಯವೂ ಆಗುತ್ತದೆ!

ಇಲ್ಲಿ ವೃದ್ಧರಿಗಾಗಿ ಕಟ್ಟಿಸಿರುವ ನೂರಾರು ಸಂಸ್ಥೆಗಳೂ ವಾಸಗೃಹಗಳೂ ಇವೆ. ಸರಕಾರವು ಅವರ ಕ್ಷೇಮವನ್ನು ನೋಡಿಕೊಳ್ಳುವಂತೆ ಚಿಕ್ಕಮಕ್ಕಳ ಆಹಾರ, ವಿಹಾರ ವಿದ್ಯಾರ್ಜನೆಗೂ ತುಂಬಾ ನೆರವು ನೀಡುತ್ತದೆ. ಗರ್ಭಿಣಿಯರಿಗೂ ಬಾಣಂತಿಯರಿಗೂ ಸರಕಾರ ಉಚಿತವಾಗಿ ಚಿಕಿತ್ಸೆ ಕೊಡುತ್ತದೆ. ಆದರೂ ಮಕ್ಕಳೆಂದರೆ ಇಲ್ಲಿ ಭೋಗಪರಾಯಣದ, ವೈಭವದ ವಸ್ತುಗಳು (Things of Luxury) . ಮಕ್ಕಳನ್ನು ಪಡೆಯುವುದಕ್ಕಿಂತ ಹೆಚ್ಚಾಗಿ ಬೆಕ್ಕು, ನಾಯಿಗಳನ್ನು ಸಾಕಿ, ತಮ್ಮ ಒಂಟಿ ಜೀವನವನ್ನು ತುಂಬಿಸಿಕೊಳ್ಳುತ್ತಾರೆ. ಈ ರೀತಿ ಸಾಕಿದ ನಾಯಿ, ಬೆಕ್ಕುಗಳು ಒಮ್ಮೊಮ್ಮೆ ತಮ್ಮನ್ನು ಸಾಕಿ ಸಲಹಿದವರ ಮರಣಾನಂತರ ಅವರ ಅಪಾರ ಆಸ್ತಿ ಸಂಪತ್ತಿಗೆ ಹಕ್ಕುದಾರಿಗಳಾಗಿ ಇದ್ದುದೂ ಉಂಟು! ಇದನ್ನು ಕುರಿತು ಈ ವಿಚಿತ್ರ ಜನರು ಒಂದು ಮಾತು ಹೇಳುವುದುಂಟು: ಮಕ್ಕಳು ಬೆಳೆದಂತೆ ನಮ್ಮ ಕೈಯ್ಯಿಂದ ಪಾರಾಗುತ್ತಾರೆ. ನಾಯಿ, ಬೆಕ್ಕುಗಳು ಹಾಗಲ್ಲ. ಅವು ಬೆಳೆಯುವುದೂ ಇಲ್ಲ. ಅಲ್ಲದೆ ಯಾವಾಗಲೂ ಮುದ್ದಾಗಿ ನಮ್ಮೊಡನೆಯೇ ಇರುತ್ತವೆ."

ಮಕ್ಕಳಿಗೆ ಅವರ ವಯಸ್ಸಿಗೆ ತಕ್ಕಂತೆ ತಯಾರಿಸಿ ಸಜ್ಜುಗೊಳಿಸಿದ ಹಿತಕರ, ಪುಷ್ಟಿಕರ, ಸಮಸತ್ವವುಳ್ಳ (Balanced Diet) ಆಹಾರ ಅಂಗಡಿಗಳಲ್ಲಿ ಯಾವಾಗಲೂ ದೊರಕುತ್ತದೆ. ಮಕ್ಕಳ ಆಹಾರದ ವಿಷಯ ಹೆತ್ತವರು ವಿಶೇಷ ಯೋಚನೆ ಪಡಬೇಕಾದ್ದಿಲ್ಲ. ಅವರವರ ಬೆಳವಣಿಗೆಗೆ ಸರಿಯಾಗಿ ತಯಾರಾಗಿರುವ ಆಹಾರದ ಡಬ್ಬಿಗಳನ್ನು ಕೊಂಡು ತಿನ್ನಿಸಿದರೆ ಸಾಕು! ಅದೇ ರೀತಿ ಆಹಾರ ಶಾಸ್ತ್ರಜ್ಞರು

ನಾಯಿ, ಬೆಕ್ಕು, ಕುರಿ, ದನ, ಕುದುರೆಗಳಿಗೂ ಬೇಕಾಗುವ ವಿಶಿಷ್ಟ ಆಹಾರವನ್ನು ಶೋಧಿಸಿ ಅದನ್ನು ತಯಾರಿಸಿರುತ್ತಾರೆ. ಮನುಷ್ಯನು ತಿಂದು ಉಳಿದ ಅಥವಾ ತಟ್ಟೆಯ ಮೇಲೆ ಬಿಟ್ಟ ಎಂಜಲು ಆಹಾರವನ್ನು ಇಲ್ಲಿ ಪ್ರಾಣಿಗಳಿಗೆ ಎಂದೂ ತಿನ್ನಿಸುವುದಿಲ್ಲ! ದಾರಿಯಲ್ಲಿ ಪ್ರಯಾಣ ಮಾಡುತ್ತಿರುವಾಗ "ಪ್ರಾಣಿಗಳಿಗೆ ಅಭ್ಯಾಗತರು ಆಹಾರ ಕೊಡುವುದನ್ನು ನಿರೋಧಿಸಲಾಗಿದೆ!" ಎಂದು ಸಾರುವ ಸೂಚಿ ಹಲಗೆಗಳನ್ನು ನಾವು ಅಲ್ಲಲ್ಲಿ ಕಾಣುತ್ತೇವೆ. ಆ ಪ್ರಾಣಿಗಳು ಸಿಕ್ಕಾಪಟ್ಟೆ ಆಹಾರ ತಿಂದರೆ ಅವುಗಳಿಂದ ಸಾಕಷ್ಟು ಲಾಭ ಸಿಗಲಿಕ್ಕಿಲ್ಲವೆಂದು ಅವನ್ನು ಸಾಕಿದವರಿಗೆ ಹೆದರಿಕೆ ಇದ್ದೇ ಇರುತ್ತದೆ. ಗೋಮಾಂಸಕ್ಕಾಗಿ ಸಾಕುವ ದನಗಳಿಗೂ ಹಾಲಿಗಾಗಿ ಸಾಕುವ ದನಗಳಿಗೂ ಆಹಾರದಲ್ಲಿ ತುಂಬಾ ವ್ಯತ್ಯಾಸವಿರುತ್ತದೆ. ಹಾಗೆಯೇ ಜೂಜಿನ ಕುದುರೆಗಳ ಆಹಾರ, ಗದ್ದೆಗಳಲ್ಲಿ ಶ್ರಮಿಸುವ ಕುದುರೆಗಳ ಆಹಾರಕ್ಕಿಂತ ಬೇರೆಯಾಗಿದೆ. ಇದೇ ರೀತಿ ಉಣ್ಣೆ ಕೊಡುವ ಕುರಿಗಳಲ್ಲೂ ಬರೇ ಮಾಂಸಕ್ಕಾಗಿ ಸಾಕುವ ಕುರಿಗಳಲ್ಲೂ ಆಹಾರದ ಪ್ರಭೇದ ತುಂಬಾ ಇರುತ್ತದೆ; ಹಾಗೆಯೇ ಬೇರೆ ಬೇರೆ ಜಾತಿಯ ನಾಯಿ, ಬೆಕ್ಕು, ಕೋಳಿ ಮುಂತಾದುವುಗಳಿಗೆ! ನಿಜವಾಗಿಯೂ ಈ ಪಾಶ್ಚಾತ್ಯ ಸಮಾಜ ವಿಶೇಷ ಯುಕ್ತಾಯುಕ್ತದ ದೌಲತ್ತಿನ ಧನಿಕ ಸಮಾಜವಲ್ಲವೇ ?

ಇತಿ ನಿಮ್ಮ
ಅಮ್ಮ.

*　　*　　*　　*

ಲಂಡನ್
27-3-1966

ಮುದ್ದು ಮಕ್ಕಳೇ,

ಮೊನ್ನೆ ಕೇಂಬ್ರಿಡ್ಜಿನಲ್ಲಿ ಅಧ್ಯಾಪಿಕೆಯರ ತರಬೇತಿ ಕಾಲೇಜಿನ (Womens Teachers' Training College) ಬ್ಯಾಲೆ ವಿದ್ಯಾರ್ಥಿಗಳಿಗಾಗಿ A. M. C. ಯವರು ನಮ್ಮದೊಂದು ಉಪನ್ಯಾಸವನ್ನೇರ್ಪಡಿಸಿದ್ದರು. ಆ ವಿದ್ಯಾರ್ಥಿಗಳು ಪಿಯಾನೋ ಸಂಗೀತಕ್ಕೆ 'ಸ್ವತಂತ್ರ ನೃತ್ಯ' ಮಾಡುತ್ತಿದ್ದರು. ಅದೇ ಪಿಯಾನೋ ಸಂಗೀತಕ್ಕೆ ಪತಿಯವರು ಭರತನಾಟ್ಯದ ಆಶು ನೃತ್ಯಮಾಡಿ ನಮ್ಮ ಶಾಸ್ತ್ರೀಯ ನೃತ್ಯ ಕಲೆಯಲ್ಲೂ ಸ್ವಾತಂತ್ರ್ಯತೆ ಸಾಕಷ್ಟಿದೆಯೆಂದು ತಿಳಿಸಿದರು. ಉಪನ್ಯಾಸವಾದ ಮೇಲೆ ಸುಮಾರು 60 ವಿದ್ಯಾರ್ಥಿಗಳು ನಮ್ಮ ಭರತನಾಟ್ಯದ ಆರಂಭದ "ತಟ್ಟು ಅಡವು"ಗಳನ್ನೂ "ನಾಟು ಅಡವು" ಗಳನ್ನೂ ನಮ್ಮ ನಿರ್ದೇಶಕತ್ವದಲ್ಲಿ ಮಾಡಿದ ದೃಶ್ಯ ತುಂಬಾ ಚೆನ್ನಾಗಿತ್ತು. ಅವರ ಕಾಲು ಸಪ್ಪಳದಿಂದಾಗಿ ಕಟ್ಟಡದೊಳಗೆ ಗುಡುಗು ಸೇರಿ

ದಂತಿತ್ತು ! ವಿದ್ಯಾರ್ಥಿಗಳ ಜೊತೆಯಲ್ಲಿ ಅವರ ಕೆಲವು ಉಪಾಧ್ಯಾಯಿನಿಯರೂ ಸೇರಿ ಈ ಅಭ್ಯಾಸ ಮಾಡತೊಡಗಿದರು – ಭರತನಾಟ್ಯದ ಸ್ವಲ್ಪ ಪರಿಚಯವಾಗಲೆಂದು !

ಆ ಕಾಲೇಜು ಬರೇ ಶಿಕ್ಷಣದ ತರಬೇತಿಗೆ ಮಾತ್ರ ಮೀಸಲಾಗಿಲ್ಲ. ನಾನಾತರದ ಆಟಗಳಿಗೂ, ಲಲಿತ ಕಲೆಗಳ ಅಭ್ಯಾಸಕ್ಕೂ ತುಂಬಾ ಪ್ರೋತ್ಸಾಹ ಕೊಡುತ್ತಿದೆ. ಊಟದ ಹೊತ್ತಿಗೆ ವಿದ್ಯಾರ್ಥಿಗಳಿಗೆ ಪುಷ್ಟಿಕರವಾದ, ರುಚಿಯುಳ್ಳ, ಆರೋಗ್ಯಕರ, ಆಹಾರವನ್ನು ಹೊಟ್ಟೆತುಂಬಾ ಕೊಡುತ್ತಾರೆ. ಅವರಿಗೆ ಸ್ವತಂತ್ರವಾಗಿ ಆಟ ವಾಡಲು, ಪಾಠ ಕಲಿಯಲು ಯಾವ ತೊಡಕುಗಳೂ ಇರಬಾರದೆಂದು ಎಲ್ಲ ಅನು ಕೂಲತೆಗಳನ್ನೂ ಒದಗಿಸಿ ಕೊಟ್ಟಿದ್ದಾರೆ. ಕಾಲೇಜಿನ ಸುತ್ತಲೂ ಇರುವ ಹಚ್ಚ ಹಸುರಾದ ಬಯಲು ಮೈದಾನಗಳಲ್ಲಿ ಅವರು ಯಾವ ಆಟವನ್ನು ಬೇಕಾದರೂ ಸ್ವೇಚ್ಛಾಪರವಾಗಿ ಆಡಬಹುದು. ಕೆಲವು ವಿದ್ಯಾರ್ಥಿನಿಯರು ತಮ್ಮ ಉಪಾಧ್ಯಾಯಿ ನಿಯರೊಂದಿಗೆ ಕ್ರಿಕೆಟ್, ಫುಟ್‌ಬಾಲ್ ಆಡುವುದನ್ನೂ ನಾವಂದು ನೋಡಿದೆವು ! ಪುರುಷರು ಆಡುವ ಈ ಆಟಗಳನ್ನು ಹೆಂಗಸರು ಹೀಗೆ ಆಡುವಂತಿದ್ದರೆ ಅವರು ತಮ್ಮ ಸ್ತ್ರೀತ್ವವನ್ನು ಕಳೆದುಕೊಳ್ಳುವುದಿಲ್ಲವೇ ? ಎಂಬ ಭಾವನೆ ಮನಸ್ಸಿಗೆ ಬಂತು. ಹಲ ವೊಮ್ಮೆ ಇಲ್ಲಿಯ ಹುಡುಗಿಯರನ್ನು ಕಂಡರೆ ಅವರು ಗಂಡಸರೇ ಹೆಂಗಸರೇ ಎಂಬ ಸಂಶಯ ಉಂಟಾಗುತ್ತದೆ. ನಮ್ಮ ಭಾರತೀಯ ನೃತ್ಯಗಳನ್ನು ಕಲಿಯುವಾಗಲಂತೂ ನಮ್ಮ ದೇಶದ ಹೆಂಗಸರಿಗೂ ಇವರಿಗೂ ಇರುವ ಭೇದ ಎದ್ದು ಕಾಣುತ್ತದೆ. ಅವರ ದೇಹದಲ್ಲಿ ಸಹಜವಾದ ಲಾಲಿತ್ಯವಿರುವುದಿಲ್ಲ. "ನಮ್ಮ ಕೈಬೆರಳುಗಳನ್ನು ನೋಡಿ! ಅವು ಹೇಗೆ ಬಾಳೆಯ ಗೊನೆಯಂತಿವೆ." ಎಂದೋರ್ವ ಬ್ರಿಟಿಷ್ ಹೆಂಗಸು ಹೇಳಿದುದು ತಪ್ಪಲ್ಲ ಎನಿಸುತ್ತದೆ.

ಅಂತೂ ಇಲ್ಲಿನ ಯುವಕ ಜನಾಂಗವನ್ನು ನೋಡಿದಾಗಲೆಲ್ಲ ಮನಸ್ಸು ಬಹಳ ನೊಂದುಕೊಳ್ಳುತ್ತಿದೆ. ಆಧುನಿಕರೆಂದು ಮೆರೆಯುವ ಇಲ್ಲಿನ ಯೌವನಸ್ಥರು ಬಹು ಮಟ್ಟಿನ ಬೇಜವಾಬ್ದಾರಿಕೆಯಿಂದ ವರ್ತಿಸುತ್ತಿದ್ದಾರೆ. ಅಲ್ಲದೆ ಅನೇಕ ಅಶ್ಲೀಲ, ಹೊಲಸು ಚಾಳಿಗಳಿಗೆ ಮಾರು ಹೋಗಿದ್ದಾರೆ. ನಮ್ಮ ಭಾರತ ದೇಶವು ಖಂಡಿತ ಈ ಪಾಶ್ಚಾತ್ಯ ದೇಶಗಳನ್ನು ಅನುಕರಿಸಬಾರದೆಂದು ನನ್ನ ಆಸೆ. ಏಕೆಂದರೆ ಇಲ್ಲಿನ ಯುವಕ ಜನತೆಯ ಅವ್ಯವಸ್ಥೆ ದಿನಕ್ಕಿಂತ ದಿನ ಅಧೋಗತಿಗೆ ಇಳಿಯುವಂತಿದೆ. ಇವ ರೊಂದಿಗೆ ನಮ್ಮ ಭಾರತೀಯ ಯುವಕ ಯುವತಿಯರನ್ನು ಹೋಲಿಸಿದರೆ ನಮ್ಮವರು ಎಷ್ಟೋ ಚಿತ್ತಸ್ವಸ್ಥರಾಗಿಯೂ, ಶೀಲ ಸ್ವಭಾವವುಳ್ಳವರಾಗಿಯೂ ತಮ್ಮ ತಮ್ಮ ಜವಾ ಬ್ದಾರಿ ಅರಿತುಕೊಂಡು ಕರ್ತವ್ಯನಿಷ್ಠರಾಗಿಯೂ ಬಾಳುತ್ತಿರುವರು. ಭಾರತೀಯ ಹೃದಯದಲ್ಲಿ ವಿವೇಚನೆ ಎಂಬುದಿದೆ. ಈ ವಿವೇಚನೆ ನಮಗೆ ಅಮೂಲ್ಯವಾದುದು. ಇಲ್ಲಿ ಸಮೃದ್ಧಿ ಇದೆ, ಸಂಪತ್ತು ಇವೆ, ನಿಜ, ಆದರೆ ಇದನ್ನೇ 'ನಾಗರೀಕತೆ' ಎಂದು ಕರೆಯಲಾಗದು. ನಮ್ಮ ದೇಶದಲ್ಲಿ ತುಂಬಾ ಬಡತನವಿದೆ ನಿಜ. ಬಡತನವಿದ್ದರೂ

ಒಬ್ಬ ಹೆಣ್ಣು ಮಗಳನ್ನು ನಾವು ಈಗಲೂ 'ಅಮ್ಮಾ' ಎಂದು ಸಂಬೋಧಿಸಿ ಆಕೆಯ ಸ್ತ್ರೀತನಕ್ಕೆ ಮರ್ಯಾದೆ ಕೊಡುತ್ತೇವೆ. ಇದು ನಿಜವಾದ ನಾಗರಿಕತೆಯ ಒಂದು ಕುರುಹು.

ಹಣೆಯ ಮೇಲೆ ಹಾರಾಡುವಷ್ಟು ಕೂದಲನ್ನು ಬೆಳೆಸಿಕೊಂಡು ಮನಸ್ಸಿನಲ್ಲಿ ತೀರಾ ಲೌಕಿಕ ವಿಷಯಗಳನ್ನಲ್ಲದೆ ಇತರ ಯಾವ ಗಹನ ವಿಷಯಗಳನ್ನೂ ವಿಚಾರಿಸದ ಇಲ್ಲಿನ ಯುವಕ ಜನಾಂಗವನ್ನು ಕಾಣುತ್ತಿದ್ದಂತೆ ವಿಚಾರವಾಹಿನಿ ಭರದಿಂದ ಸಾಗುತ್ತಿದೆ. ನಮ್ಮ ಆತ್ಮೀಯ ಪಾಶ್ಚಾತ್ಯ ಶಿಷ್ಯೆಯೊಬ್ಬಳು ನಮ್ಮನ್ನು ಯೂರೋಪಿಗೆ ಸ್ವಾಗತಿಸುವಾಗ ಹೇಳಿದ "ಜೀವನದ ಭಯಂಕರ ಹೆಣಗಾಟದಲ್ಲಿ ಮಾನವೀಯತೆಯನ್ನೇ ಕಳೆದುಕೊಂಡ ಈ ನಾಗರಿಕ ಅರಣ್ಯಕ್ಕೆ ಸುಸ್ವಾಗತ!" ಎಂಬ ಮಾತು ಈ ಸಂದರ್ಭದಲ್ಲಿ ಮತ್ತೂ ಮತ್ತೂ ನೆನಪಿಗೆ ಬರುತ್ತದೆ. ಆದರೆ ಇಲ್ಲಿನ ಯುವಕರನ್ನು ಪೂರ್ಣ ತೆಗಳುವುದು ತಪ್ಪೆಂದು ಕಾಣುತ್ತದೆ. ಅವರು ಈ ರೀತಿ ಮಾರ್ಪಾಟು ಆಗುವುದಕ್ಕೆ ಅನೇಕಾನೇಕ ಕಾರಣಗಳಿವೆ. ಅವರೂ ಜೀವನದಲ್ಲಿ ತುಂಬಾ ಶ್ರಮ ಪಡುತ್ತಿದ್ದಾರೆ. ತಮ್ಮ ಶಕ್ತಿಗೆ ಮೀರಿ ಕೆಲಸ ಮಾಡುತ್ತಿದ್ದಾರೆ. ಆದರೂ ಸಾಧಾರಣ 20 ವರ್ಷಗಳ ಇತ್ತೀಚೆಗೆ ಅವರಲ್ಲಿ ವಿಶೇಷ ಬದಲಾವಣೆಗಳುಂಟಾಗಿ ಅವರು ತಮ್ಮ ಜೀವನದ ಅಮೂಲ್ಯ ಧ್ಯೇಯಗಳೆಲ್ಲವನ್ನೂ ಆಶಯಗಳನ್ನೂ ಕಳೆದುಕೊಂಡಂತಿದೆ. ಎರಡನೆಯ ಮಹಾ ಯುದ್ಧದ ಪರಿಣಾಮವಿರಬಹುದು!....

ಇತಿ ನಿಮ್ಮ
ಅಮ್ಮ.

* * * * *

ಲಂಡನ್
19 – 4 – 1966

ಶಿವದೇವ್,

ಭೇಷ್ ಮಗೂ, ಭೇಷ್ ಶಿವದೇವ್! ಗಣಿತದಲ್ಲಿ ನಿನಗೆ ಸಿಕ್ಕಿದ ಶೇಕಡಾ 100 ಮಾರ್ಕ್‌ಗೆ ಭೇಷ್! ಇಂಜಿನಿಯರಿಂಗ್ ಡಿಗ್ರಿಯ ಪರೀಕ್ಷೆಯ ಗಣಿತದಲ್ಲಿ ನೂರಲ್ಲಿ ನೂರು ಸಿಕ್ಕುವುದೆಂದರೆ ಸುಲಭದ ಮಾತಲ್ಲ. ನೀನು ಮುತುವರ್ಜಿಯಿಂದ ಬರೆದು ಕಳುಹಿಸಿದ ನಿನ್ನ ಮಾರ್ಕುಗಳ ಕಾರ್ಡನ್ನು ನೋಡಿ ಹೃದಯವು ಹೆಮ್ಮೆಯಿಂದ ಬಿರಿಯುವಂತಾಯಿತು. ಅಂದಿನಿಂದ ನೀನು ಪ್ರತಿಕ್ಷಣವೆಂಬಂತೆ ನಮ್ಮ ಮನಸ್ಸಿನಲ್ಲಿ ನೆಲಸಿಕೊಂಡಿದ್ದೀಯೆ. ನಮ್ಮ ಮೇಜಿನ ಮೇಲಿರುವ ಬಣ್ಣದ ನಕ್ಷೆಯಲ್ಲಿನ ನಿನ್ನನ್ನು

ಮುತ್ತಿಕ್ಕಿದೆ. ದೇವರು ನಿನ್ನನ್ನು ಸದಾ ಕಾಪಾಡಿ ನಿನ್ನ ಯೋಗ್ಯತೆಗೆ ಸರಿಯಾದ ಫಲವನ್ನು ಕೊಡಲಿ ! ನಿನಗೆ ಅಧೈರ್ಯವಿದ್ದ ವಿಷಯಗಳಲ್ಲಿ ನೀನು ಒಳ್ಳೆ ಮಾರ್ಕು ಗಳನ್ನು ಗಳಿಸುವುದು ನನಗೆ ಯಾವಾಗಲೂ ಸೋಜಿಗದ ಸಂಗತಿ. ನೀನು S.S.L.C. ಓದುತ್ತಿರುವಾಗ್ಗೆ ಭೂಗೋಳದಲ್ಲಿ ಆಸಕ್ತಿಯಿಲ್ಲದ ನಿನಗೆ ವಿಶೇಷ ಬೋಧನೆ ಕೊಡುವ ಏರ್ಪಾಟು ಮಾಡಬೇಕೆಂದು ನಾವು ನಿಶ್ಚಯಿಸಿದಾಗ, ನೀನು "ಬೇಡ ಅಮ್ಮ, ಅಂತಹ ವಿಶೇಷ ಪಾಠ ಹೇಳಿಕೊಡುವ ವ್ಯವಸ್ಥೆ ಖಂಡಿತ ಬೇಡ. ಹೆದರ ಬೇಡ ಅಮ್ಮ– ಭೂಗೋಳದಲ್ಲಿ ಚೆನ್ನಾಗಿ ಮಾಡುವುದು ನನ್ನ ಜವಾಬ್ದಾರಿ" ಅಂದಿದ್ದೆ. ನಿಜವಾಗಿ ಶೇಕಡ 98 ಮಾರ್ಕನ್ನು ಅದರಲ್ಲಿ ಗಳಿಸಿಬಿಟ್ಟೆ ! ಹೋದವರ್ಷ 'ಹ್ಯಾಡ್ರೋಲಿಕ್ ಮೆಶಿನರಿ' (Hydraulic Machinery) ಪ್ರಶ್ನೆ ಪತ್ರದಲ್ಲಿ ಚೆನ್ನಾಗಿ ಮಾಡಿಲ್ಲ ವೆಂದು ಮನೆಗೆ ಬರುತ್ತಿರುವಾಗಲೇ ಹಸು ಕಣ್ಣೀರಿಡುವಂತೆ ನೀನು ಮೂಕ ವ್ಯಥೆ ಯನ್ನು ತೋರಿಸಿರಲಿಲ್ಲವೇ ? ಆದರೆ ನಿಜವಾಗಿ, ಅದರಲ್ಲೂ ನೀನು ಒಳ್ಳೇ ಮಾರ್ಕು ಗಳನ್ನು ಹೊಡೆದುಬಿಟ್ಟೆ. ದೇವರ ದಯೆಯಿಂದ ಈ ಸಲ ನೀನು ಮನೆಗೆ ಅಳುತ್ತ ಬರುವ ಪ್ರಸಂಗ ಬರಲಿಲ್ಲವೆಂದು ಸಮಾಧಾನವಾಯಿತು. ನಿನ್ನ ಅಣ್ಣನೂ ಒಮ್ಮೆ B. E. ಪರೀಕ್ಷೆಯಲ್ಲಿ 'ಎಲೆಕ್ಟ್ರಿಕಲ್ ಇಂಜಿನಿಯರಿಂಗ್' ಪ್ರಶ್ನಾಪತ್ರವನ್ನು ಮುಗಿಸಿ, ಮನೆಗೆ ಅಳುತ್ತ ಬಂದು, ಮನಸ್ಸಿಗೆ ನೆಮ್ಮದಿ ಇಲ್ಲವೆ ಕಬ್ಬನ್ ಪಾರ್ಕಿಗೆ ಹೋಗಿದ್ದ. ಮನೆಗೆ ಎಷ್ಟು ಹೊತ್ತಾದರೂ ಬಾರದೆ ನಾವಂತೂ ಘಾಬರಿಪಟ್ಟೆವು. ಹೊತ್ತು ಮೀರಿ ರಾತ್ರಿ ಬಂದ. ಸ್ವಲ್ಪ ಸಮಾಧಾನದಿಂದಿದ್ದ. ನಮಗೆ ಹುಸ್ಸಪ್ಪಾ ಆಯಿತು.... ಅಂತೂ ಅಲ್ಲಿನ ಪರೀಕ್ಷೆಗಳ ಸ್ವರೂಪವನ್ನೇ ಬದಲಾಯಿಸಿದರೆ ಎಷ್ಟು ಚೆನ್ನಾಗಿತ್ತು ಅನ್ನಿಸುತ್ತದೆ. ಪಾಶ್ಚಾತ್ಯ ರೀತಿಯಲ್ಲಿ ಪರೀಕ್ಷೆ ಮಾಡುವುದಾದರೆ ಎಷ್ಟು ಅನುಕೂಲ! ನೀವಂತೂ ಇಲ್ಲಿ ಕೌತುಕ ಪಡುವಂತಹ ಶೀಲವನ್ನು ಪಡೆಯುತ್ತಿದ್ದಿರಿ.

ನಿನ್ನ ಮುಂದಿನ ವಿದ್ಯಾಭ್ಯಾಸಕ್ಕೆ ಇಲ್ಲಿ ಬರಲು ನೀನು ಇನ್ನೂ ಚಿಕ್ಕವನು. ಮಗೂ, ಇಲ್ಲಿ ನಿನ್ನ ಪ್ರಾಯದ ಹುಡುಗ–ಹುಡುಗಿಯರು ಇನ್ನೂ ಮೆಟ್ರಿಕ್ಯುಲೇಷನ್ ಮಾಡುವುದರಲ್ಲಿಯೇ ಇದ್ದಾರೆ. ನಿನ್ನ ಕಿರಿ ಪ್ರಾಯದಿಂದ ಇಲ್ಲಿನ ಇಂಜಿನಿಯರಿಂಗ್ ವಿದ್ಯಾಲಯಗಳಲ್ಲಿ ನಿನಗೆ ಪ್ರವೇಶ ಸಿಗಲಾರದು. ಬೆಂಗಳೂರಿನ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್' ನಲ್ಲಿ (Indian Institute of Science) ನಿನ್ನ M. E. ಮುಗಿಸಿ ಆಮೇಲೆ ಇಲ್ಲಿ ಬಂದರೆ ಒಳಿತು. ಅದೃಷ್ಟವಂತನಾದರೆ ನಿನಗೆ ಒಳ್ಳೆಯ ವಿದ್ಯಾರ್ಥಿವೇತನವೂ ಸಿಕ್ಕಬಹುದು. ಯಾವುದಕ್ಕೂ ಯೋಗ್ಯತೆಯ ಜತೆ ಯಲ್ಲಿ ಅದೃಷ್ಟವೂ ಇರಬೇಕು, ಮಗೂ. ಜೀವನದಲ್ಲಿ ಅದೃಷ್ಟವಿಲ್ಲದಿದ್ದರೆ ಎಂತಹ ಯೋಗ್ಯತೆಯೂ ಎಲೆಗಳಿಂದ ಮರೆಯಿಸಿಕೊಂಡ ಹಣ್ಣಿನಂತಾಗುತ್ತದೆ. ಆದರೂ, ತಾನು ಮಾಡುವ ಕೆಲಸದಲ್ಲಿ ತೃಪ್ತಿ ಪಡೆದರೆ ಅದೇ ಜೀವನದಲ್ಲಿನ ಉತ್ತಮ ಅನುಭವ, ಅದೇ ಸುಖ.

ಕಡೆಯದಾದ ನಿನ್ನ 'ಎಲೆಕ್ಟ್ರಾನಿಕ್ಸ್' (Electronics) ಪೇಪರಿನಲ್ಲೂ ನೀನು ಚೆನ್ನಾಗಿ ಮಾಡುವೆ ಮಗೂ, ಅದು ನಿನ್ನ ಪ್ರಿಯವಾದ ವಿಷಯವಲ್ಲವೇ? ಹೆದರಬೇಡ. ಆದಾದ ಮೇಲೆ ನೀನು ಈ B. E. ಪರೀಕ್ಷೆಯ ದವಡೆಯಿಂದ ಪಾರಾಗುವೆ. ಆಮೇಲೆ ನೀನು ಹಕ್ಕಿಯಂತೆ ಸ್ವತಂತ್ರವಾಗಿ ಹಾರಾಡಬಹುದು. ನಿನ್ನಣ್ಣನು ಸದ್ಯದಲ್ಲೇ ನಿನ್ನ ಜತೆಯಲ್ಲಿರುವನು. ಅವನಿಲ್ಲಿ ಒಳ್ಳೆಯ ಹೆಸರನ್ನು ಗಳಿಸಿದ್ದಾನೆ. ಚಿಕ್ಕ ವಯಸ್ಸಾದರೂ ಒಳ್ಳೆಯ ಮರ್ಯಾದೆ ಗೌರವಗಳನ್ನು ಗಳಿಸಿದ್ದಾನೆ. ತನ್ನ ಆಫೀಸಿಗೆ ಕೀರ್ತಿ ತಂದಿದ್ದಾನೆ. ಅವನನ್ನು ಭೇಟಿ ಮಾಡಿ ಅವನ ಜೊತೆಗೆ ಕೆಲಸ ಕಾರ್ಯಗಳಲ್ಲಿ ವರ್ತಿಸಿದ ವಯಸ್ಸಾದವರೂ. ಚಿಕ್ಕವಯಸ್ಸಿನ ಜಯದೇವನ ಯೋಗ್ಯತೆಯನ್ನು ಮೆಚ್ಚಿದ್ದಾರೆ. ಬೆಂಗಳೂರಿನ ಗ್ರೀವ್ಸ್ ಕಾಟನ್ ಆಫೀಸಿನಿಂದ ಹಿರಿಯ ಆಫೀಸರರು ಬರುವವರಿದ್ದಾರೆ ಎಂಬ ವರ್ತಮಾನಕ್ಕೆ ಇಲ್ಲಿನ ವಯಸ್ಸಾದ ಆಫೀಸರರು ದೊಡ್ಡ ದೊಡ್ಡ ಕಾರುಗಳಲ್ಲಿ ಬಂದು ಭೇಟಿಯಾದಾಗ ಜಯದೇವ ವಾಮನನ ಅವತಾರ! ಆದರೆ ಒಮ್ಮೆ ಅವನೊಡನೆ ಮಾತನಾಡಲು ಆರಂಭಿಸಿದರೆ ತ್ರಿವಿಕ್ರಮ ರೂಪ! ಅಂತೂ ಜಯದೇವನು ಈ ನಾಲ್ಕೈದು ತಿಂಗಳ ವಿದೇಶ ಪ್ರಯಾಣ ಸಾರ್ಥಕ ಮಾಡಿದ.

........ನಮ್ಮ ಆರ್ಥಿಕ ಕಷ್ಟಗಳನ್ನು ಅರಿತು "ನನಗೆ ಏನೂ ಬೇಕಿಲ್ಲ.... ಏನನ್ನೂ ಕಳುಹಿಸಬೇಡಿ. ತೊಂದರೆ ಬೇಡ" ಎಂದು ನೀನು ಬರೆದುದು ಮುದ್ದಾದ ಮಾತು ಮಗೂ, ಈ ವಿವೇಚನೆ ನಮಗೆ ತಿಳಿದವರ ಪೈಕಿ ಇತರರಿಗೆ ಇದ್ದರೆ ಎಷ್ಟು ಒಳಿತಾಗಿತ್ತು! ನಮಗೆ ಸಾಧ್ಯವಿದ್ದರೆ ಹಡಗು ತುಂಬಾ ನಿನಗೆ ಬೇಕಾದ ವಸ್ತುಗಳನ್ನು ಕಳುಹಿಸಬಹುದಾಗಿತ್ತು ಎಂದು ಮನಸ್ಸು ಹೇಳುತ್ತದೆ. ಆದರೆ – ಹಡಗು ತುಂಬಾ ಪ್ರೇಮವನ್ನು ಮಾತ್ರ ಕಳುಹಿಸಬಲ್ಲೆವು!

ಇತಿ ನಿನ್ನ
ಅಮ್ಮ.

* * * * *

ಮುದ್ದು ಮಕ್ಕಳೇ,

ಬ್ಯಾಲೆ ನೃತ್ಯ ಕಲೆಯಲ್ಲಿ ಸಂಕುಚಿತ ಪ್ರದರ್ಶನಾ ಶಕ್ತಿಯಿದೆ ಎಂದು ತಿಳಿದು 'ನ್ಯೂ ಮಾರ್ಕೆಟ್ ಬ್ಯಾಲೆ ಕ್ಲಬ್ಬಿನವರು (New Market Ballet Club) ತಮ್ಮ ಸಾಮಾನ್ಯ ಕಾರ್ಯಕ್ರಮಗಳನ್ನು ಬದಿಗಿಟ್ಟು ನಮ್ಮ ಭಾರತೀಯ ನೃತ್ಯೋಪನ್ಯಾಸವನ್ನು ಏರ್ಪಡಿಸಿದರು. ನಮ್ಮ ಕಲೆಯ ಅಸಾಮಾನ್ಯವಾದ ಭವ್ಯತೆಯನ್ನು ನೋಡಿ

ಪ್ರೇಕ್ಷಕರು ಮೈಮರೆಯುವಂತಾದರು. ಈ ಕಲೆ ನಿಜವಾಗಿಯೂ ಯುವಕ – ಯುವತಿಯರೂ, ಗಂಡಸರೂ, ಹೆಂಗಸರೂ ಮೆಚ್ಚುವಂತಹ ಕಲೆ' ಯೆಂದು ಮನ ಗಂಡರು. ನಮ್ಮ ಕಲೆಯ ಅಭಿನಯದ ಹಿರಿತನ ಯೋಚಿಸುತ್ತ ಆಶ್ಚರ್ಯಚಕಿತ ರಾದರು. ಹವೆಯು ಆ ದಿನ ತುಂಬಾ ಕೆಟ್ಟದಿದ್ದರೂ ರಂಗಮಂದಿರ ಪ್ರೇಕ್ಷಕರಿಂದ ತುಂಬಿ ಹೋಗಿತ್ತು. ಕೆಲವು ಮೈಲಿ ದೂರವಿರುವ ಕೇಂಬ್ರಿಡ್ಜಿನಿಂದಲೂ ಜನರು ಆಗಮಿಸಿದ್ದರು.

ಹವೆಗೆ ಇಲ್ಲಿನ ಜನರು ಸಾಧಾರಣವಾಗಿ ಹೆದರುವುದಿಲ್ಲ. ಅಂದೂ ಎಂದಿನಂತೆ, ಮಳೆ, ತುಂತುರುಹನಿ, ಮೋಡ, ಮಂಜು, ತೇವವಿತ್ತು. ತುಂಬಾ ನಿಷ್ಠುರ, ನಿರ್ದಯ ಹವೆ. ಈ ಏಪ್ರಿಲ್ ತಿಂಗಳು ಬಂದೊಡನೆ ತಂದೆಯವರು ಆಂಗ್ಲಕವಿಯ ಒಂದು ವಾಕ್ಯವನ್ನು ನಮಗೆ ಜ್ಞಾಪಿಸಿದ್ದರು: "Oh to be in England, Now that April is there!" ಯಾವ ಪುಣ್ಯಾತ್ಮ ಕವಿಯು ಆ ಕವಿತೆಯನ್ನು ಬರೆ ದನೋ ಅವನ ಕಾಲಕ್ಕೆ ಇಂಗ್ಲೆಂಡಿನ ಹವೆ ಹಾಗಿದ್ದಿರಬಹುದು. ನಮ್ಮ ಕಾಲಕ್ಕೆ ಈಗ ಹೀಗಿದೆ. ಅಂತೂ ಇಲ್ಲಿ ಹವೆ ಘಳಿಗೆ ಘಳಿಗೆಗೆ ಬದಲಾಯಿಸುತ್ತಿರುವುದು, ಋತುಗಳು ಬದಲಾಯಿಸುತ್ತಿರುವುದೂ ನಮಗೊಂದು ಸಂತೋಷದ, ಸ್ವಾರಸ್ಯದ ಸಂಗತಿ. ಅಲ್ಲದೆ ಭಾರತೀಯರಾದ ನಮಗೆ ಒಂದು ಅಪೂರ್ವದ ಅನುಭವ. ಕಾರಿ ನಲ್ಲಿ ನಾವು ಪ್ರಯಾಣ ಮಾಡುತ್ತಿರುವಾಗ ಒಮ್ಮೆ ಬಿಸಿಲನ್ನೂ ಕಾಮನ ಬಿಲ್ಲನ್ನೂ ನೋಡಿದೆವು. ಸ್ವಲ್ಪ ಹೊತ್ತಿನಲ್ಲೇ ಒಮ್ಮೆ ಮಂಜು, ಒಮ್ಮೆ ಹನಿಮಳೆ, ಕೊನೆಗೆ ಕಾರಿನ ಮೇಲೆ ಆನೆಕಲ್ಲುಗಳೂ (Hail Stones) ಬೀಳುವಾಗ ಕಲ್ಲೆಸೆದ ಶಬ್ದವನ್ನೂ ಕೇಳಿದೆವು! ಒಮ್ಮೊಮ್ಮೆ ಆಕಾಶದಲ್ಲಿ ಮೋಡಗಳಿಲ್ಲದಿದ್ದರೂ ಮಳೆ ಬೀಳುವುದಂತೆ! ಒಮ್ಮೊಮ್ಮೆ ವರ್ಷದ ನಾಲ್ಕು ಋತುಗಳ ಅನುಭವವೂ ನಮಗೆ ಒಂದೇ ದಿನದಲ್ಲಿ ಸಿಕ್ಕುತ್ತದೆ! ಅಂತೂ ತುಂಬಾ ವಿಚಿತ್ರ ಇಲ್ಲಿನ ಹವೆ.

ಮಾರ್ಚಿ ತಿಂಗಳಲ್ಲಿ ನಮಗೊಂದು ಹೊಸ ಅನುಭವವಾಯಿತು. ನಾವು ಮಹಡಿಯಲ್ಲಿದ್ದಾಗ ಕೆಳಗಿನ ಮನೆಯ ದೊಡ್ಡ ಗಡಿಯಾರ 8 ಘಂಟೆ ಹೊಡೆಯುವು ದನ್ನು ಕೇಳಿದೆವು. ಬೆಳಗ್ಗಿನ ಕಾಫಿಗೆಂದು ಕೆಳಗೆ ಇಳಿದೆವು. ಅದೇ ಗಡಿಯಾರ ಆಗ 9 ಘಂಟೆಯನ್ನು ಸೂಚಿಸುತ್ತಿತ್ತು! ನಮ್ಮ ಕೌತುಕವನ್ನು ನೋಡಿ ಶ್ರೀ ಅಂಗಡಿ ಯವರು "ಇನ್ನಿದು ಸೆಖೆ ಕಾಲದ ನಮ್ಮ ಸಮಯ (Summer Time). ಸೆಖೆ ಕಾಲ ದಲ್ಲಿ ಹೆಚ್ಚು ಸಮಯ ಬೆಳಕು ಇರುವುದರಿಂದ ಸಮಯವನ್ನು ಒಂದು ಘಂಟೆ ಮುಂದಕ್ಕೆ ಹಾಕುತ್ತೇವೆ. ಛಳಿಗಾಲದಲ್ಲಿ ಇದೇ ರೀತಿ ಸಮಯವನ್ನು ಒಂದು ಘಂಟೆ ಹಿಂದಕ್ಕೆ ಮಾಡುತ್ತೇವೆ" ಎಂದರು. ಈ ಬ್ರಿಟಿಷರಿಗೆ ಋತುಗಳು ಬದಲಾವಣೆ ಆದ ಹಾಗೆ ಸಮಯವನ್ನೂ ಹಿಂದು-ಮುಂದು ಮಾಡುವ ಚಾಳಿಯೆಂದು ಕಾಣುತ್ತದೆ!

ಈ ಸಮಯದಲ್ಲಿ ಇಲ್ಲಿ ಸೂರ್ಯಾಸ್ತ ಒಂದು ವಿಶೇಷ ಆಡಂಬರದ ಭವ್ಯ ದೃಶ್ಯ; ಅದನ್ನು ನೋಡುವ ಆತುರತೆ ನಮಗೆ. ಮಾರ್ಚಿ 20 ರಂದು ಆಲ್ಡರ್ ಶಾಟ್ (Aldershot) ಎಂಬಲ್ಲಿ ನಮ್ಮ ನೃತ್ಯೋಪನ್ಯಾಸವನ್ನು ಏರ್ಪಡಿಸಿದ್ದರು—ಪ್ಯಾರಿಸ್ ಬ್ಯಾಲೆ ಕ್ಲಬ್ಬಿನಲ್ಲಿ. ಅವರು ಆ ತನಕ ಭಾರತೀಯ ನೃತ್ಯಗಳನ್ನು ನೋಡಿದ್ದಿರಲಿಲ್ಲ. ಆಲ್ಡರ್‌ಶಾಟ್ ಫುಟ್‌ಬಾಲ್ ಆಟಕ್ಕೆ ಪ್ರಸಿದ್ಧಿ. ನಾವು "ಗಿಲ್ಡ್‌ಫೋರ್ಡ್" (Guild Ford) ಎಂಬ ಕಣಿವೆಯ ದಾರಿಯಾಗಿ ಅಲ್ಲಿಗೆ ಹೋಗುತ್ತಿದ್ದಂತೆ ಅಲ್ಲಿನ ನಿಸರ್ಗ ಸೌಂದರ್ಯವು ತುಂಬಾ ಹೃದಯಂಗಮವಾಗಿತ್ತು. ಆ ಕಣಿವೆಗಳೂ ಗುಡ್ಡಗಳೂ ಅಂದಿನ ಆ ಬಿಸಿಲಿನ ದಿನದಲ್ಲಿ ಒಂದು ಮನೋಹರವಾದ ಚಿತ್ರವನ್ನು ಕಣ್ಣಿಗೆ ಕಟ್ಟಿದುವು. ಛಳಿಗಾಲದಲ್ಲಿ ಆ ಎಲ್ಲ ಪ್ರದೇಶ ಮಂಜಿನಿಂದ ತುಂಬಿ ಕ್ರಿಸ್‌ಮಸ್ ಕಾರ್ಡುಗಳಲ್ಲಿನ ಚಿತ್ರಗಳಂತೆ ಕಾಣಿಸುತ್ತದಂತೆ. ಇತ್ತೀಚೆಗೆ ಲಂಡನ್ ಜನರಂತೆ ನಮಗೂ ಸೂರ್ಯನನ್ನೂ ಬಿಸಿಲನ್ನೂ ಕಂಡರೆ ಎಲ್ಲಿಲ್ಲದ ಉತ್ಸಾಹ, ಆನಂದ. "ನೀವು ಭಾರತಕ್ಕೆ ಹಿಂತಿರುಗಿದಾಕ್ಷಣ ಅಲ್ಲಿನ ಸೂರ್ಯನನ್ನೂ ಬಿಸಿಲನ್ನೂ ಎಂದೂ ಕಾಣದವರಂತೆ ನೋಡಿ ಸ್ತಬ್ಧರಾಗಲಿಕ್ಕಿದೆ!" ಎಂದೊಮ್ಮೆ ನಮ್ಮ ಸ್ನೇಹಿತರೊಬ್ಬರು ತಮಾಷೆ ಮಾಡಿ ಹೇಳಿದುದುಂಟು.

"ಪ್ಯಾರಿಸ್ ಬ್ಯಾಲೆ ಕ್ಲಬ್ಬ"ನವರು ನಮ್ಮ ಆಗಮನವನ್ನು ಆತುರದಿಂದ ನಿರೀಕ್ಷಿಸುತ್ತಿದ್ದರು. ಪತಿಯವರು ನಮ್ಮ ಭಾರತೀಯ ನೃತ್ಯಗಳ ಚಾರಿತ್ರಿಕ ಹಿನ್ನೆಲೆಯನ್ನು ಕೊಟ್ಟು ಕಲೆಯ ಬಹುವಿಧದ ಮುಖವನ್ನು ವಿವರಿಸಿದರು. ಪ್ರೇಕ್ಷಕರು ನಮ್ಮ ನೃತ್ಯಕಲೆಯ ವಿಷಯವಾಗಿ ತಿಳಿಯಬೇಕಾದುದೆಲ್ಲವನ್ನೂ ತಿಳಿದುಕೊಂಡು ತೃಪ್ತಿಪಟ್ಟರು. ಪಾಶ್ಚಾತ್ಯದ ಒಂದು ಚಿಕ್ಕ ಹೆಣ್ಣು ಮಗು ಹಣೆ ಮೇಲೆ ಕುಂಕುಮದ ಬೊಟ್ಟನ್ನಿಟ್ಟುಕೊಂಡು, ಸೀರೆಯನ್ನುಟ್ಟುಕೊಂಡು ನಮಗೆ 'ಗ್ಲೆಡಿಯೋಲಿ' ಹೂಗಳ ಪುಷ್ಪಗುಚ್ಛಗಳನ್ನು ಅರ್ಪಿಸಿದಳು! ಕಲಾಶಾಲೆಯ ಒಬ್ಬ ಪ್ರೊಫೆಸರರು ಕೊನೆಯದಾಗಿ ತಮ್ಮ ವಂದನಾರ್ಪಣೆಯ ಭಾಷಣ ಕೊಡುತ್ತಾ, ಇತರ ಅನೇಕ ಮಾತುಗಳೊಂದಿಗೆ ಇದನ್ನೂ ಹೇಳಿದರು: "........ಈ ಕಲೆಯು ನಮ್ಮನ್ನು ಮೂಕರನ್ನಾಗಿ ಮಾಡಿದೆ. ಅಷ್ಟು ಘನತೆಯುಳ್ಳದ್ದಾಗಿದೆ ಅದು. ಈ ಕಲೆಗೆ ಅಂತ್ಯವಿಲ್ಲ. ವಿಶಾಲವಾದ, ಗಹನವಾದ ಈ ಕಲೆಯ ಶಾಸ್ತ್ರೀಯ ವಿಷಯಗಳನ್ನು ಸುಲಭವಾಗಿ, ಸರಳವಾಗಿ, ಮಕ್ಕಳಿಗೂ ಅರಿವಾಗುವಂತೆ ತಿಳಿಸಿದರು"........ಭಾಷಣಗಳಾದ ಮೇಲೆ ಅನೇಕ ಮಕ್ಕಳು ನಮ್ಮ ಸ್ವಲಿಖಿತ ಸಹಿಗಳಿಗೋಸ್ಕರ (Autograph) ಸಾಲು ಸಾಲಾಗಿ ನಿಂತಿದ್ದ ಅವರನ್ನು ನಿರಾಶೆಗೊಳಿಸದೆ ನಮ್ಮ ಸಹಿಗಳನ್ನು ಕೊಡುವುದರಲ್ಲಿ ನಾವು ಬಹಳ ಹೊತ್ತು ಕಳೆಯಬೇಕಾಯಿತು.

ನಾವು ಹಿಂತಿರುಗಿ ಬರುವಾಗ ನಮ್ಮ ಪ್ರಯಾಣ ಬೇರೊಂದು ದಾರಿಯಾಗಿ ಸಾಗಿತು. ಇಂಗ್ಲೆಂಡಿನ ಒಂದು ಚಲಚಿತ್ರ ಕಂಪೆನಿಯವರು ಹೊರಗಿನ 'ಷೂಟಿಂಗ್'

ಗಾಗಿ ಆರಿಸಿದ ಒಂದು ಸರೋವರದ ಸುಂದರ ಪ್ರದೇಶದಲ್ಲಿ ನಮ್ಮ ಕಾರನ್ನು ನಿಲ್ಲಿಸಿದೆವು. ಅಲ್ಲೇ ಒಂದು ಪಕ್ಕದ 'ಪಬ್ಬಿ' ನಲ್ಲಿ (Pub ಇಂಗ್ಲೆಂಡಿನಲ್ಲಿ ಎಲ್ಲೆಲ್ಲೂ ಇರುವ ಒಂದು ವಿಶಿಷ್ಟ ಚಿಕ್ಕ ಪಾನೀಯ ಉಪಹಾರ ಗೃಹ) ಸ್ವಲ್ಪ ಉಪಾಹಾರವನ್ನು ತೆಗೆದುಕೊಂಡೆವು. ಭರತನಾಟ್ಯದ ಒಡವೆ ಹೂಗಳಿಂದ ಅಲಂಕೃತಳಾದ ನಾನು ಆ 'ಪಬ್ಬಿ' ನ ಅಭ್ಯಾಗತರಿಗೆ ಒಂದು ಅಪೂರ್ವ ದೃಶ್ಯವಾದೆ! ಭಾರತದ ಹೆಂಗಸರ ವೇಷಭೂಷಣಗಳೆಂದರೆ ಇಲ್ಲಿ ಎಲ್ಲರಿಗೂ ವಿಶೇಷ ಪ್ರೀತಿ........

ಇತಿ ನಿಮ್ಮ
ಅಮ್ಮ .

* * * * *

ಲಂಡನ್
20 – 4 – 1966

ಪ್ರಿಯ ಅಮ್ಮಾ,

ನಿಮ್ಮ ಪತ್ರ ಬಂತು ಎಂದರೆ ಎಷ್ಟು ಸಲ ಓದುವೆನೋ ನನಗೇ ತಿಳಿಯದು. ಬೆಂಗಳೂರು ಜ್ಞಾಪಕವಾದಂತೆಲ್ಲಾ ಓದುತ್ತಿರುತ್ತೇನೆ. 'ರುಕ್ಮಿಣಿ' ಯ ಹಾಗೂ ಅಲ್ಲಿನ ಜೀವನದ ಚಿತ್ರವನ್ನು ಎಷ್ಟು ಚೆನ್ನಾಗಿ ಬರೆದಿದ್ದೀರಿ! ಎಂತಹ ಸವಿಸ್ತಾರವಾದ ಸ್ವಾರಸ್ಯವುಳ್ಳ ವರ್ಣನೆ! ನಿಮಗೂ, ಪೂಜ್ಯ ತಂದೆಯವರಿಗೂ ನಾವು ಚಿರಋಣಿಗಳು. ನಿಮ್ಮ ಕೃಪೆ, ಸಾಂಗೋಪಾಸನಗಳಿಂದ ಮಕ್ಕಳು ಚೆನ್ನಾಗಿದ್ದಾರೆ. ನಮಗಿಲ್ಲಿ ಯಾವ ಯೋಚನೆಯೂ ಇಲ್ಲದಂತೆ ಮಾಡಿರುವಿರಿ. ನೆಮ್ಮದಿಯಾಗಿ ಇಲ್ಲಿನ ನಮ್ಮ ಕೆಲಸಕ್ಕೆ ಮೈಯೊಡ್ಡಿದ್ದೇವೆ. ನಮ್ಮ ಮನೆಯ ತೋಟದಲ್ಲಿ ಈ ವರ್ಷ ತುಂಬಾ ಗುಂಡು ಮಲ್ಲಿಗೆಯಾಗಿರುವ ಸುದ್ದಿ ಕೇಳಿ ಎಷ್ಟು ಸಂತೋಷವಾಗಿದೆ ನನಗೆ! ಇಲ್ಲಿ ಎಷ್ಟು ಹೂಗಳಿದ್ದರೂ ಅವೆಲ್ಲ ವಾಸನೆಯಿಲ್ಲದ ಹೂಗಳು. ಬಣ್ಣಗಳ ಸೌಂದರ್ಯ ಮಾತ್ರ. ನಮ್ಮ ಭಾರತೀಯ ಹೂಗಳಿಗಿರುವ ಸುವಾಸನೆ ಇಲ್ಲಿಯವರು ಅರಿಯದಿರುವ ವಿಷಯ. ನಮ್ಮ ಸಂಪಿಗೆ, ಮಲ್ಲಿಗೆ, ಕೇದಗೆ, ಜಾಜಿ ಮೊದಲಾದುವುಗಳ ನಸುಗಂಪನ್ನು ಅವರು ಅನುಭವಿಸದೆ ಹೇಗೆ ತಿಳಿಯಬಲ್ಲರು? ಜಾಜಿಯನ್ನು ಮುಡಿದು ಮಲಗಿದರೆ ತಲೆದಿಂಬಿಗೆ ನಾಲ್ಕೈದು ದಿನಗಳವರೆಗೆ ಜಾಜಿಯ ಸುವಾಸನೆ ಇರುವುದೆಂದು ಹೇಳಿದರೆ ಇಲ್ಲಿನ ಜನ ನಂಬುವುದಿಲ್ಲ. ಒಂದು ಸಂಪಿಗೆ ಹೂ ಕೋಣೆಯೊಳಗಿದ್ದರೆ ಮನೆ ತುಂಬ ಘಮ ಘಮ ಸುವಾಸನೆ ಬೀರುವುದೆಂಬುದು ಇವರಿಗೆ ವಿಚಿತ್ರವೆನಿಸುತ್ತದೆ........

ನನ್ನ ಆರೋಗ್ಯ ಈಗ ಚೆನ್ನಾಗಿದೆ. ಹೋದ ತಿಂಗಳು ತುಂಬಾ ಕೆಟ್ಟು ಹೋಗಿತ್ತು. ನಮ್ಮ ಭಾರವಾದ ಟೇಪ್ ರೆಕಾರ್ಡರನ್ನು ನಾನೇ ಎತ್ತಿ ಪ್ರಯಾಣ ಮಾಡಿದುದರ ಫಲಃ ಪತಿಯವರು ಲಂಡನ್ನಿನಲ್ಲಿದ್ದಾಗ ನಾನು ಎಕ್ಸೆಟರಿನಲ್ಲಿ (Exeter) ಒಂದೆರಡು ದಿನ ಹೆಚ್ಚಾಗಿ ಕಳೆದೆ. ಹಿಂತಿರುಗುವಾಗ ಇಲ್ಲಿ ಹಮಾಲರಿಲ್ಲದೆ (Porters) ಸಾಮಾನಿನ ಹೊರೆ ಎಲ್ಲ ನನ್ನ ತಲೆಯ ಮೇಲೆಯೇ! ಅಂತೂ ಆ ನನ್ನ ಅನಾರೋಗ್ಯ ಸ್ಥಿತಿಯಲ್ಲಾದರೂ, ನಮ್ಮ ಮೂರು ನೃತ್ಯ ಪ್ರದರ್ಶನಗಳು ತುಂಬಾ ಯಶಸ್ವಿಯಾಗಿ ನಡೆದುವು. ಅವು ನಮ್ಮ ಪೂಜ್ಯ ಗುರುಗಳಾದ ನಾಟ್ಯ ಕಲಾನಿಧಿ ಮೀನಾಕ್ಷಿ ಸುಂದರಂ ಪಿಳ್ಳೆಯವರ ಜ್ಞಾಪಕಾರ್ಥವಾಗಿ. ಈ ಪ್ರದರ್ಶನಗಳ ಒಂದು ವಾರಕ್ಕೆ ಮುಂಚೆ ಪಿತ್ಥದ ಉಪದ್ರವದಿಂದ ಮೈಯೆಲ್ಲ ಗುಳ್ಳೆ ಎದ್ದಿತ್ತು. ಪ್ರದರ್ಶನದ ಸಮಯ ಆರೋಗ್ಯ ಚೆನ್ನಾಗಿರಲಿ ಎಂದು ಭಗವಂತನಲ್ಲಿ ಮೊರೆಯಿಟ್ಟೆ. ಒಮ್ಮೆ ಒಳ್ಳೇ ಹೆಸರು ಬಂದ ಮೇಲೆ ಉಳಿಸಿಕೊಳ್ಳಬೇಕಲ್ಲವೇ? ಶ್ರೀ ರಾಮಗೋಪಾಲರೂ ನಾವಿಬ್ಬರೂ ಜತೆಯಲ್ಲಿಯೇ ಅವರಿಂದ ಪಾಠ ಕಲಿತ ಕಾರಣ ಈ ನೃತ್ಯ ಪ್ರದರ್ಶನಗಳಲ್ಲಿ ನಾವೇ ಮೂರು ಮಂದಿ ಹೆಚ್ಚಿನ ಭಾಗವನ್ನು ವಹಿಸಿಕೊಂಡಿದ್ದೆವು. ನಮ್ಮ ಶಿಷ್ಯೆಯಾದ ಸೋನಾಲ್ ಮಾನಸಿಂಗ್‌ರವರನ್ನೂ A. M. C. ಯವರು ಈ ನೃತ್ಯ ಪ್ರದರ್ಶನಗಳಲ್ಲಿ ಭಾಗವಹಿಸಲು ಆಮಂತ್ರಿಸಿದ್ದರು. ಅಡ್ಯಾರ್ ನೃತ್ಯ ಕಲಾ ಸಂಸ್ಥೆಯ ಶಿಷ್ಯೆಯಾದ ಕುಮಾರಿ ಬಾಲಸುಂದರಿ ಆ ಸಮಯ ಲಂಡನಿನಲ್ಲಿದ್ದ ಕಾರಣ ಆಕೆಯನ್ನೂ ಆಹ್ವಾನಿಸಿ, ಪಂದನಲ್ಲೂರು ಸಂಪ್ರದಾಯವನ್ನು ಪ್ರದರ್ಶಿಸಿದೆವು. ಈ ರೀತಿಯ ಪ್ರದರ್ಶನವನ್ನು ನಮ್ಮ ದೇಶದಲ್ಲಿ ಕೂಡ 'ತಾತಾ' ರವರ ಶಿಷ್ಯಂದಿರು ಕೊಟ್ಟಿಲ್ಲ. 'ತಾತಾ' ರವರು ಅನೇಕಾನೇಕ ಮಂದಿ ಪ್ರಸಿದ್ಧ ನೃತ್ಯಗಾರರನ್ನು ತಯಾರಿಸಿದ್ದರೂ ಅವರ ಜ್ಞಾಪಕಾರ್ಥವಾಗಿ ಇಬ್ಬರೂ ಕೂಡ ಒಟ್ಟಿಗೆ ಸೇರಿ ಕುಣಿದಿಲ್ಲ. 'ತಾತಾ' ರವರ ನಿಧನದ ಕೆಲವೇ ವಾರಗಳ ಮುಂಚೆ ನಾವು ಅವರಿಂದ ಕಲಿತ 'ನವರಾಗ ವರ್ಣ' ವನ್ನು ನಾವಿಬ್ಬರೂ ಶ್ರೀ ರಾಮಗೋಪಾಲರ ಜತೆಯಲ್ಲಿ ಮಾಡಿದೆವು. ಹಾಗೆ ನರ್ತಿಸುತ್ತಿದ್ದಂತೆ 'ತಾತಾ' ರವರ ಅಪಾರ ಕಲಾಜ್ಞಾನ, ಹಿರಿಮೆ, ಪ್ರತಿಭಾನ್ವಿತೆ ನಮ್ಮನ್ನು ಹುರಿದುಂಬಿಸುತ್ತಿದ್ದುವು. ನಮಗೆ ಸ್ಫೂರ್ತಿ ಕೊಡುತ್ತಿದ್ದುವು.

ನಾವು ಮೊದಲ ಖಮಾಚ ವರ್ಣವನ್ನು 'ತಾತಾ' ರವರಿಂದ ಕಲಿಯುತ್ತಿದ್ದಾಗ ಮಗು ಜಯದೇವ ತುಂಟತನದಿಂದ ನನಗೆ ಬಿಡುವು ಕೊಡುತ್ತಿರಲಿಲ್ಲವೆಂದು ನಿಮ್ಮನ್ನು ಮದರಾಸಿನಿಂದ ತಂಜಾವೂರಿಗೆ ಕರೆಸಿದ್ದು ನೆನೆಪಿದೆಯಲ್ಲವೇ ಅಮ್ಮ? ನಮ್ಮ ಕಾಗದ ಕಂಡ ಕೂಡಲೇ ನೀವು ಏಕಾಏಕಿಯಾಗಿ ನಮ್ಮ ಸಹಾಯಾರ್ಥ ಬಂದು ಮಗುವನ್ನು ಕರೆದುಕೊಂಡು ಹೋಗುತ್ತ, "ಮಗುವಿನ ಯೋಚನೆ ಮಾಡದೆ ನೃತ್ಯ ಪಾಠ ಮಾಡು" ಎಂದು ಅಭಯ ಕೊಡಲಿಲ್ಲವೇ? ಹಾಗೆಯೇ ಕೆಲವು ದಿನ

ಗಳೊಳಗೆ "ಮಗುವಿಗೆ ವಿಶೇಷ ಶೀತ, ಜ್ವರ, ನಿಮಗಾಗಿ ಹಂಬಲಿಸುತ್ತಿದೆ ಮಗು, ಒಡನೆ ಬಾ" ಎಂದು ನೀವು ಕೊಟ್ಟ ತಂತೀ ವಾರ್ತೆಯನ್ನು ಮನ್ನಿಸಿ ನಮ್ಮಿಬ್ಬರನ್ನು 'ತಾತಾ' ಅಪ್ಪಣೆ ಕೊಟ್ಟು ಕಳುಹಿಸಿದುದು....ನಮ್ಮ ರೈಲಿನ ಭಯಂಕರ ಅಪಘಾತ ....ಈಗಲೂ ನೆನೆಸಿದರೆ ಮೈ ನಡುಗುತ್ತದೆ... ಮಧ್ಯ ರಾತ್ರಿ ಮೂರು ಗಂಟೆ ಸಮಯ ....ಕಣ್ಮುಂದೆಯೇ ನಡೆದ ಅನೇಕ ಜನರ ಸಾವು .... ನೂರಿಪ್ಪತ್ತಕ್ಕಿಂತಲೂ ಹೆಚ್ಚು ಜನರ ತೀವ್ರ ಘಾಯ....ಇತ್ಯಾದಿ....ಕತ್ತಲಲ್ಲಿ ಕೇಳಿದ ಆರ್ತ ಕೂಗು ರೋದನ.... ನಾವು ಪ್ರಯಾಣ ಮಾಡುತ್ತಿದ್ದ ಗಾಡಿ ಕಂಬಿಬಿಟ್ಟು ಮೈದಾನಕ್ಕೆ ಸರಿದು ಅಡ್ಡವಾಗಿ ನಿಂತಿದ್ದ ದೃಶ್ಯ....ಅದರ ಮುಂದಿನ ಗಾಡಿಗಳೆಲ್ಲಾ ಪ್ರಯಾಣಿಕರೊಡನೆ ಜಜ್ಜಿಹೋದ ಭೀಕರ ನೋಟ....ಹೃದಯಕ್ಕೆ ಧಕ್ಕೆಯಲ್ಲದೆ ದೈವವಶಾತ್ ಮೈಗೇನೂ ಅಪಘಾತ ವಾಗದಿದ್ದುದು....ಆದರೂ ನಾವು ಬೇರೊಂದು ಗಾಡಿಯಲ್ಲಿ ಮದರಾಸು ತಲಪುವ ವೇಳೆ ನಿಮಗಾದ ಭಯ....ನಾವು ಜೀವಂತರಾಗಿ ಬರುವೆವೋ ಇಲ್ಲವೋ ಎಂದು ನಿಮ್ಮ ಕಳವಳ....ನಮ್ಮನ್ನು ಕಂಡ ಕೂಡಲೆ ಪೂಜ್ಯ ತಂದೆಯವರು ಆನಂದ ಬಾಷ್ಪಗಳನ್ನು ಸುರಿಸಿದುದು....ಅಪಘಾತದ ಸುದ್ದಿ ಕೇಳಿ 'ತಾತ' ಒಂದು ತೊಟ್ಟು ನೀರನ್ನು ಕೂಡ ಕುಡಿಯದೆ ನಮಗಾಗಿ ಚಿಂತಿಸಿದುದು....ಮನೆಗೆ ಬಂದಾಕ್ಷಣ ಕಾಹಿಲೆಯ ಮಗು ಜಯದೇವನನ್ನು ನೋಡಿ ಮೂಕಳಂತೆ ನಾನು ಪಕ್ಕಕ್ಕೆ ಕುಳಿತುದು....ಇವೆಲ್ಲವೂ ನನ್ನ ಮನಸ್ಸಿನ ಮುಂದೆ ಹಾದು ಹೋಗುತ್ತಿದೆ....

ಅಂತೂ, ಈ ಮೂರು ಪ್ರದರ್ಶನಗಳೂ ಕಲಾ ದೃಷ್ಟಿಯಿಂದ ಪೂರ್ಣ ಯಶಸ್ವಿ ಯಾದುವು. ಪತ್ರಿಕೆಗಳು ಒಳ್ಳೇ ವಿಮರ್ಶೆಗಳನ್ನು ಕೊಟ್ಟವು. "ಸಾಮಾನ್ಯವಾಗಿ ಲಂಡನ್ನಿನಲ್ಲಿ ಭಾರತೀಯ ನೃತ್ಯಗಳನ್ನು ಒಬ್ಬರೇ, ತಪ್ಪಿದರೆ ಇಬ್ಬರು ಮಾಡುವ ರೂಢಿಯಿತ್ತು. ಆದ್ದರಿಂದ C. W. I. ನಲ್ಲಿ (Commonwealth Institute) ಐದು ಉತ್ತಮ ಕಲಾವಿದರನ್ನು ರಂಗಸ್ಥಳದ ಮೇಲೆ ನೋಡುವುದು ಆನಂದದ ಸಂಗತಿ· ಈ ಪ್ರದರ್ಶನವು ನೃತ್ಯಕಲೆಯ ಉತ್ತಮ ತರಗತಿಯ ಶಾಸ್ತ್ರೀಯತೆಯಿಂದ ಕೂಡಿದ್ದು ಭರತ ನಾಟ್ಯದ ಪಂದನಲ್ಲೂರು ಶಾಖೆಯ ಸಂಪ್ರದಾಯವನ್ನು ಖಚಿತ ವಾಗಿ ಕಾಪಾಡಿಕೊಂಡು ಬಂದಿತ್ತು.

" ಕೃಷ್ಣರಾವ್ ದಂಪತಿಗಳು ರಾಮಗೋಪಾಲರಂತೆ ಗುರು ಎಂ. ಎಸ್. ಪಿಳ್ಳೆ ಯವರಿಂದ ನೇರವಾಗಿ ಕಲೆಯನ್ನು ಕಲಿತವರು. ಬಾಲ ಸರಸ್ವತಿಯಂತೆಯೇ ಅಭಿ ನಯದ ಅಪಾರ ಭಂಡಾರದಿಂದ ವಿವಿಧ ಸ್ತ್ರೀ ಮನೋಭಾವಗಳನ್ನು ಪ್ರಕಟಿಸುವ ವರ ಸಂಪನ್ನ ಶಕ್ತಿ 'ದೇವಿ' ಗಿದೆ. ಕೃಷ್ಣರಾಯರಿಗೆ ಹುರುಪಿನ ಓಜಸ್ಸು ನೃತ್ಯಗಾರನಾಗಿ ಇದೆ. ವ್ಯಾಖ್ಯಾನಗಾರನಾಗಿ (Commentator) ಮನವೊಲಿಸುವ ಶಕ್ತಿಯೂ ಇದೆ....." ಎಂದು ಇಲ್ಲಿಯ "ಡೈಲಿ ಟೆಲಿಗ್ರಾಫ್" ("Daily Telegraph") ಪತ್ರಿಕೆ

ಸಾರಿದೆ. ಈ ಯಶಸ್ಸು ನಮ್ಮ ಮನಸ್ಸಿಗೆ ಎಣೆಯಿಲ್ಲದ ನೆಮ್ಮದಿ ಕೊಟ್ಟಿದೆ. ಮುಂದಿನ ನಮ್ಮ ಕಾರ್ಯಕ್ರಮುಗಳಿಗೆ ಅವಶ್ಯವಿದ್ದ ಹುರುಪನ್ನು ನಮ್ಮಲ್ಲಿ ತುಂಬಿಸಿದೆ........

ಆಗಾಗ್ಗೆ ಬರೆಯುತ್ತ ಇರಿ.

ಇತಿ ನಿಮ್ಮ
ಚಂದಮ್ಮ.

*   *   *   *

ಲಂಡನ್
30 – 4 – 1966

ಮುದ್ದು ಶಿವದೇವ್,

........ನೀನು ಪರೀಕ್ಷೆಯಲ್ಲಿ ಹೇಗೆ ಮಾಡುತ್ತಿದ್ದೀ ಎಂದು ತೀ|| ತಂದೆಯವರು ಪ್ರತಿದಿನವೆಂಬಂತೆ ನಮಗೆ ಕೂಲಂಕಷವಾಗಿ ತಿಳಿಸುತ್ತಿದ್ದರು. ಅವರಂತಹ ಅಜ್ಜ ನನ್ನು ಪಡೆದಿರುವ ನೀನು ಭಾಗ್ಯವಂತ. ಬೆಳಿಗ್ಗೆಯಾದ ತಕ್ಷಣ ನಿನ್ನ ಪರೀಕ್ಷೆಯ ವೇಳಾಪಟ್ಟಿಯನ್ನು ನೋಡಿ ಅಂತರರಾಷ್ಟ್ರೀಯ ಸಮಯದ ಕಡೆಗೆ ಗಮನವಿಟ್ಟು— "ನೀನೀಗ ಪರೀಕ್ಷೆ ಕೋಣೆಯಲ್ಲಿದ್ದೀ....ಈಗ ಪ್ರಶ್ನಾಪತ್ರವನ್ನು ಕೊಟ್ಟರು....ಈಗ ನೀನು ಬರೆಯಲು ಆರಂಭಿಸಿರುವೆ....ಈಗ ಬರೆದು ಮುಗಿಸಿದೆ...." ಎಂದು ಹೇಳುತ್ತಾ ನಿನ್ನ ಜತೆಯಲ್ಲೇ ಎಂಬಂತೆ ನಾವಿಲ್ಲಿ ಕಾಲ ಕಳೆಯುತ್ತಿದ್ದೇವೆ.

ಮುದ್ದು ಜಯದೇವನ ವಿಮಾನ ಎಂಜಿನ್ ತೊಂದರೆಯಿಂದಾಗಿ ಎರಡು ಗಂಟೆ ತಡವಾಗಿ ಹಾರಿತು. 30 ಮೈಲು ದೂರವಿರುವ ಸೆಂಟ್ ಆಲ್ಬನ್ಸಿನ ಬ್ಯಾಲೆ ಸಂಸ್ಥೆಯಲ್ಲಿ ನಮ್ಮ ನೃತ್ಯ ಪ್ರದರ್ಶನವಿದ್ದ ಕಾರಣ ಅಷ್ಟು ಹೊತ್ತು ಕಾಯಲು ನಮಗಾಗದೆ ಜಯದೇವನನ್ನು ಬೀಳ್ಕೊಡಲಾರದೆ ಬೀಳ್ಕೊಟ್ಟು, ನಮ್ಮ ನೃತ್ಯ ಪ್ರದರ್ಶನದ ಕಾರ್ಯವನ್ನು ಮುಗಿಸಿದೆವು. ಅವನಿಂದ ನಮ್ಮ ಚಿಕ್ಕ ಗಣಪತಿಗೆ ಒಂದು ತೆಂಗಿನಕಾಯನ್ನು ಅರ್ಪಿಸಿದ್ದೆ. ನಮಸ್ಕರಿಸಲು ಹೇಳಿದ್ದೆ—ಸುಖ ಪ್ರಯಾಣಕ್ಕಾಗಿ. ಈ ಕಾಗದ ಬರೆಯುತ್ತಿರುವಾಗಲೂ ನನ್ನ ಕಣ್ಣೀರು ಆರಲಿಲ್ಲ. ನಿನ್ನಣ್ಣ ಜನೀವಾ, ಮಿಲಾನ್, ಟ್ಯೂರಿನ್ ಮೊದಲಾದ ಪ್ರವಾಸ ಮುಗಿಸಿ ಇನ್ನೆರಡು ವಾರಗಳೊಳಗಾಗಿ ಬೆಂಗಳೂರು ಸೇರುವನು. ಅವನು ಮನೆ ತಲುಪುವಾಗ ನೀನು ನಿನ್ನ ಪ್ರವಾಸಕ್ಕೆ ಹೊರಡಬೇಕಾಗಿದೆಯೆಂದೂ, ನಿಮ್ಮಿಬ್ಬರ ಭೇಟಿಗೆ ಇನ್ನೂ ತಡವಾಗುವುದೆಂದು ಕೇಳಿ ಸ್ವಲ್ಪ ಬೇಸರ.

ನಿನಗೋಸ್ಕರ ನಿನ್ನಣ್ಣ ನಿನಗಿಷ್ಟವಿರುವ ಎಷ್ಟೋ ಸಾಮಾನುಗಳನ್ನು ಕೊಂಡು ಕೊಂಡಿದ್ದಾನೆ. ತನ್ನ ಸೂಕ್ತ ಕೆಲಸದ ದಣುವನ್ನು ಕೂಡ ನಿವಾರಿಸಿಕೊಳ್ಳಲು ಬಿಡುವು ಮಾಡಿಕೊಳ್ಳದೆ ಸುತ್ತಾಡಿ, ಸುತ್ತಾಡಿ, ಆಹಾರವನ್ನು ಕೂಡ ಸಮಯಕ್ಕೆ ಸರಿಯಾಗಿ ತಿನ್ನದೆ, ಆಹಾರಕ್ಕೆ ಮತ್ತು ಟ್ಯಾಕ್ಸಿಗೆ ಕೊಡುವ ಹಣವನ್ನುಳಿಸಿಕೊಂಡು ನಿನಗಾಗಿ ಸಾಮಾನು ಕೊಂಡುಕೊಳ್ಳಲು ಅವನು ಪಟ್ಟ ಶ್ರಮವನ್ನು ಕಂಡು ನಾನು ಮೆಚ್ಚಿದೆ. ಯುವಕನಾಗಿ ಯೂರೋಪಿಗೆ ಬಂದು ಸ್ವೇಚ್ಛೆಯಾಗಿ ಇಲ್ಲಿ ತನ್ನ ಜೀವನವನ್ನು ಸುಖಲಾಲಸೆಯಿಂದ ಆನಂದವಾಗಿ ಕಳೆಯಬಹುದಿತ್ತು. ಆದರೆ ನಿನಗಾಗಿ ತನ್ನ ಸುಖಾಭಿಲಾಷೆಗಳನ್ನೆಲ್ಲಾ ಬದಿಗಿಟ್ಟು ನಿಸ್ವಾರ್ಥತೆಯಿಂದ ಉಳಿಸಿದ ಹಣದಿಂದ ನೀನು ಇಚ್ಛೆಪಟ್ಟ ವಸ್ತುಗಳನ್ನು ಕೊಂಡುಕೊಂಡಿದ್ದಾನೆ. ನನ್ನ ಮನಸ್ಸಿನಲ್ಲಿದ್ದುದನ್ನು ಅವನು ಸಾಧ್ಯ ಮಾಡಿದುದಕ್ಕಾಗಿ ನನಗಂತೂ ತುಂಬಾ ಸಂತೋಷ. ಅವನು ಬೆಂಗಳೂರು ತಲುಪಿದಾಕ್ಷಣ ದಯವಿಟ್ಟು ಯಾರಾದರೊಬ್ಬರು ನಮಗೆ ತಿಳಿಸಿರಿ. ತುಂಬಾ ಯೋಚನೆ ಕಾಣುತ್ತಿದೆ.

ನೀನು ಪರೀಕ್ಷೆಯಲ್ಲಿ ಚೆನ್ನಾಗಿ ಮಾಡಿರುವೆ ಎಂದು ಕೇಳಿ ಅತ್ಯಾನಂದವಾಯಿತು. ಎಲೆಕ್ಟ್ರೋನಿಕ್ಸ್ (Electronics) ನಲ್ಲೂ ನೀನು ಖಂಡಿತ ಚೆನ್ನಾಗಿ ಮಾಡುವೆ. ನೀನು ಯಾವಾಗಲೂ ಸಂಪೂರ್ಣ ಕ್ರಿಯಾದರ್ಶಿ (Perfectionist) ಎಂದು ನಮಗೆ ಗೊತ್ತಿಲ್ಲವೇ? ನೀನೆಷ್ಟು ಚೆನ್ನಾಗಿ ಮಾಡಿದರೂ ಇನ್ನೂ ಚೆನ್ನಾಗಿ ಮಾಡಬಹುದಿತ್ತು ಎಂದು ತಿಳಿಯುವುದು ಸಹಜವೇ! ಎಲ್ಲ ಪರೀಕ್ಷೆಗಳೂ ಮುಗಿದ ಮೇಲೆ ನಿನ್ನ ಸ್ನೇಹಿತರ ಜೊತೆಗೆ ಖಂಡಿತ ಉತ್ತರ ಹಿಂದೂಸ್ಥಾನದ ಪ್ರವಾಸ ಕೈಕೊಳ್ಳು. ಮನಸ್ಸಿಗೂ, ದೇಹಕ್ಕೂ ಬಿಡುವು ಸಿಗಲಿ. ನಿನ್ನ ಮುಂದಿನ ವಿದ್ಯಾಭ್ಯಾಸಕ್ಕೆ ಸಿದ್ಧನಾಗಬೇಕಲ್ಲವೇ ?

ಇತಿ
ನಿನ್ನ ಅಮ್ಮನ
ಆಶೀರ್ವಾದಗಳು.

* * * *

ಲಂಡನ್
9 – 5 – 1966

ನನ್ನ ಆತ್ಮೀಯರೇ,

ನಮ್ಮ ಇಲ್ಲಿನ ಕಲಾ ಜೀವನದಲ್ಲಿ ವಿಧ ವಿಧ ಪ್ರೇಕ್ಷಕ ವೃಂದಗಳ ಪರಿಚಯವಾಗಿದೆ. ಹವಾಗುಣದ ಮೇಲೆ ಹೊಂದಿ ಹೆಚ್ಚಾಗಿ ಪ್ರೇಕ್ಷಕರ ಸಂಖ್ಯೆಯನ್ನು ನಿರೀ

ಕ್ಷಿಸಬಹುದು. ರಜಾ ದಿನಗಳಲ್ಲಿ. ಹೆಚ್ಚಾಗಿ ಬಿಸಿಲು ದಿನಗಳಲ್ಲಿ ಛಳಿಯಿಂದ ತಪ್ಪಿಸಿಕೊಂಡ ಆನಂದದಿಂದ ಲಂಡನ್ನಿನ ಜನತೆ ಬಯಲು ಪ್ರದೇಶಗಳಲ್ಲೇ ಕಾಲ ಕಳೆಯುವುದರಿಂದ ನಮ್ಮ ನೃತ್ಯ–ಉಪನ್ಯಾಸಗಳಿಗೆ ಕೆಲವು ಸಲ ಪ್ರೇಕ್ಷಕರ ಕೂಟವೇ ಇರುತ್ತಿರಲಿಲ್ಲ. ಆದರೆ ಬಂದ ಚಿಕ್ಕ ಸಮೂಹದಲ್ಲಿನ ಪ್ರೇಕ್ಷಕರು ಅತ್ಯಂತ ಆಸೆಯಿಂದ ನಮ್ಮ ಕಲೆಯ ವಿಷಯಕ್ಕಾಗಿ ಹಂಬಲಿಸುತ್ತಿದ್ದುದರಿಂದ, ಸಂಖ್ಯೆಗಿಂತ ಲಕ್ಷಣ ಮೇಲಾದುದು, (Quality more than quantity) ಎಂದು ತಿಳಿದು ನಮ್ಮ ನೃತ್ಯ–ಉಪನ್ಯಾಸಗಳನ್ನು ಯಾವಾಗಲೂ ದಕ್ಷತೆಯಿಂದಲೇ ಕೊಡುತ್ತಿದ್ದೇವೆ.

ಆಫ್ರಿಕಾ ಸೆಂಟರಿನಲ್ಲಿ ('Africa Centre') ನಮ್ಮ ಉಪನ್ಯಾಸ ಬಹಳ ಯಶಸ್ವೀಯಾಯಿತು. ಪ್ರೇಕ್ಷಕರು ಕೊಟ್ಟ ಪ್ರೋತ್ಸಾಹ ಮತ್ತು ತೋರಿದ ಮೆಚ್ಚುಗೆ ಅಪಾರವಾಗಿತ್ತು. ವ್ಯನಸ್ಥಾಪಕರು ತಮ್ಮ ಕೊನೆಯ ವಂದನಾರ್ಪಣೆಯಲ್ಲಿ ಹೀಗೆಂದರು : "........ಇಲ್ಲಿ ದಯಮಾಡಿಸಿರುವ ಪ್ರತಿಯೊಂದು ವ್ಯಕ್ತಿ ನಿಮ್ಮ ಹರ್ಷದಾಯಕ ಉಪನ್ಯಾಸವನ್ನು ಕೇಳಿ ಮೈ ಮರೆತಿರುವರು. ಉಪನ್ಯಾಸ ತುಂಬಾ ಬೋಧಪರವಾಗಿತ್ತಲ್ಲದೆ ಅದನ್ನು ನಿರೂಪಿಸಿದ ನೃತ್ಯ ಪ್ರದರ್ಶನವೂ ತುಂಬಾ ಮನೋರಂಜಕವಾಗಿ ಆಕರ್ಷಣೀಯವಾಗಿತ್ತು. ಸಾಧಾರಣವಾಗಿ ಮನಮೋಹಕವಾಗಿ ನರ್ತಿಸುವವರಿಗೆ ನೃತ್ಯಕಲೆಯ ಶಾಸ್ತ್ರೀಯ ವಿಷಯಗಳನ್ನು ಸ್ಪಷ್ಟವಾಗಿ, ಅಧಿಕಾರಯುಕ್ತವಾಗಿ ಒಂದು ಸಭೆಯ ಮುಂದೆ ವಿವರಿಸಲುಬಾರದು. ಆದರೆ ನೀವು ಅಪರೂಪದ ಈ ಎರಡು ಲಕ್ಷಣಗಳನ್ನೂ ಮೂರ್ತಿಮತ್ತಾಗಿ ನಿಮ್ಮದಾಗಿ ಮಾಡಿಕೊಂಡು ನಮ್ಮ ಕಣ್ಣಿಗೆ ಕಟ್ಟಿದ್ದ ಚಿತ್ರಕ್ಕೆ ನಾವು ಬಹಳ ಕೃತಜ್ಞರಿದ್ದೇವೆ; ಈ ನಿಮ್ಮ ಅಪಾರ ಕುಶಲತೆಯಿಂದಾಗಿ ನೀವು ಭವಿಷ್ಯದಲ್ಲಿ ಎಂದೆಂದಿಗೂ ಯಶಸನ್ನು ಗಳಿಸುವಿರಿ...."

ಫೇವರ್‌ಶೆಮ್ (Faversham) ಎಂಬ ಪಟ್ಟಣದ ಹುಡುಗರ ಶಾಲೆಯಲ್ಲಿ (Grammar School) ನಮ್ಮ ಎರಡು ಉಪನ್ಯಾಸಗಳಿದ್ದುವು. ಇಲ್ಲಿನ ಹುಡುಗರಿಗೆ ಭೂಮಂಡಲದ ಪೂರ್ವಭಾಗದ ನೃತ್ಯಕಲೆ ತೀರಾ ಹೊಸ ವಿಷಯ. ಪತಿಯವರು ಅವರಿಗಾಗಿ ಮೊದಲು ಭೂಗೋಳದ ವಿಷಯವನ್ನೆತ್ತಿ, ಭಾರತದ ಪಟವನ್ನು ತೋರಿಸಿ, ವಿವರಿಸಿ ನಮ್ಮಲ್ಲಿರುವ ಐದಾರು ವಿಧದ ಶಾಸ್ತ್ರೀಯ ನೃತ್ಯಗಳ ಪರಿಚಯ ಮಾಡಿಕೊಟ್ಟು, ಕೊನೆಗೆ ಅವರ ಕಣ್ಣಮುಂದೆ ನಾವು ಮಾಡಿದ ನೃತ್ಯಗಳ ಮೂಲಕ ನಮ್ಮ ಭಾರತದ ಕಲೆ, ಸಂಸ್ಕೃತಿಯ ಚಿತ್ರಗಳನ್ನು ಅವರ ಮನಸ್ಸಿನಲ್ಲಿ ಮೆಲ್ಲಗೆ ಮೂಡುವಂತೆ ಮಾಡಿದರು. ಉಪನ್ಯಾಸವಾದ ಮೇಲೆ ವಿದ್ಯಾರ್ಥಿಗಳೂ ಅವರ ಶಿಕ್ಷಕರೂ ಒಂದು ಕೋಣೆಯಲ್ಲಿ ಸೇರಿ 'ಪ್ರಶ್ನೆ–ಉತ್ತರ' ಕಾರ್ಯಕ್ರಮವನ್ನು ಏರ್ಪಡಿಸಿದರು. ಈ ಯುವಕರು ನಮ್ಮ ದೇಶದ ಸಂಸ್ಕೃತಿ ಕಲೆಗಳ ವಿಷಯವಾಗಿ ಅನೇಕಾನೇಕ ಪ್ರಶ್ನೆಗಳನ್ನು ಅತಿ ಆಸಕ್ತಿಯಿಂದ ಕೇಳಿದರು. ನಮ್ಮ ದೇಶದ ವಿಷಯವಾಗಿ

ಅವರ ಮನಸ್ಸಿನಲ್ಲಿ ಹುದುಗಿದ್ದ ಅನೇಕಾನೇಕ ತಪ್ಪು ತಿಳುವಳಿಕೆಗಳನ್ನು ತೆಗೆದು ಹಾಕಲು ನಾವು ತುಂಬಾ ಪ್ರಯತ್ನಪಟ್ಟೆವು. ನಮ್ಮ ನೃತ್ಯ ಕಲೆಯ ಕತ್ತಿನ ಚಲನೆ ಅವರಿಗೆ ಆಕರ್ಷಣೀಯವಾಯಿತು. ಒಮ್ಮೆ ಯಾರೋ ಆ ಕತ್ತಿನ ಚಲನೆಯನ್ನು ಕುರಿತು ಹೀಗೆ ಬರೆದಿದ್ದರು: "ಈ ಕತ್ತಿನ ಚಲನೆಗಳು ಮೊದಲು ಲಾಲಿತ್ಯವಾಗಿ ಕಂಡು ಒಂದು ಕೊನೆ ಕೊನೆಗೆ ಮನ ಮುಗ್ಧಕರವಾಗಿ (Hypnotic) ಪರಿಣಮಿಸು ತ್ತವೆ. ಇದು ಅನೇಕ ವರ್ಷಗಳ ಅನನ್ಯ ಸಾಧನೆಯ ಫಲ". ನಮ್ಮ ಅಂದಿನ ಉಪ ನ್ಯಾಸದಿಂದಾಗಿ ಅಲ್ಲಿನ ಯುವಕ ವಿದ್ಯಾರ್ಥಿಗಳು ಖಂಡಿತವಾಗಿಯೂ ಒಂದು ಹೊಸ ಕಲೆಯ ಪರಿಚಯವನ್ನು ಮಾಡಿಕೊಂಡರು.

ಒಮ್ಮೆ ಇಲ್ಲಿನ ಪ್ರಸಿದ್ಧ 'ಲಂಡನ್ ಸಿಂಫನಿ ಆರ್ಕೆಸ್ಟ್ರಾ'ದ (London Symphony Orchestra) 300 ಜನ ಸಂಗೀತಗಾರರಿಗೆ 'ಭಾರತೀಯ ನೃತ್ಯಗಳ ಲ್ಲಿನ ತಾಳ ವೈವಿಧ್ಯ' ವನ್ನು ಕುರಿತು ಒಂದು ವಿಶೇಷ ಉಪನ್ಯಾಸವನ್ನು ಕೊಟ್ಟೆವು. ನಾವು ತಾಳಗಳನ್ನು ತೋರಿಸಿದಂತೆ ಅವರು ಕೈಗಳಿಂದ ಕಾಲುಗಳಿಂದ ತಾಳವನು ತಟ್ಟಿ ಅರ್ಥ ಮಾಡಿಕೊಂಡು ನಮ್ಮ ಭರತ ನಾಟ್ಯದಲ್ಲಿನ ತಾಳ ವೈವಿಧ್ಯವನ್ನು ಮೆಚ್ಚಿದರು. ಭಾರತದಲ್ಲಿ ಒಂದೊಂದು ಕೈ ಒಂದೊಂದು ಪಾದದಿಂದ ಒಮ್ಮೆಯೇ ಬೇರೆ ಬೇರೆ ತಾಳಗಳನ್ನು ಹಾಕಿ, ಮರುತಾಳಕ್ಕೆ ಸರಿಯಾಗಿ ಹಾಡುವ ವಿದ್ವಾಂಸರಿರುವ ರೆಂಬ ವಿಷಯ ಅವರು ನಂಬಲಾರದಂತಿದೆ. ಅಂದು ನಮಗೆ ಅತಿ ಆನಂದದ ದಿನ ವಾಯಿತು, ಏಕೆಂದರೆ ಅಂತಹ ಪ್ರಸಿದ್ಧ ಸಂಗೀತಗಾರರ ಕಲೆಯನ್ನು ನಮ್ಮ ತಾಳ ವೈಚಿತ್ರ್ಯಗಳಿಂದ ಮೆಚ್ಚಿಸಿದೆವು ಎಂದು ನಮಗೆ ಹೆಮ್ಮೆ........

ಇತಿ ನಿಮ್ಮ
ಚಂದಮ್ಮ.

* * * *

ಲಂಡನ್
11 – 5 – 1966

ಮುದ್ದು ಜಯದೇವ್,

ವಿಮಾನ ನಿಲ್ದಾಣದಲ್ಲಿ ನೀರು ತುಂಬಿದ ಕಂಗಳಿಂದ ನಿನ್ನನ್ನು ಬೀಳ್ಕೊಟ್ಟ ಸಮಯದಿಂದ ಇಂದಿನವರೆಗೂ ಮನಸ್ಸು ಸ್ಥಿಮಿತಕ್ಕೆ ಬರಲಿಲ್ಲ. ಅದೂ ವಿಮಾನ ಬಿಡಲು ಒಂದೆರಡು ಗಂಟೆ ತಡವಾದದ್ದು ಮತ್ತು ಯೋಚನೆಗೆ ಕಾರಣವಾಯಿತು. ನಿನ್ನ ವಿಮಾನ ಹಾರುವವರೆಗೆ ನಿಲ್ಲಲಾಗದೆ ಸೆಂಟ್ ಆಲ್ಬನ್ಸಿನಲ್ಲಿ (St. Albans)

ಮೊದಲೇ ಏರ್ಪಾಡಾಗಿದ್ದ ನೃತ್ಯ ಪ್ರದರ್ಶನಕ್ಕೆ ಹೋಗಬೇಕಾಗಿ ಬಂದುದು ನಮ್ಮ ದುರ್ದೈವ. ಆ ಪ್ರದರ್ಶನವನ್ನು ಯಾಂತ್ರಿಕವಾಗಿ ನಡೆಸಿದೆವು. ಮನಸ್ಸು, ಧ್ಯಾನ ವೆಲ್ಲವೂ ನಿನ್ನಲ್ಲಿತ್ತು. ಆ ನಮ್ಮ ಯಾಂತ್ರಿಕ ನೃತ್ಯವನ್ನಾದರೂ ಆ ಪ್ರೇಕ್ಷಕರು ಮೆಚ್ಚಿ ಶ್ಲಾಘಿಸಿದುದು ಒಂದು ಸಮಾಧಾನ........

ಎಷ್ಟು ಕಷ್ಟವಾಯಿತೋ ಮಗು ನಿನಗೆ ಜಿನಿವಾ (Geneva) ನಿಲ್ದಾಣದಲ್ಲಿ, ನಂಬಿಕೆಯಿಟ್ಟ ಜನರು ಸಮಯಕ್ಕೆ ಸರಿಯಾದ ಸಹಾಯವನ್ನು ನಿನಗೆ ನೀಡದೆ! ಭಾರತದಲ್ಲಿ ನಾವು ಕಂಡ ಜನರು ಪಾಶ್ಚಾತ್ಯದಲ್ಲಿ ಅದೆಷ್ಟು ಮಾರ್ಪಾಟಾಗುತ್ತಾರೆ! ಬೆಂಗಳೂರಿನಲ್ಲಿ ನಮ್ಮ ಮನೆಯ ಆತಿಥ್ಯವನ್ನು ತಿಂಗಳುಗಟ್ಟಲೆ ಪಡೆದವರು ನನ್ನ ಮಗು ಅಲ್ಲಿ ಎರಡು ದಿನಕ್ಕಾಗಿ ಬಂದಾಗ ಆಶ್ರಯ ನಿರಾಕರಿಸಿದ ಜನರ ನಡತೆಯನ್ನು ಯೋಚಿಸಿದಂತೆ, ಹೆತ್ತ ಕರುಳಿಗೆ ಸಂಕಟವಾಗುತ್ತದೆ. ಅಂತೂ ನಿನಗೆ ಅಪರಿಚಿತ ರಾದ ಸ್ವಿಸ್ ದಂಪತಿಗಳು ನಿನ್ನನ್ನು ಮಗನಂತೆ ಕಂಡು ನಿನಗೆ ಆಶ್ರಯ ಕೊಟ್ಟರಲ್ಲವೇ? ಕೊನೆಯ ಗಳಿಗೆಯಲ್ಲಿ ಅವರ ಜ್ಞಾಪಕ ನಿನಗೆ ಆದದ್ದು ನಿನ್ನ ವಿವೇಕವೇ ಸರಿ. ಅವರ ಮಗಳು ಇಲ್ಲಿ ನಮ್ಮ ನೃತ್ಯ ಶಿಷ್ಯೆ. "ನನ್ನ ಮಗಳನ್ನು ಕಾಪಾಡಿರಿ" ಎಂದು ನನ್ನಲ್ಲಿ ಕೇಳಿಕೊಂಡು ಹೊರಟ ಆ ತಾಯಿ ನಿನ್ನನ್ನು, ನನ್ನ ಮಗನನ್ನು, ಜಿನೀವಾದಲ್ಲಿ ಕಾಪಾಡಿದುದು ವಿಚಿತ್ರವಲ್ಲವೇ ?........

ನೀನು ಮಿಲಾನ್ ನಗರದಿಂದ ಬರೆದ ಪತ್ರ ಅದ್ಭುತವಾಗಿತ್ತು. ಓದುತ್ತಾ ಆನಂದದಿಂದ ಗಂಟಲು ಕಟ್ಟಿತು. ಮಗೂ....ಎಷ್ಟು ಅಂದವಾಗಿ ಅದನ್ನು ಬರೆದಿದ್ದೀಯೇ! ನಿನ್ನ ಉಚಿತ ಇಂಗ್ಲೀಷು ಭಾಷೆ ಇಂಗ್ಲೀಷು ಜನರನ್ನೂ ನಾಚಿಸುವಂತಿದೆ. ತುಂಬಾ ಹೆಮ್ಮೆಪಟ್ಟೆವು. ದೇವರು ಸದಾ ನಿನ್ನನ್ನು ಕಾಪಾಡಲಿ. ಮಿಲಾನಿನಲ್ಲಿ ನಿನಗೊಬ್ಬರು ಮೈಸೂರಿನವರು ಅಕಸ್ಮಾತ್ ಸಿಕ್ಕಿ ನಿನ್ನನ್ನು ನೋಡಿಕೊಂಡರೆಂದು ಕೇಳಿ ಆಶ್ಚರ್ಯವೂ ಆಯಿತು – ಸಂತೋಷವೂ ಆಯಿತು. ದೇವರು ವಿವಿಧ ರೂಪ ದಿಂದ ಕ್ಲುಪ್ತ ಸಮಯಕ್ಕೆ ಸಹಾಯಕ್ಕೆ ಬರುವರೆಂಬುದಕ್ಕೆ ಇದೊಂದು ನಿದರ್ಶನ. ಜಿನೀವಾದಲ್ಲಿ ಆ ದಯಾಳು ಸ್ವಿಸ್ ದಂಪತಿಗಳು, ಮಿಲಾನಿನಲ್ಲಿ ಈ ಅಪರಿಚಿತ ಮೈಸೂರಿನವರು. ನಿನ್ನ ಪ್ರಯಾಣ ನಿರ್ವಿಘ್ನವಾಗಿ ಸಾಗಲೆಂದು ನಾವು ನಮ್ಮ ಚಿಕ್ಕ ಗಣಪತಿಗೆ ಪ್ರಾರ್ಥಿಸುತ್ತಿದ್ದೆವು. ಜೀವನದಲ್ಲಿ ಸಾಹಸಿಕನಾಗಿ ಧುಮುಕ ಬೇಕೆಂದು ನೀನು ಯಾವಾಗಲೂ ಆಸೆ ಪಡುತ್ತಿದ್ದೆ. ನಿನ್ನ ಜ್ಞಾನ, ತಿಳುವಳಿಕೆ ಮತ್ತು ವಿವೇಕದಿಂದ ನೀನು ಎಲ್ಲಿ ಹೋದರೂ ಗೆದ್ದು ಬರುವೆ ಎಂಬ ಭರವಸೆ ಇದೆ ನನಗೆ. ನಿನಗಿನ್ನೂ 24ನೇ ವಯಸ್ಸು. ನಿನ್ನ ಈ ಚಿಕ್ಕ ಪ್ರಾಯದಲ್ಲೇ ಅಷ್ಟೊಂದು ಪ್ರಯಾಣ ಮಾಡುತ್ತಿರುವೆ ಎಂದು ಅನೇಕರು ಇಲ್ಲಿ ಅಸೂಯೆ ಪಡುವಂತಿದೆ.

ಆವಾಗಾವಾಗ ಬರೆಯುತ್ತಿರು. ಭಾರತ ತಲುಪಿದ ತಕ್ಷಣ ಖಂಡಿತ ಬರೆ.

ಇತಿ ನಿನ್ನ
ಅಮ್ಮ.

* * * * *

ಲಂಡನ್
15 – 5 – 1966

ಮುದ್ದು ಮಕ್ಕಳೇ,

........A. M. C. ನಡೆಸುತ್ತಿರುವ ನಮ್ಮ ನೃತ್ಯ ತರಗತಿಯ ವಿದ್ಯಾರ್ಥಿಗಳ ಸಂಖ್ಯೆ ದಿನಕ್ಕಿಂತ ದಿನ ಹೆಚ್ಚುತ್ತಿದೆ. ಈ ಬೇರೆ ಬೇರೆ ರಾಷ್ಟ್ರಗಳಿಂದ ಬಂದಿರುವ ಈ ವಿದ್ಯಾರ್ಥಿಗಳು ತುಂಬಾ ಶ್ರದ್ಧೆಯಿಂದ ನೃತ್ಯ ಕಲಿತುಕೊಳ್ಳುತ್ತಿದ್ದಾರೆ, ಅವರಿಗೆ ಪಾಠ ಹೇಳಿಕೊಡುವ ಕೆಲಸ ನಮಗೆ ಬಹಳ ಸಂತೋಷದ ಕೆಲಸ. ತರಗತಿಯಲ್ಲಿ ಭಾರತೀಯರು, ಪಾಕಿಸ್ತಾನಿಯರು, ಫ್ರೆಂಚರು, ಚೀನೀಯರು, ಇಂಡೋನೇಷಿಯನರು ಮತ್ತು ಇವರೆಲ್ಲರಿಗಿಂತ ಹೆಚ್ಚಾಗಿ ಬ್ರಿಟಿಷ್ ವಿದ್ಯಾರ್ಥಿಗಳಿದ್ದಾರೆ. ಆದರೆ ಹುಡುಗರ ಸಂಖ್ಯೆ ಕಡಿಮೆ. ಕೆಲವು ವಿದ್ಯಾರ್ಥಿಗಳು ನಮ್ಮ ಎಣಿಕೆಗೆ ಮೀರಿದ ಪ್ರತಿಭೆಯನ್ನು ಪಡೆದಿದ್ದಾರೆ. 'ಅಭಿನಯ' ದ ಅಭಾವವೊಂದೇ ಅವರಲ್ಲಿರುವ ಮುಖ್ಯ ಕೊರತೆ. ಅದಕ್ಕೂ ಕಾರಣಗಳಿವೆ. ನಮ್ಮ ನೃತ್ಯಕಲೆ ಹಿಂದೂಧರ್ಮ, ಪುರಾಣ ಸಂಬಂಧ ವಾದ ಕಥೆಗಳನ್ನು ಒಳಗೊಂಡ ಕಾರಣ ಇಲ್ಲಿನ ಜನತೆಗೆ ಅದು ತೀರ ನೂತನ ವಿಷಯ. ನಮ್ಮ ಕಲೆಯ ತಿರುಳನ್ನು ತಿಳಿಯುವುದೇ ಅವರಿಗೆ ತುಂಬಾ ಕಷ್ಟವಾಗಿದೆ! ಆದರೆ 'ನೃತ್ತ' ವನ್ನು ಯಾವ ವಿದೇಶೀಯನೇ ಆಗಲಿ ಭಾರತೀಯರ ಸರಿಸಮವಾಗಿ ಮಾಡ ಬಲ್ಲ; ಅಂದರೆ ಮೈ ಸಾಧನೆ ಅವರಿಗೆ ಕಷ್ಟದ ಕೆಲಸವಲ್ಲ.

ಈಗಾಗಲೇ ನಮ್ಮ ಇಲ್ಲಿನ ನಾಲ್ಕೈದು ವಿದ್ಯಾರ್ಥಿಗಳು ನಮ್ಮ ಸಹಾಯವಿಲ್ಲದೆ ಕೆಲವು ನೃತ್ತ ಕಾರ್ಯಕ್ರಮಗಳನ್ನು ಮಾಡಲು ತರಬೇತು ಹೊಂದಿದ್ದಾರೆ. ಅಲ್ಲದೆ ದಿನಕ್ಕಿಂತ ದಿನ ಅವರು ಹೆಚ್ಚೆಚ್ಚು ಪ್ರಗತಿ ಪಡೆಯುತ್ತಿರುವುದೂ ಹೆಮ್ಮೆಯ ವಿಷಯ. ಈ ದೇಶವನ್ನು ನಾವು ಬಿಟ್ಟು ಹೋಗುವ ಸಮಯ ಇಂತಹ ಕೆಲವು ವಿದ್ಯಾರ್ಥಿಗಳಾ ದರೂ ನಾವು ಕಲಿಸಿದ ವಿದ್ಯೆಯನ್ನು ಜೀವಂತವಾಗಿಟ್ಟುಕೊಂಡು ನಮ್ಮ ಕಲೆ ಇಲ್ಲಿ ಬೇರೂರುವಂತೆ ಮಾಡಬೇಕೆಂದು ನಮ್ಮ ಸಾಧನೆ. ನಾವವರಿಗೆ ಈ ನಮ್ಮ ಕಲೆ ಯಲ್ಲಿ ಆಸಕ್ತಿ ಹುಟ್ಟುವುದಾಸ್ಫೂರ್ತಿ ಮೂಡುವಂತೆ ಮಾಡಿದ್ದೇವೆ. ನಮ್ಮ ದೇಶದ

ಸಂಸ್ಕೃತಿಯನ್ನು ತಿಳಿಯಬೇಕೆಂಬ ಆಸೆ ಅವರಲ್ಲೀಗ ಆಳವಾಗಿ ಬೇರುಬಿಟ್ಟಿದೆ. ಭಾರತಕ್ಕೆ ಭೇಟಿ ಕೊಡುವ ಸುದಿನ ಎಂದು ಬರುವುದೋ ಎಂಬ ಲವಲವಿಕೆ ಅವರಲ್ಲಿ ಬಲವಾಗಿದೆ. ಇವರಲ್ಲಿ ಕೆಲವರು ಕಲೆಗೋಸ್ಕರ, ಕೆಲವರು ಭಾರತ ದರ್ಶನಕ್ಕಾಗಿ ಸದ್ಯದಲ್ಲೇ ಖಂಡಿತ ಭಾರತಕ್ಕೆ ಪ್ರವಾಸಿಗಳಾಗಿ ಹೋಗಬಹುದೆಂಬ ನಂಬಿಕೆಯಿದೆ. ನಾವೀ ದೇಶವನ್ನು ಬಿಟ್ಟು ಹೋದರೂ ನಮ್ಮ ಕೆಲಸ, ಕಾರ್ಯಕಲಾಪಗಳನ್ನು ಮುಂದುವರಿಸುವ ಒಂದು ವಿದ್ಯಾರ್ಥಿ ಸಂಗಡವನ್ನು ಹಿಂದಕ್ಕೆ ಬಿಟ್ಟು ಹೋಗುವೆವೆಂಬ ಸಮಾಧಾನ, ತೃಪ್ತಿ ನಮಗಿದೆ.

ಕೆಲವು ತಿಂಗಳ ಕಾಲ ದಿನ ರಾತ್ರಿ ದುಡಿದ ಪರಿಣಾಮವಾಗಿ ನಮ್ಮ ನೃತ್ಯ ಪ್ರದರ್ಶನಗಳಲ್ಲಿ ಭಾಗವಹಿಸಲು ಯೋಗ್ಯವಾದ ಒಂದು ಚಿಕ್ಕ ವಿದ್ಯಾರ್ಥಿ ವೃಂದವನ್ನು ತಯಾರಿಸಿದ್ದೇವೆ. ಈ ಧೈರ್ಯದಿಂದ A. M. C. ಯವರು ಈಗಾಗಲೇ ನಮ್ಮ ಮೊದಲ ನೃತ್ಯ ನಾಟಕ ಪ್ರದರ್ಶನದ ಸಮಾಚಾರವನ್ನು ಪ್ರಕಟಿಸಿದೆ! ಇದಕ್ಕನುಸಾರವಾಗಿ ನಾವು 'ಬುದ್ಧೋದಯ' (The Temptation of Buddha) ನೃತ್ಯ ನಾಟಕದ ರಚನೆಯನ್ನು ವಿಶೇಷ ಶ್ರದ್ಧೆ, ಆತುರಗಳಿಂದ ಕೈಕೊಂಡಿದ್ದೇವೆ. ಲಂಡನ್ನಿನಲ್ಲಿ ನೃತ್ಯ ನಾಟಕದ ಪ್ರದರ್ಶನ ಇದೇ ಮೊದಲು ಆಗುವುದಂತೆ! ಇಲ್ಲಿನ ಜನತೆಗೆ ನಮ್ಮ ನೃತ್ಯ ಕಲೆಯ ಬಹುಮುಖ ದರ್ಶನ ಈಗಾಗಲೇ ಆಗಿದೆ. ಆದರೆ ಇದುವರೆಗೆ ಇಲ್ಲಿ ಯಾರೂ ನೃತ್ಯ ನಾಟಕದ ಪ್ರದರ್ಶನ ಕೈಗೊಂಡಿಲ್ಲ. ಆದುದರಿಂದ ಅದೊಂದು ಅಗ್ರಗಾಮಿ ಹಾಗೂ ಸಾಹಸ ಕೃತ್ಯವಾಗುವುದೆಂಬುದರಲ್ಲಿ ಸಂದೇಹವಿಲ್ಲ. ದೇವರು ಅದನ್ನು ಯಶಸ್ವಿಯಾಗಿ ನಡೆಸಿಕೊಡಲಿ ಎಂದು ಪ್ರಾರ್ಥಿಸುತ್ತೇನೆ.........

ಇತಿ ನಿಮ್ಮ
ಅಮ್ಮ .

*   *   *   *   *

ಲಂಡನ್
18 – 5 – 1966

ಮುದ್ದು ಜಯದೇವ,

........ನೀನಿಲ್ಲಿದ್ದಾಗ ನಾವೆಷ್ಟು ಆನಂದದಿಂದ ಇದ್ದೆವು! ನೀನು ಲಂಡನ್ನು ಬಿಟ್ಟು ಹೋದ ಮೇಲೆ ಜೀವನ ನೀರಸವಾಗಿ ಕಾಣುತ್ತದೆ. ಇಂದಿಗೆ ನಿನ್ನನ್ನಗಲಿ 18 ದಿನಗಳಾದುವು. ಇನ್ನೂ ನೀನು ಕಾಗದ ಬರೆಯದೆ ಸುಮ್ಮಗಿದ್ದು ತುಂಬಾ ಕಳವಳಕ್ಕೆ ಕಾರಣವಾಗಿದೆ. ಭಾರತವನ್ನು ತಲುಪಿದ ಕೂಡಲೇ ಬರೆ ಎಂದು ನಾನು ಪದೇ

ಪದೇ ಹೇಳಿಲ್ಲವೆ ? ವ್ಯಾಪಾರ ಸುಂಕದ (Customs) ಪವಡೆಯಿಂದ ಪಾರಾಗಿ ನೀನು ಸುರಕ್ಷಿತವಾಗಿ ಮನೆ ಸೇರಿದ ಸಮಾಚಾರವನ್ನು ಕೇಳಲು ಪ್ರತಿದಿನ ಟಪ್ಪಾಲನ್ನು ಆತ್ಯಾತುರದಿಂದ ಕಾದು ನಿರಾಶೆಗೊಂಡಿದ್ದೇನೆ. ಇವತ್ತು ತಡೆಯಲಾರದೆ ಬರೆಯುತ್ತಿದ್ದೇನೆ. ಇದಕ್ಕೆ ಉತ್ತರವನ್ನು ನಾನು ಕೊಟ್ಟಿರುವ ನಮ್ಮ ಐರ್‌ಲೇಂಡಿನ (Ireland) ವಿಳಾಸಕ್ಕೆ ಬರೆ. ನೀನು ಶಿವದೇವನಿಗಾಗಿ ತೆಗೆದುಕೊಂಡು ಹೋಗಿರುವ ಸಾಮಾನುಗಳೆಲ್ಲವನ್ನೂ ಅವನು ಮೆಚ್ಚಿದನೇ ?........ ಒಪ್ಪಿದನೇ ?........ ತಿಳಿಸು. ಹೆತ್ತವರಿಗೆ ಮತ್ತೊಮ್ಮೆ ಪತ್ರ ಬರೆಯುತ್ತೇನೆ.

—ಇತಿ ನಿನ್ನ
ಅಮ್ಮ.

* * * *

ಲಂಡನ್
7 - 6 – 1966

ಮುದ್ದು ಮಕ್ಕಳೇ,

ಐರ್‌ಲೆಂಡಿನ (Ireland) ಕಿಲ್ಕೆನ್ನಿ (Kilkenny) ಪಟ್ಟಣದಲ್ಲಿ ನಡೆಯುತ್ತಿರುವ 'ಬಿಯರ್ ಫೆಸ್ಟಿವಲ್' ನಲ್ಲಿ (Beer Festival) ಭಾಗವಹಿಸಲು ನಮಗೂ ಕರೆ ಬಂತು. 'ಎಯರ್ ಲಿಂಗಸ್' (Aer Lingus) ವಿಮಾನದ ಮೂಲಕ ನಾವು ಆರು ಮಂದಿ ಭಾರತದ ಜನಪದ ನೃತ್ಯಗಳಲ್ಲಿ ಭಾಗವಹಿಸಿದೆವು. ಇತರ ದೇಶಗಳ ಜಾನಪದ ನೃತ್ಯ ಪಂಗಡಗಳೂ ಅಲ್ಲಿ ಪ್ರದರ್ಶನಕ್ಕಾಗಿ ಬಂದಿದ್ದುವು. ನಮ್ಮ ವಾಸಕ್ಕೆ ಹೊಸತಾಗಿ ತೆರೆಯಲ್ಪಟ್ಟ ಆಧುನಿಕ ಹೋಟೆಲ್ ಒಂದನ್ನು ಕೊಟ್ಟಿದ್ದರು. ನಮ್ಮನ್ನು ರಾಜಮರ್ಯಾದೆಯಿಂದ ನೋಡಿಕೊಂಡರು. ಕಿಲ್ಕೆನ್ನಿಯಲ್ಲಿ ಮೂರು ದಿನಗಳ ಕಾರ್ಯಕ್ರಮವಿತ್ತು. ನಮ್ಮ ನೃತ್ಯಗಳು ಹೊರಗಿನ ಆವರಣದಲ್ಲಿ ಆಗುವಂತೆ ಏರ್ಪಾಡಾಗಿತ್ತು. ರಂಗಸ್ಥಳದಿಂದ ದಿಗಂತದವರೆಗೆ ಚಾಚಿದ ಹಚ್ಚ ಹಸುರಾದ ಏರು ತಗ್ಗುಗಳ ಮೈದಾನವನ್ನು, ಅದರಲ್ಲಿನ ಕೆಲವು ಮರಗಳ ಅಂದವಾದ ದೃಶ್ಯವನ್ನೂ ಕಾಣಬಹುದಾಗಿತ್ತು. ಭಾರತೀಯ ನೃತ್ಯ ಪ್ರದರ್ಶನವನ್ನು ನೋಡದ ಆ ಜನರು ತಂಡ ತಂಡವಾಗಿ ಬಂದು ನಮ್ಮ ನೃತ್ಯಗಳನ್ನು ನೋಡಿ ಆನಂದಿಸಿದರು. ಊರಿಗೆ ಊರೇ ನಮ್ಮ ನೃತ್ಯಗಳ ವಿಚಾರವಾಗಿ ಮಾತನಾಡಿತು! ಕೊನೆಯ ದಿನ ಎಲ್ಲ ನೃತ್ಯ ಪಂಗಡಗಳೂ ಒಟ್ಟಿಗೆ ಸೇರಿ, ಕೈಕೈ ಹಿಡಿದು ಒಂದು ಸಾಮೂಹಿಕ ಹಾಡನ್ನು ಹಾಡುವುದಿತ್ತು. ನನಗಂತೂ ಈ ಸಾಮೂಹಿಕ ಗಾನದಿಂದ ಆನಂದ ಬಾಷ್ಪಗಳುದುರಿದುವು. "ಜಗತ್ತಿನ ಎಲ್ಲ ಜನತೆಯೂ ಒಂದೇ ಅಲ್ಲವೇ? ಏತಕ್ಕಾಗಿ ವೈಮನಸ್ಸು? ಜಗಳಗಳು?"

ಎಂದೆನಿಸಿತು. ಈ ದೊಡ್ಡ ಸಮಾರಂಭದ ಕಾರ್ಯದರ್ಶಿಗಳು ಕೊನೆಯ ವಂದನಾರ್ಪಣೆ ಮಾಡುವಾಗ ನಮ್ಮನ್ನು ಕುರಿತು, "ನಿಮ್ಮ ಅದ್ಭುತವಾದ ಭಾರತೀಯ ನೃತ್ಯಗಳು ನಮ್ಮ ಸಾವಿರಾರು ಜನರ ಕಣ್ಮನಗಳಿಗೆ ಆನಂದ ಕೊಟ್ಟಿವೆ" ಎಂದರು.

ಐರ್‌ಲೆಂಡಿನಲ್ಲಿ ನಮ್ಮ ದಿನಗಳು ವೈಭವಯುಕ್ತವಾಗಿ, ಸಂತೋಷಭರಿತವಾಗಿ ಸಾಗಿದುವು. ಐರಿಷ್ ದೇಶದವರು ನಮ್ಮ ಭಾರತೀಯರ ಕಷ್ಟ ನಷ್ಟ ಅರಿತ ಜನಾಂಗ. ಆದ್ದರಿಂದ ನಮ್ಮನ್ನು ಕಂಡರೆ ಅವರಿಗೆ ಹೆಚ್ಚು ಆದರ, ಆತ್ಮೀಯತೆ. ನಾವಲ್ಲಿರುವಾಗಲೇ ಅವರ ರಾಷ್ಟ್ರಪತಿಯ ಚುನಾವಣೆ ನಡೆಯಿತು. ಡಿ ವೆಲೇರಾ (De Valera) ಆಯರ್ಲೆಂಡಿನ ಪ್ರಜಾರಾಜ್ಯದ ನಿರ್ಮಾತೃಕರು. ತುಂಬು ವಯಸ್ಸಾಗಿದ್ದರೂ, ಅರೆ ಕುರುಡರಾಗಿದ್ದರೂ, ಸ್ವಲ್ಪವೇ ಹೆಚ್ಚಿನ ಮತಗಳಿಂದ ಅವರೇ ಈ ಸಲವೂ ಚುನಾಯಿತರಾದರು. ಚುನಾವಣೆಯ ಸಮಯ ಯಾವ ಗಲಭೆಯೂ ಇರಲಿಲ್ಲ. ಅಲ್ಲಿನ ಪೋಲೀಸರಿಗೆ 'ಗಾರ್ಡಾ' (Garda) ಎಂದು ಹೆಸರು. ಅವರಿಗೆ ಆ ಸಮಯದಲ್ಲಿ ಹೆಚ್ಚಿನ ಯಾವ ಕೆಲಸವೂ ಇರಲಿಲ್ಲ. ಶಾಂತಿಯಿಂದ ಯಾವ ಅಸಮಾಧಾನವೂ ಇಲ್ಲದೆ ಚುನಾವಣೆ ನಡೆಯಿತು. ಎಲ್ಲಿ ನೋಡಿದರೂ 'ಗೇಲಿಕ್' ಲಿಪಿ (Gaelic Script), ಈ ಲಿಪಿಗಾಗಿ ಐರಿಶ್ ಜನರು ಹೆಣಗಾಡುತ್ತಾರೆ. ಆದರೆ ಕೆಲವರು ಗೇಲಿಕ್ ಒಂದು ಭಾಷೆಯೇ ಅಲ್ಲವೆಂದು ಹೇಳುತ್ತಾರೆ.

ಕಿಲ್ಕೆನ್ನಿಯಲ್ಲಿ 'ಬಿಯರ್‌ಟೆಂಟ್' (Beer Tent) ....ಇದರ ಅನುಭವ ನಾವು ಮರೆಯುವಂತಿಲ್ಲ—ಸುಮಾರು ನಾಲ್ಕು ಸಾವಿರ ಜನರು ಹಗಲು ರಾತ್ರಿ ಬಿಯರ್ ಕುಡಿದು ಜಾನಪದ ಹಾಡುಗಳನ್ನು ಸಾಮೂಹಿಕವಾಗಿ, ಗಟ್ಟಿಯಾಗಿ ಹಾಡಿ ಆನಂದಿಸುವ ದೃಶ್ಯ. ಪಾಶ್ಚಾತ್ಯರಿಗೆ ಜೀವನವನ್ನು ಆನಂದದಿಂದ ಅನುಭವಿಸುವ ಅಸಾಧ್ಯ ಶಕ್ತಿಯಿದೆ. ಅದರಲ್ಲೂ ಬಿಸಿಲು ದಿನಗಳಲ್ಲಿನ ಕೊನೆಗೊಳ್ಳದ ಉದ್ದವಾದ ಹಗಲು ದಿನಗಳಲ್ಲಂತೂ ಈ ಜನರಿಗೆ ವಿನೋದಕ್ಕೆ ಬೇಕಾಗುವ ಶಕ್ತಿ ಇರುವುದನ್ನು ಕಂಡು ಆಶ್ಚರ್ಯವಾಗುತ್ತದೆ. ರಾತ್ರಿ 10 ಗಂಟೆಗೂ ತೋಟದಲ್ಲಿ ಕೂತು ಓದಬಹುದು. ಹಗಲು ದಿನಗಳಲ್ಲಿ ದಿನಗಳು ರಾತ್ರಿಯೆಲ್ಲ ಹಾದು ಬರುತ್ತವೆ. ಮಲಗಲು ರಾತ್ರಿಯಿಲ್ಲ. ಕಿಟಕಿಯ ಪರದೆ ಹಾಕಿ ಹಗಲಿನ ಪ್ರಕಾಶ ಮರೆಯಿಸಿ, ಕತ್ತಲು ಮಾಡಿ ಮಲಗಬೇಕು. ವಿರಾಮವಿಲ್ಲದೆ ವಿನೋದಿಸುವ ಈ ಆನಂದೋನ್ಮತ್ತರಿಗೆ ಹಗಲಿರಲಿ, ರಾತ್ರಿಯಿರಲಿ, ಎಲ್ಲ ಸಮಯದಲ್ಲಿಯೂ ನರ್ತನ, ಹಾಡು. ಆಕಾಶದಲ್ಲಿ ಚಂದ್ರನು ಮೂಡಿ ಬಂದರೂ ಹುಣ್ಣಿಮೆ ದಿನಗಳಲ್ಲಿ ಕೂಡ ಹಗಲಿನ ಬೆಳಕಿದ್ದು ಬೆಳದಿಂಗಳು ಎಂಬುದೇ ಇಲ್ಲ. ಚಂದ್ರನ ಆಕಾರವೇ ಇಲ್ಲಿ ಬೇರೆಯಾಗಿರುತ್ತದೆ. ಭಾರತೀಯ ಕವಿಗಳು ಚಂದ್ರ–ಚಕೋರ ವಿಷಯವಾಗಿ ಎಷ್ಟೊಂದು ಕವಿತೆ ಕಟ್ಟುತ್ತಾರೆ. ಕವಿ

ಕಾಣದುದು ರವಿ ಕಾಣನು ಎಂಬುದು ನಿಜ. ಇಲ್ಲಿನ ಕವಿಗಳು ಬೆಳದಿಂಗಳನ್ನು ವರ್ಣಿಸುವ ಬಗೆ ಹೇಗೆ ಎಂಬುದೇ ಪ್ರಶ್ನೆ!

ನಮ್ಮ ಸ್ನೇಹಿತರು ನಮ್ಮನ್ನು ನಗರ ದರ್ಶನಕ್ಕಾಗಿ ಕರೆದುಕೊಂಡು ಹೋದರು. ಟಿಪ್ಪರರಿಯನ್ನು (Tipperary) ದಾಟಿ ಹೋದಂತೆ ಶ್ರೀ ಕೈಲಾಸಂರವರ ಜ್ಞಾಪಕ ಬಂದಿತು. ನಮ್ಮ ಚಿಕ್ಕಂದಿನಲ್ಲಿ ಅವರು ನಮ್ಮ ತಂದೆ ತಾಯಿಯವರ ಆಹ್ವಾನ ವನ್ನು ಮನ್ನಿಸಿ ನಮ್ಮ ಮನೆಯಲ್ಲಿ ಕೆಲವು ದಿನಗಳನ್ನು ಕಳೆದಾಗ ಟಿಪ್ಪರರಿ ಹಾಡನ್ನು ಹಾಡಿ ನಮ್ಮನ್ನು ರಂಜಿಸುತ್ತಿದ್ದರು. (ಅದೇ ಹಾಡು ಅವರ 'ತಿಪ್ಪಾರಹಳ್ಳಿ' ಹಾಡಾ ಯಿತು) ಆ ಹಾಡು ನಮಗೆಲ್ಲ ಒಂದು ವಿನೋದವಾಗಿತ್ತು. ಈಗ ನಾವು ಸ್ವತಃ ಆ ಊರನ್ನು ಹಾದು ಹೋಗುತ್ತಿದ್ದಂತೆ ಕನಸೋ, ನನಸೋ ಎಂಬಂತಾಯಿತು. ಹಾದಿಯುದ್ದಕ್ಕೂ ಚಿಕ್ಕ ಚಿಕ್ಕ ಉಪಹಾರ ಗೃಹಗಳು (Inns) ಹಾಗೂ ಪಾನ ಮಂದಿರಗಳು. ಬಿಸಿಲು ದಿನಗಳಲ್ಲಿ ಊರಜನರೆಲ್ಲ ಮನೆಯಾಚೆಯೇ ಕಾಲ ಕಳೆದು ಹೊರಾಂಗಣದ ವೃಕ್ಷಗಳ ನಡುವೆ, ನೆರಳಲ್ಲಿ, ಸಾಮೂಹಿಕ ನೃತ್ಯಗಳನ್ನು ಮಾಡುವ ಪದ್ಧತಿ. ದಾರಿಯುದ್ದಕ್ಕೂ ಕುದುರೆಗಳನ್ನು ಬೆಳಸಿ, ಸಾಕುವ ದೊಡ್ಡ ದೊಡ್ಡ ಮೈದಾನಗಳು. ಜೂಜಿನ ಕುದುರೆಗಳಿಗೆ ಈ ದೇಶ ಪ್ರಸಿದ್ಧಿ.

ನಮ್ಮನ್ನು ಸ್ವಾಗತಿಸುವಾಗ, 'ಸುಸ್ವಾಗತಂ' ಎಂದು ದೇವನಾಗರೀ ಲಿಪಿಯಲ್ಲಿ ಬರೆದ ತೋರಣ ಕಂಡು ಆಶ್ಚರ್ಯದೊಂದಿಗೆ ಆನಂದವೂ ಆಯಿತು. ದಾರಿಯಲ್ಲಿ ನಾವು ನಡೆಯುತ್ತಿರುವಾಗ ಈ ಐರಿಷ್ ಜನರು ತಮ್ಮ ವಾಹನಗಳನ್ನು ನಿಲ್ಲಿಸಿ ನಮ್ಮ ಕ್ಷೇಮ ಸಮಾಚಾರಗಳನ್ನು ತಿಳಿದುಕೊಳ್ಳುತ್ತಿದ್ದರು. "ನೀವು ಸುಖವಾಗಿದ್ದೀರಾ? ನಿಮಗೇನು ಸೌಕರ್ಯ ಬೇಕಿದ್ದರೂ ನಮ್ಮನ್ನು ಕೇಳಿ ಪಡೆಯಿರಿ!" ಎಂದು ಆದರ ದಿಂದ ವಿಚಾರಿಸುತ್ತಿದ್ದರು. ಹಾಗೆಯೇ ಕ್ಯಾಮರಾ ಇದ್ದ ಜನರು ನಮ್ಮ ಫೋಟೋ ಗಳನ್ನು ತೆಗೆಯುತ್ತಿದ್ದರು. ಅನೇಕರು ನಮ್ಮ ಆಟೋಗ್ರಾಫ್‌ಗಳನ್ನು (Autograph) ಕೇಳುತ್ತಿದ್ದರು. "ಜಗತ್ತಿನಲ್ಲಿ ಸೀರೆಯಂತಹ ಉಡುಪನ್ನು ಮೀರಿಸುವ ಬೇರೆ ಪೋಷಾಕು ಇಲ್ಲ!" ಎಂದು ಅವರ ಹೇಳಿಕೆ! ಇಷ್ಟಾಗಿ ನಮ್ಮ ಪಂಗಡದಲ್ಲಿ ಅಪ್ಪಟ ಭಾರತೀಯರೇ ಇದ್ದಿಲ್ಲ—ನಮ್ಮಿಬ್ಬರನ್ನು ಬಿಟ್ಟು! ವಿವಿಧ ರಕ್ತದ ಅಂತರರಾಷ್ಟ್ರೀಯ ನಮ್ಮ ಶಿಷ್ಯಂದಿರು ಭಾರತದ ನೃತ್ಯವನ್ನು ಮಾಡಿ, ಭಾರತೀಯರಂತೆಯೇ ನಡೆದು ಕೊಳ್ಳುತ್ತಿದ್ದುದು ನಮ್ಮ ಪುಣ್ಯ.

ಬೆಲ್‌ಫಾಸ್ಟಿನಲ್ಲಿ (Belfast) ಭಾರತೀಯ ನೃತ್ಯಗಳನ್ನು ನೋಡದೆ ಕಾಲು ಶತಮಾನವಾಗಿತ್ತಂತೆ! ನಮ್ಮ ಪ್ರದರ್ಶನವನ್ನು ನಗರದ ದೊಡ್ಡ ಮಂಟಪದಲ್ಲಿ ಏರ್ಪಡಿಸಿದ್ದರು. ಹಾಗೂ ವರ್ತಮಾನ ಪತ್ರಿಕೆಗಳಲ್ಲಿ ಅದನ್ನು ಕುರಿತು ಅತಿಶಯ ವಾದ ಜಾಹೀರಾತುಗಳು ಬರುತ್ತಿದ್ದುವು. ನಮ್ಮನ್ನು ಸೌಹಾರ್ದತೆಯಿಂದ ಸ್ವಾಗತಿಸಿ

ದರು. ನಮ್ಮ ಜೀವನದಲ್ಲೇ ಅದು ಒಂದು ಸಂತಸಪೂರ್ಣ ಪರ್ವಕಾಲವಾಗಿತ್ತು. ಪ್ರದರ್ಶನದ ಮಾರನೆಯ ದಿನ ನಮಗಾಗಿ ಒಂದು ಸ್ವಾಗತ ಸಮಾರಂಭವನ್ನು ಏರ್ಪಡಿಸಿದ್ದರು. ನಮ್ಮನ್ನು ಭೇಟಿ ಮಾಡಿ ಮಾತನಾಡಿಸಿದ ನಗರದ ಗಣ್ಯ ವ್ಯಕ್ತಿಗಳೂ ಇತರ ಆಹ್ವಾನಿತ ಅತಿಥಿಗಳೂ ನಮ್ಮ ಕಲೆಯ ಪರಿಣಾಮದಿಂದಾಗಿ ಸ್ಥಂಭೀಭೂತರಾಗಿದ್ದರು. ನಮ್ಮ ಭಾರತೀಯ ನೃತ್ಯಗಳು ತಮ್ಮದೇ ಆದ ವಾತಾವರಣವನ್ನೂ, ತಮ್ಮದೇ ಆದ ಜಗತ್ತನ್ನೇ ಕಲ್ಪಿಸಿಕೊಳ್ಳುವ ಶಕ್ತಿಯುಳ್ಳದ್ದಾಗಿದೆ ಎಂದು ಅಭಿಪ್ರಾಯಪಟ್ಟರು. “ಯಾವ ಆಡಂಬರವೂ ಇಲ್ಲದಿರುವ ಒಂದು ಸಾಧಾರಣ ರಂಗಸ್ಥಳದ ಮೇಲೆ ಇಬ್ಬರು ಕಲಾಪರಿಣತರು–ಯು. ಎಸ್. ಕೃಷ್ಣರಾವ್ ಮತ್ತು ಚಂದ್ರಭಾಗಾ ದೇವಿ–ನಿನ್ನೆ ರಾತ್ರಿ ಎರಡು ಗಂಟೆಗಳ ಕಾಲ ತಮ್ಮ ಕಲೆಯಿಂದ ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಿದರು. ಇದೊಂದು ನಮಗೆ ಅಪೂರ್ವ ಸಂದರ್ಭವಾಗಿತ್ತು. ಇವರ ನೃತ್ಯಗಳಂತೂ ಸಾಮ್ಯರಹಿತ ಮೋಹಕತೆಯಿಂದ ವಿಶಿಷ್ಟತೆಯನ್ನು ಪಡೆದಿದ್ದವು. ಚಲನೆಗಳಲ್ಲೂ, ನೃತ್ಯ ಪ್ರಮಾಣದಲ್ಲಿಯೂ, ಅವು ಅತ್ಯಂತ ಸುಂದರವಾಗಿದ್ದವು. ಭಾರತೀಯ ನೃತ್ಯಗಳಲ್ಲಿನ ಲಾವಣ್ಯ ಹಾಗೂ ಸೌಂದರ್ಯ ಶತಶತಮಾನಗಳಿಂದ ದಾಯಿತ್ವವಾಗಿ ಬಂದಿರುವ ಪಾರಂಪರ್ಯ ನಿಧಿ. ಅಲ್ಲದೆ ಈ ಅನುಪಮ ಕಲೆ ಅಲ್ಲಿಯ ಜನತೆಯ ಒಂದು ಲಕ್ಷಣ ಸೂಚಕವಾಗಿದೆ.....ಪ್ರತೀಕಾತ್ಮ್ಯತೆಯನ್ನು ಪಡೆದಿದೆ....” ಎಂದು ಪತ್ರಿಕೆ ಸಾರಿತು.

ಬೆಲ್‌ಫಾಸ್ಟಿನಲ್ಲಿ ನಾವು ಎರಡು ಟಿ. ವಿ. ಪ್ರದರ್ಶನಗಳನ್ನು ಕೊಟ್ಟೆವು. ಅವುಗಳಲ್ಲಿ ಒಂದು ನಾವು ಪ್ರದರ್ಶನ ಕೊಡುತ್ತಿದ್ದ ಹಾಗೆ ಚಿತ್ತರಿಸಲ್ಪಟ್ಟಿತು. ಅದನ್ನು ನೋಡಿದ ಜನರು ಮತ್ತೆ ನಮ್ಮನ್ನು ರಂಗಮಂಟಪದ ಮೇಲೆ ಕಂಡಾಗ ನಮ್ಮ ನಯನ ಮನೋಹಾರಿ ವರ್ಣಪೂರ್ಣ ವೇಷಭೂಷಣಗಳನ್ನು ನೋಡಿ, ಇನ್ನೂ ಮೆಚ್ಚಿದರು.

ಬೆಲ್‌ಫಾಸ್ಟಿನಿಂದ ನಾವು ಡಬ್ಲಿನ್ (Dublin) ನಗರಕ್ಕೆ ಪ್ರಯಾಣ ಮಾಡಿದೆವು. ಅಲ್ಲಿ ನಮ್ಮ ಅರ್ಧಗಂಟೆ ಟಿ. ವಿ. ಪ್ರದರ್ಶನದ ಕಾರ್ಯಕ್ರಮವೊಂದು ಮಾತ್ರ ಇತ್ತು. ಭಾರತೀಯ ನೃತ್ಯಗಳ ತಿರುಳೆಲ್ಲವನ್ನೂ ಪರಿಚಯ ಮಾಡಿ ಕೊಡುವ ಕಾರ್ಯಕ್ರಮ ಅದು. ತುಂಬಾ ಜವಾಬ್ದಾರಿಯುತ ಹೊಣೆ....ನಾವೂ ನಮ್ಮ ಶಿಷ್ಯೆಯರೂ ಅದು ಮುಗಿಯುವ ವೇಳೆಗೆ ತುಂಬಾ ದಣಿದಿದ್ದೆವು. ಆದರೆ....ಅದೇ ಸಂಜೆ.... ನಮ್ಮ ಭಾರತದ ರಾಯಭಾರಿ ತಮ್ಮ ನಿವಾಸದಲ್ಲಿ ನಮಗಾಗಿ ಏರ್ಪಡಿಸಿದ ಸತ್ಕಾರ ಕೂಟದಲ್ಲಿ ಆ ಆಯಾಸವೆಲ್ಲ ಮರೆಯಾಯಿತು. ಅಲ್ಲಿ ಬಂದ ಭಾರತೀಯರು ನಮ್ಮನ್ನು ಆತ್ಮೀಯತೆಯಿಂದ ಕಂಡು ನಮಗೆ ನಗರದಾಚೆಯಿರುವ ಚೇತೋಹಾರಿ ನಿಸರ್ಗ ಶ್ರೀಯ ದರ್ಶನವನ್ನು ಸಂತೋಷದಿಂದ ಮಾಡಿಕೊಟ್ಟರು. ಕರಾವಳಿಯ ತನಕ ಇದ್ದ ಎಲ್ಲ ಪ್ರೇಕ್ಷಣೀಯ ಸ್ಥಳಗಳನ್ನು ಉತ್ಸಾಹಪೂರ್ವಕವಾಗಿ ಮೈತ್ರಿಯಿಂದ

ತೋರಿಸಿದರು. ಬಹುಶಃ, ಭಾರತೀಯರ ಸಂಪರ್ಕವಿಲ್ಲದೆ ಅವರೂ ಬೇಸತ್ತಿರಬೇಕು. ಅವರು ಹೆಚ್ಚಾಗಿ ಅಲ್ಲಿನ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿರುವ ವೈದ್ಯಕೀಯ ವೃತ್ತಿಯ ತರುಣರಾಗಿದ್ದರು. ಭಾರತೀಯರ ಭೇಟಿಗೆ ಅವರು ಹಾತೊರೆಯುತ್ತಿದ್ದರು.

........ಅಂದ ಹಾಗೇ........ನಾವು ಎಲೆ ಅಡಿಕೆ ಹಾಕಿಕೊಳ್ಳದೆ ಅದೆಷ್ಟೋ ತಿಂಗಳುಗಳಾಗಿ ಬಿಟ್ಟಿದ್ದವು. ಅಂದು ನಮ್ಮ ಭಾರತೀಯ ರಾಯಭಾರಿಗಳು ಹೆಮ್ಮೆಯಿಂದ ನಮಗೆ ಎಲೆ ಅಡಿಕೆ ಕೊಟ್ಟು ಸಂತೋಷಪಟ್ಟರು. ಅದರಿಂದ ನಮಗಾದ ಆನಂದ!........

ಡಬ್ಲಿನ್ ನಗರ ವೈದ್ಯಕೀಯತೆಗೆ, ಅದರಲ್ಲೂ ಶಸ್ತ್ರ ಚಿಕಿತ್ಸೆ ಮತ್ತು ಹೆಂಗಸರ ವ್ಯಾಧಿಗಳ ಚಿಕಿತ್ಸೆಗೆ (Gynaecology) ತುಂಬಾ ಪ್ರಸಿದ್ಧಿ ಪಡೆದಿದೆ.

ಜಗತ್ತಿನಲ್ಲಿಯೇ ಹೆಚ್ಚು ಕುಡುಕರು ಐರ್ಲೆಂಡಿನಲ್ಲಿ ಇರುವರೆಂದು ನಮ್ಮ ಸ್ನೇಹಿತರೊಬ್ಬರು ನಮಗೆ ತಿಳಿಸಿದರು. ಅಲ್ಲದೆ, ಅಲ್ಲಿ ಅಕ್ಷರಸ್ಥರು ಶೇಕಡಾ ನೂರರಷ್ಟು ಇದ್ದರೂ ಅವರ ಐ. ಕ್ಯೂ. (I. Q. – ಬುದ್ಧಿ ಚಾತುರ್ಯದ ಮಾನ) ಅತಿ ಕಡಿಮೆಯಂತೆ. ಇದು ಕುಡುಕತನದಿಂದ ಇರಬಹುದು. ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಸ್ಥಳ ಸೌಕರ್ಯ ನೀಡುವುದರಲ್ಲಿ ಈ ದೇಶ ಇತರ ಎಲ್ಲಾ ದೇಶಗಳನ್ನು ಮೀರಿಸಿದೆಯಂತೆ. ಅಲ್ಲದೆ ಜನರಿಗೆ ಸಮತೋಲ (Balanced) ಆಹಾರ ಒದಗಿಸುವುದರಲ್ಲಿಯೂ ಈ ದೇಶ ಮುಂದಾಳುವಂತೆ. ಆದರೆ ಇಲ್ಲಿ ಮಾನಸಿಕ ಅಸ್ವಸ್ಥತೆಯಿಂದಾಗಿ ನರಳುವವರ ಸಂಖ್ಯೆಯೂ ಅತಿಯಾಗಿದೆಯಂತೆ. ಐರ್ಲೆಂಡ್ ಪ್ರಜಾರಾಜ್ಯದಲ್ಲಿ ಶೇಕಡಾ ಎಂಭತ್ತು ಕೆಥೋಲಿಕ್ (Catholics) ಪಂಗಡದವರಂತೆ. ಉತ್ತರ ಐರ್ಲೆಂಡಿನಲ್ಲಿ ಪ್ರೊಟೆಸ್ಟಾಂಟ್ (Protestants) ಪಂಗಡದವರು ಶೇಕಡಾ ಅರವತ್ತು, ಕೆಥೋಲಿಕರು ಶೇಕಡಾ ನಲವತ್ತು. ಜಾತಿ ಮತದಿಂದಾಗಿ ಐರ್ಲೆಂಡಿನ ಈ ಎರಡು ಭಾಗಗಳಲ್ಲಿ ತುಂಬಾ ಅಶಾಂತಿಯಿದೆ. ನಮ್ಮ ಭಾರತ–ಪಾಕಿಸ್ತಾನಗಳೊಳಗಿರುವ ಸಂಬಂಧ ವ್ಯವಹಾರಗಳಲ್ಲಿರುವಂತೆ........ಇವೆಲ್ಲ ಸಂಗತಿಗಳನ್ನು ಅಲ್ಲಿನ ನಮ್ಮ ಭಾರತೀಯ ಮಿತ್ರರು ನಮಗೆ ತಿಳಿಸಿದರು.

ಅಂತೂ ಐರ್ಲೆಂಡ್ ದೇಶವನ್ನೂ ನೋಡಿಕೊಂಡು ಬಂದೆವು.—

ಇತಿ ನಿಮ್ಮ
ಅಮ್ಮ.

* * * *

ಲಂಡನ್
20-6-1966

ಮುದ್ದು ಶಿವದೇವ್,

ನೀನು ಫೈನಲ್ ಬಿ. ಇ. ನಲ್ಲಿ ನಾಲ್ಕನೇ ರ್‍ಯಾಂಕ್ ಪಾಸಾದ ಸಮಾಚಾರ ಕೊಟ್ಟ ತಂತಿ ನಾವು "ಡರ್‌ಹೆಮ್" ಗೆ (Durham) ಹೋದಾಗ ಲಂಡನ್ನಿಗೆ ಬಂತಂತೆ! ಪ್ರತಿದಿನವೆಂಬಂತೆ ಆ ಶುಭ ಸುದ್ದಿಗೆ ಕಾಯುತ್ತಿದ್ದೆವು. ಲಂಡನ್ ಸೇರಿದ ತಕ್ಷಣ ರೈಲು ನಿಲ್ದಾಣದಿಂದಲೇ ಅಂಗಡಿಯವರ ಮನೆಗೆ ಫೋನ್ ಮಾಡಿ ಸಮಾಚಾರ ಪಡೆದೆವು! ನಾವಿಬ್ಬರೂ ನೀನು ಪಡೆದ ರ್‍ಯಾಂಕಿಗೆ ನಿಜವಾಗಿ ಕುಣಿದೆವು! ನೀನು ಈಗ ಪದವೀಧರನಾದೆ! ಪರಿಪೂರ್ಣ ಇಂಜಿನಿಯರ್ ಆದೆ! ನಿನ್ನೆ ತಾನೇ ಅಂಬೆಗಾಲಿಕ್ಕಿ ಓಡುತ್ತಿದ್ದ ನನ್ನ ಮಗು ಶಿವದೇವ್ ಇಂದು ದೊಡ್ಡ ಇಂಜಿನಿಯರ್ ಆಗಿದ್ದಾನೆ ಎಂದು ನಂಬಲಾರೆ. ಹೆಮ್ಮೆಯಿಂದ ನನ್ನ ಹೃದಯವೇ ಬಿರಿಯುತ್ತಿದೆ! ಹೋದ ಏಳು ವರ್ಷಗಳಿಂದಲೂ ನೀನು ಪ್ರತಿವರ್ಷ ರ್‍ಯಾಂಕ್ ಪಡೆಯುತ್ತ ಬಂದಿರುವುದು ಸಣ್ಣಮಾತಲ್ಲ ಮಗು! ನೀನು ಮೊದಲನೇ ರ್‍ಯಾಂಕ್ ಪಡೆಯುವೆ ಎಂದಿದ್ದೆ. ನಿನಗಿಂತ ಬುದ್ಧಿವಂತ ಹುಡುಗರೂ ಇದ್ದಾರೆಯೇ ಎಂದು ಸ್ವಾರ್ಥ ಕೇಳುತ್ತಿದೆ ನನಗೆ! ದೇವರು ನಿನಗೆ ಯಾವುದಕ್ಕೂ ಕಮ್ಮಿ ಮಾಡದಿರಲಿ ಎಂದು ಪ್ರಾರ್ಥಿಸುತ್ತೇವೆ.

ಇನ್ನು ನೀನು ಜೀವನಕ್ಕೆ ಮೊದಲ ಹೆಜ್ಜೆ ಹಾಕಲಿರುವೆ. ಯಾವುದನ್ನು ಈಗ ನೀನು ನಿರ್ಧರಿಸುತ್ತೀಯೋ ಅದು ಮುಖ್ಯ. ನಿನ್ನ ಶಾಂತ ಸ್ವಭಾವ, ತಿಳುವಳಿಕೆಯ ಆಳ ನಿನ್ನನ್ನು ಸರಿಯಾದ ದಾರಿಗೆ ತಲುಪಿಸುವುದರಲ್ಲಿ ಖಂಡಿತ ಸಂಶಯವಿಲ್ಲ. ನೀನು ನಮಗೊಬ್ಬ ಆದರ್ಶ ಪುತ್ರ. ಅಂತೆಯೇ ನೀನು ಇತರರಿಗೂ ಆದರ್ಶನಾಗಿ ಸದಾ ಸುಖವನ್ನು ಕೊಡುವಂತಾಗಲಿ! ನಿನಗಿರುವ ಜ್ಞಾನ ಸಂಪಾದನೆಯ ಆತುರತೆ ಒಂದಾನೊಂದು ದಿನ ನಮ್ಮ ದೇಶಕ್ಕೆ ಕೀರ್ತಿ ತರುವಂತಾಗಲಿ! ಇಂತಹ ಸಮಯದಲ್ಲಿ ನಿನ್ನಿಂದ ದೂರವಿರುವುದು ಬೇಸರವಾಗುತ್ತದೆ. ನಿನ್ನನ್ನು ಅಪ್ಪಿ ಮುದ್ದಿಡಬೇಕೆನಿಸುತ್ತದೆ. ಈಗ ನೀನು ಪದವೀಧರನಾಗಿ ಸ್ವತಂತ್ರನಾದೆ. ನೀನು M. E. ಮಾಡು ಮಗೂ, ಕೆಲಸಕ್ಕೆ ಸೇರಬೇಡ. ಒಮ್ಮೆ ಕೆಲಸಕ್ಕೆ ಸೇರಿದರೆ ವ್ಯಾಸಂಗ ದೂರವಾಗುತ್ತದೆ. ಜಯದೇವನು Ph. D. ಮಾಡಿಲ್ಲವೆಂದು ಇಂದಿಗೂ ಬೇಸರ ಪಡುತ್ತಿದ್ದಾನೆ. ನಿನಗೆ ಅಂತಹ ನಿರಾಶೆ ಆಗದಿರಲಿ. ನಿನ್ನ ಯಶಸ್ಸಿಗೆ ಕೃತಜ್ಞತೆ ತೋರಿ ನಮ್ಮ ಪುಟ್ಟ ಗಣಪತಿಗೆ ಹಣ್ಣು ಕಾಯನ್ನು ಅರ್ಪಿಸಿದೆವು. ಫೋಟೋದಲ್ಲಿನ ನಿನ್ನನ್ನು ಮುದ್ದಿಟ್ಟೆವು.

ನಿನ್ನ ಓದು ಮುಗಿದು ಮುಂದಕ್ಕೆ ನಿನ್ನ ಜೀವನವನ್ನು ಸ್ವತಂತ್ರವಾಗಿ ನಡೆಸುವ ದಿನ ಬಂದಂತೆ, ನಿನ್ನ ಅಣ್ಣನ ಬಾಳಿನಲ್ಲಿ ಹೆಣ್ಣೊಂದು ಬರಲಿ ಎಂದು ಆಶಿಸು

ತ್ತೇನೆ. ಮನೆಗೆ ಹಿಂತಿರುಗಿದ ಮೇಲೆ ಜಯದೇವನ ಮದುವೆಯ ಏರ್ಪಾಡು ಮಾಡ ಬೇಕು.

ಈಗ ನಮ್ಮ ಕಲಾಜೀವನ ಫಲಭರಿತವಾಗಿದೆ. ನಮ್ಮ ಪಾಶ್ಚಾತ್ಯ ಪ್ರವಾಸ ನಮಗೆ ಒಳ್ಳೇ ಬುದ್ಧಿ ಹೇಳಿಕೊಟ್ಟಿದೆ. ಯಥೇಷ್ಟ ಯಶಸ್ಸು ಬಂದಿದೆ. ಪತ್ರಿಕೆ ಗಳೂ ಸಾರ್ವಜನಿಕರೂ ನಮಗೆ ತೃಪ್ತಿಯಾಗುವಂತೆ ಹೊಗಳಿದ್ದಾರೆ. ಆದರೆ ನಮ್ಮ ಜೀವನದಲ್ಲಿ ಅದರಿಂದ ಹೆಚ್ಚಾದ ಪರಿಣಾಮವಿಲ್ಲ. ಇದೆಲ್ಲವೂ ನಶ್ವರ ಎಂಬ ಸತ್ಯ ನಮಗೆ ಗೊತ್ತಾಗಿದೆ. ಇಂದು ಜನರು ಕೈತುಂಬಾ ಚಪ್ಪಾಳೆ ತಟ್ಟುತ್ತಾರೆ. ನಾಳೆ ಅದೇ ಜನರು ನಮ್ಮನ್ನು ದಾರಿಯಲ್ಲಿ ಕಂಡರೆ ವಿಚಾರಿಸುವುದಿಲ್ಲ! ಕಲೆ ಒಂದು ಹುಚ್ಚು. ಆ ಹುಚ್ಚಿನ ಅಮಲಿನಲ್ಲಿ ಎಲ್ಲವೂ ಸೇರಿಕೊಂಡಿದೆ........

ಇತಿ ನಿನ್ನ
ಅಮ್ಮನ
ಆಶೀರ್ವಾದಗಳು.

* * * *

ಲಂಡನ್
23 – 6 – 1966

ಮುದ್ದು ತಂದೆಯೇ,

........ಲಿಂಕನ್ (Lincoln) ಎಂಬ ನೊರ್ಮನರ (Norman) ಮಧ್ಯಗತಿ ಕಾಲದ (Medieval) ಪಟ್ಟಣದಲ್ಲಿ ನಮ್ಮ ನೃತ್ಯ–ಉಪನ್ಯಾಸ ಕ್ರಮವಾಯಿತು. ಲಿಂಕನ್ ಊರಿನ ಸುತ್ತಲೂ ನೊರ್ಮನರ ಹಳೆಯ ಮಹಾದ್ವಾರಗಳೂ, ಗೋಡೆಗಳೂ, ಮಾರ್ಗಗಳೂ ಇವೆ. ಅಲ್ಲಿನ ಕಲಾ ಸಂಘವೊಂದು ನಮ್ಮನ್ನು ಸ್ವಾಗತಿಸಿತ್ತು; ಒಂದು ಅಂದವಾದ ಮಂದಿರದಲ್ಲಿ ನಮ್ಮ ನೃತ್ಯ–ಉಪನ್ಯಾಸ ಏರ್ಪಡಿಸಲಾಗಿತ್ತು. ನಾನು ನರ್ತಿಸುತ್ತಿರುವಾಗ ದೀಪದ ಬೆಳಕು ನನ್ನ ಮೂಗಿನ ವಜ್ರದ ಮೂಗುತಿಯ ಮೇಲೆ ಬಿದ್ದು ಫಳಫಳಿಸುವುದನ್ನು ನೋಡಿ ಪ್ರೇಕ್ಷಕರು ಆಶ್ಚರ್ಯಚಕಿತರಾದರಂತೆ. ಉಪನ್ಯಾಸ ಎಲ್ಲ ಮುಗಿದ ಮೇಲೆ "ನಿಮ್ಮ ಮೂಗನ್ನು ನಿಜವಾಗಿ ಚುಚ್ಚಿದ್ದಾರೆಯೇ?" ಎಂದು ಭಯಾಕ್ರಾಂತರಾಗಿ ಕೇಳಿದರು. ಅಜ್ಜಿಯ ಬಲವಂತಕ್ಕೆ ನನಗೆ ನನ್ನ 9ನೆಯ ವರ್ಷಕ್ಕೇನೇ ಮೂಗು ಚುಚ್ಚಿದರು, ಎಂದು ಹೇಳಿದಾಗ ಅವರಿಗೆ ಆಶ್ಚರ್ಯ ವಾಯಿತು. ಭಾರತ ದೇಶದ ವಿಷಯ ಅವರಿಗೆ ಏನು ಅಭಿಪ್ರಾಯವಾಯಿತೋ!

ಭರತನಾಟ್ಯದ ಸಾಂಪ್ರದಾಯಿಕ ವೇಷಭೂಷಣ, ಒಡವೆ ವಸ್ತುಗಳನ್ನು ನೋಡಿ ಅವರು ತುಂಬಾ ಹರ್ಷಗೊಂಡರು.

ನಮ್ಮನ್ನು ಆಹ್ವಾನಿಸಿದ ಮಹನೀಯರು ನಮಗೆ ಲಿಂಕನ್ ನಗರದ ದರ್ಶನ ವನ್ನಿತ್ತರು. ಲಿಂಕನ್ ಅಂದವಾದ ಊರು. ಸಣ್ಣ ಪುಟ್ಟ ಮಾರ್ಗಗಳಿಂದಲೂ ಏರು–ತಗ್ಗುಗಳಿಂದಲೂ ಕೂಡಿತ್ತು ಆ ಊರು. ಇಲ್ಲಿ 320 ಅಡಿ ಎತ್ತರವಿರುವ ಒಂದು ಪ್ರಖ್ಯಾತ 'ಕೆಥಿಡ್ರಲ್' (Cathedral) ದೇವಾಲಯ ಇದೆ. 11ನೆಯ ಶತಮಾನದ ಹಳೆಯ, ವಿಸ್ತಾರವಾದ, ಮಜಬೂತಿನ ದೇವಾಲಯ. ಅಲ್ಲಿನ ಸರಳ ಜನರ ನಿತ್ಯ ಜೀವನವನ್ನು ಅಧಿಕಾರಯುಕ್ತವಾಗಿ ಅಭಯದ ಹಕ್ಕಿ ನೋಟದಿಂದ ನೋಡುವಂತಿದೆ ಅದು. ಅದನ್ನು ನೋಡುತ್ತ ನಮಗೆ ತಂಜಾವೂರಿನ ಶ್ರೀ ಬೃಹದೀಶ್ವರ ದೇವಾಲಯದ ನೆನಪಾಯಿತು – ಒಳಗೆ ಹೋದೊಡನೆ ಅದೇ ಬಾವಲಿಗಳ, ಪಾರಿ ವಾಳಗಳ ವಾಸನೆ. ಕೆಥಿಡ್ರಲ್‌ನ ಗರ್ಭಗುಡಿಯ ಪಕ್ಕದಲ್ಲಿ ಹೆಸರಾಂತ 'ಮ್ಯಾಗ್ನ ಕಾರ್ಟಾ' ವನ್ನೂ (Magna Carta ರಾಜ್ಯದ ಪ್ರಜೆಗಳ ಒತ್ತಾಯದಿಂದ ಅವರ ಹಕ್ಕು ಬಾಧ್ಯತೆಗಳನ್ನು ಸ್ಥಿರಗೊಳಿಸಲು 'ಕಿಂಗ್ ಜಾನ್' (King John) 1215) ರಲ್ಲಿ ರನ್ನಿಮೀಡ್ (Runnymede) ಎಂಬಲ್ಲಿ ಸಹಿ ಹಾಕಿಕೊಟ್ಟ ರಾಜಪತ್ರ) ಹಳೆಯ ಬೆಳ್ಳಿ ಆಭರಣಗಳ ಪ್ರದರ್ಶನವನ್ನೂ ನೋಡಿದೆವು. ಈಗ ಈ ಕೆಥಿಡ್ರಲ್‌ನ ಒಳಗೆ ಹವೆಯನ್ನು ಬೆಚ್ಚಗಿಡುವ ವಿದ್ಯುಚ್ಛಕ್ತಿಯ ಸಲಕರಣೆಯನ್ನು ಇಟ್ಟುಕೊಂಡಿ ದ್ದಾರೆ. ಇದರ ಪಕ್ಕಕ್ಕೆ ಸರ್ ಕ್ರಿಸ್ಟೋಫರ್ ರೆನ್ (Sir Christopher Wren ಕಟ್ಟಿಸಿದ್ದ ಒಂದು ಪುಸ್ತಕ ಭಂಡಾರದ ಕಟ್ಟಡವಿದೆ. ಇದರಲ್ಲಿ ಪ್ರಾಚೀನ ಗ್ರಂಥಗಳೆಲ್ಲ ವನ್ನೂ ಸಂಗ್ರಹಿಸಿ ಜೋಪಾನವಾಗಿಟ್ಟುಕೊಂಡಿದ್ದಾರೆ. ಈ ಚಂದದ ಲಿಂಕನ್ ಊರಿ ನಲ್ಲಿ ಆನಂದದಿಂದ ಸಮಯವನ್ನು ಕಳೆದವು.

ನಮ್ಮೆಲ್ಲ ಕಾರ್ಯಕಲಾಪಗಳಿಗೆ 'ರೆಡ್ಡಿಂಗ್' (Reading) ಮಹೋತ್ಸವದ ನಮ್ಮ ನೃತ್ಯ ಪ್ರದರ್ಶನ ಕಲಶಪ್ರಾಯದಂತಿತ್ತು – ಚಿರಸ್ಮರಣೀಯವಾಯಿತು. ರಂಗ ಮಂದಿರವು ಜನರಿಂದ ಕಿಕ್ಕಿರಿದಿತ್ತು. ಕುಳಿತುಕೊಳ್ಳಲು ಕುರ್ಚಿಗಳು ಸಾಲದೆ ಅನೇ ಕರು ನೆಲದ ಮೇಲೆ ಜಮಖಾನಗಳನ್ನು ಹಾಸಿ ಕುಳಿತಿದ್ದರು. ಇಷ್ಟರಲ್ಲೇ ಪ್ರಖ್ಯಾತಿ ಪಡೆದ 'ಮೋಹಿನಿ ರೂಪ' ಮತ್ತು 'ಗೀತೋಪದೇಶ' ಗಳನ್ನು ನೋಡಲು ನೂರಾರು ಮೈಲಿಗಳಿಂದ ಜನರು ತಮ್ಮ ತಮ್ಮ ವಾಹನಗಳಲ್ಲಿ ಬಂದಿದ್ದರು. ಪ್ರೇಕ್ಷಕರ ಕುತೂ ಹಲ, ಆತುರ, ಆಸಕ್ತಿ ವಾತಾವರಣದಲ್ಲೆಲ್ಲಾ ತುಂಬಿ ಉಸಿರು ಕಟ್ಟಿದಂತಿತ್ತು! ನಮ್ಮ ಪ್ರದರ್ಶನವಾದ ಮೇಲೆ ನಾವು ಕೇಳಿದ ಕರತಾಡನ ನಾವು ಈ ಜನ್ಮದಲ್ಲಿ ಮರೆಯುವಂತಿಲ್ಲ. ಇಂದಿಗೂ ಅಂದಿನ ಕರತಾಡನದ ಶಬ್ದ ಕಿವಿಯಲ್ಲಿ ದನಿಗೂಡಿ ಸ್ಫೂರ್ತಿ ಕೊಡುತ್ತಿದೆ. ಮುಂದಕ್ಕೂ ಆ ಪ್ರೋತ್ಸಾಹದ ಕರತಾಡನದ ಧ್ವನಿ ನಾವು ಎಂದೆಂದಿಗೂ ಕೇಳುವಂತಿದೆ! ಅವರ ಪ್ರೋತ್ಸಾಹದ ಆವೇಶದಿಂದಾಗಿ ನಾವು ರಂಗ

ಸ್ಥಳದಿಂದ ಕದಲಲು ಬಿಡಲಿಲ್ಲ. ಮತ್ತೆ ಮತ್ತೆ ಚಪ್ಪಾಳೆ ಹೊಡೆದು ನಾವು ಒಳಗೆ ಹೋದ ಹಾಗೆಲ್ಲಾ ನಮ್ಮನ್ನು ರಂಗಸ್ಥಳದ ಮೇಲೆ ಕರೆದು, ನಮ್ಮ ಕಾಲಡಿಯಲ್ಲಿ ಲೆಕ್ಕವಿಲ್ಲದಷ್ಟು ಗುಲಾಬಿ ಹೂಗಳನ್ನೆಸೆದು ತಾವು ಪಡೆದ ಮಹದಾನಂದವನ್ನು ವ್ಯಕ್ತ ಪಡಿಸಿದರು! ಪ್ರೇಕ್ಷಕ ವೃಂದದ ಈ ವಿಧದ ಮೆಚ್ಚಿಕೆಯಿಂದಾಗಿ ನಮ್ಮ ಕಣ್ಣಲ್ಲಿ ಕೃತ ಜ್ಞತೆಯ ಕಣ್ಣೀರು ಹರಿಯಿತು. ಗಂಟಲು ಕಟ್ಟಿದಂತಾಯಿತು. ಎಂತಹ 'ವೀರಾ ರಾಧನೆ' (Hero Worship) ಇದೇ ಇಲ್ಲಿನ ಜನತೆಗೆ ಕಲಾವಿದರನ್ನು ಕಂಡರೆ! ನಮ್ಮ ಕಲೆಯ ಸುಸ್ವಪ್ನಗಳು ಆ ದಿನ ಎಲ್ಲವೂ ನೆನಸಾಯಿತು!........

ಇತಿ ನಿಮ್ಮ
ಚಂದಮ್ಮ.

*   *   *   *   *

ಲಂಡನ್
8 – 7 – 1966

ಮುದ್ದು ಅಮ್ಮಾ,

........ಭಾರತದಲ್ಲಿ ಸ್ತ್ರೀಯರಿಗೆ ಸ್ವಾತಂತ್ರ್ಯವಿಲ್ಲವೆಂಬ ತಪ್ಪು ಭಾವನೆ ಇಲ್ಲಿನ ಜನರಿಗಿದೆ. ಪಾಶ್ಚಾತ್ಯ ಸ್ತ್ರೀಯರ ಸ್ವಾತಂತ್ರ್ಯದ ಸ್ಥಿತಿಗತಿಗಳೆಲ್ಲ ನಮಗೆ ಹೊಸತಾ ಗಿದೆ. ಅವರ ನಿತ್ಯಜೀವನ ಬಹಳ ಕಷ್ಟತರವಾಗಿದೆ. ನನಗಂತೂ ಅವರ ಈ ಸ್ಥಿತಿಗೆ ತುಂಬಾ ಕನಿಕರವಾಗುತ್ತದೆ. ಹೆಂಗಸರು ಮಕ್ಕಳನ್ನು ಮನೆಯಲ್ಲಿ ಬಿಡಲಾರದೆ ಯಾರೂ ನೋಡಿಕೊಳ್ಳುವವರಿಲ್ಲದೆ, ಅವನ್ನು ಗಾಡಿಯಲ್ಲಿರಿಸಿ ದಾರಿಯುದ್ದಕ್ಕೂ ತಮ್ಮೊಡನೆ ಕಟ್ಟಿಕೊಂಡು ಹೋಗುವುದು ಸಾಮಾನ್ಯ ದೃಶ್ಯ. ತಾಯಿ ವ್ಯಾಪಾರ ಮುಗಿಸಿ ಬರುವವರೆಗೆ ಅಂಗಡಿ ಮುಂದಿಟ್ಟಿರುವ ಗಾಡಿಯಲ್ಲಿ ಈ ಕೂಸುಗಳು ಕೂಗಿ ಕಿರುಚಾಡಿ ಅಳುತ್ತಿರುವ ದೃಶ್ಯ ಹೃದಯದ್ರಾವಕ. ಭಾರತದಲ್ಲಿ ಕುಟುಂಬ ವಾತ್ಸ ಲ್ಯವು ಹೆಚ್ಚಾಗಿದ್ದ ಕಾರಣ ಮನೆಯಾಕೆಯ ಗೈರುಹಾಜರಿಯಲ್ಲಿ ಮಕ್ಕಳನ್ನು ಒಬ್ಬ ರಲ್ಲದಿದ್ದರೆ ಇನ್ನೊಬ್ಬರು,ಅದು ಸಾಧ್ಯವಿಲ್ಲದಿದ್ದರೆ ನೆರೆಹೊರೆಯವರು, ಅವನ್ನು ನೋಡಿ ಕೊಂಡು ಬೆಳೆಸುವುದು ಆನಂದದ ಜವಾಬ್ದಾರಿ. ಇಲ್ಲಿನ ಸಾಮಾಜಿಕ ದೃಶ್ಯಗಳನ್ನು ನೋಡುತ್ತಿದ್ದಂತೆ ನಮ್ಮ ಭಾರತವೇ ನಮಗೆ ಸ್ವರ್ಗ ಎಂದೆನಿಸುವುದು. ಅಲ್ಲಿರುವ ಆಳವಾದ ಪರಸ್ಪರ ಸ್ನೇಹ ಸಂಬಂಧ, ಒಬ್ಬರನ್ನೊಬ್ಬರು ಹೊಂದಿಕೊಂಡು ನಿತ್ಯ ಜೀವನವನ್ನು ನಡೆಸುವ ಕ್ರಮ ಇವೆಲ್ಲ ಈ ದೇಶದ ಸಮಾಜದಲ್ಲಿ ಕನಸುಗಳು.

ದೇಶವು ಕೈಗಾರಿಕೆ ಮತ್ತು ಜೀವನೋಪಾಯದ ಕ್ರಮಗಳಲ್ಲಿ ಅಭಿವೃದ್ಧಿ

ಪಡೆದು ಮುಂದುವರಿದಂತೆ ಇತರ ವಿಷಯಗಳಲ್ಲಿ ಬಡತನವನ್ನು ಹೆಚ್ಚು ಹೆಚ್ಚಾಗಿ ಪಡೆಯುವುದನ್ನು ಕಾಣುತ್ತೇವೆ. ಇಲ್ಲಿನ ಸ್ತ್ರೀಯರಿಗೆ ಕೌಟುಂಬಿಕ ಜೀವನದಲ್ಲೂ ಮನೆಯ ಸಂಬಂಧದ ವಿಷಯವಲ್ಲೂ ಪ್ರತ್ಯೇಕ ಒಂದು ವಿಚಿತ್ರ ದೃಷ್ಟಿ ಇದೆ. ಪ್ರತಿಯೊಬ್ಬ ಸ್ತ್ರೀ ಸ್ವತಂತ್ರಳಾಗಿರಲು ಹಾಗೂ ಹಣ ಸಂಪಾದಿಸಲು ಆಶಿಸುತ್ತಾಳೆ. ಇವಿಲ್ಲದಿದ್ದರೆ ಜೀವನವೇ ವ್ಯರ್ಥ ಎಂದು ಅವಳ ಮತ. ಭಾರತದಲ್ಲಿ ಸ್ತ್ರೀಯರಿಗೆ ಮನೆಯೇ ಮುಖ್ಯ ಜವಾಬ್ದಾರಿ. ಇಲ್ಲಿ ಉದ್ಯೋಗ ಮುಖ್ಯವಾಗಿರುವಂತೆ ಕಾಣುತ್ತದೆ. ಇಲ್ಲಿ ಪ್ರತಿಯೊಬ್ಬ ಸ್ತ್ರೀ ಒಂದಲ್ಲ ಒಂದು ಲಲಿತ ಕಲೆಯಲ್ಲಿ ಆಸಕ್ತಿ ಪಡೆಯಲು ಪ್ರಯತ್ನಿಸತ್ತಾಳೆ—ಚಿತ್ರಕಲೆ, ಕಸೂತಿ, ಕುಣಿತ, ಸಂಗೀತ, ಬರವಣಿಗೆ, ಮಡಕೆ-ಕುಡಿಕೆಗಳ ಕೆಲಸ (Ceramics) ಇತ್ಯಾದಿ; ಇಲ್ಲಿ ಇವೆಲ್ಲ ಕಲಾಸಕ್ತಿಯ ವಿಷಯಗಳಾದರೆ ನಮ್ಮ ದೇಶದಲ್ಲಿ ಇವು ಕೈಗಾರಿಕೆಗಳಾಗಿ ಮಾರ್ಪಟ್ಟು ಬಡಜನರ ಜೀವನಕ್ಕೆ ದಾರಿಯಾಗಿವೆ. ಈ ಕೈಗಾರಿಕೆಗಳಿಂದುಂಟಾಗುವ ವಸ್ತುಗಳು ಒಂದು ಅಂತಸ್ತನ್ನು ಪಡೆಯದಿದ್ದರೆ ಅವು ಮಾರಾಟಕ್ಕೆ ಅನುಕೂಲವಾಗುವುದಿಲ್ಲ. ಆದ್ದರಿಂದಲೇ ನಮ್ಮಲ್ಲಿ ಅವು ವಿಶೇಷವಾಗಿ ಕಲಾತ್ಮಕವಾಗಿ ರಚಿಸಲ್ಪಡುತ್ತವೆ. ಇಲ್ಲಿ ಎಲ್ಲ ಜನರೂ ಎಲ್ಲವನ್ನೂ ಮಾಡಬೇಕಾಗಿದ್ದ ಕಾರಣ ಅವರ ಚೈತನ್ಯವೆಲ್ಲವೂ ಕಳೆದು ಹೋಗಿ ಮನೆಗೆಲಸದಲ್ಲಿ ಅವರಿಗೆ ವಿಶೇಷ ಆಸಕ್ತಿಯಿರುವುದಿಲ್ಲ, ಮಾಡಲು ಸಾಕಷ್ಟು ಶಕ್ತಿಯೂ ಇರುವುದಿಲ್ಲ. ಆದ್ದರಿಂದ ಇಲ್ಲಿಯ ಮನೆಗಳು ಶುಚಿಯಾಗಿ ಸುಂದರವಾಗಿರುವುದು ಅಪರೂಪವೇ ಸರಿ. ಒಮ್ಮೊಮ್ಮೆ ನನಗನಿಸುತ್ತದೆ–ಏತಕ್ಕೆ ಇಲ್ಲಿನ ಜನರು ಕಲೆಗಳನ್ನು ಅಭ್ಯಸಿಸುತ್ತಾರೆ ಎಂದು. ಮನೆಯನ್ನು ಚೊಕ್ಕಟವಾಗಿರಿಸುವುದೂ ಆದರ್ಶ ಗೃಹಿಣಿಯಾಗಿರುವುದೂ ಒಂದು ಕಲೆಯೇ ಅಲ್ಲವೇ ? ಕಲೆಯು ಜೀವನವ ಕ್ರಮದಿಂದ ಬೇರೆಯಾಗಿದೆಯೇ ?

ಆದರೂ ಇಲ್ಲಿನ ಜನತೆಯಲ್ಲಿರುವ ಒಂದು ವಿಶೇಷ ಗುಣವನ್ನು ನಾವು ಒಪ್ಪಲೇಬೇಕು. ಅವರು ಕೆಲಸ ಮಾಡುವುದರಲ್ಲಿ ಧುರೀಣರು- ಅವರಿಗೆ ಸೋಮಾರಿತನವೆಂಬ ಶಬ್ದವೇ ಗೊತ್ತಿಲ್ಲ. ನಾವು ಭಾರತೀಯರು ನಾಚಿಕೆ ಪಡುವಂತಿದೆ ಇವರನ್ನು ಕಂಡರೆ. ಎಲ್ಲ ವಿಷಯಗಳಲ್ಲೂ ಆಸಕ್ತಿ ಪಡೆಯುವ ಜನ, ಆದರೆ ಏನು ಬೇಕಾದರೂ ಇಲ್ಲಿ ಒಡನೆ ಸಿಗುವುದರಿಂದ ಅವರ ಈ ಆಸಕ್ತಿ ಕ್ಷಣಿಕವಾದುದೆಂದು ಹೇಳಬಹುದು. ಏತಕ್ಕಾಗಿ ಈ ಮೇರೆಯಿಲ್ಲದ ಶ್ರೀಮಂತಿಕೆ ಎಂದು ಹಲವೊಮ್ಮೆ ನನಗನಿಸುತ್ತದೆ. ಸಾಧಾರಣವಾಗಿ ಮನುಷ್ಯನಿಗೆ ಯಾವುದು ಸಿಗುವುದಿಲ್ಲವೋ, ಯಾವಾಗ ಸಿಗುವುದಿಲ್ಲವೋ ಆಗ ಒಂದಾನೊಂದು ದಿನ ಅದು ಕರಗತವಾದಾಗ ಸಿಗುವ ಆನಂದ ಶಾಶ್ವತವಾದ ಆನಂದ, ಅಮೂಲ್ಯವಾದ ಆನಂದ. ಇಲ್ಲಿ ಸಿಕ್ಕಿದ್ದಷ್ಟೂ ಜನತೆಯ ಆಸೆಗೆ ಅಂತ್ಯವಿಲ್ಲ. ಯಾವಾಗಲೂ ಮನಸ್ಸಿನ ಅಸಂತುಷ್ಟಿ !

ಅಬ್ಬಬ್ಬ! ಇಲ್ಲಿಯ ವಿದ್ಯುಚ್ಛಕ್ತಿಯ ವಿಧಾನಗಳನ್ನು ಕಂಡರೆ ಈ ಯಾಂತ್ರಿಕ ಯುಗ ಮಾನವನನ್ನೇ ನುಂಗುವಂತಿದೆ: ಅವನ ಮಾನವೀಯತೆಯನ್ನೇ ನಾಶಪಡಿಸುವಂತಿದೆ. ಈ ಯಂತ್ರಗಳೆಲ್ಲ ಮನುಷ್ಯನ ದಿನಚರಿಯ ಕೆಲಸಗಳನ್ನು ಹಗುರ ಮಾಡುವುವಂತೆ. ಆದರೆ ಈ ಯಂತ್ರಗಳೇ ಅವನಿಗೆ ಬಿಡುವು ನೀಡದ ರಾಕ್ಷಸ ಸ್ವಭಾವ ಪಡೆದಿವೆ! ಈ ಕಾರಣದಿಂದಿರಬಹುದು, ಈ ಜನತೆಯಲ್ಲಿ ಹೆಚ್ಚು ಹೆಚ್ಚಾಗಿ ಕಾಣಬರುವ ದುರ್ಬಲ ನರಗಳ ಬಾಧೆ, ಮನೆಯಲ್ಲಿನ ಭಿನ್ನತೆ, ಅಸಮಾಧಾನಕರ ವಾತಾವರಣ, ಮಾನಸಿಕ ರೋಗಗಳ ಪ್ರಾಬಲ್ಯ, ಕೊಲೆ–ಅಪರಾಧಗಳು, ಆತ್ಮಹತ್ಯೆಗಳು. ಇಲ್ಲಿ ಜೀವನದ ಓಟ ಎಷ್ಟು ತೀವ್ರವಿದೆಯೆಂದರೆ ಯಾರಿಗೂ ಒಂದು ಘಳಿಗೆ ಸುಮ್ಮನೆ ಕುಳಿತು ಯೋಚನೆ ಮಾಡುವುದಕ್ಕೆ ಕೂಡ ಬಿಡುವಿರುವುದಿಲ್ಲ: "ಮುಂದಕ್ಕೇನು? ಮುಂದಿನ ಕಾರ್ಯಕ್ರಮವೇನು? ಮುಂದೇನು?" ಎಂಬ ವಿಚಾರಸರಣಿ ಯಾವಾಗಲೂ ಅವರನ್ನು ಕಾಡುತ್ತಿರುತ್ತದೆ. ಮನಸ್ಸಿನ ಶಾಂತಿಯನ್ನು ಕೆಡಿಸುತ್ತದೆ. ಈ ದೇಶಗಳಲ್ಲಿ ಮಾನಸಿಕ ರೋಗಗಳ ಚಿಕಿತ್ಸೆಯೂ ಬಹಳ ಮುಂದುವರೆದಿದೆ. ಇಂಗ್ಲೆಂಡಿನಲ್ಲಿ ಮಾನಸಿಕ ರೋಗದಿಂದ ನರಳುವವರು ಶೇಕಡ 25 ಅಂತೆ, ಪ್ಯಾರಿಸ್ಸಿನಲ್ಲಿ ಶೇಕಡ 35 ಮತ್ತು ಅತ್ಯಾಧುನಿಕ ರಾಷ್ಟ್ರವೆಂದು ಖ್ಯಾತಿಪಡೆದ ಸ್ವೀಡನ್ನಿನಲ್ಲಿ ಶೇಕಡ 45 ಅಂತೆ!

ನಮಗಿಲ್ಲಿ ಬಂದ ಮೇಲೆ ತಿಳಿಯಿತು, ಮಾನವನು ಎಂತಹ ರಾಕ್ಷಸೀ ಹೇಯ ಕೃತ್ಯಗಳನ್ನು ಮಾಡಲೂ ಹಿಂಜರಿಯನೆಂದು. ಕಾರಣವಿಲ್ಲದ ಕ್ರೂರ ಕೊಲೆಗಳು, ಬರೆಯಲೂ ಕೂಡ ಲೇಖಣಿಯು ನಾಚುವಂತಹ ಹೇಯಕೃತ್ಯಗಳು ಯೋಚಿಸಲೂ ಕೂಡ ಮನಸ್ಸು ಬಾರದ ಭಯಂಕರ ಪಾಪಕೃತ್ಯಗಳು, ಇವೆಲ್ಲ ಇಲ್ಲಿ ಆಗಾಗ್ಗೆ ಸಂಭವಿಸುತ್ತವೆ. ಆದರೆ ಸಾಮಾನ್ಯವಾಗಿ ಬ್ರಿಟಿಷರು ಪ್ರಾಮಾಣಿಕರಾಗಿರುತ್ತಾರೆ. ಅಂದರೆ ದಿನನಿತ್ಯದ ಚಿಕ್ಕ ವ್ಯವಹಾರಗಳಲ್ಲಿ ಅವರ ನಡತೆ ಆದರಣೀಯವಾಗಿದೆ. ಪತ್ರಿಕೆ ಮಾರಾಟದ ಚಿಕ್ಕ ಅಂಗಡಿಗಳಲ್ಲಿ ಅಂಗಡಿಗಾರನು ಇಲ್ಲದಿದ್ದರೂ ಪತ್ರಿಕೆಯ ದುಡ್ಡನ್ನಿಟ್ಟು ಪತ್ರಿಕೆ ತೆಗೆದುಕೊಂಡು ಹೋಗುವರು. ಇಲ್ಲಿ ಚಿಕ್ಕ ಪುಟ್ಟ ಕಳುವುಗಳು ಇಲ್ಲವೇ ಇಲ್ಲವೆಂದು ಹೇಳಬಹುದು. ಇಲ್ಲಿರುವುದು ದೊಡ್ಡ ದೊಡ್ಡ ಕಳುವುಗಳು ಮಾತ್ರ! ಬ್ಯಾಂಕು ಅಪಹರಣ, ದರೋಡೆ ಇತ್ಯಾದಿ, ಹೆಚ್ಚಾಗಿ ಶ್ರೀಮಂತರ ವೈಭವಯುಕ್ತ ನಿವಾಸಗಳಲ್ಲಿ.

ನಾವಿಲ್ಲಿ ಬಂದು ಅಷ್ಟೇನು ಹೆಚ್ಚು ಸಮಯವಾಗಿಲ್ಲ. ನಮ್ಮ ದೇಶದಲ್ಲಿದ್ದಾಗ ನಾವು ಪ್ರತಿಯೊಂದು ವಿಷಯದಲ್ಲಿ ನಮ್ಮ ದೇಶವನ್ನು ತೆಗಳುತ್ತಿದ್ದೆವು. ಇಲ್ಲಿ ಬಂದ ಮೇಲೆ ನಮ್ಮ ದೇಶದ ನಿಜವಾದ ಹಿರಿಮೆ ತಿಳಿಯಿತು. ಮನಸ್ಸು ಸದಾ ನಮ್ಮ ದೇಶದ ಕಡೆಗೆ ಹೋಗುತ್ತಿರುತ್ತದೆ. ಈ ಪ್ರವಾಸ ನಮ್ಮ ಜೀವನದಲ್ಲಿ ಲಾಭದಾಯಕವಾಗಿದೆ. ನಮ್ಮ ಜೀವನ ಈಗ ತುಂಬು ಜೀವನವಾಗಿದೆ, ಅಮೂಲ್ಯತೆ ಪಡೆದಿದೆ,

ಅನುಭವಗಳು ಮರೆಯಲಾರದಂತಿವೆ. ಧ್ಯೇಯಗಳು ಆತ್ಮೀಯವಾಗಿ ನಮ್ಮಲ್ಲಿ ನಲಿದಾಡುತ್ತಿವೆ. ಜೀವನದ ಶಾಶ್ವತ ಮೌಲ್ಯದ ಅರಿವು ಹೆಚ್ಚೆಚ್ಚಾಗುತ್ತಲಿದೆ. ವಿಚಾರಗಳು ಆಧ್ಯಾತ್ಮಿಕತೆ ಪಡೆಯುತ್ತಿವೆ. ಎಲ್ಲಕ್ಕೂ ಮಿಗಿಲಾಗಿ ಮನಸ್ಸಿಗೆ ತಳಮಳವಿಲ್ಲದೆ ಸ್ಥಿರತೆ ಮತ್ತು ಶಾಂತತೆ ಬಂದಿದೆ.

ಇಲ್ಲಿ ವಿರಾಮ ಪಡೆಯಲು ಟೆಲಿವಿಝನ್ (Television) ಒಂದೇ ದಾರಿ, ಸರ್ವ ಸಾಮಾನ್ಯ ಜನಪ್ರಿಯ ವಿಧಾನ. ಒಮ್ಮೆ ಅದನ್ನು ನೋಡಲು ಕುಳಿತರೆ ಜಗತ್ತೇ ಮರೆತು ಹೋಗುತ್ತದೆ. ಮೆದುಳನ್ನು ಉಪಯೋಗಿಸದೇ ಕಣ್ಣು ಮುಂದೆ ಹಾದು ಹೋಗುವ ಟೆಲಿವಿಝನ್ ಚಿತ್ರಗಳನ್ನು ನೋಡುತ್ತಿದ್ದಂತೆ ಮೈಗೂ ಮನಸ್ಸಿಗೂ ಹಿತಕರವಾದ ವಿರಾಮ ಸಿಗುತ್ತದೆ. ಟೆಲಿವಿಝನ್ ವಿವಿಧ ವಿನೋದಗಳನ್ನು ಒದಗಿಸಿ ಯಾವನಿಗೆ ಏನು ಬೇಕೋ ಅದನ್ನು ಕೊಟ್ಟು ಉಲ್ಲಾಸವನ್ನೀಯುತ್ತದೆ. ಕುಳಿತಲ್ಲೇ ನಮಗೆ ಬೇಕಾದ ವಿನೋದವನ್ನು ಒದಗಿಸುವ ಈ ಟೆಲಿವಿಝನ್–'ಟಿ.ವಿ.' ಎಂದು ಸಾಮಾನ್ಯವಾಗಿ ಇಲ್ಲಿ ಅದನ್ನು ಕರೆಯುತ್ತಾರೆ—ನಿಜವಾಗಿ ಒಂದು ಅದ್ಭುತ ಮಾನವ ಸೃಷ್ಟಿ ಅಲ್ಲವೇ ? ಆದರೆ ನಾವಿದನ್ನು ಕುರಿತು ವಿಚಾರಿಸಿದರೆ ಅದರ ದೋಷಗಳೆಲ್ಲ ನಮಗೆ ಮಂದಟ್ಟಾಗುವುದು. ಟಿ. ವಿ. ಯ ಪರಿಣಾಮ ಮನುಷ್ಯನ ಮೇಲೆ ವಿಶೇಷವಾಗಿರುತ್ತದೆ. 'ಟಿ. ವಿ.' ಇಲ್ಲಿ ಒಂದು ಸಾಂಕ್ರಾಮಿಕ ರೋಗವಾಗಿ ಪರಿಣಮಿಸಿದೆ. ಮನುಷ್ಯನನ್ನು ಬಲವಾಗಿ ತನ್ನ ಹಿಡಿತದಲ್ಲಿಟ್ಟುಕೊಂಡು ಸೆರೆ ಹಿಡಿದಿದೆ. ಇದಕ್ಕೆ ಬಲಿಹೋಗಿ ಅವನು ತನ್ನ ದಿನ ನಿತ್ಯದ ಕರ್ತವ್ಯಗಳನ್ನೂ ಕೆಲಸಗಳನ್ನೂ ಮರೆತು ಬಿಡುತ್ತಾನೆ. ಗಂಟೆಗಟ್ಟಲೆ ಈ ಟಿ. ವಿ. ಮುಖಾಂತರ ಇತರರು ಕೊಡುವ ವಿಚಾರಗಳನ್ನೇ ಕೇಳುತ್ತ ಯಾವ ವಿಷಯವನ್ನಾದರೂ ಕುರಿತು ತನ್ನ ಸ್ವಂತ ಕಲ್ಪನೆ, ವಿಚಾರ, ಬುದ್ಧಿವಂತಿಕೆಯನ್ನು ಉಪಯೋಗಿಸುವ ಶಕ್ತಿಯನ್ನೂ ಕ್ರಮೇಣ ಕಳೆದು ಕೊಳ್ಳುತ್ತಾನೆ. ಮಕ್ಕಳ ಮೇಲಂತೂ ಈ ಟಿ. ವಿ. ಯ ಪರಿಣಾಮ ಭಯಂಕರವಾದುದು. ಅದರ ಮೋಹಕ ಆಕರ್ಷಣೆಯಿಂದಾಗಿ ಅವು ತಮ್ಮ ಎಳೆವಯಸ್ಸಿಗೆ ಸಹಜವಾದ ತಮ್ಮ ಚಟುವಟಿಕೆ, ಆಟಪಾಟಗಳನ್ನು ಕೂಡ ಮರೆತುಬಿಡುತ್ತವೆ. ಟಿ.ವಿ. ನೋಡುತ್ತ ಅವರ ಕಣ್ಣು ದೃಷ್ಟಿಯೂ ಮಂದವಾಗುತ್ತ ಬರುತ್ತದೆ. ಚಿಕ್ಕ ವಯಸ್ಸಿನ ಮಕ್ಕಳಿಗೆ ಕನ್ನಡಕಗಳ ಅವಶ್ಯಕತೆ ಕಂಡುಬರುತ್ತದೆ. ನಿಜವಾಗಿಯೂ ಟಿ. ವಿ. ಯಿಂದ ಬಿಡಿಸಿಕೊಳ್ಳುವುದು ದೊಡ್ಡವರಿಗೆ ಕೂಡ ಕಷ್ಟವಾಗಿರುವಾಗ ಈ ಪುಟ್ಟ ಮಕ್ಕಳ ಪಾಡೇನು ? ಟಿ. ವಿ. ಇದ್ದಲ್ಲಿ ಸಂಭಾಷಣೆಯಿಲ್ಲ, ಪರಸ್ಪರ ಭೇಟಿಯಿಲ್ಲ, ಸ್ನೇಹಪರತೆಯಿಲ್ಲ. ಸ್ನೇಹಿತರು ಬಂದರೂ ಅವರು ಮನೆಯವರೊಡನೆ ಟಿ. ವಿ. ನೋಡುತ್ತ ಕುಳಿತುಕೊಳ್ಳಬೇಕಷ್ಟೆ, ಮಾತುಕತೆಗೆ ಅವಕಾಶವಿಲ್ಲ! ಇಲ್ಲಿ ಪ್ರತಿ ಮನೆಯಲ್ಲೆಂಬಂತೆ ಟಿ. ವಿ. ಇದೆ—ಜನರು ಸುಮ್ಮನೆ ಅದರ ಮುಂದೆ ಕುಳಿತು ಕಾಲ ಕಳೆಯುತ್ತಾರೆ. ಬರೇ ವಿಶ್ರಾಮಕ್ಕಾಗಿ. ಇಂತಹ ದೈನಂದಿನ ಜೀವನದಿಂದಾಗಿ

ಈ ಜನತೆಯ ಮುಂದಿನ ಗತಿಯೇನು ಅನ್ನಿಸುತ್ತದೆ....ತಮ್ಮನ್ನು ತಾವೇ ಕಾಪಾಡ ಬಲ್ಲರೇ ?........

ಇತಿ ನಿಮ್ಮ
ಚಂದಮ್ಮ.

* * * * *

ಲಂಡನ್
23 – 7 – 1966

ಪ್ರಿಯ ಅಮ್ಮ, ಅಪ್ಪ,

ಭಾರತದ ಸುದ್ದಿ ಸಮಾಚಾರಗಳನ್ನು ಘಳಿಗೆ ಘಳಿಗೆಗೆ ತಿಳಿಸುತ್ತಾರೆ.—T. V. ವಾರ್ತಾ ಪ್ರಸಾರದಲ್ಲಿ ಭಾರತದ ಮಕ್ಕಳು ಇಲ್ಲಿ ಹೊಟ್ಟೆಗಿಲ್ಲದೆ ಬರೀ ಎಲುಬಿನ ಪಂಜರ ದಂತಿರುವುದು........ಯೋಗ್ಯ ಆಹಾರವಿಲ್ಲದೆ ವಿಧವಿಧದ ದೇಹ ವಿಕಲರಾಗಿರುವುದು.... ಅಶುಚಿಯಾದ, ಹಳೆಯ ಇಲ್ಲವೇ ಕೆಟ್ಟುಹೋದ ಆಹಾರವನ್ನು ತಿಂದು ಇಲ್ಲದ ರೋಗ ಬಾಧೆಯಿಂದ ನರಳುತ್ತಿರುವುದು–ಇಂತಹ ಅನೇಕ ಹೃದಯದ್ರಾವಕ ದೃಶ್ಯಗಳನ್ನು ಭಾರತೀಯರು ನಾಚಿಕೆಯಿಂದ ತಲೆತಗ್ಗಿಸುವ ರೀತಿಯಲ್ಲಿ ಪ್ರಕಟಿಸುತ್ತಾರೆ. ಈ ರೀತಿ ಯಾಗಿ ನಮ್ಮ ಭಾರತೀಯ ಮಕ್ಕಳನ್ನು ಕುರಿತು ಪ್ರಕಟಿಸುವ ಈ ಮುಂದುವರಿದ ಜನಾಂಗದಲ್ಲಿ ಒಂದು N. S. P. C C. ಎಂಬ ಸಂಸ್ಥೆ ರಭಸದಿಂದ ಕೆಲಸ ಮಾಡ ಬೇಕಾದ ಸ್ಥಿತಿಯಿದೆಯೆಂದು ನಿಮಗೆ ತಿಳಿದರೆ ಅತ್ಯಂತ ಆಶ್ಚರ್ಯವಾಗಲಿಕ್ಕಿಲ್ಲವೇ ? ಲೋಕಪ್ರಸಿದ್ಧ S. P. C. A. ಎಂಬ ಹಾಗೆ N. S. P. C. C. ಯೂ (National Society for prevention of cruelty to children) ಒಂದು ಅದೇ ತರದ ಸಂಸ್ಥೆ; ಆದರೆ C. C. ಎಂದರೆ Cruelty to Children (ಮಕ್ಕಳಿಗೆ ತೋರಿ ಸುವ ಕ್ರೂರತೆ). ಈ ಸಂಸ್ಥೆಗೆ ರಾಜ್ಯಪಾಲಕರ ಪ್ರೋತ್ಸಾಹವಿದೆ. ಇಲ್ಲಿಯ ಮಕ್ಕಳ ದುರಂತ ಜೀವನ........ಹೆತ್ತವರು ಮಕ್ಕಳ ಕಡೆಗೆ ತೋರಿಸುವ ಅನಾದರ........ಅವಕ್ಕೆ ಕೊಡುವ ಚಿತ್ರಹಿಂಸೆ........ಅವುಗಳ ಆರೈಕೆಯನ್ನು ನೋಡದೆ, ಅವನ್ನು ಸತಾಯಿಸಿ, ಅವುಗಳ ಜೀವನಕ್ಕೆ ಕೊಡುವ ಧಕ್ಕೆ........ಮೊಳಕೆಯಲ್ಲಿಯೇ ಅವುಗಳ ತನು–ಮನ ಗಳನ್ನು ಹಿಂಡಿ ವಿಕಲಗೊಳಿಸುವಿಕೆ—ಇವೆಲ್ಲವನ್ನೂ ಈ NSPCC ಯವರು ನಮಗೆ ತಿಳಿಸಿ ಈ ಭಯಂಕರ ಸಂಗತಿಗಳನ್ನು ಎದುರಿಸಲು ಪ್ರಯತ್ನಿಸುತ್ತದೆ. ತಮ್ಮ ತಮ್ಮ ಮನೆಗಳಲ್ಲೇ ಈ ಮಕ್ಕಳು ಸುಖವಾಗಿ ಬಾಳಿ ಬೆಳೆಯುವಂತೆ ಈ ಸಂಸ್ಥೆ ಬಹು ವಿಧ ವಾಗಿ ದುಡಿಯುತ್ತಿದೆ.

ಈ ದೇಶದಲ್ಲಿ ಅನೇಕಾನೇಕ ತರಹದ ಕ್ರೂರ ತಂದೆ ತಾಯಿಗಳಿದ್ದಾರೆ—ದೊಡ್ಡ ಕಂಬಿಗಳಿಂದ ಮಕ್ಕಳನ್ನು ಬಡಿಯುವುದು, ನಾನಾ ತರಹದ ಹಿಂಸೆ ಕೊಡುವುದು, ಛಳಿಯಲ್ಲಿ ಮಕ್ಕಳಿಗೆ ಬೇಕಾದ ಬೆಚ್ಚನೆಯ ಬಟ್ಟೆ ಹಾಕದೆ ಅವುಗಳು ಮರಕಟ್ಟಿ ಹೋಗುವಂತೆ ಮಾಡುವುದು, ಅನಾಸಕ್ತಿಯಿಂದ ಮಕ್ಕಳ ಕಡೆ ಗಮನವೀಯದೆ ಇರುವುದು, ತಾಳ್ಮೆಕೆಟ್ಟು ಮಕ್ಕಳನ್ನು ಕೊಲ್ಲುವುದು ಇತ್ಯಾದಿ ರಾಕ್ಷಸೀ ಕೃತ್ಯಗಳನ್ನು ಹೆತ್ತ ತಂದೆ ತಾಯಿಯವರೇ ಮಾಡುವರೆಂದು ಯಾರು ತಾನೇ ನಂಬುವರು? ಇನ್ನೂ ಇಂತಹ ನಂಬಲಾಗದ ನೂರಾರು ಸುದ್ದಿಗಳು ಇಲ್ಲಿನ ಪತ್ರಿಕೆಗಳಲ್ಲಿ ಪ್ರಕಟವಾಗುತ್ತವೆ. ಕೋಣೆಯೊಳಗೆ ದೀರ್ಘಕಾಲ ಸೆರೆ ಇಟ್ಟ ಮಕ್ಕಳ ದೀನ ಮುಖಗಳು ಕಿಟಕಿಯಿಂದ ಹೊರಗೆ ನೋಡುತ್ತಿರುವುದು; ಸ್ನಾನ, ಶುಚಿತ್ವ ನೋಡದೆ, ಒಳ್ಳೇ ಆಹಾರವನ್ನು ಕೊಡದೆ ಮಕ್ಕಳನ್ನು ರೋಗ-ರುಜಿನಗಳ ದವಡೆಯಲ್ಲಿ ಹಾಕಿ ನರಳಿಸುವ ದೃಶ್ಯಗಳು; ನರಕದಂತಿರುವ ವಾತಾವರಣದಲ್ಲಿ ಮಕ್ಕಳನ್ನು ದೂಡಿ ಅವನ್ನು ನೋಡದೇ ಇರುವುದು; ಭಯಂಕರವಾದ ಕೋಣೆಗಳೊಳಗೆ ಹುಡುಗರನ್ನು ಹಾಕಿ ಅವರು ಹೆದರಿಕೊಂಡು ಚೀರುವಂತೆ ಮಾಡುವ ದೃಶ್ಯಗಳು; ಮಕ್ಕಳ ತಲೆಯನ್ನು ಜಜ್ಜಿಹಾಕುವ ದೃಶ್ಯಗಳು—ಇಂತಹ ನೂರಾರು ದೃಶ್ಯಗಳು ಈ ಮುಂದುವರಿದ ಆಧುನಿಕ ದೇಶದಲ್ಲಿ ಇವೆ! ಇವನ್ನು ಬರೆಯಲು ಕೂಡ ಕೈ ಬರುವುದಿಲ್ಲ. ಪತ್ರಿಕೆಗಳಲ್ಲಿ ಅಲ್ಲದೆ NSPCC ಯವರೂ, ಕೇಳಿದರೆ, ಬೇಕಾದಷ್ಟು ಅಂತಹ ದೃಷ್ಟಾಂತಗಳನ್ನು ಕೊಡಲು ಸಿದ್ಧರಿದ್ದಾರೆ. ಈ ಆಧುನಿಕ ಜಗತ್ತು, ಈ ಆಧುನಿಕ ಜನಾಂಗ, ಇಂತಹ ಅಧೋಗತಿಗೆ ಇಳಿದಿದೆ ಎಂದು ನಾನು ಕನಸಿನಲ್ಲಿಯೂ ಎಣಿಸಿದ್ದಿರಲಿಲ್ಲ. ಈ ದೇಶ ನೀವೊಮ್ಮೆ ಷೇಕ್ಸ್‌ಪಿಯರಿನ ಮಾತುಗಳನ್ನುಚ್ಚರಿಸಿ ಹೇಳಿದ ದೇಶ— ''This blessed plot. this realm, this demi-paradise, this England, this diadem set in a silvery Sea... ...." ಇತ್ಯಾದಿ—ಇಂತಹ ದೇಶಕ್ಕೆ ಈ ಅಧೋಗತಿ ಬಂತೇ? ಎಂದು ಮನಸ್ಸು ತುಂಬಾ ನೋಯುತ್ತದೆ. N.S.P.C.C. ಯವರು ಮಕ್ಕಳನ್ನು ಹೆತ್ತವರ ಈ ಘೋರ ಕೃತ್ಯಗಳನ್ನು ತಡೆಗಟ್ಟಲು ತಮ್ಮಿಂದಾದಷ್ಟು ಪ್ರಯತ್ನ ಮಾಡುತ್ತಿದ್ದಾರೆ. ಸಂಸ್ಥೆಯ ಗುಪ್ತಚಾರರು ತಮಗೆ ಸಂಶಯವಿದ್ದ ಮನೆಗಳಿಗೆ ಫಕ್ಕನೆ ಭೇಟಿಕೊಟ್ಟು ಅಲ್ಲಿನ ಮಕ್ಕಳಿಗೆ ಬೇಕಾದ ಸಹಾಯವನ್ನು ನೀಡಿ, ಅವರ ಜೀವನವನ್ನು ಕಾಪಾಡುತ್ತಾರೆ. ಈ ಸಂಗತಿಗಳೂ ಪತ್ರಿಕೆಗಳಲ್ಲಿ ಆಗಾಗ್ಗೆ ಪ್ರಕಟವಾಗುತ್ತಿವೆ.

ಈ ಕ್ರೂರತ್ವಕ್ಕೆ ಕಾರಣವೇನೆಂಬುದೇ ದೊಡ್ಡ ಪ್ರಶ್ನೆ! ನನಗನಿಸುತ್ತದೆ—ಇಲ್ಲಿ ಸ್ತ್ರೀಯರಿಗೂ ಪುರುಷರಿಗೂ ಬಿಡುವೆಂಬುದೇ ಇಲ್ಲ. ಮನೆಯಲ್ಲಿ ಇತರ ಜನರ ಸಹಾಯವೂ ಇಲ್ಲ. ಬೆಳಿಗ್ಗೆಯಿಂದ ರಾತ್ರಿಯವರೆಗೆ ಮಕ್ಕಳನ್ನು ಅವರಷ್ಟಕ್ಕೆ ಒಂದು ಘಳಿಗೆ ಕೂಡ ಬಿಟ್ಟಿರಲು ಇಲ್ಲಿ ಸಾಧ್ಯವಿಲ್ಲ. ಮನೆಗೆ ಬೇಕಾಗುವ ದಿನಸು ಸಾಮಾನು

ತರಲು ಹೊರಗೆ ಹೋಗುವಾಗಲೂ ಮಕ್ಕಳನ್ನು ಕಟ್ಟಿಕೊಂಡೇ ಹೋಗಬೇಕು. ತಾಯಂದಿರಿಗೆ ನೆಮ್ಮದಿಯಿಂದ ಬಚ್ಚಲು ಮನೆಗೆ ಕೂಡ ಹೋಗಲು ಅವಕಾಶವಿರುವು ದಿಲ್ಲ. ಒಂದು ನಿಮಿಷಕ್ಕಾದರೂ ಮಕ್ಕಳಿಂದ ಪಾರಾಗಲು ಹಲವು ತಾಯಂದಿರು ಮಕ್ಕಳನ್ನು ಕಪಾಟಿನೊಳಗೆ ಇಟ್ಟು ಬೀಗ ಹಾಕುವುದುಂಟಂತೆ! ಇಂತಹ ಜೀವನ ದಿಂದ ಹೆತ್ತವರಿಗೆ ನರಗಳ ದೌರ್ಬಲ್ಯ ಬರುವುದು ಸಹಜವೇ. ಇಲ್ಲಿನ ಸಾಮಾಜಿಕ ಜೀವನದ ಸ್ವರೂಪವೇ ವಿಚಿತ್ರವಾದುದು. ನಮ್ಮ ದೇಶದಲ್ಲಿ ಅತಿ ಬಡವೆಯಾದ ಸ್ತ್ರೀಗೂ ಜೀವನದಲ್ಲಿ ಒಂದಿಷ್ಟು ಬಿಡುವು ದೊರಕುತ್ತದೆ. ಕುಟುಂಬವಾತ್ಸಲ್ಯ ಇರುತ್ತದೆ. ಏಕಾಕಿಯಾದರೂ ಆಕೆ ಮಗುವನ್ನು ನೆಂಟರ ಅಥವಾ ಅಕ್ಕಪಕ್ಕದವರ ಆರೈಕೆಯಲ್ಲಿ ಕೊಟ್ಟು ಒಮ್ಮೆಯಾದರೂ ಒಂದು ಸಿನಿಮಾ ನೋಡಿ ಮನಸ್ಸಿಗೂ ದೇಹಕ್ಕೂ ವಿರಾಮ ಪಡೆಯುವ ಅವಕಾಶವಿದೆ. ಮಕ್ಕಳನ್ನು ಈ ಸ್ನೇಹಿತರು ಸಂತೋಷದಿಂದ ನೋಡಿ ಕೊಳ್ಳುವರಲ್ಲದೆ ಹಣದ ಆಸೆಗಾಗಿ ಅಲ್ಲ. ಈ ದೇಶದಲ್ಲಿ ಅನುಕೂಲಸ್ಥರು 'Baby Sitter' ನ್ನು (ಹೆತ್ತವರ ಗೈರು ಹಾಜರಿಯಲ್ಲಿ ಮನೆಯಲ್ಲಿ ಮಕ್ಕಳ ಜಾಗ್ರತೆಯನ್ನು ಕೈಕೊಳ್ಳುವ ವ್ಯಕ್ತಿ) ಗಂಟೆಗೆ ಇಂತಿಷ್ಟು ಹಣವೆಂದು ತೀರ್ಮಾನಿಸಿ ಮಗುವನ್ನು ಆಕೆಯ ಅಥವಾ ಅವನ ವಶ ಕೊಟ್ಟು ಹೊರಗೆ ಹೋಗುತ್ತಾರೆ. ಇಂತಹ 'Baby Sitting' ಮಾಡಿ ಇಲ್ಲಿ ತುಂಬಾ ಹಣ ಗಳಿಸುವವರಿದ್ದಾರೆ! ಎಷ್ಟೋ ವಿದ್ಯಾರ್ಥಿ ಗಳು ಕೂಡ ಈ ರೀತಿಯಿಂದ ಹಣ ಸಂಪಾದಿಸಿ ತಮ್ಮ ಜೀವನಕ್ಕಾಗಿ ಉಪಯೋಗಿಸು ತ್ತಾರೆ. ಒಮ್ಮೊಮ್ಮೆ ವಿವೇಕವಿಲ್ಲದ ಎಳೆಪ್ರಾಯದ ದಂಪತಿಗಳು ತಮ್ಮ ಮೊದಲ ನೆಯ ಮಗುವನ್ನು ಅನುಭವವಿಲ್ಲದಿರುವ ಸಣ್ಣ ಹುಡುಗಿಯೊಬ್ಬಳ ಆರೈಕೆಯಲ್ಲಿ ಬಿಟ್ಟು ಹೋಗುತ್ತಾರೆ. ಆ ಸಣ್ಣ ಹುಡುಗಿಗೆ ಮಗುವನ್ನು ನೋಡಿಕೊಳ್ಳಲು ಸಾಕಷ್ಟು ಅನುಭವವಿಲ್ಲದೆ ಆ ಮಗುವಿನ ಆಕಸ್ಮಾತ್ ಮರಣಕ್ಕೂ ಕಾರಣವಾದ ಸಂದರ್ಭ ಗಳನ್ನು ನಾವು ಪತ್ರಿಕೆಗಳಲ್ಲಿ ಓದಿ ತಿಳಿಯುತ್ತೇವೆ.

ಈ N. S. P. C. C, ಸಂಸ್ಥೆಯ ವಿಚಾರವಾಗಿ ನಾನು ತಿಳಿದ ದಿನದಿಂದ ಹಲವು ದಿನಗಳವರೆಗೆ ನನ್ನ ಮನಸ್ಸಿಗೆ ನೆಮ್ಮದಿಯಿಲ್ಲದೆ ರಾತ್ರಿ ನಿದ್ದೆ ಕೂಡ ಬೀಳು ತ್ತಿರಲಿಲ್ಲ. ಇಲ್ಲಿನ ಕೆಲವು ಗಣ್ಯ ಸ್ತ್ರೀಯರು ಸಮಾಜ ಸುಧಾರಣೆಗಾಗಿ ಹಣವನ್ನು ಶೇಖರಿಸುವ ಪ್ರಯತ್ನದಲ್ಲಿ 'ಕಾಫೀ ಕೂಟ' (Coffee Party) ಎಂದು ಏರ್ಪಡಿ ಸುತ್ತಾರೆ. ಹಳೆಯ, ಬೇಡದ ಪದಾರ್ಥಗಳನ್ನು ಮಾರಿ, ಕೊಡುವ ಕಾಫೀ ತಿಂಡಿಗೆ ಅಸಾಧ್ಯ ಬೆಲೆಯನ್ನು ಹಾಕಿ ಶೇಖರಿಸಿದ ಹಣವನ್ನು N. S. P. C. C. ನಿಧಿಗೆ ಕಳಿಸುತ್ತಾರೆ. ನಾನು ಸೀರೆಯೊಂದನ್ನು ಅವರಿಗೆ ಮಾರಲು ಕೊಟ್ಟುಬಿಟ್ಟೆ. N.'S. P. C. C. ವಿಚಾರ ಮಾಡಿದ್ದಂತೆ ಮತ್ತು ಅವರು ಹೇಳುತ್ತಿದ್ದ ದುರಂತ, ಘೋರ, ಪಾಪಕೃತ್ಯಗಳ ಕಥೆಗಳನ್ನು ಕೇಳಿ ಮನಸ್ಸು ತುಂಬಾ ಕದಡಿಹೋಗಿತ್ತು. ನನ್ನಲ್ಲುಂಟಾದ ಈ ಪರಿಣಾಮವನ್ನು ನೋಡಿ, ಇಲ್ಲೇ ವಾಸವಾಗಿದ್ದವರು—ಭಾರತೀ

ಯರು–"ಏಕೆ, ಭಾರತದಲ್ಲಿ ಮಕ್ಕಳನ್ನು ಹೆತ್ತವರು ಹೊಡೆಯುವುದಿಲ್ಲವೇ ? " ಎಂದು ಕೇಳುತ್ತಾರೆ! ನಮ್ಮ ದೇಶದಲ್ಲಿ ಮಕ್ಕಳನ್ನು ಹೊಡೆಯುವುದಾದರೂ ಏತಕ್ಕೆಂದು ಅವರು ಗ್ರಹಿಸುವುದಿಲ್ಲ. ನಮ್ಮಲ್ಲಿ ಮಕ್ಕಳು ರೋಗಕ್ಕೆ ತುತ್ತಾಗಿ ನರಳಿಕೊಂಡಿದ್ದರೆ, ಅಥವಾ ಅವರ ಮೈ, ಕೈಕಾಲುಗಳು ಅಸ್ಥಿಪಂಜರದಂತಿದ್ದರೆ, ಅದು ಹೊಟ್ಟೆಗೆ ಆಹಾರ ಸಾಲದೆ ಇರುವುದರಿಂದ, ಅಥವಾ ಆಹಾರದ ವಿಷಯದಲ್ಲಿ ಹೆತ್ತವರಿಗಿರುವ ಅಜ್ಞಾನ ದಿಂದ ಅಲ್ಲದೆ ಹೆತ್ತವರು ಕೊಡುವ ಹಿಂಸೆಯಿಂದಲ್ಲವೆಂದು ದೃಢವಾಗಿ ಹೇಳಬಲ್ಲೆವು. ನಮ್ಮಲ್ಲಿ ಮಕ್ಕಳನ್ನು ಹೊಡೆಯುವುದು ಇದ್ದರೂ, ಅದು ಅವರನ್ನು ತಿದ್ದುವುದಕ್ಕೋಸ್ಕರ, ಅವರ ಕೆಟ್ಟ ಚಾಳಿಗಳನ್ನು ಕಿತ್ತು ಬುದ್ಧಿವಾದ ಹೇಳುವುದಕ್ಕೋಸ್ಕರ, ಹೆತ್ತವರ ಕ್ರೂರತೆಯಿಂದಲ್ಲ, ಅಥವಾ ಮಕ್ಕಳು ಹೆತ್ತವರ ಭೋಗ ಜೀವನಕ್ಕೆ ಆತಂಕವೆಂದಲ್ಲ. ನಮ್ಮ ದೇಶದಲ್ಲಿನ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ದೇಹದಂಡನೆ ಕೊಡುತ್ತಾರೆಂದೂ ಇಲ್ಲಿನ ಸಹಜ ಮಾತಾಗಿದೆ. ಆದರೆ ಶಾಲಾ ವಿದ್ಯಾರ್ಥಿಗಳಿಗೆ ದಂಡನೆ ಕೊಡುವುದರಲ್ಲಿ ಇಲ್ಲಿನ ಉಪಾಧ್ಯಾಯರು ಏನೂ ಕಮ್ಮಿ ಇಲ್ಲ ಎಂದು ಹೇಳಿದರೆ ನಂಬಲಾರಿರಿ.

ಉಚ್ಚ ನಾಗರೀಕತೆಯ ಪರಿಣಾಮವಾಗಿ N. S. P. C. C. ಯಂತಹ ಸಂಸ್ಥೆಗಳು ಹುಟ್ಟಬೇಕಾಗಿ ಬಂದರೆ ನಮ್ಮ ದೇಶಕ್ಕೆ ಅಂತಹ ನಾಗರೀಕತೆ ಎಂದೂ ಬಾರದಿರಲಿ ಎಂದು ಮನಸ್ಸು ಒತ್ತಿ ಹೇಳುತ್ತಿದೆ. ದೇವಾ! ಎಂದೂ ಬಾರ ದಿರಲಿ–ಎಂದು ಪ್ರಾರ್ಥಿಸುತ್ತೇನೆ. ನಮ್ಮ ಭಾರತೀಯ ಸಂಸ್ಕೃತಿ ನಮ್ಮ ಮಕ್ಕ ಳೆಲ್ಲಾ ಶ್ರೀ ಕೃಷ್ಣ ಪರಮಾತ್ಮನ ಅವತಾರಗಳೇ ಎಂದು ನಮಗೆ ಹೇಳಿಕೊಡುತ್ತಿದೆ. ನಮ್ಮ ಮಕ್ಕಳ ಆಟವನ್ನು ನಾವು ಶ್ರೀ ಕೃಷ್ಣ ಪರಮಾತ್ಮನ ಬಾಲಲೀಲೆಗಳಿಗೆ ಹೋಲಿ ಸುತ್ತೇವೆ. "ಮನೆ ತುಂಬಾ ಮಕ್ಕಳು, ಕೆರೆ ತುಂಬಾ ತಾವರೆ, ಅರಮನೆ ತುಂಬಾ ಅರಗಿಣಿಗಳು....ಮನೆಗೆ ಮಕ್ಕಳು ಚೆಂದ, ಕೆರೆಗೆ ತಾವರೆ ಚೆಂದ, ಅರಮನೆಯ ಚಾವ ಡಿಗೆ ದೊರೆ ಚೆಂದ....ಹಾಲುಳ್ಳ ಹಸು ಬೇಕು, ಶೀಲವುಳ್ಳ ಶಿಶು ಬೇಕು, ಭಾಗ್ಯವಂತರ ನೆರೆ ಬೇಕು ...ಎಂದೆಲ್ಲ ಲಾಲಿ ಹಾಡಿ ಮಕ್ಕಳನ್ನು ದಿನ ಸಂಜೆ ಹಾಡಿ ಮಲಗಿಸುವ ನಮ್ಮ ಭಾರತದ ಹೆಂಗಳೆಯರು ಆದರ್ಶ ಮಾತೆಯರೆಂದು ನಾನು ಭಾವಿಸುತ್ತೇನೆ. ಬಳ್ಳಿಗೆ ಕುಂಬಳಕಾಯಿ ಭಾರವೇ ಎಂಬ ಮಾತು ಭಾರತದಲ್ಲಿ ನಿಜವಾಗಿದೆ.

ನಮ್ಮ ಸಂಸ್ಕೃತಿಯು ಆಳವಾದ ಅಮೂಲ್ಯ ನಿಧಿ. ನಾಗರೀಕತೆಯಲ್ಲೂ ದೋಷವಿಲ್ಲವೇ ? ಎಷ್ಟೇ ಕಷ್ಟ ನಷ್ಟವಾದರೂ ನಮ್ಮ ಸಂಪ್ರದಾಯಗಳನ್ನೂ ಸಂಸ್ಕೃತಿ ಯನ್ನೂ ಮರೆಯಬಾರದು. "ನೀವು ಭಾರತೀಯರು, ಎಲ್ಲಿ ಹೋದರೂ ಭಾರತೀಯ ರಾಗಿಯೇ ನೆಲೆಸುತ್ತೀರಿ, ಇತರ ಜನಾಂಗದವರಾದರೋ ತಾವು ಆಯ್ದುಕೊಂಡ ದೇಶದವರೊಡನೆ ಬೆರೆತಿರುತ್ತಾರೆ". ಎಂದು ನಮ್ಮ ಪಾಶ್ಚಾತ್ಯ ಸ್ನೇಹಿತರೊಬ್ಬರು ಅಸಮಾಧಾನದಿಂದ ಒಮ್ಮೆ ನಮ್ಮೊಡನೆ ಹೇಳಿದ್ದುಂಟು. ನಮ್ಮ ದೈನಂದಿನ ಜೀವನ

ದಲ್ಲಿರುವ ಕೌಟುಂಬಿಕ ಪ್ರೇಮ, ವಾತ್ಸಲ್ಯ, ಹಿರಿಯರಲ್ಲಿ ನಾವು ತೋರುವ ನಮ್ರತೆ, ಪೂಜ್ಯಭಾವ, ನಮ್ಮ ಧರ್ಮಶ್ರದ್ಧೆ ಇವೆಲ್ಲ ನಮ್ಮ ಸುಖ ಜೀವನದ ಸಂಪತ್ತು. ಇದೇ ನಮ್ಮೆಲ್ಲರನ್ನೂ ಒಟ್ಟುಗೂಡಿಸುವ ಯುಕ್ತಿ ಮತ್ತು ಶಕ್ತಿ. ಇಲ್ಲಿ ಸತ್ಯಜಿತ್‌ರೇ ಇವರ ಚಿತ್ರಗಳು ಬಹಳ ಪ್ರಸಿದ್ಧಿಯನ್ನು ಹೊಂದಿವೆ. ಅವರ 'ಪಾಥೇರ್ ಪಾಂಚಾಲಿ' ಚಿತ್ರದಲ್ಲಿ ವರ್ಣಿಸಿದ ತೀರಾ ಬಡತನದ ಒಂದು ಸಂಸಾರದಲ್ಲೂ ನಮ್ಮ ಸಂಸ್ಕೃತಿ ಸಂಪ್ರದಾಯಗಳಿಗೆ ಬಡತನವಿಲ್ಲ! ಜೀವನದ ಎಂತಹ ದುರಂತವನ್ನೂ ಉತ್ತಮ ಧ್ಯೇಯಗಳಿಂದ ಎದುರಿಸುವ ಶಕ್ತಿಯಿದೆ. "ನಿಮ್ಮ ಜೀವನ ಕ್ರಮದಲ್ಲಿ ನಮ್ಮಲ್ಲಿದ್ದಂತೆ ಅಧ್ಯಾತ್ಮ ಬೇರೆ, ಧರ್ಮ ಬೇರೆ ಇಲ್ಲ" ಎಂದೊಮ್ಮೆ ಪಾಶ್ಚಾತ್ಯ ಮಿತ್ರರೊಬ್ಬರು ಶ್ಲಾಘನೆಯಿಂದ ಹೇಳಿದ ಮಾತು ಅಕ್ಷರಶಃ ನಿಜ........ಈ ನಮ್ಮ ಸಂಸ್ಕೃತಿ ಅಳಿದು ಹೋಗದೆ ಇನ್ನೂ ಇನ್ನೂ ಬೆಳೆದು ಬಂದು ಬರಲಿ....ದೇವರೇ........ಸ್ಥಿತಿ ಕೆಡದಿರಲಿ ಎಂದು ಯಾವಾಗಲೂ ಹಾರೈಸುತ್ತೇನೆ.

ಇತಿ ನಿಮ್ಮ
ಚಂದಮ್ಮ.

*　　*　　*　　*　　*

ಲಂಡನ್
25 – 7 – 1966

ಆತ್ಮೀಯರೇ,

........ನಮ್ಮ ಮನಸ್ಸಿನಲ್ಲಿ ಕೆಲವು ವಿಷಯಗಳು ಕಾಡುತ್ತಿವೆ. ಅವನ್ನು ಬರೆದು ಮನಸ್ಸು ಸ್ವಲ್ಪ ಹಗುರವಾಗಲಿ ಎಂದು ಈ ಯತ್ನ.

ಮುಖ್ಯವಾಗಿ ಪಾಶ್ಚಾತ್ಯದಲ್ಲಿನ ವೃದ್ಧಾಪ್ಯ. ಸಾಧಾರಣವಾಗಿ ಇಲ್ಲಿ ವೃದ್ಧರನ್ನು ಬಿಟ್ಟರೆ ಹಳೇ ಪದಾರ್ಥಗಳೆಂಬುವುದೇ ಇಲ್ಲ–ಹಳೇ ಬಟ್ಟೆ, ಹಳೇ ವಾಹನ, ಹಳೇ ತಿನಿಸು ಇತ್ಯಾದಿ. ಹಳೇ ಮಾನವರು ಮಾತ್ರ ಇದ್ದಾರೆ–ಉಪಾಯವಿಲ್ಲದೆ. ಇಲ್ಲಿ ವೃದ್ಧಾಪ್ಯ ಒಂದು ಭಯಂಕರ ಸ್ಥಿತಿ. ಈ ಕಾರಣದಿಂದಾಗಿ ಇಲ್ಲಿನ ಹೆಂಗಸರು ತಮ್ಮ ಯೌವನವನ್ನು ಆದಷ್ಟು ದೀರ್ಘಕಾಲ ಕಾಪಾಡಿಕೊಂಡು ಕೊನೆಯವರೆಗೂ ವೃದ್ಧಾಪ್ಯವನ್ನು ತಡೆಗಟ್ಟಲು ಒದ್ದಾಡುತ್ತಾರೆ. ಅವರ ಈ ಯತ್ನದಲ್ಲಿ ಇಲ್ಲಿನ ವಾಣಿಜ್ಯ ಲೋಕವೂ ಅವರಿಗೆ ತುಂಬಾ ನೆರವು ನೀಡುತ್ತಿದೆ. ಅದು ಒದಗಿಸುವ ನಾನಾತರದ ಸೌಂದರ್ಯೋಪಕರಣಗಳನ್ನು – ಕೂದಲನ್ನು ಬೇಕಾದ ಬಣ್ಣಕ್ಕೆ ತಿರುಗಿಸುವ ರಸಾಯನಗಳು, ನಾನಾ ಬಣ್ಣದ ಕೃತ್ರಿಮ ಕೂದಲು, ಕೃತಕ ರೆಪ್ಪೆ ಕೂದಲು,

ಕೃತ್ರಿಮ ಕುಚಗಳು, ಮುಖ ಮೈಗಳಿಗೆ ಬಳಿದುಕೊಳ್ಳುವ ಲೇಪಗಳು, ಕ್ರೀಮುಗಳು, ಬಣ್ಣಗಳು ಇತ್ಯಾದಿ ಇತ್ಯಾದಿ–ಇವೆಲ್ಲವನ್ನೂ ಇಲ್ಲಿನ ಹೆಂಗಸರು ಧಾರಾಳವಾಗಿ ಉಪಯೋಗಿಸಿಕೊಂಡು ತಮ್ಮ ವಯಸ್ಸು ಎಷ್ಟೇ ಇದ್ದರೂ ನಿತ್ಯ ಯುವತಿಯರಂತೆ ಮೆರೆದಾಡುತ್ತಾರೆ. ಇಲ್ಲಿ ಹೆಂಗಸರ ವಯಸ್ಸು ಕೇಳುವುದು ಮಹಾ ಅಪರಾಧ! ಇವಕ್ಕೆಲ್ಲ ಮುಖ್ಯ ಕಾರಣವೊಂದೇ : ಇಲ್ಲಿ ವೃದ್ಧಾಪ್ಯ ಒಂದು ಕ್ರೂರ ಸ್ಥಿತಿ.

ನಮ್ಮ ದೇಶದಲ್ಲಿ ಮನುಷ್ಯನಿಗೆ ಪ್ರಾಯ ಹೆಚ್ಚಿದಂತೆ ಸಮಾಜದಲ್ಲಿ ಅವನ ಅಂತಸ್ತು ಹೆಚ್ಚುತ್ತದೆ; ಅವನು ಹೆಚ್ಚುಹೆಚ್ಚಿನ ಮರ್ಯಾದೆ ಗೌರವವನ್ನು ಪಡೆಯುತ್ತಾನೆ. ಕುಟುಂಬದೊಳಗಿನ ಮಕ್ಕಳು, ಮೊಮ್ಮಕ್ಕಳು ಎಲ್ಲರೂ ಅವನಿಗೆ ವಿಧೇಯರಾಗಿ ಪೂಜ್ಯ ಭಾವನೆಯಿಂದ, ಪ್ರೀತಿ ವಾತ್ಸಲ್ಯಗಳಿಂದ ಅವನನ್ನು ನೋಡಿಕೊಂಡು, ಅವನ ಇಳಿವಯಸ್ಸಿನಲ್ಲಿ ಅವನ ಜೀವನ ಆದಷ್ಟು ಸರಳವಾಗಿರುವಂತೆ ಪ್ರಯತ್ನಿಸುತ್ತಾರೆ.

ಆದರೆ ಈ ದೇಶದಲ್ಲಿ ಹಳಬರ ಸ್ಥಿತಿ ಗತಿಯೇ ಬೇರೆ. ವಯಸ್ಸಾದ ಜನರು ಇಲ್ಲಿಯ ಸರಕಾರದ ಜವಾಬ್ದಾರಿ – ಅವರ ಹೊಟ್ಟೆಯಲ್ಲಿ ಹುಟ್ಟಿದ, ಅವರು ಸಾಕಿ ಸಲಹಿದ ಮಕ್ಕಳದ್ದಲ್ಲ. ಅವರು ತೀರಾ ನಿರಾಶ್ರಿತರಾಗಿ ಕಂಗೆಡವ ಹಾಗೆ ಸರಕಾರ, ಇಲ್ಲಿನ ನಿರುದ್ಯೋಗಿಗಳಿಗೆ ಮತ್ತು ಅಯೋಗ್ಯರಿಗೆ ಕೊಡುವಂತೆ ಇವರಿಗೂ ಬದುಕಿ ಬಾಳಲು ಒಂದಿಷ್ಟು ವೇತನವನ್ನು ಕೊಡುತ್ತಾರೆ. ಆದ್ದರಿಂದ ಸಂಸಾರ ಬಂಧನವಿರುವುದಿಲ್ಲ. ವೃದ್ಧರು ತಮ್ಮ ಜೀವನವನ್ನು ತಾವೇ ರೂಪಿಸಿಕೊಳ್ಳಬೇಕು. ಒಂದು ವೇಳೆ ಅವರು ಶ್ರೀಮಂತರಿದ್ದರೂ ಅವರ ಸ್ಥಿತಿ ಚಿಂತಾಜನಕವೇ! ಕಾರಣ, ವಯಸ್ಸಾದವರಿಗೆ ಇಲ್ಲಿ ಮಕ್ಕಳ, ಮೊಮ್ಮಕ್ಕಳ, ಕುಟುಂಬದ ಸಂಪರ್ಕವೇನೂ ಇರುವುದಿಲ್ಲ. ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳು ಕೂಡ ಹೆತ್ತವರಿಗಾಗಿ ಆಸೆ, ಪ್ರೀತಿ, ವಿಶ್ವಾಸಗಳನ್ನು ಪಡೆದಿರುವುದಿಲ್ಲ, ಈ ವೃದ್ಧರ ಜೀವನ ಯಾವಾಗಲೂ ಒಂಟಿ ಜೀವನವೇ. ಹೆತ್ತವರು ಕೂಡ ತಾವು ಸುಖ ಜೀವನವನ್ನು ನಡೆಸಿಕೊಂಡು ಬಂದರೂ ಅಥವಾ ಕಷ್ಟಪಡುತ್ತಿರುವಾಗಲೂ ತಮ್ಮ ಮಕ್ಕಳ ಸಂಪರ್ಕ ಬಯಸುವುದಿಲ್ಲ. ಹೆತ್ತವರು ತಮ್ಮಷ್ಟಕ್ಕೇ; ಮಕ್ಕಳು ತಮ್ಮಷ್ಟಕ್ಕೇ. ಹೀಗಾಗಿ ಇಲ್ಲಿ ಮಾನವನು ಸ್ವಾರ್ಥಿಯಾಗಿದ್ದು ತನ್ನ ವೃತ್ತಿಪರ ಸುಖಲಾಲಸೆಗಳಿಗಾಗಿ ಮಾತ್ರ ಒದ್ದಾಡುವುದು ಆಶ್ಚರ್ಯವಲ್ಲ. ಇಂಥವರಿಗೆ ಕುಟುಂಬ ವಾತ್ಸಲ್ಯ, ಪ್ರೇಮ ಇರುವುದು ಹೇಗೆ ? ಅಂತೂ ಇಲ್ಲಿನ ಹಳಬರ ಸ್ಥಿತಿ ತುಂಬಾ ಕರುಣಾಜನಕ ಸ್ಥಿತಿ. ಅವರ ಜೀವನ ನಿರಸ ಜೀವನ, ಅಸ್ಥಿರ ಜೀವನ. ಈ ಅಸ್ಥಿರತೆಯಿಂದಾಗಿ ವೃದ್ಧ ಜನರು ಚಂಚಲ ಮನಸ್ಕರಾಗಿ ಒಂದೆಡೆಯಿಂದ ಇನ್ನೊಂದೆಡೆ ಓಡಾಡುತ್ತಿರುವ ದೃಶ್ಯ ಇಲ್ಲಿ ಸಾಮಾನ್ಯ. ಪಾಶ್ಚಾತ್ಯದಲ್ಲಿ ವೃದ್ಧರು ಮರದಲ್ಲಿನ ಹಣ್ಣೆಲೆಗಳಿದ್ದಂತೆ. ಕಾಲ

ಕ್ರಮೇಣ ಎಲೆಗಳು ಹಳದಿಯಾಗಿ ಹಣ್ಣೆಲೆ ಉದುರುವಂತಿದೆ ಅವರ ಜೀವನ. ಕಾಲ ಚಕ್ರದ ಉರುಳಾಟದಲ್ಲಿ ಸಹಜವಾಗಿ ಅಳಿದು ಹೋಗುವ ವೃದ್ಧರನ್ನು ಕಂಡರೆ ಮನಸ್ಸಿಗೆ ತುಂಬಾ ಬೇಸರವಾಗುತ್ತದೆ. ಅವರಿಗೆ ಯಾರ ಸಹಾಯವೂ ಇಲ್ಲ. ಅವರನ್ನು ನೆನೆಸುವವರಿಲ್ಲ. ಅವರಿಗಾಗಿ ಅಳುವವರೂ ಇಲ್ಲ.

ಇದಕ್ಕೂ ಹೆಚ್ಚಿನ ಬೇಸರದ ಸಂಗತಿಯೇನೆಂದರೆ ಅವರ ವೃದ್ಧಾಪ್ಯದಲ್ಲಿ ಅವರಿಗೆ ಮಾನಸಿಕ ಶಾಂತಿಯನ್ನು ಕೊಡಬಲ್ಲ ಆಧ್ಯಾತ್ಮಿಕ ದೃಢ ನಂಬಿಕೆಗಳಿಲ್ಲ. ಧರ್ಮ ಶ್ರದ್ಧೆ, ಮತಾಚಾರ ಮುಂತಾದುವು ಇವರಿಗೆ ಬರೇ ಸಾಂಕೇತಿಕವಾಗಿವೆ, ಬಾಹ್ಯ ಆಡಂಬರದ ವಿಷಯಗಳಾಗಿವೆ. ಹೊರಗಿನ ತೋರಿಕೆಗೆ ಮಾತ್ರ. ಅವಕ್ಕೂ ಅವರ ನಿತ್ಯ ಜೀವನಕ್ಕೂ ಆತ್ಮೀಯ ಹೊಂದಾಣಿಕೆಯಿಲ್ಲ. ಜೀವನದಲ್ಲಿ ಅವರಿಗೆ ನೆರವು ನೀಡುವಂತಹ ತತ್ವ ಯಾವುದೂ ಇಲ್ಲ. ಅವರ ಆಧ್ಯಾತ್ಮ ದಿನನಿತ್ಯ ಜೀವನದಿಂದ ಬೇರೆಯಾಗಿದೆ. ಈ ಕಾರಣದಿಂದಲೇ ಇರಬಹುದು ಯುವಕ ಜನಾಂಗವು ಇಗರ್ಜಿಗೆ ಪ್ರಾರ್ಥನೆಗೆ ಹೋಗುವುದನ್ನೇ ಕಾಣೆವು. ಮನಶ್ಶಾಂತಿ ಪಡೆಯಲು ವೃದ್ಧ ಜನಾಂಗವು ಹಲವಾರು ಕಡೆಗಳಿಗೆ ಗಮನ ಕೊಡುತ್ತಾರೆ. ಮುಖ್ಯವಾಗಿ ಹಿಂದೂದೇಶದ ಕಡೆಗೆ- ನಮ್ಮ ಆಧ್ಯಾತ್ಮಕ್ಕೂ ಧರ್ಮಕ್ಕೂ ಸಂಬಂಧವಿದೆ ಎಂಬುದನ್ನು ಅವರು ಮನಗಂಡಿದ್ದಾರೆ. ಇಲ್ಲಿ ವೃದ್ಧರು ಜೀವನದಲ್ಲಿ ಕಾಣುವುದು ಪೂರ್ಣ ಶೂನ್ಯತೆ, ಯಾವುದಕ್ಕಾಗಿ, ಯಾರಿಗಾಗಿ ಜೀವಿಸಬೇಕು ಎಂಬ ಗುರಿಯಿರುವುದಿಲ್ಲ. ಮಾನವರು ಯಾರಿಗಾಗಿ ಸಂಪಾದಿಸುವುದೆಂದು ತಿಳಿಯುವುದಿಲ್ಲ. ಮಕ್ಕಳು ಹೆತ್ತವರ ಕೈಯಿಂದ ಅತಿ ಬೇಗ ತಪ್ಪಿಸಿಕೊಂಡು ಸ್ವತಂತ್ರರಾಗುತ್ತಾರೆ. ಹೆತ್ತವರು ಕಲಾವಿದರಾದರೆ ತಮ್ಮ ಮಕ್ಕಳನ್ನು ಚಿತ್ರಗಳಲ್ಲೋ ಶಿಲ್ಪಗಳಲ್ಲೋ ಶಾಶ್ವತವಾಗಿ ಚಿತ್ರಿಸಿ, ಕಲ್ಪಿಸಿ, ತೃಪ್ತಿ ಪಡೆಯುತ್ತಾರೆ. ಅದರೆ ನಿಜವಾಗಿ ಆ ಮಕ್ಕಳೆಲ್ಲಿ? ಈ ದೇಶದಲ್ಲಿ ಬಿಡುವಿಲ್ಲದ ಜೀವನದ ರಭಸದಲ್ಲೂ ಜನತೆಯು ಒಂಟಿಯಾಗಿರುತ್ತಾರೆ. ಅನೇಕ ವೃದ್ಧರು ಯೋಚನಾಕ್ರಾಂತರಾಗಿ ಒಂದೆಡೆ ಕುಳಿತು ಸಮಯವನ್ನು 'ದೂಡು'ವುದು ಸಾಮಾನ್ಯ ದೃಶ್ಯ. ಅಂಥವರು ಜೀವನದಲ್ಲಿ ಮಾತ್ರ ಒಂಟಿಯಲ್ಲ-ಹೃದಯದಲ್ಲಿಯೂ ಒಂಟಿಯಾಗಿಯೇ ಇರುವರು.

ನಿರಾಕರಿಸಲ್ಪಟ್ಟ ಮಕ್ಕಳು ಪ್ರೇಮಕ್ಕಾಗಿ ಹಾತೊರೆಯುತ್ತಾರೆ. ಆದರೆ ಆ ಪ್ರೇಮವೆಂಬುದು ಎಲ್ಲಿದೆ? ಮದುವೆಯ ಬಾಹ್ಯ ಹುಟ್ಟುವ ಮಕ್ಕಳಿಗೆ ಇಲ್ಲಿ ಲೆಕ್ಕವಿಲ್ಲ. ಇದರಲ್ಲಿ ನಾಚಿಕೆಯೂ ಇಲ್ಲ. ಇಲ್ಲಿ, ಮದುವೆಯ ಬಂಧನ ಬೇಕೆಂತಿಲ್ಲ. ಗಂಡ ಹೆಂಡಿರಲ್ಲಿ ಅನ್ಯೋನ್ಯತೆ ಕಡಿಮೆ. ಯಾವಾಗಲೂ ಕಾದಾಡಿ ಕೊನೆಗೆ ಒಬ್ಬರಿಂದ ಒಬ್ಬರು ಸ್ವತಂತ್ರರಾಗುತ್ತಾರೆ. ಯುವಕ ಜನಾಂಗದಲ್ಲಿಯಂತೂ ಈಗೀಗ ಯಾವ ವಿಧವಾದ ತಡೆಗಟ್ಟೂ ಇಲ್ಲ. ಚಿಕ್ಕ ಚಿಕ್ಕ ಹುಡುಗರೂ ಹುಡುಗಿಯರೂ ಸಿಗರೇಟು

ಸೇದುವುದು ಸರ್ವಸಾಮಾನ್ಯ. ಇದಕ್ಕೂ ಹೆಚ್ಚಾಗಿ ಕುಡಿಕತನ, ಭಾಂಗ್, ಎಲ್. ಎಸ್. ಡಿ., ಮಾರಿವ್ಹಾನಾ, (Marijuana) ಮೊದಲಾದ ತೀವ್ರ ಪರಿಣಾಮದ ಮಾದಕ ಪದಾರ್ಥಗಳನ್ನು ಸೇವಿಸುವುದು ಇಲ್ಲಿನ ಯುವಕ–ಯುವತಿಯರಲ್ಲಿರುವ ಕೆಲವು ದುರ್ವ್ಯಸನಗಳು. ಇವರು ತಮ್ಮ ಮನೆಗಳಲ್ಲಿನ ಅಶಾಂತ ವಾತಾವರಣದಿಂದಲೂ ಜೀವನದ ವಾಸ್ತವಿಕ ಸಂಗತಿಗಳಿಂದಲೂ ಬಿಡಿಸಿಕೊಳ್ಳಲು ಈ ದುರಭ್ಯಾಸಗಳ ಆಸರೆ ಪಡೆಯುತ್ತಾರೆ. ಈ ಆಧುನಿಕ ಜಗತ್ತು ಇಂತಹ (ಅಧೋ) ಗತಿಗೆ ಬಂದಿದೆಯೆ? ಎಂದು ತುಂಬಾ ಬೇಸರವಾಗುತ್ತದೆ.

ಮನಸ್ಸು ಈ ಸ್ಥಿತಿಯಲ್ಲಿದ್ದಾಗ ಭಾರತದ ಸ್ವಾಮಿ ಚಿನ್ಮಯಾನಂದರವರ ಉಪನಿಷತ್ತುಗಳನ್ನು ಕುರಿತು ಕೊಡುತ್ತಿರುವ ಭಾಷಣಗಳನ್ನು ಕೇಳಿ ಸಮಾಧಾನವಾಯಿತು. ಉಸಿರು ಕಟ್ಟಿದಂತಿದ್ದ ಮನಸ್ಸಿಗೆ ಒಂದು ಹೊಸ ಉಸಿರು ಬಂದಂತಾಯಿತು. ಅವರ ವಾಗ್ಝಾಲ, ಜ್ಞಾನಸಂಪತ್ತು ಕಂಡು ನಮ್ಮ ಭಾರತೀಯ ಋಷಿವರ್ಯರು ಕತ್ತಲೆಯಲ್ಲಿರುವ ಪಾಶ್ಚಾತ್ಯಕ್ಕೆ ತರುವ ಹೊಸ ಬೆಳಕನ್ನು ಕಂಡು ಹೆಮ್ಮೆಪಡುವಂತಾಯಿತು. ಇಲ್ಲಿ ಅನೇಕ ನಮ್ಮ ಸ್ನೇಹಿತರು ನಮ್ಮ ಅಧ್ಯಾತ್ಮಿಕ ವಿಷಯಗಳಲ್ಲಿಯೂ ಜೀವನ ಕ್ರಮದಲ್ಲಿಯೂ ತುಂಬಾ ಆಸಕ್ತಿಯನ್ನು ಪಡೆದಿದ್ದಾರೆ. ಪಾಶ್ಚಾತ್ಯದಲ್ಲಿ ಸಾಮಾಜಿಕ ದಾನಧರ್ಮವಿದೆ. ಆದರೆ ವ್ಯಕ್ತಿಯೊಬ್ಬನಿಗೆ ಉದಾರ ಮನಸ್ಸಿನಿಂದ ದಾನ ಮಾಡುವವರಿಲ್ಲ. ಇಲ್ಲಿನ ಶ್ರೀಮಂತರು ಯಾವುದಾದರೊಂದು ಸಮಾಜ ಕಾರ್ಯಕ್ಕೆ ಅಥವಾ ಸಂಸ್ಥೆಗೆ ಸಾವಿರಾರು ಪೌಂಡುಗಳನ್ನು ದಾನಮಾಡಲು ಹಿಂಜರಿಯುವುದಿಲ್ಲ. ಆದರೆ ಅದೇ ಜನ ಮನೆಗೆ ಅನಿರೀಕ್ಷಿತನಾಗಿ ಬರುವ ಅತಿಥಿಗೆ ಒಂದೂಟವನ್ನು ಕೂಡ ಬಡಿಸಲಾರರು. ಹೀಗಿದೆ ಇಲ್ಲಿನ ಸಾಮಾಜಿಕ ದಾನಧರ್ಮ.

ಇಲ್ಲಿನ ವೃದ್ಧರ ಪುರಾಣವನ್ನೇಕೆ ಬರೆದೆನೋ ತಿಳಿಯದು. ಇಂದೇ ಬೆಳಿಗ್ಗೆ ಬಸ್ ಪ್ರಯಾಣ ಮಾಡುತ್ತಿದ್ದಾಗ ಒಬ್ಬ ಮುದುಕಿ ಓಡುತ್ತ, ಓಡುತ್ತ ಬಂದು ಬಸ್ ಹತ್ತಿ, ಮೇಲಿಂದ ಮೇಲೆ ಬರುವ ಉಸಿರನ್ನು ಕಷ್ಟಪಟ್ಟು ಹಿಡಿತದಲ್ಲಿಟ್ಟುಕೊಂಡು, "ಈ ದೇಶದಲ್ಲಿ ವೃದ್ಧರಾಗಿ ಬಾಳುವುದು ಒಂದು ಮಹಾ ಪಾಪ!" ಎಂದು ಉದ್ಗಾರ ತೆಗೆದಳು. ಇದರಿಂದಾಗಿರಬಹುದು,........ಮನಸ್ಸಿಗೆ ಬಂದುದನ್ನು ಬರೆದೆ, ನನ್ನ ಅಭಿಪ್ರಾಯಗಳು ತಪ್ಪಿರಬಹುದು........

ಇತಿ ನಿಮ್ಮ
ಚಂದಮ್ಮ.

* * * * *

ಲಂಡನ್
3 – 8 – 1966

ಪ್ರೀತಿಯ ಅಮ್ಮ,

........ಕಿಂಗ್ಸ್‌ಲೆಂಗ್ಲೀ (Kings Langley) ಎಂಬಲ್ಲಿ ಹೋಗಿ ಬಂದೆವು. ಕೆಲವು ಸಲ ನಮ್ಮ ಶಾಸ್ತ್ರೀಯ ನೃತ್ಯ ಪ್ರದರ್ಶನಗಳು ಅನಾವಶ್ಯಕವಾದ ವಿನೋದವಾಗಿ ಪರಿಣಮಿಸಿವೆ (Misfits). ಕಿಂಗ್ಸ್ ಲೆಂಗ್ಲೀಯಲ್ಲಿ ಅಂದು ರಾತ್ರಿ Ball Room Dancing ಏರ್ಪಡಿಸಿದ್ದರು. ಅದಕ್ಕೆ ಮೊದಲು ಸ್ವಲ್ಪ ಸಮಯ ಭಾರತೀಯ ನೃತ್ಯ ಪ್ರದರ್ಶನ ಕಾರ್ಯಕ್ರಮ ಎಂದು ತೀರ್ಮಾನವಾಗಿತ್ತು. ಆದರೆ ಲಘು ವಿನೋದವನ್ನು ಅಪೇಕ್ಷಿಸಿ ಬಂದ ಜನಸಂದಣಿಗೆ ನಮ್ಮ ನೃತ್ಯಗಳು ಏನೂ ಹಿಡಿಸಲಿಲ್ಲ! ಭಾರತೀಯ ನೃತ್ಯಕಲೆ ಒಂದು ಅಪಾರ ಕಲೆ, ಕಣ್ಣು ಆನಂದ ಪಡೆಯುವಾಗ ಬುದ್ಧಿಯನ್ನೂ ಉಪಯೋಗಿಸಬೇಕಾಗುತ್ತದೆ. ಅದೇ ಆ ಜನಕ್ಕೆ ಅಂದು ಕಷ್ಟವಾಯಿತು.

ಲೂಟನ್ (Luton) ಎಂಬಲ್ಲೂ ಅದೇ ಗತಿಯಾಯಿತು. ಆದರೆ ಅಲ್ಲಿ ಪಾಶ್ಚಾತ್ಯರ ಅನಾದರವಲ್ಲ. ಭಾರತೀ - ಪಾಕಿಸ್ತಾನ ಜನರ ಅಸಡ್ಡೆ! ಲೂಟನ್ ಒಂದು ಕೈಗಾರಿಕಾ ಪಟ್ಟಣ. ಅಲ್ಲಿನ ಭಾರತೀಯ ಸಂಸ್ಥೆಯೊಂದು ಪಟ್ಟಣದ ಸಾವಿರಾರು ಭಾರತ-ಪಾಕಿಸ್ತಾನ ಜನಸಂಖ್ಯೆಯ ವಿನೋದಕ್ಕೆಂದು ನಮ್ಮ ನೃತ್ಯಗಳನ್ನು ಏರ್ಪಡಿಸಿತು! ಲಘು ವಿನೋದ ಕಾರ್ಯಕ್ರಮವನ್ನು ಅರಿಸಿ ಬಂದ ಅಂದಿನ ಭಾರತ-ಪಾಕಿಸ್ತಾನ ಜನರು ನಮ್ಮ ಶಾಸ್ತ್ರೀಯ ನೃತ್ಯ ಮಾತ್ರವಲ್ಲ, ಜಾನಪದ ನೃತ್ಯಗಳನ್ನೂ ಒಪ್ಪಲಿಲ್ಲ. ನಮ್ಮ ಕಾರ್ಯಕ್ರಮವನ್ನೇ ಬದಲಾಯಿಸಬೇಕಾಯಿತು. ಆದರೂ ಜನರು ಗದ್ದಲ, ಗಲಭೆ ಎಬ್ಬಿಸಿದರು. ಪ್ರೇಕ್ಷಕರಲ್ಲಿ ಕೆಲವರು, ಪಾಶ್ಚಾತ್ಯರು. ತಮ್ಮ ದೇಶದ ನೃತ್ಯಕ್ಕೆ ಅವರು ತೋರಿಸುವ ತಿರಸ್ಕಾರವನ್ನು ಕಂಡು ಆಶ್ಚರ್ಯಪಟ್ಟರು, ಅಸಮಾಧಾನಪಟ್ಟರು. ಪತಿಯವರು ತೀರ ಕೋಪಗೊಂಡು "ದಯವಿಟ್ಟು ಗಲಾಟೆ ಮಾಡಬಾರದು! ನೃತ್ಯ ನೋಡಲು ಬಂದವರಿಗೆ ನೋಡಲು ಅವಕಾಶ ಕೊಡಿ! ಇಷ್ಟವಿಲ್ಲದವರು ಖಂಡಿತ ಮಂದಿರ ಬಿಟ್ಟು ಹೊರಗೆ ಹೋಗಬಹುದು. ಅನುಕೂಲ ಮಾಡಿಕೊಡಿ" ಎಂದು ಕೇಳಿಕೊಂಡರು. ಅವರು ಹೇಳಿದ್ದೇ ತಡ, ಅನೇಕರು ಕುರ್ಚಿಗಳನ್ನು ಅತ್ತ, ಇತ್ತ ತಳ್ಳಿ, ಎಳೆದು, ಶಬ್ದ ಮಾಡಿ ರಂಗಮಂದಿರವನ್ನು ಬಿಟ್ಟು ಎದ್ದು ಹೊರಟೇ ಹೋದರು! ಆಮೇಲೆ ನಮ್ಮ ಕಾರ್ಯ್ಯಕ್ರಮವನ್ನು ಮುಂದುವರಿಸಿದೆವು. ಆದರೆ ಮನಸ್ಸಿಗೆ ನೆಮ್ಮದಿ ಇಲ್ಲದ ಕಾರಣ ಯಾಂತ್ರಿಕ ನೃತ್ಯವನ್ನು ಮಾಡಬೇಕಾಯಿತು. ಲೂಟನ್ ನಮಗೇ ಒಂದು ಕಹಿ ಅನುಭವವಾಯಿತು. ನಮ್ಮ ಕಲೆಗೆ ನಮ್ಮವರೇ ಈ ರೀತಿಯ ಅನಾದರ ತೋರಿಸುವುದು ಹಿತವಾಗಿರಲಿಲ್ಲ........

ಲಂಡನ್ನಿನ ಸೌತೊಲ್ (Southall) ಎಂಬ ನಗರ ಬಡಾವಣೆಯಲ್ಲಿ ಎಲ್ಲರೂ ಭಾರತ-ಪಾಕಿಸ್ತಾನದವರೇ ವಾಸಿಸುತ್ತಾರೆ. ಅದೊಂದು ಒಂದು ಚಿಕ್ಕ ಭಾರತ ದಂತೆಯೇ ಇದೆ. ಅಲ್ಲಿನ ಚಲನ ಚಿತ್ರ ಮಂದಿರದಲ್ಲಿ ನಮ್ಮ ನೃತ್ಯ ಪ್ರದರ್ಶನವಿತ್ತು. ಕಿಕ್ಕಿರಿದ ಭಾರತ-ಪಾಕಿಸ್ತಾನ ಜನರು ನಮ್ಮ ಶಾಸ್ತ್ರೀಯ ನೃತ್ಯಗಳನ್ನೂ ಜಾನಪದ ನೃತ್ಯಗಳನ್ನೂ ಒಪ್ಪದೆ ತಮ್ಮ ಅಸಮಾಧಾನವನ್ನು ಚೆನ್ನಾಗಿ ಬಹಿರಂಗವಾಗಿ ವ್ಯಕ್ತ ಪಡಿಸಿದರು. ನಮ್ಮ ಶಿಷ್ಯೆಯರು ರಂಗಸ್ಥಳಕ್ಕೆ ಬಂದೊಡನೆ ಚಿಕ್ಕ ಚಿಕ್ಕ ಕಾಗದದ ಚೂರುಗಳನ್ನು ಅವರ ಮೈಮೇಲೆ ಬಿಸಾಡಿ ಆನಂದಿಸುತ್ತಿದ್ದರು. ಅವರು ಒಳಗೆ ಬಂದು ನಮ್ಮೊಡನೆ ನಡೆದ ವಿಷಯವನ್ನು ಹೇಳಿ ಕಣ್ಣೀರಿಟ್ಟರು. ಪತಿಯವರು ತುಂಬಾ ನೊಂದುಕೊಂಡು ಪ್ರದರ್ಶನವನ್ನು ಒಡನೆ ನಿಲ್ಲಿಸಿಯೇ ಬಿಟ್ಟರು! ಸಮಯಕ್ಕೆ ತಕ್ಕ ಮನೋವೃತ್ತಿ ನಿರ್ಣಯ (Decision) ಕೊಡಲು ಪತಿಯವರು ಅಗ್ರಗಣ್ಯರು. ತಮ್ಮ ದೇಶದ ಯಾವ ಕಲೆಯನ್ನೂ, ಯಾವ ಸಂಸ್ಕೃತಿಯನ್ನೂ ತಿಳುವಳಿಕೆಯಿಂದ ಅರಿಯದ ಈ ಭಾರತೀಯರನ್ನು ಕಂಡು ನಮಗೆ ನಾಚಿಕೆಯಾಯಿತು.

ಯಾವ ಕಾರಣಕ್ಕೆ ಈ ಭಾರತೀಯರು ಈ ಮನೋಸ್ಥಿತಿಯನ್ನು ಪಡೆದಿದ್ದಾರೆ ತಿಳಿಯದು. ಅವಕ್ಕೂ ಕಾರಣವಿರಬೇಕು. ತಲೆಯಾಂತರಗಳಿಂದ ಈ ಭಾರತೀಯರು ತಮ್ಮ ದೇಶವನ್ನು ಬಿಟ್ಟು ಇಲ್ಲಿಗೆ ಬಂದು ನೆಲೆಸಿದ್ದ ಕಾರಣ ತಮ್ಮ ಮೂಲವನ್ನೇ ಕಳಕೊಂಡಿದ್ದಾರೆ. ಭಾರತದಲ್ಲಿ ಭಾರತೀಯರು ದೊಡ್ಡ ಜನಾಂಗ-ಆದರೆ ಇಲ್ಲಿ ನಮ್ಮ ಜನರನ್ನು ಕಂಡರೆ ಹೆಮ್ಮೆ ಪಡುವಂತಿಲ್ಲ. ನಮ್ಮ ದೇಶದಲ್ಲಿ ಯಾವ ಕೆಲಸವನ್ನೂ ಮಾಡದೆ ನಿರುದ್ಯೋಗಿಯಾದ ಜನತೆ ಇಲ್ಲಿಗೆ ಬಂದು ಸಣ್ಣ ಪುಟ್ಟ ದಿನಚರಿಯ ಕೆಲಸವನ್ನಾದರೂ ಮಾಡಿ ಇಲ್ಲಿನ ಸಮಾಜದಿಂದ ಧಾರಾಳವಾಗಿ ಹಣವನ್ನು ಸಂಪಾದಿಸುತ್ತಾರೆ. ನಿರಕ್ಷರ ಕುಕ್ಷಿಗಳಿದ್ದರೆ ನಮ್ಮ ದೇಶದಲ್ಲಿ ಹಣ ಸಂಪಾದಿಸುವುದು ಕಷ್ಟ. ಆದರೆ ಇಲ್ಲಿ ಅಂತಹ ಜನರು ಬೇಕಾದಷ್ಟು ಹಣ ಸಂಪಾದಿಸಿ ಮನೆಗಳನ್ನು ಕಟ್ಟಿಕೊಂಡು ಆರಾಮವಾಗಿ ವಾಸಿಸುತ್ತಾರೆ. ಹೆಚ್ಚಾಗಿ, ಭಾರತೀಯ ಆಹಾರವನ್ನು ತಯಾರಿಸಿ ನಮ್ಮ ಜನಕ್ಕೆ 'ಹಾಸ್ಟಲ್' (ವಸತಿ ಗೃಹ) ಗಳನ್ನು ನಡೆಸಿಕೊಂಡು ಬಂದು ಹಣ ಶೇಖರಿಸುವವರು ಹಲವಾರು ಮಂದಿ ಇದ್ದಾರೆ. ಅಂತೂ ನಮ್ಮ ಜನಕ್ಕೆ ಹಣ ಸಂಪಾದನೆಗೆ ಈ ದೇಶದಲ್ಲಿ ವಿಧವಿಧದ ಅವಕಾಶಗಳಿವೆ ಎನ್ನಬೇಕು.

ಏನೋ ಇಲ್ಲಿಯ ಭಾರತೀಯರ ವಿಷಯ ಮಾತನಾಡುತ್ತಿದ್ದರೆ ಮನಸ್ಸು ನೋಯುತ್ತದೆ. ಮೊನ್ನೆ ಇಲ್ಲಿನ ಜಿಂಖಾನಾ ಕ್ಲಬ್ಬಿನಲ್ಲಿ ನಮ್ಮ ನೃತ್ಯ ಪ್ರದರ್ಶನವಿತ್ತು. ಆದರೆ ಅದು ಕಲೆಯಾಗಿರಲಿಲ್ಲ, ವಿನೋದದ ಕಾರ್ಯಕ್ರಮವಾಗಿತ್ತು. ಈ ತರಹದ ವೃತ್ತಿಯನ್ನು ನಾವು ನಮ್ಮ ದೇಶದಲ್ಲಿ 15 ವರ್ಷಗಳ ಕೆಳಗೆ ಬಿಟ್ಟಿದ್ದೆವು. ಆದರೆ ಇಲ್ಲಿ A. M. C. ಕೊಡುವ ಎಲ್ಲಾ ಕೆಲಸಗಳನ್ನೂ ಮಾಡಬೇಕಾಗುತ್ತದೆ.

ಮನಸ್ಸು ಒಪ್ಪದಿದ್ದರೂ! ಇಲ್ಲಿ ಕೆಬೆರೇ (Cabaret) ಎಂಬ ಶಬ್ದಕ್ಕೆ ಒಂದು ವಿಧದ ಅಂತಸ್ತು ಇದೆ. ದೊಡ್ಡ ದೊಡ್ಡ ಪ್ರಸಿದ್ಧ ಕಲಾವಿದರೂ ಕೂಡ ಅದರಲ್ಲಿ ಗೌರವ ವಾಗಿ ವಿನೋದವನ್ನು ಒದಗಿಸುವ ಕಾರಣ ಕೆಬೆರೇ ಒಂದು ಮರ್ಯಾದೆಯ ಕಸುಬಾ ಗಿದೆ, ಎಂದು ನಮ್ಮ ಡೈರೆಕ್ಟರ್ ನಮಗೆ ಧೈರ್ಯ ಕೊಟ್ಟಿದ್ದರು. ಆದರೂ ನಮ್ಮ ನೃತ್ಯಗಳು, ಶಾಸ್ತ್ರೀಯ ಹಾಗೂ ಜಾನಪದ–ಆ ಕ್ರಮಕ್ಕೆ ಹೊಂದಿಕೊಂಡು ಹೋಗುವು ದಿಲ್ಲ. ಪತಿಯವರೂ ನಾನೂ ನರ್ತಿಸುವಾಗ ನಮ್ಮ ಸುತ್ತಲೂ ಇರುವ ಜನಶ್ರೇಣಿ ಯನ್ನು ಕಂಡು ವಿಚಿತ್ರ ಅನುಭವವನ್ನು ಪಡೆದೆವು. ಅಂದು ನಾವು ಅಲ್ಲಿ ನೆರೆದಿದ್ದ ಜನರ ವಿನೋದದ ವಸ್ತುಗಳಾಗಿದ್ದೆವು! ಇಲ್ಲಿ ಈ ಭಾರತೀಯರು ಜೀವನಕ್ಕೆ ಬೇಕಾ ಗುವ ಎಲ್ಲಾ ಸುಖ ಸೌಕರ್ಯಗಳನ್ನು ಅನುಭವಿಸಿ ಯೋಚನೆಯಿಲ್ಲದೆ ಸಂತೋಷವಾಗಿ ದ್ದಾರೆ. ಅವರಲ್ಲಿ ಅನೇಕರು 'ಬಿಳಿ' ಸ್ತ್ರೀಯರನ್ನು ಮದುವೆ ಮಾಡಿಕೊಂಡು ಇಲ್ಲೇ ನೆಲೆಸಿ, ಭಾರತದ ಕಷ್ಟ-ನಷ್ಟ, ಸುಖ-ದುಃಖಗಳ ಪರಿವೆಯೇ ಇಲ್ಲದೆ ಜೀವಿಸುತ್ತಾರೆ. ಆ ಜಿಂಖಾನಾ ಕ್ಲಬ್ಬಿನಲ್ಲಿ ಅಂದು ಕ್ಲಬ್ಬಿನ 50ನೇ ವರ್ಷದ ಉತ್ಸವದ ಸಂಭ್ರಮ. ನಾವು ಮಾತ್ರ ಆ ಸಮಯವನ್ನು ಆನಂದಿಸಲಿಲ್ಲ. ಏಕೆಂದರೆ ನಮ್ಮನ್ನು ಅವರು ಅಂದಿನ ಕೇವಲ ವಿನೋದ ಕೊಡುವ ವಸ್ತುಗಳೆಂದು ಪರಿಗಣಿಸಿದ್ದರು. ಆ ಜನ ರಂತೂ ನಮ್ಮ ನೃತ್ಯಗಳನ್ನು ನೋಡಲು ಸಹಾ ಇಚ್ಛೆಪಡಲಿಲ್ಲ. ಪಾನೀಯ, ಆಹಾರ, ಕಾಫಿ, ಕುಡಿತ, ಧೂಮಪಾನ ಮುಂತಾದುವುಗಳಲ್ಲೇ ಹೆಚ್ಚಾದ ಇಚ್ಛೆಪಡೆದು ಸ್ವರ್ಗೀಯ ಸುಖವನ್ನು ಅನುಭವಿಸುತ್ತಿದ್ದರು.

ಅಂತೂ ಇದೂ ಒಂದು ಲಂಡನ್ನಿನ ಅನುಭವ. ಶ್ರೀ ಅಂಗಡಿಯವರು ಕಲೆಗೂ ಕಲಾವಿದರಿಗೂ ಒಳ್ಳೆಯ ಸ್ಥಾನವನ್ನೂ ಅಂತಸ್ತನ್ನೂ ಕಲ್ಪಿಸಬೇಕೆಂದು ಹೆಣಗಾಡುತ್ತಿ ದ್ದಾರೆ. ಆದರೆ ಇಲ್ಲಿನ ಈ ಭಾರತೀಯರು ತಮ್ಮ ಕಲೆಯನ್ನೇ ಗೌರವದಿಂದ ನೋಡಲು ಕಲಿಯದೆ ಇದ್ದುದು ಚಿಂತಾಜನಕವಾಗಿದೆ. ಅವರ ಪಾಶ್ಚಾತ್ಯ ವಿದ್ಯಾ ಭ್ಯಾಸದ ಫಲವೆಲ್ಲಿ ಹೋಯಿತು? ಇದನ್ನು ಕಂಡ ಮೇಲಂತೂ ನಮ್ಮ ಮಕ್ಕ ಳನ್ನು ಹೆಚ್ಚಿನ ವಿದ್ಯಾಭ್ಯಾಸಕ್ಕೆಂದು ಏತಕ್ಕೆ ಪಾಶ್ಚಾತ್ಯಕ್ಕೆ ಕಳುಹಿಸುತ್ತೇವೆ? ನಮ್ಮ ದೇಶವನ್ನು ಮರೆಯಲೆಂದೇ? ತಮ್ಮ ಕಲೆಯನ್ನು ಮರೆಯಲೆಂದೇ? ಈ ವಿದ್ಯೆಯಿಂದ ನಮಗೆ ಯಾವ ಉಪಯೋಗವಿದೆ? ಈ ಎಲ್ಲ ವಿಚಾರ ಗಳಿಂದ ಮನಸ್ಸು ಅಲ್ಲೋಲ ಕಲ್ಲೋಲವಾಗುತ್ತದೆ. ಪರದೇಶದಲ್ಲಿದ್ದರೂ ಭಾರತೀಯರು ಇಲ್ಲಿ ಒಗ್ಗಟ್ಟಿನಲ್ಲಿಲ್ಲ, ವಿವಿಧ ಗುಂಪುಗಳು! ಮಹಾ ಭಾರತ, ರಾಮಾ ಯಣ ಮರೆತಿರುವ ಜನತೆ!

ಅಮ್ಮಾ, ಚಿಕ್ಕಂದಿನ ಜ್ಞಾಪಕ ಬರುತ್ತದೆ. ಪುತ್ತೂರಿನಲ್ಲಿ ಸಂಜೆ ದೀಪ ಹತ್ತಿ ಸುವ ವೇಳೆ, (ವಿದ್ಯುಚ್ಛಕ್ತಿ ಆಗ ಪುತ್ತೂರಿಗೆ ಬಂದಿರಲಿಲ್ಲ) ದೀಪ ಕಂಬದ ಬೆಳಕಿನಲ್ಲಿ

ನೀವು ತುಳಸೀದಾಸ ರಾಮಾಯಣವನ್ನು ಓದಿ ನಮಗೆ ತಿಳಿಯುವಂತೆ ನಮ್ಮ ಭಾಷೆಯಲ್ಲಿ ಭಾಷಾಂತರಿಸಿ ನಮ್ಮನ್ನು ಮಹತ್ತಾದ ಅಂದವಾದ ಜಗತ್ತಿನಲ್ಲಿ ಸುತ್ತಾಡುವಂತೆ ಮಾಡುತ್ತಿದ್ದೀರಿ. ನಮ್ಮ ಜೊತೆ ಒಂದು ಮಣೆ ಹನುಮಂತನಿಗೂ ಇಡುತ್ತಿದ್ದೆವು! ಮಲಗುವ ಸಮಯ ನೀವು ವಿವರಿಸಿದ ರಾಮಾಯಣದ ಕಥೆಗಳೇ ಲಾಲಿಯಾಗಿ ನಿದ್ದೆ ಬರುವಂತೆ ಮಾಡುತ್ತಿದ್ದುವು. ಎಂದು ಮರುದಿನ ಉದಯಿಸುವುದು, ಸಾಯಂಕಾಲದ ಸಮಯ ಬರುವುದು, ಎಂದು ರಾಮಾಯಣವನ್ನು ನೀವು ಮುಂದೆ ವಿವರಿಸುವಿರಿ ಎಂಬ ಆತುರ ತಡೆಯಲಾರದೆ ಉತ್ಸುಕತೆಯಿಂದ ಕಾಯುತ್ತಿದ್ದೆವು. ಅಂದು ನೀವು ಕೊಟ್ಟ ಆ ವಿದ್ಯೆ, ವಿದ್ಯಾಭ್ಯಾಸ, ಸಂಸ್ಕೃತಿ, ಇಂದು ಪರದೇಶಗಳಲ್ಲಿ ನಮ್ಮನ್ನು ಕಾಪಾಡುತ್ತದೆ, ಎಚ್ಚರಿಸುತ್ತಿದೆ. ನಿಮ್ಮಂತಹ ಹೆತ್ತವರನ್ನು ಪಡೆಯಲು ಎಷ್ಟು ಜನ್ಮದ ಪುಣ್ಯ ಮಾಡಿದ್ದೆವೋ ?

ಇತಿ ನಿಮ್ಮ
ಚಂದಮ್ಮ.

* * * *

ಲಂಡನ್
5 – 8 – 1966

ಆತ್ಮೀಯರೇ,

........ಅಂತೂ ಕೊನೆಗೆ ಯೆಹೂದಿ ಮೆನುಹಿನ್‌ರ (Yehudi Menuhin) ಭೇಟಿಯಾಯಿತು. A. M. C. ಯ ಅಂತರರಾಷ್ಟ್ರೀಯ ಅಧ್ಯಕ್ಷರಾದ ಅವರನ್ನು ನಾವು ಕಾಣಬೇಕೆಂದು ಅಂಗಡಿಯವರು ಬಹಳ ದಿನಗಳಿಂದ ಪ್ರಯತ್ನಿಸುತ್ತಿದ್ದರು. ಯೆಹೂದಿ ಮೆನುಹಿನ್‌ರು ಎಷ್ಟೊಂದು ಬಿಡುವಿಲ್ಲದ ವ್ಯಕ್ತಿಯೆಂದರೆ ಅವರ ಸಂಗೀತ ಕಾರ್ಯಕ್ರಮಗಳು ವಿಶ್ವದಲ್ಲೆಲ್ಲ ದಿನದಿಂದ ದಿನಕ್ಕೆ ಎಂಬಂತೆ ಒಂದು ವರ್ಷಕ್ಕೆ ಮುಂಚಿತವಾಗಿಯೇ ಏರ್ಪಾಡಾಗುತ್ತದೆ! ಅವರ ಬಿಗಿಯಾದ ದಿನಚರಿಯಲ್ಲಿ ಕೆಲವು ನಿಮಿಷಗಳ ಮಾತ್ರಕ್ಕೂ ನಮ್ಮನ್ನು ಕಾಣುವುದು ಅವರಿಗೆ ಬಹಳ ಕಷ್ಟವಾಗಿತ್ತು. ಆದರೆ ಒಮ್ಮೆ ಅವರನ್ನೂ ಅವರ ತಂಗಿ ಹೆಪ್‌ಸಿಬಾ (Hepsiba) ರವರನ್ನು ಅವರಿಗೆ ಪ್ರಿಯವಾದ ಸಂಗೀತ ರಿಕಾರ್ಡಿಂಗ್ ಕೋಣೆಯಲ್ಲೇ ಭೇಟಿ ಮಾಡಬೇಕಾಯಿತು! ಅದೊಂದು ದೊಡ್ಡ ಕಲಾ ಮಂದಿರವಾಗಿತ್ತು (Studio). ಅಲ್ಲಿ ಅವರು ತಮ್ಮ ದಿವ್ಯ ಸಂಗೀತವನ್ನು ಪಿಟೀಲಿನಲ್ಲಿ ಬಾರಿಸುತ್ತಿರುವಾಗ ಜೊತೆಗೆ ತಂಗಿ ಹೆಪ್ಸಿಬಾ ಪಿಯಾನೋವನ್ನು ನುಡಿಸುತ್ತಿದ್ದರು. ಈ ಕಾರ್ಯದ ಮಧ್ಯದಲ್ಲಿ ಅವರು ಆಗಾಗ್ಗೆ ನಮ್ಮೊಡನೆ ಸೇರಿ ಮಾತನಾಡಿದರು. ಸುಮಾರು ಒಂದು ಗಂಟೆಯ ಕಾಲ ಅವರನ್ನೂ

ಅವರ ಅಭ್ಯಾಸವನ್ನೂ ನಮ್ಮ ಸಮಕ್ಷಮದಲ್ಲಿಯೇ ಆಗುತ್ತಿದ್ದ ಅವರ ರಿಕಾರ್ಡಿಂಗನ್ನೂ ನೋಡಿ ತುಂಬಾ ಹರ್ಷಿತರಾದೆವು. ಕೊನೆಗೆ ಎಲ್ಲವೂ ಮುಗಿದ ನಂತರ ಅವರು ಆರಾಮವಾಗಿ ನಮ್ಮಲ್ಲಿ ಬಂದು,"ನಿಮಗೆ ತುಂಬಾ ಬೇಸರ ಬಂದಿರಬೇಕು, ಅಲ್ಲವೇ— ನಮ್ಮ ಸಂಗೀತದಿಂದ ? ಕ್ಷಮಿಸಬೇಕು " ಎಂದರು. ಅವರ ಸಂಗೀತದ ಬೇಸರವೇ ! ಅವರು ಪಿಟೀಲನ್ನು ಬಾರಿಸುವುದನ್ನು ನೋಡುವ, ಕೇಳುವ ಸುಸಂದರ್ಭ ದೊರಕಿದುದೇ ನಮ್ಮ ಮಹಾ ಪುಣ್ಯ. ಜಗತ್ಪ್ರಸಿದ್ಧ ಸಂಗೀತಗಾರರಾದ ಮೆನುಹಿನ್‌ರಲ್ಲಿ ಅದೆಷ್ಟು ನಮ್ರತೆ! 'ತುಂಬಿದ ಕೊಡ ತುಳುಕುವುದಿಲ್ಲ' ಎಂಬ ಮಾತು ನಿಜಕ್ಕೂ ಎಷ್ಟು ಸತ್ಯ ! ಅವರು ನಮ್ಮ ಇಲ್ಲಿನ ಕಾರ್ಯಕಲಾಪಗಳ ವಿಚಾರವಾಗಿಯೂ ಮುಂದಿನ ನಮ್ಮ ಕಾರ್ಯಕ್ರಮಗಳನ್ನು ಕುರಿತೂ ಎಲ್ಲ ಕೇಳಿ ತಿಳಿದುಕೊಂಡರು. ಅವರು ಕೆಲವು ವರ್ಷಗಳ ಹಿಂದೆ ಬೆಂಗಳೂರಿಗೆ ಬಂದಾಗ ನಾವು ಅವರಿಗಾಗಿ ಕೊಟ್ಟ ನೃತ್ಯ ಪ್ರದರ್ಶನವನ್ನು ಅವರು ನೆನಸಿಕೊಂಡರು. ಶ್ರೀ ಅಂಗಡಿಯವರು ನಾವು ಇಂದಿನವರೆಗೆ ಇಲ್ಲಿ ಸಾಧಿಸಿದ ಕಾರ್ಯಸಿದ್ಧಿಯನ್ನು ಕುರಿತು ಹೆಮ್ಮೆಯಿಂದ ತಿಳಿಸಿ ಮುಂದೆ ಪ್ರದರ್ಶಿತವಾಗುವ ನೃತ್ಯ ನಾಟಕಗಳ ವಿಷಯವನ್ನೂ ತಿಳಿಸಿದರು. ಮೆನುಹಿನ್‌ರು ನಮ್ಮ ನೃತ್ಯ ಪ್ರದರ್ಶನಗಳನ್ನು ಒಮ್ಮೆಯಾದರೂ ನೋಡಬೇಕೆಂಬ ಆಸೆ ತನಗಿದೆ ಎಂದರು. ಅವರಿಗೆ ಭಾರತೀಯ ಕಲೆಗಳ ಮೇಲಿರುವ ಅಭಿಮಾನ ಅಷ್ಟಿಷ್ಟಲ್ಲ. ಒಂದು ವೇಳೆ ಅವರು ನಮ್ಮ ಯಾವ ಪ್ರದರ್ಶನಕ್ಕೆ ಬಾರದಿದ್ದರೂ ಅವರ ಬಿಡುವಿಲ್ಲದ ಜೀವನ ಕ್ರಮವನ್ನು ತಿಳಿದಿರುವ ನಾವು ಎಂದೂ ತಪ್ಪು ಗ್ರಹಿಸಿಕೊಳ್ಳುವುದಿಲ್ಲ.

ಅವರೊಮ್ಮೆ ರಾಯಲ್ ಆಲ್ಬರ್ಟ್ ಹಾಲಿನಲ್ಲಿ (Royal Albert Hall) ನಮ್ಮ ಭಾರತೀಯ ಕಲೆಗಳ ವಿಚಾರವಾಗಿ ತುಂಬಾ ಮೆಚ್ಚುಗೆಯಿಂದ ಮಾತನಾಡಿದುದನ್ನು ನಾವು ಕೇಳಿದ್ದೇವೆ. ಅಲ್ಲಿ ಅಂದು ನಮ್ಮ ದೇಶದ ಲಘು ಮತ್ತು ಜಾನಪದ ಸಂಗೀತಗಳ ಕಾರ್ಯಕ್ರಮವಿತ್ತು. ಭಾರತದ ಶಾಸ್ತ್ರೀಯ ಸಂಗೀತ ಈಗ ಇಲ್ಲಿ ಹೇಗೆ ಮನೆ ಮನೆ ಮಾತಾಗಿದೆಯೆಂದು ತಿಳಿಸಿ – (ಈಗೀಗ ಇಲ್ಲಿನ ಪಾಶ್ಚಾತ್ಯ ಮನೆಗಳಲ್ಲಿ ರವಿಶಂಕರರ ರಿಕಾರ್ಡುಗಳಿಲ್ಲದಿರುವುದು ತೀರಾ ಅಪರೂಪ) – ನಮ್ಮ ಜಾನಪದ ಮತ್ತು ಲಘು ಸಂಗೀತವನ್ನು ಕುರಿತು ಬಾಯಿತುಂಬಾ ಹೊಗಳಿ, ಅವು ಜನಾಂಗದ ಉಸಿರೇ ಎಂಬುದಾಗಿ ತಿಳಿಸಿದರು. " ಮನುಷ್ಯನು ಜಾನಪದ ಸಂಗೀತವನ್ನು ಮನಸ್ಸಿನಿಂದ ಅಲ್ಲ, ಹೃದಯದ ಅಂತರಾಳದಿಂದ ಹಾಡುವ ವಿದ್ಯೆ. ಈ ಸಂಗೀತದಲ್ಲಿನ ಪ್ರೇಮ ಗೀತೆಗಳು ಹಾಗೂ ದಿನ ನಿತ್ಯದ ಜೀವನದಲ್ಲಿರುವ ಆಸೆ–ನಿರಾಸೆ, ಕಷ್ಟ–ಸುಖ, ನೋವು–ನಲವು ಇವುಗಳನ್ನು ಸೂಚಿಸುವ ಹಾಡುಗಳು—ಇವೆಲ್ಲವೂ ಭಾವಪೂರ್ಣವಾಗಿದ್ದು, ಉಚ್ಚ ಧ್ಯೇಯಗಳಿಂದ ಕೂಡಿದ್ದು ಜೀವನದ ತಿರುಳನ್ನು ಹೊರಗೆಡಿಸುತ್ತದೆ. ಈ ಭಾವನೆಗಳನ್ನು ಭಾರತೀಯರು ಸೂಕ್ಷ್ಮವಾಗಿ ಗಂಭೀರವಾಗಿ ಹಾಡುವುದು ದೇಶಕ್ಕೆ ಕೀರ್ತಿ ತರುವಂತಹ ಕುಶಲತೆ" ಎಂಬುದಾಗಿ ಹೇಳಿದರು. ನಮ್ಮ

ಸಂಗೀತದ ಅನಾಗರಿಕ ವಾದ್ಯಗಳೆಂದೆಣಿಸುವ ಏಕತಾರ್, ದೋಪರ್ ಮುಂತಾದುವುಗಳನ್ನು ಮೆಚ್ಚಿ "ಪಾಶ್ಚಾತ್ಯ ಜಾನಪದ ಸಂಗೀತಕ್ಕೂ ಭಾರತೀಯ ಜಾನಪದ ಸಂಗೀತಕ್ಕೂ ಅಜಗಜಾಂತರವಿದೆ. ಈ ಸಂಗೀತವನ್ನು ಭಾರತದ ಹಳ್ಳಿಹಳ್ಳಿಗಳಲ್ಲಿ, ಮರದಡಿಯಲ್ಲಿ ಇಲ್ಲವೇ ನದಿಯ ತೀರದಲ್ಲಿ ಕುಳಿತುಕೊಂಡು ಕುರಿ, ದನ ಮೇಯಿಸುವವರಿಂದ ಕೂಡ ಕೇಳುತ್ತೇವೆ. ಇಲ್ಲಿ ಲಂಡನ್ನಿನಲ್ಲಿ ಗಂಗಾನದಿ ಹರಿಯುವುದಿಲ್ಲ, ಪಂಜಾಬಿನ ಹಚ್ಚಹಸುರು ಗದ್ದೆಗಳಿಲ್ಲ. ಆದರೂ ಈ ಹೊತ್ತು ಈ ಭಾರತೀಯ ಜಾನಪದ ಸಂಗೀತಗಾರರು ತಮ್ಮ ಕುಶಲತೆಯಿಂದ ನಮಗಿಲ್ಲಿ ಭಾರತದ ವಾತಾವರಣವನ್ನು ತಂದೊಡ್ಡಿದ್ದಾರೆ. ಈ ದೊಡ್ಡ ಸಭೆಯಲ್ಲಿ ಸೇರಿರುವ ಭಾರತೀಯರನ್ನು ಈ ಸಂಗೀತ ಖಂಡಿತವಾಗಿಯೂ ಭಾವಪರವಶರನ್ನಾಗಿ ಮಾಡಿ ತಮ್ಮ ದೇಶಕ್ಕೆ ಕೊಂಡೊಯ್ಯುತ್ತಿದೆ, ಅಲ್ಲವೇ?........" ಅವರ ಈ ಮಾತುಗಳಿಂದಾಗಿ ನಾವು ನಮ್ಮ ಭಾರತೀಯ ಕಲೆಗಳ ವಿಷಯ ತುಂಬಾ ಹೆಮ್ಮೆ ಪಡುವಂತಾಯಿತು.

ಯೆಹೂದಿ ಮೆನುಹಿನ್‌ರ ಪ್ರಪಂಚ ಸಂಗೀತ–ಸಂಗೀತ ಸಂಗೀತಮಯ ಪ್ರಪಂಚ. ಅವರ ದಿನಚರಿಗಳಲ್ಲಿ ಯೋಗಾಭ್ಯಾಸ ಒಂದೇ ಅವರ ವಿರಾಮ ಸಾಧನೆಯಾಗಿದೆ. ಅವರು ಸಸ್ಯಾಹಾರಿಗಳೂ ಇದ್ದಾರೆ. ಸಾಮಾನ್ಯವಾಗಿ ಇಲ್ಲಿಯ ಜನರು ವಿರಾಮವಿಲ್ಲದೆ ದುಡಿಯುವವರು. ಆದ್ದರಿಂದ ಯೋಗಾಸನಗಳು ಅವರ ಮನಸ್ಸಿಗೂ ದೇಹಕ್ಕೂ ಸಾಕಷ್ಟು ಆರಾಮ ನೀಡುತ್ತವೆ. ಜೀವನದ ಅನೇಕ ಉತ್ತಮ ವಿಷಯಗಳಿಗೆ ಈ ಪಾಶ್ಚಾತ್ಯಜನರು ಹೆಚ್ಚು ಹೆಚ್ಚಾಗಿ ಈಗ ಭಾರತದ ಕಡೆ ತಮ್ಮ ಗಮನವನ್ನು ಕೊಡುತ್ತಾರೆ. ನಮ್ಮನ್ನು ಅನುಕರಿಸಲು ಪ್ರಯತ್ನಿಸುತ್ತಿದ್ದಾರೆ. (ನಾವು ಪಾಶ್ಚಾತ್ಯರನ್ನು ಅನುಕರಿಸುತ್ತಿದ್ದೇವೆ!) ಪಾಶ್ಚಾತ್ಯಕ್ಕೆ ಬಂದ ಮೇಲೆ ನಮಗೆ ನಮ್ಮ ದೇಶದಲ್ಲಿನ ಅಮೂಲ್ಯವಾದ ಸಂಗತಿಗಳ ಇರವು, ಅರಿವು ಚೆನ್ನಾಗಿ ಆಗುತ್ತಲಿದೆ. ಕಿಪ್ಲಿಂಗ್ ಕವಿ ಹೇಳಿರಬೇಕೆಂದು ಕಾಣುತ್ತದೆ. "Who knows of England who only England knows?" (ಇಂಗ್ಲೆಂಡನ್ನು ಮಾತ್ರ ತಿಳಿದವನಿಗೆ ಇಂಗ್ಲೆಂಡಿನ ವಿಷಯ ಏನು ಗೊತ್ತು?) ಹಾಗೆಯೇ ನಮ್ಮ ಭಾರತದ ಹಿರಿಮೆ ನಮಗೆ ಸರಿಯಾಗಿ ತಿಳಿಯಬೇಕಾದರೆ ನಾವು ಅನ್ಯದೇಶೀಯರ ಜನಜೀವನವನ್ನೂ ಸಂಸ್ಕೃತಿಯನ್ನೂ ತಿಳಿದುಕೊಳ್ಳಬೇಕಾಗುತ್ತದೆ. ಆಗ ನಮ್ಮ ದೇಶದ ಹಿರಿಮೆ ನಮಗೆ ನಿಜವಾಗಿ ತಿಳಿದುಬರುವುದು. ನಮ್ಮ ಜನಾಂಗ ಮಾನವತೆಯನ್ನು ಪಡೆದು ಬಾಳುವ ಜನಾಂಗ. ನಮ್ಮದು ಅವಸರ ಗಡಿಬಿಡಿ ಇಲ್ಲದ ಜೀವನ ಕ್ರಮ. ಎಂದೆಂದಿಗೂ ಅದು ಇಲ್ಲಿನ ಆಧುನಿಕ ವಿಷಯ ಲೋಲುಪ್ತತೆಯ ಜೀವನಕ್ಕಿಂತ ಎಷ್ಟೋ ಮೇಲು.

ಆಹಾರಕ್ಕೆ ಇಲ್ಲಿ ಯಾವ ಕೊರತೆ ಇಲ್ಲದಿದ್ದರೂ ಇಲ್ಲಿನ ಯೋಗಾಭ್ಯಾಸಿಗಳು

ಎಳ್ಳು, ಬೆಲ್ಲ, ಕುಟ್ಟದಿರುವ ಕೆಂಪು ಅಕ್ಕಿ ಮುಂತಾದುವುಗಳನ್ನು ಹುಡುಕಾಡಿ ಅವುಗಳ ಸೇವನೆಯೇ ಆರೋಗ್ಯಕ್ಕೆ ಒಳಿತು ಎಂಬ ಭಾವನೆ ಪಡೆದಿದ್ದಾರೆ. ನಮ್ಮಲ್ಲಿ ಈ ತರದ ಆಹಾರ ಸಾಮಾನ್ಯವಾಗಿ ಬಡವರು ತಿನ್ನುವ ಆಹಾರವಲ್ಲವೇ ? ಇಂತಹ ಸಹಜ-ನೈಸರ್ಗಿಕ ಆಹಾರವನ್ನು ಮಾರುವ ಅಂಗಡಿಗಳೇ ಬೇರೆ ಇವೆ. ಅವಕ್ಕೆ ಇಲ್ಲಿ Health Centers, (ಹೆಲ್ತ್ ಸೆಂಟರ್ಸ್ - ಆರೋಗ್ಯ ಕೇಂದ್ರಗಳು) ಎಂದು ಕರೆಯುತ್ತಾರೆ. ಆಹಾರ ಉತ್ಪತ್ತಿಯನ್ನು ಅಸಹಜವಾಗಿ ಬೆಳೆಸುವುದನ್ನು ಅವರು ಒಪ್ಪಲಾರರು. ನಮ್ಮ ಈ ಸಾತ್ವಿಕ ಆಹಾರವನ್ನು ಸೇವಿಸಿಕೊಂಡು ಇಲ್ಲಿನ ಅನೇಕ ಯೋಗಾಭ್ಯಾಸಿಗಳು ತಮ್ಮ ವಯಸ್ಸನ್ನೂ ಗೆದ್ದು ಯೌವನಸ್ಥರಾಗಿ ಆನಂದಭರಿತರಾಗಿ ಸುಖಜೀವನವನ್ನು ನಡೆಸಿಕೊಂಡು ಬಂದಿರುತ್ತಾರೆ. ಅವರ ಜೀವನದಲ್ಲಿ ಶಿಸ್ತು ಇದೆ, ಅಲ್ಲದೆ ಇವರು ನಮ್ಮ ದೇಶದವರ ಸಾತ್ವಿಕ ಜೀವನ ಕ್ರಮಗಳಲ್ಲಿಯೂ ಉಚ್ಚ ಧ್ಯೇಯಗಳಲ್ಲಿಯೂ ವಿಶೇಷ ಆಸಕ್ತಿ ತೋರಿಸುವುದು ಆಶಾಜನಕವಾಗಿದೆ. ಇಲ್ಲಿನ ಜನತೆ ಹೆಚ್ಚಾಗಿ ದಿನಕ್ಕಿಂತ ದಿನ ನಿಸರ್ಗದಿಂದ ದೂರ ದೂರ ಸರಿದು ಹೋಗುವುದರಿಂದ ಈ ಯೋಗಾಭ್ಯಾಸಿಗಳು ನೈಸರ್ಗಿಕ ಸಂಬಂಧವಾದ ವಿಷಯಗಳನ್ನು ಮೆಚ್ಚುವುದರಲ್ಲಿ ಒಂದು ಕಾರಣವಿದೆ. ಇವರಿಗೆ ಗುಡಿಸಲುಗಳೆಂದರೆ ಈಗ ಭೋಗವಸ್ತುಗಳು ಆಗಿವೆ ! ಅತ್ಯಂತ ಆಧುನಿಕ ಜನಾಂಗದವರೆಂದು ತಿಳಿದುಕೊಂಡಿರುವ ಇವರು ನಮ್ಮ ದೇಶದ ತೀರಾ 'ಅನಾಗರಿಕರ' ಜೀವನ ಪದ್ಧತಿಯನ್ನು ಅವಲಂಬಿಸುವುದು ಆಶ್ಚರ್ಯವಲ್ಲವೇ ?

ಈ ಪಾಶ್ಚಾತ್ಯ ಜನರು ಸ್ವತಂತ್ರರು, ಸ್ವೇಚ್ಛಾಪರರೆಂದೆನಿಸಿಕೊಂಡಿದ್ದರೂ ತಮ್ಮದೇ ದೇಹವನ್ನು ಹತೋಟಿಗೆ ತರಲು ಕಷ್ಟಪಡುತ್ತಾರೆ. ಯೋಗಾಭ್ಯಾಸವನ್ನು ಮಾಡುತ್ತಿರುವಾಗ ತಮ್ಮ ದೇಹ ಮನಸ್ಸುಗಳನ್ನು ಸ್ವಾಧೀನ ಪಡೆದುಕೊಂಡು ತಮ್ಮ ಅಂತರಾತ್ಮನ ಸಾಮೀಪ್ಯ ಪಡಕೊಳ್ಳಲು ಅಸಹಾಯಕರಾಗುತ್ತಾರೆ. ಮೈಸೂರಿನ ಶ್ರೀ ಬಿ. ಕೆ. ಎಸ್. ಐಯ್ಯಂಗಾರ್‌ರೇ ಯೆಹೂದಿ ಮೆನುಹಿನ್‌ರ ಯೋಗಾಭ್ಯಾಸದ ಗುರುಗಳು. ಇವರು ಲಂಡನ್, ಪ್ಯಾರಿಸ್, ಜಿನೀವಾಗಳಲ್ಲಿ ಸ್ಥಾಪಿಸಿರುವ ಯೋಗಾಭ್ಯಾಸದ ತರಗತಿಗಳು ಬಹಳ ಮುತುವರ್ಜಿಯಿಂದ ಕೆಲಸ ಮಾಡುತ್ತ ತುಂಬಾ ಜಯಪ್ರದವಾಗಿವೆ. ಇವರ ಮೊದಲ ಲಂಡನ್ ಪ್ರವಾಸ ಕೂಡ A. M. C. ಯವರ ಆಶ್ರಯದಲ್ಲೇ ಆಗಿತ್ತಂತೆ. ಅಂದಿನಿಂದ ಇಲ್ಲಿ ಯೋಗಾಭ್ಯಾಸವೆಂಬುದು ಜನತೆಯನ್ನು ಹಿಡಿದಿರುವ ಒಂದು ಮೋಹಾಂಧ ಅಂಟುರೋಗದಂತೆ ಹರಡಿದೆ. ನಾವೊಮ್ಮೆ ಅವರ ಪ್ರಾಣಾಯಾಮದ ತರಗತಿಯನ್ನು ನೋಡಲು ಹೋದೆವು. ಸುಮಾರು 25 ಮಂದಿ ಬಿಳಿಜನರು ಅಭ್ಯಾಸಿಗಳು ಪದ್ಮಾಸನ ಹಾಕಿ ಕುಳಿತುಕೊಂಡು ಮೂಗನ್ನು ಬೆರಳುಗಳಿಂದ ಹಿಡಿದು ಗುರುಗಳ ಉಪದೇಶಕ್ಕನುಸಾರ ಪ್ರಾಣಾಯಾಮವನ್ನು ಮಾಡುವ ದೃಶ್ಯ ಸ್ವಾರಸ್ಯವುಳ್ಳದ್ದಾಗಿತ್ತು.

ಈ ಜನರಿಗೆ ಯೋಗಾಭ್ಯಾಸ, ಪ್ರಾಣಾಯಾಮ ಮತ್ತು ಇತರ ಹಿಂದೂಜೀವನ ತತ್ವಗಳ ತಿಳುವಳಿಕೆ ಇದೆಯೋ ತಿಳಿಯದು. ಇವರು ಹೆಚ್ಚಾಗಿ 'ಯೋಗ' ಎಂದು ಕರೆಯುವುದು 'ಆಸನ' ಗಳಿಗೆ ಮಾತ್ರ. ಅಷ್ಟಾಂಗ ಯೋಗಗಳ ಪರಿಚಯ ಅವರಿಗಿಲ್ಲ ಎಂದು ಕಾಣುತ್ತದೆ. ಅಲ್ಲದೆ ಈ ಯೋಗಾಭ್ಯಾಸಿಗಳು ದೇಹದ ಕ್ಷೇಮ, ಸಂರಕ್ಷಣೆಗಳಿಗಾಗಿ ಹೆಚ್ಚು ಗಮನ ಕೊಡುವವರಲ್ಲದೆ ಯೋಗಸಾಧನೆಯ ಅಧ್ಯಾತ್ಮಿಕ ಗುರಿಯನ್ನು ಅವರಿನ್ನೂ ತಿಳಿದುಕೊಳ್ಳಬೇಕಷ್ಟೆ. ಆದರೂ ಅವರು ಪ್ರಾಣಾಯಾಮದ ಅಭ್ಯಾಸವನ್ನು ಮಾಡಿದ ಮೇಲೆ ತಮ್ಮಲ್ಲಿನ ಅಂತರಾಳದ ನಿಶ್ಶಬ್ದತೆಯ ಶಾಂತತೆಯನ್ನು ಕಂಡು ದೈವಿಕ ಆನಂದ ಪಡೆದು ಮೂಕರಾಗುತ್ತಾರೆ.

ಯೋಗಾಭ್ಯಾಸಕ್ಕೆ ಪಾಶ್ಚಾತ್ಯದಲ್ಲಿ ಈಗಿರುವ ವಿಶೇಷ ಆಸಕ್ತಿಯನ್ನು ಕಂಡು ಇತ್ತೀಚೆಗೆ ಭಾರತೀಯರೂ ಯೋಗಸಾಧನೆಯ ಮಹತ್ವದ ಕಡೆಗೆ ಸ್ವಲ್ಪಮಟ್ಟಿಗೆ ಎಚ್ಚತ್ತಿರುವುದು ಸಂತೋಷದ ಸಂಗತಿ. ನಮ್ಮ ದೇಶದ ಈ ಅಮೂಲ್ಯ ವಿದ್ಯೆಯನ್ನು ನಾವು ಬಹುಮಟ್ಟಿಗೆ ಕಳೆದುಕೊಂಡಿದ್ದೆವು. ಪಾಶ್ಚಾತ್ಯರಿಂದಾಗಿ ನಮಗೆ ಈ ವಿದ್ಯೆಯ ನವಜಾಗೃತಿ ಬಂದಿದೆ.

ಇತಿ ನಿಮ್ಮ
ಚಂದಮ್ಮ.

*   *   *   *

ಲಂಡನ್
11 – 8 – 1966

ಪ್ರಿಯ ತಂದೆಯೇ,

ಇಂದು ಬೆಳಿಗ್ಗೆ ನೀವೆಲ್ಲರೂ ಕಳುಹಿಸಿದ ಕಾಗದ ಓದಿ ಕಣ್ಣಲ್ಲಿ ನೀರೂರಿತು. ನಿಮ್ಮ ಕಾಗದವನ್ನಂತೂ ನಾನು ಖಂಡಿತ ಕಾದಿರಿಸುತ್ತೇನೆ. ನಾನು ನನ್ನ ಜೀವನದಿಂದ ನಿಮ್ಮನ್ನೂ ಅಮ್ಮನನ್ನೂ ಸಂತೋಷಪಡಿಸಿದ್ದರೆ ಸಾರ್ಥಕವಾಯಿತೆಂದು ತಿಳಿದುಕೊಳ್ಳುತ್ತೇನೆ. ಇಂದು ನಾನು ಹೀಗಿರಲು ನೀವು, ಅಮ್ಮ ಕಾರಣರು. ನಿಮ್ಮಂತಹ ಹೆತ್ತವರನ್ನು ಪಡೆಯಲು ಪುಣ್ಯ ಮಾಡಿದ್ದೆ. ಅಮ್ಮ ಬರೆದಿದ್ದ ಕಾಗದವಂತೂ ಎಂತಹ ಹೃದಯವನ್ನೂ ಕಲಕಿಸುವಂತಿತ್ತು. ಅವರು ನಮ್ಮ ಮದುವೆಯ ನಿಶ್ಚಿತವಾದ ದಿನ ಪತಿಯವರನ್ನು ಕುರಿತು—"ಹೆಣ್ಣಿನ ಸಂಗಡ ಯಾವ ವರದಕ್ಷಿಣೆಯನ್ನೂ ಐಶ್ವರ್ಯವನ್ನೂ ಕೊಡುವ ಯೋಗ್ಯತೆ ನಮಗಿಲ್ಲ. ಆದರೆ ಚಂದಮ್ಮನೇ ನಿನ್ನ ಜೀವನದಲ್ಲಿ ಒಂದು

ಭಾಗ್ಯ, ಒಂದು ದೊಡ್ಡ ನಿಧಿ ಎಂದು ಖಂಡಿತ ಹೇಳಬಲ್ಲೆ !" ಎಂದು ಆಡಿದ ಮಾತು ಪತಿಯವರು ಇಂದು ಜ್ಞಾಪಿಸಿಕೊಂಡರು.

ನನ್ನ ಹುಟ್ಟಿದ ಹಬ್ಬಕ್ಕೆ ಶ್ರೀ ಅಂಗಡಿಯವರೂ ಒಂದು ಉಡುಗೊರೆ ಕೊಟ್ಟರು. ಬಿಗ್‌ಬೆನ್ ಹನ್ನೊಂದು ಬಾರಿಸುವ ಸಮಯ ನಾವು ಥೇಮ್ಸ್ ನದಿಯಲ್ಲಿ ದೋಣಿ ಪ್ರಯಾಣ ಮಾಡಿ ಹೆಂಪ್ಟನ್ ಕೋರ್ಟಿಗೆ (Hampton Court) ಹೋದೆವು. ದೋಣಿ ತುಂಬಾ ಪ್ರವಾಸಿ ಜನ—ಸ್ವೀಡನ್, ನಾರ್ವೆ, ಫ್ರಾನ್ಸ್, ಸ್ಪೈಯಿನ್‌ನಿಂದ ಬಂದವರು. ದೋಣಿಯಲ್ಲೇ ಊಟ ಮಾಡಿದೆವು. ಹೋಗುವಾಗ ಮಳೆಯಿದ್ದರೂ ಬರುವ ಸಮಯ ಹವೆ ತುಂಬಾ ಚೆನ್ನಾಗಿತ್ತು. ಸೃಷ್ಟಿ ಸೌಂದರ್ಯ ವರ್ಣಿಸುವಂತಿತ್ತು. ದಡಗಳಲ್ಲಿ ಚಿಕ್ಕ ಚಿಕ್ಕ ಮನೆಗಳೂ, ಸುಂದರವಾದ ತೋಟಗಳು, ದೋಣಿ ನಿಲಯ ಗಳು, ದೋಣಿ ಕಟ್ಟುವ ಜಾಗಗಳು ಎಲ್ಲವೂ ಬಣ್ಣದ ಚಿತ್ರ ಪುಸ್ತಕವನ್ನು ನೋಡಿ ದಂತೆ ಆಯಿತು. "Lock Gates" ಗಳ ಅನುಭವವೂ ಆಯಿತು ! ವಿಚಿತ್ರ ಇಂಜಿ ನಿಯರಿಂಗ್ ಚಾತುರ್ಯ ಅದು........ನಿಮ್ಮ ಶುಭಾಶಯಗಳಿಗೆ ಚಿರಋಣಿ.

ಇತಿ ನಿಮ್ಮ
ಚಂದಮ್ಮ.

*   *   *   *

ಲಂಡನ್
16 – 8 – 1966

ಮುದ್ದು ಜಯದೇವ,

ನಿನ್ನ ಆಶಾರಹಿತ ಉದ್ವೇಗದ ಪತ್ರ ಈಗ ತಾನೇ ಕೈಸೇರಿತು. ಇಲ್ಲಿಂದ ಕಳು ಹಿಸಿದ ನಿನ್ನ ಪೆಟ್ಟಿಗೆಯಲ್ಲಿನ ಬೆಲೆ ಬಾಳುವ ವಸ್ತುಗಳೆಲ್ಲವೂ ಕಳುವಾಗಿವೆಯೆಂದು ಕೇಳಿ ಅತ್ಯಂತ ಸಂಕಟವಾಯಿತು. ಭಾರತದಲ್ಲಿ ಈ ಪೆಟ್ಟಿಗೆ ನಿನ್ನ ಕೈಗೆ ಸೇರುವ ಹೊತ್ತಿಗೆ ಈ ವಿಪತ್ತೇ ? ಕೈಗೆ ಬಂದ ತುತ್ತು ಬಾಯಿಗೆ ಇಲ್ಲವಾಯಿತು. ಆದರೆ ಧೈರ್ಯಗೆಡಬೇಡ, ಮಗೂ. ಎಂತಹ ಕಠಿಣ ಸಮಯದಲ್ಲಾದರೂ ಧೈರ್ಯಗೆಡಬಾರದು. ಜೀವನದಲ್ಲಿ ಅನೇಕಾನೇಕ ವಸ್ತುಗಳು ಬರುತ್ತವೆ — ಹೋಗುತ್ತವೆ. ಅದನ್ನೇ ಮನಸ್ಸಿಗೆ ಹಚ್ಚಿಕೊಳ್ಳುವುದು ಹುಚ್ಚುತನ. ನಿನ್ನ ಪ್ರಿಯ ವಸ್ತುಗಳಾದ 'ಫೋಟೋ ಟ್ರಾನ್ಸ್‌ಪೆರೆನ್ಸೀಸ್ (Photo Transparencies) ಎಲ್ಲವನ್ನೂ ಕಳಕೊಂಡೆ ನಿಜ. ಅವನ್ನು ಪಡೆಯಲು ನೀನು ಪಟ್ಟ ಕಷ್ಟವನ್ನು ಬಲ್ಲೆ. ಅವಕ್ಕಾಗಿ ಖರ್ಚನ್ನು ಮಾಡಿದೆ. ಆದರೆ, ಕಳಕೊಂಡರೆ ನೀನು ಅಷ್ಟು ದುಃಖಪಡಬಾರದು, ಮಗು. ನಿನ್ನ

ಪಾಶ್ಚಾತ್ಯ ಪ್ರವಾಸ ಇದೇ ಕಡೆಯದಲ್ಲ. ನಿನಗೆ ಇನ್ನೂ ತೀರ ಚಿಕ್ಕ ವಯಸ್ಸು. ಇನ್ನು ಮುಂದಕ್ಕೂ ನೀನು ಅನೇಕ ಸಾರಿ ಇಂಗ್ಲೆಂಡಿಗೂ, ಇಲ್ಲಿನ ಇತರ ದೇಶಗಳಿಗೂ ಬರುವುದು ಖಂಡಿತ. ನಿನ್ನ ಜೀವಮಾನದ ಇದೊಂದು ನಷ್ಟ ಭಾರಿ ನಷ್ಟವಲ್ಲ. ನಿನ್ನ ಚಿಕ್ಕಮ್ಮ ಯಶೋಧರ ತನ್ನ ಮೊದಲ ಮಗುವನ್ನೇ ಕಳೆದುಕೊಳ್ಳಲಿಲ್ಲವೇ ? ದಯಾಳು ಭಗವಂತನು ಈಗ ಅವಳಿಗೆ ಅವಳಿ ಜವಳಿ ಮಕ್ಕಳನ್ನು ಕೊಟ್ಟು ಅವಳನ್ನು ಸಮಾಧಾನಪಡಿಸಲಿಲ್ಲವೇ ? ನೀನು ಈಗ ಕಳೆದುಕೊಂಡುದನ್ನು ಮತ್ತೊಮ್ಮೆ ಪಡೆಯಲು ಸಾಧ್ಯವಿದೆ. ಆದರೆ ಎಷ್ಟೋ ಮಂದಿ ಜೀವನದಲ್ಲಿ ಎಂದೂ ಮತ್ತೊಮ್ಮೆ ಪಡೆಯಲಾಗದಂತಹ ವಸ್ತುಗಳನ್ನು ಕಳೆದುಕೊಳ್ಳುತ್ತಾರೆ. ಅವರ ಪಾಡನ್ನು ಗಮನಿಸಿ ಸಮಾಧಾನ ಪಡಬೇಕು. ಈ ಘಟನೆಯನ್ನು ಪೂರ್ತಿಯಾಗಿ ಮರೆತುಬಿಡು. ಸಂತೋಷದಿಂದಿರು ! Cheer up !

........ಪುರಂದರ ದಾಸರು ಹೇಳುವಂತೆ ಈಸಬೇಕು, ಇದ್ದು ಜಯಿಸಬೇಕು. ನೀನಿನ್ನು ಜೀವನದಲ್ಲಿ ಹೋರಾಡಿ ಜಯಿಸಲು ಕಲಿಯಬೇಕು—ನಿನ್ನ ತಂದೆಯವರಂತೆ. ಅವರು ಜೀವನದ ಹೋರಾಟದಲ್ಲಿ ಕುಶಲರು. ಜೀವನದ ಯಾವ ಕಟು ಸಂದರ್ಭದಲ್ಲಿಯೂ ಅವರು ಕಂಗಾಲಾಗಲಿಲ್ಲ. ಧೈರ್ಯಗೆಡಲಿಲ್ಲ. ಯಾವಾಗಲೂ ಆಶಾವಾದಿ (Optimist) ಯಾಗಿರುವುದು ಅವರ ಸ್ವಭಾವ ಲಕ್ಷಣ. ನಮಗೆ ಅನೇಕ ನಷ್ಟಕಷ್ಟಗಳು ಸಂಭವಿಸಿವೆ. ಅಸೂಯೆ, ಅಪವಾದ, ಮೋಸ, ಇವುಗಳಿಗೆಲ್ಲ ಗುರಿಯಾಗಿದ್ದೇವೆ. ಆದರೆ ಯಾವ ಕಷ್ಟವಾದರೂ ನಿನ್ನ ತಂದೆ ಧೈರ್ಯದಿಂದ ಎದುರಿಸಿ ಗೆದ್ದುದು ನಮ್ಮ ಜೀವನದ ಯಶಸ್ಸು. ನಿನ್ನ ತಂದೆಯವರಿಗೆ ತಕ್ಕ ಮಗನಾಗು—ಜಯದೇವ್ !

ಏನೇ ಇರಲಿ, ದೇವರನ್ನು ಮಾತ್ರ ಹಳಿಯಬೇಡ ಮಗೂ, ದೇವರು ನಮಗೆ ಕೊಡುವುದು, ಬಿಡುವುದು ಎಲ್ಲ ನಮ್ಮ ಒಳಿತಕ್ಕೆ. ನಾವು ಅವನ ಅನುಗ್ರಹವನ್ನು ಹೇಗೆ ಬಳಸಿಕೊಂಡು ಹೋಗುತ್ತೇವೆ ಎಂದೂ ಪರೀಕ್ಷಿಸಲಿಕ್ಕಿರಬಹುದು. ತಪ್ಪು ದಾರಿಯಲ್ಲಿ ಹೆಜ್ಜೆ ಹಾಕುವಾಗ ಬೀಳುವುದು ಸರಿಯೇ. ತಪ್ಪಾದಲ್ಲಿ ಶಿಕ್ಷೆ ಸಿಗುವುದೂ ಸರಿಯೇ. ಈ ವಿಷಯದಲ್ಲಿ ನಿನ್ನ ತಂದೆಯವರು ಕೊಟ್ಟ ಬುದ್ಧಿವಾದವನ್ನು ಮನಸಾರೆ ಒಪ್ಪಿಕೊಂಡು ಅದರ ಪ್ರಕಾರ ನಡೆದುಕೋ. ನಿನ್ನ ಜೀವನದ ಅಡಿಗಲ್ಲು ಗಟ್ಟಿಯಾಗುವುದಕ್ಕೆ ಮುಂಚೆಯೇ ನೀನು ಆಕಾಶದಲ್ಲಿ ಮನೆಕಟ್ಟುವ ಪ್ರಯತ್ನ ಮಾಡುವೆ. ಇಲ್ಲಿ ಬಂದಾಗ ನೀನು ಸಂಪಾದಿಸಿದ ಹಣವನ್ನು ಈಗ ನೀನು ಕಳೆದುಕೊಂಡಿರುವ ವಸ್ತುಗಳ ಮೇಲೆ ಖರ್ಚು ಮಾಡದೆ ಕೂಡಿಟ್ಟಿದ್ದರೆ ಒಂದು ಚಿಕ್ಕ ಐಶ್ವರ್ಯದ ಗಂಟು ನಿನ್ನದಾಗುತ್ತಿತ್ತು, ಇಂಗ್ಲೆಂಡಿನಲ್ಲಿ ಪೌಂಡುಗಳಿಗೆ ಬೆಲೆಯಿಲ್ಲ. ಆದರೆ ಅದೇ ಒಂದು ಪೌಂಡು ಭಾರತದಲ್ಲಿ ಎಷ್ಟು ರೂಪಾಯಿ ಗಳಿಸುತ್ತದೆ! ಇರಲಿ. ಮಿಂಚಿ ಹೋದ ಕಾರ್ಯಕ್ಕೆ ಚಿಂತಿಸಿ ಫಲವಿಲ್ಲ. ಆದರೆ ಈ ಘಟನೆ ನಿನ್ನ ಜೀವಮಾನದಲ್ಲಿ ಒಂದು

ಪಾತವಾಗಿರಲಿ. ಜೀವನದಲ್ಲಿ ಅತಿ ಭೋಗದ ವಸ್ತುಗಳ (Luxury Articles) ಅವಶ್ಯಕತೆ ಇಲ್ಲ. ಫೋಟೋಗ್ರಫಿ ತುಂಬಾ ವೆಚ್ಚದ ಪ್ರೀತಿ ಕಸಬು (Hobby) ನಾವಂತೂ ಅದಕ್ಕೆ ಕೈ ಹಾಕಿಯೇ ಇಲ್ಲ. ನಾವು ನೋಡಿದ್ದೆಲ್ಲವನ್ನೂ ಮನಸ್ಸಿನಲ್ಲಿ ಸ್ಫುಟವಾಗಿ ಇಟ್ಟುಕೊಳ್ಳಲು ಪ್ರಯತ್ನಿಸುತ್ತೇವೆ.

ನಾನೀ ಉದ್ದದ ಪ್ರವಚನವನ್ನು ಕೊಟ್ಟದುದಕ್ಕಾಗಿ ಕ್ಷಮಿಸು-ಮಗೂ. ಮನಸ್ಸಿಗೆ ಬಂದ ವಿಚಾರಗಳನ್ನು ಬರೆದಿದ್ದೇನೆ-ಅಷ್ಟೆ. ತಾಯಿ ಹೇಳಿದ್ದಕ್ಕೆ ಬೇಸರವಿಲ್ಲವಷ್ಟೇ ? ಅಂತೂ, ಇನ್ನಾದರೂ ನಿನ್ನ ತಂದೆಯವರು ಹೇಳಿದ ಮಾತನ್ನು ಕೇಳಿ, ಅನಾವಶ್ಯಕ ಖರ್ಚು ಮಾಡದೆ, ಸಂತೋಷದಿಂದ ಸರಳ ಜೀವನವನ್ನು ನಡೆಸಿಕೊಂಡು ಸುಖವಾಗಿರಲು ಕಲಿತುಕೊಳ್ಳೋಣ. ನಿನ್ನ ಆ ತಪ್ಪಿಗೆ ನಾನೂ ಕಾರಣಭೂತಳು. ನಿನಗೆ ನಿರಾಶೆಯಾಗಬಾರದೆಂದು ನೀನು ಬಯಸಿದುದಕ್ಕೆಲ್ಲ ನಾನೂ ಸಹಿ ಹಾಕಿದೆ. ಅಂತೂ, ಆದದ್ದಾಯಿತು. ಮುಂದಕ್ಕೆ ಎಚ್ಚರವಾಗಿರೋಣ. ದಿನಾಗಲೂ ಗಾಯತ್ರೀ ಮಂತ್ರವನ್ನು ಜಪಿಸಲು ಮರೆಯಬೇಡ. ಆ ಮಂತ್ರ ನಿನಗೆ ಕವಚವಾಗಿ ನಿನ್ನನ್ನು ರಕ್ಷಿಸುವುದು.

—ಇತಿ ನಿನ್ನ
ಅಮ್ಮ.

* * * *

ಆಗಸ್ಟ್ 1966

AMC ಆಶ್ರಯದಲ್ಲಿ ನಮ್ಮ ಮೊದಲ ನೃತ್ಯ – ನಾಟಕದ ರಚನೆ “ ಬುದ್ಧೋದಯ ”

(The Temptation of Buddha)

ಹತ್ತು ತಿಂಗಳ ಕಾಲ ಹಗಲು ರಾತ್ರಿಯ ಪರಿವೆಯಿಲ್ಲದೆ ನಡೆಸಿದ ಅವಿರತ ಶ್ರಮದ ಪರಿಣಾಮವಾಗಿ ಒಂದು ಚಿಕ್ಕ ವಿದ್ಯಾರ್ಥಿ ವೃಂದವನ್ನು ತಯಾರು ಮಾಡಿ, ಈ ಧೈರ್ಯದ ಬಲದ ಮೇಲೆ ‘ಬುದ್ಧೋದಯ’ ದ ರಚನೆಗೆ ಸಿದ್ಧರಾದೆವು. ಲಂಡನ್ನಿನಲ್ಲಿ ಈಗ ನೆಲಸಿರುವ ಕೆಲವು ಭಾರತೀಯ ಸಂಗೀತಗಾರರು, ನಮ್ಮ ನೃತ್ಯ ನಾಟಕದ ಸಂಗೀತ ರಚನೆಗೆ ಸಹಾಯ ಮಾಡಿದರು. ಅವರು ಉತ್ತರದ ಹಿಂದೂಸ್ತಾನಿ ಗಾಯಕ ಸಂಗೀತಗಾರರಾದುದರಿಂದ ಅದಕ್ಕೆ ತಕ್ಕ ರೀತಿಯಲ್ಲೇ ನೃತ್ಯ-ಸಂಯೋಜನೆಯ ಪ್ರಯತ್ನವಾಯಿತು. ಅಂತೆಯೇ, ಕೆಲವು ಭಾರತೀಯ ನೃತ್ಯ ಕಲಾವಿದರು ಲಂಡನ್ನಿನಲ್ಲಿಯೇ ನೆಲೆಸಿರುವುದರಿಂದ, ಅವರಿಂದ ಕಥಕ್, ಮಣಿಪುರಿ ಮುಂತಾದ

ಲಂಡನ್ನಿನಲ್ಲಿ ಮೊದಲು ಪ್ರದರ್ಶಿಸಿದ " ಬುದ್ಧೋದಯ " ನೃತ್ಯ-ನಾಟಕದ ಒಂದು ದೃಶ್ಯ

ಶ್ರೀ ಮತ್ತು ಶ್ರೀಮತಿ ಯು. ಎಸ್. ಕೃಷ್ಣರಾವ್ – ಸುಪ್ರಸಿದ್ಧ ಬೀಟೆಲ್ ಸಂಗೀತಗಾರ ಜಾರ್ಜ್ ಹೆರಿಸನ್ ರವರೊಡನೆ ಲಂಡನ್ನಿನಲ್ಲಿ

ಸಂಪ್ರದಾಯಗಳನ್ನು ಅಳವಡಿಸಿಕೊಂಡೆವು. ಸಿದ್ಧಾರ್ಥನ ತಪಸ್ಸು ಭಂಗಗೊಳಿಸಿ, ಅವನನ್ನು ಮೋಹಿಸುವಾಗಿನ ಮಹಿಮೆಯ ವಿವಿಧ ಕಲ್ಪನೆಗಳು ವಿಧವಿಧವಾದ ನೃತ್ಯಗಳಾಗಿ ಮಾರ್ಪಟ್ಟು ಸಂಕಲನ ಬಹಳ ಅಂದವಾಗಿತ್ತು. ನಮ್ಮ ಅಂತರರಾಷ್ಟ್ರೀಯ ವಿದ್ಯಾರ್ಥಿಗಳ ಶಕ್ತಿಗೆ ಮೀರದ ನೃತ್ಯ ವಿಭಾಗವನ್ನು ಸರಳವಾಗಿ ಹೊಂದಿಸಿದೆವು. ನಮ್ಮ ವಿದ್ಯಾರ್ಥಿ ಸಂಗಡದಲ್ಲಿ ಯೋಗಾಸನಗಳನ್ನು ಅಭ್ಯಾಸ ಮಾಡುವವರಿದ್ದರು: ಯೋಗಾಭ್ಯಾಸವನ್ನು ಕುರಿತು ಇಲ್ಲಿನ ಜನತೆಗೆ ತುಂಬಾ ಆಸಕ್ತಿಯಿರುವ ಕಾರಣ ಯೋಗಾಸನಗಳನ್ನೂ ನಮ್ಮ ನೃತ್ಯ ನಾಟಕದಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನ ಮಾಡಿದೆವು. 'ಯಶೋಧರೆ'ಯು ಮಾಯೆಯ ಪ್ರಪಂಚವನ್ನು ರಚಿಸಿ ಅರಮನೆಯ ಜನರೊಡನೆ ಸಿದ್ಧಾರ್ಥನೆಡೆಗೆ ಬಂದು ಬೇಡಿಕೊಳ್ಳುವ ಸಂದರ್ಭದಲ್ಲಿ ಯೋಗಾಸನಗಳು ಯುಕ್ತವಾಗಿ ಕಂಡವು.

ಈ ಗಡಿಬಿಡಿಯ ಲಂಡನ್ನಿನಲ್ಲಿ ಎಲ್ಲರಂತೆಯೇ ಯಾವತ್ತೂ ನಮ್ಮ ಸಂಗೀತಗಾರರಿಗೆ ಪುರುಸೊತ್ತೇ ಇರಲಿಲ್ಲ. ಸಂಗೀತ ನಿರ್ದೇಶಕರ ಮನೆಗೆ ಹೋಗಿ ನಮಗೆ ಬೇಕಾದ ಸಂಗೀತವನ್ನು ಅವರಿಂದ ರಚಿಸಿ, ಮುದ್ರಿಸಿಕೊಂಡೆವು. ನೃತ್ಯ ತರಗತಿಗಳಿಗೆ ಪ್ರತಿಸಲ ಟೇಪ್ ರಿಕಾರ್ಡರನ್ನು ಎತ್ತಿಕೊಂಡು ಹೋಗುವುದು, ಮತ್ತೆ ತರುವುದು ಕಷ್ಟದ ಕೆಲಸವಾಯಿತು. ಕೊನೆಗೆ ಸಂಗೀತವನ್ನು ಚಿಕ್ಕ, ಹೊತ್ತಿಕೊಂಡು ಓಡಾಡಬಲ್ಲ ಟೇಪ್ ರಿಕಾರ್ಡರಿನಲ್ಲಿ ಹಾಕಿ, ಅದರ ಸಹಾಯದಿಂದ ವಿದ್ಯಾರ್ಥಿಗಳಿಗೆ ಅಭ್ಯಾಸ ಕೊಡಲಾಯಿತು. ನಮ್ಮ ಪಾಶ್ಚಾತ್ಯ ವಿದ್ಯಾರ್ಥಿಗಳಿಗೆ ಭಾರತೀಯ ಸಂಗೀತವೇ ಹೊಸತು. ಅದರಲ್ಲೂ ಸಂಗೀತವನ್ನು ಒದಗಿಸುವ ಕಷ್ಟಗಳು ಬೇರೆ. ನೃತ್ಯ ನಾಟಕದಲ್ಲಿ ಭಾಗವಹಿಸುವ ಕಲಾವಿದರಿಗೋ, ಉಸಿರು ಮುಗುಚಿ ಹಾಕಿಕೊಳ್ಳಲು ಸಮಯ ಇಲ್ಲದಷ್ಟು ಕೆಲಸ. ಇನ್ನು ಇವರು ಅಭ್ಯಾಸಕ್ಕೆ ಒಟ್ಟಿಗೆ ಸೇರುವ ಮಾತು ಅಸಂಭವ! ಅಂತೂ ಕೊನೆಗೆ ಪ್ರದರ್ಶನಕ್ಕೆ ಮುಂಚೆ ನಾಲ್ಕಾರು ಅಭ್ಯಾಸಗಳನ್ನು ಎಲ್ಲ ಸಂಗೀತಗಾರರೊಡನೆ, ಎಲ್ಲ ವಿದ್ಯಾರ್ಥಿಗಳೊಡನೆ ಏರ್ಪಡಿಸುವುದು ಹೇಗಾದರೂ ಸಾಧ್ಯವಾಯಿತು. ಆಮೇಲೇ ನಮಗೆ ಸ್ವಲ್ಪ ಉಸಿರು, ಧೈರ್ಯ ಬಂದಂತಾದುದು. ಭಾರತದೇಶದ ಅಭಿಮಾನದ ಮೇಲೆ ಒಬ್ಬಾಕೆ, ಬ್ರಿಟಿಷ್ ಸ್ತ್ರೀ - ಬೋಧಿವೃಕ್ಷವನ್ನು ಚಿತ್ರಿಸಲು ಒಪ್ಪಿಕೊಂಡರು.

ನಮ್ಮ ಡೈರೆಕ್ಟರವರು ಇಂಡಿಯಾ ಟೂರಿಸ್ಟ್ ಆಫೀಸಿನಲ್ಲಿ (India Tourist Office) ಒಂದು ಪತ್ರಿಕಾ ಸಮ್ಮೇಳನವನ್ನು ಏರ್ಪಡಿಸಿದರು. ನೃತ್ಯ - ನಾಟಕದಲ್ಲಿನ ಪ್ರಮುಖ ಪಾತ್ರಧಾರಿಗಳೆಲ್ಲರೂ ಅಲ್ಲಿ ಹಾಜರಿದ್ದರು- ಸಮ್ಮೇಳನಕ್ಕೆ ಬೀಟಲ್ ಜಾರ್ಜ್ ಹ್ಯಾರಿಸನ್ ಅವರೂ ಬಂದಿದ್ದರು. ಅವರು ಅಂದು ನನ್ನೊಡನೆ ಭಾರತೀಯ ನೃತ್ಯ ಕಲೆಯಲ್ಲಿನ ತಾಳ ವೈವಿಧ್ಯತೆಯ ವಿಷಯವಾಗಿ ಬಹಳ ಹೊಗಳಿ, ಮಾತನಾಡಿದರು. 'ಓವರ್‌ಸೀಸ್ ಪ್ರೆಸ್' (Overseas Press) ನವರು ಎಲ್ಲರೂ ಎಂಬಂತೆ

AMC ಯ ಆಹ್ವಾನಕ್ಕೆ ಮನ್ನಣೆ ಇತ್ತು ಬಂದಿದ್ದರು. ಅವರ ಅನೇಕಾನೇಕ ಪ್ರಶ್ನೆಗಳಿಗೆ ತಕ್ಕ ಉತ್ತರವನ್ನು ತಡವರಿಸದೆ ಕೊಟ್ಟೆವು. ಬ್ಯಾಲೆ ನೃತ್ಯಗಾರರು ನಮ್ಮ ಕಲೆಯಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿಸಬೇಕು ಎಂಬ ಅಭಿಪ್ರಾಯವನ್ನು ಮಂಡಿಸಿದೆವು. ಅವರು ನಮ್ಮ ಕಲೆಯನ್ನು ಅಗತ್ಯವಾಗಿ ತಿಳಿಯಬೇಕು. ತಿಳಿದರೆ ಅವರಿಗೆ ಅಮೋಘ ಅನುಭವ ಸಿಗುವುದು ಖಂಡಿತ – ಅಲ್ಲದೆ ಪರಸ್ಪರ ಕಲೆಗಳ ಅಭಿಪ್ರಾಯವನ್ನು ಪಡೆದರೆ ಒಳ್ಳೆಯದಲ್ಲವೇ? ಎಂದೆವು.

'ನಮ್ಮ ಪ್ರದರ್ಶನಗಳಿಗೆ ಬರುವ ಮಿಶ್ರ ಪ್ರೇಕ್ಷಕರಲ್ಲಿ ಬ್ಯಾಲೆ ನೃತ್ಯಗಾರರೇ ಇರುವುದಿಲ್ಲ!' – ಎಂದು ಕೇಳಿ ಪತ್ರಿಕಾಕರ್ತರಿಗೆ ಆಶ್ಚರ್ಯ - ಕುತೂಹಲ.

ಇಂಗ್ಲೆಂಡನ್ನು ನಾವು ಒಪ್ಪಿದೆವೋ, ಇನ್ನೊಮ್ಮೆ ಇಲ್ಲಿಗೆ ಬರುವ ಹಂಬಲವಿದೆಯೇ'–ಎಂಬುದಾಗಿ ಕೇಳಿದರು.–"ಹೌದು, ಖಂಡಿತವಾಗಿ ನಾವು ಇಂಗ್ಲೆಂಡನ್ನು ಮನಸಾರೆ ಒಪ್ಪಿದ್ದೇವೆ. ಈ ದೇಶವು ನಮ್ಮನ್ನು ಸ್ವಾಗತಿಸಿ ನಮ್ಮ ಕಲೆಗೆ ಪ್ರೋತ್ಸಾಹವನ್ನು ಕೊಟ್ಟಿದೆ. ನೃತ್ಯ ರಂಗದಲ್ಲಿ ನಾವು ಈ ದೇಶದಲ್ಲಿ ಇನ್ನೂ ಹೆಚ್ಚಿನ ಕೆಲಸವನ್ನು ಮಾಡಬಲ್ಲೆವು. ಇನ್ನೊಮ್ಮೆ ಕರೆಬಂದರೆ ಅಗತ್ಯವಾಗಿ ಬರುವೆವು" ಎಂದೆವು.

ಈ ಪತ್ರಿಕಾ ಸಮ್ಮೇಳನ ಯಶಸ್ವಿಯಾದುದಕ್ಕಾಗಿ ಶ್ರೀ ಅಂಗಡಿಯವರು ಸಂತೋಷಪಟ್ಟರು.

ಆಗಸ್ಟ್ 20 ರಂದು ಕಾಮನ್‌ವೆಲ್ತ್ ಇನ್‌ಸ್ಟಿಟ್ಯೂಟ್‌ನಲ್ಲಿ ನಮ್ಮ ಮೊದಲ ನೃತ್ಯ–ನಾಟಕದ ಮೊದಲ ಪ್ರದರ್ಶನಕ್ಕೆ ತಯಾರಾದೆವು. ಹತ್ತು ಹಲವಾರು ವಿಧಾನಗಳಿಂದ ಕಾಮನು ಗೌತಮನನ್ನು ಬುದ್ಧನಾಗದಂತೆ ತಡೆ ಹಾಕಿದುದೇ ನಾಟಕದ ಕಥಾ ಸಾರಾಂಶವಾಗಿತ್ತು. ಈ ಸ್ವಾರಸ್ಯವಾದ ಕಥೆಯನ್ನು ಮೈಸೂರು ರಾಜ್ಯದ ಸುಪ್ರಸಿದ್ಧ ಸಾಹಿತಿ ಶ್ರೀ ಜಿ. ಪಿ. ರಾಜರತ್ನಂ ಅವರು, ಅಶ್ವಘೋಷನ 'ಬುದ್ಧ ಚರಿತೆ'ಯ ಆಧಾರದ ಮೇಲೆ ನಮಗೆ ಕೊಟ್ಟಿದ್ದರು. ಬುದ್ಧನ ಪಾತ್ರಕ್ಕೆ ಒಬ್ಬ ಪಾಕಿಸ್ತಾನಿ–ಹಿಂದೂಸ್ತಾನಿ ಯುವಕನಾಗಿದ್ದ ಒಬ್ಬ ನಾಟಕದ ನಟನನ್ನು ಆರಿಸಿಕೊಂಡೆವು. ಅವನು ನಮ್ಮಲ್ಲಿ ಭರತನಾಟ್ಯ ಅಭ್ಯಾಸ ಮಾಡುತ್ತಿದ್ದನು. ತುಂಬಾ ಭಾವನಾಪೂರಿತ ನಟ. ಗೌತಮನಾಗಿಯೂ, ಬುದ್ಧನಾಗಿಯೂ ತುಂಬಾ ಚೆನ್ನಾಗಿ ಅಭಿನಯಿಸುತ್ತಿದ್ದ. ಪದ್ಮಾಸನ ಹಾಕಿ ರಂಗಸ್ಥಳದಲ್ಲಿ 45 ನಿಮಿಷ ಕದಲದೆ ಕೂತುಕೊಳ್ಳುವ ಅಭ್ಯಾಸವನ್ನು ಮಾಡಿ ಎಲ್ಲರಿಂದಲೂ 'ಭೇಷ್' ಅನ್ನಿಸಿಕೊಂಡ.

1966 ಆಗಸ್ಟ್‌ನ 20ನೆಯ ದಿನ ನಮ್ಮ ಜೀವಮಾನದಲ್ಲಿನ ಒಂದು ಸುದಿನ. ಕಾಮನ್‌ವೆಲ್ತ್ ಇನ್‌ಸ್ಟಿಟ್ಯೂಟ್‌ನಲ್ಲಿ ಜನ ಕಿಕ್ಕಿರಿದು ನೆರೆದಿದ್ದರು. ಸುಮಾರು ಜನರು ಟಿಕೆಟ್ಟು ಇಲ್ಲದೆ ಹಿಂತಿರುಗಬೇಕಾಯಿತು. ಕೆಲವು ಪ್ರಸಿದ್ಧ ವಿನೋದಕಲೆಯ ವ್ಯವಸ್ಥಾಪ

ಕರೂ, ಟಿ. ವಿ. ಜನರೂ, ಬಣ್ಣದ ಟಿ. ವಿ. ಯವರೂ, ಇಪ್ಪತ್ತೈದಕ್ಕೂ ಮೇಲ್ಪಟ್ಟ ಪತ್ರಿಕೋದ್ಯೋಗಿಗಳೂ, ವಿಮರ್ಶಕರೂ, ಸಭೆಯನ್ನು ಅಲಂಕರಿಸಿದ್ದರು. ದೇವರ ದಯೆಯಿಂದ ನಮಗೆ ತೃಪ್ತಿಯಾಗುವಂತೆ ನೃತ್ಯ-ನಾಟಕವು ಚೆನ್ನಾಗಿ ನಡೆಯಿತು. ಬುದ್ಧನಾಗಿ ನಮ್ಮ ವಿದ್ಯಾರ್ಥಿಯು ನಾಟಕಕ್ಕೆ ಕೀರ್ತಿ ತಂದನು. ನಮ್ಮ ನೃತ್ಯ ಗಾತಿಯರ ಪ್ರದರ್ಶನವು ಎಲ್ಲರ ಕಣ್ಮನಗಳಿಗೆ ಆಹ್ಲಾದವನ್ನುಂಟು ಮಾಡಿತು.

ಚರ್ಮ ವಾದ್ಯಗಳನ್ನು ಬಾರಿಸುವವರು ಲಂಡನ್ನಿನಲ್ಲಿ ಯಾರೂ ಇರಲಿಲ್ಲ. ಆದುದರಿಂದ ಪತಿಯವರು ಮುಂಚಿತವಾಗಿಯೇ ಚರ್ಮ ವಾದ್ಯಗಳನ್ನು ಬಾರಿಸಿ ಮುದ್ರಿಸಿಟ್ಟುಕೊಂಡಿದ್ದರು. ನಾಟಕದ ಕಡೆಯ ಭಾಗವಾದ ಮಾರನ ನೃತ್ಯ ನೃತ್ಯಕ್ಕೆ ಅದನ್ನು ಉಪಯೋಗಿಸಬೇಕಾಯಿತು. ಆ ಸಂಗೀತದಲ್ಲಿ, ಮಳೆ, ಮಿಂಚು, ಗುಡುಗು ಮೊದಲಾದುವನ್ನು ಸಂಯೋಜಿಸಿದುದರಿಂದ ಅತ್ಯಂತ ಪರಿಣಾಮಕಾರಿ ಯಾಯಿತು. ಸಭೆಯೆಲ್ಲ ನಡುಗುವಂತಾಯಿತು. ಕೊನೆಗೆ ನಮಗೆ ಸಿಕ್ಕ ಮೆಚ್ಚಿಗೆ ಯನ್ನು ಕಿವಿಯಾರೆ ಕೇಳಿದರೂ ನಂಬಲಾಗಲಿಲ್ಲ. ಕಿವಿ ಬಿರಿಯುವಂತೆ ಕರತಾಡನ! 'ಭಲೆ, ಭಲೆ' (Bravo! Bravo!) ಎಂಬ ಹೊಗಳುವಿಕೆಯ ಕಂಠಧ್ವನಿಯ ಸಂತೋಷ ಘೋಷ! ಹೂ ಗುಚ್ಛಗಳ ಅರ್ಪಣೆ! ರಂಗಸ್ಥಳದ ಮೇಲೆ ಮತ್ತೆ ಮತ್ತೆ ಬಂದು ಅಭಿವಂದಿಸಿದರೂ 'ಇನ್ನೂ ಬರಬೇಕು' ಎಂಬ ಆತುರದ ಕರೆಯ ಕರ ತಾಡನ – ಆ ಸದ್ದು – ಆ ಗದ್ದಲ – ಆ ಆನಂದದ ಆಮಂತ್ರಣವನ್ನು, ಹಾಗೆ ಪ್ರೋತ್ಸಾಹಿಸಿದುದನ್ನು ನಾವು ಜೀವಮಾನವಿಡೀ ಮರೆಯಲಾರೆವು.

ಸಿಂಹಳದ್ವೀಪದ ಹೈಕಮಿಷನರ್ (High Commissioner) ಬೌದ್ಧಮತದ ಸಾಹಿತಿ, ಅವರು ರಂಗಸ್ಥಳಕ್ಕೆ ಬಂದು ಉತ್ಸಾಹದಿಂದ ನಮ್ಮನ್ನು ಮನಃಪೂರ್ವಕ ವಾಗಿ ಅಭಿನಂದಿಸಿದರು. ಅಂತೂ ನಮ್ಮ 'ಬುದ್ಧೋದಯ' ತುಂಬಾ ಕೀರ್ತಿ ಪಡೆ ಯಿತು. ಶ್ರೀ ಅಂಗಡಿಯವರ ಮೊದಲ ಸಫಲ ಪ್ರಯತ್ನದಿಂದಾಗಿ ಅವರಿಗೆ ಅತ್ಯಾ ನಂದವಾಯಿತು. AMC ಯವರು ಲಂಡನ್ನಿನಲ್ಲಿ ಪ್ರಪ್ರಥಮ ಬಾರಿಗೆ ನೃತ್ಯ ನಾಟಕವೊಂದನ್ನು ಅಪಾರ ಯಶಸ್ಸಿನಿಂದ ಪ್ರದರ್ಶಿಸಿದುದಕ್ಕಾಗಿ ಹೆಮ್ಮೆ ಪಡೆದರು.

ಆದರೆ ಈ ಪ್ರಯತ್ನ ಅಷ್ಟು ಸುಲಭವಾಗಿರಲಿಲ್ಲ. ಶ್ರೀ ಅಂಗಡಿಯವ ರೆಂದರು :—"ನೀವು ನೃತ್ಯ ಪ್ರದರ್ಶನ ಕೊಟ್ಟು ಕೀರ್ತಿ ಪಡೆದಿರಿ. ನೃತ್ಯ ಶಿಕ್ಷಣ ಕೊಟ್ಟು ವಿದ್ಯಾರ್ಥಿಗಳು ನಿಮ್ಮ ಜೊತೆ ನರ್ತಿಸುವಂತೆ ತರಬೇತಿ ಕೊಟ್ಟಿರಿ. ಈಗ ಈ ನೃತ್ಯ ನಾಟಕವನ್ನು ಯಶಸ್ವಿಯಾಗುವಂತೆ ಮಾಡಿ, ನಿಮ್ಮ ರಚನಾತ್ಮಕ – ಕುಶಲತೆಯ ದರ್ಶನವನ್ನು ಲಂಡನಿನ ಜನತೆಗೆ ವ್ಯಕ್ತಪಡಿಸಿ ದಿರಿ". ಮುಂದುವರೆಯುತ್ತಾ, ಅವರೆಂದರು—"ಲಂಡನ್ನಿನಲ್ಲಿ ಹೆಸರು ಮಾಡುವುದು ಸುಲಭದ ಕೆಲಸವಲ್ಲ. ಏಕೆಂದರೆ ಲಂಡನ್ನಿನ ವಿಮರ್ಶಕರು ಜಗತ್ತಿನ ಎಲ್ಲಾ ತರಹದ ನೃತ್ಯಗಳನ್ನೂ ನೋಡಿರುವ ಕಾರಣ, ಅವರನ್ನು ಮೆಚ್ಚಿಸುವುದು ಕಷ್ಟ. ಇಲ್ಲಿ

ಸಾಮಾನ್ಯನಾಗಿ ಯಾವುದೇ ಕಲಾ ಪ್ರದರ್ಶನವನ್ನು ಲಂಡನ್ನಿನ ಹೊರಗಿನ ಪಟ್ಟಣಗಳಲ್ಲಿ ಮೊದಲು ಪ್ರದರ್ಶಿಸಿ, ಯಶಸ್ವಿಯಾದ ಮೇಲೆ ಆ ಧೈರ್ಯದಿಂದ ಲಂಡನ್ನಿನಲ್ಲಿ ಪ್ರದರ್ಶನವನ್ನು ಕೊಡುವುದು ವಾಡಿಕೆ"—ಈ ಮಾತು ಕೇಳಿದ ನಮಗೆನಿಸಿತು–ನಿಜಕ್ಕೂ 'ಅರಿಯೆಸೆಂದರೆ ಅರವತ್ತುಗುಣ' ಎಂಬ ನಾಣ್ಣುಡಿ ನೂರರಷ್ಟು ಸತ್ಯ–ಎಂದು. ಏಕೆಂದರೆ, ನಮ್ಮ ಅಭ್ಯಾಸ, ನಮ್ಮ ಸಾಧನೆ, ನಮ್ಮ ಪ್ರಯಾಸ ಎಲ್ಲವೂ ಕೇವಲ ಕಲೆಯ ಉನ್ನತಿಯ ಏಕೈಕ ದೃಷ್ಟಿಯಿಂದ ಮಾತ್ರವಲ್ಲದೆ, ಫಲಾಪೇಕ್ಷೆಯಿಂದ ಅಲ್ಲ. ಈ ನಿಷ್ಕಾಮವೃತ್ತಿಗೆ ಯೋಗ್ಯತೆ ಲಭ್ಯವಾದದ್ದು, ಸಾಫಲ್ಯತೆ ದೊರಕಿದ್ದುದು.

ಇಲ್ಲಿನ ' ಡೈಲಿ ಟೆಲಿಗ್ರಾಫ್ ' (Daily Telegraph) ಎಂಬ ದಿನಪತ್ರಿಕೆಯು ನಮ್ಮ ಕಲಾಸೇವೆಯ ವಿಷಯವಾಗಿ ಹೊಗಳಿ, ವಿಮರ್ಶಿಸಿ, ಹೀಗೆ ಬರೆಯಿತು – "ಈ ನೃತ್ಯ ನಾಟಕ ಅವರ ಶಿಕ್ಷಣದ ಯೋಗ್ಯತೆಯನ್ನು ವ್ಯಕ್ತಪಡಿಸಿತು. ಜನವರಿಯ ಇತ್ತೀಚೆಗೆ, ಲಂಡನ್, ಕೇಂಬ್ರಿಡ್ಜ್‌ನಲ್ಲಿ ತರಬೇತಿ ಪಡೆದ ಪ್ರತಿಭಾವಂತ ವಿದ್ಯಾರ್ಥಿವೃಂದದ ಸಹಾಯದಿಂದ ಪ್ರದರ್ಶಿಸಿದ ಈ ನೃತ್ಯ ನಾಟಕವೇ ಅದಕ್ಕೆ ಸಾಕ್ಷಿ". 'ದಿ ಸ್ಟೇಜ್ ಅಂಡ್ ಟೆಲಿವಿಷನ್ ' (The Stage and Television) ಎಂಬ ಕಲೆಗೆ ಸಂಬಂಧಪಟ್ಟ ಇನ್ನೊಂದು ವಾರ ಪತ್ರಿಕೆಯಲ್ಲಿ ಹೀಗೆ ಪ್ರಕಟವಾಗಿತ್ತು—"ಅವರ ನೃತ್ಯಕಲೆಯು ಈಗಾಗಲೇ ಮೆಚ್ಚಿಗೆಯನ್ನು ಪಡೆದಿದೆ. ಅವರು ನೃತ್ಯ ಶಿಕ್ಷಣ ತಜ್ಞರಾಗಿ ತಮ್ಮ ಯೋಗ್ಯತೆಯನ್ನು ಕಾಮನ್‌ವೆಲ್ತ್ ಇನ್‌ಸ್ಟಿಟ್ಯೂಟನಲ್ಲಿ ಇದೇ 20 ರಂದು ತಿಳಿಯಪಡಿಸಿದರು....ಲಂಡನ್ನಿನಲ್ಲಿ ಭಾರತೀಯ ಕಾರ್ಯಕ್ರಮದಲ್ಲಿ ಸಂಪೂರ್ಣ ನೃತ್ಯ–ನಾಟಕವನ್ನು ಕಾಣುವುದು ಅಪರೂಪ. ಇದರಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ಪ್ರತಿಭಾವಂತರಾಗಿದ್ದು ಒಳ್ಳೆಯ ತರಬೇತಿ ಪಡೆದು ಒಗ್ಗಟ್ಟಿನಿಂದ ಕೆಲಸ ಮಾಡಿದರು........."

ನಮ್ಮ ನೃತ್ಯ–ನಾಟಕ 'ಬುದ್ಧೋದಯ' ದ ಎರಡನೆಯ ಪ್ರದರ್ಶನ ಆಗಸ್ಟ್ ಇಪ್ಪತ್ತೇಳರಂದು ಜರುಗಿ, ಅಪಾರ ಯಶಸ್ಸನ್ನು ಪಡೆಯಿತು. ರಂಗಮಂದಿರದಲ್ಲಿ ಸೂಜಿ ಹಾಕಿದರೆ ಕೆಳಗೆ ಬೀಳುತ್ತಿರಲಿಲ್ಲವೇನೋ – ಅಷ್ಟೊಂದು ಜನಸಂದಣಿ. ಎಲ್ಲ ಟಿಕೆಟ್ಟುಗಳೂ ಮುಂಚಿತವಾಗಿಯೇ ಮಾರಲ್ಪಟ್ಟ ಕಾರಣ ಅಂದು ಲಂಡನ್ನಿಗೆ ಬಂದ ಪ್ರವಾಸಿಗಳು ನಿಂತು ನೋಡಲಾದರೂ ಅವಕಾಶ ಕಲ್ಪಿಸಿಕೊಡಿರೆಂದು ಜಗಳವಾಡಿದರಂತೆ! ನೂರಾರು ಜನ ಕಡೆಗೆ ನಿರಾಶರಾಗಿ ಹಿಂತಿರುಗಿದರಂತೆ! ಆದ್ದರಿಂದಲೇ ಶ್ರೀ ಅಂಗಡಿಯವರು ಈ ನೃತ್ಯ–ನಾಟಕದ ಮತ್ತೆರಡು ಪ್ರದರ್ಶನಗಳನ್ನು ಸೆಪ್ಟೆಂಬರ್ ಎಂಟು ಮತ್ತು ಹತ್ತರಂದು 'ಕಾಮನ್‌ವೆಲ್ತ್ ಪ್ರವಾಸಿಗಳ ಕೂಟ' ದ ಸಂದರ್ಭದಲ್ಲಿ ಏರ್ಪಾಡು ಮಾಡುವುದಾಗಿ ಪ್ರಕಟಿಸಿದರು. ಸಮ್ಮೇಳನದ ಸದಸ್ಯರಿಗೆಂದು ಸುಮಾರು ಇನ್ನೂರ ಇಪ್ಪತ್ತು ಸ್ಥಳ ಕಾದಿರಿಸಿ, ಮಿಕ್ಕ ಸ್ಥಳಗಳನ್ನು ಪುರಜನರಿಗೆ ಮೀಸಲಾಗಿತ್ತು.

ನಮ್ಮ 'ಬುದ್ಧೋದಯ' ದಿಂದಾಗಿ ನಾವು ಲಂಡನ್ನಿನ ಕೀರ್ತಿ ಭಂಡಾರವನ್ನು ಸೂರೆ ಮಾಡಿದೆವು. ಎಲ್ಲರ ಬಾಯಿಯಲ್ಲೂ ಇದೇ ಮಾತು! ಪ್ರತಿಯೊಬ್ಬರೂ ನಮ್ಮ ಕೆಲಸವನ್ನು ಶ್ಲಾಘಿಸಿ, ನಮ್ಮ ಕಲಾ ಮನೋಭಾವಕ್ಕೆ ಉತ್ತೇಜನ ಕೊಡುವಂತಾಯಿತು. ಕಲಾರಂಗದಲ್ಲಿ ಸ್ವೇಚ್ಛೆಯಾಗಿ ಓಡಾಡುವಂತಾಯಿತು. ಗಣ್ಯ ಮಹನೀಯರೊಬ್ಬರು ನಮ್ಮನ್ನು ಕಂಡು–"ನೃತ್ಯ ರಚನಾಕಾರರಾಗಿ (Choreographers) ನೀವಿಬ್ಬರೂ ನಮ್ಮಲ್ಲಿ ವಿಶೇಷವಾದ ಅಭಿನಂದನೆ ಪಡೆದಿರಿ. ಯಾರು ಬಲ್ಲರು – ನೀವು ಇಷ್ಟು ಬೇಗ ನಿಮ್ಮ ದೇಶಕ್ಕೆ ಹಿಂತಿರುಗುವುದಂತೂ ಖಂಡಿತ ಇಲ್ಲ – ನಿಮ್ಮ ಕಾಲಡಿಯಲ್ಲಿ ಸದ್ಯದಲ್ಲೇ ಅಮೂಲ್ಯ ಪುಷ್ಪಗುಚ್ಛಗಳು ಬೀಳುವ ಸಂಭವವಿದೆ...." ಎಂದರು.

ನೃತ್ಯ ನಾಟಕದ ಪ್ರದರ್ಶನದ ಆ ಸಮಯ ಛಾಯಾ ಚಿತ್ರಗ್ರಾಹಕರು ಚಿತ್ರ ತೆಗೆಯಲು ಮರೆತರಂತೆ! 'ನೋಡಲು ಅಷ್ಟು ಚೆನ್ನಾಗಿತ್ತು! ಯಾವ ಸಮಯದಲ್ಲಿ ಚಿತ್ರ ತೆಗೆಯೋಣ ಎಂಬುದೇ ತಿಳಿಯಲಿಲ್ಲ!" ಎಂದರು. 'ಡಾನ್ಸಿಂಗ್ ಟೈಮ್ಸ್' (Dancing Times) ನ ವಿಮರ್ಶಕರು ಸಜ್ಜಿಕಾಗೃಹದ ಒಳಗೆ ಬಂದು – "ಭಲೆ! ಭೇಷ್!! ನಿಮ್ಮ ನೃತ್ಯ ನಾಟಕ ಖಂಡಿತ ಸಂಪೂರ್ಣ ಯಶಸ್ಸು! ನಿಮ್ಮ ವಿದ್ಯಾರ್ಥಿಗಳಿಂದ ನೀವು ಅದ್ಭುತವಾದ ಕೆಲಸವನ್ನು ಮಾಡಿಸಿದ್ದೀರಿ! ..." ಎಂದರು.

ಈ ವಿಧವಿಧವಾದ ಸ್ತುತಿಪಾಠ ಕೇಳುತ್ತಿದ್ದಂತೆ ಶ್ರೀ ಅಂಗಡಿಯವರು 'ನಿಮ್ಮ ಸಂಬಂಧಿಗಳು ಈಗಿಲ್ಲಿ ಇದ್ದಿದ್ದರೆ ಅದೆಷ್ಟು ಹೆಮ್ಮೆ ಪಡುತ್ತಿದ್ದರು! ಮುಖ್ಯ, ನಿಮ್ಮ ಕೀರ್ತಿಯನ್ನು ನೋಡಲು ನಿಮ್ಮ ಮಕ್ಕಳು, ಹೆತ್ತವರು ಇಂದು ಇಲ್ಲಿ ಇರಬೇಕಾಗಿತ್ತು........" ಎನ್ನುವರು.

ನಮ್ಮ ಈ ಯಶಸ್ಸನ್ನು ಕುರಿತು ನನ್ನ ಪೂಜ್ಯ ತಂದೆಯವರು ಬರೆದ ಪತ್ರ ಒಂದರಲ್ಲಿ ಹೀಗೆ ಅಭಿಪ್ರಾಯಪಟ್ಟಿದ್ದರು—"ಘನವಾದ ಕಲಾವಿದರಾಗಲು ಮಾನವರು ಥಳಕಿನ ಹಾಗೂ ಹುಚ್ಚಾಟದ ಜೀವನವನ್ನು ನಡೆಸಬೇಕಾಗಿಲ್ಲ ಎಂಬ ಸತ್ಯವನ್ನು ನೀವು ಸ್ಪಷ್ಟವಾಗಿ ತೋರಿಸಿರುವಿರಿ. ದಿನನಿತ್ಯದ ಜೀವನವನ್ನು ಸಾಮಾನ್ಯವಾಗಿಯೇ ನಡೆಸಿಕೊಂಡು ಬಂದಿದ್ದೀರಿ, ಆದರೆ ಸ್ವಲ್ಪ ಹೆಚ್ಚಾದ ಮೇಲ್ಮಟ್ಟದ ಸಂವೇದನಾಶಕ್ತಿಯಿಂದ ಮತ್ತು ಜೀವನದಲ್ಲಿನ ನಿಜವಾದ ಮೌಲ್ಯವಿರುವ ವಿಷಯಗಳ ಕಡೆಗೆ ಹೆಚ್ಚಾದ ಗಮನವನ್ನು ಕೊಟ್ಟು"........ಎಂದು.

—ಎಂತಹ ಮಾತುಗಳು! ಕಲಾವಿದರಿಗೆ ಎಂದೂ ಬೇಕಾಗಿರುವ ಸಲಹೆ!

* * * * *

ಲಂಡನ್
ಸೆಪ್ಟೆಂಬರ್–ಅಕ್ಟೋಬರ್ 1966

ಆತ್ಮೀಯರೇ,

....ನಮ್ಮ ಬರಲಿರುವ ನೃತ್ಯ–ನಾಟಕದ ಪ್ರದರ್ಶನಗಳಿಗೆಂದು ಹೊಸ ಜಾಹೀರಾತುಗಳನ್ನು ಅಚ್ಚು ಹಾಕಿಸಲಾಗಿದೆ. ಭೂಗರ್ಭ ಸಂಚಾರಿ ರೈಲಿನ ನಿಲ್ದಾಣಗಳಲ್ಲೆಲ್ಲಾ ಭಿತ್ತಿಪತ್ರಗಳನ್ನು ಅಂಟಿಸಲಾಗಿದೆ. ಎಲ್ಲಾ ಸ್ಥಳ–ದೇಶಗಳಲ್ಲಿರುವಂತೆ ಇಲ್ಲಿಯೂ ಯಾವನು ದೊಡ್ಡ ದನಿಯಿಂದ ಕಿರುಚಬಲ್ಲನೋ, ಅವನೇ ಎಲ್ಲರ ಗಮನವನ್ನು ಸೆಳೆಯಬಲ್ಲನು. ಸಾವಿರಾರು ಜನರು ಈಗಾಗಲೇ ನಮ್ಮ ಪ್ರದರ್ಶನಗಳನ್ನು ಕುರಿತು ಅರಿತಿದ್ದಾರೆ.

ನಾವು ಬೆಂಗಳೂರನ್ನು ಬಿಟ್ಟು ಸುಮಾರು ಒಂದು ವರ್ಷ ಕಳೆದಿದೆ! ಅಂಗಡಿಗಳಲ್ಲಿನ ದರ್ಶನ ವ್ಯೋಮಗಳು ಪ್ರಚುರ ಮಾಡುತ್ತಿರುವ ನವನವೀನ ನಮೂನೆಗಳನ್ನು ನೋಡಿದ ಮಾತ್ರಕ್ಕೇ, ಇದು ಹೇಮಂತ, ಅಂದವಾದ ಹೇಮಂತ ಎಂದು ತಿಳಿದುಬರುತ್ತದೆ. ಮರಗಳಿಂದ ಎಲೆಗಳು ಒಂದೇ ಸಮನಾಗಿ ಉದುರುತ್ತಲಿವೆ. ಮಾರ್ಬಲ್ ಆರ್ಚ್ (Marble Arch) ನಲ್ಲಿ ಉದುರಿದ ತರಗೆಲೆಗಳ ರಾಶಿಯನ್ನು ತೆಗೆಯಲು ಹಗಲೂ ರಾತ್ರಿ ಕೆಲವು ವಿಶೇಷ ಯಂತ್ರಗಳು ಕೆಲಸ ಮಾಡುತ್ತಲಿವೆ. ಗುಲಾಬಿ ಹೂಗಳು ಎಸಳುಗಳನ್ನು ಕಳೆದಂತೆ, ಅವು ಅಡಿಯಲ್ಲಿನ ಹುಲ್ಲಿನ ಮೇಲೆ ಬಿದ್ದು ಹೂವಿನ ಹಾಸಿಗೆಯಂತೆ ಅಲಂಕೃತವಾಗಿರುತ್ತದೆ. ಉದಯದ ಇಬ್ಬನಿ, ಅತ್ಯಂತ ಚೆಲುವು. ನಮ್ಮ ಕಿಟಕಿಯಿಂದ ಹೊರಗೆ ನೋಡುವಾಗ ಫಲಭರಿತ ಸೇಬಿನ ಮರಗಳು ನಿಧಾನವಾಗಿ ಒಂದೊಂದೇ ಹಣ್ಣುಗಳನ್ನು ಧರಣಿಮಾತೆಗೆ ಮತ್ತೆ ಅರ್ಪಿಸುವ ಈ ದೃಶ್ಯ ಅತಿ ಚೆಲುವು. ಆದರೆ, ಈ ಸಂದರ್ಭದಲ್ಲಿ ಮರದಡಿ ಕುಳಿತಿರುವುದು ಮಾತ್ರ ಅಪಾಯವೇ ಸರಿ. ಪ್ರಖ್ಯಾತ ವಿಜ್ಞಾನಿ ನ್ಯೂಟನ್ ಇದೇ ಸಮಯದಲ್ಲಿ ಒಂದು ಸೇಬು ಮರದಡಿಯಲ್ಲಿ ಕುಳಿತುಕೊಂಡಿದ್ದನೋ ಏನೋ!

ಇಲ್ಲಿನ ವೆಂಬ್ಲಿ ಹಾಲಿನಲ್ಲಿ (Wembley Hall) ನಮ್ಮ 'ಬುದ್ಧೋದಯ' (The Temptation of Buddha) ನೃತ್ಯ ನಾಟಕದ ಎರಡು ಪ್ರದರ್ಶನಗಳನ್ನು ಏರ್ಪಡಿಸಿದ್ದರು. ಒಂದೇ ದಿನ ಎರಡು ಪ್ರದರ್ಶನಗಳು – ಮ್ಯಾಟಿನಿ ಮತ್ತು ಸಾಯಂಕಾಲದ ಕಾರ್ಯಕ್ರಮ. ಪ್ರದರ್ಶನಕ್ಕೆ ಇನ್ನೇನು, ಕೆಲವು ದಿನಗಳಿವೆ ಎನ್ನುವಾಗ ನನಗೆ ಬೆಳಗಾತ ಏಳುತ್ತಲೇ ಸ್ನಾಯುವಿನ ಎಳೆತದಿಂದಾಗಿ ಬಹಳ ನೋವು ಅನುಭವಿಸಿದೆ. ಹಾಸಿಗೆಯಿಂದ ಏಳಲಾಗಲಿಲ್ಲ. ಮೈ ಕೈಯೆಲ್ಲಾ ವಿಪರೀತ ನೋವು. ಅದಕ್ಕೆ ತಕ್ಕ ಗುಳಿಗೆಗಳನ್ನು ನುಂಗಿದರೂ ಪ್ರದರ್ಶನದ ದಿನದ ಬೆಳಿಗ್ಗೆ

ನೋವೇನೂ ಕಡಿಮೆಯಾಗಿರಲಿಲ್ಲ. ನೃತ್ಯ–ನಾಟಕದಲ್ಲಿನ ಸುಜಾತ ಹಾಗೂ ಯಶೋಧರೆಯ ಎರಡು ಪಾತ್ರಗಳನ್ನೂ ನಾನೊಬ್ಬಳೇ ನಿರ್ವಹಿಸಬೇಕಿತ್ತು. ಅವೆರಡು ಪಾತ್ರಗಳನ್ನು ಮತ್ತೊಬ್ಬರಿಗೆ ಹೇಳಿಕೊಡುವಷ್ಟು ಸಮಯವೂ ಇರಲಿಲ್ಲ. ಅಷ್ಟು ಪ್ರತಿಭಾವಂತ ವಿದ್ಯಾರ್ಥಿಗಳಾಗಲೀ, ಒಪ್ಪಿಕೊಂಡು ಬರುವ ಇತರ ಭಾರತೀಯ ನೃತ್ಯ ಕಲಾವಿದೆಯಾಗಲೀ ಇರಲಿಲ್ಲ. ನಾನು ವಹಿಸಿಕೊಳ್ಳಲೇ ಬೇಕಾಗಿದ್ದ ಜವಾಬ್ದಾರಿ ಅದು.

ಇಂಗ್ಲಿಷ್ ಕಾನೂನಿನ ಪ್ರಕಾರ ಕಲಾವಿದರು ಹೀಗೆ ಅಸಾಮಾನ್ಯ ಕಾಹಿಲೆ ಬಿದ್ದಲ್ಲಿ ಸುಲಭವಾಗಿ ಪ್ರದರ್ಶನಗಳನ್ನು ರದ್ದು ಮಾಡಬಹುದು! ಇಂಗ್ಲೆಂಡಿನ ಕಾನೂನು ಕಲಾವಿದರನ್ನು ಈ ರೀತಿ ಕಾಪಾಡುತ್ತದೆ! ಅನಾರೋಗ್ಯ ಪೀಡಿತ ಕಲಾವಿದರು ಪ್ರದರ್ಶನ ಕೊಟ್ಟು ಕಲೆಯ ಮಟ್ಟ ಕಡಿಮೆ ಮಾಡಬಾರದೆಂದು ಇದರ ಉದ್ದೇಶ್ಯ. ಆದರೆ ನಮಗೆ ಈ ಕಾಯಿದೆಯ ಕೋಟೆಯ ರಕ್ಷಣೆಯ ಅಪೇಕ್ಷೆ ಇರಲಿಲ್ಲ. ನಮ್ಮ ಜೀವಮಾನದಲ್ಲಿ ಎಂತಹ ಸಂದರ್ಭಗಳು ಬಂದರೂ ಪ್ರದರ್ಶನವನ್ನು ರದ್ದು ಮಾಡಿ ಪ್ರೇಕ್ಷಕರನ್ನೂ ವ್ಯವಸ್ಥಾಪಕರನ್ನೂ ತೊಂದರೆಗೆ ಗುರಿಪಡಿಸಿರಲಿಲ್ಲ. ಅಂದು ಮಧ್ಯಾಹ್ನ ಎರಡು ಗಂಟೆಗೆ ಸರಿಯಾಗಿ ಮ್ಯಾಟಿನಿ ಪ್ರದರ್ಶನ ಆರಂಭವಾಯಿತು. ವಿರಾಮಕ್ಕೆ ಮುಂಚೆ ಒಂದು ಗಂಟೆಯ ಕಾಲ ಭಾರತೀಯ ನೃತ್ಯ ಪ್ರದರ್ಶನ. ವಿರಾಮದ ನಂತರ "ಬುದ್ಧೋದಯ" ನೃತ್ಯ–ನಾಟಕದ ಕಾರ್ಯಕ್ರಮ, ಪೂರ್ವಾರ್ಧ ನೃತ್ಯ ಕಾರ್ಯಕ್ರಮವನ್ನು ವಿದ್ಯಾರ್ಥಿಗಳೂ ಪತಿಯವರೂ ನಡೆಸಿಕೊಂಡು ಬಂದರು. ಪ್ರೇಕ್ಷಕರಲ್ಲಿ ಕೆಲವರು 'ದೇವಿ ಎಲ್ಲಿ?' ಎಂದರಂತೆ!

ವೆಂಬ್ಲಿ ಪುರಭವನ (Wembley Town Hall) ಒಂದು ಸುಂದರವಾದ ಭವನ. ಸುಮಾರು 1100 ಜನರು ಸುಖವಾಗಿ ಕೂತು ಪ್ರದರ್ಶನವನ್ನು ನೋಡುವ ಅವಕಾಶವಿದೆ. ಮಧ್ಯಾಹ್ನದ ಪ್ರದರ್ಶನಕ್ಕೆ ಶಾಲಾ ವಿದ್ಯಾರ್ಥಿಗಳಿಂದ, ಉಪಾಧ್ಯಾಯರುಗಳಿಂದ ರಂಗಮಂದಿರ ಕಿಕ್ಕಿರಿದು ತುಂಬಿಹೋಗಿತ್ತು. ಭಾರತೀಯ ನೃತ್ಯವನ್ನು ನೋಡುವುದು ಒಂದು ವಿಶೇಷವಾದ ಪಾಠ ಎಂದು ತಿಳಿದು ಲಂಡನ್ ಪಾಠಶಾಲೆಗಳಲ್ಲಿನ ಎಲ್ಲ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಮತ್ತು ಉಪಾಧ್ಯಾಯರುಗಳನ್ನೂ ಒಟ್ಟುಗೂಡಿಸಿದುದು ಅದೇ ಮೊದಲಂತೆ! ಚಿಕ್ಕಮಕ್ಕಳು ತಿಳಿಯುವಂತೆ ಸ್ವಾರಸ್ಯವಾಗಿ ಭೂಗೋಳ ದರ್ಶನವಿತ್ತು, ಭಾರತದೇಶವು ಭೂಖಂಡದಲ್ಲಿ ಎಲ್ಲಿದೆ ಎಂಬುದನ್ನು ತಿಳಿಸಿ, ಅದರ ವಿಶಿಷ್ಟತೆಯ ಪ್ರಮುಖ ಅಂಶಗಳನ್ನು ಸಂಕ್ಷಿಪ್ತವಾಗಿ ತಿಳಿಸಿ, ಲಲಿತ ಕಲೆಗಳಲ್ಲಿ ಭಾರತೀಯ ನೃತ್ಯದ ವೈವಿಧ್ಯವನ್ನು ವಿವರಿಸಿದರು—ಪತಿಯವರು ಪಾಠ ಹೇಳಿಕೊಡುವ ಉಪಾಧ್ಯಾಯರೇ ಅಲ್ಲವೇ ?—ಮಕ್ಕಳೂ ನಿಶ್ಶಬ್ದವಾಗಿ ಕುಳಿತು, ಕಾರ್ಯಕ್ರಮವನ್ನು ಕಂಡು ತುಂಬಾ ಆನಂದಿಸಿದರು. ಇಲ್ಲಿನ ಪದ್ಧತಿಯಂತೆ

ಆ ಮಕ್ಕಳು ನೃತ್ಯ – ನಾಟಕದಲ್ಲಿನ ಪ್ರತಿಯೊಂದು ನೃತ್ಯದ ಅಂತ್ಯಕ್ಕೂ ಕೈಚಪ್ಪಾಳೆ ತಟ್ಟಿ, ತಮ್ಮ ಸಂತೋಷವನ್ನು ವ್ಯಕ್ತಪಡಿಸುತ್ತಿದ್ದರು ! ವಿರಾಮುವಾದ ಮೇಲೆ, ನಮ್ಮ ನೃತ್ಯ–ನಾಟಕ ಆರಂಭವಾಗುವ ಮುಂಚೆ ನೋವು ಅಡಗಿಸುವ ಗುಳಿಗೆಗಳನ್ನು ನುಂಗಿದೆ. ರಂಗಸ್ಥಳದ ಮೇಲೆ ಒಂದು ನನ್ನ ನೃತ್ಯಗಳನ್ನು ನರ್ತಿಸಿದೆ- ಒಮ್ಮೆ ನರ್ತಿಸಲು ಆರಂಭಿಸಿದೊಡನೆ ನೋವನ್ನು ಮರೆತೆ. ಕನಸಿನಲ್ಲಿ ಎಂಬಂತೆ ಕುಣಿದೆ. ಮಕ್ಕಳು ಪ್ರದರ್ಶನವನ್ನು ತುಂಬಾ ಮೆಚ್ಚಿದರು.

ಸಾಯಂಕಾಲದ ಪ್ರದರ್ಶನ ಪುರಜನರಿಗಾಗಿ ಮೀಸಲಾಗಿತ್ತು. ಅಂದರೆ ಕಲಾವಿದರಿಗೆ ಹೆಚ್ಚಿನ ಜವಾಬ್ದಾರಿ....ಪತ್ರಿಕಾ ವಿಮರ್ಶಕರು ಬಂದು ಟೀಕೆ ಮಾಡುವ ಸಂದರ್ಭ........ಪುನಹ ಪುರಭವನ ಪೂರ್ತಿ ತುಂಬಿ ಹೋಗಿತ್ತು ! ನನ್ನ ಪಾತ್ರವನ್ನು ಎಂದಿನಂತೆ ಮಾಡುವೆನೆಂಬ ಧೈರ್ಯಪಡೆದು ಹಠ ತೊಟ್ಟೆ.........ಆದರೆ ರಂಗಸ್ಥಳವನ್ನು ಪ್ರವೇಶಿಸಿದೊಡನೆಯೇ ಎದೆಯಲ್ಲಿ ಡಬಡಬ ಧ್ವನಿ........ಹೆದರಿಕೆಯ ಸೂಚನೆ ....ಜವಾಬ್ದಾರಿಯ ಹೊಣೆಗಾರಿಕೆ........ಇಷ್ಟು ದಿನ ಕಷ್ಟಪಟ್ಟು ಗಳಿಸಿದ ಒಳ್ಳೆಯ ಹೆಸರು ಕೆಡಿಸಿಕೊಳ್ಳುವೆನೇನೋ ಎಂಬ ಭಯ........ಪಾತ್ರಗಳಿಗೆ ಮೋಸ ಮಾಡಬಾರದು ಎಂಬ ಸತ್ಯ........ಇವೆಲ್ಲ ನನ್ನನ್ನು ಒಮ್ಮೆಲೇ ಕಾಡಿ ಕಂಗಾಲು ಮಾಡಿದುವು. ಆದರೆ ದೇವರೇ ನನ್ನನ್ನು ಆ ಸ್ಥಿತಿಯಲ್ಲಿ ಕಾಪಾಡಿದರು. ಒಮ್ಮೆ ಪಾತ್ರದ ಆಂತರಿಕ ಶಕ್ತಿಯ ಆವಾಹನೆಯಾದೊಡನೆಯೇ ನೋವು ಅದೆಲ್ಲಿ ಮಾಯವಾಯಿತೋ ! ನೋವಿನಿಂದ ಕೆಳಗೆ ಕುಳಿತುಕೊಳ್ಳಲು ಆಗುತ್ತಿರಲಿಲ್ಲ. ಅಂತಹ ಚಲನೆಗಳನ್ನು ನಿಂತುಕೊಂಡೇ ಮಾಡಿ ಮುಗಿಸಿದೆ........ಪ್ರದರ್ಶನವು ತುಂಬಾ ಯಶಸ್ವಿಯಾಯಿತು. ಭಾರತೀಯ ನೃತ್ಯವನ್ನು ಅಂಗಾಂಗಗಳಿಗಿಂತ ಹೆಚ್ಚಾಗಿ ಹೃದಯದ ಮನಸ್ಸಿನ ಸಿರಿವಂತಿಕೆಯಿಂದಲೇ ಮಾಡಬಲ್ಲೆವಷ್ಟೇ? .... ನನ್ನನ್ನು ರಂಗಸ್ಥಳದಲ್ಲಿ ನೋಡಿ ನಮ್ಮ ಶಿಷ್ಯಂದಿರೂ, ಪತಿಯವರೂ ಕಣ್ಣೀರಿಟ್ಟರಂತೆ !........ಕನಿಕರ ಹಾಗೂ ಆನಂದದಿಂದ !

ಮರುದಿನ ಪತ್ರಿಕೆಗಳಲ್ಲಿ ಬಂದ ವಿಮರ್ಶೆ ನೋಡಿದ ಮೇಲೆ, ಆ ಎಲ್ಲ ಕಷ್ಟಗಳೂ ಮಾಯವಾಗಿ, ಉತ್ಸಾಹ ಮೂಡಿಬಂತು- ಕಷ್ಟಪಟ್ಟರೆ ಫಲವಿದೆ – ಇದು ಖಂಡಿತ. ಉತ್ತಮವಾದ ವಿಮರ್ಶೆ ನಮ್ಮನ್ನು ಹುರಿದುಂಬಿಸಿತು. ನನ್ನ ಕಾಹಿಲೆಯ ಸಂಶಯ ಯಾರಿಗೂ ಬರಲೇ ಇಲ್ಲ !

ವೆಂಬ್ಲಿ ಪತ್ರಿಕೆಯಲ್ಲಿ "ಮಿಸ್ ದೇವಿಯವರಲ್ಲಿ ಹರ್ಷಗೊಳಿಸುವ ರಮ್ಯತೆ ವರ ಪ್ರಧಾನವಾಗಿದೆ. ಅದರ ಜೊತೆಯಲ್ಲಿ ಒಂದು ವಿಶಿಷ್ಟ ರೀತಿಯ ಶಾಂತತೆ ಮನೆ ಮಾಡಿದೆ. ಇದರಿಂದಾಗಿ ಆಕೆ ಏಶಿಯನ್ ಮ್ಯೂಸಿಕ್ ಸರ್ಕಲಿನ ಒಂದು ವಿಧಾಯಕ

ಶಕ್ತಿ, ಕೃಷ್ಣರಾವ್ ಈ ಕೂಟದ ಆಧಾರ ಸ್ತಂಭ. 'ಮಾರ' ನ ಪಾತ್ರದಲ್ಲಿ ಅವರು ಒಂದು ಹೆಜ್ಜೆ ತಪ್ಪು ಹಾಕಲಿಲ್ಲ. ವ್ಯಾಖ್ಯಾನಗಾರರಾಗಿ ಒಂದು ಮಾತು ಅಸಮಂಜಸ ವಾಗಿ ಆಡಲಿಲ್ಲ" ಎಂಬ ಟೀಕೆ ಇತ್ತು.

ಸುಜಾತಾ ಪಾತ್ರದಲ್ಲಿ ಪೂರ್ಣೆಯೊಡನೆ ಸಂಭಾಷಿಸುತ್ತಿದ್ದಾಗ ತೆಗೆದ ಒಂದು ಚಿತ್ರ ಆ ಪತ್ರಿಕೆಯ ಮುಖಪುಟದಲ್ಲೇ ದೊಡ್ಡದಾಗಿ ಪ್ರಕಟವಾಗಿತ್ತು !

ಪ್ರದರ್ಶನವಾದ ಮೇಲೆ ನಮ್ಮ ವಸ್ತ್ರಾಲಂಕರಣ ಕೋಣೆಗೆ ಒಂದು ತಂಡ, ನಮ್ಮನ್ನು ಮನಸಾರೆ ಮೆಚ್ಚಿದ ದೊಡ್ಡ ಗುಂಪು–ಬಂದಿತು. ಅದರಲ್ಲಿ ಕೆಲವರು ಕಳೆದ ವರ್ಷ ಭಾರತಕ್ಕೆ ಭೇಟಿಕೊಟ್ಟ 'ಷೇಕ್ಸ್‌ಪೀರಿಯನ್ ಕಂಪೆನಿ' (Shakespearean Company) ಯ ನಟನಟಿಯರಿದ್ದರು. ನಮ್ಮನ್ನು ಬಹಳ ಅಭಿನಂದಿಸಿದರು. 'ಪ್ರೇಕ್ಷಕರ ಮೇಲೆ ಈ ನೃತ್ಯ ನಾಟಕದ ಭಾವೋದ್ವಿಗ್ನತೆ ಅಪಾರ! ನೀವು ಭಾರತೀಯರು ಎಷ್ಟು ಸುಂದರ ಕೃತಿಯನ್ನು ಹೆಣೆದಿದ್ದೀರಿ! ಕಲ್ಪನಾತೀತ!!' ಎಂದು ಆಶ್ಚರ್ಯಪಟ್ಟರು. ಅವರಿಗೆ ಅಂದಿನ ಪ್ರದರ್ಶನ ಮನಸ್ಸಿನಲ್ಲಿ ಅಮರವಾಗಿ ನೆಲಸಿತಂತೆ. ನಮಗೋ, ನಮ್ಮ ದೇಶದ ಕಲೆಯನ್ನು, ಪೂರ್ವದ ಅಪೂರ್ವ ಸಂಸ್ಕೃತಿಯನ್ನು ಪಶ್ಚಿಮಕ್ಕೆ ತಂದು, ಉತ್ತಮ ರೀತಿಯಲ್ಲಿ ಬಿತ್ತರಿಸಿದುದಕ್ಕೆ ಹೆಮ್ಮೆ........

ನಮ್ಮ 'ಬುದ್ಧೋದಯ' ನೃತ್ಯ–ನಾಟಕದ ಕೊನೆಯ ಪ್ರದರ್ಶನವನ್ನು ಕೆಮ್‌ಡೆನ್ (Camden) ಪುರಭವನದಲ್ಲಿ ಅಂತರರಾಷ್ಟ್ರೀಯ ಉತ್ಸವದ ಸಪ್ತಾಹದಲ್ಲಿ ಪ್ರದರ್ಶಿತವಾಯಿತು. ಪತ್ರಿಕೆಗಳೂ, ಜನರೂ ಒಕ್ಕಂಠದಿಂದ ನಮ್ಮ ನೃತ್ಯ ನಾಟಕವನ್ನು ಹೊಗಳಿದರು. ......

ವಿಮರ್ಶಕರೊಬ್ಬರು ಹೀಗೆಂದು ಬರೆದರು – "AMC ಯವರ 'ಬುದ್ಧೋದಯ' ಕ್ಕೆ ಸಮನಾಗಿ ತೀವ್ರ ಕಾತುರವನ್ನಾಗಲಿ, ಮೋಹಕತೆಯನ್ನಾಗಲಿ ಪಡೆದಿರುವ ಮತ್ತೆ ಯಾವ ಕಲಾಕೃತಿಯನ್ನೂ ನಾನು ಹೊಂದಿಸಲಾರೆ – ಅಬ್ಬಾ!...."

ಇನ್ನೊಬ್ಬರು ಹೀಗೆಂದು ಬರೆದರು :—

"'ಬುದ್ಧೋದಯ' ದಂತಹ ಭಾರತೀಯ ನೃತ್ಯ ನಾಟಕದ ಯೋಗ್ಯತೆಯನ್ನು ಪೂರ್ಣವಾಗಿ ಗ್ರಹಣ ಮಾಡಿಕೊಳ್ಳಲು ಕಲ್ಪನಾ ಶಕ್ತಿಯುಳ್ಳ ಮತ್ತು ಪ್ರಜ್ಞಾಶಾಲಿಯಾದ ಮೇಧಾವಿ ಪ್ರೇಕ್ಷಕ ವರ್ಗ ಇಂಗ್ಲೆಂಡಿನಲ್ಲಿ ಅತ್ಯಗತ್ಯ"

ಮತ್ತೊಬ್ಬರು ಹೀಗೆ ಪ್ರಕಟಿಸಿದರು :—'ಮೋಹಪರವಶತೆ' ಇದೇ ಆದಲ್ಲಿ ಇಂತಹುದು ನಮಗೆ ಇನ್ನೂ ಹೆಚ್ಚು ಹೆಚ್ಚು ಒದಗಿ ಬರಲಿ!'

ಜನರೆಂದರು...."ಇದು ಬರಿಯ ನೃತ್ಯ ನಾಟಕವಷ್ಟೇ ಅಲ್ಲ. ನಮ್ಮ ಸುಪ್ತ

ಶಕ್ತಿಗಳನ್ನು ಜಾಗೃತಗೊಳಿಸಿದ ಹೃದಯ ಮಂಥನ. ನಾವು ಹಿಂದೆಂದೂ ಯಾವ ರಂಗಸೃಷ್ಟಿಗೂ ಇಂತಹ ಪ್ರತಿಕ್ರಿಯೆಗಳನ್ನು ಅನುಭವಿಸಿದುದೇ ಇಲ್ಲವೆಂದೆನಿಸುತ್ತದೆ. ನಿಜಕ್ಕೂ ಇದೊಂದು ಅದ್ವಿತೀಯ ಕೃತಿಯೇ ಸರಿ."

ನಮ್ಮ ಜೊತೆ ಕಾಲ ಕಳೆದುದರ ಪರಿಣಾಮವಾಗಿ ನಮ್ಮ ಕಲೆಯನ್ನು ನೋಡಿದುದರ ಫಲವಾಗಿ ನಮ್ಮ ಶಿಷ್ಯಂದಿರು ಪಟ್ಟ ಅಭಿಪ್ರಾಯ ಹೀಗಿತ್ತು :—"ನೀವಿಬ್ಬರೂ ನಮಗೆ ಅತಿ ದೊಡ್ಡ ಸ್ಫೂರ್ತಿದಾಯಕ ವ್ಯಕ್ತಿಗಳಾಗಿದ್ದೀರಿ. ಏಕೆಂದರೆ ನೀವು ಜೀವನವನ್ನು ಪರಿಪೂರ್ಣತೆಯಿಂದ ಜೀವಿಸಿರುವಿರಿ. ಆಯಾ ಕಾಲಕ್ಕೆ ಬಂದ ಪ್ರಸಂಗಗಳನ್ನು ಸ್ಥೈರ್ಯದಿಂದ ಎದುರಿಸಿ, ನಿಮ್ಮ ತನು, ಮನ, ಧನವನ್ನು ತೆತ್ತಿದ್ದೀರಿ. ನಿಮ್ಮ ಸಂಸಾರಕ್ಕೆ, ನಿಮ್ಮ ಶಿಕ್ಷಣ ಪಾಠಗಳಿಗೆ ಸರ್ವಸ್ವವನ್ನು ಅರ್ಪಿಸಿದ್ದೀರಿ, ಅಲ್ಲದೆ ನೀವು ಅದ್ಭುತ ಕಲಾವಿದರಾಗಿಯೂ ಇದ್ದೀರಿ. ಆತ್ಮವನ್ನು ಅಲ್ಲೋಲ ಕಲ್ಲೋಲ ಮಾಡುವಂತಹ ಮಾನಸಿಕ ಹೋರಾಟಗಳನ್ನು ನೀವು ತಪ್ಪಿಸಿಕೊಂಡಿರುವಿರಿ. ಅಥವಾ ಸಾಫಲ್ಯತೆಯಿಂದ ಎದುರಿಸಿರಬೇಕು........ನಾವು........ನಮ್ಮ ಜೀವನದಲ್ಲಿ ಈಗ ತಾನೇ ಅವುಗಳ ಅನುಭವವನ್ನು ಪಡೆಯುತ್ತಲಿದ್ದೇವೆ." ಮನಃಪೂರ್ವಕವಾಗಿ ಆಡಿದ ಮಾತುಗಳಿವು !

ಈ ಪ್ರದರ್ಶನಗಳಾದ ಮೇಲೆ ನಾವು ಇಂಗ್ಲೆಂಡಿಗೆ ಬಂದ ಕರ್ತವ್ಯವನ್ನು ಪರಿಪೂರ್ಣ ಮಾಡಿದಂತೆ ತೃಪ್ತಿಪಟ್ಟೆವು. ಮುಖ್ಯವಾಗಿ ಪತ್ರಿಕೆಗಳೇ ಹೀಗೆಂದು ಸಾರಿದವು :—

"ಇಂಗ್ಲೆಂಡಿನಲ್ಲಿ ಭಾರತೀಯ ನೃತ್ಯ ಪ್ರದರ್ಶನಗಳು ಸಂಪೂರ್ಣ ನೃತ್ಯ ನಾಟಕಗಳಾಗಿ ಇರುವುದು ತೀರಾ ಅಪರೂಪ. ಅದರಲ್ಲೂ ಹಿಂದೂ ಕಥಾಸಾರವಲ್ಲದೆ, ಬೌದ್ಧ ಮತದ ಕಥೆಯನ್ನೊಳಗೊಂಡ ನೃತ್ಯ–ನಾಟಕ ಇನ್ನೂ ಅಪರೂಪ, ಆದುದರಿಂದ AMC ಯವರ ಪ್ರದರ್ಶನ ಈ ಎರಡೂ ವಿಧದಿಂದ ಅಸಾಧಾರಣವೂ, ಅಪೂರ್ವವೂ ಆಗಿತ್ತು."

ಮತ್ತೊಂದು, "ಭಾರತೀಯ ನೃತ್ಯ ಕಲೆಯ ಸೂಕ್ಷ್ಮ ದಾರ್ಶನಿಕತೆಯ ಆಳ ಇನ್ನೂ ಪಾಶ್ಚಾತ್ಯರಿಗೆ ಒಂದು ನಿಗೂಢ ಸತ್ಯವೇ ಆಗಿದ್ದು ದಿನೇ ದಿನೇ ಅದನ್ನು ಮೆಚ್ಚುವ ಹಂಬಲ ಬಲವಾಗಿ ಅವರಲ್ಲಿ ಬೆಳೆಯುತ್ತಿದೆ. ಬಾಹ್ಯ ಪ್ರವೃತ್ತಪರರಾದ ಅವರು ನೃತ್ಯ ರಂಗದಲ್ಲಿ ಆಳವಿಲ್ಲದ ವಿಕೃತ ರೂಪಗಳನ್ನು ಸೃಷ್ಟಿಸುತ್ತಿರುವಾಗ ಏಶಿಯದ ನೃತ್ಯಗಾರರು ತಮ್ಮ ವಿಕಾಸಗೊಂಡಿರುವ ಪೂರ್ವ ಸಂಸ್ಕೃತಿ ಇತರರಿಗೆ ಮುಂದಟ್ಟಾಗುವ ರೀತಿಯಲ್ಲಿ ತಮ್ಮ ನೃತ್ಯ ರಚನೆಗಳ ಪೂರೈಕೆಯನ್ನು ಶಾಂತರೀತಿಯಿಂದ ಮುಂದುವರಿಸುತ್ತಿದ್ದಾರೆ. AMC ಯವರು ಪ್ರದರ್ಶಿಸಿದ ಈ ನೃತ್ಯ ನಾಟಕದಲ್ಲಿ

ಶತಮಾನಗಳಿಂದ ವಿಕಸನ ಹೊಂದಿದ ಒಂದು ಸೂಕ್ಷ್ಮತೆ ವ್ಯಾಪಿಸಿಕೊಂಡಿದೆ. ಈ ಕೃತಿಯಲ್ಲಿ ನಾಟಕೀಯ ಘರ್ಷಣೆಯಿದೆ, ಮನೋಹರವಾದ ಮಾಂತ್ರಿಕ ಲಾಲಿತ್ಯ ವಿದೆ. ವೇಷಭೂಷಣಗಳ ಬಿಮ್ಮು ಕಂಡು ಬಂದರೂ, ಭಾವಗಳ ಯೋಗ್ಯ ವಿಕಸನ ವಿದ್ದರೂ, ಕೃತಿಯು ಯೋಗರಹಸ್ಯಮಯವಾಗಿಯೇ ಆಕರ್ಷಕವಾಗಿ ಉಳಿದಿದೆ" ಎಂದು ಸಾರಿತು.

ಅಂಥ ಮಾತುಗಳನ್ನು ಪತ್ರಿಕೋದ್ಯೋಗಿಗಳು ಒಮ್ಮತದಿಂದ ಒಪ್ಪಿದರು. ಆ ಸಂದೇಶವನ್ನು ಅವರು ನಮ್ಮ ಅಂದಿನ ನೃತ್ಯ ನಾಟಕಕ್ಕೆ ಹೊಂದಿಸಿ ಪ್ರಶಂಸೆಯ ವಿಮರ್ಶೆ ಮಾಡುತ್ತ, ಕೊನೆಗೆ ಹೀಗೆ ಮುಗಿಸಿದರು, "ಯೆಹೂದಿ ಮೆನುಹಿನ್‌ರವರ ಆ ಸಂದೇಶದ ಮೂರ್ತಿಮಂತ ಉದಾಹರಣೆ ಈ ನೃತ್ಯನಾಟಕ ಎಂಬುದರಲ್ಲಿ ಸಂಶ ಯವೇ ಇಲ್ಲ".

ಕಾರ್ಯಕ್ರಮ ಅಚ್ಚಾದ ಪುಸ್ತಕದಲ್ಲಿ ಮುನ್ನುಡಿಯಾಗಿ ಯೆಹೂದಿ ಮೆನುಹಿನ್‌ರು, ..."ಇಂತಹ ವೈಶಿಷ್ಟ್ಯದ ಲೋಕಸಂಸ್ಥೆ ಒಂದಿರದಿದ್ದರೆ, ಏಶಿಯದ ಕಲಾಕೃತಿ ಗಳಾದ ಸಂಗೀತ, ನೃತ್ಯಗಳ ಪುರಾತನ ಪರಿಶುದ್ಧತೆ ಮಾಯವಾಗಿ ಹೋಗುವ ಸಂಭವ ವಿದೆ. ಒಂದು ವೇಳೆ ಹೀಗೆ ಆಗುವುದಿದ್ದರೆ ಆ ಕಲೆಗಳ ಜನ್ಯದೇಶಗಳಿಗೆ ಒಂದು ಮಹಾ ವಿಪತ್ತು ಒದಗಿದಂತೆಯೇ, ಅಲ್ಲದೆ ಈ ಕಲಾಕೃತಿಗಳ ಯೋಗ್ಯತೆಯನ್ನು ಅರಿತುಕೊಳ್ಳಲು ಮೊದಲ ಹೆಜ್ಜೆಯನ್ನು ಹಾಕುತ್ತಿರುವ ಪಾಶ್ಚಿಮಾತ್ಯರಿಗೆ ಅದೊಂದು ದುರಾದೃಷ್ಟವೇ. ಏಕೆಂದರೆ ಸಂಗೀತ ವಾದ್ಯಗಳ ಜೋಡಣೆಯ ಹೊಸ ವಿಧಾನ ಗಳಿಗೂ ಛಂದೋಗತಿಯ ನೂತನ ಭಾವಸ್ವರೂಪಗಳಿಗೂ ಒಲುಮೆಯ ಪ್ರಯೋಗ ತಂತ್ರಗಳಿಗೂ ಇಂತಹ ಒಂದು ಸಂಸ್ಥೆ ಉಗಮಸ್ಥಾನವಾಗಿ ಪರಿಣಮಿಸುತ್ತದೆ...."

ಆತ್ಮೀಯರೇ, ತುಂಬಿದ ಹೃದಯದಿಂದ ನಿಮಗೆ ಈ ಸಮಾಚಾರಗಳನ್ನು ಬರೆಯುತ್ತಿದ್ದೇನೆ.

ಇತಿ ನಿಮ್ಮ

ಚಂದಮ್ಮ.

*   *   *   *   *

ಲಂಡನ್

11 – 9 – 1666

ಪ್ರಿಯ ಅಮ್ಮ, ಅಪ್ಪ,

ಪೇಟೆಯಲ್ಲಿ ಆಹಾರದ ಅಭಾವ, ದಿನಕ್ಕಿಂತ ದಿನ ಆಹಾರದ ಬೆಲೆ ಏರುತ್ತಿರುವ ಕಷ್ಟ, ಮೊತ್ತದ ಮಿತಿಯಿರುವ ಆರ್ಥಿಕ ಸ್ಥಿತಿ, ಇವೆಲ್ಲ ತಾಪತ್ರಯಗಳಿಂದ ನೀವು

ಮನೆ ನಡೆಸುತ್ತಿರುವುದು ಒಮ್ಮೊಮ್ಮೆ ತುಂಬಾ ಬೇಸರವಾಗುತ್ತಿದೆ. ರೂಪಾಯಿಯ ಮೌಲ್ಯವನ್ನು ಇಳಿಸಿದುದರ (Devaluation) ಫಲ ಏನೇನು ಎಂದು ನೀವು ಬರೆದಿದ್ದೀರಿ. ಮನೆ ನಡೆಸುವುದರಲ್ಲಿನ ಆಗುಹೋಗುಗಳು, ಕಷ್ಟ ನಷ್ಟಗಳನ್ನು ನಾವು ಅರಿತಿಲ್ಲವೇ ? ಆದರೂ ನೀವೆಲ್ಲರೂ ಧೈರ್ಯವಾಗಿ ಎಲ್ಲವನ್ನೂ ಎದುರಿಸುತ್ತಿದ್ದೀರಿ. ನಾವು ಇಲ್ಲಿ ಸುಭಿಕ್ಷ ಸಮೃದ್ಧಿಯಲ್ಲಿ ತೇಲಾಡುತ್ತಿದ್ದೇವೆ. ಆದರೂ ನಿಮ್ಮ ನೆನಪಾದರೆ ಯಾವುದೂ ಬೇಡವೆನಿಸುತ್ತದೆ. ಮುಖ್ಯವಾಗಿ ಇಲ್ಲಿನ ಆಹಾರ ಸಮೃದ್ಧಿಯನ್ನು ಕಂಡರೆ – ನೀವು ಅಲ್ಲಿ ಅದೇ ಆಹಾರಕ್ಕೆ ತಾನೆ ಕಷ್ಟಪಡುವುದು ? ಭಾರತಕ್ಕೂ ಈ ಅಭಿವೃದ್ಧಿ ಪಡೆದ ಪಾಶ್ಚಾತ್ಯಕ್ಕೂ ಎಷ್ಟೊಂದು ವ್ಯತ್ಯಾಸ ! ಭಾರತದಲ್ಲಿ ಅತಿಸಂತಾನವಾದರೆ ಇಲ್ಲಿ ಮಿತಸಂತಾನಕ್ಕೂ ಕೊರತೆ ಇದೆ ! ಇಲ್ಲಿ ಮಗು ಒಂದು ಹುಟ್ಟಬೇಕಾದರೆ ವರುಷಗಳ ಯೋಜನೆಯಾಗಬೇಕು ! ಸರಕಾರವು ತಾಯಿ ಮಗುವಿನ ಪೋಷಣೆಗೆ ಎಷ್ಟು ಅನುಕೂಲತೆಗಳನ್ನು ಕೊಟ್ಟರೂ ಮಕ್ಕಳು ಬೇಡವಾದ ಜನ !

ಬ್ರಿಟಿಷ್ ಜನರ ರಾಷ್ಟ್ರೀಯ ಗುಣ ಚಕ್ರಬಂಧ ಒಗಟುಗಳನ್ನು (Cross Word Puzzles) ಬಿಡಿಸುವುದು ಮಾತ್ರವಲ್ಲ, ಅವರಿಗೆ ಪತ್ರಿಕೆ ಓದುವ ಹುಚ್ಚು ಬಹಳವಿದೆ.

ಲಂಡನ್ ಪತ್ರಿಕೆಗಳು ಈಗ ಕ್ರೂರವಾರ್ತೆಗಳಿಂದ ತುಂಬಿರುತ್ತವೆ—ಕಳ್ಳತನ, ಚಿಕ್ಕಮಕ್ಕಳ ಕೊಲೆ, ಮಾನಭಂಗ, ಅವರ ಹಠ ಸಂಭೋಗ (Rape) ಇತ್ಯಾದಿ.

ಇಲ್ಲಿ ಬಂದ ಕೆಲವೇ ತಿಂಗಳುಗಳೊಳಗೆ ಇಲ್ಲಿನ ಪರಿಸ್ಥಿತಿಯ ಪರಿಚಯವಾಗಿದೆ. ನಾವು ಭಾರತದ ರಾಜಕೀಯ, ಕಾಳಸಂತೆಯ ವ್ಯಾಪಾರ ಇತ್ಯಾದಿಗಳನ್ನು ಕುರಿತು ಯಾವಾಗಲೂ ತೆಗಳುತ್ತಿದ್ದೆವು. ಆದರೆ ಇಲ್ಲಿ ಬಂದ ಮೇಲೆ ಅಂತಹ ದ್ರೋಹಿ ಜನರು ಎಲ್ಲೆಲ್ಲೂ ಇದ್ದಾರೆ ಎಂದು ತಿಳಿಯಿತು. ಇಲ್ಲಿ ಕಾರಣವಿಲ್ಲದ ಕೊಲೆಗಳು, ಕ್ರೂರವರ್ತನೆಗಳು, ಮಹದಾಶೆಯ, ದುರಾಶೆಯ ಕೃತ್ಯಗಳು ಭಾರತದಲ್ಲಿರುವುದಕ್ಕಿಂತ ಹೆಚ್ಚಾಗಿವೆ.

ಜಯದೇವ ಹೇಳಿದ್ದ ಎರಡು ಗ್ರಾಮಾಫೋನ್ ರಿಕಾರ್ಡುಗಳನ್ನು ಒಬ್ಬ ಸ್ನೇಹಿತರ ಜೊತೆ ಕಳಿಸಿದ್ದೇನೆ. ತಲುಪಿದ ತಕ್ಷಣ ಬರೆಯಿರಿ. ಇಲ್ಲಿಂದ ಯಾವ ಸಾಮಾನನ್ನೂ ಕಳುಹಿಸುವುದು ಕಷ್ಟ. ಅಲ್ಲದೆ ನಮಗೆ ದುಡ್ಡಿನ ಅಭಾವ ಬೇರೆ ! ಆದರೆ ಪಾಶ್ಚಾತ್ಯರಲ್ಲಿ ನಾವು ನೋಡಬೇಕಾದ ಎಲ್ಲ ವಿಷಯಗಳನ್ನೂ, ತಿನ್ನಬೇಕಾದ ಎಲ್ಲಾ ಪದಾರ್ಥಗಳನ್ನೂ ಪಡೆಯುತ್ತಲಿದ್ದೇವೆ. ಧನ ಸಹಾಯಕ್ಕಿಂತ ಜನ ಸಹಾಯ ಬೇಕು ಎಂಬ ಮಾತು ಎಷ್ಟು ನಿಜ ! ನಮ್ಮ ಸನ್ಯಾಸಿಗಳು ಹೇಗೆ ದುಡ್ಡಿಲ್ಲದೆ ಜೀವನ ನಡೆಸುತ್ತಾರೆ ಎಂದು ಈಗ ತಿಳಿಯಿತು !

ಬೆಲ್ಜಿಯಂನಿಂದ ಕರೆ ಬಂದಿದೆ! ಪ್ರವಾಸ ಮುಗಿದ ಮೇಲೆ ಬರೆಯುವೆ.

ಇತಿ ನಿಮ್ಮ

ಚಂದಮ್ಮ.

*   *   *   *   *

....

20 – 9 – 1966

ಆತ್ಮೀಯರೇ,

........ಬೆಲ್ಜಿಯಂನ (Belgium) ಲಿಯೇಜ್ (Liege) ನಗರದವರು ಲಲಿತ ಕಲೆಗಳ ಉತ್ಸವವನ್ನು ಜರುಗಿಸುವಾಗ ನಮಗೂ ಕರೆಯಿತ್ತರು. ನಾವು ಪ್ರಥಮವಾಗಿ 'ಇಂಗ್ಲಿಷ್ ಚೆನಲ್' ನ್ನು (English Channel) ಹಡಗಿನ ಮೂಲಕ ದಾಟಿದೆವು. ನಮ್ಮ ಸಂಗಡದ ಕಲಾವಿದರೆಲ್ಲರೂ ಉತ್ಸುಕರಾಗಿ ಆನಂದದಿಂದಿದ್ದರು. ಸಮುದ್ರ ಪ್ರಯಾಣ ಮಾಡುತ್ತಿದ್ದ ಹಾಗೆ ಒಂದು ಸಮಾಚಾರ ಕೇಳಿದೆ. ಯೂರೋಪನ್ನೂ ಇಂಗ್ಲೆಂಡನ್ನೂ ಜೋಡಿಸಲು ಸಮುದ್ರದ ಅಡಿಯಲ್ಲಿ ಸುರಂಗ ಮಾರ್ಗವನ್ನು ಕಟ್ಟುವರೆಂದು. ಸಮುದ್ರ ಪ್ರಯಾಣ ನಿಧಾನವೆಂದು ವೇಗವಾದ ಪ್ರಯಾಣಕ್ಕೆ ಈ ತರಹದ ರೈಲು ಮಾರ್ಗ ಮಾಡುವರಂತೆ! ವೇಗ........ತೀವ್ರ ವೇಗ........ಅತಿಶಯ ವೇಗ........ಇಲ್ಲಿನ ಜನತೆಗೆ ಒಂದು ಹುಚ್ಚು. ವಿರಾಮವೇ ಬೇಡವೇ ? ಹಡಗಿನಲ್ಲಾದರೂ ಸ್ವಲ್ಪ ವಿರಾಮ ಸಿಗುವುದೂ ಬೇಡವಾಯಿತೇ ? ಏತಕ್ಕಾಗಿ ಈ ತೀವ್ರತೆ ? ಈಗಂತೂ ಈ ಜನ ಜೀವನವನ್ನು ಅನುಭವಿಸುವುದಿಲ್ಲ. ಬರೇ ಜೀವಿಸುತ್ತಾರೆ ಅಷ್ಟೇ ಎಂಬ ಅಭಿಪ್ರಾಯವಾಗುತ್ತಿದೆ.

ಬೆಲ್ಜಿಯಂ ಭೂಮಿಯ ಮೇಲೆ ಕಾಲಿಟ್ಟಂತೆ, ಅಲ್ಲಿನ ನಿಸರ್ಗ ಕಂಡಂತೆ, ಹೆಚ್ಚಾಗಿ ಎಲೆಕೋಸು, ಬ್ರಸೆಲ್ಸ್ ಸ್ಪ್ರೌಟ್ಸ್ (Brussels Sprouts) ಮುಂತಾದ ತರಕಾರಿ ಬೆಳೆಸುವ ತೋಟಗಳು ಕಣ್ಣಿಗೆ ಬಿದ್ದುವು. ಈ ದೃಶ್ಯ ಇಂಗ್ಲೆಂಡಿನ ದೃಶ್ಯದಿಂದ ಬೇರೆಯಾಗಿತ್ತು. (ಇಂಗ್ಲೆಂಡನ್ನು ನಾವು ಬಿಡುವಾಗ ಸೇಬು ಮರಗಳು ಕೆಂಪು ಬಣ್ಣದ ಸೇಬುಗಳಿಂದ ತುಂಬಿ ಹೋಗಿತ್ತು. ದ್ರಾಕ್ಷಿ ತೋಟಗಳಲ್ಲಿಯೂ ದ್ರಾಕ್ಷಿ ಸಮೃದ್ಧವಾಗಿ ಬೆಳೆದಿತ್ತು) ಫ್ಲೆಂಡರ್ಸ್ (Flanders) ಸೇರಿದೊಡನೆ ಫ್ಲೆಮಿಷ್ ಭಾಷೆ (Flemish) ಕಿವಿಯಲ್ಲಿ ಬಿತ್ತು. ಬ್ರಸ್ಸೆಲ್ಸ್ ಮತ್ತು ಲಿಯೇಜಿನಲ್ಲಿ ಜರ್ಮನ್ ಹಾಗೂ ಫ್ರೆಂಚ್ ಭಾಷೆಗಳು ಬಳಕೆಯಲ್ಲಿವೆ. ಪ್ರಯಾಣ ಮಾಡುವುದೆಂದರೆ ನನಗೆ ಯಾವಾಗಲೂ ಬಲು ಇಷ್ಟ. ಈಗಲೂ ಒಂದೂರಿನಿಂದ

ಇನ್ನೊಂದು ಊರಿಗೆ ಹೋಗುವಾಗ ಮಕ್ಕಳಿಗಿರುವ ಉತ್ಸಾಹ, ಆತುರ, ಸಂತೋಷ ನನ್ನಲ್ಲಿದೆ. ಬೆಲ್ಜಿಯಮ್ಮಿನ ಜನರು ಸಾಮಾನ್ಯವಾಗಿ ಕುಳ್ಳರೆಂದು ಭಾವನೆಯಾಯಿತು. ಆಗಾತಾ ಕ್ರಿಸ್ಟೀಯ (Agatha Christie) ಪತ್ತೇದಾರಿ ಕಾದಂಬರಿಗಳ ಹರ್ಕೂಲ್ ಪ್ವಾರೋ (Hercule Poirot) ಒಬ್ಬ ಕುಳ್ಳ ಬೆಲ್ಜಿಯನ್ನನೇ ಅಲ್ಲವೇ ?........

.... ಲಿಯೆಜ್‌ನಲ್ಲಿ ರಂಗಸ್ಥಳವನ್ನು ಹೂಗಿಡಗಳಿಂದ ಅಲಂಕರಿಸಿದ್ದರು ಎಲ್ಲವೂ ಸುಂದರವಾಗಿತ್ತು. ನಮ್ಮ ಪ್ರದರ್ಶನದ ಮೂರು ದಿನಗಳ ಮುಂಚೆಯೇ ಎಲ್ಲಾ ಟಿಕೇಟುಗಳೂ ಮಾರಿಹೋಗಿದ್ದವು. AMC ಪಂಗಡದಲ್ಲಿನ ನಾವು ನೃತ್ಯಗಾರರೂ, ಸಂಗೀತಗಾರರೂ ಸೇರಿ ಸ್ವಾರಸ್ಯವಾದ ನೃತ್ಯ ಸಂಗೀತಗಳ ರಸದೂಟವನ್ನು ಪ್ರೇಕ್ಷಕರಿಗೆ ನೀಡಿದೆವು. ಮಹಡಿ ಮೇಲಿನ ಅಂತಸ್ತಿನಿಂದ ರಂಗಸ್ಥಳದ ಹತ್ತಿರದ ಸಾಲುಗಳವರೆಗೆ ಜನತೆ ಒಂದೇ ಸಮನೆ ಕರತಾಡನ ಮಾಡಿ ತಮ್ಮ ಮೆಚ್ಚಿಕೆಯನ್ನು ವ್ಯಕ್ತಪಡಿಸಿತು. ಪ್ರದರ್ಶನದ ನಂತರ ನಮಗಾಗಿ ಒಂದು ಸತ್ಕಾರ ಕೂಟವನ್ನೇರ್ಪಡಿಸಿದರು. ಆ ಸಂದರ್ಭದಲ್ಲಿ ನಮಗೆ ಪಾಶ್ಚಾತ್ಯ ಸಂಸ್ಕೃತಿಯ ಒಂದು ಹಿರಿಯ ನೋಟ ನಮ್ಮ ಕಣ್ಣುಗಳ ಮುಂದೆ ತೆರೆಯಲ್ಪಟ್ಟಿತು. – ಲಲಿತ ಕಲೆಗಳಲ್ಲಿ ಅವರಿಗಿರುವ ಅಪ್ರತಿಮ ಅಭಿರುಚಿ, ಸುಸಂಸ್ಕೃತಿಯ ಶ್ರೀಮಂತಿಕೆ, ಇದರ ಜತೆಯಲ್ಲಿ ಆದರದ ನಡತೆ ಮತ್ತು ಮೋಹಕ ಫ್ರೆಂಚ್ ಭಾಷೆ.

ಲಿಯೇಜ್ ಪಟ್ಟಣ ಅತಿ ಶುಚಿಯಾಗಿಯೂ, ಸುಂದರವಾಗಿಯೂ ಇದೆ. ನಾನು ಭಾರತದಲ್ಲಿ ಇದ್ದಾಗ ಪಾಶ್ಚಾತ್ಯದ ಚಿತ್ರವನ್ನು ಯಾವ ವಿಧವಾಗಿ ಮನಸ್ಸಿನಲ್ಲಿ ಕಲ್ಪಿಸಿದ್ದೆನೋ ಅದನ್ನೇ ಇಲ್ಲಿ ಕಣ್ಣುಮುಂದೆ ಸ್ಪಷ್ಟವಾಗಿ ಕಂಡೆನು. ಸ್ವಾಗತ ಸಮಿತಿಯವರು ಏರ್ಪಡಿಸಿದ್ದ ಲಲಿತ ಕಲೆಗಳ ಸಾಪ್ತಾಹಿಕ ಪ್ರದರ್ಶನದ ಪರಿಚಯವನ್ನು ಅವರೇ ನಮಗೆ ಮಾಡಿಕೊಟ್ಟರು, ಅಲ್ಲದೆ ಅಲ್ಲಿನ ಜನತೆ ಅಂತಹ ಕಾರ್ಯಕ್ರಮಗಳಿಗೆ ನೀಡುವ ಹಾರ್ದಿಕ ಪ್ರೋತ್ಸಾಹವನ್ನು ತಿಳಿಸಿದರು. ಇದನ್ನು ನಾವೇ ಸ್ವಯಂ ಅನುಭವಿಸಿದ್ದೇವೆ. ನಮ್ಮ ಪ್ರತಿಯೊಂದು ಕಾರ್ಯಕ್ರಮವನ್ನೂ ನಿಶ್ಶಬ್ದತೆಯಿಂದಲೂ, ಆಸಕ್ತಿಯಿಂದಲೂ ವೀಕ್ಷಿಸಿ, ಅಂತ್ಯದಲ್ಲಿ ಕಿವಿಬಿರಿಯುವಂತೆ ಕರತಾಡನವನ್ನು ಮಾಡಿದ ಜನತೆಯ ಮನೋಭಾವಗಳ ಅರಿವು ನಮಗಾಗಲೇ ಆಗಿದೆ. ಪ್ರದರ್ಶನವಾದ ಮೇಲೆ ಹಲವಾರು ವಿಮರ್ಶೆಗಳು ನಮ್ಮ ಕಿವಿಗೆ ಬಿದ್ದವು. ಇವೆಲ್ಲವೂ ನಮ್ಮ ಕಿವಿಗೆ ಹಿತಕರವೇ ಆಗಿದ್ದುವು. ಅವುಗಳಲ್ಲಿ ಇದು ಒಂದು "ನಿಮ್ಮ ದೇಶದ ಕಲೆಗಳ ಸಿರಿತನ, ಹಿರಿತನದಿಂದಾಗಿ ನಮ್ಮ ಸಾಪ್ತಾಹಿಕದ ಅನೇಕ ಕಾರ್ಯಕ್ರಮಗಳಿಗೆ ಧಕ್ಕೆಯಾಗಿದೆ!" ಎಂದು....ನಾವು ಹದಿನೈದು ಮಂದಿ ಸಂಗೀತಗಾರರೂ ನೃತ್ಯಗಾರರೂ ನಮ್ಮ ದೇಶದ

ವಿವಿಧ ಕಲೆಗಳ ಪರಿಚಯವನ್ನು ಮಾಡಿಕೊಟ್ಟಿರುವ ಸಂದರ್ಭ ನಮ್ಮ AMC ಗೂ ಇಲ್ಲಿನ ಸ್ವಾಗತ ಸಮಿತಿಗೂ ಒಂದು ಹೆಮ್ಮೆಯ ವಿಷಯವಾಗಿದೆ.

ಮರುದಿನ ನಾವು ಬಿಸಿಲಿನಲ್ಲಿ ಲಿಯೇಜ್ ಪಟ್ಟಣವನ್ನು ಸುತ್ತಾಡಿದೆವು. ಈ ಜನರಿಗೆ ಹೂ ಮತ್ತು ಬಣ್ಣಗಳು ತುಂಬಾ ಇಷ್ಟವಿದ್ದಂತೆ ನಮಗೆ ಕಂಡಿತು. ಅಂತೂ ....ಬೆಲ್ಜಿಯಂನ್ನೂ ನಾವು ನೋಡಿದೆವು.

ಇತಿ ನಿಮ್ಮ

ಚಂದಮ್ಮ.

*   *   *   *

ಲಂಡನ್

27 – 9 – 1966

ಪ್ರಿಯ ಅಮ್ಮ,

........ಗೌರೀ ಗಣೇಶನ ಹಬ್ಬಗಳಾದ ಮೇಲೆ ನೀವು ಸ್ವಲ್ಪ ಆರಾಮ ಪಡೆಯುತ್ತಿದ್ದಿರಬೇಕು ಅಲ್ಲವೇ ? ನಿಮ್ಮ ದೊಡ್ಡ ಪತ್ರವನ್ನು ಆತುರದಿಂದ ಕಾಯುತ್ತಿದ್ದೇನೆ. ವರ್ಷ ವರ್ಷವೂ ಮಾಡುವ 'ಅರಿಸಿನ–ಕುಂಕುಮ' ವನ್ನು ಗೌರೀಹಬ್ಬದ ದಿನವೇ ಮಾಡಿದಿರಾ ? ಅನಂತರ ಮಾಡಿದಿರಾ ? ಯಾರ್ಯಾರು ಬಂದಿದ್ದರು ತಿಳಿಸಿ. ನಾನು ಇಲ್ಲಿ ಗೌರೀಹಬ್ಬದ ದಿನ ವಾಡಿಕೆಯಂತೆ ಹಣೆಗೆ ಅಡ್ಡ ಕುಂಕುಮ ಇಟ್ಟು ನೃತ್ಯತರಗತಿಗೆ ಹೋದೆ! ದಾರಿಯಲ್ಲಿ ಒಬ್ಬರೂ ಅದನ್ನು ಗಮನಿಸಲಿಲ್ಲ! ಇಲ್ಲಿ ರಸ್ತೆಯಲ್ಲಿ ಅರೆಬೆತ್ತಲೆ ನಡೆದರೂ ಜನರಿಗೆ ಹೊಸತಲ್ಲ! ಇಲ್ಲಿನ ಮನೆಯಲ್ಲಿ ಎಲ್ಲೆಲ್ಲೂ ಮಾಂಸ, ಮಾಂಸದ ಪದಾರ್ಥಗಳಿರುವುದರಿಂದ ಅಡಿಗೆ ಮಾಡಲು ಮನಸ್ಸೊಪ್ಪಲಿಲ್ಲ. ಮನೆಬಿಟ್ಟು ಹೊರಗೆ ಫಲಾಹಾರ ಮಾಡಿದೆವು. ನಮ್ಮ ಶ್ರೀ ಗಣೇಶನಿಗೆ ಪಾಶ್ಚಾತ್ಯ ಹೂಗಳಿಂದ ಅಲಂಕರಿಸಿ ನಮಸ್ಕರಿಸಿದೆ. ಅಷ್ಟೇ ನನ್ನ ಈ ವರುಷದ ಪೂಜೆ!........

ಇತ್ತೀಚೆಗೆ, ನನ್ನ ಮನಸ್ಸೆಲ್ಲಾ ನಿಮ್ಮಲ್ಲೇ ಇದೆ. ಮನಸ್ಸು ಎಲ್ಲೆಲ್ಲೋ ಹಾರಾಡುತ್ತಲೇ ಇದೆ. ಒಮ್ಮೆ ಅಜ್ಜನಲ್ಲಿ ಮದರಾಸಿಗೆ ಹೋಗಿ ಅವರೊಡನೆ ಮಾತಾಡುತ್ತೇನೆ. ಇಲ್ಲಿನ ಅನುಭವಗಳೆಲ್ಲವನ್ನೂ ವಿವರಿಸುತ್ತೇನೆ. ಅಜ್ಜ ಆಸೆಯಿಂದ ಕೇಳಿ ಎಲ್ಲವನ್ನೂ ವಿಚಾರಿಸಿಕೊಳ್ಳುತ್ತಾರೆ. ಒಮ್ಮೆ ಜಮಶೆಡ್‌ಪುರಕ್ಕೆ ಹೋಗಿ ಜಯವಂತಿಯೊಡನೆ ಹರಟೆ ಹೊಡೆಯುತ್ತೇನೆ. ಅವಳು ಹಾಡುವ ದೇವರ

ನಾಮುಗಳನ್ನೂ "ನಮ್ಮ ಭಾಗ್ಯ ದೊಡ್ಡದೋ........" ಹಾಡನ್ನು ಕೇಳಲು ಮನಸ್ಸು ಆಶಿಸುತ್ತದೆ. ಬೊಂಬಾಯಿಗೆ ಹೋಗಿ ಶಂಕ್ರು, ಶಾಂತಿ, ಯಶೋಧರಾ ಜೊತೆಗೆ ಇರುತ್ತೇನೆ. ಶಾಂತಿ ಹಾಸಿಗೆ ಬಿಟ್ಟು ಏಳುವುದಿಲ್ಲ ಎಂಬ ವಾರ್ತೆ ಕೇಳಿ ಮೈಯೆಲ್ಲ ನಡುಗಿತು! ಯಶೋಧರೆಯ ಕಾಹಿಲೆ ವಾಸಿಯಿಲ್ಲ ಎಂದು ಕೇಳಿ ತುಂಬಾ ಚಿಂತೆ! ಸದ್ಯ ತಾಯ್ತನದಲ್ಲಿ ಅವಳ ತೃಪ್ತಿ ಸಂತೋಷಗಳಾದರೂ ಇದೆಯೆಂದು ಸಮಾಧಾನ. ಶಂಕ್ರು ಹೇಗಿದ್ದಾನೆ? ಯಶೋಧರಾ ಮತ್ತು ಮಕ್ಕಳ ಜೊತೆಗೆ ದಯವಿಟ್ಟು ವಿಟ್ಲ ಷಷ್ಟಿಗೆ ಹೋಗಿ ಬನ್ನಿ ಅಮ್ಮ. ನನಗೆ ನಿಮ್ಮೊಡನೆ ಕ್ಷೇತ್ರಯಾತ್ರೆ ಮಾಡುವ ಪುಣ್ಯ ವಿದೆಯೋ ಇಲ್ಲವೋ! ಹೋದವರ್ಷ ನಿಮ್ಮಜೊತೆ ಗೋಕುಲಾಷ್ಟಮಿ ಭಜನೆ ಮಾಡಿದ್ದು ಹೇಗೆ ಮರೆಯಲಿ? ನಿಮ್ಮೊಂದಿಗೆ ಒಮ್ಮೆ ಮಲ್ಲಾಪುರಕ್ಕೆ ಹೋಗಿ ಅಷ್ಟಮಿ ಹಬ್ಬದ ಸಂಭ್ರಮ ನೋಡಬೇಕೆಂಬ ಆಸೆಯಾಗಿದೆ. ನನ್ನ ಚಿಕ್ಕಂದಿನಲ್ಲಿ ನೀವು ಯಾವ ಯಾವ ಅಂದವಾದ, ಯೋಗ್ಯವಾದ, ಅಮೂಲ್ಯವಾದ ವಿಷಯಗಳಿಂದ ನನ್ನ ಜೀವನವನ್ನು ತಿದ್ದಿ ರೂಪಿಸಿದ್ದಿರೋ ಅವೆಲ್ಲ ವಿಷಯಗಳಿಗೆ ನಾನು ಬಿಡದೆ ನೆಚ್ಚಿ ಕೊಂಡಿದ್ದೇನೆ. "ನಿನಗೆ ಎಲ್ಲಿಂದ ಈ ಸಂಸ್ಕೃತಿ ಬಂತು?" ಎಂದು ನಮ್ಮ ಸ್ನೇಹಿ ತರು ನನಗೆ ಕೇಳಿದರೆ "ನನ್ನ ಅಮ್ಮ, ಅಪ್ಪ ಕೊಟ್ಟ ತರಬೇತು!" ಎಂದು ಕೂಡಲೆ ಉತ್ತರ ಕೊಡುವೆ........

ಚಿಕ್ಕಂದಿನ ಅಂದಿನ ಪ್ರವಾಸಗಳು, ನಿಮ್ಮ ಜೊತೆ ಇದ್ದ ದಿನಗಳು. ಬಂಟ ವಾಳದ ದೊಡ್ಡಮ್ಮನ ಮನೆಗೆ ಹೋಗಿದ್ದು, ನಮ್ಮ ಮನೆಗೆ ಬಂದು ಹೋಗುತ್ತಿದ್ದ ಬಂಧುಗಳು, ಅನೇಕ ಪ್ರಸಿದ್ಧ ಸಾಹಿತಿಗಳು, ಕಲಾಗಾರರು, ದಕ್ಷಿಣ ಕನ್ನಡ ಜಿಲ್ಲೆಯ ಬದಿಯಡ್ಕ ಎಂಬ ಹಳ್ಳಿಯಲ್ಲಿದ್ದ ಬಸ್ ನಿಲ್ದಾಣದ ಜ್ಞಾಪಕ, ಅಲ್ಲಿ ರಾಮಾಯಣ ವನ್ನು ಪಾರಾಯಣಮಾಡುತ್ತಿದ್ದ ದಂಪತಿಗಳು—ಈ ಸಮಯದಲ್ಲಿ ಸ್ಪಷ್ಟವಾಗಿ ಕಂಡು ಬಂದು ಮನಸ್ಸನ್ನು ಕದಡುತ್ತಿರುತ್ತದೆ. ಯೂರೋಪನ್ನು ಹೆಚ್ಚುಹೆಚ್ಚಾಗಿ ನೋಡುತ್ತಿ ದ್ದಂತೆ ಭಾರತವು ಹೆಚ್ಚುಹೆಚ್ಚಾಗಿ ಆಕರ್ಷಿಸುತ್ತದೆ. ಭಾರತದ ವಿವಿಧ ರೂಪಗಳು–ರೇಖೆ ಗಳು–ರಂಗು ರಂಗಿನ ಜೀವನ....ನಾನು ಪಾಶ್ಚಾತ್ಯವನ್ನು ನೋಡುವಾಗಲೆಲ್ಲ ನಿಮ್ಮ ಕಣ್ಣುಗಳಿಂದಲೇ ನೋಡುತ್ತಿದ್ದೇನೆ. ನೂರಾರುಜನ ಪಾಶ್ಚಾತ್ಯವನ್ನೆಲ್ಲ ಸುತ್ತಾಡಿ ಬರು ತ್ತಾರೆ. ಒಬ್ಬರಾದರೂ ನಮಗೆ ಇಲ್ಲಿನ ನಿಜಸ್ಥಿತಿಯನ್ನು ತಿಳಿಸಿರಲಿಲ್ಲ. ಆದ್ದರಿಂದ ನನ್ನ ಮನಸ್ಸಿಗೆ ತೋರಿದ್ದನ್ನೆಲ್ಲವನ್ನೂ ಗೀಚಿ ಹಾಕುತ್ತಿದ್ದೇನೆ. ನಮ್ಮವರು ಅರಿತುಕೊಳ್ಳಲಿ ಎಂಬ ಆಸೆಯಿಂದ....ನಾನು ಇಲ್ಲಿನ ಸಮಾಚಾರಗಳನ್ನೆಲ್ಲಾ ಬರೆಯುವುದು ನಮ್ಮ ಆತ್ಮ ಪ್ರಶಂಸೆ, ಸ್ವಯಂ ಪ್ರಶಂಸೆಯೇ? ಅಲ್ಲ, ನಮ್ಮ ಕೆಲಸದ ಪರಿಣಾಮ ನಿಮಗೆ ತಿಳಿಯಲಿ ಎಂದು. ನಾವು ನಮ್ಮ ಮತ್ತು ಇಲ್ಲಿನ ವಿಚಾರಗಳನ್ನು ಬರೆದಂತೆ ನೀವು

ನಿಮ್ಮ ಮತ್ತು ಅಲ್ಲಿನ ಸಮಾಚಾರಗಳನ್ನು ಬರೆಯುತ್ತಿರಿ.........ಪತ್ರ ವ್ಯವಹಾರದ ಗುರಿಯೆ ಅದಲ್ಲವೇ ?........

ಇತಿ ನಿಮ್ಮ ಆಶೀರ್ವಾದವನ್ನು ಬೇಡುವ,
ಚಂದಮ್ಮ.

* * * *

ಲಂಡನ್
10 – 10 – 1966

ಮುದ್ದು ಮಕ್ಕಳೇ,

ಇತ್ತೀಚೆಗೆ ಅನೇಕಾನೇಕ ಉಪನ್ಯಾಸ–ಪ್ರದರ್ಶನಗಳನ್ನು ಕೊಟ್ಟೆವು. ಇಂತಹ ಉಪನ್ಯಾಸಗಳಿಂದ ಈ ದೇಶದಲ್ಲಿ ನಮ್ಮ ಕಲೆ ಒಂದು ಹೊಸ ಆಧಾರ ಪಡೆದು ವಿಶೇಷ ರೀತಿಯಲ್ಲಿ ಪ್ರಚಾರವಾಗುತ್ತಿದೆಯೆಂದು ಹೇಳಬಹುದು. ಪತಿಯವರು ಈಗ ತುಂಬಾ ಚೇತನಯುಕ್ತ ರೋಮಾಂಚಕಾರಿಯಾದ (Vibrant) ಉಪನ್ಯಾಸಗಳನ್ನು ಕೊಡುತ್ತಿರುವರು. ಒಮ್ಮೊಮ್ಮೆ ಅವು ತುಂಬಾ ಉತ್ಕಟವಾಗಿದ್ದು ಆವೇಶಪರವಾಗಿದ್ದರೂ ಪ್ರೇಕ್ಷಕರು ಅವನ್ನು ಒಪ್ಪುತ್ತಿರುವುದೇ ಆಶ್ಚರ್ಯ ! ಆದರೆ ಈ ಉಪನ್ಯಾಸಗಳು ಅವರಿಗೆ ನಮ್ಮ ಕಲೆಯ ಅನೇಕಾನೇಕ ಸಂಗತಿಗಳನ್ನು ತಿಳಿಸುತ್ತ ಅವಕ್ಕೆ ಹಿನ್ನೆಲೆಯಾಗಿರುವ ಭಾರತದ ಅಧ್ಯಾತ್ಮಿಕ, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ವಿಷಯಗಳನ್ನು ವಿವರಿಸಿ ಹೇಳಿಕೊಡುವುದರಿಂದ ಕೇಳುವವರಿಗೆ ಸ್ಫೂರ್ತಿದಾಯಕ ಉತ್ತೇಜನವನ್ನು ಕೊಡುತ್ತಿವೆ. ಕೆಲವೊಮ್ಮೆ ಇಲ್ಲಿನ ಜನತೆಗೂ, ನಮಗೂ ಬೇಕಾದಷ್ಟು ವಾಗ್ವಾದ ಉಂಟಾಗುತ್ತದೆ. ಮುಖ್ಯವಾಗಿ ನಮ್ಮೆರಡು ದೇಶಗಳ ಪರಸ್ಪರ ಹೋಲಿಕೆ ಹಾಗೂ ವ್ಯತ್ಯಾಸಗಳ ವಿಷಯದಲ್ಲಿ. ಅಂತಹ ಸಮಯಗಳಲ್ಲಿ ಭಾರತದ ಹಿರಿತನಕ್ಕೆ ಅವರ ಕಣ್ಣು ತೆರೆದಂತಾಗುತ್ತದೆ. ನಮ್ಮ ಭಾರತೀಯ ನೃತ್ಯಗಳಲ್ಲಿ ಹುದುಗಿರುವ ಪುರಾಣ ಸಂಬಂಧವಾದ ಕಥೆಗಳ ಅಧ್ಯಾತ್ಮವನ್ನು ಅವರಿಗೆ ತಿಳಿಸಲು ಆದಷ್ಟು ಪ್ರಯತ್ನಿಸುತ್ತೇವೆ. ನಮ್ಮ ಭಾರತೀಯ ಧರ್ಮವನ್ನು ಅವರು ಸರಿಯಾಗಿ ಅರಿತುಕೊಳ್ಳುವಂತೆ ವಿವರಿಸಿ ಹೇಳುತ್ತೇವೆ. ಇಂತಹ ಸಂಭಾಷಣೆ, ವಾಗ್ವಾದಗಳಿಂದಾಗಿ ನಮ್ಮ ದೇಶದ ಒಳ್ಳೆಯ ಹಾಗೂ ಕೆಟ್ಟಗುಣಗಳ ನಿಜವಾದ ಸ್ವರೂಪಗಳನ್ನು ತಿಳಿದುಕೊಳ್ಳಲು ಅನುಕೂಲವಾಗುತ್ತದೆ.

ಮೊನ್ನೆ ಸಿಡ್‌ಕಪ್ ಊರಿನ ಡೊರಿನ್‌ಬರ್ಡ್ ಬ್ಯಾಲ್ಲೆ ಕ್ಲಬ್ಬಿನಿಂದ (Doreen Bird Ballet Club of Sidcup) ಉಪನ್ಯಾಸಕ್ಕೆ ಕರೆಬಂತು. ಪ್ರೇಕ್ಷಕರಲ್ಲಿ ಎಲ್ಲರೂ ಎಂಬಂತೆ ಆಶಾಜನಕ ಭವಿಷ್ಯವುಳ್ಳ ಚಿಕ್ಕಪ್ರಾಯದ ನೃತ್ಯಗಾತಿಯರಿದ್ದರು.

ನಮ್ಮ ಭಾರತೀಯ ನೃತ್ಯಗಳಲ್ಲಿನ ವೈವಿಧ್ಯ ಮತ್ತು ತಾಳ ವೈಚಿತ್ರವನ್ನು ಕಂಡು ಅವರು ಆಶ್ಚರ್ಯಭರಿತರಾದರು. ಪತಿಯವರ ಭಾಷಣಕ್ಕೆ ತಲೆದೂಗಿದರು. ನಮ್ಮ ನೃತ್ಯದ ತಾಳಕ್ಕೆ ಸರಿಯಾಗಿ ಚಪ್ಪಾಳೆ ಹೊಡೆದರು! ಪತ್ರಿಕೋದ್ಯೋಗಿಗಳು "ಕೃಷ್ಣ ರಾಯರು ಅದ್ಭುತವಾದ ಹಾಗೂ ವಿಚಾರಪೂರಿತವಾದ ಉಪನ್ಯಾಸವನ್ನು ಕೊಟ್ಟರು-ಪ್ರೇಕ್ಷಕರು ಕೃಷ್ಣರಾವ್ ದಂಪತಿಗಳ ಸ್ಫೂರ್ತಿದಾಯಕ ನೃತ್ಯ-ಉಪನ್ಯಾಸಕ್ಕೆ ಅಸಾಧ್ಯ ಪ್ರೋತ್ಸಾಹ ಕೊಟ್ಟರು" ಎಂಬುದಾಗಿ ವರದಿ ಕೊಟ್ಟರು. ಧನ್ಯವಾದಗಳನ್ನು ಅರ್ಪಿಸುವ ವೇಳೆಗೆ ಕಾರ್ಯದರ್ಶಿಯವರು—"ನಿಮ್ಮ ದೇಶದ ಅಮೋಘವಾದ ಸಾಂಪ್ರದಾಯಿಕ ನೃತ್ಯಕಲೆಯ ವಿಷಯವಾಗಿ ನಮಗೆ ಅರ್ಥವಾಗುವಂತೆ ಸರಳ ರೀತಿಯಲ್ಲಿ ತಿಳಿಸಿದುದಕ್ಕಾಗಿ ನಿಮ್ಮನ್ನೆಷ್ಟು ಕೊಂಡಾಡಿದರೂ ಸಾಲದಾಗಿದೆ. ಈ ಕ್ಲಬ್ಬನ್ನು ಸ್ಥಾಪಿಸಿ ಇಂದಿಗೆ 6 ವರ್ಷಗಳಾಗಿವೆ. ಅಂದಿನಿಂದ, ಇಂತಹುದೊಂದು ಸಂದರ್ಭವನ್ನು ಕಲ್ಪಿಸಿಕೊಡಬೇಕೆಂದು ಎಲ್ಲ ಸದಸ್ಯರೂ ಕೇಳಿಕೊಳ್ಳುತ್ತಿದ್ದರು. ಇಂದು ಅವರ ಆಸೆ ಫಲಿಸಿತು." ಎಂದು ಮನಸಾರೆ ಕೊಂಡಾಡಿದರು. AMC ಗೆ ಕೃತಜ್ಞತೆ ಅರ್ಪಿಸಿದರು.

ಸಿಡ್‌ಕಪ್ಪಿನ ಉಪನ್ಯಾಸ ಕ್ರಮವನ್ನು ಮುಗಿಸಿ ಬರುವ ವೇಳೆಗೆ ಛಳಿಗಾಳಿಗೆ ಮೈಯೊಡ್ಡಿದ್ದೆ. ಆ ಕಾರಣದಿಂದಿರಬಹುದು. ಒಂದು ವಿಧದ ಸೊಂಟನೋವು ತಲೆದೋರಿದೆ. ಬೇಗನೇ ವಾಸಿಯಾಗಲೆಂದು ಔಷಧಿ ತೆಗೆದುಕೊಳ್ಳುತ್ತಿದ್ದೇನೆ. ಇಂಗ್ಲೆಂಡಿನಲ್ಲಿ ನ್ಯಾಷನಲ್ ಹೆಲ್ತ್ ಸರ್ವಿಸ್ (National Health Service) ಎಂಬ ಉಚಿತ ಚಿಕಿತ್ಸೆಯ ಕ್ರಮವಿದೆ. ಆದರೆ ರೋಗಿಯನ್ನು ನೋಡಲು ವೈದ್ಯರು ಮನೆಗೆ ಬರುವ ಮಾತಿಲ್ಲ. ಇಲ್ಲಿ ಕಾಯಿಲೆಯ ಆಗುಹೋಗುಗಳನ್ನು ರೋಗಿಗಳೇ ಬಹುಮಟ್ಟಿಗೆ ಹತೋಟಿಯಲ್ಲಿಟ್ಟುಕೊಳ್ಳಬೇಕು. ಸ್ವಲ್ಪ ವಿಶೇಷದ ಕಾಯಿಲೆ ಎಂದರೆ ಇಲ್ಲಿ 'ಫ್ಲೂ' (Influenza) ಎಂದು ಹೇಳಬಹುದು. ಬೇರೆ ದೊಡ್ಡ ಕಾಹಿಲೆಗಳನ್ನೆಲ್ಲಾ ಇವರು ಗೆದ್ದು ಜಯಿಸಿದ್ದಾರೆ. ಭಾರತದಲ್ಲಿ ಜ್ವರ ಬಂದರೆ ಯಾವ ಜ್ವರ ಎಂದು ತಿಳಿಯಲು 2–3 ದಿನಗಳು ಬೇಕು. ವಿಧವಿಧದ ಜ್ವರಗಳ ಕಾಹಿಲೆಗಳಿವೆ. ಆದರೆ ಇಲ್ಲಿ 'ಫ್ಲೂ' ಒಂದೇ. ಇತರರ ಆರೈಕೆಯಿಲ್ಲದೆ, ತಾವೇ ತಮ್ಮ ಕಾಯಿಲೆಗೆ ಅಗತ್ಯವಿದ್ದ ಔಷಧಿಯನ್ನು ಶೋಧಿಸಿ ಸೇವಿಸಿಕೊಂಡು ವಾಸಿಯಾಗುತ್ತಾರೆ. ನನ್ನ ನೋವಿಗೆ ಒಬ್ಬ ಸಿಲೋನೀಸ್ ಡಾಕ್ಟರು ಬಂದು ಪರೀಕ್ಷಿಸಿ ಔಷಧಿ ಕೊಟ್ಟರು. ದೇವರ ದಯೆಯಿಂದ ನನ್ನ ಕಾಯಿಲೆ ಬೇಗ ವಾಸಿಯಾಗಬಹುದೆಂದು ನಂಬಿಕೆ ಇದೆ. ಯೋಚನೆ ಪಡಬೇಡಿ. ಆಗಾಗ್ಗೆ ಬರೆಯುತ್ತ ಇರಿ,

ಇತಿ ನಿಮ್ಮ

ಅಮ್ಮ.

* * * * *

ಲಂಡನ್
13 – 10 – 1966

ಪ್ರಿಯ ತಂದೆಯೇ,

ಇಲ್ಲಿ ಜನರಿಗೆ ಯಾವಾಗಲೂ ಮುಂದೆ ಬರಲಿರುವ ಛಳಿಗಾಲದ ಭಯವಿರುತ್ತದೆ. ಛಳಿಯನ್ನು ಎದುರಿಸುವ ಎಂತಹ ಉಡುಪನ್ನು ಧರಿಸಿಕೊಂಡರೂ ಕೈ ಬೆರಳುಗಳೆಲ್ಲವೂ ನೀಲಿಯಾಗಿ, ಮೈಯೆಲ್ಲ ಮಂಜಿನಂತೆ ತಣ್ಣಗಾಗುತ್ತದೆ. ಬೆಚ್ಚನೆಯ ಮನೆಗಳನ್ನೋ ರೈಲುಗಳನ್ನೋ, ವಾಹನಗಳನ್ನೋ ಅಥವಾ ಅಂಗಡಿಗಳನ್ನೋ ಹುಡುಕಿ ಧಾವಿಸುವ ಜನರಿಗೆ ಛಳಿಗಾಲದ ಭಯವೇ ಭಯ. ಋತುಗಳು ಬದಲಾಗುವಂತೆ ಇಲ್ಲಿನ ಜನರು ಗಡಿಯಾರವನ್ನು ಬದಲಾಯಿಸುವ ರೂಢಿ ಮಾಡಿಕೊಂಡಿದ್ದಾರೆ. ಇಂದು ಮಧ್ಯಾಹ್ನ 3 ಗಂಟೆಗೆ (ನನ್ನ ಗಡಿಯಾರದ ಪ್ರಕಾರ) ಮನೆಯ ಗಡಿಯಾರ 2 ಗಂಟೆ ಹೊಡೆಯಿತು! ದಿನಗಳು ಚಿಕ್ಕದಾಗುತ್ತ ಹೋಗುತ್ತವೆ. ಆದರೆ ಇಂಗ್ಲಿಷು ಜನರು ಯಾವ ವಿಷಯಕ್ಕಾದರೂ ಗೊಣಗುಟ್ಟುವವರಲ್ಲ. ಮೂಕರಾಗಿ ಬಂದುದನ್ನೆಲ್ಲಾ ಸಹಿಸಿಕೊಳ್ಳುವ ಜನತೆ. ಉದ್ದುದ್ದ 'ಕ್ಯೂ' ಗಳಲ್ಲಿ ಗಂಟೆಗಟ್ಟಲೆ ಉಸಿರೆತ್ತದೆ ಕಾಯುವ ಜನ. ಅವರ ತಾಳ್ಮೆಗೆ ಯಾವಾಗಲೂ ಆಶ್ಚರ್ಯವಾಗುತ್ತದೆ. ಈ ತಾಳ್ಮೆ ಬ್ರಿಟಿಷರ ರಾಷ್ಟ್ರೀಯ ಗುಣಲಕ್ಷಣಗಳಲ್ಲಿ (National Characteristic) ಒಂದಾಗಿದೆ.

ಚೆಶ್ಯಾಯರಿನ (Cheshire) ಚೆಸ್ಟರ್ (Chester) ಎಂಬಲ್ಲಿ ನಮ್ಮ ನೃತ್ಯ–ಉಪನ್ಯಾಸವಿತ್ತು. ಚೆಶ್ಯಾಯರ್ ಅಂದ ತಕ್ಷಣ 'ಎಲಿಸ್ ಇನ್ ವಂಡರ್‌ಲೆಂಡ್' ನ (Alice in Wonderland) ಚೆಶ್ಯಾಯರ್ ಬೆಕ್ಕಿನ ನೆನಪಾಗುತ್ತದೆ ಅಲ್ಲವೇ ? ಚೆಸ್ಟರ್ ಊರು 17ನೆಯ ಶತಮಾನದ ಇಂಗ್ಲಿಷ್ ಮಾದರಿಯ ಅಂದವಾದ ಊರಾಗಿದೆ. ಊರು ತುಂಬಾ ಹಳೆಯ ಕಾಲದ ಮಣ್ಣಿನ ಅಥವಾ ಮರದ ಕಟ್ಟಡಗಳು. ಮೊದಲನೆಯ ರಾಣಿ ಎಲಿಝಬೆತ್‌ಳ ಕಾಲದ ವಾಸ್ತುಶಿಲ್ಪ. ರೋಮನರು ಬಹು ಹಿಂದೆ ಕಟ್ಟಿಸಿದ ಗೋಡೆಯೊಂದು ಊರನ್ನೆಲ್ಲ ಹಾದು ಹೋಗುತ್ತದೆ. ಇಲ್ಲಿನ 10, 11ನೇ ಶತಮಾನದ ಕ್ರೈಸ್ತರ ದೇವಾಲಯಗಳನ್ನೂ (Cathedrals) ಒಳಗಿನ ಅತಿ ನಿಶ್ಶಬ್ದತೆ ಹಾಗೂ ಪವಿತ್ರ ಶಾಂತಿಯುಳ್ಳ ವಿಹಾರ ಸ್ಥಳಗಳನ್ನೂ (Cloisters) ನೋಡಿ ತುಂಬಾ ಸಂತೋಷಪಟ್ಟೆವು. ಚೆಸ್ಟರಿನ ಮುಖ್ಯ ದೇವಾಲಯವನ್ನು ಕುರಿತು 'ಡೂಮ್ಸ್‌ಡೇ ಪುಸ್ತಕ' (Dooms Day Book – ಜನರ ಮೇಲೆ ಹೊರಿಸಬೇಕಾದ ತೆರಿಗೆಯನ್ನು ನಿಶ್ಚೈಸಲು ಇಂಗ್ಲೆಂಡನ್ನು ಜಯಿಸಿ ಆಳಿಕೊಂಡಿದ್ದ ವಿಲಿಯಂ ದಿ ಕಾನ್‌ಕರರ್ ತಯಾರಿಸಿದ ಖಾನೇಶುಮಾರಿ ಪುಸ್ತಕ) ದಲ್ಲಿ ಉಲ್ಲೇಖವಿದೆಯಂತೆ. ನಿಜವಾಗಿಯೂ ಈ ದೇವಾಲಯದ ವಾತಾವರಣದಲ್ಲಿ ಒಂದು ದೈವಿಕ ಶಕ್ತಿಯಿದೆ.

ನಮ್ಮನ್ನು ಸತ್ಕರಿಸುತ್ತಿದ್ದಾಕೆ (Hostess) ಊರನ್ನೆಲ್ಲಾ ತನ್ನ ಕಾರಿನಲ್ಲಿ ಸುತ್ತಾಡಿಸಿ ಊರಿನ ಪರಿಚಯ ಮಾಡಿಕೊಟ್ಟರು. ಚೆಸ್ಟರಿನಲ್ಲಿ ಹರಿಯುತ್ತಿದ್ದ ಹೆಸರಾಂತ 'ಡೀ' ನದಿಯನ್ನು (River Dee) ನೋಡಿ ಆನಂದದಿಂದ ಮೈ ರೋಮಾಂಚನವಾಯಿತು. ಬಾಲ್ಯದಲ್ಲಿ ಡೀ ನದಿಗೆ ಸಂಬಂಧಪಟ್ಟ ಪದ್ಯವನ್ನು ನೀವು ಓದಿ ಹೇಳಿ, ಅದರ ಚಂದವನ್ನು ವಿವರಿಸಿದ ನೆನಪಿದೆಯೇ? — "Mary, go and call the cattle home.......across the river dee?" ಅಲ್ಲದೆ, "The Miller of the Dee" ಎಂಬ ಇನ್ನೊಂದು ಸುಂದರ ಪದ್ಯದ ನೆನಪೂ ಆಯಿತು. ಡೀ ನದಿಯ ದೃಶ್ಯವು ನಿಜವಾಗಿ ತುಂಬಾ ಆಕರ್ಷಣೀಯವಾಗಿತ್ತು. ದಡಗಳಲ್ಲೆಲ್ಲಾ ಮರಗಳ ಚಿಕ್ಕ ಚಿಕ್ಕ ಗುಂಪುಗಳು. ಊರಿನ ಗಲಭೆ ಗದ್ದಲುಗಳಿಂದ ದೂರವಾಗಿ ಶಾಂತರೀತಿಯಲ್ಲಿ ಒಂಟಿಯಾಗಿ ಹರಿಯುತ್ತಿರುವ ಈ ಮರುಳು ಮಾಡುವ ನದಿಯ ದೃಶ್ಯ – ಅಂದು ಬೆಳಗ್ಗೆ ಅತ್ಯಂತ ರಮಣೀಯವಾಗಿತ್ತು! ನದಿಯ ದಂಡೆಯಲ್ಲಿ ಕುಳಿತು ಅಲ್ಲಲ್ಲಿ ಕೆಲವು ಜನರು ಗಾಳಹಾಕಿ ಮೀನು ಹಿಡಿಯುತ್ತಿದ್ದರು. ಡೀ ನದಿಯು 'ಸಾಮನ್' (Salmon) ಮೀನಿಗೆ ಪ್ರಸಿದ್ಧಿ ಪಡೆದಿದೆ. ಬೆಳಗ್ಗೆ ಹಬ್ಬಿದ್ದ ಮಂಜಿನಲ್ಲಿ ನಾವು ನೋಡಿದ ಆ ದೃಶ್ಯ ಎಂದೂ ಮರೆಯುವಂತಿಲ್ಲ. ಇದೇ ವಿಶಿಷ್ಟ ಇಂಗ್ಲೆಂಡು....ಅವರ ಸಂಸ್ಕೃತಿ....ಪಾರಂಪರ್ಯ. ಇದನ್ನು ನಾವು ಲಂಡನ್ನಿನಲ್ಲಿ ನೋಡುವಂತಿಲ್ಲ. ಇಂದು ಲಂಡನ್ ಭೂಲೋಕದ ಎಲ್ಲಾ ಜನಾಂಗಗಳ ಮಿಲನದ ಮಿಶ್ರ ನಗರವಾಗಿದೆ. ಇಂಗ್ಲೆಂಡಿನ ವಿಶಿಷ್ಟ ಸಂಸ್ಕೃತಿಯ ಅನುಭವ ಪಡೆಯಬೇಕಾದರೆ ಲಂಡನ್ ಬಿಟ್ಟು ಚೆಸ್ಟರಿನಂತಹ ಪಟ್ಟಣಗಳಿಗೆ ಹೋಗಬೇಕು. ಚೆಸ್ಟರಿನ ನಿಸರ್ಗದ ಸೌಂದರ್ಯವನ್ನು ಇಲ್ಲಿನ ಅನೇಕ ಕವಿಗಳು ವರ್ಣಿಸಿರುತ್ತಾರೆ.

ಇಲ್ಲಿನ 14ನೇಶತಮಾನದ ವಾಸ್ತುಶಿಲ್ಪವನ್ನು ಕಾಪಾಡಿಕೊಂಡು ಬರಲು ಬ್ರಿಟಿಷ್ ಸರಕಾರ ತುಂಬಾ ಹಣವನ್ನು ವೆಚ್ಚ ಮಾಡುತ್ತಿದೆ. ಚೆಸ್ಟರ್ ಪಟ್ಟಣದ ಅದ್ವಿತೀಯ ವೈಶಿಷ್ಟ್ಯವೇನೆಂದರೆ ಅಲ್ಲಿನ 'ಸೀಳು ವ್ಯಾಪಾರ ಸ್ಥಳಗಳು' (Split Shopping Centres) ಇವುಗಳ ಮಾದರಿಯನ್ನು ಲಂಡನ್ನಿನ 'ವಿಕ್ಟೋರಿಯಾ ಮತ್ತು ಆಲ್ಬರ್ಟ್' (Victoria and Albert Museum) ವಸ್ತು ಪ್ರದರ್ಶನಾಲಯದಲ್ಲಿ ಕೂಡ ಪ್ರದರ್ಶಿಸಿದ್ದಾರೆ. ಈ ವ್ಯಾಪಾರ ಸ್ಥಳಗಳಲ್ಲಿ ಬೇರೆ ಬೇರೆ ಎರಡು ಅಂತಸ್ತುಗಳಲ್ಲಿ ಅಂಗಡಿಗಳ ಸಾಲುಗಳಿವೆ. ಇದರಿಂದಾಗಿ ಇದಕ್ಕೆ ಆ ಹೆಸರು ಬಂದಿರಬೇಕು. ರಸ್ತೆಯ ಮುಂಭಾಗವೆಲ್ಲ ಟ್ಯೂಡರ್ (Tudor) ಮತ್ತು ಸ್ಟ್ಯುಅರ್ಟ್ (Stuart) ಕಾಲದ ದಿನಗಳನ್ನು ಮನಸ್ಸಿಗೆ ತರುತ್ತದೆ.

ನಾವಿಲ್ಲಿ ಅನೇಕ ಚಾರಿತ್ರಿಕ ಸ್ಥಳಗಳನ್ನು ಸಂದರ್ಶಿಸಿದೆವು. ಚಾರ್ಲ್ಸ್ ಅರಸನು (Charles 1) ರೌಟನ್ ಹೀತ್ (Rowtan Heath) ಕದನದ ನಂತರ ಆಶ್ರಯ

ಪಡೆದ ಸ್ಥಳವನ್ನು ನೋಡಿದೆವು. ಒಂದು ಕುತೂಹಲದ ಸಂಗತಿಯೇನೆಂದರೆ ನಾವು ಚೆಸ್ಟರನ್ನು ಸೇರಿದ ದಿನ ಹೇಸ್ಟಿಂಗ್ಸ್ ಕದನದ (The Battle of Hastings) 900ನೇ ವಾರ್ಷಿಕೋತ್ಸವದ ಸಂಭ್ರಮದ ದಿನವಾಗಿತ್ತು. ಇಂಗ್ಲಿಷರ ಸೂಕ್ಷ್ಮ ವಿನೋದ (Humour) ಹೆಸರುವಾಸಿಯಾಗಿದೆಯಷ್ಟೇ ? ಅಂದು ಆ ಊರಲ್ಲೆಲ್ಲ ಕಾಣು ತ್ತಿದ್ದ ಜಾಹೀರು ಹಲಗೆ, ಪತ್ರ ಮೊದಲಾದುವುಗಳಲ್ಲಿ ಅದು ವಿಶೇಷವಾಗಿ ಕಂಡು ಬರುತ್ತಿತ್ತು. ಅವುಗಳಲ್ಲಿ ಒಂದು ವಿನೋದವಾಗಿತ್ತು ! – "Battle of Hastings 1066 – Bottle of Guinness 1966" [ಗಿನ್ನೆಸ್ (Guinness) ಎಂಬುದು ಬಿಯರ್ (Beer) ಜಾತಿಗೆ ಸೇರಿದ ಒಂದು ನೆಚ್ಚಿನ ಮಾದಕ ಪಾನೀಯ].

ನಾನು ಶಾಲೆಯಲ್ಲಿ ಕಲಿತ ಬ್ರಿಟಿಷ್ ಚರಿತ್ರೆಯಲ್ಲಿನ ಘಟನೆಗಳೆಲ್ಲವೂ ಈ ಸಮಯ ಒಂದೊಂದಾಗಿ ನೆನಪಿಗೆ ಬಂದುವು. ನನ್ನ ಚಿಕ್ಕಂದಿನಲ್ಲಿ ಹೈಸ್ಕೂಲು ವಿದ್ಯಾಭ್ಯಾಸ ಪಡೆಯುವಾಗ ಬ್ರಿಟಿಷ್ ಚರಿತ್ರೆಯನ್ನು ಓದಿಸಿದ್ದಕ್ಕಾಗಿ ಕೃತಜ್ಞಳಾದೆ. ಏಕೆಂದರೆ ಇಲ್ಲಿನ ಈ ಚಾರಿತ್ರಿಕ ಸ್ಥಳಗಳನ್ನು ಸಂದರ್ಶಿಸುವಾಗ ನಾನು ತೀರ ಅಜ್ಞಾನಿ ಯಾಗಿರಲಿಲ್ಲ! ಇಲ್ಲಿನ 'ಕ್ರಾಸ್' (Cross) ಎಂಬ ಅತಿ ಪ್ರಾಚೀನ ಕಟ್ಟಡವನ್ನು ನೋಡಿದೆವು. ಹಿಂದೊಮ್ಮೆ ಅಲ್ಲಿನ 'ಮಹಾ ಬೆಂಕಿ' (Great Fire) ಅನಾಹುತ ವಾಗುವಾಗ ಈ 'ಕ್ರಾಸಿ' ನಲ್ಲಿ ಆಶ್ರಯ ಪಡೆದವರು ಮಾತ್ರ ಉಳಿದುಕೊಂಡರಂತೆ. ಇತರರೆಲ್ಲ ಪ್ಲೇಗ್ ಕಾಯಿಲೆಯಿಂದ ಅಳಿದು ಹೋದರಂತೆ. ಈ ಕಟ್ಟಡದ ಬಾಗಿಲ ಮೇಲೆ ದೊಡ್ಡದೊಂದು ಕ್ರಾಸನ್ನು (Cross) ಚಿತ್ರಿಸಿದ್ದಾರೆ. ಇಲ್ಲಿನ 'ರೋಮನ್ ಕಾಲಮ್ಸ್' ನ್ನೂ (Roman Columns) ನೋಡಿದೆವು. ಕ್ರಿಸ್ತ ದೇವಾಲಯ ಗಳೊಳಗೆ (Cathedrals) ಮರದಲ್ಲಿ ಬಹು ನಾಜೂಕಾಗಿ ಕೆತ್ತಲ್ಪಟ್ಟ ಕಲಾ ಸಂಪ ತ್ತನ್ನು ನೋಡಿದೆವು. ಅದನ್ನು ನೋಡಿದಂತೆ ನನಗೆ ಅದೇ ಶತಮಾನದ ನಮ್ಮ ಹಳೇಬೀಡು ಬೇಲೂರು ದೇವಾಲಯಗಳ ನೆನಪಾಯಿತು. ಆ ಕಾಲದ ಭಾರತೀ ಯರು ಕೈಕೆಲಸದಿಂದ ಗಟ್ಟಿಯಾದ ಬಂಡೆಕಲ್ಲುಗಳನ್ನು ನಾಜೂಕಾಗಿ ಕೆತ್ತಿ ಅದ್ಭುತ ವಾದ ಕಲಾ ಕೌಶಲ್ಯವನ್ನು ಪ್ರದರ್ಶಿಸುತ್ತಿದ್ದರಲ್ಲವೇ ? ಕಲೆ–ಸಂಸ್ಕೃತಿಗಳಲ್ಲಿ ಭಾರತ ದಲ್ಲಿ ಎಷ್ಟು ಮುಂದುವರೆದಿದ್ದೆವು ! ನಾವೆಂತಹ ಹೆಮ್ಮೆ ಪಡುವ ಸಂಗತಿ ಅದು !....

ಚೆಸ್ಟರಿನಲ್ಲಿ ಕೂಡ ನಮ್ಮ ಪ್ರೇಕ್ಷಕರು ಭಾರತೀಯ ನೃತ್ಯವನ್ನು ಅಂದೇ ಮೊದಲು ನೋಡಿದುದು ! AMC ಯವರು ಇಂತಹ ನೆಚ್ಚಿನ ಮೆಚ್ಚಿನ ಸಂದರ್ಭ ಗಳನ್ನು ನಮಗಾಗಿ ಕಲ್ಪಿಸಿ ನಮ್ಮಿಚ್ಛೆಯ ಪ್ರಕಾರ ಈ ರೀತಿ ಕಲಾ ಸೇವೆಯನ್ನು ಮಾಡುವಂತೆ ಅನುಕೂಲ ಮಾಡಿಕೊಟ್ಟುದಕ್ಕೆ ನಾವು ಅವರಿಗೆ ಚಿರಋಣಿಗಳು. 'ದಿ ಸೊಸೈಟಿ ಆಫ್ ಥರ್ಟೀನ್' (The Society of Thirteen) ಇವರ ಪ್ರತಿನಿಧಿ ಗಳಲ್ಲದೆ ಅನೇಕಾನೇಕ ಬ್ಯಾಲೆ ನೃತ್ಯ ಕಲಾವಿದರೂ ಪ್ರೇಕ್ಷಕರಲ್ಲಿದ್ದರು. ಒಬ್ಬಾಕೆ–

ಬ್ಯಾಲೆ ನೃತ್ಯಗಾತಿ–ನಮ್ಮ ನೃತ್ಯ ಉಪನ್ಯಾಸವಾದ ಮೇಲೆ ನಮ್ಮನ್ನು ಅಭಿನಂದಿಸುತ್ತಾ ಹೀಗೆಂದರು :—"ನಿಮ್ಮ ಕಲೆ ಎಂತಹ ವೈಭವಯುಕ್ತವಾದ ಸಂಪನ್ನ ಕಲೆ ! ಅದಕ್ಕೆ ಹೋಲಿಸಿದರೆ ನಮ್ಮ ಬ್ಯಾಲೆ ನೃತ್ಯ ಏನೂ ತಿರುಳಿಲ್ಲದ ಬಡಪಾಯಿ ಕಲೆಯಂತಿದೆ !"

ಆದರೂ ಅಂದು ಪತಿಯವರ ಭಾಷಣ ಎಂದಿನಂತೆ ಸ್ಫೂರ್ತಿದಾಯಕವಾಗಿರಲಿಲ್ಲ–ಸಪ್ಪೆಯಾಗಿತ್ತು. ಅಲ್ಲಿನ ಪ್ರೇಕ್ಷಕರಿಗೆ ಅದು ತಿಳಿಯದೇ ಇದ್ದರೂ ನನಗೆ ಹಾಗೆನ್ನಿಸಿತು. ಪತಿಯವರಿಗೆ ಚಿತ್ತಸುಖವಿರಲಿಲ್ಲ. ನನ್ನ ಸೊಂಟನೋವು–ನೋವಿದ್ದರೂ ನಾನು ಪ್ರದರ್ಶನ ಮಾಡಬೇಕಾದ ಸಂದರ್ಭಗಳು – ಅಲ್ಲದೆ ನಮ್ಮ ಸಾಮಾನನ್ನು ಹೊತ್ತು ಹೊತ್ತು ಸಾಕಾಗಿದ್ದ ಸಂಕಷ್ಟಗಳು – ಬಿಡುವಿಲ್ಲದ ಜೀವನ ಕ್ರಮ– ಈ ವಿಷಯಗಳ ಪರಿಣಾಮ ಅಂದಿನ ಉಪನ್ಯಾಸ ಪಡೆದಿತ್ತು.

ಆದರೆ ಚೆಸ್ಟರ್ ಪ್ರವಾಸ ಚೆನ್ನಾಗಿತ್ತು.

ಇತಿ ನಿಮ್ಮ
ಚಂದನ್ಮ.

* * * *

ಲಂಡನ್
24 – 10 – 1966

ನನ್ನ ಮುದ್ದು ಮಗೂ ಜಯದೇವ್........

—ಈ ಪತ್ರ ನಿನ್ನ ಕೈ ಸೇರುವಾಗ ನೀನು ಇಪ್ಪತ್ತೈದು ವರ್ಷದ ಯುವಕನೆಂದು ನನಗೆ ನಂಬಲಾಗುವುದಿಲ್ಲ ! ದೇವರು ನಿನ್ನನ್ನು ಅನವರತ ಕಾಪಾಡಲಿ ! ಈ 25ನೆಯ ಹುಟ್ಟು ಹಬ್ಬ ಮಾನವನ ಜನ್ಮದಲ್ಲಿ ವಿಶೇಷ ! ಸುಖವಾಗಿ, ಸಂತೋಷದಿಂದ, ನಗುನಗುತ್ತಾ ನೂರು ವರ್ಷ ಬಾಳು ಮಗೂ !

ನನಗಂತೂ ನಿನ್ನ ಎಷ್ಟನೆಯ ಹುಟ್ಟಿದ ಹಬ್ಬವೇ ಆಗಲಿ, ನೀನು ಹುಟ್ಟಿದ ದಿನದ ನೆನಪು ಬರುತ್ತದೆ. ಸಾಯಂಕಾಲ 5–40 ಘಂಟೆಗೆ ಸರಿಯಾಗಿ ನೀನು ಅತ್ತ ಮೊದಲ ಅಳು ! (ಅಂದಿನಿಂದ ಪ್ರತಿದಿನವೆಂಬಂತೆ ಇಂದಿನವರೆಗೂ ಸಾಯಂಕಾಲ 5.40 ರ ಸಮಯ ನಮಗೆ ಹೇಗೋ ತಿಳುವಳಿಕೆಗೆ ಬರುವುದು ಆಶ್ಚರ್ಯ !) ಆಮೇಲೆ ಮರುದಿನ ಮುಂಜಾನೆ, ಅರುಣೋದಯಕ್ಕೆ ಮುಂಚೆ, ಸ್ನಾನದ ಮನೆಯಿಂದ ಬರುವ ದೀಪದ ಬೆಳಕಿಗೆ ನೀನು ಕತ್ತೆತ್ತಿ ನೋಡಿದುದು ! ಮತ್ತೆ ಮತ್ತೆ ಆ ದೀಪದ ಪ್ರಕಾಶ

ನಿನ್ನ ಗಮನ ಸೆಳೆದುದು ! ಹೌದು ಮಗೂ....ನೀನು ಹುಟ್ಟಿದಾಗ ಬರೇ ಐದು ಪೌಂಡು ಮಾತ್ರ ತೂಕವಿದ್ದೆ. ಆದರೆ ವಿಪರೀತ ಚಟುವಟಿಕೆ, ಬುದ್ಧಿ ಚಾತುರ್ಯ ಇದ್ದ ಕಾರಣ ದೀಪದಃಪತ್ತೆ ಹಚ್ಚಿ ಬೆಳಕಿನ ಪರಿಚಯ ಮಾಡಿಕೊಳ್ಳ ಬಯಸಿದೆ. ಅಂದಿನಿಂದ ಬೆಳೆದು ಬಂದಂತೆ ನೀನು ವಿದ್ಯಾರ್ಜನೆಗೆ ಕಷ್ಟಪಟ್ಟೆ....ವಿವೇಕ ಸಂಪಾದಿಸಿದೆ. ನಿನ್ನ 25ನೆಯ ಹುಟ್ಟಿದ ಹಬ್ಬದ ದಿನ ನಿನ್ನ ಜೀವನ ಶೋಭಾಯಮಾನವಾಗಲಿ, ನಿನ್ನ ಹೃದಯ, ಮನಸ್ಸು, ಆತ್ಮದಲ್ಲಿ ಹೆಚ್ಚು ಹೆಚ್ಚಾಗಿ ಬೆಳಕು ತುಂಬಲಿ ಎಂದು ಹಾರೈಸುತ್ತೇನೆ. ನೀನು ಹುಟ್ಟಿದ ದಿನ ಕಷ್ಟಪಟ್ಟು ಬೆಳಕನ್ನು ಪಡೆದಂತೆ ಸ್ವಲ್ಪ ಕಷ್ಟಪಟ್ಟರೆ ಇಡೀ ಜೀವನವೇ ಬೆಳಕಾಗಿರುತ್ತದೆ ಮಗೂ .... ನಿನ್ನ ಜೀವನ.... ಪ್ರಕಾಶ ಮಾನವಾಗಿರಲಿ ಎಂದು ಹರಸುತ್ತೇನೆ. ನನ್ನ ಅಮ್ಮನ ಪಕ್ಕದಲ್ಲಿ ಮಲಗಿದ್ದ ಅಂದಿನ ಆ ಮಗುವನ್ನು ಹೆಮ್ಮೆಯಿಂದ ನೋಡುತ್ತಿದ್ದ ಚಿತ್ರವನ್ನು ನಾನು, ನಿನ್ನ ಪ್ರತಿ ಹುಟ್ಟಿದ ಹಬ್ಬಕ್ಕೂ ಜ್ಞಾಪಿಸಿಕೊಳ್ಳುತ್ತೇನೆ .... ಇಂದೂ ಕೂಡ.

ಗಾಯತ್ರೀ ಜಪವನ್ನು ಬಿಡದೆ ಮಂತ್ರಿಸು ಮಗೂ....ಆ ಮಂತ್ರದಲ್ಲಿ ಜ್ಞಾನ ಹಾಗೂ ಮನಸ್ಸಿಗೆ ಶಾಂತಿ ಕೊಡುವ ಅಪಾರ ಶಕ್ತಿಯಿದೆ.

........ಇಪ್ಪತ್ತೈದು ವರುಷ! ಎಷ್ಟು ಚಂದದ ವಯಸ್ಸು .... ನಾವು ಆ ವಯಸ್ಸಿನಲ್ಲಿ ಯಾವ ವಿಚಾರ ಗಾಂಭೀರ್ಯತೆಯೂ, ಜವಾಬ್ದಾರಿಯೂ ಇಲ್ಲದೆ, ಭವಿಷ್ಯದ ಬಗೆಗೆ ನಿರ್ಲಕ್ಷ್ಯರಾಗಿ ನೃತ್ಯಕಲೆ–ನೃತ್ಯಕಲೆ ಎಂದು ಜೇಡದ ಸಾಹಸೀ, ಅಪಾಯಕಾರಿ ಜೀವನಕ್ಕೆ ಕಾಲಿಟ್ಟಿದ್ದೆವು. ಲಂಬಾಣಿಗರ ಬಾಳಿನಂತಿತ್ತು ಅಂದಿನ ನಮ್ಮ ಜೀವನ........ಆ ವಯಸ್ಸು ಧೈರ್ಯ ಕೊಡುವ ವಯಸ್ಸು....ಆಗಿನ ಮನಸ್ಸು ಆಶಾವಾದಿ .... ನಾಳಿನ ಬಾಳಿನ ಸುಂದರ ಕಲ್ಪನೆಯ ಚಿತ್ರಗಳು ಕಣ್ಣುಮುಂದೆ ರೂಪುಗೊಳ್ಳುವ ಸಮಯ ... ನಿನಗೂ ಅಂತಹ ಭವ್ಯ ಕನಸುಗಳು ಮನಸ್ಸಿಗೆ ಬಂದಿರಬೇಕಲ್ಲವೇ ? ನಿನ್ನ ಜೀವನದ ಆಶೆಗಳೆಲ್ಲವೂ ಪೂರೈಸಲಿ ಎಂದು ದೇವರಲ್ಲಿ ನಾನು ಹಾರೈಸುತ್ತೇನೆ. ಇನ್ನೆರಡು ವರುಷಗಳಲ್ಲಿ ನಿನ್ನ ಜೀವನದಲ್ಲಿ ಭಾಗಿಯಾಗಲೆಂದು ನೀನು ಬಯಸಿದ ಹೆಣ್ಣೊಂದು ಬರಲಿ. ಅವಳಿಂದ ನಿನ್ನ ಜೀವನ ಶಕ್ತಿ ಪಡೆಯಲಿ. ನಿನ್ನ ಜೀವನ ಪರಿಪೂರ್ಣತೆ ಪಡೆಯಲಿ ಎಂದು ಹಾರೈಸುತ್ತೇನೆ. ನಿನ್ನನ್ನು ಗಟ್ಟಿಯಾಗಿ ಅಂತಃಕರಣದಿಂದ ಅಪ್ಪಿಕೊಳ್ಳುತ್ತೇನೆ....ಜಯದೇವ್....ನಿನ್ನ ಅಗಲವಾದ ಎದೆ, ಬಾಹುಗಳನ್ನು ನೆನೆದರೆ ಮನಸ್ಸಿಗೆ ಇಂದು ಅದೆಷ್ಟು ತೃಪ್ತಿ ನೀಡುತ್ತದೆ ....ಇಪ್ಪತ್ತೈದು ವರುಷದ ಯುವಕನಾದ ನೀನು ನಮಗೆ ಇಂದು ಎಷ್ಟು ಆಧಾರ !

ನೀನು ಚಿಕ್ಕವನಿರುವಾಗ ನಿನ್ನ ತಂದೆ ನಿನ್ನ ಕೈಹಿಡಿದು ನೀನು ಬಯಸಿದ ಸ್ಥಳಗಳಿಗೆ ಕರೆದುಕೊಂಡು ಹೋಗಿ ನಿನಗೆ ಬೇಕಾದ ಪದಾರ್ಥಗಳನ್ನು – ಪೆನ್ಸಿಲ್ಲೋ,

ರಬ್ಬರ್ರೋ, ಚ್ಯೂಯಿಂಗ್ ಗಮ್ಮೋ– ಕೊಂಡು ಕೊಟ್ಟಾಗ ನಮಗೆ ಎಷ್ಟೊಂದು ಉಲ್ಲಾಸ, ತೃಪ್ತಿ ಇತ್ತು! ನಿನಗೆ ಬಾಯಾರಿದಾಗ 'ಡ್ರಿಂಕ್ ವಾಟರ್ ಬೇಕು' (Drink Water) ಎಂದು ನೀನು ಮುದ್ದು ಮುದ್ದಾಗಿ (Kola, Lemonade) ಕೋಲಾ, ಲೆಮೆನೊಡ್ ಬಯಸಿದಾಗ, ನಿನಗೆ ಕೊಡಿಸಿದಾಗ ಆದ ಆನಂದ ನೀನು ನೊರೆಯನ್ನೂ ಬಿಡದೆ ಅದನ್ನು ಕುಡಿದು ಬಾಯಿ ತುಂಬಾ ನಕ್ಕಾಗ ಆದ ಸಂತೋಷ ವನ್ನು ವರ್ಣಿಸಲಾರೆ........

ನಾವು ಲಂಡನ್ನಿಗೆ ಬಂದ ಮೇಲೆ 24 ವರುಷದ ಯುವಕನಾಗಿ ನೀನು ನಿನ್ನ ಕಾರ್ಯಾಲಯದ ಕೆಲಸದ ಮೇಲೆ ನಮ್ಮನ್ನು ಹಿಂಬಾಲಿಸಿ ಬಂದೆ. ನಮಗೋ ಈ ನಾಣ್ಯ ವಿನಿಮಯದ ಗಲಾಟೆಯಿಂದ ದುಡ್ಡಿನ ಅಭಾವ. ಹೀಗಾಗಿ ನಿನಗೆ ಉಪಚರಿಸಲು ನಮಗೆ ಸಾಧ್ಯವಿರಲಿಲ್ಲ. ಆಗ ನೀನು ನಿನ್ನ ತಂದೆಗೆ ಬೇಕಾದ್ದನ್ನು ಕೊಡಿಸಿದ ದೃಶ್ಯ ನನ್ನ ಕಣ್ಣಿಗೆ ಕಟ್ಟುತ್ತದೆ. ನಮ್ಮಿಬ್ಬರನ್ನೂ ಕರೆದುಕೊಂಡು ಹೋಗಿ ನಮಗೆ ಬೇಕೆನಿಸಿದ್ದನ್ನು ತಿನ್ನಿಸಲಿಲ್ಲವೇ ? ಕೊಡಿಸಲಿಲ್ಲವೇ ? ನಿನ್ನ ತಂದೆಯಂತೂ ಚಿಕ್ಕ ಮಗುವಿನಂತೆ ಆತುರತೆಯಿಂದ 'ಅದು ಬೇಕು – ಇದು ಬೇಕು' ಎಂದು ಕೇಳಿದಂತೆ, ನೀನು ಅಂದಿನ, ಆ ಸಮಯದ ಪೂರ್ಣ ಅಧಿಕಾರತ್ವ ಪಡೆದು ನಮಗೆ ಸಂತೃಪ್ತಿಯಾಗುವಂತೆ ಕೊಡಿಸಲಿಲ್ಲವೇ? ಕೊನೆಗೆ 'ಆಲಿವರ್ ಟ್ವಿಸ್ಟ್' (Oliver Twist) ಗೇಯ ನಾಟಕಕ್ಕೂ ಕರೆದುಕೊಂಡು ಹೋಗಿ ಇಡೀ ದಿನವನ್ನು ಆನಂದದ ಸಾಗರದಲ್ಲಿ ಮುಳುಗಿಸಿ, ಸುಖ ಅನುಭವಿಸುವಂತೆ ಮಾಡಲಿಲ್ಲವೇ ?

........ಒಟ್ಟಿನಲ್ಲಿ, ನಿನ್ನನ್ನೂ, ನಿನ್ನ ತಮ್ಮನನ್ನೂ ಪಡೆದ ನಾವು ಭಾಗ್ಯವಂತರು !

—ಇತಿ ನಿನ್ನನ್ನು ಆಶೀರ್ವದಿಸುವ,

ಅಮ್ಮ.

* * * * *

ಲಂಡನ್
25 – 10 – 1966

ಮುದ್ದು ಮಕ್ಕಳೇ,

ಇಲ್ಲಿನ ಜನರ ದಿನಚರಿ ಹವಾಮಾನದ ಮೇಲೆ ಹೊಂದಿಕೊಂಡಿದೆ. ಲಂಡನ್ನಿನಲ್ಲಿ ಮಳೆ ಸಾಮಾನ್ಯ. ಕೆಲವು ಸಲ ಬಿಸಿಲಿದ್ದ ದಿನ ಜನರು ಕಟ್ಟಡಗಳ ಒಳಗೆ

ಇರುವುದೇ ಇಲ್ಲ. ಛಳಿಗಾಲದಲ್ಲಿ ಮನೆಗಳ ಒಳಗೇ ಕಾಲ ಕಳೆಯುವ ಈ ಜನರು ಸೆಕೆಕಾಲ ಬಂದರೆ ಮನೆಯಾಚೆಯೇ ವಾಸಮಾಡಿ ಬಿಸಿಲನ್ನು ಒಂದಿಷ್ಟೂ ಹಾಳು ಮಾಡದೆ ಸೂರ್ಯಕಿರಣಗಳನ್ನು ಆದಷ್ಟುಮಟ್ಟಿಗೆ ಮೈಯಲ್ಲಿ ಶೇಖರಿಸಿಕೊಳ್ಳುತ್ತಾರೆ! ಆದರೆ ಇಲ್ಲಿನ ಸೂರ್ಯಕಿರಣಗಳು ನೇರವಾಗಿ ಬೀಳದೆ ಸೊಟ್ಟ ಸೊಟ್ಟವಾಗಿ ಬಿದ್ದು ಶಾಖವೇ ಕೊಡುವುದಿಲ್ಲ. ಆದರೂ ಈ ಕಿರಣಗಳ ತಾಪಕ್ಕೆ ಮೈಯೊಡ್ಡಿ ಈ ಜನರು ಈವತ್ತೋ ನಾಳೆಯೋ ಎಂಬಂತೆ ಹತ್ತಿರವೇ ಬರಲಿರುವ ಛಳಿಗಾಲವನ್ನು ಎದುರಿಸುವ ಸಿದ್ಧತೆ ಮಾಡುತ್ತಾರೆ.

ಬಿಸಿಲಿರುವಾಗ ಒಳಗೆ ಏರ್ಪಡಿಸಿದ್ದ ನಮ್ಮ ನೃತ್ಯ ಪ್ರದರ್ಶನಕ್ಕೆ ಒಂದೆರಡು ಸಲ ಜನವೇ ಇರಲಿಲ್ಲ! ಏರ್ಪಡಿಸಿದವರಿಗೆ ಇದರಿಂದ ಬೇಸರವೂ, ಯೋಚನೆಯೂ ಇರಲಿಲ್ಲ! ಏಕೆಂದರೆ ಅವರ ಕಾರ್ಯಕ್ರಮಗಳಿಗೆ ಬೇಕಾದ ವೇತನವನ್ನು ಅವರು ಮೊದಲೇ ಶೇಖರಿಸಿಕೊಂಡಿದ್ದರು. ಪ್ರೇಕ್ಷಕರಿಲ್ಲದಿದ್ದರೂ ಪ್ರದರ್ಶನಕ್ಕೆ ಬಂದ ಪತ್ರಿಕೋದ್ಯೋಗಿಗಳು ಒಳ್ಳೆಯ ವಿಮರ್ಶೆ ಕೊಟ್ಟರು. "ಭಾರತೀಯ ನೃತ್ಯ ಮತ್ತು ಸಂಗೀತವು ನಿನ್ನೆ ಪುರಭವನದ ಒಂದು ರಸದೂಟವಾಗಿತ್ತು. ಅದು ತಾಳ ವೈಚಿತ್ರ್ಯದ ವಿವಿಧತೆಯ ಸುಂದರ ರೂಪವಾಗಿದ್ದು, ಭಾರತದ ಮೂಲ ತತ್ವಗಳು ಎಲ್ಲಕ್ಕಿಂತಲೂ ಮಿಗಿಲಾದುವು ಎಂಬುದನ್ನು ಪ್ರಕಟಿಸಿತು........" ಒಮ್ಮೆ 'ಬೋರೋ ಕೌನ್ಸಿಲ್' (Borough Council) ಒಂದರಲ್ಲಿ ಇದೇ ಬಿಸಿಲುಗಾಲದಲ್ಲಿ ಒಂದು ವಿಚಿತ್ರವಾದ ಪ್ರದರ್ಶನವನ್ನು ಕೊಟ್ಟೆವು. ಆ ಕೌನ್ಸಿಲಿನವರೇ ಎಲ್ಲಾ ಖರ್ಚು ಜವಾಬ್ದಾರಿಯನ್ನೂ ಪಡೆದಿದ್ದ ಕಾರಣ ಹೆಚ್ಚಿನ ಜಾಹಿರಾತುಗಳ ಅವಶ್ಯಕತೆ ಗಣಿಸಲಿಲ್ಲ. ನಾವು ಆ ಸ್ಥಳಕ್ಕೆ ಹೋದಾಗ ರಂಗಸ್ಥಳ ಬರಿದಾಗಿತ್ತು. ತಣ್ಣಗೆ, ಸಪ್ಪೆ, ಅಲಂಕಾರ ರಹಿತವಾದ ಘರದೆ ದೀಪಗಳಿಲ್ಲದ ರಂಗಸ್ಥಳ ಒಂದು, ರಂಗಮಂದಿರದಲ್ಲಿ ಅಲ್ಲಲ್ಲಿ ಸುಮಾರು 20 ಜನರು ಮಾತ್ರ ಇದ್ದರು! ಪತಿಯವರು ಅವರನ್ನೆಲ್ಲ ಕುರಿತು ಎಲ್ಲರೂ ಮುಂದಿನ ಸಾಲುಗಳಲ್ಲಿ ಕುಳಿತುಕೊಳ್ಳುವಂತೆ ಆಹ್ವಾನಿಸಿದರು. ಆ 20 ಜನ ಪ್ರೇಕ್ಷಕ ವೃಂದಕ್ಕೆ ನಾವು, ಕಲಾವಿದರು 9 ಜನ, 5 ನೃತ್ಯಗಾರರು, 4 ಸಂಗೀತಗಾರರು! ಪ್ರೇಕ್ಷಕರನ್ನು ಗಮನಿಸದೆ ನಾವು ಕರ್ತವ್ಯಬದ್ಧರಾಗಿ 2 ಗಂಟೆಯ ಕಾಲ ಭಾರತೀಯ ನೃತ್ಯ ಸಂಗೀತಗಳ ಅಪಾರ ದರ್ಶನ ಕೊಟ್ಟೆವು. ಪ್ರದರ್ಶನವಾದ ಮೇಲೆ ಇಬ್ಬರು ಗಂಡಸರು ನಾವಿದ್ದಲ್ಲಿಗೆ ಬಂದು, "You've cast pearls.............. Don't ever spoil your wonderful art to empty audience!" ಎಂದರು. ("ಕೋಣನ ಮುಂದೆ ಕಿನ್ನರಿ ಬಾರಿಸಿದಂತಾಯಿತು. ಖಾಲಿ ರಂಗಮಂದಿರಕ್ಕೆ ನಿಮ್ಮ ಅಪಾರ ಕಲೆಯನ್ನು ಪ್ರದರ್ಶಿಸಿ, ಕಲೆಯನ್ನು ಎಂದೂ ಕೆಡಿಸಬೇಡಿ!" ಎಂದರು.) ಒಳ್ಳೆಯ ಬುದ್ಧಿವಾದವಲ್ಲವೇ?

ಒಮ್ಮೆ ನಮ್ಮ ಜೀವಮಾನದಲ್ಲೇ ಮೊದಲು ಎಂಬಂತೆ ಬಿಸಿಲಿದ್ದ ದಿನ ನಿಸರ್ಗ ದಲ್ಲಿ ನಮ್ಮ ನೃತ್ಯಗಳನ್ನು ಮಾಡಿದೆವು! ತಲೆಯ ಮೇಲೆ ಆಕಾಶ – ಕಾಲಿನ ಕೆಳಗೆ ಹಚ್ಚ ಹಸುರಾದ ಹುಲ್ಲು. ಪ್ರಕಾಶಕ್ಕೆ ಕಣ್ಣು ಮುಂದೆ ಸೂರ್ಯನು ನಮಗೆ ಸಹಜವಾದ ನೈಸರ್ಗಿಕ ಬೆಳಕನ್ನು ಬೀರಿದನು. ಕೃತ್ರಿಮತೆ ಎಲ್ಲೂ ಇರಲಿಲ್ಲ. ಅದು ನಮಗೆ ವಿಶಿಷ್ಟವಾದ, ವಿಚಿತ್ರವಾದ ಅನುಭವವಾಯಿತು. ಆ ದಪ್ಪವಾದ ರತ್ನಗಂಬಳಿ ಯಂತಿದ್ದ ಹುಲ್ಲಿನ ಮೇಲೆ ನಮ್ಮ ಭರತನಾಟ್ಯ ಹೆಜ್ಜೆ ವಿನ್ಯಾಸಗಳನ್ನು ಮಾಡುವುದು ಸುಲಭವಾಗಿರಲಿಲ್ಲ. ಆದರೆ ಅಭ್ಯಾಸವಾದಂತೆ ಹಿತಕರವಾಗಿ ಬಹಳ ಚೆನ್ನಾಗಿತ್ತು, ಸಂತೋಷಕರವಾಗಿತ್ತು. ಪ್ರೇಕ್ಷಕರಿಗೂ ನಮಗೂ ಮಧ್ಯೆ ಒಂದು ನೀರಿನ ಕೆರೆಯಿತ್ತು. ಅವರ ಪ್ರತಿಬಿಂಬಗಳನ್ನೂ ನಮ್ಮ ಪ್ರತಿಬಿಂಬಗಳನ್ನೂ ಆ ನೀರಿನಲ್ಲಿ ಕಾಣಬಹು ದಾಗಿತ್ತು. ಹುಲ್ಲಿನ ರಂಗಸ್ಥಳ ನಮಗೆ ಬೇಕಾದಷ್ಟು ಅಗಲವಾಗಿ ಉದ್ದವಾಗಿತ್ತು. ಸ್ವೇಚ್ಛೆಯಾಗಿ ಎಲ್ಲಿ ಬೇಕೋ ಅಲ್ಲಿಗೆ ಕುಣಿದು–ಎಗರಿ–ಬಿದ್ದು–ಎದ್ದು ನರ್ತಿಸಿ ನಮ್ಮ ಅಂತರಾತ್ಮದ ಭಾವನೆಗಳನ್ನು ನೃತ್ಯಗಳ ಮೂಲಕ ಪ್ರಕಟಿಸಿದುದು ಹೊಸ ಅನುಭವ, ಚಿರಸ್ಮರಣೀಯ ಅನುಭವ........

ಮೊನ್ನೆ ತಾನೇ ಬ್ರೆಡ್‌ಫರ್ಡ್ (Bradford) ಪ್ರವಾಸ ಮುಗಿಸಿ ಬಂದೆವು. ಶೆಫ್ಫೀಲ್ಡ್ (Sheffield), ಲೀಡ್ಸ್ (Leeds), ಬ್ರೆಡ್‌ಫರ್ಡ್ (Bradford) ಈ ಪಟ್ಟಣಗಳು ಕೈಗಾರಿಕಾ ಪಟ್ಟಣಗಳಾದರೂ ಇತ್ತೀಚೆಗೆ ಕಲಾಸಕ್ತಿಯನ್ನು ಪಡೆ ದಿವೆ. ಬ್ರೆಡ್‌ಫರ್ಡಿನಲ್ಲಿ ಸುಮಾರು 8–10 ಸಾವಿರ ಭಾರತ, ಪಾಕೀಸ್ಥಾನ ದೇಶ ಗಳ ಜನರಿದ್ದಾರೆ. ರಂಗಮಂದಿರ ಒಂದರಲ್ಲಿ ಏರ್ಪಡಿಸಿದ್ದ ನಮ್ಮ ಪ್ರದರ್ಶನಕ್ಕೆ ಕೆಲವು ದಿನ ಮುಂಚಿತವಾಗಿಯೇ ಎಲ್ಲ ಟಿಕೇಟುಗಳೂ ಮಾರಲ್ಪಟ್ಟ ಕಾರಣ ಅಂದು ಸುಮಾರು 400 ಜನ ಹೆಚ್ಚಾಗಿ ಪಾಶ್ಚಾತ್ಯರೇ, ನಿರಾಶರಾಗಿ ಹಿಂತಿರುಗಿ ಹೋಗ ಬೇಕಾಯಿತು !........ಲೀಡ್ಸಿಗೆ ಕೂಡ ಹೋಗಿ ಬಂದೆವು- ಲೀಡ್ಸ್‌ನಲ್ಲಿ ಒಳ್ಳೆಯ ನೇಯ್ಗೆಯ ವಿಶ್ವವಿದ್ಯಾಲಯವಿದೆ, (Textile University) ಉಣ್ಣೆ ಬಟ್ಟೆಗಾಗಿ. ಭಾರತೀಯ ವಿದ್ಯಾರ್ಥಿಗಳು ಅಲ್ಲಿ ಬಹಳ ಸಂಖ್ಯೆಯಲ್ಲಿದ್ದು ವಿದ್ಯಾಭ್ಯಾಸ ಪಡೆಯುತ್ತಿ ದ್ದಾರೆ. ಒಬ್ಬ 20–22 ವಯಸ್ಸಿನ ಯುವಕ ಬಹಳ ವರ್ಷಗಳಿಂದ ಹೆತ್ತವರನ್ನೂ ಬಂಧು–ಮಿತ್ರರನ್ನೂ ಅಗಲಿದ್ದ ಕಾರಣ ನಮ್ಮನ್ನು ಕಂಡ ಕೂಡಲೆ ಒಂದು ಆತ್ಮೀಯತೆ ಯಿಂದ ನಮ್ಮ ಸಾಮೀಪ್ಯವನ್ನು ಬಿಡದೆ ಕೊನೆಗೆ ಬೀಳ್ಕೊಡುವ ಸಮಯ ಭಕ್ತಿಯಿಂದ ನಮ್ಮಿಬ್ಬರ ಪಾದ ಮುಟ್ಟಿ ನಮಸ್ಕರಿಸಿ ಕಣ್ಣಲ್ಲಿ ನೀರಿಟ್ಟನು. ನಮ್ಮನ್ನು ಕಂಡು ಅವ ನಿಗೆ ಬಹುಶಃ ತನ್ನ ತಂದೆ ತಾಯಿಯರ ನೆನಪಾಗಿದ್ದಿರಬೇಕು. ಆ ಯುವಕ ನಮ್ಮ ಶಿವದೇವನಂತೆಯೇ ಇದ್ದ ಕಾರಣ ನಮಗೂ ಆತನನ್ನು ಕಂಡು ಪ್ರೇಮ ಉಕ್ಕಿಬಂತು. ನಿಜ, ಭಾರತೀಯರು ತಮ್ಮ ಸಂಸ್ಕೃತಿಯನ್ನು ಹೇಗೆ ಮರೆತಾರು ? ಅದೆಷ್ಟು ಸುಂದರ

ವಾದ ಸಂಸ್ಕಾರ, ಸಂಸ್ಕೃತಿ ನಮ್ಮದು! ಹಿರಿಯರಿಗೆ ಮರ್ಯಾದೆ ಕೊಟ್ಟು ಭಕ್ತಿ ಪೂರ್ವಕವಾಗಿ ಕಾಣುವುದು–ಈ ದೇಶದವರಿಗೆ ವಿಚಿತ್ರವಾಗಿರಬಹುದು.

ನೋಟಿಂಗ್‌ಹೆಮ್ (Nottingham) ನಲ್ಲೂ ನಮ್ಮ ಪ್ರದರ್ಶನ ಒಂದು ರಂಗ ಮಂದಿರದಲ್ಲಿ ಏರ್ಪಾಡಾಗಿತ್ತು. ಈ ನಗರ ವಾಣಿಜ್ಯಕ್ಕೆ ಪ್ರಸಿದ್ಧಿ ಪಡೆದರೂ ಇತ್ತೀಚೆಗೆ ಕಲಾರಂಗದಲ್ಲಿ ಸ್ವಲ್ಪ ಉತ್ಸುಕತೆ ಪಡೆದಿದೆ. ನಾವು ಅಲ್ಲಿ ಭಾರತೀಯ ಕ್ಷಾಮ ನಿವಾರಣೆ ನಿಧಿಗೆ ಹಣ ಸಂಪಾದಿಸಲು ನಮ್ಮ ಪ್ರದರ್ಶನ ಕೊಟ್ಟೆವು. ಕಾರ್ಯಕ್ರಮ ಯಶಸ್ವಿಯಾಯಿತು. ಮರುದಿನ ನಾವು ಅಲ್ಲಿನ ವಿದ್ಯಾನಿಲಯದ ಆವರಣದಲ್ಲೆಲ್ಲ ಸುತ್ತಾಡಿದೆವು. ದೊಡ್ಡ ದೊಡ್ಡ ಮರಗಳೂ, ಕಾಲುವೆಗಳು, ಕಣಿವೆಗಳು–ಇವೆಲ್ಲ ಶಾಂತ ವಾತಾವರಣ ವನ್ನು ಕಲ್ಪಿಸಿ, ಓದುವ ವಿದ್ಯಾರ್ಥಿಗಳಿಗೆ ಅನುಕೂಲವಾದ ಮನೋಸ್ಥಿತಿಯನ್ನು ಒದಗಿಸುತ್ತಿದ್ದುವು. ನಿಸರ್ಗದೊಡನೆ ಸೇರಿಕೊಂಡು ಆನಂದಿಸುವ ಸಂದರ್ಭ ಕಲ್ಪಿಸುವಂತಿದ್ದುವು. ಅಲ್ಲಿಯೇ ಹತ್ತಿರ, ಕೆಲವೇ ಮೈಲಿಗಳ ದೂರದಲ್ಲಿ ಪ್ರಸಿದ್ಧ ಶೆರವುಡ್ ಅರಣ್ಯ (Sherwood Forest) ಇದೆಯೆಂದು ಕೇಳಿದೆವು.

ಕ್ಷಮಿಸಿ, ಈ ಕಾಗದ ಬರೆಯಲು ತಡವಾಯಿತು. ಪ್ರವಾಸ, ಪ್ರದರ್ಶನಗಳು ಎಂದು ಲಂಡನ್ನಿನಲ್ಲಿ ಇರಲಿಲ್ಲ. ಮನೆಯಲ್ಲಿ ಎಲ್ಲ ಕ್ಷೇಮತಾನೆ ?........ಬರೆಯಿರಿ.

ಇತಿ

ನಿಮ್ಮ ಅಮ್ಮ.

* * * * *

ಲಂಡನ್

30 – 10 – 1966

ಮುದ್ದು ಮಕ್ಕಳೇ,

........ಮೊನ್ನೆ ಒಳ್ಳೇ ಬಿಸಿಲಿದ್ದ ದಿನ ನಾವು ಸೌತೆಂಪ್ಟನ್ (Southamton) ದಾರಿಯಾಗಿ ಬೋರ್ನ್‌ಮತ್ (Bournemouth) ಎಂಬ ಊರಿಗೆ ಹೋದೆವು. ಊರನ್ನು ಸೇರಿದೊಡನೆಯೇ ಅಲ್ಲಿನ ಮಿನುಗುತ್ತಿರುವ ಸಮುದ್ರದ ದರ್ಶನವಾಯಿತು. ಬೋರ್ನ್‌ಮತ್ ಕರಾವಳಿಯ ನಗರ–ಅನೇಕಾನೇಕ ಹಡಗುಗಳು ದಡ ಸೇರಿದುದನ್ನು ನೋಡಿದೆವು. ಆ ನಗರದ ಬ್ಯಾಲೆ ಕ್ಲಬ್ಬಿನವರು ನಮ್ಮನ್ನು ಆಮಂತ್ರಿಸಿದ್ದರು. ನಾವಲ್ಲಿ ತಲುಪಿದ ರಾತ್ರಿ ಒಂದು ಅಂತರರಾಷ್ಟ್ರೀಯ ಕೂಟವನ್ನು ಏರ್ಪಡಿಸಲಾಗಿತ್ತು. ಆ ಕೂಟದಲ್ಲಿ ನಾವಿಬ್ಬರೇ ಭಾರತೀಯರಾಗಿದ್ದುದರಿಂದ ಎಲ್ಲರ ದೃಷ್ಟಿಯೂ ನಮ್ಮ

ಮೇಲಿತ್ತು. 'ಮೈಕ್'ನಲ್ಲಿ ನಮ್ಮ ಆಗಮನವನ್ನು ತಿಳಿಸಿದರು. "ಭಾರತ ಸರಕಾರವು ಕಳುಹಿಸಿರುವ ಇಬ್ಬರು ಹೆಸರುವಾಸಿ ಕಲಾವಿದರು ನಮ್ಮ ಕೂಟದಲ್ಲಿರುವುದು ವಿಶೇಷ ಸಂಗತಿ........" ಇತ್ಯಾದಿ.

ಬೋರ್ನ್‌ಮತ್ ಬಹಳ ಅಂದವಾದ ಊರು. ಇಲ್ಲಿನ ಸಮುದ್ರವೂ, ಸಮುದ್ರ ತೀರವೂ ಬಹಳ ಸುಂದರವಾಗಿದೆ. ಹವಾಗುಣ ಹಿತಕರವಿದೆ, ದಂಡೆಯಲ್ಲಿನ ಮರಳು ಶುಚಿಯಾಗಿದೆ. ನೂರಾರು ಜನರು ಸಮುದ್ರದ ಗಾಳಿಯನ್ನು ಸೇವಿಸಲು ತಂಡ ತಂಡವಾಗಿ ಆರಾಮದಿಂದ ಇಲ್ಲಿ ಸೇರುತ್ತಾರೆ. ಕರೆಯಲ್ಲಿ ಈಜಲು ಬೇಕಾದ ಕೆರೆ ಗಳನ್ನು ನಿರ್ಮಿಸಿದ್ದಾರೆ. 'ಟರ್ಕಿಶ್ ಬಾತ್' (Turkish Bath) (ನೀರಿನ ಹಬೆ ಯಲ್ಲಿ ಸ್ನಾನ) ಬೇಕಾದ್ದಲ್ಲಿ ಅವನ್ನು ಕೊಡುವ ವಿವಿಧ ಸ್ನಾನ ಗೃಹಗಳೂ ಇವೆ. ಸಮುದ್ರದಲ್ಲಿ ಈಜಾಡಿ ಬರುವ ಜನರಿಗೆ ಕರೆಯಲ್ಲಿ ಚಿಕ್ಕ-ಪುಟ್ಟ ವಿಶ್ರಾಮಧಾಮಗಳೂ ಇವೆ. ಈ ಊರಲ್ಲಿ ಛಳಿಗಾಲದಲ್ಲೂ ಬೆಳಿಗ್ಗೆ ಎದ್ದು ಸಮುದ್ರದಲ್ಲಿ ಈಜಾಡುವ ವೀರಾಧಿವೀರರು ಇರುವರಂತೆ. ಬೋರ್ನ್‌ಮತ್ ತುಂಬಾ ಖ್ಯಾತಿ ಪಡೆದ ಊರು. ಇಲ್ಲಿನ ಸುಂದರವಾದ ಕರಾವಳಿಯಲ್ಲಿ ಪ್ರವಾಸಿಗಳಿಗೋಸ್ಕರ ಅನೇಕಾನೇಕ ಹೋಟೆಲು ಗಳೂ, ಅನುಕೂಲತೆಗಳೂ ಇವೆ. ನಿವೃತ್ತ ಜನರು ಹೆಚ್ಚಾಗಿ ಇದೇ ಊರಿನಲ್ಲಿ ನೆಲ ಸಲು ಇಚ್ಛಿಸುತ್ತಾರಂತೆ. ಜೀವನವೂ ಇಲ್ಲಿ ರಸಭರಿತವಾಗಿದೆ. ಜೀವನದ ಗೆಲುವು ಇಲ್ಲಿಯ ಜನರಲ್ಲಿ ಎದ್ದು ಕಾಣುತ್ತಿದೆ.

ಮಧ್ಯಾಹ್ನ ಮೂರು ಗಂಟೆಗೆ ಅಲ್ಲಿನ ಬ್ಯಾಲೆ ಕ್ಲಬ್ಬಿನಲ್ಲಿ ನಮ್ಮ ನೃತ್ಯ ಪ್ರದರ್ಶನ, ಉಪನ್ಯಾಸಗಳನ್ನು ಏರ್ಪಡಿಸಿದ್ದರು. ಬ್ಯಾಲೆಯ ಅಧ್ಯಾಪಕರು, ನೃತ್ಯಗಾತಿಯರು, ಕಲಾ ವಿದ್ಯಾರ್ಥಿಗಳು-ಎಲ್ಲರೂ ಸೇರಿಕೊಂಡಿದ್ದರು. ನಮ್ಮ ನೃತ್ಯೋಪನ್ಯಾಸದ ಪರಿಣಾಮ ಅವರ ಮೇಲೆ ಅದ್ಭುತವಾಯಿತು. ಉಪನ್ಯಾಸ ಮುಗಿದ ಮೇಲೆ ಅವರ ಹರ್ಷಚಿತ್ತ ಕರತಾಡನವು ಎಷ್ಟೊಂದು ಹೊತ್ತು ಇತ್ತು ಅಂದರೆ ಕೊನೆಕೊನೆಗೆ ನಮಗೆಲ್ಲಿ ಲಂಡನ್ನಿಗೆ ಹಿಂತಿರುಗಿ ಹೋಗುವ ರೈಲು ತಪ್ಪಿಹೋಗುವುದೋ ಎಂಬ ದಿಗಿ ಲಾಯಿತು! ಬೀಳ್ಕೊಟ್ಟು ಬರುವ ವೇಳೆಗೆ ಉಪಹಾರದ ಸಮಯದಲ್ಲಿ ಮೇಜಿನಮೇಲೆ ಹಾಕಿದ ಬಟ್ಟೆಯ ಮೇಲೆ ನಮ್ಮ ಸಹಿಗಳನ್ನು ಹಾಕಲು ಹೇಳಿದರು. ನಾವು ಕನ್ನಡ ದಲ್ಲಿ ನಮ್ಮ ಸಹಿಗಳನ್ನು ಹಾಕಿದೆವು. ಈ ಹೊಸಲಿಪಿ ಅವರಿಗೆ ತುಂಬಾ ಸ್ವಾರಸ್ಯ ವುಳ್ಳದ್ದಾಯಿತು. ಅವನ್ನು ಅವರು ಕೊನೆಗೆ ಕಸೂತಿ ಕೆಲಸದಿಂದ ಕಾದಿಡುವ ರೂಢಿ ಯಿದೆಯಂತೆ. ಅಂದರೆ ಅವರು ಆಹ್ವಾನಿಸುವ ಎಲ್ಲ ಜನರಿಗೆ ಈ ರೀತಿಯಾಗಿ ತಮ್ಮ ಕೃತಜ್ಞತೆಯನ್ನು ತೋರಿಸಿ, ಆ ಸುಸಂದರ್ಭಗಳನ್ನು ಮರೆಯದಂತೆ ಮಾಡುತ್ತಾರಂತೆ. ಕಲಾವಿದರ ಭೇಟಿಯನ್ನು ಜ್ಞಾಪಕದಲ್ಲಿಟ್ಟುಕೊಳ್ಳುವ ಈ ಕ್ರಮ ನಿಜವಾಗಿಯೂ ಮೆಚ್ಚತಕ್ಕದ್ದೇ!

........ನಾವು ಹಿಂತಿರುಗಿ ಪ್ರಯಾಣ ಮಾಡಿದ ರೈಲುಬಂಡಿ ತೀರಾ ಹೊಸದಾಗಿತ್ತು. ಅದರೊಳಗೆ ಆಗತಾನೆ ಹೊಸದಾಗಿ ಹಾಕಿದ ಪರದೆಗಳಿದ್ದವು. ನೆಲವು ಹೊಸತಾಗಿ ಫಳಫಳನೆ ಹೊಳೆಯುತ್ತಿತ್ತು. ಆಸನಗಳು ಹೊಸ ಮೆತ್ತೆಯಿಂದ ಮುಚ್ಚಲ್ಪಟ್ಟಿದ್ದುವು. (Upholstered) ಪ್ರಯಾಣ ತುಂಬಾ ಸುಗಮವಾಗಿತ್ತು. ಒಂದಿಷ್ಟೂ ಅಲ್ಲಾಡದೆ ರೈಲು ಮುಂದೆ ಸಾಗುತ್ತಿತ್ತು. ಕಿಟಿಕಿಯಿಂದ ಹೊರಗೆ ನೋಡುವಾಗ ಮಾತ್ರ ರೈಲು ಓಡುತ್ತಿದೆಯೆಂದು ನಮಗೆ ತಿಳಿದು ಬರುತ್ತಿತ್ತು. ಮರಗಳ ಮೇಲೆಲ್ಲ ಗಡ್ಡೆ ಹನಿ (Frost) ತುಂಬಿತ್ತು. ನಿಜ, ಹವೆಯು ದಿನಕ್ಕಿಂತ ದಿನ ಹೆಚ್ಚೆಚ್ಚು ಛಳಿಯಿಂದ ಕೂಡಿ ಬರುತ್ತಿದೆ. ಕಿಟಕಿಯಿಂದ ಹೊರಗೆ ನೋಡುವಾಗ ಸೇಬು ಹಣ್ಣುಗಳ (Apple) ಮರಗಳೂ, ಇತರ ಮರಗಳೂ ತಮ್ಮ ಎಲೆಗಳನ್ನು ಮೆಲ್ಲಮೆಲ್ಲನೆ ಉದುರಿಸುತ್ತಿರುವುದನ್ನು ಕಂಡೆವು. ಕ್ರಮೇಣ..............ನಗ್ನತೆಯನ್ನು ....ಹೊಂದುವ 'ಸ್ಟ್ರಿಪ್-ಟೀಸ್' (Strip-Tease) ದೃಶ್ಯ !........

ಇತಿ ನಿಮ್ಮ
ಅಮ್ಮ.

* * * *

ಲಂಡನ್
4 – 11 – 1966

ಮುದ್ದು ಮಕ್ಕಳೇ,

........ಇತ್ತೀಚೆಗೆ ನಮ್ಮ ನೃತ್ಯ ಉಪನ್ಯಾಸಗಳು ಎಲ್ಲೆಲ್ಲೂ ಆಗುತ್ತಿವೆ. ಪ್ರೇಕ್ಷಕರಿಗೆ ಸರಿಯಾಗಿ ಅವರ ವಯಸ್ಸು, ಓದು, ಮನಸ್ಸಿನ ಬೆಳವಣಿಗೆ, ಜ್ಞಾನದ ತಿಳುವಳಿಕೆ – ಇವುಗಳಿಗೆ ಸರಿಯಾಗಿ, ಅವರು ಮೆಚ್ಚುವಂತೆ ಉಪನ್ಯಾಸವನ್ನು ಕೊಡುವ ಅಪೂರ್ವ ಪ್ರತಿಭೆ ಪತಿಯವರಲ್ಲಿದೆ. ಡಾರ್ಲಿಂಗ್ಟನ್ (Darlington) ಎಂಬಲ್ಲಿ ಚಿಕ್ಕ ಹೆಣ್ಣು ಮಕ್ಕಳಿಗೆ ಮಹದಾನಂದವಾಗುವಂತೆ ಭಾಷಣವನ್ನು ಕೊಟ್ಟರು. ಅವರ ಭಾಷಣವನ್ನು ಕೇಳಿದ ನೂರಾರು ಮಕ್ಕಳ ಜತೆಗೆ ಅವರ ಉಪಾಧ್ಯಾಯಿನಿಯರೂ ವಿಶೇಷ ಆನಂದಪಟ್ಟರು. ಸ್ವಾರಸ್ಯವಾದ ಭಾಷಣವದು. ಹೊರಡುವ ಹೊತ್ತಿಗೆ ಸುಮಾರು ಇನ್ನೂರು ಹೆಣ್ಣುಮಕ್ಕಳು ಸಾಲಾಗಿ ನಿಂತು ನಮ್ಮ 'ಒಟೋಗ್ರಾಫಿ'ಗಾಗಿ (ಹಸ್ತಾಕ್ಷರದ ಸಹಿ) ಕಾದುಕೊಂಡಿದ್ದರು ! ಅಷ್ಟು ಮಕ್ಕಳಿಗೆ 'ಒಟೋಗ್ರಾಫ್' ಕೊಡುವುದು ಅಸಾಧ್ಯದ ಮಾತಾಗಿತ್ತು ! ಆದ್ದರಿಂದ ನಗುನಗುತ್ತಾ ನಮ್ಮನ್ನು ಕ್ಷಮಿಸಬೇಕೆಂದು ಕೇಳಿಕೊಂಡೆವು....ನಮ್ಮ ಕಲೆಯ ವಿಷಯ ಏನೂ ತಿಳಿಯದ ಜನತೆಗೆ ಅದರ ಪರಿಚಯವನ್ನು ಕೊಡುವುದೆಂದರೆ ನಮಗೆಷ್ಟೊಂದು ಮೆಚ್ಚುಗೆ!

AMC ಯವರು ನಮ್ಮನ್ನು ಡಾರ್‌ಚೆಸ್ಟರ್ ಬ್ಯಾಲೆಕ್ಲಬ್ಬಿಗೆ ಮೊದಲು ಕಳು ಹಿಸಿದಾಗ (Dorchester Ballet Club) ಅಲ್ಲಿನ ಪ್ರೇಕ್ಷಕರು ಅದೇ ಮೊದಲು ಭಾರತೀಯ ನೃತ್ಯಗಳನ್ನು ನೋಡಿದುದು, ಅಲ್ಲದೆ ಅದೇ ಮೊದಲು ನಮ್ಮ ಕಲೆಯ ತಿರುಳು, ಪ್ರಭಾವ ಅರಿತುಕೊಂಡುದು. ಅಲ್ಲಿನ ಸಹೃದಯರು ನಮ್ಮ ಬರುವಿಕೆಗಾಗಿ ವಿಶೇಷ ಆತುರದಿಂದ ಕಾಯುತ್ತಿದ್ದರಂತೆ. ನಮ್ಮ ನೃತ್ಯ–ಉಪನ್ಯಾಸಗಳಾದ ಮೇಲೆ "ನಮ್ಮ ಜೀವನದಲ್ಲಿ ಇದೊಂದು ಅಪೂರ್ವ ಅನುಭವ", "ಇಂತಹ ಸ್ವಾರಸ್ಯವಾದ ಭಾಷಣವನ್ನು ನಾವು ಗಂಟೆಗಟ್ಟಲೆ ಕೇಳುತ್ತಿರಬಹುದು" — ಇವೇ ಮೊದಲಾದ ಮಾತುಗಳಿಂದ ನಮ್ಮನ್ನು ಶ್ಲಾಘಿಸಿದರು. ಪ್ರೇಕ್ಷಕರಲ್ಲಿ ಹಲವಾರು ಚಿಕ್ಕಮಕ್ಕಳಿದ್ದು ಅವರಿಗೆ ಸಹಜವಾಗಿರುವ ಕುತೂಹಲದಿಂದಲೂ, ಮುಗ್ಧ ಮೆಚ್ಚಿಕೆಯಿಂದಲೂ ಕೆಲವು ಪ್ರಶ್ನೆಗಳನ್ನು ಕೇಳಿದರು : "ನಿಮ್ಮ ಕೈ ಬೆರಳುಗಳನ್ನು ಹೇಗೆ ಅಷ್ಟು ಬೇಗನೆ ಬದಲಾಯಿಸಿ ವಿಷಯವನ್ನು ಸೂಚಿಸುತ್ತೀರಿ?" "ನಿಮಗೆ ನಿಜವಾಗಿ ಅಷ್ಟು ಉದ್ದನೆಯ ಜಡೆಯಿದೆಯೇ ? "........ಇತ್ಯಾದಿ.

ನಾವು ಬೆಂಗಳೂರಿನಲ್ಲಿದ್ದಾಗ ನಮ್ಮಲ್ಲಿ ಒಂದು ತಪ್ಪು ಭಾವನೆಯಿತ್ತು. ಅದೇನೆಂದರೆ, ಪಾಶ್ಚಾತ್ಯರು ನಮ್ಮ ಕಲೆಯಲ್ಲಿನ 'ಅಭಿನಯ' ಕ್ಕಿಂತ ಹೆಚ್ಚಾಗಿ 'ನೃತ್ತ' ವನ್ನು ಮೆಚ್ಚುವರೆಂದು. ಆದರೆ ನಾವು ನಮ್ಮ ಹಸ್ತಮುದ್ರೆಗಳಿಂದ, ಮುಖಭಾವಗಳಿಂದ ಮಾಡುವ 'ಅಭಿನಯ' ವು ಅವರಿಗೆ ತುಂಬಾ ಆಕರ್ಷಕ ವಿಷಯ. ಈ ಬ್ಯಾಲೆ ಕ್ಲಬ್ಬಿನ ಶಿಕ್ಷಣ ಶಾಸ್ತ್ರಜ್ಞರು ಭಾರತೀಯ ನೃತ್ಯಗಳನ್ನು ಕುರಿತು ಹಲವಾರು ವಿಚಾರಪೂರಿತ ಪ್ರಶ್ನೆಗಳನ್ನು ಕೇಳಿದರು : "ಭಾರತೀಯ ನೃತ್ಯಗಳನ್ನು ಭಾರತದಲ್ಲಿ ನಮಗಿರುವ ತಿಳುವಳಿಕೆಗಿಂತ ಹೆಚ್ಚಾದ ತಿಳುವಳಿಕೆಯಿಂದ ಮೆಚ್ಚುತ್ತಾರೆಯೇ ?" "ಭಾರತೀಯ ನೃತ್ಯಗಳನ್ನು ಪರದೇಶಗಳಲ್ಲಿ ಪ್ರಸಾರ ಮಾಡುವ ವೇಳೆಗೆ ಅವುಗಳ ಅಂತಸ್ತನ್ನು ಇಳಿಸುತ್ತೀರಾ ?","ಭಾರತೀಯ ನೃತ್ಯಗಳನ್ನು ಈಗಲೂ ದೇವಾಲಯಗಳಲ್ಲಿ ಪ್ರದರ್ಶಿಸುತ್ತಾರೆಯೇ ?" "ಈ ಕಲೆಗೆ ಈಗಲೂ ಧಾರ್ಮಿಕ ಸಂಬಂಧವಿದೆಯೇ ?" "ಭಾರತೀಯ ನೃತ್ಯಗಳ ಶಾಸ್ತ್ರೀಯ ವೈವಿಧ್ಯವನ್ನು ನಾವು ತಿಳಿಯುವ ಬಗೆ ಹೇಗೆ?" ಇತ್ಯಾದಿ. ಅವರ ಈ ಹಿತಕರವಾದ ಅಜ್ಞಾನದಿಂದ (Healthy Ignorance) ಕೂಡಿದ್ದ ಪ್ರಶ್ನೆಗಳನ್ನೆಲ್ಲ ಯೋಗ್ಯ ರೀತಿಯಿಂದ ಉತ್ತರಿಸಿ, ನಮ್ಮ ಕಲೆಯ ವಿಷಯವಾಗಿ ಅವರ ಮನಸ್ಸು ವಿಕಾಸಗೊಳ್ಳುವಂತೆ ಮಾಡಿದೆವು. ಅವರು ಕೊಟ್ಟ ಹಳದಿ ಡೆಫೋಡಿಲ್ ಹೂಗಳ (Daffodil) ಗುಚ್ಛವನ್ನು ಹಿಡಿದುಕೊಂಡು ಮನೆಗೆ ಬರುವಾಗ ನಮ್ಮ ಹೃದಯ ಅಂದಿನ ದಿನಕ್ಕೆ ಕೃತಜ್ಞತೆಯನ್ನು ಅರ್ಪಿಸಿತು.

........ಹಿಂತಿರುಗುವ ದಾರಿಯಲ್ಲಿ ಬಹುಕಾಲದ ಹಿಂದೆ ಕ್ರಿಸ್ತಪೂರ್ವದಲ್ಲಿ ರೋಮನರು ಕಟ್ಟಿದ್ದ ಸಾರ್ವಜನಿಕ ಮಲ್ಲಯುದ್ಧ ರಂಗ (Amphitheatre of

Public Fights) ವನ್ನು ನೋಡಿದೆವು. 100 ವರ್ಷಗಳ ಹಿಂದೆ ಆ ಜಾಗದಲ್ಲಿ ಕೊಲೆಪಾತಕಿಗಳನ್ನು (Criminals) ನೇಣಿಗೆ ಹಾಕುತ್ತಿದ್ದರಂತೆ.

ಇತಿ ನಿಮ್ಮ
ಅಮ್ಮ.

* * * * *

ಲಂಡನ್
6 – 11 – 1966

ಮುದ್ದು ಅಮ್ಮ,

ಈಗ ತಾನೇ 'ಲೆಂಬಟನ್ ಕಾಸಲ್' (Lambton Castle) ಎಂಬಲ್ಲಿ ಪ್ರವಾಸ ಮುಗಿಸಿ ಬಂದಿದ್ದೇವೆ. ವಯಸ್ಕರ ಶಿಕ್ಷಣ ವಾಸದ ಕಾಲೇಜು (Residential College) ಈ ಕೋಟೆಯೊಳಗಿದೆ. ಈ ಕಾಲೇಜಿನ ಪಾಲಕರು ನಮ್ಮನ್ನು ಆಹ್ವಾನಿಸಿದ್ದರು. ಡರ್‍ಹಂ (Durham) ಪಟ್ಟಣದಿಂದ ಕಾರಿನಲ್ಲಿ ನಾವು ಮಾಡಿದ ಪ್ರಯಾಣ ತುಂಬಾ ಚೆನ್ನಾಗಿತ್ತು. ಕೋಟೆಯ ಮಹಾದ್ವಾರವನ್ನು ಪ್ರವೇಶಿಸಿದೊಡನೆ ಪ್ರೇಕ್ಷಣೀಯವಾದ ಒಂದು ಹೊಸ ವಾತಾವರಣ ನಮ್ಮ ಮುಂದೆ ತೆರೆಯಿತು. ಹಿಂದೆ ಇಂತಹ ದೊಡ್ಡ ಕೋಟೆಗಳು ಶ್ರೀಮಂತ ಬ್ರಿಟಿಷ್ ಪ್ರಭುಗಳು (Lords) ವಾಸಿಸುತ್ತಿರುವ ಅರಮನೆಗಳಾಗಿದ್ದವು. ಎತ್ತರವಾದ ದೊಡ್ಡ ಬಾಗಿಲುಗಳೂ, ಕಿಟಕಿಗಳೂ ಅನೇಕಾನೇಕ ಮಹಡಿ ಮೆಟ್ಟಲುಗಳ ಸಾಲುಗಳೂ, ನೂರಾರು ಕೋಣೆಗಳೂ ಇರುವ ಕೋಟೆಗಳು ಅತ್ಯಂತ ಘನ ಗಂಭೀರವಾದ ಭವ್ಯ ವಾಸಗೃಹಗಳು, ಇಂಗ್ಲೆಂಡಿನಲ್ಲಿ ಇಂತಹ ಕೋಟೆಗಳು ಸುಮಾರು 150 ಇವೆಯಂತೆ. ಇಂದು ಅವನ್ನೆಲ್ಲಾ ಕಲಾಗೃಹಗಳನ್ನಾಗಿಯೋ ಶಾಲಾ ಕಾಲೇಜುಗಳನ್ನಾಗಿಯೋ ಮಾರ್ಪಡಿಸಿದ್ದಾರೆ. ಅಲ್ಲಿ ನಮ್ಮನ್ನು ಸ್ವಾಗತಿಸುವ ಸಮಾರಂಭದಲ್ಲಿ ಶ್ರೀ ಅಂಗಡಿಯವರು ನಮ್ಮ ಪರಿಚಯವನ್ನು ಮಾಡಿಕೊಡುತ್ತ ನಾವು ನೃತ್ಯಗಾರರು, ನೃತ್ಯ ಶಿಕ್ಷಕರು, ನೃತ್ಯ ನಿರ್ಮಾಪಕರು ಹಾಗೂ ನೃತ್ಯ ಕಲೆಯ ಭಾಷಣಗಾರರೆಂದು, ಹೇಳಿ ನಮ್ಮನ್ನು ತುಂಬಾ ಹೊಗಳಿ, ನಾವು ನೆರವೇರಿಸುತ್ತಿರುವ ವಿವಿಧ ಕಾರ್ಯಕಲಾಪಗಳನ್ನು ವಿವರಿಸಿದರು.

ಅಲ್ಲಿ ನಮ್ಮ ವಾಸಕ್ಕೆ ಅತಿ ಎತ್ತರದ ಕೋಣೆಯೊಂದನ್ನು ಕೊಟ್ಟಿದ್ದರು. ಕೋಣೆಯ ಕಿಟಕಿಯಿಂದ ನಾವು ಕಂಡ ಸುಂದರ ಹಕ್ಕಿಯ ನೋಟದಿಂದ ಆನಂದಭರಿತರಾದೆವು. ವೈವಿಧ್ಯದ ಮರಗಿಡಗಳು, ಹಕ್ಕಿಗಳು, ವನಗಳು, ಮೃಗಗಳು ಇವೆಲ್ಲವಿರುವ ಆ ದೃಶ್ಯ ಕಾಳಿದಾಸ ವರ್ಣಿತವಾದ ಕಣ್ವನ ಆಶ್ರಮದಂತಿತ್ತು. ಬೆಳಿಗ್ಗೆ ಎದ್ದ ತಕ್ಷಣ

ಕಿಟಕಿಯ ಪರದೆಗಳನ್ನು ಎಳೆದಾಗ ನಾವು ನೋಡಿದ ದೃಶ್ಯ ಅವರ್ಣನೀಯವಾಗಿತ್ತು. ಆ ದೈವಿಕ ದೃಶ್ಯ ನಿಸರ್ಗದ ವೈಭವಯುಕ್ತ ದೃಶ್ಯ – ದೇವಾದಿದೇವತೆಗಳು ವಿಹರಿಸಲು ಯೋಗ್ಯವಾದ ದೃಶ್ಯ.

ಇತ್ತೀಚೆಗೆ ಇಂತಹ ಕೋಟೆಗಳೆಲ್ಲವನ್ನೂ ಖಾಸಗೀ ಅಥವಾ ಸಾರ್ವಜನಿಕ ಸಂಸ್ಥೆಗಳು ನಡೆಸಿಕೊಂಡು ಬರುತ್ತಿವೆ. ಸುಂದರವಾದ ನಿಸರ್ಗದ ಆವರಣದಲ್ಲಿ ಜೀವನದ ಅಂತಸ್ತನ್ನು ಹೆಚ್ಚಿಸಲು ಅಗತ್ಯವಿದ್ದ ವಿವಿಧ ವಿದ್ಯೆ, ಕಲೆಗಳಿಗೆ, ಶಿಸ್ತಿನಿಂದ ಕೂಡಿದ ಪ್ರೋತ್ಸಾಹ ಕೊಟ್ಟು ಈ ಸಂಸ್ಥೆಗಳು ಮಹತ್ತರವಾದ ಸೇವೆಯನ್ನು ಸಲ್ಲಿಸುತ್ತವೆ. ಈ ಲೆಂಬಟನ್ ಕೋಟೆಯಲ್ಲಿ ವಯಸ್ಕರ ಶಿಕ್ಷಣ ತರಗತಿಗಳಿವೆ. ಗಂಡಸರು, ಹೆಂಗಸರು, ವಯಸ್ಕರು, ಮುದುಕರು, ಮುದುಕಿಯರೂ ಕೂಡ, ಯುವಕ-ಯುವತಿ ವಿದ್ಯಾರ್ಥಿಗಳೊಡನೆ ಕೂಡಿ ಆಡಿ ತಮಗಿಷ್ಟವಾದ ವಿಷಯಗಳಲ್ಲಿ ಜ್ಞಾನಾರ್ಜನೆ ಮಾಡುತ್ತಾರೆ. ಇಲ್ಲಿನ ಶಿಕ್ಷಣಕ್ಕೆ ವಯಸ್ಸು ಅಡ್ಡಿಯಾಗುವುದಿಲ್ಲ. ಕಲಿಯುವವರು ನಾವು ಹಳಬರು ಎಂದು ನಾಚಿಕೆ ಪಡುವಂತಿಲ್ಲ. ಪ್ರತಿವಾರ ಎಂಬಂತೆ ಸುಮಾರು 60 ವಿದ್ಯಾರ್ಥಿಗಳಿಗಾಗಿ ಬೇರೆ ಬೇರೆ ವಿಷಯಗಳ ಮೇಲೆ ಬಲ್ಲವರಿಂದ ಉಪನ್ಯಾಸ ಕೊಡುವ ಏರ್ಪಾಡು ಮಾಡಿರುತ್ತಾರೆ. ಇಲ್ಲಿನ ವಿದ್ಯಾಭ್ಯಾಸದ ಅವಧಿ ಮುಗಿದೊಡನೆ ಅವರಿಗೆ ಪದವಿ (Degree) ಯನ್ನಾಗಲೀ, ಯೋಗ್ಯತಾ ಪತ್ರವನ್ನಾಗಲೀ (Diploma) ಕೊಡುವ ಪದ್ಧತಿಯಿಲ್ಲ. ಏಕೆಂದರೆ ಇಲ್ಲಿ ಕಲಿಯಲು ಬರುವವರು ಕೇವಲ ಜ್ಞಾನಾರ್ಜನೆಗೆ ಆಸೆಪಟ್ಟು ಬರುತ್ತಾರಲ್ಲದೆ ಪದವಿಗಾಗಿಯಾಗಲಿ, ಮಾನಪತ್ರಕ್ಕಾಗಲಿ ಅಲ್ಲ. ನಮ್ಮ ಭಾರತದಲ್ಲೂ ಈ ರೀತಿಯ ವಿದ್ಯಾದಾನ ಮಾಡುವ ಸಂಸ್ಥೆಗಳಿದ್ದರೆ ಎಷ್ಟು ಒಳ್ಳೆಯದಿತ್ತು! ಎಷ್ಟು ಜನತೆ ಈ ಅನುಕೂಲತೆಯನ್ನು ಪಡೆಯುತ್ತಿತ್ತು! ಓದು ಇಲ್ಲದಿದ್ದರೂ ಸಾಮಾನ್ಯ ಜನರಿಗೆ ಪ್ರಪಂಚ ಜ್ಞಾನವಾದರೂ ಸಿಗುತ್ತಿತ್ತು.

ಲೆಂಬ್ಟನ್ ಕಾಸಲ್‌ನಲ್ಲಿ ಒಂದು ಅನಿರೀಕ್ಷಿತ ಘಟನೆ ನಡೆಯಿತು. ಸಮಾರಂಭದಲ್ಲಿ ಮೊದಲು ಶ್ರೀ ಅಂಗಡಿಯವರು ನಮ್ಮ ದೇಶದ ಸಂಗೀತದ ಮೇಲೆ ಒಂದು ಉಪನ್ಯಾಸವನ್ನು ಕೊಟ್ಟರು. ಆಮೇಲೆ ಪತಿಯವರ ಭಾಷಣ. ಭಾಷಣಗಳಿಗಿಟ್ಟಿದ್ದ 1½ ಗಂಟೆಯ ಅವಧಿಯನ್ನು ಎಷ್ಟಕ್ಕೂ ಮೀರಬಾರದೆಂದು ಕಾಲೇಜಿನ ಪಾಲಕರು ಪತಿಯವರಿಗೆ ಮುನ್ನೆಚ್ಚರಿಕೆಯನ್ನು ಕೊಟ್ಟಾಗ ಪತಿಯವರ ಮನಸ್ಸು ತುಂಬಾ ನೊಂದಿತು. ಆದರೂ ಅವರದನ್ನು ಹೊರಗೆ ತೋರಿಸಿಕೊಳ್ಳದೆ ತಮ್ಮ ಉಪನ್ಯಾಸವನ್ನು ಎಂದಿನಂತೆ ಸ್ಫೂರ್ತಿದಾಯಕವಾಗಿಯೂ, ಸ್ವಾರಸ್ಯಮಯವಾಗಿಯೂ, ಚೇತನಾಯುಕ್ತವಾಗಿಯೂ ಕೊಟ್ಟರು. ಆದರೆ ಭಾಷಣದ ಅವಧಿ 1½ ಗಂಟೆ ಮುಗಿದೊಡನೆ ತಮ್ಮ ಭಾಷಣವನ್ನು ತಟಕ್ಕನೇ ನಿಲ್ಲಿಸಿಬಿಟ್ಟರು. ಭಾಷಣವು ತುಂಬಾ

ಸ್ವಾರಸ್ಯವುಳ್ಳದ್ದಾಗಿದ್ದ ಕಾರಣ, ನೆರೆದಿದ್ದ ಪ್ರೇಕ್ಷಕರೂ, ಸಂಸ್ಥೆಯ ಅಧಿಕಾರಿಗಳೂ ಭಾಷಣವನ್ನು ಇನ್ನೂ ಮುಂದುವರಿಸಲು ಪತಿಯವರನ್ನು ಕೇಳಿಕೊಂಡರು. ಆದರೆ ನೊಂದ ಮನಸ್ಸಿನ ಪತಿಯವರು ಇದಕ್ಕೆ ಖಂಡಿತ ಒಪ್ಪಲಿಲ್ಲ! ನಿರಾಶೆಪಟ್ಟ ಪ್ರೇಕ್ಷಕ ವರ್ಗವೆಲ್ಲ ಮತ್ತೊಂದು ಉಪನ್ಯಾಸವನ್ನು ಮರುದಿನವೇ ಅಲ್ಲಿಡಬೇಕೆಂದು ಹಠ ತೊಟ್ಟರು. ಇದರಿಂದಾಗಿ ನಮ್ಮ ಮತ್ತೊಂದು ಉಪನ್ಯಾಸಕ್ಕೂ ಮರುದಿನ ಏರ್ಪಾಡಾಯಿತು

ಎರಡನೆಯ ಉಪನ್ಯಾಸವನ್ನು ಕೇಳಲು ಜನರು ದೂರ ದೂರದಿಂದ ಬಂದು ಸೇರಿ ಆತುರದಿಂದ ಕಾದುಕೊಂಡಿದ್ದರು. ನಮ್ಮ ನೃತ್ಯೋಪನ್ಯಾಸಗಳು ಇತರ ಉಪನ್ಯಾಸಗಳಂತಿಲ್ಲ. ಸಾಮಾನ್ಯವಾಗಿ ಉಪನ್ಯಾಸವೆಂದೊಡನೆ ಜನತೆಗೆ ಬೇಸರವಾಗುವುದು, ನಿಜ. ಆದರೆ ನೃತ್ಯ ಉಪನ್ಯಾಸಗಳಲ್ಲಿ ಬೇಕಾದಷ್ಟು ನೃತ್ಯಗಳಿರುವುದರಿಂದಲೂ ಸುಶ್ರಾವ್ಯ ಸಂಗೀತವಿರುವುದರಿಂದಲೂ ಬೇಸರ ಬರುವುದಿಲ್ಲ. ಅಲ್ಲದೆ ಗಂಡ–ಹೆಂಡತಿ ಪ್ರದರ್ಶಿಸುವ ಕಲೆಯಲ್ಲಿ ಒಂದು ಆಕರ್ಷಣೆ ಇರುತ್ತದೆ. ಈ ತಿಳುವಳಿಕೆ ಆ ಕಾಲೇಜಿನ ಪಾಲಕರಿಗೆ ಮೊದಲು ಇದ್ದಿಲ್ಲ. ಅಂತೂ ಈ ಎರಡನೆಯ ಉಪನ್ಯಾಸ ವಿಶೇಷ ಸಫಲತೆಯನ್ನು ಹೊಂದಿತು. ನಮ್ಮ ಕಲೆಯ ವಿಷಯವನ್ನು ಕೊನೆಯವರೆಗೂ ಕೇಳಿ, ಅದನ್ನು ತುಂಬಾ ಹೊಗಳಿ ಆನಂದಪಟ್ಟರು. ಭಾರತೀಯ ಕಲಾವಿದರಿಗೆ ಇತರ ದೇಶಗಳ ಕಲೆಯ ವಿಷಯವಾಗಿಯೂ ಸಾಕಷ್ಟು ಪರಿಚಯವಿರುವುದು ಅವರಿಗೆ ಆಶ್ಚರ್ಯವನ್ನುಂಟು ಮಾಡಿತು. ಏಕೆಂದರೆ ಇಲ್ಲಿನ ಅಥವಾ ಯೂರೋಪಿನ ಕಲಾವಿದರಿಗೆ ನಮ್ಮ ದೇಶದ ಇಲ್ಲವೆ ಆಗ್ನೇಯ ಏಶಿಯಾದ (S. E. Asia) ಕಲೆಗಳ ವಿಷಯ ಸ್ವಲ್ಪವಾದರೂ ತಿಳುವಳಿಕೆ ಇರುವುದು ಬಹು ಅಪರೂಪ. ಇವರೆಲ್ಲ ನೇಕರು ಹಿಂದೂದೇಶವನ್ನು ಸರಿಯಾಗಿ ತಿಳಿದುಕೊಳ್ಳಲು ಅಶಕ್ಯರು. ನಮ್ಮ ಕಲೆ, ಸಂಸ್ಕೃತಿ ಧರ್ಮಸಂಬಂಧವಾದ ಕಾರಣ ಅವರಿಗೆ ಕಠಿಣವಾದ ವಿಷಯ. ಸಾಮಾನ್ಯವಾಗಿ ನಮ್ಮ ಹಿಂದೂಧರ್ಮದ ವಿಶಾಲವಾದ ಹಾಗೂ ಉದಾರವಾದ ತತ್ವಗಳು, ನಮ್ಮಲ್ಲಿರುವ ನೂರಾರು ದೇವಾಧಿದೇವತೆಗಳು—ಇವೆಲ್ಲ ಅವರ ಮನಸ್ಸನ್ನು ಗೊಂದಲದಲ್ಲಿ ಹಾಕುತ್ತವೆ. "ನಿಮ್ಮ ಮತದಲ್ಲಿ ಅದೇಕೆ ಅಷ್ಟೊಂದು ದೇವತೆಗಳು ಆರಾಧನೆಗೆ ?" ಎಂದು ಅವರು ಯಾವಾಗಲೂ ಕೇಳುವ ಪ್ರಶ್ನೆ! ಈ ಪಾಶ್ಚಾತ್ಯರಿಗೆ ಪಾಕಿಸ್ತಾನ್ ಮತ್ತು ಅವರ ಇಸ್ಲಾಂ ಧರ್ಮವನ್ನರಿಯಲು ಅಷ್ಟು ಕಷ್ಟವಾಗುವುದಿಲ್ಲವಂತೆ.

ಲೆಂಬಟನ್ ಕೋಟೆಯನ್ನು ಬಿಟ್ಟು ಬರುವಾಗ, ಬಿಡಲಾರದ ಮನಸ್ಸಿನಿಂದ, ಭಾರವಾದ ಭಾವನೆಗಳನ್ನು ಹೊತ್ತು ಹಿಂತಿರುಗಿದೆವು. ಹಿಂತಿರುಗಿ ಬರುವ ದಾರಿಯಲ್ಲಿ Fog ತುಂಬಿದ್ದು ಪ್ರಯಾಣವು ಬಹಳ ನಿಧಾನವಾಯಿತು.

ಒಂದೆರಡು ಸಲ 2 ಗಜ ಮುಂದೆ ಕಣ್ಣಿಗೆ ಏನೂ ಕಾಣದೆ ವಾಹನ ಸಂಚರಿಸಲು ಸಾಧ್ಯವೇ ಇಲ್ಲವಾಯಿತು---ಇದೂ ಒಂದು ಅನುಭವ.

ಇತಿ ನಿಮ್ಮ
ಚಂದಮ್ಮ.

* * * * *

ಲಂಡನ್
15 – 11 – 1966

ಮುದ್ದು ತಂದೆಯೇ,

........ನಾವು ಮೊನ್ನೆ ಥೇಮ್ಸ್ (Thames) ನದಿಯಲ್ಲಿ ದೋಣಿ ಪ್ರಯಾಣ ಮಾಡಿ ಲಂಡನ್ ಬ್ರಿಡ್ಜ್ (London Bridge) ತನಕ ಹೋದೆವು. ದೋಣಿಯಲ್ಲಿದ್ದ ಮಾರ್ಗದರ್ಶಕನು ನಮಗೆ ನದಿಯ ಅಕ್ಕಪಕ್ಕದಲ್ಲಿರುವ ಎಲ್ಲ ಕಟ್ಟಡಗಳ ವಿಷಯವಾಗಿ ತಿಳಿಸಿದನು. ಹೊಸ ಸ್ಕಾಟ್‌ಲೆಂಡ್‌ಯಾರ್ಡ್ ಕಟ್ಟಡಗಳು! (Scot Land Yard) — ಅವನ್ನು ನೋಡಿ ನನಗೆ ರೋಮಾಂಚನವಾಯಿತು. ಸ್ಕಾಟ್‌ಲೆಂಡ್‌ಯಾರ್ಡ್ ವಿಷಯ ನಾವೆಷ್ಟು ಓದಿದ್ದೇವೆ–ನಮಗೆ ಎಷ್ಟೊಂದು ಗೌರವ ಅಭಿಮಾನವಿದೆ. ಅವರು ಈಗ ಉಪಯೋಗಿಸುವ ವಿಧಾನಗಳು ತೀರ ಆಧುನಿಕ ಉಪಕರಣಗಳಿಂದ – ವಿದ್ಯುಚ್ಛಕ್ತಿ ವಿಜ್ಞಾನ ಶಾಸ್ತ್ರದಿಂದ ಮತ್ತು ಪತ್ತೆ ಹಿಡಿಯುವ ನಾಯಿಗಳ ಮೂಲಕ–ಪತ್ತೆಗೆ ಬೇಕಾದ ಎಲ್ಲ ಸಲಕರಣೆಗಳೂ ಇವೆ – ಹರ್ಕ್ಯೂಲ್ ಪ್ವಾರೋ ಮಾತ್ರ ಇಲ್ಲ !

ವಿಲಿಯಮ್ ದಿ ಕೊಂಕರರ್ (William the Conqueror) ಕಟ್ಟಿಸಿದ ಟವರ್ ಆಫ್ ಲಂಡನ್ (Tower of London) ವರೆಗೆ ಹೋಗುತ್ತಾ ದಾರಿಯಲ್ಲಿ ರಾಣಿ ಎಲಿಝಬೆತ್ II ಮತ್ತು ರಾಣಿ ವಿಕ್ಟೋರಿಯಾ ಇವರು ಕ್ರೀಡೆಗಳನ್ನು ನೋಡಲು ಇಳಿದು ಬರುತ್ತಿದ್ದ ಮೆಟ್ಟಲುಗಳ ಸಾಲುಗಳನ್ನು ನೋಡಿದೆವು. ಇವರಲ್ಲದೆ ಶೇಕ್ಸ್‌ಪಿಯರ್ ಮಹಾಶಯನು ತನ್ನ ನಾಟಕಗಳನ್ನು ಪ್ರದರ್ಶಿಸಲ್ಪಡುತ್ತಿದ್ದ, ಒಂದು ರಂಗಮಂದಿರಕ್ಕೆ ಭೇಟಿಕೊಡುತ್ತಿದ್ದ ಒಂದು ಪುಣ್ಯಭೂಮಿಯನ್ನೂ ನೋಡಿದೆವು.... ಒಲಿವರ್ ಟ್ವಿಸ್ಟ್ (Oliver Twist) ನಲ್ಲಿ ವರ್ಣಿಸಿದ ನೆನ್ಸಿಸ್ಟೆಪ್ಸ್ (Nancy Steps) ನ ದರ್ಶನವೂ ಆಯಿತು.

ಅಂದು ಥೇಮ್ಸ್ ನದಿಯು ಶಾಂತವಾಗಿತ್ತು. ತಣ್ಣಗೆ ಗಾಳಿ ಬೀಸಿ, ಪ್ರಯಾಣವು ಸುಖಕರವಾಗಿತ್ತು. ಸುಮಾರು 58 ಸೇತುವೆಗಳ ಅಡಿಯಲ್ಲಿ ನಮ್ಮ ದೋಣಿಯು

ಮುಂದುವರಿಯಿತು. ಅವುಗಳಲ್ಲಿ ಒಂದು ಸೇತುವೆಯ ಅಡಿಯ ನದಿಯ ನೀರಿನ ಮಧ್ಯದಲ್ಲಿ ಭೂಗರ್ಭದಲ್ಲಿನ ರೈಲು ಮಾರ್ಗವೊಂದು ಹಾದು ಹೋಗುತ್ತಿದೆ ಎಂದು ನೆನೆದರೆ ಅತ್ಯಾಶ್ಚರ್ಯವಾಗುತ್ತದೆ! ಇಂಜಿನಿಯರಿಂಗ್ ಚಾತುರ್ಯ ಎಷ್ಟು ಮುಂದುವರಿದಿದೆ! ಇದುವರೆಗೂ ಯಾವ ವಿಧದ ಅಪಘಾತವೂ ಆಗಿಲ್ಲ ಅಲ್ಲಿ ಎಂದ ಮೇಲೆ ಕಾರ್ಯ ಸಮರ್ಥತೆ ಎಷ್ಟಿದೆ! ಸುರಕ್ಷಿತೆ ಎಷ್ಟಿದೆ !

ಆ ನದಿಯ ಮೇಲೆ ತೇಲುವ ಹಂಸಗಳು ಎಷ್ಟು ರಮಣೀಯವಾಗಿದ್ದುವು ! ಸಂಜೆಯ ತಂಪಿನಲ್ಲಿ ಈ ದಿವ್ಯ ದೃಶ್ಯ ಬಹಳ ಸುಂದರವಾಗಿತ್ತು ! ಶಾಂತಮಯವಾಗಿತ್ತು........

ಮನೆಗೆ ಹಿಂತಿರುಗಿಬರುವಾಗ ಗ್ರೇಸೀ ಫೀಲ್ಡ್ಸ್ (Gracie Fields) ಎಂಬ ಪ್ರಸಿದ್ಧ ಚಲನ ಚಿತ್ರ ತಾರೆ ಆಗಾಗ್ಗೆ ಭೇಟಿ ಕೊಡುತ್ತಿದ್ದ ಪಾನೀಯ ಗೃಹ (Pub) ಒಂದನ್ನು ನೋಡಿದೆವು. ಆಕೆ ಎಷ್ಟು ಪ್ರಖ್ಯಾತಿ ಪಡೆದಿದ್ದಳೋ, ಅಷ್ಟೇ ಉದಾರ (Naid Night) ಸ್ವಭಾವದವಳೂ ಆಗಿದ್ದಳಂತೆ. 'ಪಬ್' ನಲ್ಲಿದ್ದ ಎಲ್ಲ ಜನರಿಗೂ ತನ್ನ ಪರವಾಗಿ ಪೇಯಗಳನ್ನುಹಂಚಿ, ಹಾಡಿ, ಹಾಸ್ಯ ನುಡಿಗಳನ್ನಾಡಿ ಅವರನ್ನು ಸಂತೋಷಪಡಿಸುತ್ತಿದ್ದಳಂತೆ ....ನಾವು ಬಂದ ದಾರಿ ಚಲನ ಚಿತ್ರ ತಾರೆಯರ ಬಡಾವಣೆಯಾಗಿತ್ತು. ಎಲಿಝಬೆತ್ ಟೇಲರ್, ಜೀನ್ ಸಿಮನ್ಸ್ ಮುಂತಾದವರ ವಾಸಗೃಹಗಳಿರುವ ಬಡಾವಣೆ–ಶ್ರೀಮಂತ ಬಡಾವಣೆ........

ಒಮ್ಮೆ ನಾವು ಕೇಂಬ್ರಿಡ್ಜ್‌ನಿಂದ ಕೆಲವು 10 ಮೈಲು ದೂರವಿರುವ ಬೋರ್ನ್ (Bourn) ಎಂಬಲ್ಲಿಗೆ ಸ್ನೇಹಿತರ ಕರೆಯ ಮೇಲೆ ಹೋದೆವು. ಆ ಇಂಗ್ಲಿಷ್ ಮಹನೀಯರು ಇಂಗ್ಲಿಷ್ ಪ್ರೊಫೆಸರರಾಗಿರುವರು. ನಮ್ಮನ್ನು ನಿಲ್ದಾಣದಲ್ಲಿ ಸ್ವಾಗತಿಸಿ ತನ್ನ ಕಾರಿನಲ್ಲಿ ತನ್ನ ಮನೆಗೆ ಕರಕೊಂಡು ಹೋದರು. ದಾರಿಯಲ್ಲಿ ಒಂದು ಪ್ರಾಚೀನ 'ಪಬ್' ಗೆ ಪಾನೀಯಕ್ಕೆ ಕರಕೊಂಡು ಹೋದರು. " The Fox "—(ದಿ ಫೋಕ್ಸ್) ಎಂದು ಆ 'ಪಬ್'ನ ಹೆಸರು. ಅಲ್ಲಿ ಡಿಕ್ ಟರ್ಪಿನ್ (Dick Turpin) ಎಂಬ ಹೆದ್ದಾರಿ ಕಳ್ಳ (ಶ್ರೀಮಂತರ ಶ್ರೀಮಂತಿಕೆಯನ್ನು ಕದ್ದು ಬಡವರಿಗೆ ಹಂಚುತ್ತಿದ್ದ ಕಳ್ಳ) ನು ರಾತ್ರಿ ಸಮಯವನ್ನು ಕಳೆಯುತ್ತಿದ್ದ ಪ್ರಖ್ಯಾತ 'ಪಬ್' ಅಂತೆ ಅದು. ಒಳಗೆ ಹೋದೊಡನೆಯೇ ಜನರು ಪರಿಚಯವಿಲ್ಲದಿದ್ದರೂ ಒಬ್ಬರನ್ನೊಬ್ಬರು ವಿಚಾರಿಸಿ, ಕ್ಷೇಮ ಸಮಾಚಾರ ಕೇಳಿ, ಹವೆಯನ್ನು ಶೀರ್ಷನಿಸಿ, ಮಾತನಾಡುವ ಸ್ನೇಹಪರ ಸ್ವಭಾವಸ್ಥರಾಗಿದ್ದರು. ಇಂಗ್ಲೆಂಡಿನಲ್ಲಿ 'ಪಬ್' ಗಳು ಒಂದು ಒಳ್ಳೆಯ ಸಂಸ್ಥೆ ಎಂದು ನಮ್ಮ ಆತಿಥ್ಯಕಾರರು ಸಮ್ಮತಿಸಿದರು. ಅಲ್ಲಿನ ಜನರು ಮನುಷ್ಯತ್ವವನ್ನು ಕಳೆಯದೆ ಜೀವನವನ್ನು ಸರಿಯಾಗಿ ಜೀವಿಸುವವರು "Chapels are cold ;

Pubs are Warm" (ದೇವಾಲಯಗಳು ತಣ್ಣಗೆ-ಪಾನೀಯ ಗೃಹಗಳು ಜೀವಂತವಾಗಿವೆ) ಎಂದು ಒಬ್ಬ ಸಾಹಿತಿ ಸಾರಿದ ವಾಕ್ಯಕ್ಕೆ ಒಮ್ಮೆ ತುಂಬಾ ವಾಗ್ವಾದವಾಯಿತಂತೆ! 'ಚೆಪಲ್ಸ್' (Chapels) ಅಂದ ತಕ್ಷಣ ನನ್ನ ಮನಸ್ಸು ಹಾರಾಡಿ ಇನ್ನೊಂದು ಪ್ರಸಂಗವನ್ನು ನೆನೆಸಿತು. ಅದನ್ನು ಮತ್ತೊಮ್ಮೆ ಬರೆಯುತ್ತೇನೆ.

ಇತಿ ನಿಮ್ಮ

ಚಂದಮ್ಮ.

* * * * *

ಲಂಡನ್

25 – 11 – 1966

ಮುದ್ದು ಅಮ್ಮ,

ಕ್ರೈಸ್ತ ಆರಾಧನಾ ಮಂದಿರಗಳ Chapels (ಚೆಪಲ್ಸ್) ವಿಚಾರ ಬರೆಯುವೆನೆಂದು ಮಾತುಕೊಟ್ಟಿದ್ದೆ. ಕೇಂಬ್ರಿಡ್ಜ್‌ನ ಕಿಂಗ್ಸ್ ಕೋಲೇಜ್ ಚೇಪಲ್‌ಗೆ ಕೊಟ್ಟ ನಮ್ಮ ಭೇಟಿ – ಎತ್ತರವಾದ 'ಚೇಪಲ್'. ಮಜಬೂತು ಮಾಟದ ಗಾಜಿನ ಚಿತ್ರಿತ ಕಿಟಕಿಗಳು (Massive Stained Glass), ಒಳಗೆ ಹೋದೊಡನೆಯೇ ಮೇಣದ ಬತ್ತಿ ಉರಿಯುವ ಪ್ರಕಾಶ – ಕಣ್ಣಿಗೆ ಎಷ್ಟು ತಂಪಾಗಿತ್ತು! ಒಂದು ಕಡೆ ಗಾಯಕ ವೃಂದದ (Choral) ಹುಡುಗರು ಹಾಡುತ್ತಿದ್ದರು. ಇಂಗ್ಲಿಷ್ ಕವಿ (Byrd) ರಚಿಸಿದ ಮತ್ತು ಜರ್ಮನ್ ಕವಿ ಶೂಟ್ಜ್ (Schutz) ಬರೆದ ಭಕ್ತಿಗೀತೆಗಳನ್ನು ಹಾಡುತ್ತಿದ್ದರು. ಪುರೋಹಿತರು (Priest) ಗಟ್ಟಿಯಾಗಿ ಬೈಬಲ್ಲಿನಲ್ಲಿನ ಕೆಲವು ವಿಷಯಗಳನ್ನು ಓದಿ ಹೇಳಿದರು. ಎಲ್ಲೆಲ್ಲೂ ನಿಶ್ಶಬ್ದತೆಯ ವಾತಾವರಣದಲ್ಲಿ ಅವರ ಮಾತುಗಳು ಒದ್ದೆ ಗೋಡೆಗೆ ಕಲ್ಲು ಎಸೆದಂತಿತ್ತು. (ನೀವು ಆಗಾಗ್ಗೆ ಉಪಯೋಗಿಸುತ್ತಿರುವ ವಾಕ್ಯವಲ್ಲವೇ ಅದು?) ಭಕ್ತರು ಮೂಕರಾಗಿ ಹೃದಯಪೂರಿತವಾಗಿ ದೇವರನ್ನು ಪ್ರಾರ್ಥಿಸುತ್ತಿದ್ದರು. ಮೇಣದ ಬತ್ತಿಯ ದೀಪದ ಬೆಳಕು ಮಂತ್ರ ಮಾಯೆಯನ್ನು ಎರಚಿದಂತಿತ್ತು. ದೈವದ ಇರವು ಸತ್ಯ – ದೈವಿಕತೆ ಮುಂತಾದ ಆಧ್ಯಾತ್ಮಿಕ ವಿಷಯಗಳಲ್ಲಿ ಏಕಾಗ್ರತೆ ಪಡೆಯಲು ಅನುಕೂಲವಾದ ಶಾಂತತೆ – ಹೊರಗಿನ ಡೌಲು ಆಡಂಬರ ಗೊಂದಲದಲ್ಲಿ ಮಾನವನ ಮನಸ್ಸು ಮರ್ಕಟವಾಗಿರುತ್ತದೆ. ಇಂತಹ ಪವಿತ್ರ ಸ್ಥಳಗಳಲ್ಲಿ, ದೇವರ ಸಾನಿಧ್ಯದಲ್ಲಿ ಜೀವನವನ್ನು ಪರಿಶೀಲಿಸಿ ಪರಾಂಬರಿಸಲು ಬೇಕಾದ, ಅಗತ್ಯವಾದ ವಾತಾವರಣ ಸಿಗುತ್ತದೆ. ಅಲ್ಲಿನ ಆ ಶುಚಿತ್ವ, ನಿಶ್ಶಬ್ದತೆ ಹಾಗೂ ಪೂಜೆಯ ವಿಧಾನ ನಮ್ಮ ದೇವಾಲಯಗಳಿಂದ ಎಷ್ಟು ಬೇರೆಯಾಗಿದೆ........ ನಮ್ಮ ದೇವಾಲಯಗಳಲ್ಲಿನ ಗಲಭೆ–ಜನರ ಮಾತುಕತೆಗಳ ಗಲಾಟೆ–ತೆಂಗಿನ ಕಾಯಿ

ಗಳನ್ನು ಒಡೆಯುವ ಶಬ್ದ–ಹಣ್ಣು ಕಾಯಿ ಅರ್ಪಿಸುವ ವೇಳೆ ಆಗುವ ಗಲೀಜು–ದುರ್ವಾಸನೆ–ಅವ್ಯವಸ್ಥೆ ಎಲ್ಲವೂ ಬೇರೆ–ಆದರೆ ಧೂಪದ ಹೊಗೆ, ಕರ್ಪೂರದ ಆರತಿಯ ಸುವಾಸನೆ ಮಾತ್ರ ಎಲ್ಲವನ್ನೂ ಮರೆಯುವಂತೆ ಮಾಡುತ್ತದೆ. ಗಂಟೆಗಳ ನಾದ–ಮಂತ್ರಗಳ ಘೋಷ ಎಲ್ಲವೂ ದೇವಾಲಯದಲ್ಲಿನ ನಿತ್ಯಕರ್ಮಗಳು. ಹಿಂದೂ ಜನರಿಗೆ ದೇವಾಲಯಗಳು ಸಾಮಾಜಿಕ ಸಂಸ್ಥೆಗಳಾಗಿವೆ. ಸಮಯವನ್ನು ಕಳೆಯುವ ವಿಧಾನ –ಮಿತ್ರರನ್ನು ಭೇಟಿಯಾಗುವ ಸ್ಥಳ .... ಲೋಕಾಭಿರಾಮವಾಗಿ ಮಾತನಾಡುವ ಚರ್ಚಾಕೂಟದ ಎಡೆ – ದೇವಸ್ಥಾನಗಳಲ್ಲಿ ಪುರಾಣ ಕಥೆಗಳನ್ನು ಹೇಳುವ ಹರಿ· ಕೀರ್ತನೆಕಾರರ ಭಾಷಣಗಳನ್ನು ಕೇಳಲು ಬಿಡುವಿರುವ ಜನರು ಕಿಕ್ಕಿರಿದು ನೆರೆಯುತ್ತಾರೆ. ಅಂತಹ ಜನರಿಗೆ ಸಂಜೆಯ ವಿನೋದದ ಜಾಗ ನಮ್ಮ ದೇವಸ್ಥಾನ. ಜಾತಿ ಭೇದ, ಮತಭೇದ, ವಯಸ್ಸಿನ ಭೇದವಿಲ್ಲದೆ ವಿಧವಿಧವಾದ ಜನರನ್ನು ದೇವಾಲಯದಲ್ಲಿ ಕಾಣಬಹುದು. ಸೋಮಾರಿಗಳೂ, ಅನಾಥರೂ, ರೋಗಿಗಳೂ, ನಿರ್ಗತಿಕರೂ ನಿರುದ್ಯೋಗಿಗಳೂ ಸಾಮಾನ್ಯವಾಗಿ ಸಮಯ ಕಳೆಯುವ ಸ್ಥಳ–ದೇವಾಲಯಗಳು. ತಮ್ಮ ದಿನನಿತ್ಯದ ಸಪ್ಪೆ ಜೀವನದಿಂದ ಪಾರಾಗಲು, ಸ್ವತಂತ್ರವಾಗಿ ಓಡಾಡಲು ದೇವಾಲಯಗಳು ಅನುಕೂಲವಾಗಿವೆ. ಪ್ರಾರ್ಥಿಸಬೇಕಂತಿಲ್ಲ. ದೇವರ ದರ್ಶನಕ್ಕೆ ಬರುವ ಜನಸಂದಣಿಯನ್ನು ನೋಡುವುದರಲ್ಲೇ ಹೊತ್ತು ಹೋಗುತ್ತದೆ. ದೇವಾಲಯದಲ್ಲಿನ ಉತ್ಸವದ ಸಮಯದಲ್ಲಿ ಎಲ್ಲಿಲ್ಲದ ಆನಂದ–ಸಡಗರ–ಸಂಭ್ರಮ.

ಪೂಜೆಗೆ ಹಿಂದೂ ಜನರು ದೇವಾಲಯಕ್ಕೇ ಹೋಗಬೇಕಂತಿಲ್ಲ. ಮನೆಮನೆಗಳಲ್ಲೇ ದೇವರಿಗಾಗಿ ಮೀಸಲಾಗಿರುವ ಸ್ಥಳ ಒಂದು ಇದ್ದೇ ಇರುತ್ತದೆ. ಎಷ್ಟು ಚಿಕ್ಕ ಮನೆಯಾದರೂ ದೇವರಿಗೆ ಒಂದು ಮೂಲೆ ಅಥವಾ ಗೋಡೆಯ ಮೇಲೆ ಒಂದು ಜಾಗವಿದ್ದೇವಿರುತ್ತದೆ. ಭವಿಷ್ಯಕ್ಕಾಗಿ–ಸುಖಶಾಂತಿಗಾಗಿ–ಕೃತಜ್ಞತೆಗಾಗಿ–ಮನಸ್ಸಿನ ಕಳವಳ ಗೊಂದಲದಲ್ಲಿ – ಭ್ರಾಂತಿಯಾದಾಗ–ಆಸೆ ಆಕಾಂಕ್ಷೆಗಳನ್ನು ತಿಳಿಯಪಡಿಸಲು –ಚಿಂತೆ–ಕೊರಗುವಿಕೆಯಲ್ಲಿ–ಮಾನಸಿಕ ಒತ್ತಡವಾದಾಗ – ಇತ್ಯಾದಿ ಜೀವನದಲ್ಲಿನ ಹಲವಾರು ಸಂದರ್ಭಗಳಲ್ಲಿ ಹಿಂದೂಜನರು ತಮ್ಮ ಇಷ್ಟದೇವರ ಮುಂದೆ ಕುಳಿತು ಅಥವಾ ನಿಂತುಕೊಂಡು ಮನಸ್ಸಿನ ಎಲ್ಲಾ ದುಗುಡಗಳನ್ನು ಹೇಳಿಕೊಂಡು, ತಮ್ಮ ಹೃದಯದ ನಿಶ್ಶಬ್ದತೆಯಲ್ಲಿ ಪೂಜಿಸಿ ತಮ್ಮ ಇಷ್ಟಮಂತ್ರಗಳನ್ನು ಮಂತ್ರಿಸಿ, ತಮಗೆ ಬೇಕಾದ ಆತ್ಮಶಾಂತಿಯನ್ನು ಪಡೆಯುತ್ತಾರೆ. ಪವಿತ್ರವಾದ ಪ್ರಾರ್ಥನೆಗೆ ಮನಸ್ಸು ಹೃದಯ ಬೇಕೇ ಹೊರತು ದೇವಾಲಯಗಳ ಅಗತ್ಯವಿಲ್ಲ. ಆದ್ದರಿಂದ ನಮ್ಮಲ್ಲಿ ದೇವಾಲಯಗಳು ಸಾಮಾಜಿಕ ಸಂಸ್ಥೆಗಳಾಗಿವೆ. ಆದರೆ ಕ್ರೈಸ್ತಮತದ ಭಕ್ತರಿಗೆ ಇಗರ್ಜಿಗಳೇ ಪ್ರಾರ್ಥನೆಯ ಸ್ಥಳವಾಗಿದೆ. ಒಮ್ಮೆ ಕ್ರೈಸ್ತ ಮಂದಿರದೊಳಗೆ ಹೋದರೆ ಅಲ್ಲಿನ ಶಾಂತ ವಾತಾವರಣ ನಮ್ಮನ್ನು ಕವಿದು ನಮಗೆ ದೈವಿಕ ಜಗತ್ತಿನ ದರ್ಶನವನ್ನು ನೀಡುತ್ತದೆ.

ಅಂದು ಆ ಕಿಂಗ್ಸ್ ಚೇಪಲ್‌ನಲ್ಲಿ 16 ಚಿಕ್ಕ ಹುಡುಗರನ್ನು, ಸಂಗೀತದಲ್ಲಿ ಪ್ರತಿಭೆ ಪಡೆದವರನ್ನು – ಪ್ರಾರ್ಥನೆಯ ಪದಗಳನ್ನು ಹಾಡುವುದಕ್ಕಾಗಿ ಆರಿಸಿಕೊಂಡಿದ್ದರು. ಈ ಹುಡುಗರು ಶ್ರದ್ಧೆಯಿಂದ, ಮುತುವರ್ಜಿಯಿಂದ ತಮ್ಮ ಕರ್ತವ್ಯವನ್ನು ಪಾಲಿಸಿ, ಲೌಕಿಕದ ಎಲ್ಲ ಸೆಳೆತಗಳಿಂದ ದೂರವಾಗಿ, ತ್ಯಾಗಭಾವದಿಂದ, ಭಕ್ತಿಯಿಂದ ತಮ್ಮ ಜೀವನವನ್ನೇ ಈ ಮಂದಿರದ ಪ್ರಾರ್ಥನೆಗಾಗಿ ಮುಡಿಪಾಗಿಡುವುದು ಅತ್ಯಂತ ವಿಶೇಷ ಸಂಗತಿ–ಹುಡುಗರು–ತಮ್ಮ ವಯಸ್ಸಿನ ಸಹಜವಾದ ತುಂಟತನವನ್ನು ಬಿಟ್ಟು –ಈ ರೀತಿಯ ಜೀವನ ಕ್ರಮದಲ್ಲಿ ಆಸಕ್ತಿ, ಆನಂದ, ತೃಪ್ತಿಯನ್ನು ಪಡೆಯುವುದು ಗಮನಾರ್ಹವಾದ ವಿಷಯವಲ್ಲವೇ ? ಈ ಹುಡುಗರು ಇತರ ವಿಷಯಗಳಲ್ಲಿ ಸಾಮಾನ್ಯರಂತೆಯೇ ಇದ್ದಾರೆ. ಆದರೆ ಈ ತರಬೇತು ಅವರ ಜೀವನದಲ್ಲಿ ಹೊಗಳುವಂತಿದೆ.... ನಿಮಗೆ, ಅಮ್ಮ , ನಿಮಗೆ ಏಕೆ ಈ ಪುರಾಣ ಬರೆಯುತ್ತಿದ್ದೇನೆ ನನಗೇ ತಿಳಿಯದು. ಕ್ಷಮಿಸಿ. ನೀವು ತಿಳಿದವರು.. ಆಧ್ಯಾತ್ಮಿಕ ವಿಚಾರವಾಗಿ ಭಾಷಣಗಳನ್ನು ಕೊಡುತ್ತಿರುವವರು– 'ಜ್ಞಾನೇಶ್ವರಿ' ಓದಿ ಹೇಳಿ ಎಲ್ಲರನ್ನೂ ಮರುಳು ಮಾಡುವ ಶಕ್ತಿ ಪಡೆದವರು. ಆದರೂ ನನ್ನ ಮನಸ್ಸಿಗೆ ಬಂದುದನ್ನು ನಿಮ್ಮ ಮುಂದೆ ಹೇಳಿಕೊಂಡೆ.

ಕ್ರೈಸ್ತ ದೇವಾಲಯ-ದೇವಸ್ಥಾನಗಳ ವಿಚಾರವಾಗಿ ಮನಸ್ಸು ಓಡುತ್ತಿದ್ದಂತೆ ಸ್ನೇಹಿತ ಇಂಗ್ಲಿಷ್ ಕವಿಯೊಬ್ಬರ ಜ್ಞಾಪಕವಾಯಿತು. ಅವರು ನಮ್ಮ ಭಾರತ, ಭಾರತೀಯ ಲಲಿತ ಕಲೆ, ಮತ ಧರ್ಮಗಳು, ಅಧ್ಯಾತ್ಮಿಕತೆ ಇವುಗಳಲ್ಲಿ ತುಂಬಾ ಆಸಕ್ತಿ ಪಡೆದ ವ್ಯಕ್ತಿ. ಅವರು ಒಮ್ಮೆ – "ನಿಮ್ಮ ದೇವಾಲಯಗಳಲ್ಲಿ ಜೀವನದ ತಿರುಳು ಎದ್ದು ಕಾಣುತ್ತಿದೆ. ನಿಮ್ಮ ಹೆಸರುಗಳಲ್ಲಿ ಎಷ್ಟೊಂದು ಅರ್ಥವಿದೆ ! ಇಂಗ್ಲಿಷರ ಟೋಮ್, ಡಿಕ್ ಮತ್ತು ಹೆರ್ರಿ ಇದ್ದ ಹಾಗಿಲ್ಲ" ಎಂದಿದ್ದರು. ನಮ್ಮ ಸಂಸ್ಕೃತ ಭಾಷೆಯನ್ನು ಸಾಹಿತ್ಯ ದೃಷ್ಟಿಯಿಂದ ಹೊಗಳಿದ್ದರು. ಇತ್ತೀಚೆಗೆ ಇಂಗ್ಲೀಷ್ ಭಾಷೆ ತನ್ನ ಉನ್ನತ ಸ್ಥಾನವನ್ನು ತಪ್ಪಿಸಿಕೊಳ್ಳುತ್ತಿದೆ ಎಂದು ಬೇಸರಿಸಿದ್ದರು. "ಭಾಷೆಯು ಬದಲಾಯಿಸಿ ಅರ್ಥಮಾಡಿಕೊಳ್ಳುವುದೇ ಕಷ್ಟವಾಗಿದೆ. Reformation (ರಿಫಾರ್ಮೇಶನ್) ಆದ ಮೇಲೆ ನಮ್ಮ ಸಂಸ್ಕೃತಿಯನ್ನೆಲ್ಲ ಕಳೆದುಕೊಂಡಿದ್ದೇವೆ–" ಎಂದು ಅಂದಿದ್ದರು.

ಬೇರೆ ಬೇರೆ ವ್ಯಕ್ತಿಗಳು ಜೀವನವನ್ನೂ ಜೀವಿತವನ್ನೂ ಬೇರೆ ಬೇರೆ ದೃಷ್ಟಿಯಿಂದ ಕಾಣುವುದೂ ಒಂದು ಅನುಭವ—

ಅಲ್ಲವೇ ಅಮ್ಮಾ ?

ಇತಿ ನಿಮ್ಮ

ಚಂದಮ್ಮ.

* * * *

ಲಂಡನ್
6 - 12 - 1966

ಆತ್ಮೀಯರೇ,

1966ನೇ ಡಿಸೆಂಬರ್ ಒಂದರಂದು ಬಿ. ಬಿ. ಸಿ. ಯ (B. B. C. – British Broadcasting Corporation) ಟಿ. ವಿ. (Television) ಶಾಖೆಯು ತನ್ನ ಅಂತರ ರಾಷ್ಟ್ರೀಯ ಕಾರ್ಯಕ್ರಮದಲ್ಲಿ ನಮ್ಮನ್ನು 'ಟೆಲಿವ್ಯಾಯ್ಸ್' (Televise) ಮಾಡಿದರು. ಬಿ. ಬಿ. ಸಿ. ಯ ಈ ಅಂತರರಾಷ್ಟ್ರೀಯ ಕಾರ್ಯಕ್ರಮವು ಮುಖ್ಯವಾದುದು. ಯೆಹುದಿ ಮೆನುಹಿನ್, ನುರೆಯೆಫ್, ಮಾರ್ಗೋ ಫೊಂಟೇನ್ ಮೊದಲಾದ ಪ್ರಸಿದ್ಧ ಕಲಾವಿದರ ಕಾರ್ಯಕ್ರಮಗಳನ್ನು ಇದೇ ಕಾರ್ಯಕ್ರಮದಲ್ಲಿ ಪ್ರಚುರಗೊಳಿಸುತ್ತಾರೆ. ಭಾರತೀಯ ನೃತ್ಯ ಪ್ರದರ್ಶನದ ಕಾರ್ಯಕ್ರಮ ಇದರಲ್ಲಿ ಏರ್ಪಡಿಸಿದುದು ಇದೇ ಮೊದಲನೆಯ ಬಾರಿ. ಬಿ. ಬಿ. ಸಿ. ಯ ಸ್ಟುಡಿಯೋದಲ್ಲಿ ನಮಗಾಗಿ ಸ್ಪೆಷಲ್ ಪ್ರೊಜೆಕ್ಷನ್ (Special Projection) ಏರ್ಪಾಡಾಗಿತ್ತು. ಆ ಸ್ಟುಡಿಯೋ ವಿಶಾಲ ವಾಗಿದ್ದು ಆಧುನಿಕ ಸರಂಜಾಮುಗಳಿಂದಲೂ, ಕುಶಲರಾದ ತಾಂತ್ರಿಕ ತಜ್ಞರಿಂದಲೂ ಕೂಡಿತ್ತು. ಚಿತ್ರದ ಆರಂಭದಲ್ಲಿ ನಮ್ಮ ಪರಿಚಯ ಮಾಡಿಕೊಡುತ್ತಾ........

"........ಅವರು ನೃತ್ಯ ಪಾಠ ಹೇಳಿಕೊಡುವ ವಿಧಾನವನ್ನು ವೀಕ್ಷಿಸುವ ಮುನ್ನ ಅವರ ನೃತ್ಯದ ಒಂದು ರೀತಿ ನೋಡಿರಿ...." ಎನ್ನಲು ನಾವಿಬ್ಬರೂ ಒಂದು ಚಿಕ್ಕ ನೃತ್ಯವನ್ನು ಮಾಡಿದೆವು. ಅದರಲ್ಲಿನ ಪ್ರತಿಯೊಂದು ಸೂಕ್ಷ್ಮವಾದ ಚಲನೆ....ಹಸ್ತ ಗಳು....ಪದ ವಿನ್ಯಾಸ....ಅಭಿನಯ....ಭಂಗಿಗಳು... ನೃತ್ಯ ಜೋಡಣೆ ಮುಂತಾದುವು ಗಳನ್ನು ಬಹಳ ಸೂಕ್ಷ್ಮವಾಗಿ ಚಿತ್ರಿಸಿದರು. ಆಮೇಲೆ ಅವರು ಮಾತನಾಡುತ್ತಾ— "ಇಂಗ್ಲೆಂಡಿನಲ್ಲಿ ಸರ್ ಫ್ರೆಡ್ರಿಕ್ ಎಶ್ಟನ್ (Sir Frederic Ashton) ಅವರು ಹೇಗೆ ದೊಡ್ಡ ನೃತ್ಯ ರಚನಕಾರರೆಂದು (Choreographer) ಪರಿಗಣಿಸಲ್ಪಡುತ್ತಿರು ವರೋ ಹಾಗೆಯೇ ಭಾರತದಲ್ಲಿ ಪ್ರೊ. ರಾಯರು ಹಿರಿಯ ನೃತ್ಯ ರಚನಕಾರರೆಂದು ಪರಿಗಣಿಸಲ್ಪಡುತ್ತಾರೆ ...ಒಬ್ಬ ಇಂಗ್ಲೀಷ್ ಬ್ಯಾಲೆ ವಿಮರ್ಶಕರು 'ಮಿಸ್ ದೇವಿ' ಯನ್ನು ಕುರಿತು ಹೀಗೆ ಅಂದಿದ್ದಾರೆ—'ಮಿಸ್ ದೇವಿಯವರ ನರ್ತನದಲ್ಲಿ ಕಾರ್ಸಾ ವಿನ್ನಾರವರ (Karsavina) ಸೊಬಗೂ, ಫೊಂಟೇನ್‌ರವರ (Fonteyn) ಮಾನವೀ ಯತೆಯೂ ಮತ್ತು ಉಲನೋವಾರವರ (Ulanova) ಸ್ತ್ರೀತ್ವವೂ (Femininity) ಕೂಡಿ ಇವೆ' .... ಎಂದು ಹೇಳಿದರು. ಇದಾದ ಮೇಲೆ ನಮ್ಮ ಸಂದರ್ಶನವನ್ನು ಮಾಡಿದರು. ಈ ಸಂದರ್ಶನದಲ್ಲಿ ಅವರು ಕೇಳಿದ ಮುಖ್ಯ ಪ್ರಶ್ನೆಗಳು ಯಾವು ವೆಂದರೆ—"ಭಾರತೀಯ ನೃತ್ಯ ಚಲನೆಗಳಿಗೂ ಪಾಶ್ಚಾತ್ಯ ಬ್ಯಾಲೆ ಚಲನೆಗಳಿಗೂ ಹೋಲಿಕೆಯಿದೆಯೇ?....ಭಾರತೀಯ ನೃತ್ಯಕಲೆ ಒಂದು ಕಲಾತ್ಮಕ ಭಾಷೆಯೇ ?....

ಯೂರೋಪಿನಲ್ಲಿ ನಿಮ್ಮ ಕಲೆಯ ವಿಚಾರವಾಗಿ ನಮಗಿರುವ ನಂಬಿಕೆಯೆಂದರೆ, ಅದು ಸಾಂಪ್ರದಾಯಿಕ ಕಲೆಯಾದ್ದರಿಂದ ಅದಕ್ಕೆ ಚೇತನಾಶಕ್ತಿ ಇಲ್ಲ – ಅದೊಂದು ನಿರ್ಜೀವ ಕಲೆ....ಎಂದು. ನೀವಿಲ್ಲಿ ಬಂದಿರುವ ಮುಖ್ಯ ಉದ್ದೇಶವೇನು ?....ನಿಮ್ಮ ಕಾರ್ಯರಂಗದಲ್ಲಿ ಏನೇನು ಕೆಲಸ ಮಾಡಬೇಕೆಂದಿರುವಿರಿ?....ಇತ್ಯಾದಿ. ಇವಕ್ಕೆಲ್ಲ ಸಮಂಜಸವಾದ ಉತ್ತರ ಕೊಟ್ಟ ಮೇಲೆ, ಕೆಮೆರಾವು' ಮೆಲ್ಲನೆ ನಮ್ಮ ಲಂಡನ್ನಿನ ನೃತ್ಯ ಶಾಲೆಯಲ್ಲಿನ ವಿದ್ಯಾರ್ಥಿಗಳನ್ನು ತೋರಿಸಿತು. ಈ ನಮ್ಮ ದೊಡ್ಡ ನೃತ್ಯ ತರ ಗತಿಯಲ್ಲಿ ನಮ್ಮ ಅಂತರರಾಷ್ಟ್ರೀಯ ವಿದ್ಯಾರ್ಥಿಗಳೆಲ್ಲ ಪತಿಯವರ ಮತ್ತು ನನ್ನ ನಿರ್ದೇಶನದಂತೆ ಕತ್ತು ಚಲನೆ ಮಾಡುತ್ತಿರುವ ಅಭ್ಯಾಸ ನೋಡಲು ತುಂಬಾ ಚೆನ್ನಾ ಗಿತ್ತು. ಅಲ್ಲದೆ ಒಂದು 'ಅಡವು' ವನ್ನು ಸೂಕ್ತ ರೀತಿಯಲ್ಲಿ ಹೇಗೆ ಮಾಡಬೇಕು – ಎಂದು ಪತಿಯವರು ಹೇಳಿಕೊಡುವುದನ್ನು ಚಿತ್ರದಲ್ಲಿ ಕಂಡೆವು. ಇವನ್ನು ತೋರಿಸು ವಾಗ್ಗೆ ವ್ಯಾಖ್ಯಾನಕರ್ತರು (Commentator) ಈ ರೀತಿ ನುಡಿದರು :– "ಭಾರತೀಯ ನೃತ್ಯಗಳನ್ನು ಕಲಿಯುವುದರಲ್ಲಿ ಈ ವಿದ್ಯಾರ್ಥಿಗಳ ನಿರಂತರ ವಿಶೇಷ ಆಸಕ್ತಿ ಉತ್ಸಾಹ ಗಳಿಗೆ ಮುಖ್ಯ ಕಾರಣ ಪ್ರೊ. ರಾಯರ ಅಪ್ರತಿಮ ಶ್ರದ್ಧೆ ಮತ್ತು ಅವರ ಶಕ್ತಿಯುತ ವಾದ ಪಾಠ ಹೇಳಿ ಕೊಡುವ ರೀತಿಯ ಮಹತ್ವ. (Dynamism as a teacher) (ಈ ಮಾತನ್ನು ಕೇಳಿದೊಡನೆ ನನ್ನ ಕಣ್ಣಲ್ಲಿ ಕೃತಜ್ಞತೆಯ ಕಣ್ಣೀರು ತುಂಬಿತು. ಅವರು ಹೇಳಿದ ಮಾತು ಅಕ್ಷರಶಃ ಸತ್ಯವಾದುದು. ಪತಿಯವರು ಜೀವಮಾನದಲ್ಲಿ ಬಿಡುವಿಲ್ಲದೆ ವಿದ್ಯಾರ್ಥಿಗಳಿಗಾಗಿ ತಮ್ಮ ತನು–ಮನ–ಧನವನ್ನು ಸವೆಯಿಸಿ ಹೆಣಗಾಡಿ ದುದರ ಫಲವೆಂಬಂತಿತ್ತು – ಈ ಮಾತು. B. B. C. ಯವರು ಹೇಳಿದ ಈ ಮಾತಿಗೆ ಅತ್ಯಂತ ಮಹತ್ತರವಾದ ಬೆಲೆ ಇದೆ)

........ಆಮೇಲೆ ಕೆಮೆರಾ ಸದ್ದಿಲ್ಲದೆ ನಮ್ಮ ತರಗತಿಯ ಬೇರೆ ಬೇರೆ ಅಂಶ ಗಳನ್ನು ತೋರಿಸುತ್ತದೆ. ಸಂಗೀತವಿಲ್ಲ – ಯಾವ ಹಿನ್ನೆಲೆ ಧ್ವನಿಯೂ ಇಲ್ಲ. ನಮ್ಮ ವಿದ್ಯಾರ್ಥಿಗಳು ಮಾತನಾಡುತ್ತಿರುವುದು ಮಾತ್ರ ಕೇಳಿ ಬರುತ್ತದೆ. "ಯಾವ ಕಾರಣ ಕ್ಕಾಗಿ ನೀವು ಭಾರತೀಯ ನೃತ್ಯಕಲೆಯನ್ನು ಅಭ್ಯಸಿಸುತ್ತೀರಿ?" ಎಂಬ ಪ್ರಶ್ನೆಗೆ ಒಬ್ಬೊಬ್ಬರು ಒಂದೊಂದು ವಿಧವಾದ ಉತ್ತರ ಕೊಡುತ್ತಿರುವ ಕಂಠಧ್ವನಿ ಮಾತ್ರ ಕೇಳಿ ಬರುತ್ತದೆ. ಒಬ್ಬಳು—"ನಾನು ಈಗ ತಾನೆ ದಕ್ಷಿಣ ಭಾರತದ ಅದ್ಭುತ ದೇವಾ ಲಯಗಳನ್ನು ಕಂಡು ಬಂದೆ. ನರ್ತಿಸುವ ಮದನಿಕೆಯರ ವಿಗ್ರಹಗಳನ್ನು ಕಂಡೆ. ಅದೇ ನಾನು ದಕ್ಷಿಣ ಭಾರತದ ನೃತ್ಯ ಕಲೆಗಾಗಿ ಪಡೆದ ಸ್ಫೂರ್ತಿ" ಎಂದು ಹೇಳಿದಳು. ಇನ್ನೊಬ್ಬಳು—"ಬ್ಯಾಲೆಯಲ್ಲಿ ಅರ್ಥವಿಲ್ಲದ ಚಲನೆಗಳಿವೆ. ಭಾರತೀಯ ನೃತ್ಯದಲ್ಲಿನ ಶಾಸ್ತ್ರಬದ್ಧ ಚಲನೆಗಳು ಅರ್ಥಗರ್ಭಿತವಾಗಿವೆ" ಎಂದಳು. ಮತ್ತೊಬ್ಬಳು—"ನಾನು ಇಡೀ ದಿನ ಬಿಡುವಿಲ್ಲದೆ ಕೆಲಸ ಮಾಡುತ್ತಿರುತ್ತೇನೆ. ನನ್ನ ಮನಸ್ಸಿಗೂ, ದೇಹಕ್ಕೂ ಅಗತ್ಯವಿದ್ದ ವಿರಾಮ ಭಾರತೀಯ ನೃತ್ಯ ಮಾಡುತ್ತಿದ್ದಂತೆ ಸಿಕ್ಕುತ್ತದೆ. ಕಾರಣ, ಈ

ನೃತ್ಯ ಮಾಡುತ್ತಿರುವಾಗ ಮನಸ್ಸು ನೃತ್ಯದ ಮೇಲಲ್ಲದೆ ಬೇರೆಲ್ಲಿಯೂ ಹರಿದಾಡುವುದಿಲ್ಲ. ಮನಸ್ಸಿನ ತಾಪತ್ರಯಗಳನ್ನು ದೂರ ಮಾಡಲು ಭಾರತೀಯ ನೃತ್ಯಾಭ್ಯಾಸ ಅತ್ಯುತ್ತಮವಾದುದು" ಎಂದು ನುಡಿದಳು. ಈ ವಿದ್ಯಾರ್ಥಿಗಳು ಸಮಾಜದ ಬೇರೆ ಬೇರೆ ಪಂಗಡಗಳಿಂದ ಬಂದವರು. ಕೆಲವರು ಭಾರತೀಯರು, ಮತ್ತೆ ಕೆಲವರು ಆಗ್ನೇಯ ಏಷಿಯಾದಿಂದ (South East Asia) ಬಂದವರು, ಆದರೆ ಹೆಚ್ಚಾಗಿ ಯೂರೋಪಿನವರು- – ಬ್ರಿಟಿಷ್, ಫ್ರೆಂಚ್, ಜರ್ಮನ್ ಇತ್ಯಾದಿ. ಇವರೆಲ್ಲರೂ ಭಾರತೀಯ ಸಂಸ್ಕೃತಿಯನ್ನು ಮೆಚ್ಚಿದವರು. ನಮ್ಮ ಯೋಗ, ಸಂಸ್ಕೃತ ಭಾಷೆ ಮುಂತಾದುವುಗಳಲ್ಲಿ ಅಭಿಲಾಷೆ ಇದ್ದವರು.

ಹದಿನೈದು ನಿಮಿಷಗಳವರೆಗೆ ಈ ಚಿತ್ರಣ ನಡೆದ ಮೇಲೆ ಎಂಟು ನಿಮಿಷಗಳವರೆಗೆ ಈ ಟಿ. ವಿ. ಚಿತ್ರದ ನಿರ್ಮಾಪಕರಿಗೂ, ಇಂದಿನ ಪ್ರಸಿದ್ಧ ಬ್ಯಾಲೆ ವಿಮರ್ಶಕರಿಗೂ ಒಂದು ಚರ್ಚೆ ಆಗುತ್ತದೆ. ವಿಷಯ – ಬ್ಯಾಲೆ ಮತ್ತು ಭಾರತೀಯ ನೃತ್ಯಗಳಲ್ಲಿ ಭೇದಭಾವ' – ಈ ಎರಡೂ ಶಾಸ್ತ್ರೀಯ ನೃತ್ಯಗಳ ಮೂಲ, ಅದರ ಸ್ಫೂರ್ತಿ – ನೃತ್ಯ ಜೋಡಣೆ – ಇತ್ಯಾದಿ. ಕೊನೆಗೆ ಚಿತ್ರ ನಿರ್ದೇಶಕರು ಈ ಮಾತುಗಳನ್ನಾಡುತ್ತಾರೆ. – "ಇಂದಿನವರೆಗೆ ಈ ಭಾರತೀಯ ನೃತ್ಯ ಕಲೆಯನ್ನು ಕುರಿತು ಇಲ್ಲಿನ ವ್ಯವಸಾಯಿ ನೃತ್ಯಗಾರರು ತೋರಿಸುವ ಅನಾಸಕ್ತಿ ಕಂಡರೆ ಆಶ್ಚರ್ಯವಾಗುತ್ತದೆ. ಪಾಶ್ಚಾತ್ಯ ಬ್ಯಾಲೆ ಮತ್ತು ಭಾರತೀಯ ನೃತ್ಯ ಅಜಗಜಾಂತರವೆಂದೆಣಿಸಿದರೂ ಭಾರತದ ನೃತ್ಯ ನಾಟಕಗಳಿಂದ ಪಾಶ್ಚಾತ್ಯರು ಏನನ್ನೂ ಕಲಿತುಕೊಳ್ಳಲಾರರೇ ? ಈ ಕಲಾವಿದರಿಬ್ಬರು ಪ್ರದರ್ಶಿಸಿದ ನೃತ್ಯ ನಾಟಕಗಳನ್ನಾಗಲೀ, ಉಪನ್ಯಾಸ ಪ್ರದರ್ಶನಗಳನ್ನಾಗಲೀ ಒಬ್ಬ ಪ್ರಖ್ಯಾತ ಬ್ಯಾಲೆ ನರ್ತಕನೂ ನೋಡಿಲ್ಲವಂತೆ ! ಇವರಿಬ್ಬರು ನೃತ್ಯ ಕಲೆಯ ಹೊಸತಾದ ಜಗತ್ತೊಂದನ್ನೇ ನಮ್ಮ ಕಣ್ಣುಮುಂದೆ ತೆರೆಯುತ್ತಿರುವಾಗ ಅದರ ಉಪಯೋಗವನ್ನು ಪಡೆದು ಮೆಚ್ಚುವ ಸುಸಂದರ್ಭಗಳನ್ನು ಕಳೆದುಕೊಳ್ಳುವುದನ್ನು ನೋಡಿದರೆ ನೃತ್ಯಕಲೆಯ ಪರಸ್ಪರ ವಿಚಾರಗಳನ್ನು ವಿಸ್ತರಿಸಿಕೊಳ್ಳುವ ಅವಕಾಶವೇ ಇಲ್ಲದಂತಾಗುತ್ತದೆ. ಯೆಹೂದಿ ಮೆನುಹಿನರಂತರ ಮಹಾನುಭಾವರು ಬ್ಯಾಲೆ ಜಗತ್ತಿನವರಿಗೆ ಭಾರತ ನೃತ್ಯಗಳು ಪಾಶ್ಚಾತ್ಯಕ್ಕೆ ನೀಡುವ ನಿಧಿಯ ವಿಷಯ ಕಣ್ತೆರೆಯುವಂತೆ ಮಾಡಬೇಕು".

ಈ ಇಪ್ಪತ್ತೈದು ನಿಮಿಷಗಳ ಟಿ. ವಿ. ಕಾರ್ಯಕ್ರಮ ನಮಗೂ, A. M. C. ಯವರಿಗೂ ವಿಶೇಷ ಖ್ಯಾತಿಯನ್ನು ತಂದಿತು........

ಇತಿ ನಿಮ್ಮ

ಚಂದಮ್ಮ.

* * * * *

ಲಂಡನ್
10 – 12 – 1966

ಪ್ರಿಯ ತಂದೆಯೇ,

........ತಮ್ಮ Overseas channels ಕಾರ್ಯಕ್ರಮದಲ್ಲಿ B. B. C. ಟಿ. ವಿ. ಯವರು ನಮ್ಮನ್ನು ನಮ್ಮ ವಿದ್ಯಾರ್ಥಿಯರೊಡನೆ Shoot ಮಾಡಿದರು. ಅದರೊಳಗೆ ನಾವು ಪಾಠ ಹೇಳಿಕೊಡಲು ಉಪಯೋಗಿಸುವ ಮರದ ತುಂಡು, ತಟ್ಟುಕೋಲು ಇವನ್ನು ಪ್ರದರ್ಶಿಸಿದರು. ಪತಿಯವರು ಒಂದು 'ಜತಿ' ಯನ್ನು ಬಾರಿಸಿದರು. ಅದನ್ನು ನಾನು ನರ್ತಿಸಿದೆ. ಕೆಮೆರಾ ಕಾಲು ಚಲನೆಯಿಂದ ತಲೆಯವರೆಗೂ ಎಲ್ಲ ಚಲನೆಗಳನ್ನು ನಿಧಾನವಾಗಿ ತೋರಿಸಿತು. ವಿದ್ಯಾರ್ಥಿಯರು ಕೆಲವು ಮೊದಲ ನೃತ್ಯ ಅಭ್ಯಾಸಗಳನ್ನು ಮಾಡಿದರು. ನಾವು ಹಸ್ತಗಳನ್ನೂ ಅವುಗಳ ವಿನಿಯೋಗವನ್ನೂ ಪ್ರದರ್ಶಿಸಿ ಕಾರ್ಯಕ್ರಮ ಮುಗಿಸಿದೆವು. ಅದು ಅರೆಬಿಕ್ ಭಾಷೆಯಲ್ಲಿ ಭಾಷಾಂತರವಾಗಿ Middle East ದೇಶಗಳಲ್ಲಿ ಪ್ರದರ್ಶಿತವಾಗುವುದೆಂಬ ಸಮಾಚಾರ ತಿಳಿದೆವು........

ಕೇಂಬ್ರಿಡ್ಜ್‌ನಲ್ಲಿ ನಾವು ಬಂದ ಹೊಸತರಲ್ಲೇ 8 ನಿಮಿಷಗಳ ಕಾರ್ಯಕ್ರಮವನ್ನು ಟಿ. ವಿ. ಯವರು ತೆಗೆದಿದ್ದರು. ಅದನ್ನು ಲಂಡನ್ನಿನಲ್ಲಿ ನೋಡಿದ ಅನೇಕರು ಬಹಳ ಮೆಚ್ಚಿದರು. ಸ್ನೇಹಿತರನೇಕರಿಗೆ ನಾವು ಲಂಡನ್ನಿಗೆ ಬಂದ ಸಮಾಚಾರ ಈ 'ಟಿ.ವಿ.' ಪ್ರದರ್ಶನದಿಂದಾಗಿ ಗೊತ್ತಾಯಿತಂತೆ. ಗಂಡ–ಹೆಂಡತಿ ಜೋಡಿ ಭರತನಾಟ್ಯದ ವಿಷಯವನ್ನು ಸ್ವಾರಸ್ಯವಾಗಿ ತಿಳಿಸಿದ್ದುದು ಅದೇ ಮೊದಲು, ಆದ್ದರಿಂದ ಪ್ರತಿಯೊಬ್ಬರ ಬಾಯಲ್ಲೂ ಅದೇ ಮಾತು. ಜನಸಂಖ್ಯೆಗೆ ಅತಿ ಬೇಗ ಮತ್ತು ಅತಿ ಚೆನ್ನಾಗಿ ಸುದ್ದಿ ತಲುಪಿಸುವ ಸಾಧನೆ ಟಿ. ವಿ. ಎಂಬುದು ಖಂಡಿತ. ಆ 'ಟಿ. ವಿ.' ಯ ಆರಂಭದಲ್ಲಿ ಕೇಂಬ್ರಿಡ್ಜಿನ ನಮ್ಮ ವಿದ್ಯಾರ್ಥಿಗಳು ಭರತನಾಟ್ಯದ ಪ್ರಥಮ ಪಾಠಗಳನ್ನು ಪ್ರದರ್ಶಿಸಿದ್ದರು. 'ಟಿ. ವಿ.' ಯವರು ನಮ್ಮೊಡನೆ ಮಾತನಾಡುತ್ತ ಪತಿಯವರು ನನ್ನನ್ನು ಹೇಗೆ ಪತ್ನಿಯಾಗಿ ಸ್ವೀಕರಿಸಿದರು ? ಎಂಬ ವಿಷಯವನ್ನು ಭರತನಾಟ್ಯ ಅಭಿನಯದಿಂದ ತಿಳಿಸಲು ಕೇಳಿದ್ದರು ! ಅವರು ಅದನ್ನು ಅಭಿನಯಿಸಿದ ಮೇಲೆ ನಾನು ಹೇಗೆ ಅವರನ್ನು ವರಿಸಲು ಸಮ್ಮತಿಸಿದೆ ಎಂಬುದನ್ನು ತಿಳಿಸಬೇಕೆಂದಿದ್ದರು ! ಅಂತೂ ಅಂದಿನ ಸಾಯಂಕಾಲ ಬಹಳ ತಮಾಷೆಯಾಗಿತ್ತು.

ಇತ್ತೀಚೆಗೆ B. B. C. Radio Overseas Broadcast ಕಾರ್ಯಕ್ರಮದಲ್ಲಿ "ಸ್ತ್ರೀಯರು ಮತ್ತು ಜಗತ್ತು" ಎಂಬ ಅಂಗವಾಗಿ ಒಬ್ಬ ಮಹಿಳೆ ನನ್ನನ್ನು ಸಂದರ್ಶಿಸಿ ಪ್ರಶ್ನಿಸಿದರು – ಭರತನಾಟ್ಯವನ್ನು ಬ್ರಿಟಿಷ್ ಜನರು ಕಲಿತುಕೊಳ್ಳುವ ವಿಷಯ,

ವಿದ್ಯಾರ್ಥಿಗಳ ಅರ್ಹತೆ, ಯೋಗ್ಯತೆ, ನಮ್ಮ ಸಂಪ್ರದಾಯ – ನಮ್ಮ ಪ್ರದರ್ಶನ ರೀತಿ ಮುಂತಾದ ಸ್ವಾರಸ್ಯವಾದ ಪ್ರಶ್ನೆಗಳನ್ನು ಕೇಳಿದರು........ಅಂತೂ ನೃತ್ಯಕಲೆಯ ಹಲವು ವಿಧದ ಪ್ರಚಾರ ನಡೆಸುತ್ತಿದ್ದೇವೆ.

A. M. C. ಯವರು ನೃತ್ಯಕಲೆಯ ಶಾಖೆಯನ್ನು ಏರ್ಪಡಿಸಿ ಹೆಮ್ಮೆಪಡುವ ಸುಯೋಗ ಬಂದಿದೆ. ಈ ದಿನಗಳಲ್ಲಿ ನಾವಿಬ್ಬರೂ ಒಂದು ಪ್ರದರ್ಶನ ಕೊಡುತ್ತಿರುವಾಗಲೇ ಇನ್ನೊಂದು ಕಡೆ ನಮ್ಮ ಶಿಷ್ಯಂದಿರು ಸ್ವತಂತ್ರವಾಗಿ ಇನ್ನೊಂದು ಪ್ರದರ್ಶನ ಕೊಡುತ್ತಾರೆ. ನಾಟಿಂಗ್ ಹಿಲ್ ಉತ್ಸವದಲ್ಲಿ (Notting Hill Festiival) ನಮ್ಮ 5 ಮಂದಿ ಶಿಷ್ಯಂದಿರು ಕುಣಿದರು. ಲಂಡನ್ನಿನಲ್ಲಿ ಎಲ್ಲ ರಾಷ್ಟ್ರದ ಜನಾಂಗವೂ ಇರುವುದರಿಂದ ಕ್ಷಣಮಾತ್ರದಲ್ಲಿ ಅಂತರರಾಷ್ಟ್ರೀಯ ವಿವಿಧ ವಿನೋದಾವಳಿಗಳನ್ನು ಏರ್ಪಡಿಸುವುದು ಸುಲಭ. ನಮ್ಮ ಶಿಷ್ಯಂದಿರು ಕುಣಿದ ದಿನ ಪ್ರೇಕ್ಷಕರ ಉತ್ತೇಜಕ ಪ್ರೋತ್ಸಾಹ ಸಂತೋಷಕರವಾಗಿತ್ತು. ನಮಗಂತೂ ಅಂದಿನ ದಿನ ಸುದಿನವಾಯಿತು. ನಮ್ಮ ಶಿಷ್ಯಂದಿರ ಯೋಗ್ಯತೆಗೆ ಹೆಮ್ಮೆಪಟ್ಟೆವು. ಕೆಲವೊಮ್ಮೆ ನಮ್ಮ ಪ್ರದರ್ಶನಗಳಲ್ಲಿ 10 ಮಂದಿ ಶಿಷ್ಯಂದಿರು 'ಅಲಾರಿಪು' ಮಾಡುವ ದೃಶ್ಯ ರಮಣೀಯ ದೃಶ್ಯ. ರಂಗಸ್ಥಳ ತುಂಬಾ ಈ ಅಂತರರಾಷ್ಟ್ರೀಯ ಹೆಣ್ಣುಮಕ್ಕಳು ಬಣ್ಣ ಬಣ್ಣದ ಸೀರೆ ಕಟ್ಟಿಕೊಂಡು ನಮ್ಮ ಭಾರತೀಯ ನೃತ್ಯಗಳನ್ನು ಮಾಡುವುದು ಆಕರ್ಷಕ ವಿಷಯವಾಗಿದೆ. ಆ ದೃಶ್ಯ ಭಾರತೀಯ 'ಫ್ಯಾಶನ್ ಪೆರೇಡ್' (Fashion Parade) ದಂತಿದೆ ಎಂಬುದಾಗಿ ಯಾರೋ ಅಂದರಂತೆ. ಅವರಲ್ಲಿ 6 ಮಂದಿ 'ಜತಿಸ್ವರ' ವನ್ನು ಖಚಿತವಾದ ಸಾಂಪ್ರದಾಯಿಕ ಕ್ರಮದಿಂದ ಮಾಡುವುದು ಹೆಮ್ಮೆ ಪಡುವ ಸಂದರ್ಭ. ಅವರಲ್ಲಿ ಕೆಲವರು ಭರತನಾಟ್ಯದ ಪೂರ್ತಿ ಪಾಠ ಮಾಡಿ ಮುಗಿಸಿದ್ದಾರೆ – ಕನ್ನಡ ಪದಗಳನ್ನು ಅಭಿನಯಿಸುತ್ತಾರೆ. ಈ ವಿಷಯ ನಮಗೆ ವರ್ಣಿಸಲಾರದಷ್ಟು ತೃಪ್ತಿಯನ್ನು ಕೊಡುತ್ತಿದೆ. ಲಂಡನ್ನಿನಲ್ಲಿ ನಾವು ಬರುವುದಕ್ಕೆ ಮೊದಲು ಒಬ್ಬರು ಅಥವಾ ಇಬ್ಬರು ನೃತ್ಯ ಪ್ರದರ್ಶನಗಳನ್ನು ಕೊಡುವ ರೂಢಿಯಿತ್ತು. ನಾವು ಬಂದ ಮೇಲೆ ಲಂಡನ್ನಿನ ಜನತೆಗೆ ಗುಂಪು ನೃತ್ಯಗಳ ಅಭ್ಯಾಸವಾದ ಕಾರಣ ಒಬ್ಬರು ಮಾಡುವ ನೃತ್ಯ ಪ್ರದರ್ಶನಗಳಿಗೆ ಧಕ್ಕೆ ಬರುವಂತೆ ಮಾಡಿದ್ದೇವೆ.

ಇಷ್ಟರಲ್ಲೇ ನಮ್ಮ ಟೇಪ್ ಸಂಗೀತದಲ್ಲಿರುವ 70–80 ನೃತ್ಯಗಳನ್ನು ಪ್ರದರ್ಶಿಸಿ ಮುಗಿಸಿದ್ದೇವೆ. ಆದರೆ 'ಮೋಹಿನಿ ರೂಪ' ತಂದಷ್ಟು ಕೀರ್ತಿ, ಮೆಚ್ಚುಗೆ ಇತರ ನೃತ್ಯಗಳಿಗೆ ಸಿಗಲಿಲ್ಲ. ನಮ್ಮ ಇತರ ನೃತ್ಯ ಜೋಡಣೆಗಳನ್ನು ಮೆಚ್ಚಿ ಸ್ವಾರಸ್ಯವೆಂದು ತಿಳಿದರೂ 'ಮೋಹಿನಿ ರೂಪ' ಅಸಾಧ್ಯವಾದ ಹೆಸರನ್ನು ತಂದಿದೆ. ಇತ್ತೀಚೆಗೆ ಈ ನೃತ್ಯದ ವಿಮರ್ಶೆ ಹೀಗೆ ಬಂದಿದೆ—"........ದೇವಿಯವರೂ ಶ್ರೀನಾಥ ರೂಪದ ಲಾವಣ್ಯಮಯ ಪ್ರದರ್ಶನವನ್ನು ನೀಡಿದರು. ಈ ತರಹದ ಅಭಿನಯಕ್ಕೆ ಅಸಾಧಾರಣವಾದ ಆಸ್ಪದ (Scope) ಇದೆ ; ಅಲ್ಲದೆ ಪಾಶ್ಚಾತ್ಯದಲ್ಲಿ ಎಂದೂ ಯಾರೂ ಪ್ರಯೋ

ಗಿಸದ ಪಾತ್ರಧಾರಣೆಯ ಸೂಕ್ಷ್ಮತೆ ಈ ನೃತ್ಯದಲ್ಲಿದೆ. ಇದು ಅತಿ ಗಡುಸಾದ ವಿಷಯ – ಈ ಸೂಕ್ಷ್ಮತಮವಾದ ಅಧ್ಯಾತ್ಮಿಕ, ಮನಃಶಾಸ್ತ್ರೀಯ Metaphysical Cum Psychological) ಪ್ರಸಂಗವನ್ನು ನಂಬಲರ್ಹವಾದ ರೀತಿಯಲ್ಲಿ ಮಾರ್ಪಡಿಸಿ ದೇವಿಯವರು ಅಮೋಘವಾಗಿ ಪ್ರದರ್ಶಿಸಿದರು."

ಅಂತೂ, ನಾವು ಇಲ್ಲಿ ಉಪನ್ಯಾಸಗಳಲ್ಲದೆ ಸುಮಾರು 120 ನೃತ್ಯ ಪ್ರದರ್ಶನಗಳನ್ನು ಕೊಟ್ಟು ವಿಧವಿಧವಾದ ಅನುಭವಗಳನ್ನು ಪಡೆದೆವು. ಕಲೆಯ ಪರಮಶಿಖರವನ್ನೇ ತಲಪುವ ಯಶಸ್ಸನ್ನು ಪಡೆದಿದ್ದೇವೆ. ಕೆಲವೊಮ್ಮೆ ನಮ್ಮ ಕಲೆಯು ಅಧೋಗತಿಗೆ ಹೋಗುವುದನ್ನೂ ಅನುಭವಿಸಿದ್ದೇವೆ.

ಕೇಂಬ್ರಿಡ್ಜಿನಲ್ಲಿ ಇತ್ತೀಚೆಗೆ 2 ಪ್ರದರ್ಶನಗಳನ್ನು ಕೊಟ್ಟೆವು. ಎರಡು ದಿನಗಳಲ್ಲಿ ಎರಡು ಜೇರೆ ಜೇರೆ ಕಾರ್ಯಕ್ರಮಗಳು. ಅಲ್ಲಿನ ನಮ್ಮ ವಿದ್ಯಾರ್ಥಿಗಳಿಗೆ ಮತ್ತು ಅಲ್ಲಿನ ಜನತೆಗೆ ಕಲೆಯಲ್ಲಿನ ಆಸಕ್ತಿ ವಿದ್ಯಾರ್ಜನೆಗಾಗಿಯಲ್ಲದೆ ಪ್ರದರ್ಶನಕ್ಕಾಗಿ ಅಲ್ಲ. ಆದ್ದರಿಂದ ನಮ್ಮ ಪ್ರದರ್ಶನಕ್ಕೆ ಮುಂಚೆ ಕೆಲವು ಪ್ರಥಮ ಅಭ್ಯಾಸಗಳನ್ನು ನಮ್ಮ ವಿದ್ಯಾರ್ಥಿಗಳು ಮಾಡುವ ಏರ್ಪಾಟಾಯಿತು. ಭರತನಾಟ್ಯದ ಮೊದಲ ಪಾಠಗಳಿಂದ ಆರಂಭಿಸಿ ಒಬ್ಬ ಕಲಾವಿದನು ಹೇಗೆ ಕಾಲಕ್ರಮೇಣ ಶ್ರೇಷ್ಠ ಕಲಾವಿದನಾಗುತ್ತಾನೆ ಎಂಬ ಎಲ್ಲ ಅವಸ್ಥೆಗಳನ್ನು ಕಣ್ಣಮುಂದೆ ಕಂಡು ಆಶ್ಚರ್ಯಪಟ್ಟರು. ನಮ್ಮ ಈ ಎರಡು ನೃತ್ಯ ಪ್ರದರ್ಶನಗಳಿಂದಾಗಿ ಆ ಜನ ನಮ್ಮ ಕಲೆಯ ವಿಷಯವಾಗಿ ಆಳವಾದ ವಿಚಾರಗಳನ್ನು ಯೋಚಿಸುವಂತಾಯಿತು. ಅವರೆಂದರು— "........ನೀವು ನಮ್ಮ ಮನಸ್ಸಿನ ಅಂತಸ್ತನ್ನೂ ಯೋಗ್ಯತೆಯನ್ನೂ ನಿಮ್ಮ ಕಲೆಯಿಂದ ಹೆಚ್ಚಿಸಿದ್ದೀರಿ. ಇದುವರೆಗೂ ನಮ್ಮ ಮನಸ್ಸು ಕಾಣದ ಹೊಸ ಹೊಸ ವಿಷಯಗಳನ್ನು ಕಂಡು ಹಿಡಿಯುವಂತೆ ಮಾಡಿದಿರಿ........" ಇನ್ನೊಬ್ಬ ಪ್ರಖ್ಯಾತ ಬ್ಯಾಲೆ ನೃತ್ಯಗಾತಿ ಹೀಗೆಂದರು—"ನಿಮ್ಮ 'ಮೋಹಿನಿ ರೂಪ' ನಮ್ಮಲ್ಲಿ ಹುದುಗಿದ್ದ ಸ್ತ್ರೀತ್ವವನ್ನೇ ಹೊರಗೆಡಹಿತು – ನಾವೀಗ ಬಹುಮಟ್ಟಿಗೆ ನಮ್ಮ ಸ್ತ್ರೀತ್ವವನ್ನೇ ಕಳಕೊಂಡಿದ್ದೇವೆ. ಸ್ತ್ರೀತ್ವವು ಏನೆಂದು ನಮಗೆ ತಿಳಿಸಿ ಎಚ್ಚರಿಸಿದಿರಿ!" ನಮ್ಮ ಆಪ್ತ ಸ್ನೇಹಿತರೊಬ್ಬರು "ಕೃಷ್ಣ–ಚಂದಮ್ ನೀವು ಕುಣಿಯುವ ಕೈಕಾಲುಗಳನ್ನು ಪರಮಾತ್ಮನು ಸದಾ ರಕ್ಷಿಸಲಿ – ನಿಮ್ಮಿಂದ ನಾವು ಪಡೆಯುವ ಈ ನೃತ್ಯ ಕಲೆಯ ಅನುಭವಕ್ಕೆ ನಾವಿನ್ನೂ ಅಯೋಗ್ಯರು–ಸತ್ಯ ಸೌಂದರ್ಯದ ಪರಿಚಯ ಮಾಡಿಕೊಟ್ಟ ನಿಮ್ಮ ಕಲೆ ನಮ್ಮ ಜೀವನದಲ್ಲಿ ಪಾರಮಾರ್ಥಿಕ ಪ್ರೇಮದ ದರ್ಶನ ಕೊಟ್ಟು ಬೆಳಕನ್ನು ಬೀರಿದೆ........" ಎಂದರು. ಇದನ್ನು ಕೇಳಿ ನಮ್ಮ ಜನ್ಮ ಸಾರ್ಥಕವಾಯಿತೆಂದು ತಿಳಿದೆವು........

ಇತಿ ನಿಮ್ಮ

ಚಂದಮ್ಮ.

* * * *

ಲಂಡನ್
12 – 12 – 1966

ಪ್ರಿಯ ತಂದೆಯೇ,

ಹಲವು ವರ್ಷಗಳಿಂದ ನಮಗೆ ಕರೆಕಳುಹಿಸುತ್ತಲೇ ಇದ್ದ ಪಶ್ಚಿಮ ಜರ್ಮನಿಯ ಇಂಡೋ–ಜರ್ಮನ್ ಸಾಂಸ್ಕೃತಿಕ ಶಾಖೆ ಈ ವರುಷವೂ ನಮಗೆ ಆಹ್ವಾನ ಕೊಟ್ಟಿತು. ನಮ್ಮ ಇಲ್ಲಿನ ಒಂದು ವರುಷದ ಅವಧಿ ಮುಗಿದೊಡನೆಯೇ ಭಾರತಕ್ಕೆ ಹಿಂತಿರುಗುವ ಸಮಯ ಪಶ್ಚಿಮ ಜರ್ಮನಿಯ ಪ್ರವಾಸ ಕೈಗೊಂಡು ಕಲಾಸೇವೆ ಮಾಡಲು 15 ದಿನಗಳ ಕಾರ್ಯಕ್ರಮವನ್ನು ಒಪ್ಪಿಕೊಂಡಿದ್ದೆವು. ಈಗ ತಾನೇ ಪ. ಜರ್ಮನಿಯ ಸ್ಟುಟ್‌ಗಾರ್ಟ್‌ನಿಂದ ಬಂದಿದ್ದೇವೆ.

........ನನ್ನ ಆರೋಗ್ಯದ ವಿಚಾರವಾಗಿ ಯೋಚನೆ ಪಡುತ್ತಿದ್ದೀರಂತೆ. ನನ್ನ ಆರೋಗ್ಯ ಚೆನ್ನಾಗಿಯೇ ಇದೆ. ಅಂತಹ ಬಲಾಢ್ಯ ಆರೋಗ್ಯ ನನಗೆ ಎಂದೂ ಇರಲಿಲ್ಲ. ಹಾಗೆಯೇ ಕ್ಷೀಣವಾಗಿಯೂ ಇರಲಿಲ್ಲ. ಪುಣ್ಯವಶಾತ್ ನನ್ನ ಇಲ್ಲಿನ ಒಂದು ವರ್ಷದಲ್ಲಿ ಯಾವ ಕಾಹಿಲೆಯೂ ಇಲ್ಲದೆ ಸುಖವಾಗಿಯೇ ಇದ್ದೆ. ತುಂಬಾ ಶ್ರಮವುಳ್ಳ ಜೀವನವಾಗಿದ್ದರೂ ಆರೋಗ್ಯ ಕೆಟ್ಟಿಲ್ಲ. ಲಂಡನ್ನಿನ ಜೀವನ ಸರಳವಾಗಿರಲಿಲ್ಲ. ಎಲ್ಲ ಕೆಲಸಗಳನ್ನೂ ಮಾಡಿ, ಈ ಮಹಾ ನಗರದಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆ ಸುತ್ತಾಡಿ ನಗರದಾಚೆ ಹಲವೊಮ್ಮೆ ಪ್ರಯಾಣ ಮಾಡಿ, ನೃತ್ಯಕಲೆಗೆ ಸಂಬಂಧಪಟ್ಟ ಕೆಲಸಗಳನ್ನು ಮಾಡುವುದು ಸುಲಭವಾಗಿರಲಿಲ್ಲ. ಅಕ್ಟೋಬರ್ ತಿಂಗಳ ಸ್ನಾಯಿಯು ಎಳೆತ ನನ್ನನ್ನು ಕಂಗಾಲಾಗಿ ಮಾಡಿತು. ಏನೇ ಆಗಲಿ ನೃತ್ಯವನ್ನು ಮಾಡುವಾಗ ನಾನು ಎಂದೂ ಕಲೆಗೆ ವಂಚನೆ ಮಾಡಿದವಳಲ್ಲ! ಕಲೆಯ ಪ್ರದರ್ಶನಕ್ಕಾಗಿ ನಾವು ಪಟ್ಟ ಸಂಕಷ್ಟಗಳು ಜನರಿಗೆ ಹೇಗೆ ತಿಳಿಯಬೇಕು? ರಂಗಸ್ಥಳದ ಮೇಲಿನ ಮಾಯೆಯ ಸೃಷ್ಟಿ ಎಲ್ಲರನ್ನೂ ಆವರಿಸುತ್ತದೆ!

ನಮ್ಮ ಪ|| ಜರ್ಮನಿಯ ಪ್ರವಾಸವೂ ಇದೇ ಕಳವಳ ರೀತಿಯಲ್ಲೇ ಆರಂಭವಾಯಿತು. ಹೊರಡುವ ಮುಂಚಿನ ದಿನದವರೆಗೆ ನನಗೆ 99°·4° ಟೆಂಪರೇಚರ್ ಇತ್ತು. ಪತಿಯವರು ಇಡೀ ಪ್ರವಾಸವನ್ನೇ ರದ್ದು ಮಾಡುವ ಯೋಚನೆಯಲ್ಲಿದ್ದರು. ರದ್ದು ಖಂಡಿತ ಮಾಡಬಾರದೆಂದು ನನ್ನ ಹಠವೇ ಹಠ! ಎಂತಹ ಸಂದರ್ಭದಲ್ಲೂ ನಾವು ಧೈರ್ಯಗೆಡದೆ ಯಾವ ಪ್ರದರ್ಶನವನ್ನೂ ನಿಲ್ಲಿಸಿರಲಿಲ್ಲ. ಅತಿ ಜ್ವರ ಇದ್ದಾಗಲೂ ರಂಗಸ್ಥಳಕ್ಕೆ ಬರುವ ಮುಂಚೆ ಗುಳಿಗೆ ನುಂಗಿ ಪ್ರದರ್ಶನ ಕೊಟ್ಟ ಸಂದರ್ಭಗಳಿವೆ. 1946ರಲ್ಲಿ ನಮ್ಮ ಶಿವದೇವನಿಗೆ 6 ತಿಂಗಳು ಎನ್ನುವಾಗ ನಾನು ಕೊಟ್ಟ ನೃತ್ಯ ಪ್ರದರ್ಶನವ ಜ್ಞಾಪಕವಾಗುತ್ತದೆ. ಅಂದಿನ ರಾತ್ರಿ ನನ್ನ ಆಶೆಯನ್ನೇ ಎಲ್ಲರೂ ಬಿಟ್ಟಿ

ದ್ದರು ! ಅಮ್ಮನಿಗೆ ತಂತಿ ಕೊಟ್ಟು ಕರೆಸಿದ್ದು ನೆನಪಿದೆಯಲ್ಲವೇ ? ಇಂತಹ ಅನೇಕಾನೇಕ ಸಂದರ್ಭಗಳನ್ನು ಪತಿಯವರಿಗೆ ಜ್ಞಾಪಿಸಿದೆ. ಕೀಲ್, ಲ್ಯೂಬೆಕ್ (Kiel Lubeck) ಮತ್ತು ಹಾಂಬುರ್ಗ್ (Hamburg) ನ ಮೊದಲ 3 ಪ್ರದರ್ಶನಗಳನ್ನಾದರೂ ರದ್ದು ಮಾಡಿದರೆ ಮಿಕ್ಕವನ್ನು ಮಾಡಲು ನನಗೆ ಕಷ್ಟವಾಗಲಾರದು –ಎಂದು ಕೇಳಿಕೊಂಡರು. ಆದರೆ ಬೇಡ, ಅದೂ ಬೇಡ ಎಂದು ಹಠ ಹಿಡಿದೆ. ಕೊನೆಗೆ ನಿರ್ವಾಹವಿಲ್ಲದೆ ಪತಿಯವರು ಸಮ್ಮತಿ ಕೊಟ್ಟರು. ಅಂದಿನ ರಾತ್ರಿ ಅದೊಂದು ನನಗೆ ' Dark Night of the Soul ' ಆಗಿತ್ತು. ಪುಟ್ಟ ಗಣಪತಿಯ ಮೇಲೆ ಎಲ್ಲ ಭಾರವನ್ನೂ ಹಾಕಿದೆ. ಆರು ದಿನ ಎಡೆಬಿಡದೆ ತುಂಬಾ ಜ್ವರ. ಜ್ವರವನ್ನು ಕಮ್ಮಿ ಮಾಡಲು ತೀವ್ರ ಔಷಧಿಗಳನ್ನು ನುಂಗಿ ಬಾಯೆಲ್ಲ ಹುಣ್ಣು. ಬಾಯೆಲ್ಲ ಹುಣ್ಣಾಗಿ ಯಾವ ಆಹಾರವನ್ನೂ ತೆಗೆದುಕೊಳ್ಳಲಾಗಲಿಲ್ಲ. ಆಹಾರವಿಲ್ಲದೆ ಮೈ ಸುಸ್ತು. ಆದರೂ ಮಾತೆತ್ತಲಿಲ್ಲ. ನನ್ನ ನರಳುವಿಕೆ ತಿಳಿಯಗೊಡಿಸಲಿಲ್ಲ. ಈ ಸಮಯ ನನಗೆ ಎಷ್ಟು ಒಳ್ಳೆಯ ಆರೋಗ್ಯವಿರಬೇಕಿತ್ತು ! ಬದಲು ತೀರಾ ಹತಾಶೆ ! ವಿಶೇಷವಾದ ಯಾತನೆ ಪಟ್ಟೆ, ಮಾನಸಿಕ ನರಳುವಿಕೆ, ದೈಹಿಕವಲ್ಲ. ಪ|| ಜರ್ಮನಿ ಪ್ರವಾಸಕ್ಕೆ ಮುಂಚೆ ಈ ಖಾಹಿಲೆ ಬರಬೇಕೆ ? 1963ನೇ ಇಸವಿಯಿಂದ ಕಾದಿರಿಸಿದ ಈ ಅವಕಾಶ. ನಮಗೆ ಬೇಕಾದಂತೆ ನಮ್ಮ ಅನುಕೂಲಕ್ಕೆ ಸರಿಯಾಗಿ ಕಾರ್ಯಕ್ರಮವನ್ನು ಬದಲಾಯಿಸಿದ ಆ ಪುಣ್ಯಾತ್ಮರಿಗೆ ಈಗ ಏನು ನೆಪ ಹೇಳಬಲ್ಲೆವು ? ನಡೆಯಲು ಕೂಡ ಶಕ್ತಿಯಿರಲಿಲ್ಲ. ಕುಣಿಯುವುದು ಅಸಾಧ್ಯದ ಮಾತು ಎಂದೆನಿಸಿತು! ನನ್ನ ತನು–ಮನ–ಆತ್ಮವನ್ನು ಆ ವಿಘ್ನೇಶ್ವರನ ಚರಣ ಕಮಲಗಳಲ್ಲಿ ಅರ್ಪಿಸಿ ಹೃದಯ ಬಿರಿಯುವಂತೆ ಅತ್ತುಬಿಟ್ಟೆ. “ ಈ ಪ್ರವಾಸವನ್ನು ಸಾಧ್ಯ ಮಾಡು ” ಎಂದು ಅಂಗಲಾಚಿ ಬೇಡಿಕೊಂಡೆ. ನನಗೆ ಶಕ್ತಿಕೊಡು, ನೃತ್ಯ ಸೇವೆ ಮಾಡಲು ಸಾಧ್ಯ ಮಾಡು, ನನ್ನನ್ನು ಕಾಪಾಡು, ಅಪಾಯದಿಂದ ಪಾರು ಮಾಡು, ಅನುಗ್ರಹ ಮಾಡು ; ಎಂದು ವಿಧವಿಧವಾಗಿ ಹಲುಬಿ ಪ್ರಾರ್ಥಿಸಿದೆ.

ಹೊರಡುವ ದಿನ ಉದಯಿಸಿತು. ನಮ್ಮ ಜನ್ಮದ ಅತಿ ದೊಡ್ಡ ಸಾಹಸ – ಹಾಗೂ ಅಪಾಯದಲ್ಲಿ ಕಾಲಿಟ್ಟೆವು. ಎದೆಯಲ್ಲಿ ಡಬಡಬ ಶಬ್ದವಾಗುತ್ತಿತ್ತು. ವಿಮಾನದಲ್ಲಿ ಕಣ್ಣು ತೆರೆದು ನೋಡಲು ಕೂಡ ನನಗೆ ಶಕ್ತಿಯಿರಲಿಲ್ಲ. ಕೊಟ್ಟ ಆಹಾರ ತಿನ್ನಲಾಗಲಿಲ್ಲ. ಬಾಯಿ ತುಂಬಾ ಹುಣ್ಣು, ಹೊಟ್ಟೆ ಹಸಿವು ಆದರೆ ತಿನ್ನುವುದು ಹೇಗೆ ?........ಅಂತೂ ಆ ಮಹಾ ಗಣಪತಿಯೇ ಕಾಪಾಡಿ ನಮ್ಮ ಪ್ರವಾಸ ಯಶಸ್ವೀಯಾಗಿ ಮಾಡಿದನು. ಪ್ರದರ್ಶನದ ದಿನ ಶಕ್ತಿ ಬರಲೆಂದು ಸ್ವಲ್ಪ ಆಹಾರ ಬಲವಂತದಿಂದ ಹೊಟ್ಟೆಗೆ ಹಾಕಿದೆ. ನೋವಿನಿಂದ ಕಣ್ಣಲ್ಲಿ ನೀರು ಬಂದರೂ ಗಮನಿಸಲಿಲ್ಲ. ಸಾಯಂಕಾಲ ಶ್ರೀ ಗಣಪತಿಗೆ ನಮಸ್ಕರಿಸಿ ಮುಖಕ್ಕೆ ಬಣ್ಣ ಹಚ್ಚಲು ಆರಂಭಿಸಿದೆ. ಅಶಕ್ತಿಯಿಂದ ಕೈ ನಡುಗುತ್ತಿತ್ತು. ನಾನೊಬ್ಬಳೇ ಮಾಡುವ ನೃತ್ಯ ಕಾರ್ಯಕ್ರಮ

ಬೇಡ ಎಂದು ಪತಿಯವರು ಉಪದೇಶಿಸಿದರೂ ಮಾಡಿದೆ. ಆದರೆ ನಿಜವಾಗಿ ದೇವರ ದಯೆಯಿಂದ ಅದು ಸಾಧ್ಯವಾಯಿತು! ಅದೆಂತಹ ಪವಾಡ! ಮುಂದಿನ ಎರಡು ಪಟ್ಟಣಗಳ ಪ್ರದರ್ಶನಗಳು ತಾನಾಗಿ ರದ್ದು ಆದುವು! ವ್ಯವಸ್ಥಾಪಕರೇ ರದ್ದು ಮಾಡಿದರು ಎಂಬ ಸಮಾಚಾರ ಕೇಳಿ ಆಶ್ಚರ್ಯವಾಯಿತು. ಶ್ರೀ ಗಣಪತಿಯೇ ನನ್ನ ಆರೋಗ್ಯ ಕಾಪಾಡಲು ಹೀಗೆ ಮಾಡಿರಬಹುದು ಎಂದು ಕೃತಜ್ಞಳಾದೆ. ಆ ಎರಡು ದಿನಗಳಲ್ಲಿ ನನಗೆ ಸ್ವಲ್ಪ ಸ್ವಲ್ಪ ಶಕ್ತಿ ದಿನಕ್ಕಿಂತ ದಿನ ಹೆಚ್ಚಾಗುತ್ತಾ ಬಂತು. ಆಮೇಲೆ ಲುಬೆಕ್ (Lubeck) ನಲ್ಲಿ ಪ್ರದರ್ಶನ ಕೊಟ್ಟಾಗ ನನಗೆ ಕಾಹಿಲೆ ಇತ್ತು ಎಂದು ಯಾರೂ ನಂಬಲಿಲ್ಲ! ಒಳ್ಳೆ ವಿಮರ್ಶೆಗಳು ಬಂದುವು. ಆದರೆ ನನ್ನ ಕಾಯಿಲೆ ಯಿಂದಾಗಿ ಪತಿಯವರಿಗೆ ತುಂಬಾ ಕಷ್ಟವಾಯಿತು. ನನ್ನ ಯಾವ ಸಹಾಯವೂ ಅವರಿಗೆ ದೊರಕಲಿಲ್ಲ. ಕಾರ್ಯಕ್ರಮದಲ್ಲಿ ನನ್ನ ಪಾಲಿನ ನೃತ್ಯಗಳನ್ನು ಮಾಡುವು ದಷ್ಟೇ ನನ್ನ ಕೆಲಸ. ನಿಶ್ಶಕ್ತಿಯ ಪತ್ನಿಯ ಆರೈಕೆ, ನಮ್ಮ ಸಾಮಾನಿನ ಪೆಟ್ಟಿಗೆ ಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆ ಒಬ್ಬರೇ ಸಾಗಿಸಬೇಕಾಗಿದ್ದ ಶ್ರಮ. ಅಲ್ಲದೇ ಬಿಡುವಿದ್ದ ಸಮಯವೆಲ್ಲ ನಾನು ಮಲಗಿ ಆರಾಮ ಪಡೆಯುವ ಕಾರಣ ನಾನು ಬರೆಯುತ್ತಿದ್ದ ಮಾಮೂಲು 'ಡೈರಿ' ಯನ್ನೂ ಅವರೇ ಬರೆಯಬೇಕಾಯಿತು. ಎಲ್ಲ ಜವಾಬ್ದಾರಿಯೂ ಅವರ ತಲೆಯ ಮೇಲೆಯೇ ಬಿತ್ತು. "ಇನ್ನು ಏಳು ಜನ್ಮಕ್ಕೂ ಅವರೇ ನನ್ನ ಪತಿಯಾಗಲಿ" ಎಂದು ಬೇಡಿದೆ........

ನಿಮಗೆ ಏತಕ್ಕೆ ಈ ಪುರಾಣ ಬರೆಯುತ್ತಿರುವೆನೋ ತಿಳಿಯದು. ನಿಮಗೆ ಈ ವಯಸ್ಸಿನಲ್ಲಿ ನಾವು ಕೊಡುತ್ತಿರುವ ಚಿಂತೆ! ನೀವು ಮುದುಕರಾಗುತ್ತಿದ್ದೀರಿ ಎಂದು ಬರೆಯುತ್ತಿದ್ದೀರಿ ಹಾಗೆ ಅನ್ನಬೇಡಿ-ಮುದಿತನವೆಂದರೆ ಜೀವನದ ಅನುಭವಗಳ, ಮೊತ್ತ ಅಲ್ಲದೆ ಬೇರೆಯಲ್ಲ. ಮಾನಸಿಕ, ದೈಹಿಕ ಚಟುವಟಿಕೆಗಳಿದ್ದರೆ ಯಾವನೂ ಮುದುಕನಾ ಗುವುದಿಲ್ಲ. ಎಲ್ಲರಿಗೂ ನಿನ್ನೆಗಿಂತ ಇಂದು ವಯಸ್ಸು ಹೆಚ್ಚುತ್ತಲಿದೆಯಲ್ಲವೇ? ವಯಸ್ಸು ನಿಲ್ಲುತ್ತದೆಯೇ ? ನಾನೇನು ಈಗ ಚಿಕ್ಕ ಹುಡುಗಿಯೇ? ಈ ವಯಸ್ಸಿನಲ್ಲಿ ಇಷ್ಟರ ಮಟ್ಟಿಗೆ ದೈಹಿಕ ಚಟುವಟಿಕೆ ಇಟ್ಟುಕೊಳ್ಳಬೇಕಾದರೆ ತುಂಬಾ ಮನಸ್ಥೈರ್ಯ ಬೇಕು. ಅಂತೂ ಇತ್ತೀಚಿನ ಈ ನನ್ನ ಕಾಹಿಲೆ ಒಂದು ಪಾಠವಾಯಿತು. ಪರ ದೇಶಗಳಲ್ಲಿ ಎಂದೂ ಖಾಹಿಲೆ ಬೀಳಬಾರದೆಂಬುದು ಸತ್ಯ. ಈ ಪರದೇಶ ಗಳು ಪ್ರಮುಖ ವಿಶಿಷ್ಟ ಕಾಹಿಲೆಗಳಿಗೆ ಉತ್ತಮವಾಗಿವೆ. (Rolls Royce Rover Jaguar) ಮುಂತಾದ ಆಡಂಬರದ ಕಾರುಗಳಲ್ಲಿ ಹೆಣಗಳನ್ನು ಕೊಂಡೊಯ್ಯುವ ಶ್ರೀಮಂತಿಕೆ ಇಲ್ಲಿದೆ. ಸಣ್ಣ-ಪುಟ್ಟ ಕಾಹಿಲೆಗಳಿಗೆ ಔಷಧ ಮಾರುವವರೇ ತಮಗೆ ಗೊತ್ತಿರುವ ಔಷಧಿ ಕೊಡುವುದು ವಾಡಿಕೆ. ಬೆಂಗಳೂರಿನಲ್ಲಿ ನಮ್ಮ ಡಾ|| ಶೇಷಾದ್ರಿ ಯವರನ್ನು ಕರೆದು "ಇಂತಹ ದಿನ ನೃತ್ಯ ಕಾರ್ಯಕ್ರಮ ಇದೆ, ಡಾಕ್ಟ್ರೇ. ಖಂಡಿತ ಅಷ್ಟರೊಳಗೆ ವಾಸಿ ಮಾಡಬೇಕು!" ಎಂದರೆ ಅವರು ಖಂಡಿತ ವಾಸಿ ಮಾಡುತ್ತಿ ದ್ದರು. ಕಾಹಿಲೆ ಬಂದರೆ ಭಾರತಕ್ಕೆ ಓಡಿಹೋಗೋಣ ಅನಿಸುತ್ತದೆ. ಈ ದೇಶ

ಅನಾರೋಗ್ಯ ಜನರಿಗೆ ಸೇರಿದ್ದಲ್ಲ. ಕಠಿಣ ಕಾಹಿಲೆ ಇರುವ ಜನರು ಕೂಡ ತಿಂಗಳು ಗಟ್ಟಲೆ ಆಸ್ಪತ್ರೆಯ ಪ್ರವೇಶಕ್ಕೆ ಕಾಯಬೇಕಂತೆ! ಕಾಯುವ ಸಮಯದಲ್ಲಿ ದೈವಾಧೀನರಾದರೆ ?........ ಏನೇನೋ ಬರೆದೆ........ಕ್ಷಮಿಸಿ.

ಇತಿ ನಿಮ್ಮ
ಚಂದಮ್ಮ.

* * * *

ಲಂಡನ್
12 – 12 – 1966

ಮುದ್ದು ಮಕ್ಕಳೇ,

ತೀ|| ತಂದೆಯವರಿಗೆ ಈಗ ತಾನೇ ಪತ್ರ ಒಂದನ್ನು ಬರೆದು ಮುಗಿಸಿದೆ. ಆದರೆ ನಿಮಗೆ ಪಶ್ಚಿಮ ಜರ್ಮನಿಯ ಪ್ರವಾಸವನ್ನು ಕೂಲಂಕುಷವಾಗಿ ತಿಳಿಸಲು ಕೂತಿದ್ದೇನೆ. ಈ ಕಾಗದ ತುಂಬಾ ಉದ್ದವಾಗಬಹುದು. 'ಡೈರಿ' ಯಂತೆ ಬರೆದುದನ್ನೆಲ್ಲ ನಿಮಗೆ ಕಳಿಸಿದ್ದೇನೆ.

ಲುಫ್ಟ್ ಹನ್ಸಾ (Luft-Hansa) ವಿಮಾನದಲ್ಲಿ ನಾವು ಪ|| ಜರ್ಮನಿಗೆ ಪ್ರಯಾಣ ಮಾಡಿ ಮೊದಲು ಹಾಂಬುರ್ಗ್ (Hamburg) ನಗರವನ್ನು ಸೇರಿದೆವು. ಇಳಿದೊಡನೆಯೇ ರಸ್ತೆಯ ಬಲಗಡೆ ಚಲಿಸುವ ವಾಹನಗಳೂ ಭಾಷೆ ಲಿಪಿಯೂ ಬೇರೆ ದೇಶವನ್ನು ಸೂಚಿಸಿದವು. ಭಾರತೀಯರೊಬ್ಬರು ವಿಮಾನ ನಿಲ್ದಾಣದಲ್ಲಿ ಹೂಗುಚ್ಛಗಳಿಂದಲೂ ನಗುಮೊಗದಿಂದಲೂ ನಮ್ಮನ್ನು ಸ್ವಾಗತಿಸಿದರು. ಆಮೇಲಿಂದ ನಮ್ಮನ್ನು ರೈಲು ಮಾರ್ಗವಾಗಿ ಕೀಲ್ ನಗರಕ್ಕೆ ಕರೆದುಕೊಂಡು ಹೋದರು. ಅಲ್ಲಿನ ರೈಲುಗಳು ಯಾವ ಶಬ್ದವೂ ಆಂದೋಲನವೂ ಇಲ್ಲದೆ ಸುಖಕರವಾದ ಪ್ರಯಾಣಕ್ಕೆ ಅನುಕೂಲವಾಗಿದ್ದವು. ಲಂಡನ್ನಿನ ನನ್ನ ಆರೋಗ್ಯ ಸ್ಥಿತಿ, ದೇಹ ಕ್ಷೀಣತೆ ಎಲ್ಲವೂ ಮರೆಯುವಂತೆ ಅನುಕೂಲವಾಯಿತು. ರೈಲಿನ ಕಿಟಕಿಯಿಂದ ಹೊರಗೆ ನೋಡಿದರೆ ಭೂಸ್ಥಿತಿ ಸುಮಾರಾಗಿ ಇಂಗ್ಲೆಂಡಿನಲ್ಲಿದ್ದಂತೆಯೇ ಕಂಡಿತು. ಜನರು ಸೌಹಾರ್ದರೂ ಆತ್ಮೀಯತೆಯಿಂದ ವರ್ತಿಸುವಂತೆ ಕಂಡರು.

ಹಾಂಬುರ್ಗ್ ಮತ್ತು ಕೀಲ್ ಪಟ್ಟಣಗಳು ಯುದ್ಧದ ಸಮಯದಲ್ಲಿ ಅತಿಯಾದ ಬಾಂಬಿನ ಹೊಡೆತದಿಂದ ನುಚ್ಚುನೂರಾದ ಚಾರಿತ್ರಿಕ ಸ್ಥಳಗಳು. ಕೀಲ್‌ನಲ್ಲಿ ನಮಗೆ ಅತ್ಯಂತ ಭೋಗಪ್ರದ ಹೋಟೆಲಿನ ಅತಿ ಎತ್ತರವಾದ ಮಹಡಿಯಲ್ಲಿ ಒಂದು ಕೋಣೆಯನ್ನು ಕೊಟ್ಟರು. ಆ ಕೋಣೆಯ ಸುತ್ತಲೂ ಗಾಜಿನ ಗೋಡೆಗಳಿರುವುದ

ರಿಂದ ಹೊರಗಿನ ಸುಂದರವಾದ ದೃಶ್ಯಗಳನ್ನು ಸುಲಭವಾಗಿ ನೋಡಬಹುದಾಗಿತ್ತು. ನಾವೀಗ ಜರ್ಮನಿಯಲ್ಲಿದ್ದೇವೆ ಎಂಬುದನ್ನು ಒತ್ತಿಹೇಳಿ ಆನಂದಪಟ್ಟೆವು. ಎಷ್ಟು ವರುಷಗಳ ಆಸೆಯು ತೀರಿತು! ಕಣ್ಣೆದುರಿಗೆ ಕೀಲ್ ಬಂದರಿನ ದೃಶ್ಯ ಅತಿ ಸುಂದರವಾಗಿತ್ತು. ಅನೇಕ ಹಡಗುಗಳು ಕಾಣಿಸುತ್ತಿದ್ದುವು. ಸಮುದ್ರದ ಕರಾವಳಿಯ ಒಂದು ಭೋಜನ ಶಾಲೆಗೆ ಭೇಟಿ ಕೊಟ್ಟು ಆ ಕೀಲ್ ಕಾಲುವೆಯನ್ನು ನೋಡಿದೆವು. ಇಲ್ಲಿ 2000 ಅಡಿಗಳ ಕೆಳಗೆ ಭೂಗರ್ಭದಲ್ಲಿ ಅಣುಬಾಂಬು ಯುದ್ಧದ ತರಾತುರಿಯ ಸಮಯಕ್ಕಾಗಿ ಕೊರೆದ ಒಂದು ಆಶ್ರಯ ಇದೆಯಂತೆ. ಆ ಆಶ್ರಯದಲ್ಲಿ ಸುಮಾರು ಸಾವಿರ ಜನರು ತೊಂದರೆಯಿಲ್ಲದೆ ಕೆಲವು ದಿನಗಳನ್ನು ಕಳೆಯುವ ಅನುಕೂಲವಿದೆಯಂತೆ! ಕೀಲ್‌ನಲ್ಲಿ ನಮ್ಮ ಮೊದಲ ಪ್ರದರ್ಶನ. ಜನರು ಬಹಳ ತಿಳುವಳಿಕೆಯಿಂದ ಮೆಚ್ಚಿದರು. ಜರ್ಮನ್ ಜನರಿಗೆ ಭಾರತೀಯ ಕಲೆಗಳೆಂದರೆ ತುಂಬಾ ಇಷ್ಟ. ಪ್ರದರ್ಶನವಾದ ಮೇಲೆ ಅವರು ಏರ್ಪಡಿಸಿದ ಸತ್ಕಾರ ಕೂಟಕ್ಕೆ ಮಾತ್ರ ಪತಿಯವರೊಬ್ಬರೇ ಹೋಗಬೇಕಾಯಿತು. ನನಗೆ ಲಂಡನ್ನಿನ ಕಾಯಿಲೆಯ ಸುಸ್ತು ಪ್ರದರ್ಶನವಾದ ಮೇಲೆ ಅತಿಯಾಗಿ ತೊಂದರೆ ಕೊಟ್ಟಿತು. ಅಲ್ಲದೆ ಬಾಯೆಲ್ಲ ಹುಣ್ಣುಗಳಾಗಿ ಆಹಾರವಿಲ್ಲದೆ ಶಕ್ತಿಯೇ ಇರಲಿಲ್ಲ. ಜರ್ಮನ್ ಡಾಕ್ಟರೊಬ್ಬರು ಕರೆಕೊಟ್ಟೊಡನೆಯೇ ಬಂದು ಔಷಧಿಯನ್ನು ಕೊಟ್ಟು ಆರೋಗ್ಯವನ್ನು ಕಾಪಾಡಿದರು. ನಮ್ಮಿಂದ ಕಾಸನ್ನು ಕೂಡ ಅಪೇಕ್ಷಿಸಲಿಲ್ಲ. "ಎರಡು ದೇಶಗಳ ಪರಸ್ಪರ ಬಾಂಧವ್ಯ, ಸ್ನೇಹಪರತೆಗೆ ನನ್ನ ಸೇವೆ" ಎಂದರು.........

ಕೀಲಿನಿಂದ ಮೋಟಾರು ಮಾರ್ಗವಾಗಿ ನಾವು ಲ್ಯೂಬೆಕ್ (Lubeck) ನ್ನು ಸೇರುವಾಗ ದಾರಿಯಲ್ಲೆಲ್ಲಾ ಮೊಬ್ಬು, ಮಂಜು ಕವಿದಿತ್ತು. ವಾಹನ ಸಾಗಲು ಕಣ್ಣು ಮುಂದೆ ಏನೂ ಕಾಣುತ್ತಿರಲಿಲ್ಲ. ಕ್ರಿ. ಶ. 1477 ರಲ್ಲಿ ಕಟ್ಟಲ್ಪಟ್ಟ ಲ್ಯೂಬೆಕಿನ ಎರಡು ಗೋಪುರಗಳು ನಗರದ ಹೆಬ್ಬಾಗಿಲಿನಂತಿದ್ದುವು. ಈ ಗೋಪುರಗಳು 50 ಮಾರ್ಕ್ ಹಣದ ನೋಟುಗಳ ಮೇಲೂ ಕೆಲವು ಅಂಚೆ ಚೀಟಿಗಳ ಮೇಲೂ ಛಾಪಿಸಲ್ಪಟ್ಟಿವೆ. ಥಾಮಸ್ ಮಾನ್ (Thomes Mann) ಎಂಬ ಪ್ರಜ್ಞಾಶಾಲಿಗೆ ಹಾಗೂ ಗೀಬೆಲ್ (Giebel) ಎಂಬ ಕವಿಗೆ ಜನ್ಮಕೊಟ್ಟ ನಗರವೇ ಈ ಲ್ಯೂಬೆಕ್. ಈ ಸುಂದರವಾದ ಪಟ್ಟಣವನ್ನು ಕಾಲ್ನಡೆಯಾಗಿ ಹೋಗಿ ನೋಡಿದೆವು. ಅಲ್ಲಿನ ಪುರಭವನಕ್ಕೂ ಕ್ರಿಸ್ತ ಮಂದಿರಕ್ಕೂ ಭೇಟಿಕೊಟ್ಟೆವು. ಪುರಭವನದಲ್ಲಿ ದೊಡ್ಡ ದೊಡ್ಡ ಚಿತ್ರಗಳನ್ನು ತೂಗ ಹಾಕಿದ್ದರು. ಕ್ರಿಸ್ತಮಂದಿರ ನೀಯೋಗೊಥಿಕ್ (Neogothic) ವಾಸ್ತು ಶಿಲ್ಪದಿಂದ ಇದ್ದು, ಅನೇಕ ಕಮಾನುಗಳಿದ್ದು, ಆ ವಾಸ್ತು ಶಿಲ್ಪದ ದೃಢವಾದ ಕಟ್ಟುವಿಕೆಯ ಶಿಲ್ಪವನ್ನು ತೀಳಿಸುತ್ತಿತ್ತು. ಲ್ಯೂಬೆಕ್ ಸ್ವತಂತ್ರ ಊರಾಗಿದ್ದು ಹಿಟ್ಲರ್ ಕೂಡ ಪ್ರವೇಶ ಮಾಡದ ಸ್ಥಳ! ಯುದ್ಧದ ಸಮಯದಲ್ಲಿ

ಒಂದು ದೊಡ್ಡ ಬಾಂಬು ಈ ಕ್ರಿಸ್ತ ಮಂದಿರದ ಮೇಲೆ ಬಿದ್ದು ಅಲ್ಲಿನ ದೊಡ್ಡ ಗಂಟೆಯೊಂದು ಕೆಳಗೆ ಬಿತ್ತಂತೆ. ಬಿದ್ದ ಸಮಯ ಅದರ ಅಡಿಯಲ್ಲಿದ್ದ ಅನೇಕ ಜನರು ನುಚ್ಚುನೂರಾಗಿ ಸತ್ತುಹೋದರಂತೆ. ಅದೇ ಜಾಗವನ್ನು ಈಗ ಯುದ್ಧದ ಸ್ಮಾರಕವಾಗಿ ಕಾಪಾಡಿಕೊಂಡು ಬಂದಿದ್ದಾರೆ. ಈ ನಗರದ ಊರು ಕೇರಿಗಳೆಲ್ಲ ಕ್ರಿಸ್‌ಮಸ್ಸಿನ ಗೆಲುವಿನ ಸಮಯದಿಂದಾಗಿ ಅಂದ-ಚಂದ ತೋರಣಗಳಿಂದ, ದೀಪಾಲಂಕಾರಗಳಿಂದ ಅಲಂಕೃತವಾಗಿದ್ದುವು. ಲ್ಯೂಬೆಕ್ ಕರಾವಳಿಯ ಊರು ಆಗಿದ್ದರಿಂದ ಹಡಗುಗಳಲ್ಲಿನ ವಿವಿಧ ವಿನೋದಾವಳಿಗೆ ಕೊರತೆ ಇಲ್ಲದ ಊರು.

ಜರ್ಮನಿಯ ಸುಪ್ರಸಿದ್ಧ ವಿನೋದವಾದ ಸಂಗೀತ ನಾಟಕ (ಒಪೆರಾ Opera)ವನ್ನು ನೋಡಿದೆವು. ಜರ್ಮನಿಯು ಸಂಗೀತದ ತವರು ಮನೆ ಎಂಬುದರಲ್ಲಿ ಸಂಶಯವಿಲ್ಲ. ಆ ಸಂಗೀತ ನಾಟಕವನ್ನು ನೋಡಿ ತುಂಬಾ ಸಂತೋಷಪಟ್ಟೆವು. ಬೆಂಗಳೂರಿನಲ್ಲಿ ನಾವು ಕೇಳಿದ ಎಕ್ಕ್ (Eck) ಸಂಗೀತಗಾರನ ಸಂಗೀತವನ್ನು ಈ ಒಪೆರಾದಲ್ಲಿ ಮತ್ತೊಮ್ಮೆ ಕೇಳುತ್ತಿದ್ದಂತೆ ಹೊಸತೊಂದು ಜಗತ್ತು ನಮ್ಮ ಕಣ್ಣುಮುಂದೆ ತೆರೆದಂತಾಯಿತು. ಆ ಸಂಗೀತದಲ್ಲಿನ ಶಕ್ತಿ, ಆಳ, ರಸಭಾವ, ವೈಯಕ್ತಿಕತೆ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ನವಚೈತನ್ಯದ ಮಾನವೀಯತೆಯ ಅನುಭವವಾಯಿತು.

ನಮ್ಮ ನೃತ್ಯ ಪ್ರದರ್ಶನ ಬಹಳ ಯಶಸ್ವೀಯಾಯಿತು. ಪ್ರತಿಯೊಂದು ಮೈ ಕೈ ಚಲನೆಗಳನ್ನು ವಿವರಿಸಿದುದರಿಂದ ಅವರಿಗೆ ನಮ್ಮ ನೃತ್ಯವನ್ನು ತಿಳಿಯಲು ಸುಲಭವಾಯಿತು. ಜನರು ಕಿಕ್ಕಿರಿದಿದ್ದರು. ನಾವು ಮಾಡುವ ನೃತ್ಯಗಳು ಅದ್ವಿತೀಯವಾದುವು ಎಂದು ಅಭಿಪ್ರಾಯಪಟ್ಟರು. ನನ್ನ ಅಶಕ್ತಿಯು ನೃತ್ಯ ಮಾಡುವಾಗ ಅವರ ಕಣ್ಣಿಗೆ ಕಾಣದೆ ಇದ್ದುದು ನಮ್ಮ ಪುಣ್ಯವೆನ್ನಬೇಕು. ಒಳ್ಳೇ ವಿಮರ್ಶೆ ಸಿಕ್ಕಿತು.

ಸ್ವೀಡನ್ನಿನಿಂದ ಬರುವ ಇಂಟರ್ ಕಾಂಟಿನೆಂಟಲ್ ರೈಲು ದಾರಿಯಾಗಿ ನಾವು ಲ್ಯೂಬೆಕಿನಿಂದ ಹೆನೋವರ್‌ಗೆ (Hanover) ಪ್ರಯಾಣ ಮಾಡಿದೆವು. ಹಾಂಬುರ್ಗ್–ಲ್ಯೂಬೆಕ್ ದಾರಿಯೆಲ್ಲ ಕೈಗಾರಿಕಾ ಪ್ರದೇಶವಾಗಿದ್ದರೆ ಹಾಂಬುರ್ಗ್–ಹೆನೋವರ್ ದಾರಿಯೆಲ್ಲ ಕೃಷಿಗೆ ಮೀಸಲಾದ ನಿಸರ್ಗ ; ಜರ್ಮನಿಯ ಗದ್ದೆ ಪೈರುಗಳು ಅಲ್ಲಿನ ಕೊನಿಫರಸ್ (Coniferous) ಮರಗಳು ಆಗತಾನೇ ಹೇಮಂತ ಋತುವಿನ ಎಲೆಗಳನ್ನು ಕಳಚಿ ಹಾಕುತ್ತಿದ್ದುವು. ಹೆನೋವರದ ರಸಿಕರೂ ನಮ್ಮ ಪ್ರದರ್ಶನವನ್ನು ಬಹಳ ಮೆಚ್ಚಿದರು. ಪ್ರೇಕ್ಷಕ ವೃಂದದ ಆಹ್ಲಾದಕರ ಮನೋಭಾವವನ್ನು ತಿಳಿಯುವುದು ಸಂತೋಷದ ವಿಷಯ. ಅಲ್ಲದೆ ಅವರು ನಮ್ಮ ಅಮೂಲ್ಯ ಕಲೆಗೆ ತಲೆದೂಗುವುದು ಹೆಮ್ಮೆಯ ವಿಷಯ. ಅಷ್ಟು ದಿನ ಜರ್ಮನಿಯನ್ನು ಸುತ್ತಾ

ಡಿದರೂ ಸೀರೆಯನ್ನುಟ್ಟ ಭಾರತೀಯ ಸ್ತ್ರೀಯನ್ನು ನಾವು ಮೊದಲಾಗಿ ನೋಡಿದುದು ಹೆನೋವರಿನಲ್ಲಿ! ಎಲ್ಲಿ ಹೋದರೂ ನಾನೊಬ್ಬಳೇ ಭಾರತ ಸ್ತ್ರೀಯಾಗಿದ್ದು ನನ್ನ ಸೀರೆ ಎಲ್ಲರ ಗಮನ ಸವನ್ನೂ ಸೆಳೆಯುತ್ತಿತ್ತು. ಹೆನೋವರ್ ನಗರವನ್ನು ನಮ್ಮ ಆತಿಥ್ಯಕಾರರು ಅವರ ಕಾರಿನಲ್ಲಿ ಸುತ್ತಾಡಿಸಿ ಪರಿಚಯ ಮಾಡಿಕೊಟ್ಟರು.

ಹೆನೋವರಿನಿಂದ ನಾವು ರೆಮ್‌ಶ್ಯಾಡ್ (Remscheid) ಎಂಬಲ್ಲಿಗೆ ಹೋದೆವು. ಈ ನಗರ ರ್‍ಹೈನ್ (Rhine) ಕಣಿವೆಯ ಹತ್ತಿರವಿರುವ ಒಂದು ಕೈಗಾರಿಕಾ ಕೇಂದ್ರ. ಇಲ್ಲಿನ 500 ಕಾರ್ಖಾನೆಗಳಲ್ಲಿ ಸುಮಾರು 130,000 ಜನರು ಕೆಲಸಗಾರರಿದ್ದಾರೆ. ಇಲ್ಲಿನ ಪ್ರಸಿದ್ಧ ಬೇಯರ್ (Baeyer) ಕಂಪೆನಿಯಲ್ಲಿ ಸುಮಾರು 13,000 ಜನರು ಕೆಲಸಗಾರರಿದ್ದಾರಂತೆ. ರೆಮ್‌ಶ್ಯಾಡ್ ಪಟ್ಟಣವು ಕ್ಷ–ಕಿರಣಗಳು (X–Ray) ಕಂಡು ಹಿಡಿದ ವಿಲ್‌ಹೆಲ್ಮ್‌ರೊಂಜನ್ (Wilhelm Roentgen) ಇವರು ಹುಟ್ಟಿದ ಊರು. ಇಲ್ಲಿನ ಜನತೆಗೆ ಕೈಗಾರಿಕೆ ಮತ್ತು ಔದ್ಯೋಗಿಕ ವಿಜ್ಞಾನ ಜೀವನದ ಉಸಿರಾಗಿದೆ. ನಮ್ಮ ಭಾರತೀಯ ಸ್ನೇಹಿತರೊಬ್ಬರು ಸಂಭಾಷಣೆ ನಡೆಸುತ್ತ ನಮ್ಮ ದೇಶದ ಕೈಗಾರಿಕೆ ವಿಷಯ ಮಾತನಾಡಲು ತೊಡಗಿದರು. ಅದನ್ನು ಜರ್ಮನಿಯ ಕೈಗಾರಿಕೆಗೆ ಹೋಲಿಸಿದರು. ನಮ್ಮ ದೇಶದ ಅಧೋಗತಿಯ ವಿಷಯ ಮಾತನಾಡುತ್ತ, ದೇಶದ ಕೈಗಾರಿಕಾ ಸ್ಥಿತಿ, ಕೆಟ್ಟ ಆಡಳಿತ, ಕಳ್ಳನಡತೆ ವ್ಯಾಪಾರ, ಪ್ರೋತ್ಸಾಹವಿಲ್ಲದೆ ಒದ್ದಾಡುತ್ತಿರುವ ಇಂಜಿನಿಯರುಗಳು ಇದೆಲ್ಲವನ್ನೂ ಅಸಮಾಧಾನದಿಂದ ತೆಗಳಿದರು. ಅವರ ಮಾತುಗಳನ್ನು ಕೇಳುತ್ತಿದ್ದಂತೆ ಇಂತಹ ಭಾರತೀಯರು ಎಂತಹ ದೇಶದ್ರೋಹಿಗಳು ಎಂದು ಅರಿತು ಮನಸ್ಸಿಗೆ ತುಂಬಾ ಸಂಕಟವಾಯಿತು. ತಮ್ಮ ದೇಶವನ್ನು ಬಿಟ್ಟು ಪರದೇಶಗಳಲ್ಲೇ ವರ್ಷಗಟ್ಟಲೆ ವಾಸಮಾಡುತ್ತ ತಮ್ಮ ದೇಶವನ್ನೇ ಮರೆತು ನಮ್ಮ ದೇಶದ ಇಂದಿನ ಅಭಿವೃದ್ಧಿಯನ್ನು ತಿಳಿಯದೆ ಅಜ್ಞಾನ ಅಂಧಕಾರದಲ್ಲಿರುವ ನಮ್ಮ ಭಾರತೀಯರ ಜೀವನ ಚಿಂತಾಜನಕವಾಗಿದೆ. ನಮ್ಮ ದೇಶದ ಉನ್ನತ ವಿಷಯಗಳನ್ನು ತಿಳಿಯದ ಈ ಜನರು ಪಾಶ್ಚಾತ್ಯ ದೇಶಗಳ ಮಿತಿಮೀರಿದ ಉತ್ಪತ್ತಿ ಮತ್ತು ಅದರಿಂದುಂಟಾದ ದುಃಸ್ಥಿತಿಗಳನ್ನು ಕೂಡ ತಿಳಿಯಲಾರರು. ನಮ್ಮ ದೇಶದಲ್ಲಿ ಹೊಗಳುವಂತಹ ವಿಷಯಗಳೇ ಇಲ್ಲವೇ ? ಇವರಿಗೆ ನಮ್ಮಲ್ಲಿರುವ ಶಾಂತಿ, ಬಿಡುವು ಇವುಗಳ ಅಮೂಲ್ಯತೆಯೂ ಕಾಣುವುದಿಲ್ಲವೇ ? ಬೆಳಿಗ್ಗೆ 7 ಗಂಟೆಯಿಂದ ಸಾಯಂಕಾಲ 7 ಗಂಟೆಯವರೆಗೆ ದುಡಿದು ದಣಿದು ಬೇಡವಾಗುವಷ್ಟು ಕೈಗಾರಿಕೆಗಳನ್ನು ಹೆಚ್ಚಿಸುವ ಬದಲಾಗಿ ಭಾರತಕ್ಕೆ ಬಂದು ಅವರ ಕೈಲಾದಷ್ಟು ಸೇವೆ ಸಲ್ಲಿಸಿ ದೇಶದ ಸ್ಥಿತಿಯನ್ನು ಸುಧಾರಿಸಬಾರದೇ ? ಬದಲಾಯಿಸಬಾರದೇ ? ಆದರೆ ಇಂತಹ ಭಾರತೀಯರು ಭಾರತಕ್ಕೆ ಹೇಗೆ ಬರಬಲ್ಲರು ? ಸ್ವಾರ್ಥ ಜೀವನದಿಂದ ಪರದೇಶಗಳಲ್ಲಿ ನೆಲೆಸಿ ಅಲ್ಲಿನ ಹೆಣ್ಣುಗಳನ್ನು ಮದುವೆ ಮಾಡಿಕೊಂಡು ದೇಶಬಾಹ್ಯರಾಗಿದ್ದಾರೆ. ಅವರ ಪತ್ನಿಯರು ಭಾರತಕ್ಕೆ ಬರಲು ಆಸೆಪಡುವುದಿಲ್ಲ. ಭಾರತದಲ್ಲಿನ ಅತಿ ಸೆಖೆ, ಆಹಾರದ ಅಭಾವ,

ಕಾಯಿಲೆ ರೋಗಗಳು, ಬಿಸಿಲಿನ ತಾಪ ಎಂಬ ಹಲವಾರು ನೆಪಗಳು. ಗಂಡಂದಿರು ಅವರನ್ನು ಬಿಟ್ಟು ಭಾರತಕ್ಕೆ ಬರುವುದೂ ಕಡಿಮೆ, ಕುಟುಂಬ ವಾತ್ಸಲ್ಯವನ್ನು ಕಳ ಕೊಂಡ ಕಾರಣ. ಭಾರತದಲ್ಲಿ ಒಂದು ದೊಡ್ಡ ವೈಜ್ಞಾನಿಕ ಸಂಸ್ಥೆಯಲ್ಲಿ ಕೆಲಸ ಮಾಡು ತ್ತಿದ್ದ ಯೋಗ್ಯ ಭಾರತೀಯರೊಬ್ಬರ ಜರ್ಮನ್ ಪತ್ನಿಯು ತನ್ನ ಗಂಡನನ್ನು ಭಾರತ ದಲ್ಲಿ ಇರಗೊಡಲಾರದೆ ಪ|| ಜರ್ಮನಿಗೆ ಕರಕೊಂಡು ಹೋದಳು. ಅವಳನ್ನು ಅಲ್ಲಿ ಭೇಟಿಯಾದಾಗ "ಏತಕ್ಕೆ ನೀವು ಭಾರತ ಬಿಟ್ಟು ಬಂದಿರಿ ? ನಿಮಗೆ ನಮ್ಮ ದೇಶ ಹಿಡಿಸ ಲಿಲ್ಲವೇ ? ಎಂದು ಕೇಳಿದೆ. "ಭಾರತ ಅದ್ಭುತ ದೇಶ, ಪ್ರಿಯವಾದ ದೇಶ. ಆದರೆ ನಮ್ಮಂತಹ ಹೆಂಗಸರಿಗೆ ಅಲ್ಲಿ ಕೆಲಸ ಮಾಡಲು ಅವಕಾಶವಿರುವುದಿಲ್ಲ. ಆಳುಗಳು ಮನೆ ಕೆಲಸವನ್ನು ಮಾಡುವ ಕಾರಣ ಗೃಹಿಣಿಗೆ ಹೊತ್ತು ಹೋಗುವುದೇ ಕಷ್ಟ" ಎಂಬ ವಿಚಿತ್ರ ಉತ್ತರ ಕೊಟ್ಟರು ! ಪಾಶ್ಚಾತ್ಯದಲ್ಲಿ ಮುಸುರೆ ತಿಕ್ಕುವುದರಿಂದ, ಕಕ್ಕಸು ಗುಡಿಸುವ ಕೆಲಸದಿಂದ ಅವರಿಗೆ ಹೊತ್ತು ಹೋಗುತ್ತದೆ. ಆದರೆ ಅಂತಹ ಸ್ತ್ರೀಯರು ಭಾರತದಲ್ಲಿ ಸಾಮಾಜಿಕ ಕಾರ್ಯಗಳಲ್ಲಿ ಭಾಗವಹಿಸುವುದಾದರೆ ಎಷ್ಟೊಂದು ಅವಕಾಶ ಗಳು ಇವೆ ! ವೈಜ್ಞಾನಿಗಳು ಭಾರತದಲ್ಲೇ ನೆಲೆಸಿದ್ದರೆ ಭಾರತವೂ ಎಷ್ಟು ಅಭಿವೃದ್ಧಿ ಯಾಗುವುದು ! ಅಂತೂ ನಮ್ಮ ದೇಶಬಿಟ್ಟು ಹೊರದೇಶಗಳಲ್ಲಿ ನೆಲೆಸುವ ಭಾರತೀ ಯರು ನಿಜವಾಗಿ ಸುಖವಾಗಿರುತ್ತಾರೆಯೇ ? ಅಂತರಂಗದಲ್ಲಿ ತೃಪ್ತಿ ಸಂತೋಷವಿರು ತ್ತದೆಯೇ ? ಅಹೋ ರಾತ್ರಿ ದುಡಿದು, ದಣಿದು ಮಾಡುವ ಕೆಲಸ, ಕೆಲಸದಲ್ಲಿ ಸದಾ ನಿರತರಾದ ಜನರು ಯಾತಕ್ಕಾಗಿ, ಯಾರಿಗಾಗಿ ಜೀವಿಸುತ್ತಾರೆ ಎನ್ನಿಸುತ್ತದೆ. ಇಲ್ಲಿನ ಜೀವನ ಕ್ರಮವೇ ವಿಚಿತ್ರವಾಗಿದೆ. ನಮ್ಮಲ್ಲಿಯ ದಿನಚರಿಯ ವಿರಾಮ, ಭಾವನೆ ಗಳು, ಮಕ್ಕಳ ಸಂಪರ್ಕ–ಸ್ನೇಹ ಸಂಬಂಧ, ನೆರೆ–ಹೊರೆಯವರ ವಾತ್ಸಲ್ಯ ಯಾವುದೂ ಇಲ್ಲದೆ ಹೇಗೆ ಬದುಕುತ್ತಾರೆ ಎನಿಸುತ್ತದೆ.

ರೆಮ್‌ಶ್ಯಾಡ್ ಪಟ್ಟಣ ಬಹಳ ಶ್ರೀಮಂತ ಪಟ್ಟಣವಂತೆ. 40 ಕೋಟ್ಯಾಧೀಶರು ಇರುವರಂತೆ. ಒಬ್ಬ ಕೆಲಸಗಾರನು ತಿಂಗಳಿಗೆ 1000 D. M. ಸಂಪಾದಿಸುವನಂತೆ. ಆದರೂಜನರಿಗೆ ಬೇಕಾದ ಸಾಮಾಜಿಕ ಹಾಗೂ ಕಲಾಭರಿತ ಜೀವನದ ಸೌಕರ್ಯವಿಲ್ಲ. ನಮ್ಮನೃತ್ಯ ಪ್ರದರ್ಶನ ಅಂದು ಅಲ್ಲಿ ಅವರಿಗೆ ಅಪರೂಪದ ಒಂದು ವಿಶೇಷ ಸಂದರ್ಭ ವಾಗಿತ್ತು. ಅಂದು ಹವೆ ತೀರಾ ಕೆಟ್ಟಿತ್ತು. ಪ್ರದರ್ಶನಕ್ಕೆ ಬರುತ್ತಿರುವ ಪ್ರೇಕ್ಷ ಕರು ದಾರಿಯಲ್ಲಿ ವಿಪರೀತ ಹಿಮವರ್ಷದಿಂದಾಗಿ ವಾಹನ ಸಂಚಾರದ ಗೊಂದಲದಲ್ಲಿ ಸಿಕ್ಕಿಹಾಕಿಕೊಂಡು ಬರಲು ಮುಕ್ಕಾಲು ಗಂಟೆ ತಡವಾದರು ! ಇಲ್ಲಿ ಪ್ರದರ್ಶನದ ಆರಂಭಕ್ಕೆ 15 ನಿಮಿಷ ಹೆಚ್ಚಿನ ಸಮಯ ಜನರಿಗಾಗಿ ಕೊಡುತ್ತಾರೆ. 7 ಗಂಟೆಗೆ ಪ್ರದರ್ಶನವಾದರೆ 7–15ಕ್ಕೆ ಪ್ರಾರಂಭ. ಕೋಲ್ನ್ (Koln) ಮತ್ತು ಬೊನ್ (Bonn) ನಿಂದ ಕೂಡ ಜನರು ಹವೆಯನ್ನು ಗಮನಿಸದೆ ನೃತ್ಯ ಪ್ರದರ್ಶನಕ್ಕೆ ಬಂದಿ ದ್ದರು. Koln ಪಟ್ಟಣದ ರೇಡಿಯೋ ಜನರು ನಮ್ಮನ್ನು ಸಂದರ್ಶಿಸಿ ಮಾತುಕತೆ

ಗಳನ್ನು ಪ್ರಸಾರ ಮಾಡಿದರು. ಅಂದು ನಮ್ಮ ಪ್ರದರ್ಶನ ಅರ್ಧ ಗಂಟೆ ತಡವಾಗಿ ಆರಂಭವಾಯಿತು. ಕಾರ್ಯಕ್ರಮಕ್ಕೆ ಮುಂಚೆ ಕೊಡುವ ಪ್ರತಿಯೊಂದು ನೃತ್ಯ ವಿವರಣೆಯನ್ನು ಒಬ್ಬ ಜರ್ಮನ್ ಸ್ತ್ರೀ ಜರ್ಮನ್ ಭಾಷೆಯಲ್ಲಿ ಭಾಷಾಂತರಿಸಿದ ಕಾರಣ ಪ್ರೇಕ್ಷಕರು ಒಳ್ಳೇ ಗ್ರಹಿಕೆಯಿಂದ ನಮ್ಮ ಕಲೆಯನ್ನು ಅರಿತರು. ಅಂದು ಆ ಚಿಕ್ಕ ರಂಗಮಂದಿರದಲ್ಲಿ – ಮೈಯೆಲ್ಲ ಕಣ್ಣು ಕಿವಿಯಾಗಿ ನಮ್ಮ ಕಲೆಯನ್ನು ಮೆಚ್ಚಿದ ಆ ಜನತೆ – ಆ ಸುಸಂದರ್ಭ – ನಮ್ಮ ಜೀವನದಲ್ಲಿನ ಮರೆಯಲಾರದ ಅನುಭವ.

ಮರುದಿನ ಬೆಳಿಗ್ಗೆ ಎದ್ದು ಕಿಟಕಿಯಿಂದಾಚೆ ನೋಡಿದ ದೃಶ್ಯವಂತೂ ಅತಿ ಮನೋರಂಜಕ ದೃಶ್ಯ. ರಾತ್ರಿಯೆಲ್ಲ ಹಿಮವರ್ಷವಾದ (Snow Fall) ಕಾರಣ ಎಲ್ಲಿ ನೋಡಿದರೂ ದಪ್ಪ ದಪ್ಪನಾದ ಹಿಮ (Snow) ಎಲ್ಲೆಲ್ಲೂ ಆವರಿಸಿ ನಿಸರ್ಗ ದೇವತೆಯು ಶುಭ್ರನಾದ ಬಿಳೀ ಸೀರೆಯನ್ನು ಉಟ್ಟುಕೊಂಡಂತಿತ್ತು. ನಮಗೆ ಅಂದವಾದ ಅಪೂರ್ವ ದೃಶ್ಯ.

ನಮ್ಮ ಸ್ನೇಹಿತರು ರೆಮ್‌ಶ್ಯಾಡ್ ಸುತ್ತಮುತ್ತಲಿನ ಪ್ರದೇಶಗಳಿಗೆ ನಮ್ಮನ್ನು ಕರೆದುಕೊಂಡು ಹೋದರು. ಅಲ್ಲಿನ ದೃಶ್ಯಗಳು ಸಾಧಾರಣ ನಮ್ಮ ಜೋಗ ಜಲಪಾತ, ಸಾಗರ ಮುಂತಾದ ಮಲೆನಾಡು ಪ್ರದೇಶದಂತಿವೆ. ಶ್ಲೊಸ್‌ಬರ್ಗ್ (Schlossburg) ಎಂಬ ಸ್ಥಳಕ್ಕೆ ಭೇಟಿಕೊಟ್ಟು ಅಲ್ಲಿನ ವಸ್ತು ಪ್ರದರ್ಶನಾಲಯವನ್ನು (Museum) ನೋಡಿದೆವು. ಆ ಸ್ಥಳ 13ನೇ ಶತಮಾನದಲ್ಲಿ ಒಬ್ಬ ಗಣ್ಯ ಜರ್ಮನ್ ವ್ಯಕ್ತಿಯ ದುರ್ಗ (Castle) ಆಗಿತ್ತಂತೆ.

ಆ ಮೇಲಿನ ನಮ್ಮ ದಿನಚರಿ – ಕಾರ್ಯಕ್ರಮ – ಒಂದು ಚಕ್ರದಂತೆ ಉರುಳಿ ಹೋಯಿತು. ನೃತ್ಯ, ಸಾಮಾನು ಕಟ್ಟಿ ಪ್ರಯಾಣಕ್ಕೆ ಸಿದ್ಧತೆ, ಪ್ರಯಾಣ, ಪುನಃ ನೃತ್ಯ, ಪ್ರಯಾಣ ಇತ್ಯಾದಿ. ಎಡೆಬಿಡದೆ ಸಾಗುವ ಕಾರ್ಯಕ್ರಮ – ಆದರೂ ನಾವು ಅದನ್ನು ತುಂಬಾ ಉತ್ಸಾಹ, ಆನಂದದಿಂದ ನೆರವೇರಿಸಿದೆವು. ಜರ್ಮನ್ ಜನರು ನಮ್ಮನ್ನು ರಾಜಮರ್ಯಾದೆಯಿಂದ ಸ್ವಾಗತಿಸಿ ಸತ್ಕರಿಸಿದ ಕಾರಣ ದಣಿವು ಗೊತ್ತಾಗಲಿಲ್ಲ. ಅಲ್ಲಿನ ಅತಿ ಸುಂದರವಾದ ಹೋಟೆಲುಗಳಲ್ಲಿದ್ದು, ಅತ್ಯುತ್ತಮ ಶುಚಿ–ರುಚಿಯಾದ ಆಹಾರವನ್ನು ಭುಂಜಿಸಿ, ಸ್ವೇಚ್ಛೆಯಾಗಿ ಅಲ್ಲಿನ ಅಂದದ ಊರು, ಕೇರಿ ಪಟ್ಟಣ ದೇಶವನ್ನು ಸುತ್ತಾಡಿ ನಮ್ಮ ವರುಷ ವರುಷಗಳ ಆಕಾಂಕ್ಷೆಯನ್ನು ತೀರಿಸಿ ತೃಪ್ತಿ ಪಡೆದೆವು.

ಬೆಳಿಗ್ಗೆ 6–53 ರ ರೈಲು ಗಾಡಿಗೆ ನಾವು ರೆಮ್‌ಶ್ಯಾಡ್ ಬಿಟ್ಟು ಗಿಸ್ಸೆನ್ (Giessen) ಎಂಬಲ್ಲಿ ಹೋದೆವು. ದಾರಿಯುದ್ದಕ್ಕೂ ಹೃದಯಂಗಮವಾದ ದೃಶ್ಯಗಳು–ಎಲ್ಲೆಲ್ಲೂ ಹಿಮವರ್ಷ ಬಹಳವಾಗಿದ್ದು ನಿಸರ್ಗವೆಲ್ಲ ಬೆಳ್ಳಗಿತ್ತು. ಗುಡ್ಡಗಳಿಂದ

ಅಲ್ಲಲ್ಲಿ ಚಿಕ್ಕ ಚಿಕ್ಕ ಝುರಿಗಳೋ, ಕಾಲುವೆಗಳೊ, ಉಪನದಿಗಳೋ ಹರಿಯುತ್ತಿದ್ದುವು. ಚಿಕ್ಕ ಚಿಕ್ಕ ಜಲಪಾತಗಳು ಧುಮುಕುತ್ತಿದ್ದುವು. ಪರ್ವತಗಳ ಏರು-ತಗ್ಗುಗಳಲ್ಲಿ ಕೆಲವು ಚಿಕ್ಕ ದೊಡ್ಡ ಮನೆ ಮಠಗಳಿದ್ದು ನಿಸರ್ಗದ ಕ್ರೂರ ಛಳಿಯನ್ನು ತಲೆಯೆತ್ತಿ ಧೈರ್ಯವಾಗಿ ಎದುರಿಸುವಂತಿದ್ದು ಅಂದವಾಗಿ ಕಾಣುತ್ತಿದ್ದುವು. ನೈಸರ್ಗಿಕ ಸೌಂದರ್ಯವಿದ್ದರೂ ಅಲ್ಲಲ್ಲಿ ಕೈಗಾರಿಕೆಗಳ ಪರಿಣಾಮದ ಕತ್ತಲು ಕವಿದಿತ್ತು. ಆದರೆ ಕೈಗಾರಿಕೆ ಆಧುನಿಕ ಜರ್ಮನಿಯ ಉಸಿರಾಗಿದ್ದರೂ ನಿಸರ್ಗವನ್ನು ಅವರು ಮರೆತಿಲ್ಲ.

ಗಿಸ್ಸೆನ್ ಸೇರುವಾಗ ಪುಷ್ಪವೃಷ್ಟಿಯಂತೆ ಹಿಮದ ಎಸಳುಗಳ ಮಳೆಯಿತ್ತು. ನಮ್ಮ ನೃತ್ಯ-ಪ್ರದರ್ಶನಕ್ಕೆ ಚಿಕ್ಕದಾದ ಒಂದು ರಂಗಮಂದಿರ, ರಂಗಮಂಟಪ ಏರ್ಪಾಟಾಗಿತ್ತು. ಚಂದವಿತ್ತು. ಸುಮಾರು 150 ಜನರು ಮಾತ್ರ ಸೇರಬಲ್ಲ ಸ್ಥಳ. ಅಲ್ಲಿನ ಜರ್ಮನ್ ಸ್ತ್ರೀಯೊಬ್ಬಳು (ಭಾರತೀಯ ಸಂಗೀತವನ್ನು ಇಷ್ಟಪಟ್ಟಿರುವವಳು) ನಮ್ಮ ಉಪನ್ಯಾಸವನ್ನು ಜರ್ಮನ್ ಭಾಷೆಗೆ ಭಾಷಾಂತರಿಸಿದಳು. ಪ್ರದರ್ಶನ ಬಹಳ ಯಶಸ್ವಿಯಾಯಿತು. ಕೆಲವರು ನಮ್ಮ ನೃತ್ಯಗಳ ವಿಚಾರವಾಗಿ ಹೀಗೆಂದರು– "ನಿಮ್ಮ ನೃತ್ಯ ಕಲೆಯಲ್ಲಿ ಆತ್ಮ ಭಾವೋನ್ನತೆ ಇರುವ ಕಾರಣ ನಮಗೆ ಬಹಳ ಪ್ರಿಯವಾದುದು, ಧರ್ಮವೇ ಜಯಪ್ರದವಾದ ವಸ್ತುವೆಂದು ತಿಳಿಯುವ ನಾವು ನಿಮ್ಮ ಭಾರತೀಯ ನೃತ್ಯಗಳಲ್ಲಿನ ಧಾರ್ಮಿಕ ಸಂಬಂಧನನ್ನು ತುಂಬಾ ಮೆಚ್ಚುತ್ತೇವೆ."

ಕಾರ್ಯಕ್ರಮವಾದ ಮೇಲೆ ನಮ್ಮ ಕಲೆಯನ್ನು ಮೆಚ್ಚಿದ ಕೆಲವು ಜನರು ನಮ್ಮನ್ನು ಡಾಕ್ ಕೆಫೇ (Dach Cafe) ಎಂಬ 13ನೇ ಮಹಡಿಯ ಮೇಲಿನ ಹೊಟೇಲಿಗೆ ಊಟಕ್ಕೆ ಕರಕೊಂಡು ಹೋದರು. ನಮ್ಮ ನೃತ್ಯ ಪ್ರದರ್ಶನ ಅದ್ಭುತವಾಗಿತ್ತು ಎಂದು ಮತ್ತೆ ಮತ್ತೆ ಅಭಿನಂದಿಸಿದರು. "ದೇವದಾಸಿಯರು ಇಂದು ದೇವಾಲಯಗಳಲ್ಲಿ ಏಕೆ ನರ್ತಿಸುವುದಿಲ್ಲ?" ಎಂದು ಕೇಳಿದರು. ನಮ್ಮ ದೇಶದ ವಿಷಯವಾಗಿ ಪಾಶ್ಚಾತ್ಯರನೇಕರಿಗೆ ತುಂಬಾ ಅಜ್ಞಾನವಿದೆ ಎನ್ನಬೇಕು. ಆದರೆ ನಮ್ಮ ದೇಶದ ಬಡತನ ಹಾಗೂ ಬರಗಾಲದ ವಿಷಯವಾಗಿ ಮಾತ್ರ ಎಲ್ಲರಿಗೂ ಗೊತ್ತಿದೆ! ನಮ್ಮ ದೇಶಕ್ಕೆ ಬಂದು ಹೋದ ಕೆಲವು ಜರ್ಮನರು "ನಾವು, ನಿಮ್ಮ ನಮ್ಮ ದೇಶಗಳನ್ನು ಹೋಲಿಸುವ ಅಗತ್ಯವೇನು ? ಹಿಂದೂ ದೇಶವನ್ನು ಆ ದೇಶದ ಗುಣಮಾನದಿಂದಲೇ ಅಳೆಯಬೇಕು–ನಿಮ್ಮ ದೇಶ ಬಹಳ ಘನತೆ ಹೊಂದಿದ ದೇಶ" ಎಂದು ಹೊಗಳಿದರು........

ಗಿಸ್ಸೆನಿನಿಂದ ಕಾರ್ಲ್ಸ್‌ರುಹೆ (Karlsruhe) ಗೆ ಹೋದೆವು. ಪ್ರಯಾಣದ ದಾರಿ ಕಪ್ಪಾಗಿಯೂ, ಸಪ್ಪೆಯಾಗಿಯೂ ಇತ್ತು, ಹ್ಯಾಡಲ್‌ಬರ್ಗ್ (Heidelberg) ಎಂಬ ವಿಶ್ವವಿಖ್ಯಾತ ವಿಶ್ವವಿದ್ಯಾನಿಲಯವನ್ನು ಹಾದುಹೋದಾಗ ರೋಮಾಂಚನ

ವಾಯಿತು. ಪತಿಯುವರ ಅದೃಷ್ಟ ಚೆನ್ನಾಗಿದ್ದರೆ ಅವರು ಎಂದೋ ಈ ವಿಶ್ವವಿದ್ಯಾನಿಲಯಕ್ಕೆ ಬಂದು ತನ್ನ ಓದನ್ನು ಮುಂದುವರಿಸಬೇಕಾಗಿತ್ತು. ಹಣದ ಕೊರತೆಯಿಂದಾಗಿಯೂ ಬಂಧುಗಳ ಸಹಾಯವಿಲ್ಲದೆಯೂ ಅದು ಸಾಧ್ಯವಾಗಲಿಲ್ಲ. ಅಂದು ಅವರು ಅಲ್ಲಿ ಓದಿದಲ್ಲಿ ಇಂದು ಹಿಂದೂ ದೇಶದಲ್ಲಿನ ಹೆಸರಾಂತ ಪ್ರಖ್ಯಾತ ರಸಾಯನ ಶಾಸ್ತ್ರಜ್ಞ (Vit-B-Specialist) ರಾಗುತ್ತಿದ್ದರು. ಆದರೆ ನೃತ್ಯ ಕಲೆಗೆ ಗಮನವೀಯುತ್ತಿರಲಿಲ್ಲ ಖಂಡಿತ. ದೇವರು ನಮ್ಮ ಜೀವನವನ್ನು ಬೇರೆ ವಿಧವಾಗಿಯೇ ರೂಪಿಸಿದರು, ತೀರ ಬೇರೆಯಾಗಿ.

ಕಾರ್ಲ್ಸ್‌ರುಹೆನಲ್ಲಿ ಶುಚಿತ್ವದ ಪರಮಾವಧಿ ಎಂಬಂತಿದ್ದ ಒಂದು ಹೊಟೇಲಿನಲ್ಲಿ ನಮ್ಮನ್ನು ಇಳಿಸಿದರು. ಅಲ್ಲಿನ ಕಕ್ಕಸು ಮನೆಯ ಸ್ಥಳ ಫಳಫಳಿಸುತ್ತಿತ್ತು. ಸುವಾಸನೆಯ ಗಾಳಿಯನ್ನು ತುಂಬಿಸಿದ್ದರು. ಉಪಯೋಗಿಸುವುದೇ ಬೇಡವೆನ್ನಿಸಿತು ನಮಗೆ. ನಮ್ಮ ನೃತ್ಯ ಪ್ರದರ್ಶನಕ್ಕಾಗಿ ಅವರು ತುಂಬಾ ಶ್ರಮಪಟ್ಟು ಎಲ್ಲ ಅನುಕೂಲತೆಗಳನ್ನೂ ಒದಗಿಸಿದ್ದರು. ಅಂದವಾದ ರಂಗಮಂದಿರ-ರಂಗಸ್ಥಳ-ತೆರೆ ಪರದೆಗಳು-ವಿದ್ಯುಚ್ಛಕ್ತಿಯ ದೀಪಗಳ ಅನುಕೂಲತೆ ಎಲ್ಲವೂ ಇದ್ದವು. ಪ್ರದರ್ಶನಕ್ಕೆ ಜನರು ಕಿಕ್ಕಿರಿದು ನನಗೆ ತುಂಬಾ ಉಲ್ಲಾಸವುಂಟಾಗುವಂತೆ ಮಾಡಿದರು. ಹೃದಯಂಗಮವಾದ ಮೆಚ್ಚಿಗೆ ನೀಡಿದರು-ಆದರೆ ನಮಗೆ ಅಂದಿನ ಪ್ರಯೋಗಜ್ಞರು (Technicians) ನಮ್ಮ ಟೇಪ್ ರೆಕಾರ್ಡರನ್ನು ಸರಿಯಾಗಿ ನಡೆಸಲಿಲ್ಲ ಎಂಬ ಅಸಮಾಧಾನದ ಚಿಂತೆ ಆಯಿತು. ಪ್ರದರ್ಶನವಾದ ಮೇಲೆ ನಮ್ಮನ್ನು ಶ್ಲಾಘಿಸಲು ಬಂದ ಗುಂಪನ್ನು ನೋಡಿ ಮನಸ್ಸು ಕೃತಜ್ಞತೆಯಿಂದ ತುಂಬಿತು. ಕಾರ್ಲ್ಸ್‌ರೂಹೆ ನಮಗೆ ಒಂದು ಸವಿನೆನಪಿನ ಸಂದರ್ಭ........ರಾತ್ರಿ ಅವರು ನಮಗೆ ನೀಡಿದ ಔತಣ, ವೈಭವದ ಊಟ, ಸ್ವಾರಸ್ಯಕರ ಸ್ನೇಹಿತರು, ಜರ್ಮನಿಯಲ್ಲಿನ ರಸಿಕರು ಅನುಭವಿಸುವ ಅತ್ಯಂತ ಶ್ರೇಷ್ಠವರ್ಗದ ಭೋಜನ, ಅವರ ಶ್ರೀಮಂತಿಕೆ ಇವೆಲ್ಲ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯುವ ಅನುಭವಗಳು.

ಅಲ್ಲಿಂದ ನಾವು ಹ್ಯಾಡನ್‌ಹ್ಯಾಮ್ (Heidenheim) ಎಂಬಲ್ಲಿಗೆ ಪ್ರಯಾಣ ಮಾಡಿದೆವು. ಅದು ಕೂಡ ನಮಗೆ ಅತಿ ಸವಿಯಾದ ಅನುಭವವಾಗಿ ಪರಿಣಮಿಸಿತು. ಹ್ಯಾಡನ್‌ಹ್ಯಾಮ್ ಒಂದು ಕೈಗಾರಿಕಾಪಟ್ಟಣ. ಕಾಗದ, ಕಾಗದದ ಮೆತ್ತು ಭಾಗ (Pulp) ಅಲ್ಲದೆ ಕಂಬಳಿಗಳು, ಹಾಸಿಗೆ ಮುಂತಾದುವುಗಳ ಕೈಗಾರಿಕೆಗಳಿಗೂ ಪ್ರಸಿದ್ಧವಾಗಿದೆ. ನಾವು ಉಲ್ಮ್ (Ulm) ಎಂಬ ಪಟ್ಟಣವನ್ನು ಹಾದು ಹೋಗುವಾಗ ಅಲ್ಲಿನ 250 ಅಡಿ ಎತ್ತರದ ಉಲ್ಮ್ ಕೆಥಿಡ್ರಲ್‌ನ್ನು ಕಂಡೆವು. ಉಲ್ಮ್ ಊರು ಜಗತ್ಪ್ರಖ್ಯಾತ ವಿಜ್ಞಾನ ಶಾಸ್ತ್ರಜ್ಞ ಆಲ್ಬರ್ಟ್ ಐನ್‌ಸ್ಟೈನ್ (Albert Einstein) ಹುಟ್ಟಿದ ಪವಿತ್ರ ಸ್ಥಳ.........

ನಮಗೆ ಅಲ್ಲಿ ಕೊಟ್ಟ ಸೌಕರ್ಯಗಳು ಅತ್ಯಂತ ಮೆಚ್ಚುವಂತಿದ್ದುವು. ಸುಂದರವಾದ ಹೊಟೇಲು. ಹೊಟೇಲಿನಲ್ಲೇ ಇದ್ದ ಸುಂದರವಾದ ಹಾಲಿನಲ್ಲಿ ಪ್ರದರ್ಶನ. ಅನುಕೂಲವಾದ ರಂಗಸ್ಥಳ, ರಂಗಮಂಟಪದ ಸಲಕರಣೆಗಳು ಇವೆಲ್ಲವೂ ತುಂಬಾ ಉತ್ತೇಜನವನ್ನು ಕೊಡುವಂತಿದ್ದುವು. ಇಂಡೋ–ಜರ್ಮನ್ ಕಲ್ಚರಲ್ ಸಂಘದವರು (Indo-German Cultural Society) ಎಲ್ಲೆಲ್ಲೂ ನಮ್ಮನ್ನು ಅಕ್ಕರೆಯಿಂದ ಸ್ವಾಗತಿಸಿ, ಸತ್ಕರಿಸಿ ಬೀಳ್ಕೊಡುತ್ತಿದ್ದರು. ಹ್ಯಾಡನ್‌ಹ್ಯಾಮಿನಲ್ಲಿ ಸೇರಿದ್ದ ಸುಮಾರು 200 ಮಂದಿ ಪ್ರೇಕ್ಷಕರು ನಮ್ಮ 'ನೀಲಕ್ಕಾರ್ ಮುಗಿಲ್', 'ಯಾಹಿ ಮಾಧವ' ಮತ್ತು 'ಗೀತೋಪದೇಶ' ಗಳಿಗೆ ಅಸಾಧಾರಣವಾಗಿ ಕರತಾಡನ ಮಾಡಿದರು. ಒಬ್ಬ ಯುವತಿಯು ನಮ್ಮ ನೃತ್ಯಗಳ ವರ್ಣನೆಯನ್ನು ಜರ್ಮನ್‌ನಲ್ಲಿ ಭಾಷಾಂತರಿಸಿದಳು. ಪ್ರದರ್ಶನವಾದ ಮೇಲೆ ಊಟದ ಸಮಯ. ಊರಿನ ಗಣ್ಯವ್ಯಕ್ತಿಗಳೆಲ್ಲ ಸೇರಿ ನಮ್ಮನ್ನು ಭೆಟ್ಟಿಮಾಡಿ, ನಮ್ಮ ದೇಶ, ಕಲೆ, ಸಂಗೀತ, ಭಾಷೆಗಳ ವೈವಿಧ್ಯ, ಸಾಂಪ್ರದಾಯಕ ನೃತ್ಯ ಪರಂಪರೆ, ಮತ, ಧರ್ಮಗಳು, ನಮ್ಮ ನೃತ್ಯ ಜೋಡಣೆಗಳು, ನಮ್ಮ ಪ್ರದರ್ಶನಗಳ ವೈಶಿಷ್ಟ್ಯ ಇವೇ ಮುಂತಾದ ಅನೇಕಾನೇಕ ಸಂಗತಿಗಳನ್ನು ಕುರಿತು ಪ್ರಶ್ನೆಗಳನ್ನು ಕೇಳಿ ವಿಷಯಗಳನ್ನು ಅರಿತುಕೊಂಡರು. ನಮ್ಮ ನೃತ್ಯ ಸಂಗೀತ ಕೆಲವರಿಗೆ ಗ್ರೀಕ್ ಸಂಗೀತವಂತೆಯೇ ಕೇಳಿಸಿತಂತೆ !

ಹ್ಯಾಡೆನ್‌ಹ್ಯಾಮ್‌ದಿಂದ ಫ್ರ್ಯಾಬುರ್ಗ್ (Freiburg) ಎಂಬ ಊರಿಗೆ ಕಪ್ಪು ಕಾಡುದಾರಿಯಾಗಿ (Schwarz Wald ಅಥವಾ Black Forest) ಪ್ರಯಾಣ ಮಾಡಿದೆವು. ಈ ಕಪ್ಪು ಕಾಡು ಚಿತ್ತಲೆಯಾಗಿದ್ದು ಆಗ ತಾನೇ ಬಿಳೀ ಹಿಮದ ಹೊದಿಕೆ ಪಡೆದಂತಿತ್ತು. ಪ್ರಯಾಣದ ದಾರಿ ಅತ್ಯಂತ ಸುಂದರವಾಗಿತ್ತು. ಪ್ರಯಾಣ ಯಾವಾಗಲೂ ನಮಗೆ ಸ್ವಾರಸ್ಯವಾದ ಕಾರ್ಯಕ್ರಮವಾಯಿತು. ರೈಲು ಆಳವಾದ ಕಣಿವೆಗಳನ್ನೂ, ಸುರಂಗಗಳನ್ನೂ ಭೇದಿಸಿ ಹೋಗುತ್ತಿತ್ತು. ಒಮ್ಮೊಮ್ಮೆ ದಟ್ಟವಾದ ಕಾಡುದಾರಿಯಾಗಿ, ಬಂಡೆಕಲ್ಲುಗಳನ್ನು ಹಾದು, ಸೈಪ್ರೆಸ್ (Cypress) ಮತ್ತು ಫರ್ (Fir) ಮರಗಳಿರುವ ಕಾಡುಗಳ ಮಾರ್ಗವಾಗಿ ಹೋಗುತ್ತಿದ್ದಾಗ ಕಣ್ಣಿಗೂ ಮನಸ್ಸಿಗೂ ಅತ್ಯಾನಂದವಾಗುತ್ತಿತ್ತು. ನಿಸರ್ಗದ ದೃಶ್ಯಗಳು ಘಳಿಗೆ ಘಳಿಗೆಗೆ ಬದಲಾಯಿಸಿ ಅದ್ಭುತ ಚಿತ್ರಗಳನ್ನು ನೀಡುತ್ತಿದ್ದುವು. ಸೂರ್ಯನ ಬಿಸಿಲು ಪ್ರಕಾಶಿಸುವ ಸಮಯದಲ್ಲೇ ಫಕ್ಕನೆ ಹಿಮವೂ ಬೀಳುತ್ತಿತ್ತು ! ಸಣ್ಣ ಸಣ್ಣ ಹಿಮದ ಚೂರುಗಳು ಹಗುರವಾಗಿದ್ದು ಅಡ್ಡ ಅಡ್ಡ ಬೀಳುತ್ತಿರುವಾಗ ಬಿಸಿಲಿನಲ್ಲಿ ಅವು ಹತ್ತಿಯಂತೆ ಹರಡಿಕೊಂಡು ಕಣ್ಣಿಗೆ ಅಂದವಾದ ದೃಶ್ಯವಾಗಿತ್ತು. ಈ ಕಾಡು ಪ್ರದೇಶದ ನದಿಗಳಲ್ಲಿ ನಮ್ಮ ಭಾರತದ ನದಿಗಳಲ್ಲಿರುವ ಹುಚ್ಚು ರಭಸವಿರಲಿಲ್ಲ. ಕಾಲುವೆಗಳಲ್ಲಿ ಗಂಭೀರತೆ ಇದ್ದು ಒಂದು ವಿಧದ ಶಾಂತತೆ ಅದನ್ನು ಆವರಿಸಿದಂತೆ ತೋರಿತು! ಈ ರೈಲು ಮಾರ್ಗ ನಮ್ಮ ಜನ್ಮದಲ್ಲಿ ನಾವು ಕಂಡ ಅದ್ವಿತೀಯ ನಿಸರ್ಗದ ರೂಪರಾಶಿ!

ದಾರಿಯುದ್ದಕ್ಕೂ ಹೆಚ್ಚು ಹೆಚ್ಚಾಗಿ ಹಿಮ ಬೀಳುತ್ತಿದ್ದುದರಿಂದ ರೈಲು ನಿಧಾನವಾಗಿ ಚಲಿಸುತ್ತಿತ್ತು. – ಪ್ರಯಾಣಿಕರ ರಕ್ಷಣೆಗಾಗಿ.

ಫ್ರ್ಯೈಯರ್‌ಬುರ್ಗ್ ಒಂದು ಚಿಕ್ಕದಾದ ಸುಂದರವಾದ ಊರು. ಅಲ್ಲಿನ ಕೆಥಿಡ್ರಲ್ ಪ್ರಸಿದ್ಧತೆ ಪಡೆದಿದೆ. 11ನೇ ಶತಮಾನದಲ್ಲಿ ಅದನ್ನು ಕಟ್ಟಲು ಆರಂಭಿಸಿ 15ನೇ ಶತಮಾನದಲ್ಲಿ ಅದನ್ನು ಮುಗಿಸಿದರಂತೆ. ಈ ಊರಿನಲ್ಲಿ ನಾವು ನೃತ್ಯ ಪ್ರದರ್ಶನವನ್ನು ಕೊಡಲಿಲ್ಲ. ಬರಿಯ ಉಪನ್ಯಾಸ. ಅಲ್ಲಿನ ಏರ್ಪಾಡೂ ಚೆನ್ನಾಗಿರಲಿಲ್ಲ. ಪ್ರೇಕ್ಷಕರೂ ವಿಶೇಷ ಇರಲಿಲ್ಲ. ಇದ್ದವರೂ ಆಸೆಯಿಂದ ಕೇಳಲಿಲ್ಲ. ಅಂತೂ ನಮ್ಮ ಕರ್ತವ್ಯವನ್ನು ಮಾಡಿ ಮುಗಿಸಿದೆವು. ಫ್ರ್ಯೈಯರ್‌ಬುರ್ಗ್ ನೋಡತಕ್ಕ ಪಟ್ಟಣ- ಅದನ್ನು ಭೇಟಿ ಮಾಡಿದ ತೃಪ್ತಿ ಪಡೆದೆವು ಅಷ್ಟೇ.

ಅಲ್ಲಿಂದ ಪ|| ಜರ್ಮನಿಯನ್ನು ಧಾರಾಳವಾಗಿ ಒಂದು ಕೊನೆಯಿಂದ ಇನ್ನೊಂದು ಕೊನೆಯವರೆಗೂ ಪ್ರಯಾಣ ಮಾಡಿ ಎರ್ಲಾಂಗೆನ್ (Erlangen) ಎಂಬ ಊರನ್ನು ಸೇರಿದೆವು. ನಮ್ಮ ಕೆಲಸವು ಬಹಳ ಗಡುಸಾಗಿತ್ತು. ಆದರೂ ಅಲ್ಲಿನ ಆತಿಥ್ಯಕಾರರ ಆದರ ಸತ್ಕಾರ, ಅವರು ಕೊಟ್ಟ ಸೌಕರ್ಯ, ಸಂತೋಷಗಳಿಂದಾಗಿ ನಮ್ಮ ಕಷ್ಟವೆಲ್ಲವೂ ಮರೆತು ಹೋಗುತ್ತಿತ್ತು. ಪ|| ಜರ್ಮನಿಯ ತಂಪಾದ ಪಾನೀಯಗಳು, ಶ್ರೀಮಂತ ಆಹಾರ, ಅದರಲ್ಲೂ ಆ ಸಮಯ ಕ್ರಿಸ್‌ಮಸ್ ಸಮಯವಾದ್ದರಿಂದ ಎಲ್ಲಿಲ್ಲದ ವಿಜೃಂಭಣೆ, ಉತ್ಸುಕತೆ, ಮನಸ್ಸಿಗೆ ಆಹ್ಲಾದವನ್ನುಂಟು ಮಾಡಿ ನಮ್ಮ ದಣಿವನ್ನು ಪರಿಹಾರ ಮಾಡುವಂತಿದ್ದುವು. ನಾವು ನ್ಯೂರ್ನ್‌ಬರ್ಗ್ (Nurnberg) ದಾರಿಯಾಗಿ ಎರ್ಲಾಂಗೆನ್ ಸೇರಿದ್ದೆವು. ನ್ಯೂರ್ನ್‌ಬರ್ಗ್‌ದಲ್ಲಿರುವ ಕೆಥಿಡ್ರಲ್, ಆಲ್ಬ್ರೆಕ್ಟ್ ಡ್ಯೂರರ್ (Arlbrecht Durer) ಅವರ ಪ್ರತಿಮೆ (Statue) ನ್ಯಾಯಾಂಗ ಮಂದಿರ (Place of Justice) ಮೊದಲಾದುವನ್ನು ನೋಡಿದೆವು. ಈ ನ್ಯಾಯಾಂಗದ ಮಂದಿರ ಯುದ್ಧ ಕಾಲದ ಅಪರಾಧಿಗಳನ್ನು ಯುದ್ಧವಾದ ಅನಂತರ ವಿಚಾರಣೆಗೆ ಗುರಿ ಮಾಡಿದ್ದ ಸ್ಥಳವಲ್ಲವೇ ?

ಎರ್ಲಾಂಗೆನಿನಲ್ಲಿ ನಮ್ಮ ಉಪನ್ಯಾಸ ವಿಶ್ವವಿದ್ಯಾನಿಲಯದ ಚಟುವಟಿಕೆಗಳಲ್ಲೊಂದಾಗಿದ್ದು ಅದನ್ನು ಪಾಠವನ್ನು ಮಾಡುವ ದಿನ ನಿತ್ಯದ ಕೋಣೆಯಲ್ಲೇ ಏರ್ಪಡಿಸಿದ್ದರು. ಅವರ ಅಂದಿನ ಆಸಕ್ತಿ, ವಿದ್ಯಾರ್ಜನೆಗಾಗಿ, ವಿನೋದಕ್ಕಲ್ಲ ಎಂಬುದು ವ್ಯಕ್ತವಾಯಿತು. ಹಲವಾರು ಪ್ರಶ್ನೆಗಳನ್ನು ಕೇಳಿ ತಮಗೆ ಬೇಕಾದ ವಿಷಯಗಳನ್ನೆಲ್ಲ ತಿಳಿದುಕೊಂಡರು. ಧನ್ಯವಾದಗಳನ್ನು ಅರ್ಪಿಸುತ್ತಾ ಅಪರೂಪದ ಹಳದಿ ಕಾರ್ನೇಶನ್ (Carnation) ಹೂಗಳ ಗುಚ್ಛವೊಂದನ್ನು ಕೊಡುವಾಗ ಆನಂದದಿಂದ ಮೈ ಜುಮ್ಮೆನಿಸಿತು ! ಜರ್ಮನ್ ಜನರಿಗೆ ಹೂಗಳೆಂದರೆ ಅತ್ಯಂತ ಪ್ರೀತಿ. ನನ್ನ ಕೈಯಲ್ಲಿ ಹೂಗುಚ್ಛಗಳನ್ನು ಕಂಡೊಡನೆ ಹೊಟೇಲಿನ ಕೆಲಸಗಾರರು ಚಾಚೂ

ಶಬ್ದವೆತ್ತದೆ ಓಡಿಹೋಗಿ ಅದನ್ನಿಡಲು ಪುಷ್ಪದಾನಿಗಳನ್ನು ತಂದು ಕೊಡುತ್ತಿದ್ದರು. ಅಲ್ಲದೆ ಹೂಗುಚ್ಛಗಳನ್ನು ಕಾಪಾಡಲು ತುಂಬಾ ಸಹಕರಿಸುತ್ತಿದ್ದರು.

ಎರ್ಲಾಂಗೆನಿನಿಂದ ಸ್ಟುಟ್‌ಗಾರ್ಟಿಗೆ (Stuttgart) ಹೋದೆವು. ಅಲ್ಲಿನ ಇಂಡೋ-ಜರ್ಮನ್ ಸಾಂಸ್ಕೃತಿಕ ಸಂಘದ (Indo-German Cultural Society) ಕೇಂದ್ರ ಸ್ಥಾನವಾದ ಆ ಪಟ್ಟಣಕ್ಕೆ ಕಾಲಿಟ್ಟೊಡನೆಯೇ ನಮ್ಮ ಹಲವು ವರ್ಷಗಳ ಕನಸು ನೆನಸಾಯಿತು. ನಮ್ಮನ್ನು ಹೂಗುಚ್ಛಗಳಿಂದ ರೈಲು ನಿಲ್ದಾಣದಲ್ಲಿ ಸ್ವಾಗತಿಸಿದರು. ಅದೇ ರಾತ್ರಿ ಅಲಂಕೃತವಾದ ರಂಗಮಂದಿರದಲ್ಲಿ ನಮ್ಮ ನೃತ್ಯ ಪ್ರದರ್ಶನವಾಯಿತು. ಪ್ರೇಕ್ಷಕ ವೃಂದವು ಕಿಕ್ಕಿರಿದು ತುಂಬಿ ಅನೇಕರು ಸುತ್ತಲೂ ನಿಂತು ನೋಡುವಂತೆ ಏರ್ಪಾಡಾಯಿತು. ನಮಗಲ್ಲಿ ಅಂದು ಅನೇಕ ಮೈಸೂರಿನವರು ಭೇಟಿಯಾದರು. ಬೆಂಗಳೂರಿಗೆ ಬಂದ ಜರ್ಮನ್ ರಾಯಭಾರಿ (German Consul) ಕೂಡ ನಮ್ಮನ್ನು ಮಾತನಾಡಿಸಿ ನಮ್ಮ ಕಲೆಯನ್ನು ಹೊಗಳಿದರು. ಜನರು ಪ್ರದರ್ಶನವನ್ನು ನೋಡಿ ವಿಶೇಷ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ನಮ್ಮ ನೃತ್ಯ ವಿವರಣೆಯನ್ನು ಜರ್ಮನ್ ಭಾಷೆಗೆ ಭಾಷಾಂತರಿಸುವ ಏರ್ಪಾಡಾಗಿತ್ತು; ಆದರೂ ಕೆಲವು ಶಬ್ದಗಳಿಗೆ ಸರಿಯಾದ ಜರ್ಮನ್ ಶಬ್ದಗಳು ಸಿಗದೆ ಅವರಿಗೆ ಕಷ್ಟವಾಯಿತು ಎನ್ನಬೇಕು.

ಅಲ್ಲಿಂದ ಮ್ಯುನ್‌ಶೆನ್‌ಗೆ (Munchen) ಪ್ರಯಾಣ. ಅದು ಬಹಳ ಸುಂದರವಾದ ನಗರ.ಅಲ್ಲಿ ನಮ್ಮ ಕೊನೆಯ ಉಪನ್ಯಾಸ ಸಾಂಟಾಕ್ಲೋಸ್ (Santa Claus) ದಿನದಲ್ಲಿ ನಡೆದುದರಿಂದ ಹಾಲಿನಲ್ಲಿ ಬರೀ 100 ಜನರು ಮಾತ್ರ ಸೇರಿದ್ದರು. ನಮ್ಮ ಪ್ರದರ್ಶನ ಆರಂಭವಾದೊಡನೆಯೇ ಅಲ್ಲಿನ ವಾತಾವರಣ ಬದಲಾಯಿಸಿತು. ಅಲ್ಲಿ ನೆರೆದಿದ್ದ ಜನರು ಇಂತಹ ಸುವರ್ಣ ಸಂದರ್ಭವನ್ನು ಕಳಕೊಂಡ ಅನೇಕಾನೇಕ ಇತರರಿಗಾಗಿ ಮರುಗಿದರು. ಕೊನೆಯಲ್ಲಿ ಕೆಂಪು ಗುಲಾಬಿ ಹೂವಿನ ಗುಚ್ಛವೊಂದನ್ನು ಕೊಟ್ಟು ಅವರು ತಮ್ಮ ಆನಂದವನ್ನು ವ್ಯಕ್ತಪಡಿಸಿದರು. (ಆಗ ಆ ಹೂವಿಗೆ 30 D. M. ನ್ನು ಕೊಟ್ಟಿದ್ದರಂತೆ!)

ಮರುದಿನ ನಮಗೆ ಮ್ಯುನ್‌ಶೆನ್ ನಗರದ ದರ್ಶನವನ್ನು ಮಾಡಿಸಿದರು. ಮ್ಯುನ್‌ಶೆನ್ ಅಂದರೆ 'ಚಿಕ್ಕ ಸನ್ಯಾಸಿ' ಯನ್ನು ನೋಡಿದೆವು. ಈ 'ಚಿಕ್ಕ ಸನ್ಯಾಸಿ' ಯಿಂದಾಗಿ ನಗರಕ್ಕೆ ಈ ಹೆಸರು ಬಂದಿದೆಯಂತೆ. ಅನೇಕಾನೇಕ ಪ್ರತಿಮೆಗಳು ಮೆಕ್ಸಿಮಿಲಿಯನ್ (Maximillian) ವಿಶ್ವವಿದ್ಯಾಲಯ (ಅಲ್ಲಿ 20,000 ವಿದ್ಯಾರ್ಥಿಗಳಿರುವರಂತೆ. ಇಂಗ್ಲಿಷ್ ಪಾರ್ಕ್ (English Park) ಈಸರ್ ನದಿ, ನೆಪೋಲಿಯನ್ ಮತ್ತು ಬೆವೇರಿಯನ್ (Bavarian) ಸಾಮಂತರ ವಿಜಯ ಸ್ಥಂಭಗಳು – ಹಿಟ್ಲರ್, ಮುಸೋಲಿನಿ, ಚೆಂಬರ್‌ಲೈನ್ ಒಟ್ಟಿಗೆ ಸೇರಿ ವಿಚಾರ ವಿನಿಮಯ ಮಾಡಿಕೊಂಡ

ಕೌನ್ಸಿಲ್ ಚೇಂಬರ್, (Council Chamber), 1937ನೇ ಇಸವಿಯ ಮ್ಯುನ್‌ಶೆನ್ ಒಪ್ಪಂದವನ್ನು ಸಹಿ ಮಾಡಿದ ಸ್ಥಳ, ಇವೆಲ್ಲವನ್ನೂ ತೋರಿಸಿದರು. ಅಲ್ಲಿ ಸುಮಾರು 170ರ ಮೇಲೆ ಕ್ರೈಸ್ತ ದೇವಾಲಯಗಳಿವೆಯಂತೆ, ಹೆಚ್ಚಾಗಿ ರೋಮನ್ ಕ್ಯಾಥೋಲಿಕ್‌ರದು. ಬವೇರಿಯನ್ ಅರಸರ ಅರಮನೆಗಳು, ರಾಜ್ಯಾಧಿಕಾರಿಗಳ ಬಂಗಲೆಗಳು, ವಸ್ತು ಪ್ರದರ್ಶನಗಳು, ರಾಷ್ಟ್ರೀಯ ರಂಗಮಂದಿರ, ಬವೇರಿಯದ ಸೈನಿಕರ ವಸ್ತು ಸಂಗ್ರಹಾಲಯ (ಯುದ್ಧ ಮುಗಿದ ನಂತರ ಯಾವ ಸ್ಥಿತಿಯಲ್ಲಿತ್ತೋ ಇಂದಿಗೂ ಅದೇ ಸ್ಥಿತಿಯಲ್ಲಿದೆಯಂತೆ.), ಕೇಂದ್ರ ಅರಸರ ಸ್ಥಳ, ಗೊಂಬೆಯಾಟದ ಚಿಕ್ಕ ರಂಗಸ್ಥಳ, 1870ನೇ ಇಸವಿಯಲ್ಲಿ ಕಟ್ಟಿಸಿದ ಶಾಂತಿಸ್ಥಂಭ (ಜರ್ಮನಿ ಮತ್ತು ಫ್ರಾನ್ಸ್‌ಗಳ ಮಧ್ಯೆ ನಡೆದ ಶಾಂತಿಯ 20 ವರುಷಗಳ ಅವಧಿಯಾದ ಮೇಲೆ ಕಟ್ಟಿಸಿದ ಸ್ಥಂಭವದು) ಇವನ್ನೆಲ್ಲ ನೋಡಿದೆವು. 1972 ರಲ್ಲಿ ಮ್ಯೂನಿಕ್ ನಗರ ವಿಶ್ವಕ್ರೀಡೆಗಳನ್ನು (Olympics) ಜರುಗಿಸಲಿದೆ. ಆದ್ದರಿಂದ ನಗರವನ್ನೆಲ್ಲ ಅಗೆದು ಸುರಂಗ ಮಾರ್ಗಗಳ ರೈಲುಮಾರ್ಗಗಳಿಗೆ ತಯಾರಿ ನಡೆಸುತ್ತಿದ್ದಾರೆ! ಅಂತೂ ಸಣ್ಣ ಹಿಮವರ್ಷ ಆಗುತ್ತಿರುವಾಗ ನಾವು ಆ ನಗರವನ್ನು ನೋಡಿ ಸುತ್ತಾಡುತ್ತಿದ್ದಂತೆ ಮನಸ್ಸು ಕೃತಜ್ಞತೆಯಿಂದ ತುಂಬಿತು. ಅಲ್ಲಿ ನಮಗೆ ಒಂದು ದಿನ ರಜೆ ಕೊಟ್ಟು ವಿಶ್ರಮಿಸಿಕೊಳ್ಳಲು ಅವಕಾಶ ಕೊಟ್ಟರು. ಆತಿಥ್ಯಕಾರರು ನಮಗೆ ಅಂದು ಸಂಜೆ ಜರುಗಲಿರುವ ಸಂಗೀತ ನಾಟಕದ ಟಿಕೇಟನ್ನು ಕಳಿಸಿದರು. ಈ ರಂಗಮಂದಿರದಲ್ಲಿ ನಾವಿಬ್ಬರೇ ಭಾರತೀಯರು, ಸಂಗೀತ ನಾಟಕವು ಬಹಳ ಚೆನ್ನಾಗಿತ್ತು. ಮೈ ಮನಸ್ಸಿಗೆ ವಿಶ್ರಾಂತಿ ಪಡೆದು ಮತ್ತೆ ಚೇತನಾಯುಕ್ತರಾದೆವು.

ಪ|| ಜರ್ಮನಿಯನ್ನು ಸುತ್ತಾಡಿದಂತೆ ನಮಗೆ ಆ ದೇಶದ ವಿಷಯವಾಗಿ ಕೆಲವು ಅಭಿಪ್ರಾಯಗಳಾದುವು. ಆ ದೇಶದಲ್ಲಿ ಗಂಡಸರಿಗೆ ಹೆಂಗಸರಿಗಿಂತ ಪ್ರಾಮುಖ್ಯತೆಯಿದೆ; ಸಾಧಾರಣ ಹಿಂದೂ ದೇಶದಲ್ಲಿದ್ದಂತೆ; ಇಂಗ್ಲೆಂಡ್ ಅಥವಾ ಫ್ರಾನ್ಸಿನಲ್ಲಿರುವಂತೆ ಹೆಂಗಸರಿಗೆ 'ತಲೆ ಬಾಗಿಸುವ' ಸ್ವಭಾವವಿದ್ದ ಹಾಗೆ ಕಾಣಲಿಲ್ಲ. ಇಂಗ್ಲಿಷ್ ಭಾಷೆಯಲ್ಲಿದ್ದಂತೆ ಜರ್ಮನ್ ಭಾಷೆಯಲ್ಲಿ ಹೆಚ್ಚಾದ ವ್ಯಂಗ್ಯ, ನಗೆ, ವಿನೋದ ಇದ್ದ ಹಾಗೆ ಕಾಣಲಿಲ್ಲ. ಜರ್ಮನಿಯಲ್ಲಿ ಮಿತಿಮೀರಿ ಆಹಾರ ಸಮೃದ್ಧಿ ಇದೆ. ಎಲ್ಲವೂ ಮಿತಿಮೀರಿಯಾಗಿಯೇ ಇದೆ ಎನ್ನಬಹುದು! ಹೊಸ ಹೊಸ ವಸ್ತುಗಳನ್ನು ತಯಾರಿಸಿದಂತೆ, ಹೆಚ್ಚಾದಂತೆ, ಮಿತಿಮೀರಿದಂತೆ – ಹಳೆಯ ವಸ್ತುಗಳಿಗೆ ಸ್ಥಾನವೆಲ್ಲಿ? ಎಂಬ ಯೋಚನೆ ನಮಗೆ ಕಾಣುತ್ತದೆ! ಆಹಾರ ಮಾರುವ ಅಂಗಡಿಗಳಲ್ಲಿ ನೋಡಿದ ಆಹಾರವಂತೂ ನಮ್ಮನ್ನು ಬೆರಗು ಮಾಡಿತು. ಮೈಲು ಮೈಲುಗಳ ಉದ್ದ ಬೇಕು ಬೇಕಾದ ವಿಧ ವಿಧವಾದ ಆಹಾರ ಸಮೃದ್ಧಿ, ಮನುಷ್ಯನು ಮಿತಿಮೀರಿ ತಿಂದು ಬೊಜ್ಜು ಬೆಳೆಸಿ ದಪ್ಪ ದೇಹಾಕೃತಿ ಪಡೆಯುವುದೂ ಇಲ್ಲಿ ಸಾಮಾನ್ಯ ದೃಶ್ಯ. ಈ ಸ್ಥೂಲತ್ವವನ್ನು ಹಿಡಿತದಲ್ಲಿಡುವ ಪ್ರಯತ್ನಕ್ಕೆ ಒಂದು ಸಂಘವನ್ನೇ ಸ್ಥಾಪಿಸಿದ್ದಾರೆ–'ಎಂಟಿ ಒಬೆಸಿಟಿ

ಸೆಂಟರ್(Anti Obesity Centre) ಎಂದು. ಭೂಲೋಕದ ಅರ್ಧ ಜನಸಂಖ್ಯೆ ಹಸಿವಿನಿಂದ ಸಾಯುತ್ತಿರುವಾಗ ಇಂತಹ ಸಂಘದ ಅವಶ್ಯಕತೆಯಿರುವುದೂ ಆಶ್ಚರ್ಯ ವಲ್ಲವೇ ? ಇಲ್ಲಿನ ಜನರು ಉದ್ದವಾಗಿ, ದಪ್ಪವಾಗಿದ್ದು, ಆಜಾನುಬಾಹುಗಳಾದ ವ್ಯಕ್ತಿಗಳು. ಶಾಸ್ತ್ರೀಯ ಸಮತೋಲ ಆಹಾರ ಪದ್ಧತಿಗೆ ತಕ್ಕ ಆಹಾರವನ್ನು ತಿಂದುಕೊಂಡು 10 ವರ್ಷದ ಮಕ್ಕಳು ಹದಿನೆಂಟು ವರ್ಷದವರಂತೆ ಕಾಣುವುದೂ ಹೆತ್ತವರಿಗೆ ಒಂದು ದೊಡ್ಡ ಸಮಸ್ಯೆಯಾಗಿದೆ! ಜನರು ಆಹಾರಪ್ರಿಯರು ಆದರೂ ಆಹಾರವನ್ನು ಹಾಳು ಮಾಡುವುದಿಲ್ಲ. ಯುದ್ಧಕಾಲದ ದುರವಸ್ಥೆಯನ್ನು ಅವರು ಮರೆತಿಲ್ಲ. ಜರ್ಮನ್ ಹೆಂಗಸರು 30 ವರ್ಷ ವಯಸ್ಸು ದಾಟಿದೊಡನೆಯೇ ಅಡ್ಡ ಬೆಳೆಯಲು ಆರಂಭ. ಸಾಧಾರಣವಾಗಿ ಒಳ್ಳೆಯ ದೇಹಾಕೃತಿಯನ್ನು ಪಡೆದ ಮಹಿಳೆಯರನ್ನು ಕಾಣುವುದು ದುರ್ಲಭ. ತಾಯಂದಿರಾಗಿ ಇಲ್ಲಿನ ಮಹಿಳೆಯರು ಅತಿ ಕಟ್ಟುನಿಟ್ಟಾದ ಶಿಸ್ತಿನಿಂದಿದ್ದು ಕಾರ್ಯ ಸಮರ್ಥರೂ ಆಗಿದ್ದಾರೆ. (Charts-Rules-Regulations) ರೇಖಾಪಟ-ನಿಯಮ-ನಿಬಂಧನೆಗಳಿಗೆ ಸರಿಯಾಗಿ ಮಕ್ಕಳನ್ನು ಬೆಳೆಸುತ್ತಾರೆಯೇ ವಿನಹ ನಮ್ಮಲ್ಲಿದ್ದ ಹಾಗೆ ಪ್ರೇಮ, ಆನಂದ ಮೊದಲಾದ ರಸ ಭಾವನೆಗಳಿಂದಲ್ಲ. ಗೃಹಿಣಿಯರು ಕಷ್ಟಜೀವಿಗಳು ನಿಜ, ಆದರೆ ಕೇವಲ ಶಾಸ್ತ್ರ, ತಂತ್ರೀಯ ದೃಷ್ಟಿಯಿಂದ. ಮಗುವಿನ ಬೆಳವಣಿಗೆಗೆ ಯಾವ ಅಹಾರ ಒಳ್ಳೆಯದೋ, ಅದು ರುಚಿಗೆ ಹಿತವಾಗಿರದೆ ಇದ್ದರೂ, ಮಗು ಒಪ್ಪದೇ ಇದ್ದರೂ, ಅದನ್ನೇ ಮಗುವಿನ ಬಾಯಲ್ಲಿ ಮತ್ತೆ ಮತ್ತೆ ತುರುಕಿಸಿ ಬಲವಂತವಾಗಿ ತಿನ್ನಿಸುವುದನ್ನು ಕಂಡೆವು. ರಾತ್ರಿ ಮಗುವು ಮಲಗಿರಬೇಕಾದ ಸಮಯ ಮಲಗದೆ ಅಳುತ್ತಿದ್ದರೆ ಅದರ ಹತ್ತಿರ ಹೋಗದೆ ಮಗುವನ್ನು ಸಮಾಧಾನ ಪಡಿಸದೆ, ತಮ್ಮಷ್ಟಕ್ಕೆ ಹಾಯಾಗಿ ಮಲಗುವ ತಾಯಂದಿರನ್ನು ನೋಡಿದೆ. ಮಗು ಬೆಳಗಿನವರೆಗೆ ಅತ್ತು ಅತ್ತು ಸುಸ್ತಾದರೂ ತಾಯಿಗೆ ಕರುಣೆ ಬರಬಾರದಂತೆ! "ಮಗುವಿಗೆ ಶಿಸ್ತು ಬರುವುದು ಹೇಗೆ" ಎಂದು ಅವರ ಮತ! ಆ ಮಾತೆಯರ ರೀತಿನೀತಿ, ನಡತೆ ಸಮಂಜಸವೇ ? ನನಗೆ ತಿಳಿಯದು ! ಎಲ್ಲ ತಾಯಂದಿರೂ ಈ ರೀತಿ ಖಂಡಿತ ಇರಲಾರರು ಎಂಬ ಆಸೆ ನನಗಿರುವುದು ತಪ್ಪೆ ?

ಅಂತೂ ಪ|| ಜರ್ಮನಿಯ ಪ್ರವಾಸವನ್ನು ಸ್ವಾರಸ್ಯವಾಗಿ ಕಳೆದೆವು. ನಮ್ಮ ಕಲೆಯನ್ನು ಆ ಜನತೆ ಕೀಲ್‌ನಿಂದ ಮ್ಯೂನಿಕ್‌ವರೆಗೆ ಬಹಳ ಮೆಚ್ಚಿತು. ಪತ್ರಿಕೆಗಳು ನಮ್ಮ ಕಲೆಯನ್ನು ಕುರಿತು ಪ್ರೊ|| ರಾಯರಿಗೆ ವ್ಯಕ್ತಿತ್ವವನ್ನು ಬದಲಾಯಿಸುವ ಸಾಮರ್ಥ್ಯ ಇದೆ. ಪಾತ್ರಧಾರಣೆಗೆ ಬೇಕಾದ ಅನುಕರಣೆಯ ಪ್ರತಿಭೆ ಇದೆ. ಆ ಕಾರಣದಿಂದಲೇ ಅವರಿಗೆ ಅಷ್ಟು ಯಶಸ್ಸು ಸಿಕ್ಕಿದೆ ಎನ್ನಬಹುದು. ಅವರ ನೃತ್ಯ ಕಲೆಯ ಪ್ರತಿಭೆಯ ಕಾರಣದಿಂದಾಗಿ ಭಾರತದ ಶಾಸ್ತ್ರೀಯ ನೃತ್ಯಗಳ ಸಂಶೋಧನೆಯ ಕೆಲಸ ಅವರಿಗೆ ಸುಲಭವಾಗಿದೆ. ಚಂದ್ರಭಾಗಾ ದೇವಿಯವರು ರಾಧೆಯ ಪಾತ್ರವನ್ನು ಅದ್ವಿತೀಯವಾಗಿ ಪ್ರದರ್ಶಿಸಿದರು. ಅವರ ಲಾಲಿತ್ಯಭರಿತ ನೃತ್ಯ ಚಲನೆ

ಗಳಿಂದಲೂ ಭಾವಪೂರ್ಣವಾದ ಹಸ್ತಮುದ್ರೆಗಳಿಂದಲೂ ಅವರು ಪಡೆದ ಅಂತರ ರಾಷ್ಟ್ರೀಯ ಅಭಿಪ್ರಾಯವಾದ "ಈಕೆ ಈ ಶತಮಾನದ ಅತ್ಯುತ್ತಮ ನೃತ್ಯಗಾತಿ" ಎಂಬ ವಾಣಿ ನಿಸ್ಸಂಶಯವಾಗಿದೆ" ಎಂದು ಪ್ರಕಟಿಸಿದರು.

ನಾವು ಪ|| ಜರ್ಮನಿಗೆ ಹೋಗುವ ಮೊದಲು ನನಗೆ ತೀರಾ ಕಾಹಿಲೆ ಇದ್ದರೂ ಒಬ್ಬರಿಗೂ ಗೊತ್ತಾಗಲಿಲ್ಲ. ಪತಿಯವರು ಹೆಚ್ಚಾದ ಜವಾಬ್ದಾರಿಯನ್ನು ವಹಿಸಿ ಕೊಂಡು ನನ್ನಿಂದ ಕಲೆಗೆ ಬೇಕಾದ ಹೆಣ್ಣು ಸಂಪರ್ಕಕ್ಕೆ ಮಾತ್ರ ಅವಕಾಶ ಕಲ್ಪಿಸಿ ಕೊಟ್ಟರು. ನಾನು ಪ್ರತಿ ಸಲ ರಂಗಸ್ಥಳಕ್ಕೆ ಹೋದಾಗ ಅದೇ ಬಹುಶಃ ಕೊನೇಸಲ ನರ್ತಿಸುವುದು ಎಂಬ ಭಾವನೆಯಿಂದ ಹೋಗುತ್ತಿದ್ದೆ. ಈ ಭಾವನೆಯಿಂದಾಗಿ ಮೈಯ ಅಸ್ವಸ್ಥತೆ ಮರೆಯುವಂತಾಗುತ್ತಿತ್ತು. ಹೇಗೋ – 'ಫ್ಲೂ' ಆದ ಮೇಲೆ 15 ದಿನ ಗಳಲ್ಲಿ 12 ಪ್ರದರ್ಶನಗಳನ್ನು ಯಾವ ರೀತಿಯಲ್ಲಿ ಕೊಟ್ಟೆನೋ ತಿಳಿಯದು. ಪತಿ ಯವರ ಬೆಂಬಲವೇ ಅದಕ್ಕೆ ಕಾರಣ. ಶ್ರೀ ಗಣಪತಿಯ ಕೃಪೆಯಿಂದ ಎಲ್ಲವೂ ಸಾಧ್ಯ ವಾಯಿತು. ಪತ್ರಿಕೋದ್ಯೋಗಿಗಳು ನಮಗೆ ಕೊಟ್ಟ ಅಭಿನಂದನೆ, ಗೌರವಗಳನ್ನು ಓದಿದರೆ ಕಷ್ಟಗಳೆಲ್ಲವೂ ಮರೆತು ಹೋಗುತ್ತದೆ......... "ಪ್ರೊ|| ರಾಯರೂ ಅವರ ಧರ್ಮಪತ್ನಿಯೂ ರಂಗಸ್ಥಳಕ್ಕೆ ಬಂದರೆ ಅವರನ್ನು ಕೇಳುವವರೂ ನೋಡುವವರೂ ಒಂದೇ ಸಮನಾಗಿ ಸ್ಫೂರ್ತಿ ಪಡೆಯುವಂತಿದೆ! ಪ್ರಸಿದ್ಧ ವಿಮರ್ಶಕರು ಈ ದಂಪತಿಗಳ ಹೃದಯಂಗಮವಾದ ಪ್ರದರ್ಶನಗಳನ್ನೂ ಶಾಸ್ತ್ರಬದ್ಧ ನೃತ್ಯ ಕಲೆಯನ್ನೂ ಬಾಯಿ ತುಂಬಾ ಹೊಗಳಿದ್ದಾರೆ........" ಇಂತಹ ಅಭಿನಂದನೆಗಳನ್ನು ಓದುವಾಗ ನನ್ನ ಹೃದಯ ಕೃತಜ್ಞತೆಯಿಂದ ತುಂಬಿ ಕಣ್ಣು ಹನಿಗೂಡುತ್ತದೆ. ನಮ್ಮ ಕಷ್ಟಕ್ಕೆಲ್ಲ ತೃಪ್ತಿ ಕೊಡುವ ಪ್ರತಿಫಲ. ನಾವು ಕಲೆಯನ್ನು ಪ್ರತಿಬಿಂಬಿಸುವ ಪ್ರಯತ್ನದಲ್ಲಿ ಪಡುವ ಕಷ್ಟ ಸಾರ್ವಜನಿಕರು ಹೇಗೆ ತಾನೇ ತಿಳಿಯಬಲ್ಲರು? ಕಲೆಯು ಒಂದು ಮಾಯೆ – ಮಾಯಾ ಪ್ರಪಂಚ – ಮಾಯಾ ಜಾಲ!

ಕಾಗದ ತುಂಬಾ ಉದ್ದವಾಯಿತು. ಇದನ್ನು ತಾಳ್ಮೆಯಿಂದ ಓದಬೇಕಾದ ಪ್ರಯಾಸ ಕೊಟ್ಟದ್ದಕ್ಕೆ ದಯವಿಟ್ಟು ಕ್ಷಮಿಸಿ.

ಚಿ|| ಜಯದೇವನಿಗೆ ನಾವು ಪ|| ಜರ್ಮನಿಗೆ ಹೋಗಲೇಬೇಕೆಂಬ ಆಸೆ ಇತ್ತು. ಆ ದೇಶದ ವಿಷಯವಾಗಿ ನನಗೆ ತಿಳಿಸಿದಷ್ಟೂ ಅವನಿಗೆ ಸಾಲದಿತ್ತು. ಜರ್ಮನ್ ಭಾಷೆಯನ್ನೂ ಕೂಡ ನನಗೆ ಹೇಳಿಕೊಡಲು ಪ್ರಯತ್ನಪಡುತ್ತಿದ್ದ! ಅವನ ಆ ಪ್ರಯತ್ನ ದಿಂದ ನಮಗೆ ಆ ದೇಶದಲ್ಲಿ ಎಷ್ಟೋ ಅನುಕೂಲವಾಯಿತು. ಅವನು ಇದನ್ನೋದಿ ಖಂಡಿತ ಸಂತೋಷಪಡುವನು. ಅವನಿಗಾಗಿ, ಮುಖ್ಯ ಈ ಪತ್ರ. ಪ|| ಜರ್ಮನಿ ಯನ್ನು ನಾನು ಅವನ ಕಣ್ಣಿನಿಂದಲೇ ನೋಡಿದೆನು........ನನ್ನ ಕಣ್ಣಿನಿಂದಲ್ಲ.

ಇತಿ ನಿಮ್ಮ

ಅಮ್ಮ.

* * * *

ಲಂಡನ್
21 – 12 – 1966

ಆತ್ಮೀಯರೇ,

........A. M. C. ನಲ್ಲಿ ಒಂದು ವರುಷದ ಅವಧಿ ಕಣ್ಣು ಮುಚ್ಚಿ ಬಿಡುವುದ ರೊಳಗಾಗಿ ಎಂಬಂತೆ ಕಳೆದುಹೋಯಿತು. ನಾವು ಇಲ್ಲಿನ ಅವಧಿ ಕಳೆದು ಮನೆಗೆ ಹಿಂತಿರುಗಿ ಬರುವ ವಿಚಾರವೇ ಬರೆಯಲಿಲ್ಲವೆಂದು ನಿಮಗೆ ಆಶ್ಚರ್ಯವಾಗುತ್ತಿರಬೇಕು ಅಲ್ಲವೇ ? ನಾವು ಲಂಡನ್ ಬಿಟ್ಟು ಹೋಗಲೇಬಾರದೆಂದು ನಮ್ಮ ಶಿಷ್ಯವೃಂದವೆಲ್ಲವೂ ನಮ್ಮನ್ನು ದಿನನಿತ್ಯ ಕಾಡುತ್ತಿದ್ದರು. ಮೈಸೂರು ಸರಕಾರವೂ ಶ್ರೀ ಅಂಗಡಿಯವರೂ ಮನಸ್ಸು ಮಾಡಿದರೆ ಮಾತ್ರ ನಾವು ಇನ್ನೂ ಒಂದು ವರ್ಷ ಇಲ್ಲಿರಲು ಸಾಧ್ಯ ಎಂದಿದ್ದಕ್ಕೆ ನಮ್ಮ ಶಿಷ್ಯರೆಲ್ಲರೂ ತಮ್ಮ ಅನೇಕಾನೇಕ ಸಹಿಗಳನ್ನು ಹಾಕಿ ಮೈಸೂರು ಸರಕಾರಕ್ಕೆ ಒಂದು ಒತ್ತಡದ ವಿನಂತಿ ಕಳಿಸಿದರು. ನಮ್ಮಿಬ್ಬರ ಪ್ರವಾಸ ಇಲ್ಲಿ ಇನ್ನೊಂದು ವರ್ಷಕ್ಕೆ ಹೆಚ್ಚಿಸಬೇಕೆಂಬ ಬಲವಾದ ಬೇಡಿಕೆ. ಶ್ರೀ ಅಂಗಡಿಯವರೂ ಅವರನ್ನು ಅನುಮೋದಿಸಿ ಮೈಸೂರಿನ ಮುಖ್ಯ ಮಂತ್ರಿಗಳಿಗೆ ನಮ್ಮ ಅವಧಿಯನ್ನು AMC ನಲ್ಲಿ ಇನ್ನೂ ಒಂದು ವರುಷ ಹೆಚ್ಚಿಸಬೇಕೆಂದು ಕೇಳಿಕೊಂಡರು. ಇಂಗ್ಲೆಂಡಿನಲ್ಲಿ ನಮ್ಮಿಂದ ಹೆಚ್ಚು ಕೆಲಸದ ಸಾಧ್ಯತೆ ಇದೆ – ನಮ್ಮ ಪ್ರವಾಸ ಯಶಸ್ವೀಯಾಗಿದೆ ಎಂದು ಬರೆದರು. ಇದರ ಫಲವಾಗಿ ಮೈಸೂರು ಸರಕಾರವು ಒಡನೆ ಒಪ್ಪಿ ನಮಗೆ ಹೊಸ ವರುಷದ ಕರಾರು ಪತ್ರಗಳನ್ನು ಕಳಿಸಿಕೊಟ್ಟಿದ್ದಾರೆ. ನಾವು ಇನ್ನೊಂದು ವರುಷ ಕಲಾಸೇವೆ ಮಾಡುವ ಏರ್ಪಾಡಾಗಿದೆ. ನೀವು ಈ ಸಂಗತಿಯನ್ನು ಹೇಗೆ ಸ್ವೀಕರಿಸುವಿರೋ ತಿಳಿಯದು. ನಮ್ಮ ಒಂದು ವರ್ಷದ ಗೈರುಹಾಜರಿಯಲ್ಲಿ ಮಕ್ಕಳನ್ನೂ ಮನೆಯನ್ನೂ ನೋಡಿಕೊಂಡಿರುವೆವು ಎಂದು ಆಶ್ವಾಸನೆ ಕೊಟ್ಟ ಹೆತ್ತವರಿಗೆ ಇನ್ನೊಂದು ವರುಷದ ಜವಾಬ್ದಾರಿ ಹೆಚ್ಚಾಗಲಾರದು ಎಂದು ತಿಳಿದುಕೊಳ್ಳುತ್ತೇನೆ. ಮಕ್ಕಳಿಗೆ ಸಮ್ಮತಿ ತಾನೇ ? ದಯವಿಟ್ಟು ನಿರಾಶೆ ಪಡಬೇಡಿ.

ಅಂತೂ ಎಣಿಸದೆ ಇರುವ ಎರಡನೆಯ ಛಳಿಗಾಲವನ್ನು ನಾವು ಎದುರಿಸುವ ಸಂಭವ ಬಂದಿದೆ.

ಲಂಡನ್ ಈಗ ಮಂಜುಗಡ್ಡೆಯ ನಗರವೇ ಎನ್ನಬೇಕು. ಮಂಜು (Snow) ಆವಾಗಾವಾಗ ಬೀಳುತ್ತಲೇ ಇದೆ. ಮಂಜು........ಇಲ್ಲದಿದ್ದರೆ ಇಬ್ಬನಿ (Frost). ಈ ದಿನ ಬೆಳಿಗ್ಗೆ ನಾವು ಕಿಟಕಿಯಿಂದ ಆಚೆಗೆ ಹಾಕಿದ ನೀರು ಒಡನೆ ಮಂಜುಗಟ್ಟಿತು! ಕೊಳಾಯಿನಿಂದ ನೀರೇ ಬರಲಿಲ್ಲ! ನೀರೆಲ್ಲ ಒಳಒಳಗೇನೇ ಗಡ್ಡೆ ಕಟ್ಟಿತ್ತು ! ಆಕಾಶದಿಂದ ಹಿಮ ಬೀಳುವಾಗ, ಬಲವಾದ ಗಾಳಿಯ ರಭಸಕ್ಕೆ ಪುಷ್ಪವೃಷ್ಟಿಯಂತೆ ಕಾಣು

ತ್ತಿದೆ. ಕೊಡೆಯಿಲ್ಲದಿದ್ದರೆ, ಈ 'ಗಟ್ಟ' ಮಳೆಯಲ್ಲಿ ಪೂರ್ತಿ ನೆನೆಯುತ್ತೇವೆ. ದಾರಿಯಲ್ಲಿ ಮೂರು ಅಂಗುಲ ಹಿಮ ಬಿದ್ದು, ನಡೆಯುವಾಗ ಸಮುದ್ರ ದಂಡೆಯ ಮರಳಿನಲ್ಲಿ ನಡೆಯುವಂತೆ ಕಷ್ಟವಾಗುತ್ತಿದೆ. ತೀರಾ ಹೆಚ್ಚಾದ ಹಿಮವೃಷ್ಟಿ ಆದಲ್ಲಿ ಮೋಟಾರು ಬಂಡಿಗಳು ಮಂಜಿನಲ್ಲಿ ಅಡಗಿ ಹೋಗುತ್ತವೆ! ಮತ್ತೆ ಕಾರನ್ನು ನಡೆಸಬೇಕಾದರೆ ಬಿಸಿನೀರಿನ ತುಷಾರ ಸೇವೆ ಕಾರಿನ ಮೇಲೆ ಮಾಡಿ, ಮಂಜು ಕರಗಿಸಿ ಒಳಗೆ ಹೊಕ್ಕು, ಶಾಖ ಕೊಡುವ ಯಂತ್ರವನ್ನು ಚಲಿಸಿದ ನಂತರ ಆಕ್ಕಪಕ್ಕದ ಮಂಜು ಕರಗಿ ಹೋದ ಮೇಲೆ, ಬಂಡಿ ಪ್ರಯಾಣಕ್ಕೆ ಸಿದ್ಧವಾಗುತ್ತದೆ! ಒಂದು ವಾಹನವನ್ನು ಸಿದ್ಧಮಾಡಬೇಕಾದರೆ ಎಷ್ಟೋ ಸಮಯ ಬೇಕು. ಕಿಟಕಿಗಳ ಗಾಜಿನ ಮೇಲೆ ತುಂಟ ಮಕ್ಕಳು ಏನೇನೋ ಗೀಚಿ ಹಾಕುವುದು ಇದ್ದೇ ಇದೆ. ಹಿಮದ ಚೆಂಡುಗಳನ್ನು ಒಬ್ಬರಿಗೊಬ್ಬರು ಎಸೆಯುವುದು ಒಂದು ಆಟ. ಮನೆಯ ಹೆಬ್ಬಾಗಿಲನ್ನು ತೆರೆಯುವಾಗ, ಮೆಟ್ಟಲಿನ ಮೇಲೆಲ್ಲ ದಪ್ಪವಾದ ಹಿಮ ರಾಶಿ ರಾಶಿಯಾಗಿ ಬಿದ್ದು ಬಾಗಿಲು ತಟ್ಟಿ ಒಳಗೆ ಪ್ರವೇಶ ಬಯಸುವಂತಿದೆ. ಎತ್ತ ನೋಡಿದರತ್ತ ಮಂಜುಗಡ್ಡೆ ತುಂಬಿದ ನಿಸರ್ಗ ದೇವತೆಯ ಶ್ವೇತಾಂಬರ! ಭಾರತದ ಋತುಗಳಲ್ಲಿ ವಿಶೇಷವಾದ ಭೇದಗಳಿರುವುದಿಲ್ಲ. ಇಲ್ಲಿನ ಈ ಋತುಗಳ ವೈವಿಧ್ಯತೆ ಸ್ವಾರಸ್ಯವಾಗಿದೆ. ಹಿಮ ಬೀಳುತ್ತಿರುವಾಗಲೇ ಬಿಸಿಲಿನ ಹೊಂಗಿರಣಗಳೂ ಬಿದ್ದರೆ ಎಷ್ಟೊಂದು ಅಂದವಾದ ದೃಶ್ಯವದು! ಬಿಸಿಲಿನಲ್ಲಿ ಹಿಮ ಫಳಫಳ ಹೊಳೆಯುವ ದೃಶ್ಯವನ್ನು ನೋಡುವುದಕ್ಕಾದರೂ ಈ ದೇಶಕ್ಕೆ ಭೇಟಿ ಕೊಡುವುದು ಅತ್ಯಗತ್ಯ........

ಈ ಛಳಿಗಾಲದಲ್ಲಿ ಸಾಯಂಕಾಲ ಜನರೆಲ್ಲ ಛಳಿಗೆ ಹೆಚ್ಚಾಗಿ ಮನೆಯ ಒಳಗೇನೇ ಸೇರಿ ಕಾಲ ಕಳೆಯುತ್ತಾರೆ. ಅಂತಹ ಒಂದು ಸಂಜೆ ಶ್ರೀ ಅಂಗಡಿಯವರು ನಮ್ಮೊಡನೆ ಆತ್ಮೀಯ ಮಾತುಕತೆಗಳನ್ನಾಡಿ ನನ್ನ ಮುಂದಿನ ಕೆಲಸದ ಪರಿಚಯ ಮಾಡಿ ಕೊಟ್ಟರು – ಎರಡನೆಯ ವರುಷದ ಕಾರ್ಯಕ್ರಮಗಳು, ಮುಖ್ಯವಾಗಿ ಇನ್ನೂ ನೃತ್ಯ ನಾಟಕಗಳನ್ನು ರಚಿಸುವ ಯೋಚನೆ. ಅವರು—"ನಿಮಗೆ ಇಲ್ಲಿ ಯಾವ ತೊಂದರೆಯೂ ಇಲ್ಲ. ಇಲ್ಲಿ ನೀವು ಹಾಲಿನ ಲೆಕ್ಕ ಕೊಡಬೇಕಾಗಿಲ್ಲ, ಮನೆ ಬಾಡಿಗೆಯ ವಿಷಯ ಯೋಚನೆ ಇಲ್ಲ. ಮನೆಗೆ ಸಾಮಾನು, ತರಕಾರಿ, ದವಸ ಧಾನ್ಯ ಜೋಡಿಸುವ ಕೆಲಸವಿಲ್ಲ. ನೀವು ವಿರಾಮವಾಗಿದ್ದು ನಿರ್ಯೋಚನೆಯಿಂದ ಕಲಾಸೇವೆ ಮಾಡುತ್ತೀರಿ. ಹೆಚ್ಚು ಹೆಚ್ಚಾದ ರಚನಾತ್ಮಕ ಕಲಾಕ್ರಿಯೆಗಳನ್ನು ಮಾಡಿರಿ. ನಿಮಗೆ ಅಸಾಧ್ಯವಾದ ರಚನಾತ್ಮಕ ಶಕ್ತಿಯಿದೆ. ಅದನ್ನು ಬೆಳೆಸಿಕೊಳ್ಳಿ. ನಾನು ನಿಮಗೆ ಕಲೆಯ ಪ್ರದರ್ಶನಕ್ಕೆ ತಕ್ಕ ಅವಕಾಶಗಳನ್ನು ಕಲ್ಪಿಸಿಕೊಡುತ್ತೇನೆ. ನೀವು ದಿನನಿತ್ಯ ಕಾಲ ಕಲೆಯಲ್ಲೇ ನಿರತರಾಗಿ ನಿಮ್ಮ ಕೈಲಾದಷ್ಟು ನೃತ್ಯಗಳನ್ನು ರಚಿಸಿ–" ಎಂದರು. ಉತ್ತೇಜನ ಕೊಡುವ ಮಾತುಗಳು

ಅಂದು ನಾವು ನಮ್ಮ ಎರಡನೆಯ ನೃತ್ಯ ನಾಟಕವನ್ನು ರಚಿಸುವ ನಿರ್ಧಾರ ಮಾಡಿದೆವು. – ಅದು ಯಾವುದು ಎಂಬ ಪ್ರಶ್ನೆ! ....ನಮ್ಮ ಮೊದಲ 'ಬುದ್ಧೋದಯ' (Temptation of Buddha) ನೃತ್ಯ ನಾಟಕ ಜಗತ್ತಿನ ಜನರಿಗೆಲ್ಲ ಮೆಚ್ಚುಗೆಯಾಗುವಂತಹ ಕಥೆಯಾಗಿತ್ತು. ಈಗ ನಾವು ನಮ್ಮ ಮೈಸೂರನ್ನು ಜಗತ್ತಿನ ಭೂಪಟದ ಮೇಲೆ ಎಲ್ಲರಿಗೂ ತಿಳಿಯುವಂತೆ ಸ್ಪಷ್ಟವಾಗಿ ಚಿತ್ರಿಸಬೇಕೆಂಬ ಹಂಬಲವಾಯಿತು. ನಮ್ಮನ್ನು ಇಂಗ್ಲೆಂಡಿಗೆ ಕಳುಹಿಸಿದ ಮೈಸೂರು ಸರಕಾರಕ್ಕೂ ಒಂದು ಕೃತಜ್ಞತೆಯ ಕಾಣಿಕೆ ಕೊಡಬೇಕೆಂದೆನಿಸಿತು. ಆದ್ದರಿಂದ ಬೆಂಗಳೂರಿನ ಪ್ರಸಿದ್ಧ ಮಹನೀಯರಾದ ಶ್ರೀ ಕೆ. ವಿ. ಅಯ್ಯರ್ ಅವರ 'ಶಾಂತಲಾ' ಕಾದಂಬರಿಯ ಆಧಾರದ ಮೇಲೆ 'ರಾಣಿ ಶಾಂತಲಾ' ಎಂಬ ನೃತ್ಯ ನಾಟಕವನ್ನು ರಚಿಸುವುದಾಗಿ ನಿರ್ಧರಿಸಿದೆವು.

ನನಗೆ ಚಿಕ್ಕಂದಿನಿಂದ ರಾಣಿ ಶಾಂತಲೆಯ ಪಾತ್ರ ತುಂಬಾ ಅಚ್ಚು ಮೆಚ್ಚು. ಎಂದಾದರೊಂದು ದಿನ ಆ ಪಾತ್ರವನ್ನು ಧರಿಸಿ ನಟಿಸುವ ಹಂಬಲ ಸದಾ ಇತ್ತು. ಪತಿಯವರೂ ನೃತ್ಯಗಾರರಾದ್ದರಿಂದ ಈ 'ಶಾಂತಲಾ' ವನ್ನು ನೃತ್ಯ ನಾಟಕವನ್ನಾಗಿ ರಚಿಸುವುದು ಕಷ್ಟವೇನಿಲ್ಲ, ಎಂದು ಮನಸ್ಸು ಹೇಳಿತು. 'ಶಾಂತಲೆ' ಯ ವ್ಯಕ್ತಿತ್ವ, ಸ್ವಭಾವ, ಶೀಲ – ನಮ್ಮ ಭಾರತೀಯ ಸ್ತ್ರೀಯರ ಮೂರ್ತಿಮಂತ ಆದರ್ಶ, ಸೌಮ್ಯತೆ, ಗಂಭೀರತೆ, ನಿಸ್ವಾರ್ಥತೆ – ಮುಂತಾದ ದೈವಿಕ ಗುಣಗಳನ್ನು ಪಡೆದ 'ಶಾಂತಲೆ' ಯ ಪಾತ್ರವನ್ನು ನಟಿಸುವುದು ಸಾಮಾನ್ಯವಾದ ಹೊಣೆಗಾರಿಕೆಯಲ್ಲ.

ಹೊಯ್ಸಳರ ಕಾಲದ ವೈಭವದ ದಿನಗಳ ಕಥೆ. ಹೊಯ್ಸಳ ಸಾಮ್ರಾಜ್ಯದ ಸುವರ್ಣ ಯುಗ. ಹಿಂದೂ ಸಂಸ್ಕೃತಿಯ ಹಬ್ಬದ ಕಾಲ. ಕರ್ನಾಟಕದ ಹೆಮ್ಮೆಯ ಚರಿತ್ರೆ–ಬೇಲೂರು, ಹಳೇಬೀಡು, ಅಲ್ಲಿನ ಶಿಲ್ಪ ದೇವಾಲಯಗಳು ಕಾಲಚಕ್ರವು ಉರುಳಿದಂತೆ ಅಂದಿನ ಮಹಿಮೆಯನ್ನು ಜಗತ್ತಿಗೇ ಎತ್ತಿ ಸಾರಲು ಎಂದೆಂದಿಗೂ ತಲೆಯೆತ್ತಿ ನಿಂತಿರುವ ಹೊಯ್ಸಳರ ಅಮೋಘ ಶಿಲ್ಪ ಶ್ರೀ – ಶ್ರೀ ವಿಷ್ಣುವರ್ಧನ – ಶಾಂತಲೆಯರ ದಿವ್ಯಕಥೆ – ನೃತ್ಯ ನಾಟಕ ರಚನೆಗೆ ಬೇಕಾದ ಸ್ಫೂರ್ತಿ ಕೊಡುವ ಕಥೆ!

ಅಂತೂ ನಮ್ಮ ಮುಂದಿನ ಕಾರ್ಯಕಲಾಪ 'ರಾಣಿ ಶಾಂತಲಾ' ಎಂಬ ನೃತ್ಯ–ನಾಟಕ ಎಂದು ಖಚಿತವಾಗಿದೆ........ದೇವರ ಅನುಗ್ರಹವಿರಲಿ.

ಇತಿ ನಿಮ್ಮ
ಚಂದಮ್ಮ.

* * * * *

ಲಂಡನ್
27 – 12 – 1966

ಪ್ರಿಯ ತಂದೆಯೇ,

........ನಿಮ್ಮ ಈ ಸಲವ ಹುಟ್ಟಿದ ಹಬ್ಬಕ್ಕೆ ನಿಮಗೆ ಒಂದು ಬರೇ Greeting Card ಕಳಿಸಿದುದಕ್ಕೆ ದಯವಿಟ್ಟು ಕ್ಷಮಿಸಿ. ನಾನು ಪತ್ರ ಬರೆದಿದ್ದರೆ ಚೆನ್ನಾಗಿತ್ತಲ್ಲವೇ ? ಆದರೆ ಈ ಸಲ ಇಲ್ಲಿನ ಜನರ ಅಭ್ಯಾಸಕ್ಕೆ ಸಿಲುಕಿಬಿದ್ದೆ. ಅಂಗಡಿಗಳಲ್ಲಿ ಎಲ್ಲಾ ತರಹ ಕಾರ್ಡುಗಳೂ ಇದ್ದುವು. ತಂದೆ–ಮಗನಿಗೆ, ಮಗ–ತಂದೆಗೆ, ಮಗಳು–ತಂದೆಗೆ, ತಾಯಿಗೆ, ತಾಯಿ–ತಂದೆಗೆ, ಮಗಳಿಗೆ, ಮಗನಿಗೆ, ಅಜ್ಜ–ಮೊಮ್ಮಗನಿಗೆ, ಮೊಮ್ಮಗಳಿಗೆ, ಅಜ್ಜಿಗೆ, ಅಣ್ಣ–ತಂಗಿಗೆ, ಅಕ್ಕ, ಅಣ್ಣ–ತಂಗಿಗೆ, ಅಲ್ಲದೆ ಹೆಂಡತಿ–ಗಂಡನಿಗೆ, ಗಂಡ–ಹೆಂಡತಿಗೆ ತಮ್ಮ ದಾಂಪತ್ಯದ ಹಲವಾರು ಸಂದರ್ಭಗಳಿಗೆ ಕೊಡಬೇಕಾದ ಶುಭಾಶಯಗಳನ್ನೆಲ್ಲ ವಿಧವಿಧವಾಗಿ ತಯಾರಿಸಿ ಅಚ್ಚುಮಾಡಿ ಬೇರೆ ಬೇರೆ ಬೆಲೆಗೆ ಮಾರಲು ಇಡುತ್ತಾರೆ. ಕಣ್ಣಿಗೆ ಆಕರ್ಷಕ–ಓದಲು ಸ್ವಾರಸ್ಯ. ಕೊಂಡುಕೊಳ್ಳುವವರ ಮೆದುಳಿಗೆ ಕೆಲಸವಿಲ್ಲ! ಬರೆಯುವ ತೊಂದರೆ ಇಲ್ಲ. To............... From ಹಾಕಿ ಪೋಸ್ಟ್ ಮಾಡಿದರಾಯಿತು. ಎಲ್ಲವೂ ಸಿದ್ಧ. ಹಸುಗೂಸಿಗೆ ಬುಡ್ಡಿ ಹಾಲು ಕೊಡುವಂತೆ! ಈ ದೇಶದಲ್ಲಿ ನಿಮಿಷ ಮಾತ್ರಕ್ಕೆ ಏನು ಬೇಕಾದರೂ ಸಿಗುತ್ತದೆ. ಬಿಸಿ ಬಿಸಿಯಾದ, ಅಪೇಕ್ಷೆ ಪಟ್ಟ ಊಟ ಫೋನ್ ಮಾಡಿದ ತಕ್ಷಣ ಮನೆ ಬಂದು ಸೇರುತ್ತದೆ! ಅಂತೂ ನಿಮಗೆ ಆ ಕಾರ್ಡು ಕಳಿಸುವಾಗ ನಾನು ಆ ಕ್ಷಣಿಕ ಲಂಡನ್ ಜನ ಆದೆ, ಕ್ಷಮಿಸಿ. ನಿಮಗೆ ಹೊಸ ವರ್ಷದ ಶುಭಾಶಯಗಳು 1967ನೇ ಇಸವಿ ನಿಮಗೆ ಆರೋಗ್ಯವನ್ನೂ ಸಮೃದ್ಧಿಯನ್ನೂ ತೃಪ್ತಿಯನ್ನೂ ಒದಗಿಸಲಿ!

ಇತಿ ನಿಮ್ಮ
ಚಂದಮ್ಮ.

* * * * *

ಲಂಡನ್
28 – 12 – 1966

ಮುದ್ದು ಮಕ್ಕಳೇ,

........ಈ ವರ್ಷದ ಕೊನೆಯ ಪತ್ರ ಬರೆಯುತ್ತಿದ್ದೇನೆ. ನಿಮಗೆ 1967ನೇ ಇಸವಿಯ ಶುಭಾಶಯಗಳನ್ನು ಕೋರುತ್ತೇನೆ. ನಮ್ಮ ದೇಶದ ಭವಿಷ್ಯ ಚೆನ್ನಾಗಿ ಅಭಿವೃದ್ಧಿಯಾಗಲಿ ಎಂದು ಆಶಿಸುತ್ತೇನೆ. ನಿಮ್ಮ ಜ್ಞಾಪಕವಾದರೆ ಮನೆಗೆ ಹಾರಿ

ಹೋಗೋಣವೆನಿಸುತ್ತದೆ! ಆದರೆ ಇಲ್ಲಿನ ಕೆಲಸದ ಜವಾಬ್ದಾರಿ? ಅದು ತಡೆಯುತ್ತದೆ!........

ನಾನು ಯಾವತ್ತೂ ನಿಮಗೆ ಇಲ್ಲಿ ನಡೆದ ವಿಷಯಗಳ ದಿನಚರಿ ಬರೆಯುವುದು ನಿಮಗೆ ಒಪ್ಪಿಗೆಯೋ, ಸಮ್ಮತಿಯೋ, ಸರಿಯೋ, ತಪ್ಪೋ ತಿಳಿಯದು! ಅದರ ಪ್ರಭಾವ ನಿಮ್ಮ ಮೇಲೆ ಹೇಗೆ ಬೀರುವುದೋ ತಿಳಿಯದು! ನಿಮ್ಮನ್ನು ವಿಚಾರಿಸುವುದಾಗಲೀ 'ರುಕ್ಮಿಣಿ' ಯ ಸಮಾಚಾರವನ್ನಾಗಲೀ ನಾನು ಕೇಳುವುದು ಅಪರೂಪ. ನಮ್ಮ ವಿಷಯವೇ ಕಾಗದ ತುಂಬಿರುತ್ತದೆ. ಓದಿ ನಿಮಗೆ ಎಷ್ಟು ಬೇಸರವಾಗುವುದೋ! ಅಲ್ಲವೇ? ನಿಮ್ಮನ್ನು ಅಗಲಿದ ದುಃಖದಿಂದ ಹಲವು ಸಲ ನಾನು ಇಲ್ಲಿ ಕಣ್ಣೀರಿಡುವುದು ನಿಮಗೆ ತಿಳಿಯದು. ನಾನು ಬರೆಯುವುದೂ ಇಲ್ಲ. ನನ್ನ ಹೃದಯವನ್ನು ಹಿಂಡುವಂತಹ ದುಃಖ. ನೀವಿಬ್ಬರೂ ನನ್ನನ್ನು "ಅಮ್ಮ" ಎಂದು ಕರೆಯುವುದನ್ನು ಕೇಳಬೇಕೆಂಬ ಹಂಬಲವಾದೊಡನೆ ಅಳು ಬರುತ್ತದೆ. ನೀವಿಲ್ಲದೆ ಜೀವನ ಇಲ್ಲಿ ಏತಕ್ಕೆ ಅನಿಸುತ್ತದೆ. ಕೆಲವು ಸಮಯ ಇಲ್ಲಿನ ಜೀವನ ಬಂದ ಹೊಸತರಲ್ಲಿ ಚೆನ್ನಾಗಿತ್ತು. ಈಗೀಗ ನನ್ನ ಮನಸ್ಸು ಆಗಾಗ್ಗೆ ಲಂಡನ್ ಬಿಟ್ಟು 'ರುಕ್ಮಿಣಿ' ಯನ್ನು ಹೊಕ್ಕು ಅಲ್ಲೇ ಸಂಚರಿಸುತ್ತದೆ-ಒಳಗೆ-ಹೊರಗೆ-ನಮ್ಮ ಚಿಕ್ಕ ತೋಟದಲ್ಲಿ-ನಿಮ್ಮ-ನಮ್ಮ ದಿನಚರಿಯ ಜೀವನದಲ್ಲಿ – ನಮ್ಮ ಸ್ವಾರಸ್ಯ ಜೀವನ – ನಿಮ್ಮ ಆಹಾರ – ಊಟದ ಅನಂತರದ ಮಾತುಕತೆಗಳು – ನಿಮ್ಮ ನಿತ್ಯದ ದಿನಚರಿ ಎಲ್ಲವನ್ನೂ ನಾನು ಇಲ್ಲಿ ಕಳೆದುಕೊಂಡು ಒದ್ದಾಡುತ್ತಿದ್ದೇನೆ. ನಿಮ್ಮ ಜ್ಞಾಪಕ ನನ್ನನ್ನು ಕಾಡುತ್ತಿದೆ........

ಹೋದ ಎರಡು ವರ್ಷಗಳಲ್ಲಿ 1963-65 ರಲ್ಲಿ ನಮ್ಮ ಕಲಾ ಜೀವನದಲ್ಲಿನ ನಿರಾಶೆಗಳನ್ನು ಸಹಿಸಲಾರದೆ ದಹಿಸುತ್ತಿದ್ದ ಸಮಯ ನಿಮ್ಮಿಬ್ಬರ ಸಹವಾಸದಲ್ಲಿ ಎಲ್ಲವನ್ನೂ ಮರೆತು ಸಂತೋಷಪಡುತ್ತಿದ್ದೆ. ನಿಮ್ಮ ಸಾಮೀಪ್ಯದಲ್ಲಿ, ನಿಮ್ಮ ಯೌವನದ ಆಸೆ ಆಕಾಂಕ್ಷೆಗಳಲ್ಲಿ ತೃಪ್ತಿ ಪಡೆಯುತ್ತಿದ್ದೆ. "ಈ ಎರಡು ವರ್ಷಗಳು ನಮ್ಮ ನಾಲ್ಕು ಜನರ ಜೀವನದಲ್ಲಿ ಅಮೂಲ್ಯವಾದುವು. ನಾವು ನಾಲ್ಕು ಮಂದಿಯೂ ಒಂದೇ ಮೇಜಿನ ಮೇಲೆ ಕೂತು ಒಂದೇ ಆಹಾರವನ್ನು ಊಟ ಮಾಡುವುದು ಕೊನೆಯ ಎರಡು ವರ್ಷಗಳಿರಬಹುದು. ನಾವು ಪರದೇಶಕ್ಕೆ ಹೋದರೆ ಮಕ್ಕಳಿಬ್ಬರು ಒಂದೆಡೆ, ನಾವೊಂದೆಡೆ. ನಾವು ಹಿಂತಿರುಗುವಾಗ ಶಿವದೇವನು ಭಾರತದ ಓದು ಮುಗಿಸಿ ಮುಂದಿನ ವಿದ್ಯಾಭ್ಯಾಸಕ್ಕೆಂದು ಪರದೇಶಗಳಿಗೆ ಹೋಗಬಹುದು, ಯಾರು ಬಲ್ಲರು? ಅವನು ಹಿಂದಿರುಗಿ ಬರುವಾಗ ಜಯದೇವನು ಮದುವೆ ಮಾಡಿಕೊಂಡು ತನ್ನ ಸಂಸಾರ ಹೂಡಬಹುದು, ಯಾರು ಬಲ್ಲರು ಭವಿಷ್ಯದ ಮಾತು! ಇಂದಿನ ಪ್ರತಿಯೊಂದು ರಸ ನಿಮಿಷವನ್ನೂ ಸುಖವಾಗಿ ಅನುಭವಿಸು!" ಎಂದು ನನ್ನ ಮನಸ್ಸು ಎಚ್ಚರಿಸಿ ಸಮಾ

ಧ್ಯಾನಪಡಿಸುತ್ತಿತ್ತು. ಕಲಾ ಜೀವನದ ಎಲ್ಲ ಒತ್ತಡ ಆಶಾಭಂಗಗಳನ್ನೂ ಮರೆಯುತ್ತಿದ್ದೆ.

ನಿಮ್ಮ ದಿನನಿತ್ಯದ ದಿನಚರಿಯನ್ನು ನನಗೆ ಕೂಲಂಕುಷವಾಗಿ ಬರೆಯಿರಿ; ನಿಮ್ಮೊಡನೆ ನಾನು ಮನಸ್ಸಿನ ಮೂಲಕ ಇರುವೆನು. ಮನೆಗೆ ಹಿಂತಿರುಗಬೇಕು ಎಂಬ ಒತ್ತಾಸೆ ಇದೆ. ಆದರೆ ಬಂದು ಏನು ಮಾಡಲಾದೀತು? ಕಲೆ ನಮ್ಮ ದೇಶದಲ್ಲಿ ಒಂದು ಭೋಗವಸ್ತು. ಭಾರತದಲ್ಲಿದ್ದಾಗ ನಮ್ಮ ಕಲಾ ಜೀವನ ಮುಗಿಯಿತು, ನಿವೃತ್ತರಾಗಬೇಕೇನೋ ಎಂದುಕೊಂಡಿದ್ದೆವು. ಆದರೆ ಇಲ್ಲಿ ಬಂದ ಮೇಲೆ ನಮ್ಮ ಕಲಾ ಜೀವನ ಆರಂಭವಾದಂತಿದೆ! ಕಲೆಯ ವ್ಯಾಸಂಗದ ಸಮಯದಲ್ಲಿದ್ದ ಶಕ್ತಿ, ಹುರುಪು, ಆಸೆಗಳಿವೆ! ನಮ್ಮ ಕನಸೆಲ್ಲವೂ ಇಲ್ಲಿ ಬಂದು ನಿಜವಾದುವು. ಆದರೆ ನಾವು ಮೂಲತಃ ಕುಟುಂಬ ಜೀವಿಗಳು. ಕಲಾಗಾರರಲ್ಲ. ಸಂಸಾರದ ಜವಾಬ್ದಾರಿ ಮೊದಲು, ಕಲೆಗೆ ಎರಡನೇ ಸ್ಥಾನವನ್ನು ಕೊಟ್ಟವರು. ನಾವು ನಿಮ್ಮನ್ನು ಅಗಲಿ ವಿಷಾದ ಪಡುವಂತೆ ನೀವು ನಮ್ಮನ್ನು ಅಗಲಿ ವಿಷಾದ ಪಡುವುದಿಲ್ಲವೆಂದು ಆಶಿಸುತ್ತೇನೆ. ನೀವು ಯಾವಾಗಲೂ ನಮ್ಮ ಮನಸ್ಸಿನಲ್ಲಿ, ಹೃದಯದಲ್ಲಿ ಭದ್ರವಾಗಿ ನೆಲೆಸಿದ್ದೀರಿ—ಭಗವಂತನು ನಿಮ್ಮನ್ನು ಕಾಪಾಡಲಿ........

ಇತಿ
ನಿಮ್ಮ ಅಮ್ಮನ
ಆಶೀರ್ವಾದಗಳು.

* * * *

ಲಂಡನ್
4 – 1 – 1967

ಮುದ್ದು ಜಯ್-ಶಿವ್,

........ನೀವು ನಿಮ್ಮ ತಂದೆಯ ಹುಟ್ಟಿದ ಹಬ್ಬಕ್ಕೆ ಶುಭಾಶಯಗಳನ್ನು ಕೋರಿ ಕಳುಹಿಸಿದ ತಂತಿ ಕೈ ಸೇರಿತು. "ಬೆಂಗಳೂರಿನಿಂದ ತಂತಿ" ಎಂದ ತಕ್ಷಣ ಒಮ್ಮೆ ತುಂಬಾ ಘಾಬರಿಯಾಯಿತು. ಕೊನೆಗೆ ಹುಟ್ಟಿದ ಹಬ್ಬಕ್ಕೆ "ಶುಭಾಶಯ ಜಯ್–ಶಿವ್‌ರವರಿಂದ!" ಎಂದು ಕೇಳಿ ಶ್ರೀ ಅಂಗಡಿಯವರೂ ಸಮಾಧಾನ ಪಟ್ಟರು. "ಎಲ್ಲಿದ್ದರೂ-ಎಷ್ಟು ದೂರದ ಅಂತರವಿದ್ದರೂ ಮಕ್ಕಳು–ಮಮತೆ-ಅದ್ಭುತ! ಪ್ರೀತಿಗೆ ತಡೆ ಕಟ್ಟಿಲ್ಲ!" ಎಂದರು. ಕುಟುಂಬದವರೆಲ್ಲರ ಶುಭಾಶಯಗಳೂ ಬಂದುವು. ಶ್ರೀ ಅಂಗಡಿಯವರು ಪಾಠವಾದ ಅನಂತರ ನಮ್ಮನ್ನು ಒಂದು ವಿಚಿತ್ರ ಹೊಟೇಲಿಗೆ ಊಟಕ್ಕೆ ಕರೆದುಕೊಂಡು ಹೋದರು. ಅದು ಭೂಗರ್ಭದಲ್ಲಿನ ಹೋಟೆಲ್. ಅಲ್ಲಿ ದೊಡ್ಡ ದೊಡ್ಡ

ಮರಗಳನ್ನು ಕಂಡು ಆಶ್ಚರ್ಯವಾಯಿತು! ಹತ್ತಿರ ಹೋಗಿ ನೋಡಿದರೆ ಅವು ಕೃತ್ರಿಮ ಮರಗಳೆಂದು ನಂಬಲಾಗಲಿಲ್ಲ. ದೊಡ್ಡ ದೊಡ್ಡ ವೃಕ್ಷಗಳು–ಬೀಳಲುಗಳು – ಜೇರುಗಳು ಅವುಗಳ ಗೆಲ್ಲು ಎಲೆಗಳು ತುಂಬಾ ನೆರಳನ್ನು ಕೊಡುವ ದೃಶ್ಯ ಎಲ್ಲವೂ ಅದ್ಭುತವಾಗಿತ್ತು! ವಾತಾವರಣವೆಲ್ಲ ಒಂದು ವಿಶಾಲವಾದ, ಅಂದವಾದ ಉದ್ಯಾನವನದಂತೆ ಮಾಡಿದ್ದರು. ಊಟ ಕೊಡುವ ಜಾಗ ಒಂದು ಸುಂದರವಾದ ಗುಡಿಸಲಿನಂತೆ ಇತ್ತು. ಅಂದಿನ ಆಹಾರವನ್ನು ಎತ್ತು, ಕುದುರೆ ಗಾಡಿಗಳ ಆಕಾರದ ಬಂಡಿಗಳಲ್ಲಿ ಹೇರಿ ಜನರು ಅದನ್ನು ಚಲಿಸುತ್ತಿರುವ ದೃಶ್ಯ ಹಳ್ಳಿಯ ದೃಶ್ಯದಂತೆಯೇ ಇತ್ತು. ಆ ಹೊಟೇಲಿನ ಒಳಗಿನ ಅಲಂಕಾರ ಎಂದೂ ಮರೆಯುವ ಹಾಗಿಲ್ಲ.

ಅಂದು ಸಾಯಂಕಾಲ ಬೆಂಗಳೂರಿನ ದಾಸಾಶ್ರಮದ ಕೇಶವದಾಸರ "ಕೃಷ್ಣಲೀಲಾ" ಹರಿಕಥೆಯನ್ನು ಕೇಳಲು ಹೋದೆವು. ಕೃಷ್ಣರಾಯರ ಜನ್ಮದಿನ "ಕೃಷ್ಣಲೀಲಾ!" ಶ್ರೀ ಕೇಶವದಾಸರ ಹಾಡಿಗೆ ಮುಸ್ಲಿಂ ಫಯಾಜ್ ಖಾನರ ತಬಲ! ಹಿಂದೂ ಮುಸ್ಲಿಂ ಬಾಂಧವ್ಯ! ಅವರ ಹರಿಕಥೆ ನಡೆಯುತ್ತಿದ್ದುದು ಒಂದು ಕ್ರಿಸ್ತರ ಚರ್ಚ್‌ನಲ್ಲಿ! ಅಂತೂ ಕೇಶವದಾಸರು ದಿನಕ್ಕಿಂತ ದಿನ ಹೆಸರುವಾಸಿಯಾಗುತ್ತಿದ್ದಾರೆ. ಹಿಂದೂ ಸಂಸ್ಕೃತಿ, ಮಹಾ ಭಾರತ, ರಾಮಾಯಣವನ್ನು ಮರೆತಿರುವ ಇಲ್ಲಿನ ಹಿಂದೂ ಜನರಿಗೆ ಅವರ ಆಗಮನ ಒಂದು ವರಪ್ರಸಾದವೇ ಅನ್ನಬೇಕು!

ನಮ್ಮ "ರಾಣಿ ಶಾಂತಲಾ" ಮುಂದುವರೆಯುತ್ತಿದೆ. ಈಗ ತಾನೇ ಪಗಡೆಯಾಟದ ದೃಶ್ಯವನ್ನು ಮನಸ್ಸಿನಲ್ಲಿ ಚಿತ್ರಿಸುತ್ತಿದ್ದೇನೆ. ಈ ನೃತ್ಯದಲ್ಲಿ ಹನ್ನೆರಡು ಜನ ಹುಡುಗಿಯರು ಭಾಗವಹಿಸುವಂತೆ – ವಿಷ್ಣುವರ್ಧನ, ರಾಣಿ ಶಾಂತಲಾ, ರಾಣಿ ಲಕ್ಷ್ಮಿ, ಕುವರ ಆಟವಾಡುವ ಈ ಪಗಡೆಯಾಟವಲ್ಲಿ ಒಂದೊಂದು ಪಂಗಡದಲ್ಲಿ 3–4 ಹುಡುಗಿಯರು ಬೇರೆ ಬೇರೆ ಬಣ್ಣಗಳ ಲಂಗ, ಕುಪ್ಪಸಗಳನ್ನು ತೊಟ್ಟುಕೊಳ್ಳುವಂತೆ ಆಟದ ಮುಂಚೆ ಬುಟ್ಟಿಯಿಂದ ಪಗಡೆಗಳೆಲ್ಲವನ್ನೂ ನೆಲದ ಮೇಲೆ ಸುರಿದರೆ ಹೇಗೆ ಚಲ್ಲಾಪಿಲ್ಲಿಯಾಗುತ್ತದೆಯೋ ಹಾಗೆಯೇ ನಮ್ಮ ನರ್ತಕಿಯರೆಲ್ಲ ರಂಗಸ್ಥಳದ ಮೇಲೆ ಚೆಲ್ಲಾಪಿಲ್ಲಿಯಾಗಿ ಬರುವಂತೆ ಕ್ರಮೇಣ ಕುಣಿಯುತ್ತ 4 ಬಣ್ಣದ ನರ್ತಕಿಯರು 4 ಆಟಗಾರರ ಹತ್ತಿರ ಹೋಗಿ ನಿಂತುಕೊಳ್ಳುವಂತೆ – ಆಟ ಆರಂಭವಾಗುತ್ತದೆ. ಒಂದು ಪಗಡೆ ಇನ್ನೊಂದನ್ನು ಮುಂದಕ್ಕೋ ಮನೆಗೋ ಹಿಂದಕ್ಕೋ ಓಡಿಸುವ ನೃತ್ಯ. ಎಲ್ಲವನ್ನೂ ಬಹಳ ಕಷ್ಟಪಟ್ಟು ಜೋಡಿಸಬೇಕು. ಈ ಒಂದು ನೃತ್ಯಕ್ಕೆ ಹಲವು ದಿನಗಳ ದುಡಿತವಿದೆ. 12 ನರ್ತಕಿಯರೂ ಒಮ್ಮೆ ನೃತ್ಯ ಅಭ್ಯಾಸಕ್ಕೆ ಬಾರದೆ ಇದ್ದರೆ ಇನ್ನೂ ಕಷ್ಟ!........ಅಂತೂ ಆಸೆ–ಆಕಾಂಕ್ಷೆಯುಳ್ಳ ನೃತ್ಯ ಜೋಡಣೆ. ಯಶಸ್ವಿಯಾಗಿ ಮಾಡಲೇಬೇಕೆಂಬ ಹಟ........

ಲಂಡನ್‌ನಲ್ಲಿ ಈಗ ಹಿಮಕಟ್ಟುವ ಛಳಿ. ಆದರೆ ಈ ವರ್ಷ ನಮಗೆ ಛಳಿಯ ಅಭ್ಯಾಸವಾಗಿದೆ, ಹೋದ ವರ್ಷದ ಸಂಕಟವಿಲ್ಲ.........

ಇತಿ ನಿಮ್ಮ

ಅಮ್ಮ.

* * * * *

ಲಂಡನ್

10 – 1 – 1967

ಪ್ರಿಯ ತಂದೆಯೇ,

........ನೀವು ಬರೆದು ಕಳುಹಿಸಿದ 'ಶಾಂತಲಾ' ನಾಟಕದ ದೃಶ್ಯ – ರೂಪಕ ಸಿಕ್ಕಿದೆ. ದಿನ ರಾತ್ರಿ ಬಿಡುವಿಲ್ಲದೆ ನಾವು 'ರಾಣಿ ಶಾಂತಲಾ' ವಿಷಯವಾಗಿ ಯೋಚಿಸುತ್ತಲೇ ಇದ್ದೇವೆ. ಶ್ರೀ ಅಯ್ಯರ್‌ರವರ ಕಾದಂಬರಿಯಿಂದ ಮುಖ್ಯ ಅಂಶಗಳನ್ನು ಎತ್ತಿಕೊಳ್ಳಲಾಗಿದೆ. ವಿಷ್ಣುವರ್ಧನನ ವೈಭವದ ದರ್ಬಾರು ಶಾಂತಲೆಯ ಮಹತ್ತಾದ ಗುಣಗಳು, ಅವಳಿಗಿದ್ದ ಅಪೂರ್ವ ನೃತ್ಯ ಕೌಶಲ್ಯ, ಬೇಲೂರು ದೇಗುಲದ ನಿರ್ಮಾಣ, ಮದನಿಕೆಯರ ಶಿಲ್ಪ ವೈಶಿಷ್ಟ್ಯ. ಹಾಗೂ ಶಿಲ್ಪ ಶಾಸ್ತ್ರದ ಅಂದ–ಚೆಂದ, ಬೇಲೂರು ದೇವಾಲಯದ ಶ್ರೀ ಚೆನ್ನಕೇಶವನಿಗೆ ಭಕ್ತಿಪುರಸ್ಸರವಾಗಿ ಶಾಂತಲೆ ಸಲ್ಲಿಸಿದ ನೃತ್ಯ ಸೇವೆ, ರಾಜ್ಯ ಹಿತಕ್ಕಾಗಿ ಶಾಂತಲೆಯ ದೇಹತ್ಯಾಗ, ಅವಳ ಆತ್ಮೋದ್ಧಾರ —ಇವೆಲ್ಲವನ್ನೂ ನಾವು ನೃತ್ಯಕ್ಕೆ ಕಲ್ಪಿಸಬೇಕಾದ ಅಂಶಗಳು........ಎಂತಹ ಘನವಾದ ಕಥಾ ವಸ್ತುವದು !

ಕಾದಂಬರಿಯನ್ನು ಮತ್ತೆ ಮತ್ತೆ ಓದಿ, ಮನಸ್ಸಿಗೆ ಹೊಳೆದ ವಿಷಯಗಳನ್ನು ಪುಸ್ತಕದಲ್ಲಿ ಬರೆದಂತೆ 'ರಾಣಿ ಶಾಂತಲಾ' ಒಂದು ಆಕಾರ – ರೂಪ ಪಡೆಯುವಂತಾಗಿದೆ. ಆ ಹೊಯ್ಸಳರ ಕಾಲದ ಹಾಗೂ ಅವರ ವೈಭವದ ದಿನಗಳ, ಆಗ ಸಂಚರಿಸಿದ ಮಹಾ ವ್ಯಕ್ತಿಗಳ ಆತ್ಮ ಚೇತನವನ್ನು ಸೆರೆಹಿಡಿಯಲು ಕಾದಂಬರಿಯನ್ನು ಮತ್ತೆಮತ್ತೆ ಓದುತ್ತಿದ್ದೇವೆ. 'ಶಾಂತಲಾ' ಬರೆದ ಶ್ರೀ ಕೆ. ವಿ. ಅಯ್ಯರ್ ಅವರೇ ತಮ್ಮ ಹಸ್ತಾಕ್ಷರದಿಂದ ಕಥಾವಸ್ತುವನ್ನು ಸ್ಫೂರ್ತಿದಾಯಕವಾಗಿ ಬರೆದು ನೃತ್ಯ ನಾಟಕಕ್ಕೆ ಸಹಾಯ ಮಾಡಿದ್ದಾರೆ. ನಮ್ಮ ಮನಸ್ಸು–ಹೃದಯವೆರಡೂ ಈ ಕೆಲಸದಲ್ಲೇ ಮುಳುಗಿವೆ. ಕಾಲವೊಂದೇ ನಮ್ಮ ಭವಿಷ್ಯವಾಣಿಯನ್ನು ಹೇಳಬಲ್ಲದು. ಜೀವನದಲ್ಲಿ ತಡವಾಗಿ ಅವಕಾಶಗಳು ಬಂದರೂ ದೈವವಶಾತ್ ಸಫಲತೆ ಕಂಡುಬರುವ ಸೂಚನೆಗಳ ಧೈರ್ಯವಿದೆ........

ಇತಿ ನಿಮ್ಮ

ಚಂದನ್ಮ.

* * * * *

ಲಂಡನ್
18 – 1 – 1967

ಮುದ್ದು ಮಕ್ಕಳೇ,

.... ..'ರಾಣಿ ಶಾಂತಲಾ' ನೃತ್ಯ-ನಾಟಕದ ರೂಪವನ್ನು ಪುಸ್ತಕದಲ್ಲಿ ಬರೆದು ಮುಗಿಸಿದ್ದೇವೆ. ಇನ್ನು ಕಾರ್ಯಗತ ಮಾಡುವುದಕ್ಕೆ ಆರಂಭವಾಗಬೇಕು. ನೃತ್ಯಗಳ ರಚನೆಯಲ್ಲಿ ಮಗ್ನರಾಗಿದ್ದೇವೆ. ನೃತ್ಯಗಳ ಸಂಪೂರ್ಣ ರೂಪದ ಕನಸನ್ನು ಕಾಣುತ್ತಿದ್ದೇವೆ. ಈ ರಚನೆಯು ಒಂದು ಅತಿ ದೊಡ್ಡ ಕೆಲಸ. ಪೂರ್ತಿಯಾದಲ್ಲಿ ಎರಡೂವರೆ ಗಂಟೆಗಳ ಕಾಲದ ನೃತ್ಯದ ರೂಪಕವಾಗುತ್ತದೆ. ದೇವರ ದಯೆಯಿಂದ ಯಶಸ್ವಿಯಾಗಬಹುದು ಎಂಬ ಭರವಸೆ ಇದೆ. ನಮ್ಮಲ್ಲಿ ಇರುವ, ನಾವು ಭಾರತದಿಂದ ತಂದ ನೃತ್ಯ ಸಂಗೀತದ ಟೇಪ್ (Tape) ಗಳನ್ನು ನೃತ್ಯಗಳಿಗೆ ಅಳವಡಿಸಿಕೊಂಡಿದ್ದೇವೆ. ಸುಮಾರು ಎಪ್ಪತ್ತೆರಡು ನಿಮಿಷಗಳ ದಕ್ಷಿಣಾದಿ ಸಂಗೀತ ತಯಾರಾಗಿದೆ. ಕಥೆಗೆ ಸಂಬಂಧ ಕೊಡುವ ಮಧ್ಯಮಧ್ಯದಲ್ಲಿನ ನಿಶ್ಶಬ್ದತೆಯನ್ನು ಉತ್ತರಾದಿ ಸಂಗೀತದಿಂದ ತುಂಬಿಸಬಹುದು ಎಂದು ಯೋಚಿಸಿದ್ದೇವೆ.

ಈ ಸಮಯ ಬೆಂಗಳೂರಿನ ದಾಸಾಶ್ರಮದ ಶ್ರೀ ಭದ್ರಗಿರಿ ಕೇಶವದಾಸರ ಆಗಮನ ಲಂಡನ್ನಿಗೆ ಆಗಿರುವುದು ನಮ್ಮ ಪುಣ್ಯವೆನ್ನಬೇಕು. ಅವರ ಮರೆಹೊಕ್ಕು ಕಾದಂಬರಿಯ ಮೊದಲ ಶ್ಲೋಕಗಳನ್ನು ಅವರಿಂದ ಹಾಡಿಸಿ, ಮುದ್ರಿಸಿಕೊಂಡಿದ್ದೇವೆ- ನೃತ್ಯ ನಾಟಕಕ್ಕೆ ಮುನ್ನುಡಿಯೆಂಬಂತೆ. ಅಲ್ಲದೆ ಅವರ ಸಹಾಯದಿಂದ, ಅವರ ನಾದ ಮಾಧುರ್ಯದಿಂದ ಶಾಂತಲೆಯ ಅಂತಿಮ ಘಟ್ಟವಾದ, ಆತ್ಮಹತ್ಯೆ ಮಾಡಿಕೊಳ್ಳುವ ಪ್ರಮುಖ ದೃಶ್ಯಕ್ಕೆ ಸಂಗೀತವನ್ನು ಒದಗಿಸಿದ್ದೇವೆ. ಅವರ ಹೃದಯದ್ರಾವಕ ಆತ್ಮೀಯ ಸಂಗೀತ ಆ ದೃಶ್ಯಕ್ಕೆ ಬೇಕಾದ ಸ್ಫೂರ್ತಿಯನ್ನೂ, ರಚನಾತ್ಮಕ ವಿವೇಕವನ್ನೂ, ಚೇತನವನ್ನೂ ಕೊಟ್ಟಿದೆ. ನಾದ ಕ್ಷೇತ್ರದಲ್ಲಿ ಅಂತಹ ಭಾವಧಾರೆಯನ್ನು ಪ್ರವಹಿಸುವ, ಇನ್ನೊಬ್ಬ ಸಂಗೀತಗಾರರನ್ನು ನಾವು ಲಂಡನ್ನಿನಲ್ಲಿ ಹುಡುಕುವುದು ಅಸಾಧ್ಯವಾಗಿತ್ತು. ಇಡೀ ನೃತ್ಯ ನಾಟಕದ ಸಂಗೀತ ಟೇಪ್‌ನಲ್ಲಿ ತಯಾರಾಗಿದೆ. 'ಬುದ್ಧೋದಯ' ನೃತ್ಯ ನಾಟಕಕ್ಕೆ ಸಹಾಯ ಮಾಡಿದ, ಲಂಡನ್ನಿನಲ್ಲಿ ನೆಲಸಿರುವ ಸಂಗೀತಗಾರರು, ನಮ್ಮ ಸಲಹೆಯ ಮೇರೆಗೆ ಹಿಂದೂಸ್ತಾನೀ ಸಂಗೀತವನ್ನು ರಚಿಸುತ್ತಲಿದ್ದಾರೆ. ದಕ್ಷಿಣಾದಿ ಮತ್ತು ಹಿಂದೂಸ್ತಾನಿ ಸಂಗೀತಗಳ ಮಿಲನವಾದರೂ, ಸಮ್ಮಿಲನವಾಗುತ್ತಿರುವುದೇ ಆಶ್ಚರ್ಯ.

ನಮ್ಮ 'ರಾಣಿ ಶಾಂತಲಾ' ನೃತ್ಯ ನಾಟಕದ ಪ್ರದರ್ಶನಗಳನ್ನು ಜಾಹಿರಾತುಗಳ ಮೂಲಕ ಫೆಬ್ರವರಿ 22 ಮತ್ತು 28, 1967 ರಲ್ಲಿ ಕಾಮನ್‌ವೆಲ್ತ್ ಇನ್‌ಸ್ಟಿಟ್ಯೂಟ್‌ನಲ್ಲಿ ಎಂದು AMC ಯವರು ಈಗಾಗಲೇ ಪ್ರಕಟಿಸಿದ್ದಾರೆ. ಭಾರತದಲ್ಲಿನ

ಆಹಾರ ಅಭಾವದ ಭಯಂಕರ ವರದಿಗಳು ನಮಗೆ ಲಂಡನ್ನಿನಲ್ಲಿ ಕೇಳಿ ಬರುವ ಕಾರಣ ನಮ್ಮ ಪ್ರದರ್ಶನಗಳ ಉತ್ಪತ್ತಿಯನ್ನು ಭಾರತದ ಕ್ಷಾಮ ನಿವಾರಣೆಗೆ ಮೀಸಲಾಗುವುದು ಎಂದು ಭಿತ್ತಿ ಪತ್ರಗಳಲ್ಲಿ ಜಾಹಿರಾತು ಮಾಡಿದ್ದಾರೆ. ಕೆಲಸ ಭರದಿಂದ ಸಾಗುತ್ತಲಿದೆ.

ಇತಿ ನಿಮ್ಮ
ಅಮ್ಮ.

* * * * *

ಲಂಡನ್
30 – 1 – 1967

ಮುದ್ದು ಅಮ್ಮ,

........'ರಾಣಿ ಶಾಂತಲಾ' ನೃತ್ಯ ನಾಟಕವು ಅಂದವಾದ ಸ್ವರೂಪವನ್ನು ಪಡೆಯುತ್ತಲಿದೆ- ದೇವಾಲಯದ ದೃಶ್ಯವನ್ನು ನಿನ್ನೆ ತಾನೆ ಮುಗಿಸಿದೆವು. ಹತ್ತು ಹೆಣ್ಣು ಮಕ್ಕಳು ಮದನಿಕೆಯರ ಭಂಗಿಯನ್ನು ತಳೆದು ನಿಲ್ಲುವುದು. ಕಲ್ಲು ಶಿಲೆಗೆ ಜೀವ ಬಂದು ಕುಣಿಯುವಂತೆ ಅವರಲ್ಲಿ ನಾಲ್ವರು ಒಂದು ಭರತನಾಟ್ಯ ನೃತ್ಯವನ್ನು ಮಾಡುವುದು – ಆಗಿನ ಶಿಲ್ಪಕಲೆಯ ವೈಭವವನ್ನೂ, ಹೊಯ್ಸಳರ ಶ್ರೀಮಂತಿಕೆಯನ್ನೂ ತೋರಿಸುವುದಕ್ಕಾಗಿ ಅಳವಡಿಸಲಾಯಿತು. ವಿಷ್ಣುವರ್ಧನ, ರಾಣಿ ಶಾಂತಲಾ, ರಾಣಿ ಲಕ್ಷ್ಮಿ ಮತ್ತು ಕುವರ – ಇವರು ಪಗಡೆಯಾಡುವ ದೃಶ್ಯವನ್ನು ಸುಮಾರು ಹದಿನಾರು ಹೆಣ್ಣು ಮಕ್ಕಳು ಪಗಡೆಗಳಂತೆ ಕುಣಿದು ಆಟವನ್ನು ಮುಂದುವರಿಸುವ ದೃಶ್ಯವನ್ನು ರಚಿಸುತ್ತಿದ್ದೇವೆ. ಅದು ಬಹಳ ಕಠಿಣವಾದ ನೃತ್ಯ ಜೋಡಣೆ. ಆದರೆ ರಚನೆಯ ನೋವಿನ ಜೊತೆಗೆ ತೃಪ್ತಿಕರವಾಗಿ ಮುಗಿಸಿದರೆ ಆನಂದವೂ ಇದೆ. ಅದರಲ್ಲಿ ಸಾಧಾರಣವಾಗಿ ಎಲ್ಲ ನೃತ್ಯಗಳ ರಚನೆಯೂ ಆಯಿತು ಎನ್ನಬಹುದು.

ಈಗ ವೇಷ-ಭೂಷಣಗಳೇ ಒಂದು ದೊಡ್ಡ ಸಮಸ್ಯೆ! ನಮ್ಮ ಮದನಿಕೆಯರು ಶಿಲ್ಪದಲ್ಲಿ ಇರುವಂತೆ ಇದ್ದರೆ ಸಮಸ್ಯೆಯೇ ಇಲ್ಲ!!............ಶಿಲ್ಪ ಮದನಿಕೆಯರಿಗೆ ಆಭರಣಗಳಲ್ಲದೆ ಹೆಚ್ಚಿನ ವಸ್ತ್ರಾಲಂಕಾರವಿಲ್ಲ!

ರಂಗಸ್ಥಳದ ಪರದೆಗಳಿಗೆ AMC ಆಡಳಿತದಲ್ಲಿ ಹಣದ ಅಭಾವವಾದ್ದರಿಂದ ಅತಿ ಕಡಿಮೆ ಖರ್ಚಿನಲ್ಲಿ ಬಹಳ ಪರಿಣಾಮಕಾರಿಯಾದ ಪರದೆಗಳನ್ನು ಯೋಚಿಸಬೇಕಾಗಿತ್ತು. ಕೊನೆಗೆ ಪತಿಯವರ ಬುದ್ಧಿಗೆ, ತಲೆಗೆ ಒಂದು ಬುದ್ಧಿವಂತಿಕೆ ಹೊಳೆಯಿತು. ಚಿಕ್ಕ ಚಿಕ್ಕ ಪರದೆಗಳ ಮೇಲೆ ಆಯಾ ದೃಶ್ಯದ ಚಿತ್ರವನ್ನು ಚಿತ್ರಿಸಿ,

ಇಬ್ಬರು ಹೆಣ್ಣು ಮಕ್ಕಳು ತಾಳ, ಲಯ ಬದ್ಧ ಹೆಜ್ಜೆಗಳಿಂದ ಆ ಪರದೆಯನ್ನು ಹಿಡಿದು ಕುಣಿಯುತ್ತ ಬಂದು ರಂಗಸ್ಥಳದ ಮಧ್ಯೆ ತಂದು, ಜನರು ಸ್ಪಷ್ಟವಾಗಿ ನೋಡುವಂತೆ ಸ್ವಲ್ಪ ಹೊತ್ತು ಕದಲಿಸದೆ ಹಿಡಿದು, ಮತ್ತೆ ಕುಣಿಯುತ್ತ ರಂಗಸ್ಥಳದಿಂದ ಹೋಗುವ ಏರ್ಪಾಟು ಮಾಡ್ದಿದೇವೆ. ಕಥಕಳಿಯ ತೆರೆ ಇದ್ದಂತೆ – ಸ್ವಲ್ಪ ವ್ಯತ್ಯಾಸ ಅಷ್ಟೇ !

ಹೆಚ್ಚಾಗಿ ಭಾರತೀಯ ಕಲೆ ಚಿತ್ತಲೆ ವಾಸ್ತವಿಕತೆಯಿಲ್ಲದೆ ಸಾಂಕೇತಿಕ ಹಾಗೂ ಸೂಚನಾತ್ಮಕವಲ್ಲವೇ ? ನೃತ್ಯ ನಾಟಕವನ್ನು ಭಾರತೀಯ ಮೇರೆಗೆ ಸರಿಯಾಗಿ ಪ್ರದರ್ಶಿಸುವುದು ನ್ಯಾಯ – ಶುಷ್ಕ ಆಡಂಬರವೇಕೆ ? ಎಂದುಕೊಂಡೆವು. ಇದನ್ನು ಇಲ್ಲಿನ ಜನತೆ ಹೇಗೆ ಒಪ್ಪುವರೋ ತಿಳಿಯದು........

ಇತಿ ನಿಮ್ಮ
ಚ ಂ ದ ಪ್ಮ .

* * * *

ಲ ಂ ಡ ನ್
15 - 2 - 1967

ಆತ್ಮೀಯರೇ,

........ನೃತ್ಯಗಳ ಜೋಡಣೆಯಾಗಿ ಸಂಗೀತದೊಡನೆ ಅಭ್ಯಾಸ ಮಾಡಲು ನಾವು ತಯಾರಾದಾಗ ಲಂಡನ್ನಿನ ಹಿಂದೂಸ್ತಾನಿ ಸಂಗೀತಗಾರರು – ನಮ 'ನಿರ್ಜೀವ' ಸಂಗೀತ ಕೊಟ್ಟು ಸಹಾಯ ಮಾಡಲು ಒಪ್ಪಿದ 'ಸಜೀವ' ಸಂಗೀತ ಗಾರರು – ಕೊನೆಯ ಗಳಿಗೆಗೆ ನಮಗೆ ಕೈ ಕೊಟ್ಟರು ! ಅದರಲ್ಲೂ ಪ್ರದರ್ಶನಕ್ಕೆ ಕೇವಲ ಒಂದು ವಾರವಿದೆ ಎನ್ನುವಾಗ ! !........ಅವರ ಈ ನಿರ್ಧಾರ ನಮ್ಮನ್ನು ಕಂಗಾಲು ಮಾಡಿತು. ಆದರೂ ಅವರ ನಿರಾಕರಣೆ ನಮ್ಮನ್ನು ಧೈರ್ಯಗೆಡಿಸಲಿಲ್ಲ. ನಮಗೆ ಬೇಕಾದ ತಕ್ಕರೀತಿಯ ಸಂಗೀತ ಒದಗಿಸುವುದು ಅವರಿಗೂ ಅಸಾಧಾರಣ ಕಷ್ಟದ ಕೆಲಸವೇ ಆಗಿತ್ತು.

ದೈವವಶಾತ್ ಈಗ ಪದ್ಮಭೂಷಣ ಅಲಿ ಅಕ್ಬರ್ ಖಾನ್ ಅವರು AMC ಕರೆಯ ಮೇಲೆ ಲಂಡನ್ನಿನಲ್ಲಿದ್ದಾರೆ. ಶ್ರೀ ಅಂಗಡಿಯವರು ಅವರ ಶರಣುಹೋದರು. "ಕಷ್ಟದಿಂದ ಪಾರು ಮಾಡಬೇಕು" ಎಂದು ಕೇಳಿಕೊಂಡರು. ಅವರು ಒಡನೆಯೇ ತಮ್ಮ ಒಪ್ಪಿಗೆಯನ್ನು ಕೊಟ್ಟುದು ನಂಬಲಾರದ ಸತ್ಯ- ನಮ್ಮ ನೃತ್ಯ ನಾಟಕಕ್ಕೆ ಅನುಗುಣವಾದ ಸಂಗೀತವನ್ನು ವಿಶಿಷ್ಟ ರೀತಿಯಲ್ಲಿ ರಚಿಸಿಕೊಡುತ್ತೇನೆ – ಎಂದು ಮಾತು ಕೊಟ್ಟರು. ಭಾರತದಲ್ಲೂ ಅವರು ಇಂತಹ ಕೆಲಸವನ್ನು ಮಾಡಿರಲಿಲ್ಲ. ಅದ್ಭುತ ಕಲಾವಿದರು ನೃತ್ಯ ನಾಟಕಕ್ಕೆ ಚುಟಕ–ಚುಟಕ ಸಂಗೀತ ರಚನೆಗಳನ್ನು

ಕೊಡಲು ಸಾಮಾನ್ಯವಾಗಿ ಒಪ್ಪುವುದಿಲ್ಲ. ಆದರೆ ಈ ಮಹಾನುಭಾವರು ಒಪ್ಪಿರುವುದು ದೈವ ಸಹಾಯವೇ ಎನ್ನಬೇಕು.

ಅಂತೆಯೇ ಈ ಘನ ವಿದ್ವಾಂಸರು ತಮ್ಮ ಪಕ್ಕವಾದ್ಯದವರೊಡನೆ ಆಗಮಿಸಿದರು. ಸಂಗೀತ ಮುದ್ರಣಕ್ಕಾಗಿ ಕುಶಲ ತಾಂತ್ರಿಕ ತಜ್ಞರೊಬ್ಬರು ಆಗಲೇ ಸಿದ್ಧರಾಗಿದ್ದರು. ಅಲಿ ಅಕ್ಬರ್ ಖಾನ್‌ರವರು ಸಂಗೀತ ರಚಿಸುವ ಮುನ್ನ ನೃತ್ಯ ನಾಟಕದ ಕಥಾ ಸಾರಾಂಶವನ್ನು ಕೇಳಿದರು – ಭಾವ ಯಾವುದು, ಎಷ್ಟು ನಿಮಿಷಗಳ ಸಂಗೀತ ಬೇಕು ? ಯಾವ ಲಯ ಬೇಕು ? ತಾಳ ಯಾವುದು ? ಎಂಬ ಕೆಲವು ವಿಷಯಗಳನ್ನು ವಿಚಾರಿಸಿ ಅದಕ್ಕೆ ತಕ್ಕ ಸಂಗೀತವನ್ನು ಅದೇ ಕ್ಷಣದಲ್ಲಿ, ಅಲ್ಲೇ ರಚಿಸಿದರು. ಅದನ್ನು ಕಂಡ ಸಂಗೀತ–ಮುದ್ರಣ ತಜ್ಞ ಸ್ಥಂಭೀಭೂತರಾದರು ! ಅವರು ಎಷ್ಟೋ ವಿಧದ ಸಂಗೀತವನ್ನು ಇದುವರೆಗೆ ಮುದ್ರಿಸಿದ್ದಾರೆ. ಪಾಶ್ಚಿಮಾತ್ಯವೇ ಆಗಲಿ, ಪೌರ್ವಾತ್ಯವೇ ಆಗಲಿ, ಇಷ್ಟು ಉತ್ಸಾಹದಿಂದ ಅವರು ಧ್ವನಿ ಮುದ್ರಿಸಿದುದು ಇದೇ ಮೊದಲಂತೆ. ಬರೆದ ಸಂಗೀತವಿಲ್ಲದೆ, ಯಾವ ಆಧಾರವೂ ಇಲ್ಲದೆ, ಎಂತಹ ಪೂರ್ವ ಸಿದ್ಧತೆಯೂ ಇಲ್ಲದೆ, ಕ್ಷಣ ಮಾತ್ರದಲ್ಲಿ ಅಲ್ಲೇ ಬೇಕಾದ ಸಂಗೀತವನ್ನು ರಚಿಸಿದುದು ಮಹತ್ವದ ಸಂಗತಿ ಎಂದರು. ಎಂತಹ ಕಲಾವಿದರು ! ಎಂತಹ ಸೌಮ್ಯತೆ ! ಎಂತಹ ವಿನಯ !

ನಮ್ಮ ಭಾರತೀಯ ಕಲೆಗಳಲ್ಲಿ ಪೂರ್ವ ಸಿದ್ಧತೆಯ ಅವಶ್ಯಕತೆ ಇಲ್ಲದೆ ಕಲಾ ರಚನೆಗಳು ಉಗಮಿಸುವುದು ಒಂದು ಅದ್ಭುತವಾದ ಲಕ್ಷಣವೆನ್ನಬೇಕು. ಶ್ರೀ ಕೇಶವ ದಾಸರು ಗಂಟೆ ಗಂಟೆಗಳ ಕಾಲ, ಒಂದು ಶಬ್ದಕ್ಕೂ ತಡವರಿಸದೆ, ನಿರರ್ಗಳವಾಗಿ, ಮುಂಚಿತವಾಗಿ ಬರೆದು ತಯಾರಿಸಿದ ಒಂದು ಕಾಗದದ ಚೂರನ್ನೂ ಆಧಾರವಾಗಿ ಇಟ್ಟುಕೊಳ್ಳದೆ ಹಿಂದೂ ಪುರಾಣ, ಹಿಂದೂ ಆಧ್ಯಾತ್ಮಿಕ ಸಂಬಂಧವಾದ ವಿಷಯಗಳನ್ನು ಸ್ವಾರಸ್ಯವಾಗಿ ತಮ್ಮ ಉಪನ್ಯಾಸಗಳಲ್ಲಿ ಕೊಡುತ್ತಿರುವ ವಾಕ್ ಪ್ರವಾಹ ಆಶ್ಚರ್ಯವಲ್ಲವೇ ? ನಮ್ಮ ಭಾರತದಲ್ಲಿ ಎಷ್ಟೊಂದು ಮತಧರ್ಮಗಳಿವೆ ! ಎಷ್ಟೊಂದು ದಿವ್ಯ ಜ್ಯೋತಿಗಳಿವೆ ! ಅವರ ದಿವ್ಯ ವಾಕ್ಯಗಳನ್ನು, ವಚನಗಳನ್ನು ಬಾಯಿಪಾಠ ಬಂದಂತೆ, ಮನಸ್ಸಿನಿಂದ ರಭಸವಾಗಿ ಹೊರಬರುವ ವಿಚಾರಗಳನ್ನು ಶ್ರೀ ಕೇಶವದಾಸರಂತಹ ಕೀರ್ತನಕಾರರು ತಮ್ಮ ಭಾಷಣ, ಕೀರ್ತನೆಗಳಿಂದ ಜನರನ್ನು ಹುಚ್ಚು ಮಾಡುವ ಶಕ್ತಿ ಮೆಚ್ಚುವಂತಹುದು. ನಾಲಿಗೆಯ ತುದಿಯಲ್ಲೇ ಅವರಿಗೆ ಸಾಹಿತ್ಯ ಜ್ಞಾನವಿದ್ದಂತಿದೆ. ಇದು ಪಾಶ್ಚಾತ್ಯರಿಗೆ ತುಂಬಾ ಆಶ್ಚರ್ಯದ ವಿಷಯವಾಗಿರಬಹುದು. ಏಕೆಂದರೆ ನಾವು ನೋಡಿದ ಪ್ರಕಾರ ಇಲ್ಲಿನ ಸಂಗೀತಗಾರರು ದಿನನಿತ್ಯ ಸಾಯಂಕಾಲ ರಾತ್ರಿ ಎಂಬಂತೆ, ಪ್ರತಿ ದಿನ–ಪ್ರತಿ ವಾರ, ಪ್ರತಿ ವರ್ಷ– ವರ್ಷಗಟ್ಟಲೆ ಒಂದು ಪ್ರದರ್ಶನಕ್ಕೆ (ಲಂಡನ್ನಿನಲ್ಲಿ ಒಂದು ಬ್ಯಾಲೆಯಾಗಲೀ, ಒಂದು ನಾಟಕ

ವಾಗಲೀ, ತಿಂಗಳುಗಟ್ಲೆ, ವರ್ಷಗಟ್ಟಲೆ ಯಶಸ್ವಿಯಾಗಿ ನಡೆಯುತ್ತಿರುತ್ತದೆ) ಬಾರಿ ಸಿದುದನ್ನೇ ಬಾರಿಸಿದರೂ, ಆ ನಾದಲಿಪಿ ಬರೆದಿರುವ ಸಂಗೀತದ ಪುಸ್ತಕದ ಆಧಾರ ವಿಲ್ಲದೆ ನುಡಿಸುವ ರೂಢಿಯಿಲ್ಲ. ಈ ದೇಶದಲ್ಲಿಯಾದರೋ ಸಂಕುಲನಾಬದ್ಧ ನಿರ್ದಿಷ್ಟ ಪ್ರಮಾಣ ಯುಗವಾದಲ್ಲಿ, ನಮ್ಮ ದೇಶದಲ್ಲಿ ಪೂರ್ವ–ಸಿದ್ಧತಾ ವಿಹೀನದ ಅಪೂರ್ವ ರಚನಾತ್ಮಕತೆಯ ಪರ್ವಕಾಲ.

ಈ ವಿಷಯವಾಗಿ ಮಾತನಾಡುತ್ತಾ. ಬ್ರೇಡ್‌ಫರ್ಡ್‌ನಲ್ಲಿನ (Bradford) ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ (Institute of Technology) ಫಿನ್ ಲೆಂಡ್ ದೇಶದ ಸಂಗೀತದ ಬಗ್ಗೆ ಸಂಶೋಧನೆ ನಡೆಸುತ್ತಿದ್ದ ಒಬ್ಬ ಯುವಕನ ಅಭಿ ಪ್ರಾಯ ನೆನಪಿಗೆ ಬರುತ್ತದೆ. ಆತನಿಗೆ ನಮ್ಮ ಭಾರತೀಯ ಸಂಗೀತವೆಂದರೆ ವಿಶೇಷ ಅಭಿಮಾನ. ಭಾರತೀಯ ಸಂಗೀತ ಎಂದಿಗೂ ಪೂರ್ವ ಕಲ್ಪಿತವಲ್ಲ. ಹೆಚ್ಚಾಗಿ ಆಶುಕಲೆಯಾಗಿ ಪ್ರದರ್ಶಿಸುವಂತಹದ್ದು. ಈ ಕಾರಣದಿಂದ ನಮ್ಮ ಕಲೆಯ ಕೆಲವು ಅಮೋಘ ಕೃತಿಗಳು ಕಾಲಕ್ರಮೇಣ ಮರೆಯಾಗುವುವು ಎಂಬುದಾಗಿ ಬೇಸರಪಟ್ಟು ಮಾತನಾಡಿದನು. ಭಾರತದ ಸಂಗೀತ ಕಲೆಯಲ್ಲಿ ಉತ್ತಮ ಕೃತಿಗಳನ್ನು ಒಂದು ಮಾನಕವಾಗಿ ಇಟ್ಟುಕೊಳ್ಳಲು ಸಾಧ್ಯವಾಗಿರದೆ ಇರುವುದು ಬೇಸರದ ಸಂಗತಿ ಎಂದನು. ಪಾಶ್ಚಾತ್ಯ ಲಲಿತ ಕಲೆಗಳಲ್ಲಿ ಎಲ್ಲವನ್ನೂ ಪ್ರಮಾಣಬದ್ಧಮಾಡಿ, ಚಿರಂಜೀವಿಯನ್ನಾಗಿ ಮಾಡಿದುದರ ಫಲವಾಗಿ ಇಂದು ನಮಗೆ ಅನುಕೂಲವಿದೆ, ಸಹಾಯವಿದೆ, ಆನಂದವಿದೆ ಎಂದನು. ಆತನ ಮಾತಿನಲ್ಲಿ ಸತ್ಯಾಂಶವಿದೆ. ಆದರೆ ನಮ್ಮ ಲಲಿತ ಕಲೆಗಳೆಲ್ಲ ಏಕೆ ಆಶುಕಲೆಗಳಾಗಿದೆ–ಎಂಬುದಾಗಿ ವಿವರಿಸಿದ ಮೇಲೆ ಅವ ನಿಗೆ ಅರ್ಥವಾಯಿತು. ನಮ್ಮ ಕಲೆಗಳೆಲ್ಲವೂ ದೇವರಿಗೆ ಅರ್ಪಿತವಾದುದು. ಪ್ರತಿ ಯೊಬ್ಬ ಕಲಾವಿದನೂ ತನ್ನ ಮನೋಭಾವಕ್ಕೆ ತಕ್ಕಂತೆ ತಾನು ಬಯಸಿದ ಗುರುಗಳ ಆಶ್ರಯದಲ್ಲಿ ಕಲೆಯ ಅಭ್ಯಾಸ ಮಾಡುತ್ತಾನೆ. ನಂತರ ದೇವರಿಗೆ ಆ ಕಲೆಯ ಮೂಲಕವೇ ಪ್ರಾರ್ಥನೆ ಸಲ್ಲಿಸುತ್ತಾನೆ. ಈ ಕಾರಣದಿಂದ ನಮ್ಮ ಶಿಲ್ಪವೆಲ್ಲ ಅನಾಮಧೇಯವಾಗಿದೆ. ದೇವರಿಗೆ ಅರ್ಪಿತವಾದ ಕಲಾವಿದನ ಕಾಣಿಕೆಯಾಗಿ, ಶಿವ ನಟರಾಜನ 'ನದಂತ' ಭಂಗಿಯ ಶಿಲ್ಪವು – ವಿಶ್ವ ವಿಖ್ಯಾತವಾಗಿದ್ದರೂ ಅದು ಯಾವ ಕಲಾವಿದನ ಅಪೂರ್ವ ಕಲ್ಪನೆಯ ಕೃತಿ ಎಂದು ಯಾರಿಗೂ ತಿಳಿಯದು. ಇದೊಂದು ಉದಾಹರಣೆ. ಅಂದರೆ, ಭಕ್ತಿಪೂರ್ವಕವಾಗಿ ಅಂತರಾತ್ಮದಿಂದ ಪ್ರಕಟವಾಗುವ ಕಲೆಯೇ ಲಲಿತ ಕಲೆಯಲ್ಲವೇ ? ಆದ್ದರಿಂದಲೇ ಅದು ಆಶು ಕಲೆಯಾಗಿರುವುದು ಆಶ್ಚರ್ಯವಲ್ಲ. ಆಯಾ ಸಮಯಕ್ಕೆ ಮಾನವನ ಅಂತರ್ಶಕ್ತಿ ಅವನನ್ನು ಪ್ರಚೋ ದಿಸಿದಂತೆ ರಚನಾತ್ಮಕ ಕೃತಿಯಾಗುತ್ತದೆ. ಈ ಕಲ್ಪನೆ ಪಾಶ್ಚಾತ್ಯ ಕಲೆಗೆ ಹೋಲಿಸಿ ದರೆ ಅಜಗಜಾಂತರ ವ್ಯತ್ಯಾಸವನ್ನು ಕಾಣುತ್ತೇವೆ.

........'ರಾಣಿ ಶಾಂತಲಾ' ವನ್ನು ನಮ್ಮ ಭಾರತೀಯ ಸಂಸ್ಕೃತಿಯ ಭವ್ಯ ಸಂಪ್ರದಾಯದ ತಳಹದಿಯ ಮೇಲೆ ನಿರ್ಮಿಸುತ್ತಿದ್ದೇವೆ. ನಮ್ಮ ಭಾರತೀಯ ಕಲೆಯ ತಿರುಳನ್ನು ತಿಳಿದರೆ ಮಾತ್ರ ನಮ್ಮ ನೃತ್ಯ–ನಾಟಕ ಯಶಸ್ವಿ ಆಗಬಹುದು.

ಇತಿ ನಿಮ್ಮ
ಚಂದಮ್ಮ.

* * * *

ಲಂಡನ್
20 – 2 – 1967

ಮುದ್ದು ಮಕ್ಕಳೇ,

........ಮೊನ್ನೆ ರಷ್ಯಾದ ಲೆನಿನ್‌ಗ್ರಾಡ್‌ನ ಪ್ರಸಿದ್ಧ ಕಿರೋಫ್ ಬ್ಯಾಲೆ ಕಂಪನಿಯವರ (Kirov Ballet Company) ಸ್ವಾನ್ ಲೇಕ್' (Swan Lake) ಎಂಬ ಬ್ಯಾಲೆಯನ್ನು ನೋಡಿದೆವು. ಅದನ್ನು ನೋಡಿ ನನ್ನ ಜೀವಮಾನದ ಆಸೆಯನ್ನೇ ತೀರಿಸಿಕೊಂಡೆ. ಅಂತಹ ಬ್ಯಾಲೆ ಕಂಪೆನಿಗಳಲ್ಲಿ ಅವರ ವೇಷ–ಭೂಷಣಗಳಿಗೆ, ದೀಪಾಲಂಕಾರಕ್ಕೆ, ಸಂಗೀತ, ರಂಗಸಜ್ಜಿಕೆ, ಪ್ರದರ್ಶನದ ವಿವರಗಳಿಗೆ ಒಂದು ಧನ ಭಂಡಾರವನ್ನೇ ವೆಚ್ಚ ಮಾಡುತ್ತಾರೆ. ನಿಮಿಷ ಮಾತ್ರಕ್ಕೆ ರಂಗಸ್ಥಳದ ಮೇಲೆ ಮಳೆ, ಗಾಳಿ, ಸಿಡಿಲು, ಮಿಂಚು, ಬಿಸಿಲು, ಸರೋವರ, ರಾಜಾಂಗಣ, ಅರಮನೆಗಳನ್ನು ನಿರ್ಮಾಣ ಮಾಡುತ್ತಾರೆ. ಈ ಹೊರಗಿನ ಆಡಂಬರದ ಸಹಾಯವಿರುವುದರಿಂದ ಕಲಾವಿದರು ಅಭಿನಯಿಸುವ ಭಾರ ಸ್ವಲ್ಪಮಟ್ಟಿಗೆ ಕಡಿಮೆಯಾಗುತ್ತದೆ. ಭಾರತೀಯ ನೃತ್ಯಗಾರನು ಎಲ್ಲವನ್ನೂ ತನ್ನ ನೃತ್ಯದ ಬಲದಿಂದಲೇ ವ್ಯಕ್ತಪಡಿಸಬೇಕು. ನಮ್ಮ 'ಬುದ್ಧೋದಯ' (Temptation of Buddha) ನೃತ್ಯ–ನಾಟಕದಲ್ಲಿ ಪತಿಯವರು ಮೃತ್ಯುಮಾರನಾಗಿ ತಮ್ಮ ಅಭಿನಯ ವೈಶಿಷ್ಟ್ಯದಿಂದಲೇ, ಹಸ್ತ ಮುದ್ರೆಗಳ ಆಧಾರದಿಂದಲೇ ರಂಗಸ್ಥಳದ ಮೇಲೆ ನಿಸರ್ಗದ ಕ್ರೂರತೆ – ಮಳೆ, ಗಾಳಿ, ಸಿಡಿಲು, ಮಿಂಚು, ಭೂಕಂಪ ತೋರಿಸಬೇಕಿತ್ತು. ಭಾರತೀಯ ನೃತ್ಯಕಲೆಯು ಪ್ರದರ್ಶನದ ವೈಭವ ರಹಿತವಾದದ್ದು. ಕಥಕಳಿ ನೃತ್ಯ ಸಂಪ್ರದಾಯದಲ್ಲಂತೂ ಇದನ್ನು ವಿಶೇಷವಾಗಿ ಕಾಣಬಹುದು. ಕಥಕಳಿ ನೃತ್ಯಗಾರನು ತನ್ನ ಅಭಿನಯದಿಂದ ರಂಗಸ್ಥಳದ ಮೇಲೆ ಏನನ್ನೂ ಕಲ್ಪಿಸಬಲ್ಲನು. ಇಲ್ಲಿ ಪಾಶ್ಚಾತ್ಯ ತಂತ್ರಜ್ಞರು ಕಷ್ಟಪಟ್ಟು ಕೊಡುವ ಪ್ರಬಲ ಪರಿಣಾಮಗಳನ್ನು ಆತನು ತನ್ನ ಕಲಾ ಕೌಶಲ್ಯದಿಂದ ತೋರಿಸಬಲ್ಲನು. ಭರತನಾಟ್ಯದ 'ವರ್ಣ' ವೊಂದನ್ನು ಗುರುಗಳು ಮರದ ತುಂಡಿನ ಮೇಲೆ

ಬರೇ ಒಂದು ಮರದ ಕೋಲಿನಿಂದ ತಾಳ ತಟ್ಟಿ, ಹಾಡಿ, ತನ್ನ ಶಿಷ್ಯರಿಂದ ರಾಮಾಯಣವನ್ನೋ ಅಥವಾ ಪುರಾಣ ಸಂಬಂಧವಾದ ಕಥೆಗಳನ್ನೋ, ಹಾಡಿ ಕುಣಿಸಬಲ್ಲರು! ಸಂಗೀತ ವಾದ್ಯಗಳೂ ಬೇಕಂತಿಲ್ಲ. ಶಿಷ್ಯಂದಿರು, ಗುರುಗಳು ಪ್ರೇರೇಪಿಸುವ ನೃತ್ಯವನ್ನು ತಿಳುವಳಿಕೆಯಿಂದ ಕುಣಿದು ಪ್ರೇಕ್ಷಕರನ್ನು ಬೇರೆಯೇ ಕಲಾ ಜಗತ್ತಿಗೆ ಕೊಂಡೊಯ್ಯಬಲ್ಲರು.

'ರಾಣಿ ಶಾಂತಲಾ' ದ ಸರಳ ಪ್ರದರ್ಶನವನ್ನು ಇಲ್ಲಿನ ಜನ ಒಪ್ಪಿದರೆ ಒಳಿತು. ಅಲಿ ಅಕ್ಬರ್ ಖಾನ್‌ರವರ ಆಶು ಸಂಗೀತ ಇಲ್ಲಿನವರನ್ನು ದಂಗುಬಡಿಸಿದೆ. ಅವರ ಉತ್ತರಾದಿ ಸಂಗೀತಕ್ಕೆ ಸರಿಯಾಗಿ ನಮ್ಮ ಬೆಂಗಳೂರಿನ ಸಂಗೀತಗಾರರು, ಸೂರಿ, ದೊರೆ, ಸುನಂದಾ, ರಂಗಸ್ವಾಮಿ, ಅಪ್ಪಣ್ಣ, ಚಿನ್ನಾ ಮುಂತಾದವರು ಒದಗಿಸಿರುವ ದಕ್ಷಿಣಾದಿ ಸಂಗೀತದ ಸಂಗಮವಾಗಿದೆ. ಈ ಎರಡು ಸಂಗೀತಧಾರೆಗಳು ಸಂಪೂರ್ಣ ಸಫಲತೆಯಿಂದ ಕೂಡಿ ಬಂದು ರಸಮಿಲನವಾಗಿ ಕೇಳಲು ಸುಶ್ರಾವ್ಯವಾಗಿದೆ. 'ರಾಣಿ ಶಾಂತಲಾ' ನೃತ್ಯ ನಾಟಕದ ಸಂಗೀತವನ್ನು ಈಗಾಗಲೇ ಸಂಕಲನ – ಸಂಪಾದನ ಮಾಡಿಯಾಗಿದೆ. ಸಂಗೀತವನ್ನು ಬೇಕಾದಂತೆ ತುಂಡುಮಾಡಿ, ಜೋಡಿಸಿ, ಪುನಃ ರಿಕಾರ್ಡುಮಾಡಿ, ನಮಗೆ ಬೇಕಾದುದನ್ನು ಇಟ್ಟುಕೊಂಡು, ಬೇಡದ್ದನ್ನು ಕತ್ತರಿಸಿ ಸಿದ್ಧ ಮಾಡಿದ್ದೇವೆ. ನಮ್ಮ ಕಲಾವೃಂದಕ್ಕೆ ಸಂಗೀತದ ಅಭ್ಯಾಸವಾಗಲು, ಹಾಗೂ ಆದಕ್ಕೆ ಸರಿಯಾಗಿ ನರ್ತಿಸಲು ಕೂಡ ಸಾಕಷ್ಟು ಸಮಯವಿಲ್ಲ. ಆದರೆ ಈಗ ಸಂಗೀತ ಪೂರ್ತಿ ಸಿದ್ಧವಾಗಿದೆಯಾದ್ದರಿಂದ ನೃತ್ಯ ಅಭ್ಯಾಸಗಳು ಬಿಡುವಿಲ್ಲದೆ ಸಾಗುತ್ತಿವೆ. ಸ್ಫೂರ್ತಿದಾಯಕವಾದ ಇನಿದನಿಗೆ ಗೆಜ್ಜೆಕಟ್ಟಿ ಎಲ್ಲರೂ ಹೆಚ್ಚು ಹುಮ್ಮಸ್ಸಿನಿಂದ ನರ್ತಿಸಿ ನಮ್ಮ ಹೊಣೆಗಾರಿಕೆಯನ್ನು ಹಗುರ ಮಾಡುತ್ತಿದ್ದಾರೆ. ತಮ್ಮ ಪೂರ್ಣ ಬೆಂಬಲವನ್ನು ನಮಗೆ ಕೊಡುತ್ತಿದ್ದಾರೆ. ಈ ಒಂದೇ ಒಂದು ಕಾರ್ಯಕ್ರಮ AMC ಯವರು ನಮ್ಮನ್ನು ಕರೆಯಿಸಿದ ಕಾರಣ ಸಂತೋಷಪಡಬೇಕು. ರಂಗಸಜ್ಜಿಕೆಯಿಲ್ಲದೆ, ಬಾಹ್ಯಾಡಂಬರವಿಲ್ಲದೆ ಇರುವ ಈ ನಮ್ಮ ನೃತ್ಯ ನಾಟಕವನ್ನು ವಿಮರ್ಶಕರು ಒಪ್ಪದಿದ್ದರೆ?

ಸರ್ವೋಚ್ಚ ಹಾರೈಕೆ–ಪರಮಾಧಮಕ್ಕೆ ತಯಾರಿಕೆ (Hope for the best and be prepared for the worst) ಎಂಬ ಮನೋಭಾವ ತಳೆದಿದ್ದೇವೆ.

........ಪ್ರದರ್ಶನ ಮುಗಿದ ಮೇಲೆ ಬರೆಯುವೆ.

ಇತಿ

ನಿಮ್ಮ ಅಮ್ಮ.

* * * * *

ಲಂಡನ್ನಿನಲ್ಲಿ ಪ್ರದರ್ಶಿಸಿದ "ರಾಣಿ ಶಾಂತಲಾ" ನೃತ್ಯ – ನಾಟಕದ ಒಂದು ದೃಶ್ಯ

ಲಂಡನ್
28 – 2 – 1967

ಆತ್ಮೀಯರೇ,

........ನನ್ನ ಈ ಕಾಗದಕ್ಕೆ ನೀವು ಆತುರದಿಂದ ಕಾಯುತ್ತಿರಬೇಕಲ್ಲವೆ ? ಫೆಬ್ರವರಿ 22 ರಂದು ನಮ್ಮ 'ರಾಣಿ ಶಾಂತಲಾ' ನೃತ್ಯ ನಾಟಕದ ಮೊದಲ ಪ್ರದರ್ಶನವಾಯಿತು. ಪ್ರೇಕ್ಷಕರು ಕಥಾವಸ್ತುವನ್ನು ತುಂಬಾ ಮೆಚ್ಚಿದರು. ಭಾರತೀಯ ಚಿತ್ತವೃತ್ತಿಯ ಭಾವಸರಣಿಯ ಪರಿಚಯ ಅವರಿಗಾಯಿತು, ನಮ್ಮ ನಾಡಿನ ನೃತ್ಯ ಪ್ರದರ್ಶನಾಕ್ರಮುವನ್ನು ನೋಡಿದರು. ಕಥೆಯಂತೂ ಯಾವ ಪ್ರೇಕ್ಷಕನನ್ನೂ ಹೃದಯ ಮುಟ್ಟಿ ಅಲುಗಾಡಿಸುವಂತಿತ್ತು. ನಮ್ಮ ಮಂಡಲಿಯಲ್ಲಿ ತೀರಾ ಹೊಸ ವಿದ್ಯಾರ್ಥಿಗಳೂ ಭಾಗವಹಿಸಿದುದರಿಂದ ಕಲೆಯ ಮಟ್ಟ ಒಮ್ಮೊಮ್ಮೆ ಇಳಿಯುತ್ತಿದ್ದುದು ನಮಗೆ ಗೊತ್ತಿದೆ. ಇಲ್ಲಿನ ವಿಮರ್ಶಕರು ಕಲಾ ರಚನೆಯ ಹಿನ್ನೆಲೆಯನ್ನು ಎಂದೂ ಗಣಿಸುವುದಿಲ್ಲ. 'ಅಷ್ಟೊಂದು ಅನಾನುಕೂಲತೆ–ಸಿದ್ಧತೆ ಇಲ್ಲದಿದ್ದರೆ ಕಲೆಯನ್ನು ಏಕೆ ಪ್ರದರ್ಶಿಸಬೇಕು ?' ಎಂದು ಅವರ ಮತ. ಇಲ್ಲಿನ ವಿಮರ್ಶಕರು ಯಾವಾಗಲೂ ಅಂದಿನ ಸಾಯಂಕಾಲದ ಪ್ರದರ್ಶನವನ್ನು ವಿಮರ್ಶಿಸುವವರೇ ಹೊರತು ಹೆಸರುವಾಸಿ ಕಲಾವಿದರೇ ಆಗಲಿ, ಅವರ ಹಿಂದಿನ ಉನ್ನತ ಕೆಲಸ ಕಾರ್ಯವನ್ನೂ ಗಮನಿಸದೆ, ಕಾರ್ಯಕ್ರಮ ಚೆನ್ನಾಗಿಲ್ಲದೆ ಇದ್ದರೆ ಕರುಣೆ ಇಲ್ಲದೆ ವಿಮರ್ಶಿಸುವ ಪದ್ಧತಿ...........ಅಂದಿನ ಸಾಯಂಕಾಲದ ಪ್ರದರ್ಶನವನ್ನು ಪ್ರಖ್ಯಾತ ವಿಮರ್ಶಕರೊಬ್ಬರು ನೋಡಿ, ನೃತ್ಯವನ್ನು ವಿಮರ್ಶಿಸದೆ – ದೀಪಾಲಂಕಾರದ ಕೊರತೆ, ರಂಗಸಜ್ಜಿಕೆಯ ಅಭಾವ ಇವೆಲ್ಲವನ್ನೂ ಟೀಕಿಸಿ, ನೃತ್ಯ–ನಾಟಕ 'ತೀರಾ ಅನಾಗರಿಕ' ಎಂಬ ಅಭಿಪ್ರಾಯಪಟ್ಟರು. ಕುಂಬಾರನಿಗೆ ವರುಷ–ದೊಣ್ಣೆಗೆ ನಿಮಿಷ ಎಂದಂತಾಯಿತು. ಇಲ್ಲಿನ ಈ ವಿಮರ್ಶಕನಿಗೆ ಅದ್ಭುತವಾದ ಅಮೋಘ ಪ್ರದರ್ಶನಗಳನ್ನು ಪ್ರಪಂಚದ ಮೂಲೆ ಮೂಲೆಗಳಿಂದ ಬರುವ ನೃತ್ಯ ತಂಡಗಳ ವೈವಿಧ್ಯ, ವೈಶಿಷ್ಟ್ಯಗಳನ್ನು ನೋಡಿ ನೋಡಿ ರೂಢಿಯಾಗಿದೆ. ಹೀಗಾಗಿ, ನಮ್ಮ ಸರಳ–ನೇರ ಪ್ರದರ್ಶನದ ರೀತಿ ಅವರಿಗೆ ಸಪ್ಪೆಯೆನಿಸಿದ್ದರೆ ಆಶ್ಚರ್ಯವೇನಿಲ್ಲ. ನಮ್ಮ ಕಲೆಯನ್ನು ನಮ್ಮ ಅಳತೆಗೋಲಿನಿಂದ ವೀಕ್ಷಿಸಿದ್ದರೆ ಮಾತ್ರ ಸ್ತುತ್ಯ ಅಭಿಪ್ರಾಯ ಬರುತ್ತಿತ್ತು. 'ರಾಣಿ ಶಾಂತಲಾ'ದ ಕಥೆ ಪಾಶ್ಚಾತ್ಯರಿಗೆ ವಿಚಿತ್ರವಾದ ಕಥೆಯೆನಿಸಬಹುದು. ಕಥೆಯ ನಿಗೂಢ ಅಂತರಾಳ – ಒಂದು ಆತ್ಮವು ಇನ್ನೊಂದು ಆತ್ಮಕ್ಕೆ ಸೇರುವ ಪ್ರಸಂಗ – ಒಬ್ಬ ಪಟ್ಟದ ರಾಣಿಯಿದ್ದು ಇತರ ರಾಣಿಯರನ್ನು ವರಿಸುವ ಚಕ್ರವರ್ತಿಯ ಜೀವನ – ಪರಂಪರಾನುಗತವಾಗಿ ಪ್ರವಹಿಸಿ ಬಂದ ಹಿಂದೂ ಸಂಸ್ಕೃತಿಯ ಅರ್ಥಪೂರ್ಣ ಸಂಪ್ರದಾಯಗಳು–ನಾವು ಎಣಿಸಿದಂತೆ ಇಲ್ಲಿನವರಿಗೆ ಒಂದು ಹೊಸತಾದ ಅನುಭವ, ಅರ್ಥ ಮಾಡಿಕೊಳ್ಳಲು ಸ್ವಲ್ಪ ಕಷ್ಟವೇ ಸರಿ !

ನಮಗಂತೂ 'ರಾಣಿ ಶಾಂತಲಾ' ತುಂಬಾ ತೃಪ್ತಿ ಕೊಡುವ ರಚನಾತ್ಮಕ ಕೃತಿಯಾಗಿ ಪರಿಣಮಿಸಿತು. ಕಥೆಗೂ, ಕಥೆಯಲ್ಲಿನ ಪಾತ್ರಗಳಿಗೂ, ಭಾವರಸಗಳ ಆಳಕ್ಕೂ ಯಾವ ವಂಚನೆಯನ್ನೂ ಮಾಡದೆ, ನಮ್ಮ ಶಕ್ತಿಮೀರಿ ಕೆಲಸ ಮಾಡಿದ್ದೆವು. ಆದ್ದರಿಂದ ಮನಸ್ಸಿಗೆ ತುಂಬಾ ನೆಮ್ಮದಿಯಿದೆ.

'ರಾಣಿ ಶಾಂತಲಾ' ದ ಎರಡನೆಯ ಪ್ರದರ್ಶನ ನಿನ್ನೆ ಕಾಮನ್‌ವೆಲ್ತ್ ಇನ್‌ಸ್ಟಿಟ್ಯೂಟ್‌ನಲ್ಲಿ (Commonwealth Institute) ಆಯಿತು. ನಿನ್ನೆ ರಂಗಮಂದಿರ ತುಂಬಿ ಹೋಗಿತ್ತು! ನೃತ್ಯ-ನಾಟಕವು ತುಂಬಾ ಯಶಸ್ಸು ಪಡೆಯಿತು. ಸಂಗೀತವಂತೂ ಅವರ ಮನಸ್ಸನ್ನು ಸೂರೆ ಮಾಡಿತು. ಕಥೆಯ ಕೊನೆಯ ದೃಶ್ಯಗಳು ಹೃದಯದ್ರಾವಕವಾಗಿದ್ದು ದುಃಖದಿಂದ ಅಳುವಂತೆ ಮಾಡಿದವು. ಕಂಬನಿ ತುಂಬಿದ ಕಂಗಳಿಂದಲೇ ಕೆಲವರು ಅಲಂಕರಣ ಗೃಹಕ್ಕೆ ಬಂದು ನಮ್ಮನ್ನು ಅಭಿನಂದಿಸುತ್ತಾ—"ನೀವು ಪ್ರತಿಭಾ ದೇವತೆಯರು!" ಎನ್ನುವಾಗ, (You are a genius) ಅವರ ಆ ಕಣ್ಣೀರು ಆನಂದ ಬಾಷ್ಪಗಳಾಗಿ ಉರುಳಿದವು. ನಮಗೆ ಅವರ್ಣನೀಯ ಆನಂದವಾಯಿತು. ಮುಖ್ಯವಾಗಿ ನಮ್ಮ ಮೈಸೂರಿನ ಸಂಸ್ಕೃತಿಯನ್ನು ಲಂಡನ್ನಿಗೆ ತಂದೆವು ಎಂಬ ಅಭಿಮಾನ. ಅನೇಕ ಪತ್ರಿಕೋದ್ಯೋಗಿಗಳೂ 'ರಾಣಿ ಶಾಂತಲಾ' ವನ್ನು ಬಹಳ ಮೆಚ್ಚಿದರು. ಅದರಲ್ಲಿನ ಮನೋಹಾರಿ ಕಲಾ ಚಾತುರ್ಯ, ಶಾಸ್ತ್ರೀಯ, ಜಾನಪದ ನೃತ್ಯಗಳು, ದಕ್ಷಿಣಾದಿ ಮತ್ತು ಹಿಂದೂಸ್ತಾನಿ ಸಂಗೀತಗಳ ಮಿಲನ, ಕಥೆಯ ನಿಗೂಢತೆ ಹಾಗೂ ಪ್ರದರ್ಶನ – ಎಲ್ಲವನ್ನೂ ಬಾಯಿತುಂಬಾ ಹೊಗಳಿದರು. ಕಣ್ಮನ ತಣಿಸುವ ವೇಷ ಭೂಷಣ, ಕಥೆಯಲ್ಲಿನ ದುಃಖ, ಭಕ್ತಿ, ಸರಸ ಮುಂತಾದ ನವರಸಯುಕ್ತ ವಿವಿಧ ನೃತ್ಯಗಳ ಸಂಯೋಜನೆ, ಒಬ್ಬರು-ಇಬ್ಬರು-ನಾಲ್ವರು-ಹತ್ತು ಜನ ಕುಣಿಯುವ ದೃಶ್ಯಗಳು, ಬೇಲೂರು, ಹಳೇಬೀಡಿನ ದೇವಾಲಯದ ಮದನಿಕೆಯರ ನೃತ್ಯ ಭಂಗಿಗಳು – ಎಲ್ಲವೂ ಮೆಚ್ಚುವಂತಿತ್ತು. 'ರಾಣಿ ಶಾಂತಲಾ' ಅದ್ಭುತವಾದ ನೃತ್ಯ-ನಾಟಕ ಎಂದೆನಿಸಿತು. ಪ್ರೇಕ್ಷಕರು ಪ್ರತಿಯೊಂದು ದೃಶ್ಯಕ್ಕೂ ವಿಶೇಷವಾದ ಕರತಾಡನ ಕೊಟ್ಟರು. ಮುಕ್ತ ಕಂಠದಿಂದ ಪ್ರತಿಯೊಂದು ದೃಶ್ಯದಲ್ಲಿನ ನೃತ್ಯಕ್ಕೂ ಬಹಿರಂಗವಾದ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಒಂದು ಪತ್ರಿಕೆಯಲ್ಲಿ 'ಭಾರತೀಯ ಪ್ರಮಾಣ ದೃಷ್ಟಿಯಿಂದ ನೋಡಿದರೆ, ಇದೊಂದು ಸಾಹಸದ ಪ್ರಯತ್ನ' (From Indian standards it is a bold attempt) ಎಂದು ಪ್ರಕಟವಾಯಿತು.

ಇನ್ನೊಂದು ಪತ್ರಿಕೆ ಹೀಗೆಂದಿತು: "ಬೆಂಗಳೂರಿನ ಕೃಷ್ಣರಾವ್ ಚಂದ್ರಭಾಗಾದೇವಿ ಇವರು ಲಂಡನ್ನಿನಲ್ಲಿ ಒಂದು ನೃತ್ಯ ಶಾಲೆಯನ್ನು ಸ್ಥಾಪಿಸಿ ಇನ್ನೂ ಎರಡು ವರ್ಷಗಳಾಗಿಲ್ಲ. ಆದರೆ ಅದು ಈಗಾಗಲೇ ತನ್ನ ಕಾರ್ಯಕಲಾಪಗಳ ಕುಶಲತೆಯಲ್ಲಿ ಮಾತ್ರವಲ್ಲ, ಗಾತ್ರದಲ್ಲಿಯೂ ಅಭಿವೃದ್ಧಿಗೊಂಡು, ಅಸಾಧಾರಣ ಯೋಗ್ಯತೆ

ಯುಳ್ಳ ಪೂರ್ಣ ನೃತ್ಯ ನಾಟಕಗಳನ್ನು ಪ್ರದರ್ಶಿಸಲು ಶಕ್ಯವಾಗಿದೆ. ಇವುಗಳಲ್ಲಿನ ವೇಷಭೂಷಣಗಳು ಅದ್ಭುತವಾಗಿದೆ, ಅಲ್ಲದೆ ನಾನಾ ಜನಾಂಗಗಳಿಗೆ ಸೇರಿರುವ ಈ ನೃತ್ಯವೃಂದವು ಅಧ್ಯಾಪಕರು ರಚಿಸಿದ ನರ್ತನ ರೂಪಗಳನ್ನು ಒಳ್ಳೆಯ ಶಿಸ್ತಿನಿಂದ, ತುಂಬಾ ಪರಿಣಾಮಕಾರಿಯಾಗುವಂತೆ ಪ್ರದರ್ಶಿಸುತ್ತದೆ........"

ಅಂತೂ ಹೀಗೆ ನಾವು ಎರಡು ತಿಂಗಳ ಸತತ ದುಡಿಮೆಯ ಶ್ರಮವನ್ನು ಒಂದು ನಿಮಿಷದಲ್ಲಿ ಮರೆತೆವು !

ಇತಿ ನಿಮ್ಮ

ಚಂದಮ್ಮ.

*   *   *   *   *

ಲಂಡನ್

7 – 3 – 1967

ಆತ್ಮೀಯರೇ,

........1967 ಮಾರ್ಚ್ 5ನೆಯ ತಾರೀಕು ನಮ್ಮ 'ರಾಣಿ ಶಾಂತಲಾ' ವನ್ನು ಕೇಂಬ್ರಿಡ್ಜ್ ಆರ್ಟ್ ಥಿಯೇಟರ್‌ನಲ್ಲಿ (Cambridge Art Theatre) ಪ್ರದರ್ಶಿಸಿದೆವು. ಈ ಥಿಯೇಟರ್ ಒಂದು ಜಗದ್ವಿಖ್ಯಾತ ರಂಗಮಂದಿರ. ಆ ರಂಗಸ್ಥಳದ ಮೇಲೆ ಅನೇಕಾನೇಕ ಯುವಕರು ತಮ್ಮ ಸುಪ್ತ ಪ್ರತಿಭೆಯನ್ನು ಬೆಳಕಿಗೆ ತಂದು ಕ್ರಮೇಣ ಪ್ರತಿಭಾವಂತ ನಟರಾಗಿ ವಿಶ್ವಖ್ಯಾತಿ ಪಡೆದಿದ್ದಾರೆ. ಹೆಸರಾಂತ ಕಲಾವಿದರು ಓಡಾಡಿದ ಪುಣ್ಯಭೂಮಿ ಎನ್ನಬೇಕು. ಯಾವ ಕಲಾವಿದನಿಗಾಗಲಿ ಸ್ಫೂರ್ತಿ ಕೊಡುವಂತಹ ಕ್ಷೇತ್ರ ಇದು.

ಕೇಂಬ್ರಿಡ್ಜ್‌ನಲ್ಲಿಯೂ 'ರಾಣಿ' ವಿಶೇಷವಾದ ಯಶಸ್ಸು ಪಡೆದಳು. ರಂಗಮಂದಿರ ಪಾಶ್ಚಾತ್ಯರಿಂದ ತುಂಬಿಹೋಗಿತ್ತು ಅದೇ ನಮಗೆ ಸಂತೋಷ. ನೃತ್ಯ ನಾಟಕವಾದ ಮೇಲೆ ಕೇಂಬ್ರಿಡ್ಜ್‌ನ AMC ಕಾರ್ಯದರ್ಶಿ ನಮ್ಮಲ್ಲಿಗೆ ಧಾವಿಸಿ ಬಂದು 'ಬ್ರಿಟಿಷ್ ಜನರು ಭಾವೋದ್ರೇಕದಿಂದ ಸಂತಪ್ತರಾಗಿ ಅಳುತ್ತಿರುವುದು ಇದೇ ಮೊದಲು ನಾನು ಕಂಡದ್ದು' ಎಂದರು. ಇಲ್ಲಿ ನೂರಾರು ಜನ, ಸಾವಿರಾರು ಬಗೆಯಲ್ಲಿ 'ರಾಣಿ ಶಾಂತಲಾ' ವನ್ನು ವಿಮರ್ಶಿಸಿದರು.

......."ನೀವು ನರ್ತಿಸುವಾಗ, ನೃತ್ಯವನ್ನು ಅಲ್ಲೇ, ಆ ಸಮಯದಲ್ಲೇ ರಚಿಸಿದಂತಿತ್ತು....... ಅದೆಷ್ಟು ಸಹಜವಾಗಿತ್ತು !"

"........ನಿಮ್ಮ ಆತ್ಮಹತ್ಯೆಯ ದೃಶ್ಯ ಮಾತ್ರ .... ಅಬ್ಬಾ .... ಅದೆಷ್ಟು ಕಠೋರ!"

"ಅಂತಿಮ ದೃಶ್ಯದಲ್ಲಿ ಕೃಷ್ಣರಾಯರು ಕಂಬನಿಗರೆಯುವಾಗ ಎಷ್ಟು ಆಳವಾಗಿ ಅವರು ನಿಮ್ಮನ್ನು ಪ್ರೀತಿಸುತ್ತಾರೆ ಎಂದು ಖಚಿತಪಡಿಸುತ್ತಿತ್ತು........"

"ಎಷ್ಟು ಚೆಲುವಾದ ನೃತ್ಯ-ನಾಟಕ!........ಎರಡು ವಿಧದ ಸಂಗೀತ ಮಾಧುರ್ಯದ ಅಪೂರ್ವ ಸಮ್ಮಿಲನ!"

........ಹೀಗೆ ಇನ್ನೂ ಎಷ್ಟೆಷ್ಟೋ. ಸಾಮಾನ್ಯವಾಗಿ ಜನರು ಈ ನೃತ್ಯ ನಾಟಕದಿಂದ ದಿಗ್ಭ್ರಮೆಗೊಂಡು ಸ್ಥಂಭೀಭೂತರಾದ ಕಾರಣ ಮಾತೇ ಆಡಲಾರರು. ಅವರ ನಿರೀಕ್ಷೆಗೆ ಮೀರಿದ ಅನುಭವವಾಗಿ ಅವರನ್ನು ಮೂಕರನ್ನಾಗಿ ಮಾಡುತ್ತಿತ್ತು – ನಮ್ಮ 'ರಾಣಿ ಶಾಂತಲಾ'.

ನಮ್ಮ ಕೇಂಬ್ರಿಡ್ಜ್ ಶಿಷ್ಯವೃಂದವು 'ರಾಣಿ ಶಾಂತಲಾ' ನೋಡಿದ ಮೇಲಂತೂ ಹುಚ್ಚರೇ ಆದರು! ಅವರು ನೃತ್ಯ-ನಾಟಕದ ಕಥಾವಸ್ತು ಓದಲೇ ಇಲ್ಲವಂತೆ-ದೃಶ್ಯಗಳ ವಿವರಣೆಯೂ ಬೇಕಾಗಿರಲಿಲ್ಲವಂತೆ. ಆದರೂ ಅವರು ಪ್ರತಿಯೊಂದು ಸಂದರ್ಭವನ್ನೂ ಬಹಳ ಚೆನ್ನಾಗಿ, ಸ್ಪಷ್ಟವಾಗಿ ತಿಳಿದರಂತೆ. ನಮ್ಮ ಅಭಿನಯವೂ, ಹಸ್ತ ಮುದ್ರೆಗಳೂ, ಚಲನೆಗಳೂ, ಸರಳವಾಗಿಯೂ, ಸುಂದರವಾಗಿಯೂ ಇದ್ದು ಎಲ್ಲರಿಗೂ ಅರ್ಥವಾಗುವಂತೆ ಇದ್ದುವಂತೆ. ಪತಿಯವರನ್ನು ಹೊಗಳುತ್ತಾ – "ನಿಮ್ಮ ಕೆಲವು ನೃತ್ಯಗಳು ಮತ್ತು ನೃತ್ಯದ ರಸನಿಮಿಷಗಳು ಧರ್ಮ ಗ್ರಂಥಗಳಲ್ಲಿನ ಮಹಾ ವಾಕ್ಯಗಳಂತೆ ಅಥವಾ ಅಧ್ಯಾತ್ಮಿಕ ಅನುಭವಗಳ ವಾಸ್ತವಿಕ ನಿರೂಪಣೆಗಳಂತೆ ನಮ್ಮ ಮನಸ್ಸಿನಲ್ಲಿ ಸ್ಥಿರವಾಗಿ ನಿಂತಿವೆ!" ಎಂದರು.

'ರಾಣಿ ಶಾಂತಲಾ' ಯಾವ ಮಾನವನ ಹೃದಯವನ್ನಾದರೂ ಕದಡಬಲ್ಲದು. "ಇತ್ತೀಚಿನ ಇಪ್ಪತ್ತು ವರ್ಷಗಳಿಂದ ನಾವು ಇಂತಹ ಅದ್ಭುತ ಭಾರತೀಯ ಪ್ರದರ್ಶನವನ್ನು ನೋಡಿರಲಿಲ್ಲ" ಎಂದು ವಿಧವಿಧವಾಗಿ ಹೊಗಳಿದರು.

ಮತ್ತೆ ಏಪ್ರಿಲ್ ತಿಂಗಳ ಮೊದಲನೆಯ ತೇದಿಗೆ ನಮ್ಮ 'ರಾಣಿ ಶಾಂತಲಾ' ಬರ್ಮಿಂಗ್ ಹ್ಯಾಮ್ (Birmingham) ನಲ್ಲಿ ಪ್ರದರ್ಶಿತವಾಗಲಿದೆ. ಕೆಲವು ಸುಧಾರಣೆಗಳನ್ನು ಮಾಡಬೇಕೆಂದಿದ್ದೇವೆ.

ಶ್ರೀ ಅಂಗಡಿಯವರಿಗೆ ಮೈ ಸ್ವಸ್ಥವಿಲ್ಲ. ದೀರ್ಘ ವಿಶ್ರಾಂತಿ ಪಡೆಯಬೇಕೆಂದು

ವೈದ್ಯರು ಹೇಳಿದ್ದಾರೆ. ಯೂರೋಪಿನಲ್ಲಿ ನಮ್ಮ ಕಾರ್ಯಕ್ರಮಗಳನ್ನು ಏರ್ಪಡಿಸುವ ಅವರ ಪ್ರಯತ್ನಗಳೆಲ್ಲವನ್ನು ನಿಲ್ಲಿಸಬೇಕಾಗಿದೆ. ಯತ್ನವಿಲ್ಲ.

ಇತಿ ನಿಮ್ಮ

ಚಂದಮ್ಮ.

* * * * *

ಲಂಡನ್

31 – 5 – 1967

ಮುದ್ದು ಶಿವದೇವ್,

ತರಬೇತಿಗೆಂದು ಬೊಂಬಾಯಿಗೆ ಹೋದ ನೀನು ಅಲ್ಲಿನ ಜನಜೀವನವನ್ನು ಎಷ್ಟು ಚೆನ್ನಾಗಿ ವರ್ಣಿಸಿದ್ದೀಯೆ!........ಈಗ ಎಲ್ಲ ನಗರಗಳೂ ಅದೇ ರೀತಿಯಲ್ಲಿವೆ. ಲಂಡನ್ ಹೇಗಿದೆ ಎಂದು ನೀನು ಖಂಡಿತ ಊಹಿಸಬಲ್ಲೆ. ಆದರೆ ಇಲ್ಲೇ ನೆಲಸಿದರೆ ಪಶ್ಚಿಮ ದೇಶಗಳ ಮೆರುಗೆಲ್ಲ ಮುಸುಕಾಗಿ ಹೋಗುತ್ತದೆ. ಬೆಂಗಳೂರಿನಲ್ಲಿ ಚಿಕ್ಕದೊಂದು ಉದ್ಯೋಗ ಪಡೆದು ಸಂಪಾದಿಸುವ ತೃಪ್ತಿ ಈ ನಗರಗಳಲ್ಲಿಲ್ಲ ಎಂದ ನಿನ್ನ ವಿವೇಕದ ಅಭಿಪ್ರಾಯವನ್ನು ಮೆಚ್ಚಿದೆ. ಈಗ ನಮಗೆ ಇಲ್ಲಿನ ಯಾವ ವೈಭವ, ವಿಜೃಂಭಣೆಯೂ ಆಕರ್ಷಿಸುವುದಿಲ್ಲ. ನಮ್ಮ ದೇಶದಲ್ಲಿಯೇ ಎಷ್ಟು ಕೊರತೆಗಳಿದ್ದರೂ ಸರಿ, ಅಲ್ಲಿಯೇ ಕೆಲಸ ಮಾಡಿ ಹಾಯಾಗಿ ಇರಬೇಕೆಂದೆನಿಸುತ್ತಿದೆ. ನಮ್ಮ ಮನೆಯಲ್ಲಿನ ಜೀವನ, ನಿಮ್ಮಿಬ್ಬರೊಡನೆ ಇರುವ ಸಂಸಾರ ಸುಖಕ್ಕೆ ಸರಿಸಾಟಿ ಯಾವುದಿದೆ?

ಅಂತೂ ಎಲ್ಲ ಸಂಕಷ್ಟಗಳಲ್ಲೂ ಸಂದರ್ಭಕ್ಕೆ ಸರಿಯಾಗಿ ಹೊಂದಿಕೊಂಡು ಹೋಗಲು ನಮ್ಮ ತೊಡರಿನ ಕಲಾಜೀವನ ಮೊದಲಿನಿಂದಲೂ, ನಮಗೆ ಪಾಠ ಹೇಳಿಕೊಟ್ಟಿದೆ. ನಿಮಗೂ ನಮ್ಮ ಜೀವನ ಪ್ರಭಾವದಿಂದ ಒಳ್ಳೆಯ ಶಿಕ್ಷಣ ದೊರಕಿದೆ. ನೀವಿಬ್ಬರೂ ಅರಮನೆಯಲ್ಲೂ ತಕ್ಕ ರೀತಿಯಲ್ಲಿ ಕಾಲ ಕಳೆಯಬಲ್ಲಿರಿ, ಅಂತೆಯೇ ಮುರುಕಲು ಗುಡಿಸಲಿನಲ್ಲಿ ಕೂಡ. ಆದೇ ನನಗೆ ಹೆಮ್ಮೆಯ ವಿಷಯ.

ಈ ಪಾಶ್ಚಾತ್ಯ ಪ್ರವಾಸ ನಮಗೆ ಬೇರೆ ಬೇರೆ ಪಾಠ ಕಲಿಸಿದೆ. ಸಹಬಾಳ್ವೆಯ ಅರ್ಥ ತಿಳಿಸಿಕೊಟ್ಟಿದೆ.........ಇತ್ತೀಚೆಗೆ ಈ ಪ್ರವಾಸ ನಿಜಕ್ಕೂ ಸಾಕಾಗಿದೆ. ನೃತ್ಯ ರಂಗದಲ್ಲಿ ಬಿಡುವಿಲ್ಲದೆ ದುಡಿದು ದಣಿದಿದ್ದೇವೆ. ನಮ್ಮ ನಾಲ್ಕು ನೃತ್ಯ–ನಾಟಕಗಳು ಏರ್ಪಾಡಾಗಿವೆ. ಬರುವ ಜೂನ್ ತಿಂಗಳಲ್ಲಿ ಎರಡು, ಆಮೇಲೆ ಸೆಪ್ಟೆಂಬರ್, ಅಕ್ಟೋಬರ್‌ನಲ್ಲಿ ಇನ್ನೂ ಎರಡು ಹೊಸ ನೃತ್ಯ ನಾಟಕಗಳು! ಇಲ್ಲಿ ಅವನ್ನು ಪ್ರದರ್ಶಿಸುವುದು ಎಲ್ಲರಿಗೂ ಕಷ್ಟವಾಗಿದೆ. ಶಿಷ್ಯಂದಿರ ಮನೋಭಾವಗಳನ್ನು ಗಮನಿಸಿ,

ಅವುಗಳಿಗೆ ತಕ್ಕಂತೆ ಸ್ಥೈರ್ಯದಿಂದ ಉತ್ತರ ಕೊಟ್ಟು. ಅವರಿಂದ ಕೆಲಸ ಪಡೆದು, ನಮ್ಮ ಜವಾಬ್ದಾರಿಯ ಹೊರೆಯನ್ನು ಸುಲಲಿತವಾಗಿ ಕೆಳಗಿಳಿಸುವುದು ನಮ್ಮ ಚಿತ್ತ ವೃತ್ತಿಗೇ ಒಂದು ಸವಾಲು ನಿಜ!

ಇಲ್ಲಿನ ಅವಧಿ ಮುಗಿಯುವುದರೊಳಗಾಗಿ ಎಲ್ಲ ಕೆಲಸ ಕಾರ್ಯಗಳನ್ನೂ ಮನಃಪೂರ್ವಕವಾಗಿ, ಸಾಂಗವಾಗಿ ಪೂರೈಸುತ್ತಿದ್ದೇವೆ. ಆಮೇಲೆ ಲಂಡನ್ ಬಿಡಲು ಬೇಸರವೇನೂ ಇರುವುದಿಲ್ಲ ಅಲ್ಲವೇ? ಅಮೇರಿಕಾಕ್ಕೆ ಹೋಗಲು ನಾವು ಪ್ರಯತ್ನ ನಡೆಸಿದ್ದೇವೆ. ಆದರೆ ಆ ಪ್ರವಾಸಕ್ಕೆ ಅಸಾಧಾರಣ ಪ್ರಯಾಸ ಪಡಬೇಕಾಗಿದೆ. ನಮ್ಮ ಕಲಾ ಜೀವನದಲ್ಲಿ ನಮ್ಮ ಕೈಕಾಲು ಗಟ್ಟಿಯಾಗಿ ಇರುವಾಗಲೇ ಅಮೇರಿಕಾಕ್ಕೂ ಹೋಗಿ ಬರೋಣ ಎನಿಸುತ್ತಿದೆ. ಲಂಡನ್‌ನಲ್ಲಿ ಆರ್ಥಿಕ ದೃಷ್ಟಿಯಿಂದ ನಮಗೆ ಹೆಚ್ಚಿನ ಅನುಕೂಲತೆ ಕಂಡು ಬರಲಿಲ್ಲ. ಅಮೇರಿಕಾಕ್ಕೆ ಹೋಗಿ ಸ್ವಲ್ಪವಾದರೂ ಹಣ ಸಂಪಾದಿಸಬೇಕೆಂಬ ಮನಸ್ಸಾಗಿದೆ. ಹೌದು....ಇದೂ ನಿಜ. ಈ ನಮ್ಮ ಇದುವರೆಗಿನ ಜೀವಿತ ಕಾಲದಲ್ಲಿ ಎಂದೂ ನಮಗೆ ಶ್ರಮಕ್ಕೆ ತಕ್ಕ ಪ್ರತಿಫಲ ಸಿಕ್ಕಿದುದೇ ಇಲ್ಲ. ಆದರೆ ಅದರಿಂದ ನಮಗೆ ಎಂದೂ ಬೇಸರವಿಲ್ಲ. ಆತ್ಮತೃಪ್ತಿ ಲಭಿಸಿದೆ ಆ ಶ್ರಮದಿಂದಾಗಿ.

ನ್ಯೂಯಾರ್ಕ್‌ನಿಂದ (New York) ನಮ್ಮ ಸ್ನೇಹಿತರು ನಾವಲ್ಲಿಗೆ ಬರಲೆಂದು ಬಹಳ ಪ್ರಯತ್ನ ಮಾಡುತ್ತಿದ್ದಾರೆ. ಎಂದು ಅವರು ಕರೆಯಿಸಿಕೊಳ್ಳುತ್ತಾರೋ ತಿಳಿಯದು. ಕಾತುರತೆಯಿಲ್ಲದೆ ನಮ್ಮ ಜೀವನ ಸರಾಗವಿರುವುದಾದರೂ ಹೇಗೆ? ಅಲ್ಲವೇ?

ಮತ್ತೊಮ್ಮೆ ಬರೆಯುತ್ತೇನೆ ಸದ್ಯಕ್ಕೆ ಇಷ್ಟೇ........

ಇತಿ ನಿಮ್ಮ
ಅಮ್ಮ.

* * * *

ಲಂಡನ್
27 - 6 - 1967

ಆತ್ಮೀಯರೇ........,

........ಮೂಲಕರ್ತ ಕಲಾ ಸಂಸ್ಥೆಯಾದ AMC ಮತ್ತೊಂದು ಹೊಸ ಪರಿಶೋಧದ ಅಡಿ ಇಟ್ಟರು. ಈ ತಿಂಗಳಿನಲ್ಲಿ ಕ್ವೀನ್ ಎಲಿಜಬೆತ್ ಹಾಲಿನಲ್ಲಿ (Queen Elizabeth Hall) ನಮ್ಮ ಎರಡು ನೃತ್ಯ ನಾಟಕಗಳನ್ನು ಏರ್ಪಡಿಸಿದ್ದ ವಿಷಯ ನಿಮಗೆ ತಿಳಿಸಿದ್ದೆ. ಸೆಪ್ಟೆಂಬರ್ ಮತ್ತು ಆಕ್ಟೋಬರ್‌ನಲ್ಲಿ ಮತ್ತೆರಡು ನೃತ್ಯ-ನಾಟಕ

ಗಳು ಏರ್ಪಾಡಾಗಿವೆ. ಈಗಾಗಲೇ 'ಬುದ್ಧೋದಯ' ಮತ್ತು 'ರಾಣಿ ಶಾಂತಲಾ' ನೃತ್ಯ ನಾಟಕಗಳು ಪ್ರದರ್ಶಿತವಾದುವು.

ಈ ಕ್ವೀನ್ ಎಲಿಜಬೆತ್ ಹಾಲ್ ಎಂಬುದು ರಾಯಲ್ ಫೆಸ್ಟಿವಲ್ ಹಾಲ್ (Royal Festival Hall) ನ ಬಡಾವಣೆ, ಹೊಸತಾಗಿ ನಿರ್ಮಿತವಾದದ್ದು. ಅದನ್ನು ಸಂಗೀತ ಕಚೇರಿಗಳಿಗೆ ಅನುಕೂಲವಾಗುವಂತೆ ಕಟ್ಟಿದ್ದಾರೆ. 1100 ಜನರು ಕೂಡುವ ಒಂದು ಅಂದವಾದ ರಂಗಮಂದಿರ. ಆದರೆ ನೃತ್ಯಗಳಿಗೆ ಅದು ಚೆನ್ನಾಗಿರ ಲಿಲ್ಲ. ರಂಗಸ್ಥಳದ ಅನಾನುಕೂಲತೆ ಇತ್ತು. ನಾಟಕಕ್ಕೆ ಬೇಕಾಗುವ ಸಲಕರಣೆ ಗಳನ್ನು ಏರ್ಪಡಿಸುವ ಅವಕಾಶವಿರಲಿಲ್ಲ. ಆದರೆ ಸಂಗೀತದ ಮರುದನಿಯ ಏರ್ಪಾಡು ಅಸಾಮಾನ್ಯವಾಗಿತ್ತು. ರಂಗಮಂದಿರ ಯಾವ ಕಲಾವಿದರಿಗೂ ಸ್ಫೂರ್ತಿ ಕೊಡು ವಂತಿತ್ತು.

ನಮ್ಮ ಎರಡು ನಾಟಕಗಳಿಗೂ ರಂಗಮಂದಿರ ಭರ್ತಿಯಾಗಿ ತುಂಬಿ ಹೋಗಿ ದ್ದುದು ಸಂತೋಷದ ವಿಷಯ. ನಮ್ಮ ಕಲೆಗೆ ಅವರು ಕೊಟ್ಟ ಪ್ರೋತ್ಸಾಹ ಬಹಳ ಉತ್ತೇಜಕವಾಗಿತ್ತು. ಈ ನಮ್ಮ ನೃತ್ಯ ನಾಟಕಗಳಿಂದ AMC ಯವರು ತಕ್ಕ ಮಟ್ಟಿಗೆ ನಿಧಿ ಸಂಗ್ರಹಿಸಿ ಭಾರತದ ಕ್ಷಾಮ ಪರಿಹಾರ ನಿಧಿಗೆ ಕಳುಹಿಸಿ ಕೊಡುವಂತಾ ಯಿತು. ಮೈಸೂರಿನ ಮುಖ್ಯಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರು AMC ಗೆ ಅಭಿನಂದನೆಯ ಪತ್ರ ಬರೆದು ಸಂತೋಷವನ್ನು ವ್ಯಕ್ತಪಡಿಸಿದ್ದಾರೆ.

ರಾಯಲ್ ಫೆಸ್ಟಿವಲ್ ಹಾಲ್‌ನ ನೃತ್ಯ-ನಾಟಕಗಳ ಬಗ್ಗೆ ತಿಳಿಸುತ್ತಿದ್ದೆನಲ್ಲವೇ? ಇಲ್ಲಿ ಬರುವ ಜನರು ಆಯ್ದು ಬಂದ ಜನರು. ಕಲೆಯ ವಿವಿಧ ಶಾಖೆಗಳಲ್ಲಿ ಸದಭಿ ರುಚಿ ಪಡೆದಿರುವ ಜನತೆ. ಸಭೆಯಲ್ಲಿ ಅಂದು ಗಣ್ಯ ವ್ಯಕ್ತಿಗಳೇ ಸೇರಿದ್ದರು. ರಾಯ ಭಾರಿಗಳು, ರಾಯಭಾರಿ ಸಂಸ್ಥೆಯ ದೊಡ್ಡ ದೊಡ್ಡ ಅಧಿಕಾರಿಗಳು, ವಾಣಿಜ್ಯಲೋಕದ ಮುಖ್ಯ ವರಿಷ್ಠರು, ಸಂಗೀತ ಹಾಗೂ ಬ್ಯಾಲೆ ಸಂಸ್ಥೆಗಳ ಮುಖ್ಯ ಸಂಚಾಲಕರು ಮತ್ತಿ ತರ ಮಹಾ ಜನರು ತುಂಬಿದ್ದರು. ರಂಗಸ್ಥಳದ ಮೇಲೆ ನಿಂತರೆ ಕಣ್ಣುಮುಂದೆ 1100 ಜನರು ಕಿಕ್ಕಿರಿದು ನಮ್ಮ ಕಲೆಯನ್ನು ಶ್ಲಾಘಿಸಿದ್ದು ಮರೆಯಲಾಗದ ಅನು ಭವ. ರಂಗಮಂದಿರದಲ್ಲಿ ಮಹಡಿ ಮುಂತಾದುವು ಇಲ್ಲದೆ ಒಂದೇ ಸಮನೆ ಆರೋ ಹಣವಿದ್ದು ಎಲ್ಲ ಜನರೂ ಕಣ್ಣಿಗೆ ಒಮ್ಮೆಲೆ ಕಂಡು ಬರುವ ದೃಶ್ಯ – ಜನರು ಸಾಗರ ದಂತೆ ಗಂಭೀರವಾಗಿ ಕುಳಿತು ಆನಂದಿಸುವ ದೃಶ್ಯ–ನಮ್ಮ ಯಶಸ್ಸಿನ ಸತ್ಯ–ಎಂದಿಗೂ ಮನಃಪಟಲದ ಮೇಲೆ ಮಾಸಿಹೋಗದ ಅನುಭವವಾಯಿತು.

ಪಾಶ್ಚಾತ್ಯವಾಗಲೀ, ಇಲ್ಲವೇ ಪೌರ್ವಾತ್ಯವಾಗಲೀ ಅದೇ ಮೊದಲು ನೃತ್ಯ ನಾಟಕ ಅಂದು ಅಲ್ಲಿ ಪ್ರದರ್ಶಿತವಾದದ್ದು. ಸಭಾಸದರು ಅಂದು ನಮ್ಮ ಕಲೆಗೆ ಕೊಟ್ಟ ಪ್ರೋತ್ಸಾಹ, ತೋರಿಸಿದ ಅಭಿಮಾನಗಳಿಗೆ ನಾವು ಚಿರಋಣಿಗಳು.

ಪತ್ರಿಕೆಯೊಂದು ಹೀಗೆ ಬರೆದಿದೆ –"ಕ್ವೀನ್ ಎಲಿಜಬೆತ್ ಹಾಲಿನಲ್ಲಿ ಗೆಜ್ಜೆ ಶಬ್ದ ಧೂಪದ ಹೊಗೆ ಮತ್ತು ಬಣ್ಣದ ವೈವಿಧ್ಯವಿತ್ತು, AMC ಯುವರು 'ರಾಣಿ ಶಾಂತಲಾ' ಪ್ರದರ್ಶಿಸಿದಾಗ, ಕೃಷ್ಣರಾಯರು ಮತ್ತು ಅವರ ಪತ್ನಿ ನೃತ್ಯ ರಚನೆಯನ್ನು ಮಾಡಿ, "ಮುಖ್ಯ ಪಾತ್ರಗಳನ್ನು ಲಲಿತ ತಿಳುವಳಿಕೆಯಿಂದ ನರ್ತಿಸಿದರು" ಎಂದಿತ್ತು.

ಇನ್ನೊಂದು ಪತ್ರಿಕೆಯಲ್ಲಿನ ವಿಮರ್ಶೆಯನ್ನು ಓದಿ ನಮ್ಮ ಇಂಗ್ಲೆಂಡು ಪ್ರವಾಸ ಖಂಡಿತ ಸಫಲವಾಯಿತು ಎಂದು ಹೆಮ್ಮೆಪಟ್ಟೆವು. ಅದರಲ್ಲಿ ಹೀಗೆ ಬರೆದಿತ್ತು— "ತಮ್ಮ ಶಿಷ್ಯಂದಿರಲ್ಲಿ ನೃತ್ಯಶಾಸ್ತ್ರ ತಂತ್ರೀಯ ಚತುರತೆ ದಿನೇ ದಿನೇ ಅಭಿವೃದ್ಧಿಗೊಳ್ಳುವಂತೆ ಮಾಡಿ, ಅವರು ಈ ಕಲೆಗೆ ಶಿಸ್ತಿನಿಂದಲೂ, ಸ್ಫೂರ್ತಿಯಿಂದಲೂ ಪೂರ್ಣ ನಿವೇದಿತರಾಗುವಂತೆ ದಕ್ಷತೆಯಿಂದ ನೋಡಿಕೊಂಡು ಬರುತ್ತಿರುವ ಅವಿಶ್ರಾಂತ ನೃತ್ಯ ಶಿಕ್ಷಕರು, ನೃತ್ಯ ರಚನೆಗಳ ನಿರ್ಮಾಪಕರು, ಪ್ರಭಾವಶಾಲಿ ನರ್ತನ ಕಲಾವಿದರೂ ಆಗಿರುವ ಚಂದ್ರಭಾಗಾ ಮತ್ತು ಕೃಷ್ಣರಾವ್ ಇವರನ್ನು ನಾವೆಷ್ಟು ಶ್ಲಾಘಿಸಿದರೂ ಸಾಲದು."

ಹೆದರಿದ ಮನಸ್ಸಿನಿಂದ ನಾವು ಈ ಕಾರ್ಯಕಲಾಪಕ್ಕೆ ಕೈಹಾಕಿದ್ದೆವು. ಈ ಎರಡು ನೃತ್ಯ-ನಾಟಕಗಳ ಯಶಸ್ಸಿನಿಂದಾಗಿ ಮುಂದೆ ನಡೆಯಲಿರುವ ಮತ್ತೆರಡು ನೃತ್ಯ–ನಾಟಕಗಳ ರಚನೆಗೆ ಧೈರ್ಯ ಬಂದಂತಾಗಿದೆ. ಇನ್ನು ಎರಡು ತಿಂಗಳು ನಮಗೆ ವಿಪರೀತ ಕೆಲಸವಿದೆ. 'ಗೀತ ಗೋವಿಂದ' ನೃತ್ಯ ನಾಟಕವನ್ನು ಭರತನಾಟ್ಯ ಸಂಪ್ರದಾಯದಿಂದ ರಚಿಸಬೇಕೆಂದಿದ್ದೇವೆ. ರಚನಾತ್ಮಕ ಕೃತಿಯಾಗಿ 'ಕಾಮ–ದಹನ' ವನ್ನೂ ಯೋಚಿಸುತ್ತಿದ್ದೇವೆ.

ನಾನು ಕಾಗದ ಬರೆಯಲು ತಡವಾದರೆ ದಯವಿಟ್ಟು ಕ್ಷಮಿಸಿ. ನೀವು ಮಾತ್ರ ಆಗಾಗ್ಗೆ ಕಾಗದ ಬರೆಯುತ್ತಿರಿ.

ಇತಿ ನಿಮ್ಮ
ಚಂದಮ್ಮ.

* * * *

ಲಂಡನ್
22 – 7 – 1967

ಪ್ರಿಯ ತಂದೆಯೇ........,

........ನಮ್ಮ ವಿದ್ಯಾ ಜೆಂಕಿ ಅಪಘಾತಕ್ಕೆ ಸಿಲುಕಿ ವಿಧಿವಶಳಾದ ಸುದ್ದಿ ಕೇಳಿ ಕುಸಿದುಬಿದ್ದೆವು. ಪತಿಯವರಂತೂ ಮಗುವಿನಂತೆ ಅತ್ತರು. ಅವರು ಅತ್ತಿದ್ದನ್ನು

ನಾನು ನೋಡಿದುದು ಅದೇ ಮೊದಲು. ಬೆಂಗಳೂರಿಗೆ ಹಿಂತಿರುಗುವಾಗ ಕುಟುಂಬದಲ್ಲಾದ ಹಲವಾರು ಭಿನ್ನತೆಗಳ ಬಗ್ಗೆ ಯೋಚನೆ ಮಾಡಿದರೆ ಎಷ್ಟು ಸಂಕಟವಾಗುತ್ತದೆ! ಅತ್ತಿಗೆಯ ಮನೆಯಲ್ಲಿ ವಿದ್ಯಾ, ಅಣ್ಣನ ಮನೆಯಲ್ಲಿ ಅನಂತಣ್ಣ, 'ದೇವಪ್ರಸಾದ' ದಲ್ಲಿ ಗುರುದಾಸ, ರಾಜಣ್ಣನವರ ಮನೆಯಲ್ಲಿ ಅವರ ಪತ್ನಿ, ಮದರಾಸಿನಲ್ಲಿ ಗಣೇಶ ಮಾಮನ ಮನೆಯಲ್ಲಿ ಸಂಜೀವ ಭಾಯ್ಯಾ ಮತ್ತು ರಾಧಾ ಮಾಮಿ ಮತ್ತು ಈಗ, ನಮ್ಮ ಪುತ್ತೂರು ಅಜ್ಜನ ನಿಧನ........ಇವರನ್ನೆಲ್ಲಾ ಕಳೆದುಕೊಂಡೆವು.

ತೀರ್ಥರೂಪ ಅಜ್ಜನವರು ಎಂತಹ ದಿವ್ಯ ಪುರುಷರು!........ನೂರು ವರ್ಷಗಳಿಗೆ ಒಮ್ಮೆಯಾದರೂ ಇಂತಹ ವ್ಯಕ್ತಿಯ ಜನನವಾಗುವುದು ಅಪರೂಪ........ಹೌದು........ಅವರು ಯುಗ ಪುರುಷರು. ಅವರ ಜೀವನ ಮತ್ತು ಜೀವಿತದಿಂದ ನಾವು ಎಂದಿಗೂ ಸ್ಫೂರ್ತಿಯನ್ನು ಪಡೆಯತಕ್ಕದ್ದು. ಅವರು ತಮ್ಮ ಪೂರ್ಣ ಆಯಸ್ಸು ತೀರಿ ಮುಕ್ತರಾಗಿದ್ದಾರಾದರೂ, ಅವರು ಇಂದು ನಮ್ಮೊಡನೆ ಇಲ್ಲ ಎಂಬ ಕಠೋರ ಸತ್ಯವನ್ನು ನಾವು ನಂಬಲು ಬಹಳ ಕಷ್ಟವಾಗಿದೆ.

ಸಮಾಜ ಸುಧಾರಕರಾಗಿದ್ದ ಅಜ್ಜನ ಮಹತ್ವದ ಜೀವನದ ಮೈಲುಗಲ್ಲುಗಳು.... ಸ್ತ್ರೀ ಸ್ವಾತಂತ್ರ್ಯಕ್ಕೆ ಹೆಣಗಾಡಿದ ಮಹನೀಯರಾಗಿ, ತಂದೆಯಾಗಿ, ಅಜ್ಜನಾಗಿ, ಪತಿಯಾಗಿ, ಪ್ರಸಿದ್ಧ ವಕೀಲರಾಗಿ........ಅವರು ಸಾಧಿಸಿದ ಮಹತ್ಕಾರ್ಯಗಳು....ಇವೆಲ್ಲವನ್ನೂ ನೆನಪಿನ ಅಂತರಾಳದಲ್ಲಿ ಒಮ್ಮೆ ಮೆಲುಕು ಹಾಕಿದರೆ, ಅವರ ವಿಷಯವಾಗಿ ಒಂದು ದೊಡ್ಡ ಗ್ರಂಥವನ್ನೇ ಬರೆಯಬಹುದು ಎನಿಸುತ್ತದೆ........ಅಲ್ಲವೇ ? ಅವರ ಜ್ಞಾಪಕಕ್ಕೆ ನಾವೇನು ಮಾಡುವೆವೋ, ನಮಗೇ ತಿಳಿಯದು.

ಒಮ್ಮೊಮ್ಮೆ ಅನಿಸುತ್ತದೆ........ಮಾನವರು ಎಂತಹ ಆದರ್ಶ ಜೀವನ ನಡೆಸಿ ಕಣ್ಮರೆಯಾದರೂ ಜೀವಿಸಿರುವ ಜನರು ಅವರ ನಂತರ ಅದೆಲ್ಲವನ್ನೂ ಮರೆಯುವಂತಿದೆ. ನಮ್ಮ ಜೀವನ ಅಷ್ಟು ಮಾರ್ಪಾಡಾಗಿದೆ. ಈಗ ಗತಿಸಿದ ಮಹಾ ಜೀವಿಗಳ ಶ್ರದ್ಧಾಂಜಲಿಯೆಂದು ನಾವು ಏನು ಮಾಡಬಲ್ಲೆವು?........ಏನೇನೂ ಇಲ್ಲ. ನಮ್ಮ ಶಾಂತಿ ಬರೆದಂತೆ, ಸರಳವಾಗಿ ಹೇಳಬಲ್ಲೆವು—"ಕುಟುಂಬದಲ್ಲಿ ಎಲ್ಲರೂ ಮುದುಕರಾಗುತ್ತಿದ್ದಾರೆ .... ಅಜ್ಜನವರ ಜನಾಂಗ ಹೋಯಿತು. ಮುಂದಿನ ಜನಾಂಗಕ್ಕೆ ತಲೆ ನೆರೆಯುತ್ತ ಬಂದಿದೆ. ನಮ್ಮ ಜೀವನ ಈಗಾಗಲೇ ಅರ್ಧ ಕಳೆದು ಹೋಯಿತು. ಇನ್ನು ಮಕ್ಕಳು........ಜೀವನದ ಹೊಸ್ತಿಲಿನಲ್ಲಿದ್ದಾರೆ" ಎಂದು.... ಹೇಗೋ ಜೀವನ ಚಕ್ರ ತಿರುಗುತ್ತಲಿದೆ. ಏನು ಈ ಹುಟ್ಟು....ಜೀವನ....ಮರಣ.... ಎಲ್ಲಿ ಆರಂಭ....ಎತ್ತ ಕೊನೆ....ಎಲ್ಲವೂ ಸಮಸ್ಯೆ...ಬಿಡಿಸಲಾಗದ ಕಗ್ಗಂಟು........

—ಅಮ್ಮ ಬೆಂಗಳೂರಿನಲ್ಲಿಯೇ ಇರುವ ನಿರ್ಧಾರ ಮಾಡಿದ ಸಮಾಚಾರ ಕೇಳಿ ಮನಸ್ಸಿಗೆ ತುಂಬಾ ನೆಮ್ಮದಿಯಾಗಿದೆ. ಮನೆಯಲ್ಲಿ ನಡೆಯುತ್ತಿರುವ ಹಬ್ಬಗಳ

ನ್ನೆಲ್ಲಾ ಅವರು ಎಂದಿನಂತೆ ವಿಜೃಂಭಣೆಯಿಂದ ಜರುಗಿಸುವರೆಂಬ ಸಂತೋಷ........ ಆಗ....ನಾವು ಮೊದಲು ಮನೆ ಮಾಡಿದಾಗ, ಪ್ರಾರ್ಥನೆಗೆ ಒಂದು ದೀಪವನ್ನು ಮಾತ್ರ ಉರಿಸುತ್ತಿದ್ದೆ. ಮಕ್ಕಳಿಂದ 'ಅಸತೋ ಮಾ ಸದ್ಗಮಯ | ತಮಸೋ ಮಾ ಜ್ಯೋತಿರ್ಗಮಯ' ಶ್ಲೋಕವನ್ನು ಪಠಿಸುತ್ತಿದ್ದೆ. ಆ ದೀಪ ಶಿಖೆಯನ್ನು ಬಿಟ್ಟು ಮತ್ತೆ ಯಾವ ದೇವರೂ ಅಲ್ಲಿ ಸ್ಥಾನ ಪಡೆದಿರಲಿಲ್ಲ. ಮುಂದೆ ವರುಷಗಳು ಉರುಳಿದವು. ಕಾಲ ಕ್ರಮೇಣ ದೇವರ ಮನೆ ಆಯಿತು! ಪೂಜೆ ಪುನಸ್ಕಾರಗಳಿಗೆ ಬೇಕಾದ ಸಾಧನ ಸಾಮಗ್ರಿಗಳು ತಾನಾಗಿ ಅಣಿಯಾದುವು!! ಅನೇಕ ದೇವರುಗಳೂ ಸ್ಥಾನ ಪಡೆದರು !!! ನಂತರ ಪೂಜೆ, ಪುನಸ್ಕಾರ, ಹಬ್ಬ, ಹರಿದಿನ ಎಲ್ಲ ನೆರವೇರಿಸಲು ದೇವರ ಅನುಗ್ರಹ ವಾಯಿತು.

ನಾನು ಯಾವಾಗಲೂ ದೇವರನ್ನು 'ಸಾಕಷ್ಟು – ಬೇಕಾದಷ್ಟು' ಇರಲಿ ಎಂದು ಪ್ರಾರ್ಥಿಸುತ್ತಿದ್ದೆ....ಸಾಕಷ್ಟು ನಮಗೆ, ಬೇಕಾದಷ್ಟು ಇತರರಿಗೆ ಕೊಡಲು....ದೇವರು ಹೀಗೆಯೇ ನಡೆಸಲಿ........

ಇತಿ ನಿಮ್ಮ

ಚಂದಮ್ಮ.

* * * * *

ಲಂಡನ್

ಸೆಪ್ಟೆಂಬರ್–ಅಕ್ಟೋಬರ್ 1967

AMC ಆಶ್ರಯದ ಕೊನೆಯ ಅವಧಿಯಲ್ಲಿ ಎರಡು ನೃತ್ಯ ನಾಟಕಗಳು "ಗೀತ ಗೋವಿಂದ ಮತ್ತು ಕಾಮದಹನ"

"The Temptation of Buddha" (ಬುದ್ಧೋದಯ) ಮತ್ತು 'ರಾಣಿ ಶಾಂತಲಾ'––ಈ ಎರಡು ನೃತ್ಯ–ನಾಟಕಗಳ ಯಶಸ್ಸು ನಮಗೆ ಇನ್ನೂ ಎರಡು ನೃತ್ಯ-ನಾಟಕಗಳನ್ನು ರಚಿಸಲು ಪ್ರೇರೇಪಿಸಿತು. ನಮ್ಮ ಲಂಡನ್ ಅವಧಿ ಮುಗಿಯುವುದರೊಳಗಾಗಿ ಅಂದರೆ ಸೆಪ್ಟೆಂಬರ್ 25 ಮತ್ತು ಅಕ್ಟೋಬರ್ 17ಕ್ಕೆ ಇನ್ನೆರಡು ನೃತ್ಯ–ನಾಟಕಗಳನ್ನು ಪ್ರದರ್ಶಿಸುವುದಾಗಿ ನಿರ್ಧರಿಸಿದೆವು. ಭರತನಾಟ್ಯದ ಸಂಪ್ರದಾಯದ ಮೇಲೆ "ಗೀತ ಗೋವಿಂದ" ವನ್ನು ರಚಿಸುವುದೆಂದೂ, ಪೂರ್ಣ ರಚನಾತ್ಮಕ ಕೃತಿಯಾಗಿ 'ಕಾಮದಹನ' ವನ್ನು ನಿರ್ಮಿಸಬೇಕೆಂದೂ ನಿಶ್ಚಿತವಾಯಿತು. ಈ ಎರಡು ನೃತ್ಯ–ನಾಟಕಗಳಿಗೆ ನಮಗೆ ಕೇವಲ ಹನ್ನೆರಡು ಕಲಾವಿದರ ಸಹಾಯ ಬೇಕಿತ್ತು. ನಮ್ಮ ಶಿಷ್ಯ ಸಂಗಡದಲ್ಲಿಯೇ ಸುಮಾರು ಆರು ನೃತ್ಯ ಕಲಾವಿದರು ಭರತನಾಟ್ಯದ ಸಂಪ್ರದಾಯವನ್ನು ಕರಗತ ಮಾಡಿಕೊಂಡಿದ್ದರು. ಲಂಡನ್‌ನಲ್ಲಿಯೇ ನೆಲೆಸಿರುವ

ಭಾರತೀಯ ವೃತ್ತಿ ನೃತ್ಯ ಕಲಾವಿದರ ಸಹಾಯವನ್ನೂ ಪಡೆದರೆ ನಮ್ಮ ನೃತ್ಯ-ರೂಪಕಗಳ ಮಟ್ಟವು ಏರುವುದು ಎಂಬ ಆಸೆ ಇತ್ತು. ಅವರೂ ನಮ್ಮ ಕರೆಯನ್ನು ಮನ್ನಿಸಿ ಸಹಾಯ ಮಾಡಲು ಒಪ್ಪಿದರು. ಅಷ್ಟಪದಿಗಳು ನಮ್ಮಲ್ಲಿ ಬೇರೆ ಬೇರೆ ನೃತ್ಯಗಳಾಗಿ ತಯಾರಿದ್ದು, ಅವು 'ರಿಕಾರ್ಡ್' (Record) ಆಗಿದ್ದುವು. ಅವಕ್ಕೆ ಸಂಯೋಜನೆಯ ಸಂಗೀತವನ್ನೂ, ಮತ್ತು ಇನ್ನೂ ಬೇಕಾಗಿದ್ದ ಇತರ ಸಂಗೀತ ವನ್ನೂ 'ಕಾಮದಹನ'ಕ್ಕೆ ಬೇಕಾದ ಹೊಸ ನಾದಮಾಲೆಯನ್ನೂ ನಮ್ಮ ಬೆಂಗಳೂರಿನ ಸಂಗೀತಗಾರರಿಗೆ ಬರೆದು, ನಮ್ಮ ಮಕ್ಕಳಿಂದ ಅದನ್ನು ರಿಕಾರ್ಡ್ ಮಾಡಿಸಿ ತರಿಸಿಕೊಂಡೆವು. ಈ ಸಲ ನಮಗೆ ಕರ್ಣಾಟಕ ಸಂಗೀತ ಮಾತ್ರ ಸಿಕ್ಕಿತ್ತು. ಅದಕ್ಕೆ ಸರಿಯಾಗಿ 'ಗೀತ ಗೋವಿಂದ'ಕ್ಕೆ ಭರತನಾಟ್ಯ ಸಂಪ್ರ ದಾಯವನ್ನು ಅಳವಡಿಸಿಕೊಳ್ಳಲು ಅನುಕೂಲವಾಯಿತು. ಇಷ್ಟರಲ್ಲೇ ನಮ್ಮ ಶಿಷ್ಯಂದಿರು, ತಿಲ್ಲಾನ, ಜತಿ ಸ್ವರಗಳನ್ನು ಮಾಡಿ ಅನುಭವ ಪಡೆದಿದ್ದರು.

........ಅಂತೂ 'ಗೀತ ಗೋವಿಂದ' ನಮ್ಮ ಹೆಮ್ಮೆಯ ಕೃತಿಯಾಯಿತು. ಎಲ್ಲರೂ ನಮಗೆ ಸಹಾಯಕೊಟ್ಟುದರ ಫಲವಾಗಿ, ನಮ್ಮ ಕಲ್ಪನೆಗನುಗುಣವಾಗಿ ನೃತ್ಯ ರಚನೆಯನ್ನು ನಿರ್ಮಿಸಿ ತೃಪ್ತಿಪಟ್ಟೆವು. ಎಲ್ಲ ಕಲಾವಿದರು ಸಹಾನುಭೂತಿಯಿಂದ, ಪೂರ್ಣ ಸಹಕಾರದಿಂದ, ತಮ್ಮ ಹಾರ್ದಿಕ ಬೆಂಬಲ ಕೊಟ್ಟು, ನೃತ್ಯ-ನಾಟಕಗಳು ಯಶಸ್ವಿಯಾಗುವಂತೆ ನಮ್ಮ ಜೊತೆಗೆ ಮನಃಪೂರ್ವಕವಾಗಿ ಕಷ್ಟಪಟ್ಟು ದುಡಿದರು.

ನಮಗೆ 'ಗೀತ ಗೋವಿಂದ'ದ ಶಾಸ್ತ್ರೀಯ ರಚನೆಯಲ್ಲಿ ಸಮಾಧಾನ, ಸಂತೋಷ ಗಳಿದ್ದುವು. ರಂಗಸ್ಥಳದ ಮೇಲೆ ಬೃಂದಾವನದ ಸಂಕೇತವಾಗಿ ಗಿಡಮರಗಳ ಚಿತ್ರ ಗಳನ್ನು ಆಧುನಿಕ ರೀತಿಯಲ್ಲಿ ಅಲಂಕರಿಸಿದ ಪ್ರಯತ್ನ ಪರಿಣಾಮಕಾರಿಯಾಯಿತು. ಇಲ್ಲಿನ ಜನರಿಗೆ ರಾಧಾ-ಕೃಷ್ಣರ ಪ್ರಣಯ ಕಥೆ ಪರಿಚಿತವಾದ, ಪ್ರಿಯವಾದ ಕಥಾ ವಸ್ತು. ಬಣ್ಣ ವೈವಿಧ್ಯದ ಉಡುಪು, ವೇಷಭೂಷಣಗಳು, ಸುಶ್ರಾವ್ಯದ ದಕ್ಷಿಣಾದಿ ಸಂಗೀತ ಹೆಚ್ಚಿನ ಕಳೆ ಕೊಟ್ಟಿತು. ಆದರೆ ಈ ನೃತ್ಯ-ನಾಟಕವನ್ನು ವಿಮರ್ಶಾತ್ಮಕ ವಾಗಿ ಮೆಚ್ಚಬೇಕಾದರೆ ಪ್ರೇಕ್ಷಕರಿಗೆ ಕಲೆಯ ಅರಿವು, ಭರತನಾಟ್ಯ ಸಂಪ್ರದಾಯದ ನೃತ್ಯಗಳ ಅಂದ, ಸಂಸ್ಕೃತ ಭಾಷಾಜ್ಞಾನ, ಹಿಂದೂ ಅಧ್ಯಾತ್ಮತೆಯ ಪರಿಚಯ- ಎಲ್ಲವೂ ಇದ್ದ ಮಾತ್ರಕ್ಕೆ ತುಂಬಾ ಫಲ ಸಿಗುವ ಕೃತಿ. 'ಗೀತ ಗೋವಿಂದ' ದಲ್ಲಿ ಜತಿ ಸ್ವರ, ತಿಲ್ಲಾನ ಮತ್ತು ವರ್ಣಗಳನ್ನು ಸ್ವೇಚ್ಛೆಯಾಗಿ ಅಳವಡಿಸಿಕೊಂಡಿರುವ ಕಾರಣ, ನೃತ್ಯ-ನಾಟಕ ಅತ್ಯಂತ ಯಶಸ್ವಿಯಾಯಿತು. ಅದು ನಮ್ಮ ಕಲಾ ಸಂಪತ್ತಿನ ಅತ್ಯ ಮೂಲ್ಯ ನಿಧಿ.

........ಶ್ರೀ ಅಂಗಡಿಯವರು ಭಾರತವನ್ನೆಲ್ಲಾ ಸುತ್ತಾಡಿ ಅನೇಕಾನೇಕ ನೃತ್ಯ-ನಾಟಕಗಳಿನ್ನು ನೋಡಿದ್ದಾರೆ. ಅವರು ನಮ್ಮ 'ಗೀತ-ಗೋವಿಂದ' ನೃತ್ಯ-ನಾಟಕ, ಭಾರತೀಯ ಪ್ರಮಾಣ ಮಾನದಿಂದ ಕೂಡ ಒಂದು ಅತ್ಯುತ್ತಮ ನೃತ್ಯ-ನಾಟಕ

ಎಂಬುದಾಗಿ ಹೆಮ್ಮೆಯಿಂದ ಅಭಿಪ್ರಾಯಪಟ್ಟರು....ಇಲ್ಲಿನ ಪತ್ರಿಕೆಗಳಲ್ಲಿ ಹೀಗಿತ್ತು— "ಸಾಯಂಕಾಲದ ಪೂರ್ಣ ಮನರಂಜನೆಗೆಂದು ಭಾರತೀಯ ನೃತ್ಯ-ನಾಟಕಗಳು ಇರುವುದು ಈ ದೇಶದಲ್ಲಿ ತುಂಬಾ ಅಪರೂಪ. ಆದ್ದರಿಂದ ಪ್ರದರ್ಶನದ ಮಟ್ಟವನ್ನು ತೂಕ ಮಾಡುವುದು ಕಷ್ಟಸಾಧ್ಯವಾದುದು. ಆದರೂ ಈ ನೃತ್ಯ-ನಾಟಕದ ನಾಟ್ಯ ನಿರ್ಮಾಣಕ್ಕೂ, ಪಾಶ್ಚಾತ್ಯ ಬ್ಯಾಲೆಯ ಕಥಾ ನಿರೂಪಣೆಗೂ ದೂರದ ಸಂಬಂಧವಿದ್ದ ಹಾಗೆ ತೋರಿತು. ಅಭಿನಯವೂ ತುಂಬಾ ಕೂಲಂಕುಷವಾಗಿದ್ದು, ನೃತ್ಯ-ಚಲನೆಗಳು ಪಾತ್ರಗಳ ಪರಿಚಯವನ್ನು ಮಾಡಿಕೊಟ್ಟಿದುದಲ್ಲದೆ ಇಡೀ ಶಾರೀರದ ನೃತ್ಯ-ಚಲನೆಗಳು ಅತಿ ಸುಂದರವಾಗಿದ್ದುವು. ಕೃಷ್ಣರಾವ್ ಮತ್ತು ಚಂದ್ರಭಾಗಾ ದೇವಿಯವರು ನೃತ್ಯ ರಚನಾಕಾರರಾಗಿದ್ದು ಪ್ರಮುಖ ಪಾತ್ರಗಳನ್ನೂ ವಹಿಸಿದ್ದರು. ಕೃಷ್ಣರಾಯರು ಪುರುಷ ಯೋಗಕ್ಕೆ ಸಹಜವಾಗಿ ಒಪ್ಪುವ ಸೊಬಗಿನಿಂದಲೂ ದೇವಿಯವರು ಅಸಾಧಾರಣವಾದ ಚಲನೆಯ ಲಾಲಿತ್ಯದಿಂದಲೂ ಸ್ಥಿಮಿತವಾದ ಹಾಸ್ಯರಸದಿಂದಲೂ, ನಿರಾಯಾಸನಾಗಿ ಅಂಕೆಯಲ್ಲಿಟ್ಟುಕೊಂಡ ಸಮತೆಯಿಂದಲೂ ತಮ್ಮ ಪಾತ್ರಗಳನ್ನು ನಿರ್ವಹಿಸಿದರು."

ಲಂಡನ್‌ನಲ್ಲಿದ್ದ ಕೆಲವು ಪ್ರತಿಭಾವಂತ ಕಲಾವಿದರನ್ನೂ, ನಮ್ಮ ಶಿಷ್ಯವೃಂದದ ಕೆಲವರನ್ನೂ ಸೇರಿಸಿಕೊಂಡು ಒಕ್ಕೂಟದಿಂದ, ಒಗ್ಗಟ್ಟಿನಿಂದ, ಒಮ್ಮನಸ್ಸಿನಿಂದ ಭರತ ನಾಟ್ಯ ಸಂಪ್ರದಾಯದ ಮೇಲೆ ರಚಿಸಿದ 'ಗೀತ-ಗೋವಿಂದ' ಕೃತಿಯಿಂದಾಗಿ ಹೆಮ್ಮೆಪಟ್ಟೆವು. ಇಷ್ಟು ಚೆಂದದ ನೃತ್ಯ ನಾಟಕವನ್ನು ಇನ್ನೊಮ್ಮೆ ಪ್ರದರ್ಶಿಸಲು ಸಮಯದ ಅಭಾವ- ಅವಕಾಶವಿಲ್ಲ ಎಂಬ ಬೇಸರ ಎಲ್ಲರಿಗೂ ಇತ್ತು.

ನಮ್ಮ ಕೊನೆಯ ಕಲಾ ಕಾಣಿಕೆ – 'ಕಾಮದಹನ' ನೃತ್ಯ ನಾಟಕ. ಇದಕ್ಕೆ ಕೇವಲ ಎಂಟು ಹತ್ತು ಕಲಾವಿದರ ಸಹಾಯವನ್ನು ಪಡೆದು ರಚನೆಯನ್ನು ಮಾಡಿಕೊಂಡೆವು. 'ಕಾಮದಹನ' ದ ರಚನೆ ಬೇರೆಯೇ ವಿಧವಾಗಿತ್ತು. 'ಕಾಮದಹನ' ನೃತ್ಯ ನಾಟಕ ರಚನಾತ್ಮಕ ಹಾಗೂ ಕಥಕಳಿ ಶೈಲಿಯಲ್ಲಿ ವಿರಚಿತವಾಯಿತು. ಬೆಂಗಳೂರಿನಿಂದ ನಮಗೆ ಬಂದ ಸಂಗೀತ-ಶಾಸ್ತ್ರೀಯ ದಕ್ಷಿಣಾದಿ ಸಂಗೀತ ಕೃತಿಗಳಾಗಿದ್ದವು ; ಅಂದರೆ ನೃತ್ಯ ಸಂಗೀತವಲ್ಲ. ನೃತ್ಯಕ್ಕೆ ಅಳವಡಿಸಿಕೊಳ್ಳಲು ಬಹಳ ಕಷ್ಟವಾಗಿತ್ತು. ಆದರೂ ಧೈರ್ಯಗೆಟ್ಟರೆ ನಮಗೆ ಬೇರೆ ಉಪಾಯವಿರಲಿಲ್ಲ. ಸಂಗೀತ ರಚನೆಯ ಆವರ್ತ – ಆವರ್ತಗಳನ್ನು ಲೆಕ್ಕ ಹಾಕಿ ನೃತ್ಯ ರಚನೆ ಮಾಡಿದೆವು. ನಮ್ಮ ಯೋಗ್ಯತೆಗೆ, ನಮ್ಮ ಕಲಾರಚನೆಯ ಸಾಧ್ಯತೆಗೆ 'ಕಾಮದಹನ' ಒಂದು ಸಾಕ್ಷೇಪ ಪ್ರಶ್ನೆ (Challenge) ಎಂಬುದು ಖಂಡಿತ. ಕಥೆಯ ಕಥಾಸರಣಿಯನ್ನು ಅದೇ ದಕ್ಷಿಣಾದಿ ಸಂಗೀತದಿಂದ ಮುಂದುವರಿಸಬೇಕಾಗಿತ್ತು. ಅಂದರೆ ಸಾಹಿತ್ಯದ ನೆರವು

ಅಷ್ಟಿರಲಿಲ್ಲ. ನಾವು 'ಕಾಮ-ದಹನ' ಕ್ಕೆ ಪಟ್ಟ ಕಷ್ಟ ಇನ್ನು ಯಾವ ನೃತ್ಯ-ನಾಟಕಕ್ಕೂ ಪಡಲಿಲ್ಲ ಎನ್ನಬಹುದು. ಈ ಸಮಯ ನಮ್ಮ ವಿದ್ಯಾರ್ಥಿಗಳು ನೃತ್ಯಕಲೆಯ ಪ್ರೌಢ ಪಾಠಗಳನ್ನು ಕಲಿಯಲು ಸಿದ್ಧರಾಗಿದ್ದರು. ಹೇಳಿಕೊಟ್ಟ ಯಾವ ನೃತ್ಯ ಚಲನೆಯನ್ನೂ ಧೈರ್ಯದಿಂದ ಮಾಡುತ್ತಿದ್ದರು. ಅದೇ ಬೆಂಬಲದಿಂದ ಈ ಕೆಲಸಕ್ಕೆ ಕೈ ಹಾಕಿದ್ದೆವು.

ನನಗೆ ಮಾತ್ರ 'ಕಾಮದಹನ' ನೃತ್ಯ-ನಾಟಕ ಯಶಸ್ವಿಯಾಗುವುದರ ಬಗ್ಗೆ ತುಂಬಾ ಸಂದೇಹವಿತ್ತು. ಆದರೆ ಪತಿಯವರಿಗೆ ಧೈರ್ಯವಿತ್ತು. ಪುರಾಣದ ಕಥೆ ಪಾಶ್ಚಾತ್ಯರಿಗೆ ಹೊಸತು-ದಕ್ಷಿಣಾದಿ ಸಂಗೀತ ಅವರ ಕಿವಿಗಳಿಗೆ ನವ್ಯ, ನೃತ್ಯ ನಿರ್ಮಾಣ ರಚನಾತ್ಮಕ. ಆದರೆ 'ಕಾಮದಹನ' ನನ್ನ ಎಣಿಕೆಗೆ ಮೀರಿ ಯಶಸ್ವಿಯಾಯಿತು. ಪಾಶ್ಚಾತ್ಯರಿಗೆ ಶಿವಪುರಾಣಗಳ ಕಥೆಗಳು, ಅದರಲ್ಲೂ ಇತ್ತೀಚೆಗೆ ಹಿಪ್ಪೀ (Hippie) ಚಳುವಳಿಯಿಂದಾಗಿ ತಿಳಿದ ವಿಷಯವಾಗಿದೆ. ನಮ್ಮ ಕಥೆಯನ್ನು ಸರಳವಾಗಿ ಅಭಿನಯಿಸಿದ ಕಾರಣ ಎಲ್ಲರೂ ಸುಲಭವಾಗಿ ತಿಳಿಯುವಂತಾಯಿತು. ಕರ್ಣಾಟಕ ಸಂಗೀತವಂತೂ ಪ್ರೇಕ್ಷಕರನ್ನು ದಿಗ್ಭ್ರಮೆಗೊಳಿಸಿತು. ಅದುವರೆಗೆ ಅವರು ಹಿಂದೂಸ್ತಾನಿ ಸಂಗೀತವನ್ನು ಪಂಡಿತ್ ರವಿಶಂಕರ್, ಅಲಿ ಅಕ್ಬರ್ ಖಾನ್ ಅವರಿಂದ ತಿಳಿದು ಮೆಚ್ಚಿದ್ದರೂ, ನಮ್ಮ ಈ ಕರ್ಣಾಟಕ ಸಂಗೀತವನ್ನು ಕೇಳಿ– "ಇದೂ ಭಾರತೀಯ ಸಂಗೀತವೇ ?", "ಇಷ್ಟು ಸುಶ್ರಾವ್ಯವಾದ ಭಾರತೀಯ ಸಂಗೀತವನ್ನು ನಾವು ಕೇಳಿದುದು ಇದೇ ಮೊದಲು" ಎಂದು ಮನಸಾರೆ ಮೆಚ್ಚಿದರು. "ಕಾಮದಹನ" ಎಲ್ಲರ ಬಾಯಲ್ಲೂ ದಿನನಿತ್ಯದ ಮಾತಾಯಿತು. ಅನೇಕಾನೇಕ ವಾರಗಳಾದರೂ 'ಕಾಮದಹನ' ದ ಮಾತು ಮಾಸಿಹೋಗಲಿಲ್ಲ. ನನಗೆ ಅದು ಅತ್ಯಾಶ್ಚರ್ಯದ ಸಂಗತಿಯಾಯಿತು. ಅದನ್ನು ರಚಿಸುವ ಕೆಲಸ ನಮಗೆ ಅತಿ ಕಷ್ಟವಾದ ಕೆಲಸವಾಗಿತ್ತು. ಪತಿಯವರೂ, ನಾನೂ ಒಂದು ಕ್ಷಣ ಬಿಡುವಿಲ್ಲದೆ ಹೆಣಗಾಡಿದ ಪ್ರಯತ್ನ ಸಫಲವಾದುದರ ತೃಪ್ತಿಗೆ ಸರಿಸಾಟಿ ಬೇರೇನಿದೆ? ನಮ್ಮ ಬೆನ್ನನ್ನು ನಾವೇ ತಟ್ಟಿಕೊಂಡೆವು! 'ಕಾಮದಹನ' ನಮ್ಮ ನೃತ್ಯ ರಚನೆಗಳಲ್ಲಿ ಒಂದು ಒಳ್ಳೆಯ ಅದೃಷ್ಟದ ಹೊಡೆತವಾಯಿತು. ಜಯಪ್ರದ ಕೃತಿಯಾಯಿತು. ಪತ್ರಿಕೆಯೊಂದು ಹೀಗೆಂದು ಸಾರಿತು—"........ಉತ್ಸುಕ ಪ್ರೇಕ್ಷಕರು 'ಕಾಮದಹನ' ನೃತ್ಯ - ನಾಟಕದ ಮೊದಲ ಪ್ರದರ್ಶನವನ್ನು ಹೊಗಳಿದರು. ಕೃಷ್ಣರಾಯರು ಶಿವಮೂರ್ತಿಯಾಗಿ, ಚಂದ್ರಭಾಗಾ ದೇವಿಯವರು ಪಾರ್ವತಿಯಾಗಿ ಅಕಳಂಕ ನೃತ್ಯ ಸಂಪ್ರದಾಯದಿಂದ, ಖಚಿತವಾದ ತಾಳ ವೈಖರಿಯಿಂದ ನರ್ತಿಸಿದರು. ಸತಿಯಾಗಿ ಚಂದ್ರಭಾಗಾ ದೇವಿಯವರು ಅಭಿನಯದ ವಿಭಿನ್ನ ಮುಖಗಳ ದರ್ಶನವನ್ನಿತ್ತು ಎಂತಹ ಪೂರ್ಣ ಪ್ರಾವೀಣ್ಯತೆಯುಳ್ಳ ಕಲಾವಿದೆ ಎಂಬುದನ್ನು ಪುನಹ ಪುಷ್ಟೀಕರಿಸಿದರು........"

........'ಕಾಮದಹನ' ದ ಪ್ರದರ್ಶನದಂದು ನಾವು ರಂಗಮಂದಿರಕ್ಕೆ ಹೊರಡುವ ವೇಳೆ ನಿಶ್ಚಲವಾದ ಆಕಾಶದಲ್ಲಿ ಸಂಪೂರ್ಣವಾದ ಕಾಮನ ಬಿಲ್ಲನ್ನು ನೋಡಿದ ದೃಶ್ಯ ಸ್ಮೃತಿಪಟಲದಲ್ಲಿ ಎಂದೂ ಅಳಿಯುವಂತಿಲ್ಲ. ನಮ್ಮ ಬರಲಿರುವ ಯಶಸ್ಸನ್ನು ಮುಂದಾಗಿ ಸಾರುವಂತಿತ್ತು ಆ ವರ್ಣರಂಜಿತ ಕಾಮನ ಬಿಲ್ಲು !

ಇತಿ ನಿಮ್ಮ
ಚಂದಮ್ಮ.

* * * *

ಲಂಡನ್
20 - 10 - 1967

ಆತ್ಮೀಯರೇ,

........'ಕಾಮದಹನ' ಮಾಂಚೆಸ್ಟರ್ ಊರಿನಲ್ಲಿ ಮತ್ತೆ ಪ್ರದರ್ಶಿತವಾಯಿತು. ನೃತ್ಯ-ನಾಟಕಕ್ಕೆ ಬೇಕಾಗಿದ್ದ ಒಂಭತ್ತು ಕಲಾವಿದರನ್ನು ಒಂದು ಪ್ರತ್ಯೇಕ ವಾಹನದಲ್ಲಿ ಕರೆದುಕೊಂಡು ಹೋದೆವು. ದಾರಿತಪ್ಪಿ ನಾಲ್ಕೂವರೆ ಗಂಟೆ ಕಾಲದ ಪ್ರಯಾಣವನ್ನು ಒಂಭತ್ತು ಗಂಟೆಗಳ ಕಾಲ ಅಲೆದಾಡಿ, ಸೋತು, ಸುಣ್ಣವಾಗಿ ಏಳೂಕಾಲು ಗಂಟೆಗೆ ಮಾಂಚೆಸ್ಟರ್ ತಲುಪಿದೆವು! ಆ ದಿನವನ್ನು ನಾವು ಮರೆಯುವಂತೆಯೇ ಇಲ್ಲ. ನಮ್ಮ ಪ್ರದರ್ಶನದ ನಿರ್ದಿಷ್ಟ ಸಮಯ ಏಳೂವರೆ ಗಂಟೆಗೆಂದು ತೀರ್ಮಾನವಾಗಿತ್ತು. ರಂಗಮಂದಿರಕ್ಕೆ ಜನ ತಂಡ ತಂಡವಾಗಿ ಬರುತ್ತಿದ್ದರು. ವ್ಯವಸ್ಥಾಪಕರು ನಮ್ಮ ಆಗಮನಕ್ಕೆಂದು ಆತುರದಿಂದ ಹೆಬ್ಬಾಗಿಲಿನಲ್ಲಿಯೇ ಕಾದಿದ್ದರು. ನಮ್ಮನ್ನು ಕಂಡು ಒಮ್ಮೆಗೆ ದೀರ್ಘ ನಿಟ್ಟುಸಿರೊಂದನ್ನು ಬಿಟ್ಟು ಸ್ವಾಗತಿಸಿದರು! ಈ ಅನಾಹುತದಿಂದಲಾದರೂ ನಮ್ಮ ತಂಡ ಬೇಸರ ಪಡದೆ, ಗೊಣಗುಟ್ಟದೆ, ಯಾವ ಅನಾನುಕೂಲತೆಯನ್ನೂ ಪರಿಗಣಿಸದೆ, ಸ್ವಾರ್ಥತೆ ಇಲ್ಲದೆ, ಚಾಚೂಎಂದು ಬಾಯಲ್ಲಿ ಒಮ್ಮೆಯಾದರೂ ಎನ್ನದೆ, ಅಲಂಕಾರ ಗೃಹವನ್ನು ತಲುಪಿದೊಡನೆಯೇ ಲಗುಬಗೆಯಿಂದ ಮುಖಕ್ಕೆ ಬಣ್ಣ ಹಚ್ಚಿಕೊಂಡು, ವೇಷಭೂಷಣಗಳನ್ನು ಧರಿಸಿ ಏಳೂನಲವತ್ತೈದಕ್ಕೆ ಸರಿಯಾಗಿ ಪ್ರದರ್ಶನಕ್ಕೆ ಸಿದ್ಧರಾದರು, ನಂಬಲಾರದ ವಿಷಯವೆನ್ನಬೇಕು ಇದನ್ನು! ನಮ್ಮ ನೃತ್ಯ ಪಂಗಡವನ್ನು ಕುರಿತು ಅಂದು ನನಗೆ ಅತ್ಯಂತ ಅಭಿಮಾನ, ಮೆಚ್ಚುಗೆಗಳು ಬೆಳೆದವು. ಅವರು ಕಲೆಯ ಮೇಲೆ, ನಮ್ಮ ಮೇಲೆ ಇಟ್ಟ ಪ್ರೇಮದ ದ್ಯೋತಕ ಎಂಬಂತೆ ಒಗ್ಗಟ್ಟಿನಿಂದ ಕೆಲಸಮಾಡಿ ಕಾರ್ಯ ನಿರ್ವಹಿಸಿದ ನಡತೆಯನ್ನು ನಾವಾದರೋ ಹೇಗೆ ಮರೆಯಬಲ್ಲೆವು?

ಲಂಡನ್‌ನಲ್ಲಿ ಭಾರತೀಯ ನೃತ್ಯ ನಾಟಕಗಳನ್ನು ರಚಿಸುವುದು ಸುಲಭವಾಗಿರ

ಲಿಲ್ಲ. ನೂರಾರು ಅನಾನುಕೂಲತೆಗಳು–ಕೊರತೆಗಳು–ಕಷ್ಟಗಳು – ಪ್ರತಿಭಟನೆಗಳು ಹಣದ ಅಡಚಣೆಗಳು–ಇತ್ಯಾದಿ........ಇತ್ಯಾದಿ.

ಇವನ್ನೆಲ್ಲಾ ಗೆದ್ದು ರಚಿಸಿದ ಈ ಕಲಾಕೃತಿಗಳಿಗೆ AMC ಯವರೂ, ನಾವೂ ಹೆಮ್ಮೆಪಟ್ಟರೆ ನಿಜವಾಗಿ ಅದು ತಪ್ಪೇನಲ್ಲ – ವಿಶೇಷವೂ ಅಲ್ಲ! ಸಾಧಿಸಿದರೆ ಸಬಳ ನುಂಗಬಹುದು ಎಂಬ ಗಾದೆಯಿದೆ–ಅಲ್ಲವೇ ?

ಇತಿ ನಿಮ್ಮ
ಚಂದಮ್ಮ.

* * * *

ಲಂಡನ್
23 – 10 – 1967

ಮುದ್ದು ಜಯದೇವ್,

........1965ನೆಯ ಇಸವಿಯಲ್ಲಿ ಭಾರತ ಬಿಟ್ಟು ಪಾಶ್ಚಾತ್ಯ ಪ್ರವಾಸಕ್ಕೆ ಹೊರಟು, ಇಂದಿಗೆ ಸರಿಯಾಗಿ ಎರಡು ವರ್ಷಗಳು ಸಂದವು. ನಿನ್ನ ಅಕ್ಕರೆಯ ಮೂರು ಹುಟ್ಟಿದ ಹಬ್ಬಗಳನ್ನು ಕಳೆದುಕೊಂಡೆವು. ನಿಮ್ಮಿಂದ ದೂರವಾಗಿ ನಾವು ಜೀವನ ನಡೆಸುತ್ತಿರುವುದು ಇದೇ ಮೊದಲು. ಈ ಅಗಲಿಕೆ ಸುಲಭವಾಗಿಲ್ಲ ಮಗೂ. ನಿಮ್ಮ ಸಹವಾಸಕ್ಕೆಂದು ಹಂಬಲಿಸದ ದಿನವಿಲ್ಲ. ಎರಡು ವರ್ಷಗಳ ವಿಶ್ರಾಂತರಹಿತ ಜೀವನ, ಕಷ್ಟಪಟ್ಟ ದಿನಗಳು, ಮಾನಸಿಕ ತುಮುಲ, ದೈಹಿಕ ಶ್ರಮ ಅನುಭವಿಸಿದ ಮೇಲೆ ಈಗ ಪುನಃ ನಿಮ್ಮೊಂದಿಗೆ ಹಾಯಾಗಿ ಇರಬೇಕೆಂಬ ಆಸೆಯಾಗಿದೆ. ಮನೆಗೆ ಯಾವಾಗ ಹೊರಟೇವೋ ಎಂದೆನಿಸುತ್ತಿದೆ. ಇಲ್ಲಿದ್ದರೆ ಎಷ್ಟು ಕೆಲಸ ಮಾಡಿದರೂ ಸಾಲದು. ಇನ್ನೂ ಬೇಕು ಎನ್ನುವವರು ಬಹಳ. ಆದರೆ ನಮ್ಮ ಚಿತ್ತವೃತ್ತಿಗೆ ಈ ನಾಡು ಹೊಂದಿಕೊಂಡಿಲ್ಲ. ನಮ್ಮ ಕೆಲಸ ಕಾರ್ಯ, ಯಶಸ್ಸು ನೋಡಿ ನಮ್ಮ ಸ್ನೇಹಿತರೇನೋ ಅಮೇರಿಕಾ ಪ್ರವಾಸಕ್ಕೆ ಪ್ರಯತ್ನಿಸುತ್ತಿದ್ದಾರೆ. ಇದುವರೆಗೆ ಆ ದಿಶೆ ಯಲ್ಲಿ ಯಾವ ಆಶಾಕಿರಣವೂ ಮೂಡಿಲ್ಲ. 1965 ರ ಅಕ್ಟೋಬರ್‌ನಲ್ಲಿ ಇಂಗ್ಲೆಂಡ್ ಪ್ರವಾಸಕ್ಕೆ ಮುಂಚೆ ನಮ್ಮ ಪರಿಸ್ಥಿತಿ ಹೇಗಿತ್ತೋ, ಹಾಗೇ ಅದೇ ಕಾತುರತೆ ಈಗ ಅಮೇರಿಕಾ ಪ್ರವಾಸಕ್ಕಾಗಿ ಇದೆ. ಆದರೆ ನಮ್ಮ ಮನಸ್ಸೇನೋ ಬಲವಾಗಿ ಒತ್ತಿ ಒತ್ತಿ ಹೇಳುತ್ತಿದೆ. USA ಗೆ ಹೋಗಲೇಬೇಕು. ಈಗ ಹೋಗದಿದ್ದರೆ ಮತ್ತೆ ಕಷ್ಟ ....ಇಷ್ಟಕ್ಕೂ ಈಗ ಮನೆಗೆ ಹೋಗಿ ಮಾಡುವುದಾದರೂ ಏನು ?........" ಎಂದು

—ನಿಜ........ನಮಗೂ ಗೊತ್ತಿದೆ. ನಾವಿಬ್ಬರೂ ನರ್ತಿಸುವ ದಿನಗಳು ಬಹಳ ಇಲ್ಲ. ಇನ್ನು ಸ್ವಲ್ಪ ಕಾಲ ಮಾತ್ರ. ಆಮೇಲೆ ನೃತ್ಯ-ಹೇಳಿ ಕೊಡುವುದು ಅಷ್ಟೇ.

ಚಿಕ್ಕಂದಿನಿಂದ ನೀವು ನಮ್ಮ ಕಲಾ ಜೀವನಕ್ಕೆ ಅಡ್ಡಿ ಬಾರದೆ ಸಹಾಯ ಮಾಡಿದ್ದೀರಿ. ಈಗಲೂ ಬೆಂಬಲ ಕೊಡುವಿರಿ ಎಂಬ ಭರವಸೆ ಇದೆ. ನೀವು ದೊಡ್ಡವರಾಗಿ, ಮನೆಯ ಜವಾಬ್ದಾರಿ ಪಡೆದು, ಜೀವನವನ್ನು ಸಾಗಿಸಬೇಕೆಂದೇ ದೇವರು ನಮಗೆ ಈ ಸಮಯದಲ್ಲಿ ಪಾಶ್ಚಾತ್ಯ ಪ್ರವಾಸಕ್ಕೆ ಕಳಿಸಿದುದು. ನೀನು ಕೆಲಸಕ್ಕೆ ಸೇರಿ 'ಸಾಕಾದಷ್ಟು-ಬೇಕಾದಷ್ಟು' ಸಂಪಾದಿಸಿ ತಮ್ಮನ ಓದನ್ನೂ ಮುಂದುವರಿಸುವೆ ಎಂಬ ಧೈರ್ಯದಿಂದ ಹಾಯಾಗಿ ಹೊರಟೆವು. ನೀವಿಬ್ಬರೂ ಓದುತ್ತಿರುವಾಗಲೇ ನಿಮ್ಮನ್ನು ಬಿಟ್ಟು ಬಂದಿದ್ದರೆ ಎಷ್ಟೊಂದು ಅನಾನುಕೂಲವಾಗಿರುತ್ತಿತ್ತು ! ದೇವರು ಮಾಡುವುದೆಲ್ಲ ನಮ್ಮ ಒಳ್ಳೆಯದಕ್ಕೇ ಎಂಬ ಅನುಭವದ ಮಾತು ಅಕ್ಷರಶಃ ನಿಜ.

USA ಗೆ ಆಹ್ವಾನ ಬಂದರೆ ಹೋಗಬೇಕೆಂಬ ಆಸೆ; ನಾವು ಹೋಗಲಾಗದಿದ್ದರೆ ಸಂತೋಷಪಡುವವರೂ ಇಲ್ಲದಿಲ್ಲ. ಅದೇ ಕಾರಣಕ್ಕಾಗಿ ನಮಗೆ ಹೋಗಲೇಬೇಕೆಂಬ ಹಠ ಆರಂಭವಾಗಿದೆ.

ನಮ್ಮ ಮನಸ್ಸು ಅಲ್ಲೋಲ ಕಲ್ಲೋಲವಾಗಿದೆ. ಒಮ್ಮೆ ಮನೆಗೆ ಓಡುತ್ತದೆ ....ಮತ್ತೊಮ್ಮೆ ನೇರ ಅಮೇರಿಕೆಗೇ ಧಾವಿಸುತ್ತದೆ. ದೈವೇಚ್ಛೆ ಇದ್ದಂತಾಗಲಿ ! ಭಗವಂತನು ನಿರ್ದೇಶಿಸಿದಂತೆ ತಲೆಬಾಗಿ ಮನಸಾರೆ ನಡೆದುಕೊಳ್ಳುತ್ತೇವೆ !........

ಇತಿ ನಿಮ್ಮ

ಅಮ್ಮ.

* * * * *

ಡೊರ್‌ಚೆಸ್ಟರ್‌ನಿಂದ ಬೊರ್ನ್‌ಮತ್‌ಗೆ
ಪ್ರಯಾಣ ಮಾಡುವಾಗ
30–10–1967

ಮುದ್ದು ಮಗೂ ಜಯದೇವ್,

ನಿನ್ನ ಹುಟ್ಟಿದ ಹಬ್ಬದಂದು ನಾವು ಲಂಡನ್ನಿನಲ್ಲಿರಲಿಲ್ಲ. ಅಂದೇ ಬೆಳಿಗ್ಗೆ ನಿನ್ನ ಫೋಟೋವಿಗೆ ಮುತ್ತಿಕ್ಕಿ, ನಿನಗಾಗಿ ಪ್ರಾರ್ಥಿಸಿ, ಡೊರ್‌ಚೆಸ್ಟರ್ (Dorchester) ಎಂಬ ಪಟ್ಟಣಕ್ಕೆ ಎರಡನೆಯ ಸಲ ಪ್ರಯಾಣ ಮಾಡಿದೆವು. ದಾರಿಯಲ್ಲಿನ ಕರಾ

ವಳಿಯ ಊರುಗಳೆಲ್ಲಾ ಬಹಳ ಚಟುವಟಿಕೆಯಿಂದ ಕೂಡಿದ್ದವು. ನಮ್ಮ ಆತಿಥ್ಯ ಕಾರರು ನಮ್ಮನ್ನು ಸ್ವಾಗತಿಸಿ ತಮ್ಮ ಮನೆಗೆ ಕರೆದುಕೊಂಡು ಹೋದರು. ಅವರೇ ಕಟ್ಟಿದ ಮನೆ–ಅವರೇ ಬೆಳೆಸಿದ ತೋಟ–ಅವರೇ ಮಾಡಿದ ಅಡಿಗೆ! ತೋಟದಿಂದ ಹಸಿರಾದ ಎಳೆಯ ತರಕಾರಿಯನ್ನು ಕಿತ್ತು ತಂದು ಊಟವನ್ನು ಬಡಿಸಿದರು. ಬೇಯಿಸಿದ ಆ ತರಕಾರಿ ನೋಡಲು ತುಂಬಾ ಸುಂದರವಾಗಿತ್ತು. ಅವರ ತೋಟದಲ್ಲೇ ಬೆಳೆಸಿದ ವಿವಿಧ ಹಣ್ಣುಗಳನ್ನು ತಿನ್ನಲು ಕೊಟ್ಟರು! ಅವರು ಶ್ರಮ ಜೀವಿಗಳು. ಕಷ್ಟಕ್ಕೆ ಸರಿಯಾಗಿ ಫಲ ನೀಡುವ ಭೂತಾಯಿ, ಆ ಫಲವನ್ನು ಅನುಭವಿಸಿ ತೃಪ್ತರಾದ ಜನರನ್ನು ಕಂಡು ನಮಗೆ ಅತ್ಯಂತ ಸಂತೋಷವಾಯಿತು.

ಅಂದು ಮಧ್ಯಾಹ್ನ 2-30 ಗಂಟೆಗೆ ನಮ್ಮ ಉಪನ್ಯಾಸ ಆರಂಭಿಸಿದೆವು. ಅಲ್ಲಿಗೆ ನಾವು ಎರಡನೆಯ ಸಲ ಹೋಗುತ್ತಿರುವುದು ನಮಗೂ, ನಮ್ಮ ಕಲೆಗೂ ಅಭಿಮಾನದ ಸಂಗತಿ. ಈ ಬಾರಿಯೂ ಅಲ್ಲಿನ ಬ್ಯಾಲೆ ಕೂಟದ ಸದಸ್ಯರು ನಮ್ಮ ಉಪನ್ಯಾಸವನ್ನು ಒಪ್ಪಿ ಮೆಚ್ಚಿದರು.

ಅಲ್ಲಿಂದ ಅಂದೇ ಸಂಜೆ ಹೊಸ ರೋವರ್ (Rover) ಕಾರಿನಲ್ಲಿ ನಾವು ಬೋರ್ನ್‌ಮತ್‌ಗೆ (Bournmouth) ಹೋದೆವು. ಕಾರಿನ ಸ್ತ್ರೀ ಸಾರಥಿ 'ಪುರುಷ–ಸ್ತ್ರೀ' ಎನ್ನಬೇಕು. ಗಂಡಸಿನಂತೆಯೇ ಧೈರ್ಯವಂತೆ! ನೋಡಲು ಗಂಡಸಿನಂತೆಯೇ ಇದ್ದಳು. ಆಕೆ ಕಾರಿನ ಅಡಿಯಲ್ಲಿ ಮಲಗಿ ರಿಪೇರಿ ಮಾಡುವುದಕ್ಕೂ ಹಿಂಜರಿಯುವುದಿಲ್ಲವಂತೆ!

ಬೋರ್ನ್‌ಮತ್ ಪ್ರಯಾಣ ಬಹಳ ಚೆನ್ನಾಗಿತ್ತು. ದಾರಿಯುದ್ದಕ್ಕೂ ಸ್ಪಷ್ಟವಾದ ಚಾಲನ–ನಿರ್ದೇಶಗಳು–ಅಚ್ಚುಕಟ್ಟಾದ ವಿಶಾಲ ರಸ್ತೆಗಳು–ವಾಹನ ನಡೆಸಲು ಆನಂದವೇ ಆನಂದ. ಅಂದೇ ಹುಣ್ಣಿಮೆಯ ಚಂದ್ರನು ಆಕಾಶದಲ್ಲಿ ಪ್ರಕಾಶಿಸುತ್ತಿದ್ದನು. ಆಕಾಶದಲ್ಲಿನ ಆ ಚಂದ್ರನನ್ನು ನೋಡಿ ನಿನ್ನೊಡನೆ ಮಾತನಾಡಿದೆ ಮಗೂ! ಬೆಂಗಳೂರಿನಲ್ಲೂ ನಿಮ್ಮ ತಲೆಯ ಮೇಲೆ ಇದೇ ಚಂದ್ರನಲ್ಲವೇ ಪ್ರಕಾಶಿಸುತ್ತಿರುವುದು ಎಂದು. ನಿನ್ನ ಹುಟ್ಟಿದ ಹಬ್ಬಕ್ಕೆ ನನ್ನ ಪರವಾಗಿ ನಿನಗೆ ಶುಭಾಶಯಗಳನ್ನು ಕೊಡಲು ಚಂದ್ರನೊಡನೆ ಕೇಳಿಕೊಂಡೆ.

ಅಂತೂ ನಾವು ನಿನ್ನ ಇಪ್ಪತ್ತೈದನೆಯ ಹುಟ್ಟಿದ ಹಬ್ಬದ ದಿನವನ್ನು ಬೆಳಿಗ್ಗೆಯಿಂದ ರಾತ್ರಿ ಹನ್ನೆರಡರವರೆಗೆ ಕುಣಿದು, ಹರಟೆ ಹೊಡೆದು, ನಕ್ಕು–ನಲಿದು, ಸಂತೋಷದಿಂದ ನಿನ್ನನ್ನು ಪದೇ ಪದೇ ನೆನೆಸಿಕೊಂಡು ನೆರವೇರಿಸಿದೆವು. ಬೆಂಗಳೂರಿನಲ್ಲಿ ನಿನ್ನ ಹುಟ್ಟು ಹಬ್ಬದ ದಿನ ಏನೇನಾಯಿತು ತಿಳಿಸು.

ನಮ್ಮ ಎಲ್ಲಾ ಚಟುವಟಿಕೆಗಳನ್ನೂ ನಿಮಗೆ ತಪ್ಪದೆ ಬರೆಯುತ್ತಿದ್ದೇನೆ. ರೈಲು ಬಂಡಿಗಳಿಂದ, ಅವುಗಳಿಗೆ ನಿರೀಕ್ಷಣೆಯ ಸಮಯದಲ್ಲಿ ನಿಲ್ದಾಣಗಳ ತಂಗು ಕೋಣೆಗಳಿಂದ, ಎಲ್ಲೆಲ್ಲಿಂದಲೋ ಗೀಚಿ ಹಾಕುತ್ತಿರುವುದಕ್ಕೆ ಕ್ಷಮಿಸಿ.

ಇತ್ತೀಚೆಗೆ ನಮ್ಮ ಹೆಸರುಗಳು ಎಲ್ಲರಿಗೂ ತಿಳಿದಿದೆ. ನಮ್ಮ ಪ್ರಖ್ಯಾತಿ ಹಬ್ಬಿದೆ. ನಮ್ಮ ನೃತ್ಯ-ಕಲೆಯ ಪ್ರಸಾರಕ್ಕೆ ಬೇಕಾದ ಆದರ್ಶ ಅವಕಾಶಗಳು ಸಿಗುತ್ತವೆ. ಪತಿಯವರಿಗಂತೂ ಈ ಕೆಲಸದಲ್ಲಿ ಎಲ್ಲಿಲ್ಲದ ಹುರುಪು ಬಂದಿದೆ. ಉಪನ್ಯಾಸವಾದ ಮೇಲೆ, ನಮ್ಮ, ಅವರ ಕಲೆಯ ಹೋಲಿಕೆ-ವ್ಯತ್ಯಾಸಗಳ ಸಂಬಂಧವಾಗಿ ಸಂವಾದವಾಗುತ್ತದೆ. ಪರಸ್ಪರ ಕಲೆಗಳಲ್ಲಿನ ಮುಖ್ಯ ವ್ಯತ್ಯಾಸ ಇದು-ಭಾರತೀಯ ನೃತ್ಯ ಕಲೆಯಲ್ಲಿ ಗುರುಗಳು ಕುಳಿತು ಪಾಠ ಹೇಳಿಕೊಡಬಲ್ಲರು. ಶಿಷ್ಯಂದಿರು ಕಲೆಯ ಶಾಸ್ತ್ರೀಯ ವಿಭಾಗ ತಿಳಿಯದೆ ಅಮೋಘ ಕಲಾವಿದರಾಗಬಲ್ಲರು. ಆದರೆ ಬ್ಯಾಲೆಯ ಗುರುಗಳು ಸ್ವತಃ ನೃತ್ಯಗಾರರು ಆಗಿರಲೇ ಬೇಕು. ತಾನು ನೃತ್ಯಮಾಡಿಯೇ ಶಿಷ್ಯಂದಿರಿಗೆ ಹೇಳಿ ಕೊಡಬೇಕು. ಈ ವ್ಯತ್ಯಾಸ (Difference) ವಿಚಿತ್ರವೆನಿಸುತ್ತದೆ.

ಅಲ್ಲದೆ ನಮ್ಮಲ್ಲಿನ ಪುರಾಣದ 'ಅನೇಕ ದೇವರು' ಗಳ ವಿಷಯವಾಗಿಯೂ ಹಲವಾರು ಪ್ರಶ್ನೆ ಕೇಳುತ್ತಾರೆ. ಪತಿಯವರ ಉಪನ್ಯಾಸಗಳನ್ನು ಕೇಳಲು ಈಗ ದೂರ ದೂರದಿಂದ ಜನರು ಪ್ರಯಾಣ ಬೆಳೆಸಿ ಬರುತ್ತಾರೆ.

ಛಳಿಗಾಲದಲ್ಲಿ ಕಲೆಗೆ ಹೆಚ್ಚಿನ ಪ್ರೋತ್ಸಾಹ ಈ ಶೀತದೇಶಗಳಲ್ಲಿ! ಈಗ ಛಳಿ-ಛಳಿ ಎಂದು ಶಾಖ ನಿಯಂತ್ರಿತ ರಂಗಮಂದಿರಗಳಿಗೆ ಜನರು ನುಗ್ಗುವ ಸಮಯ ಬರುತ್ತಿದೆ. ಬೆಚ್ಚನೆ ಹಾಯಾಗಿ ಕುಳಿತು, ವಿನೋದ ಸವಿಯುವ ಸುಖವನ್ನು ಅರಸಿಕೊಂಡು ಹೋಗುತ್ತಾರೆ. ಕಲಾವಿದರಿಗೆ ಇದೇ ಸುಸಮಯ. ಆದರೆ ಕ್ರಿ.ಶ.1963 ನೆಯ ಇಸವಿಯ ಛಳಿಯ ಹಾಗೆ ಇದ್ದರೆ ಮಾತ್ರ ಕಷ್ಟ, ಅಷ್ಟೇ. ವಾಹನಗಳೂ, ಮನೆಗಳೂ ಹಿಮದಲ್ಲಿ ಹೂತು ಹೋಗಿದ್ದುವಂತೆ ಆಗ! ಅಂದ ಮೇಲೆ ಅವುಗಳನ್ನು ಹಿಮಗಡ್ಡೆಗಳ 'ಘೆರಾವೋ' ದಿಂದ ಬಿಡಿಸಿಕೊಂಡು ಮತ್ತೆ ಉಪಯೋಗಕ್ಕೆ ತರುವುದು ಒಂದು ಸಮಸ್ಯೆಯೇ ಆಗಿರಬೇಕು! ಅಂತೂ ಬರಲಿರುವ ಛಳಿಯ ಸ್ವರೂಪ ತಿಳಿಯದೆ ಹೆದರುವ ಇಲ್ಲಿನ ಜನರ ಅವಸ್ಥೆಯೇ ಅವಸ್ಥೆ!

ಲಂಡನ್‌ನಲ್ಲಿ ನಮಗಾಗಿ ಅಮೇರಿಕಾದಿಂದ ಸಮಾಚಾರ ಏನೆಂದು ಕಾದಿದೆಯೋ ತಿಳಿಯದು. ವೃತ್ತಿ ಪರವಾನಗಿ (Work Permit) ಇಲ್ಲದೆ ಅಮೇರಿಕೆಗೆ ಕಾಲಿಡಲಾಗುವುದಿಲ್ಲ, ಕೇವಲ ಪ್ರವಾಸಿಗಳಾಗಿ ಹೋಗಲು ನಮಗೆ ಮನಸ್ಸಿಲ್ಲ........ ಮತ್ತೊಮ್ಮೆ ಬರೆಯುವೆನು.

ಇತಿ ನಿಮ್ಮ

ಅಮ್ಮ.

*   *   *   *   *

ಲಂಡನ್
16 – 11 – 1967

ಆತ್ಮೀಯರೇ,........

ಲಂಡನ್ ಬಿಡಲು ಕೆಲವೇ ದಿನಗಳಿವೆ. ಇಲ್ಲಿನ ಕಲಾ ಪ್ರದರ್ಶನಗಳನ್ನು ಆದಷ್ಟು ನೋಡಬೇಕೆಂಬ ಹಂಬಲ ನಮಗೆ. ಸೆವಿಲ್ ಥಿಯೇಟರಿನಲ್ಲಿ (Saville Theatre) ಜಗತ್ಪ್ರಖ್ಯಾತ, ಅಭಿನಯದ ದೊರೆಯೆಂದೆನಿಸುವ ಮಾರ್ಸೆಲ್ ಮಾರ್ಸೋ (Marcel Marceau) ಇವರ ಮೂಕ ನಾಟಕವನ್ನು ನೋಡಿದೆವು. ಅವರು ಒಬ್ಬರೇ ರಂಗಸ್ಥಳವನ್ನು ಆವರಿಸಿ, ಹಲವಾರು ಪಾತ್ರಗಳನ್ನು ಅಭಿನಯಿಸಿ ಪ್ರೇಕ್ಷಕರನ್ನು ಮರಳು ಮಾಡುತ್ತಾರೆ, ಶೂನ್ಯದಿಂದ ಎಂಬಂತೆ ಎಲ್ಲವನ್ನೂ ರಚಿಸುವುದು, ನಿಶ್ಶಬ್ದತೆಯ ನೀರವ ವಾತಾವರಣದಲ್ಲಿ ಗಡುಸಾದ ವಿಷಯಗಳನ್ನು ಸ್ವಾರಸ್ಯವಾಗಿ ರಚಿಸುವುದು ಅತ್ಯುತ್ತಮ ಕಲೆಯಲ್ಲವೇ ? – ಸಂಗೀತವಿಲ್ಲ – ಯಾವ ಆಧಾರವೂ ಇಲ್ಲದೆ, ಒಬ್ಬಾತನೇ ಎಲ್ಲ ಜವಾಬ್ದಾರಿ ಪಡೆದು ಮೂಕಾಭಿನಯ ಮಾಡುವುದನ್ನು ನಾವು ನೋಡಿದುದು ಅದೇ ಮೊದಲು. ಕಲಾವಿದನ ಹೃದಯ ಸೂಕ್ಷ್ಮತೆಯಿಂದ ಮೃದುವಾಗಿಯೂ, ಸೌಮ್ಯವಾಗಿಯೂ ಇದ್ದರೆ ಮಾತ್ರ ಇಂತಹ ಕಲಾ ಬಿಂಬವನ್ನು ತೋರಿಸಬಲ್ಲನು.

ಈ ಒಬ್ಬ ವ್ಯಕ್ತಿ ತಿಂಗಳುಗಟ್ಟಲೆ ಇಂತಹ ಪ್ರದರ್ಶನಗಳನ್ನು ಕೊಡಲು ಶಕ್ಯರು. ಅಂದರೆ ಅವರು ಕಲೆಗಾಗಿ ಮಾಡಿರುವ ಆತ್ಮಸಮರ್ಪಣೆ ಎಷ್ಟಿದೆ ಎಂದು ಗೊತ್ತಾಗುತ್ತದೆ. ಇತರ ವೃತ್ತಿ–ಕಲಾವಿದರಂತೆ ದಿನಂಪ್ರತಿ ಅನೇಕ ವಾರಗಳ, ತಿಂಗಳುಗಳ, ಅವಧಿಯಲ್ಲಿ ಒಂದೇ ಸಮನಾಗಿ ಇಂತಹ ಪ್ರದರ್ಶನಗಳನ್ನು ಅವರು ಕೊಡುತ್ತಿರುವುದು ಖಂಡಿತ ಮೆಚ್ಚತಕ್ಕ ವಿಷಯ. ಒಬ್ಬರೇ ಎಲ್ಲ ಪಾತ್ರಗಳನ್ನು ಧರಿಸಿ, ರಂಗಮಂದಿರದಲ್ಲಿ ತುಂಬಾ ನೆರೆದಿದ್ದ ಜನರನ್ನು ಒಂದು ಸಂಜೆಯ ಕಾರ್ಯಕ್ರಮದಲ್ಲಿ ಮೂಕಾಭಿನಯದಿಂದ ವಿನೋದ ಒದಗಿಸುವುದು ಸಾಮಾನ್ಯದ ಮಾತಲ್ಲ. ಮನುಷ್ಯನಲ್ಲಿ ಅಸಾಮಾನ್ಯವಾದ ಅಮೋಘ ಕಲಾ ಪ್ರೌಢಿಮೆಯಿಲ್ಲದೆ ಇದು ಸಾಧ್ಯವೇ ?

.... ಹೆಮ್‌ಸ್ಟೆಡ್ ಚರ್ಚ್‌ನಲ್ಲಿ (Hampstead Church) ಹಿಂಚ್ಲೆ ಮಕ್ಕಳ, ಸಂಗೀತ ಕೂಟದವರು ಆಡಿದ "ನೋಹಾಸ್ ಫ್ಲುಡ್" ಎಂಬ ಸಂಗೀತ ನಾಟಕ (Noah's Fludd–an opera) ನೋಡಿದೆವು. ಚರ್ಚಿನ ಪವಿತ್ರ ವಾತಾವರಣದಲ್ಲಿ ಏರ್ಪಡಿಸಿದ ಈ ಕಾರ್ಯಕ್ರಮವು ಮೆಚ್ಚುವಂತಿತ್ತು. ಬೆಂಜಮಿನ್ ಬ್ರಿಟ್ನ (Benjamin Britten) ಎಂಬ ಸಂಗೀತಜ್ಞರು ಮಕ್ಕಳಿಗಾಗಿ ಈ ಸಂಗೀತ ನಾಟಕವನ್ನು ರಚಿಸಿದ್ದಾರೆ. ನಮಗಂತೂ ಈ ವಿಚಿತ್ರ ಅನುಭವ ಅಪರೂಪದ ಆನಂದವನ್ನು ಕೊಟ್ಟಿತು. ಒಂದು ಗಂಟೆಯ ಕಾಲ ನಮ್ಮನ್ನು ನಾವೇ ಮರೆತುಹೋದೆವು. ಸುಮಾರು 150 ಚಿಕ್ಕಮಕ್ಕಳು ಒಟ್ಟಾಗಿ ಆ ನಾಟಕದಲ್ಲಿ ಭಾಗವಹಿಸಿದ್ದರು. ಭಾರತದಲ್ಲಿ ನಾವು ಎಂದೂ ಇಂತಹ ಕಾರ್ಯಕ್ರಮ ನೋಡಿಲ್ಲ – ನೋಡುವುದೂ ಇಲ್ಲ.

ಚರ್ಚಿನ ಹೆಬ್ಬಾಗಿಲಿನಿಂದ ಈ ಮಕ್ಕಳು ತಂಡ ತಂಡವಾಗಿ ಬಂದು ವಿಧವಿಧವಾಗಿ ಅಭಿನಯಿಸಿ, ಹಾಡಿ ಪ್ರದರ್ಶಿಸಿದರು. ಸುಮಾರು 100 ಇತರೆ ಚಿಕ್ಕಮಕ್ಕಳು ವಾದ್ಯ ವೃಂದದಲ್ಲಿದ್ದು ನಾದದಾನ ಮಾಡಿದರು. ಪಿಟೀಲು, ಕೊಳಲು ಮುಂತಾದ ಅನೇಕ ವಾದ್ಯಗಳನ್ನು ಬಾರಿಸಿ ಸಂಗೀತವನ್ನು ನೀಡಿದರು. ರಂಗಮಂಟಪವನ್ನು ನಮ್ಮ ಕಣ್ಣುಮುಂದೆಯೇ ಕಥೆ ಮುಂದಕ್ಕೆ ಸಾಗಿದಂತೆ ಕಟ್ಟಿದರು. ಆ ದೃಶ್ಯವಂತೂ ಮರೆಯಲಾಗದ ದೃಶ್ಯ. ಐಕ್ಯತೆಯ, ಒಗ್ಗಟ್ಟಿನ ಮೂರ್ತಿಮಂತ ಸ್ವರೂಪವನ್ನು ಅಂದು ನೋಡಿದೆವು. ಇಂತಹ ಚಿಕ್ಕಮಕ್ಕಳಿಂದ ಈ ತರಹದ ಪರಿಣಾಮ ಪಡೆಯ ಬೇಕಾದರೆ ಎಂತಹ ತರಬೇತು, ಶಿಸ್ತು, ವಿಧೇಯತೆ ಮಕ್ಕಳಲ್ಲಿರಬೇಕು! ಸುಮಾರು ಮೂರು ನೂರು ಮಕ್ಕಳು ಒಮ್ಮೆ ಸೇರಿ ದಿನಂಪ್ರತಿ ಅಭ್ಯಸಿಸಿ, ಶ್ರಮವಹಿಸಿ ಆ ಸಂಗೀತ ನಾಟಕವನ್ನು ಒಂದು ಅಮೋಘ ಕಲಾಕೃತಿಯನ್ನಾಗಿ ರಚಿಸಿದುದು ಸುಲಭದ ವಿಷಯ ವಲ್ಲ. ಮಾರ್ಗದರ್ಶನೀಯ ಸಾಹಸ – ಪ್ರಶಂಸನೀಯ ಅಸಾಧಾರಣ ಸಾಧನೆ. ಚರ್ಚಿನ ಆ ಮಸಕು ದೀಪಗಳ ಬೆಳಕಿನಲ್ಲಿ ಅಂದು ನಾವು ಪಡೆದ ಅನುಭವ, ಮನ ಮುಟ್ಟುವ ವಿನೋದದ ವಿಷಯವಾಗಿತ್ತು.

ಲಂಡನ್‌ನಲ್ಲಿ ನಾವು ಕೆಲವು ಭಾರತೀಯ ನೃತ್ಯ ಪ್ರದರ್ಶನಗಳನ್ನು ನೋಡಿ ದೆವು. ಆಫ್ರಿಕಾದೇಶದಿಂದ ಬಂದ ಮತ್ತು ಲಂಡನ್ನಿನಲ್ಲಿಯೇ ನೆಲಸಿದ್ದ ಭಾರತೀ ಯರು ಕೊಟ್ಟ ಈ ನೃತ್ಯ ಪ್ರದರ್ಶನಗಳನ್ನು ನೋಡಿ ತುಂಬಾ ಬೇಸರವಾಯಿತು. ಭಾರತಮಾತೆಯನ್ನು ಅಗಲಿ, ವರ್ಷಗಟ್ಟಲೆ ಹೊರದೇಶಗಳಲ್ಲಿ ಸುತ್ತಾಡುತ್ತಿದ್ದ ಇಂತಹ ಭಾರತೀಯರಿಗೆ ನಮ್ಮ ದೇಶದ ಸಂಪರ್ಕವೇ ಕಳೆದುಹೋಗಿದೆ. ಸ್ವದೇಶದ ಸ್ಫೂರ್ತಿ ಪೂರ್ತಿ ಇಲ್ಲವಾಗಿದೆ. ಕಲೆಯ ಮೆರುಗು ಮಸುಕಾಗಿದೆ. ಕಲೆಯ ಉಸಿರೇ ಕಮ್ಮಿ ಯಾಗಿದೆಯೆಂದ ಮೇಲೆ ಉಳಿದುದೇನಿದೆ? ನಮ್ಮ ದೇಶವನ್ನು ಹಲವಾರು ವರ್ಷಗಳ ಕಾಲ ಬಿಟ್ಟು ಇದ್ದರೆ ಖಂಡಿತ ಭಾರತೀಯರಿಗೆ ನಮ್ಮ ಭಾರತೀಯ ಕಲೆಯ ಖಚಿತ ವಾದ ರೂಪವನ್ನು ಪರದೇಶದಲ್ಲಿ ಕೊಡಲು ಆಗುವುದಿಲ್ಲ.

ನಮಗೂ ಈ ಹೊರದೇಶದಲ್ಲಿ ಎರಡು ವರುಷಗಳ ಮೇಲೆ ಇದ್ದು ಮೆಲ್ಲಮೆಲ್ಲನೆ ಕಲೆಯ ಮೇಲಿನ ಹಿಡಿತವು ಸಡಿಲಾಗುವ ಸೂಚನೆ ಕಂಡುಬರುತ್ತಿದೆ. ಈಗ ಇಲ್ಲಿನ ನಮ್ಮ ಕೆಲಸಗಳೆಲ್ಲ ಮುಗಿದಿವೆ. ಸುಮ್ಮನೆ ಲಂಡನ್ನಿನಲ್ಲಿ ಕಾಲಕಳೆಯುವುದು ಬೇಸರ ವಾಗುತ್ತಿದೆ. ಎಷ್ಟೇ ಸ್ವಾರಸ್ಯವಾದ ನಗರದಲ್ಲಿದ್ದರೂ ಮನುಷ್ಯನಿಗೆ ಕೆಲಸವಿಲ್ಲ ದಿದ್ದರೆ, ಅದೇ ನಗರ ವೈರಿಯಂತೆ ಕಂಡುಬರುತ್ತದೆ. ನಮ್ಮ ಜೀವನದಲ್ಲಿ ನಾವು ಯಾವಾಗಲೂ ಕೆಲಸ–ವಿನೋದಗಳನ್ನು ಜೊತೆಯಾಗಿಯೇ ಏರ್ಪಡಿಸಿಕೊಂಡು ಅಭ್ಯಾಸವಾಗಿದೆ. ಬರಿಯ ವಿನೋದ ನಮಗೆ ಹಿತವಿಲ್ಲ. ಕೆಲಸ ಮುಗಿದ ಕಾರಣ ಲಂಡನ್ ಬಿಡಲು ಆತುರದಿಂದ, ಕಾತುರದಿಂದ ದಿನಗಳನ್ನು ಎಣಿಸುತ್ತಿದ್ದೇವೆ.

ಇತಿ ನಿಮ್ಮ

ಚಂದಮ್ಮ.

ಲಂಡನ್
1965-1967

ಲಂಡನ್ನಿನ
A. M. C.
ಆಶ್ರಯದಲ್ಲಿನ
ಸವಿನೆನಪುಗಳು

ಮನಸ್ಸಿನ
ಹಾರಾಟದಲ್ಲಿ
ಕಂಡ
ಸನ್ನಿವೇಶಗಳು

"ರುಕ್ಮಿಣಿ" ಗೆ ಬರೆದ (ಮತ್ತು ಹಿಂದೆ ಪ್ರಕಟವಾಗದೆ ಇದ್ದ) ಮತ್ತಿತರ ಕೆಲವು ಪತ್ರಗಳಿಂದ ಆಯ್ದುದು

"ಟಾಯಿಮ್ಸ್" (Time) ಪತ್ರಿಕೆ ಹೇಳಿದಂತೆ ಕಳೆದ ವಾರ ಖಂಡಿತವಾಗಿಯೂ ಲಂಡನ್ "ಪ್ರಪಂಚದ ಸ್ವಾರಸ್ಯಪೂರ್ಣ ಆನಂದದ ತೂಗುಯ್ಯಾಲೆ" ಯಾಗಿತ್ತು. ಸೂರ್ಯನ ಬಿಸಿಲು ತೀಕ್ಷ್ಣವಾಗುತ್ತಿದ್ದಂತೆ ಜನರೂ ಉತ್ಸಾಹಭರಿತರಾಗಿ ಉಲ್ಲಾಸ ದಿಂದ ಕುಣಿದಾಡುತ್ತಿದ್ದರು. ಹೈಡ್‌ಪಾರ್ಕ್ (Hyde Park), ಕೆನ್ಸಿಂಗ್‌ಟನ್ ಗಾರ್ಡನ್ಸ್ (Kensington Gardens) ಮತ್ತು ಕೆನ್‌ವುಡ್ ಪಾರ್ಕ್‌ನಲ್ಲಿ (Ken-wood Park) ಇಲ್ಲಿನ ಪ್ರಜಾಸಂಕುಲ ಕಾಲ ಕಳೆಯುತ್ತಿತ್ತು. ಹೊರ ಮೈದಾನ ಗಳಲ್ಲಿಯೇ ಸೂರ್ಯಸ್ನಾನ, ಊಟ ತಿಂಡಿಯ ವ್ಯವಸ್ಥೆ, ಸದಾ ಬಿಸಿಲಿನಲ್ಲಿಯೇ ಸಂತೋಷದಿಂದ ದಿನ ತುಂಬುವ ಈ ಆನಂದಾನ್ವೇಷಿಗಳು ಉದ್ಯಾನವನಗಳ ಹಚ್ಚ ಹಸುರಿನ ಹುಲ್ಲು ಹಾಸಿನ ಮೇಲೆ ಹಿಂಡು ಹಿಂಡು. ಯುವ ಜನಾಂಗದ ಸಂತಸ ಸಾಮ್ರಾಜ್ಯಧ ಸೀಮೆಗೆ ಎಲ್ಲೆಯೇ ಇಲ್ಲ. ಪರಸ್ಪರ ಇಬ್ಬರು ಆಲಂಗಿಸಿ ಕುಳಿತಿರು ವುದು ಅಥವಾ ಮಲಗಿರುವುದು ಎಲ್ಲೆಲ್ಲೂ ಸಾಮಾನ್ಯ ದೃಶ್ಯವಾಗಿತ್ತು. ನಾವು ಬೆಂಗಳೂರಿನಲ್ಲಿದ್ದಾಗ ವಿದೇಶಯಾತ್ರೆ ಮಾಡಿ ಹಿಂದಿರುಗಿದ ನಮ್ಮ ಹಿಂದೂ ವಿದ್ಯಾ ರ್ಥಿನಿಯೊಬ್ಬಳು ಪರದೇಶಗಳ ಬಗೆಗೆ ಅಭಿಪ್ರಾಯವನ್ನು ಕೇಳಿದಾಗ – "ಅಲ್ಲಿ ಎಲ್ಲಿ ನೋಡಿದ್ರೂ ಎರಡೆರಡು ಕೂತಿರ್ತವೆ" ಎಂದಿದ್ದ ಮಾತು ಜ್ಞಾಪಕಕ್ಕೆ ಬಂತು. ಇನ್ನೊಬ್ಬ ಭಾರತೀಯ ಯುವತಿ– "........ ಏಕೆ – ಈ ಯುವಕರಿಗೆ ಮನೆಯಲ್ಲಿ ಏಕಾಂತಕ್ಕೆ ಅವಕಾಶವಾಗುವುದಿಲ್ಲವೇ ? ಬಹಿರಂಗವಾಗಿ ಏಕೆ ಪ್ರೇಮ ಸೂಚಿಸ ಬೇಕು ?" – ಎಂದಿದ್ದಳು. ಭಾರತದಿಂದ ಬರುವ ನಮಗೆ ಈ ದೃಶ್ಯಗಳು ಅಸಹ್ಯ ವಾಗಿ ತೋರುತ್ತವೆ. ಭಾರತೀಯ ಜನಜೀವನದ ಬಾಹ್ಯ ನಿತ್ಯ ಕರ್ಮಗಳಿಗೆ ಕಟ್ಟು ನಿಟ್ಟಿನ ಸಂಪ್ರದಾಯ-ದಿಟ್ಟನೋಟದ ಸಂಸ್ಕೃತಿಯ ಆವರಣ ಇದೆ.........

........ಆದರೆ ......ಪರದೇಶದಲ್ಲಿನ ಜನತೆಯ ಪ್ರದರ್ಶನ ಪ್ರಿಯತೆಯಲ್ಲಿಯೂ ಒಂದು ಹಿನ್ನೆಲೆ ಕಾರಣ ಇರಬಹುದೆಂದೆನಿಸುತ್ತದೆ. ಅವರಿಗೆ ಜೀವನದಲ್ಲಿ ಯಾವ ರೀತಿಯ ಭದ್ರತೆಯೂ ಇದ್ದಹಾಗೆ ಕಾಣುವುದಿಲ್ಲ. ಹೀಗಾಗಿ ಅವರ ಜೀವನದಲ್ಲಿ ಪ್ರೇಮ, ಪ್ರೀತಿ, ಅನುರಾಗ ಎಂಬಿವೀ ಶಬ್ದಗಳು ಅರ್ಥಶೂನ್ಯವಾಗಿ ಮಾರ್ಪಟ್ಟು ಕಟ್ಟುಕಥೆಯಂತಾಗಿದೆ. ಒಬ್ಬರಿಗೊಬ್ಬರ ಆಸರೆ, ಅವರಿಂದ ಭದ್ರತೆ, ನಂತರ ಪ್ರೇಮ ಸುಖ ಶಾಂತಿಗಳನ್ನು ಬಯಸುವ ಈ ಜನತೆ ಪ್ರಪಂಚದೆದುರು ಆಲಿಂಗನ ಮಾಡಿ ಕೊಂಡು ಪ್ರದರ್ಶಿಸಿಕೊಳ್ಳುವುದರಲ್ಲಷ್ಟೇ ತೃಪ್ತಿ ಈಗ ಉಳಿದಿದೆಯೇನೋ ! ಪ್ರೇಮಿ ಸುವ ಮತ್ತು ಪ್ರೇಮಿಸಲ್ಪಡುವ ಆ ಜೀವನ ಸುಖ !

* * * * *

........ರಜಾದಿನ ಬಂದರೆ ಇಡೀ ಲಂಡನ್ನಿನ ಜನರು ನಗರ ಬಿಟ್ಟು ಹೊರಗಡೆ ಹೋಗುತ್ತಾರೆ. ಸ್ವಲ್ಪ ಬಿಡುವು ಇದ್ದರೆ ನಗರದಿಂದ ದೂರ ಹೊರ ಪ್ರದೇಶಕ್ಕೆ

ಹೋಗುವುದು ಇಲ್ಲಿನವರ ರೂಢಿ. ರಜಾ ಬಂದರೆ ದಿನನಿತ್ಯದ ಜೀವನದ ಬೇಸರ ಈ ಜನರಿಗೆ........ಹುಚ್ಚು ಆಸೆಗಳು........ಎಲ್ಲ ಜನರೂ ತಮ್ಮ ತಮ್ಮ ವಾಹನಗಳನ್ನು ನಡೆಸಿ ಎಲ್ಲಿಯಾದರೂ ಹೋಗುತ್ತಾರೆ........ಎಲ್ಲಿ ನೋಡಿದರೂ ವಾಹನ ಸಂಧಿಗ್ಧ ತೆಯ ಸನ್ನಿವೇಶಗಳು........ಕೆಲವೊಮ್ಮೆ ಹಲವಾರು ಅಪಘಾತಗಳು. ಟಿ. ವಿ. (T.V.) ಯವರು ಸಮಾಚಾರ ದರ್ಶನ ಕೊಡುವಾಗ 'ಹಿಂದಿನ ವರ್ಷಕ್ಕಿಂತ ಈ ವರ್ಷ ಅಪ ಘಾತಗಳು ಕಡಿಮೆ' ಎಂದು ಹೆಮ್ಮೆಯಿಂದ ಸುದ್ದಿ ತಿಳಿಸುತ್ತಾರೆ! ದಾರಿಯಲ್ಲೆಲ್ಲಾ ನಾನಾ ತರಹದ, ನಾನಾ ವೈವಿಧ್ಯತೆಯ ವಾಹನಗಳನ್ನು ಕಾಣುತ್ತೇವೆ. 1900ನೆಯ ವಾಹನಗಳು 1966–67ರ ಅತ್ಯಾಧುನಿಕ ವಾಹನಗಳೊಡನೆ ಸರಿಸಮವಾಗಿ ರಸ್ತೆಯಲ್ಲಿ ಓಡಾಡುತ್ತಿರುವುದು ನೋಡುವವರಿಗೆ ಸ್ವಾರಸ್ಯವಾಗಿರುತ್ತದೆ. ಮೇಲ್ಛಾವಣಿ ಇಲ್ಲದ ಹಳೆಯ ಫೋರ್ಡ್ (Ford) ವಾಹನಗಳಲ್ಲೂ ಜನರು ಆನಂದದಿಂದ ಸಂಚರಿಸು ತ್ತಾರೆ.......ರಜಾ ಅಂದರೆ ಮಜಾ!........ನಮಗಂತೂ ಅವರು ಆನಂದಿಸುವುದನ್ನು ನೋಡಿಯೇ ಸಂತೋಷವಾಗುತ್ತಿದೆ. ಇಡೀ ನಗರವೇ ಚೇತನಾಯುಕ್ತವಾಗಿ ಕುಣಿ ಯುತ್ತಿರುವಂತಿದೆ. ಹಳೆಯ ಬೇರು – ಹೊಸ ಚಿಗುರಿನ ಸಮ್ಮಿಲನದ ಮನೋಹರ ದೃಶ್ಯ.

........ಈ ಸಮಯದಲ್ಲೇ ನಾವು ಹೆಮ್‌ಸ್ಟೆಡ್ (Hampstead) ನ್ನು ಭೇಟಿ ಮಾಡಿ ಅಲ್ಲಿನ ಜಾತ್ರೆಯನ್ನು ನೋಡಿದೆವು. ಹೋಗುವಾಗ ಬಿಸಿಲಿನ ಪ್ರಕಾಶ ಮಾನ ಬೆಳಕಿತ್ತು. ಕೆಲವು ನಿಮಿಷದೊಳಗೇ ಭಾರಿ ಮಳೆ ಬಂದು ಅಲ್ಲಿ ನೆರೆದ ಜನ ರಿಗೆ ತುಂಬಾ ಅನಾನುಕೂಲವಾಯಿತು. ಚಿಕ್ಕಮಕ್ಕಳನ್ನು ಕಟ್ಟಿಕೊಂಡು ಬಂದ ಹೆತ್ತ ವರ ಪಾಡು ಹೇಳತೀರದು- ಮಳೆಯಲ್ಲಿ ಮಕ್ಕಳು ತುಂಬಾ ನೆನೆದುಹೋದರು. ಆದರೂ ಇಂಗ್ಲಿಷ್ ಜನರು ಹವೆಯನ್ನು ತೆಗಳಲಿಲ್ಲ. ಮಳೆಯನ್ನು ನಿಂದಿಸಲಿಲ್ಲ. ಚಾಚೂ ಶಬ್ದವೆತ್ತದೆ — 'ಬಂದದ್ದೆಲ್ಲಾ ಬರಲಿ'.....ಎಂದು ಶಾಂತವಾಗಿದ್ದುದನ್ನು ನೋಡಿ ನಮಗೆ ತುಂಬಾ ಆಶ್ಚರ್ಯವಾಯಿತು. ಕೆಲವೊಮ್ಮೆ ಕೂಟಗಳಲ್ಲಿ 'ಇಂಗ್ಲಿಷ್ ಹವೆಗೆ ಏನು ಕೇಡು ಬಂದಿದೆ?' ಎಂಬ ವಿಚಾರಸರಣಿ ಬರುತ್ತದೆ. ಕೊನೆಗೆ,'ಇಂಗ್ಲಿಷ್ ಹವೆಯೇನೂ ಬದಲಾಗಿಲ್ಲ – ಜನರ ಮನೋಸ್ಥಿತಿ ಬದಲಾಗಿದೆ' ಎಂದು ತೀರ್ಮಾನ ಮಾಡುತ್ತಾರೆ. ಹೆಮ್‌ಸ್ಟೆಡ್ (Hampstead) ಜಾತ್ರೆ ನಿಜವಾಗಿ 'ಜನ ಮರುಳೋ ; ಜಾತ್ರೆ ಮರುಳೋ' ಎಂಬ ಹಾಗಿತ್ತು.

ಲಂಡನ್ ಜನರು ನಗರ ಬಿಟ್ಟು ಹೊರಗೆ ಹೋಗುವ ಸಮಯದಲ್ಲಿ ಹೊರಗಿ ನಿಂದ ಜನರು ಶಾಂತವಾದ ಲಂಡನ್ ನಗರವನ್ನು ನೋಡಲು ಬರುತ್ತಾರೆ! ಲಂಡನ್ ಒಂದು ಮಹಾ ನಗರ. ಇಲ್ಲಿ ಹಳೇ ಕಟ್ಟಡಗಳೂ ಇವೆ. ಹೊಸತೂ ಇವೆ. ರಾಜ ಮನೆತನ – ಬ್ರಿಟಿಷ್ ರಾಜ್ಯದ ವೈಭವದ ಚಿಹ್ನೆಗಳನ್ನು, ಕುರುಹುಗಳನ್ನು ಎಲ್ಲೆಲ್ಲೂ ಕಾಣಬಹುದು. ರಸ್ತೆಯಲ್ಲಿ - ಹಳೆಯ ದಿನಗಳಲ್ಲಿ, ಅರಸರುಗಳ ಕುದುರೆಗಳು

ನೀರು ಕುಡಿಯುವ ಕಲ್ಲಿನ ಮರಿಗೆಗಳನ್ನು ಕಾಣುತ್ತೇವೆ. ಹೆಮ್‌ಸ್ಟೆಡ್ (Hampstead) ಒಂದು ಚಾರಿತ್ರಿಕ ಸ್ಥಳ, ಚಿಕ್ಕ ಚಿಕ್ಕ ಗಲ್ಲಿಗಳಿದ್ದು ಹಳೆಯ ವಿಷಯಗಳನ್ನೂ ಸಂದರ್ಭಗಳನ್ನೂ ಸಾರುತ್ತವೆ. ಹಳೆಯ ಜೋರ್ಜಿಯನ್ (Georgian) ಶಿಲ್ಪದ ಮನೆಗಳು....ಇತ್ಯಾದಿ.

* * * * * "

ಕೆನ್‌ವುಡ್ ಪಾರ್ಕಿನ (Kenwood Park) ಬಯಲಿನಲ್ಲಿ ಸಂಗೀತ ವಾದ್ಯ ಗೋಷ್ಠಿಯನ್ನು ನಡೆಸುತ್ತಾರೆ. ಸುಂದರ ನಿನಾದಕ್ಕೆ ಪ್ರಕೃತಿಯ ಪ್ರತಿಧ್ವನಿ ಇಂಬು ಕೊಟ್ಟು ಸಂಗೀತ ಸುಶ್ರಾವ್ಯವಾಗಿರುತ್ತದೆ. ನಿಸರ್ಗದ ಪ್ರತಿಧ್ವನಿ – ಸಹಜಧ್ವನಿ ವಿಜ್ಞಾನದಿಂದ ಕೂಡಿದ್ದು.........

ಈ ಬಿಸಿಲು ದಿನಗಳಲ್ಲಿ ಲಂಡನ್ ನಗರದ ರಸ್ತೆಗಳಲ್ಲೂ ಚಿತ್ರಗಾರರ ಚಿತ್ರ ಪ್ರದರ್ಶನಗಳಿರುತ್ತದೆ–ಪ್ಯಾರಿಸ್‌ನಲ್ಲಿದ್ದಂತೆ.

* * * " * *

ಕ್ಯೂ ಗಾರ್ಡನ್ಸ್‌ನಲ್ಲಿ (Kew Gardens) ಉಷ್ಣ ಗೃಹಗಳಿದ್ದು ಜಗತ್ತಿನ ಯಾವುದೇ ಸಸ್ಯ ಮಾದರಿಯನ್ನು ಬೆಳೆಸಬಹುದು. ಹವಾ, ಶಾಖಮಾನಗಳನ್ನು ಗಿಡಗಳಿಗೆ ಅವಶ್ಯವಿದ್ದಂತೆ ಒದಗಿಸಿಕೊಟ್ಟು ಬೆಳೆಸುತ್ತಾರೆ. ಹೂ-ಹಣ್ಣುಗಳು ಬೆಳೆಯುವ ಸಮಯವಲ್ಲದಿದ್ದರೂ, ಇಲ್ಲಿನ ವಿಜ್ಞಾನಿಗಳು ಅವನ್ನು ತಮ್ಮ ಸಸ್ಯ ಶಾಸ್ತ್ರದ ಮೂಲಕ ಅಕಾಲದಲ್ಲಿ ಕೂಡ ಬೆಳೆಸಬಲ್ಲರು. ಕೃತ್ರಿಮ ಹವಾಗುಣವನ್ನು ಸೃಷ್ಟಿಸಿ, ಬೇಕಾದ ಪದಾರ್ಥಗಳನ್ನು ಬೆಳೆಸಬಲ್ಲ ಮಾನವನ ಮೆದುಳಿನ ಶಕ್ತಿ ಅದ್ಭುತವಾದದ್ದು.

........ಕ್ಯೂ ಗಾರ್ಡನ್ನಿನ ಹಚ್ಚ ಹಸುರಿನ ಮೈದಾನದಲ್ಲಿ ಸ್ವೇಚ್ಛೆಯಾಗಿ ತಿರುಗಾಡಿದೆವು. ಆಕಾಶದಲ್ಲಿ ನಿಮಿಷಕ್ಕೆ ಒಂದು ಎಂಬಂತೆ ವಿಮಾನ ಹಾರುವುದನ್ನು ಕಂಡೆವು. ಅದುವರೆಗೆ ನಾವು ಲಂಡನ್ ವಿಮಾನ ನಿಲ್ದಾಣದಲ್ಲಿ ನಿಮಿಷಕ್ಕೆ ಒಂದು ವಿಮಾನ ಏರುತ್ತದೆ, ಅಥವಾ ಬಂದು ಸೇರುತ್ತದೆ ಎಂಬ ವಾರ್ತೆಯನ್ನು ನಂಬಿಯೇ ಇರಲಿಲ್ಲ.

* * * * * *

........ಹೈಡ್‌ಪಾರ್ಕಿನ ರಮ್ಯ ಸರೋವರದಲ್ಲಿ ಬಿಸಿಲು ದಿನಗಳಲ್ಲಿ ಜಲ ವಿಹಾರದ ಸೌಲಭ್ಯವಿದೆ. ಅಲ್ಲಿನ ದಡದಲ್ಲಿ ಅಂತರರಾಷ್ಟ್ರೀಯ ವಿವಿಧ ಜನತೆಯ ವಿಧವಿಧದ

ಈಜುವ ಉಡುಪುಗಳಲ್ಲಿ – ಹೆಚ್ಚಾಗಿ ಬಿಕಿನಿ (Bikini) ಉಡುಪನ್ನು ಧರಿಸಿ ಬಿಸಿಲು ಕಾಯುವುದನ್ನು ನೋಡುವ ದೃಶ್ಯ ನಮಗೆ ಕಾಲಕಳೆಯಲು ಚೆನ್ನಾಗಿತ್ತು. ಭಾನುವಾರದ ದಿನ ಹಸಿರು ಹುಲ್ಲಿನ ಮೇಲೆ ಲಂಡನ್ ನಗರಕ್ಕೆ ನಗರವೇ ಅಲ್ಲದೆ ಇಡೀ ಜಗತ್ತಿನ ಜನತೆ ಬಂದಂತೆ ಇದ್ದು ಸ್ವಾರಸ್ಯವಾಗಿರುತ್ತದೆ.

ಹೌದು. ಹೈಡ್‌ಪಾರ್ಕ್ ಎಂದಂತೆ ಯಾವತ್ತೂ ಅಲ್ಲಿನ ಭಾನುವಾರದ ಭಾಷಣಕಾರರ ಮೂಲೆಯು (Speakers' Corner) ನೆನಪು ಬರುತ್ತದೆ. ಎಷ್ಟೋಂದು ಭಾನುವಾರಗಳನ್ನು ನಾವು ಈ ಜಾಗದಲ್ಲಿ ಕಳೆದಿಲ್ಲ! ಮರೆಯಲಾಗದ ಸಂದರ್ಭಗಳನ್ನು ಅನುಭವಿಸಿಲ್ಲ! ಪ್ರಜಾಪ್ರಭುತ್ವ ಮತ್ತು ವಾಕ್ ಸ್ವಾತಂತ್ರ್ಯ ಈ ದೇಶದಲ್ಲಿ ಖಂಡಿತ ಇದೆ ಎಂದು ತಿಳಿಯುವ ಅವಕಾಶಗಳನ್ನು ಬೇಕಾದಷ್ಟು ಸಲ ಕಂಡಿದ್ದೇವೆ. ಭಾಷಣಕಾರರು – ಎಲ್ಲಿಂದ ಬಂದರೂ – ಯಾವ ದೇಶದವರಾದರೂ – ಯಾರಾದರೂ ಆಗಲಿ – ಅವರ ಮನಸ್ಸಿಗೆ ಬಂದ ಎಲ್ಲಾ ವಿಷಯಗಳನ್ನೂ, ಅನುಭವಗಳನ್ನೂ, ರಾಜಕೀಯ ತತ್ವಗಳನ್ನೂ, ಅಧ್ಯಾತ್ಮಿಕ ನಿರೂಪಣೆಗಳನ್ನೂ, ಅಭಿಪ್ರಾಯಗಳನ್ನೂ ಸ್ವೇಚ್ಛೆಯಾಗಿ ಒಬ್ಬರ ಹಂಗೂ ಇಲ್ಲದೆ – ಭಯವಿಲ್ಲದೆ, ಸಂಕೋಚವಿಲ್ಲದೆ, ಸ್ಪಷ್ಟವಾಗಿ, ಗಟ್ಟಿಯಾಗಿ, ಜನರಿಗೆ ತಿಳಿಯುವಂತೆ ಗಂಟೆಗಟ್ಟಲೆ ಮಾತನಾಡುತ್ತಾರೆ. ಭಾನುವಾರದ ರಜಾ ದಿನವನ್ನು ಬೇರೆ ವ್ಯಾಪ್ತಿಯಿಲ್ಲದೆ ಕಳೆಯುವ ಜನರು ಈ ಭಾಷಣಕಾರರ ಸುತ್ತ ನೆರೆದು ಅವರ ಭಾಷಣವನ್ನು ಕೇಳುತ್ತಾರೆ — ಒಮ್ಮೊಮ್ಮೆ ಪ್ರಶ್ನಿಸುತ್ತಾರೆ–ಶಂಕಿಸುತ್ತಾರೆ–ದೂರುತ್ತಾರೆ–ಆಪಾದಿಸುತ್ತಾರೆ–ಜಗಳವಾಡುತ್ತಾರೆ– ಹೊಗಳುತ್ತಾರೆ ತೆಗಳುತ್ತಾರೆ–ಗಲಾಟೆ ಮಾಡುತ್ತಾರೆ. UAR Israel ಕದನದ ಸಮಯದಲ್ಲಿ ಆ ವಿಷಯವಾಗಿ ಭಾಷಣ ನಡೆಸುತ್ತಿರುವಾಗ ಹೊಡೆದಾಟವನ್ನೂ ಕಂಡಿದ್ದೇವೆ. ಆಫ್ರಿಕಾ ಮುಂತಾದ ಕಪ್ಪು ರಾಷ್ಟ್ರಗಳ ಜನರು ಎಲ್ಲಾ ಜನತೆಯ ಸಮಾನತೆಗಾಗಿ ಹೋರಾಡಿ ಮಾತನಾಡುತ್ತಾರೆ. ಕಪ್ಪು ಜನರ ದಬ್ಬಾಳಿಕೆ ನಡೆಸಿದುದಕ್ಕಾಗಿ ಕಾದಾಡುತ್ತಾರೆ. ಭಾಷಣ ಮಾಡುವಾಗ ಹಲವೊಮ್ಮೆ ತೂಕ ತಪ್ಪಿ ;ಮಾತನಾಡುವುದೂ ಉಂಟು. ಭಂಡತನವೂ ಕಂಡು ಬರುತ್ತದೆ. ಬ್ರಿಟಿಷ್ ಪ್ರಜೆಗಳನ್ನು ಸಿಕ್ಕಾಪಟ್ಟೆ ತೆಗಳುವುದೂ ಉಂಟು. ಆದರೆ ಬ್ರಿಟಿಷ್ ಜನರು ಅವನ್ನೆಲ್ಲ ಕೇಳಿ ಚಾಚೂ ಮಾತನ್ನೆತ್ತದೆ ಎಲ್ಲವನ್ನೂ ಸ್ಥಿತಪ್ರಜ್ಞತೆಯಿಂದ ಕೇಳುತ್ತ ನಿಂತಿರುವುದು ನಮಗಂತೂ ತುಂಬಾ ಆಶ್ಚರ್ಯದ ವಿಷಯವಾಗಿತ್ತು. ಆದರೆ ಒಮ್ಮೊಮ್ಮೆ ಈ ಬಗ್ಗೆ ಬ್ರಿಟಿಷ್ ಪತ್ರಿಕೆಗಳು "ನಾವು ಇರುವ ದೇಶ ಮತ್ತು ನಮಗಿರುವ ಎಲ್ಲವೂ ನಿಮಗೆ ತೃಪ್ತಿಯಾಗದೆ ಅಹಿತವನ್ನುಂಟು ಮಾಡುತ್ತಿದ್ದರೆ ಯಾವ ಕಾರಣಕ್ಕಾಗಿ ನೀವೆಲ್ಲರೂ ತಂಡ ತಂಡವಾಗಿ ಹೆಚ್ಚಾಗಿ ಬಂದು ನಮ್ಮ ದೇಶಕ್ಕೆ ಬಂದು ನೆಲೆಸುತ್ತಿರುವಿರಿ ?" ಎಂದು ಪ್ರಕಟಿಸುತ್ತವೆ.

ಎಲ್ಲಾ ಹೇಳಿದ ಮೇಲೆ ಈ ಇಂಗ್ಲೆಂಡು – ಅದರಲ್ಲೂ ಲಂಡನ್ ನಗರ ವಾಸಿ

ಸಲು ಅತ್ಯುತ್ತಮವಾದ ಸ್ಥಳ. ಎಲ್ಲ ರಾಷ್ಟ್ರದ ಜನರನ್ನೂ ಸ್ವಾಗತಿಸಿ "Live and Let Live" ಮನೋಭಾವದಿಂದ ಇರಲು ತುಂಬಾ ಅನುಕೂಲವಾದ ವಾತಾವರಣ ವಿರುವ ಮಹಾ ನಗರ........ಈ ಪ್ರಿಯವಾದ ನಗರ.

* * * * * "

ಒಮ್ಮೆ ನಾವು ಹೈಡ್ ಪಾರ್ಕಿನಲ್ಲಿ (Hyde Park) ಸಂಚರಿಸುತ್ತಿರುವಾಗ ಒಬ್ಬ ಐರಿಷ್ (Irish) ಮನುಷ್ಯನು ನಾವಿದ್ದಲ್ಲಿ ಧಾವಿಸಿ ಬಂದು ಪ್ರಶ್ನೆಗಳ ಸುರಿಮಳೆಯನ್ನೇ ಕರೆದನು.

"........ಇಂದಿರಾ ಗಾಂಧಿಯವರು ನಿಮ್ಮ ದೇಶವನ್ನು ಕಾಪಾಡಿ ಮೊದಲ ಸ್ಥಿತಿಗೆ ತರಬಲ್ಲಳೇ ?........ಪುನಃ ನಿಮ್ಮ ಆ ಗತ ವೈಭವವನ್ನು, ಶ್ರೀಮಂತಿಕೆಯನ್ನು ತಂದು ಕೊಡಬಲ್ಲಳೇ ?........ಮಿತಸಂತಾನ ಯೋಜನೆಗೆ ಯಾವ ಕಾರ್ಯಕಾರಿ ಏರ್ಪಾಡುಗಳಾಗಿವೆ?........ಯಾವ ಕಾರಣಕ್ಕಾಗಿ ಭಾರತೀಯರು ಈ ದೇಶಕ್ಕೆ ಬರುತ್ತಿದ್ದಾರೆ? ....ಏತಕ್ಕಾಗಿ ಇಲ್ಲಿ ಬಂದು ಹಣ ಸಂಗ್ರಹಿಸಿ ಇಲ್ಲೇ ನೆಲಸುತ್ತಾರೆ?........ಪುನಃ ತಮ್ಮ ಸ್ವದೇಶಕ್ಕೆ ಹಿಂತಿರುಗಿ ಹೋಗುವ ಯೋಚನೆ ಅವರಿಗೆ ಏಕೆ ಇರುವುದಿಲ್ಲ?.... ನೀವು ಏತಕ್ಕೆ ನಿಮ್ಮ ದೇಶಕ್ಕೆ ಹಿಂತಿರುಗಿ ಅಲ್ಲಿನ ಸ್ಥಿತಿಗತಿಗಳನ್ನು ಸುಧಾರಿಸುವ ಪ್ರಯತ್ನ ಮಾಡುವುದಿಲ್ಲ? ...... ಭಾರತ ಅತಿ ಸುಂದರವಾದ ದೇಶ........ನಾನು ಕಾಶ್ಮೀರದಿಂದ ಬೆಂಗಳೂರಿನವರೆಗೆ ಪ್ರಯಾಣ ಮಾಡಿದ್ದ ಕಾರಣ ನಿಮ್ಮ ದೇಶ ನನಗೆ ಪ್ರಿಯವಾದ ದೇಶವಾಯಿತು. ಪಾಕೀಸ್ತಾನಿಯರೂ, ನೀವೂ ಏತಕ್ಕೆ ಒಂದಾಗುವುದಿಲ್ಲ?........ನಿಮಗೆಲ್ಲಾ ಏತಕ್ಕೆ ಪರದೇಶದ ಆಕರ್ಷಣೆ ಇದೆ? ನಿಮಗೆ ಇಲ್ಲಿ ಏನು ವಿಶೇಷ ಕಾಣುತ್ತಿದೆ?........" ಎಂಬುದಾಗಿ ಒಂದೇ ಸಮನಾಗಿ ಮಾತನಾಡಿ, ಅಲ್ಲಿ ಸುಖವನ್ನು ಅರಸಿ ತೊಳಲಾಡುತ್ತಾ ಅಲೆಯುತ್ತಿದ್ದ ಜನರತ್ತ ಕೈಬೊಟ್ಟು ಮಾಡಿ ತೋರಿಸಿ—"ಇಲ್ಲಿ ನೋಡಿ........ಇದು ನಾಗರೀಕತೆ ಅಲ್ಲ! ಇದು ಕೇವಲ ಪಾಶವೀ ಜೀವನ! ಇದು ಜೀವನವೇ ಅಲ್ಲ! ಜೀವನದ ನೆರಳು ಅಷ್ಟು ಮಾತ್ರ........ನಿಮ್ಮ ಭಾರತ ದೇಶ ಅದ್ಭುತವಾದದ್ದು......ಈ ದೇಶವನ್ನು ಬಿಟ್ಟು ನಿಮ್ಮ ದೇಶಕ್ಕೆ ಮರಳಿ ಹೋಗಿ!" ಎಂದು ವಾದಿಸಿದರು. ಇಲ್ಲಿನ ಕೆಲವರಿಗೆ ನಮ್ಮ ದೇಶದ ವಿಷಯವಾಗಿ ಎಷ್ಟು ಅಭಿಮಾನವಿದೆ! ಆ ಐರಿಶ್ (Irish) ಮನುಷ್ಯನೊಡನೆ ನಾವು ವಿಚಾರ ಯುಕ್ತವಾದ ಮಾತುಕತೆಗಳನ್ನಾಡಿ ಕಾಲ ।ಕಳೆದೆವು. ಸೀರೆಯನ್ನುಟ್ಟುಕೊಂಡ ನನ್ನನ್ನು ನೋಡಿ ಧಾವಿಸಿ ಬಂದ ಆತ ಒಬ್ಬ ಪತ್ರಿಕೋದ್ಯೋಗಿಯಂತೆ........ಕೊನೆಗೆ ತಿಳಿಯಿತು !.. ....

* * * * * *

ಲಂಡನ್ ! ಶಾಂತವಾಗಿ ಹರಿಯುವ ಥೇಮ್ಸ್ ನದಿ–ದಡದಲ್ಲಿನ ಜೀವನ–ನಾವು ಒಂದಾನೊಂದು ದಿನ ಬಿಡುವಾಗಿ – ಆರಾಮವಾಗಿ ಆ ನದಿಯ ಕರೆಯಲ್ಲಿ ವಿಶ್ರಾಂತಿ ಪಡೆದುದು – ಬಯಲು ರಂಗಮಂದಿರ ಒಂದರಲ್ಲಿ ಉಚಿತ ಸಂಗೀತವನ್ನು ಕೇಳಿದುದು ಅಲ್ಲಿನ ಕ್ಲಿಯೋಪಾಟ್ರಾ ನೀಡ್ಲ್ (Cleopatra's Needle) ದೂರಕ್ಕೆ ಕಾಣುತ್ತಿರುವ ರಾಯಲ್ ಫೆಸ್ಟಿವಲ್ ಹಾಲ್ (Royal Festival Hall) ಟವರ್ ಆಫ್ ಬ್ರಿಡ್ಜ್ (Tower of Bridge) ಎಲ್ಲವನ್ನೂ ನೋಡಿದುದು ಅವೆಲ್ಲವೂ ಜ್ಞಾಪಕಕ್ಕೆ ಆಗಾಗ್ಗೆ ಬರುತ್ತಿದೆ. ಲಂಡನ್ ಎಂದರೆ ಸಾಮಾನ್ಯವಾಗಿ ಇದೇ ಚಿತ್ರ ಕಣ್ಣಿಗೆ ಕಟ್ಟುತ್ತದೆಯಲ್ಲವೇ ? ಭಾರತದಲ್ಲಿ ಗೋಲ್ಡ್ ಮೊಹರ್ ಅಥವಾ ಫ್ಲೇಮ್ ಆಫ್ ದಿ ಫಾರೆಸ್ಟ್ ಮರಗಳು ಪ್ರಕೃತಿಗೆ ಸೌಂದರ್ಯ ನೀಡುವಂತೆ ಇಲ್ಲಿ ಈಗ ಎಲ್ಲ ಮರಗಳೂ ಪುಷ್ಪಭರಿತವಾಗಿ ರಂಗುರಂಗುಗಳಿಂದ ಕಣ್ಣಿಗೆ ಆನಂದ ಕೊಡುತ್ತಿವೆ. ಟ್ರಫಲ್‌ಗರ್ ಸ್ಕ್ವೇರ್ (Trafalgar Square), ಬಿಗ್‌ಬೆನ್ (Big Ben) ನೋಡಲು ಸುತ್ತಾಡುತ್ತಿರುವಾಗ ರಸ್ತೆಗಳಲ್ಲಿ ಪಿಂಕ್ ಚೆರಿ ಬ್ಲಾಸಮ್ಸ್ (Pink Cherry Blossoms) ಸೇಬಿನ ಹೂಗಳು, ಕಾಪರ್ ಬೀಚ್ ಮರಗಳು (Copper Beech) ಇತ್ಯಾದಿ ವಿವಿಧ ಪುಷ್ಪಭರಿತ ಬಣ್ಣಬಣ್ಣದ ಮರಗಳು ರಸ್ತೆಗಳನ್ನು ಅಲಂಕರಿಸುತ್ತವೆ........

* * * * * *

ಒಂದು ದಿನ ನಾವು ಒಬ್ಬ ಅಪ್ಪಟ ಬ್ರಿಟಿಷ್ (British) ಯುವಕನನ್ನು ಭೇಟಿಯಾದೆವು. ಆತನು ಎಂದೂ ಭಾರತಕ್ಕೆ ಬಂದಿಲ್ಲ. ಆದರೂ ಭಾರತದ ವಿಷಯವಾಗಿ ತೆಗಳು ಮಾತುಗಳನ್ನು ಆಡಲು ಆರಂಭಿಸಿದ ! ನಮ್ಮ ದೇಶದ ನಾಗರೀಕತೆಯ ಅಭಿವೃದ್ಧಿ ಯೋಜನೆಗಳನ್ನು ಒಂದೂ ಒಪ್ಪಲಿಲ್ಲ ! ನಮ್ಮ ದೇಶವನ್ನು ಅಸಡ್ಡೆಯಿಂದ ತುಚ್ಛ ದೃಷ್ಟಿಯಿಂದ ಕಂಡು ಮಾತನಾಡಿದ – "ಜನರನ್ನು ಹಸಿವಿನಿಂದ ಸಾಯಿಸುವ ನಿಮ್ಮ ದೇಶ ಎಂತಹ ಕ್ರೂರ ದೇಶ !" ಎಂಬುದಾಗಿ ಹೇಳಿದ. "ನೀವು ಏತಕ್ಕೆ ನಿಮ್ಮ ಆಹಾರ ಕ್ರಮಗಳನ್ನು ಬದಲಾಯಿಸುವುದಿಲ್ಲ ? ಸಸ್ಯಾಹಾರಿಗಳೆಂದೆನಿಸಿ ಉಪವಾಸ ಬೀಳಬೇಕೆ ? ಆರೋಗ್ಯ ಕೆಡಿಸಿಕೊಳ್ಳಬೇಕೆ ? ಯಾವ ಗುರಿಯೂ ಇಲ್ಲದೆ, ದಾರಿಯಲ್ಲೆಲ್ಲ ಅಲೆದಾಡುವ ನಿರ್ಗತಿಕ ಹಸುಗಳನ್ನಾದರೂ ಕೊಂದು ನೀವು ನಿಮ್ಮ ಹಸಿದ ಜನರನ್ನು ಸಾಕಬಾರದೇ ? ಹಸುಗಳನ್ನು ಸಾಕುವುದಿಲ್ಲ – ಪೂಜಿಸುವಿರಿ ! ಮಾನವ ಜನ್ಮ ದೊಡ್ಡದು, ಶ್ರೇಷ್ಠವಾದುದು ಎಂದು ತಿಳಿಯದೆ ಇರುವ ದೇಶ ದೇಶವೇ ಅಲ್ಲ... ನಮ್ಮನ್ನು ನೋಡಿ ! ನಾವು ಜಗತ್ತಿನಲ್ಲೇ ಅತ್ಯುತ್ತಮ ಜನತೆ ! ನಾಗರೀಕ ಜನತೆ!!" ಎಂದು ಬಡಾಯಿ ಕೊಚ್ಚಿಕೊಂಡನು. ಅವನಿಗೂ ನಮಗೂ ಅಸಾಧ್ಯವಾದ ವಾಗ್ವಾದ ಆರಂಭವಾಯಿತು. ಭಾರತದೇಶವನ್ನು ಸಂದರ್ಶಿಸಿ, ಅಲ್ಲಿನ ಸಂಸ್ಕೃತಿ, ನಂಬಿಕೆಗಳು, ಸತ್ಯಾಂಶಗಳು, ಭಾವನಾಸರಣಿಗಳು-ಇವುಗಳನ್ನು ತಿಳಿಯದ ಹೊರತು, ಯಾವ ಹೊರ

ದೇಶದವನಿಗೂ ಅದನ್ನು ತೆಗಳಲು ಹಕ್ಕಿಲ್ಲ!" ಎಂದೆವು. "ಅದ್ಭುತ - ಅತ್ಯುತ್ತಮ ಜನತೆ" ಎಂದೆನಿಸಿಕೊಳ್ಳುವ ಪರದೇಶದ ಜನರು ನಮ್ಮ ದೇಶಕ್ಕೆ ಬಂದೊಡನೆಯೇ ಕಾಯಿಲೆ ಬೀಳುವರು! ನಮ್ಮ ದೇಶದ ಬಿಸಿಲು ಆಗುವುದಿಲ್ಲ – ನೀರು ಸೇರುವುದಿಲ್ಲ. ಊಟ ರುಚಿಸುವುದಿಲ್ಲ. ಅಲ್ಲದೆ ಸಣ್ಣಪುಟ್ಟ ಕಾಯಿಲೆಗಳನ್ನು ಎದುರಿಸುವ ಶಕ್ತಿಯೂ ಇರುವುದಿಲ್ಲ. ಭಾರತೀಯರು ಎಲ್ಲಿ ಹೋದರೂ ವಾತಾವರಣಕ್ಕೆ ಹೊಂದಿಕೊಂಡು ಜೀವಿಸಬಲ್ಲ ಜನತೆ........ಈ ವಿಷಯವಾಗಿ ಸಂಜೆಯೆಲ್ಲ ಮಾತನಾಡುತ್ತಾ–ಕೊನೆಗೆ ನಮ್ಮಲ್ಲಿನ ಮದುವೆ–ಪ್ರೇಮಗಳನ್ನು ಚರ್ಚಿಸಿದೆವು. ನಮ್ಮಲ್ಲಿ ಹೆಚ್ಚಾಗಿ ಮೊದಲು ಮದುವೆ–ಆಮೇಲೆ ಪ್ರೇಮ ಎಂದು ಅವರಿಗೆ ಆಶ್ಚರ್ಯ. ಹೆಚ್ಚಾಗಿ ಗಂಡು–ಹೆಣ್ಣಿಗೆ ಮದುವೆ ಮುಂಚೆ ಭೇಟಿ ಕೂಡ ಆಗುವುದಿಲ್ಲ ಎಂಬ ಮಾತನ್ನು ನಂಬಲಿಲ್ಲ..."ಪ್ರೇಮ ವಿಲ್ಲದೆ ಮದುವೆ ಹೇಗೆ ಸಾಧ್ಯ" ಎಂದರು- "ಪಾಶ್ಚಾತ್ಯದಲ್ಲಿ ಪ್ರೇಮ ವಿವಾಹಗಳೇ ಇದ್ದು ನೂರಕ್ಕೆ 25 ರಷ್ಟು ದಂಪತಿಗಳು ವಿವಾಹ ವಿಚ್ಛೇದಿತರಾಗುವುದು ಸಾಮಾನ್ಯ ವಿಷಯ....ಅದು ಹೇಗೆ?" ಎಂದು ನಾವು ಕೇಳಿದೆವು. ಅಂತೂ ಸಂಭಾಷಣೆಯ ಕೊನೆಗೆ ಆತನಿಗೆ ನಮ್ಮ ಭಾರತದಲ್ಲಿನ ತುಂಬಾ ವಿಷಯಗಳು ತಿಳಿದಂತಾಯಿತು... ಅವನೊಬ್ಬ ವೃತ್ತಿ ನಟನಂತೆ....ಷೇಕ್ಸ್‌ಪಿಯರ್ ಕಂಪೆನಿಯೊಂದರಲ್ಲಿ. ನಮ್ಮನ್ನು ಬೀಳ್ಕೊಡುವ ಸಮಯದಲ್ಲಿ ಆತನ ಧ್ವನಿ ಕೃತಜ್ಞತೆಯ ಭಾರದಿಂದ ತುಂಬಿಬಂದಿತ್ತು. ಭಾರತದ ನಿಜ ಸ್ವರೂಪವನ್ನು ತಿಳಿಯದ ಇಂತಹ ಜನರ ಆಹ್ವಾನ ತುಂಬಾ ವಿಷಾದ ಕರವಾಗಿದೆ. ಇವರು ಏತಕ್ಕಾಗಿ ಜಂಬ ಕೊಚ್ಚಿಕೊಳ್ಳುತ್ತಾರೋ ತಿಳಿಯದು! ಇಂದು ಇದೇ ಅತಿಮಾನವರು ಇಲ್ಲಿ ನೆಲಸಿರುವ ಸಾವಿರಾರು ಕಪ್ಪುಜನರ ಆಡಳಿತಕ್ಕೆ ಹೆದರುತ್ತಾರೆ! ಬ್ರಿಟಿಷ್ ಜನರು ಭಾರತ ಬಿಟ್ಟು ಹೋಗುವ ಸಮಯ ಒಂದು ಆಂಗ್ಲೋ–ಇಂಡಿಯನ್ (Anglo-Indian) ಎಂಬ ಹೊಸ ಜನಾಂಗವನ್ನೇ ಸೃಜಿಸಿ ಹೋದರು. ಈಗ ಇಂಗ್ಲೆಂಡ್‌ನಲ್ಲಿ ಹೆಚ್ಚಾಗಿ ಅಪ್ಪಟ ಕಪ್ಪು ಜನಾಂಗ ಆವರಿಸು ವಂತಿದೆ ಎಂದು ಹಲವಾರು ಜನರು ಅಭಿಪ್ರಾಯಪಡುವುದು ತಪ್ಪಲ್ಲ.........

* * * * * *

ಇಲ್ಲಿ ರಜಾ ಪ್ರವಾಸಕ್ಕೆ ಹೋಗುವುದು ನಾಗರೀಕತೆಯ ಒಂದು ಕುರುಹು. ಪ್ರತಿಯೊಬ್ಬ ವ್ಯಕ್ತಿ ಎಲ್ಲಿಯಾದರೂ ರಜಾ ಪ್ರವಾಸ ಮಾಡಲೇ ಬೇಕು. ಇಲ್ಲದಿದ್ದರೆ ಅವನು ಸಮಾಜದ ದೃಷ್ಟಿಯಲ್ಲಿ ಅಯೋಗ್ಯನೆಂದೆನಿಸಿಕೊಳ್ಳುತ್ತಾನೆ........ಈ ರಜಾ ಪ್ರವಾಸವೆಂದರೇನು?........ಒಂದು ಸಂಸಾರ ತಮ್ಮ ಮನೆಯನ್ನು ಬಿಟ್ಟು ಬೇರೊಂದು ಊರಿಗೋ, ಸಮುದ್ರ ದಂಡೆಗೋ ಹೆಂಡತಿ ಮಕ್ಕಳೊಂದಿಗೆ ಹೋಗಿ ಅಲ್ಲೊಂದು ಮನೆ ಹೂಡುತ್ತಾರೆ. ತಾವು ಗಂಟು ಕಟ್ಟುವ ಸಮಯದಲ್ಲಿ ಅದರೊಂದಿಗೇ ತಮ್ಮ ಮನೆಯ ಹಲವಾರು ಸಮಸ್ಯೆಗಳನ್ನೂ, ಕುಟುಂಬದಲ್ಲಿನ ವೈಮನಸ್ಯಗಳನ್ನೂ, ದಿನ ನಿತ್ಯದ ಕೆಲಸದ ತಲೆಭಾರವನ್ನೂ ತೆಗೆದುಕೊಂಡು ಹೋಗುತ್ತಾರೆ. ಇದರಿಂದ ರಜಾ

ಪ್ರವಾಸದ ಉಪಯೋಗವಾದರೂ ಏನೊ........ದೇವರೇ ಬಲ್ಲ! ಅಂದರೆ ಎಲ್ಲರೂ ಒಟ್ಟು ಗೂಡಲು ಒಂದು ಅವಕಾಶ ಕಲ್ಪಿಸುವ ಪ್ರಯತ್ನವಿರಬಹುದು. ರಜೆಯಿಲ್ಲ ದಿದ್ದರೆ, ಒಬ್ಬೊಬ್ಬರು ಒಂದೊಂದು ದಿಕ್ಕಿಗಿದ್ದು ಎಲ್ಲರೂ ಒಮ್ಮೆಯಾದರೂ ಒಂದೆಡೆ ಕೂಡಿ ಆಡುವ ಪ್ರಸಂಗವೇ ಇರುವುದಿಲ್ಲ.

ನಮ್ಮಲ್ಲಿನ ರಜಾ ಪ್ರವಾಸದಲ್ಲಿ ಒಬ್ಬರು ಇನ್ನೊಬ್ಬ ನೆಂಟರಲ್ಲಿ ನೆಲೆಸುವ ರೂಢಿ. ನೆಂಟರಿಷ್ಟರಲ್ಲಿರುವ ಬಾಂಧವ್ಯ ಈ ರೀತಿಯಲ್ಲಿ ಹೆಚ್ಚಾಗುತ್ತದೆ. ನಮ್ಮ ತಂದೆತಾಯಿ ಯರ ಕಾಲದಲ್ಲಿ ಬಂಧು ಜನರು ಬರುವ ಸಮಯ ಸಂಭ್ರಮದ ಸಂದರ್ಭ! ಎಂತಹ ಉತ್ಸಾಹ........ಪ್ರೇಮ ಆನಂದದ ಸ್ವಾಗತ! ಅವರಿರುವ ಅವಧಿಯಲ್ಲಿ ಅವರಿಂದ ಯಾವ ಕೆಲಸವನ್ನೂ ಮಾಡಿಸದೆ ಅವರು ಬಯಸಿದುದನ್ನೆಲ್ಲಾ ಉಣಬಡಿಸಿ, ಊರಲ್ಲಿನ ಪ್ರೇಕ್ಷಣೀಯ ಸ್ಥಳಗಳನ್ನೆಲ್ಲಾ ತೋರಿಸಿ, ಆದರ ಸತ್ಕಾರದಿಂದ ಆತಿಥ್ಯ ಮಾಡುವ ಪದ್ಧತಿ ಇತ್ತು. ಆದರೆ ಈಗ ಆಧುನಿಕ ಜೀವನ ಸಂಗ್ರಾಮದಲ್ಲಿ ಅತಿಥೇಯರಿಗೆ ಅನಾನುಕೂಲತೆಗಳಿದ್ದರೂ ಬಾಂಧವ್ಯ ಪ್ರೇಮದ ಭರದಲ್ಲಿ ಅದನ್ನು ಉಪೇಕ್ಷಿಸಿ ಸಂತೋಷದಿಂದ ಒಂದುಗೂಡಿ ಕಾಲಕಳೆಯುವುದನ್ನು ಕಂಡರೆ ಪಾಶ್ಚಾತ್ಯರು ನಮ್ಮ ಜೀವನ ಕ್ರಮ ಎಷ್ಟು ಕೆಳಗೆ ಇಳಿದಿದೆ ಎಂಬುದಾಗಿ ಅಭಿಪ್ರಾಯ ಪಡುತ್ತಾರೆ. ಬಂಧು ಬಳಗದವರೊಡನೆ ಹರಟೆ ಹೊಡೆಯುವ ಸ್ವಾರಸ್ಯ ಜೀವನದಲ್ಲಿ ದಿನನಿತ್ಯದ ಅನಾನು ಕೂಲತೆಗಳ ಪರಿವೆ ಕಂಡುಬರುವುದಿಲ್ಲ. ಆದರೆ ಈಗೀಗ ನಮ್ಮಲ್ಲೂ ಈ ಜೀವನಕ್ರಮ ಬದಲಾಗುತ್ತಿರುವುದು ಚಿಂತಾಜನಕವಾಗಿದೆ. ನೆಂಟರಿಷ್ಟರು ಒಬ್ಬರಮನೆಗೊಬ್ಬರು ಹೋಗುವುದು ತೀರಾ ಕಡಿಮೆಯಾಗಿದೆ. ರಜಾ ಪ್ರವಾಸ ಕೈಗೊಳ್ಳುವುದೂ ಬಹು ಮಟ್ಟಿಗೆ ಕಡಿಮೆಯಾಗಿದೆ. ಸಾಮಾಜಿಕ ಜೀವನ ಬದಲಾಗುತ್ತಿದೆ. ಆರ್ಥಿಕ ಸ್ಥಿತಿ ಆಂತರಿಕವಾಗಿ ಹದಗೆಟ್ಟಿದೆ. ಜನರಲ್ಲಿಯೂ ಆರೋಗ್ಯ ಶಕ್ತಿಗಳು ಕುಂದು ತ್ತಿವೆಯೆನಿಸುತ್ತದೆ. ವಾಸಿಸುವ ಮನೆಗಳೂ ಅನಾನುಕೂಲವಾಗಿದೆ....ಇದಕ್ಕೆ ಕಾರಣ ಗಳು ?....ಹಲವಾರು !....ಹಲವಾರು ! !

* * * * * *

........ಬೇಸಿಗೆಯ ದಿನಗಳಲ್ಲಿ ಲಂಡನ್‌ನಿಂದ ಅನೇಕಾನೇಕ ಕ್ಯಾರ್‌ವಾನ್ ಗಳು (Caravan) ನಗರವನ್ನು ಬಿಟ್ಟು ಹೊರಪ್ರದೇಶಕ್ಕೆ ಹೋಗಿ ಜನಸಂದಣಿ ಇಲ್ಲದ ಸ್ಥಳಗಳಿಗೆ ಪ್ರಯಾಣ ಮಾಡುತ್ತವೆ. ಬಿಡುವು ಇರುವ ಈ ಶ್ರೀಮಂತರಿಗೆ ಯಾವ ಪ್ರದೇಶವೂ ದೂರವಿಲ್ಲ! ತಮ್ಮ ಮನೆಯನ್ನೇ ಈ ವಾಹನಗಳಲ್ಲಿ ತುಂಬಿ, ತಾವು ನಿಶ್ಚಯಿಸಿದ, ಆರಿಸಿದ ಜಾಗದಲ್ಲಿ ಬೀಡು ಬಿಡುತ್ತಾರೆ. ಈ ವಾಹನಗಳಲ್ಲಿ ಅಡಿಗೆ ಮನೆ, ಮಲಗುವ ಮನೆ, ನೀರಿನ ವಿದ್ಯುಚ್ಛಕ್ತಿಯ ವ್ಯವಸ್ಥೆ, ಬೇಕಾದ ಪೀಠೋಪಕರಣ ಗಳು, ಎಲ್ಲವೂ ಇದ್ದು ಮನೆಯಂತೆಯೇ ಆರಾಮವಾಗಿ, ಅನುಕೂಲವಾಗಿರುತ್ತದೆ. ಸಾಮಾನ್ಯವಾಗಿ ಸರೋವರ ಅಥವಾ ಮೀನು ಹಿಡಿಯಬಹುದಾದ ಹೊಳೆಗಳ ದಡದಲ್ಲಿ

ಇಂತಹ ವಾಹನಗಳನ್ನು ತಂಡತಂಡವಾಗಿ ಕಾಣುತ್ತೇವೆ. ನಿರಾತಂಕವಾಗಿ ಕಾಲ ಕಳೆದು, ನಿಸರ್ಗಶ್ರೀಯ ಚೆಲುವನ್ನು ಮನಸಾರೆ ಸವಿದು, ಹಿತಕಾರಿ ಗಾಳಿಯ ಸೇವನೆ ಮಾಡಿ, ಲಂಡನ್ ನಗರದ ದೋಷಗಳಿಂದ ಪರಿಹಾರ ಪಡೆದು, ಹೊಸಜೀವ ಪಡೆದು ಹಿಂತಿರುಗುತ್ತಾರೆ........

........ಇಲ್ಲಿನ ಭೂಪ್ರದೇಶದ ದೃಶ್ಯಗಳು ಬೇರೆ ವಿಧವಾಗಿರುತ್ತದೆ. ಭಾರತದಲ್ಲಿ ನಾವು ಪ್ರಯಾಣ ಮಾಡುತ್ತಿರುವಾಗ ಅಕ್ಕಿ, ಜೋಳ, ರಾಗಿಯ ಹೊಲ-ಗದ್ದೆಗಳನ್ನೂ ಮಾವಿನ ತೋಪು, ಅಡಿಕೆ ತೋಟಗಳನ್ನೂ ಕಾಣುತ್ತೇವೆ. ಈ ದೇಶಗಳಲ್ಲಿ ಮಾಂಸಾ ಹಾರಿ ಜನರಿಗೆಂದು ತೋಟಗಳಲ್ಲಿ ಪ್ರಾಣಿಗಳನ್ನು ಸಾಕುತ್ತಾರೆ. ಹಂದಿ, ಕೋಳಿ, ಕುರಿ ಇತ್ಯಾದಿ........ತಿನ್ನಲು ಹಸುಗಳು ಬೇರೆ, ಹಾಲು ಕರೆಯುವ ಹಸುಗಳು ಬೇರೆ. ಜೂಜಿಗೆ ಕುದುರೆಗಳು ಬೇರೆ....ವ್ಯವಸಾಯಕ್ಕೆ ಕುದುರೆಗಳು ಬೇರೆ. ಈ ರೀತಿಯಾಗಿ ವಿಧವಿಧವಾಗಿ ಸಾಕುತ್ತಾರೆ. ಜೊತೆಗೆ ತರಕಾರಿ ತೋಟಗಳನ್ನು ಬೆಳೆಸುತ್ತಾರೆ. ದೊಡ್ಡ ದೊಡ್ಡ ಗುಡ್ಡ ಪ್ರದೇಶಗಳಲ್ಲಿ ಗಾಲ್ಫ್ (Golf) ಆಟದ ಮೈದಾನಗಳೂ, ಬಯಲಿನಲ್ಲಿ ರಗ್ಬಿ, ಸಕ್ಕರ್, ಕ್ರಿಕೆಟ್ (Rugby, Soccer, Cricket) ಆಟಕ್ಕೆ ಏರ್ಪಾಡು ಇದೆ. ಅಮಿತ ಜನಸಂಖ್ಯೆಯಾದರೂ ಬೇಕಾದಷ್ಟು ಬಯಲು ಪ್ರದೇಶ ವನ್ನು ಕಾಣುತ್ತಿರುವುದು ಸಂತಸದ ಸಂಗತಿ. ಮಕ್ಕಳು ಆಟವಾಡಲು ಬಯಲು ಮೈದಾನಗಳಿಗೆ ಕೊರತೆ ಇಲ್ಲ. ನಮ್ಮ ಭಾರತದ ನಗರಗಳಲ್ಲಿ ಜನಸಂದಣಿ ಹೆಚ್ಚಾಗಿ ಮಕ್ಕಳು ಆಟವಾಡಲು ಜಾಗವೇ ಇಲ್ಲದೆ, ಅವರು ಆಟವಾಡಲು ಮರೆತಿರುವ ಹಾಗಿದೆ. ನಿಸರ್ಗ ಸೌಂದರ್ಯವೆಂದರೇನೆಂಬುದು ಕೂಡ ಅವರ ಪಾಲಿಗೆ ಕೆಲವೊಮ್ಮೆ ಪುಸ್ತಕಗಳಿಗಷ್ಟೇ ಮಿತಿಗೊಂಡಿರುವುದು ತುಂಬಾ ಬೇಸರದ ವಿಷಯ.

* * * * * *

ಇಲ್ಲಿ ಕೆಲವು ವಿಷಯಗಳಿಗೆ ಎಷ್ಟು ಪ್ರಾಮಾಣಿಕತನವಿದೆ! ವಾಹನಗಳು ತುಂಬಾ ಹಾಲಿನ ಸೀಸೆಗಳು, ಪೊಟ್ಟಣಗಳನ್ನು ತುಂಬಿಸಿಕೊಂಡು ನಿಂತಿರುತ್ತವೆ. ಒಬ್ಬರು ಒಂದು ಸೀಸೆ ಕುಡಿಯುವುದಿಲ್ಲ....ಒಂದು ಪೊಟ್ಟಣಗೆ ಕೈ ಹಾಕುವುದಿಲ್ಲ! ಮನೆಗಳ ಮುಂದೆ ನಿಂತು ಅವರು ಮನೆಗೆ ಬೇಕಾದಷ್ಟು ಹಾಲಿನ ಸೀಸೆಗಳನ್ನೂ ಪೊಟ್ಟಣಗಳನ್ನೂ ಇಟ್ಟು, ಮುಂದಕ್ಕೆ ಹೋಗುತ್ತಾರೆ. ಮನೆಯವರು ನಂತರ ತಮ್ಮ ಅವಕಾಶ ನೋಡಿ, ಸಾವಧಾನವಾಗಿ ಬಾಗಿಲು ತೆಗೆದು ಅವನ್ನು ಒಳಗೆ ತೆಗೆದುಕೊಂಡು ಹೋಗುತ್ತಾರೆ! ಅಲ್ಲಿಯವರೆಗೆ ಯಾವ ದಾರಿಗನೂ ಅದನ್ನು ಮುಟ್ಟುವುದಿಲ್ಲ. ಕದಿಯುವುದಕ್ಕೆ ಮನುಷ್ಯ ನಿಗೆ ಅವಶ್ಯಕತೆಗಳ ಅಭಾವವಿದ್ದರೆ ತಾನೇ. ವ್ಯಾಪಾರದಲ್ಲಿ ಪ್ರಾಮಾಣಿಕತನ ಇಲ್ಲಿ ಸಾಮಾನ್ಯವಾದ ಗುಣ. ಚಿಕ್ಕ ಚಿಕ್ಕ ವಿಷಯಗಳತ್ತ ಜನರ ಮನಸ್ಸು ಹೋಗುವು ದಿಲ್ಲ. ಆಹಾರಕ್ಕೆ ಮತ್ತು ಜೀವನದ ಸಣ್ಣ ಸೌಕರ್ಯಗಳಿಗೆ ಕಡಿಮೆ ಇಲ್ಲ. ಆದರೆ

ಮಾನಸಿಕ ಬಡತನ–ಧಾರ್ಮಿಕ ಬಡತನ–ಜೀವನದ ಉನ್ನತ ಧ್ಯೇಯಗಳ ಬಡತನವಿರುವಂತೆ ತೋರುತ್ತದೆ. ಲೌಕಿಕ ವಿಷಯಗಳ ಭದ್ರತೆಯನ್ನು ಜನರು ಪರಮಾವಧಿಗೆ ಅಭಿವೃದ್ಧಿಸಿದ್ದಾರೆ. ಕೋಳಿಗಳು ಶಕ್ತಿಮೀರಿ ಮೊಟ್ಟೆಗಳನ್ನು ಇಡುವಂತೆ ಮಾಡುತ್ತಾರೆ. ಕೋಳಿ ಸಾಕಣೆ ಕೇಂದ್ರಗಳಲ್ಲಿ ಮೊಟ್ಟೆ ಇಡುವ ಕೋಳಿಗಳಿಗೆ ವಿಶಿಷ್ಟ ಆಹಾರವನ್ನು ಕೊಟ್ಟು ಎಷ್ಟು ಸಾಧ್ಯವೋ ಅಷ್ಟು ಮೊಟ್ಟೆಗಳನ್ನಿಡುವಂತೆ ಸಾಕುತ್ತಾರೆ. ಈ ಕೋಳಿಗಳು ಒಂದು ವರ್ಷ ಅಜ್ಞಾತವಾಸ ಮಾಡಿ, ಚಿತ್ರಹಿಂಸೆ ಅನುಭವಿಸಿ, ಕೊಡುವಷ್ಟು ಮೊಟ್ಟೆಗಳನ್ನು ಕೊಟ್ಟು ಆದ ನಂತರ – ಕು. ವೆಂ. ಪು. ರವರ "ನಿನ್ನ ಕೈಲಿಹ ಖೈದಿ ನಾನು" ಎಂಬಂತೆ ಅವು ಇನ್ನು ಲಾಯಕ್ಕಿಲ್ಲ ಎಂದು ಸಾಕುವವರು ಅವನ್ನು ಕೊಂದು, ತಿನ್ನಲು ಉಪಯೋಗಿಸುತ್ತಾರೆ. ಕೋಳಿ ಮರಿಗಳಿಗೆ ಹಲವು ವಿಧದ ಅಂತಃಸ್ರಾವಕಗಳನ್ನು (Hormones) ಸೂಜಿ ಚುಚ್ಚಿ, ಅವು ಕಾಲಕ್ಕೆ ಮುಂಚೆಯೇ ಮೊಟ್ಟೆಗಳನ್ನಿಡುವಂತೆ ಪ್ರೇರೇಪಿಸುತ್ತಾರೆ. ಮೃಗಗಳಿಗೆ ಒಳ್ಳೆಯ ಆಹಾರ ಪದಾರ್ಥಗಳನ್ನು ಹಾಕಿ ದಿನೇ ದಿನೇ ದಪ್ಪವಾಗುವಂತೆ, ಪುಷ್ಟಿಯಾಗುವಂತೆ, ಕೊಂದರೆ ತಿನ್ನಲು ಹೆಚ್ಚು ಹೆಚ್ಚು ಮಾಂಸ ಲಾಭವಾಗುವಂತೆ ಸಾಕುತ್ತಾರೆ! ಈ ತರಹದ ಸಾಕುವಿಕೆಯಲ್ಲಿ ಹಿಂಸೆ ಇಲ್ಲವೇ? ಶಾಖ ಗೃಹಗಳಲ್ಲಿ ಕೃತ್ರಿಮತೆಯಿಂದ ಸಾಕಿ, ನೋವನ್ನುಂಟು ಮಾಡುವ ಚುಚ್ಚು ಮದ್ದುಗಳನ್ನು ಕೊಟ್ಟು ಅವು ಮನುಷ್ಯನ ಬಾಯಿಚಪಲಕ್ಕೆ ಬೇಕಾಗುವ ಹೆಚ್ಚು ಹೆಚ್ಚು ಮಾಂಸವನ್ನು ಕೊಡುವಂತೆ ಅವರು ಸಾಕುವುದನ್ನು ಕಂಡ ದೃಶ್ಯ ನಮಗೆ ಸಹಿಸಲಾರದ ನೋವಿನ ಅನುಭವವಾಯಿತು. ಅವರ ಆ ಉದ್ಯೋಗದಲ್ಲಿ ಹೇರಳ ಧನ ಸಂಪಾದನೆಗೆ ಅವಕಾಶವಿದೆ. ಪ್ರತಿಯೊಬ್ಬ ಜಮೀನುದಾರನೂ ಶ್ರೀಮಂತನೇನೋ ನಿಜ. ಆದರೆ ಅದು ಎಂತಹ ಉದ್ಯೋಗ? ಎಂತಹ ಕ್ರೂರ ಸಂಪಾದನೆ! ಪ್ರಾಣಿ ಹಿಂಸೆ ಮಾಡಬಾರದೆಂದು ದೇಶವೆಲ್ಲ R. S. P. C. A. ಸಂಸ್ಥೆಗಳನ್ನು ಸ್ಥಾಪಿಸಿ, ನಮಗೆ ಬುದ್ಧಿವಾದ ಹೇಳಿಕೊಟ್ಟ ಆ ದೇಶ, ಇಂತಹ ಕ್ರೂರ ಉದ್ಯೋಗದಿಂದ ಜೀವನ ನಡೆಸಬಹುದೇ?

........ಇಲ್ಲಿನ ಜನರು ಇತ್ತೀಚೆಗೆ ಸ್ವಾಭಾವಿಕವಾಗಿ ಇರುವುದು ಕಡಿಮೆ. ಬಹುಶಃ ಈ ವಿಧದ ಹೊಸ ತರಹದ ಆಹಾರ ತಿಂದೋ ಏನೋ, ಅವರ ಜೀವಾಣುಗಳೇ (Hormones) ಬದಲಾಗುತ್ತಿವೆಯೆಂದು ಕಾಣುತ್ತಿದೆ. ಹೆಂಗಸರು ತಮ್ಮ ಹೆಣ್ಣುತನವನ್ನು, ಗಂಡಸರು ತಮ್ಮ ಪುರುಷತ್ವವನ್ನೇ ಕಳೆದುಕೊಳ್ಳುವಂತಿದೆ. ಅಮೇರಿಕಾದಲ್ಲಿ ಗಂಡು ಹುಡುಗರು ತಮ್ಮ ಕಣ್ಣು ರೆಪ್ಪೆಗಳಿಗೆ ಕೃತ್ರಿಮ ರೆಪ್ಪೆಗಳನ್ನು ಸಿಕ್ಕಿಸಿಕೊಂಡು "ನಮಗೆ ಅದು ಹಿತವಾಗಿದೆ" ಎನ್ನುವರಂತೆ!

........ಲಂಡನ್ನಿನ ಪ್ರಸಿದ್ಧ ಸ್ತ್ರೀ ಪಾತ್ರಧಾರಿ ಪುರುಷರೊಬ್ಬರು 30–40 ವಿವಿಧ ಸ್ತ್ರೀ ವೇಷಗಳನ್ನು ಧರಿಸಿ, ಜನರನ್ನು ಮರಳು ಮಾಡುವುದನ್ನು ನೋಡಿದೆವು. ಈಗಿನ ಈ ಕಾಲದಲ್ಲಿ ಇಲ್ಲಿನವರಿಗೆ ಅಂತಹ ವ್ಯಕ್ತಿಗಳ ವಿನೋದ ರುಚಿಕರವಾಗಿದೆ. ಈ

ಭೂಭಾಗದಲ್ಲಿ ಅಸ್ವಾಭಾವಿಕತೆ ಹೆಚ್ಚುತ್ತಿದೆ. ಜೀವನವು ಕೃತ್ರಿಮತೆ ಪಡೆದು ಸಾಮಾಜಿಕ ಅಸಂಬದ್ಧತೆಗಳಿಂದ ತುಂಬಿಕೊಂಡಿದೆ. ಜನರು ಸ್ವಾಭಾವಿಕವಾಗಿದ್ದರೆ 'ಸಪ್ಪೆ' ಯೆಂದೆನಿಸಿಕೊಳ್ಳುವ ಕಾಲ ಬಂದಿದೆ! ಸಲಿಂಗ ಕಾಮಿಗಳಾಗಿರುವುದು ಇಲ್ಲಿ ನ್ಯಾಯಬದ್ಧವಾಗಿದೆ. ಸ್ತ್ರೀಯರಲ್ಲಿ ಪರಸ್ಪರ ಪ್ರೇಮ ಬೆಳೆದು ಇಬ್ಬರು ಹೆಣ್ಣು ಮಕ್ಕಳಿಗೆ ಮದುವೆ ಮಾಡಿಸುವ ಪುರೋಹಿತರೂ ಇದ್ದಾರಂತೆ! ಗಂಡೆಂದೆನಿಸಿಕೊಳ್ಳುವ ಹೆಣ್ಣಿಗೆ ಅವರು ಸಾಕಲು ತೆಗೆದಿರುವ ಮಗು 'ತಂದೆ' ಎಂದು ಕರೆಯುತ್ತದೆಯಂತೆ! ದಿನಕ್ಕಿಂತ ದಿನ ಇಲ್ಲಿನ ರೀತಿನೀತಿ, ನಡತೆ, ಎಲ್ಲವೂ ಬದಲಾಗುತ್ತಿರುತ್ತವೆ. ಸ್ಥಿರತೆ ಇಲ್ಲವೇ ಇಲ್ಲ! ಸ್ಥಿಮಿತವೂ ಇಲ್ಲ. ಈ ಜನರಿಗೆ ಬದಲಾವಣೆ ಪ್ರಿಯ. ಸ್ಥಿರವಾದ ಮನೆ ಕೂಡ ಬೇಕಿಲ್ಲ. ಬದಲಾವಣೆ ಹುಡುಕಿ ಹೋದಲ್ಲಿ ಅವರ ಮನೆ. ಶೀಘ್ರ ದಲ್ಲಿಯೇ ಅವರ ಮನೆಗಳು ಗಾಲಿಗಳ ಮೇಲೆ ಕಟ್ಟಲ್ಪಟ್ಟು ಎಲ್ಲಿ ಬೇಕೋ ಅಲ್ಲಿ ಹೋಗಿ ಬದಲಾಯಿಸುವ ವಾತಾವರಣವನ್ನು ಪಡೆಯುವ ಚಂಚಲತೆ ಬರುವಂತಿದೆ!........

* * * * * *

ಕೇಂಬ್ರಿಡ್ಜ್‌ನ ನಮ್ಮ ಸ್ನೇಹಿತರ ಮನೆಯಲ್ಲಿ ಕೆಲವು ದಿನ ಇದ್ದೆವು. ಅವರಿರುವ ಮನೆ ಮೂರು ನೂರು ವರ್ಷ ಹಳೆಯದು. ಬಹಳ ಸುಂದರವಾದ ಕಟ್ಟಡ. ದೊಡ್ಡ ತೋಟ. ಅನುಕೂಲವಾದ ಸ್ಥಳ. ಆ ಸಮಯ ಅಲ್ಲಿ ತುಂಬಾ ಸೆಕೆ ಇತ್ತು. ಇಂಗ್ಲೆಂಡಿನಲ್ಲಿ ಅಷ್ಟು ಸೆಕೆ ಇರಬಹುದು ಎಂದು ನಾವು ಎಣಿಸಿರಲಿಲ್ಲ........

........ಅದು ರೋಜಾ ಹೂವಿನ ಕಾಲ....ಎಲ್ಲಿ ನೋಡಿದರೂ ಗುಲಾಬಿ ಹೂವಿನ ಚೆಂದ ಅಂದವಾಗಿ ಮೆರೆದಿತ್ತು. ಎಲ್ಲ ಗಾತ್ರದ ಹೂಗಳು –ಚಿಕ್ಕವು, ದೊಡ್ಡವು– ಬಳ್ಳಿಗಳಲ್ಲಿ, ಗಿಡಗಳಲ್ಲಿ ಸುಂದರವಾದ ಬಣ್ಣ ಬಣ್ಣದ ಈ ಹೂಗಳು "ಸೌಂದರ್ಯ ನಮ್ಮ ಜನ್ಮಸಿದ್ಧ ಹಕ್ಕು" ಎಂಬಂತೆ ಅರಳಿ ಕಣ್ಮನ ಸೆಳೆಯುತ್ತಿದ್ದವು. ಆದರೆ ಈ ರೋಜಾ ಹೂಗಳು ನೋಡಲು ಮಾತ್ರ ಅಂದ. ಅವುಗಳಿಗೆ ಸುವಾಸನೆಯೇ ಇರುವುದಿಲ್ಲ. ಇಲ್ಲಿನ ಹೂಗಳ ಅಂದವೇ ಬೇರೆ. ಬಣ್ಣಬಣ್ಣದ ವಿಧವಿಧ ರೂಪದ ಹೂವುಗಳು. ಲ್ಯೂಪಿನ್ಸ್ (Lupins) ಎಂಬ ಹೂಗಿಡಗಳನ್ನು ನೋಡಿದರೆ ಬಣ್ಣದ ರಥಗಳಂತೆ ಕಾಣುತ್ತವೆ. ಕನಕಾಂಬರದಂತಿರುವ ವಾಲ್‌ಫ್ಲವರ್ಸ್ (walflowers) ಇವೆ. ಪಿಯೋನಿ (Peony) ಮುಂತಾದವು ಆಯಾ ಋತುಗಳಲ್ಲಿ ಬೆಳೆಯುತ್ತದೆ. ಇಂಗ್ಲಿಷ್ ಮನುಷ್ಯನು ತೋಟಪ್ರಿಯನೆಂಬುದು ಎಲ್ಲರಿಗೂ ತಿಳಿದ ವಿಷಯ. ಅದು ನಿಜವೂ ಇರಬಹುದು. ಆದರೆ ಈ ಪ್ರಿಯತೆ ಒಮ್ಮೊಮ್ಮೆ ಇಷ್ಟಪಟ್ಟು ಆಗದೆ ಮಾಡಲೇ ಬೇಕೆಂಬ ಕಟ್ಟುನಿಟ್ಟಿಗೆ ಮಾಡುತ್ತಿರಬಹುದು. ಒಮ್ಮೆ ಸೋಮಾರಿತನ ಮಾಡಿದರೆ ತೋಟದಲ್ಲಿ ಹುಲ್ಲು ಎಷ್ಟೊಂದು ಎತ್ತರ ಬೆಳೆಯುತ್ತದೆಯೆಂದರೆ, ಅದನ್ನು ಕತ್ತರಿಸುವುದು ಬೆನ್ನು ಮುರಿಯುವ ವ್ಯಾಪಾರ! ಭಾರತದಲ್ಲಿದ್ದಾಗ ನಾನು ಈ ಇಂಗ್ಲಿಷ್

ಹಾಸ್ಯಚಟಾಕಿಯನ್ನು ಅರ್ಥ ಮಾಡಿಕೊಂಡಿರಲಿಲ್ಲ. "On a sunny morning. the husband says-" Lo, the Morn! the wife replies 'Mow the lawn' " ಹೌದು, ಬೆಳಿಗ್ಗೆ ಹವೆ ಚೆನ್ನಾಗಿದ್ದರೆ ಹುಲ್ಲನ್ನು ಕಡಿಯಲು ಸುಲಭ. ಸೂರ್ಯನ ಕಿರಣಗಳನ್ನು ಕಾಣುವುದೇ ಅಪರೂಪವಾದಾಗ, ಅದರ ಅಂದವನ್ನು ಗಂಡ ನೋಡುತ್ತಿರುವಂತೆ ಹವೆಯ ಅನುಕೂಲ ತೋಟದ ಕೆಲಸಕ್ಕಾದೀತು, ಎಂದು ಗೃಹಿಣಿಯ ಮತ! ಒಮ್ಮೊಮ್ಮೆ ಮಧ್ಯಾಹ್ನದವರೆವಿಗೂ ಸುಂದರ ಮಂಜು ಬೀಳುತ್ತಿದ್ದರೂ, ಅನಂತರದ ಬಿಸಿಲಿನ ಬೆಳಕು ಅವುಗಳ ಮೇಲೆ ಬೀಳುವ ದೃಶ್ಯ ಅತಿ ಅಂದದ ದೃಶ್ಯ. ಬಿಸಿಲು ಎಂದರೆ ಜನರು ಹುಚ್ಚರಾಗುತ್ತಾರೆ. ಇಲ್ಲಿಗೆ ಬಂದ ಮೇಲೆ ನಮಗೂ ಬಿಸಿಲಿನ ಆಸೆಯಾಗಿದೆ.

ಕೇಂಬ್ರಿಡ್ಜ್‌ನಲ್ಲಿ ಒಮ್ಮೆ ನಾವು ಗದ್ದೆಗಳಲ್ಲಿ ಹಾದು ಹೋಗುತ್ತಾ ಅರಳಿದ ಡೆಫೋಡಿಲ್‌ಗಳ (Daffodils) ನ್ನು ಕಂಡದ್ದು ಎಂದೂ ಮರೆಯುವಂತಿಲ್ಲ. ಅಕ್ಕಪಕ್ಕದಲ್ಲಿ ಡೈಸಿ (Daisy) ಹೂ, ಕರೀ ಟ್ಯೂಲಿಪ್ (Tulip), ಫೊರ್‌ಗೆಟ್–ಮಿ–ನಾಟ್ (Forget–me–nots). ಬ್ಲೂ ಬೆಲ್ ಹೂ (Blue Bells) ಮುಂತಾದ ಅನೇಕಾನೇಕ ಪಾಶ್ಚಾತ್ಯ ಹವೆಯಲ್ಲಿ ಬೆಳೆಯುವ ನೂರಾರು ವನಸುಮಗಳು. ಪಾಶ್ಚಾತ್ಯ ಕವಿಗಳು ವರ್ಣಿಸುವ ಹಲವಾರು ಕಾನನ ಕುಸುಮಗಳನ್ನು ನಾವು ಮನ ಮುಟ್ಟಿ ನೋಡಿದೆವು.

ಯೂನಿವರ್ಸಿಟೀ ಜನರು ಕೆಮ್ (Cam) ನದಿಯಲ್ಲಿ ಆಳವಿಲ್ಲದ ದೋಣಿ ಚಲನೆಗೆ ಈಗ ಆನಂದದಿಂದ ಸುತ್ತಾಡುವ ಕಾಲ. ಎಲ್ಲೆಲ್ಲೂ ನಾನಾ ತರಹದ ದೋಣಿಗಳು ಬಾಡಿಗೆಗೆ ಸಿಗುತ್ತವೆ. ಅವನ್ನು ಬಾಡಿಗೆಗೆ ತೆಗೆದುಕೊಂಡು, ನಾವೇ ಅದನ್ನು ನಡೆಸುವುದರಲ್ಲಿ ಹೆಚ್ಚಿನ ಆನಂದ! ಹೆಚ್ಚು ಸುಖ!........ಯಾವಾಗಲೂ ಅಷ್ಟೇ ಅಲ್ಲವೆ ?....ನಮ್ಮ ದೋಣಿ ನಾವೇ ನಡೆಸಿದರೆ ಮಾತ್ರ ಹೆಚ್ಚಿನ ಸಂತೋಷ!

........ಶಾಂತ ವಾತಾವರಣದಲ್ಲಿ ಈ ಚಪ್ಪಟೆ ತಳದ ದೋಣಿಗಳು ನಿಧಾನವಾಗಿ ಚಲಿಸುತ್ತಿರುವಾಗ ದಡದಲ್ಲಿರುವ ವೀಪಿಂಗ್ ವಿಲ್ಲೋ (Weeping Willows) ಗಳು ಗಂಭೀರತೆಯಿಂದ ತಮ್ಮ ಬೀಳಲುಗಳಿಂದ ನಮಗೆ ನೆರಳು ಕೊಟ್ಟು ಮನಸ್ಸಿಗೆ ಅತ್ಯಂತ ಶಾಂತಿ ಕೊಡುತ್ತವೆ. ದಡದಲ್ಲಿ ಹಳದಿ ಲೆಬರ್‌ನಮ್ (Laburnum) ಹೂಗಳು ನೇತಾಡುವುದನ್ನು ಕಂಡರೆ ಎಷ್ಟು ಆನಂದವಾಗುತ್ತದೆ. ಲ್ಯಾಲೆಕ್ (Lilacs) ಮತ್ತು ಐರಿಸ್ (Iris) ಎಂಬ ಹೂಗಳನ್ನು ಹಲವು ರಂಗಗಳಲ್ಲಿ ಕಾಣಬಹುದು. ನಮ್ಮ ಕೆನ್ನಾ (Canna) ಹೂ ಇದ್ದಂತೆ ಇವು. ನಾವು ಸಂಕ್ರಾಂತಿ ಸಮಯದಲ್ಲಿ ಎಳ್ಳು ಬೀರುವಂತೆ ಮೇ ತಿಂಗಳಲ್ಲಿ ಇಲ್ಲಿನ ಹುಡುಗಿಯರು ಲಿಲೀ ಆಫ್ ದಿ ವೇಲ್ಲಿ (Lily of the Valley) ಎಂಬ ಚಿಕ್ಕ ಬಿಳಿಯ ಹೂಗಳಿರುವ ಪುಟ್ಟ ಗಿಡಗಳನ್ನು ಒಬ್ಬರಿಗೊಬ್ಬರು ಕೊಟ್ಟು ಸ್ನೇಹವನ್ನು ವ್ಯಕ್ತಪಡಿಸುವ ಪದ್ಧತಿ ಇದೆ.

ಈ ಸಮಯದಲ್ಲಿ ವಿಶ್ವವಿದ್ಯಾನಿಲಯದ ಆವರಣದಲ್ಲೆಲ್ಲಾ ಶೇಕ್ಸ್‌ಪಿಯರ್ ನಾಟಕಗಳಲ್ಲಿನ ಪಾತ್ರಗಳ ವೇಷಭೂಷಣಗಳನ್ನು ಧರಿಸಿ ವಿದ್ಯಾರ್ಥಿಗಳು ಎಲ್ಲೆಲ್ಲೂ ಸುತ್ತಾಡುವುದನ್ನು ಕಂಡೆವು. ಅಲ್ಲಲ್ಲಿ ಬಯಲು ರಂಗಮಂದಿರಗಳಿದ್ದು ಈ ಸಮಯ ದಲ್ಲಿ ಷೇಕ್ಸ್‌ಫಿಯರ್ ನಾಟಕಗಳನ್ನು ಪ್ರದರ್ಶಿಸುತ್ತಾರೆ........

ವಿಶ್ವವಿದ್ಯಾನಿಲಯದ ಆವರಣದಲ್ಲಿ ಹೋಗುತ್ತಿದ್ದಂತೆ ಯುವಕರು ಕ್ರೋಕೇ (Crochet) ಎಂಬ ಆಟ ಆಡುತ್ತಿರುವುದನ್ನು ಕಂಡೆವು. ಈ ಆಟವನ್ನು ಹಿಂದಿನ ಕಾಲದಲ್ಲಿ ರಾಜಮನೆತನದವರು ಆಡುತ್ತಿದ್ದ ಆಟ. ಆಟವಾಡುತ್ತಿರುವಾಗ ಮಧ್ಯ ಮಧ್ಯ ಹುಡುಗರು ಮದ್ಯಪಾನವನ್ನೂ ಮಾಡುತ್ತಾರೆ .... ಸಿಗರೇಟು ಸೇದುತ್ತಾರೆ. ಹುಡುಗಿಯರೊಡನೆ ಸರಸ ಸಲ್ಲಾಪ ನಡೆಸುತ್ತಾರೆ. ಈ ದೃಶ್ಯ ನಮಗೆ ಅಸಹ್ಯವೆನಿ ಸಿತು. ಇಂತಹ ಮಾರ್ಗದರ್ಶಕವೆಂದೆನಿಸಿಕೊಳ್ಳುವಂತಹ ಕೇಂಬ್ರಿಡ್ಜ್, ಆಕ್ಸ್‌ಫರ್ಡ್ ವಿಶ್ವವಿದ್ಯಾಲಯಗಳು ನಮ್ಮ ಭಾರತೀಯ ವಿದ್ಯಾರ್ಥಿಗಳಿಗೆ ಯಾವ ವಿಧದ ವಿದ್ಯಾ ಭ್ಯಾಸ ಕೊಡಬಲ್ಲರು ? ಎಂಬ ಶಂಕೆ ಬಂದಿತು.

ಈ ಸಮಯದಲ್ಲಿ ಎಲ್ಲಿ ನೋಡಿದರೂ ಆನಂದಮಯ ವಾತಾವರಣ, 'ಜೀವನ' ವನ್ನು ಅನುಭವಿಸಲು ಲೌಕಿಕ ವಿಷಯಗಳನ್ನೆಲ್ಲಾ ಅರಸಿ ಹೋಗುವ ಸಮಯ. ಈ ರಸಿಕರಲ್ಲಿಯಾದರೋ ಉಡುಪುಗಳ ಪರಿವೆಯೇಇಲ್ಲ, ಅವುಗಳಲ್ಲಿ ಸಭ್ಯತೆಯ ಛಾಯೆಯೇ ಇಲ್ಲ. ಸರಿಯಾದ ಉಡುಪನ್ನು ಧರಿಸಿರುವವರು ಕಡಿಮೆ. ಇಲ್ಲಿನ ವಿವಿಧ ವೇಷಗಳ ಕೂಟವೊಂದನ್ನು (Fancy Dress Ball) ನೋಡಿದೆವು. ಅಲ್ಲಿ ಹೆಂಗಸರು ಹೆಚ್ಚಾಗಿ ಚಿಂದಿ ಬಟ್ಟೆಗಳನ್ನು ತೊಟ್ಟು ಮೈಯೆಲ್ಲವನ್ನೂ ತೋರಿಸುವುದೇ ಜನಪ್ರಿಯ ಉಡುಪಾಗಿತ್ತು. ಗಂಡಸರು ಟೆಕ್ಸಾಸ್ (Taxas) ದೇಶದ ಜನರಂತೆ, ಅಥವಾ ಮೆಕ್ಸಿಕನ್ (Mexican) ಜನರಂತೆ ಮೈತುಂಬಾ ಉಡುಪನ್ನು ಧರಿಸಿ ಪೌರುಷತ್ವ ವನ್ನು ಪ್ರದರ್ಶಿಸುತ್ತಿದ್ದರು.

* * * * * *

ಒಮ್ಮೆ ಯುವಕರ ಕೂಟವೊಂದರಲ್ಲಿ ಒಂದು ಅನುಭವವಾಯಿತು. ಯುವಕ-ಯುವತಿಯರು ಎಷ್ಟು ಗಲಾಟೆ ಮಾಡುತ್ತಿದ್ದರೆಂದರೆ ಕಿವಿ ಒಡೆದು ಹೋಗುವಂತಿತ್ತು. ಶಕ್ತಿ ಮೀರಿ ತಮಟೆ ಹೊಡೆಯುವಂತಹ ಚರ್ಮ ವಾದ್ಯಗಳನ್ನು ಬಡಿಯುತ್ತಿದ್ದರು. ಯುವಸಮೂಹಕ್ಕೆ ಅವರ ನಡೆಯಲ್ಲಿಯೂ, ನುಡಿಯಲ್ಲಿಯೂ ಯಾವ ವಿಧದ ಹಿಡಿತವೂ ಇರಲಿಲ್ಲ. ರಾತ್ರಿಯೆಲ್ಲಾ ಮದ್ಯಪಾನ ಮಾಡಿ, ಕಿರುಚಿ, ಮೃಗಗಳಂತೆ ಸಂಚರಿಸಿ, ಹುಡುಗಿಯರ ಸಹವಾಸ ಪಡೆದು, ಅನುಭವಿಸಿ ಮುಂಜಾನೆಯ ಸಮಯ ತೀರಾ ಮೈ ಕೆಡಿಸಿಕೊಂಡದ್ದನ್ನು ನೋಡಿ ಬಹಳ ಬಹಳ ಬೇಸರವಾಯಿತು. ವಿನೋದಿಸುವು ದೆಂದರೆಈ ರೀತಿಯೇ ? ಸುಖ ಪಡೆಯುವ ಬದಲು ನರಳುವುದರಲ್ಲಿ ಯಾವ ಗೆಲುವು

ಇದೆ? ಯುವಕರಿಗೆ ಈ ರೀತಿಯ ವಿನೋದವಲ್ಲದೆ ಬೇರೆ ದಾರಿಯೇ ಇಲ್ಲವೆ? ಸಭ್ಯ ಮಾತುಕತೆ, ಸರಸ ಸಂಭಾಷಣೆಗೆ ಆಸ್ಪದವೂ ಇಲ್ಲವೆ? ಜೀವನದ ಅಂತಸ್ತು ತನ್ನ ಮೌಲ್ಯವನ್ನೇ ಕಳೆದುಕೊಂಡ ಹಾಗಾಯಿತು. ಇವೆಲ್ಲವನ್ನೂ ಯೋಚಿಸಿ ಮನಸ್ಸಿಗೆ ತುಂಬಾ ಬೇಸರವಾಯಿತು. ನಾಗರೀಕತೆ ಎಷ್ಟೊಂದು ಅಧೋಗತಿಗಿಳಿದಿದೆ! ಈ ತೀರಾ ಅನಾಗರಿಕ ಅಸಭ್ಯ ಪ್ರದರ್ಶನದ ದರ್ಶನ.

* * * * * *

ಕೇಂಬ್ರಿಡ್ಜ್‌ನಲ್ಲಿ (Cambridge) ಪತಿಯುವರು ಒಮ್ಮೆ ನಮ್ಮ ವಿದ್ಯಾರ್ಥಿಯೊಬ್ಬರ ಜೊತೆಗೆ ಕಿಂಗ್ಸ್ ಕಾಲೇಜಿನ ಔತಣಕ್ಕೆ (King's College Dinner) ಹೋದರು. ಬರೀ ಗಂಡಸರು ಮಾತ್ರ ಆಮಂತ್ರಿತರು ಅದಕ್ಕೆ. ಆತಿಥ್ಯವಿಟ್ಟ ಈ ವಿದ್ಯಾರ್ಥಿಯು ಆ ಕಾಲೇಜಿನಲ್ಲಿ ಇಂಗ್ಲಿಷು ಭಾಷಾ ಸಂಶೋಧನೆ ನಡೆಸುತ್ತಿದ್ದನು. ಸಂಪ್ರದಾಯಬದ್ಧ ಕರ್ಮಕಾಂಡ, ಕೇಂಬ್ರಿಡ್ಜ್‌ನ ಕಿಂಗ್ಸ್ ಕಾಲೇಜಿನಲ್ಲಿ ಹೆಚ್ಚು ರೂಢಿಯಲ್ಲಿದೆ. ಪತಿಯುವರು ಅಲ್ಲಿನ ತಮ್ಮ ಅನುಭವವನ್ನು ಕೂಲಂಕುಷವಾಗಿ ನನಗೆ ತಿಳಿಸಿದರು. ಕಾಲೇಜಿನ ಸಭಾಂಗಣದಲ್ಲಿ ಅಂದು ಕೆಲವು ವಿದ್ಯಾರ್ಥಿಗಳು ಉಪವಾಸ ಮುಷ್ಕರ ಹೂಡಿದ್ದರಂತೆ. 'ಹಸಿವಿನಿಂದ ಮುಕ್ತಿ' ಗಾಗಿ ಅವರ ಈ ಪ್ರಯತ್ನ. ಇದರಿಂದ ಶೇಖರಿಸಿದ ಹಣವನ್ನು ಬಡದೇಶಗಳಿಗೆ ಕಳುಹಿಸುವ ಸಾಹಸ....ನಮ್ಮ ಭಾರತ ದೇಶವಂತೂ ಇದರಿಂದ ಖಂಡಿತ ಲಾಭ ಪಡೆಯುತ್ತಿದೆ.

ಪದವೀಧರ ಹಾಗೂ ಪದವೀಧರರಾಗಲಿರುವವರ ಊಟ ರಾತ್ರಿ 7–35ಕ್ಕೆ.ಒಂದು ಗಂಭೀರವಾದ ಗಂಟೆಯು ನಾದ ಎಲ್ಲರನ್ನೂ ಭೋಜನ ಶಾಲೆಗೆ ಆಹ್ವಾನಿಸಿತು- ಅಲ್ಲಿ ಮೂರು ಬೇರೆ ಬೇರೆ ತರಗತಿಯ ಪಂಕ್ತಿಗಳಿದ್ದುವಂತೆ. ಒಂದು ಮೇಲಂತಸ್ತಿನ ಪಂಕ್ತಿ – ಕಾಲೇಜಿನ ಗಣ್ಯ ಅಧ್ಯಾಪಕರಿಗೆ ಮೀಸಲು. ಡೋನ್ಸ್ (Dons) ಎಂದು ಅವರ ಹೆಸರು. ಈ ಡೋನ್ಸ್ (Dons) ಗಳು ಅವಿವಾಹಿತರಾಗಿಯೇ ಇದ್ದು, ಅತಿ ರಸಿಕತೆಯಿಂದ ಭಾರಿ ಶ್ರೀಮಂತ ಜೀವನ ನಡೆಸಿ, ತಮ್ಮ ಆಯುಷ್ಯವೆಲ್ಲವನ್ನೂ ವಿದ್ಯಾಭ್ಯಾಸಕ್ಕೆಂದು ಮುಡುಪಾಗಿಡುತ್ತಾರೆ. ಇವರು ಊಟ ಮಾಡುವ ಈ ಮೇಜುಗಳಲ್ಲಿ ಭಾರಿ ಔತಣದ ಊಟ ಸಿದ್ಧ. ಜೊತೆಗೆ ತಕ್ಕ ಪಾನೀಯ ಮತ್ತಿತರ ಸೇವೆಗಳೂ ಕೂಡ (Wines and Cigars) ಅಂತೂ ವೈಭವದ ಭೋಜನ! ಎರಡನೆಯ ಪಂಕ್ತಿ ಪದವೀಧರರಿಗಾಗಿ. ಅಲ್ಲಿ ದ್ರಾಕ್ಷಾರಸವನ್ನೋ(Wine) ಇಲ್ಲವೇ ಬಿಯರ್ (Beer)ನ್ನೋ ಕೊಡುತ್ತಾರೆ. ಊಟವನ್ನು 'ಸಹಾಯಕರು' ಬಡಿಸುತ್ತಾರೆ. ಈ ಪ್ರಜಾಪ್ರಭುತ್ವದ ದೇಶದಲ್ಲಿ 'ಆಳು' ಎಂಬ ನಾಮಕರಣ ಅತಿ ಹೀನವೆಂದೆನಿಸಿಕೊಳ್ಳುತ್ತದೆ. ಅವರು ಆಳು ಮಾಡುವ ಕೆಲಸ ಮಾಡಿದರೂ 'ಸಹಾಯಕ' ರೆಂದೆನಿಸಿಕೊಳ್ಳುತ್ತಾರೆ .... ಪಟ್ಟಿ ಬೇರೆ – ಕುದುರೆ ಅದೇ! ಮೂರನೆಯ ಪಂಕ್ತಿ ವಿದ್ಯಾರ್ಥಿಗಳಿಗಾಗಿ. ಇವರು ಬೆಂಚು

ಗಳ ಮೇಲೆ ಕುಳಿತಿದ್ದು ಸಾಧಾರಣ ದರ್ಜೆಯ ಊಟವನ್ನು ಮಾಡುತ್ತಾರೆ ; ಮೊದಲ ಪಂಕ್ತಿಯವರಿಗೆ ಉತ್ತಮ ದರ್ಜೆಯ ಭಾರಿ ಭೋಜನ........ಎರಡನೆಯ ಪಂಕ್ತಿಯವರಿಗೆ ಮಧ್ಯಮ ದರ್ಜೆಯ ಔತಣ – ಕಡೆಯ ಪಂಕ್ತಿಯಾದ ವಿದ್ಯಾರ್ಥಿ ವೃಂದಕ್ಕೆ ಹೊಟ್ಟೆ ತುಂಬಾ ಒಳ್ಳೆಯ ಆಹಾರ, ಊಟವೆಂದೆನಿಸುತ್ತದೆ! ಒಂದೇ ಸಮಯ ಎಲ್ಲರೂ ಕುಳಿತು ಊಟ ಮಾಡುವಾಗ, ಆಹಾರದಲ್ಲಿ ಹೇಗೆ ಭೇದಭಾವ ಮಾಡಲು ಮನಸ್ಸು ಬರುತ್ತದೆ ಈ ಪ್ರಜಾರಾಜ್ಯದಲ್ಲಿ, ಎಂಬುದು ಪತಿಯವರು ನಂಬಲಾಗಲಿಲ್ಲ. ಹೇಗೆ ಉತ್ತಮ, ಮಧ್ಯಮ, ಅಧಮ ದರ್ಜೆಯ ಮೂರು ವಿಧದ ಆಹಾರವನ್ನು ಕೊಡಲು ಸಾಧ್ಯವಾಗುತ್ತದೆ? ನಮ್ಮಲ್ಲಿನ ಆಳುಗಳಿಗೆ ಹೊಟ್ಟೆ ತುಂಬುವಂತಹ ಆಹಾರ ಬೇರೆ ಕೊಟ್ಟರೂ, ಒಂದೇ ಸಮಯ ಊಟಕ್ಕೆ ಕುಳಿತರೆ ತಾರತಮ್ಯ ಮಾಡುವುದಿಲ್ಲ. ಈ ಇಂಗ್ಲೆಂಡಿನಲ್ಲಿ ವ್ಯಕ್ತಿ ಭೇದ ಇಲ್ಲ....ಎಲ್ಲರಿಗೆ ಸಮಾನತೆ ಎನ್ನುವವರು ಯಾರೋ? ಈ ಅಂತಸ್ತಿನ ಭೇದ ಎಷ್ಟಿದೆಯೆಂದರೆ, ಒಂದು ಪಂಕ್ತಿಯಲ್ಲಿರುವವರು ಮತ್ತೊಂದು ಪಂಕ್ತಿಯವರೊಡನೆ ಮಾತುಕತೆಯನ್ನು ಕೂಡ ನಡೆಸುವುದಿಲ್ಲ!

........ಇತ್ತೀಚಿಗೆ ಕೆಲವು ವಿಶ್ವವಿದ್ಯಾಲಯಗಳಲ್ಲಿ ಈ ಪದ್ಧತಿಯನ್ನು ತೆಗೆದು ಹಾಕಿರುವ ಸಂಗತಿ ಸುಸಮಾಚಾರವಾಗಿದೆ. ಪತ್ರಿಕೆಗಳಲ್ಲಿ ಆಕ್ಸ್‌ಫರ್ಡ್, ಕೇಂಬ್ರಿಡ್ಜ್ (Oxford, Cambridge) ನ ವಿದ್ಯಾರ್ಥಿಗಳು ಕಠಿಣ ಔಷಧಿಗಳ (Drugs) ಅಭ್ಯಾಸ ಮಾಡಿಕೊಳ್ಳುವ ಸುದ್ದಿ ಕೂಡ ಬರುತ್ತಲಿದೆ. ಈ ವಿದ್ಯಾರ್ಥಿಗಳು ನೈಜ ಸ್ಥಿತಿಯನ್ನು ಮರೆತು, ವರ್ತಮಾನವನ್ನು ಎದುರಿಸದೆ, ಬೇರೆಯೇ ಪ್ರಪಂಚದಲ್ಲಿರಲು ಸಾಧನೆ ಮಾಡುತ್ತಿರುವಂತಿದೆ!........

* * * * * *

ಡೆವನ್‌ಶಾಯರ್ (Devonshire) ಪ್ರವಾಸ ಎಷ್ಟು ಚೆನ್ನಾಗಿತ್ತು! ಇಂಗ್ಲಿಷ್ ಕಡಲ್ಗಾಲುವೆ ಸಾಗರದಂತೆ ಹಚ್ಚಹಸುರಾಗೆ ಕಂಡಿತು! ನೀರು ಮಾತ್ರ ಮಂಜಿನಂತೆ ತಣ್ಣಗೆ ಇತ್ತು. ಡೆವನ್‌ಶಾಯರ್ (Devonshire) ಸೇರುವ ವೇಳೆ ದಾರಿಯಲ್ಲಿ ಅತಿ ಮುದ್ದಾದ, ಅಂದವಾದ ಪಟ್ಟಣಗಳನ್ನೂ ಕರಾವಳಿಯ ತಂಗು ರೇವುಗಳನ್ನು ಕಂಡೆವು. ಬಯಲು ಪ್ರದೇಶ ಗುಡ್ಡದಿಂದ ಕೂಡಿತ್ತು. ಜನತೆ ತೀರಾ ಸ್ನೇಹಪರ ಸ್ವಭಾವದಿಂದಿದ್ದು ತುಂಬಾ ಉಲ್ಲಾಸಿಗಳಂತೆ ಕಂಡರು. ಪ್ರಾಚೀನ ಕಾಲದ ಕೆಲ ಗುಡಿಸಲುಗಳನ್ನು ಕಂಡೆವು. ಮನೆಗಳಿಗೆ ಹೆಚ್ಚಾಗಿ ಹುಲ್ಲಿನ ಮೇಲ್ಛಾವಣಿಗಳಿದ್ದು ಹಳ್ಳಿಯ ವಾತಾವರಣವನ್ನೇ ಕೊಡುತ್ತಿತ್ತು, ಕ್ರಿ. ಶ. 1820 ರಲ್ಲಿ ಕುದುರೆಗಳು ಎಳೆದು ಚಲಿಸುವ ರೈಲುಗಾಡಿಗಳ ಮಾರ್ಗವಿದ್ದ ಜಾಗವನ್ನೂ (British Railways ನ ಮೊದಲ ರೈಲು ಮಾರ್ಗ) ನೋಡಿದೆವು. ಭೂಪ್ರದೇಶದ ಕೆಲವು ಭಾಗಗಳು ತೀರಾ

ಕಲ್ಲುಬಂಡೆಗಳ ಮಯವಾಗಿತ್ತು. ಅದೇ ಪ್ರದೇಶವನ್ನು ಭಾಸ್ಕರ್‌ವಿಲ್ಸ್ (Bhaskar-villes) ಎಂದು ಕರೆಯುತ್ತಾರೆ. ಶರಲೊಕ್ ಹೋಮ್ಸ್‌ನ (Sherlock Holmes) ಹೌಂಡ್ ಆಫ್ ಭಾಸ್ಕರ್‌ವಿಲ್ಸ್ (Hound of Bhakervilles) ಚಲನ ಚಿತ್ರ ವನ್ನೂ ಅಲ್ಲೇ ತೆಗೆದಿದ್ದರಂತೆ. ನನಗಂತೂ ಆ ಪ್ರದೇಶವನ್ನು ಕಂಡು ಬಹಳ ಆನಂದವಾಯಿತು. ಚಿಕ್ಕಂದಿನಲ್ಲಿ ನಾವು ಶರಲೊಕ್ ಹೋಮ್ಸ್ (Sherlock Holmes) ಕಥೆಗಳನ್ನು ಓದಿ ಎಷ್ಟು ಸಂತೋಷಪಡುತ್ತಿದ್ದೆವು!

ಒಂದಾನೊಂದು ಕಾಲದಲ್ಲಿ ಈ ಡೆವನ್‌ಶಾಯರ್ (Devonshire) ತವರದ ಗಣಿ ಉದ್ಯಮಕ್ಕೆ ಪ್ರಸಿದ್ಧಿ ಪಡೆದಿತ್ತಂತೆ! ಈಗ ಗಣಿ ಕೆಲಸ ನಡೆಯುತ್ತಿಲ್ಲ........ ಎಲ್ಲೆಲ್ಲೂ ರಾಷ್ಟ್ರೀಯ ವನಗಳನ್ನು ನೋಡಿದೆವು. ದಾರಿಯಲ್ಲಿ 'ಪೋಲಿ ದನಗಳಿವೆ– ಜಾನುವಾರುಗಳಿವೆ – ಮೆತ್ತಗೆ ವಾಹನ ಚಾಲಿಸಿ' ಈ ವಿಷಯವನ್ನು ಒತ್ತಿ ಹೇಳ ಬೇಕಾಗುತ್ತದೆ. (Beware of Stray Cattle – Beware of Bull-Drive Slowly) ಎಂಬ ಸಂಕೇತಗಳನ್ನು ಓದಿದೆವು. ಅದನ್ನು ನೋಡಿ ನನಗಂತೂ ತುಂಬಾ ನಗು ಬಂತು. ಏಕೆಂದರೆ ನಮ್ಮ ದೇಶದಲ್ಲಿ ಪ್ರಾಣಿಗಳು ರಸ್ತೆಯ ಮೇಲೆ ಅಡ್ಡಾಡು ವುದು ತೀರಾ ಸಾಮಾನ್ಯ ಸಂಗತಿ. ಬರೀ ಜಾನುವಾರುಗಳೇ ಏಕೆ – ಮನುಷ್ಯರೂ ವಾಹನ ಚಲನೆಯ ರಸ್ತೆಯ ಮೇಲೆ ಓಡಾಡುವುದು ಅಪರೂಪವೇನಲ್ಲ!

ಎಕ್ಸೀ (Exe) ಮತ್ತು ಡಾರ್ಟ್ (Dart) ನದಿಗಳನ್ನು ಹಾದು ಹೋದೆವು. ವನ ಭೋಜನ ಗೋಷ್ಠಿಗಳು ಆಗಲೇ ತಮ್ಮ ತಾತ್ಕಾಲಿಕ ಸಂಸಾರವನ್ನು ಅಲ್ಲಿ ಕಟ್ಟಿ ಕೊಂಡು ಠಾಣ್ಯ ಹೂಡಿದ್ದರು. ನದಿಯ ಮೇಲೆ ಪುರಾತನ ಕಾಲದ ಸೇತುವೆಗಳನ್ನು ನೋಡಿದೆವು. ಸಂಕಗಳನ್ನು ಕೂಡ ಕಂಡೆವು. ಒಂದೇ ಒಂದು ಕಲ್ಲಿನ ಮೇಲಿಂದ ನದಿಯನ್ನು ದಾಟುವ ಸಂಕ! ಛಳಿಗಾಲದಲ್ಲಿ ಮಂಜು ಕವಿದಾಗ ಈ ಪ್ರದೇಶ ಹೇಗೆ ಇರುವುದೋ?

ಇಲ್ಲಿನ ಡಾರ್ಟಿಂಗ್‌ಟನ್ ಹಾಲ್ (Dartington Hall) ಸುಂದರವಾದ ಜಾಗ. ಅಲ್ಲಿ ಲಲಿತ ಕಲೆಗಳ ಮತ್ತು ಸಾಹಿತ್ಯದ ಅಕಾಡಮಿಯನ್ನು ಸ್ಥಾಪಿಸಿದ್ದಾರೆ. ಕಲಾವಿದನ ನಿಜವಾದ ಸ್ವರ್ಗ – ಹೆಮ್ಮೆಪಡುವಂತಹ ಬೀಡು. ನಮ್ಮ ಅಡ್ಯಾರ್ ಅಥವಾ ಶಾಂತಿನಿಕೇತನದಂತೆ ಸ್ಫೂರ್ತಿದಾಯಕವಾಗಿದೆ. ಈ ಸ್ಥಳ ದಂಪತಿಗಳಿಬ್ಬರ ಕನಸಿನಿಂದಾಗಿ ನಿರ್ಮಾಣವಾಯಿತಂತೆ! ಯಾವ ಕಲಾವಿದನೇ ಆಗಲಿ, ಈ ಅಕಾಡಮಿ ಯಲ್ಲಿ ಹೆಸರು ಗಳಿಸಿದರೆ ಅತಿ ದೊಡ್ಡ ಕಲಾವಿದನೆನಿಸಿಕೊಳ್ಳುತ್ತಾನೆ. ಡಾರ್ಟಿಂಗ್‌ಟನ್ ಹಾಲಿನಲ್ಲಿ ಒಂದು ಕ್ರೈಸ್ತ ಮಠ ಅಡಗಿಸಿಟ್ಟಂತೆ ಇದೆ. ಅಲ್ಲಿ ಎರಡನೆಯ ರಿಚರ್ಡ್ ಮತ್ತು ಎಂಟನೆಯ ಹೆನ್ರಿ ಹೋಗಿ, ಕೆಲವು ದಿನಗಳ ಪ್ರವಾಸವನ್ನು ಕೈಗೊಂಡು ವಿಶ್ರಾಂತಿ ಪಡೆಯುತ್ತಿದ್ದರಂತೆ.

* * * * * *

ಎಕ್ಸೆಟರ್ (Exeter) ನಲ್ಲಿ ನಾವು ಒಂದು ದೊಡ್ಡ ಅರಮನೆಯಂತಿದ್ದ ಭವ್ಯ ಕಟ್ಟಡವೊಂದರಲ್ಲಿ ಇದ್ದೆವು. ಈ ಕಟ್ಟಡದಲ್ಲಿ ಒಬ್ಬ ಕ್ರೈಸ್ತಗುರು ಮತ್ತು ಅವರ ಪರಿವಾರ ಕ್ರಿ, ಶ. 1665 ರಿಂದ ಪಾರಂಪರ್ಯವಾಗಿ ಅಲ್ಲಿ ವಾಸಿಸುತ್ತಿರುವರು. ನನಗೆ 'ವಿಕರ್ ಆಫ್ ವೇಕ್‌ಫೀಲ್ಡ್' (Vicar of Wakefield) ಎಂಬ ಕಾದಂಬರಿ ಯನ್ನು ಓದಿದ್ದ ಜ್ಞಾಪಕವಾಯಿತು. ಅಂತಹ ಒಂದು ಮನೆತನದ ಗೌರವ, ವೈಭವ, ಶ್ರೀಮಂತಿಕೆಗಳನ್ನು ನಾನು ಕಣ್ಣಾರೆ ಕಂಡೆ. ಅವರ ಮನೆಗೂ, ಮನೆಗೆ ಸೇರಿದ ಒಂದು ಇಗರ್ಜಿಗೂ ಒಂದು ಚಿಕ್ಕ ಸೇತುವೆಯನ್ನು ಕಟ್ಟಿದ್ದರು. ಇಗರ್ಜಿಯ ಅಂಗಳದಲ್ಲಿ ಈ ಕುಟುಂಬದ ವಿಧಿವಶರಾದ ಹಿರಿಯರೆಲ್ಲರನ್ನೂ ಹೂತಿದ್ದರು. ಈ ಭವ್ಯ ಭವನದ ಸುತ್ತ ಎಲ್ಲೆಲ್ಲೂ ಭೂಮಿ, ಗದ್ದೆ, ತೋಟಗಳು ಪಸರಿಸಿದ್ದವು. 'Monarch of all they survey' ಎಂಬ ಮಾತು ಅವರ ವಿಷಯದಲ್ಲಿ ನಿಜವಾದದ್ದು. ಅದರಲ್ಲಿ ಕುದುರೆಗಾಡಿ, ಆಧುನಿಕ ವಾಹನಗಳು, ಗದ್ದೆಗಳಿಗೆ ಬೇಕಾಗುವ ಯಂತ್ರಸಲಕರಣೆ ಗಳು. ಎಲ್ಲ ಅನುಕೂಲವೂ ಇತ್ತು. ಬೆಳಗ್ಗೆಯಾದರೆ, ಗಾಡಿಯೊಂದರ ತುಂಬಾ ಕಿತ್ತಲೆ ಹಣ್ಣುಗಳನ್ನೂ, ಸೇಬು ಹಣ್ಣುಗಳನ್ನೂ ಅವರ ತೋಟದಿಂದ ಕಿತ್ತು ತರು ತ್ತಿದ್ದರು.

........ಭವನದ ಒಳಗೆ ಒಂದು ದೊಡ್ಡ ಪುಸ್ತಕ ಭಂಡಾರವಿತ್ತು. ಹಲವಾರು ಆದ್ಯ (Original) ಚಿತ್ರ ಪಟಗಳು, ಹಳೆಯ ಬ್ರಿಟಿಷ್ ಪೀಠೋಪಕರಣಗಳು-ಇವೆಲ್ಲ ಪ್ರಾಚ್ಯ ವೈಭವ ಪೂರ್ಣ ಸಂಸ್ಕೃತಿಯನ್ನು ಸೂಚಿಸುತ್ತಿತ್ತು. ಹಳೆಯ ಬೆಂಕಿ ಒಲೆ ಗಳಿಗೆ ರಾಜಿನಾಮೆ ಕೊಟ್ಟು, ಇಂದಿನ ಆಧುನಿಕ ಕಾಲಕ್ಕೆ ಅನುಗುಣವಾಗಿ ಕೇಂದ್ರ ಶಾಖ ಪ್ರಸರಣ ವ್ಯವಸ್ಥೆಯನ್ನು ತಂದಿದ್ದಾರೆ. ಈ ಕಟ್ಟಡವನ್ನು ಚೊಕ್ಕಟವಾಗಿ ಡಲು ಹಿಂದಿನ ಕಾಲದಲ್ಲಿ ಹಲವಾರು ಆಳುಗಳ ಸಹಾಯವಿತ್ತಂತೆ. ಈಗ 'ಆಳುಗಳು' ಎಂಬ ಶಬ್ದವಿಲ್ಲ. ಬಂದರೂ ಅವರನ್ನು ಸಾಕಿ, ಕಾಪಾಡುವುದು ಕಷ್ಟಸಾಧ್ಯ. ಮನೆಯ ಯಜಮಾನಿಯೇ ಮನೆಗೆ ಸಂಬಂಧಪಟ್ಟ ಎಲ್ಲ ಕೆಲಸಗಳನ್ನೂ ನಿರ್ವಹಿಸಬೇಕಾಗು ತ್ತದೆ. ಅಂದ ಮೇಲೆ ಮನೆಯಾಕೆಗೆ ಎಷ್ಟೊಂದು ಗಡುಸಾದ ಜವಾಬ್ದಾರಿಕೆ, ಕೆಲ ಸದ ಒತ್ತಡ ಇರಬಹುದು ಎಂಬುದು ನಮ್ಮ ಎಣಿಕೆಗೆ ಮೀರಿದ ವಿಷಯ. ಅವರ ಜೀವನಕ್ಕೆ ಭಾರತದ ಶ್ರೀಮಂತ ಸಂಸಾರದ ಜೀವನವನ್ನು ಹೋಲಿಸಿದರೆ, ನಮ್ಮ ಜನರು ಯಾವ ಕೆಲಸವನ್ನೂ ಮಾಡದೆ ಬಣ್ಣದ ಬೀಸಣಿಗೆಗಳಂತೆ ಕಂಡು ಬರು ತ್ತಾರೆ!

* * * * *

ನಮ್ಮ ಈ ಪರ್ಯಟನದಲ್ಲಿ 13ನೆಯ ಶತಮಾನದಲ್ಲಿನ ಒಂದು ತಂಗುದಾಣಕ್ಕೆ (Inn) ಹೋದೆವು. ಹುಲ್ಲಿನ ಈ ಮೇಲ್ಛಾವಣಿ ಇರುವ ಈ ದಾಣ ಬಹಳ ಹಳೆಯ

ದಾಗಿದ್ದು ಒಂದು ಪ್ರಾಚೀನ ಕಳೆಯನ್ನು ಪಡೆದಿತ್ತು. ಈಗ ಹುಲ್ಲಿನ ಮೇಲ್ಛಾವಣಿ ಇರುವುದು ಬಹಳ ಅಪರೂಪ. ಅಲ್ಲದೆ ಬಹಳ ಬೆಲೆಯುಳ್ಳ ವಿಷಯವಾಗಿದೆಯಂತೆ. ಈ (Inn) ತಂಗುಧಾಣದ ಎತ್ತರ ಅತಿ ಕಮ್ಮಿಯಾದುದರಿಂದ ಪ್ರಯಾಣಿಕರು ಬಗ್ಗಿ ಒಳಗೆ ಹೋಗಬೇಕಾಗಿತ್ತು. ಚಳಿಗೆ ಶಾಖ ಕೊಡುವ ಒಲೆಗಳಲ್ಲಿ ಮರ ಮರಗಳನ್ನೇ ಕಡಿದು ಬೆಂಕಿ ಉರಿಸುವುದರಿಂದ ಇಡೀ ಕಟ್ಟಡ ಬೆಚ್ಚಗಿದ್ದು ಹವೆ ತೃಪ್ತಿಕರವಾಗಿತ್ತು. ದಣಿದುಬಂದ ರೈತರು ಈ (Inn) ತಂಗುದಾಣದಲ್ಲಿ ಪೀಪಾಯಿಗಳಿಂದ ಸುರಿದುಬರುವ ನೊರೆ ನೊರೆ ಬಿಯರ್‌ನ್ನು ಗಟಗಟನೆ ಕುಡಿದು ದಣಿವಾರಿಸಿಕೊಳ್ಳುತ್ತಿದ್ದರು. ದೂರ ದೂರದಿಂದ ಕುದುರೆ ಸವಾರಿ ಮಾಡಿ ಛಳಿಯಿಂದ ತಪ್ಪಿಸಿಕೊಳ್ಳಲು ಒಳಸೇರಿ ಬೆಂಕಿಯ ಬಿಸಿಯನ್ನು ಕಾಯಿಸಿ, ಬಾಯಾರಿಕೆಯನ್ನು ಪರಿಹರಿಸಿ, ಜನರು ಸುಖಪಡುತ್ತಿದ್ದರು. ಇಲ್ಲಿನ ಮಾಲೀಕ ಅತ್ಯಂತ ಹಾರ್ದಿಕ ಮನಸ್ಸಿನ ಉಲ್ಲಾಸಿ, ಬಂದವರೆಲ್ಲರನ್ನೂ ನಗು ನಗುತ್ತಾ ಹಾಸ್ಯನುಡಿ ಮೆಲ್ಲುತ್ತಾ ಸ್ವಾಗತಿಸಿ, ಬೇಕಾದುದನ್ನು ಕೊಟ್ಟು ಎಲ್ಲರನ್ನೂ ಆತ್ಮೀಯತೆಯಿಂದ ಕಾಣುತ್ತಿದ್ದನು. ಇಂತಹ ಹಳೆಯ ಮನೆ, ಹಳೆಯ ಸಂಪ್ರದಾಯ ಗಳನ್ನು ನೋಡಿ ನನಗೆ ನನ್ನ ಬಾಲ್ಯದ ದಿನಗಳ ನೆನಪು ಮರುಕಳಿಸಿತು. ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು, ವಿಟ್ಲದಲ್ಲಿನ ನಮ್ಮ ಹಿರಿಯರ ಹಳೆಯ ಮನೆಗಳು ಇದೇ ರೀತಿಯಾಗಿದ್ದು ಸಂಪ್ರದಾಯ ಪರಂಪರೆಯ ಹಿರಿಯ ಕಥೆಗಳನ್ನೇ ಸಾರುವಂತಿದ್ದುವು. ಈಗ ಆಧುನಿಕ ಜನತೆಯು ತಮ್ಮ ಅತಿ ಆಧುನಿಕತೆಯ ಬೇಸರ ಹೊಂದಿ, ಅದನ್ನು ನೀಗಲು ಇಂತಹ ಪ್ರಾಚೀನ ಸ್ಥಳಗಳಿಗೆ ಭೇಟಿಕೊಟ್ಟು ಅನಾಗರಿಕ ವ್ಯವಸ್ಥೆಗಳಲ್ಲಿ ಆನಂದ ಪಡುವುದೂ ಉಂಟೇ ? ಈಗಿನ ಜೀವನದಲ್ಲಿ ಅನುಕೂಲತೆಗಳು ಎಷ್ಟೊಂದಿವೆ ಎಂದರೆ ಅವನ್ನು ನಾವು ಪರಿವೆ ಇಲ್ಲದೆ ಅನುಭವಿಸುತ್ತೇವೆ.........

* * * * *

........ಲಂಡನ್ನಿನ ಪ್ರಸಿದ್ಧ 'ಟವರ್ ಆಫ್ ಲಂಡನ್' (Tower of London) ನೋಡಿ ಬಂದೆವು. ಅಲ್ಲಿ ರಾಜಮನೆತನದವರ ವೈಭವದ ಆಭರಣಗಳ ಪ್ರದರ್ಶನ ಮುಖ್ಯವಾಗಿ ಕಿರೀಟಗಳ ಅದ್ಭುತ ಪ್ರದರ್ಶನ ಇದೆ. ನೂರಾರು, ಸಾವಿರಾರು ಫಳ ಫಳನೆ ಮೆರುಗುವ ಅತ್ಯಂತ ಬೆಲೆ ಬಾಳುವ ವಜ್ರಗಳನ್ನು ಕಂಡು ಸ್ತಬ್ಧರಾದೆವು! ಇಂಗ್ಲೆಂಡನ್ನು ರಾಜ್ಯನಾಳಿದ ಚಕ್ರವರ್ತಿಗಳ, ಅರಸ–ಅರಸಿಯರು ಉಪಯೋಗಿಸು ತ್ತಿದ್ದ ಅಮೂಲ್ಯವಾದ ಮಕುಟಗಳನ್ನು ನೋಡಿದೆವು. ಆ ಐಶ್ವರ್ಯ ಸಂಪತ್ತನ್ನು ಎಣಿಕೆಗೆ ತರಲು ಸಾಧ್ಯವಿಲ್ಲ! 'ಆಫ್ರಿಕಾದ ತಾರೆ' (The Star of Africa) ಎಂಬ 530 ಕ್ಯಾರೆಟ್‌ನ (Carat) ವಜ್ರವೊಂದು ರಾಜ್ಯದ ಪ್ರಭುತ್ವದ ಚಿಹ್ನೆಯೊಂದರಲ್ಲಿ ನೋಡಿ ಮಂತ್ರಮುಗ್ಧರಾದೆವು. ನೋರ್ಮನರ ಧಾಳಿಯಿಂದ ಹಿಡಿದು ಪರಂಪರಾನು ಗತವಾಗಿ ಬಂದ ರಾಜಮನೆತನದವರ ಎಲ್ಲ ಆಭರಣಗಳನ್ನೂ, ರಾಜ ಮರ್ಯಾದೆಯ ಸೂಚನೆಗಳನ್ನು ಪ್ರದರ್ಶಿಸಿದ್ದರು. ಎಂತಹ ವೈಭವ! ಎಂತಹ ಶ್ರೀಮಂತಿಕೆ!

ಎಷ್ಟು ಅಂದವಾದ ಆಭರಣಗಳು! ವರ್ಣಿಸಲಸಾಧ್ಯವಾದ ವಿಷಯ. ಈ ಟವರ್ ಆಫ್ ಲಂಡನ್ ಒಂದು ಚಾರಿತ್ರಿಕ ಸ್ಥಳ. ಇಂಗ್ಲೆಂಡಿನ ಚರಿತ್ರಾರ್ಹ ಸ್ಥಳ. ಇಂಗ್ಲೆಂಡಿನ ಚರಿತ್ರೆಯೆಲ್ಲಾ ಅಲ್ಲಿ ಕಣ್ಣಮುಂದೆ ಕುಣಿಯುವಂತಿದೆ. ಆಯಾ ಕಾಲದ ವೈಶಿಷ್ಟ್ಯತೆ-ಆಗಿನ ಕೊಲೆಗಳು-ಮರಣಗಳು-ಅತ್ಯಾಚಾರಗಳು-ಸೆರೆಮನೆಗಳು-ದೇವಾಲಯುಗಳು-ಪ್ರಾರ್ಥನಾ ಮಂದಿರಗಳು-ರಾಜ್ಯದ ಅರಸ-ಅರಸಿಯರ ಮದುವೆಗಳು-ಇವೆಲ್ಲವನ್ನೂ ನಮಗೆ ಪ್ರತಿನಿಮಿಷ ಜ್ಞಾಪಿಸಿ ಆಗಿನ ದಿನಚರಿಯನ್ನು, ಅವರ ಕಷ್ಟಗಳು, ವೈಮನಸ್ಸು ಹೊಟ್ಟೆಕಿಚ್ಚು, ಭ್ರಷ್ಟಾಚಾರ, ಪ್ರೇಮ, ಕಿರುಕುಳ, ಅತ್ಯಾಚಾರ, ಯುದ್ಧಗಳು ಎಲ್ಲವನ್ನೂ ಅಲ್ಲಿನ ಪ್ರತಿಯೊಂದು ಕಲ್ಲು, ತೃಣವೂ ಗಟ್ಟಿಯಾಗಿ ಸಾರುವಂತಿತ್ತು.

ಟವರ್ ಆಫ್ ಲಂಡ್ನ ಬಿಟ್ಟು ಹೊರಗೆಬರುವಾಗ ಲಂಡನ್ ಬ್ರಿಡ್ಜನ್ನು (London Bridge) ಮೇಲಕ್ಕೆ ಎತ್ತಿ ಹಡಗುಗಳಿಗೆ ದಾರಿ ಮಾಡಿದುದನ್ನು ಕಂಡುದು ಅಪರೂಪದ ದೃಶ್ಯವಾಗಿತ್ತು.

* * * * * *

ನಮ್ಮ ಲಂಡನಿನ ಮಿನಿಗಗನಮಂಡಲದ (Planetorium) ಅನುಭವ ಅದ್ಭುತವಾಗಿತ್ತು. ಮನುಷ್ಯನ ಚಿಕ್ಕಮೆದುಳು ಆಕಾಶದ ಎಲ್ಲ ವಿಷಯುಗಳನ್ನೂ ಗ್ರಹಿಸಿರುವುದು ಅದ್ಭುತವಲ್ಲವೇ? ನನಗಂತೂ ಅಲ್ಲಿ ಇರುವವರೆಗೆ ಮೈಮರೆತು ಹೋಯಿತು. ಲಂಡನ್ನಿನ ಈ ಪ್ಲಾನೆಟೋರಿಯಂ ಜಗತ್ತಿನಲ್ಲಿ ಹೆಸರುವಾಸಿಯಾದುದು. ನಮಗೆ ಅಲ್ಲಿ ಕಳೆದ ಎರಡು ಗಂಟೆಗಳ ಕಾಲ ಆಕಾಶವನ್ನೆಲ್ಲಾ ಸುತ್ತಾಡಿ ಬಂದಂತಾಯಿತು.

ಲಂಡನ್ ಪ್ಲಾನೆಟೋರಿಯಂ ಪಕ್ಕದಲ್ಲಿ ಮೇಡಮ್ ಟುಸ್ಸಡ್ (Madame Tussad) ಎಂಬ ಕಲಾವಿದೆ ಮೇಣದಲ್ಲಿ ಜಗದ್ವಿಖ್ಯಾತ ವಿಭೂತಿಗಳ ಪ್ರತಿಕೃತಿಗಳನ್ನು ಕೆತ್ತಿದ ಪ್ರದರ್ಶನವಿದೆ. ಜೀವನದಲ್ಲಿ ವಿಧವಿಧವಾಗಿ ಪ್ರಸಿದ್ಧರಾಗಿರುವ ಭೂಲೋಕದ ಎಲ್ಲಾ ಮಹಾ ವ್ಯಕ್ತಿಗಳನ್ನೂ ಮಾನವ ಪ್ರಮಾಣದಲ್ಲಿ ಕಡೆದು ನಿಲ್ಲಿಸಿದ್ದಾರೆ. ನೋಡಿದರೆ ಸಜೀವ ವ್ಯಕ್ತಿಗಳಂತೆಯೇ ಕಾಣುತ್ತಾರೆ. ಆದರೆ ನಮ್ಮ ಗಾಂಧೀಜಿ, ನೆಹರೂ ಮತ್ತು ಇತ್ತೀಚಿನ ಲಾಲ್‌ಬಹದ್ದೂರ್ ಶಾಸ್ತ್ರಿಯವರ ಗೊಂಬೆಗಳನ್ನು ಕಂಡು ಮನಸ್ಸಿಗೆ ಸ್ವಲ್ಪ ಅಸಮಾಧಾನವಾಯಿತು. ಅವರ ಪೂರ್ಣ ವ್ಯಕ್ತಿತ್ವ ಅವುಗಳಲ್ಲಿ ಮೂಡಿ ಬಂದಿರಲಿಲ್ಲ. ಇದಲ್ಲದೆ ಹೊರಾಂಗಣದಲ್ಲಿ (Punch & Judy) ಪಂಚ್ ಅಂಡ್ ಜೂಡಿ ಪ್ರದರ್ಶನಗಳಿದ್ದುವು. ಮಕ್ಕಳು ಅವನ್ನು ನೋಡಿ ಕೇಕೆ ಹೊಡೆದು ಆನಂದದಿಂದ ಕಿರುಚುತ್ತಿದ್ದರು. ಅವರನ್ನು ಅಲ್ಲಿಗೆ ಕರೆದುಕೊಂಡು ಬಂದ ತಂದೆ-ತಾಯಂದಿರು ಮಕ್ಕಳ ಆನಂದದಲ್ಲಿ ಮೈಮರೆಯುತ್ತಿದ್ದರು.

* * * * * *

ರಾಯಲ್ ಆಲ್ಬರ್ಟ್ ಹಾಲಿನಲ್ಲಿ ದಿವಂಗತ ಲಾಲ್‌ಬಹದ್ದೂರ್ ಶಾಸ್ತ್ರಿಯವರ ನಿಧನದ ಸಂತಾಪ ಸೂಚಕ ಸಭೆಗೆ ಹೋದೆವು. ಪ್ರಧಾನಿ ವಿಲ್ಸನ್ ಅವರು ಶ್ರೀ ಶಾಸ್ತ್ರಿಯವರ ಗುಣಗಾನ ಮಾಡಿದರು. ಬರ್ಮಾ ದೇಶದ ಅಡ್ಮಿರಲ್ ಮೌಂಟ್ ಬ್ಯಾಟನ್ ಅವರು ದೆಹಲಿಯಲ್ಲಿ ನಡೆದ ಶಾಸ್ತ್ರಿಯವರ ಅಂತಿಮ ಯಾತ್ರೆಯ ವಿಚಾರವಾಗಿ ಮಾತನಾಡಿದರು. (ಅದನ್ನು ನಾವು ಇಲ್ಲಿನ ಟಿ. ವಿ. ಯಲ್ಲಿ ನೋಡಿದ್ದೆವು.) ಲಾರ್ಡ್ ಸೊರೆನ್‌ಸನ್ (Lord Sorenson) ಅವರು ಭಗವದ್ಗೀತೆಯ ತಳಹದಿಯ ಮೇಲೆ ಜೀವನ ನಡೆಸಿ ಬಂದ ಶಾಸ್ತ್ರೀಜಿಯವರ ವಿಷಯ ತಿಳಿಸಿದರು. ಶ್ವೇತವಸ್ತ್ರಧಾರಿ ಜನರ ಗುಂಪೊಂದು ರಾಮನಾಮ ಭಜಿಸಿದರು.

ರಾಯಲ್ ಆಲ್ಬರ್ಟ್ ಹಾಲ್ ಒಂದು ಭೂತಾಕಾರದ ರಂಗಮಂದಿರ. ಸುಮಾರು ಎಂಟು ಸಾವಿರಕ್ಕೂ ಮೇಲ್ಪಟ್ಟು ಜನರು ಕೂತು ಕಾರ್ಯಕ್ರಮವನ್ನು ನೋಡುವ ಏರ್ಪಾಡಿದೆ. ವರ್ತುಲಾಕಾರದ ಮಹಡಿಯ ಮೇಲೆ ಮಹಡಿಗಳನ್ನು ಕಟ್ಟಿ ಹಲವಾರು ಬಾಗಿಲುಗಳನ್ನಿಟ್ಟು ಜನರು ಎಲ್ಲಿ ಕುಳಿತರೂ ಅನಾಯಾಸವಿರುವಂತೆ ರಚಿಸಲ್ಪಟ್ಟಿದೆ. ಜಗತ್ತಿನ ಪ್ರಖ್ಯಾತ ಸಂಗೀತಗಾರರು, ಸಂಗೀತ ರಚಯಿತರು, ಇಲ್ಲಿ ಬಂದು ಅವರ ಪ್ರದರ್ಶನಗಳನ್ನು ಈ ಅದ್ಭುತವಾದ ರಂಗಮಂದಿರದಲ್ಲಿ ಕೊಡುವ ರೂಢಿ ಇದೆ. ನಾವಂತೂ ಈ ಸ್ಥಳದಲ್ಲಿ ಅನೇಕಾನೇಕ ವಿವಿಧ ವಿನೋದಾವಳಿಗಳನ್ನು ನೋಡಿದ್ದೇವೆ. ಶ್ರೀಮತಿ ಅಂಗಡಿಯವರ ಕುಟುಂಬದ ಹೆಸರಿನಲ್ಲಿ ಈ ರಂಗಪ್ರಪಂಚದಲ್ಲಿ ಒಂದು ಸುಂದರ ಪ್ರತ್ಯೇಕ ಕೊಠಡಿ (A Box – ಅದರಲ್ಲಿ 8–10 ಆಸನಗಳು-ಮೇಲ್ಹಾಸುಗಳು ಇತರೆ ಹೆಚ್ಚಿನ ಬಟ್ಟೆಗಳನ್ನು ತೂಗುಹಾಕಲು ಗೂಟಗಳು, ಎಲ್ಲಾ ಇವೆ. ರಂಗಮಂದಿರದ ಮುಂದೆಯೇ ಇರುವ ಈ ಪ್ರತ್ಯೇಕಾಸನಗಳಲ್ಲಿ ಕುಳಿತು ನೋಡುವುದು ಒಂದು ಅತಿ ವೈಭವದ ಅನುಭವ) ಇದೆ. ಇದೇ ಸ್ಥಳದಲ್ಲಿ ರಷಿಯಾದ ನೃತ್ಯ ತಂಡದ ಪ್ರದರ್ಶನವನ್ನು ಕಂಡೆವು. ನೂರಾರು ನರ್ತಕರು ಅವರ ರಾಷ್ಟ್ರೀಯ ಉಡುಪನ್ನು ಧರಿಸಿ ಕುಣಿಯುವ ದೃಶ್ಯ: ಸ್ವಾರಸ್ಯವಾದುದು. ಬೇಸಿಗೆಯ ದಿನಗಳಲ್ಲಿ ಹೆನ್ರಿವುಡ್ ಪ್ರೊಮನೇಡ್ (Henry Wood Promenade) ಸಂಗೀತ ಕಚೇರಿಗಳು ಜರುಗುತ್ತವೆ. ಆ ಸಮಯದಲ್ಲಿ ವಿಶಿಷ್ಟವಾದ ಕಾರ್ಯಕ್ರಮಗಳಿದ್ದು ಜನಪ್ರಿಯ ಸಂಗೀತಗಾರರು ತಮ್ಮ ಸೇವೆ ಸಲ್ಲಿಸುತ್ತಾರೆ. (ನಮ್ಮಲ್ಲಿ ತ್ಯಾಗರಾಜ ಉತ್ಸವ, ಪುರಂದರದಾಸ, ಕನಕದಾಸ, ಶಂಕರ ಜಯಂತಿ, ರಾಮನವಮಿ ಸಮಯದ ಸಂಗೀತ ಸಮ್ಮೇಳನಗಳಿದ್ದಂತೆ) ಈ ಸಂದರ್ಭದಲ್ಲಿ ರಾಯಲ್ ಆಲ್ಬರ್ಟ್ ಹಾಲ್‌ನ ಮಧ್ಯದ ಕುರ್ಚಿಗಳನ್ನೆಲ್ಲಾ ತೆಗೆದು ಒಂದು ನೀರಿನ ಕಾರಂಜಿಯನ್ನು ಹಾಕುತ್ತಾರೆ. ಸುತ್ತಲೂ ಹೂಗಿಡಗಳಿಂದ ಅಲಂಕರಿಸಿ, ಉದ್ಯಾನವನದ ವಾತಾವರಣ ಕೊಡುತ್ತಾರೆ. ಉದ್ಯಾನವನದಲ್ಲಿಯೆಂಬಂತೆ ಇದರ ಸುತ್ತಲೂ ಜನರು ಸೇರುತ್ತಾರೆ. ಕುಳಿತೋ, ಮಲಗಿಯೋ ಒರಗಿಕೊಂಡೋ, ತಮಗೆ ಅನುಕೂಲ ಭಂಗಿಯಲ್ಲಿದ್ದು ಸಂಗೀತವನ್ನು ಕೇಳಿ ಆನಂದಿ

ಸುತ್ತಾರೆ. ಈ ದೃಶ್ಯ ನೋಡತಕ್ಕದ್ದು. ಕಲೆಗೆ ಪ್ರೋತ್ಸಾಹ, ಆಸಕ್ತಿ ಜನರಲ್ಲಿ ಎಷ್ಟು ಆಳವಾಗಿದೆಯೆಂಬುದರ ಮಾಪಕ ಈ ಗಾಯನ ಸಾಮ್ರಾಜ್ಯ ರಸಿಕರದು.

* * * * * *

ಒಮ್ಮೆ ಅದೇ ರಾಯಲ್ ಫೆಸ್ಟಿವಲ್ ಹಾಲ್‌ನಲ್ಲಿ ಜಗತ್ತಿನ ಪ್ರೀಮಿಯರ್ ರೆಸ್‌ಲಿಂಗ್ ಪ್ರೊಮೋಷನ್ (Premier Wrestling Promotion) ಇತ್ತು. ಅಲ್ಲದೆ 1966–67 ರ ಮಲ್ಲಯುದ್ಧ ಚಾಂಪಿಯನ್‌ಗಳ ಪರೇಡ್ ಇತ್ತು. ನಾವು ಅದನ್ನೂ ನೋಡದೆ ಇರಲಿಲ್ಲ! ಇದಕ್ಕೂ ಹೋಗಿ ಜನರ ಪ್ರತಿಕ್ರಿಯೆಗಳನ್ನು ಅವಲೋಕಿಸಿ ಆಶ್ಚರ್ಯಪಟ್ಟೆವು. ಈ ಒರಟು ಆಟವನ್ನು ನೋಡಲು ಹೆಚ್ಚಾಗಿ ಹೆಂಗಸರು ಮಕ್ಕಳು ಇರುವುದೇ ಆಶ್ಚರ್ಯ. ಒಂದಾನೊಂದು ಕಾಲದಲ್ಲಿ ಮಲ್ಲಯುದ್ಧದ ವೃತ್ತಿಪಟು ಗಳನ್ನು ಅಮಾನುಷ ವ್ಯಕ್ತಿಗಳೆಂದು ತಿಳಿದುಕೊಂಡಿದ್ದರು. ಅವರು ನಿಸರ್ಗದ ಅತಿ ಕ್ರಮದ ಸೃಷ್ಟಿ ಎಂದು ತಿಳಿದಿದ್ದರು. ಮಾನವನಲ್ಲಿ ಈ ತರಹದ ಶಕ್ತಿ, ಸ್ಥೈರ್ಯ, ದಾರ್ಢ್ಯತೆ ಅಸಾಮಾನ್ಯವಾದುದಲ್ಲ ಎಂದು ಈಗ ಇಂತಹ ಕಲಿಗಳಿಗೆ ಗೌರವ ಸ್ಥಾನ ಕೊಡು ತ್ತಾರೆ. ಅವರು ಪ್ರದರ್ಶಿಸುವ ಆ ಕುಸ್ತಿಯ ಕಣದಲ್ಲಿ ಅವರು ಈಗಲೂ ಅಮಾನುಷ ವ್ಯಕ್ತಿಗಳಂತೆಯೇ ಕಾಣುತ್ತಾರೆ. ನಮ್ಮ ಭಾರತವೂ ಕುಸ್ತಿ ಪೈಲವಾನರಿಗೆ ಹೆಸರು ವಾಸಿಯಾದುದಲ್ಲವೆ? ಏಕೆ! ನಮ್ಮ ಮಹಾ ಭಾರತದ ಭೀಮನೂ ಮಲ್ಲಯುದ್ಧ ಪ್ರವೀಣನಲ್ಲವೇ? ಈಗಿನ ಕಿಂಗ್‌ಕಾಂಗ್ ಇಲ್ಲವೇ? ನಾವು ಅಂದು ಅನೇಕಾನೇಕ ಪಂದ್ಯಗಳನ್ನು ನೋಡಿದೆವು. ಕೆಲವು ತುಂಬಾ ಕೆಳಮಟ್ಟದ – ಕೀಳು ಅಭಿರುಚಿಯ ಪಂದ್ಯಗಳಾಗಿದ್ದವು. ಮತ್ತೆ ಕೆಲವು ತುಂಬಾ ಗರ್ವ, ಕೋಪ ಮತ್ತು ವಿಷದಿಂದ ಕೂಡಿದ್ದವು. ಅಂತೂ ಈ ಕುಸ್ತಿಯೆಂಬುದು ಅತಿ ಹಿಂಸೆ ಕೊಡುವ ಕ್ರೂರ ಕ್ರೀಡೆ. ಜನರು ಕಿರುಚುತ್ತಾರೆ, ಕೇಕೆ ಹಾಕುತ್ತಾರೆ, ರಂಗಮಂದಿರದಲ್ಲೆಲ್ಲಾ ಗಲಭೆ, ಗದ್ದಲದ ಗೊಂದಲ........ನಮಗೆ ಈ ಅನುಭವ ವಿಚಿತ್ರವಾಗಿತ್ತು.

* * * *

........ವಿಂಬಲ್ಡನ್! (Wimbledon) ....ಈ ಶಬ್ದದಲ್ಲಿ ಎಷ್ಟೊಂದು ಮಾಯಾಜಾಲವಿದೆ! ಅಲ್ಲಿನ ಟೆನಿಸ್ ನನಗೆ ಕನಸು ನೆನಸಾದಂತಾಯಿತು. ಕಾಲೇಜು ಓದಿನ ಸಮಯದಿಂದ ಈ ಆಟದಲ್ಲಿ ಆಸೆಯಿದ್ದ ನನಗೆ ವಿಂಬಲ್ಡನ್ ಎಂಬುದು ಒಂದು ಪುಣ್ಯಕ್ಷೇತ್ರದಂತೆ ಅಭಿಮಾನಯುಕ್ತವಾಗಿದ್ದಿತು. ನಾವು ಅಲ್ಲಿ ಕೊನೆಯ 'ಫೈನಲ್ಸ್' (Finals) ಆಟವನ್ನು ನೋಡಿದೆವು. ನೂರಾರು ಟಿ. ವಿ. ಕೆಮೆರಾಗಳು, ಚಲಚ್ಚಿತ್ರ ಕೆಮೆರಾಗಳು ಎಲ್ಲೆಲ್ಲೂ ವ್ಯಾಪಿಸಿದ್ದವು. ರಾಜಮನೆತನದವರಿಗಾಗಿಯೇ ಒಂದು ಪ್ರತ್ಯೇಕ ಕಕ್ಷೆಯನ್ನು ವಿಂಗಡಿಸಿ, ಮೀಸಲಾಗಿಟ್ಟಿದ್ದರು. ಅಂದಿನ ಆಟ ಬಲು ಅಂದದ ಆಟವಾಗಿತ್ತು. ಎಷ್ಟೊಂದು ಲಾಲಿತ್ಯಮಯ ಆಟ! ಆಟದ ಚಂದ, ವೇಗ, ಶಕ್ತಿ, ಕಾತುರತೆ, ಸೊಬಗು ಅಬ್ಬಾ!! ವರ್ಣಿಸಲಸಾಧ್ಯವಾದ ಅನುಭವ! ಜಗತ್ಪ್ರಸಿದ್ಧ

ಆಟಗಾರರಲ್ಲಿ ನಡೆಯುವ ಈ ಸ್ಪರ್ಧೆ ನೋಡತಕ್ಕದ್ದು. ವಿಂಬಲ್ಡನ್ ಕ್ಷೇತ್ರಕ್ಕೆ ಹೋಗಿ ಈ ರಮ್ಯ ಪಂದ್ಯಗಳ ದರ್ಶನವನ್ನು ಪಡೆಯುವ ಸುಯೋಗವು ನನ್ನ ಜೀವ ಮಾನದಲ್ಲಿ ಬರಬಹುದೆಂದು ನಾನು ಎಂದಿಗೂ ಎಣಿಸಿರಲಿಲ್ಲ. ಅವಕಾಶ ದೊರೆತಾಗ ನಾನು ಮೈಮರೆತು ಆನಂದಪಟ್ಟೆ.

ಕೆಲವು ಸ್ಪರ್ಧೆಗಳಲ್ಲಿ ನಿರ್ಣಯಘಟ್ಟ ಎಷ್ಟು ಉದ್ರಿಕ್ತವಾಗಿತ್ತು ಎಂದರೆ ಪತ್ರಿಕೆ ಯವರು ವರದಿ ಮಾಡಿದಂತೆ "ಆಲ್‌ಫ್ರೆಡ್ ಹಿಚ್‌ಕಾಕ್‌ನ ಕಥೆ ಹಾಗೂ ಅಂಕ ನಿರ್ದೇಶಕನಿಗೂ ನಾಚಿಕೆಯಾಗುವಂತಿತ್ತು." ಡ್ಯೂಕ್ ಮತ್ತು ರಾಣಿ (Duke and Ducherss) ಸ್ಪರ್ಧೆಗೆ ಬಂದಿದ್ದರು. ಹಸುರು ರತ್ನಗಂಬಳಿಯ ಮೇಲೆ(Red Carpet ಅಲ್ಲ) ಗಂಭೀರವಾಗಿ ನಡೆದು ಬಂದು ಗೆದ್ದವರನ್ನು ಹೊಗಳಿ, ಅಭಿನಂದಿಸಿ, ಬಹುಮಾನ ನೀಡುವುದನ್ನು ನೋಡಿದೆವು.

ವಿಂಬಲ್ಡನ್ನಿನ ಕ್ರೀಡಾರಂಗದ ಹಸಿರು ಹುಲ್ಲು ಜೀವಮಾನದಲ್ಲಿ ನೋಡತಕ್ಕದ್ದು. ಹಸಿರು ಹುಲ್ಲನ್ನು ಎಷ್ಟು ಜಾಗ್ರತೆಯಾಗಿ ಬೆಳೆಸಿ ಕಾಪಾಡುತ್ತಾರೆ! ಸ್ಪರ್ಧೆಗೆ ಮೊದಲು ಅದನ್ನು ಮುಚ್ಚಿಡುತ್ತಾರೆ. ಸ್ಪರ್ಧೆಗೆ ಕೆಲವು ನಿಮಿಷಗಳ ಮುಂಚೆ ಪ್ರೇಕ್ಷಕರಿಗೆ ಅದರ ದರ್ಶನವಾಗುತ್ತದೆ.

ಕಣ್ಣಾರೆ ಕಂಡು ಸಂತೋಷಪಡುವ ಈ ಆಟಗಳು ಟಿ. ವಿ. ಮೇಲೆಯೂ ಅತ್ಯಂತ ರಸಭರಿತವಾಗಿರುತ್ತದೆ. ಆಟಗಾರರ ವಿವಿಧ ಭಂಗಿಗಳನ್ನು ಬಹಳ ಹತ್ತಿರ ದಿಂದ ತೋರಿಸಿ, ಗೆದ್ದ ಸಮಯದ ಆ ರಸನಿಮಿಷದ ದೃಶ್ಯವನ್ನು ಮೆಲ್ಲಗೆ ಚಲಿಸುವ ಚಿತ್ರದಿಂದ ತೋರಿಸಿ, ಪ್ರೇಕ್ಷಕರು ಆಟದ ಆವರಣದಲ್ಲಿರುವುದಕ್ಕಿಂತ ಹೆಚ್ಚು ಸಡಗರ ವನ್ನು ಒದಗಿಸುವ ಈ ಟಿ. ವಿ. ಮೆಚ್ಚತಕ್ಕದ್ದು. ಹಿನ್ನೆಲೆಯ ವೀಕ್ಷಕ ವಿವರಣೆ ಕೂಡ ಅತ್ಯಂತ ಸ್ವಾರಸ್ಯವಾಗಿರುತ್ತದೆ.

........ನಾವು ಲಂಡನ್ನಿನಲ್ಲಿದ್ದಾಗ World Foot Ball Cup ಗಾಗಿ ಪಂದ್ಯ ವಿತ್ತು. ಆ ಸಮಯದಲ್ಲಿ ಎಲ್ಲ ರಸ್ತೆಗಳೂ ವೆಂಬ್ಲಿಗೆ (Wembley) ಹೋಗುವಂತಿತ್ತು! ಲಂಡನ್ ನಗರವಲ್ಲೆಲ್ಲ ಎತ್ತ ನೋಡಿದರತ್ತ ವೆಂಬ್ಲಿಗೆ ಕರೆದೊಯ್ಯುವ ದಾರಿಯನ್ನು ಬಾಣಗಳ ಚಿತ್ರದಿಂದ ಸೂಚಿಸಿದ್ದರು. ನಮಗೆ ಆಟಕ್ಕೆ ಟಿಕೆಟ್ ಸಿಗಲಿಲ್ಲ....ಆದರೆ ಆಟವನ್ನು ಟಿ. ವಿ. ಯಲ್ಲಿ ನೋಡಿದೆವು. ಹಂಗೆರಿಯು ಬ್ರೆಜಿಲ್‌ನ್ನು ಸೋಲಿಸುವ ಈ ಸ್ಪರ್ಧೆ ಅತ್ಯಂತ ಚೆನ್ನಾಗಿತ್ತು. ಪತ್ರಿಕೆ ಈ ಸ್ಪರ್ಧೆಗೆ '3 : 1 ಹಂಗೆರಿಯನ್ ರ್‍ಯಾಪ್ಸೊಡಿ' (3 : 1 Hungarian Rhapsody) ಎಂದು ವರ್ಣಿಸಿದವು. ಈ ಸಮಯ ದಲ್ಲಿ ಎಲ್ಲ ಪಾನ ಮಂದಿರಗಳಲ್ಲೂ, ಫಲಹಾರ ಮಂದಿರಗಳಲ್ಲೂ, ಸಾರ್ವಜನಿಕ ಸ್ಥಳ ಗಳಲ್ಲೂ ಟಿ.ವಿ.ಗಳನ್ನು ಬಾಡಿಗೆಗೆ ತರಿಸಿ ತಮ್ಮತಮ್ಮ ಗಿರಾಕಿಗಳು ಹೆಚ್ಚಾಗಿ ಬರುವಂತೆ

ಮಾಡುತ್ತಾರೆ. ಗಂಭೀರವಾದ ಮಾನ್ಯತೆಯಿಂದ ಕೂಡಿದ ಬ್ರಿಟಿಷ್ ಜನತೆ ಕೂಡ ಈ ಸ್ಪರ್ಧೆ ನೋಡುತ್ತ ಉತ್ತೇಜಿತರಾಗಿ ಕಿರುಚುವುದನ್ನು ಕೇಳಿದೆವು.

ಟಿ. ವಿ. ಯಲ್ಲಿ ಆಟ ನೋಡುವುದೇ ಒಂದು ಆನಂದ. ಆಟಗಾರರ ಸಂದರ್ಶನಗಳು, ಪ್ರೇಕ್ಷಕ ಸಂಕುಲ ತಂಡತಂಡವಾಗಿ ಬಂದು ಸೇರುವ ಅದ್ಭುತ ದೃಶ್ಯಗಳು, ಗೋಲ್ ಹೊಡೆದಾಗ, ಹೊಡೆದದ್ದು ಹೇಗೆ, ಏನಾಯಿತು ಎಂದು ತಿಳಿಸುವ, ನಿಧಾನವಾಗಿ ಚಲಿಸುವ ಹಿನ್ನೆನಪು ಮರುಕಳಿಸಿ ಕೊಡುವ ಕುತೂಹಲಕಾರಿ ದೃಶ್ಯಗಳು ರಾಜಮನೆತನದವರ ಆಗಮನ ಎಲ್ಲವನ್ನೂ ಕೂಲಂಕುಷವಾಗಿ ಎಳೆ ಎಳೆಯಾಗಿ ಚಿತ್ರಿಸಿ, ಆಟದ ವಾತಾವರಣವನ್ನೆಲ್ಲ ಪ್ರೇಕ್ಷಕರಿಗೆ ಒದಗಿಸುತ್ತಾರೆ. ಬ್ರಿಟಿಷ್ ಜನರು ವರ್ಲ್ಡ್ ಕಪ್ಪನ್ನು (World Cup) ಗೆದ್ದ ಮೇಲಂತೂ ಲಂಡನ್ ನಗರಕ್ಕೆ ನಗರವೇ ಹುಚ್ಚು ಹುಚ್ಚಾಯಿತು. ಯಶಸ್ಸಿನ ಪರಿಣಾಮದಿಂದಾಗಿ ಭ್ರಮೆಪಟ್ಟ ಆಟಗಾರರು ಪಾರಿತೋಷಕವನ್ನು ಕೈಯಲ್ಲಿ ಎತ್ತಿಹಿಡಿದು "ನಮ್ಮ ಕೈಯ್ಯಲ್ಲಿ ಇಡೀ ಜಗತ್ತೇ ಇದೆ" ಎಂದು ಫಳಫಳಿಸುತ್ತಿರುವ ಅಚ್ಚ ಬಂಗಾರದ ಬಹುಮಾನ ಕರಂಡಕವನ್ನು ಪ್ರೇಕ್ಷಕರ ಕಣ್ಣುಮುಂದೆ ಕುಣಿದಾಡಿಸಿದರು! ಆ ಅದ್ಭುತ ಅಂತಿಮ ಆಟವನ್ನು ನೋಡಿದ ನಾವು ನಿಜಕ್ಕೂ ಪುಣ್ಯವಂತರೆನ್ನಬೇಕು. ಕಡೆಯಲ್ಲಿ ಮೂವತ್ತು ಸೆಕೆಂಡು ಇರುವಾಗ ಸ್ಕೋರು 2–2 ಗೋಲುಗಳಾಗಿದ್ದವು. ವರ್ಲ್ಡ್ ಕಪ್ಪಿನ ಇತಿಹಾಸದಲ್ಲೇ ಅಂದು ಮೊದಲಾಗಿ ಆಟಗಾರರಿಗೆ ಅರ್ಧಗಂಟೆಯ ಹೆಚ್ಚುವರಿಯನ್ನು ಆಡಲು ಕೊಟ್ಟಿದ್ದರಂತೆ. ವೆಂಬ್ಲಿಯಲ್ಲಂತೂ ಅಸಾಧ್ಯ ಜನಸಂದಣಿ. ಅರ್ಧ ಮಿಲಿಯನ್ ಪೌಂಡುಗಳನ್ನು ಸರ್ಕಾರದವರು ಈ ಪಂದ್ಯಕ್ಕೆ ವೆಚ್ಚ ಮಾಡಿದ್ದರೂ ಸಾರ್ಥಕವಾಯಿತು ಎನ್ನುತ್ತಿದ್ದರು....

....ಎಂತಹ ಆಟ! ಎಂತಹ ಸ್ಪರ್ಧೆ! ಎಂತಹ ಕಠಿಣ ಶ್ರಮ! ಉದ್ವೇಗಪೂರ್ಣ ಕಾತುರ – ಕುತೂಹಲತೆಯಿಂದಾಗಿ ಹೃದಯ ವೇದನೆ – ಅಂತಿಮಯಾತನೆ! ಅಂತೂ ಕೊನೆಗೆ ಧೈರ್ಯಶಾಲಿಗಳಾದ ಬ್ರಿಟಿಷರು ಗೆದ್ದರು.

* * * * * *

ಓವಲ್ ಕ್ರಿಕೆಟ್ ಮೈದಾನದಲ್ಲಿ ನಾವು ಒಂದು ಕ್ರಿಕೆಟ್ ಟೆಸ್ಟ್ (Test) ನೋಡಿದೆವು. ವೆಸ್ಟ್ ಇಂಡಿಯನ್ನರಿಗಾಗಿಯೋ ಏನೋ, ಅಂದು ಲಂಡನ್ನಿನಲ್ಲಿ ಕೆರ್ರಿಬಿಯನ್ (Carribean) ಹವೆ ಇತ್ತು. ಸುಡು ಬಿಸಿಲಿನಲ್ಲಿ ಕುಳಿತು ಚರ್ಮವೆಲ್ಲ ಕಪ್ಪಾಯಿತು. ಇಂಗ್ಲೆಂಡಿನ ಬಿಸಿಲಿಗೆ ಆ ಗುಣ ಇರಬಹುದು ಎಂದು ನಾನು ಎಣಿಸಿಯೇ ಇರಲಿಲ್ಲ!

........ಓವಲ್ ಮೈದಾನವನ್ನು ನೋಡಿ ನನಗಂತೂ ನಿರಾಸೆಯಾಯಿತು. ಬೊಂಬಾಯಿನ ಬ್ರೆಬೋರ್ನ್ ಕ್ರೀಡಾಂಗಣ (Brbbourne Stadium) ಇದಕ್ಕೂ

ಹೆಚ್ಚು ಅಲಂಕಾರ ಪ್ರಾಯವಾಗಿದೆ. ಓವಲ್‌ನಲ್ಲಿನ ಸ್ಕೋರ್ ಬೋರ್ಡ್ (Score Board) ನಮ್ಮ ಬೆಂಗಳೂರಿನಲ್ಲಿನ ಸೆಂಟ್ರಲ್ ಕಾಲೇಜಿನಲ್ಲಿದ್ದಂತೆಯೇ ! ಸರ್ ಲಿಯರಿ ಕಾನ್‌ಸ್ಟೆಂಟೈನ್ (Sir Leary Constantine) ಮೂಲಕ ನಮಗೆ ಶ್ರೀ ಅಂಗಡಿಯವರು ಎರಡು ಪ್ರವೇಶ ಪತ್ರಗಳನ್ನು ದೊರಕಿಸಿಕೊಟ್ಟಿದ್ದರು. ದ್ವಾರದ ಬಳಿ ನಿಂತು ಸ್ವತಃ ಅವರೇ ನಮ್ಮನ್ನು ಸ್ವಾಗತಿಸಿದರು. ಒಂದು ಕಾಲದಲ್ಲಿ ಅವರು ಜಗತ್ತಿನ ಅತ್ಯಂತ ವೇಗಶಾಲಿ ಬೌಲರ್‌ಗಳಲ್ಲಿ (Bowler) ಒಬ್ಬರಾಗಿದ್ದರು. ದ್ವಾರದಿಂದ ಕ್ರೀಡಾಂಗಣಕ್ಕೆ ಹೋಗುವ ಹಾದಿಯಲ್ಲಿ ಕ್ರಿಕೆಟ್ ಕ್ರೀಡಾಲೋಕದ ಅತಿರಥ ಮಹಾರಥರಂತಿದ್ದ ಇಂದಿನ ಹಾಗೂ ಹಿಂದಿನ ಕ್ರಿಕೆಟ್ ಕಲಿಗಳನ್ನು ಕಂಡೆವು.

........ಹೆಚ್ಚಾಗಿ ಕ್ರಿಕೆಟ್ ಪ್ರೇಮಿಗಳು ಆಟವನ್ನು ಟಿ. ವಿ. ಯಲ್ಲಿ ನೋಡುವುದರಿಂದ ಭಾರತದಲ್ಲಿ ನೆರೆಯುವ ಹಾಗೆ ಇಲ್ಲಿ ಆಟದ ಮೈದಾನಗಳಲ್ಲಿ ಸೇರುವ ರೂಢಿಯಿಲ್ಲ. ಅಂತಿದ್ದರೂ ಅಂದಿನ ಪ್ರೇಕ್ಷಕ ವರ್ಗದ ಸುಮಾರು ಸಂಖ್ಯೆ ಇಪ್ಪತ್ತು ಸಾವಿರಕ್ಕೆ ಕಡಿಮೆಯಿರಲಾರದು.

ಅಂದು ಬಹಳ ಬಿಸಿಲು-ಸೆಕೆ. ಬಂದ ಜನರು ಬಿಸಿಲಿನಲ್ಲಿ ಕಾದು, ಬಾಯಾರಿಕೆಗೆ 'ಬಿಯರ್' ಅನ್ನು ಕೊಡ ಕೊಡ ಕುಡಿದು ದಾಹ ಪರಿಹಾರ ಮಾಡಿಕೊಳ್ಳುತ್ತಿದ್ದರು. ಟಿ. ವಿ. ಬಾತ್ಮಿದಾರರು, ಸುದ್ದಿಗಾರರು, ಬಿ. ಬಿ. ಸಿ. ಯವರು ಸುತ್ತ ಮುತ್ತಲೂ ಓಡಾಡಿಕೊಂಡಿದ್ದು ಸ್ವಾರಸ್ಯದ ಘಟನೆಗಳನ್ನು ಪ್ರಕಟಿಸಲು ಪ್ರಯತ್ನಿಸುತ್ತಿದ್ದರು. ನಮ್ಮ ಸನ್ನಿಹದಲ್ಲಿಯೇ ಜಮೈಕನ್ ಹೆಂಗಸೊಬ್ಬಳು ವಿಚಿತ್ರವಾದ ಹಸುರು ಹುಲ್ಲಿನ ಹ್ಯಾಟ್ ಧರಿಸಿ ಆಟವನ್ನು ಕಂಡು ಆನಂದಿಸುತ್ತಿದ್ದ ದೃಶ್ಯ ಬಿ.ಬಿ.ಸಿ. ಹಾಗೂ ಟಿ. ವಿ. ಯವರಿಗೆ ಬಲು ಪ್ರಿಯವಾಗಿತ್ತು. ಒಮ್ಮೆ ವೆಸ್ಟ್ ಇಂಡಿಯಾದ ಒಬ್ಬ ಆಟಗಾರ ಬೌಂಡರಿ ಹೊಡೆದಾಗ ಅವಳು ಕೊಟ್ಟ ಕೇಕೆ ನೆಗೆತ ಇವುಗಳನ್ನು ಅವರು ಸಂತೋಷದಿಂದ ಚಿತ್ತರಿಸಿದರು. ಅಂತೂ ಅಂದಿನ ಪಂದ್ಯ ಬಹಳ ರಸಭರಿತವಾಗಿತ್ತು. ಆಟದ ಕೊನೆಗೆ ವೆಸ್ಟ್ ಇಂಡಿಯನ್ ಆಟಗಾರರಾದ ಶ್ರೀಯುತ ಹಾಲ್ ಮತ್ತು ಗಿಬ್ಸ್ ಅವರು ಪ್ರೇಕ್ಷಕರಿಗೆ ಅತ್ಯಂತ ವಿನೋದವನ್ನು ಒದಗಿಸಿದರು. ನೆರೆದಿದ್ದ ವೆಸ್ಟ್ ಇಂಡಿಯನ್ ಜನಸ್ತೋಮ ಬೊಂಬಾಯಿನ ಈಸ್ಟ್ ಸ್ಟ್ಯಾಂಡ್‌ನವರು ಮಾಡುವ ಗದ್ದಲದಂತೆ ಕಿವಿ ಬಿರಿಯುವ ಗದ್ದಲವನ್ನು ಮಾಡಿ ಆಟವನ್ನು ನೋಡುತ್ತಾ ಇದ್ದರು. ಈ ಗಲಭೆ, ಅವ್ಯವಸ್ಥೆ, ಸ್ವಭಾವತಃ ಗಂಭೀರರೂ, ಶಾಂತರೂ ಆದ ಬ್ರಿಟಿಷರಿಗೆ ತಡೆದುಕೊಳ್ಳಲಾಗದ ಹೊಸ ಅನುಭವ. ಎಷ್ಟೇ ಚಾತುರ್ಯದ ಆಟವಿದ್ದರೂ ಇಂಗ್ಲಿಷ್ ಜನ ಸದ್ದಿಲ್ಲದೆಯೇ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸುವುದು ರೂಢಿ. ವೆಸ್ಟ್ ಇಂಡಿಯನ್ನರು ಮತ್ತು ಇತರ ದೇಶದ ಜನರು ಆಟದಲ್ಲಿ ತೋರಿಸುವ ಆವೇಶಪೂರ್ಣ ಆಸಕ್ತಿ, ಸಂತೋಷ ಸೂಚಕ ಗದ್ದಲ ಅವರಿಗೆ ವಿಚಿತ್ರ. ಆ ಜನರಂತೂ ತುತ್ತೂರಿ ಊದುತ್ತಿದ್ದರು – ಕಿರುಚಿಕೊಳ್ಳುತ್ತಿದ್ದರು –

ಹುಲ್ಲಿನ ಮೇಲೆ ವೃಂದ ನೃತ್ಯವನ್ನೋ, ಒಂಟಿ ನೃತ್ಯವನ್ನೋ ಮಾಡುತ್ತಿದ್ದರು. ಬ್ರಿಟಿಷ್ ಆಟಗಾರರನ್ನು ಮನಸಾರೆ ತೆಗಳುತ್ತಿದ್ದರು. ಅವರ ಈ ನಡವಳಿಕೆ ಚಿಕ್ಕ ಬ್ರಿಟಿಷ್ ಮಕ್ಕಳಿಗೂ ಅಸಹನೀಯವಾಗಿತ್ತು. ಪರಂಪರಾನುಗತ ಬ್ರಿಟಿಷ್ ಜನಾಂಗದ ಗಾಂಭೀರ್ಯತೆ ಆ ಮಕ್ಕಳ ನಡತೆಯಲ್ಲೂ ನಿಚ್ಚಳವಾಗಿ ಎದ್ದು ಕಾಣುತ್ತಿತ್ತು. ಎಷ್ಟು ಗಲಾಟೆಯಾದರೂ ಒಬ್ಬ ಬ್ರಿಟಿಷ್ ಪ್ರೇಕ್ಷಕನಾಗಲಿ ಎದ್ದು ಮಾತೆತ್ತಲಿಲ್ಲ. ಅವರ ದುರ್ನಡತೆಗೆ ಅಸಮಾಧಾನ ಸೂಚಿಸುತ್ತಿರಲಿಲ್ಲ. ಟಿ. ವಿ. ನೋಡುತ್ತಿದ್ದ ಪ್ರೇಕ್ಷಕರು ಈ ವಿಧದ ಗಲಾಟೆಯನ್ನು ನೋಡಿ ಕ್ರೀಡಾರಂಗದಲ್ಲಿ ಈ ತರಹದ ನಡತೆ ಬ್ರಿಟಿಷ್ ಕ್ರೀಡಾಂಗಣದ ಚರಿತ್ರೆಯಲ್ಲಿ ಇತ್ತೀಚಿನ ಹೊಸ ಆಕ್ರಮಣ ಎಂದು ನಿಟ್ಟುಸಿರು ಬಿಡುತ್ತಾರೆ........

* * * * * *

........ಸೌತೆಂಪ್ಟನ್‌ನಲ್ಲಿ (Southampton) ನಮ್ಮ ನೃತ್ಯ ಪ್ರದರ್ಶನದ ಅನುಭವ ಇದು. ಕೆಲವು ಮೈಸೂರಿನ ಯುವಕರು ನಮ್ಮನ್ನು ರೇಲ್ವೆ ನಿಲ್ದಾಣಕ್ಕೆ ಬಂದು ಭೇಟಿ ಮಾಡಿ, ನಮ್ಮ ಸಾಮಾನು ಸರಂಜಾಮುಗಳನ್ನು ಹೊತ್ತು ಬಾಯಿ ತುಂಬಾ ಕನ್ನಡದಲ್ಲಿ ಮಾತನಾಡಿ, ಮೈಸೂರು ರಾಜ್ಯದ ಸುದ್ದಿ ಸಮಾಚಾರವನ್ನು ಅಕ್ಕರೆಯಿಂದ, ಆತ್ಮೀಯತೆಯಿಂದ ಕೇಳಿಕೊಂಡರು. ಹಳೆಯ ನೆನಪುಗಳನ್ನು ಮರುಕಳಿಸಿ ಮತ್ತೆ ಹೊಸತಾಗಿ ಮಾಡಿದರು. ಅವರೊಡನೆ ನಾವು ಕಳೆದ ಸಮಯ ನಮಗೆ ಬೆಂಗಳೂರಿನಲ್ಲಿದ್ದಂತೆಯೇ ಭಾಸವಾಯಿತು.

....ಕೇರಳದಲ್ಲಿ ತೋಡುಭಾವಿಗಳನ್ನು ಮಾಡುವ ಯಂತ್ರಗಳನ್ನು ಕಳುಹಿಸುವ ಯೋಜನೆಯಲ್ಲಿ ಆಕ್ಸ್‌ಫಾಮ್‌ನವರು (Oxfam) ನಿಧಿ ಸಂಗ್ರಹಿಸಲು ನಮ್ಮ ಪ್ರದರ್ಶನವನ್ನು ಏರ್ಪಡಿಸಿದ್ದರು. ಅಲ್ಲಿನ ಅತಿ ಸುಂದರ ಪುರಭವನ ಜನರಿಂದ ತುಂಬಿ ಹೋಗಿತ್ತು. ಹಣದ ಸಂಗ್ರಹಣೆಯೂ ಚೆನ್ನಾಗಿತ್ತು. ಅವರು ನಮ್ಮ ಕಲೆಗೆ ಕೊಟ್ಟ ಪ್ರೋತ್ಸಾಹ ಸ್ಫೂರ್ತಿದಾಯಕವಾಗಿತ್ತು. ಪ್ರದರ್ಶನ ಅತ್ಯಂತ ಯಶಸ್ವಿಯಾಯಿತು.

ನಮ್ಮ ಮೈಸೂರಿನ ಕೆಲವು ಯುವಜನರು ಹೆಚ್ಚಿನ ವಿದ್ಯಾಭ್ಯಾಸ ಮಾಡಲು ಇಲ್ಲಿಗೆ ಬಂದು ಸುಖದಿಂದಿದ್ದಾರೆ. ಪ್ರದರ್ಶನವಾದ ಮೇಲೆ ಭಾರತೀಯ ಊಟ ಕೊಡುವ ಭೋಜನಶಾಲೆಯೊಂದರಲ್ಲಿ ನಮಗೆ ಔತಣ ಕೊಟ್ಟರು. ಸೌತೆಂಪ್ಟನ್ ಒಂದು ದೊಡ್ಡ ಕರಾವಳಿಯ ಬಂದರು. ಮರುದಿನ ಬೆಳಿಗ್ಗೆ ನಗರ ದರ್ಶನಕ್ಕೆಂದು ನಮ್ಮನ್ನು ಕರೆದುಕೊಂಡು ಹೋಗಿ, ಅಲ್ಲಿನ ಸುಂದರ ರೇವು ಪಟ್ಟಣವನ್ನು, ಅನೇಕಾನೇಕ ಹಡಗುಗಳನ್ನು ತೋರಿಸಿ ರೈಲ್ವೆ ನಿಲ್ದಾಣಕ್ಕೆ ಕರೆದುಕೊಂಡು ಬಂದು ನಮ್ಮನ

ಭಾರವಾದ ಮನಸ್ಸಿನಿಂದ ಬೀಳ್ಕೊಟ್ಟರು. ಆಮೇಲೆ ಅವರಿಗೆ ಖಂಡಿತ ಎಲ್ಲಿಲ್ಲದ ಒಂಟಿತನದ ಅನುಭವ ಆಗಿದ್ದಿರಲೇ ಬೇಕು.

* * * * * *

........ಪಟನ್‌ಹ್ಯಾಮ್ (Puttenham) ಎಂಬ ಚಿಕ್ಕ ಊರೊಂದರಲ್ಲಿ ಅಂದು ಒಂದು ಉತ್ಸವ – ಜಾತ್ರೆ. ಅವರು ಬೆಂಗಳೂರಿನಲ್ಲಿ ಒಂದು ಮುದ್ರಣ ಶಾಲೆಯನ್ನು ತೆರೆಯಲೋಸುಗ ಹಣವನ್ನು ಅಲ್ಲಿ ಸಂಗ್ರಹಿಸುತ್ತಿದ್ದರು! ನಮಗಂತೂ ಈ ಸುದ್ದಿ ಕೇಳಿ ಆಶ್ಚರ್ಯವಾಯಿತು. ಬೆಂಗಳೂರಿನಿಂದ ಬಂದ ನಾವು ಈ ನೃತ್ಯ ಪ್ರದರ್ಶನ ವನ್ನು ಕೊಡಲು ಮುಂದೆ ಬಂದೆವು. ಮೊದಲು ನಮ್ಮ ವಿದ್ಯಾರ್ಥಿಗಳನ್ನು ಕಳುಹಿ ಸುವ ಯೋಜನೆಯಿತ್ತು.

....ಅಲ್ಲಿ ನೆರೆದ ಜನರಿಗೆ, ಬೆಂಗಳೂರಿನ ಮುದ್ರಣ ಶಾಲೆಯೊಂದಕ್ಕೆಂದು ಹಣ ತೆತ್ತವರಿಗೆ, ನಮ್ಮ ಪ್ರಾಂತ್ಯದ ಭಾಷೆ 'ಕನ್ನಡ' ಎಂಬುದು ಕೂಡ ಗೊತ್ತಿರಲಿಲ್ಲ! ದಕ್ಷಿಣ ಭಾರತದ ಇತರ ಎಲ್ಲ ಭಾಷೆಗಳ ಅರಿವೂ ಅವರಿಗೆ ಸಾಮಾನ್ಯವಾಗಿ ಇದೆ........

.......ಅಲ್ಲಿನ ರಂಗಮಂಟಪ ಬಯಲಿನಲ್ಲಿ ಏರ್ಪಟ್ಟಿತ್ತು. ದೇವರ ದಯೆ ಯಿಂದ ಹವಾಗುಣ ಚೆನ್ನಾಗಿತ್ತು. ಮಳೆಗಾಳಿಯಿರಲಿಲ್ಲ. ವಿವಿಧ ವಿನೋದಗಳ ಗುಡಾರಗಳು, ಆಹಾರ ತಿಂಡಿ ತೀರ್ಥಗಳ ಅಂಗಡಿಗಳು, ಅಂಗಸಾಧನಾ ಪ್ರದರ್ಶನಗಳು ಆಟಗಳು ಮುಂತಾದ ಅನೇಕಾನೇಕ ಹಣ ಸಂಗ್ರಹಿಸುವ ಉಪಾಯಗಳು ಇದ್ದು ಬಂದ ಜನರಿಗೂ ಸಮಯವನ್ನು ಆನಂದದಿಂದ ಕಳೆಯಲು ಅನುಕೂಲವಾಗಿತ್ತು. ಅವುಗಳಲ್ಲಿ ಹೆಚ್ಚಾಗಿ ಮಕ್ಕಳಿಗಾಗಿ ಆಟಗಳು. ಚಿಕ್ಕಮಕ್ಕಳು ಸಂತೋಷಪಡುವಂತೆ ದೊಡ್ಡವರೂ ಸಂತೋಷಪಡುವ ಪ್ರಯತ್ನ ಮಾಡುತ್ತಿದ್ದರು. ಇಂತಹ ಕಾರ್ಯಕಲಾಪಗಳಿಂದ ಧನ ಸಹಾಯ ಪಡೆದರು. ವ್ಯವಸ್ಥಾಪಕರು ವರ್ಷಕ್ಕೆ ಒಂದೋ ಎರಡೋ ಇಂತಹ ಸಂದರ್ಭಗಳನ್ನು ಏರ್ಪಡಿಸಿ ಕೈಲಾದಷ್ಟು ನಿಧಿ ಸಂಗ್ರಹ ಮಾಡುವರಂತೆ. ನಿಸ್ವಾರ್ಥತೆ ಯಿಂದ ಕೆಲಸ ಮಾಡುತ್ತಾರೆ ಇವರು. ನಮ್ಮ ನೃತ್ಯಗಳಲ್ಲಿ ಎರಡು ಕನ್ನಡ ಪದ ಗಳನ್ನು ಅಭಿನಯಿಸಿದೆವು – 'ಕನ್ನಡ' ಭಾಷೆಯ ಇನಿದನಿ ಅವರ ಕಿವಿಯ ಮೇಲಿಂದ ಮೇಲೆ ಹೋಗಲಿ ಎಂದು!

........ನಮ್ಮನ್ನು ಪಟ್ಟನ್‌ಹ್ಯಾಮ್ ಜನ ಬಹಳ ಆಗ್ರಹದಿಂದ, ಗೌರವದಿಂದ ಸ್ವಾಗತಿಸಿ ಬೀಳ್ಕೊಟ್ಟರು.

* * * * * *

ಲಿಟಲ್ ಮಿಸೆನ್‌ಡೆನ್ ಫೆಸ್ಟಿವಲ್ (Little Missenden Festival) ಸಮಯದಲ್ಲಿ ಅವರ ವಾರ್ಷಿಕೋತ್ಸವಕ್ಕೆ ನಾವು ಆರು ಜನ ಒಂದು ಚಿಕ್ಕ ವಾಹನದ ಮೂಲಕ ಪ್ರಯಾಣ ಮಾಡಿದೆವು. ಲಂಡನ್ನಿನ ಹೊರ ಪ್ರದೇಶಗಳನ್ನು ದಾಟಿ ಹೋಗುವಾಗ ಅಂದವಾದ ನೀರವಪೂರ್ಣ ದೃಶ್ಯಗಳು, ಹಿತಕರವಾದ ಪ್ರವಾಸ. ನಾವು ಊರನ್ನು ತಲುಪಿದೊಡನೆ ರಸ್ತೆಯಲ್ಲಿ ಆಟವಾಡುತ್ತಿದ್ದ ಕೆಲವು ಹುಡುಗರು ನಮಗೆ ಅಲ್ಲಿನ ಪುರಭವನಕ್ಕೆ ದಾರಿ ತೋರಿಸಿದರು. ಪುರಭವನದ ಹೊರಬಾಗಿಲಿನಲ್ಲಿ ನಮ್ಮ ವಾಹನ ನಿಂತಿತು. ಅದೇ ತಾನೇ ಮಬ್ಬು ಕವಿದಿತ್ತು. ಅಲ್ಲಿ ಯಾರೂ ಕಾಣಲಿಲ್ಲ. ಪುರಭವನದ ಹೆಬ್ಬಾಗಿಲು ತೆರೆದಿತ್ತು. ಆದರೆ ಜನರಾರೂ ಇರಲಿಲ್ಲ. ಒಳಗೆ ಕತ್ತಲಿದ್ದ ಕಾರಣ ವಿದ್ಯುದ್ದೀಪದ ಒತ್ತುಗುಂಡಿಯನ್ನು ಹುಡುಕಿ ಬೆಳಕು ಮಾಡಿದೆವು. ಒಳಗೆ ಯಾವ ಮೂಲೆಯಲ್ಲೂ ಯಾರೂ ಇರಲಿಲ್ಲ. ಆದರೆ ರಂಗಮಂದಿರವನ್ನು ಹೂಗಳಿಂದ ತೋರಣಗಳಿಂದ ಬಹಳ ಅಂದವಾಗಿ ಅಲಂಕರಿಸಿದ್ದರು. ರಂಗಸ್ಥಳದ ಮೇಲೆ ರಂಗಸಜ್ಜಿಕೆಯೆಲ್ಲ ತಯಾರಾಗಿತ್ತು–ಪರದೆಗಳು, ರತ್ನಗಂಬಳಿಗಳು ರಂಗದೀಪದ ವ್ಯವಸ್ಥೆ ಇತ್ಯಾದಿ ಎಲ್ಲವೂ ಸಿದ್ಧವಾಗಿತ್ತು. ನನಗಂತೂ ಆ ಸಮಯ ಎಲ್ಲೋ ಕನಸಿನಲ್ಲಿದ್ದಂತೆ ಅನುಭವವಾಯಿತು. ಯಾವುದೋ ಅಡಗೂಲಜ್ಜಿಯ ಕಥೆಯೊಂದರ ನೆನಪಾಯಿತು! ಹೌದು! ಮೂರು ಕರಡಿಗಳ ಆ ಕಥೆ! ಅಡಿಗೆ ಮನೆಗೆ ಹೋದರೆ ಅಲ್ಲಿ ಹಾಲಿನ ಸೀಸೆಗಳು, ಕಾಫಿಪುಡಿ, ಟೀ ಸೊಪ್ಪು, ಕಪ್ ಸಾಸರ್‌ಗಳು, ತಿಂಡಿ ಎಲ್ಲವೂ ಸಿದ್ಧ. ಆದರೆ........ಜನರ್‍ಯಾರೂ ಇರಲಿಲ್ಲ. ಅಂತೂ ಏಳು ಗಂಟೆಗೆ ಸರಿಯಾಗಿ ಅಂದಿನ ವ್ಯವಸ್ಥಾಪಕರು ಬಂದು ನಮ್ಮನ್ನು ಅಪ್ಪಿಕೊಂಡು ಹಾರ್ದಿಕ ಸ್ವಾಗತ ಬಯಸಿ, ನಮಗೆ ಅತಿಥಿ ಸತ್ಕಾರವನ್ನು ಮಾಡಿದರು. ಎಂಟು ಗಂಟೆಗೆ ನಮ್ಮ ನೃತ್ಯ ಪ್ರದರ್ಶನ ಆರಂಭವಾಯಿತು. ಭರತನಾಟ್ಯ, ಭಾರತೀಯ ಸಂಗೀತ, ಸಿತಾರ್ ತಬಲದ ರಸದೂಟ. ಅಲ್ಲಿನ ಜನರು ಭಾರತೀಯ ಕಲೆಯನ್ನು ಕಣ್ತುಂಬ ನೋಡಿದರು. ಕಿವಿ ತುಂಬಾ ಕೇಳಿದರು. ಮನಸಾರೆ ಆನಂದಪಟ್ಟರು. ಶಾಸ್ತ್ರೀಯ ನೃತ್ಯಗಳ ಜೊತೆಗೆ ಜಾನಪದ ನೃತ್ಯಗಳನ್ನೂ ಮಾಡಿದೆವು. ಪ್ರದರ್ಶನವಾದ ಮೇಲೆ ಕ್ರೈಸ್ತ ಮಠಾಧಿಪತಿಗಳ ಮನೆಯಲ್ಲಿ ನಮಗಾಗಿ ಒಂದು ಸ್ವಾಗತ ಕೂಟವನ್ನು ಏರ್ಪಡಿಸಿದ್ದರು. ಅಲ್ಲಿ ನಮ್ಮನ್ನು ಮಾತನಾಡಿಸಿದ ಜನರು ಅನೇಕ ವಿಧವಿಧವಾಗಿ ನಮ್ಮ ಕಲೆಯನ್ನು ಹೊಗಳಿ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರು. "ನಿಮ್ಮ ಭಾರತೀಯ ಕಲೆ ತುಂಬಾ ಮಹತ್ವವುಳ್ಳದ್ದು. ಸೌಂದರ್ಯೋಪಾಸನೆ ಕೊಡುತ್ತಿರುವಾಗಲೇ ಮಿದುಳಿಗೂ ಕೆಲಸ ಕೊಡುತ್ತಿದೆ! ಹೃದಯ ಮನಸ್ಸುಗಳೆರಡೂ ಕದಲುತ್ತವೆ" ಎಂದರು. ಎಂತಹ ವಿಚಾರಪೂರಿತ ಮಾತಲ್ಲವೇ!

........ಆಕ್ಸ್‌ಫಾಮ್ (Oxfam) ತನ್ನ 25ನೆಯ ವರ್ಷಪೂರ್ತಿಗಾಗಿ ರಜತ ಮಹೋತ್ಸವವನ್ನು ಆಚರಿಸಿದ ಸಂದರ್ಭದಲ್ಲಿ ರಾಯಲ್ ಫೆಸ್ಟಿವಲ್ ಹಾಲ್‌ನಲ್ಲಿ

(Royal Festival Hall) ಸಂಗೀತ–ನೃತ್ಯಗಳ ಒಂದು ವಿವಿಧ ವಿನೋದಾವಳಿ ಯನ್ನು ಏರ್ಪಡಿಸಿದ್ದರು.–ಜಗತ್ತಿನ ಸಂಗೀತ–ನೃತ್ಯಗಳ ಪ್ರದರ್ಶನ. ಬಂದ ಹಣವನ್ನು ಪ್ರಪಂಚದ ದಲಿತ ಜನತೆಗಾಗಿ ವಿನಾಸಲಿರಿಸಿದ್ದರು. ರಾಯಲ್ ಫೆಸ್ಟಿವಲ್ ಹಾಲ್ ನಲ್ಲಿ ಮೂರು ಸಾವಿರ ಜನ ಕುಳಿತುಕೊಳ್ಳುವ ವ್ಯವಸ್ಥೆ ಇದೆ! ಅಂದು ಅದು ತುಂಬಿ ಹೋಗಿತ್ತು. ರಂಗಸ್ಥಳದ ಮೇಲೆಯೂ ಸುಮಾರು ನೂರು ಕುರ್ಚಿಗಳನ್ನು ಹಾಕಿ ದ್ದರು. ರಂಗಮಂಚದ ದೀಪಾಲಂಕಾರ ಯಾವ ಮನಸ್ಸನ್ನೂ ಸೂರೆ ಮಾಡುವಂತಿತ್ತು. ಅನೇಕ ದೇಶಗಳಿಂದ ನರ್ತಕರು, ಸಂಗೀತಗಾರರು ಬಂದು ಸಾಂಸ್ಕೃತಿಕ ಕಾರ್ಯಕ್ರಮ ಗಳನ್ನು ನೀಡಿದರು.

ಭಾರತದ ಪರವಾಗಿ ನಾವಿಬ್ಬರೂ ಭರತನಾಟ್ಯದ 'ತಿಲ್ಲಾನ' ವನ್ನು ನರ್ತಿಸಿ ದೆವು. ಅಲ್ಲಿ ಅಂದು ನೆರೆದ ಜನರಿಗೆ ಎಲ್ಲ ನೃತ್ಯಗಳಿಗಿಂತ ಭಾರತೀಯ ನೃತ್ಯ ಅಪ ರೂಪ ಹಾಗೂ ಆಕರ್ಷಕ ವಿನೋದವಾಗಿತ್ತು. ಅವರು ನಮ್ಮ 'ತಿಲ್ಲಾನ' ವನ್ನು ನೋಡಿ ಗಟ್ಟಿಯಾಗಿ, ಆನಂದದಿಂದ ಅರಚಿಕೊಂಡು ಮೆಚ್ಚುಗೆಯನ್ನು ತೋರ್ಪಡಿಸಿ ದರು. ಮೂರು ಸಾವಿರ ಜನರಿಗೂ ಮೇಲ್ಪಟ್ಟು ಒಂದೇ ಸಮನೆ ಕಿವಿ ಗಡಚಿಕ್ಕು ವಂತೆ ಕರತಾಡನ ಮಾಡಿದ ಶಬ್ದವು ರಂಗಮಂದಿರದಲ್ಲೆಲ್ಲ ಪ್ರತಿಧ್ವನಿಕೊಟ್ಟು ವಿಶೇಷ ವಾದ ಶಬ್ದವಾಯಿತು. ನಾವು ನಮ್ಮ ಜನ್ಮದಲ್ಲಿಯೇ ಎಂದೂ ಇಂತಹ ಚಪ್ಪಾ ಳೆಯ ಸದ್ದು ಕೇಳಿರಲಿಲ್ಲ. ಅಂತಹ ಉತ್ಸಾಹದ ಹೊಗಳಿಕೆ ಅಷ್ಟು ಜನರಿಂದ ಒಮ್ಮೆಗೇ ಕೇಳಿರಲಿಲ್ಲ. ನಮಗಂತೂ ರಂಗಸ್ಥಳ ಬಿಟ್ಟು ಹೋಗಲು ಬಿಡಲೇ ಇಲ್ಲ- ಒಂದೇ ಸಮನೆ ಬಿಡುವಿಲ್ಲದೆ ಕರತಾಡನ ಮಾಡಿ ನಮ್ಮನ್ನು ಮತ್ತೆ ಮತ್ತೆ ಕರೆಸಿ ಅಭಿ ನಂದಿಸಿದರು. ನನಗಂತೂ ಮತ್ತೆ ಮತ್ತೆ ಬರಲು ಸ್ವಲ್ಪ ನಾಚಿಕೆಯಾಯಿತು. ಜನರು ಒಪ್ಪದೇ ಇದ್ದರೂ ನಾನು ಒಳಗೆ ಅಡಗಿಕೊಂಡೆ- ನಮ್ಮ ನಂತರ ಪ್ರದ ರ್ಶನಕ್ಕೆ ಕಾಯುತ್ತಿರುವ ಇತರ ಕಲಾವಿದರ ಸಮಯವನ್ನು ಹೀಗೆ ಕಳೆಯುವುದು ಉಚಿತವಲ್ಲ ಎಂದು ಮನಸ್ಸಿಗೆ ಹೊಳೆಯಿತು. ಪ್ರೇಕ್ಷಕರನ್ನು ನಿರಾಶೆಗೊಳಿಸಿದ್ದಕ್ಕೆ ಬೇಸರವೂ ಆಯಿತು.

.........ರಾಯಲ್ ಫೆಸ್ಟಿವಲ್ ಹಾಲ್‌ನ ಮೂರು ಸಾವಿರ ಪಾಶ್ಚಾತ್ಯ ಜನರಿಂದ ಪಡೆದ ಆ ಅಮೂಲ್ಯ ಅನುಭವ ಮರೆಯುವಂತಿಲ್ಲ. AMC ಯವರು ಹಲವೊಮ್ಮೆ ಹಣದ ಅಪೇಕ್ಷೆ ಇಲ್ಲದೆ ಇಂತಹ ಸಾಂಸ್ಕೃತಿಕ ಸಹಾಯವನ್ನು ಒದಗಿಸುತ್ತದೆ. ಅಂದಿನ ದಿನಕ್ಕೆ ನಾವು ನಿಜವಾಗಿಯೂ ತುಂಬಾ ಕೃತಜ್ಞರು.

* * * *

........ಈಲಿಂಗ್ ಸಮ್ಮರ್ ಸ್ಕೂಲ್ (Ealing Summer School) ನಮ್ಮ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಬಾಲಕರ ಈ ಶಾಲೆಯ ಎಲೋನಿಯನ್

(Ealonian) ಸಭಾಂಗಣ ಅಂದವಾದದ್ದು. ಆದರೆ ಅಲ್ಲಿ ಅನುಕೂಲವಾದ ಸಜ್ಜಿಕಾ ಗೃಹವಾಗಲಿ ಮತ್ತೆ ನಮಗೆ ಬೇಕಾದ ಯಾವ ಇತರೆ ಅನುಕೂಲತೆಗಳಾಗಲೀ ಇರಲಿಲ್ಲ. ಉಡುಪನ್ನು ಬದಲಾಯಿಸಿ ರಂಗಸ್ಥಳಕ್ಕೆ ಬರಬೇಕಾದರೆ ಛಳಿಯಲ್ಲಿ ಎರಡು ಕಟ್ಟಡಗಳನ್ನು ದಾಟಿ ಬರಬೇಕಾಗಿತ್ತು, ಎದೆ ಗಾಳಿಗೊಡ್ಡಿ ನರ್ತಿಸಬೇಕಾಗಿದ್ದ ಪತಿಯವರಿಗೆ ಈ ಏರ್ಪಾಡು ತುಂಬಾ ಅಪಾಯಕರವಾಗಿತ್ತು. ಅಲ್ಲಿನ ಪ್ರೇಕ್ಷಕರು ಭಾರತೀಯ ನೃತ್ಯಗಳನ್ನು ಅಂದೇ ಮೊದಲು ನೋಡಿದ ಕಾರಣ ವಿಶೇಷ ಪ್ರೋತ್ಸಾಹ ಕೊಟ್ಟರು. ಮೊದಲು ವ್ಯವಸ್ಥಾಪಕರು "ನಮಗೆ ಶಾಸ್ತ್ರೀಯ ನೃತ್ಯಗಳು ಬೇಡ-ಉತ್ತರ ಹಿಂದೂಸ್ಥಾನದ ನೃತ್ಯ ಅಥವಾ ಲಘುನೃತ್ಯಗಳು ಬೇಕು" ಎಂದು ಹೇಳಿದ್ದರು. ಅದರಿಂದಾಗಿ ನಮ್ಮ ಕಾರ್ಯಕ್ರಮದಲ್ಲಿ ಹೆಚ್ಚಾಗಿ ಜಾನಪದ ನೃತ್ಯಗಳನ್ನು ಸೇರಿಸಿದ್ದೆವು. ಆದರೆ ಜನರು ಅಂದು ನಮ್ಮ ಕೆಲವು ಶಾಸ್ತ್ರೀಯ ನೃತ್ಯಗಳನ್ನೇ ಹೆಚ್ಚಾಗಿ ಮೆಚ್ಚಿದರು.

ಶಾಸ್ತ್ರೀಯ ನೃತ್ಯಗಳು ಸಾಮಾನ್ಯವಾಗಿ ವಿನೋದಾರ್ಹವಲ್ಲ ಎಂಬ ತಪ್ಪು ತಿಳುವಳಿಕೆ ಇದೆ. ಆದರೆ ಒಮ್ಮೆ ಅವನ್ನು ಮೆಚ್ಚಲು ಆರಂಭಿಸಿದರೆ, ಶಾಸ್ತ್ರೀಯ ನೃತ್ಯಗಳಲ್ಲಿ ಇರುವ ಆಳ, ಉನ್ನತ ಅಂತಸ್ತು, ಮೌಲ್ಯ – ಮನಸ್ಸಿಗೆ ವಿಶೇಷ ತೃಪ್ತಿಯನ್ನು ಕೊಡುತ್ತದೆ. ವ್ಯವಸ್ಥಾಪಕರು ನಮ್ಮ ಕಾರ್ಯಕ್ರಮವನ್ನು ಹೊಗಳಿ, ನಮಗೆ ಅತಿ ಸುಂದರವಾದ ದೊಡ್ಡ ಶ್ಯಾವಂತಿಗೆಯ ಪುಷ್ಪಗುಚ್ಛವೊಂದನ್ನು ಅರ್ಪಿಸಿದರು.

........ಆದರೆ ನನಗೇನೋ ಅಂದಿನ ಕಾರ್ಯಕ್ರಮ ಹಿತವಾಗಿರಲಿಲ್ಲ-ಸ್ಫೂರ್ತಿದಾಯಕವಾಗಿರಲಿಲ್ಲ. ಸಂಗೀತದ ಪರಿವರ್ಧಕ ಧ್ವನಿ (Amplification) ರಂಗಸ್ಥಳದಲ್ಲಿ ಕೇಳಿಸದ ಕಾರಣ ನಾವೆಲ್ಲರೂ ತಾಳತಪ್ಪಿದಂತೆ ಕಂಡಿತು. ತಾಳ ಖಚಿತತೆ ಇಲ್ಲದಿದ್ದರೆ ನೃತ್ಯವೆನಿಸುವುದೇ ಎಂದೆನಿಸಿತು. ಆದರೆ ಅಂದಿನ ಪ್ರೇಕ್ಷಕರು ಆದನ್ನು ಅಷ್ಟು ಗಮನಿಸದೆ ಇದ್ದುದು ನಮ್ಮ ಪುಣ್ಯವೆನ್ನಬೇಕು.

* * * * * *

........ಕೇಂಬ್ರಿಡ್ಜ್ AMC ಶಾಲೆಯು ಜೀಸಸ್ ಕಾಲೇಜ್‌ನಲ್ಲಿ ನಮ್ಮ ಉಪನ್ಯಾಸ ಏರ್ಪಡಿಸಿತು. ಪತಿಯವರು "ಮುದ್ರೆಗಳ ಅರ್ಥ" (Meaning of the Mudras) ಎಂಬ ವಿಷಯವಾಗಿ ಮಾತನಾಡಿದರು. ಅಂತ್ಯದಲ್ಲಿ ಪ್ರೇಕ್ಷಕರು ಕೇಳಿದ ಅನೇಕಾನೇಕ ಪ್ರಶ್ನೆಗಳಿಗೆ ನಾವಿಬ್ಬರೂ ಉತ್ತರ ಕೊಟ್ಟೆವು. ಅಲ್ಲಿನ AMC ಶಾಖೆಯ ಅಧ್ಯಕ್ಷರು ವಿಶ್ವವಿಖ್ಯಾತ ಸಂಗೀತಜ್ಞರು. ಅವರಂತೂ ನಮ್ಮ ನೃತ್ಯ ವಿದ್ಯೆಗೆ ಮಾರು ಹೋದರು.

........ಕೊನೆಗೆ ವಿಚಾರಸರಣಿ ಇತ್ತು. "ಭಾರತೀಯ ನೃತ್ಯ ಎಷ್ಟು ಮಟ್ಟಿಗೆ ಆಶುನೃತ್ಯ ಆಗಬಹುದು?" "ಭಾರತೀಯ ನೃತ್ಯಗಳನ್ನು ಏತಕ್ಕೆ ಬರೆದಿಡಲಾಗುವುದಿಲ್ಲ? (With Notation)—ಸಂಗೀತದ ಅತ್ಯುತ್ತಮ ಕೃತಿಗಳನ್ನು ಕೂಡ ಬರೆದಿಡಲಾಗುವುದಿಲ್ಲವೇಕೆ?"—"ಸಂಗೀತ ಸಂಕೇತಗಳೇ ಇಲ್ಲವೇ?" ಎಂಬ ಮುಂತಾದ ಹಲವಾರು ವಿಚಾರ ಪೂರ್ಣ ಪ್ರಶ್ನೆಗಳು.

........ಪತಿಯುವರು ಹಸ್ತಗಳನ್ನೂ, ಮುದ್ರೆಗಳನ್ನೂ ವಿವರಿಸಿ, ಅವುಗಳಲ್ಲಿನ ಭೇದಭಾವವನ್ನು ತಿಳಿಸಿದ ಮೇಲೆ ನಾವಿಬ್ಬರೂ ಪ್ರೇಕ್ಷಕರು ಅಪೇಕ್ಷೆಪಟ್ಟ ಹಲವಾರು ವಾಕ್ಯಗಳನ್ನು ನೃತ್ಯಾಭಿನಯದಿಂದ ಅಲ್ಲೇ, ಅವರ ಕಣ್ಣುಮುಂದೆಯೇ ಅದೇ ಸಮಯದಲ್ಲಿ ನೃತ್ಯವಾಗಿ ರಚಿಸಿದೆವು. ಆನಂದದಿಂದಲೂ, ಸಂತೋಷದಿಂದಲೂ ಕಲಾ ಸಂಪತ್ತಿಗೆ ತಲೆದೂಗಿದರು. ಇನ್ನೂ ಹೆಚ್ಚು ಹೆಚ್ಚಾಗಿ ಈ ವಿಷಯವಾಗಿ ತಿಳಿಯ ಬೇಕೆಂಬ ಕುತೂಹಲ ಅವರಿಗೆ ಕೆರಳಿದ ಕಾರಣ ನಮ್ಮ ದ್ವಿತೀಯ ಉಪನ್ಯಾಸವನ್ನೂ ಅಲ್ಲೇ ಪ್ರಕಟಿಸಲಾಯಿತು. ಭರತ ನಾಟ್ಯದಲ್ಲಿನ ವಿವಿಧ ಮುಖಗಳು ವಿಭಿನ್ನ ಶೈಲಿಗಳು, ವರ್ಣಗಳನ್ನೂ, ಇತರ ತಿಲ್ಲಾನ, ಜತಿ ಸ್ವರಗಳನ್ನೂ ಹೇಗೆ ಪಂಗಡಗಳು ಗುಂಪು ಗುಂಪಾಗಿ ನೃತ್ಯವಾಗಿ ಮಾಡಬಹುದು – ತಾಳ ವೈಚಿತ್ರ್ಯ, ಅಭಿನಯದ ಆಳ – "ತಟ್ಟುಮೆಟ್ಟು" ವಿನ ಸುಂದರತೆ, ಇವೇ ಎರಡನೆಯ ಉಪನ್ಯಾಸದ ವಿಷಯವಾಗಿತ್ತು........

*   *   *   *   *   *

ದೀಪಾವಳಿ ದಿನದಂದು ನಾವು ಲಂಡನ್ನಿನ "ಭಾರತ ಭವನ" (India House) ದಲ್ಲಿ ನರ್ತಿಸಿದೆವು. AMC ಆಶ್ರಯದಲ್ಲಿ ಅಂದೇ ನಮ್ಮ ಕಡೆಯ ಪ್ರದರ್ಶನವಾದ ಕಾರಣ ನಾವು ಹೃತ್ಪೂರ್ವಕವಾಗಿ ನರ್ತಿಸಿದೆವು. ಅಂದು ನೆರೆದ ಜನರಿಗೆ ನಮ್ಮ ನೃತ್ಯಕಲೆಯ ಭಿನ್ನತ್ಯ ಬೆರಗುಗೊಳಿಸಿತು. ಲಂಡನಿನಲ್ಲಿ ಅದು ನಮ್ಮ ಕೊನೆಯ ಪ್ರದರ್ಶನ ಎಂಬ ವಿಷಯಕ್ಕಾಗಿ ನಮಗೆ ಅಂದಿನ ದಿನ ಮನಸ್ಸು ಕದಡಿತ್ತು. India News ಪತ್ರಿಕೆ ಹೀಗೆಂದು ಬರೆಯಿತು:—"ಭಾರತೀಯ ಹಾಗೂ ಬ್ರಿಟಿಷ್ ಕುಟುಂಬದವರು ಇಂಡಿಯಾ ಹೌಸ್‌ನಲ್ಲಿ ವಿಶೇಷವಾಗಿ ಒಂದು ದೀಪಾವಳಿಯ ಉತ್ಸವವನ್ನು ಜರುಗಿಸಿದರು. ದಕ್ಷಿಣ ಭಾರತದ ಸುಪ್ರಸಿದ್ಧ ದಂಪತಿಗಳಾದ ಕೃಷ್ಣರಾವ್ ಮತ್ತು ಚಂದ್ರಭಾಗಾದೇವಿಯವರು ನೀಡಿದ ಅಮೋಘ, ಅಲ್ಲದೆ ಕ್ಲಿಷ್ಟ ಪ್ರತಿಭೆಯ ಸಾಂಕೇತಿಕವಾದ ಶಾಸ್ತ್ರೀಯ ನೃತ್ಯ ಪ್ರದರ್ಶನ ಆ ಸಂಜೆಯ ಪ್ರಮುಖ ಮನರಂಜನೆಯಾಗಿತ್ತು. ಮೈಸೂರು ಸಂಸ್ಥಾನದ ಶ್ರೇಷ್ಠ ನೃತ್ಯ ಕಲಾವಿದರನ್ನು ಪ್ರೇಕ್ಷಿಸುವುದೇ ಒಂದು ಸುಸಂದರ್ಭವಾಗಿತ್ತು."

........ದೀಪಾವಳಿಯು ದಿನ ಎಂದರೆ ಪತಿಯುವರಿಗೂ ನನಗೂ ಒಂದು ಪವಿತ್ರ ದಿನ. ನಮ್ಮ ಜೀವಮಾನದಲ್ಲಿಯೇ ವಿಶೇಷವಾದ ಒಂದು ದಿನ ನಮ್ಮಿಬ್ಬರ ಭೇಟಿಯಾಗಿದ್ದು, ನನ್ನ ಮೊದಲ ಶಾಸ್ತ್ರೀಯ ನೃತ್ಯ ಪಾಠವಾದದ್ದು ದೀಪಾವಳಿಯು ದಿನ. ಅಂದಿನ ದಿನದ ನೃತ್ಯಕಲೆ ಕಲಾ ಜಗತ್ತಿನಲ್ಲಿ ನಾವಿಬ್ಬರೂ ಕಾಲಿಟ್ಟು ಮುಂದುವರಿದು ಬಂದು ಇಂದಿಗೂ ಕಲಾಸೇವೆ ಮಾಡಿ ನಮಗೂ, ನಮ್ಮ ಕಲೆಗೂ, ದೇಶಕ್ಕೂ ಕೀರ್ತಿ ತರುವಂತಾಯಿತು; ಮದುವೆಯಾದ ಮೇಲೆ ದೀಪಾವಳಿ ದಿನದಂದು ನಾವು ನಮ್ಮ ಮೊದಲ ಮನೆಯನ್ನು ಮಾಡಿ, ಸಂಸಾರವನ್ನು ಹೂಡಿ, ನೃತ್ಯ ಕಲೆಯನ್ನು ಹೇಳಿಕೊಟ್ಟು, ಹಲವಾರು ವಿದ್ಯಾರ್ಥಿಗಳನ್ನು ತರಬೇತು ಮಾಡಿದೆವು. ಅವರಲ್ಲಿ ಕೆಲವರು ಇಂದು ವಿಶ್ವವಿಖ್ಯಾತರಾಗಿದ್ದಾರೆ ಎಂಬ ವಿಷಯಕ್ಕೆ ನಾವು ನಿಜಕ್ಕೂ ಹೆಮ್ಮೆ ಪಡುವಂತಿದೆ....ದೇವರ ಕೃಪೆ.

*   *   *   *   *   "

ಲಂಡನ್
2 – 12 – 1967

ಮುದ್ದು ಮಕ್ಕಳೇ,

ಇಂಗ್ಲೆಂಡಿನಲ್ಲಿ ಎರಡು ವರುಷಗಳ ಕಾಲ ಬಾಳನ್ನು ಕಳೆದ ಮೇಲೆ ಈಗ ಇದನ್ನು ಬಿಟ್ಟುಬರಲು ಕೆಲವೊಮ್ಮೆ ಮನಸ್ಸು ಬೇಸರಗೊಳ್ಳುತ್ತದೆ. ಈ ಎರಡು ಸಂವತ್ಸರಗಳು ನಮ್ಮ ಜೀವಿತ ಕಾಲದ ವಸಂತ ಸಮಯ. ಕಲಾ ದೃಷ್ಟಿಯಿಂದ ಜೀವನ ಸಾಫಲ್ಯದ ಶೃಂಗಗಿರಿ. ಇದಕ್ಕಾಗಿ ನಾವು ಕೊಟ್ಟ ನೃತ್ಯ ಪ್ರದರ್ಶನಗಳ ಮೌಲ್ಯ ಮಾಪನ ಅಗತ್ಯವಿಲ್ಲ. ಸಾಕ್ಷಿಗಾಗಿ ಸವೆದುಹೋದ ಗೆಜ್ಜೆಗಳು, ತಟ್ಟುಕೋಲುಗಳು ಸಾಕು. ನಾವೇ ರಚಿಸಿ, ಪ್ರದರ್ಶಿಸಿ ಕೀರ್ತಿ ಪಡೆದುದಕ್ಕೆ ಪತ್ರಿಕಾ ವಿಮರ್ಶೆಗಳಷ್ಟೇ ಸಾಕ್ಷಿ. ಬೆಂಗಳೂರಿನಲ್ಲಿ ಒಮ್ಮೆ, ನಮ್ಮ ಆಶಾರಹಿತ ಕಲಾಜೀವನದ ಅವಧಿಯಲ್ಲಿ ನಮ್ಮ ಕೃತಿಗಳಿಗೂ, ನಮಗೂ ಪರದೇಶಗಳಲ್ಲಿ ತಾವು ಕೀರ್ತಿ ತರುವೆವೆಂದು ನಮ್ಮ ಶಿಷ್ಯಂದಿರು ನಮಗೆ ಸಮಾಧಾನ ಮಾಡಿದ್ದರು! ಅಂದರೆ ನಮ್ಮ ಜೀವಮಾನದಲ್ಲಿ ನಾವು ಪಾಶ್ಚಾತ್ಯ ದೇಶಗಳಿಗೆ ಹೋಗುವುದಾಗಲೀ, ಕೀರ್ತಿವಂತರಾಗುವುದಾಗಲೀ ನಮ್ಮ ಎಣಿಕೆಗೆ ಮೀರಿದ ಸಂಗತಿ ಎಂಬ ದೃಢವಾದ ನಂಬಿಕೆ ಅವರಿಗಿದ್ದಿರಬೇಕು.

ಅಂತೂ ನಮ್ಮ ಪಾಶ್ಚಾತ್ಯ ಪ್ರವಾಸದ ಬಯಕೆ ತೀರಿ, ಜೀವಮಾನದ ಕಲಾ ಆಕಾಂಕ್ಷೆಗಳೆಲ್ಲ ಸಫಲವಾದುವು. ಮನೆಗೆ ಹಿಂತಿರುಗುವಾಗ ಹಣದ ಶ್ರೀಮಂತರಾಗಿ

ಅಲ್ಲದಿದ್ದರೂ, ಕಲಾ ಸಂಪತ್ತಿನ ಕುಬೇರರಾಗಿದ್ದೇವೆ. ನಮ್ಮ ಜೀವನದಲ್ಲಿ ಇಲ್ಲಿ ಶೇಖರಿಸಿಕೊಂಡು ಬಂದ ನೂರಾರು ಕಲಾ ವಿಮರ್ಶೆಗಳು ಹುರಿದುಂಬಿಸುವ ಕಲಾ ವಿಮರ್ಶೆಗಳು – ನಮ್ಮ ಜೀವಮಾನ ಇರುವ ತನಕ ಉತ್ತೇಜನ ಕೊಡುವ ಚಿರಂತನ ನಿಧಿ. ಅದೇ ನಮ್ಮ ಧನ ಸಂಪತ್ತು ಕೂಡ.

AMC ಯವರು ನಮ್ಮನ್ನು ಬೀಳ್ಕೊಡಲು ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು. ನಮ್ಮ ವಿದ್ಯಾರ್ಥಿ ವೃಂದ, ಹಿತಚಿಂತಕರು, ರಂಗಸ್ಥಳ–ರಂಗಮಂದಿರದಲ್ಲಿ ಸಹಾಯ ಮಾಡಿದ ಸ್ನೇಹಿತರು, ಎಲ್ಲರೂ ನಮ್ಮಿಬ್ಬರ ಮೇಲಿನ ಆತ್ಮೀಯ ಅಭಿಮಾನದಿಂದ ಬಂದು ಸೇರಿದ್ದರು. ನಮ್ಮ ಶಿಷ್ಯಂದಿರಿಗೆ ನಮ್ಮನ್ನು ಅಗಲುವ ದುಃಖ ತಡೆಯಲಾರದಾಗಿದೆ. ಐದು ವರ್ಷದ ಚಿಕ್ಕ ಮಗು ಸಹೇಲಾ ಕೂಡ 'ಅಂಕಲ್' ಮತ್ತು 'ಆಂಟಿ' ಲಂಡನ್ ಬಿಡಬಾರದು – ಎಂದು ರಾತ್ರಿಯೆಲ್ಲ ಅತ್ತಳಂತೆ.

ಶ್ರೀ ಅಂಗಡಿಯವರು ಮತ್ತು ಅವರ ಕುಟುಂಬದವರನ್ನೂ ಅಗಲಲು ಬೇಸರವಾಗಿದೆ. ನಾವು ಒಂದೇ ಸಂಸಾರದಂತೆ ಎರಡು ವರ್ಷಗಳ ಕಾಲ ಜೊತೆಯಲ್ಲಿದ್ದು ಇತರರಿಗೆ ನಮ್ಮ ಜೀವನ ಮಾರ್ಗದರ್ಶಕವಾಗಿತ್ತು. ಸಂಬಂಧಿಕರಲ್ಲೂ ಇಂತಹ ಏರ್ಪಾಡು ಯಶಸ್ವಿಯಾಗುವುದಿಲ್ಲ. ಅವರ 44 ಫಿಟ್ಸಾಲನ್ ರೋಡ್ (Fitzalan Road) ನಲ್ಲಿ ನಾವು ಕಳೆದ ಪ್ರತಿಯೊಂದು ಕ್ಷಣವೂ ಜ್ಞಾಪಕವಿದೆ. ನೃತ್ಯ ಕಲೆಯ ಕಲಾ ಸೃಷ್ಟಿಯ ಸಂಕಷ್ಟಗಳು ಅದರ ನೋವು–ಶೂನ್ಯದಿಂದ ಎಂಬಂತೆ ಯಾವ ಆಧಾರವೂ ಇಲ್ಲದೆ ರಚಿಸಬೇಕಾದ ಸಂದರ್ಭಗಳು ಶ್ರಮದ ಪರಿಣಾಮದ ಅತ್ಯಂತ ಯಶಸ್ಸು ಯಶಸ್ಸಿನ ಆನಂದದ ಪರಮಾವಧಿ, ಎಲ್ಲಕ್ಕಿಂತ ಹೆಚ್ಚಾಗಿ ಎಲ್ಲರೂ ಒಗ್ಗಟ್ಟಿನಿಂದ ಕಲಾಸೇವೆಯನ್ನು ಮಾಡಿದ ಸುದಿನಗಳ ಸಂತೋಷ – ವರ್ಣಿಸಲಾಗದ ವಿಷಯ.

AMC ಆಡಳಿತದಲ್ಲಿ ನಾವು ಕಲೆಯ ಸಾಫಲ್ಯತೆಯ ಅದ್ಭುತವಾದ ಸುಸಂದರ್ಭಗಳನ್ನು ಪಡೆದೆವು, ಕೇವಲ ಬೆರಳಿನಿಂದ ಎಣಿಸುವಷ್ಟು ಪ್ರದರ್ಶನಗಳು ಚೆನ್ನಾಗಿರಲಿಲ್ಲ. ಅದು ಸಹಜವಾದುದೇ! ಒಮ್ಮೆ ಒಬ್ಬ ಪ್ರಸಿದ್ಧ ಬರಹಗಾರನು "ಯಾವತ್ತೂ ಉನ್ನತ ಮಟ್ಟದಲ್ಲಿರುವ ಯಾವ ಕಲಾವಿದನನ್ನೇ ಆಗಲಿ ನನಗೆ ತೋರಿಸು! ನಾನು ಅವನನ್ನು ಸಂಶಯದಿಂದಲೇ ಪರಿಗಣಿಸುವೆನು! ಖಂಡಿತ ಆತನು ಶ್ರೇಷ್ಠ ಕಲಾವಿದ ನೆನಿಸಿಕೊಳ್ಳುವುದಿಲ್ಲ" ಅಂದ ಮಾತು ತಪ್ಪಲ್ಲ.

ಇನ್ನು ನಾವು ಇಷ್ಟರಲ್ಲೇ ಈ ಪ್ರಿಯವಾದ ಇಂಗ್ಲೆಂಡನ್ನು ಬಿಟ್ಟು ಹೋಗಬೇಕು. ಬೌಲರ್ ಹ್ಯಾಟ್ ಧರಿಸಿ (Bowler Hat) ಕೈಯಲ್ಲಿ ಕೊಡೆ ಮತ್ತು "ದಿ ಟಾಯಿಮ್ಸ್" (The Times) ಪತ್ರಿಕೆ ಹಿಡಿದು ಓಡಾಡುವ ಸ್ನೇಹಪರ ಇಂಗ್ಲಿಷ್ ಶ್ರೀ ಸಾಮಾನ್ಯನ ಚಿರಪರಿಚಿತ ದೃಶ್ಯವನ್ನು ನಾವು ಇನ್ನು ಕಾಣಲಾರೆವು.

ಸರ್ ಫ್ರಾನ್ಸಿಸ್ ಚಿಚೆಸ್ಟರ್‌ನನ್ನು (Sir Francis Chichester) ವಿಜೃಂಭಣೆಯಿಂದ ಸ್ವಾಗತವಿತ್ತ ಇಂಗ್ಲೆಂಡಿಗೆ 'ಹೋಗ್ಬಿಟ್ಬರ್ತೇನೆ' ಎನ್ನಬೇಕು. ಈ ಇಂಗ್ಲೆಂಡನ್ನು ನಾವು ಖಂಡಿತ ಬಹಳವಾಗಿ ಮರುಗಿ ಅಗಲುವೆವು.

ಆದರೆ, ನಮ್ಮ ಮಾತೃಭೂಮಿಗೆ ಮರಳಿ ಬರಲು ನಮಗೆ ಬಹಳ ಸಂತೋಷ. ಪಶ್ಚಿಮ ದೇಶಗಳಿಗೆ ಹೋಲಿಸಿದರೆ ಭಾರತ ಶ್ರೀಮಂತ ದೇಶವಲ್ಲ. ಆದರೆ ನಿತ್ಯ ಜೀವನಕ್ಕೆ ಬೇಕಾಗುವ ಅವಶ್ಯಕತೆಗಳಿಗಷ್ಟೇ ಅಗತ್ಯತೆಯು ಎಲ್ಲೆ ನಿರ್ಧರಿಸಿಕೊಂಡಿರುವ ಕಾರಣ ದೇಶವು ಸರಳತೆ ಪಡೆದು, ನಿರಾಭರಣ ಸುಂದರಿಯಂತೆ ಸೌಮ್ಯವಾಗಿದೆ. ಯೆಹೂದೀಮೆನುಹಿನ್ ಅವರು ಹೇಳುವಂತೆ "ಭಾರತದಲ್ಲಿ ದೀರ್ಘವಾಗಿ ಪರಿಣಮಿಸುವ ಶುಷ್ಕ ಋತುಗಳು ಅಲ್ಲಿನ ಎಲ್ಲ ಹಂತದ ಗಂಡಸರಲ್ಲಿಯೂ, ಹೆಂಗಸರಲ್ಲಿಯೂ ಧ್ಯಾನಾಸಕ್ತಿ ಮಾಡುವಂತೆ ಉತ್ತೇಜಿಸಿ, ಇತರ ಯಾವ' ಜನಾಂಗಕ್ಕೂ ಕೈಲಾಗದಂತಹ ಒಂದು ವಿಶಿಷ್ಟ ರೀತಿಯ ಘನತೆ, ಶಾಂತಿಯನ್ನು ದೈವದತ್ತವಾಗಿ ಕೊಟ್ಟಿವೆ. ನಾವು, ಪಾಶ್ಚಾತ್ಯರಾದರೋ, ಕುರುಡು ಪ್ರಕೃತಿಯ ಕ್ರೂರತೆಯನ್ನು ಎದುರಿಸಿ, ಆದರಿಂದ ಅದ್ಭುತ ರೀತಿಯಿಂದ ಪಾರಾಗಿ ಸ್ವಾವಲಂಬಿಗಳಾಗಿದ್ದೇವೆ. ಆದರೆ ಹಾಗೆ ಮಾಡುವಾಗ ನಾವು ನಮ್ಮ ಪ್ರಗತಿಯ ಸಾಧನಾ ಕ್ರಮಗಳಲ್ಲಿಯೇ ಸಿಲುಕಿಕೊಂಡು ನಮ್ಮ ವಿರಾಮ ಸಮಯವನ್ನೆಲ್ಲಾ ಸತ್ಯ ಸಂಗತಿಗಳನ್ನು ಮರೆಸುವ, ಅಥವಾ ಅವುಗಳಿಂದ ಪಾರಾಗುವ ಕೃತಕ ಸಾಧನೆಗಳಿಂದಲೇ ತುಂಬಿಸಿದ್ದೇವೆ........" ಪೂರ್ವ ಪಶ್ಚಿಮದ ವೈಪರೀಯತೆಯ ಎಂತಹ ಭಾವಮಯೀ ವಿಶ್ಲೇಷಣೆ!

ಭಾರತೀಯರ ಭಾವನಾ ಶಕ್ತಿಯ ಸಿರಿತನ, ಅದರ ಚಿತ್ತವೃತ್ತಿಯ ಬಹುಮುಖ ಸಾಮರ್ಥ್ಯ, ಇವು ಅನೇಕ ಪಾಶ್ಚಾತ್ಯರಿಗೆ ಆಶ್ಚರ್ಯವನ್ನುಂಟು ಮಾಡುತ್ತದೆ. ಸಹಿಷ್ಣುತೆ, ಪಕ್ವಮನಸ್ಸಿಗೆ ಲಭಿಸುವ ಸೌಮ್ಯತೆ, ಗ್ರಹಣ ಶಕ್ತಿಯ ಶಾಂತತೆ, ಎಲ್ಲಾ ಜೀವಿತ ವಸ್ತುಗಳ ಮೇಲಿರಬೇಕಾದ ಶಾಂತಗೊಳಿಸುವ, ಒಂದುಗೂಡಿಸುವ ಪ್ರೇಮ ಇವನ್ನೆಲ್ಲಾ ಪ್ರಾಯಶಃ ಭಾರತ ಅವರಿಗೆ ಕಲಿಸಿಕೊಡಬಹುದೆಂದು ಅವರೆಲ್ಲರೂ ಆಶಿಸುತ್ತಿದ್ದಾರೆ.

ಅಂತಹ ಪವಿತ್ರವಾದ ಭಾರತ ದೇಶಕ್ಕೆ ನಾವು ಹಿಂತಿರುಗುವವರಿದ್ದೇವೆ; ನಮ್ಮ ಮಾತೃಭೂಮಿ, ನಮ್ಮ ಆಪ್ತ ಬಾಂಧವರು, ಸ್ನೇಹಿತರು, ಹೆತ್ತವರು, ಮಕ್ಕಳು, ಸಂಬಂಧೀಕರನ್ನು ಜೊತೆಗೂಡಲು, ನಮ್ಮ ಕಲೆಯ ಮೂಲ ಪ್ರದೇಶಕ್ಕೆ ಹಿಂತಿರುಗಿ ಅದರ ಅಕ್ಷಯ ಜ್ಞಾನ ನಿಧಿಯಿಂದ ಕಲಾ ಜಗತ್ತಿನಲ್ಲಿ ಇನ್ನೂ ಹೆಚ್ಚಾಗಿ ಹೊಸ ಹೊಸ ಕೃತಿಗಳನ್ನು ರಚಿಸಲು ಹಿಂತಿರುಗುತ್ತಿದ್ದೇವೆ........ದೇವರ ಅನುಗ್ರಹವಿರಲಿ!

AMC ಯನ್ನು ಬೀಳ್ಕೊಡುವ ಮೊದಲು, ನಮ್ಮ ಕಲಾ ಜೀವನದ ಎಲ್ಲಾ ಅಕಾಂಕ್ಷೆಗಳನ್ನು ನೆರವೇರಿಸಿ, ಕನಸುಗಳನ್ನೆಲ್ಲಾ ನನಸಾಗಿ ಮಾಡಿಕೊಟ್ಟ ಶ್ರೀ ಅಯನ ದೇವ ಅಂಗಡಿಯವರಿಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ಈ ವ್ಯಕ್ತಿಯ ಸಹಾಯವಿಲ್ಲದಿದ್ದರೆ ಪ್ರಪಂಚವೇ ನಮ್ಮ ಜೀವನದಿಂದ ಮರೆಯಾಗುತ್ತಿತ್ತು. ಸೌಹಾರ್ದತೆ, ಪ್ರೇಮ, ಆತ್ಮೀಯತೆಯಿಂದ ಲಂಡನ್ ಪ್ರವಾಸದಲ್ಲಿ ನಮಗೆ ಒದಗಿಸಿದ ಶಾಂತಿಯುಕ್ತ ಮನೆ, ಸಂಸಾರ ಸುಖಗಳಿಗೆ ನಾವು ಶ್ರೀಮತಿ ಪೆಟ್ರಿಶಿಯಾ ಅಂಗಡಿಯವರಿಗೂ ಚಿರಋಣಿಗಳು. ನಾವೂ AMC ಗಾಗಿ ಸಂತೋಷದಿಂದ ತ್ರಿಕರಣ ಸೇವೆ ಸಲ್ಲಿಸಿದ್ದೇವೆ. ಅದರಿಂದ ಪರಸ್ಪರ ಲಾಭವೂ ಆಗಿದೆ.

.... ಅಮೇರಿಕಾದಿಂದ ಯಾವ ಸಮಾಚಾರವೂ ಇಲ್ಲ. U. S. A. ಗೆ ಹೋಗದೆ ಇದ್ದರೆ ನಮ್ಮ ಪ್ರಯಾಣದ ದಾರಿ, ತಾರೀಕು ಎಲ್ಲ ನಿಶ್ಚಯವಾದ ಮೇಲೆ ಪತ್ರ ಬರೆಯುತ್ತೇವೆ. ಇಟಲಿಯಿಂದ ಹಡಗಿನ ಪ್ರಯಾಣ ಮಾಡಬೇಕೆಂದಿದ್ದೇವೆ.

ಇತಿ ನಿಮ್ಮ
ಅಮ್ಮ.

* * * * *

ಲಂಡನ್
10 - 12 - 1967

ಮುದ್ದು ಮಕ್ಕಳೇ,

ಅಕ್ಟೋಬರ್ ಎರಡನೇ ವಾರದಿಂದ ನಿಮ್ಮ ಪತ್ರವಿಲ್ಲ! "ರುಕ್ಮಿಣಿ" ಯಿಂದ ಒಬ್ಬರಾದರೂ ಬರೆಯಬಾರದಿತ್ತೆ? ನಿಮ್ಮ ಸಮಾಚಾರವಿಲ್ಲದೆ ನಾವು ಇಲ್ಲಿ ಪಡುವ ಕಳವಳ ನಿಮಗೆ ತಿಳಿಯದು; ಜಯದೇವನಂತೂ ಬರೆಯದೆ ತಿಂಗಳುಗಳಾದುವು! ಅವನ ಯೋಚನೆಯಾಗಿದೆ ನಮಗೆ! ಇಲ್ಲಿನ ನಮ್ಮ ಉದ್ರಿಕ್ತ ಚಟುವಟಿಕೆಗಳನ್ನು ವ್ಯವಹರಿಸಲು ಕಷ್ಟವಾಗುತ್ತಿದೆ! ದಯವಿಟ್ಟು ಬರೆಯಿರಿ – ದಯವಿಟ್ಟು—

ಹೋದ ವಾರ ನಮ್ಮ ಪರವಾಗಿ ಶ್ರೀ ಅಂಗಡಿಯವರ ಕುಟುಂಬದವರಿಗೆ ಬೀಳ್ಕೊಡುವ ಔತಣವನ್ನು ಚೀನೀಯರ ಉಪಹಾರ ಗೃಹದಲ್ಲಿ ಕೊಟ್ಟೆವು. ಮನೆಗೆ ಹಿಂತಿರುಗಿ ಬಂದ ತಕ್ಷಣ ನಮಗೆ ನ್ಯೂಯಾರ್ಕಿನಿಂದ ದೂರವಾಣಿ ಮೂಲಕ (Trunk Call) ಆಹ್ವಾನ ಬಂತು! ಇಂಡೋ-ಅಮೇರಿಕನ್ ಡ್ಯಾನ್ಸ್ ಕಂಪನಿ (Indo-American Dance Company) ಯ ನಿರ್ದೇಶಕ ವ್ಯವಸ್ಥಾಪಕರಾದ ಶ್ರೀ ಮತ್ತೆವೋ ಮತ್ತು ಶ್ರೀಮತಿ ಕೆರೊಲಾ ಗೋಯಾ ಅವರಿಂದ! ಅವರಿಗಾಗಿ "ಬುದ್ಧೋ

ದಯ" ನೃತ್ಯ ನಾಟಕವನ್ನು ರಚಿಸಬೇಕೆಂಬ ಆಹ್ವಾನ! ಅವರು ಕೆಲವು ವರ್ಷಗಳ ಹಿಂದೆ ಬೆಂಗಳೂರಿನ ನಮ್ಮ ಮನೆಗೆ ಬಂದಾಗ ನೀವು ಚಿಕ್ಕ ಹುಡುಗರು. ನಿಮಗೆ ಅವರನ್ನು ನೋಡಿದ ಜ್ಞಾಪಕವಿರಲಾರದು. ಎರಡು ತಿಂಗಳ ಕಾಲ ನಮ್ಮ ನ್ಯೂಯಾರ್ಕ್ ಪ್ರವಾಸಕ್ಕೆ ಅವರೆಲ್ಲ ಸಿದ್ಧತೆಯನ್ನು ಮಾಡಿರುವರಂತೆ! ಒಡನೇ ಹೊರಟು ಬರಬೇಕೆಂಬ ಒತ್ತಡದ ಒತ್ತಾಯ!

ಅಂದಿನಿಂದ ಇಂದಿನವರೆಗೆ ಅವರ ಫೋನ್ ಕಾಲ್‌ಗಳು (Phone Call) ಬರುತ್ತಲೇ ಇವೆ. "ಬೇಗ ಬನ್ನಿ – ಬೇಗ ಬನ್ನಿ" ಎಂದು! ಹೋಟೆಲು 'ಬುಕ್' (Book) ಮಾಡಿ ಒಂದು ವಾರದ ಬಾಡಿಗೆಯನ್ನು ಈಗಾಗಲೇ ಕೊಟ್ಟಿರುವರಂತೆ. ಇಂಡೋ–ಅಮೇರಿಕನ್ ಡಾನ್ಸ್ ಕಂಪೆನಿಯ ವಿದ್ಯಾರ್ಥಿಗಳು ನಮ್ಮ ಬರುವಿಕೆಯನ್ನು ಆತುರದಿಂದ ನಿರೀಕ್ಷಿಸುವರಂತೆ! ಆದರೆ ನಮ್ಮ ಚಲನೆ ನಮ್ಮ ಕೈ ಮೀರಿದುದು – ನಮಗೆ ವೃತ್ತಿ ಪರವಾನಗಿ "ವರ್ಕ್ ಪರ್ಮಿಟ್" (Work Permit) ಇಲ್ಲದೆ ನ್ಯೂಯಾರ್ಕಿಗೆ ಕಾಲಿಡಲು ಸಾಧ್ಯವೇ ಇಲ್ಲ – ಪ್ರವಾಸಿಗಳಾಗಿ ಹೋದರೆ ಅಲ್ಲಿ ಕೆಲಸ ಮಾಡುವಂತಿಲ್ಲ, ಸಂಪಾದಿಸಲು ಸಾಧ್ಯವಿಲ್ಲ. ಆದ್ದರಿಂದ ವೃತ್ತಿ ಪರವಾನಗಿ (ವರ್ಕ್ ಪರ್ಮಿಟ್) ಗೋಸ್ಕರ ಕಾಯಲೇ ಬೇಕು. ಯು. ಎಸ್. ಎ. (U. S. A.) ದಿಂದ ಕರೆಬಂದರೂ ಪ್ರವಾಸಕ್ಕೆ ಬೇಕಾಗಿದ್ದ 'ವರ್ಕ್ ಪರ್ಮಿಟ್' ಇನ್ನೂ ಸಿಗಲಿಲ್ಲ! ಲಂಡನಿನಲ್ಲಿ ಕಾದು ಕಾದು ಬೇಸತ್ತು ಕೇಂಬ್ರಿಡ್ಜ್‌ಗೆ (Cambridge) ಹೋಗಿ ಬಂದೆವು. A. M. C. ಕೆಲಸ ನಿಲ್ಲಿಸಿದ್ದೇವೆ. ಲಂಡನ್ನಿನಲ್ಲಿ ಗುರಿಯಿಲ್ಲದೆ ಕಾಲಕಳೆಯುವುದು ಬೇಸರ. ಲಂಡನ್ನೇ ಬೇಸರ ಹುಟ್ಟಿಸುವಂತಿದೆ! ಎಂದು ಬಿಟ್ಟು ಹೋಗುವೆವೋ ಕಾಯುತ್ತಿದ್ದೇವೆ. ಕೆಲಸವಿಲ್ಲದಿದ್ದರೆ ವಾತಾವರಣ ಎಷ್ಟು ಬೇರೆಯಾಗಿ ಕಾಣುತ್ತದೆ! ಆಶ್ಚರ್ಯವಲ್ಲವೇ?

ದಿನವೆಲ್ಲ ಅಮೇರಿಕನ್ ರಾಯಭಾರಿಯ ಕಾರ್ಯಾಲಯದಲ್ಲಿ (American Embassy) 'ವರ್ಕ್ ಪರ್ಮಿಟ್' – 'ವಿಸಾ' (Work Permit–Visa) ಗೋಸ್ಕರ ಕಾಯುವುದೇ ಕೆಲಸ. ಯು. ಎಸ್. ಎ. ಪ್ರವಾಸಕ್ಕೆ ಆಶಾವಾದಿ ನಿರೀಕ್ಷಣೆಯಿಂದ ನ್ಯೂಯಾರ್ಕಿಗೆ ನವೆಂಬರ್ 30ರ ಹಡಗಿನ ಪ್ರಯಾಣವನ್ನು ತತ್ಕಾಲಕ್ಕೆ 'ಬುಕ್' (Book) ಮಾಡಿದ್ದೆವು. ಅದು ರದ್ದಾಗಿದ್ದಕ್ಕೆ ಬೇಸರವಾಗುತ್ತದೆ. ನಮ್ಮ ಎಲ್ಲ ಸಾಮಾನನ್ನೂ ತೆಗೆದುಕೊಂಡು ಆರಾಮವಾಗಿ 5 ದಿನ ಹಡಗಿನಲ್ಲಿ ಕಳೆದು ವಿಶ್ರಾಂತಿ ಪಡೆದು ಮುಂದಿನ ಕಾರ್ಯಕ್ರಮಗಳಿಗೆ ಬೇಕಾದ ಚೇತನವನ್ನೂ ಹುರುಪನ್ನೂ ಪಡೆದು ಮೈಯೊಡ್ಡಬಹುದಾಗಿತ್ತು. ಈಗ 'ವಿಸಾ' (Visa) ಬಂದ ತಕ್ಷಣ ಹಾರಿ ಹೋಗಲೇ ಬೇಕು. ಇಲ್ಲದಿದ್ದರೆ ಅಲ್ಲಿನ ವ್ಯವಸ್ಥಾಪಕರಿಗೆ ನಮ್ಮಿಂದ ನಷ್ಟವಾಗುತ್ತದೆ–ಸಾಮಾನನ್ನು ಅಸಾಧ್ಯ ಹಣತೆತ್ತು ವಿಮಾನ ಮೂಲಕ ತರಿಸಿಕೊಳ್ಳಬೇಕು. ನಮ್ಮ ಟೇಪ್ ರೆಕಾರ್ಡರ್ ಮತ್ತು ವೇಷಭೂಷಣಗಳ (Costume) ಪೆಟ್ಟಿಗೆಗಳೇ ನಮಗೆ ಕೊಡುವ

ಸಾಮಾನಿನ ತೂಕವನ್ನು ಮೀರುತ್ತವೆ! ಪತಿಯವರ ಮತ್ತು ನನ್ನ ಬಟ್ಟೆ ಬರೆ ಒಂದು ಚಿಕ್ಕ ಪೆಟ್ಟಿಗೆಯಲ್ಲಿ ಹಾಕಿ ನ್ಯೂಯಾರ್ಕ್ ಪ್ರಯಾಣ ಮಾಡಬೇಕು. ಲಂಡನ್ನಿನಲ್ಲಿರುವ ಸಾಮಾನನ್ನು ಬೇರೆಯಾಗಿ ಭಾರತಕ್ಕೆ ನೇರವಾಗಿ ಕಳುಹಿಸುವ ಏರ್ಪಾಡಾಗಿದೆ. ಅಂತೂ ಯು. ಎಸ್. ಎ. ಪ್ರಯಾಣಕ್ಕೆ ಎಲ್ಲಾ ಸಿದ್ಧ.

ಈಗ 'ವಿಸಾ' (Visa) ಸಿಕ್ಕಿದರೆ ಮರು ವಿಮಾನಕ್ಕೆ ಹೋಗಲು ತಯಾರಾಗಿದ್ದೇವೆ.

ಇತಿ ನಿಮ್ಮ
ಅಮ್ಮ.

* * * *

ಲಂಡನ್
12 – 12 – 1967

ಮುದ್ದು ಮಕ್ಕಳೇ,

ಇದನ್ನು ಅಮೇರಿಕನ್ ರಾಯಭಾರಿಯ ಕಾರ್ಯಾಲಯದಿಂದ (American Embassy) ಬರೆಯುತ್ತಿದ್ದೇನೆ. ಈಗ ತಾನೇ ವೃತ್ತಿ ಪರವಾನಗಿ (Work Permit) ಸಿಕ್ಕಿದ ಕಾರಣ ನಮಗೆ 'ವಿಸಾ' (Visa) ಕೊಟ್ಟರು!

"H 1 ಪರ್ಮಿಟ್" ಸಮಯಕ್ಕೆ ಸರಿಯಾಗಿ ಬಂತು. "H 1 ಪರ್ಮಿಟ್" ಅಂದರೆ ಅಮೇರಿಕಾಗೆ ಬರುವ ಪ್ರವಾಸಿಗಳು ಅಸಾಧಾರಣ ಕೆಲಸದ ಮೇಲೆ ಬಂದು ತಮ್ಮ ಸೇವೆಯನ್ನು ಮಾಡಲು ಅವರ ಪ್ರದೇಶಕ್ಕೆ ಅನುಮತಿ. ಇಲ್ಲಿಂದ ವಿಮಾನದ ಟಿಕೇಟು ಪಡೆಯಲು ಹೋದಾಗ ಏರ್ ಇಂಡಿಯಾ (Air India) ವಿಮಾನ 13 ರಂದು ಲಂಡನ್ನಿನಿಂದ N. Y. ಗೆ ಹೋಗುವುದಿಲ್ಲ ಎಂಬ ಸುದ್ದಿ ಕೇಳಿ ನಿರಾಶೆಯಾಯಿತು. ಅಟ್ಲಾಂಟಿಕ್ (Atlantic) ಸಾಗರದ ಮೇಲೆ ಹಾರಾಡುವ ಎಲ್ಲಾ ವಿಮಾನಗಳಲ್ಲಿ ಏರ್ ಇಂಡಿಯಾ ಅತ್ಯುತ್ತಮವಾದುದು ಎಂಬ ವರದಿ ನಿಸ್ಸಂದೇಹವಾದುದಂತೆ. ಏರ್ ಇಂಡಿಯಾ ವಿಮಾನ ಮೊದಲೇ ಭರ್ತಿ ಆದ ಕಾರಣ ನಮಗೆ ಟಿಕೇಟ್ ಸಿಗಲಿಲ್ಲ. ನಾವು ಪೆನ್–ಎಮ್ (Pan-Am) ವಿಮಾನದ ಟಿಕೇಟು ಪಡೆದೆವು.

ಅಂತೂ ಯು. ಎಸ್. ಎ. (U. S. A.) ದೇಶಕ್ಕೆ ನಾಳೆ ಪ್ರಯಾಣ! ಇಲ್ಲಿಂದ ನಾವು ಉದ್ದೇಶಿಸಿದುದೆಲ್ಲವೂ ಸಫಲವಾದರೆ ನಾವು ಭೂಪ್ರದಕ್ಷಣೆ ಮಾಡಿ ಮನೆಗೆ

ಹಿಂತಿರುಗುವೆವು! ಯು. ಎಸ್. ಎ. ನಲ್ಲಿ 4 ತಿಂಗಳು ವಾಸ. ಯು. ಎಸ್. ಎ. ನಲ್ಲೆಲ್ಲ–ಉತ್ತರ ದಕ್ಷಿಣ ಪೂರ್ವ ಪಶ್ಚಿಮಗಳಲ್ಲಿ–ನಮ್ಮ ಕಾರ್ಯಕಲಾಪಗಳು ಏರ್ಪಾಡಾಗಿವೆ. ಅದನ್ನು ಮುಗಿಸಿ ಏಪ್ರಿಲ್ 13ರ ವರೆಗಿದ್ದು ಮುಂದಕ್ಕೆ ಹೋಗುತ್ತೇವೆ. ಈ ಭೂ ಪ್ರದಕ್ಷಿಣೆಯನ್ನು ಖಂಡಿತ ಯಶಸ್ವೀ ಮಾಡುವೆವೆಂಬ ಹಠ ತೊಟ್ಟಿದ್ದೇವೆ. ಆರ್ಥಿಕ ಅನುಕೂಲತೆ ಆಗದಿದ್ದರೂ ಜಗತ್ತನ್ನು ನೋಡಿದ ತೃಪ್ತಿ ಇದೆ. ಯು. ಎಸ್. ಎ. ನಲ್ಲಿನ ಜೀವನಕ್ಕೆ ಬಹಳ ವೆಚ್ಚವಿದೆ (Costly) ಅಂತೆ. ಅಲ್ಲದೆ ಅಲ್ಲಿ ದುಡಿದ ಹಣದಿಂದ ನಾವು ಮನೆಗೆ ಬರುವ ಟಿಕೇಟನ್ನು ಕೊಂಡುಕೊಳ್ಳಬೇಕು. ಎಷ್ಟು ಸಂಪಾದಿಸಿದರೂ ಸಾಲದು. 4 ತಿಂಗಳ ಮೇಲೆ ನಾವು ಯು. ಎಸ್. ಎ. ನಲ್ಲಿ ಇರುವ ಮನಸ್ಸಿಲ್ಲ. ಮೊದಲನೆಯದಾಗಿ ಸಂಪಾದನೆಗೆ ಪಡುವ ಕಷ್ಟ–ಎರಡನೆಯದಾಗಿ ನಾವು ನೃತ್ಯ ಕಲೆಗಾಗಿ ದುಡಿದು ಸೋತಿದ್ದೇವೆ. ಮನೆಗೆ ಬಂದು ಹಾಯಾಗಿ ನಮ್ಮ ತೋಟದ ಕಲ್ಲು ಬೆಂಚಿನ ಮೇಲೆ ಕುಳಿತು ಮಾತೂ ಆಡದೆ ಮೆದುಳಿಗೂ ತೊಂದರೆ ಕೊಡದೆ ಯೋಚನೆಯಿಲ್ಲದೆ ಸುಮ್ಮನೆ ಕುಳಿತುಕೊಳ್ಳಬೇಕೆನಿಸುತ್ತದೆ! ಅದನ್ನು ಯೋಚಿಸಿದರೆ ಸ್ವರ್ಗ ಸುಖ ಅದೇ ಎನ್ನಿಸುತ್ತದೆ ಈಗ! N. Y. ನಿಂದ ಬರೆಯುವೆ.

ಇತಿ ನಿಮ್ಮ

ಅಮ್ಮ.

ಲಂಡನ್‌ನಿಂದ — ನ್ಯೂಯಾರ್ಕ್‌ಗೆ

ಇಂಗ್ಲೆಂಡಿನಿಂದ — ಅಮೇರಿಕಾ ದೇಶಕ್ಕೆ

ನ್ಯೂಯಾರ್ಕ್
20 – 12 – 1967

ಮುದ್ದು ಜಯದೇವ್,

ನಿನ್ನ ಕಾಗದ ಓದಿ ಒಂದು ದೀರ್ಘ ನಿಟ್ಟುಸಿರು ಬಿಟ್ಟೆ. ನಾವು ಒಂದು ವಾರ ದಿಂದ ಅಮೇರಿಕಾದಲ್ಲಿದ್ದರೂ, ನಿನ್ನ ಯೋಚನೆ ತಲೆ ತುಂಬಿ ಯಾವ ಕೆಲಸಕ್ಕೂ ಹುರುಪಿರಲಿಲ್ಲ. ನೀನು ಚೆನ್ನಾಗಿದ್ದೀಯೆ ಎಂದು ತಿಳಿದು ಸಂತೋಷವಾಯಿತು. "ಅದ್ಭುತ ಅಮೇರಿಕಾ ದೇಶದಲ್ಲಿದ್ದೀರಿ! ಅಲ್ಲಿನ ಸುಖ ನಿರಾತಂಕವಾಗಿ ಅನುಭವಿಸುವ ಬದಲು ನನ್ನ ಯೋಚನೆ ಏಕೆ?" ಎಂದು ಬರೆದಿದ್ದೀಯೆ ಮಗು. ಅದು ಸರಿಯೇ? ನಾವು ಸುಖವಾಗಿರಬೇಕಾದರೆ, ಎಲ್ಲೇ ಆಗಲಿ, ಮೊದಲು ನೀವು ಸುಖದಿಂದಿರಬೇಕು. ಹಾಗಿದ್ದರೆ ಮಾತ್ರ ನಮ್ಮ ಸುಖಕ್ಕೆ ಒಂದು ಬೆಲೆ. ನಮ್ಮ ಸುಖದುಃಖಗಳೆರಡೂ ನಿಮ್ಮನ್ನು ಹೊಂದಿಕೊಂಡಿವೆ. ನೀವು ಕ್ಷೇಮದಿಂದಿದ್ದರೆ, ನಾವೂ ಕ್ಷೇಮ. ನೀವು ಕುಶಲರಾಗಿಲ್ಲದಿದ್ದರೆ, ಅದು ಅಮೇರಿಕಾ ದೇಶವಾಗಲೀ – ಯಾವುದೇ ದೇಶವಾಗಲೀ, ಸುಖವಾಗಿರಲು ನಮಗೆ ಸಾಧ್ಯವಾದರೂ ಹೇಗೆ? ನೀನೇ ಹೇಳು. ಸುಖವು ಪರಸ್ಪರ ಸಂಬಂಧಪಟ್ಟುದಲ್ಲದೆ, ಸ್ವಾರ್ಥ ಜೀವನದ ಸುಖ ಎಂದೂ ಸುಖವೆನಿಸುವುದಿಲ್ಲ. ಇನ್ನು ಮುಂದೆ, ಕಾಲಕಾಲಕ್ಕೆ ಸರಿಯಾಗಿ ತಪ್ಪದೆ ಕಾಗದ ಬರೆಯುತ್ತಿರು. ನಮ್ಮ ಪ್ರವಾಸ ನಗುನಗುತ್ತಾ ಸಾಗುವಂತೆ ಮಾಡು........ಶಿವದೇವನಿಗೂ ಹೇಳು.

ನಮ್ಮನ್ನು ಲಂಡನ್ನಿನಿಂದ ಇಲ್ಲಿಗೆ ಕರೆದುಕೊಂಡು ಬಂದ ಪೆನ್–ಎಮ್–ಜೆಟ್ ಕ್ಲಿಪರ್–ಬೋಯಿಂಗ್ 707 (Pan–Am, Jet Clipper Boeing 707) ಗಗನ ಯಾನ ಚೆನ್ನಾಗಿರಲಿಲ್ಲ. ಬೆಳಿಗ್ಗೆ ಹನ್ನೊಂದೂವರೆ ಗಂಟೆಗೆ ಒಂದು ಗಂಟೆ ತಡ ಮಾಡಿಕೊಂಡು ಹೊರಟಿತು. ಶಾಖ ನಿಯಂತ್ರಣ ಸೌಲಭ್ಯ ಸರಿಯಾಗಿರಲಿಲ್ಲವೇನೋ ವಿಮಾನದಲ್ಲಿ ಅತಿ ಸೆಖೆ. ಅಲ್ಲದೆ ಜನರ ಗದ್ದಲ, ಗಲಾಟೆ. ಕಾಲು ಚಾಚಲು ಸರಿ ಯಾದ ಜಾಗವಿಲ್ಲದೆ ಸ್ಥಳ ಸಂಕೋಚ ಬೇರೆ. ಕೊಟ್ಟ ಆಹಾರವೂ ರುಚಿಯಾಗಿರ ಲಿಲ್ಲ. ಪ್ರವಾಸ ಪ್ರಯಾಸವಾಗಿ ಒಂದೊಂದು ಗಂಟೆಯೂ, ಒಂದೊಂದು ಯುಗ ದಂತೆ ನನಗೆ ತೋರಿತು. ವಿಮಾನದಲ್ಲಿ T. V. ಇತ್ತು. ಅದರ ಮಾತುಕಥೆ ಕೇಳ ಬೇಕೆಂದರೆ ಹಣ ತೆತ್ತು ಧ್ವನಿಗ್ರಾಹಿಯನ್ನು ಕಿವಿಗೆ ಸಿಕ್ಕಿಸಿ ಅದನ್ನು ವಿನೋದಿಸಬಹು ದಿತ್ತು. ಆದರೆ ನಮಗೆ ಏನೂ ಬೇಡವಾಯಿತು. ತಲೆನೋವು, ದಣಿವು, ಸುಸ್ತು, ಹಾರಾಟದ ಸಮಯ 7 ಗಂಟೆ 10 ನಿಮಿಷವಾದರೂ. ನ್ಯೂಯಾರ್ಕ್ ಸೇರುವಾಗ ಇಲ್ಲಿನ ಸಮಯ ಮಧ್ಯಾಹ್ನ 2–40 ಮತ್ತು ಲಂಡನ್ ಸಮಯ ಸಂಜೆ 7–30! ಈ ಪ್ರವಾಸ ಎಂದು ಮುಗಿಯುವುದೋ, ಎಂದಾಯಿತು ನನಗೆ. ಸಾಮಾನು ಸರಂಜಾಮು ಗಳೂ ಬಹಳ ಇದ್ದುವು. ಕೈಯಲ್ಲಿರುವ ವಸ್ತುಗಳನ್ನೂ ತೂಕ ಮಾಡಿದರು. ನಾವು

ಏತಕ್ಕಾದರೂ ಅಷ್ಟು ಸಾಮಾನುಗಳನ್ನು ಹೊತ್ತು, ಹೆಚ್ಚಾದ ಭಾರಕ್ಕೆ ಹಣ ತೆತ್ತು ಕಷ್ಟ ಪಡುವೆವೋ ತಿಳಿಯದು! ನಮಗೆ ಯಾವ ವಸ್ತುವನ್ನೂ ಬಿಡಲು ಮನಸ್ಸಿರುವುದಿಲ್ಲ. ನಾವು ನೆನಪುಗಳಿಗೆ ಅಂಟಿಕೊಳ್ಳುವ ಜನ. ಸಣ್ಣ ಪುಟ್ಟ ವಿಷಯಗಳನ್ನೂ ಬಿಡದೆ ಜೊತೆಯಲ್ಲಿ ತೆಗೆದುಕೊಂಡು ಹೋಗುತ್ತೇವೆ. ಅವಿಲ್ಲದಿದ್ದರೂ ಜೀವನಕ್ಕೆ ಕಷ್ಟವಾಗದು. ಬೇಡವೆಂಬುದು ಯಾವುದು ಎಂದು ನಿರ್ಣಯ ಮಾಡುವುದೇ ಸಂದಿಗ್ಧ. ಈ ಆಧುನಿಕ ಜೀವನದಲ್ಲಿ ರಭಸದ ಜೀವನ ನಿತ್ಯ ಜೀವನವಾಗುತ್ತಿದೆ. ನಿನ್ನೆಯನ್ನು ಮರೆತು ನಾಳೆಯದನ್ನು ಯೋಚಿಸುತ್ತಿದ್ದಂತೆಯೇ ನಾಳಿದ್ದಿನ ಉದಯವಾದಾಗ ಆ ನಾಳೆ ನಮ್ಮ ಪಾಲಿಗೆ ನಿನ್ನೆಯಾಗಿ ಮರೆಯಾಗುವುದನ್ನು ನೋಡುತ್ತಲಿದ್ದೇವೆ. ಏನು ಜೀವನವೋ ?........

ನ್ಯೂಯಾರ್ಕ್‌ನ ಅತಿ ವಿಶಾಲವಾದ ಕೆನೆಡಿ ವಿಮಾನ ನಿಲ್ದಾಣಕ್ಕೆ ನಮ್ಮನ್ನು ಸ್ವಾಗತಿಸಲು ಇಂಡೋ–ಅಮೇರಿಕನ್ ಡ್ಯಾನ್ಸ್ ಕಂಪೆನಿಯ (Indo – American Dance Company) ವ್ಯವಸ್ಥಾಪಕರಾದ ಶ್ರೀಮತಿ ಕೆರೊಲಾ ಗೋಯಾ, ನಮ್ಮ ನೆಚ್ಚಿನ ಗೆಳತಿ, ಬಂದಿದ್ದರು. ಟ್ಯಾಕ್ಸಿ ಮಾಡಿ, ನಮಗಾಗಿ ಕಾದಿರಿಸಿದ್ದ ಹೋಟೆಲಿಗೆ ಕರೆದುಕೊಂಡು ಹೋದರು. ದಾರಿಯಲ್ಲೆಲ್ಲಾ ಗಗನಚುಂಬಿ ಕಟ್ಟಡಗಳು. ಮೇಲೆ ನೋಡುತ್ತಾ ಹೋದರೆ ಕತ್ತು ಉಳುಕಿ ಹೋಗುವಷ್ಟು ಎತ್ತರ! ಅನೇಕಾನೇಕ ಸೇತುವೆಗಳು, ಅಗಲವಾದ ಮಾರ್ಗಗಳು, ದೊಡ್ಡ ದೊಡ್ಡ, ಉದ್ದ ಉದ್ದವಾದ ಕಾರುಗಳು, ಈಸ್ಟ್ ರಿವರ್, ಹಡ್ಸನ್ ರಿವರ್, ಸೆಂಟ್ರಲ್ ಪಾರ್ಕ್ ಎಲ್ಲಾ ದಾಟಿದೆವು. ಆದರೆ ನನಗೇನೋ ಎಲ್ಲೂ ಗೆಲುವು ಕಾಣಿಸಲಿಲ್ಲ. ಎಲ್ಲೆಲ್ಲೂ ಕಪ್ಪು ಮಣ್ಣು, ಕಟ್ಟಡಗಳೂ ಕಪ್ಪು. 'ಕೈಗಾರಿಕೆಗಳಿಂದಾಗಿ ಈ ಕಪ್ಪು ಧೂಳು, ಕಪ್ಪು ಹೊಗೆ' ಎಂದರು ನಮ್ಮ ಗೆಳತಿ–ಇರಬಹುದು! ಲಂಡನ್ ಯೂರೋಪಿಗೆ ಹೋಲಿಸಿದರೆ ಅಷ್ಟು ಶುಚಿಯಿಲ್ಲ ಎಂದ ನಮಗೆ ನ್ಯೂಯಾರ್ಕ್ ನಿರಾಶೆಯಾಯಿತು. ಇದು ನಾನು ಕಲ್ಪಿಸಿದ ನ್ಯೂಯಾರ್ಕ್ ಅಲ್ಲ. ಇಲ್ಲಿ ಜನರ ಗಲಭೆ, ಕೂಗಾಟ! ಗಳಿಗೆಗೊಂದು ಅಗ್ನಿಶಾಮಕ ವಾಹನ ಹೋಗುವಾಗ ಅತಿ ಕಿರುಚಾಟ, ಭೋರ್ಗರೆಯುವ ಗರ್ಜನೆ! ಅಬ್ಬಾ!!

ಹೋಟೆಲಿನ ನಾಲ್ಕನೆ ಮಹಡಿಯಲ್ಲಿನ ಸುವ್ಯವಸ್ಥಿತ ಕೋಣೆಯೊಂದು ನಮ್ಮ ವಾಸಸ್ಥಳ. ಕೋಣೆ ವಿಶಾಲವಾಗಿತ್ತು. ಅದಕ್ಕೇ ಸೇರಿದಂತೆ ಬಚ್ಚಲು, ಶೌಚಗೃಹ, ಅಲ್ಲಿ ಬಿಸಿನೀರು – ತಣ್ಣೀರಿನ ಸೌಲಭ್ಯ, ತುಷಾರ ವ್ಯವಸ್ಥೆ, ಸಾಮಾನು ಇಡಲು ಜೊಕ್ಕಟವಾದ ಸ್ಥಳ! ಕಪಾಟು ಎಂದು ಬಾಗಿಲು ತೆಗೆದರೆ ಅಲ್ಲಿ ಒಂದು ಚಿಕ್ಕ ಅಡಿಗೆ ಮನೆಯೇ ಪ್ರತ್ಯಕ್ಷವಾಯಿತು! ಸ್ವಲ್ಪ ಜಾಗದಲ್ಲಿ ಗ್ಯಾಸ್ (Gas) ಒಲೆಗಳ ಸಾಲು, ಆಹಾರವನ್ನು ವಿಧವಿಧವಾಗಿ ಬೇಯಿಸುವ ವಿವಿಧ ಒಲೆಗಳು, ಪಾತ್ರೆ ಇಡಲು ಹಲಗೆಗಳು, ಬಿಸಿನೀರು ತಣ್ಣೀರನ್ನು ಒದಗಿಸುವ ಕೊಳಾಯಿಗಳು – ಪರಿಕರಗಳನ್ನು ಶುಚಿ

ಗೊಳಿಸಲು ಬಚ್ಚಲು. ಅಡಿಗೆ ಮನೆ ಮುಚ್ಚುವ ಬಾಗಿಲಿಗೇ ತರಕಾರಿ ಹೆಚ್ಚಲು ಒಂದು ಮರದ ಹಲಗೆ ಜೇರೆ ಇತ್ತು. ಎಲ್ಲವೂ ಒಂದೇ ಮೂಲೆಯಲ್ಲಿ ಇರುವುದನ್ನು ಕಂಡು ನಾನು ಬಹಳ ಸಂತೋಷಪಟ್ಟೆ. ಕೋಣೆಯಲ್ಲಿಯೇ ಒಂದು ಫೋನ್. ಛಳಿಗೆ ಉಪಯೋಗಿಸುವ ಹೆಚ್ಚಾದ ಉಡುಪುಗಳನ್ನು, ಮೇಲ್ಪಾಸುಗಳನ್ನು ತೂಗ ಹಾಕಲು, ಬೇಡದ ಸಾಮಾನುಗಳನ್ನು ಇಡುವ ಒಂದು ಪ್ರತ್ಯೇಕ ಸ್ಥಳ. ಈ ಕೋಣೆಯ ಬಾಗಿಲು ಹಾಕಿದರೆ ಯಾವುದಕ್ಕೂ ಹೊರಗೆ ಹೋಗಬೇಕಂತಿಲ್ಲ. ನಮ್ಮದೇ ರಾಜ್ಯ! ಭಾರತ ದಲ್ಲಿ ಮನೆಗಳು ವಿಶಾಲವಾಗಿದ್ದರೂ ಈ ಎಲ್ಲ ಸೌಕರ್ಯಗಳೂ ಇರುವುದು ದುರ್ಲಭ. ಅಡಿಗೆಯಾದ ಮೇಲೆ ಅದರ ಬಾಗಿಲು ಮುಚ್ಚಿದರೆ ವಾಸಕ್ಕೆ ಕೋಣೆ ದೊಡ್ಡದಾಗಿ ಅನುಕೂಲವಾಗುತ್ತದೆ.

ನಮ್ಮ ಅತಿಥೇಯರು ಅಡಿಗೆಗೆ ಬೇಕಾದ ಎಲ್ಲಾ ಸರಂಜಾಮುಗಳನ್ನೂ, ಹಣ್ಣು ಹಂಪಲುಗಳನ್ನೂ ಶೇಖರಿಸಿದ್ದರು. ಹೋದೊಡನೆಯೇ, ಅವರೇ ಕಾಫಿ ಮಾಡಿ ಕೊಟ್ಟರು. 'ಇನ್ನು ನೀವು ವಿಶ್ರಮಿಸಿ' ಎಂದು ಜೊರ ಹೊರಟರು. ರಾತ್ರಿ ಅಡಿಗೆ ನಮ್ಮ ಜವಾಬ್ದಾರಿ. ಭಾರತೀಯ ಅಡಿಗೆಗೆ ಬೇಕಾದ ಸಾಮಾನು ಅವರಿಗೆ ತಿಳಿಯ ದಿದ್ದುದರಿಂದ ಅಲ್ಲಿರಲಿಲ್ಲ. ನಾವು ಲಿಫ್ಟ್‌ನಲ್ಲಿ ಕೆಳಗೆ ಹೋಗಿ 'ಸಕಲ ವಸ್ತು ಭಂಡಾರದಿಂದ (Departmental Stores) ನಮಗೆ ಬೇಕಾದ ಎಲ್ಲ ಪದಾರ್ಥ ಗಳನ್ನು ತಂದು ಅಡಿಗೆ ಮಾಡಿ ಊಟ ಮಾಡಿದೆವು. ಲಂಡನ್, ನ್ಯೂಯಾರ್ಕ್ ಸಮಯದ ಅಂತರದಿಂದ ನಮ್ಮ ದಿನಚರಿ ತಲೆಕೆಳಗಾಯಿತು. ಸಂಜೆ ಊಟ ಮಾಡಿ ಮಲಗಿದರೆ, ಬೆಳಿಗ್ಗೆ ನಾಲ್ಕು ಗಂಟೆಗೆ ಹಸಿವಾಗಿ ಎಚ್ಚರವಾಯಿತು. ಎದ್ದು ಕಾಫಿ ತಿಂಡಿ ಮಾಡಿ ತಿಂದೆವು. ಮತ್ತೆ ಮಲಗಿದೆವು! ಈ ಸಮಯದ ಅಂತರ ನಮ್ಮ ದಿನ ಚರಿಯನ್ನು ಸರಿಪಡಿಸಬೇಕಾದರೆ ಇನ್ನು ಎರಡು ದಿನಗಳಾದರೂ ಹೋಗಬೇಕು ಎನಿಸುತ್ತದೆ. ಇದೂ ಒಂದು ವಿಚಿತ್ರ ಅನುಭವ!

ಅಂತೂ ನಾವೂ ಅಮೇರಿಕೆಗೆ ಬಂದೆವು. ಅಮೆರಿಕನ್ನರು ಬೆನ್ನು ತಿರುಗಿಸಿ ಹೊರಟರೆಂದರೆ ಮನುಷ್ಯರನ್ನು ಮರೆಯುವರು ಎಂಬ ಮಾತು ಸುಳ್ಳು. ನಮ್ಮನ್ನು ಈಗ ಕರೆಯಿಸಿಕೊಂಡ ಇಂಡೋ–ಅಮೇರಿಕನ್ ಡ್ಯಾನ್ಸ್ ಕಂಪೆನಿಯವರು ಕಳೆದ ಹತ್ತು ವರ್ಷದ ಸ್ನೇಹಿತರು. ಇವರು ಭಾರತಕ್ಕೆ ಬಂದಾಗ ನಮ್ಮನ್ನು U.S.A. ನಲ್ಲಿ ಕಾಣುವ ಆಸೆ ಪಟ್ಟಿದ್ದವರು. ಅಲ್ಲದೆ, ನಮ್ಮ ಇತರ ಕಾರ್ಯಕ್ರಮಗಳೂ ಕೂಡ ಹಿಂದೆ ನಮಗೆ ಮಾತು ಕೊಟ್ಟಿದ್ದ ನಮ್ಮ ಅಮೇರಿಕನ್ ಸ್ನೇಹಿತರಿಂದಲೇ ಏರ್ಪಾ ಡಾಗಿದೆ.

ನ್ಯೂಯಾರ್ಕ್‌ಗೆ ಬರುವೆನೆಂದು ಎಂದೆಂದೂ ಎಣಿಸಿರಲಿಲ್ಲ. ಆದರೆ ಚಿಕ್ಕಂದಿನಲ್ಲಿ

ನಾನು 'ನನ್ನ ಯಜಮಾನ' ರೊಂದಿಗೆ ಭೂಲೋಕವೆಲ್ಲ ಸುತ್ತಾಡುವೆ ಎಂಬರ್ಥ ಬರುವ ಅಸ್ಪಷ್ಟ ಕನಸು........ನನಸಾಗಿದೆ.

—ಮತ್ತೆ ಬರೆಯುವೆ—

ಇತಿ ನಿಮ್ಮ
ಅಮ್ಮ.

* * * * * *

ನ್ಯೂಯಾರ್ಕ್
23 – 12 – 1967

ಆತ್ಮೀಯರೇ,

ಇಂಗ್ಲೆಂಡಿನಿಂದ ಇಲ್ಲಿಗೆ ಬಂದಾಗ ಆದ ಪ್ರಯಾಣದ ದಣಿವು ಆರಿದ ಮೇಲೆ ಇಲ್ಲಿನ ಕಾರ್ಯರಂಗಕ್ಕೆ ಇಳಿದೆವು. ಇಂಡೋ–ಅಮೇರಿಕನ್ ಡ್ಯಾನ್ಸ್ ಕಂಪೆನಿಯ ನೃತ್ಯಾಭ್ಯಾಸಗಳು ನಡೆಯುವ ಸ್ಟುಡಿಯೋಗೆ ಹೋದೆವು. ಅಲ್ಲಿ ಆಧುನಿಕ ಬ್ಯಾಲೆಯ ಪಾಠಗಳು ನಡೆಯುತ್ತಿದ್ದವು. ಅದನ್ನು ನೋಡಿ ನಮಗೆ ತುಂಬಾ ಸಂತೋಷ ವಾಯಿತು. ಈ ನೃತ್ಯ ಪಾಠಗಳು ಮಾನವನ ದೇಹವನ್ನು ಮೇಣದ ಗೊಂಬೆಯಂತೆ ಪುಡಿ ಪುಡಿ ಮಾಡುವ ಅಭ್ಯಾಸಗಳು; ಇದಕ್ಕೆ ವಯಸ್ಸಿನ ಯಾವ ತಡೆಯೂ ಇಲ್ಲ. ವಯಸ್ಸಾದವರೂ ಯೌವನಸ್ಥರ ಜೊತೆಗೇ ಈ ಕಷ್ಟವಾದ ಕಸರತ್ತನ್ನು ಮಾಡಿ, ಬೆವೆತು, ತೃಪ್ತಿ ಪಡುತ್ತಾರೆ.

ನಮ್ಮ ಈ ತಂಡದಲ್ಲಿ ಎಂಟು ಹುಡುಗಿಯರೂ, ಐದು ಹುಡುಗರೂ ಇದ್ದಾರೆ. ಎಲ್ಲರೂ ಯುವಕ–ಯುವತಿಯರು. ನೋಡಲೂ ಚನ್ನಾಗಿದ್ದಾರೆ. ಶರೀರ ಲಾಲಿತ್ಯ, ಉಚಿತ ತರಬೇತಿ ಪಡೆದ ವೃತ್ತಿ ನೃತ್ಯ ಕಲಾವಿದರು; ಆದುದರಿಂದ ಅವರ ನೃತ್ಯ ಕಲೆಯ ಮಟ್ಟ ಬಹಳ ಚೆನ್ನಾಗಿದೆ. ಗಂಡಸರೂ ಇಲ್ಲಿ ನೃತ್ಯ ಕಲೆಯನ್ನು ಬಹಳ ಶ್ರದ್ಧೆಯಿಂದ ಕಲಿಯುವುದನ್ನು ಕಂಡು ಬಹಳ ಸಂತೋಷವಾಯಿತು. ಇಲ್ಲಿ ನೃತ್ಯ ಕಲೆಗೆ ಒಂದು ಗೌರವ ಸ್ಥಾನವಿದೆ. ವಿಪುಲ ಧನಸಂಪಾದನೆಗೂ ಅವಕಾಶವಿದೆ. ಸಮಾಜದಲ್ಲಿ ಪ್ರತಿಷ್ಠಿತ ವ್ಯಕ್ತಿಗಳಾಗಿ ತಲೆ ಎತ್ತಿ ಮೆರೆಯಲು ಸಾಧ್ಯವಿದೆ. ಭಾರತ ದಲ್ಲಿ ಗಂಡಸರು ನೃತ್ಯಕಲೆಯನ್ನು ಕಸುಬಾಗಿ ತೆಗೆದುಕೊಂಡರೆ ಉಪವಾಸವೇ ಗತಿ. ಲಂಡನ್ನಿನ ನಮ್ಮ ನೃತ್ಯ ಶಾಲೆಯ ಹುಡುಗರು ಪ್ರತಿಭಾವಂತರಾಗಿರಲಿಲ್ಲ. ಆದರೆ ಇಲ್ಲಿನ ಹುಡುಗರು, ಲಕ್ಷಣವಾಗಿಯೂ ಇದ್ದು ಪ್ರತಿಭಾವಂತರಾಗಿಯೂ ಇದ್ದಾರೆ. ಆದುದರಿಂದ ನಮಗೆ ನೃತ್ಯ–ನಾಟಕ ರಚನೆಗೆ ಹೆಚ್ಚಿನ ಆನಂದ!

ನಮ್ಮನ್ನು ಇಲ್ಲಿಗೆ ಆಹ್ವಾನಿಸಿದ ಈ ಕಂಪೆನಿಯ ನಿರ್ದೇಶಕರಾದ ಶ್ರೀ ಮತ್ತೇವೋ ಅವರು (Mr. Matteo) ಶ್ರಮವಹಿಸಿ, ನಮ್ಮ ಭಾರತೀಯ ನೃತ್ಯಕಲೆಯ ಸ್ಫೂರ್ತಿ ಕೊಟ್ಟು ಹೇಳಿಕೊಡುತ್ತಿದ್ದಾರೆ. ಅಂತಹ ಗುರುಗಳನ್ನು ಪಡೆದ ಈ ವಿದ್ಯಾರ್ಥಿ ಸಮುದಾಯ ನಿಜವಾಗಿ ಪುಣ್ಯ ಮಾಡಿರಬೇಕು. ಹೆಣ್ಣು ಮಕ್ಕಳು ನೃತ್ಯಾಭ್ಯಾಸ ಮಾಡುವಾಗ ಸೀರೆ–ಕುಪ್ಪಸ ತೊಟ್ಟೇ ಅಭ್ಯಾಸ ಮಾಡುತ್ತಾರೆ. ಹುಡುಗರು ಪಂಚೆ ಧಾರಿಗಳಾಗಿರುತ್ತಾರೆ. ಪಾದರಕ್ಷೆಗಳನ್ನು ನೃತ್ಯ ಕೋಣೆಯ ಹೊರಗಡೆಯೇ ಬಿಟ್ಟು ಅವರು ಕಲೆಗೆ ಕೊಡುತ್ತಿರುವ ಮರ್ಯಾದೆಯನ್ನು ಕಂಡು ನಮಗೆ ಮನಸ್ಸು ತುಂಬಿ ಬಂದಿತು. ಆದರೆ ಈಗೀಗ ಭಾರತದಲ್ಲಿ ನಾವು ನಮ್ಮದೇ ಆದ ಈ ಕಲೆಗೆ ಅಗೌರವ ಸೂಚಿಸುತ್ತಿರುವುದು ನಾಚಿಕೆಯ ಸಂಗತಿ........"ಭಾರತದಿಂದ ನೃತ್ಯ ಗುರುಗಳು ಬಂದಿದ್ದಾರೆ. ಅವರಿಂದ ಪಾಠ ಹೇಳಿಸಿಕೊಳ್ಳಲು ನಾವು ಅಷ್ಟೇನೂ ಯೋಗ್ಯರಲ್ಲ. ಆದರೂ ಅವರು ಒಪ್ಪಿಕೊಂಡು ಬಂದಿದ್ದಾರೆ. ಅವರಿಗೆ ನಿರಾಶೆ ಮಾಡಬೇಡಿ. ನಮಗೆ ಭಾರತಕ್ಕೆ ಹೋಗಲು ಸಾಧ್ಯವಿಲ್ಲ. ಆದುದರಿಂದ ಭಾರತವನ್ನೇ ಇಲ್ಲಿಗೆ ಕರೆಯಿಸಿ ಕೊಂಡಿದ್ದೇವೆ" ಎಂದು ನೃತ್ಯ ನಿರ್ದೇಶಕರಾದ ಶ್ರೀ ಮತ್ತೇವೋ .... ಅವರು ವಿದ್ಯಾರ್ಥಿಗಳಿಗೆ ನಮ್ಮ ಪರಿಚಯ ಮಾಡಿಕೊಟ್ಟರು.

ಆಮೇಲೆ ಅವರೆಲ್ಲರೂ ಬಹಳ ಖಚಿತವಾಗಿ ಭರತ ನಾಟ್ಯದ ಅಡವುಗಳನ್ನು ಮಾಡಿ ಪ್ರದರ್ಶಿಸಿದರು. ಅದನ್ನು ನೋಡಿ ನಾವು ನಂಬಲಾಗಲಿಲ್ಲ! ಏಕೆಂದರೆ ಭಾರತ ವಲ್ಲಿ ಕೂಡ ಕೆಲವೊಮ್ಮೆ ನಮ್ಮ ನೃತ್ಯ ಕಲಾವಿದರು ಅಷ್ಟು ಖಚಿತವಾಗಿ ನೃತ್ಯ ಕಲೆ ಯನ್ನು ಪ್ರದರ್ಶಿಸುವುದಿಲ್ಲ. ಹೊರದೇಶದ ಈ ವಿದ್ಯಾರ್ಥಿಗಳಿಗೆ ನಮ್ಮ ಸಾಂಪ್ರ ದಾಯಿಕ ಭಾರತೀಯ ಕಲೆಯ ಕಠಿಣ ಶಿಸ್ತನ್ನು ಮರೆಯಲು, ಕಲೆಯಲ್ಲಿ ಆಸಕ್ತಿ ಹೆಚ್ಚಾಗಲು, ಕಲಾವಿದರನ್ನಾಗಿಸಲು ಅವರ ಗುರುಗಳು ಹೊಸ ಹೊಸ ಉಪಾಯ ಗಳನ್ನು ಸೃಜಿಸಿ, ವ್ಯವಹಾರಕ್ಕೆ ತಂದು ಯಶಸ್ವೀಯಾಗಿದ್ದಾರೆ. ಬ್ಯಾಲೆಯ ಅಭ್ಯಾಸ ಮಾಡುವ 'ಬಾರ್ರ್' (Barre – ಗೋಡೆಗೆ ಜೋಡಿಸಲ್ಪಟ್ಟ ಒಂದು ಮರದ ಕಂಬಿ ಯಂತಿರುವ ಸಲಕರಣೆ) ಸಹಾಯದಿಂದ ಭರತ ನಾಟ್ಯದ ಸ್ಥಿಮಿತ ಬರುವಂತೆ ಮಾಡು ವರು. ಎಡಗೈಯಿಂದ ಇದನ್ನು ಹಿಡಿದು ಬಲಗೈಯಿಂದ ಒಂದು ಅಡವು ಅಭ್ಯಾಸ ಮಾಡುವುದು. ಹಾಗೆಯೇ ತಿರುಗಿ ಎಡಗಡೆಗೆ ಅಭ್ಯಾಸ ಮಾಡುವರು. ಚೆನ್ನಾಗಿ ಅಭ್ಯಾಸವಾದ ಮೇಲೆ ಅದರಿಂದ ಹೊರಬಂದು ಎರಡು ಪಕ್ಕಕ್ಕೂ ಅಡವುಗಳನ್ನು ಮಾಡಿದ್ದು ನೋಡಿ, ಅವರ ಅಂಗಶುದ್ಧತೆ, ಭರತನಾಟ್ಯ ಸಂಪ್ರದಾಯ ಬದ್ಧತೆ, ಖಚಿತ ಕಾಲು ಹೆಜ್ಜೆ ಕಂಡು ಆಶ್ಚರ್ಯಚಕಿತರಾದೆವು.

ನಮ್ಮ "ಬುದ್ಧೋದಯ" ನೃತ್ಯ ನಾಟಕವನ್ನು ಈ ತಂಡಕ್ಕೆ ಹೇಳಿಕೊಡುವುದು ನಮಗೆ ಆನಂದದ ಕೆಲಸ, ಏಕೆಂದರೆ ಭಾರತೀಯರಲ್ಲದ ಈ ಜನ ನಮ್ಮ ಕಲೆಗಾಗಿ ಕಷ್ಟಪಡುವಾಗ, ಶಾಸ್ತ್ರಾಂಧರಾಗಿ, ಹಠೋತ್ಸಾಹಿಗಳಾಗಿಯೂ ಭಾರತೀಯರನ್ನು

ಮಾರಿ ಪ್ರದರ್ಶಿಸುತ್ತಾರೆ ಎಂದೆನಿಸುತ್ತದೆ. 'ಬಾರ್' (Barre) ಅಭ್ಯಾಸವೇನೋ ಉಚಿತ. ಆದರೆ ಅದರ ಅಗತ್ಯವಿಲ್ಲ. ಹೊರದೇಶದ ವಿದ್ಯಾರ್ಥಿಗಳಿಗೆ ಅದರಿಂದ ಮಾನಸಿಕ ತೃಪ್ತಿ ಅಷ್ಟೆ. ಒಮ್ಮೆ ಲಂಡನ್ನಿನ ಬ್ಯಾಲೆ ನೃತ್ಯ ಕಲಾವಿದೆಯಾಗಿದ್ದ ನಮ್ಮ ಶಿಷ್ಯೆ ಎಂದ ಮಾತು ನೆನಪಿಗೆ ಬರುತ್ತಿದೆ. 'ಬ್ಯಾಲೆ ನೃತ್ಯಗಾತಿ ನೃತ್ಯವಲಯವನ್ನು ದಾಟಿ ಚಲಿಸಬೇಕು, ನೃತ್ಯ ಮಾಡುವಾಗ ತನ್ನ ಸಮರ್ಥತೆಯ ಅಂಕೆಯಿಂದ ಹಾರಿ ನಟಿಸಬೇಕು. ಈ ಪ್ರಯತ್ನದಲ್ಲಿ ಮಾನಸಿಕ ಸಮತೋಲನ ಅಸಾಧ್ಯ. ಆದರೆ ಭರತ ನಾಟ್ಯದ ಮೂಲಭಂಗಿಯು ಮಾನವ ದೇಹಕ್ಕೆ ಸಹಜವಾದದ್ದು. ಇಡೀ ದೇಹವೇ ಮಧ್ಯದಲ್ಲಿ ಕೇಂದ್ರೀಕೃತವಾಗಿ ಏಕಾಗ್ರತೆಗೆ ಅನುಕೂಲವಾಗುತ್ತದೆ. ಗುರುತ್ವದ ಕೇಂದ್ರವೃತ್ತ ತಾನೇ ತಾನಾಗಿ ಉಂಟಾಗುತ್ತದೆ. ಹೊರಗಿನ ಯಾವ ಸಲಕರಣೆಯ ಅವಶ್ಯಕತೆಯೂ ಇಲ್ಲ........" ಅಂತೂ ಈ ವಿದ್ಯಾರ್ಥಿಗಳು, ಯಾವ ವಿಧದ ತರಬೇತಿಯಿಂದಲಾಗಲೀ, ನೃತ್ಯವನ್ನು ಯಾವ ತಪ್ಪಿಲ್ಲದೆಯೂ ಮಾಡುತ್ತಾರೆ. ಆದೇ ತರಬೇತನ್ನು ಮನಸ್ಸಿಗೆ, ಬುದ್ಧಿಗೆ, ಆತ್ಮಕ್ಕೆ ಕೊಟ್ಟಲ್ಲಿ ಮಾತ್ರ ಭಾರತೀಯ ಶಾಸ್ತ್ರೀಯ ನೃತ್ಯವಾಗುತ್ತದೆ ಎಂಬುವನ್ನು ಅರಿತರೆ ಒಳ್ಳೇಯದಿತ್ತು. ಇದೇ ನಮ್ಮ ಕಲೆಗೂ, ಇತರರ ಕಲೆಗೂ ಇರುವ ವ್ಯತ್ಯಾಸ. ತೊರೆಯ ಅಂತರವಲ್ಲ........ಕಡಲಿನ ಅಂತರ........ ಅಖಂಡ ವ್ಯತ್ಯಾಸ.

ನಮ್ಮನ್ನು ಇಲ್ಲಿನ 'ಅಮೇರಿಕಾ ಪತ್ರಿಕಾ ಪ್ರಪಂಚ'ಕ್ಕೆ ಪರಿಚಯ ಮಾಡಿಕೊಡಲು 'ಏಷಿಯಾ ಹೌಸ್' (Asia House-Asia Society) ನಲ್ಲಿ ನಮ್ಮ ಉಪನ್ಯಾಸ–ನೃತ್ಯಗಳನ್ನು ಏರ್ಪಡಿಸಿದರು. ಭಾರತೀಯ ನೃತ್ಯವನ್ನು ಹೇಳಿಕೊಡಲು ಭಾರತದಿಂದಲೇ ಗುರುಗಳನ್ನು ಕರೆತರುತ್ತಿರುವುದು ಇದೇ ಮೊದಲ ಪ್ರಯತ್ನ ಎಂದು ಸಾರಿದರು. ಮೂರು ಪ್ರಮುಖ ಪತ್ರಿಕೆಗಳ ಪ್ರತಿನಿಧಿಗಳು ಬಂದಿದ್ದರು. ಇಂಗ್ಲೆಂಡಿನಲ್ಲಿದ್ದಂತೆ ಇಲ್ಲಿ ವಿಮರ್ಶಕರೂ ಪತ್ರಿಕೆಗಳೂ ಇಲ್ಲವಂತೆ. ಟಿ. ವಿ. ಯು ನಿಮಿಷ ನಿಮಿಷದ ಸಮಾಚಾರವನ್ನು ಬಿತ್ತರಿಸುವ ಕಾರಣ ಪತ್ರಿಕೆಗಳ ಅಗತ್ಯವಿರುವುದಿಲ್ಲ. ಪ್ರತಿಯೊಬ್ಬ ವ್ಯಕ್ತಿಯ ಮನೆಯಲ್ಲಿ ಟಿ. ವಿ. ಫೋನ್ ಮತ್ತು ಕಾರುಗಳು ಇದ್ದೇ ಇರುತ್ತವೆ.

ಟಿ. ವಿ. ಸಂಸ್ಥೆಯವರು ಕೂಡ ಇಂಡೋ–ಅಮೇರಿಕನ್ ಡ್ಯಾನ್ಸ್ ಕಂಪೆನಿಯ ನಿರ್ದೇಶಕರನ್ನು ಮತ್ತು ಪತಿಯವರನ್ನು ಟಿ. ವಿ.ಯಲ್ಲಿ ಸಂದರ್ಶಿಸಿದರು. "ಭಾರತೀಯ ಲಲಿತ ಕಲೆಗಳ ಪ್ರದರ್ಶನದಲ್ಲಿ ಭಾರತೀಯ ಕಲಾವಿದರು 'ಭಾಂಗ್' ಮೊದಲಾದ ಅಮಲಿನ ಪದಾರ್ಥಗಳನ್ನು ಸೇವಿಸುವ ಅಭ್ಯಾಸವಿದೆಯೇ ?" ಎಂದು ಪತಿಯವರನ್ನು ಪ್ರಶ್ನಿಸಿದರು !........ಎಂತಹ ಪ್ರಶ್ನೆ ! ಎಂತಹ ಅಪಾಯಕಾರಿ ಅಜ್ಞಾನ ! !........ 'ಭಾರತದ ಯುವಜನಾಂಗ ತೀಕ್ಷ್ಣ ಔಷಧಿಗಳನ್ನು (Drugs) ತೆಗೆದುಕೊಳ್ಳುವ ರೂಢಿ ಇದೆಯೇ' ಎಂದೂ ಕೇಳಿದರು. ಭಾರತೀಯ ಯುವಕರಲ್ಲಿನ ಒಂದು ದೊಡ್ಡ ಭಾಗ ಒಂದು ಲೋಟ ಹೆಚ್ಚಾಗಿ ಕಾಫಿ ಕೂಡ ಕೊಂಡುಕೊಳ್ಳುವುದಿಲ್ಲ ! ಎಂದ ಮೇಲೆ

ಅವರಿಗೆ ಅಂತಹ ದುರಭ್ಯಾಸಗಳಿಗೆ ಅವಕಾಶ ಎಲ್ಲಿ? ಸಂಗೀತ ಕಲೆ ನಮಗೆ ಒಂದು ಆರಾಧನೆ. ಅದನ್ನು ದೇವರ ಸಾನಿಧ್ಯದಲ್ಲಿ ಪ್ರದರ್ಶಿಸುವಾಗ ಎಷ್ಟು ಭಯ, ಭಕ್ತಿ, ದೇಹಶುದ್ಧತೆಯಿಂದ ಸಂಗೀತಗಾರರು ಹಾಡುತ್ತಾರೆ ಎಂಬ ವಿಷಯ ಅವರಿಗೆ ಹೇಗೆ ತಿಳಿಯಬೇಕು? ಕೆಲವು ಭಾರತೀಯ ವಿಷಯಗಳನ್ನು ಭಾರತಕ್ಕೆ ಬಂದರೆ ಮಾತ್ರ ಅವರು ತಿಳಿಯಬಲ್ಲರೆ ವಿನಹ ಬೇರೆ ದಾರಿಯಿಲ್ಲ.

ಮತ್ತೊಮ್ಮೆ ಇಲ್ಲಿನ ಆಕಾಶವಾಣಿಯಲ್ಲಿ ನಮ್ಮನ್ನು ಕುರಿತು ಪ್ರಸಾರ ಒಂದಾಯಿತು. ನ್ಯೂಯಾರ್ಕ್ ಆಕಾಶವಾಣಿ ಕೇಂದ್ರ ನಿಲಯ ನಮಗಿಬ್ಬರಿಗೂ ಮತ್ತು ಇಂಡೋ-ಅಮೇರಿಕನ್ ಡ್ಯಾನ್ಸ್ ಕಂಪೆನಿಯ ನಿರ್ದೇಶಕ ಶ್ರೀ ಮತ್ತೇವ್ರೋ ಅವರಿಗೂ ಆಹ್ವಾನ ಕಳುಹಿಸಿ, ಸುಮಾರು ಎಪ್ಪತ್ತು ನಿಮಿಷಗಳವರೆಗೆ ಪ್ರಶ್ನೆ-ಉತ್ತರ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ನಮ್ಮನ್ನು ಸಂದರ್ಶಿಸಿದ ವ್ಯಕ್ತಿ ಒಬ್ಬ ನೀಗ್ರೋ ಮನುಷ್ಯ. ಆದರೂ ಬಹಳ ವಿಚಾರಯುಕ್ತ ಪ್ರಶ್ನೆಗಳನ್ನು ಕೇಳಿದರು. ಈ ಕಾರ್ಯಕ್ರಮಕ್ಕೆ ಮುಂಚೆ ಆ ವ್ಯಕ್ತಿ ಖಂಡಿತವಾಗಿ ಭಾರತೀಯ ನೃತ್ಯಕಲೆಯ ವಿಷಯವಾಗಿ ಬಹಳ ಓದಿರಬೇಕು. ಏಕೆಂದರೆ ಭಾರತೀಯ ನೃತ್ಯ ಕಲೆಯ ಅಭಿವೃದ್ಧಿ, ಪೂಜ್ಯ ಮೀನಾಕ್ಷಿ ಸುಂದರಂ ಪಿಳ್ಳೆಯವರ ಕಾಲ, ಅಂದಿನ ಕಲೆ, ಈಗ ಕಲೆಗಿರುವ ಪ್ರೋತ್ಸಾಹ ಮೆಚ್ಚುಗೆ, ಪೂರ್ವ-ಪಶ್ಚಿಮಗಳ ಅಂತರ ಕಡಿಮೆಯಾಗುತ್ತಿರುವ ಕಾರಣ ಕಲಾ ಸಂಗಮ, ಆಧುನಿಕ ಜಗತ್ತಿನಲ್ಲಿ ಬದಲಾವಣೆಯಾಗುತ್ತಿರುವ ನೃತ್ಯಕಲೆ, ಮುಂತಾದ ವಿಷಯಗಳನ್ನು ಬಹಳ ಚೆನ್ನಾಗಿ ವಿಚಾರಿಸಿದರು, ನಮಗೆ ಮಾತನಾಡಲು ತುಂಬಾ ಸಹಾಯ ಮಾಡಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಮಾಡಿದರು.

........ಈಗ ಕ್ರಿಸ್‌ಮಸ್ ರಜಾ ಬರುವುದರಿಂದ ಕೆಲವು ವಿದ್ಯಾರ್ಥಿಗಳು ನ್ಯೂಯಾರ್ಕ್ ಬಿಡುವರು. ಉಳಿದ ಕೆಲವರಿಗೆ ಸದ್ಯದಲ್ಲಿಯೇ ಪಾಠ ಆರಂಭಿಸಲಿದ್ದೇವೆ. ಲಂಡನ್ನಿನ ಕ್ರಿಸ್‌ಮಸ್ ವೈಭವವನ್ನು ನೋಡಿಯಾಯಿತು. ಅಮೇರಿಕದ ವೈಭವವೇನಿದೆಯೋ?

ಇತಿ ನಿಮ್ಮ

ಚಂದಮ್ಮ.

* * * * * *

ನ್ಯೂಯಾರ್ಕ್

31 – 12 – 1967

ಮುದ್ದು ಶಿವದೇವ್,

ನೀನು ಉತ್ತರ ಭಾರತದ ಪ್ರವಾಸ ಕೈಗೊಂಡು ಹಿಂತಿರುಗಿದ ಸುದ್ದಿ ಕೇಳಿ ಸಂತೋಷವಾಯಿತು. ಭಾರತದರ್ಶನ ಹೇಗಿತ್ತು ಬರಿ. ಭಾರತದಲ್ಲಿನ ವೈವಿಧ್ಯ–

ಐಕ್ಯತೆ ಇನ್ಯಾವ ದೇಶದಲ್ಲೂ ಇಲ್ಲ. ಮೊನ್ನೆ ಮಕ್ಕಳನ್ನು ಭಾರತದಲ್ಲೇ ಬಿಟ್ಟು ಇಲ್ಲಿಗೆ ಬಂದ ಭಾರತೀಯ ಸ್ನೇಹಿತೆ ತನ್ನ ಮಗಳು ಬರೆದ ಕಾಗದವನ್ನು ನನಗೆ ತೋರಿಸಿದರು. ಅದರಲ್ಲಿ "ಅಮ್ಮಾ, ನಾವು ಈಗ ತಾನೇ ಕನ್ಯಾಕುಮಾರಿ, ರಾಮೇಶ್ವರ ಯಾತ್ರೆ ಮುಗಿಸಿ ಬಂದಿದ್ದೇವೆ. ನೀನು ಪಾಶ್ಚಾತ್ಯದಲ್ಲಿ ಸುಖವಾಗಿ ಕಾಲ ಕಳೆಯುತ್ತಿರಬೇಕು. ಅಲ್ಲಿನ ಸೃಷ್ಟಿ ಸೌಂದರ್ಯ ಎಷ್ಟು ಅದ್ಭುತವಾಗಿದೆಯೋ! ತಿಳಿಸು!" ಎಂದಿತ್ತು. ಆ ತಾಯಿ ನಗುತ್ತ– "ಇಲ್ಲಿನ ಸೃಷ್ಟಿ ಸೌಂದರ್ಯ ಏನೆಂತ ಬರೆಯಲಿ? ಕಿಟಕಿಯಾಚೆ ನೋಡಿದರೆ ಏನು ಅದ್ಭುತ! ಎಲ್ಲೆಲ್ಲೂ ಮರಕಡ್ಡಿಗಳು – ಕಡ್ಡಿ ಪೊರಕೆಗಳು ಇರುವ ಹಾಗಿವೆ! ಕನ್ಯಾಕುಮಾರಿ, ರಾಮೇಶ್ವರದ ಸೌಂದರ್ಯ ಮೀರುವಂತಹುದೇ?" ಎಂದರು!

ನೀನು ಎಣಿಸಿದಂತೆಯೇ ನಾವು ಇಲ್ಲಿ ವೈನವಿರೇಳಿಸುವಂತೆ ಕಾಲ ಕಳೆಯುತ್ತಿದ್ದೇವೆ. ಸ್ವಾತಂತ್ರ್ಯಮೂರ್ತಿಯ (Statue of Liberty) ಆರೋಹಣವೂ ಆಯಿತು. ಕಾರ್ನಿಗೀ ಹಾಲ್‌ನಲ್ಲಿ (Carnegie Hall) ಅಲೆಕ್ಸಾಂಡರ್ ಶ್ನೈಡರ್ (Alexander Schneider) ರ ಗಾನ ಸಂಕುಲದ 'ಚೇಂಬರ್ ಸಂಗೀತ' (Chamber Music) ಕೇಳಿದೆವು. ಈ ಕಾರ್ನಿಗೀ ಹಾಲ್ ಒಂದು ಚಾರಿತ್ರಿಕ ಸ್ಥಳ. ಜಗದ್ವಿಖ್ಯಾತ ಕಲಾವಿದರೆಲ್ಲರೂ ತಮ್ಮ ವಿದ್ವತ್ತನ್ನು ಪ್ರದರ್ಶಿಸಿದ ಪುಣ್ಯಕ್ಷೇತ್ರ; ನಮ್ಮ ಶ್ರೀರಾಮಗೋಪಾಲರೂ ಈ ರಂಗಮಂದಿರದಲ್ಲಿ ಹಿಂದೆ ಪ್ರದರ್ಶನಗಳನ್ನು ಕೊಟ್ಟಿದ್ದಾರೆ. ಆ ಕಾಲದಲ್ಲಿ ಅಮೂಲ್ಯ ಅವಕಾಶಗಳು ಅವರು ಪಡೆದಷ್ಟು ನಮಗೆ ಎಣಿಸಲು ಕೂಡ ಸಾಧ್ಯವಿಲ್ಲ. ಆದರೆ ಆಗಿನ ಕಾಲದಲ್ಲಿ ಭಾರತೀಯ ನೃತ್ಯಗಳೆಂದರೆ ಕೈಗೆ ನಿಲುಕದ ವಸ್ತುವಾಗಿತ್ತು. ಎಲ್ಲಿ ಪ್ರದರ್ಶಿಸಿದರೂ ಅದು ಒಂದು ಚಾರಿತ್ರಿಕ ಘಟನೆಯೇ ಆಗುತ್ತಿತ್ತು. ಕಲೆಯ ಸುವರ್ಣ ಸಮಯವಾಗಿತ್ತು. ಈಗ ಹಾಗಲ್ಲ. ಜಗತ್ತು ಚಿಕ್ಕದಾಗಿದೆ. ಕಲಾವಿದರು ಒಂದು ದೇಶದಿಂದ ಮತ್ತೊಂದಕ್ಕೆ ಅನಾಯಾಸವಾಗಿ ಸುತ್ತಾಡಿ ಬರಬಹುದು. ಈಗಿನ ಕಾರ್ಯಕ್ರಮದಲ್ಲಿ ಒಂದೇ ಒಂದು ಶಾಸ್ತ್ರೀಯ ನೃತ್ಯ ಸಂಪ್ರದಾಯವೂ ಸಾಲದಾಗಿದೆ. ಹಲವಾರನ್ನು ಕರಗತ ಮಾಡಿಕೊಳ್ಳಬೇಕು. ಕೊಡುವ ವಿನೋದಕ್ಕೆ ಮೆರುಗು ಎಷ್ಟಿದ್ದರೂ ಸಾಲದು. ಸಾಮಾನ್ಯ ದರ್ಜೆಯ ಕಲೆಗೆ ಪ್ರೋತ್ಸಾಹವೇ ಇಲ್ಲ. ಅಸಾಮಾನ್ಯ, ಅತಿಮೇಲಿನ ಮಟ್ಟದ ಕಲಾವಿದರಿಗೆ ಮಾತ್ರ ಹೆಸರು ಬರುವ ಕಾಲವಿದು.

ನಮ್ಮ ಹೋಟೇಲ್ ಹತ್ತಿರದ ಲಿಂಕನ್ ಥಿಯೇಟರ್‌ನ ಫಿಲ್ ಹಾರ್ಮೋನಿಕ್ ಹಾಲ್ (Philharmonic Hall) ನೋಡಿದೆವು. 2800 ಜನರು ಕೂಡುವ ಈ ರಂಗಮಂದಿರ ಶ್ರೀ ರವಿಶಂಕರ್‌ರವರು 9 ದಿನಗಳವರೆಗೆ ತುಂಬಿದ್ದು ಅವರ ಸಂಗೀತಕ್ಕೆ ಅಪಾರ ಗೌರವ. ನಮ್ಮ ದೇಶಕ್ಕೇ ಹೆಮ್ಮೆ! ಲಿಂಕನ್ ಥಿಯೇಟರಿನಲ್ಲಿ ಉಚಿತ ಪುಸ್ತಕ ಭಂಡಾರವಲ್ಲದೆ, ಸಂಗೀತ ಕೇಳಲು ಅನುಕೂಲತೆ, ಎಲ್ಲವೂ ಇದೆ. ಬೇಕಾದ

ಧ್ವನಿಮುದ್ರಿಕೆಯನ್ನು ಆರಿಸಿ, ಕಿವಿಗೆ ಶ್ರವಣ ಸಾಧನೆಯನ್ನು ಹಾಕಿಕೊಂಡು, ಇತರರಿಗೆ ತೊಂದರೆಯಾಗದಂತೆ ಕೇಳಬಹುದು. ಇಲ್ಲಿ ಉತ್ತಮ ಸೌಲಭ್ಯಗಳೆಲ್ಲವೂ ಉಚಿತ ವಾಗಿಯೇ ಇವೆ.

ಇಲ್ಲಿನ ಚಾರಿತ್ರಿಕ ವಸ್ತು ಭಂಡಾರವನ್ನು ನೋಡಿದೆವು. ಕೊರಿಯಾದ ಬ್ಯಾಲೆಯ ವೀಕ್ಷಣೆಯೂ ಆಯಿತು. ಹತ್ತು ಹದಿನೈದು ವಯೋಮಿತಿಯ ಪುಟ್ಟಮಕ್ಕಳು ಮಾಡುವ ಆ ನೃತ್ಯಗಳು ಹೃದಯಂಗಮವಾಗಿದ್ದವು. ವಿಧವಿಧವಾದ ನೃತ್ಯ ಸಂಯೋಜನೆ, ತಾಳ ವೈಚಿತ್ರ್ಯಗಳು! ಬೃಹತ್‌ಗಾತ್ರದ ಚರ್ಮವಾದ್ಯಗಳನ್ನು ಬಾರಿಸುತ್ತಾ ಕುಣಿ ಯುವ ದೃಶ್ಯ ಮರೆಯಲಾಗದು! ಇಲ್ಲಿನ ಮಾದರಿ ಗೃಹ ಮಂಡಲದ ದರ್ಶನ ವಾಯಿತು. ಅಮೇರಿಕನ್ ನಾಟಕವೊಂದನ್ನು ನೋಡಿದೆವು. ಸುಮಾರು ನೂರೈ ವತ್ತು ಜನ ಕೂಡುವ ಚಿಕ್ಕ, ಸುಂದರ ರಂಗಮಂದಿರದಲ್ಲಿ ಐದೇ ಪಾತ್ರಧಾರಿಗಳು ಅಭಿ ನಯಿಸಿದ ಆ ನಾಟಕ ತುಂಬಾ ಚೆನ್ನಾಗಿತ್ತು. ಹೊತ್ತು ಹೋದುದೇ ಗೊತ್ತಾಗಲಿಲ್ಲ. ವಿರಾಮದ ವೇಳೆಯಲ್ಲಿ ಪಕ್ಕದ ಉಪಹಾರ ಗೃಹಕ್ಕೆ ಹೋಗಿ ತಂಪು ಪೇಯವೊಂದನ್ನು ಕುಡಿದೆವು. ಮಸುಕು ಮಸುಕಾದ ದೀಪದ ಬೆಳಕು. 'ಜ್ಯುಕ್ ಬಾಕ್ಸ್' (Juke Box) ವಿಶಿಷ್ಟ ಅಮೇರಿಕಾ ದೇಶದ ವಾತಾವರಣ. ಆದರೆ ನಮಗೆ ಲಂಡನ್ನಿನ ಪೇಯಗೃಹಗಳಲ್ಲಿದ್ದ ಹರ್ಷ ಇಲ್ಲಿ ಕಂಡುಬರಲಿಲ್ಲ,

ಈಗ ಇಲ್ಲಿ ತುಂಬಾ ಛಳಿ. ತುಂಬಾ ಹಿಮ ಬಿದ್ದು ನಡೆಯುವಾಗ ಕಾಲೆಲ್ಲ ಅದರಲ್ಲಿ ಹೂತು ಹೋಗುತ್ತದೆ. —9°c ಶಾಖಮಾಪ. ಲಂಡನ್ ಛಳಿಗಿಂತ ಇಲ್ಲಿನ ಛಳಿ ಬೇರೆಯಾಗಿದೆ.

ಮುಂದಿನ ವಾರ ವೆಸ್ಟರ್ನ್ ಮಿಶಿಗನ್ ವಿಶ್ವವಿದ್ಯಾಲಯಕ್ಕೆ ಪ್ರಯಾಣ. (Western Michigan University).

ಇತಿ ನಿನ್ನ
ಅಮ್ಮ.

* * * * * *

ನ್ಯೂಯಾರ್ಕ್
7 – 1 – 1968

ಮುದ್ದು ಮಕ್ಕಳೇ,

ನಮ್ಮ ನ್ಯೂಯಾರ್ಕ್ ಪ್ರವಾಸ ಬರೇ ಎಂಟು ವಾರಗಳು ಮಾತ್ರ. ಅಷ್ಟ ರೊಳಗೆ 'ಬುದ್ಧೋದಯ' ವನ್ನು ತಯಾರಿಸಬೇಕು. ಈ ನೃತ್ಯ – ನಾಟಕ ಮೈಸೂ

ರಿನ ಪ್ರಸಿದ್ಧ ಸಾಹಿತಿ ಶ್ರೀ ಜಿ. ಪಿ. ರಾಜರತ್ನಂ ಅವರು ಕೊಟ್ಟ ಕಥಾ ಸಾರಾಂಶವೇ. ನಾಟಕದ ನಾಮಕರಣವೂ ಅವರಿಂದಲೇ. ನೃತ್ಯ-ನಾಟಕಕ್ಕೆ ಬೇಕಾಗಿದ್ದ ಸಂಗೀತ ವನ್ನು ನಾವು ಲಂಡನ್ನಿನಲ್ಲಿದ್ದಾಗಲೇ ಮುದ್ರಿಸಿಕೊಂಡಿದ್ದೆವು. 'ಚಿಕ್ಕ ನೃತ್ಯ ನಾಟಕ ಬೇಕು – ಹದಿನೈದು ನಿಮಿಷಗಳ ಒಳಗೇ ಆಗಬೇಕು' ಎಂಬ ಆಜ್ಞೆ ನಮಗೆ ಇಂಡೋ-ಅಮೇರಿಕನ್ ಡ್ಯಾನ್ಸ್ ಕಂಪೆನಿಯಿಂದ. ಇಲ್ಲಿನ ಜನರಿಗೆ ಅದಕ್ಕಿಂತ ಹೆಚ್ಚಿನ ಸಮಯ, ನೋಡಲು ತಾಳ್ಮೆ ಇರುವುದಿಲ್ಲವಂತೆ! ಹೌದು. ಪಾಶ್ಚಾತ್ಯ ನೃತ್ಯ ಕಾರ್ಯಕ್ರಮ ಗಳಲ್ಲಿ 10 ನಿಮಿಷದ ಒಂದು ನೃತ್ಯವಾದ ಮೇಲೆ 10 ನಿಮಿಷದ ವಿರಾಮವಿರುತ್ತದೆ! ಕಳೆದ ನೃತ್ಯವನ್ನು ಮೆಲುಕಾಡಲೆಂದೋ ಏನೋ! ನಮ್ಮ ಇಲ್ಲಿನ ನೃತ್ಯ ನಾಟಕ ಎಷ್ಟು ಚಿಕ್ಕದೆಂದರೂ ಮುದ್ರಿತ ಸಂಗೀತ 23 ನಿಮಿಷಗಳಾಗಿದ್ದವು. ಅದಕ್ಕೆ ಸರಿ ಯಾಗಿ ನೃತ್ಯ-ಸಂಯೋಜನೆ ಮಾಡುತ್ತಲಿದ್ದೇವೆ. ಆದಷ್ಟು ಮಟ್ಟಿಗೆ ಭರತನಾಟ್ಯದ ಸಂಪ್ರದಾಯವನ್ನು ಅಳವಡಿಸಿಕೊಂಡಿದ್ದೇವೆ; ಹುಡುಗರಿಗೆ ತಕ್ಕಹಾಗೆ ಕಥಕ್ಕಳಿ ಸಂಪ್ರದಾಯ. ಮೂರು ಹುಡುಗರಿರುವುದರಿಂದ ಬುದ್ಧ, ಮಾರನಲ್ಲದೆ, ವಸಂತನ ಪಾತ್ರ ವನ್ನೂ ರಚಿಸಿದ್ದೇವೆ. ಮಾರನು ನೃತ್ಯ ದೇವತೆಯಾಗಿ ಕುಣಿಯುವ ಪಾತ್ರವನ್ನು ಶ್ರೀ ಮತ್ತೀವೋರವರು ಅಭಿನಯಿಸಲು ಬಯಸಿದರು. ಪ್ರತಿಯೊಂದು ಪಾತ್ರಕ್ಕೂ ಇಬ್ಬಿಬ್ಬರನ್ನು ತಯಾರು ಮಾಡುವುದು ಇಲ್ಲಿನ ವೃತ್ತಿ ಕಲಾವಿದರ ರೂಢಿಯಾದ ಕಾರಣ, ಇಲ್ಲಿ ಹೆಚ್ಚಿನ ಕೆಲಸ ನಮಗೆ. ಅದರ ಅನುಕೂಲತೆಗೆ ಸರಿಯಾಗಿ ನೃತ್ಯ ಜೋಡಣೆ, ಒಬ್ಬರು-ಇಬ್ಬರು-ಮೂರು ಜನ, ನಾಲ್ಕುಜನ ನೃತ್ಯಗಾತಿಯರಿರುವಂತೆ ರಚಿಸಿದ್ದೇವೆ. ಒಬ್ಬಿಬ್ಬರ ಗೈರು ಹಾಜರಿಯಾದರೂ ನೃತ್ಯ-ನಾಟಕಕ್ಕೆ ಲೋಪ ಬರ ಬಾರದೆಂಬುದೇ ಕಾರಣ.

ಈ ಪಂಗಡ ಬಹಳ ಕಷ್ಟಪಟ್ಟು ದುಡಿಯುತ್ತಿದ್ದಾರೆ. ಇಲ್ಲಿನ ಗುಂಪಿಗೂ, ಲಂಡನ್ನಿನ ಗುಂಪಿಗೂ ಅಜಗಜಾಂತರ ವ್ಯತ್ಯಾಸ. ಇವರು ವೃತ್ತಿ ನೃತ್ಯಗಾರರಾದ್ದ ರಿಂದ ಕೆಲಸದಲ್ಲಿ ಆಸಕ್ತಿ, ತನ್ಮಯತೆ ಕಂಡು ಬರುತ್ತದೆ. ಮಳೆ, ಗಾಳಿ, ಬಿರುಗಾಳಿ, ಮಂಜು, ಮೋಡ, ಹಿಮವರ್ಷ, ಆಲಿಕಲ್ಲಿನ ಮಳೆ – ಏನಿದ್ದರೂ ನೃತ್ಯಾಭ್ಯಾಸಗಳಿಗೆ ತಪ್ಪಿಸಿಕೊಳ್ಳುವುದಿಲ್ಲ. ಎಲ್ಲರೂ ಬಂದು ಒಗ್ಗಟ್ಟಿನಿಂದ ಕೆಲಸ ಮಾಡುತ್ತಿದ್ದಾರೆ. ಮರ್ಯಾದೆಯಿಂದ ತಲೆಬಾಗಿ ನಾವು ಹೇಳಿಕೊಡುವ ಪಾಠಗಳನ್ನು ಅಭ್ಯಸಿಸುತ್ತಾರೆ.

ಕುಣಿಯಲು ಇಲ್ಲಿನ ಜನ ಅಗ್ರಗಣ್ಯರು. ಆದರೆ ಅಭಿನಯ ಸೊನ್ನೆ! ಬುದ್ಧನ ಪಾತ್ರ ತಯಾರಿಸುವುದು ಅತ್ಯಂತ ಕಷ್ಟದ ಕೆಲಸ. ಹೃದಯದೊಳಗಿನ ಭಾವನಾ ಸಂಘರ್ಷ, ಅಂತರಾಳದ ಶಕ್ತಿ ಇವೆಲ್ಲವನ್ನೂ ತೋರ್ಪಡಿಸುವುದು ಹೇಳಿ ಕೊಟ್ಟು ಬರತಕ್ಕ ವಿಷಯವಲ್ಲ. ಕಥೆಯ ಸ್ಫೂರ್ತಿಯಿಂದ ಅವರನ್ನು ಹುರಿದುಂಬಿಸಿ ತರಬೇತಿ ಕೊಡುತ್ತಿದ್ದೇವೆ. 'ಧಮ ಧಮ' ಕುಣಿ ಎಂದರೆ ಎಷ್ಟು ಬೇಕಾದರೂ ಕುಣಿಯಬಲ್ಲ ಈ ಜನ – ಒಂದು ನಿಶ್ಶಬ್ದ. ಒಂದು ಚಲನೆಯಿಲ್ಲದ ಭಂಗಿ ಒಪ್ಪುವು

ದಿಲ್ಲ! ಈ ಜನ ರಂಗಸ್ಥಳದ ಮೇಲೆ ಸಹಜವಾಗಿ ನಡೆಯಲು ಕೂಡ ಮರೆತಂತಿದೆ! ಅಷ್ಟೊಂದು ತೀವ್ರಗತಿಯ ನೃತ್ಯದ ಹುಚ್ಚು! ನಮ್ಮ ಆಧ್ಯಾತ್ಮದ ಶಾಂತತೆ, ತಪಸ್ಸಿನ ಮಹಿಮೆ, ಮೌನ, ಸ್ಥಿರತೆಯ ಅಂದಚೆಂದವನ್ನು ಅವರೊಪ್ಪುವಂತೆ ಮನಗಾಣಿಸಲು ಹೆಣಗಾಡುತ್ತಲಿದ್ದೇವೆ. ಭಾರತೀಯ ನೃತ್ಯ-ನಾಟಕವೆಂದು ಪಾಶ್ಚಾತ್ಯ ರೀತಿಯಲ್ಲಿ ಮಾಡಿದರೆ ಚೆನ್ನಾಗಿರುತ್ತದೆಯೇ? ಒಂದು ಚಲನೆಯನ್ನು ಒಂದೇ ಸಾರಿ ಮಾಡ ಬೇಕು. ಮರುಬಾರಿ ಮಾಡಿದರೆ, ಇಲ್ಲಿನವರಿಗೆ ಹಿಡಿಸುವುದಿಲ್ಲ. ಅವರ ಮೆಚ್ಚಿಕೆ ಆ ರೀತಿಯಲ್ಲಿ ಸಾಗಿ, ಅದು ಒಂದು ರಾಷ್ಟ್ರೀಯ ಅಭ್ಯಾಸವಾಗಿ ಬಿಟ್ಟಿದೆ. ಮಾನವನು ಗಳಿಗೆ ಗಳಿಗೆಗೆ ಹೊಸ ಸೃಷ್ಟಿ ಮಾಡುವುದೂ ಒಂದು ಶ್ರಮವೇ ಅಲ್ಲವೇ?

........ಅಂತೂ ಭಾರತದ ಆಧ್ಯಾತ್ಮಿಕ ಶಕ್ತಿಯನ್ನೂ, ಪಾಶ್ಚಾತ್ಯದ ಚಲನೆಗಳ ಅಂಗ ಶುದ್ಧತೆಯನ್ನೂ, ನಿಷ್ಕೃಷ್ಟ ಆಚರಣೆಯನ್ನೂ ಒಂದುಗೂಡಿಸಿದರೆ ನಮ್ಮ ನಾಟಕ ಅತ್ಯಂತ ಸುಂದರ ನೃತ್ಯ-ನಾಟಕವಾಗುವುದರಲ್ಲಿ ಸಂಶಯವಿಲ್ಲ.

ಇತಿ ನಿಮ್ಮ
ಅಮ್ಮ.

* * * * * *

ನ್ಯೂಯಾರ್ಕ್
11 – 1 – 1968

ಮುದ್ದು ಜಯದೇವ್,

ನಿನ್ನೆರಾತ್ರಿ 'ನಯಾಗರ' (Niagara) ಜಲಪಾತವನ್ನು ನೋಡಿಕೊಂಡು ಹಿಂತಿರುಗಿದೆವು. ಕಲಮುರ್ಝೂಗೆ 'ಗ್ರೇ ಹೌಂಡ್' (Grey Hound) ಬಸ್ಸಿನಲ್ಲಿ ಪ್ರಯಾಣ. ಈ ಗ್ರೇ ಹೌಂಡ್ ಸಂಸ್ಥೆ ಪ್ರಯಾಣಿಕರಿಗೆ ವಿಮಾನಯಾನದಂತೆ ಎಲ್ಲಾ ಸೌಕರ್ಯಗಳನ್ನೂ, ಸುಖ ಪ್ರಯಾಣವನ್ನೂ ಕೊಡುತ್ತದೆ. ಈ ಬಸ್ ಪ್ರಯಾಣ ವಿಮಾನಕ್ಕಿಂತ ಉತ್ತಮ ಎನ್ನಬಹುದು. ಏಕೆಂದರೆ ದೇಶವನ್ನು ಹಾದು ಹೋಗುವಾಗ ಪ್ರಕೃತಿ ಸೌಂದರ್ಯ ಹಾಗೂ ಜನರ ನಡೆ-ನಡವಳಿಕೆಯನ್ನು ತಿಳಿಯಬಲ್ಲೆವು. ಮಾನವ ದೇಹದಲ್ಲಿ ನರಗಳಿದ್ದಂತೆ ಗ್ರೇ ಹೌಂಡ್ ಮಾರ್ಗಗಳು ದೇಶದಾದ್ಯಂತ ಹಬ್ಬಿದ್ದು ಒಂದು ಮೂಲೆಯಿಂದ ಮತ್ತೊಂದು ಕಡೆಗೆ ಸುಲಭವಾಗಿ ದಣಿವಿಲ್ಲದೆ ಹೋಗಬಹುದು.

'ಗ್ರೇ ಹೌಂಡ್‌ನಲ್ಲಿ ಪ್ರಯಾಣ ಮಾಡಿ. ಸಾರಥ್ಯ ನಮಗೆ ಬಿಡಿ....ಬನ್ನಿ... ಅಮೇರಿಕಾ ದರ್ಶನ ಮಾಡಿ....ಸಾರಥ್ಯ ನಮಗೆ ಬಿಡಿ. ಸೌಕರ್ಯ, ಶ್ರೀಮಂತಿಕೆಯ

ದುಬಾರಿಯಲ್ಲದ ಪ್ರಯಾಣ ಮಾಡಿ....ಸಾರಥ್ಯ ನಮಗೆ ಬಿಡಿ' ಎಂಬುದು ಅವರ ಧ್ಯೇಯ. ಅಕ್ಷರತಃ ನಿಜ ಕೂಡ. ನಾವು ನಿಜವಾಗಿ ಅವರನ್ನು ಸಾರಥಿಗಳನ್ನಾಗಿಸಿ, ಸುಖವಾಗಿರುತ್ತೇವೆ. ಕೆಲವು ಗಂಟೆಗಳಿಗೆ ಸರಿಯಾಗಿ ಗಾಡಿಯ ಚಾಲಕರು ಬದಲಾಯಿಸುತ್ತಾರೆ. ಬಸ್ ಮಾತ್ರ ತುಪಾಕಿಯ ಗುಂಡಿನಂತೆ, ನೇರವಾಗಿ, ವೇಗವಾಗಿ ದಿನ ರಾತ್ರಿ ಹೋಗುತ್ತಿರುತ್ತದೆ. ಊಟ, ತಿಂಡಿಯ ಸಮಯದಲ್ಲಿ ವಿಮಾನ ನಿಲ್ದಾಣದಂತಿರುವ ಅಚ್ಚುಕಟ್ಟಾದ ವಿಶ್ರಾಮಧಾಮಗಳಲ್ಲಿ ಬಿಡುವು ಕೊಡುತ್ತಾರೆ. ಬೇಕಾದ ಆಹಾರ ತಿಂದು ವಿಶ್ರಮಿಸಿದ ತರುವಾಯ ಮತ್ತೆ ಬಸ್ ಏರುವ ಏರ್ಪಾಡಿದೆ. ಕೆಲವು ಕಡೆ ತಿಂಡಿ ತಿನ್ನುವಾಗ ಮುಂದಿರುವ ಗಾನಯಂತ್ರದ ಕಿವಿ ತಿರುವಿದರೆ ಬೇಕಾದ ಸಂಗೀತವನ್ನು ಕೇಳುವ ಅನುಕೂಲತೆ ಇದೆ. ಬಸ್ಸಿನಲ್ಲೂ ಒರಗುವ ಆಸನಗಳಿದ್ದು, ಕಾಲು ಚಾಚಲು ಬೇಕಾದಷ್ಟು ಸ್ಥಳಾವಕಾಶವಿದ್ದು ತುಂಬಾ ಅನುಕೂಲವಾಗಿದೆ. ಬಸ್ಸಿನಲ್ಲೇ ಒಂದು ಶೌಚಗೃಹ ಇದೆ. ಗ್ರೇ ಹೌಂಡ್ ಬಸ್ ನಿಲ್ದಾಣಗಳಲ್ಲಿ ಶೌಚಗೃಹದ ಸ್ವಚಾಲಿತ ಯಂತ್ರಗಳ ಮೂಲಕ ಏನನ್ನು ಬೇಕಾದರೂ ಪಡೆಯಬಹುದು. ಟೂತ್‌ಬ್ರಷ್, ಟೂತ್‌ಪೇಸ್ಟ್, ಇತರ ಶೌಚ ಸಾಮಗ್ರಿಗಳೂ........ಅಲ್ಲದೆ ವಿವಿಧ ರೀತಿಯ ಪರಿಮಳ ದ್ರವ್ಯಗಳನ್ನೂ ಕೂಡ....ಒಂದು ನಾಣ್ಯ ಹಾಕಿ ಬೇಕಾದ ಪರಿಮಳದ ಪನ್ನೀರು ವೃಷ್ಟಿ ಮಾಡಿಕೊಳ್ಳಬಹುದು.

ಈ ಬಸ್‌ಗಳು ವಿಶಾಲ ರಸ್ತೆಗಳಲ್ಲಿ ಸರಾಗವಾಗಿ ಹೋಗುತ್ತವೆ. ಒಂದೇ ಕಡೆಯ ಪರಿಮಿತ ವಾಹನ ಸಂಚಾರವಾದ್ದರಿಂದ ಪ್ರಯಾಣ ಸುಲಭ........ಅಂದು ರಾತ್ರಿ ಶುಭ್ರ ಆಕಾಶ ದಿಗಂತದವರೆಗೂ ಪಸರಿಸಿ, ಹಾಲು ಚೆಲ್ಲಿದಂತೆ ಬೆಳದಿಂಗಳು ಶೋಭಿಸುತ್ತಿತ್ತು. ಮುಂದುಗಡೆಯಿಂದ ಬರುವ ದೊಡ್ಡ ವಾಹನಗಳಿಗೆಲ್ಲ ಸುತ್ತಲೂ ಬಣ್ಣಬಣ್ಣದ ದೀಪಾಲಂಕಾರ ಮಾಡಿ ವಾಹನದ ಇತಿಮಿತಿ ತಿಳಿಯುವಂತೆ ಮಾಡುತ್ತಾರೆ. ಅವು ಕಣ್ಣಿಗೆ ಚಲಿಸುವ ರಥಗಳಂತೆ ತೋರುತ್ತದೆ........ಇಲ್ಲಿ ಒಬ್ಬನೇ ಒಬ್ಬ ಬಸ್ ಚಾಲಕ ಎಲ್ಲಾ ಕೆಲಸಗಳನ್ನೂ ಮಾಡುತ್ತಾನೆ........ಸಂಚಾಲಕನೂ ಇಲ್ಲ (Conductor) ಮತ್ಯಾರೂ ಸಹಾಯಕ್ಕಿಲ್ಲ. ಅವನೇ ಪ್ರವೇಶ ಪತ್ರ ಕೊಟ್ಟು, ನಮ್ಮ ಸಾಮಾನು ಸರಂಜಾಮುಗಳನ್ನು ಬಸ್ಸಿಗೆ ಹೇರಿಸುತ್ತಾನೆ. (ಇಲ್ಲಿ ಸಾಮಾನುಗಳನ್ನು ಬಸ್ಸಿನ ಅಡಿಯಲ್ಲಿ ಹಾಕುವ ವಾಡಿಕೆ. ಅದಕ್ಕೆಂದೇ ಒಂದು ಚಿಕ್ಕ ಕೋಣೆಯ ವಿಸ್ತಾರ ಬಸ್ಸಿನ ಅಡಿಯಲ್ಲಿರುತ್ತದೆ) ಬರಲಿರುವ ಸ್ಥಳಗಳಿಗೆ ಮುನ್ನೆಚ್ಚರಿಸುತ್ತಾನೆ. ಇಳಿಯುವವರು ಇಳಿಯಲು ಸಹಾಯ ಮಾಡುತ್ತಾನೆ. ಅವರ ಸರಂಜಾಮುಗಳನ್ನು ಕೆಳಗಿಳಿಸಿ ಕೊಡುತ್ತಾನೆ. ನ್ಯೂಯಾರ್ಕ್ ನಗರವಲ್ಲಿ ಕೂಡ ಬಸ್‌ಗಳಿಗೆ ಚಾಲಕನೇ ಏಕೈಕ ಸಾಮ್ರಾಟ.. .(ಆದರೆ ನ್ಯೂಯಾರ್ಕ್ ನಗರದಲ್ಲಿ ಬಸ್ಸಿನ ಪ್ರಯಾಣ ತುಂಬಾ ನಿಧಾನ.) ಈ ರೀತಿಯಾಗಿ ಭಾರತೀಯರೂ ಕೆಲಸ ಮಾಡುವಂತಿದ್ದರೆ ಎಷ್ಟು ಚೆನ್ನಾಗಿತ್ತು! ಆದರೆ ಈ ದೇಶದಲ್ಲಿ ಒಬ್ಬ ವ್ಯಕ್ತಿ ಇಷ್ಟು ಕೆಲಸ ಮಾಡಲು ಸಾಧ್ಯ

ವಿದೆ. ಏಕೆಂದರೆ ರಸ್ತೆಗಳು ಮಾರ್ಗದರ್ಶಕ, ವಾಹನಗಳು ಅಕಳಂಕ, ಚಾಲಕರು ಯೋಗ್ಯ, ಸಾಮಾನು ಕಮ್ಮಿ – ಜನರು ಶಿಸ್ತು ಪಡೆದವರು – ಇತ್ಯಾದಿ ಅನುಕೂಲತೆಗಳಿವೆ. ನಮ್ಮ ದೇಶದಲ್ಲಿ ?

ಅಂತೂ ಈ ದೇಶ ಎಷ್ಟೊಂದು ಮುಂದುವರಿದಿದೆ! ನನಗೆನಿಸುತ್ತದೆ – ಇದು ಬಂಗಾರದ ಬೀದಿಯ ಹಾಲುಜೇನಿನ ಹೊಳೆಯ ಸಮೃದ್ಧಿ ಇಂದ್ರಲೋಕವಾಗಿದೆ ಎಂದು. ಸ್ವಯಂಚಾಲನ ವಿದ್ಯುದ್ದುಪಕರಣಗಳ ಅಳವಡಿಕೆಯಿಂದಾಗಿ ಪರಮಾಭಿವೃದ್ಧಿಯು ಮೇರು ಪರ್ವತವನ್ನೇ ಮುಟ್ಟಿದೆ. ಹಾದಿಯಲ್ಲಿನ ಉಕ್ಕಡಗಳಲ್ಲಿ ಚಾಲಕನು ನಿಶ್ಚಿತ ನಾಣ್ಯವನ್ನು ದೂರದ ಬುಟ್ಟಿಗೆ ಎಸೆದರೆ, ಅಡ್ಡದಾಗು ತಾನಾಗಿಯೇ ತೆರೆಯುತ್ತದೆ. ಬುಟ್ಟಿಯಲ್ಲಿ ನಿರ್ದಿಷ್ಟ ನಾಣ್ಯಗಳನ್ನೇ ಹಾಕಬೇಕು (ಅದು ಖೋತಾ ನಾಣ್ಯವಾಗಿದ್ದಲ್ಲಿ ಬಾಗಿಲು ತೆರೆಯುವುದಿಲ್ಲ........ನೋಡು) ಆಗ ಹಸಿರು ಸಂಕೇತ ಒಂದು ಬಾಗಿಲು ತೆರೆಯುತ್ತದೆ........ಜನರ ಸಂಪರ್ಕವೇ ಇಲ್ಲ! ಏನು ಆಶ್ಚರ್ಯ!! ಈ ದೇಶದಲ್ಲಿ ಸುತ್ತಾಡಿದಂತೆ ಇದು ಇಂದ್ರಲೋಕವೋ .... ಚಂದ್ರಲೋಕವೋ ಎನ್ನುವ ಭ್ರಮೆಯಾಗುತ್ತದೆ ನನಗೆ!!

ಕಲಮಝೂಗೆ ಹೋಗುವಾಗ ಬಸ್‌ನಲ್ಲಿ ಮುಂದಿನ ಎರಡು ಸೀಟು ಸಿಕ್ಕಿದ್ದರಿಂದ ಸುಸ್ಪಷ್ಟವಾಗಿ ಈ ದೇಶದ ಪರಿಚಯವಾಯಿತೆನ್ನಬೇಕು. ವಾಹನ ಸಂಚಾರ ಸಂಕೇತಗಳು ಅದೆಷ್ಟು ನಿರ್ದಿಷ್ಟ! ಹಾದಿಯಲ್ಲಿನ ಬಿಡಾರಗಳು (Motels– ಆರಾಮಗೃಹಗಳು: ಇಲ್ಲಿ ನಾವು ಇಷ್ಟಪಟ್ಟರೆ ನಾವೇ ಅಡಿಗೆ ಮಾಡಿ ಊಟ ಮಾಡುವ ಸೌಕರ್ಯವನ್ನು ಒದಗಿಸುತ್ತಾರೆ) ವಿಶ್ರಾಂತಿ ಕೇಂದ್ರಗಳು (Rest-Houses) ಇವೆಲ್ಲಾ ಇಣಕುಮಿಣಕುವ ದೀಪಾಲಂಕಾರದಿಂದ "ನಾವಿಲ್ಲಿದ್ದೇವೆ ನಿಮಗಾಗಿ, ಬನ್ನಿ" ಎಂದು ಪ್ರಚುರಪಡಿಸಿಕೊಳ್ಳುತ್ತವೆ. ರಾತ್ರಿಯೆಲ್ಲ ಈ ದೀಪ ಮಂಟಪಗಳಿಂದಾಗಿ ಹಾದಿಯಲ್ಲಿ ಕತ್ತಲೆಯೇ ಇರುವುದಿಲ್ಲ. ಎಲ್ಲೆಲ್ಲೂ ಒಂದು ತರಹದ ಗೆಲುವು....ಸಂತಸ! 'ಅಮೇರಿಕಾ ನೋಡಬೇಕಾದರೆ ನೀವು ನ್ಯೂಯಾರ್ಕ್ ಬಿಟ್ಟು ಹೋಗಬೇಕು' ಎಂದು ಇಲ್ಲಿಯ ಜನ ಹೇಳುತ್ತಾರೆ. ಅದೂ ನಿಜವೇ! ಏಕೆಂದರೆ ಈ ನ್ಯೂಯಾರ್ಕಿನಲ್ಲಿ ಅಮೇರಿಕಾ ದೇಶದ ಜನರ ಸಂಸ್ಕೃತಿ ಗಂಗೆಯಲ್ಲಿ ಜಗತ್ತಿನ ಎಲ್ಲಾ ಸಂಸ್ಕೃತಿಯ ಜಲರಾಶಿಯ ಮಿಲನವಾಗಿದೆ. ಎಲ್ಲಾ ಬಣ್ಣದ ಜನರ ವಾಸವಿದೆ.

ನಾವು ಪ್ರಯಾಣ ಮಾಡುವಾಗ ಎಲ್ಲೆಲ್ಲೂ ಮಂಜು, ಗೆಡ್ಡೆಕಟ್ಟಿದ ಮಂಜು, ಹಿಮವೃಷ್ಟಿ ದಾರಿಯಲ್ಲಿ 'ಮುಂದೆ ಮಂಜಿದೆ – ಮೆಲ್ಲಗೆ ಹೋಗಿ' ಎಂಬ ಎಚ್ಚರಿಕೆಯ ಫಲಕಗಳು ಕಂಡು ಬಂದಿತು. ರಾತ್ರಿಯೆಲ್ಲ ಪ್ರಯಾಣ ಮಾಡಿ ಬೆಳಗ್ಗೆ ಕ್ಲೀವ್‌ಲೇಂಡ್ (Cleveland) ತಲುಪಿ ಉಪಹಾರ ಮಾಡಿದೆವು. ಅಲ್ಲೊಂದು ಸರೋವರ! ಈರೀ ಸರೋವರವಲ್ಲವೇ ಅದು ? ಅದನ್ನು ನಾವು ನೋಡಿದಾಗ....ನೀರೇ ಇರಲಿಲ್ಲ...

ಸರೋವರ ಮಾತ್ರ ತುಂಬಿತ್ತು – ಗೆಡ್ಡೆಕಟ್ಟಿದ ಮಂಜಿನಿಂದ ದೋಣಿಗಳೆಲ್ಲವನ್ನೂ ದಡಕ್ಕೆ ಸರಿಸಿ ನಿಲ್ಲಿಸಿದ್ದರು. ಆ ಮುಂಜಾನೆ ಎಲ್ಲೆಲ್ಲೂ ಹಿಮಮಯ. ನೋಡಲು ಬಹಳ ಚೆನ್ನಾದ ದೃಶ್ಯವಾಗಿತ್ತು. ಅತ್ಯಾಧುನಿಕ ಮನೆಗಳು ನಮ್ಮೊಡನೆ ಕಣ್ಣು ಮುಚ್ಚಾಲೆ ಆಡುತ್ತಿವೆಯೇನೋ ಎಂಬಂತೆ ಕೆಲವೊಮ್ಮೆ ಹಿಮದಿಂದ ಮರೆಯಾಗಿ, ಮಗದೊಮ್ಮೆ ಇಣಿಕಿ ನೋಡಿ ಕಂಗೊಳಿಸುತ್ತಿದ್ದವು. ಅಮೇರಿಕದ ಸಚಿತ್ರ ಪತ್ರಿಕೆಗಳಲ್ಲಿ ನೋಡುತ್ತಿದ್ದ ಮನೆಗಳ ಚಿತ್ರಗಳು ಇಲ್ಲಿ ನಮ್ಮ ಕಣ್ಮುಂದೆ ಮೂರ್ತಿವತ್ತಾಗಿ ನಿಂತವು. ಮನೆಗಳ ಮೇಲ್ಛಾವಣಿಯಿಂದ ಉದ್ದುದ್ದ ಮಂಜುಗಡ್ಡೆಗಳು (Icicles) ಚಿತ್ರ ವಿಚಿತ್ರ ರೂಪುಗಳನ್ನು ಧರಿಸಿ ಮನೆಗಳಿಗೆ ತೋರಣ ಮಾಲೆಯನ್ನು ಹಾಕಿದಂತಿತ್ತು.

ಡಿಟ್ರೊಯ್ಟ್ (Detroit) ನಗರ ಸೇರುವಾಗ ಬಹಳ ಎತ್ತರದ ಕಟ್ಟಡಗಳನ್ನು ನೋಡಿದೆವು. ಈ ನಗರವು ಫೋರ್ಡ್ ಕಾರುಗಳನ್ನು (Ford Car) ತಯಾರಿಸುವ ಕೇಂದ್ರ. ಕ್ರ್ಯಾಸ್ಲೆರ್, (Chrysler) ಶಿವರ್ಲೆ (Cheverolet) ಕಾರುಗಳನ್ನು ತಯಾರಿಸುವ ಕಟ್ಟಡಗಳನ್ನು ನೋಡಿದೆವು. ಅಲ್ಲಿ ನೋಡಿದ ಒಂದು ದೃಶ್ಯ ನಮ್ಮನ್ನು ದಂಗುಬಡಿಸಿತು ! ಒಂದು ಜಾಗದಲ್ಲಿ ಹಳೆಯ ಕಾರುಗಳನ್ನು ಆಕಾಶ ತಲುಪುವ ರಾಶಿ ಹಾಕಿದ್ದರು. ಬೇಡದ ಈ ವಾಹನಗಳು ನಿಷ್ಪ್ರಯೋಜಕವಾಗಿದ್ದು, ಕೊನೆಗೆ ಪುಡಿ ಪುಡಿಯಾಗಿ ದುರಂತ ನಾಟಕದ ನಾಯಕರಾಗುತ್ತವೆ. ಬೇಡವಾಗಿದ್ದ ಕಾರುಗಳನ್ನು ರಸ್ತೆಯ ಮೇಲೆ ಹಾಗೆಯೇ ಬಿಟ್ಟುಹೋಗುವುದೂ ಇಲ್ಲಿನ ಜನರ ಸಾಮಾನ್ಯ ಪದ್ಧತಿ ! ಉತ್ಪಾದನೆಯಲ್ಲಿ ಅತಿ ಸಂತಾನವಾದರೂ ಸಜಾ ಕಟ್ಟಿಟ್ಟದ್ದೇ ಎನ್ನಬೇಕು. ಪ್ರತಿಯೊಂದು ಸಂಸಾರಕ್ಕೂ ಎರಡು – ಮೂರು ಕಾರುಗಳಿರುತ್ತವೆ. ....ಉದ್ದುದ್ದದ ವಾಹನಗಳು........ಇಡೀ ಮನೆಯೇ ಅದಕ್ಕೆ ಸೇರಿಕೊಂಡಿರುತ್ತದೆ. ವಿಹಾರಕ್ಕೆ ಹೋಗುವಾಗ ಕಾರುಗಳ ಮೇಲೆ ದೋಣಿಗಳು, ಇತರ ವಿನೋದಕ್ಕೆ ಬೇಕಾದ ಸಲಕರಣೆಗಳು – ಕಾರಿನ ಹಿಂದಿನ ವಾಹನದಲ್ಲಿ ಸಂಸಾರ ನಡೆಸಲು ಬೇಕಾದ ವಿಷಯಗಳು ಅಂತೂ ಈ ಜೀವನವನ್ನು ತೊಡಕಾಗಿ ಮಾಡಿಕೊಂಡು ಜೀವಿಸುವಂತೆ ನಮಗೆ ಕಾಣುತ್ತದೆ. ಸುಖ ಪಡೆಯಲು ಅಗ್ರಗಣ್ಯರು........ ಈ ಜನ !!

ಒಂದು ನಿಮಿಷವೂ ಹೆಚ್ಚು ಕಡಿಮೆಯಿಲ್ಲದೆ ಸರಿಯಾಗಿ 4 – 20 ಘಂಟೆಗೆ ಕಲಮುಝೂ ತಲುಪಿದೆವು. ಈ ಕ್ಷಣಕ್ಕಾಗಿ ನಾವು ಅದೆಷ್ಟು ಕಾತುರತೆಯಿಂದ ಕಾದುಕೊಂಡಿದ್ದೆವು........ 1965ನೆಯ ಇಸವಿಯಿಂದ ! ಮನಸ್ಸು ಸಂತಸ ಗಗನದಲ್ಲಿ ಹಕ್ಕಿಯಂತೆ ಹಾರಿತು. ನಮ್ಮ ಅತಿಥೇಯರು ನಮ್ಮನ್ನು ಒಂದು ಟೋರ್ನೆಡೋ (Tornado) ಕಾರಿನಲ್ಲಿ ನಮ್ಮನ್ನು ಕರೆದುಕೊಂಡು ಹೋದರು. ಆ ಘಳಿಗೆಯಿಂದ ನಾವು ಹಿಂತಿರುಗಿ ಬರುವವರೆಗೂ ನಮ್ಮನ್ನು ಸ್ವರ್ಗಸುಖದಲ್ಲಿರಿಸಿದರು. ನಮ್ಮನ್ನು

ವಿಶ್ವವಿದ್ಯಾಲಯದ ಅತಿಥಿ ಭವನದಲ್ಲಿ ಇಳಿಸಿದರು. ಆ ವೆಸ್ಟರ್ನ್ ಮಿಶಿಗನ್ ಯೂನಿವರ್ಸಿಟಿಯಲ್ಲಿ (Western Michigan University) 18,000 ವಿದ್ಯಾರ್ಥಿಗಳಿರುವರಂತೆ ! ಎಂತಹ ಅಮೋಘ ವಿಶ್ವವಿದ್ಯಾಲಯ ! ಏಳೆಂಟುಸಾವಿರ ವಿದ್ಯಾರ್ಥಿಗಳು ಛತ್ರವಾಸದಲ್ಲಿದ್ದು (Hostel) ಶ್ರೀಮಂತ ಜೀವನವನ್ನು ನಡೆಸುತ್ತಾರೆ. ಸಮೃದ್ಧಿಯ ಮೂರ್ತಿಮಂತ ಸ್ವರೂಪ. ಇಂಗ್ಲೆಂಡಿನಲ್ಲಿರುವುದಕ್ಕಿಂತ ಇಲ್ಲಿನ ವಿದ್ಯಾರ್ಥಿಗಳು ಓದಿಗೆ ಹೆಚ್ಚಿಗೆ ಗಮನಕೊಡುವಂತೆ ಕಂಡಿತು. ನಡತೆಯಲ್ಲೂ ಸಭ್ಯತೆ ಇತ್ತು.

ನಮ್ಮ ಶಿವದೇವ್ ಇಲ್ಲಿಗೆ ಬಂದರೆ ಖಂಡಿತ ಯಶಸ್ಸು ಗಳಿಸುತ್ತಾನೆ. ಪ್ರತಿಕ್ಷಣಕ್ಕೂ ಪ್ರಗತಿಯತ್ತ ಧಾವಿಸುತ್ತಿರುವ ಈ ದೇಶ ವೈಜ್ಞಾನಿಕ ಕ್ಷೇತ್ರದಲ್ಲಿ ಸಾಧಿಸಿರುವ ಸಿದ್ಧಿ ಅಪಾರ. ಇಲ್ಲಿ ಬರುವ ಭಾರತೀಯರು ಆಯ್ಕೆಯಾಗಿ ಬಂದ ಪ್ರತಿಭಾವಂತರು. ಅಮೇರಿಕದ ಜನತೆ ವಿಶೇಷ ಅಧ್ಯಯನಕ್ಕೆ ಅಷ್ಟೊಂದು ಆಸಕ್ತಿ ತೋರಿಸದೆ ಇರುವುದರಿಂದ ವಿದ್ಯಾವಂತ ಭಾರತೀಯರಿಗೆ ಇಲ್ಲಿ ಪ್ರವೇಶ ಸಿಗುವುದು ಸುಲಭ, ಅಲ್ಲದೆ ಭಾರತೀಯರು ಒಳ್ಳೆಯ ಹೆಸರುಗಳಿಸಿ ಹಿರಿಯ ಹುದ್ದೆಗಳನ್ನು ಪಡೆದಿರುತ್ತಾರೆ. ಇಲ್ಲಿ ನೆಲೆಸಿರುವ ಈ ಭಾರತೀಯರನ್ನು ಕಂಡು ನಾವು ಹೆಮ್ಮೆ ಪಡಬೇಕು. ವಿದ್ಯಾವಂತ ಹಾಗೂ ನುರಿತ ಈ ಅಧಿಕಾರಿಗಳು ಹೇರಳವಾಗಿ ಸಂಪಾದನೆ ಮಾಡುತ್ತಿರುವುದರಿಂದ ಅವರ ಗಮನ ನಮ್ಮ ದೇಶದ ಕಡೆಗೆ ಹೋಗದಿರುವುದು ಕಠೋರ ಸತ್ಯ. ಈ ದೇಶ ಒಂದು ಕೈಯಿಂದ ಹಣ ತೋರಿಸಿ, ಮತ್ತೊಂದು ಕೈಯಿಂದ ವಿದ್ಯಾವಂತ ಜನಾಂಗವನ್ನು ಕಸಿದುಕೊಳ್ಳುತ್ತಿದೆ.

ಕಲಮಝೂ ಪ್ರವಾಸ ಒಂದು ಮರೆಯಲಾಗದ ಮಧುರ ಅನುಭವ. ಮೊಣಕಾಲ ಮಟ್ಟದ ಶುಭ್ರ ಶ್ವೇತಹಿಮ ಬೆಳ್ಳಿಯ ಬಿಸಿಲಿನಲ್ಲಿ ಬೆಳಗುವಾಗ ಕಂಡುಬಂದ ಆ ದೃಶ್ಯ .... ತಂಪಾದ ಬೆಳದಿಂಗಳಿನಲ್ಲಿ ನಿರಾತಂಕವಾಗಿ ಪವಡಿಸಿರುವ ಹಿಮರಾಣಿಯ ಸೌಂದರ್ಯದ ಇನ್ನೊಂದು ದೃಶ್ಯ—

ಇಲ್ಲಿ ನಮ್ಮ ಕೆಲಸವೂ ಸ್ವಾರಸ್ಯವಾಗಿತ್ತು. ವಿಶ್ವವಿದ್ಯಾಲಯದ ಮೂರು ತರಗತಿಗಳ ವಿದ್ಯಾರ್ಥಿಗಳನ್ನು ಭೇಟಿಮಾಡಿ, ಅವರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದೆವು. ಆ ವಿದ್ಯಾರ್ಥಿಗಳಲ್ಲಿ ಕೆಲವರು ಹಿಂದೂ ಧರ್ಮ, ಬೌದ್ಧಧರ್ಮದ ಅಧ್ಯಯನ ಮಾಡುವವರಿದ್ದರು. ಪ್ರತಿಯೊಂದು ತರಗತಿಯಲ್ಲೂ ಟಿ. ವಿ. ಸಲಕರಣೆ ಇದ್ದು ಅದರ ಮೂಲಕ ಪಾಠ ನಡೆಸುತ್ತಾರೆ. ನಮ್ಮ "ನೃತ್ಯಕಲೆಯ" ವಿಷಯದಲ್ಲಿ ಒಂದು ಘಂಟೆ ಟಿ. ವಿ.ಯನ್ನು ತೆಗೆದಿಟ್ಟಿದ್ದಾರೆ. ಸಮಯ ಬಂದಾಗ ವಿದ್ಯಾರ್ಥಿಗಳ ಅಭ್ಯಾಸಕ್ಕಾಗಿ ಉಪಯೋಗಿಸುತ್ತಾರೆ.

ಒಂದೊಂದು ದಿನ ಒಬ್ಬೊಬ್ಬ ಉಪಾಧ್ಯಾಯರು ನಮ್ಮನ್ನು ವಿಶ್ವವಿದ್ಯಾಲಯದ ವಿವಿಧ ಪಾಕಗೃಹಗಳಿಗೆ ಕರೆದೊಯ್ದು ರಾಜಯೋಗ್ಯಭೋಜನವನ್ನು ಉಣಬಡಿಸಿದರು.

ಈ ಮಟ್ಟದ ಆಹಾರವನ್ನು ಅಮೇರಿಕಾ ದೇಶವೊಂದೇ ಒದಗಿಸಬಲ್ಲುದು. ಆದರೂ ಇಲ್ಲಿನ ಜನರು ಹೇಳುವ ಮಾತಿನಲ್ಲಿ ಒಂದು ಸತ್ಯವಿದೆ. "ಅಮೆರಿಕದ ಜನರು ಹೆಚ್ಚು ತಿಂದರೂ ಪೌಷ್ಟಿಕತೆ ಕಡಿಮೆ" (Overfed and undernourished) ಎಂದು ಇಲ್ಲಿನ ಜನ ಇಡೀ ದಿನ ರಾತ್ರಿ ಎಂಬಂತೆ ತಿನ್ನುತ್ತಿರುತ್ತಾರೆ. ಅಮ್ಮ ಹೇಳುವ ಚೌತಿಯ ದಿನದ ರುಬ್ಬುವ ಕಲ್ಲಿನ ಹಾಗೆ. ಇಂಗ್ಲೆಂಡಿನಲ್ಲಿ ಟೀ ಕುಡಿಯುವಂತೆ ಇಲ್ಲಿ ಕೋಕ್ ಕುಡಿಯುವ ಚಟ. ಸಂದರ್ಭ ಯಾವುದೇ ಇರಲಿ, ಟೀ ಕುಡಿಯುತ್ತಿರುವುದು ಒಂದು ಅಭ್ಯಾಸ ಇಂಗ್ಲೆಂಡಿನ ಜನತೆಗೆ–ಬೇಸರವಾದರೆ, ಸಂತೋಷವಾದರೆ ಏಕಾಂತ ದಲ್ಲಿ, ಕೂಟದಲ್ಲಿ, ಸೆಕೆಯಾದಾಗ, ಚಳಿಯಾದಾಗ ಎಂದೂ ಯಾವಾಗಲೂ ಟೀ ಆಸರೆ ಪಡೆದು, ಅದರ ಮುಂದೆ ಕೂತಿರುವುದು ಜನರಿಗೆ ಆನಂದ. ಬಹುಶಃ ಬಲವಂತದ ವಿರಾಮ. ಹಾಗೆಯೇ ಅಮೇರಿಕದಲ್ಲಿ ಕೋಕ್ ಕುಡಿಯುವುದು ರಾಷ್ಟ್ರೀಯ ಅಭ್ಯಾಸ

ನಮ್ಮ ಮೊದಲ ನೃತ್ಯಪ್ರದರ್ಶನವನ್ನು "ಚೇಪಲ್"ನಲ್ಲಿ (Chapel) ಏರ್ಪಡಿ ಸಿದ್ದರು. ನಮ್ಮ ನೃತ್ಯಕಲೆ ಧರ್ಮಸಂಬಂಧಿತವಾದುದರಿಂದ, ಸುತ್ತಲಿನ ವಾತಾವರಣ ಪ್ರದರ್ಶನಕ್ಕೆ ಇಂಬುಗೊಟ್ಟಿತು. "ಈ ಕಾರ್ಯಕ್ರಮವನ್ನು ಮೆಚ್ಚದೆ ಇರುವುದು ಕಷ್ಟ !" ಎಂದು ಪತ್ರಿಕೆ ಸಾರಿತು !

ಪ್ರತಿ ದಿನ ಸಂಜೆ ನಮ್ಮ ಪುರಪ್ರದಕ್ಷಿಣೆ. ಕಲಮಝೂ ಕಾಗದದ ಕೈಗಾರಿಕೆಗೂ, ನ್ಯೂಯಾರ್ಕ್‌ಗೆ ಕಳುಹಿಸುವ ಟ್ಯಾಕ್ಸಿಗಳಿಗೂ (Taxi) ಪ್ರಸಿದ್ಧಿ. ಇಲ್ಲಿ ಅತಿ ಪ್ರಮುಖ ವಾದ ರಾಸಾಯನಿಕ ಕೈಗಾರಿಕೆಯೂ ಇದೆ. ಅದಕ್ಕೆ ಭೇಟಿ ಕೊಟ್ಟಾಗ ಅದರ ವಾಸ್ತು ಶಿಲ್ಪ, ಕೌಶಲ್ಯ ನಮ್ಮನ್ನು ದಿಗ್ಭ್ರಮೆ ಮಾಡಿತು. ಏನು ಐಶ್ವರ್ಯ ! ಕೋಟ್ಯಾಂತರ ರೂಪಾಯಿ ವ್ಯವಹಾರವಿರಬಹುದೇನೋ ! ಒಳಗಡೆ ಈ ಚಳಿಗಾಲದಲ್ಲೂ ಅಲ್ಲಿನ ಚಿಕ್ಕ ಚಿಕ್ಕ ಕೊಳಗಳಲ್ಲಿನ ನೀರು ಮಂಜುಗಡ್ಡೆ ಕಟ್ಟದಂತೆ ಬಿಸಿ ಮಾಡಿ ನೀರಿನ ರೂಪದಲ್ಲೇ ಕಾಪಾಡುತ್ತಾರೆ. ಇವುಗಳಲ್ಲಿ ಬಾತುಕೋಳಿಗಳು ಈಜುವ ದೃಶ್ಯ ನಿಜವಾಗಿ ಅಂದ ! ಕಟ್ಟಡದ ಒಳಗಡೆಯೇ ದೊಡ್ಡ ದೊಡ್ಡ ಮರಗಳನ್ನು ಬೆಳೆಸುತ್ತಾರೆ ! ಮರ ನಿಜವಾದ ಮರವೇ ಆದರೂ ಆ ಮರ ಬೆಳೆಯುವ ನೈಸರ್ಗಿಕ ವಾತಾವರಣ ಪೂರ್ಣ ಕೃತ್ರಿಮ !!

ಪ್ರಯಾಣ ಮಾಡುವಾಗ ನಾವು ಕಂಡ ಕಲಮಝೂವಿನ ಮನೆಗಳೆಲ್ಲವೂ ಹಿಮದಿಂದ ಮುಚ್ಚಿ ಹೋಗಿ ಉಸಿರುಕಟ್ಟುವಂತಿತ್ತು. ಎಲ್ಲೆಲ್ಲೂ ಹಿಮದ ಪ್ರಕಾಶ ಕಣ್ಣು ಕುಕ್ಕುತ್ತಿತ್ತು. ಕಲಮಝೂ ಬಿಡುವ ಮುನ್ನ ವಿಶ್ವವಿದ್ಯಾಲಯದ ವಿದ್ಯಾರ್ಥಿನಿ ಯರೊಡನೆ ಮಾತುಕತೆ ಏರ್ಪಡಿಸಿದ್ದರು. ನಮ್ಮ ಸಂಭಾಷಣೆಯಲ್ಲಿ ನೀವಿಬ್ಬರೂ ಒಮ್ಮೆಯಾದರೂ ಬಾರದಿರುವುದಿಲ್ಲ. ಈ ಸಂವಾದ ಗೋಷ್ಠಿಯಲ್ಲಿ ನಮಗೊಬ್ಬ ವಿದ್ಯಾರ್ಥಿನಿ "ನಿಮ್ಮ ಹುಡುಗರಿಗೆ ಸ್ನೇಹಿತೆಯರೂ ಇದ್ದಾರೆಯೇ" ಎಂದು ಕೇಳಿದಳು ನಮ್ಮ ಸಾಮಾಜಿಕ ಚಿತ್ರವನ್ನು ಅವರಿಗೆ ವರ್ಣಿಸಿದರೆ ಆಶ್ಚರ್ಯಪಡುತ್ತಾರೆ.

ಮರುದಿನ ಬೆಳಗ್ಗೆ ಗ್ರೇ ಹೌಂಡ್ ಬಸ್ಸಿನಲ್ಲಿ ಬಫೆಲೋ (Buffalo) ಗೆ ಬಂದು ಅಲ್ಲಿ 'ನಯಾಗರಾ' ಜಲಪಾತಕ್ಕೆ ಹೋಗುವ ಬಸ್ಸನ್ನು ಸೇರಿದೆವು. ಜಲಪಾತದ ಹತ್ತಿರವೇ ಇರುವ ಹೋಟೆಲೊಂದರಲ್ಲಿ ತಂಗಿದೆವು. ಆದರೆ ಅಂದು ಎಷ್ಟೊಂದು ಚಳಿ! ನ್ಯೂಯಾರ್ಕ್ ಟೈಮ್ಸ್ (New York Times) ಪತ್ರಿಕಾ ವರದಿಯಂತೆ ಕ್ರಿ. ಶ. 1886ನೆಯ ಇಸವಿಯ ನಂತರ ಆದೇ ವರ್ಷ ಆಷ್ಟೇ. ಅತ್ಯಂತ ಚಳಿ ಇತ್ತಂತೆ!! ಮಾನವನ ನಿಗ್ರಹಣ ಶಕ್ತಿಯನ್ನು ಪರೀಕ್ಷೆಗೆ ಗುರಿಪಡಿಸಿ, ಅವನು ಎಷ್ಟು ಹರಿತವಾದ ಚಳಿಯನ್ನು ತಡೆಯಬಲ್ಲನು ಎಂಬುದಕ್ಕೆ ಸಾಕ್ಷಿ ಈ ಅನುಭವ. ಮೂಗಿನ ತುದಿ, ಕಿವಿ, ಚಳಿಗೆ ಕಿತ್ತುಹೋಗುವಂತಾಯಿತು. ಊಟ ಮಾಡುವಾಗ, ಬಡಿಸುವ ಪರಿಚಾರಿಕೆ ನಾವು ಜಲಪಾತ ನೋಡಲು ಇಂತಹ ಕೊರೆತದಲ್ಲಿ ಬಂದುದಕ್ಕೆ ಬೇಸರ ಪಟ್ಟುಕೊಂಡಳು—"ಅಲ್ಲಾ, ಇದೇನು ಮಹಾ ಜಲಪಾತ ಎಂದು ನೀವು ಈ ಚಳಿಯಲ್ಲಿ ನೋಡಲು ಬಂದಿದ್ದೀರಿ?" ಎಂದಳು.

ಅಂದು ಒಳ್ಳೆಯ ಬೆಳದಿಂಗಳು. ಬೆಳದಿಂಗಳಿನ ಪ್ರಕಾಶದಲ್ಲಿ 'ನಯಾಗರಾ' ಜಲಪಾತವನ್ನು ನೋಡಿದೆವು. ಅದೊಂದು ಅಪರೂಪದ ವಿಚಿತ್ರ ದೃಶ್ಯ. ಮಧ್ಯದ ಪ್ರಮುಖ ಜಲಪಾತ ಮಾತ್ರ ನೀರಾಗಿ ಧುಮುಕುತ್ತಿದ್ದು, ಮಿಕ್ಕೆಲ್ಲ ನೀರು ಮಂಜು ಕಟ್ಟಿತ್ತು! ಹದಿನೈದು ನಿಮಿಷದ ನಂತರ ಅಲ್ಲಿ ನಿಲ್ಲಲು ಕೂಡ ನಮಗೆ ಸಾಧ್ಯವಾಗಲಿಲ್ಲ. ಕಾಲಿನ ಬೆರಳುಗಳೆಲ್ಲ ಕಿತ್ತುಹೋಗುವ ನೋವು! ಶೀತ ಮಾರುತದ ಹೊಡೆತದಿಂದ ರಕ್ತಚಲನೆಯೇ ನಿಂತು ಹೋಗುವಂತಿತ್ತು. ದೇಹ ಮರ ಕಟ್ಟಲು ಪ್ರಾರಂಭವಾಯಿತು. ಮಿದುಳು ಕೂಡ ಸ್ಥಬ್ಧವಾದಂತಾಗಿ ಮಂಕಾದೆವು. ಹೋಟೇಲಿಗೆ ಧಾವಿಸಿ ಬಂದು ಬಿಸಿನೀರಿನಲ್ಲಿ ಮುಳುಗಿ ಸ್ವಲ್ಪ ಬ್ರಾಂದಿ ಕುಡಿದ ಮೇಲೆ ಜೀವಬಂತು. ರಕ್ತಚಲನೆ ಸ್ಥಿಮಿತಗೊಂಡಿತು. ಎಂತಹ ಅನುಭವ!

ಮರುದಿನ ಬೆಳಿಗ್ಗೆ ಪುನಃ ಟ್ಯಾಕ್ಸಿ ಮಾಡಿಕೊಂಡು 'ನಯಾಗರಾ' ಜಲಪಾತದ ಸುತ್ತಮುತ್ತಲಿನ ಪ್ರದೇಶವೆಲ್ಲವನ್ನೂ ನೋಡಿದೆವು. ಒಳ್ಳೇ ಬಿಸಿಲಿದ್ದ ಕಾರಣ ಅಷ್ಟೊಂದು ತಡೆಯಲಾರದ ಛಳಿ ಇರಲಿಲ್ಲ. ಹಿಮ ನಿಧಾನವಾಗಿ ಕರಗುತ್ತಲೇ ಇತ್ತು. ಜಲಪಾತದ ಕೆಳಗಿನಿಂದ ಮೇಲಿನ ದೃಶ್ಯ, ಮೇಲಿನಿಂದ ಕೆಳಗಿನ ದೃಶ್ಯ, ಎಲ್ಲ ಕಡೆಯಿಂದಲೂ ಕಾಣುವ ದೃಶ್ಯಗಳೆಲ್ಲವನ್ನೂ ನೋಡಿದೆವು. ಕಾಮನಬಿಲ್ಲಿನ ಸುರಸ ನಾಟ್ಯವೊಂದು ಅಲ್ಲಿ ಅತ್ಯಂತ ರಮಣೀಯವಾಗಿದ್ದಿತು. ಜಲಪಾತದ ನೀರಿನಲ್ಲಿ ಕರಗದೆ ಇರುವ ದೊಡ್ಡ ದೊಡ್ಡ ಮಂಜುಗಡ್ಡೆಗಳು ತೇಲುತ್ತಿದ್ದುದು ವಿಚಿತ್ರ ದೃಶ್ಯ! ಜಲಪಾತದ ನೀರು ಕಾರಂಜಿಯಂತಾಗಿ ಪಕ್ಕದ ಎಲೆ ಕಳಚಿದ ಕಡ್ಡಿಗಳಂತಿರುವ ಗಿಡಮರಗಳ ಮೇಲೆ ಹಾರಿ, ಅಲ್ಲಲ್ಲಿಯೇ ಹಿಮುಖಂಡಗಳಾಗಿ, ವಿಧವಿಧದ ರೂಪ ಪಡೆದು ಮಿನುಗುತ್ತಿದ್ದ ಆ ಸುಮನೋಹಾರಿ ಚಿತ್ರ ದೇವರ ಅತ್ಯುತ್ತಮ ಕಲಾ ಸೃಷ್ಟಿ. ಹಿಮದ ರತ್ನಗಂಬಳಿಯ ಮೇಲೆ ಮನಸಾರೆ ನಡೆದು ಆನಂದಿಸಿದೆವು. ನೀಲ ಆಕಾಶ,

ಹಿತವಾದ ಬಿಸಿಲು – ಇವುಗಳ ಕಲ್ಪನಾತೀತ ವಾತಾವರಣ ಅಂದು ಅಲ್ಲಿ ಮನೆ ಮಾಡಿದ್ದವು.

ಆದರೂ 'ಬಫೆಲೋ' (Buffalo) ಯಾವಾಗಲೂ ಬಹಳ ಶೀತವಂತೆ! ಜಲ ಪಾತದ ಇನ್ನೊಂದು ಕಡೆ ಕೆನಡಾ. ಆದರೆ ಕೆನಡಾಗೆ ಹೋಗುವ ಮನಸ್ಸಿಲ್ಲದಿದ್ದುದ ರಿಂದ ನಾವು ಆ ದೇಶದ ದರ್ಶನಲಾಭ ಪಡೆಯಲಿಲ್ಲ. ದೂರದಿಂದಲೇ ನೋಡಿದೆವು.

ನ್ಯೂಯಾರ್ಕಿಗೆ ಬಂದ ಮೇಲೆ ಪುನಃ ನಮ್ಮ ನೃತ್ಯ-ನಾಟಕದ ಕೆಲಸಕ್ಕೆ ಕೈ ಹಾಕಿದ್ದೇವೆ. ಬಾಕಿ ವಿಷಯ ಮತ್ತೊಮ್ಮೆ.....

ಇತಿ ನಿಮ್ಮ
ಅಮ್ಮ.

* * * * * *

ನ್ಯೂಯಾರ್ಕ್
15 – 1 – 1968

ಮುದ್ದು ಶಿವದೇವ್,

ಬಿಡುವಿಲ್ಲದ ಜೀವನದಲ್ಲೂ ಹೇಗಾದರೂ ಬಿಡುವು ಮಾಡಿಕೊಂಡು ನ್ಯೂಯಾ ರ್ಕಿನ ಪ್ರೇಕ್ಷಣೀಯ ಸ್ಥಳಗಳಿಗೆಲ್ಲಾ ಭೇಟಿ ಕೊಡುತ್ತಿದ್ದೇವೆ. ಮೊನ್ನೆ ಇಲ್ಲಿನ 'ಸ್ಕೂಲ್ ಆಫ್ ಪರ್ಫೊಮಿಂಗ್ ಆರ್ಟ್ಸ್' (School of Performing Arts) ಗೆ ಭೇಟಿ ಕೊಟ್ಟೆವು. ಅಲ್ಲಿ ಸುಮಾರು 200 ಕಲೋಪಾಸಕರು – ಗಂಡಸರು, ಹೆಂಗಸರು ಸಮಸಮನಾಗಿ – ತಾವು ಬಯಸಿದ ನೃತ್ಯಕಲೆಯಲ್ಲಿ ಉಚಿತ ತರಬೇತನ್ನು ಪಡೆ ಯುತ್ತಾರಂತೆ: ಆಧುನಿಕ ಬ್ಯಾಲೆ, ಶಾಸ್ತ್ರೀಯ ಬ್ಯಾಲೆ, ಭಾರತೀಯ ನೃತ್ಯ ತರಗತಿ ಗಳಿಗೆ ಹೋಗಿ ಅಲ್ಲಿನ ವಿದ್ಯಾರ್ಥಿಗಳು ಅಭ್ಯಾಸ ಮಾಡುವುದನ್ನು ನೋಡಿದೆವು. ಈ ಶಾಲೆಯ ವಿದ್ಯಾರ್ಥಿಗಳಿಗೆ ಕಲೆಯೇ ಅವರ ಜೀವನ ಧ್ಯೇಯ. ಬೆಳಿಗ್ಗೆ 9 ರಿಂದ ಮಧ್ಯಾಹ್ನ 3 ಘಂಟೆಯವರೆಗೆ ಇಲ್ಲಿನ ಗುರುಗಳೂ ವಿದ್ಯಾರ್ಥಿಗಳೂ ಎಡೆಬಿಡದೆ ಅಭ್ಯಾಸ ಮಾಡುತ್ತಾರೆ. ಮೂರು ವರ್ಷದ ಇಲ್ಲಿನ ವಿದ್ಯಾಭ್ಯಾಸವಾದ ಮೇಲೆ ಕಲಾ ವಿದರು ಶಾಲೆಯ ಹೊರಗೆ ಪ್ರದರ್ಶಿಸಿ, ಆ ಸಂಸ್ಥೆಗೆ ತಪ್ಪದೆ ಕೀರ್ತಿ ತರುತ್ತಾರಂತೆ.

ಭಾರತದಲ್ಲಿ ಉಚಿತ ಪಾಠ ಹೇಳಿಕೊಟ್ಟರೆ ಅದಕ್ಕೆ ಬೆಲೆಯೇ ಇರುವುದಿಲ್ಲ. ಉಚಿತ ತರಬೇತನ್ನು ಅಮೇರಿಕಾದಂತಹ ಶ್ರೀಮಂತ ದೇಶವಲ್ಲದೆ ಮತ್ತೆ ಯಾವ ದೇಶ ಕೊಡಬಲ್ಲುದು? ಆದರೆ ಇಲ್ಲಿನ ಈ ವಿದ್ಯಾರ್ಥಿಗಳು ಎಷ್ಟು ಶ್ರದ್ಧೆಯಿಂದ ಕಲೆಯನ್ನು ಕರ ಗತಮಾಡಿಕೊಳ್ಳುತ್ತಾರೆ! ಭಾರತೀಯ ನೃತ್ಯಗಳನ್ನೂ ಖಚಿತವಾಗಿ ಹೇಳಿಕೊಡುತ್ತಾರೆ

ಹೇಳಿಕೊಡುವವರು ಶ್ರೀ ಮತ್ತ್ರೇರ್ವೋರವರು. ಅವರು ಇಟಲಿಯ ಅಮೇರಿಕನ್ನರು. ಆದರೂ ಅವರು ಭಾರತಕ್ಕೆ ಬಂದು, ವಿದ್ಯೆ ಕಲಿತು, ಸ್ಫೂರ್ತಿ ಪಡೆದು ಹೋದ ವ್ಯಕ್ತಿಗಳು. ಅಮೇರಿಕಾದ ವಿದ್ಯಾರ್ಥಿಗಳಿಗೆ ತಕ್ಕಂತೆ ಪಾಠದ ರೀತಿಯನ್ನೇ ಮಾರ್ಪಡಿಸಿದ ವ್ಯಕ್ತಿ. ಅನೇಕಾನೇಕ ಕಲಾವಿದರನ್ನು ರಚಿಸಿದವರು. ನಿಮಗೆ ಅವರ ನೆನಪಿರಲಾರದು. ಅವರು ಭಾರತಕ್ಕೆ ಬಂದಿದ್ದಾಗ ನೀವಿನ್ನೂ ಚಿಕ್ಕಮಕ್ಕಳು. ಅವರಿಗೆ ನಿಮ್ಮನ್ನು ನೋಡಿದ ಸವಿನೆನಪಿದೆ........ಯಾವ ಕಲೋಪಾಸಕನೇ ಆಗಲಿ, ಕಲೆ ಕಲಿಯಲು ಈ ದೇಶದ ಸರ್ಕಾರ ಸುಲಭದ ಮಾರ್ಗವನ್ನು ತೆರೆದಿದೆ.

ನಮಗೆ ಇಲ್ಲಿನ ಅನುಭವಗಳನ್ನು ಬರೆಯುವುದು ತುಂಬಾ ಕಷ್ಟ. ಏಕೆಂದರೆ ಈ ಅನುಭವಗಳು ಬಹುಮುಖವಾದವು. ಒಮ್ಮೊಮ್ಮೆ ವರ್ಣಿಸಿ ಬರೆಯಲೂ ಶಕ್ತಿಲ್ಲ. ಬುದ್ಧಿಯೂ ಓಡುವುದಿಲ್ಲ. ಈ ವೈಭವ ಕಂಡು ಮೂಕಳಾಗುತ್ತೇನೆ! ವಿಮಾನಗಳು ನಗರದಲ್ಲಿನ ಬಸ್‌ಗಳಿದ್ದಂತಾಗಿದೆ. ಪ್ರಯಾಣಿಕರು ಬಸ್ ಹತ್ತುವಂತೆ 'ಕ್ಯೂ' ನಲ್ಲಿ ನಿಂತಿದ್ದು ಒಂದು ವಿಮಾನ ಭರ್ತಿಯಾದಲ್ಲಿ ಇನ್ನೊಂದನ್ನು ಸೇರುತ್ತಾರೆ. ಇಲ್ಲಿನ ಶ್ರೀಮಂತರು ಕಾರುಗಳ ಜೊತೆಗೆ ಒಂದೊಂದು ವಿಮಾನವನ್ನೂ ಇಟ್ಟುಕೊಳ್ಳುತ್ತಾರೆ. ರಸ್ತೆಗಳು ಎಷ್ಟು ಅಗಲವಾಗಿದೆಯೆಂದರೆ, ಅವನ್ನು ಇನ್ನೂ ಅಗಲ ಮಾಡುವುದನ್ನು ಕಂಡು 'ಅವಶ್ಯಕತೆಯೇನು' ಎಂದೆನಿಸುತ್ತದೆ ನಮಗೆ! ಸದ್ಯದಲ್ಲೇ ಇಲ್ಲಿ 'ಹೆಲಿಕಾಪ್ಟರು'ಗಳು ಎಲ್ಲೆಲ್ಲೂ ಓಡಾಡುವ ಸಂಭವವಿದೆ. ಇಲ್ಲಿನ ಎತ್ತರದ Pan-Am ' ಪೆನ್–ಎಮ್ ' ಕಟ್ಟಡದ ಮೇಲ್ಛಾವಣಿಯ ಮೇಲೆ 'ಹೆಲಿಕಾಪ್ಟರ್' ಒಂದು ಇಳಿದುದನ್ನು ನೋಡಿ ಆನಂದಪಟ್ಟೆವು. ಲೋಕದಲ್ಲೇ ಅತ್ಯಂತ ಎತ್ತರದ ಎಂಪೈರ್ ಬಿಲ್ಡಿಂಗ್' ನ್ನು (Empire Building) ನೋಡಿದೆವು. ಈ ಕಟ್ಟಡದಲ್ಲಿ 102 ಮಹಡಿಗಳಿವೆ. ಮೊದಲಿನ 80 ಮಹಡಿಗಳು ನಿಮಿಷಕ್ಕೆ 1000 ಅಡಿ ಮೇಲೆ ಹೋಗುವ 'ಲಿಫ್ಟ್' ಗಳಿಂದ (Lift) ಕೂಡಿವೆ. ಆಮೇಲೆ, ನ್ಯೂಯಾರ್ಕಿನ ಪಕ್ಷಿನೋಟವನ್ನು ನೋಡಲು ನಿಧಾನವಾಗಿ ಹೋಗಿ, ನಾವು ಬಯಸಿದ ಅಂತಸ್ತಿಗೆ ಹೋಗಬಹುದು. ಎಂತಹ ಕಟ್ಟಡ! ಎಂತಹ ಚಿರಸ್ಥಾಯಿ ಸ್ಮಾರಕ! ಅದರ ಮಹತ್ವ ನೋಡಿಯೇ ಅರಿಯಬೇಕು. ಬರೆದು ಸಾಧ್ಯವಿಲ್ಲ.

ನ್ಯೂಯಾರ್ಕಿನ ಈ ವಿಶಿಷ್ಟ ಜಾಗಗಳನ್ನು ನೋಡಿದರೆ, ನಾವು ಭಾರತದಲ್ಲಿದ್ದಾಗ ಕಲ್ಪಿಸಿದ ನ್ಯೂಯಾರ್ಕ್ ಇದೇ ಎನಿಸುತ್ತದೆ. ನ್ಯೂಯಾರ್ಕ್‌ನ ಕೆಲವು ಭಾಗಗಳು ಶುಚಿಯಾಗಿದ್ದು ಸ್ವಾರಸ್ಯಕರವಾಗಿರುತ್ತವೆ. ಆದರೆ ಸಾಮಾನ್ಯವಾಗಿ ಇಲ್ಲಿನ ರಸ್ತೆಗಳು ಗಲೀಜು. ಕಟ್ಟಡಗಳೂ ಅಷ್ಟೆ. ಮಂಜು ಕರಗಿ, ಮಣ್ಣು ಬೆರೆತು, ದಾರಿಯೆಲ್ಲ ನರಕ! ಅಲ್ಲದೆ ಸಾಕು ಪ್ರಾಣಿಗಳ ಮಲವಿಸರ್ಜನೆ. "ನಾಯಿಯನ್ನು ಹಿಡಿತದಲ್ಲಿಡಿ" (Curb your Dog) ಎಂಬ ಸೂಚಿ ಹಲಗೆಗಳು ಎಲ್ಲೆಲ್ಲೂ ಇವೆ!

"ವೆಸ್ಟ್ ಸೈಡ್ ಸ್ಟೋರಿ" (West Side Story) ಯನ್ನು ಮಾಡಿರುವ ಡೊನಾಲ್ಡ್ ಮೆಕ್ಯಾಲ್ (Donald Mckayle) ಎಂಬ ನೀಗ್ರೋ ರಚನಕಾರರ ಆಧುನಿಕ ಬ್ಯಾಲೆ ನೋಡಿದೆವು. ಆಧುನಿಕ ಬ್ಯಾಲೆಯಲ್ಲಿರುವ ಚಲನೆಗಳನ್ನು ನೋಡಿದರೇ ದಿಗಿಲಾಗುತ್ತದೆ. ಕಲಾವಿದರು ಒಂದು ನಿಮಿಷವೂ ಸ್ತಬ್ದರಾಗಿರದೆ ಸದಾ ಚಲನೆ ಮಾಡುತ್ತಲೇ ಇರುತ್ತಾರೆ. ನಮಗೆ ನೋಡಿಯೇ ಆಯಾಸವಾಗುತ್ತದೆ.

ಮ್ಯಾಡಿಸನ್ ಚೌಕದ ತೋಟದಲ್ಲಿ (Madison Square Gardens) 1968ರ 'ಐಸ್ ಫೋಲಿಸ್' (Ice follies) ನೋಡಿದೆವು. ಅಬ್ಬಬ್ಬಾ! ಅದೊಂದು ಸ್ವರ್ಗಾನುಭವ!! ನಿಜವಾದ ಕನಸಿನ ಚಿತ್ರ. ವಿನೋದವನ್ನು ಕೊಡಲು ಇನ್ನಾವ ವಿಷಯವೂ ಅಷ್ಟು ಉತ್ತಮ ಮಟ್ಟಕ್ಕೆ ತಲುಪಲಿಲ್ಲವೆನ್ನಬೇಕು. ಮಂಜು, ಹಿಮವರ್ಷ, ಮಳೆ–ಎಲ್ಲವನ್ನೂ ಅವರು ನಮ್ಮ ಕಣ್ಣುಮುಂದೆಯೇ ರಚಿಸಿದರು. ಕಣ್ಣು ಕುಕ್ಕುವಂತಹ ಥಳಕಿನ ಉಡುಪು – ವೇಷ ಭೂಷಣಗಳು, ಪ್ರೇಕ್ಷಣೀಯ ದೃಶ್ಯಗಳು, ಘನ ಗಾಂಭೀರ್ಯತೆ. ಹಾಗೂ ಮಧ್ಯೆ ಮಧ್ಯೆ ಹಾಸ್ಯದ ಮಾತುಕತೆಗಳು. ಕೆಲವು ಜಗತ್ಪ್ರಖ್ಯಾತ ಮಂಜಿನಾಟದ ತಾರೆಗಳನ್ನು (Skating) ನೋಡಿದೆವು. ಎಷ್ಟು ಲಾಲಿತ್ಯ, ಸೌಂದರ್ಯ, ಅಟ್ಟಹಾಸ–ಅವರ ಚಲನೆಗಳಲ್ಲಿ! ನನಗೆ ಆ ವಿನೋದ ಈಗಲೂ ಕನಸಾಗಿಯೇ ಇದೆ. ನಾನು ಆ ಅನುಭವದಿಂದ ಇನ್ನೂ ಎಚ್ಚೆತ್ತಿಲ್ಲ – ಮಕ್ಕಳೇ....

ಇತಿ ನಿಮ್ಮ
ಅಮ್ಮ.

* * * * * *

ನ್ಯೂಯಾರ್ಕ್
27 – 1 – 1968

ಮುದ್ದು ಮಕ್ಕಳೇ,

ನಿನ್ನೆ ನಾರ್ತ್ ಕೆರೊಲ್ಯಾನಾದ ಶಾರ್ಲಟ್ ನಗರದಿಂದ (North Carolina-Charlotte) ಹಿಂತಿರುಗಿದೆವು. Air-India ದವರು ಅಲ್ಲಿ ನಮ್ಮ ನೃತ್ಯ ಪ್ರದರ್ಶನವನ್ನು ಏರ್ಪಡಿಸಿದ್ದರು. ಅಲ್ಲಿನ ಯುವ ವಿದ್ಯಾರ್ಥಿಗಳು ಬರುವ ವರ್ಷ ಭಾರತಕ್ಕೆ ಹೆಚ್ಚಿನ ಓದಿಗೆ ಹೋಗುವವರಿದ್ದಾರಂತೆ. ನಮ್ಮ Air-India ಮೂಲಕ ಅವರ ಪ್ರಯಾಣವಂತೆ! ಅವರು ನಮ್ಮ ದೇಶಕ್ಕೆ ಹೋಗುವ ಮುನ್ನ ನಮ್ಮ ದೇಶದ ಕಲೆ, ಸಂಸ್ಕೃತಿಯ ಪರಿಚಯ ಮಾಡಿಕೊಡಲು, ನಮ್ಮ ನೃತ್ಯ ಪ್ರದರ್ಶನದ ಏರ್ಪಾಡು! ನ್ಯೂಯಾರ್ಕ್‌ನಿಂದ ವಾಷಿಂಗ್ಟನ್‌ಗೆ (Washington) ವಿಮಾನ; ಆಮೇಲೆ ಶಾರ್ಲಟ್‌ಗೆ ಹಿಮದ ಜಾರುಗುಪ್ಪೆಯ ರಸ್ತೆಯ ಮೇಲೆ ಕಾರಿನಲ್ಲಿ ಪ್ರಯಾಣ. ಚಕ್ರ

ಗಳು ಜಾರಿದಂತೆ, ವಾಹನ ನಿಧಾನವಾಗಿ ರಸ್ತೆಯ ಮೇಲೆ ಅಡ್ಡಾದುಡ್ಡಿ ಚಲಿಸಿ 4 ಗಂಟೆ ಕಾಲ ತಡವಾಯಿತು. Air-India ದವರು ನಮಗೆ ಅಕ್ಷರಶಃ ರಾಜವೈಭವದ ಸುಪ್ಪತ್ತಿಗೆಯಲ್ಲಿಯೇ ಮೆರೆದಾಡಿಸಿದರು. ಅಮೇರಿಕದ ಕುಬೇರವರ್ಗದ ಜೀವನ ಕ್ರಮ ನಮಗೆ ಆಗ ಅನುಭವವಾಯಿತು; ಆ ಸಿರಿವಂತಿಕೆಯ ಸೊಬಗನ್ನು ನಾನು ವರ್ಣಿಸಲು ಖಂಡಿತ ಅಸಾಧ್ಯವೆನ್ನಿ! ಈ ದೇಶದ ಶ್ರೀಮಂತ-ಅತಿ ಶ್ರೀಮಂತ-ಅತ್ಯಂತ ಶ್ರೀಮಂತ ಜನರ ಜೀವನವನ್ನು ಕಂಡೆವು. ನಮ್ಮ ವಸತಿಗೆಂದು ಒಂದು ಅರಮನೆಯಂತಹ ಭವ್ಯ ಭವನದ ಒಂದು ಭಾಗವನ್ನೇ ಬಿಟ್ಟುಕೊಟ್ಟರು. ಕೋಣೆಯಲ್ಲಿ ವರ್ಣರಂಜಕ ಟಿ. ವಿ. ಸೌಲಭ್ಯವಿತ್ತು. ನೋಡುತ್ತಾ ಕುಳಿತರೆ........ಕುಳಿತರೆ........ಕುಳಿತಿರುವುದೇ! ಈ ಬಣ್ಣದ ಟಿ. ವಿ. ಗಳ ಪರಿಣಾಮವಾಗಿ ಈ ದೇಶದ ಚಲನಚಿತ್ರ ಮಂದಿರಗಳಿಗೆ ಜನಸಂದಣಿ ಅಷ್ಟಿಲ್ಲ. ಮನೆಯಲ್ಲಿ ಬೆಚ್ಚನೆ ಕುಳಿತು ಬೇಕಾದ ವಿನೋದ ನೀಡುವ ಕಾಮಧೇನು ಇರುವಾಗ, ಚಳಿಯಲ್ಲಿ ಹೊರಗೆ ಹೋಗುವ ಪ್ರಯಾಸದ ಕಲ್ಪನೆಯಾದರೂ ಏಕೆ? ಈ ಸಂದರ್ಭದ ಶಾರ್ಲಟ್‌ನ ನಮ್ಮ ವೈಭವದ ಜೀವನ ನಿಜವೇ ಸುಳ್ಳೇ ಎಂಬ ಕಲ್ಪನೆಯ ಸುಳಿಯಲ್ಲಿ ನಾನು ಕೆಲವೊಮ್ಮೆ ಸಿಲುಕುತ್ತಿದ್ದೆ.

ದಕ್ಷಿಣ ಅಮೇರಿಕನ್ನರ ಆತಿಥ್ಯ ಹೆಸರುವಾಸಿಯಾದುದು. ಅವರು ನಮ್ಮ ಪ್ರದರ್ಶನವನ್ನು ಬಹಳ ಮೆಚ್ಚಿದರು. ಪ್ರೇಕ್ಷಕರು ಭಾರತ ಪ್ರವಾಸ ಅದೆಷ್ಟು ಬೇಗ ನಾವು ಮಾಡಿಯೇವೋ ಎಂದು ಉತ್ಸುಕರಾಗಿ, ಅವರು ಕಾಣಲಿರುವ ಭವ್ಯ ಭಾರತದ ಬಗ್ಗೆ ಹೊಂಗನಸುಗಳನ್ನು ಕಾಣತೊಡಗಿದರು.

ನ್ಯೂಯಾರ್ಕ್‌ನ ನಮ್ಮ ಕೆಲಸ ಭರದಿಂದ ಸಾಗುತ್ತಿದೆ. ಬೆಳಿಗ್ಗೆಯಿಂದ ರಾತ್ರಿ ಹನ್ನೊಂದು ಗಂಟೆಯುವರೆವಿಗೂ ಅವಿರತ ಶ್ರಮ!....ಭಾರತಕ್ಕೆ ಹಿಂದಿರುಗಲು ಎರಡು ಟಿಕೇಟಿನ ಹಣ ಸಂಪಾದಿಸ ಬೇಕಲ್ಲವೇ? ನ್ಯೂಯಾರ್ಕ್‌ನಲ್ಲಿ ನೆಲೆಸಿರುವ ಕೆಲವು ನೃತ್ಯ ಕಲಾವಿದರು, ನೃತ್ಯ ಶಿಕ್ಷಕರು ನಮ್ಮಿಂದ ಕೆಲವು ನೃತ್ಯಗಳನ್ನು ಕಲಿಯುತ್ತಿದ್ದಾರೆ.

'ಬುದ್ಧೋದಯ'ದ ರಚನೆ ಆಯಿತು. ಆದರೆ ಅದನ್ನು ತಿದ್ದುವ ಕೆಲಸ ಎಂದಿಗೆ ಮುಗಿಯುವುದೋ? ನಮ್ಮ ನಮ್ಮಲ್ಲೇ ಅದನ್ನು ಮತ್ತೂ ಮತ್ತೂ ವಿಮರ್ಶಿಸಿ ಆದರ್ಶ ನೃತ್ಯ-ನಾಟಕವಾಗುವಂತೆ ಹೆಣಗಾಡುತ್ತಿದ್ದೇವೆ. ತನುಮನವೆರಡೂ ಭರಿಸಲಾರದಷ್ಟು ಶ್ರಮ........ಆಯಾಸ. ಇಲ್ಲಿನ ಜನ 'ಬುದ್ಧನೂ ಕುಣಿಯಬೇಕು' ಎನ್ನುತ್ತಾರೆ. ನಮ್ಮ ಮನಸ್ಸಿಗೆ ಅದು ಹಿತವಿಲ್ಲ. ಅವರನ್ನು ನಮ್ಮ ವಿಚಾರ ಸರಣಿಗೆ ಎಳೆಯಬೇಕಾದರೆ ಎಷ್ಟೋ ವಾಗ್ವಾದವಾಗುತ್ತದೆ. ನಾವು ನಮ್ಮ ಮನಸ್ಸು ಒಪ್ಪಿದಂತೆ ಮಾಡುತ್ತೇವೆಯೇ ವಿನಹ ಅವರ ಬಲೆಗೆ ಬೀಳುವುದಿಲ್ಲ. ಬುದ್ಧನು ಪಂಚೇಂದ್ರಿಯಗಳ ಆಕರ್ಷಣೆಗೆ ಎಚ್ಚೆತ್ತರೆ ಕಥೆಯು ಬಿಗಿ ಹೋಗುತ್ತದೆ. ಅವರ

ಆಧುನಿಕ ಬ್ಯಾಲೆಗಳಲ್ಲಿ ಈ ವಿಷಯಗಳನ್ನೆಲ್ಲಾ ಬಹಳ ಅಶ್ಲೀಲವಾಗಿ ತೋರಿಸುತ್ತಾರೆ. ಆ ತರಹ ನಾವು ಅಳವಡಿಸಿಕೊಳ್ಳಬೇಕೆ? ನಮ್ಮ ಭಾರತೀಯ ನೃತ್ಯಗಳಲ್ಲಿ ಶೃಂಗಾರ ರಸಭಾವ ಬೇಕಾದಷ್ಟು ಇದ್ದರೂ ಮೈಸ್ಪರ್ಶ, ಆಲಿಂಗನ ಇತ್ಯಾದಿ ಯಾವುದೂ ಇಲ್ಲದಿರುವುದೇ ಕಲೆಯ ವೈಶಿಷ್ಟ್ಯ. "ಅಭಿನಯ ಅರ್ಥವಾಗುವುದಿಲ್ಲ, ಅಭಿನಯ ಬೇಡ. ಕುಣಿತ ಮಾತ್ರ ಹಾಕಿ" ಎನ್ನುತ್ತಾರೆ........ನಿಜ. ಭಾರತೀಯ ಶಾಸ್ತ್ರೀಯ ನೃತ್ಯಾಭಿನಯವನ್ನು ಅರ್ಥಮಾಡಿಕೊಳ್ಳಲು ಸಂಸ್ಕಾರ, ಸಹವಾಸದ ಅವಶ್ಯಕತೆಯಿದೆ. ಅದು ಸಂಪ್ರದಾಯಬದ್ಧ ಕಲೆ. ಅರ್ಥಮಾಡಿಕೊಳ್ಳ ಬಯಸುವವರು ಸ್ವಲ್ಪ ಕಷ್ಟ ಪಡಲೇಬೇಕು. ಅದು ಅಷ್ಟು ಸುಲಭವಾಗಿದ್ದರೆ ಕಟ್ಟುಪಾಡುಗಳಿಗೊಳಪಟ್ಟು ಕಲೆಯೆನಿಸಿಕೊಳ್ಳುವುದೇ? ಎಲ್ಲ ಲಲಿತ ಕಲೆಗಳಲ್ಲಿಯೂ ದರ್ಶಕನ ಕಲ್ಪನಾ ಚಾತುರ್ಯತೆಗೆ ಅವಕಾಶವಿರುತ್ತದೆ. ಕಲಾಕಾರರು ಮನೋಭಾವಕ್ಕೆ ಸರಿಯಾಗಿ ನರ್ತಿಸುತ್ತಾರೆ. ನಮ್ಮ ಕಲೆಯ ಸೌಂದರ್ಯೋಪಾಸನೆಯ ಮೂಲ ಸ್ವಾರಸ್ಯ ಈ ಸ್ವಾತಂತ್ರ್ಯದಲ್ಲಿದೆ. ನಮಗೆ ಆಧುನಿಕ ಅಥವಾ ಶಾಸ್ತ್ರೀಯ ಬ್ಯಾಲೆ ಕೆಲವೊಮ್ಮೆ ಅರ್ಥವಾಗದಿದ್ದರೂ, ಪ್ರಯತ್ನಿಸಿ ತಿಳಿದುಕೊಳ್ಳುವುದಿಲ್ಲವೇ? ಅಂತೂ ಇಂಡೋ – ಅಮೇರಿಕನ್ ಡ್ಯಾನ್ಸ್ ಕಂಪೆನಿಯವರು (Indo-American Dance Company) ಭಾರತೀಯ ನೃತ್ಯ-ನಾಟಕವನ್ನು ಅಮೇರಿಕನ್ ಅಭಿರುಚಿಗೆ ಪ್ರದರ್ಶಿಸಬೇಕು ಎನ್ನುತ್ತಾರೆ ದೈವೇಚ್ಛೆಯಿದ್ದರೆ ನಾವು ಕೈಗೊಂಡ ಕಾರ್ಯ ಯಶಸ್ವಿಯಾಗುತ್ತದೆ.

ಇಲ್ಲಿನ ಕಾಲೇಜು ಒಂದರಲ್ಲಿ ನಮ್ಮ ನೃತ್ಯ ಉಪನ್ಯಾಸವನ್ನು ಏರ್ಪಡಿಸಿದ್ದಾರೆ. ಇಲ್ಲಿನ ಭಾರತಿಯಾರ್ ಸಂಘದ ಭಾರತೀಯರು ನಮ್ಮ ನಾಟ್ಯ ಪ್ರದರ್ಶನವನ್ನು ಏರ್ಪಡಿಸಿದ್ದಾರೆ. ಈ ನಮ್ಮ ನೃತ್ಯರಂಗದ ಕೆಲಸವಲ್ಲದೆ ಮನೆಯಲ್ಲಿ ಅಡಿಗೆ ಪಾತ್ರೆ ತೊಳೆಯುವುದು, ಸಾಮಾನು ತರುವುದು, ಬಟ್ಟೆ ಒಗೆಯುವುದು ಮುಂತಾದ ಕೆಲಸಗಳೂ ಇದ್ದು ಒಂದು ನಿಮಿಷ ಬಿಡುವು ಇರುವುದಿಲ್ಲ. ಇಲ್ಲಿನ ಜೇಡರ ಬಲೆಯಲ್ಲಿ (Rat Race) ಸಿಕ್ಕಿ ಹಾಕಿಕೊಂಡಿದ್ದೇವೆ........ಬಿಡಿಸಿಕೊಳ್ಳಲಾರೆವು!

ಇತಿ ನಿಮ್ಮ
ಅಮ್ಮ.

* * * * *

ನ್ಯೂಯಾರ್ಕ್
28 – 1 – 1968

ಮುದ್ದು ಜಯದೇವ್,

ನ್ಯೂಯಾರ್ಕ್ ಒಂದು ಪ್ರಚಂಡ ನಗರ! ಅತ್ಯದ್ಭುತವಾದದ್ದು! ಮೊನ್ನೆ 39ನೆಯ ಮಹಡಿಯಲ್ಲಿ ಔತಣವನ್ನು ಮಾಡುತ್ತಿರುವಾಗ ಕಿಟಕಿಯಿಂದ ಟ್ವಿನ್,

ಲೈಫ್, ನ್ಯೂಸ್‌ವೀಕ್ (Time-Life-News-Week) ಕಟ್ಟಡಗಳನ್ನು ನೋಡಿದೆವು. ಆ ದೃಶ್ಯ ಬಹಳ ವರ್ಣನೀಯವಾದುದು. ಎಲ್ಲೆಲ್ಲೂ ಆಕಾಶವತ್ತ ಕೈಚಾಚಿ ತಲೆಯೆತ್ತಿ ನಿಂತಿರುವ ಕಟ್ಟಡಗಳು. ಕಟ್ಟಡಗಳಿಗೆ ಗಾಜಿನ ಕಿಟಕಿಗಳು ದೀಪವು ಪ್ರಕಾಶಮಾನವಾಗುವಾಗ ಬೆಳಕು ಗಾಜಿನಲ್ಲಿ ಪ್ರಜ್ವಲಿಸಿ ಇಂದ್ರಲೋಕದಂತೆ ಕಂಗೊಳಿಸುತ್ತದೆ. ಎಷ್ಟೇ ಎತ್ತರದಲ್ಲೂ ನೀರಿನ ಸೌಕರ್ಯ, ಕೇಂದ್ರಿತ ಶಾಖ ನಿಯಂತ್ರಣ, ಮಾನವನಿಗೆ ಬೇಕಾದ ಎಲ್ಲಾ ಸೌಕರ್ಯಗಳನ್ನೂ ಒದಗಿಸಿರುವುದೇ ಆಶ್ಚರ್ಯ.

ಇಲ್ಲಿನ ತಾಂತ್ರಿಕ ವಿಜ್ಞಾನ, ಶಾಸ್ತ್ರ ವಿಜ್ಞಾನ, ಔದ್ಯೋಗಿಕ ವಿಜ್ಞಾನ ಮತ್ತು ವಾಸ್ತುಶಿಲ್ಪಗಳು ಎಣಿಕೆಗೆ ಮೀರಿ ಮುನ್ನಡೆದಿದೆ– ಈ ಸಿರಿತನದ ರಾಷ್ಟ್ರ ಅಮೇರಿಕದಲ್ಲಿ. ನಾವು ಮೊನ್ನೆ ರಾಕ್‌ಫೆಲ್ಲರ್ ಕೇಂದ್ರಕ್ಕೆ (Rockefeller Centre) ಹೋಗಿ ಅತಿ ಮೇಲಿನ ಮಹಡಿಯ 'ಕಾಮನ ಬಿಲ್ಲಿ' ನಲ್ಲಿ (Rainbow Room) ಕುಳಿತು ಒಂದು ಪಾನೀಯವನ್ನು ಕುಡಿಯುತ್ತಾ ನಗರವೆಲ್ಲ ರಾತ್ರಿಯ ಬೆಳಕಿನಲ್ಲಿ ಮಿನುಗುವುದನ್ನು ಕಂಡು ಆನಂದಪಟ್ಟೆವು. ಒಳಗೆ ಹೋಗುವಾಗ ಅಲ್ಲಿನ ದ್ವಾರಪಾಲಕನೊಬ್ಬನು ಪತಿಯವರು ತೊಟ್ಟ ಶೆರವಾನಿ ಕಂಡು "ದಯವಿಟ್ಟು ಕ್ಷಮಿಸಿ, ನಿಮಗೆ ಈ ಉಡುಪಿನಲ್ಲಿ ಒಳಗೆ ಪ್ರವೇಶವಿಲ್ಲ" ಎಂದನು. ಪತಿಯವರು ಅದಕ್ಕೆ "ದಯವಿಟ್ಟು ಕ್ಷಮಿಸಿ, ನನ್ನ ಈ ಉಡುಪು ನಮ್ಮ ಭಾರತ ದೇಶದ ರಾಷ್ಟ್ರೀಯ ಉಡುಪು. ಈ ಉಡುಪನ್ನು ತೊಟ್ಟು ನಾನು ನಿಮ್ಮ ದೇಶದ ಅಧ್ಯಕ್ಷರವರನ್ನು ಕೂಡ ಭೇಟಿಯಾಗಬಲ್ಲೆನು" ಎಂದ ಮೇಲೆ ಆತನು ಕ್ಷಮೆ ಕೇಳಿ, ಆದರದಿಂದ ಒಳಗೆ ಸ್ವಾಗತಿಸಿ ಕಿಟಕಿಯ ಹತ್ತಿರವಿರುವ ಉತ್ತಮ ಸ್ಥಳಗಳನ್ನು ಕೊಟ್ಟು ಮುತುವರ್ಜಿಯಿಂದ ಸತ್ಕಾರ ಮಾಡಿಸಿದನು.

ಇಲ್ಲಿ ಕಟ್ಟಡದ ಎಷ್ಟೇ ಎತ್ತರದ ಸ್ಥಳಕ್ಕೆ ಹೋದರೂ ಪ್ರಕೃತಿಯ ಸಂಪರ್ಕವಿರುತ್ತದೆ. ಹೇಗೆ ಹೇಗೋ ಒಂದು ಉದ್ಯಾನವನ್ನೇ ಇಲ್ಲಿನ ಜನರು ಒದಗಿಸುವುದು ನಿಜವಾಗಿ ಮೆಚ್ಚತಕ್ಕ ವಿಷಯ. ರಾಕ್‌ಫೆಲರ್ ಕೇಂದ್ರದ ದರ್ಶನ ಮಾಡುವಾಗ ಲಿಫ್ಟ್‌ನಲ್ಲಿ ಮಧ್ಯದ ಮಹಡಿಯೊಂದರಿಂದ ಜನರಿಗೆ ಆಚೆಗೆ ಹೋಗಲು ಅವಕಾಶ ಕೊಡುತ್ತಾರೆ. ಅಲ್ಲಿ ವಿಹಾರಕ್ಕಾಗಿ ಇರುವ ಎತ್ತರದ ಜಗುಲಿಯ ಮೇಲೆ ಬಂದರೆ ನಿಸರ್ಗವನ್ನೇ ರಚಿಸಿರುವ ಕಾರಣ ನಾವು ಕೆಳಗಿನ, ನೆಲದ ಮಟ್ಟದಲ್ಲಿದ್ದೇವೆಂಬ ಭಾವನೆಯಾಗುತ್ತದೆ. ಕಾರಂಜಿಗಳು, ಹುಲ್ಲಿನ ಮೈದಾನಗಳು, ಗಿಡ, ಮರ, ಬಳ್ಳಿ, ಹೂಗಳಿಂದ ತುಂಬಿ ಉದ್ಯಾನವನವಾಗಿ ಕಂಡು ಬರುತ್ತದೆ. ಆದರೆ ಕೆಳಗೆ ನೋಡಿದರೆ ಮಾತ್ರ........ತಲೆ ತಿರುಗುವ ಎತ್ತರ. ನಿಸರ್ಗವನ್ನು ಆ ಎತ್ತರಕ್ಕೆ ತಂದ ವ್ಯಕ್ತಿಗಳು – ಇವರು. ಇಲ್ಲಿನ ಜನರು ಈಗ ಆಕಾಶದಲ್ಲಿ ಜಾಗವನ್ನು ಕೊಂಡುಕೊಳ್ಳುತ್ತಿದ್ದಾರೆ! ಆರು ತಿಂಗಳ ಅನಂತರ ಅವರಿಗೆ ಬೇಕಾದ ಮನೆ ಆಕಾಶದಲ್ಲಿ ಸಿದ್ಧವಾಗಿರುತ್ತದೆ. ರಸ್ತೆಗಳೂ, ಸೇತುವೆಗಳೂ ಒಂದರ ಮೇಲೊಂದು ಆಕಾಶದಲ್ಲೇ ಕಟ್ಟಲ್ಪಟ್ಟಿದೆ. ಆಕಾಶವನ್ನೂ ಬಹುಮುಖವಾಗಿ ಉಪಯೋಗಿಸುವ ಜನ ಇವರು........

ಮೊನ್ನೆ ನ್ಯೂ ಜೆರ್ಸಿ (New Jersey) ಎಂಬ 15 ಮೈಲು ದೂರವಿರುವ ಗ್ರಾಮವೊಂದಕ್ಕೆ ಸ್ನೇಹಿತರ ಕರೆಯ ಮೇರೆಗೆ ಹೋದೆವು. ಅಲ್ಲಿ ನದಿಯ ನೀರೆಲ್ಲ ಮಂಜುಗಟ್ಟಿ ಘನವಾಗಿ ಬಿಟ್ಟಿದ್ದ ಕಾರಣ ಹಿಮಕ್ರೀಡೆಗೆ (Skating) ಉಪಯೋಗಿಸುತ್ತಿದ್ದರು! ಬೇಸಿಗೆಯ ಕಾಲದಲ್ಲಿ ಅದೇ ನದಿ ದೋಣಿಗಳ ಚಲನೆಗೆ (Sailing) ಪ್ರಸಿದ್ಧಿಯಂತೆ! ನಮಗೆ ಅದು ವಿಚಿತ್ರವಾಗಿ ಕಂಡಿತು. ನಮ್ಮ ಸ್ನೇಹಿತರ ಮನೆ ಕಾಡಿನ ಮಧ್ಯದಲ್ಲಿದ್ದು ಉತ್ತುಂಗ ವೃಕ್ಷಗಳೂ, ಝರಿಗಳೂ ಸುತ್ತುಗಟ್ಟಿದ್ದವು. ಬಹಳ ಸುಂದರವಾದ ಸ್ಥಳ. ಛಳಿಯನ್ನು ತಡೆಯಲು ಹೊರಗಿನಿಂದ ಕಡಿದು ತರುವ ಮರಗಳನ್ನೇ ಉರಿಸಿ ಕೋಣೆಯನ್ನು ಬೆಚ್ಚಗಿರಿಸಿದ್ದರು. ಅಮೇರಿಕದಲ್ಲೆಲ್ಲಾ ಸಾಮಾನ್ಯವಾಗಿ ಕೇಂದ್ರೀಯ ಶಾಖ ನಿಯಂತ್ರಣ ವ್ಯವಸ್ಥೆ ಇದ್ದೇ ಇರುತ್ತದೆ. ಇಂಗ್ಲೆಂಡಿನಲ್ಲಿಯಾದರೆ ಎಲ್ಲಾ ಕಡೆಯೂ ಇರುವುದಿಲ್ಲ ಮತ್ತು ಹೆಚ್ಚಾಗಿ 'ಗ್ಯಾಸ್' ನ ಅನುಕೂಲ ಮಾಡಿಕೊಳ್ಳುತ್ತಾರೆ. ಇಲ್ಲವೇ ಪ್ರಜ್ವಲಿಸುವ ಅಗ್ನಿದೇವನೇ ರಕ್ಷೆ. ನ್ಯೂ ಜೆರ್ಸಿಯಲ್ಲಿ ಅಂದು ಕಾಡುಮರದ ದಿಮ್ಮಿಗಳನ್ನು ಧಗಧಗನೆ ಉರಿಸುವ ಆ ದೃಶ್ಯ ಬಹು ಅಂದವಾಗಿತ್ತು.

ನಮ್ಮ ಸ್ನೇಹಿತರ ಆತಿಥ್ಯವನ್ನು ಪಡೆದು ರೈಲು ಮಾರ್ಗವಾಗಿ ಹಿಂದಿರುಗಿದೆವು. ಅಂದು ಈ ದೇಶದಲ್ಲಿ ಇದೇ ನಮ್ಮ ಮೊದಲ ರೈಲು ಪ್ರಯಾಣ. ಇಲ್ಲಿ ರೈಲಿನಲ್ಲಿ ಜನರು ಹೋಗುವುದೇ ಕಡಿಮೆ. ಓಡಾಡುವುದು ಕಾರು ಇಲ್ಲವೇ ವಿಮಾನಗಳಲ್ಲಿ ಮಾತ್ರ. ಸರಕುಗಳನ್ನು ಸಾಗಿಸುವುದಕ್ಕೆ ಮಾತ್ರ ರೈಲಿನ ಅಗತ್ಯ....ನಾವು ಇಬ್ಬರೂ ಅಮೂಲ್ಯ ಸರಕುಗಳು ತಾನೇ ?........

ಆಗಾಗ ಬ್ರಾಡ್ವೇಗೆ (Broadway) ಹೋಗುತ್ತೇವೆ. ಅತ್ಯುತ್ತಮ ಮನೋರಂಜನೆಯ ಟಿಕೇಟು ಸಿಗದಿದ್ದರೆ ಸಾಧಾರಣ ಸ್ಥಳಗಳಿಗೆ ಭೇಟಿ ಕೊಡುತ್ತೇವೆ. ಜಾಸ್ ಸಂಗೀತ (Jazz) ಬೆಳಗಿನವರೆಗೆ ಇರುತ್ತದೆ. ಈ ಜಾಸ್‌ನ ಸಂಗೀತಕ್ಕೆ ಗೋಗೋ (Go-Go) ಹುಡುಗಿಯರು ನಿಶ್ಶಂಖಲರಾಗಿ ಕುಣಿಯುವುದನ್ನೂ ನೋಡಿದೆವು' ಗ್ರೀನ್ ವಿಚ್ ವಿಲೇಜ್, ಚೈನಾ ಟೌನ್ (Greenwich Village, China Town) ಎಲ್ಲವನ್ನೂ ನೋಡಿದೆವು. ಆದರೂ ನಮಗೆ ನ್ಯೂಯಾರ್ಕ್ ನಗರದ ಪರಿಚಯು ಇನ್ನೂ ಆಗಿಲ್ಲ ಎನ್ನಬೇಕು. ಪೂರ್ಣ ಪರಿಚಯ ಆಗುವುದೇ ಇಲ್ಲವೇನೋ! ನ್ಯೂಯಾರ್ಕಿನ ವಿವಿಧ ರೂಪಗಳನ್ನು ಎಷ್ಟು ನೋಡಲು ಸಾಧ್ಯವಿದೆಯೋ, ಅಷ್ಟು ನೋಡಲು ಪ್ರಯತ್ನಿಸುತ್ತೇವೆ.

ಇಲ್ಲಿನ ಭೂಗರ್ಭ ಮಾರ್ಗಗಳನ್ನು ಉಪಯೋಗಿಸಲು ಕಲಿತಿದ್ದೇವೆ. ಈ ಮಾರ್ಗಗಳಲ್ಲಿ ಪ್ರಯಾಣ ಮಾಡುವಾಗ ಧೂಮಪಾನ ಮಾಡಬಾರದು. ಸಾಕು ಪ್ರಾಣಿಗಳನ್ನು ತರಕೂಡದು. ಲಂಡನ್ನಿನಲ್ಲಿದ್ದಂತೆ ಇಲ್ಲಿನ ಈ ಭೂತಳ ಮಾರ್ಗಗಳು ಗೆಲು

ವಾಗಿರುವುದಿಲ್ಲ. ಐದಾರು ನಿಲ್ದಾಣಗಳಿದ್ದು ಒಂದರ ಮೇಲೊಂದು ರೈಲು ಹೋಗುತ್ತಿರುತ್ತವೆ. ಅವು ಹೋಗುವಾಗ........ಅಬ್ಬಾ! ಕಿವಿ ಬಿರಿಯುವಂತಹ ಶಬ್ಧ! ಬಹುಶಃ ಇದೇ ಕಾರಣದಿಂದಿರಬಹುದು ಇಲ್ಲಿನ ಜನರಿಗೆ ನರಗಳ ದೌರ್ಬಲ್ಯ ಹೆಚ್ಚಾಗಿರುವುದು........ಈ ಪಾತಾಳಗಾಮಿನಿಗಳು ಹಳೆಯ ರೈಲು ಗಾಡಿಗಳು, ಒಂದೆಡೆಯಿಂದ ಮತ್ತೊಂದು ಕಡೆ ಹೋಗಲು ಒಂದೇ ದರ. ಜನರನ್ನು ಹತ್ತಿ ಇಳಿಸಲು ಮೆಟ್ಟಿಲುಗಳ ಚಲಿಸುವ ಸರಣಿ ಇಲ್ಲ. ಜನರೇ ಮೆಟ್ಟಿಲುಗಳನ್ನು ಹತ್ತಿ ಇಳಿಯಬೇಕು. ಅಂಗಡಿ ಸಾಲುಗಳಿಲ್ಲ. ಭೂಗರ್ಭದಲ್ಲಿನ ಈ ರೈಲು ಮಾರ್ಗದಲ್ಲಿ ಕತ್ತಲೆಯಿದ್ದು ಭೀಕರವೂ ಭಯಾನಕವೂ ಆಗಿರುತ್ತದೆ. ರಾತ್ರಿಯಾದರೆ ಇಲ್ಲಿ ಜನರ ಸಂಚಾರ ಕಡಿಮೆ. ಪ್ರಯಾಣದ ಇಕ್ಕಟ್ಟಿನ ಸಮಯದಲ್ಲಿ ಜನರೆಲ್ಲ ರೈಲಿನಲ್ಲಿ ನೇತಾಡಿಕೊಂಡು ಹೋಗುತ್ತಾರೆ........ಮಿಶ್ರ ಜಾತಿಯ ಜನರು....ಅಂತರ ರಾಷ್ಟ್ರೀಯ ಜನಸಂಕುಲ. ಕಪ್ಪು ಬಿಳಿ ಜನರ ಬೆರಕೆ........ಪ್ರತಿಯೊಬ್ಬರ ಕೈಯಲ್ಲಿ ಹೊರಲಾಗದ ಸಾಮಾನಿನ ಹೊರೆ........ದಿನವಿಡೀ ಸುತ್ತಾಡಿ ಅವರಿಗೆ ಸುಸ್ತು. ರೈಲಿನಲ್ಲಿ ಈ ಜನ ತೂಕಡಿಸುವುದೂ ಸಾಮಾನ್ಯ! ಕತ್ತಲೆಯ ನಿರ್ಜನ ರಾತ್ರಿಯಲ್ಲಿ ಈ ಮಾರ್ಗಗಳಲ್ಲಿ ಕೊಲೆ, ದುರಾಚಾರಗಳು ಆಗುವುದೂ ಅಪರೂಪವಲ್ಲವಂತೆ! ರೈಲುಗಳು ಕುಲುಕಾಡಿ, ಬಳುಕಾಡಿ ಚಲಿಸುವುದರಿಂದ ಬಹಳ ಆಯಾಸವಾಗುತ್ತದೆ. ಅತಿ ಶಬ್ಧದಿಂದಾಗಿ ಮಾತನಾಡಲೂ ಆಗುವುದಿಲ್ಲ. ರೈಲಿನ ಗರ್ಜನೆ ಅಷ್ಟು........ಅಂತೂ ಈ ಅನುಭವ ಅಷ್ಟೇನೂ ಚೆನ್ನಾಗಿಲ್ಲ. ವೇಗವಾಗಿ ಹೆಚ್ಚು ಖರ್ಚಿಲ್ಲದೆ ಚಲಿಸಬಹುದು ಅಷ್ಟೇ... ....

........ಈಗ ಇಲ್ಲಿ ತಡೆಯಲಾಗದ ಚಳಿ. ಹಿಮ ಘನವಾಗಿ ಪಾರದರ್ಶಕದ ಮಂಜುಗಡ್ಡೆಯಾಗುತ್ತಿದೆ. ನನಗೆ ಒಮ್ಮೊಮ್ಮೆ ಈ ಚಳಿಗೆ.... .. ಅಳು ಬರುತ್ತಿದೆ! ಸ್ನೇಹಿತರು 'ಮುಂದೆ ಚಳಿ ಇನ್ನೂ ಹೆಚ್ಚಾಗುತ್ತದೆ' ಎಂದು ಹೇಳಿ ಹೆದರಿಸುತ್ತಾರೆ.

........ಬಹಳ ದಿನದಿಂದ ಸಪ್ಪೆ ಊಟ ಮಾಡಿ ಜೀಜಾರು ಬಂತು. ಹಸಿ ಮೆಣಸಿನಕಾಯಿ ಹುಡುಕಿ ಸಾಕಾಯಿತು. ಸ್ಪಾನಿಷ್ (Spanish) ಅಂಗಡಿಯೊಂದರಲ್ಲಿ ಚಿಕ್ಕ ದೊಣ್ಣೆ ಮೆಣಸಿನಕಾಯಿ ಕಂಡಾಗ........ಚಿನ್ನ ಕಂಡಂತಾಯಿತು; ಬಾಯಿ ಚಪಲ ನಿಜವಾಗಿ ಕೆಟ್ಟದ್ದು.

ಇತಿ ನಿನ್ನ
ಅಮ್ಮ.

* * * * * *

ನ್ಯೂಯಾರ್ಕ್
7- 2 - 1968

ಮುದ್ದು ಅಮ್ಮಾ,

ನನಗೆ ನ್ಯೂಯಾರ್ಕಿನ ಅನುಭವ ಈಗೀಗ ಸ್ವಲ್ಪ ಸ್ವಲ್ಪವಾಗಿ ಆಗುತ್ತಿದೆ. ನಾನು ಈ ಕಾಗದ ಬರೆಯುತ್ತಿರುವಾಗ ಈ ನ್ಯೂಯಾರ್ಕ್ ನಗರದಲ್ಲಿ ನೈರ್ಮಲ್ಯ ಇಲಾಖೆಯ ಜನರ ಮುಷ್ಕರದಿಂದಾಗಿ ಎಲ್ಲೆಲ್ಲೂ ದುರ್ವಾಸನೆ....ಕಚಡಾ......ಗಲೀಜು. ಕಸದ ತೊಟ್ಟಿಗಳು ತುಂಬಿ ಹೋಗಿ ಗಾಳಿಗೆ ನಗರವಿಡೀ ಕಸ ಹಾರಾಡುತ್ತಿದೆ. ಇಲ್ಲಿ ಕಸ ಮತ್ತು ಹೊಲಸಿನದೂ ಒಂದು ಸಮಸ್ಯೆಯೇ! ಒಂದು ಚಿಕ್ಕ ಪದಾರ್ಥವನ್ನು ಕೊಳ್ಳುವಾಗ ಕೂಡ, ಅದನ್ನು ಎರಡು ಮೂರು ಕಾಗದಗಳಲ್ಲಿ ಕಟ್ಟಿಕೊಡುತ್ತಾರೆ. ಮನೆಗೆ ಬಂದ ಮೇಲೆ ಆ ವಸ್ತುವನ್ನು ಉಪಯೋಗಿಸುವಾಗ ಆ ಹೊದಿಕೆಗಳು ಕಸದ ತೊಟ್ಟಿಗೆ! ಒಂದು ಮೊಹರು ಮಾಡಲ್ಪಟ್ಟ ಹಾಲಿನ ಸೀಸೆ ತರುವಾಗಲೂ ಅದನ್ನು ಒಂದು ಕಾಗದದ ಪೊಟ್ಟಣದಲ್ಲಿ ಹಾಕಿ ಕೊಡದಿದ್ದರೆ ಮಾರುವವರ ತಪ್ಪಂತೆ! ಮೂರು ಟೊಮ್ಯಾಟೋ ಹಣ್ಣುಗಳನ್ನು ಪ್ಲಾಸ್ಟಿಕ್ ಪೆಟ್ಟಿಗೆಯಲ್ಲಿ ಅಂದವಾಗಿ ಜೋಡಿಸಿ ಮಾರುತ್ತಾರೆ. ಅದನ್ನು ಕೊಂಡು ಮನೆಗೆ ತಂದ ಮೇಲೆ, ಟೊಮಾಟೋ ಹೊಟ್ಟೆಗೆ.... ಆ ಪೆಟ್ಟಿಗೆ ತೊಟ್ಟಿಗೆ. ಹಣ್ಣಿನ ರಸ, ಬಿಯರ್, ಕೊಕಾ – ಕೋಲಾ, ಆಹಾರ ಎಲ್ಲವೂ ತವರದ ಡಬ್ಬಿಗಳಲ್ಲಿ ಮಾರಲ್ಪಡುತ್ತವೆ. ಜನರು ಅದರ ಉಪಯೋಗವಾದ ಮೇಲೆ ಆ ಡಬ್ಬಿಗಳನ್ನು ಬಿಸಾಡುತ್ತಾರೆ! ಕಣ್ಮುಚ್ಚಿ ತೆರೆಯುವುದರೊಳಗಾಗಿ ಅಡಿಗೆ ತಯಾರುಗೊಳಿಸಲೆಂದು ಅಂಗಡಿಗಳಲ್ಲಿ ವಿವಿಧ ರೀತಿಯ ಡಬ್ಬಿಗಳು ದೊರೆಯುತ್ತವೆ. ಒಮ್ಮೊಮ್ಮೆ ನನಗೆನಿಸುತ್ತದೆ.... ಈ ತರಹದ ಡಬ್ಬದ ಆಹಾರ ತಿಂದರೆ, ಮುಂದಿನ ಜನಾಂಗದ ಗತಿಯೇನಾಗುಬಹುದು.... ಎಂದು. ಹಸಿರು ತರಕಾರಿ, ಬಿಸಿ ಊಟ ತಿನ್ನದೆ ಬೆಳೆಯುವ ಜನಾಂಗದ ಗತಿ ? ಸುಲಭದ ಜೀವನಕ್ಕೆ ಇಲ್ಲಿನ ಇಂದಿನ ಮಾನವ ಎಲ್ಲ ಸುವಿಧಗಳನ್ನೂ ಕಂಡುಹಿಡಿದಿದ್ದಾನೆ.....ನಿರಾತಂಕವಾಗಿರಬಹುದೆಂದು. ಆದರೆ ಪಾರ್‌ಕಿನ್‌ಸನ್ಸ್ ವಾದ ಇದ್ದ ಹಾಗೆ (Parkinson's law) ಬಿಸಾಕಿದ ಕಸದ ತಿಪ್ಪೆಯ ಸಮಸ್ಯೆ! ಇಲ್ಲಿನ ವೃತ್ತಪತ್ರಿಕೆಗಳು 18 – 20 ಇಲ್ಲವೇ 25 ಪುಟಗಳಿರುತ್ತವೆ. ಓದಲು ಒಂದೋ ಎರಡೋ ಪುಟಗಳು. ಮಿಕ್ಕವು ಜಾಹೀರಾತುಗಳು! ಅರ್ಧ ಘಂಟೆಯೊಳಗೆ ಓದಾದ ಮೇಲೆ ಆ ದಪ್ಪ ಪತ್ರಿಕೆಯ ಕಾಗದವೆಲ್ಲ ಕಸದ ತೊಟ್ಟಿಯ ಆಸ್ತಿ- ಹಳೆಯ ರೆಫ್ರಿಜಿರೇಟರ್, ಹಳೇ ಬಟ್ಟೆ, ಹಳೇ ಪೀಠೋಪಕರಣಗಳು, ಎಲ್ಲವೂ ಕಸದ ತೊಟ್ಟಿಯ ಪಾಲು! ಏಕೆಂದರೆ, ಇಲ್ಲಿ ಅವನ್ನು ರಿಪೇರಿ ಮಾಡುವ ಹಣದಿಂದ ಹೊಸತನ್ನು ಕೊಳ್ಳಬಹುದು. ಅಂದ ಮೇಲೆ ಈ ಕಸದ ತೊಟ್ಟಿಯ ಸ್ಥಾನ ಸಮಾಜ ದಲ್ಲಿ ಎಷ್ಟು ಮಹತ್ವಪೂರಿತವಾದದ್ದು ಎಂದು ಊಹಿಸಬಲ್ಲಿರಿ; ಇಷ್ಟು ಗಣ್ಯವಸ್ತು ವನ್ನು ನೈರ್ಮಲ್ಯಗೊಳಿಸುವ ಇಲಾಖೆಯವರ ಮುಷ್ಕರ ಎಂದ ಮೇಲಂತೂ ನಗರದ

ಸ್ಥಿತಿ ಹೇಗಿರಬಹುದು ಎಂಬುದನ್ನು ನೀವು ಕಲ್ಪಿಸಬಲ್ಲಿರಲ್ಲವೇ ? ನಮ್ಮ ದೇಶದಲ್ಲಿ ಹಳೇ ಕಾಗದ–ಪತ್ರಿಕೆ, ಬಾಟ್ಲಿ, ಚಪ್ಪಲಿ, ಕಡೆಗೆ ತಾಮ್ರದ ಒಂದು ಚಿಕ್ಕ ತಂತಿಗೆ ಕೂಡ ಬೆಲೆಕೊಟ್ಟು ಕೊಂಡುಕೊಂಡು ಹೋಗಿ, ಜೀವನನಿರ್ವಹಣೆ ಮಾಡುವ ಪಂಗಡ ಗಳೇ ಇವೆ. ಇವರಿಗೆ ಅದನ್ನು ನಂಬಲಾದೀತೆ ? ಈ ದೇಶದಲ್ಲಿ ಹಳೆಯ ಮುದುಳು ಗಳೂ ಬೇಡವಾದ ವಸ್ತುಗಳೇ ! ವಯಸ್ಸಾದವರಿಗೆ ಬಲವಂತದಿಂದ ನಿವೃತ್ತಿಗೊಳಿಸಿ, ಯುವ ಜನಾಂಗದಿಂದಲೇ ಆ ಕೆಲಸಕಾರ್ಯಗಳನ್ನು ಪಡೆಯಬಯಸುತ್ತಾರೆ.

"ಅಬ್ಬಾ ! ಎಂತಹ ಸಮೃದ್ಧಿಭರಿತ ಶ್ರೀಮಂತ ದೇಶ ಈ ಅಮೇರಿಕಾ ! ಎಷ್ಟು ಉತ್ಪತ್ತಿ ಸಾಮರ್ಥ್ಯವಿದೆಯೋ, ಅದರಲ್ಲಿ ಶೇಕಡಾ 30ರಷ್ಟು ಮಾತ್ರ ಮಾಡಿದರೂ ಈ ದೇಶದಲ್ಲಿ ಸಮೃದ್ಧಿ ತುಂಬಿತುಳುಕಾಡುತ್ತಿದೆ" "ಇಲ್ಲಿನ ತರಕಾರಿ ನೋಡಿ– ಒಂದೊಂದೂ ಎಲೆಕೋಸು ಎಷ್ಟು ದೊಡ್ಡದು ! ಹೊಟ್ಟೆ ತುಂಬುವ ಆಹಾರ !" ಎಂದು ಅಮೇರಿಕಾ ದೇಶದ ಸಿರಿವಂತಿಕೆಗೆ ಮಾರುಹೋದ ಭಾರತೀಯರೊಬ್ಬರು ಹೊಗಳಿದರು. "ನಿಜ ಆದರೆ ಈ ತರಕಾರಿಗೆ ನಮ್ಮ ಭಾರತದ ತರಕಾರಿಗಿರುವ ರುಚಿ ಇಲ್ಲ, ಗಾತ್ರಕ್ಕಾಗಿ ಮಣ್ಣಿಗೆ ವಿಶೇಷ ರಾಸಾಯನಿಕ ಗೊಬ್ಬರ ಬೆರಸಿದ ಕಾರಣವಿರ ಬಹುದು" ಎಂದೆವು ನಾವು. "ರುಚಿ ಏತಕ್ಕೆ ? ಹೊಟ್ಟೆ ತುಂಬುವ ಅತಿ ಗಾತ್ರದ ತರಕಾರಿ ಬೆಳೆಸಲು ಭಾರತ ಪ್ರಯತ್ನಿಸಬಾರದೇಕೆ ? ಉಪವಾಸ ಬಿದ್ದು ಸಾಯುವ ಬದಲು ಈ ತರಹದ ದೊಡ್ಡದೊಡ್ಡಗಾತ್ರದ ತರಕಾರಿಗಳನ್ನು ಬೆಳೆಸಿ ಬಡತನ ತೆಗೆದು ಹಾಕಬಾರದೇ ? ....ನಮ್ಮ ಭಾರತ .... ಭಿಕಾರಿ ದೇಶ !" ಎಂದು ಮತ್ತೊಮ್ಮೆ ತೆಗಳಿದರು. ಅವರು "ಭಿಕಾರಿ ದೇಶ" ಎಂದಾಕ್ಷಣ ನನಗೆ ಮುಖದ ಮೇಲೆ ತಣ್ಣೀರು ಎರಚಿದಂತಾಯಿತು ! ಬಾಯಿಯಿಂದ ಮಾತೇ ಹೊರಡಲಿಲ್ಲ ! ಅಂತಹ ದೇಶದ್ರೋಹಿಗಳಿಗೆ ಯಾವ ವಿಧದಲ್ಲಿ ಮಾರ್ಪಡಿಸಬಲ್ಲೆವು ಎಂಬ ಅಧೈರ್ಯದಿಂದ ಕಂಗಾಲಾದೆವು. ಧನಪಿಶಾಚಿ ಅವರನ್ನು ಹಿಡಿದಿದೆ. ಮತ್ತೇನಿಲ್ಲ.

•

ಇಲ್ಲಿ ನೆಲಸಿರುವ ಜನತೆಯೆಲ್ಲಕ್ಕೂ ತೃಪ್ತಿ, ಸಮಾಧಾನ ಇರುವ ವಿಷಯ ನಾನು ಖಂಡಿತ ನಂಬಲಾರೆ ! ಅಮೇರಿಕನ್ನರೇ ಒಮ್ಮೆ ಹಣದ ಅಭಾವಕ್ಕೆ "ಶ್ರೀಮಂತ ದೇಶವಾದ ಅಮೇರಿಕದಲ್ಲಿ ಬಡವರಾಗಿರುವುದು ಮಹಾ ತಪ್ಪು, ಬಡದೇಶದಲ್ಲಿ ಬಡವರಾಗಿರುವುದು ಕಷ್ಟವಲ್ಲ" ಎಂದಿದ್ದರು. ಭಾರತವನ್ನು "ಭಿಕಾರಿ" ಎಂದ ಭಾರತೀಯನ ಮಾತು ಕೇಳಿ ಪತಿಯುವರೂ ದಿಗ್ಭ್ರಾಂತರಾದರು. ಸ್ವಲ್ಪ ಚೇತರಿಸಿ ಕೊಂಡು – "ಹೌದು, ಈ ದೇಶದಲ್ಲಿ ಆಹಾರ, ಮತ್ತು ಇತರ ಐಹಿಕ ಭೋಗಗಳ ಸಮೃದ್ಧಿ ಇದೆ. ಆದರೆ ಅತೃಪ್ತತೆಯ ತಾಂಡವ ನೃತ್ಯದಿಂದಾಗಿ ಅಧ್ಯಾತ್ಮಿಕ ಭಿಕಾರಿತನ ತುಂಬಿ ತುಳುಕಾಡುತ್ತಿದೆ ! ಈ ದೇಶಕ್ಕೆ ಸಂಪ್ರದಾಯ ಸೌಭಾಗ್ಯವಿಲ್ಲ....ಶ್ರೀಮಂತ ಪಾರಂಪರ್ಯವಿಲ್ಲ .... ಇನ್ನೂ ಎಷ್ಟೋ ಅಮೂಲ್ಯ ವಿಷಯಗಳ ಕೊರತೆ ಇದೆ.

ಭಾರತದಲ್ಲಿ ಎಷ್ಟೇ ಕಷ್ಟನಷ್ಟಗಳಿದ್ದರೂ ಧಾರ್ಮಿಕ ಗೌರವ, ತೃಪ್ತಿ ವಿಪುಲವಾಗಿದೆ" ಎಂದರು.

....ಹೌದು ನ್ಯೂಯಾರ್ಕ್ ಅತಿ ಭವ್ಯ, ಅತಿ ವಿಶಾಲ ನಗರ....ನಿಜ. ಆದರೂ ಈ ಜನಸಂದಣಿಯಲ್ಲಿ ಇಲ್ಲಿನ ಜನರು ಒಬ್ಬಂಟಿಗರಾಗಿ ಕಾಣುತ್ತಾರೆ. ಟೆಲಿಫೋನ್ ಬೂತ್‌ಗಳಲ್ಲಿ, (Telephone Booth) ರಸ್ತೆಗಳಲ್ಲಿ, ಮೂಲೆ ಮೂಲೆಗಳಲ್ಲಿ, ಅಲ್ಲಲ್ಲಿ ಜನರು ಒಬ್ಬೊಬ್ಬರೇ ಮಂಕಾಗಿ ಕುಳಿತಿದ್ದುದನ್ನು ಕಣ್ಣಾರೆ ಕಂಡಿದ್ದೇವೆ. ತಮ್ಮಷ್ಟಕ್ಕೇ ಅಳುವುದನ್ನೂ ನೋಡಿದ್ದೇವೆ. ಹೃದಯಾಂತರಾಳದಿಂದ ಉಕ್ಕಿಬರುವ ಭಾವನೆಗಳು ಒತ್ತರಿಸಿಬಂದು ಹೊರಹೊಮ್ಮಲೂ ಒಂದು ದಾರಿ ಬೇಕಲ್ಲವೇ....... ವಿಚಿತ್ರ ಜಗತ್ತು !

ಇತಿ ನಿಮ್ಮ
ಚಂದಮ್ಮ.

* * * * *

ನ್ಯೂಯಾರ್ಕ್
8 – 2 – 1968

ಮುದ್ದು ಶಿವದೇವ್,

ಈ ಕಾಗದ ಬಹುಶಃ ನಿನ್ನ ಹುಟ್ಟಿದ ಹಬ್ಬಕ್ಕೆ ತಲುಪಬಹುದು ಮಗೂ. ನಿನ್ನ ಹುಟ್ಟು ಹಬ್ಬದ ದಿನ ಇಂದು ಮೂರನೆಯ ವರುಷ ನಿನ್ನನ್ನಗಲಿ ನಾವಿರುವುದು, ಹೊರ ದೇಶಗಳಿಂದ ನಿನಗೆ ದೀರ್ಘಾಯುವನ್ನು ಕೋರುವುದು........ಮುಂದಿನ ನಿನ್ನ ಹುಟ್ಟಿದ ಹಬ್ಬಕ್ಕೆ ನೀನೇ ಈ ದೇಶಕ್ಕೆ ಬರಬಹುದು. ನಾವು ಆಗ ಭಾರತದಿಂದ ನಿನಗೆ ಶುಭಾಶಯಗಳನ್ನು ಕೋರುವುದೇನೋ! ನಿನ್ನ ಜೀವನ ಧ್ಯೇಯಪೂರ್ಣವಾಗಿರಲಿ. ನಿನ್ನ ಜ್ಞಾನರಾಶಿಯಿಂದ ನಮ್ಮ ದೇಶಕ್ಕೆ ಕೀರ್ತಿ ಬರಲಿ. ನೂರಾರು ವರ್ಷ ಬಾಳು ಮಗು.

ನಾವು ಹಿಂತಿರುಗುವಾಗ ನೀನು ಎಂ. ಇ. (M. E.) ಪದವಿ ಪಡೆಯುವೆ. ನಾವು ನಿನ್ನನ್ನು ಬಿಟ್ಟು ಬರುವಾಗ ನೀನು ಬಿ. ಇ. (B. E.) ಕೂಡ ಆಗಿರಲಿಲ್ಲ! ನೀನು ಪದವೀಧರನಾದ ಫೋಟೋ ಕಳಿಸಿ ಕೊಟ್ಟಾಗ ಒಮ್ಮೆಲೇ ನೀನು ದೊಡ್ಡವನಾದಂತೆ ನಮಗೆ ತೋರಿತು. ಕೈಯಲ್ಲಿನ ಅರ್ಹತಾ ಪತ್ರವನ್ನು ನೋಡಿ, ನೀನು ನಿಮ್ಮ ಅಣ್ಣನ ಅರ್ಹತಾ ಪತ್ರವನ್ನು ನೋಡಿ ಹೇಳಿದ ಮಾತು ಜ್ಞಾಪಕಕ್ಕೆ ಬಂತು,–"ಅಮ್ಮಾ ಇಷ್ಟು ಚಿಕ್ಕ ಕಾಗದದ ತುಂಡಿಗೆ ನಾವು ನಾಲ್ಕೈದು ವರ್ಷ ಓದುವ ಓದೇ ?" ಎಂದು

ಹೌದು ……ನೀನೂ ಈಗ ಆ ಚಿಕ್ಕ ಕಾಗದ ಗಳಿಸಿದೆ!……ನಾವು ಬರುವಷ್ಟರಲ್ಲಿ ತಾಂತ್ರಿಕ ವಿಜ್ಞಾನ ವಿಶಾರದನಾಗಿರುವೆಯಲ್ಲವೇ ಮಗೂ! ದೇವರು ನಿನ್ನನ್ನು ರಕ್ಷಿಸಲಿ!

……ನಿನ್ನ ಮುಂದಿನ ಓದಿಗೆ ಅಮೇರಿಕಾ ಬಿಟ್ಟರೆ ಬೇರೆ ಇಲ್ಲ. ಇಲ್ಲಿ ಯುವಾವಸ್ಥೆಗೆ ಬಹಳ ಬೆಲೆ ಇದೆ. ಇಲ್ಲಿ ಜನರು ವೃತ್ತಿಯಲ್ಲಿ ಹಳಬರಾಗುವ ಮೊದಲೇ ಹೊಸ ಜನಾಂಗ ಅವರ ಸ್ಥಾನ ಪಡೆಯುತ್ತದೆ. ನಮ್ಮ ದೇಶದಲ್ಲಿ ಇದರ ವಿರುದ್ಧ ಎನ್ನಬೇಕು. ಭಾರತದ ಯುವಕ ಜನಾಂಗ ವಯಸ್ಸಾದವರಿಗೆ ಮರ್ಯಾದೆ ಕೊಟ್ಟು ಅವರನ್ನು ಸಂತೋಷವಾಗಿಡಲು ಅವರ ಜೀವನದ ಅರ್ಧ ಆಯಸ್ಸನ್ನು ಕಳೆಯುತ್ತಾರೆ. ಹಿರಿಯರನ್ನು ಪೂಜ್ಯರೆಂದು ಭಾವಿಸಿ, ಉತ್ತಮ ಸ್ಥಾನವನ್ನು ಕೊಡಬೇಕು. ಆದರೆ ಈ ದೇಶದಲ್ಲಿ ತೀವ್ರ ವಿಚಾರಶಕ್ತಿಗೆ, ಯೌವನದ ಚುರುಕುತನಕ್ಕೆ ಬೆಲೆ – ಉತ್ತಮ ಸ್ಥಾನ – ಪೂಜ್ಯತೆ! ನೀನಿಲ್ಲಿಗೆ ಬರುವ ಮುನ್ನ ನಾವು ಇಲ್ಲಿ ವಾಸವಾಗಿದ್ದು ಇಲ್ಲಿನ ರೀತಿ, ನೀತಿ, ನಡತೆ ನೋಡುತ್ತಿರುವುದು ಒಂದು ವಿಧದಲ್ಲಿ ಸಮಾಧಾನ. ಯಾವುದನ್ನೂ ಕಣ್ಣಾರೆ ಕಂಡು ಪರಾಂಬರಿಸಬೇಕು. ದೂರದಿಂದ ಬೆಟ್ಟ ನುಣ್ಣಗೇ….ಅಲ್ಲವೇ!

ಇತಿ ಆಶೀರ್ವಾದಗಳೊಂದಿಗೆ

ನಿನ್ನ

ಅಮ್ಮ.

* * * * *

ನ್ಯೂಯಾರ್ಕ್

13 – 2 – 1968

ನನ್ನ ಪ್ರೀತಿಯ ಅಮ್ಮಾ,

ನೀವು ಅಪರೂಪವಾಗಿ ಬರೆದ ಕಾಗದ ಕಂಡು ಅತ್ಯಾನಂದವಾಯಿತು. ಶ್ರೀ|| ತಂದೆಯವರು ಬೆಂಗಳೂರು ಬಿಟ್ಟು ದಕ್ಷಿಣ ಕನ್ನಡ ಜಿಲ್ಲೆಗೆ ಹೋದಂದಿನಿಂದ ಅವರ ಪತ್ರದ ಸದ್ದು ಸುಳಿವಿಲ್ಲ. ಸುಮಾರು 3–4 ತಿಂಗಳುಗಳು ಆಗಿರಬಹುದು. ಸದ್ಯ…. ಈಗಲಾದರೂ ನೀವು ಅವರ ಪರವಾಗಿ ಪತ್ರ ಬರೆದುದಕ್ಕಾಗಿ ನಾನು ನಿಮಗೆ ಕೃತಜ್ಞಳು! 'ರುಕ್ಮಿಣಿ' ಯಲ್ಲಿ ಈಗ ನೀವು ನಮ್ಮ ಮಕ್ಕಳೊಡನಿದ್ದು, ಅವರ ಯೋಗಕ್ಷೇಮದ ಹೊಣೆ ಹೊತ್ತಿರುವುದಕ್ಕೆ ನಾನು ಈ ಜನ್ಮದಲ್ಲಿ ಋಣ ತೀರಿಸಲಾರೆನು. ಸಾವಿರ ಸಂಕಟಗಳೊಮ್ಮೆಯೇ ಒದಗಿ ಬಂದರೂ ನೀವು ಧೈರ್ಯದಿಂದ ಅವುಗಳನ್ನು ಎದುರಿಸಿ ಮಕ್ಕಳನ್ನು ಜೋಪಾನದಿಂದ ನೋಡಿಕೊಳ್ಳುತ್ತೀರಿ. ದೇವರು ನಿಮಗೆ

ಇಂತಹ ಹೊಣೆಗಾರಿಕೆಯನ್ನು ಹೊರಲು ಆರೋಗ್ಯ ಭಾಗ್ಯವನ್ನು ದಯಪಾಲಿಸಿ, ನಿಮ್ಮನ್ನು ಚಿರಾಯುವಾಗಿ ಇಟ್ಟಿರಲಿ. ತಂಗಿ ಯಶೋಧರೆಗೆ ಬೇರೆಯೇ ಔಷಧಿ ಶುರು ಮಾಡಲಿರುವಿರಿ ಎಂದು ತಿಳಿದು ಶೀಘ್ರ್ರವೇ ಆಕೆ ಗುಣಮುಖಳಾಗುವಳೆಂಬ ಆಸೆ ಮನ ದಲ್ಲಿ ಮೂಡಿದೆ! ಯಾರು ಬಲ್ಲರು! ಒಂದೊಂದು ವೇಳೆ ಅಸಾಧ್ಯವೆನಿಸಿದುದು ಕೂಡ ಸಿದ್ಧಿಸುತ್ತದೆ. ಎಲ್ಲಿಲ್ಲದ ವ್ಯಕ್ತಿಗಳು ಧನ್ವಂತರಿ ಮಹರ್ಷಿಗಳಾಗಿ ಕಣ್ಣು ಮುಂದೆ ಬರುತ್ತಾರೆ. ಅವರ ಔಷಧಿ ರಾಮಬಾಣದಂತೆ ತಗುಲಿ ಕಾಹಿಲೆ ವಾಸಿಯಾಗುತ್ತದೆ. ಕೆಲವು ವರ್ಷಗಳ ಹಿಂದೆ ನಾನು 'ನವರಾಗ ಮಾಲಿಕಾ' ವರ್ಣದ ತಾಂಡವ ತೀರ್ಮಾನ ಗಳನ್ನು ಮಾಡುವಾಗ ಮೊಣಕಾಲಿನ ಸ್ನಾಯು ಸೆಳೆತದಿಂದಾಗಿ ಆಸ್ಪತ್ರೆಯಲ್ಲಿರಬೇಕಾ ಗಿತ್ತು. ನನ್ನ ನೃತ್ಯಕ್ಷೇತ್ರದ ರಂಗಪರದೆ ಶಾಶ್ವತವಾಗಿಯೇ ಬಿದ್ದಂತಾಗಿತ್ತು. ಆದರೆ ಆಗ ಡಾಕ್ಟರ್ ಭಿಡೆಯವರು ಬೆಂಗಳೂರಿಗೆ ಬಂದು ನನ್ನ ಕಾಹಿಲೆ ವಾಸಿ ಮಾಡಿದರು. ಅಂದು ನೋವಿನಿಂದ ನರಳುವಾಗ ನಾನು ಇಂದು ಈ ರೀತಿಯ ನೃತ್ಯ ಚಟುವಟಿಕೆ ಗಳಲ್ಲಿ ಭಾಗವಹಿಸುವೆನೆಂಬುದು ಕನಸಿನಲ್ಲಿ ಎಣಿಸಿರಲಿಲ್ಲ! ಈಗ ನನಗದೆಲ್ಲವೂ ಒಂದು ದುಸ್ವಪ್ನದಂತೆ ಭಾಸವಾಗಿ ನವ ಚೈತನ್ಯ ಹರಿದು ಬಂದಿದೆ. ನಾವಿಬ್ಬರೇ ಈಗ ಎಲ್ಲ ಪ್ರದರ್ಶನಗಳನ್ನು ಮಾಡಲು ಶಕ್ಯರಿದ್ದೇವೆ.

—ನಿಜ........ನೀವೆನ್ನುವಂತೆ ನಾವು ಇನ್ನೂ ಪುಟ್ಟ ಮಕ್ಕಳೇನಲ್ಲ! "ಹೆಚ್ಚಿನ ಜವಾಬ್ದಾರಿ ಬೇಡ....ಭೂಪ್ರದಕ್ಷಿಣೆಯ ಆತುರದಲ್ಲಿ ಆರೋಗ್ಯ ಕೆಡಿಸಿಕೊಳ್ಳಬೇಡಿ. ನಿಮ್ಮ ಮಕ್ಕಳನ್ನು ನಿಮ್ಮ ಕೈಗೆ ಒಪ್ಪಿಸಿದರೆ ನನ್ನ ಜವಾಬ್ದಾರಿ ಮುಗಿಯುತ್ತದೆ. ಆದ್ದ ರಿಂದ ಬೇಗ ಬನ್ನಿ" ಎಂದಿದ್ದೀರಿ. ಆದರೆ ನಾವೀಗ ಯುವಕರೇನಲ್ಲದಿದ್ದರೂ ನಮ್ಮ ಈ ವಯಸ್ಸಿನ ಅನುಭವಕ್ಕಾಗಿ ಜನರು ನಮ್ಮ ನೃತ್ಯಗಳಿಗೆ ಮರುಳಾಗುತ್ತಾರೆ! ಅಮ್ಮಾ........ನಮ್ಮ ಆರೋಗ್ಯ ಚೆನ್ನಾಗಿದೆ. ಇಡೀ ದಿನ ಬಿಡುವಿಲ್ಲದೆ ದುಡಿದರೂ ವಿಶ್ರಾಂತಿಗೆ ಅವಕಾಶ ಬೇಕಾದಷ್ಟು ಕಲ್ಪಿಸಿಕೊಳ್ಳಲು ಕಲಿತಿದ್ದೇವೆ. ದೇವರ ದಯೆ ಯಿಂದ, ನಿಮ್ಮ ಆಶೀರ್ವಾದದಿಂದ ನಮ್ಮ ಭೂಪ್ರದಕ್ಷಿಣೆ ನಿರ್ವಿಘ್ನವಾಗಿ........ಸಾಂಗ ವಾಗಿ ನೆರವೇರುವುದು ಎಂಬ ಭರವಸೆ ಇದೆ........ದಯವಿಟ್ಟು ಯೋಚಿಸಬೇಡಿ.

ನಮ್ಮ ನ್ಯೂಯಾರ್ಕಿನ ಜವಾಬ್ದಾರಿ ಮುಗಿಯಿತು. 'ಬುದ್ಧೋದಯ' ನೃತ್ಯ-ನಾಟಕ ತಯಾರಾಗಿದೆ. ನಮ್ಮ ಕಣ್ಮನಗಳಿಗೆ ತೃಪ್ತಿ ನೀಡಿದೆ. ಇನ್ನು ಕಂಪೆನಿಯವರು ಅಭ್ಯಾಸ ಮಾಡಿದಷ್ಟು ಅವರಿಗೇ ಒಳ್ಳೆಯದು. ಅವರಿನ್ನು ಸುಮಾರು ಒಂದು ವರ್ಷ ಇದನ್ನು ಅಭ್ಯಸಿಸಿ, ವೇಷಭೂಷಣಗಳನ್ನು ತಯಾರಿಸಿ, ತಮ್ಮ ಮೊದಲ ಪ್ರದರ್ಶನವನ್ನು ನ್ಯೂಯಾರ್ಕಿನಲ್ಲಲ್ಲದೆ ಮತ್ತೆಲ್ಲೋ ಕೊಟ್ಟು, ಆ ನಂತರ ಇಲ್ಲಿ ಪ್ರದರ್ಶಿ ಸುವರಂತೆ! ಎಷ್ಟು ತಾಳ್ಮೆ!! ಅಷ್ಟು ನಿರ್ದಿಷ್ಟತೆ – ನಿಖರತೆ ಬೇಕಾದ ಜನರು ಇವರು! ನಮಗೆ ಹಾಗೆ ನೃತ್ಯಾಭ್ಯಾಸ ಮಾಡಿದರೆ ಬೇಜಾರು ಬಂದು ಕಲೆಯ ಸತ್ವವೇ

ಹೋಗಿ, ಕಥಾವಸ್ತು ನೀರಸವಾಗಿ ನೃತ್ಯ-ನಾಟಕದ ಜೀವಾಳವೇ ಹೋಗುತ್ತದೆ. ಆದರೆ ಬೇರೆ ಬೇರೆ ದೇಶಗಳಲ್ಲಿನ ಮನೋಭಾವದಲ್ಲಿಯೂ ವೈವಿಧ್ಯತೆ ಕಂಡುಬರುವುದೂ ಸಹಜವೇ!

22ನೇ ತಾರೀಕಿಗೆ ವಾಷಿಂಗ್‌ಟನ್‌ಗೆ (Washington DC) ಹೋಗಿ, ತಮ್ಮ ಮೋಹನನ ಮನೆಯಲ್ಲಿ ನಾಲ್ಕಾರು ದಿನ ವಿಶ್ರಾಂತಿ ಪಡೆದು ಮುಂದಕ್ಕೆ ಹೋಗುತ್ತೇವೆ. ನಾವು ಇಲ್ಲಿ ಬಂದ ಹೊಸತರಲ್ಲಿ ನಮ್ಮ ಆಹಾರದ ದುರವಸ್ಥೆ ನೋಡಿ, ನಮ್ಮ ಸ್ನೇಹಿತರು ಇಲ್ಲಿನ ಇರಾನಿ ಅಂಗಡಿಗೆ ಕರೆದುಕೊಂಡು ಹೋಗಿ, ಭಾರತೀಯ ಅಡಿಗೆಗೆ ಬೇಕಾದ ಎಲ್ಲ ಸಾಮಗ್ರಿಗಳನ್ನೂ ಕೊಡಿಸಿದ ಸಂಗತಿ ನಿಮಗೆ ಹಿಂದೆ ತಿಳಿಸಿರಲಿಲ್ಲ.........ಅಲ್ಲವೇ? ನಾವು ನ್ಯೂಯಾರ್ಕ್ ಬಿಡುವವರೆಗೆ ಅವು ಒದಗುತ್ತವೆ. ಬೇಕಾದ್ದೆಲ್ಲವೂ ಇಲ್ಲಿ ಸಿಗುವುದೆಂದು ನಮಗೆ ಇಲ್ಲಿಗೆ ಬಂದ ಹೊಸತರಲ್ಲಿ ಗೊತ್ತಿರಲಿಲ್ಲ. ಅನಾವಶ್ಯಕವಾಗಿ ತೊಂದರೆ ತೆಗೆದುಕೊಂಡೆವು. ಬೇಡೇಕರ್‌ರವರ ವಿವಿಧ ಉಪ್ಪಿನಕಾಯಿಗಳೂ ಇಲ್ಲಿ ದೊರಕಿತು. ನ್ಯೂಯಾರ್ಕ್ ಬಿಡುವಾಗ ಮಿಕ್ಕಿದ್ದನ್ನೆಲ್ಲವನ್ನೂ ಮೋಹನನ ಮನೆಯಲ್ಲಿ ಕೊಟ್ಟು ಹೋಗುತ್ತೇನೆ. ಇಲ್ಲಿಯೇ ಬಿಟ್ಟು ಹೋದರೆ ಅದು ಯಾರಿಗೂ ಬೇಡ.

ದಯವಿಟ್ಟು ಆಗಾಗ ಬರೆಯುತ್ತಿರಿ. ನಿಮ್ಮ ಮನಸ್ಸಿಗೆ ತೋಚಿದುದೆಲ್ಲವನ್ನೂ ಮುಚ್ಚುಮರೆಯಿಲ್ಲದೆ ಬರೆಯಿರಿ. ಮನಸ್ಸಿನ ಚಿಂತೆಗಳ ಭಾರವನ್ನು ನಮ್ಮಲ್ಲಿ ಹಂಚಿಕೊಂಡು ಹೃದಯ ಹಗುರ ಮಾಡಿಕೊಳ್ಳಿ. ಏಕೆಂದರೆ, ನಮ್ಮ ಇಲ್ಲಿನ ಜೀವನಕ್ಕೂ, ನಿಮ್ಮ ಸೌಖ್ಯಕ್ಕೂ ನಿಜವಾಗಿ ನಿಕಟ ಸಂಬಂಧವಿದೆ.

ಇತಿ
ಚಂದಮ್ಮ
ಬೇಡುವ ಆಶೀರ್ವಾದಗಳು.

* * * * * *

ವಾಷಿಂಗ್‌ಟನ್
23 – 2 – 1968

ಮುದ್ದು ಶಿವದೇವ್,

ನೀನು ಜಿ. ಆರ್. ಇ. (G. R. E.) ಪರೀಕ್ಷೆಯಲ್ಲಿ ಚೆನ್ನಾಗಿ ಮಾಡಿದ್ದೀಯೆ ಎಂದು ತಿಳಿಸಿದ್ದ ಕಾಗದ ಸಿಕ್ಕಿತು. ಇಲ್ಲಿನ ತಾಂತ್ರಿಕ ಅಭಿವೃದ್ಧಿಯನ್ನು ನೋಡಿ

ದಷ್ಟು, ನಾನು ನಿನ್ನನ್ನೂ, ನಿನ್ನ ಅಣ್ಣನನ್ನೂ ಈ ಸಂದರ್ಭದಲ್ಲಿ ಜ್ಞಾಪಿಸಿಕೊಳ್ಳುತ್ತೇನೆ.

ಅದ್ಭುತ ದಿಗಂತ ಸೀಮಾ ಬಂಧನ, ಗಗನ ಚುಂಬಕ ಕಟ್ಟಡಗಳು, ಮಿರುಗುವ ಗಾಜಿನ ಹೊದ್ದಿಕೆ ಹೊತ್ತು ಮಿಣುಕುವ ನ್ಯೂಯಾರ್ಕಿನಿಂದ ಅಮೇರಿಕದ ರಾಜಧಾನಿ ವಾಷಿಂಗ್‌ಟನ್‌ಗೆ ಬಂದಿದ್ದೇವೆ. ಇಲ್ಲಿ ನೃತ್ಯ ಪ್ರದರ್ಶನಗಳು ಬೇಡ – ವಿಶ್ರಾಂತಿ ಬೇಕು ಎಂದು. ಯಾರಿಗೂ ನಾವು ಬರುತ್ತೇವೆಂದೇ ತಿಳಿಸಿರಲಿಲ್ಲ! ತಮ್ಮ ಮೋಹನನ ಮನೆ ತವರು ಮನೆಯಾಗಿದೆ ಈಗ ನಮಗೆ! ಪುರಪ್ರದಕ್ಷಿಣೆ ಮಾಡಿ, ಸ್ವೇಚ್ಛೆಯಾಗಿ ತಿರುಗಾಡುತ್ತಿದ್ದೇವೆ. ನಮ್ಮ ನ್ಯೂಯಾರ್ಕ್ ಪ್ರದರ್ಶನ ಚೆನ್ನಾಗಿ ನಡೆಯಿತು! ಈ ಯಶಸ್ಸಿಗೆ ಕಾರಣ ? ಇತರರಿಂದ ಬೇರೆಯಾಗಿರುವ ನೃತ್ಯ ಕಾರ್ಯಕ್ರಮ ನಮ್ಮದಾದುದರಿಂದ ಅಷ್ಟೇ! ಅಲ್ಲದೆ ನಮ್ಮ ನೃತ್ಯ ಕಲೆಯ ಮಟ್ಟವನ್ನು ನೋಡಿ ಎಲ್ಲರಿಗೂ ಆಶ್ಚರ್ಯವಾಯಿತು. ನಾವು ನಮ್ಮ ಈ ವಯಸ್ಸಿನಲ್ಲಿ, ಇಷ್ಟು ಉನ್ನತ ಮಟ್ಟದಲ್ಲಿ ನರ್ತಿಸಬಲ್ಲೆವು ಎಂದು ವ್ಯವಸ್ಥಾಪಕರು ಎಣಿಸಿರಲಿಲ್ಲ! ಆದರೆ ಪತ್ರಿಕೆಗಳಲ್ಲಿ ವಿಮರ್ಶೆ ಬರಲಿಲ್ಲ. ಈ ದೇಶದಲ್ಲಿ ದೊಡ್ಡ ಮನರಂಜನಾ ಕಾರ್ಯಕ್ರಮದ ವ್ಯವಸ್ಥಾಪಕರು ಏರ್ಪಡಿಸುವ ಪ್ರದರ್ಶನಗಳಿಗೆ ಮಾತ್ರ ವಿಮರ್ಶಕರು ಬರುವ ಪರಿಪಾಠವಿದೆಯೇನೋ? ನಾವು ಮುದ್ರಿತ ಸಂಗೀತಕ್ಕೆ ನರ್ತಿಸಿ, ನಗರದಲ್ಲಿ ಒಂದೆರಡು ಪ್ರದರ್ಶನಗಳನ್ನು ಕೊಡುವುದರಿಂದ ಪತ್ರಿಕೋದ್ಯೋಗಿಗಳ ಗಮನ ಸೆಳೆಯಲಾಗಲಿಲ್ಲ! ನ್ಯೂಯಾರ್ಕಿನಲ್ಲಿ ದುಡಿದು ದುಡಿದು ಪ್ರವಾಸ ಕಳೆದರೂ ಭಾರತಕ್ಕೆ ಬರುವ ಎರಡು ಟಿಕೇಟುಗಳನ್ನು ಕೊಂಡೆವೆಂಬ ತೃಪ್ತಿ ಧಾರಾಳವಾಗಿದೆ. ಪ್ರವಾಸದ ಹಾದಿ ಸವೆದಷ್ಟೂ ಈ ಜಗತ್ತು ಎಷ್ಟು ಚಿಕ್ಕದು ಎಂಬ ಭಾವನೆ ಬರುತ್ತದೆ.

ಈಗ ವಾಷಿಂಗ್‌ಟನ್ನಿನಲ್ಲಿ ಹವೆ ಚೆನ್ನಾಗಿದೆ. ನಗರದರ್ಶನ ಮಾಡುವಾಗ ಬಸ್ಸಿನ ಚಾಲಕ ನಮಗೆ ನಗುನಗುತ್ತಾ ಎಲ್ಲಾ ಸ್ಥಳಗಳ ಪರಿಚಯ ಮಾಡಿಕೊಟ್ಟನು. ಈ ನಗರ ಬಹಳ ಚೆನ್ನಾಗಿದೆ. ಸೃಷ್ಟಿ ಸೌಂದರ್ಯ ಅದ್ವಿತೀಯ. ಆರ್ಲಿಂಗ್‌ಟನ್‌ನಲ್ಲಿ ದಿವಂಗತ ಕೆನೆಡಿಯವರ ಸಮಾಧಿಯನ್ನು ಕಂಡೆವು. ಮೌಂಟ್‌ವೆರ್ನೊನ್ (Mount Vernon) ನಲ್ಲಿ ಜಾರ್ಜ್ ವಾಷಿಂಗ್‌ಟನ್ ವಾಸಿಸಿದ್ದ ಸ್ಥಳವನ್ನೂ ನೋಡಿದೆವು. ವೈಟ್ ಹೌಸ್‌ಗೂ (White House) ಭೇಟಿ ಕೊಟ್ಟೆವು. ನಮ್ಮ ದೇಶದಲ್ಲಿ ಈ ವೈಟ್ ಹೌಸ್ (White House) ನಂತಹ ನೂರಾರು ಸ್ವಂತ ಮನೆಗಳಲ್ಲಿ ಭಾರತೀಯರು ವಾಸಿಸುವುದು ಸರ್ವೇ ಸಾಮಾನ್ಯ. ಆದುದರಿಂದ ಇಲ್ಲಿನ ಈ ಹೆಸರಾಂತ ಭವನವನ್ನು ಕಂಡು ನಮಗಿಬ್ಬರಿಗೂ ನಿರಾಶೆಯಾಯಿತು. ನಗರದಲ್ಲಿರುವ ಎಲ್ಲಾ ಪ್ರೇಕ್ಷಣೀಯ ಸ್ಥಳಗಳ ದರ್ಶನವೂ ಆಯಿತು. ಲಿಂಕನ್ ಸ್ಮಾರಕ (Lincoln Memorial) ನೋಡಿ ನನಗೇಕೋ ಮೈ ಝುಮ್ಮೆನಿಸಿತು. ಅಲ್ಲಿ ಅಬ್ರಹಾಂ ಲಿಂಕನ್ ಮಹಾಶಯರ ಗೋಮಟಾಕಾರದಲ್ಲಿ ಕುಳಿತಿರುವ ದೊಡ್ಡ ಪ್ರತಿಮೆಯೊಂದು

ಇದೆ. ಅಲ್ಲಿ ಅವರ ಗೆಟ್ಟಿಸ್‌ಬರ್ಗ್ (Gettysburg Address) ಭಾಷಣವನ್ನು ಗೋಡೆಗಳ ಮೇಲೆ ಬರೆದಿದ್ದಾರೆ. ನಮ್ಮ ಚಿಕ್ಕಂದಿನಲ್ಲಿ ನನ್ನ ತಂದೆ ಆ ಭಾಷಣ ವನ್ನು ಓದಿ, ಅರ್ಥ ತಿಳಿಸಿ, ಅದರ ಸ್ಫೂರ್ತಿಯನ್ನು ಕೊಟ್ಟದ್ದು ನೆನಪಾಯಿತು.

ಅಂತೂ ವಾಷಿಂಗ್‌ಟನ್ ನೋಡಿದೆವು ಮನಮುಟ್ಟುವವರೆಗೆ ಕಣ್ತುಂಬಾ!.... ಈ ನಗರ ಸುಂದರ ಉದ್ಯಾನವನಗಳಿಂದಲೂ, ವಿಶಾಲವಾದ ಮೈದಾನಗಳಿಂದಲೂ, ಸರೋವರಗಳಿಂದಲೂ ತುಂಬಿ ಕಣ್ಮನಗಳಿಗೆ ಆನಂದ ಕೊಡುವುದು. ವಸಂತಋತುವಿನಲ್ಲಂತೂ ಇಲ್ಲಿನ ಸೌಂದರ್ಯವೇ ಸೌಂದರ್ಯವಂತೆ! ದೈವಿಕ ಸೌಂದರ್ಯ!

ಸ್ಮಿತ್‌ಸೋನಿಯನ್ ಮ್ಯೂಸಿಯಂ ನೋಡಿದೆವು. (Smithsonian Museum) ನೋಡಲು ಸಮಯ ಸಾಲದು. ಒಂದೆಡೆಯಿಂದ ಮತ್ತೊಂದು ಕಡೆಗೆ ನಡೆದು ಹೋಗುತ್ತಾ ಕಣ್ಣಿಗೆ ಕಂಡ ವಸ್ತುಗಳನ್ನು ನೋಡಿದೆವು. ಅಷ್ಟೇ! ನಮಗೆ ನ್ಯೂಯಾರ್ಕ್‌ನಲ್ಲಿನ ಮ್ಯೂಸಿಯಂಗಳನ್ನು ಸಾವಕಾಶವಾಗಿ ನೋಡಲು ಸಮಯವಿತ್ತು. ಆದರೆ ಇಲ್ಲಿ ಸಮಯದ ಅಭಾವ. ಜೀವನದ ಉತ್ತಮ ವಿಷಯಗಳೆಲ್ಲಕ್ಕೂ ಇಲ್ಲಿ ಉಚಿತ ಪ್ರವೇಶವೇ! ಆದರೆ ಪೂರ್ತಿ ನೋಡಲು ಜೀವಮಾನವೊಂದು ಸಾಲದು, ಅಂದ ಮೇಲೆ ಪ್ರವಾಸಿಗಳಾದ ನಮಗೆ ಹೇಗೆ ಸಾಧ್ಯ! ಅಂತೂ ನೋಡಿಲ್ಲವೆಂಬ ಹಾಗಿಲ್ಲ!

ಇನ್ನು ಕೆಲವು ದಿನಗಳಲ್ಲಿ 24 ಗಂಟೆ ಸತತ ಬಸ್ ಪ್ರಯಾಣ ಮಾಡಿ ಸೇಂಟ್ ಲೂಯಿಸ್ (St. Louis) ತಲುಪುವೆವು. ಒಂದು ಸಂಜೆ ಅಲ್ಲಿ ವಿಶ್ರಮಿಸಿ, ಕೊಲಂಬಿಯಾಗೆ ಮತ್ತೆ ಪ್ರಯಾಣ. ಚಳಿಗಾಲ ಕಳೆಯುತ್ತಿದೆ. ಅಂತೆಯೇ ಬೇಸಿಗೆ ಕಾಲದ ಋತುವಧು ಕಾಲಿಡುತ್ತಿದ್ದಂತೆ ವಾತಾವರಣದಲ್ಲಿ ಗೆಲುವು ಮೂಡಿ ಬರುತ್ತಲಿದೆ.

ಇತಿ ನಿನ್ನ
ಅಮ್ಮ.

* * * * * *

ಕೊಲಂಬಿಯಾ
2 – 3 – 1968

ಮುದ್ದು ಜಯದೇವ್,

ಅಮೇರಿಕಾದ ರಾಜಧಾನಿಯನ್ನು ಬಿಟ್ಟು ಸೇಂಟ್ ಲೂಯಿಸ್ ದಾರಿಯಾಗಿ ಈ ಮಿಸಿಸಿಪ್ಪಿ, ಮಿಸ್ಸೂರಿ ನದಿಗಳ ಪ್ರದೇಶವನ್ನು ಸೇರಿದ್ದೇವೆ. ಕೊಲಂಬಿಯಾ

ವಿಶ್ವವಿದ್ಯಾಲಯದ ಅತಿಥಿಗಳಾಗಿ ಉತ್ತಮ ವಸತಿ ಗೃಹವೊಂದರಲ್ಲಿ ಇಳಿದುಕೊಂಡಿದ್ದೇವೆ. ನಮ್ಮ ಪ್ರಯಾಣ ತುಂಬಾ ಚೆನ್ನಾಗಿತ್ತು. ಗ್ರೇ ಹೌಂಡ್ (Grey Hound) ಬಸ್ ಹೊಸತಾಗಿತ್ತು. ಇಲ್ಲಿಗೇ ನೇರವಾಗಿ ಬರುವ ಬಸ್ಸಾದರೂ ಎಕ್ಸ್‌ಪ್ರೆಸ್ ಅಲ್ಲ-ದೂರ ದೂರದ ಊರುಗಳನ್ನು ಸುತ್ತಿ ಬಳಸಿ ಬರುವ ದಾರಿ. ನಮಗೆ ಹೆದ್ದಾರಿಗಳನ್ನು ತಂಗು ಮನೆಗಳ ಜಾಹಿರಾತುಗಳನ್ನೂ ಕಂಡು ಬೇಸರವಾಗಿತ್ತು. ಆದ್ದರಿಂದ ಈ ದಾರಿಯನ್ನು ಆರಿಸಿದೆವು. ಈ ಬಸ್ ಅಮೇರಿಕದ ಹೃದಯಾಂತರಾಳದಲ್ಲಿ ಎಂಬಂತೆ ಹಾದುಹೋಯಿತು. ಪ್ರಾಣಿಗಳನ್ನು ಬೆಳೆಸುವ ಮೈದಾನಗಳು, ಕೃಷಿ ಮೈದಾನಗಳು, ಗುಡ್ಡದಡಿಯಿಂದ, ಪರ್ವತ ಶ್ರೇಣಿಯ ದಾರಿಯಾಗಿ, ಮಂಜು ತುಂಬಿದ ಕಾಡು ಪ್ರದೇಶಗಳು, ನೀರ್ಗಲ್ಲಿನ ಸರೋವರ, ನದಿಗಳ ದಾರಿಯಾಗಿ, ಚಿಕ್ಕಪುಟ್ಟ ಪಟ್ಟಣಗಳ ಕಾಲುಹಾದಿಗಳ ಮಾರ್ಗವಾಗಿ ಹೋಗುವ ಈ ಬಸ್ ಮೂಲಕ ನಾವು ನಿಜವಾಗಿ ಅಮೇರಿಕಾ ದೇಶವನ್ನು ನೋಡಿದೆವು.

ಕೊಲಂಬಿಯಾದಲ್ಲಿ ನಮ್ಮ ಆತಿಥೇಯರು ನಮ್ಮನ್ನು ಸ್ವಾಗತಿಸಿ ಸತ್ಕರಿಸಿದರು. ಈ ಹೋಟೆಲಿನಲ್ಲಿ ಹಣ್ಣಿನ ರಸಗಳನ್ನು ನೀರಿನಂತೆಯೇ ಕೊಡುತ್ತಾರೆ. ಮರಳಿ ಭಾರತಕ್ಕೆ ಹೋದ ಮೇಲೂ ಇದನ್ನು ಖಂಡಿತ ನೆನೆಸಿಕೊಳ್ಳುತ್ತೇವೆ. ಸಮೃದ್ಧ ಆಹಾರ, ಪಾನೀಯಗಳನ್ನು ಕಂಡಾಗಲೆಲ್ಲಾ ನಿಮ್ಮನ್ನು ಹಲವು ಬಾರಿ ಜ್ಞಾಪಿಸಿಕೊಳ್ಳುತ್ತೇನೆ. ಆದರೆ ನೀವು ಇನ್ನೂ ಚಿಕ್ಕ ವಯಸ್ಸಿನವರು. ಒಂದಲ್ಲ ಒಂದು ದಿನ ಈ ದೇಶಗಳನ್ನೆಲ್ಲಾ ನೀವು ಖಂಡಿತ ಸುತ್ತಾಡುವಿರಿ ಎಂಬ ದೃಢ ವಿಶ್ವಾಸ ನನಗಿದೆ.

ನಮ್ಮ ಇಲ್ಲಿನ ಕಾರ್ಯಕ್ರಮಗಳು ತುಂಬಾ ಯಶಸ್ವಿಯಾದವು. ಪತ್ರಿಕೆಗಳಲ್ಲಿಗಳಲ್ಲಿ ಉತ್ತಮ ವಿಮರ್ಶೆ ಇದೆ. ಸೇಂಟ್ ಸ್ಟಿ ಫನ್ಸ್ ಕಾಲೇಜು (St. Sephens College) ಎಂಬ ಶ್ರೀಮಂತ ಹೆಂಗಸರ ಕಾಲೇಜೊಂದರಲ್ಲಿ ನಮ್ಮ ಕಾರ್ಯಕ್ರಮವಿತ್ತು. ಅಲ್ಲಿ ನಾವು ಸುಮಾರು ಮೂರು ಗಂಟೆ ಉಪನ್ಯಾಸ ಕೊಟ್ಟು, ಅನಂತರ ಒಂದು ಚಿಕ್ಕ ಪ್ರದರ್ಶನ ನೀಡಿ ಎಲ್ಲರ ಮನರಂಜಿಸಿದೆವು. ಈ ಕಾಲೇಜಿನಲ್ಲಿ ಭಾರತೀಯ ನೃತ್ಯ ಕಲಿಯಲು ಅವಕಾಶವಿದೆ. ಆದ್ದರಿಂದ ನಮ್ಮ ಭೇಟಿ ಅವರಿಗೆ ನೃತ್ಯ ಕಲೆಯನ್ನು ಕುರಿತು ಒಂದು ಪಾಠದಂತೆಯೇ ಆಯಿತು.

ಮಧ್ಯ ಅಮೇರಿಕಾದ ಆತಿಥ್ಯವನ್ನು ಅನುಭವಿಸುತ್ತಿದ್ದೇವೆ. ನ್ಯೂಯಾರ್ಕ್‌ನಲ್ಲಿ ಕೆಲವು ಕಹಿ ಅನುಭವಗಳಾದರೂ ಅವನ್ನು ನಾವು ನಿರೀಕ್ಷಿಸಿದ್ದ ಕಾರಣ ಆಶ್ಚರ್ಯವೆನಿಸಲಿಲ್ಲ. ಆದರೆ ಈ ಕಡೆಯ ಜನರ ನಮ್ರತೆ, ಸೌಹಾರ್ದತೆ ನಮ್ಮನ್ನು ಬೆರಗುಗೊಳಿಸಿತು. ಇಲ್ಲಿ ಸುಮಾರು ನೂರು ಜನ ವಿದ್ಯಾರ್ಥಿಗಳಿದ್ದಾರೆ. ಗುಜರಾತಿ ಹುಡುಗರ ತಂಡವೊಂದು ನಮ್ಮನ್ನು ಆದರದಿಂದ ಊಟಕ್ಕೆ ಕರೆದು ತಾವೇ ಅಡಿಗೆ

ಮಾಡಿ ಬಡಿಸಿದರು. ಹಾಗೆಯೇ ಇರಾನಿ ಸಂಸಾರವೊಂದು ನಮ್ಮ ಕಲೆಗೆ ಮೆಚ್ಚಿ ತಮ್ಮಲ್ಲಿ ಬರಮಾಡಿಕೊಂಡು ಸತ್ಕರಿಸಿದರು.

ನಾನು ಈ ಕಾಗದ ಬರೆಯುತ್ತಿರುವಾಗ ಪಕ್ಕದ ಕೋಣೆಯಲ್ಲಿ ಪತಿಯವರು ಬಣ್ಣದ ಟಿ. ವಿ. ನೋಡುತ್ತಿದ್ದಾರೆ. ಬ್ಯಾಲೆ ಮತ್ತು ವ್ಯಂಗ್ಯ ಚಿತ್ರಮಾಲೆಗಳಿದ್ದಿರ ಬೇಕು. ಇಲ್ಲಿನ ವೈಭವ ನೋಡುತ್ತಿದ್ದಂತೆ ಈ ದೇಶ ಅತ್ಯುತ್ತಮವಾದುದೆಲ್ಲವನ್ನೂ ಒದಗಿಸುವ ಅತಿಶಯೋಕ್ತಿಯ ದೇಶವೆಂದು ಕಾಣುತ್ತದೆ. ಭಾರತೀಯರು ಈ 'ಅತಿ' ಶಯದ ಅಮೇರಿಕೆಯನ್ನು ಕಂಡು ದಿಗ್ಭ್ರಮೆಪಟ್ಟರೆ ಆಶ್ಚರ್ಯವೇನಲ್ಲ. ಆದರೆ ಒಮ್ಮೆ ಬಂದರೆ ಬಿಡಲೊಲ್ಲರು. ಅವರು ಗಳಿಸಿದ ಒಂದು ಡಾಲರು ಭಾರತದಲ್ಲಿ ಏಳುಪಟ್ಟು ಗುಣಾಕಾರವಾಗಿ ಹೆಚ್ಚಾಗುತ್ತದೆ....ಅಲ್ಲವೇ ? ಆದರೆ ಇಲ್ಲಿ ಅದೇ ಒಂದು ಡಾಲರು, ಭಾರತದಲ್ಲಿನ ಒಂದು ರೂಪಾಯಿಯಂತೆಯೇ ಇದೆ. ಕೊಳ್ಳುವ ಶಕ್ತಿ ರೂಪಾಯಿ ಗಿದ್ದಷ್ಟೇ ಡಾಲರಿಗೂ. ಆದ್ದರಿಂದ ಕೆಲವು ಭಾರತೀಯರು ಹಣ ಶೇಖರಿಸಿದೆ, ದಿನ ನಿತ್ಯದ ಜೀವನವನ್ನು ಮಾಡಿ ಏತಕ್ಕೆ ಇರುತ್ತಾರೆ ಎಂಬುದು ತಿಳಿಯುವುದಿಲ್ಲ. ಬಹುಶಃ ಭಾರತ ಜೀವನದ ವಾಸ್ತವಿಕತೆಯಿಂದ ದೂರ ಓಡಿಹೋಗಬೇಕೆಂಬ ಒತ್ತಾಸೆ ಯಿಂದಿರಬಹುದು !

ಇಲ್ಲಿನ ಕೆಲಸವಾದ ಮೇಲೆ ಸೇಂಟ್ ಲೂಯಿಸ್‌ಗೆ ಪ್ರಯಾಣ – ಅಲ್ಲಿ ಹತ್ತು ದಿನಗಳ ಪ್ರವಾಸ – ಮೂರು ಪ್ರದರ್ಶನ – ಮತ್ತೆ ಬರೆಯುವೆ.

ಇತಿ ನಿನ್ನ
ಅಮ್ಮ.

* * * * * *

ಸೇಂಟ್ ಲೂಯಿಸ್
14 – 3 – 1968

ಮುದ್ದು ಶಿವದೇವ್,

ನಮ್ಮ ಪ್ರಿಯ ಈರಾ ಮನೆ ಎಂತಹ ಆಧುನಿಕ ಅರಮನೆ! ಅವರ್ಣನೀಯ. ಅದನ್ನು ಬಣ್ಣಿಸಲು ನಾನು ಕವಿಯಾಗಬೇಕು. ಪ್ರಕೃತಿ ಸುಂದರಿಯ ರಮ್ಯ ಸೆರಗಿ ನಲ್ಲಿ ಮನೆ ಮಾಡಿರುವ ಈ ಭವ್ಯ ಸೌಧ ಅಮೇರಿಕದ ಪ್ರಯಾಣದಲ್ಲೂ ಉನ್ನತ. ಅವರ ಜೀವನ ಶ್ರೀಮಂತ ಜೀವನ. ಆದರೆ ಈ ಜೀವನ ಮಟ್ಟವನ್ನು ಕಾಪಾಡಲು ಗಂಡ ಹೆಂಡಿರಿಬ್ಬರೂ ಬೆಳಿಗ್ಗೆ ಏಳರಿಂದ ರಾತ್ರಿ 12ರ ವರೆಗೆ ದುಡಿಯುತ್ತಾರೆ! ಆದರೆ ಇಲ್ಲಿ ದುಡಿದಷ್ಟು ಹಣ!! ಸಮಯವೇ ಇಲ್ಲಿ ಹಣ!!

ನಮ್ಮ ನೃತ್ಯದ ಬಣ್ಣದ ಟಿ. ವಿ. ಯನ್ನು ಈರಾ ಏರ್ಪಡಿಸಿದ್ದರು. ನಮ್ಮ ಮೊದಲ ಬಣ್ಣದ ಟಿ. ವಿ.! ಕಾರ್ಯಕ್ರಮವನ್ನು ತುಂಬಾ ಉತ್ಸಾಹದಿಂದ ನಡೆಸಿ ಕೊಟ್ಟೆವು. ಆಹ್ವಾನಿತ ಅತಿಥಿಗಳ ಸಮ್ಮುಖದಲ್ಲಿ ನಡೆದ ಈ ಪ್ರದರ್ಶನದಲ್ಲಿ ನಮ್ಮನ್ನು ಸಂದರ್ಶಿಸಿದ ಮಹಿಳೆ ತುಂಬಾ ಉಲ್ಲಾಸಮಯಿ! "ಹಣೆಗೆ ಏಕೆ ಕುಂಕುಮದ ಬೊಟ್ಟು?" ಎಂದು ಕೇಳಿದಳು. ಎಲ್ಲಾ ಆದ ಮೇಲೆ ನನ್ನ ಗಲ್ಲಕ್ಕೆ ಮುತ್ತಿಕ್ಕಿದಳು. "ನನಗೆ?" ಎಂದು ಪತಿಯವರು ಅಂದಾಗ ಅವರ ಗಲ್ಲಕ್ಕೂ ಮುತ್ತಿಟ್ಟಳು! ಟಿ. ವಿ. ನೋಡಿದ ಈರಾ ಅದನ್ನೆಲ್ಲಾ ಮೆಚ್ಚಿದಳು.

9ನೆಯ ತಾರೀಕು ಸಾರ್ವಜನಿಕ ಪ್ರದರ್ಶನವಾಯಿತು; ನಿನ್ನೆ ಒಂದು ಸಹಾಯಾರ್ಥ ಪ್ರದರ್ಶನ ನಡೆಸಿದೆವು. ಭಾರತದ ಒರಿಸ್ಸಾ ಸಂಸ್ಥಾನದ ಹಳ್ಳಿಯೊಂದರ ಶಾಲೆಯ ಕಟ್ಟಡಕ್ಕಾಗಿ ಖಾಸಗಿ ಪ್ರದರ್ಶನ. ಆದರೂ 800 ಡಾಲರು ಜಮಾಯಿಸಿ ಕಳುಹಿಸುವರಂತೆ!

ಸೇಂಟ್ ಲೂಯಿಸ್‌ನಲ್ಲಿ ಮಿಸ್ಸೂರಿ, ಮಿಸ್ಸಿಸಿಪಿ ನದಿಗಳ ಸಂಗಮವಿದೆ. ಅಂತೆಯೇ ಈರಾ ಮನೆಯಲ್ಲಿ ಅಮೇರಿಕದ ಅತ್ಯಾಧುನಿಕತೆಯೊಡನೆ, ಭಾರತದ ಪ್ರಾಚೀನ ಸಂಸ್ಕೃತಿಯ ಸಂಪ್ರದಾಯಗಳು ಮಿಲನಗೊಂಡಿವೆ. ಬಹಳ ಸುಂದರ ಸಮ್ಮಿಲನ!

ಸೇಂಟ್ ಲೂಯಿಸ್‌ನ ಹೆಬ್ಬಾಗಿಲನ್ನು ನೋಡಿದೆವು. ಅದು ದೊಡ್ಡದೊಂದು ಉಕ್ಕಿನ ಕಮಾನು. ಅದರ 630 ಅಡಿ ಎತ್ತರಕ್ಕೆ ಚಿಕ್ಕ ಚಿಕ್ಕ ವಾಹನಗಳಲ್ಲಿ ಹೋಗಿ ಪಟ್ಟಣದ ಪಕ್ಷಿನೋಟವನ್ನು ನೋಡಿದೆವು. ಮೇಲೆ ಆ ಉಕ್ಕಿನ ರಚನೆ ಸ್ವಲ್ಪ ತೂಗಾಡುತ್ತದೆ. ಈ ಹೆಬ್ಬಾಗಿಲು ಅಮೇರಿಕದ ಪೂರ್ವ ಪಶ್ಚಿಮ ದಿಶೆಗಳಿಗೆ ಸ್ವಾಗತ ನೀಡುವಂತಿದೆ. ಈ ರಚನೆ ಒಂದು ತಾಂತ್ರಿಕ ಕೌಶಲ್ಯತೆಯ ಅದ್ಭುತವೆಂದೇ ಹೇಳಬೇಕು. ಬಿಸಿಲಿಗೆ ಫಳಫಳನೆ ಹೊಳೆಯುವ ಇದು ಯಾವ ಉಪಯೋಗಕ್ಕೂ ಇಲ್ಲ ವಲ್ಲ, ಏತಕ್ಕೆ ಇಷ್ಟು ಖರ್ಚು ಮಾಡಿ ಕಟ್ಟಿಸಿದ್ದಾರೆ ಇದನ್ನು? ಎನ್ನಿಸುತ್ತದೆ. ಅಮೇರಿಕನ್ನರು ದುಡ್ಡನ್ನು ಏನು ತಾನೆ ಮಾಡಿಯಾರು? ಅದ್ವಿತೀಯ ಎಂಬುದನ್ನು ಮಾಡಬೇಕೆಂಬ ಅಭಿಲಾಷೆ ಬಂದ ತಕ್ಷಣ ಕಾರ್ಯರೂಪಕ್ಕೆ ತರಬಲ್ಲರು.

ಇಲ್ಲಿನ ಸುಪ್ರಸಿದ್ಧ ಮೃಗಾಲಯಕ್ಕೂ ನಾವು ಹೋಗಿ ಬಂದೆವು: ಆದರೆ, ನೀವು ಚಿಕ್ಕವರಿರುವಾಗ ನಿಮ್ಮೊಡನೆ ನಮ್ಮ ಮೈಸೂರಿನ ಮೃಗಾಲಯ ನೋಡಿ ಬಂದೆವಲ್ಲಾ, ಅದರ ಆನಂದದ ಮುಂದೆ ಇದು ಸಪ್ಪೆ. ಸಸ್ಯ ಶಾಸ್ತ್ರೀಯ ವನಕ್ಕೂ ಹೋಗಿ ಬಂದೆವು, ವಸಂತಋತುವಿನ ಹೂಗಳು ಅಲ್ಲಿ ಮೈಮರೆಸುವಂತಿತ್ತು. ಕೈಯಿಂದ ಮುಟ್ಟಿದಾಗಲೇ ಆ ಹೂಗಳು ನಿಜವಾದುದೆಂದು ತಿಳಿಯಬೇಕು! ಆ ಹೂಗಳನ್ನು

ಗಿಡ ಮರಗಳಿಗೆ ಸಿಕ್ಕಿಸಿ, ಸೌಂದರ್ಯ ಧಾರೆ ಮಾಡಿದಂತಿತ್ತು. ಅಲ್ಲಿನ ತೋಟಗಳಲ್ಲಿ ತೆಂಗು, ಬಾಳೆ, ತಾಳೆ ಗಿಡಗಳನ್ನು ಕೃತ್ರಿಮ ಹವೆಯಿಂದ ಬೆಳೆಸುತ್ತಾರೆ; ಬಾಳೆಯ ಎಲೆ ನೋಡಿದ ತಕ್ಷಣ ಬೆಂಗಳೂರಿನ ಅಡಿಗೆ ಮನೆಯ ನೆನಪಾಯಿತು. ಬಾಳೆಯೆಲೆಯ ಊಟ ಮಾಡಬೇಕೆನ್ನಿಸಿತು! ಎಂತಹ ಹುಚ್ಚು! ಇಲ್ಲಿನ ರಸದೂಟಗಳನ್ನು ತಿಂದು ತಿಂದು ಈಗ ಬರೀ ಮೊಸರನ್ನ ತಿನ್ನಬೇಕೆಂಬ ಹಂಬಲ! ಇದೂ ಹುಚ್ಚೊ!!

ನಿನ್ನೆ ಇಲ್ಲಿ ತುಂಬಾ ಹಿಮ ಬಿತ್ತು; ಪತಿಯವರು ಮಕ್ಕಳ ವಿನೋದಕ್ಕೆಂದು ಹಿಮದಿಂದ ಒಂದು ಮನುಷ್ಯನನ್ನು ರಚಿಸಿದರು. ದಾರಿಯಲ್ಲಿ ತೊಡಕಾಗಿರುವ ಹಿಮವನ್ನು ಎತ್ತಿ ಪಕ್ಕಕ್ಕೆ ಹಾಕುವ ಯಂತ್ರಗಳು ಎಲ್ಲೆಲ್ಲೂ ಈಗ ಓಡಾಡುತ್ತಿವೆ. ಅವು ಬಿಸಿ ನೀರನ್ನು ಚಿಮುಕಿಸಿ ಹಿಮ ಕರಗಿಸಿ ದಾರಿ ಮಾಡುತ್ತವೆ. ರಸ್ತೆಗಳಲ್ಲಿ ಹಿಮ ಖಾಲಿ ಮಾಡುವ ಅವಕಾಶ ನೋಡಿಕೊಂಡು ವಾಹನಗಳನ್ನು ನಿಲ್ಲಿಸಬೇಕು ಎಂದು ಎಚ್ಚರಿಕೆಯ ಭಿತ್ತಿ ಫಲಕಗಳಿರುತ್ತವೆ. ಈ ಹಿಮ, ಚಳಿಯಲ್ಲಿ ಸೀರೆ ಉಟ್ಟುಕೊಂಡ ನನ್ನಂಥಹವರಿಗೆ ಅನಾನುಕೂಲವೇ. ಸರಿಯಾದ ಪೋಷಾಕು ಇದ್ದರೆ ಮಾತ್ರ ಚಳಿಯಲ್ಲಿ ಅಡ್ಡಾಡುವುದು ಕಷ್ಟವಲ್ಲ. ಸೀರೆಯನ್ನು ಇಲ್ಲಿ ಎಲ್ಲರೂ ಒಪ್ಪುತ್ತಾರೆ–ಮೆಚ್ಚುತ್ತಾರೆ. "ಅದರ ಹೆಸರು ಅದೇನೇ ಇರಲಿ, ನಿಮ್ಮ ಉಡುಪು ಅಮೋಘವಾದುದು" ಎನ್ನುತ್ತಾರೆ ನಿಜ, ಆದರೆ ಉಟ್ಟುಕೊಂಡು ನಾವು ರಸ್ತೆಯಲ್ಲಿ ಸಲೀಸಾಗಿ ಓಡಾಡುವ ಹಾಗಿಲ್ಲ. ನ್ಯೂಯಾರ್ಕ್‌ನಲ್ಲಂತೂ, ಹಿಮ ಬಹಳ ಗಲೀಜು........ಸೀರೆಯ ಅಂಚೆಲ್ಲ ಕೆಟ್ಟು ಹೋಗುತ್ತದೆ.

ಸೇಂಟ್ ಲೂಯಿಸ್‌ನ ಅತ್ಯಂತ ದೊಡ್ಡ ಹಾಗೂ ಜಗತ್ಪ್ರಖ್ಯಾತ ಪಾನಗಾರಿಕೆಯೊಂದನ್ನು (Breweries) ನೋಡಿದೆವು, ಬಹಳ ಸ್ವಚ್ಛವಾಗಿ, ಶಿಸ್ತಿನಿಂದ ಇದು ನಡೆಯುತ್ತಿದೆ. ಈ ಕಾರ್ಖಾನೆಯಲ್ಲಿ ಕೆಲಸಗಾರರ ಸಂಖ್ಯೆ ಕಡಿಮೆ. ಎಲ್ಲಾ ಕೆಲಸಗಳನ್ನೂ ಯಂತ್ರಗಳು ಮಾಡುತ್ತವೆ. ಅಂತಹ ಯಂತ್ರಗಳನ್ನು ರಚಿಸಿದ ಮಾನವನ ಮೆದುಳಿನ ಶಕ್ತಿಯನ್ನು ಮಾತ್ರ ಅಮೇರಿಕನರು ಬಾಡಿಗೆಗೆ ಪಡೆಯುತ್ತಾರೆ. ಮನುಷ್ಯನ ಕೈಗಳು ಮಾಡುವ ಎಲ್ಲಾ ಕೆಲಸಗಳನ್ನೂ ಯಂತ್ರಗಳು ಮಾಡುತ್ತವೆ. ಅಲ್ಲಿ ಎಲ್ಲೆಲ್ಲೂ ಬುದ್ಧಿವಂತಿಕೆಯ ಅಗತ್ಯವೊಂದನ್ನು ಕಾಣುತ್ತೇವೆ. ಆ ಮೆದುಳಿನಿಂದ ಎಷ್ಟು ಧನ ಸಂಗ್ರಹ ಮಾಡುತ್ತಾರೆ! ನಿಜವಾಗಿ ಈ ದೇಶ ಜಗತ್ತಿನ ಹಸಿವನ್ನೇ ದೂರಮಾಡಿ ಆಹಾರ ಕೊಡಬಲ್ಲದು, ದೈವಾನುಗ್ರಹ ಪೂರ್ಣವಿರುವ ನಾಡು ಇದು!!

ಈಗ ತಾನೆ ಜಯದೇವನ ಸ್ನೇಹಿತರ ಕಾಗದ ಲಾಸ್ ಎಂಜಿಲಿಸ್ (Los Angeles) ನಿಂದ ಬಂತು. ನಮ್ಮನ್ನು ಆತ್ಮೀಯತೆಯಿಂದ, ಬರಲು ಆಹ್ವಾನಿಸಿದ್ದಾರೆ. ಅವರು ನ್ಯೂಯಾರ್ಕ್‌ನಲ್ಲಿದ್ದಾಗ ನಮ್ಮನ್ನು ಅಲ್ಲಿ ಊಟಕ್ಕೆ ಕರೆದಿದ್ದರು.

ಈಗ ನಮಗಾಗಿ ಎಂಬಂತೆ ಲಾಸ್ ಎಂಜಿಲಿಸ್‌ಗೆ ವರ್ಗವಾಗಿ ಹೋಗಿದ್ದಾರೆ. ಅವರಿಗೆ ಮಕ್ಕಳಿರುವ ಕಾರಣ ಮನೆ ಸಿಗಲು ತುಂಬಾ ಕಷ್ಟವಾಯಿತಂತೆ. ಮಕ್ಕಳಿರುವ ಬಾಡಿಗೆದಾರ ಬೇಡ, ಸಾಕುಪ್ರಾಣಿ ಇದ್ದರೆ ಪರವಾಗಿಲ್ಲ ಎನ್ನುವ ಮನೆ ಮಾಲೀಕರೇ ಇಲ್ಲಿ ಹೆಚ್ಚು ಎಂದು ಬೇಸರದಿಂದ ಬರೆದಿದ್ದರು.

ನಾವು ನಾಳೆ ಬೆಳಿಗ್ಗೆ ಪ್ರಯಾಣ ಮಾಡಿ, ಸಂಜೆ ವೆಸ್ಟ್ ಲಾಫಾಯೆಟ್ (West Lafayette) ಸೇರುವೆವು. ಅಲ್ಲಿನ ಕಾರ್ಯಕ್ರಮಗಳು ಸಿದ್ಧವಾಗಿದೆ.

ಇತಿ ನಿನ್ನ
ಅಮ್ಮ.

* * * * *

ವೆಸ್ಟ್ ಲಾಫಾಯೆಟ್
16 - 3 - 1968

ಮುದ್ದು ಮಕ್ಕಳೇ,

ಈಗ ನಾವು ಇಂಡಿಯಾನಾದ ಪರ್ಡ್ಯೂ ವಿಶ್ವವಿದ್ಯಾಲಯದಲ್ಲಿದ್ದೇವೆ, (Pardue University) ಇದು 22,000 ವಿದ್ಯಾರ್ಥಿಗಳಿರುವ ಒಂದು ದೊಡ್ಡ ಸರಸ್ವತೀ ಮಂದಿರ, ವಿಜ್ಞಾನ ಶಾಸ್ತ್ರಗಳಿಗೂ, ತಾಂತ್ರಿಕ ವಿಜ್ಞಾನ ಶಾಖೆಗೂ ಈ ಜ್ಞಾನದೇಗುಲ ಪ್ರಸಿದ್ಧಿ. ವಿದ್ಯಾರ್ಥಿಗಳಿಗೆ ಬೇಕಾದ ಎಲ್ಲಾ ಸೌಕರ್ಯಗಳನ್ನು ಕೊಡುವ ಈ ವಿಶ್ವವಿದ್ಯಾಲಯ ಒಂದು ನಗರವೇ ಆಗಿದೆ. ಇಲ್ಲಿನ ಅತಿ ಆಧುನಿಕ ಸುಸಜ್ಜಿತ ರಂಗ ಮಂದಿರವಲ್ಲಿ ನಮ್ಮ ನೃತ್ಯ ಕಾರ್ಯಕ್ರಮ ಏರ್ಪಾಟಾಗಿತ್ತು. "........ಭಾರತದ ವಿಚಾರದಲ್ಲಿ ಕುರುಡು ಕಲ್ಪನೆ ಉಳ್ಳವರಿಗೆ ಈ ಕಾರ್ಯಕ್ರಮದಿಂದ ಆ ದೇಶದ ಅಪೂರ್ವ ಪುರಾಣ ಕಥೆಗಳನ್ನೂ ಜಾನಪದ ಜೀವನವನ್ನೂ, ಹಿಂದೂ ಧರ್ಮದ ತ್ರಿಮೂರ್ತಿಗಳ ವಿಷಯವನ್ನೂ ತಿಳಿದಂತಾಯಿತು. ಸಂಗೀತ ಮತ್ತು ಸಾಹಿತ್ಯ ವಿಚಿತ್ರವಾಗಿ ಕಂಡಿತು. ಆದರೆ ಪ್ರತಿ ನೃತ್ಯದ ಅಂತರ್ಭಾವ ಮತ್ತು ಗೌಣ ಅಭಿವ್ಯಕ್ತಿಯನ್ನು ಶ್ರೀಮತಿ ಮತ್ತು ಶ್ರೀ ಕೃಷ್ಣರಾಯರು ವರ್ಣಿಸಿದ ಕಾರಣ ಇತರರ ಸಂಸ್ಕೃತಿಯ ತಿಳುವಳಿಕೆಗೆ ಸಹಾಯವಾಯಿತು. ಸಂಗೀತ, ವೇಷಭೂಷಣ, ನೃತ್ಯ ಚಲನೆ ಇವಲ್ಲದೆ ದಂಪತಿಗಳಲ್ಲಿ ಸರಸ, ಸ್ವಾರಸ್ಯಭಾವ ಮನೆ ಮಾಡಿತ್ತು. ಈ ದಂಪತಿಗಳು ಅಸಾಮಾನ್ಯ ಹಾಗೂ ಅಪೂರ್ವ ಮನೋರಂಜನೆಯನ್ನು ಒದಗಿಸಿದರು........" ....ಎಂದು ಪತ್ರಿಕೆ ಸಾರಿತು.

ಇಲ್ಲಿನ ಭಾರತೀಯರು ನಮ್ಮನ್ನು ಆತ್ಮೀಯದರದಿಂದ ಸ್ವಾಗತಿಸಿದರು – ಸತ್ಕರಿಸಿದರು. ಇಲ್ಲಿನ ಸುತ್ತಮುತ್ತಲಿನ ವಾತಾವರಣದ ಪರಿಚಯ ಮಾಡಿ ಕೊಟ್ಟಾಗ, ತೇಲಾಡುವ ಮೇಲ್ಛಾವಣಿಯನ್ನು ಹೊಂದಿದ್ದ ಬ್ಯಾಂಡ್ ಸ್ಟಾಂಡನ್ನು (Band Stand) ಕಂಡು ಇಂಜಿನಿಯರ್‌ರಾದ ನಿಮ್ಮನ್ನು ನೆನಸಿಕೊಂಡೆವು.

ನಾಳೆ ಇಲ್ಲಿಂದ ಪಾಶ್ಚಿಮಾತ್ಯದ ಅಪೂರ್ವ ಪಶ್ಚಿಮದತ್ತ (Westward Ho !) ಪ್ರಯಾಣ !

ಇತಿ ನಿಮ್ಮ
ಅಮ್ಮ .

* * * * * *

ಪಯಣದ ಹಾದಿಯಿಂದ....

ಮುದ್ದು ಮಕ್ಕಳೇ,

32 ಘಂಟೆಗಳ ಕಾಲ ಸತತವಾಗಿ ಬಸ್ ಪ್ರಯಾಣ ಮಾಡುತ್ತಾ ಅಮೇರಿಕದ ಪ್ರದೇಶವನ್ನು ದಾಟಿ ಪೂರ್ವದಿಂದ ಪಶ್ಚಿಮದತ್ತ ಬರುತ್ತಿದ್ದೇವೆ. ಗಡಿಯಾರಗಳು ಬೇರೆ ಬೇರೆ ವೇಳೆಯನ್ನು ತೋರಿಸುತ್ತಾ ಇರುತ್ತವೆ! ಸಮಯದ ವ್ಯತ್ಯಾಸ ಕಂಡು ಬರುತ್ತದೆ–ಹವೆಯೂ ಬದಲಾಗುತ್ತಿದೆ.

ಸಾಂಟಾ ಫೇ (Santa fe) ನಿಂದ ಬರೆಯುತ್ತಿದ್ದೇನೆ. ಯೂನಿವರ್ಸಿಟಿ ಸಿವಿಲ್ ಇಂಜಿನಿಯರ್ಸ್ ಕಟ್ಟಡ ವಿಚಿತ್ರವಾಗಿತ್ತು. ಆ ವಾಸ್ತುಶಿಲ್ಪ ಜಗತ್ತಿನಲ್ಲೆಲ್ಲೂ ಕಂಡಿರಲಿಲ್ಲ.

ನ್ಯೂ ಮೆಕ್ಸಿಕೋ (New Mexico) ದಾರಿಯು ನೇರವಾಗಿ ಉದ್ದಕ್ಕೆ ರಸ್ತೆ ಹೋಗುತ್ತಿರುತ್ತದೆ. ಅಕ್ಕಪಕ್ಕದಲ್ಲಿ ಅರೆ ಮರುಭೂಮಿಯಂತಹ ಒಣ ಪ್ರದೇಶ. ದಾರಿಯಲ್ಲಿ ನಮಗೆ 3½ ಗಂಟೆ ವಿರಾಮ ಕೊಟ್ಟಿದ್ದರು. ಊಟ ಮುಗಿಸಿ, ಇಂಡಿಯಾನಾಪೋಲಿಸ್ ಪಟ್ಟಣ ನೋಡಿ ಬಂದೆವು. 232ಅಡಿ ಎತ್ತರದ ಸ್ಮಾರಕ ಸ್ಥಂಭವನ್ನು ಹತ್ತಿ 38 ಅಡಿಯ “ಕುಮಾರಿ ಇಂಡಿಯಾನ”ಳ ಪ್ರತಿಮೆಯನ್ನು (Miss Indiana Statue) ನೋಡಿದೆವು.

ಬಸ್‌ನಿಂದ ಬರೆಯುತ್ತಿದ್ದೇನೆ. ತಗ್ಗುದಿಣ್ಣೆಯ ಪ್ರದೇಶವನ್ನು ಹಾದು ಹೋಗುತ್ತಲಿದ್ದೇವೆ. ಎಲ್ಲೆಲ್ಲೂ ದನಕಾಯುವ ಹುಡುಗರು (Cow Boys) ಇಲ್ಲಿನ ಗೋಪಾಲಕರು ಎಂದೇ ಎನ್ನಿ! ನಾವು ಕಾಫಿ ಕುಡಿಯಲು ಇಳಿದ ಬಸ್ ನಿಲ್ದಾಣದ

ತುಂಬಾ ಕೆಂಪು ಇಂಡಿಯನ್ನರು ಹಾಗೂ "ಗೋಪಾಲಕರು" (Cow Boys) ಇದ್ದರು. ಪಶುಪಾಲನಾ ಕ್ಷೇತ್ರಗಳು, ಕುದುರೆಗಳು, ಕುದುರೆಗಾಡಿಗಳು, ಅದಕ್ಕೆ ಬೇಕಾಗಿರುವ ಸಲಕರಣೆಗಳು, ಅದನ್ನು ಮಾರುವ ಸ್ಥಳಗಳು – ಇವೆಲ್ಲ ಈ ಪ್ರದೇಶದ ಸಾಮಾನ್ಯ ದೃಷ್ಯ. ನಿಮ್ಮ ತಂದೆಯಂತೂ ಈ "ಪಶ್ಚಿಮ"ವನ್ನು ನೋಡಿ "ಹುಡುಗ"ನಂತೆ ಹಾರಾಡುತ್ತಿದ್ದಾರೆ !

ಟೆಕ್ಸಾಸ್ ದಾಟಿ ಬರುವಾಗ ಧಾರಾಕಾರ ಮಳೆಯಾಯಿತು. ಈಗ ಬಿಸಿಲಿದೆ. ಈ ದೇಶದಲ್ಲಿ ಬಿಸಿಲಿಗೆ ಕೊರತೆಯಿಲ್ಲ. ಎಷ್ಟು ಚಳಿಗಾಳಿಯಿದ್ದರೂ ಬಿಸಿಲಿರುತ್ತದೆ. ಲಂಡನ್ನಿನಲ್ಲಿದ್ದ ಹಾಗೆ ಕತ್ತಲೆ, ಮಬ್ಬು ಇರುವುದಿಲ್ಲ. ರಾತ್ರಿ ಬೆಳದಿಂಗಳಿದೆ.

ರೆಡ್ ಇಂಡಿಯನ್‌ಗಳು ಮಾಡುವ ಕೈಕುಶಲತೆಯ ವಸ್ತುಗಳನ್ನು ಎಲ್ಲೆಲ್ಲೂ ಮಾರಲಿಡುತ್ತಾರೆ. ಅವನ್ನು ನಾವು ನೋಡುತ್ತೇವೆ.... ನೋಡುತ್ತೇವೆ.... ನೋಡುತ್ತಲೇ ಇರುತ್ತೇವೆಯೇ ಹೊರತು ಕೊಳ್ಳಲು ಹೋಗುವುದಿಲ್ಲ ! ಅಲ್ಲ.... ಕೊಂಡು ಮಾಡುವುದಾದರೂ ಏನು ? ಮನೆಗೆ ಹೇಗೆ ಸಾಗಿಸುವುದು ? ಕೊಂಡುಕೊಳ್ಳುವುದಾದರೆ ಈ ಜಗತ್ತಿನಲ್ಲಿ ಎಷ್ಟೊಂದು ಆಕರ್ಷಕ ವಸ್ತುಗಳು ಗಮನ ಸೆಳೆಯುತ್ತವೆ ! ಆದರೆ ಆಸೆಗೆ ತಡೆ ಹಾಕಲೇ ಬೇಕು !

ನೈಋತ್ಯ ಪ್ರದೇಶದ ಅತಿ ಸ್ವಾರಸ್ಯವಾದ ಸ್ಥಳಗಳ ಮಾರ್ಗವಾಗಿ ನಮ್ಮ ಬಸ್ ಹೋಗುತ್ತಲಿದೆ. ರೆಡ್‌ಇಂಡಿಯನ್ನರ ವಾಸಸ್ಥಾನ ಇದು, ಅವರ ಬೀಡು. ಸಾಂಡಿಯಾ ಕ್ರೆಸ್ಟ್ (Sandia Crest) ಪರ್ವತಗಳ ಮೇಲೆಲ್ಲ ಹಿಮ. ಈ ಹಿಮಾಚ್ಛಾದಿತ ಶ್ರೇಣಿಯ ಮಧ್ಯದಲ್ಲಿ ನಮ್ಮ ಗ್ರೇ ಹೌಂಡ್ ಬಸ್ಸು ಓಡುತ್ತಿದೆ. ರಾಕಿ (Rocky) ಪರ್ವತಗಳಲ್ಲಿರುವ ಶಿಲಾಮಯ ಪ್ರದೇಶ. ಕಣ್ಣು ಹಾಯಿಸಿದೆಡೆಯೆಲ್ಲಾ ಕಲ್ಲು. ಅಲ್ಲಿನ ರಭಸದ ಗಾಳಿ ತಡೆಯಲು ಮನೆಗಳು ಕುಳ್ಳಾಗಿ ಕಟ್ಟಲ್ಪಟ್ಟಿವೆ. ಮನೆ ಬಾಗಿಲಿಗೆ ಮೇಲ್ಛಾವಣಿಯಿಂದ ಮೆಣಸಿನಕಾಯಿಗಳ ಮಾಲೆಮಾಲೆಗಳನ್ನೇ ತೂಗು ಹಾಕಿದ ದೃಶ್ಯ ನೋಡಲು ವಿನೋದವಾಗಿದೆ. ಮೆಕ್ಸಿಕೋ ಮತ್ತು ರೆಡ್ ಇಂಡಿಯನ್ನರ ಇಷ್ಟದ ಪದಾರ್ಥ ಮೆಣಸಿನಕಾಯಿ. ನಮ್ಮ ಹಾಗೆ !

ಒಂದೆಡೆಯಿಂದ ಇನ್ನೊಂದೆಡೆಗೆ ಸಾಗಾಟಕ್ಕೆ ತಂತಿಯ ಮೂಲಕ ಚಲಿಸುವ ವಾಹನಗಳು ಇಲ್ಲಿವೆ. (Tramways) ಇಲ್ಲಿನ ವಿಶಿಷ್ಟ ರೆಡ್ ಇಂಡಿಯನ್ನರನ್ನು ಕಂಡು ಸಂತೋಷಪಟ್ಟೆವು. ವಿಚಿತ್ರ ದೇಶಕ್ಕೆ ಬಂದ ಅನುಭವ. ಹಳೆಯ ಈ ಪ್ರದೇಶಗಳಲ್ಲಾದರೂ ಹಳೆಯದರೊಡನೆ ಹೊಸತು ಬೆರತಿದೆ. ಅಮೇರಿಕನ್ನರ ಭೋಗಪ್ರದ ಪ್ರಯಾಣ–ಆಧುನಿಕ ತಂಗುಮನೆ, ಹೊಟೆಲ್‌ಗಳು ಇದ್ದು ಪ್ರಯಾಣಿಕರಿಗೆ ಎಲ್ಲ ಸೌಕರ್ಯಗಳನ್ನು ಒದಗಿಸುತ್ತದೆ. ಹಾಗೆಯೇ ವರ್ಷಾಂತರಗಳಿಂದ ಕಿಂಚಿತ್ತೂ

ಬದಲಾಗದ ರೆಡ್ ಇಂಡಿಯನ್ನರ ಗುಡಿಸಲುಗಳು, ಅವರ ವೇಷಭೂಷಣಗಳು, ಅವರ ರೀತಿ-ನೀತಿ-ಸಂಪ್ರದಾಯ ಕಟ್ಟುಪಾಡು ಇನ್ನೂ ಸಹ ಅಚಲವಾಗಿವೆ. ಈ ಕಾರಣ ದಿಂದಲೇ ಈ ಪ್ರದೇಶಕ್ಕೆ ಒಂದು ಆಕರ್ಷಣೆ.

ಎಡೆಬಿಡದೆ ಪ್ರಯಾಣ ಮುಂದುವರಿಸುವಾಗ ಈ ಎಕ್ಸ್‌ಪ್ರೆಸ್ ಬಸ್ಸು (Express Bus) ಮಿಸೂರಿ, (Missouri) ಕಾನ್ಸಾಸ್, (Kansas) ಟೆಕ್ಸಸ್ (Texas) ಒಕ್ಲಹಾಮಾ (Oklahama) ಮತ್ತು ನ್ಯೂಮೆಕ್ಸಿಕೋ (New Mexico) ದಾರಿಯಾಗಿ ಎರಿಝೋನಾಕ್ಕೆ (Arizona) ಹೋಗುತ್ತಿದೆ. ರೊಕ್ಕಿ (Rocky) ಪರ್ವತ ಗಳನ್ನು ಹಿಂದಕ್ಕೆ ಹಾಕಿ ಈಗ ಒಣ ಮರುಭೂಮಿಗೆ ಬಂದಿದ್ದೇವೆ. ಈ ರೆಡ್ ಇಂಡಿಯನ್ ಜನಾಂಗದ ಹಳ್ಳಿಗಳು, ಅವರು ಮಾಡುವ ಕುಶಲ ವಸ್ತುಗಳು, ಪ್ರದರ್ಶನಮಾಡಿದ ಪ್ರೇಕ್ಷಣೀಯ ಸ್ಥಳಗಳು, ಪ್ರಕೃತಿ ಸೌಂದರ್ಯ ಅದರ ವೈವಿಧ್ಯತೆ ಎಲ್ಲವೂ ಸುಂದರ !

ಇತಿ ನಿಮ್ಮ
ಅಮ್ಮ .

* * * * * *

(Flagstaff – Arizona)
20 – 3 – 1968

ಮುದ್ದು ಮಕ್ಕಳೇ,

ಸುರಕ್ಷಿತವಾಗಿ ಫ್ಲೆಗ್‌ಸ್ಟಾಫ್ (Flagstaff) ಸೇರಿದೆವು. ಇಲ್ಲಿನ ವಿಶ್ರಾಂತಿ ಧಾಮದಲ್ಲಿ ರಾತ್ರಿ ಕಳೆದೆವು. ಬೆಳಿಗ್ಗೆ ಪ್ರವಾಸಿ ಬಸ್ ಒಂದರಲ್ಲಿ 77 ಮೈಲಿ ದೂರವಿರುವ ಗ್ರೇಂಡ್‌ಕೆನ್ಯನ್ (Grand Canyon) ಹೋಗುವ ವೇಳೆಗೆ ಆಕಾಶದಲ್ಲಿ ಮೋಡ ಕವಿದಿತ್ತು. ದಿನವೂ ಸ್ವಲ್ಪ ದುಗುಡತೆಯಿಂದ ಕೂಡಿತ್ತು. ಸ್ವಲ್ಪ ಸಮಯ ದಲ್ಲೇ ಹಿಮವೃಷ್ಟಿ ಆರಂಭವಾಯಿತು. ದಟ್ಟವಾಗಿ ಮಂಜುಗರೆಯುವ ಬಿರುಗಾಳಿ ಬೀಸಿತು. ಕೆಲವೇ ಕ್ಷಣಗಳಲ್ಲಿ ರಸ್ತೆ ಮಂಜಿನಿಂದ ತುಂಬಿ ಹೋಯಿತು ! ಸೀಮಾ ಪ್ರಾಂತ್ಯವೆಲ್ಲ ಮಂಜಿನಿಂದ ಕವಿದು ಹೋಯಿತು. ಗ್ರೇಂಡ್ ಕೆನ್ಯನ್ (Grand Canyon) ನೋಡುವ ಅದೃಷ್ಟ ನಮಗೆ ಇದೆಯೋ ಇಲ್ಲವೋ ಎಂಬ ಚಿಂತೆಯಾಯಿತು. ನಾವು ಈ ಪ್ರಯಾಣಕ್ಕಾಗಿ ಮಾಡಿದ ಖರ್ಚು ವ್ಯರ್ಥವಾಗ ಬಹುದೆಂಬ ಬೇಸರವೂ ಹುಟ್ಟಿತು. ಆದರೆ ಪರಮಾಶ್ಚರ್ಯವೆಂಬಂತೆ, ನೈಸರ್ಗಿಕ ಅದ್ಭುತವೆನಿಸಿಕೊಳ್ಳುವ ಗ್ರೇಂಡ್‌ಕೆನ್ಯನ್ (Grand Canyon) ತಲುಪಲು ಬರೀ 30 ಮೈಲಿ ಇರುವಾಗ ಹವೆಯು ಬದಲಾಯಿಸಿತು! ಗಗನ ತನ್ನ ಮುಸುಕನ್ನು ತೆಗೆದು ನೀಲಿಯಾಯಿತು ! ಗಾಳಿಯು ಬೆಚ್ಚಗಾಯಿತು ! ಹತ್ತಿರ ಹತ್ತಿರ ಹೋಗುತ್ತಿದ್ದಂತೆ

ಸೂರ್ಯನು ಉದಯಿಸಿ, ದೃಷ್ಯವನ್ನೆಲ್ಲಾ ತನ್ನ ಪ್ರಕಾಶದಿಂದ ಬೆಳಗಿಸಿದನು. ಎಂತಹ ಆಶ್ಚರ್ಯ !!

ಗ್ರೇಂಡ್ ಕೆನ್ಯನ್ (Grand Canyon) ತಲುಪಿದೊಡನೆಯೇ 11–30 ರಿಂದ 12–30ರ ವರೆಗೆ ಆ ಸ್ಥಳ ಚರಿತ್ರೆ ಎಲ್ಲವನ್ನೂ ಚಲನ ಚಿತ್ರದ ಮೂಲಕ ಕಂಡೆವು. ಆಮೇಲೆ ಮೆಣಸಿನಕಾಯಿ ಕೂಡಿದ ಮೆಕ್ಸಿಕನ್ (Mexican) ಊಟವನ್ನು ಮಾಡಿದೆವು. ಮಧ್ಯಾಹ್ನವೆಲ್ಲ ವಿಶೇಷ ಪ್ರವಾಸಿ ಬಂಡಿಯಲ್ಲಿ ನಮಗೆ ಗ್ರೇಂಡ್ ಕೆನ್ಯನ್‌ನ ಎಲ್ಲ ವಿಭಾಗಗಳನ್ನು ಸವಿವರವಾಗಿ ತೋರಿಸಿದರು.

ಗ್ರೇಂಡ್ ಕೆನ್ಯನ್ (Grand Canyon) ನೋಡಲು ಕೊಲೊರಾಡೊ Cloorado(ನದಿ ಹರಿಯುವ 26 ಮೈಲಿ ದೂರದವರೆಗೆ ಹೋಗಿ ಬಂದೆವು. ಈ ಗ್ರೇಂಡ್ ಕೆನ್ಯನ್ ಒಂದು ನೈಸರ್ಗಿಕ ಅದ್ಭುತ ! ಅಮೋಘ, ಅಗಾಧ, ವರ್ಣ ರಂಜಿತ, ನಯನ ಮನೋಹರ ದೃಶ್ಯ ! ಪ್ರತಿಕ್ಷಣ ಬದಲಾಯಿಸುತ್ತಲೇ ಇರುವ ಕೆನ್ಯನ್ ನಿಜವಾಗಿ ಅಮೇರಿಕಾ ದೇಶದ] ಹೆಮ್ಮೆಯ ಆಸ್ತಿ. ಈ ಸ್ಥಳದ ವರ್ಣನೆ ಮನುಷ್ಯ ಮಾತ್ರರಿಂದ ಸಾಧ್ಯವಿಲ್ಲ ! .... ಇಲ್ಲ.... ಖಂಡಿತ ಸಾಧ್ಯವಿಲ್ಲ !! ಈ ಕೆನ್ಯನ್‌ನ ಸೀಮಾರಹಿತ ಸೌಂದರ್ಯ ಬಾಹುಳ್ಯತೆ ಮನುಷ್ಯನು ಕಣ್ಣುಗಳಿಂದ ಕಾಣುವುದಕ್ಕಿಂತ ಇನ್ನೂ ಹೆಚ್ಚು ವಿಸ್ತಾರವಾಗಿದೆ. ಇದರ ಅಗಲ, ಆಳ, ಉದ್ದ, ಗಾತ್ರದ ಕಲ್ಪನೆ ಕೂಡ ಅಸಾಧ್ಯ ! ಅಡಿಯಲ್ಲಿರುವ ಕೊಲೊರಾಡೊ ನದಿ ಕಣ್ಣಿಗೆ ಚಿಕ್ಕದಾಗಿ ಕಾಣುತ್ತದೆ ! ನದಿಯ ದಡಕ್ಕೆ ಹೋಗಬೇಕಾದರೆ, ಹೇಸರಗತ್ತೆಯ ಮೇಲೆ "ಜಂಬೂಸವಾರಿ" ನಡೆಸಿ, ನಾಲ್ಕು ಮೈಲಿ ಕೆಳಗೆ ಇಳಿಯಬೇಕಂತೆ ! 217 ಮೈಲಿ ಹರಿಯುವ ಈ ನದಿ ಚೈತನ್ಯಯುಕ್ತ ಚಟುವಟಿಕೆಯಿಂದ ಕೂಡಿದೆ. ಈ ನದಿ ಭೂಮಿಯನ್ನು ಒಂಭತ್ತು ಮೈಲಿ ಅಗಲ, ಒಂದು ಮೈಲಿ ಆಳ ಕೊರೆದು ನಿರ್ಮಿಸಿದ ಅದ್ವಿತೀಯ ರಾಷ್ಟ್ರೀಯ ದೃಶ್ಯ ಈ ಕಮರಿ, ಈ ಗ್ರೇಂಡ್ ಕೆನ್ಯನ್- ಪ್ರಕೃತಿ ಸುಂದರಿಯ ಅಮರ ಕಲಾಕೃತಿ ಈ ಹೃದಯಂಗಮ ವಾಸ್ತುಶಿಲ್ಪದಲ್ಲಿದೆ. ಈ ಚಿರಂತನ ಸತ್ಯದ ಅರಿವು ಇಲ್ಲಿನ ನಿಸರ್ಗಶ್ರೀಯನ್ನು ನೋಡುತ್ತಿರುವಾಗ ಆಗುತ್ತದೆ. ಈ ಸ್ಥಳದ ರುದ್ರಸೌಂದರ್ಯದಲ್ಲಿ ಆತ್ಮವು ದೈವಿಕ ಅನಂತತೆಯಲ್ಲಿ ಹಾರಾಡುತ್ತಿರುವುದಾದರೆ ಆಶ್ಚರ್ಯವಿಲ್ಲ. ನಾವಂತೂ ಈ ಪ್ರಕೃತಿ ದೇವಿಯ ಶಿಲ್ಪವೈಚಿತ್ರ್ಯದ ಮುಂದೆ ಸ್ತಂಬೀಭೂತರಾದೆವು.... ಪ್ರಕಾಶ ಮತ್ತು ಕಲ್ಲುಗಳ ಪರಸ್ಪರ ಕ್ರೀಡಾಕಾಲದಲ್ಲಿ ಎಷ್ಟೊಂದು ವಿಧದ ಬಣ್ಣಗಳ ನಿರ್ಮಾಣವಾಗುತ್ತದೆ !!

ಅಮೇರಿಕನ್ನರು ಈ ಹೆಮ್ಮೆಯ ಹಿರಿಮೆಯನ್ನು ಬಹಳ ಜತನದಿಂದ ಕಾದಿರಿಸಿ ಕೊಂಡು ಬಂದಿದ್ದಾರೆ. ಅಲ್ಲಿನ ಮೆಕ್ಸಿಕೋ ಮತ್ತು ಎರಿಝೋನಿಯದ ಜನರ ನೃತ್ಯ ಕಲೆಯನ್ನು ಪ್ರದರ್ಶಿಸುತ್ತಾರೆ. ಹೋಪಿ (Hopi) ಮತ್ತು ನವಾಜೋ (Navajo)

ಪಂಗಡಗಳು ಮಾಡುವ ಕೈಕುಶಲತೆಯ ವಸ್ತುಗಳನ್ನು ಆಕರ್ಷಕವಾಗಿಡುತ್ತಾರೆ. ಒಟ್ಟಿನಲ್ಲಿ ಗ್ರೇಂಡ್ ಕೆನ್ಯನ್ ಒಂದು ಮರೆಯಲಾಗದ ಅನುಭವ........

ಹಿಂತಿರುಗಿ ಬರುವಾಗ ದಾರಿಯಲ್ಲಿ ಅನೇಕಾನೇಕ ಪ್ಯಾನ್ (Pine) ವೃಕ್ಷಗಳ, ಪೊಂಡೆರೊಸಾ (Ponderosa) ಮರಗಳ ಮತ್ತು ಜುನಿಪರ್ (Juniper) ಮರಗಳ ಗೊಂಡಾರಣ್ಯಗಳನ್ನು ಕಂಡೆವು. ಈ ಕಾಡುಗಳಲ್ಲಿ ಟರ್ಕಿಹಕ್ಕಿ, ಕಾಡು ಜಿಂಕೆ ಹಾಗೂ ಮೊಲಗಳು ಓಡಾಡುವುದನ್ನು ಕಂಡೆವು. ನಿಸ್ಸತ್ವ ಕಾನನದ (Petrified Forest) ದರ್ಶ ಆಯಿತು. ವರ್ಣ ಸಿಂಚಿತ ಅರಣ್ಯವೊಂದರಲ್ಲಿ (Painted Forest) ಉಲ್ಕಾ ಪಾತವೊಂದನ್ನು ಕಂಡೆವು. ಫ್ರೆಡ್ ಹಾರ್ವೀ (Fred Harvey) ಎಂಬುವರ ಆಡಳಿತದಲ್ಲಿ ಇಲ್ಲಿನ ಪ್ರವಾಸಿಗಳು ಎಲ್ಲ ಪ್ರೇಕ್ಷಣೀಯ ಸ್ಥಳಗಳನ್ನೂ ಸುಖವಾಗಿ ನೋಡುವ ವ್ಯವಸ್ಥೆ ಇದೆ.... ದೇವರು ಕೊಟ್ಟ ವರ ಗ್ರೇಂಡ್ ಕೆನ್ಯನ್.....ನಿಜ ಆದರೆ ಅದನ್ನು ಯೋಗ್ಯ ರೀತಿಯಲ್ಲಿ ಪ್ರದರ್ಶಿಸುವ ಚಾತುರ್ಯವನ್ನು ಅಮೇರಿಕನ್ನರು ಪಡೆದಿದ್ದಾರೆ.

ರಾತ್ರಿ ಪುನಃ ನಮ್ಮ ವಸತಿಗೆ ಬಂದು ಸೇರಿದೆವು. ಫ್ಲೇಗ್ ಸ್ಟಾಫ್ (Flag-Staff) ಪಟ್ಟಣದ ತುಂಬಾ ಸ್ಪೈನ್ ಜನರ ಉಪಹಾರ ಗೃಹಗಳಿವೆ. ಎರಿಝೋನಾದ ಜನರು ತಮ್ಮ ವಿಶಿಷ್ಟ ಹ್ಯಾಟ್‌ಗಳನ್ನು ತೊಟ್ಟು ಆ ಪ್ರಾಂತ್ಯಕ್ಕೆ ಒಂದು ಹೊಸತಾದ ಸ್ವಾರಸ್ಯತೆಯನ್ನು ನಮಗೆ ಕೊಟ್ಟರು. ಇಂದೇ ರಾತ್ರಿ ಗ್ರೇ ಹೌಂಡ್ ಬಸ್‌ನ ಮೂಲಕ ಲೋಸ್‌ಎಂಜಲಿಸ್ (Los angeles) ಗೆ ಪ್ರಯಾಣ. ಬಸ್ ಶಬ್ದವಿಲ್ಲದೆ, ಕುಲುಕಾಡದೆ ಒಂದೇ ವೇಗದಲ್ಲಿ ಹೋಗುವುದರಿಂದ ಪ್ರಯಾಣಿಕರಿಗೆ ತೊಟ್ಟಿಲಲ್ಲಿರು ವಂತೆ ಅನುಭವವಾಗಿ, ನಿದ್ದೆಗೇನೂ ಕೇಡಿಲ್ಲ ! ಅಲ್ಲದೆ ರಾತ್ರಿ ಪ್ರಯಾಣದಿಂದ 15 ಡಾಲರುಗಳ ಉಳಿತಾಯ ಬೇರೆ !!

ಈಗಿನ 7000 ಅಡಿ ಸಮುದ್ರ ಮಟ್ಟದ ಮೇಲಿನಿಂದ ಈಗ ಸಮುದ್ರ ದಡದಲ್ಲಿನ ಲೊಸ್‌ಎಂಜೆಲಿಸ್ (Los Angeles) ಗೆ ಹೊರಟಿದ್ದೇವೆ. ಹೊನಲೂಲುವಿನ ಪ್ರವಾಸದ ವಿಷಯ ನಿರಾಶಾದಾಯಕವಾಗಿದೆ. ಅಲ್ಲಿನ ವಿಶ್ವವಿದ್ಯಾನಿಲಯದವರು ನಮ್ಮ ಕಾರ್ಯ ಕ್ರಮವನ್ನು ಏರ್ಪಡಿಸಲು ಹಣದ ಅಭಾವದಿಂದಾಗಿ ಅಸಾಧ್ಯ ಎಂದು ಬರೆದಿದ್ದಾರೆ. ಆದರೆ ನಾವಂತೂ ಹವಾಯಿ ನೋಡದೆ ಹಿಂದಿರುಗುವುದಿಲ್ಲ.

ಇತಿ ನಿಮ್ಮ

ಅಮ್ಮ.

* * * * * *

(California–L. A.)
ಕೆಲಿಫೋರ್ನಿಯಾ–ಲೊಸ್ ಎಂಜೆಲಿಸ್.
22 – 3 – 1968

ಮುದ್ದು ಮಕ್ಕಳೇ,

ಫ್ಲೇಗ್‌ಸ್ಟಾಫ್ (Flagstaff)ನಿಂದ ರಾತ್ರಿಯೆಲ್ಲ ಪ್ರಯಾಣ ಮಾಡಿ ಅಮೇರಿಕದ ಪಶ್ಚಿಮ ಸಾಗರತಟಕ್ಕೆ ಬಂದೆವು. ಬಸ್ಸಿನ ಹಿಂದಿನ ಆಸನಗಳೆಲ್ಲ ಪೂರ್ತಿಯಾಗಿ ಖಾಲಿ ಇದ್ದುದರಿಂದ ಕಾಲುಚಾಚಿ ಮಲಗಿ ರಾತ್ರಿ ಕಳೆದೆ. ಬೆಳಿಗ್ಗೆ ಸೂರ್ಯೋದಯದ ಸಮಯ ಕಿಟಕಿಯಾಚೆ ನೋಡಿದರೆ ಕೆಲಿಫೋರ್ನಿಯಾ ! ತಾಳೇ ಮರಗಳು, ಪರ್ವತಗಳು ಗುಡ್ಡಪ್ರದೇಶ–ಮರಳು, ಹಸಿರು ಮೈದಾನಗಳು, ಬಣ್ಣಬಣ್ಣದ ಹೂಗಳು ! ಬರೀ ಗುಡ್ಡಗಾಡಿನ ಒಣ ಮರಳ ಪ್ರದೇಶದಿಂದ ನಮಗೆ ಈ ದೃಶ್ಯ ಕಣ್ಣಿಗೆ ತಂಪಾಗಿತ್ತು. ಅನಾಗರೀಕ ರೆಡ್ ಇಂಡಿಯನ್ನರ ಹೆಸರುಗಳ ಬದಲು ಎಲ್ಲೆಲ್ಲೂ ಕೆಲಿಫೋರ್ನಿಯದ ನಾಗರೀಕ ಹೆಸರುಗಳು, ಪರ್ವತಗಳ ಅಡಿಯಲ್ಲಿ ಚಿಕ್ಕ ಚಿಕ್ಕ ಅಂದವಾದ ಪಟ್ಟಣಗಳು.

ಸಮಯ ಒಂದು ಗಂಟೆ ಹಿಂದೆ ಬಿತ್ತು. ಬಸ್ ಅಂದವಾದ ಹಾದಿಯಲ್ಲಿ ಚಲಿಸುತ್ತಿತ್ತು. ಅತ್ಯಾಧುನಿಕ ಕಟ್ಟಡಗಳು, ಮನೆಗಳು, ಮೈಲು ಮೈಲು ಉದ್ದದ ಕಿತ್ತಲೆ ತೋಟಗಳು, (ಮರದ ತುಂಬಾ ಹಣ್ಣಾದ ಕಿತ್ತಲೆ ಹಣ್ಣುಗಳಿಂದಾಗಿ ಇಡೀ ದೃಶ್ಯವೇ ಕಿತ್ತಲೆ ವರ್ಣವಾಗಿತ್ತು. ಸಿಂಬೆ ಹಣ್ಣಿನ ಗಿಡಗಳಲ್ಲೂ ತುಂಬಾ ಹಣ್ಣುಗಳು) ನನಗೆ ಮೈಮರೆಸುವಂತಿತ್ತು. ಲೊಸ್‌ಎಂಜೆಲಿಸ್ (Los Angeles) ಹತ್ತಿರವಾದಂತೆ ಸಾಲು ಸಾಲಾಗಿ ಕಾರುಗಳನ್ನೂ, ಇತರೆ ವಾಹನಗಳನ್ನೂ ಕಂಡೆವು. ನಗರವನ್ನು ಸೇರಿದ ಸಂಕೇತ ಈ ಕಾರುಗಳ ಸಾಲುಗಳೇ ! ಇಡೀ ಅಮೆರಿಕದಲ್ಲಿಯೇ ಇಲ್ಲಿರುವಷ್ಟು ಕಾರುಗಳು ಇನ್ನೆಲ್ಲೂ ಇಲ್ಲವಂತೆ. ನಗರದ ಪ್ರಥಮ ದರ್ಶನದಲ್ಲಿಯೇ ನನಗೆ ಇದು ಶುಚಿಯಾದ ಸುಂದರನಗರವೆಂದು ತಿಳಿಯಿತು. ಅಮೇರಿಕಾ ದೇಶದ ನಗರಗಳನ್ನು ನಾನು ಯಾವ ರೀತಿಯಲ್ಲಿ ಕಲ್ಪಿಸಿಕೊಂಡಿದ್ದೆನೋ, ಅದೇ ರೀತಿಯ ವೈಭವ, ಲಾವಣ್ಯ ಲೊಸ್‌ಎಂಜೆಲಿಸ್ (Los Angeles) ನಲ್ಲಿತ್ತು. ಈ ನಗರ ನೇರಳೆ ಪರ್ವತಗಳ, ಕಣಿವೆಗಳ, ತೊಟ್ಟಿಲಲ್ಲಿ ಹರಡಿಕೊಂಡಿದೆ. ಈ ಪರ್ವತಗಳ ಏರುತಗ್ಗುಗಳಲ್ಲಿ ಅಂದದ ಮನೆಗಳನ್ನು ಕಂಡೆವು. ಈ ಜನರ ಜೀವನ ಎಷ್ಟು ಭೋಗಪ್ರದವಾದುದು. ! ದಾರಿಯಲ್ಲಿ ಒಬ್ಬ ಮನುಷ್ಯನೂ ರಸ್ತೆಯಲ್ಲಿ ನಡೆಯುತ್ತಿದ್ದುದನ್ನು ಕಾಣಲಿಲ್ಲ. ಪ್ರತಿಯೊಂದು ಸಂಸಾರಕ್ಕೂ ಎರಡು–ಮೂರು ಜಾಗುವಾರ್, ಫೆರಾರಿ ಮುಂತಾದ ಕಾರುಗಳಿರುವುದರಿಂದ ಜನರು ನಡೆಯಬೇಕಂತಿಲ್ಲ. ಆದರೆ ಪ್ರವಾಸಿಗಳಿಗೆ ನಗರದಲ್ಲಿ ಅನುಕೂಲವಾದ ಬಸ್ ಸೌಕರ್ಯ ಮಾತ್ರ ಇಲ್ಲ.

ಲೋಸ್ ಎಂಜೆಲಿಸ್ (Los Angeles) ನಲ್ಲಿ ಬಿಸಿಲಿನ ಪ್ರಕಾಶವಿದ್ದು ಬೆಚ್ಚಗಿತ್ತು; ನಮ್ಮ ಭಾರವಾದ ಮೇಲ್ವಾಸುಗಳನ್ನು ತೆಗೆದುಹಾಕಿ ಉಣ್ಣೆ ಬಟ್ಟೆಯ ಪರ್ವತವನ್ನತ್ತ ಒಗೆದು, ಕಾಲಿನ ಬೂಟು ತೆಗೆದು, ನಮ್ಮ ಬೆಂಗಳೂರಿನಲ್ಲಿದ್ದಂತೆ ಚಪ್ಪಲಿ ಹಾಕಿ ಕೊಂಡುದೇ ಸಂಭ್ರಮವಾಯಿತು.

ಅರವಿಂದಾಶ್ರಮದಲ್ಲಿ ಸ್ಫೂರ್ತಿ ಪಡೆದ ಮಹಿಳೆಯೊಬ್ಬರು ಇಲ್ಲಿನ ಪೂರ್ವ-ಪಶ್ಚಿಮ ಸಾಂಸ್ಕೃತಿಕ ಕೇಂದ್ರದ (East-West Culture Centre) ವ್ಯವಸ್ಥಾಪಕರು. ಅವರು ಬಸ್ ನಿಲ್ದಾಣಕ್ಕೆ ತಮ್ಮ ಕಾರು ಕಳುಹಿಸಿ ನಮ್ಮನ್ನು ಆ ಕೇಂದ್ರಕ್ಕೆ ಕರೆಸಿದರು. ಸ್ವಾಮಿ ರಾಮದಾಸರು ಭಾಷಣ ಕೊಟ್ಟು ನಕ್ಕು ನಲಿಸಿದ್ದ ಚಿಕ್ಕ ರಂಗಮಂದಿರವನ್ನು ನಮ್ಮ ಉಪನ್ಯಾಸಕ್ಕೆ ಅಣಿಗೊಳಿಸಿದ್ದರು.

ಈ ನಗರದಲ್ಲಿ ಜಯದೇವನ ಸ್ನೇಹಿತ ರಮಣಿರಾಜಾರಾಮರ ಮನೆಯಲ್ಲಿ ತಂಗಿದ್ದೇವೆ. ಅವರ ಮನೆ ಅವರ ಹೃದಯದಷ್ಟೇ ವಿಶಾಲವಾಗಿದೆ. ಸಾಯಂಕಾಲ UCLA ನಲ್ಲಿ ಓದುತ್ತಿರುವ ಜಯದೇವನ ಸಹಪಾಠಿ ನಮ್ಮನ್ನು ಕಾಣಲು ಬಂದರು. ಅವನನ್ನು ಕಂಡು ನಮಗೆ ಜಯದೇವನನ್ನು ಕಂಡಷ್ಟೇ ಆನಂದವಾಯಿತು. ಹಳೆಯ ದಿನಗಳ ಸವಿನೆನಪನ್ನೆಲ್ಲಾ ಮೆಲುಕು ಹಾಕಿ ನಗುತ್ತಾ ಕಾಲಕಳೆದೆವು. UCLA ನಲ್ಲಿ 16,000 ಹುಡುಗಿಯರೂ (ಕೃಷ್ಣ ಯಾರೋ?) 14,000 ಹುಡುಗರೂ ಓದುತ್ತಿರುವ ರಂತೆ. (UCLA-University College of Los Angeles)

ಮರುದಿನ ಬೆಳಿಗ್ಗೆ ಅವನು 2 ಕಾರು ತಂದು ನಮ್ಮನ್ನು 40 ಮೈಲಿ ದೂರದ ಡಿಸ್ನೀ ಲ್ಯಾಂಡ್‌ಗೆ (Disney Land) ಕರೆದುಕೊಂಡು ಹೋದನು. ಮನೆಯ ಪುಟಾಣಿಗಳನ್ನೂ ಕರೆದುಕೊಂಡು ಹೋದೆವು. ಅಂತಹ ಸ್ಥಳಗಳಲ್ಲಿ ಮಕ್ಕಳ ಆನಂದವೇ ನಮಗೆ ಆನಂದವಾಗುತ್ತದೆ. ಡಿಸ್ನೀ ಲ್ಯಾಂಡ್ ಮಾನವನ ಸೃಷ್ಟಿ. ಅದು ಒಂದು ದಿನದಲ್ಲಿ ನೋಡಿ ಮುಗಿಯುವ ಸ್ಥಳವಲ್ಲ. ತನ್ನ ಸಿರಿವಂತ ಮೆದುಳಿನಿಂದ ಶ್ರೀಮಂತ ಅಮೇರಿಕಾ ಕಲ್ಪಿಸಿದ ಈ ಕಲ್ಪನಾ ಸಾಮ್ರಾಜ್ಯವನ್ನು ಯಾವ ಕೊರತೆಯೂ ಇಲ್ಲದೆ ಅಕಳಂಕವಾಗಿ ರಚಿಸಿದ್ದಾರೆ....ಮುದ್ದುಮಕ್ಕಳೇ! ನನ್ನನ್ನು ಕ್ಷಮಿಸಿ! ಏಕೆಂದರೆ ಈ ಡಿಸ್ನೀ ಲ್ಯಾಂಡನ್ನು ನಾನು ಖಂಡಿತ ವರ್ಣಿಸಲಾರೆ. ಅದು ಒಂದು ಅವರ್ಣನೀಯ ಅಪೂರ್ವ ಅನುಭವ! ಅನುಭವಿಸಿದರೆ ಮಾತ್ರ ಅರಿವಾಗಬಲ್ಲ ಅಲಕಾಪುರಿಯ ಸೊಬಗು! ಬರೆದು ತಿಳಿಸುವಂತಹುದಲ್ಲ.....ಒಟ್ಟಿನಲ್ಲಿ ಈ ಅನುಭವ ಎಂದೆಂದಿಗೂ ಅಚ್ಚಳಿಯದೇ ಉಳಿಯುವುದು ಖಂಡಿತ. ಡಿಸ್ನೀ ಲ್ಯಾಂಡ್‌ನ ವಿಚಾರವಾಗಿ ಮೊದಲು ಬೇಕಾದಷ್ಟು ಓದಿದ್ದೇನೆ. ಆದರೆ ಕಣ್ಣಾರೆ ಕಂಡರೆ ಮಾತ್ರ ಇದರ ಅದ್ಭುತ ಅರಿಯ ಬಲ್ಲೆವು....ಒಂದೇ ಕಂಬಿಯ ಮೇಲೆ ಹೋಗುವ ರೈಲು....ಆಟದ ರೈಲುಗಳು....ಆಟದ ಬಸ್ಸುಗಳು....ದೋಣಿಯಲ್ಲಿ ಪ್ರಪಂಚ ಪ್ರದಕ್ಷಿಣೆ.... Alice in Wonderland ....

ಜೀವಂತ ಮರುಭೂಮಿ... ಕರಡಿ ದೇಶ.... ಸಾಹಸ ಬೀಡು.... ಎಲ್ಲವನ್ನೂ ಮಕ್ಕಳೊಡನೆ ಅನುಭವಿಸಿದೆವು. ಇದರ ವಿಚಾರವಾಗಿ ಬರೆಯಲಾರೆ....ಎಲ್ಲಿ ಆರಂಭ ! ಎಲ್ಲಿ ಕೊನೆ ? ವಿನೋದಕ್ಕೆ ಕಲ್ಪಿತ ಅವಕಾಶಗಳಾದರೂ ಎಷ್ಟೊಂದು? ....ದೈವ ಸೃಷ್ಟಿಯಂತೆಯೇ ಮಾನವನ ಈ ಸೃಷ್ಟಿಯೂ ಅಗಾಧವಾದದ್ದೇ!

ಮಧ್ಯಾಹ್ನ ಊಟಕ್ಕೆ ವಿಶಿಷ್ಟ ಮೆಕ್ಸಿಕೋ ಉಪಹಾರ ಗೃಹಕ್ಕೆ ಹೋಗಿ ಅವರ ಊಟದ ರುಚಿ ಕಂಡೆವು. ಊಟವಾದ ಮೇಲೆ ಸಮುದ್ರ ದಡಕ್ಕೆ ಹೋಗಿ ನಮ್ಮ ಕಾಲುಗಳನ್ನು ಫೆಸಿಫಿಕ್ ಸಾಗರದಲ್ಲಿ ತೋಯಿಸಿದೆವು. ಅಂದು ಶನಿವಾರ. ಜನ ಸಮೂಹ ಅರೆಬೆತ್ತಲೆಯಾಗಿ ಮರಳಿನಲ್ಲಿ ವಿಶ್ರಮಿಸುತ್ತಿದ್ದರು. ಈ ಜನರಿಗೆ ಕೈತುಂಬಾ ಹಣವಿದೆ. ಜೀವಿಸಲು ಬೇಕಾದ ಸೌಕರ್ಯಗಳಿವೆ. ಮತ್ತೇನು ಬೇಕು? ನಾವಂತೂ ಈ ನಗರದಲ್ಲಿ ಗೊತ್ತು ಗುರಿಯಿಲ್ಲದೆ ಸುತ್ತಾಡಿ ಸುತ್ತಾಡಿ ಸುಸ್ತಾದೆವು.

ಮನೆಗೆ ಹಿಂತಿರುಗುವಾಗ ರಾತ್ರಿಯಾಯಿತು. ಎತ್ತರದ ಗುಡ್ಡದಿಂದ ಲೊಸ್ ಎಂಜಿಲಿಸ್ ಮಿನುಗುವುದನ್ನು ನೋಡಿದೆವು. ಮರುದಿನ ಪುನಃ ಕಾರಿನಲ್ಲಿ ಬೆವರ್ಲಿ ಹಿಲ್ಸ್‌ಗೆ (Beverly Hills) ಹೋಗಿ ಕೋಟ್ಯಾಧೀಶ ಸಿನೆಮಾ ನಟ ನಟಿಯರು ವಾಸಿಸುವ ಭವನಗಳನ್ನು ನೋಡಿದೆವು. ಅಂತಹ ಭವ್ಯ ಭವನಗಳನ್ನು ನಾನು ಕನಸಿನಲ್ಲಿ ಕೂಡ ಕಂಡಿರಲಿಲ್ಲ! ಎದುರಿಗೇ ವಾಸ್ತವವಾಗಿ ಕಂಡಾಗ ನನಗೆ ನಂಬಲು ಸ್ವಲ್ಪ ಕಷ್ಟವೇ ಆಯಿತು....ಆದರೂ ಈ ಐಶ್ವರ್ಯವಂತರಿಗೆ ಸುಖವಿಲ್ಲವಂತೆ.... ಮಾನಸಿಕ ಶಾಂತಿ ಇಲ್ಲವಂತೆ....ಸುಖ ಎಂದರೇನು ಹಾಗಾದರೆ ಎಂಬುದೇ ಪ್ರಶ್ನೆ !!

ಪೂರ್ವ – ಪಶ್ಚಿಮ ಸಾಂಸ್ಕೃತಿಕ ಕೇಂದ್ರದಲ್ಲಿ (East – West Culture Centre) ನಮ್ಮ ಉಪನ್ಯಾಸ ಪ್ರದರ್ಶನ ತುಂಬಾ ಚೆನ್ನಾಗಿ ನಡೆಯಿತು. ಅಲ್ಲಿನ ಅಮೇರಿಕನ್ ವ್ಯವಸ್ಥಾಪಕರಿಗೆ ಎರಡು ವಿಶಾರದ ಪದವಿಗಳಿವೆ. (Master Degrees) ಆಕೆ ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಸಂಸ್ಕೃತ ಭಾಷೆಯ ಡಾಕ್ಟೊರೇಟ್ ಪಡೆದಿದ್ದಾರೆ! ಸಂಸ್ಕೃತ ವ್ಯಾಕರಣದ ಮೇಲೆ ಒಂದು ಪಠ್ಯಪುಸ್ತಕವನ್ನು ಕೂಡ ಬರೆದಿದ್ದಾರೆ.

ಪ್ರದರ್ಶನದ ದಿನ ನಮ್ಮನ್ನು ಬಹಳ ಚೆನ್ನಾಗಿ ಪ್ರೇಕ್ಷಕರಿಗೆ ಪರಿಚಯ ಮಾಡಿ ಕೊಟ್ಟರು. ಪ್ರೇಕ್ಷಕರಲ್ಲಿ ಉತ್ತಮ ರಸಿಕರಿದ್ದರು. ನಮ್ಮ ಆಗಮನಕ್ಕೆ ಮತ್ತು ಪ್ರದರ್ಶನಕ್ಕೆ ತಕ್ಕ ಪ್ರಚಾರ ಸಿಗಲಿಲ್ಲವೆಂದು ಅವರೆಲ್ಲ ಮರುಗಿದರು. ಅಲ್ಲಿನ ಪತ್ರಿಕಾ ಪ್ರಪಂಚ ಆಗ ಭಾರತ ವಿರೋಧಿಯಾಗಿತ್ತಂತೆ. ಯಾವ ಕಾರಣಕ್ಕೋ ತಿಳಿಯದು ಯಹೂದ್ಯರು (Jews) ಇರಬಹುದು ಎಂದು ನಮ್ಮ ಊಹೆ.

ಸಭೆಯಲ್ಲಿ ಸೇರಿದ್ದ UCLA ಜನರು ಉಪನ್ಯಾಸ ಕೇಳಿ, ಮೆಚ್ಚಿ– " ನಾವೂ ಒಂದು ಪ್ರದರ್ಶನ ಏರ್ಪಡಿಸುತ್ತಿದ್ದೆವು. ನಮಗೆ ಏಕೆ ಮುಂಚಿತವಾಗಿ ನೀವು

ಬರುತ್ತೀರೆಂದು ತಿಳಿಸಲಿಲ್ಲ? " ಎಂದರು. UCLAನಲ್ಲಿ ಭರತ ನಾಟ್ಯಕ್ಕೆ ವಿಶೇಷ ಪ್ರೋತ್ಸಾಹವಿದೆ. ಆದರೂ ನಾವು ಮುಂಚೆ ಬರೆದಿದ್ದರೆ.... – " ಈಗ ಆಗುವುದಿಲ್ಲ–ಕ್ಷಮಿಸಿ, ಮುಂದೆ ನೋಡೋಣ " ಎಂದೇ ಬರೆಯುತ್ತಿದ್ದರು! ನಮ್ಮನ್ನು ರಂಗಸ್ಥಳದ ಮೇಲೆ ನೋಡಿದ ಮೇಲೆ ಎಲ್ಲರಿಗೆ ಆಸಕ್ತಿ ಬರುತ್ತದೆ! ಅದೂ ಒಂದು ಜಗತ್ತಿನ ಕ್ರಮ. ನಮ್ಮ ಅಂದಿನ ಯಶಸ್ಸಿಗಾಗಿ ವ್ಯವಸ್ಥಾಪಕರು ಮೆಚ್ಚಿ –" ನೀವು ಜಗತ್ತಿಗೇ ನೀಡಬಹುದಾದ ಒಂದು ಸುಂದರ ವಸ್ತುವನ್ನು ಪಡೆದಿದ್ದೀರಿ " ಎಂದು ಹೊಗಳಿದರು. ಸಾನ್ ಫ್ರಾನ್ಸಿಸ್ಕೋನಲ್ಲಿನ (San Fransisco) ಅವರ ಸ್ನೇಹಿತರಿಗೆ ಫೋನ್ ಮಾಡಿ ನಮ್ಮ ಪ್ರದರ್ಶನಗಳನ್ನು ಏರ್ಪಡಿಸಲೇಬೇಕು ಎಂದು ಬಲವಂತ ಮಾಡಿ ಏರ್ಪಡಿಸಿದರು. " ಈ ಅವಕಾಶವನ್ನು ಕಳೆದುಕೊಳ್ಳಬೇಡಿ " ಎಂದೂ ಎಚ್ಚರಿಸಿದರು ....ಮುಂದಿನದು....ಮುಂದೆ!

ಇತಿ ನಿನ್ನ

ಅಮ್ಮ.

* * * *

Los Angeles
25 – 3 – 1968

ಮುದ್ದು ಮಕ್ಕಳೇ,

ನನ್ನ ಹಿಂದಿನ ಪತ್ರದಲ್ಲಿ "ಹೊನಲೂಲು ಪ್ರವಾಸದ ಬಗ್ಗೆ ನಿರಾಶೆಯಾಗಿದೆ " ಎಂದು ಬರೆದಿದ್ದೆನಲ್ಲವೇ? ಆದರೆ ಈಗ ಪರಿಸ್ಥಿತಿ ತುಂಬಾ ಸುಧಾರಿಸಿದೆ. ಇಲ್ಲಿಗೆ ಬಂದ ಮೇಲೆ ಹೊನಲೂಲುವಿನಿಂದ ಟ್ರಂಕ್‌ಕಾಲ್ ಬಂತು. ವಾಟುಮಲ್ ಫೌಂಡೇಷನ (Watumull Foundation) ಪೂರ್ವ–ಪಶ್ಚಿಮ ಕೇಂದ್ರದ ನಿರ್ದೇಶಕರಾದ ಶ್ರೀಮತಿ ಜಿ. ಜೆ. ವಾಟುಮಲ್ (Miss G. J. Watumull) ಅವರಿಂದ ಭಾರತದ ಬಡ ವಿದ್ಯಾರ್ಥಿಗಳ ಸಹಾಯ ನಿಧಿಗೆ ನಾವು ಪ್ರದರ್ಶನ ಕೊಡಲು ಒಪ್ಪುವೆವೋ ....ಇಲ್ಲವೋ ಎಂದು! ಪ್ರದರ್ಶನಕ್ಕೆ ಬೇಕಾದ ಆರ್ಥಿಕ ವಾಗ್ದಾನ ಇರಲಿಲ್ಲ. ಬದಲಾಗಿ ಹೊನಲೂಲುವಿನಲ್ಲಿ 3–4 ದಿನಗಳ ಪ್ರವಾಸ, ಹವಾಯಿ ದ್ವೀಪ ದರ್ಶನ,–ಉಚಿತ. ಕೈಯಿಂದ ಖರ್ಚುಮಾಡಿ ಹೋಗಬೇಕು ಎಂದಿದ್ದ ನಮಗೆ ಈ ಆಹ್ವಾನ ತುಂಬಾ ಆಕರ್ಷಕವಾಯಿತು. ಒಡನೆಯೇ ಒಪ್ಪಿಗೆ ಕೊಟ್ಟೆವು. ಪ್ರದರ್ಶನದ ತಾರೀಕೂ ನಿಶ್ಚಿತವಾಗಿದೆ.

ನಿನ್ನೆಯೆಲ್ಲ ರವಿಶಂಕರರ ಕಿನ್ನರ ಶಾಲೆಯಲ್ಲಿ ಕಳೆದೆವು. ಶ್ರೀ ರವಿಶಂಕರರನ್ನು ಇಲ್ಲಿನ ಜನತೆ ದೇವರಂತೆ ಪೂಜಿಸುತ್ತಾರೆ. ಡಿಸ್ನೀ ಲ್ಯಾಂಡ್‌ಗೆ ಹೋದಾಗ ಚಿಕ್ಕ

ಹುಡುಗಿಯರ ಪಂಗಡವೊಂದು ನಮ್ಮೊಡನೆ ಸರಸ–ಸಲ್ಲಾಪ ನಡೆಸಿದರು. "ನಾವು ಯಾವ ದೇಶದಿಂದ ಬಂದಿದ್ದೇವೆ ಗೊತ್ತೇ ?" ಎಂದು ಕೇಳಿದ್ದಕ್ಕೆ, ಒಡನೆ "ಶ್ರೀ ರವಿ ಶಂಕರರ ದೇಶದಿಂದ ಬಂದವರು ನೀವು" ಎಂದರು! ಭಾರತ ದೇಶಕ್ಕಿಂತ ರವಿಶಂಕರರು ಪರಿಚಿತರು ಇಲ್ಲಿ!!

ಕಿನ್ನರ ಸಂಗೀತ ಶಾಲೆಯಲ್ಲಿ ತಬಲ, ಸಿತಾರ್, ಹಾಡುಗಾರಿಕೆ, ನೃತ್ಯಕಲೆಯ ಪಾಠ ನಡೆಯುತ್ತಿವೆ. ಒಳಗೆ ಪ್ರವೇಶಿಸಬೇಕಾದರೆ ಪಾದರಕ್ಷೆಯನ್ನು ಆಚೆ ಬಿಡಬೇಕು, ಚಾಪೆಯ ಮೇಲೆ ಕುಳಿತು ಪಾಠ! ಎಲ್ಲವನ್ನೂ ಪರದೇಶೀಯರು ಭಾರತೀಯ ಪದ್ಧತಿ ಯಲ್ಲಿ, ಸಂಪ್ರದಾಯ ಬದ್ಧವಾಗಿಯೇ ನಡೆಸಿಕೊಂಡು ಬರುತಿದ್ದಾರೆ. ಮಾನಸಿಕ ಸಂಘರ್ಷದ ಹಿನ್ನೆಲೆಯ ಒಂದು ವರ್ಣ ರಂಜಿತ ಚಲನ ಚಿತ್ರವೊಂದನ್ನು ನೋಡಿದೆವು. ಅದಕ್ಕೆ ಶ್ರೀ ರವಿಶಂಕರರ ಹಿನ್ನೆಲೆ ಸಂಗೀತವಿತ್ತು. ರಾತ್ರಿ ಹತ್ತು ಗಂಟೆಯವರೆಗೆ ಅಲ್ಲಿದ್ದು ಮನೆಗೆ ಹಿಂತಿರುಗುವಾಗ ಪ್ರತಿ ಮನೆಯಲ್ಲಿ ಬಣ್ಣಬಣ್ಣದ ದೀಪಾಲಂಕಾರ ನೋಡಿ "ದೀಪಾವಳಿಯೇ" ಎನ್ನಿಸಿತು. ಇಲ್ಲಿನ ಜನಕ್ಕೆ ನಿತ್ಯ ದೀಪಾವಳಿ! ಪ್ರಕೃತಿಯು ಈ ಜನತೆಗೆ ಕಾಲಾನುಕ್ರಮವಾಗಿ ಮಳೆ, ಗಾಳಿ, ಬಿಸಿಲು ದಯಪಾಲಿಸಿರು ವುದರಿಂದ ಸಮೃದ್ಧಿ! ನಮ್ಮ ಸ್ನೇಹಿತರು ಎಂದಂತೆ, "ಈ ದೇಶ ಕುಬೇರನ ದೇಶ! ರಾವಣನಿಂದ ಸೋಲಿಸಲ್ಪಟ್ಟ ಮೇಲೆ ಕುಬೇರ ಇಲ್ಲಿಗೇ ಬಂದು ನೆಲಸಿರಬೇಕು" ಎಂದಿದ್ದರು. ನಿಜವಾಗಿಯೂ ನಿಜ!

ಇತಿ ನಿಮ್ಮ
ಅಮ್ಮ.

* * * * * *

ಲೊರೆಲ್ ಕೆನ್ಯನ್,
ಲಾಸ್ ಎಂಜೆಲಿಸ್
27–3–1968

ಮುದ್ದು ಮಕ್ಕಳೇ,

ನಮ್ಮ ಲಂಡನ್ ಶಿಷ್ಯೆಯ ಆದರದ ಆಹ್ವಾನವನ್ನು ಮನ್ನಿಸಿ ನಾವು ಈಗ ಮೂರು ದಿನದ ಪ್ರವಾಸಕ್ಕಾಗಿ ಹಾಲಿವುಡ್‌ಗೆ ಬಂದಿದ್ದೇವೆ. ಆಕೆ ನಮ್ಮನ್ನೂ ಮೇಲ್ಛಾವು ಇಲ್ಲದ ಕಾರೊಂದರಲ್ಲಿ "ಹಿಪ್ಪಿಗಳನ್ನು" ಪೂರ್ತಿ ತುಂಬಿ ಹಾಲಿವುಡ್‌ಗೆ ಕರೆದುಕೊಂಡು ಬಂದಳು. ಅವಳಿರುವ ಈ ಮನೆ ಕೂಡ "ಹಿಪ್ಪಿ ಮನೆ." "ಹಿಪ್ಪಿ" ಗಳ ಜೀವನ ನೋಡುವ ಆತುರ ನಮಗಿತ್ತು. ಹಾಲಿವುಡ್ ದಾಟಿ ಲೊರೆಲ್‌ಕೆನ್ಯನ್ (Laurel Canyon)ಎಂಬಲ್ಲಿ ಎತ್ತರದ ಗುಡ್ಡದ ಮೇಲೆ ಮೂರು ಮಹಡಿಗಳ ಮನೆ

ಇವರದು. ತುಂಬಾ ಅಂದವಾದ ಕಟ್ಟಡ. ಕೆಳಗೆ ದೊಡ್ಡದೊಂದು ಕೋಣೆ. ಅಲ್ಲಿ ಎಲ್ಲ ಸಂಗೀತ ವಾದ್ಯಗಳನ್ನು 'ಹಿಪ್ಪಿ'ಗಳು ಎಡೆಬಿಡದೆ ಹಗಲು ರಾತ್ರಿ ಸಂಗೀತಾಭ್ಯಾಸ ಮಾಡುತ್ತಾರೆ. "ಎಚ್ಚರಿಕೆ! ನಮ್ಮ ಸಂಗೀತ ನಿಮಗೆ ತೊಂದರೆ ಕೊಡಬಹುದು ಎಂದಿದ್ದರು. ನಮ್ಮ ಸರೋಡ್, ತಬಲ, ತಂಬೂರಿ, ಸಿತಾರ್ ಎಲ್ಲ ಸಂಗೀತ ವಾದ್ಯ ಗಳಿವೆ....ಅವರೆಲ್ಲರೂ ಸಂಗೀತಗಾರರು. ಮನಸ್ಸು ಬಂದಂತೆ ಸಂಗೀತ ರಚಿಸಿ, ಬೇಕಾದ ಸಾಹಿತ್ಯ ಹಾಕಿ, ಮುದ್ರಿಕೆಗಳನ್ನು ತಯಾರಿಸಿ ಜೀವಿಸುವರು. ಮೇಲಂತಸ್ತಿನ ಕೋಣೆಯನ್ನು ಬಿಟ್ಟುಕೊಟ್ಟಿದ್ದರು. ಸುಮಾರಾಗಿ ನಮ್ಮ ಕೆಮ್ಮಣ್ಣುಗುಂಡಿಯ ಹಾಗಿತ್ತು ಈ ಸೀಮೆ. ಕಿಟಕಿಯಿಂದ ನೋಡುವ ದೃಶ್ಯ - ಗುಡ್ಡ, ಕಾಡುಗಳು, ತೋಟಗಳು ಎಲ್ಲಾ !

ನಮ್ಮ ಲಂಡನ್ ಶಿಷ್ಯೆ ಇಲ್ಲಿ ನಿಜವಾದ ಗುರುಭಕ್ತಿಯಿಂದ ನಮ್ಮನ್ನು ನೋಡಿ ಕೊಳ್ಳುತ್ತಿದ್ದಾಳೆ. ಇವರಿಗೆ ಹಿಂದೂ ಜನರೆಂದರೆ ಅಪಾರ ಅಭಿಮಾನ.... "ಹಿಪ್ಪಿ" ಜೀವನ ವಿಚಿತ್ರ ಜೀವನ. ಅವರೆಲ್ಲರೂ ಪ್ರತಿಭಾವಂತರು, ಒಳ್ಳೆಯವರು. ಆದರೆ ಜೀವನದಲ್ಲಿ ಯಾವ ಶಿಸ್ತೂ ಬೇಡವಾದ ಜನ. ಮದುವೆ ಬೇಡ– ಆದರೆ ಪ್ರೇಮ ಬೇಕು- ಸ್ವಚ್ಛಂದ ಕಾಮ ಪ್ರದರ್ಶನ ಕೂಡ ಇವರಿಗೆ ಸಹ್ಯ. ನಾವು ಅವರಲ್ಲಿಗೆ ಬಂದ ದಿನ ಅವರಾರೂ ಊಟ ಮಾಡಿರಲಿಲ್ಲ. ಬೆಳಿಗ್ಗೆಯಿಂದ ರಾತ್ರಿಯವರೆಗೆ ಬರೀ ಕಲ್ಲಂಗಡಿ ಹಣ್ಣುಗಳನ್ನು ತಿಂದುಕೊಂಡಿದ್ದರು. ಸಧ್ಯ! ನಮ್ಮಿಬ್ಬರಿಗೆ ಅಡಿಗೆ ಮಾಡಿ ಊಟ ಹಾಕಿದರು !!

ಭಾರತದ ಧರ್ಮದ ವಿಷಯವಾಗಿ ಎಷ್ಟು ಹೇಳಿದರೂ ಸಾಲದು ಅವರಿಗೆ. 'ನೀವು ಪ್ರಾರ್ಥಿಸುವಾಗ ನಮಗೂ ಕರೆಯಿರಿ' ಎಂದು ಆತುರದಿಂದ ಕೇಳುತ್ತಾರೆ. ನ್ಯೂಯಾರ್ಕ್‌ನ ಮೆಡಿಸನ್ ಸ್ಕ್ವೇರ್ ಗಾರ್ಡನ್ಸ್‌ನಲ್ಲಿ (Madison Square Gardens) ಶ್ರೀ ಮಹರ್ಷಿ ಮಹೇಶ್ ಯೋಗಿಯವರ ಭಾಷಣ ಕೇಳಲು 6000 ಜನ ಸೇರಿದ್ದರಂತೆ. ಹೆಚ್ಚಾಗಿ ಎಲ್ಲಾ "ಹಿಪ್ಪಿ"ಗಳೇ ! ಭಾರತದಿಂದ ಯಾವುದೇ ಬರಲಿ – ಕಲೆಯಾಗಲೀ, ಕಲಾ ವಸ್ತುವಾಗಲೀ, ಧರ್ಮ ಸಂಸ್ಕೃತಿಯಾಗಲೀ, ಕಲಾ ಗಾರರಾಗಲೀ, ಈ ಜನರು ಬಾಯಿಬಾಯಿ ಬಿಡುತ್ತಾರೆ ! ಈ ಕಾರಣದಿಂದ ನಮ್ಮ ಕಲಾ ಸೇವೆಗೂ ಬೇಕಾದ ಸ್ಫೂರ್ತಿ ಸಿಕ್ಕುತ್ತಿದೆ.

ನಮ್ಮ ಶಿಷ್ಯೆ ನಮ್ಮನ್ನು ಇಲ್ಲಿನ ಜಗದ್ವಿಖ್ಯಾತ ಮಲಿಬೂ (Malibu) ಕರಾವಳಿಗೆ ಕರೆದುಕೊಂಡು ಹೋದಳು. ಹವಾಯಿಯ ಊಟ ಹಾಕಿಸಿದಳು. ಅಂದರೆ ಹಣ್ಣು ಹಂಪಲುಗಳ ಜೊತೆಗೆ ಬಣ್ಣ ಬಣ್ಣದ ತರಕಾರಿಯಿದ್ದು ನೋಡಲು ಎಷ್ಟು ಆಕರ್ಷಕ ಭೋಜನವದು ! ಅಲ್ಲಿನ ಮನೆ ಅಮೋಘ ಸೌಧ ! ಆ ಮನೆಯ ಹಿಂದೆಯೇ ಪೆಸಿ ಫಿಕ್ ಸಾಗರ ಗರ್ಜಿಸುತ್ತಿರುತ್ತದೆ! ಸಾಗರದ ಮರಳಿನ ಮೇಲೆಯೇ ಇಂತಹ ಅನೇಕ

ಮನೆಗಳಿವೆ. ಸ್ವೇಚ್ಛೆಯಾಗಿ ಮರಳಿನ ಮೇಲೆ ಸೂರ್ಯಸ್ನಾನ ಮಾಡಿ, ವಿಧವಿಧದ ಸಂಗೀತ ಕೇಳಿ ಸ್ವಾರಸ್ಯವಾಗಿ ಕಾಲ ಕಳೆದೆವು. ಸಾಗರದ ನೀರು ಮಂಜಿನಂತೆ ಅತಿ ತಣ್ಣಗಿದ್ದು ಸ್ನಾನಕ್ಕೆ ಅಯೋಗ್ಯವಾಗಿತ್ತು. ಬಿಸಿಲೂ ಸಪ್ಪೆಯೇ ! ಆದರೆ ಆ ಅಮೇರಿಕನ್ ಯುವತಿಯರಲ್ಲಿ ಚೈತನ್ಯ ತುಂಬಿ ತುಳುಕಾಡುತ್ತಾ, ಜೀವನದ ಜೀವಂತ ರೂಪದರ್ಶಿಗಳಾಗಿದ್ದರು. ಲಾಸ್ಎಂಜೆಲಿಸ್‌ನಲ್ಲಿ ಸಾಮಾನ್ಯ ಜೀವನದ ಮಟ್ಟ ಕೂಡಾ ತುಂಬಾ ಚೆನ್ನಾಗಿದೆ.

ನಾವು ಹೊಲಿವುಡ್ ಬೋಲ್ (Hollywood Bowl) ಎಂಬ ಹೊರಾಂಗಣ ರಂಗಮಂದಿರಕ್ಕೆ ಭೇಟಿಕೊಟ್ಟೆವು. ಅಲ್ಲಿ ಸುಮಾರು 19,000 ಜನರು ಕುಳಿತು ಸಂಗೀತವನ್ನು ಕೇಳುವ ಅನುಕೂಲತೆಯಿದೆ ! ಸುತ್ತಮುತ್ತಲೂ ಗುಡ್ಡಗಳಿಂದ ಆವರಿಸಲ್ಪಟ್ಟ ಈ " ಬೋಲ್ " (Bowl) ಸಹಜ ಧ್ವನಿಪ್ರಚಾರತೆಯ ಸೌಲಭ್ಯದಿಂದ ಧ್ವನಿವರ್ಧಕ ಯಂತ್ರದ ಸಹಾಯವಿಲ್ಲದೆಯೇ ಅಷ್ಟು ಜನರೂ ಸಂಗೀತ ಕೇಳುವಂತಿರುವುದು ಅತ್ಯಾಶ್ಚರ್ಯವೆನಿಸುತ್ತದೆ.

ಲೊಸ್ ಎಂಜೆಲಿಸ್ (Los Angeles) ನಗರದಲ್ಲಿನ ಹವೆಯನ್ನು ಅಲ್ಲಿ ಓಡಾಡುತ್ತಿರುವ ಸಾವಿರಾರು ವಾಹನಗಳ ಹೊಗೆಯು ಕೆಡಿಸುತ್ತದೆ ಎಂಬ ತೆಗಳಿಕೆ ಇದೆ. ಸಾನ್‌ಫ್ರಾನ್ಸಿಸ್ಕೋನ (San Francisco) ಹವೆ ಚೆನ್ನಾಗಿದೆಯಂತೆ. ಈ ಪ್ರದೇಶಗಳಲ್ಲಿ ಗುಡ್ಡಗಳಲ್ಲಿ ಮಾತ್ರ ಹಿಮ ಬೀಳುತ್ತದಂತೆ. ನಗರದಲ್ಲಿ ಇಲ್ಲವೇ ಇಲ್ಲ ಎಂದು ಕೇಳಿದೆ.

ನಾಳೆ ಸಾನ್‌ಫ್ರಾನ್ಸಿಸ್ಕೋಗೆ (San Francisco) ಹೊರಡಲಿದ್ದೇವೆ. ಈಗ ತಾನೇ ಪಾಶ್ಚಾತ್ಯ ಚಲನ ಚಿತ್ರಗಳಲ್ಲಿ ಭಾರತೀಯ ನೃತ್ಯಗಳನ್ನು ಮಾಡುವ ಪ್ರಸಿದ್ಧ ಅಶೋಕ ಮತ್ತು ಸುಜಾತ ನಮ್ಮನ್ನು ಕಾಣಲು ಬಂದಿದ್ದರು. " ಸಮಯ ಇದ್ದರೆ ನೃತ್ಯ ಹೇಳಿಕೊಡುವಿರಾ" ಎಂದು ಕೇಳಿದರು. ಮೊದಲೇ ಗೊತ್ತಿದ್ದರೆ ಅವರ ಪಾಠ ಏರ್ಪಡಿಸಬಹುದಾಗಿತ್ತು. ಈಗ ಅಸಾಧ್ಯದ ಮಾತು. ಅಂತೂ ಒಳ್ಳೆಯ ದಂಪತಿಗಳು!

ಸಾನ್‌ಫ್ರಾನ್ಸಿಸ್ಕೋ (San Francisco) ಪ್ರವಾಸಕ್ಕೆ ನಮಗೆ ತುಂಬಾ ಆತುರವಿದೆ. ಅಲ್ಲಿ ಇಡೀ ಜಗತ್ತಿನ ಕಲಾ ಸಂಗಮವಾಗಿದೆ ಎಂದು ಕೇಳಿಬಲ್ಲೆ. ಬೆಂಗಳೂರಿನಲ್ಲಿ ಸ್ನೇಹವಾದ ಮಾರ್ಸಿಯಾ ನಮ್ಮನ್ನು ಕಾತುರದಿಂದ ಕಾಯುತ್ತಿದ್ದಾಳೆ....

ಇತಿ ನಿಮ್ಮ

ಅಮ್ಮ.

* * * * * *

ಲೊಸ್ ಎಂಜೆಲಿಸ್
4 - 4 - 1968

ಮುದ್ದು ಮಕ್ಕಳೇ,

ಲೊಸ್ ಎಂಜೆಲಿಸ್ ಮತ್ತು ಅಲ್ಲಿನ ಆಪ್ತಮಿತ್ರರನ್ನು ಭಾರವಾದ ಮನಸ್ಸಿನಿಂದ ಬೀಳ್ಕೊಟ್ಟೆವು. ನಮ್ಮ ಬಸ್ಸು ಹೊರಡುವಾಗ 45 ನಿಮಿಷ ತಡವಾದರೂ ಸಾನ್ ಫ್ರಾನ್ಸಿಸ್ಕೋ (San Francisco) ತಲುಪುವಾಗ ನಿಶ್ಚಿತಸಮಯಕ್ಕೆ ಬಂದು ಸೇರಿತು. ಸಮುದ್ರದ ದಡಕ್ಕೆ ಪಕ್ಕದುದ್ದಕ್ಕೂ ಬಸ್ಸಿನದಾರಿ. ಎಡಗಡೆ ಮಿರ ಮಿರ ಮಿಂಚುವ ಪೆಸಿಫಿಕ್ ಸಾಗರದ ಅಂಚು. ಬಲಗಡೆ ಪರ್ವತ, ಕಣಿವೆ, ಸಾರಾಟೊಗ, (Saratoga) ಗುಡ್ಡಪ್ರದೇಶದ ಸೆರಗು....ಊಟೆಯಲ್ಲಿರುವಂತೆ ಏರು ತಗ್ಗು, ಹಸುಗಳು ನಿರಾತಂಕ ವಾಗಿ ಮೇಯುತ್ತಿರುವ ಶಾಂತ ದೃಶ್ಯ....ಇವೆಲ್ಲ ಚೆನ್ನಾಗಿತ್ತು.

ಈ ಪ್ರದೇಶ ವರ್ಷದ ಈ ದಿನಗಳಲ್ಲಿ ಮಾತ್ರ ಹಸಿರು ಹಸಿರಾಗಿರುವುದಂತೆ. ಬರುವ ತಿಂಗಳು ಕಂದು ಬಣ್ಣವಾಗುತ್ತದಂತೆ. ನಿಸರ್ಗ ಕೂಡ ಈ ಜನರಿಗೆ ವೈವಿಧ್ಯತೆ ಕೊಟ್ಟು ಅಭ್ಯಾಸ ಮಾಡಿ ಕೆಡಿಸಿದುದರ ಕಾರಣವೋ ಏನೋ ಯಾವುದೂ ಸ್ಥಿರವಾಗಿ ಬೇಕಿಲ್ಲ ಈ ಜನಕ್ಕೆ. ದಾರಿಯುದ್ದಕ್ಕೂ ಚಲಿಸುವ ಮನೆಗಳ ಪಟ್ಟಣ ಪಟ್ಟಣಗಳನ್ನೇ ಕಂಡೆವು. ಜನರು ಒಂದು ಕಡೆಯಿಂದ ಮತ್ತೊಂದು ಕಡೆಗೆ ಯಾವ ನೆನಹು, ವಾತ್ಸಲ್ಯ, ರಸಭಾವ, ಪರಂಪರೆಯ ಬಂಧನವೂ ಇಲ್ಲದಂತೆ ಮನಸ್ಸಿಗೆ ಬಂದ ತಕ್ಷಣ ಚಲಿಸುತ್ತಿರುತ್ತಾರೆ; ಗಾಲಿಗಳ ಮೇಲೆ ಅವರ ಮನೆಗಳು ಯಾವಾಗಲೂ ಸಿದ್ಧ. ಬೇಕಾದಲ್ಲಿಗೆ ಹೋಗಿ ಠಾಣ್ಯ ಬೀರುತ್ತವೆ. ಬೇಜಾರಾದರೆ ಮುಂದೆ! ಲಂಬಾಣಿ ಜೀವನದಂತೆ....ಸ್ಥಿರತೆ ಬೇಡವೇ ಬೇಡ!

ರಾತ್ರಿ 9 ಗಂಟೆಗೆ ಸಾನ್ ಫ್ರಾನ್ಸಿಸ್ಕೋ (San Francisco) ತಲುಪಿದೆವು. ಮಾರ್ಸಿಯಾ ನಮ್ಮನ್ನು ಸ್ವಾಗತಿಸಿ ನೇರವಾಗಿ ಚೈನಾ ಟೌನ್ (China Town) ಗೆ ಕರೆದುಕೊಂಡು ಹೋಗಿ ಊಟ ಹಾಕಿಸಿದರು. ಈ ನಗರ ಬಹಳ ಸುಂದರವಾಗಿದೆ. ರಸ್ತೆಗಳೆಲ್ಲ ಏರು-ತಗ್ಗುಗಳಿಂದ ಕೂಡಿರುವುದರಿಂದ ವಾಹನಗಳ ತಡೆಸಾಧನ (Clutch) ಸರಿಯಿಲ್ಲದಿದ್ದರೆ ದೇವರೇ ಗತಿ!

70 ವರ್ಷದ ಹಳೆಯ ಸ್ಟ್ರೀಟ್ ಕಾರ್ (Street Car) ಗಳನ್ನು ಇಲ್ಲಿ ಈಗಲೂ ಚಲಿಸುತ್ತಾರೆ! ಅಮೇರಿಕದಲ್ಲಿ ಈ ಸಂಗತಿ ಅಪರೂಪ! ಅವು ರಸ್ತೆಯ ಮಧ್ಯದಲ್ಲಿ ಚಲಿಸಿ ಕಿವಿ ಒಡೆಯುವ ಶಬ್ದ ಮಾಡುತ್ತವೆ. ಈ ವಾಹನದ ಸುತ್ತಮುತ್ತಲೆಲ್ಲ ಜನರು ಬಾವಲಿಗಳಂತೆ ನೇತಾಡಿ ಸಾಗುತ್ತಿರುತ್ತಾರೆ! ಆ ಅನುಭವ ನಮಗೂ ಆಗ ಲೆಂದು ನಮ್ಮ ಅತಿಥೇಯರು ಆ ವಾಹನಗಳನಲ್ಲಿ ಪ್ರಯಾಣ ಮಾಡಿಸಿದರು. ಎಲ್ಲೆಲ್ಲೂ

ಇರುವಂತೆ ಇಲ್ಲಿ ಕೂಡ ಕಾರುಗಳನ್ನು ನಿಲ್ಲಿಸಲು ಭೂಗರ್ಭದಲ್ಲಿ ಸುವಿಶಾಲ ಸ್ಥಳಗಳಿವೆ. ಚೈನಾ ಟೌನ್ (China Town) ಎಲ್ಲಾ ಸುತ್ತಿ ಸುತ್ತಿ ಪುಡಿ ಮಾಡಿದೆವು. ಕೊಳ್ಳುವ ಮನಸ್ಸಿದ್ದರೆ, ಸಾಧ್ಯವಿದ್ದರೆ, ಅಲ್ಲಿ ಎಷ್ಟೊಂದು ಆಕರ್ಷಕ ಪದಾರ್ಥಗಳು!

ಈ ನಗರ ರಾತ್ರಿಯಲ್ಲಿ ಮಿನುಗುವ ದೃಶ್ಯ ನೋಡಲು ಅತಿ ಎತ್ತರದ ಒಂದು ಉಪಹಾರ ಗೃಹಕ್ಕೆ ಹೋದೆವು. ಪರ್ವತದ ಅಡಿಯಲ್ಲಿ ಪರ್ಯಾಯ ದ್ವೀಪದಂತೆ ಪಸರಿಸಿದ ನಗರವನ್ನು ನೋಡಿದೆವು. ಅಲ್ಲಲ್ಲಿ ಕೊಲ್ಲಿಗಳು, ಪ್ರಸಿದ್ಧ ಸಾನ್ ಫ್ರಾನ್ಸಿಸ್ಕೋವಿನ ಸೇತುವೆಗಳು, ಬಂಗಾರದ ಬಾಗಿಲು (Golden Gate) ಇತ್ಯಾದಿ. ಸಾನ್ ಫ್ರಾನ್ಸಿಸ್ಕೋ ಅಂದವಾದ ನಗರ. ಅಂದು ನಾವು ಒಕ್‌ಲ್ಯಾಂಡ್ (Oak Land) ಸೇರಿ ಮಲಗುವಾಗ ರಾತ್ರಿ 1 ಗಂಟೆ. ಸಾನ್‌ಫ್ರಾನ್ಸಿಸ್ಕೋದಿಂದ ಒಕ್‌ಲ್ಯಾಂಡ್‌ಗೆ ಮಧ್ಯ ಒಂದು ಉದ್ದವಾದ ಸೇತುವೆ ಇದೆ. ದಾರಿಯಲ್ಲಿ ಹಡಗು ನಿಲ್ದಾಣ, ಸಮುದ್ರ ದಂಡೆ, ಮೀನು ಹಿಡಿಯುವ ಸ್ಥಳಗಳು, ಮೀನು ಮಾರ್ಕೆಟ್ಟು, ತೂಗು ಸೇತುವೆ, ಎಲ್ಲವನ್ನೂ ನೋಡಿದೆವು.

ಮರುದಿನ ಭಾನುವಾರ. ರಜಾ ಇದ್ದ ಕಾರಣ, ನಮ್ಮ ಆತಿಥ್ಯಕಾರರು ಕಾರಿನಲ್ಲಿ 70 ಮೈಲಿ ದಕ್ಷಿಣಕ್ಕಿರುವ ಮೊಂಟೇರೇ (Monteray) ಎಂಬ ಚಾರಿತ್ರಿಕ ಸ್ಥಳಕ್ಕೆ ಕರೆದುಕೊಂಡು ಹೋದರು. ಟ್ರೆಷರ್ ಆೈಲೆಂಡ್ (Treasure Island) ಬರೆದ ಆರ್. ಎಲ್. ಸ್ಟೀವನ್‌ಸನ್ (R. L. Stevenson) ಜೀವಿಸಿದ್ದ ಪಟ್ಟಣ ಇದು. ಈ ಪಟ್ಟಣಕ್ಕೆ ಹೋಗುವ ದಾರಿ ಬಹಳ ಸ್ವಾರಸ್ಯ. ಕೆಲಿಫೋರ್ನಿಯಾದ ಕರಾವಳಿ, ಎಲ್ಲವನ್ನೂ ನೋಡುವ ಅವಕಾಶವಿದೆ. ಸಮುದ್ರ ದಂಡೆಗಳಲ್ಲಿ ಜನರು ಭಾನುವಾರದ ರಜೆಯನ್ನು ಆರಾಮವಾಗಿ ಕಳೆಯುವುದು, ಅವರ ಗಾಲಿಗಳ ಮೇಲಿನ ಮನೆಗಳು, ವನಭೋಜನಗಳು, ಆಟಗಳು, ಕಲಾಗಾರರು, ಚಿತ್ರಗಾರರು, ಈಜುವ ಸ್ಥಳಗಳು, ಇವೆಲ್ಲ ನೋಡಿದೆವು. ಈಗ ಸಮುದ್ರದ ನೀರು ಬಹಳ ತಣ್ಣಗೆ ಇರುವುದರಿಂದ ಜನರು ಈಜಿನ ಗೋಜಿಗೆ ಹೋಗುವುದಿಲ್ಲ; ಆದರೆ ಮೀನು ಹಿಡಿಯುವುದೂ, ನೊರೆ ಸವಾರಿ ಮಾಡಿ ಆನಂದಿಸುವುದೂ ಸಾಮಾನ್ಯ ದೃಶ್ಯ. ಕೆಲಿಫೋರ್ನಿಯಾ ಕರಾವಳಿಯಲ್ಲಿನ ಬಂಡೆಕಲ್ಲುಗಳು ಅತ್ಯದ್ಭುತವಾಗಿದ್ದು ಕರಾವಳಿಯೇ ಹೆಸರುವಾಸಿಯಾಗಿದೆ. ಮೇಲಿನಿಂದ ಹಾದುಹೋಗುವ ರಸ್ತೆಯಿಂದ ಸಮುದ್ರವು ಹಸುರಾಗಿ ಕಾಣುತ್ತಿತ್ತು. ನಮ್ಮ ಕಾರು ಹಾರ್ಬರ್‌ಬೇ, ಹಾಫ್‌ಮೂನ್‌ಬೇ, ಬೇ ಆಫ್ ಸಾನ್‌ಫ್ರಾನ್ಸಿಸ್ಕೋ(Harbour Bay, Half-Moon Bay, Bay of San Francisco) ಧಾವಿಸಿ ಹೋಯಿತು.

ಕೆಂಪುಮರದ ಕಾಡುಗಳನ್ನು ನೋಡಿ ನನಗೆ ಅತ್ಯಾನಂದವಾಯಿತು. ಆರ್ಟಿಚೋಕ್ ಎಂಬ ತರಕಾರಿ (Artichokes : ಹೂವಿನಲ್ಲಿ ತಿನ್ನಬಹುದಾದ ಭಾಗಗಳುಳ್ಳ ತರಕಾರಿ) ಯ ಮೈಲು ಮೈಲು ಉದ್ದವಾದ, ವಿಶಾಲವಾದ ಗದ್ದೆಗಳು. ಈ

ತರಕಾರಿಯ ಉತ್ಪತ್ತಿ ಜಗತ್ತಿನಲ್ಲೇ ಹೆಚ್ಚು ಎಂದರೆ, ಇಲ್ಲೆ ಅಂತೆ ! ಸಾಲು ಸಾಲಾಗಿ ಹಣ್ಣಿನ ತೋಟಗಳು.... ...ಫಲಭರಿತ ಮರಗಳು, ಪಾಶ್ಚಾತ್ಯ ಹಣ್ಣುಗಳಾದ ಪೇರ್ (Pear) 'ಪೀಚ್ (Peach), ದೊಡ್ಡ ದ್ರಾಕ್ಷೆ (Plums) ಇತ್ಯಾದಿ........ಎಲ್ಲೆಲ್ಲೂ ತರಕಾರಿ ತೋಟಗಳು....ಟೊಮ್ಯಾಟೋ .... ಹೂಕೋಸು, ಎಲೆಕೋಸು ಇತ್ಯಾದಿ. ದನಕರುಗಳ ಹಟ್ಟಿಗಳು.........ಇಲ್ಲಿ ಫಲಭರಿತ ಮರಗಳು ಯಾರ ಗಮನವನ್ನೂ ಸೆಳೆಯುವುದಿಲ್ಲ. ರಸ್ತೆಯ ಪಕ್ಕದಲ್ಲಿಯೇ ಈ ಮರಗಳಿದ್ದರೂ ಒಂದು ಹಣ್ಣೂ ಕಾಣೆಯಾಗುವುದಿಲ್ಲ ಆಶ್ಚರ್ಯ !

ಮೊಂಟೆರೇ (Monteray) ಮೀನಿಗೆ ಪ್ರಸಿದ್ಧಿ. ದಡದಲ್ಲಿ ಸಾಗರದ ಅಡಿಗೆ ಹೋಗುವ ಈಜುಗಾರರನ್ನು ನೋಡಿದೆವು. (Skin Divers). ಬೇಕಾದಷ್ಟು ದೋಣಿ ಚಾಲನೆ, ಜಲವಿಹಾರ, ಜಳವೆ ಹಾಕಿ ನಡೆಸುವ ಚಪ್ಪಟೆ ತಳದ ದೋಣಿ ಸಂಚಾರ, ಹಾಯಿ ಹಡಗು ಪ್ರಯಾಣ ಇದೆ. ನೀರಿನಿಂದ ಅದೇ ತಾನೇ ಹೊಸದಾಗಿ ತೆಗೆದ ಯಾವ ಜಾತಿಯ ಮೀನನ್ನಾದರೂ, ನಮ್ಮ ಕಣ್ಣೆದುರಿಗೇ ಬೇಕಾದ ರೀತಿಯಲ್ಲಿ ಬೇಯಿಸಿ ಉಣಬಡಿಸುತ್ತಾರೆ. ಸಮುದ್ರದಿಂದ ತಿನ್ನಬಹುದಾದ ಎಲ್ಲ ಜೀವಜಂತುಗಳನ್ನೂ ಹಿಡಿದು ಮಾರುತ್ತಾರೆ .... ತಿನ್ನಿಸುತ್ತಾರೆ. ಸಮುದ್ರದಲ್ಲಿ ಹುದುಗಿರುವ ಎಲ್ಲಾ ಅಪೂರ್ವ ವಸ್ತುಗಳನ್ನೂ ಅಂದವಾಗಿ ಪ್ರದರ್ಶಿಸಿ ಮಾರುತ್ತಾರೆ.

ಅಮೇರಿಕದ ಮಾದಕ ದ್ರಾಕ್ಷಾರಸಗಳನ್ನು (Wine) ಪ್ರಚಾರ ಮಾಡುವ ಸ್ಥಳಕ್ಕೆ ಹೋದೆವು. ಅಭ್ಯಾಗತರಿಗೆ ಬೇರೆ ಬೇರೆ ವೈನಿನ ರುಚಿ ತೋರಿಸಿ, ಅದರ ವಿಚಾರವಾಗಿ ಪರಿಚಯ ಮಾಡಿಕೊಟ್ಟು, ಎಂದು, ಏನು, ಹೇಗೆ ಉಪಯೋಗಿಸುವ ವೈನ್ ಎಂದು ಪಾಠ ಕೊಡುತ್ತಾರೆ. ಇಲ್ಲಿ ಸುತ್ತಮುತ್ತಲೆಲ್ಲಾ ವೈನ್ ಮಾಡುವ ಭಾಗಗಳೇ ಅಂತೆ.

ಸಾನ್‌ಫ್ರಾನ್ಸಿಸ್ಕೋಗೆ ಹಿಂತಿರುಗುವಾಗ ಬೇರೆ ದಾರಿಯಾಗಿ ಬಂದು ಕೆಲಿಫೋರ್ನಿಯಾದ ಇತರ ಪ್ರದೇಶಗಳನ್ನು ನೋಡಿದೆವು.

ಏಪ್ರಿಲ್ 2 ರಂದು ಸಾಂಸ್ಕೃತಿಕ ಸಮನ್ವಯ ಕಾರ್ಯರಂಗದಲ್ಲಿ (Cultural Integration Fellowship) ನಡೆದ ನಮ್ಮ ಉಪನ್ಯಾಸಕ್ಕೆ ಸುಮಾರು 50–60 ಜನ ಟಿಕೇಟಿಲ್ಲದೆ ಹಿಂತಿರುಗಬೇಕಾಯಿತು. ರಂಗಮಂದಿರ ಚಿಕ್ಕದಾಗಿತ್ತು. ಅಲ್ಲದೆ ಕೊನೆ ಗಳಿಗೆಯಲ್ಲಿ ಏರ್ಪಾಡಾದ ಈ ಕಾರ್ಯಕ್ರಮಕ್ಕೆ ಹೆಚ್ಚು ಜನ ಬರಲಾರರೆಂಬ ಭಾವನೆ ಇತ್ತು. ಸಾನ್‌ಫ್ರಾನ್ಸಿಸ್ಕೋನಲ್ಲಿ 'ಭಾರತ ಸಪ್ತಾಹ' (India Week) ಜರುಗುತ್ತಿದ್ದುದರಿಂದ ನಮ್ಮ ಪ್ರದರ್ಶನಕ್ಕೆ ಉತ್ತಮ ಪ್ರೋತ್ಸಾಹ ಸಿಕ್ಕಿತು. ಭಾರತದ

ಕೊನ್ಸುಲೇಟ್ ಜನರಲ್‌ರವರು (Indian Consulate General) ನಮ್ಮ ಕೆಲಸಕ್ಕೆ, ನಮ್ಮ ಕಲೆಗೆ, ಮೈಸೂರು ಸರ್ಕಾರಕ್ಕೆ ಪ್ರಶಂಸಾ ಕಾಣಿಕೆಯನ್ನು ಕೊಟ್ಟು ಮಾತನಾಡಿದರು. ಪತಿಯವರು ಸ್ವಾರಸ್ಯವಾದ ಭಾಷಣ ಕೊಟ್ಟರು. 2 ಗಂಟೆಯ ಕಾಲ ಜನರು ಕದಲದೆ, ದಂಪತಿಗಳಾದ ನಮ್ಮ ನೃತ್ಯ ಕಂಡು ಬೆರಗಾದರು. ಹಲವಾರು ಇತರ ಕಲಾವಿದರು ಕೊಡುವ ಕಾರ್ಯಕ್ರಮಗಳಿಗೆ ಹೋಲಿಸಿದರೆ, ನಾವು ಕಲೆಗಾಗಿ ಪಡುವ ಶ್ರಮವನ್ನು ಕಂಡು ಜನ ಮೆಚ್ಚಿದರು. ಅಲ್ಲದೆ ಗಂಡ–ಹೆಂಡತಿ ಮಾಡುವ ತಾಂಡವ ಲಾಸ್ಯಪೂರಿತ ನೃತ್ಯಗಳಿಗೆ ಒಂದು ಅಪೂರ್ವ ಆಕರ್ಷಣೆ ಇದ್ದೇ ಇರುತ್ತದೆ. ಆ ಸಂಸ್ಥೆಯ ವ್ಯವಸ್ಥಾಪಕರು ನಾವು ಅಂದಿನ ಪ್ರೇಕ್ಷಕರ ಮನಸ್ಸನ್ನು ಸೂರೆ ಮಾಡಿದುದಕ್ಕಾಗಿ ಸಂತೋಷಪಟ್ಟರು.

ಅವರಿಗೆ ಭಾರತೀಯ ದಾರ್ಶನಿಕತೆ ತುಂಬಾ ಪ್ರಿಯವಾದ ವಿಷಯ. ಅವರ ಮನೆಯ ಊಟದ ಸಮಯದಲ್ಲಿ ಸ್ವಾಮಿ ರಾಮದಾಸ, ಕೇಶವದಾಸ್, ಸ್ವಾಮಿ ಚಿನ್ಮಯಾನಂದ ಮತ್ತು ಮಹರ್ಷಿ ಮಹೇಶ ಯೋಗಿ ಇವರ ವಿಷಯವಾಗಿ ಮಾತುಕತೆ ನಡೆಯಿತು.

ಇಲ್ಲಿ ಬರ್ಕ್ಲೀ ಹಿಲ್ಸ್ (Berkeley Hills) ನ ವಿದ್ಯಾರ್ಥಿಯೊಬ್ಬನು ನಮಗೆ ನಗರ ದರ್ಶನಕ್ಕೆಂದು ಕರೆದುಕೊಂಡು ಹೋಗುತ್ತಿರುತ್ತಾನೆ. 'ಹಿಪ್ಪಿ' ಗಳ ಬೀಡಾದ 'ಹೈಟ್ ಸ್ಟ್ರೀಟ್' ಗೂ (Haight Street) ಕರೆದುಕೊಂಡು ಹೋಗಿ ಒಂದು ಹೊಟೇಲಿನಲ್ಲಿ ಕಾಫಿ ಕುಡಿಸಿದ. ಹೋಟೆಲ್ ಒಳಗೆ ಸಿತಾರ್ ಸಂಗೀತದ ಗಾನ ಕೇಳಿ ಬರುತ್ತಿತ್ತು. 'ಹಿಪ್ಪಿ' ಗಳು ಯಾವ ಶಿಸ್ತು ಇಲ್ಲದೆ ಕೂದಲು ಬೆಳೆಸಿ ಗೋಣೀ ಚೀಲಗಳನ್ನು ಹೊದ್ದುಕೊಂಡು ಓಡಾಡುವುದನ್ನು ಕಂಡು ಇವರು ಮಾನವರೇ, ಮೃಗಗಳೇ ಎಂದು ನಮಗೆ ತಿಳಿಯಲಿಲ್ಲ. ಇಲ್ಲಿ ನಾಗರೀಕತೆ, ಎಂದರೇನು ? ಅನಾಗರೀಕತೆಯೆಂದರೇನು ? ವ್ಯತ್ಯಾಸವೇನು ? ಯಾವುದೂ ತಿಳಿಯಲಿಲ್ಲ.

ರಾತ್ರಿ ಹೋಟೆಲ್ ಕ್ಲೆರ್‌ಮೊಂ (Hotel Clarirmont) ಎಂಬಲ್ಲಿ ಔತಣ. ಹವಾಯಿ ರೀತಿಯಲ್ಲಿ. ಅವರು ಗಾಡಿ ಗಾಡಿ ತುಂಬಾ ವಿಧವಿಧದ ಆಹಾರ ತುಂಬಿ ಬೇಕಾದಷ್ಟು ಉಣ್ಣಲು ಬಿಡುತ್ತಾರೆ. ಹವಾಯಿಯ ವಿಶೇಷ ಅಡಿಗೆಯೇನೋ ನಿಜ. ಆದರೆ ನಾವು ಎಷ್ಟು ಉಣಬಲ್ಲೆವು ? ಆ ಅಡುಗೆ ನೋಡಿಯೇ ನನ್ನ ಹೊಟ್ಟೆ ತುಂಬಿ ಹೋಯಿತು. ಹವಾಯಿ ಅಡಿಗೆಯಲ್ಲಿ ಅವರ ಹೆಸರುವಾಸಿ ಸುಟ್ಟಹಂದಿಯ ಮಾಂಸ ಇದ್ದೇ ಇರುತ್ತದೆ. ಈ ಹೋಟೆಲ್ ಒಕ್‌ಲ್ಯಾಂಡ್ (Oak Land) ಮತ್ತು ಬರ್ಕ್ಲೀ (Berkeley) ಮಧ್ಯದಲ್ಲಿರುವ ಕಾರಣ ಪಾನ ನಿರ್ಬಂಧವಿಲ್ಲ. ಆದರೆ ಬರ್ಕ್ಲೀ ಹಿಲ್ (Berkeley Hills) ನಲ್ಲಿ ವಿಶ್ವವಿದ್ಯಾಲಯವಿರುವುದರಿಂದ ಪಾನನಿಷೇಧವಿದೆಯಂತೆ !

ನಮ್ಮ ಜಪಾನ್ ಪ್ರವಾಸ ಇನ್ನೂ ಖಚಿತವಾಗಿಲ್ಲ. ನಮಗೆ ಕರೆಕೊಡುವೆನೆಂದು ಭರವಸೆ ಕೊಟ್ಟ ಪುಣ್ಯಾತ್ಮನ ಪತ್ತೆಯೇ ಇಲ್ಲ! ಅಂತೂ ನಾವು ಜಪಾನಿಗೆ ಹೋಗುವುದಂತೂ ಖಂಡಿತ! ಪ್ರದರ್ಶನ ಏರ್ಪಾಡಾದಂತೆ ಖರ್ಚಿಗೆ ಸ್ವಲ್ಪ ಅನುಕೂಲವಾಗುತ್ತದೆ ಅಷ್ಟೇ! ಇನ್ನೂ ಅರ್ಧ ಜಗತ್ತಿನ ಪ್ರಯಾಣವಿದೆ. ಕೈಯಲ್ಲಿ ಸ್ವಲ್ಪ ಕಾಸಿನ ಧೈರ್ಯ ಇರಲೇ ಬೇಕು. ನಮ್ಮಲ್ಲಿರುವ ಸರಂಜಾಮುಗಳಿಗೇ ಖರ್ಚು ಹೆಚ್ಚು. ಅದು ಇದ್ದರೂ ತೊಂದರೆ...ಇಲ್ಲದೇ ಹೋದರೂ ತೊಂದರೆ. ಕಳಿಸಲು ಖರ್ಚು. ಬಿಸಿ ತುಪ್ಪ ನುಂಗಲೂ ಆಗದು – ಉಗುಳಲೂ ಆಗದು ಎಂಬಂತೆ!

—ಮತ್ತೆ ಜಯದೇವ ಏತಕ್ಕೆ ಬರೆಯುತ್ತಿಲ್ಲ? ಬರೆಯಲು ನಿಮಗೆ ಸುದ್ದಿ ಸಮಾಚಾರಗಳಿಲ್ಲದಿದ್ದರೂ ದಯವಿಟ್ಟು ಏನಾದರೂ ಗೀಚಿ ಹಾಕಿರಿ. ನಿಮ್ಮಿಂದ ಪತ್ರ ಬಾರದಿದ್ದರೆ ನಮಗೆ ಇಲ್ಲಿ ಹುರುಪೆಲ್ಲಾ ಅಡಗಿ ಹೋಗುತ್ತದೆ.

ಇತಿ ನಿಮ್ಮ
ಅಮ್ಮ.

* * * * *

ಸ್ಯಾನ್‌ಫ್ರಾನ್ಸಿಸ್ಕೋ
(San Francisco)
4 – 4 – 1968
ಸಂಜೆ 5 ಘಂಟೆ.

ಮುದ್ದು ಮಕ್ಕಳೇ,

'ಬೇಗನೇ ಬನ್ನಿ' ಎಂದು ಸಂಗೀತಗಾರರೆಲ್ಲರೂ ಬರೆದಿದ್ದ ಕಾಗದ ಈಗ ಬಂತು. ನಾವು 14ನೇ ತಾರೀಖಿನೊಳಗಾಗಿ ಬರಲಾಗುವುದಿಲ್ಲವೆಂದೂ, ನಮ್ಮ ಜೀವನದ ಧ್ಯೇಯಗಳನ್ನು ಪೂರ್ತಿಗೊಳಿಸಿಯೇ ಮನೆಗೆ ಬರುವ ನಿರ್ಧಾರ ಮಾಡಿದ್ದೇವೆಂದೂ ಅವರಿಗೆ ದಯವಿಟ್ಟು ತಿಳಿಸಿರಿ.

ನಿಮ್ಮನ್ನು ಕಾಣುವ ದಿನಗಳು ಹತ್ತಿರ ಬರುತ್ತಿವೆ. ಈ ದೇಶದ ಸಮೃದ್ಧಿಯಲ್ಲೂ ನಮ್ಮ ಭಾರತದ ಸಾಮಾನ್ಯ ಲಕ್ಷಣಗಳಿಗಾಗಿ ಹಾತೊರೆಯುತ್ತಿದ್ದೇನೆ. ಸ್ವಾಭಾವಿಕವಾಗಿಯೇ ನಮ್ಮ ಜನರು ಮೃದು ಹೃದಯದ, ಭಯ ಭಕ್ತಿಯುಳ್ಳ ಜನ. (ನಾವು ಹಿಂದಿರುಗುವಾಗ ಇದೇ ರೀತಿ ಇರಲಿ ಎಂದು ನನ್ನ ಆಶೆ!) ನಮ್ಮಿಂದ ಈ ದೇಶಗಳು ಕಲಿಯಬೇಕಾದ ಪಾಠ ಎಷ್ಟೋ ಇವೆ. ಹಾಗೆಯೇ ಅವರಿಂದ ನಾವು! ಆದರೆ ಹೆಚ್ಚಾಗಿ ಜನರು ದುರಭ್ಯಾಸಗಳನ್ನು ಮೊದಲು ಕಲಿತುಬಿಡುತ್ತಾರೆ ಸುಲಭವಾಗಿ! ಕಾಲಚಕ್ರವೊಂದೇ ಜಗತ್ತಿನ ಮೌಲ್ಯಗಳನ್ನು ನಿರ್ಧರಿಸಬಲ್ಲದು!........5-4-1970

……..ನಿನ್ನೆ ರಾತ್ರಿ ಮಾರ್ಟಿನ್ ಲೂಥರ್ ಕಿಂಗ್‌ರವರ ಕೊಲೆಯ ಸುದ್ದಿ ಪಟವನ್ನು ಟಿ. ವಿ.ಯಲ್ಲಿ ನೋಡಿದೆವು. ಇಲ್ಲಿ ಸದಾ ವರ್ಣ ವಿದ್ವೇಶದ ಕಿಚ್ಚು ಹೊಗೆಯಾಡು ತ್ತಲೇ ಇರುತ್ತದೆ: ನ್ಯೂಯಾರ್ಕ್‌ನಲ್ಲಿಯಂತೂ ಈ ವಿರುದ್ಧ ಶಕ್ತಿಗಳ ಸಮಾನತೆಯೇ ಇರುವುದರಿಂದ, ಮನಸ್ತಾಪಗಳೂ ವಿಪರೀತ ಪರಿಣಾಮ ಮುಟ್ಟುತ್ತಲೇ ಇರುತ್ತದೆ.

ಹೊನಲೂಲುವಿನಿಂದ ಅಮೆರಿಕದ ನಮ್ಮ ಹೊಸ ಪರಿಚಯಸ್ಥರು ನಮಗೆ ತಮ್ಮ ಮನೆಗೆ ಒಂದುವಾರದ ಮಟ್ಟಿಗಾದರೂ ಬರುವಂತೆ ಆಹ್ವಾನ ನೀಡಿದ್ದಾರೆ. ಅಲ್ಲದೇ ಅವರ ಕಾರು ನಮಗೆಂದೂ ಮೀಸಲಾಗಿದೆ. ಆದುದರಿಂದ ಅಲ್ಲಿ ಹತ್ತು ದಿನಗಳಿರುವು ದೆಂದು ನಿಶ್ಚಯಿಸಿದ್ದೇವೆ.

ಟೋಕಿಯೋದಿಂದ ಯಾವ ಸುದ್ದಿ ಸಮಾಚಾರವೂ ಇಲ್ಲ. ಈಗ ಇತರರಿಗೆ ಬರೆದು ಪ್ರದರ್ಶನ ಏರ್ಪಡಿಸುವುದು ಅಸಾಧ್ಯ. ಆ ಮನುಷ್ಯ ಕಡೇ ಗಳಿಗೆಯಲ್ಲಿ ನಮಗೆ ಮೋಸ ಮಾಡಬಾರದಾಗಿತ್ತು….ಆದರೆ ಪ್ರಂಪಂಚದಲ್ಲಿ ಅಂತಹ ಜನರೂ ಇರ ಬೇಕಲ್ಲವೇ ? ……..ನಾಳೆ ನಾವು ಹೊನಲೂಲುವಿಗೆ ಹಾರಿ ಹೋಗುತ್ತಿದ್ದೇವೆ–

ಇತಿ ನಿಮ್ಮ

ಅಮ್ಮ .

* * * * * "

ಆಲಾಕೋವಾ ಹೋಟೇಲ್,
(ವೈಕಿಕೀ ಕರಾವಳಿಯ ಹೃದಯದಲ್ಲಿ–
ಹೊನೊಲುಲು)

(Alakoa Hotel: In the Heart of
Waikiki Beach–Honolulu

ಹವಾಯಿ

8 – 4 – 1968

ಮುದ್ದು ಜಯದೇವ್,

ನಮ್ಮ ಗಡಿಯಾರಗಳನ್ನು ಎರಡು ಗಂಟೆ ಹಿಂದಕ್ಕೆ ತಳ್ಳಿ, ಜಪಾನ್ ವಾಯು ಯಾನದ (JAL – Japan Air Lines) ಮೂಲಕ ಹೊನಲೂಲುವಿನ "ಆಲೋಹಾ" ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ (Aloha International Air-port) ಬಂದೆವು. ಅಟ್ಲಾಂಟಿಕ್ ಸಾಗರದ ಮೇಲೆ ಹಾರುವ ಎಲ್ಲ ವಿಮಾನ ಸಂಸ್ಥೆಗಳಲ್ಲಿ "ಏರ್ ಇಂಡಿಯಾ" (Air–India) ಅತಿ ಹೆಚ್ಚಿನ ಪ್ರಸಿದ್ಧಿ ಪಡೆದಂತೆ, ಪೆಸಿಫಿಕ್ ಸಾಗರದ ಮೇಲೆ ಹಾರಾಡುವ ವಿಮಾನಗಳಲ್ಲಿ JAL ಅಷ್ಟೇ ಪ್ರಸಿದ್ಧಿ ಪಡೆದಿದೆ. ಈ JAL ನ್ನು ಪೆಸಿಫಿಕ್ ಸಾಗರದ 'ಏರ್–ಇಂಡಿಯಾ' (Air–India) ಎನ್ನುತ್ತಾರೆ.

ಹೊನಲೂಲು ಸೇರುವ ಮುಂಚೆ ನಿನ್ನನ್ನು ನಾನು ಬಹಳ ಜ್ಞಾಪಿಸಿಕೊಂಡೆ. ನಾವು ಬೆಂಗಳೂರು ಬಿಡುವ ಮೊದಲು ಭೂಪಟದ ಪರಿಚಯ ಮಾಡಿಕೊಡುತ್ತಾ "ಅಮ್ಮಾ, ಹವಾಯಿಗೆ ಹೋಗುತ್ತೀಯಾ?" ಎಂದು ನೀನು ಕೇಳಿದ್ದಕ್ಕೆ ನಾನು "ಹೌದು, ಖಂಡಿತ!" ಎಂದಿದ್ದೆ. "ಈಗ ನೀನು ಲಂಡನ್‌ಗೆ ಹೋಗಲಿರುವುದು.... ಎಂದರೆ ಪಶ್ಚಿಮದಿಂದ ಪೂರ್ವದಾರಿಯಾಗಿ ಭಾರತಕ್ಕೆ ಬರುವೆಯಾ"? ಎಂದು ನಗುತ್ತಾ ಹಾಸ್ಯ ಮಾಡಿದ್ದೆ. ನೋಡು! ಅದೇ ನಿಜವಾಯಿತು.

ಹೌದು. ಈಗ ನಾವು ಮಾನವ ನಿರ್ಮಿತ ಸ್ವರ್ಗಕ್ಕೇ ಬಂದಿದ್ದೇವೆ; ಎಲ್ಲಿ ನೋಡಿದರೂ ಸಮುದ್ರ – ಸಮುದ್ರ – ಸಮುದ್ರವೇ! ಸಮುದ್ರದ ದಂಡೆಗಳು.... ಸಮುದ್ರದ ನೀರೂ ಐದಾರು ವರ್ಣಗಳಿಂದ ರಂಜಿತವಾಗಿದೆ. ಇದು ಹವಾಯಿಯ ವೈಶಿಷ್ಟ್ಯವಂತೆ. ಸಮುದ್ರದ ಅಡಿಯಲ್ಲಿರುವ ಹವಳದ ದಿಬ್ಬಗಳಿಂದಾಗಿ ನೀರಿಗೆ ನೀಲಿ ಗುಲಾಬಿ, ನೇರಳೆ, ಕಿತ್ತಳೆ, ಹಸುರು ಎಲ್ಲ ಬಣ್ಣದ ವೈವಿಧ್ಯತೆ ಬಂದು ಅತ್ಯಾಕರ್ಷಕ ವಾದ ಮರೆಯಲಾಗದ ಅಪಾರ ಜಲರಾಶಿಯ ಮನಮೋಹಕ ಸೊಬಗು....ಸಾಗರ ಶ್ರೀಯ ಬೆಡಗು....!!

ಜನರು ದಾರಿಯಲ್ಲೆಲ್ಲಾ ಅರೆನಗ್ನರಾಗಿ ಹೂ ಹಾರಗಳಿಂದ ಅಲಂಕೃತರಾಗಿ ನಡೆ ಯುತ್ತಿರುತ್ತಾರೆ. ಬಟ್ಟೆ ಉಟ್ಟರೆ ಕಣ್ಣು ಕುಕ್ಕುವಂತಹ ದೊಡ್ಡ ದೊಡ್ಡ ಹೂಗಳ ಬಣ್ಣ ಬಣ್ಣದ ಉಡುಪುಗಳು! ಹೆಂಗಸರು "ಬಿಕಿನಿ" ಬಟ್ಟೆಯಲ್ಲೇ ಊರೆಲ್ಲ ಸುತ್ತಾಡು ತ್ತಾರೆ. ಹೊಟೆಲ್‌ಗಳಲ್ಲಿ ಊಟ ಮಾಡುವಾಗ ಕೂಡ ಅದೇ "ಬಿಕಿನಿ"! (ಮಾನ ಮುಚ್ಚಲು ಬೇಕಾದಷ್ಟು ಮಾತ್ರದ ಎರಡು ಚಿಕ್ಕ ಬಟ್ಟೆಯ ತುಂಡುಗಳಿಗೇ "ಬಿಕಿನಿ" ಎನ್ನುವುದು!) ಇಲ್ಲಿ ಬಟ್ಟೆಗೆ, ಅದನ್ನು ಧರಿಸುವ ರೀತಿಗೆ ಯಾರೂ ಗಮನ ಕೊಡುವು ದಿಲ್ಲ. ಬಟ್ಟೆ ಇರಲಿ, ಇಲ್ಲದಿರಲಿ, ಯಾರ ಲಕ್ಷವೂ ಅದರ ಮೇಲಿಲ್ಲ. ಇಲ್ಲಿಯ ಜೀವನ ಹೆಚ್ಚು ಸಮುದ್ರ ದಡದಲ್ಲಿಯೇ ಹೆಚ್ಚಾಗಿರುವುದರಿಂದ ಬಟ್ಟೆಯ ಅಗತ್ಯವೂ ಅಷ್ಟಿಲ್ಲ

ಇಲ್ಲಿನ ಬಿಸಿಲನ್ನೂ ನಮ್ಮೂರಿನಲ್ಲಿ ಬೆಳೆಯುವಂತಹ ಹೂಗಳನ್ನೂ ಕಂಡು ನಮ್ಮ ಕೇರಳ, ಮಡಿಕೇರಿ, ಮದ್ರಾಸಿನ ಜ್ಞಾಪಕವಾಯಿತು. ನಿಸರ್ಗವೂ ಸುಮಾರಾಗಿ ಹಾಗೆಯೇ ಇದೆ. ಆದರೆ ಆ ಪ್ರದರ್ಶನ, ವೈಭವ ಮಾತ್ರ ಅಮೇರಿಕದಲ್ಲಿ ಎದ್ದು ಕಾಣುತ್ತದೆ ಅಷ್ಟೇ! ನನಗೆ ಛಳಿಯಲ್ಲಿಯೇ $2\frac{1}{2}$ ವರ್ಷ ಸತತವಾಗಿ ಕಳೆದು ಅಭ್ಯಾಸವಾಗಿ ಈಗ ಬಿಸಿಲಿನಲ್ಲಿ ಸುತ್ತಿದರೆ ಸುಸ್ತಾಗುತ್ತದೆ!

ಹವಾಯಿಯ ಜನರು ಜೀವನವನ್ನು ಅತ್ಯಂತ ಸುಖವಾಗಿ ಕಳೆಯಲೆಂದೇ ಹುಟ್ಟಿ ದವರೇನೋ! ವಿನೋದ ಈ ದ್ವೀಪಗಳ ಉಸಿರಾಗಿದೆ. ಮನರಂಜನೆ ವಾತಾವರಣ ದಲ್ಲಿಯೇ ಹೊಂದಿಕೊಂಡಿದೆ. ಪ್ರವಾಸಿಗಳು ಈ ಆಕರ್ಷಣೆಗೆ ಮರುಳಾಗಿ, ಇಲ್ಲಿ

ಬಂದು ಆನಂದಿಸುತ್ತಾರೆ. ಇಲ್ಲಿಯೇ ವಾಸವಾಗಿರುವ ಜನರು ಸುತ್ತಮುತ್ತಲಿನ ಸುಲಭ ಸುಖಲೋಲುಪತೆಗೆ ಬಲಿಯಾಗದೆ, ತಮ್ಮ ಕೆಲಸವನ್ನು ಶ್ರದ್ಧೆಯಿಂದ ಮಾಡುವ ರೆಂದರೆ ನನಗಂತೂ ಅನುಮಾನ! ಇದು ಸ್ವರ್ಗೀಯ ಆನಂದದ ನೆಲೆಬೀಡು, ಅಪ್ಸರ ಕಿನ್ನರರ ಸುಂದರ ನಾಡು! ಸೌಹಾರ್ದತೆ ತುಂಬಿದ ಇಲ್ಲಿನ ಜನತೆ ಯಾವುದೇ ಪ್ರವಾಸಿಗನ ಮನಸ್ಸನ್ನು ಆಕರ್ಶಿಸುತ್ತಾರೆ. ತಮ್ಮ ಶಿಷ್ಟ ಸಂಪ್ರದಾಯಗಳನ್ನು ಇಂದಿಗೂ ಜತನವಾಗಿ ಕಾಯ್ದಿರಿಸಿಕೊಂಡು ಬಂದಿದ್ದಾರೆ. ಇಲ್ಲಿನ ಹವಾಯಿ ತರುಣಿಯ ಅಪ್ರತಿಮ ಸುಂದರಿಯರು....ಇವರ ಕಂದು ವರ್ಣದ ಚರ್ಮ, ವಿಶಾಲ ನಯನಗಳು–ನೀಳವಾದ ಕಪ್ಪು ಕೇಶರಾಶಿ, ತೀಡಿದ ದಪ್ಪ ಹುಬ್ಬುಗಳು – ಅರೆನಗ್ನ ಪ್ರಾಂತೀಯ ಉಡುಪು – ಇವುಗಳೆಲ್ಲದರ ಪರಿಣಾಮವಾಗಿ ಇವರು ಅಮೇರಿಕದ ಶೃಂಗಾರ ಸಾಧನ ಸಿಂಗಾರಿಯರಿಗಿಂತ ರೂಪವತಿಯರಾಗಿರುತ್ತಾರೆ. ಅವರು ಮಾಡುವ ಮೇಯೋರಿ, ಸಾಮೋಆ, ತಾಹಿತೀ ಕುಣಿತ (Maori, Samoa Tahiti) ಕುಣಿಯುವಾಗಲಂತೂ ಈ ತರುಣಿಯರು, ಅದೆಷ್ಟು ಮನ ಮೋಹಕರಾಗಿರುತ್ತಾರೆ! ಸಮುದ್ರ ದಂಡೆಯ ಮೇಲೆ ಗಾಳಿಗೆ ಓಲಾಡುತ್ತಿರುವ ತೆಂಗಿನ ಮರಗಳಡಿಯಲ್ಲಿ, ಅದೇ ತೆಂಗಿನ ಮರಗಳಂತೆ ಈ ಸುಂದರಿಯರು ಮೈ ಕುಲಕಿಸುತ್ತಾ ಕುಣಿಯುವಾಗ, ಪ್ರೇಕ್ಷಕ ಮಹಾಶಯನಂತೂ ಅಲೌಕಿಕ ಸ್ವರ್ಗ ಸುಖದಲ್ಲಿ ಮೈ ಮರೆಯುತ್ತಾನೆ. ಆದರೆ ಆ ಮಹಾಶಯನ ಪತ್ನಿ (ಪಕ್ಕದಲ್ಲಿದ್ದರೆ) ಮೈಯೆಲ್ಲಾ ಎಚ್ಚರವಾಗಿ ಕುಳಿತಿರುತ್ತಾಳೆ!

ಇತಿ ನಿಮ್ಮ
ಅಮ್ಮ.

* * * * * *

ಹೊನಲೂಲು
ಹವಾಯಿ,
10 – 4 – 1968

ಮುದ್ದು ಮಕ್ಕಳೇ,

ಮಿಸೆಸ್ ವಾಟುಮಲ್ (Mrs. Watumull) ರವರು ನಮ್ಮ ಪ್ರದರ್ಶನವನ್ನು 500 ಜನರು ಸೇರುವ ಉತ್ತಮ ರಂಗ ಮಂದಿರದಲ್ಲಿ ಏರ್ಪಡಿಸಿದ್ದರು. ಪ್ರೇಕ್ಷಕರು ಕಿಕ್ಕಿರಿದು ನೆರೆದಿದ್ದರು. ಪ್ರದರ್ಶನವಾದ ಮೇಲೆ ಘಮಘಮಿಸುವ ಗುಂಡು ಮಲ್ಲಿಗೆಯ ಹಾರಗಳನ್ನು ಸಮರ್ಪಿಸಿದರು. ಎರಡೂವರೆ ವರ್ಷಗಳ ನಂತರ ಈ ಹೂವಿನ ವಾಸನೆ ಪಡೆದು ನನಗೆ ಸಮ್ಮೋಹನಾಸ್ತ್ರವನ್ನು ಬೀರಿದಂತಾಯಿತು. ಮಿಸೆಸ್

ವಾಟುಮಲ್ (Mrs. Watermull) ಅವರು ಕೂಡ "ನಿಮ್ಮ ಕಲೆ ಶ್ರೀಮಂತ ಕಲೆ. ಜಗತ್ತಿಗೇ ಕೊಡಲು ನಿಮ್ಮಲ್ಲಿರುವ ಅತ್ಯಮೂಲ್ಯ ನಿಧಿ" ಎಂದರು.

ನಮಗೆ ಅವರು ವ್ಯಾಕಿಕೀ (Waikiki) ಎಂಬ ಹವಾಯಿಯ ಮಧ್ಯದಲ್ಲಿರುವ, ಅತಿ ಸುಂದರ ಸಮುದ್ರ ತಟದಲ್ಲಿರುವ ಹೋಟೆಲ್‌ನಲ್ಲಿರಲು ವ್ಯವಸ್ಥೆ ಮಾಡಿದ್ದರು. ಹವಾಯಿಯ ಎಲ್ಲ ವೈಶಿಷ್ಟ್ಯಗಳನ್ನೂ ತಿಳಿಸಿದರು. ಅಲ್ಲಿನ ಚರಿತ್ರೆ, ರಾಜ ಮನೆತನ, ಆಡಳಿತ, ಉಡುಪು, ಆಹಾರ, ಜೀವನ ಕ್ರಮ, ಸಂಪ್ರದಾಯಗಳು ಪಾರಂಪರ್ಯ ಹಿನ್ನೆಲೆ ಇತರೇ ಪದ್ಧತಿಗಳು, ಅವುಗಳನ್ನು ತಿಳಿಸುವ ಪ್ರದರ್ಶನಗಳು, ಈ ದ್ವೀಪಸ್ತೋಮದಲ್ಲಿ ಶಾಶ್ವತವಾಗಿದೆ.

ಹವಾಯಿಯಲ್ಲಿನ ಹೆಸರುಗಳು ತುಂಬಾ ಮೃದು. ನಿಸರ್ಗ ವೈಭವದೊಂದಿಗೆ ಇಲ್ಲಿ ಶ್ರೀಮಂತ ಅಮೆರಿಕನ್ನರ ವೈಭವವೂ ಮಿಲನವಾಗಿದೆ ಎಂದರೆ ನೀವು ಊಹಿಸ ಬಲ್ಲಿರಿ. ಜನರಲ್ಲಿ ಜಪಾನೀ ಜನರು ಹೆಚ್ಚು. ಆದುದರಿಂದ ಅವರ ಪ್ರಿಯವಾದ ಚಂದದ ತೋಟಗಳು ಎಲ್ಲೆಲ್ಲೂ ಇವೆ. ಭಾರತೀಯರಲ್ಲದೆ ಚೀನೀಯರೂ, ಫಿಲಿಪಿನ್ ದ್ವೀಪಗಳಲ್ಲಿನ ಜನರೂ ಇದ್ದಾರೆ. ಮನೆಗಳು ಕೆಂಪು ಮರದಿಂದ ಅತ್ಯಾಧುನಿಕ ಗೃಹ ನಿರ್ಮಾಣ ವಿಜ್ಞಾನದಿಂದ ಕಟ್ಟಲ್ಪಟ್ಟಿವೆ....ಒಟ್ಟಿನಲ್ಲಿ ಹವಾಯಿ ಪ್ರವಾಸಿಗಳ ಸ್ವರ್ಗ ಎಂದರೆ ಅತಿಶಯೋಕ್ತಿಯೇನಲ್ಲ.

ನಮ್ಮ ಹೊಸಗೆಳತಿ ಹೊನಲೂಲುವಿನ ಪ್ರತಿ ಅಂಗುಲವನ್ನೂ ಬಿಡದೆ ತೋರಿಸಿ ದಳು. ರಾತ್ರಿ ನಡೆಯುವ ಮನರಂಜನಾ ಕಾರ್ಯಕ್ರಮಗಳಿಗೂ ಕರೆದೊಯ್ದಳು. ಅವು ಅತ್ಯಂತ ಆಧುನಿಕ ಹೊಟೆಲ್‌ಗಳಲ್ಲಿ ನಡೆಯುತ್ತವೆ! ಕಹಾಲಾ ಹಿಲ್ಟನ್ (Kahala Hilton) ಮುಂತಾದ ಹೋಟೆಲ್‌ಗಳು ನಮ್ಮ ಕಲ್ಪನಾ ಸಾಮ್ರಾಜ್ಯದ ಎಲ್ಲೆಗೂ ಮೀರಿ ಇವೆ. ಏನು ವೈಭವ!! ಹೋಟೆಲ್‌ಗಳ ಅಕ್ಕಪಕ್ಕದಲ್ಲಿ ಕೃತ್ರಿಮ ಜಲಪಾತ ಗಳನ್ನೂ, ಕಾಲುವೆ-ಸರೋವರಗಳನ್ನೂ ರಚಿಸುತ್ತಾರೆ....ಬಹುಶಃ ಮಹಾಭಾರತದ ರಾಜಸೂಯ ಯಾಗದ ವೈಭವ, ಶ್ರೀಮಂತಿಕೆ, ಅದ್ಧೂರಿ, ಹೀಗೆಯೇ ಇದ್ದಿತೇನೋ ಎನಿಸುತ್ತದೆ.

ರಾಷ್ಟ್ರೀಯ ರುದ್ರಭೂಮಿಯಲ್ಲಿ ಅನಾಮಧೇಯ ಆಳಿಪರನ್ನು ಹೂತ ದೃಶ್ಯ ವನ್ನು ನೋಡಿದೆವು. ಪರ್ಲ್ ಹಾರ್ಬರ್ (Pearl Harbour) ಡಾಯಮಂಡ್ ಹೆಡ್ (Diamond Head) ಮುಂತಾದ ಚಾರಿತ್ರಿಕ ಸ್ಥಳಗಳನ್ನೂ ನೋಡಿದೆವು. ಹಳೆಯ ರಾಜರ ಅರಮನೆಯನ್ನೂ ತೋರಿದಳು. ದ್ವೀಪಗಳ ದರ್ಶನ ಮಾಡುವಾಗ ಇಲ್ಲಿನ ಅನಾನಸಿನ ತೋಟಗಳು ವಿಶಾಲವಾಗಿ ಹರಡಿದುದನ್ನು ನೋಡಿ ಸಂತೋಷಪಟ್ಟೆವು. ರಸ್ತೆಯ ಮೇಲೂ ದೊಡ್ಡ ದೊಡ್ಡ ಅನಾನಸುಗಳು ಬಲಿತು ಪಕ್ವವಾಗಿ ಹಣ್ಣಾಗಿ ಬೆಳೆ

ದಿರುತ್ತವೆ. ಪರಂಗಿ ಹಣ್ಣುಗಳು ಕೂಡ ನೋಡಲು ಎಷ್ಟು ಚೆನ್ನಾಗಿರುತ್ತದೆ. ನಿಸರ್ಗದೇವಿ ಉದಾರ ಮನಸ್ಸಿನಿಂದ ದಣಿದ ದಾರಿಹೋಕರಿಗೆ "ಬನ್ನಿ – ತಿನ್ನಿ" ಎಂದು ಹೇಳುತ್ತಿರುವಂತಿದೆ!

ಹೊನಲೂಲು ಬಿಡುವ ಮುನ್ನ ಪೆಸಿಫಿಕ್ ಸಾಗರದಲ್ಲಿ ಒಮ್ಮೆ ಮುಳುಗಬೇಕೆಂದಿದ್ದೇನೆ. ಇಲ್ಲಿನ ಸಾಗರಜಲ ಈಜಲು ಬಹಳ ಅನುಕೂಲವಾಗಿ, ಚೆನ್ನಾಗಿದೆಯಂತೆ ! ಈಜದಿದ್ದರೆ ನಾವು ಸ್ವಾಭಾವಿಕವಾದ, ಸಹಜತೆಯ ಮಾನವರೆಂದೆನಿಸಿಕೊಳ್ಳುವುದಿಲ್ಲ ಇಲ್ಲಿ !

ನೀವೆಲ್ಲ ಹೇಗಿದ್ದೀರಿ ಅಲ್ಲಿ ! ಈ ಸುಖ ಅನುಭವಿಸುತ್ತಿರುವಾಗಲೆಲ್ಲ ನಿಮ್ಮನ್ನು ಅನವರತ ಜ್ಞಾಪಿಸಿಕೊಳ್ಳುತೇನೆ. ನೀವು ಸದಾ ನಮ್ಮ ಮನಸ್ಸಿನಲ್ಲಿದ್ದೀರಿ. ನಾನು ನೋಡುತ್ತಿರುವ ಈ ವೈಭವ ಎಲ್ಲಾ ನಿಮ್ಮ ಕಣ್ಣುಗಳಿಂದಲೇ ! ಈ ಸ್ವರ್ಗಸುಖವನ್ನು ಕಂಡಾಗಲೆಲ್ಲಾ ನನಗೆ ನಿಮ್ಮನ್ನು ಬಿಟ್ಟು ಇಲ್ಲಿರುವುದಕ್ಕಾಗಿ ಬೇಸರವಾಗುತ್ತದೆ. ಆದರೆ ನೀವು ದೇವರ ದಯೆಯಿಂದ ಜೀವನ ಸಂಗ್ರಾಮದಲ್ಲಿ ಜಯಗಳಿಸಿ, ಹೆಚ್ಚು ಹಣ ಸಂಪಾದಿಸಿ, ಒಂದಲ್ಲ ಒಂದು ದಿನ ಜಗತ್ತನ್ನೆಲ್ಲಾ ಸುತ್ತುವಿರೆಂಬ ಭರವಸೆ ನನಗಿದೆ. ದೇವರು ಅದನ್ನು ನಡೆಸಲಿ....

ಇತಿ ನಿಮ್ಮ

ಅಮ್ಮ.

*   *   *   *   *

ಹೊನಲೂಲು

12 - 4 - 1968

ಮುದ್ದು ಮಕ್ಕಳೇ,

ನಾಳೆಯ ದಿನ ಹೊನಲೂಲುವಿಗೆ ಹವಾಯಿ ಭಾಷೆಯ " ಆಲೋಹಾ "– "ಹೋಗ್ಬಿಟ್ಬರ್ತೀನಿ" ಎಂದು ಹೇಳಿ ಅಮೇರಿಕದ ನಾಲ್ಕು ತಿಂಗಳ ಸುದೀರ್ಘ ಪ್ರವಾಸ ಮುಗಿಸಿ, JAL ಮೂಲಕ ಟೋಕಿಯೋಗೆ ಪ್ರಯಾಣ !

ನ್ಯೂಯಾರ್ಕಿನಿಂದ ಸಾನ್‌ಫ್ರಾನ್ಸಿಸ್ಕೋಗೆ....ಪೂರ್ವದಿಂದ ಪಶ್ಚಿಮಕ್ಕೆ–ಹಾಗೂ ಉತ್ತರದ ನಾಯಾಗಾರಾ ಜಲಪಾತದಿಂದ ದಕ್ಷಿಣದ ಶಾರ್ಲಟ್ ವರೆಗೆ ಬಸ್ಸಿನಲ್ಲಿ ಸುತ್ತಾಡಿ, ಅಮೇರಿಕದ ನೈಜಸ್ಥಿತಿಯನ್ನು ಸೂಕ್ಷ್ಮದರ್ಶಿಯಿಂದ ಕಂಡು, ಕೊನೆಗೆ ಈ ಹವಾಯಿ ಪ್ರವಾಸ ಕಲಶ ಪ್ರಾಯವಾಯಿತು.

ಈಗ ಜಪಾನ್‌ಗೆ....ಮತ್ತೊಂದು ದೊಡ್ಡ ದೇಶಕ್ಕೆ ಹೋಗಲಿದ್ದೇವೆ. ಜಪಾನ್ ತಲುಪುವಾಗ ನಾವು ಅಂತರ ರಾಷ್ಟ್ರೀಯ ದಿನಾಂಕ ರೇಖೆಯನ್ನು ದಾಟಿ ಹೋಗಬೇಕು!

ಆಗ ಸಮಯ ಮಾತ್ರವಲ್ಲ, ದಿನವೂ, ತಾರೀಕೂ ಬೇರೆಯಾಗಿರುತ್ತವೆ! ತುಂಬಾ ಆತುರದಿಂದ ಈ ಅನುಭವಕ್ಕೆ ಕಾಯುತ್ತಿದ್ದೇವೆ.

13-4-68 – ಹೊನಲೂಲು ವಿಮಾನ ನಿಲ್ದಾಣದಿಂದ ನಮ್ಮ ಸ್ನೇಹಿತರು ಇಲ್ಲಿನ ಪದ್ಧತಿಯಂತೆ ಹೂಹಾರಗಳನ್ನು ಹಾಕಿ ಬೀಳ್ಕೊಟ್ಟರು. ಹವಾಯಿ ಪ್ರವಾಸದ ವಿಷಯ ಹೆಚ್ಚಾಗಿ ಬರೆಯಲಾರೆ. ಅದು ಅನುಭವ ರಸಾಯನ. ನೋಡಿ ರುಚಿ ಕಂಡರೆ ಮಾತ್ರ ಅರಿವಾದೀತು. ಆದರೆ ಪ್ರವಾಸಿಗಳಾಗಿ ಬರಬೇಕು, 'ಇಲ್ಲೇ ಬಂದು ನೆಲೆಸು' ಎಂದರೆ ನಾವು ಒಪ್ಪುತ್ತೇವೆಯೋ ಇಲ್ಲವೋ – ಸಂಶಯ !! ಕೆಲಸ ಮಾಡಲು ಬೇಕಾದ ವಾತಾವರಣ ಇಲ್ಲಿ ಇಲ್ಲ !

—ಅಂತೂ ಹವಾಯಿ ನೋಡುವ ಆಸೆ ತೀರಿತು. ದೇವರು ದೊಡ್ಡವನು.... ಮುಂದಿನ ಪತ್ರ ಟೋಕಿಯೋದಿಂದ.

ಇತಿ ನಿನ್ನ
ಅಮ್ಮ.

ಹೊನೊಲುಲುವಿನಿಂದ
ಟೋಕ್ಯೋ ನಗರಕ್ಕೆ

ಅಮೇರಿಕಾ ದೇಶದಿಂದ
ಜಪಾನ್ ದೇಶಕ್ಕೆ

ಹೋಟೆಲ್ ಟಾಕಾನಾವಾ
ಟೋಕ್ಯೊ (Eastern Capital)
4 - 4 - 1968

ಮುದ್ದು ಮಕ್ಕಳೇ,

ನಾಲ್ಕು ತಿಂಗಳ ಅಮೇರಿಕಾ ಪ್ರವಾಸ ಮುಗಿಸಿ ಕತ್ತಿಗೆ ಸುಗಂಧಿತ ಹಾರಗಳನ್ನು ಧರಿಸಿ ಜಪಾನ್ ದೇಶಕ್ಕೆ ಹೊರಟೆವು. ಜಪಾನ್ ಏರ್‌ಲೈನ್ಸ್‌ನವರು ಜಾಹೀರು (JAL Advertise) ಮಾಡುವಂತೆ ವಿಮಾನದ ಗಗನ ಸುಂದರಿಯರು ಏರ್‌ಹೋಸ್ಟೆಸ್ (Air Hostesses) ಕಿಮೊನೊ (Kimono) ಉಟ್ಟುಕೊಂಡಿರದೆ ಇದ್ದುದು ನನಗೆ ನಿರಾಶೆಯಾಯಿತು. ಪೆನ್–ಎಮ್ (PAN–AM) ನಲ್ಲಿ ಇದ್ದಂತೆ ಟೆಲಿವಿಶನ್ ಇರಲಿಲ್ಲ. ಮೃದುವಾದ ಸಂಗೀತ ತೇಲಿಬರುತ್ತಿತ್ತು. ಜಪಾನೀಯರ ಮೆಲ್ಲುಲಿ ಕೇಳಿ ಸಂತೋಷವಾಯಿತು........

ಗಗನ ಸುಂದರಿಯರು 'ಏರ್ ಹೋಸ್ಟೆಸ್' ಮೊದಲು ಬಿಸಿ ಟವೆಲುಗಳನ್ನು ಕೊಟ್ಟು ಪ್ರಯಾಣಿಕರನ್ನು ಚೇತರಿಸುತ್ತಾರೆ. ಆಮೇಲೆ ಒಂದು ಹೊಸ ಆರ್ಕಿಡ್ (Orchid) ಹೂವಿನೊಡನೆ ಆಹಾರ ತಂದಿಡುತ್ತಾರೆ. ಹೂವು ಜಪಾನಿನ ಜನರಿಗೆ ಅತಿಪ್ರಿಯ. ಜಪಾನೀಯರ ಆಹಾರ ಮಾತ್ರ ತಿನ್ನಲು ಸಾಧ್ಯವೇ ಇಲ್ಲ. ಚೀನೀಯರ ಆಹಾರದ ಅಭ್ಯಾಸವಿದೆ. ಆದರೆ ಜಪಾನೀಯರ ಆಹಾರದ ದುರ್ಗಂಧ ಪತಿಯವರಿಗೂ ಅಸಹ್ಯವಾಯಿತು. ನನಗೊಬ್ಬಳಿಗೋಸ್ಕರ ತರಕಾರಿಗಳನ್ನೆಲ್ಲ ಜೇಯಿಸಿ, ಬಿಸಿ ಅನ್ನ ವಿಮಾನದಲ್ಲೇ ತಯಾರಿಸಿ ಕೊಡಬೇಕಾಯಿತು! ಅಂತರರಾಷ್ಟ್ರೀಯ ದಿನ ಸೂಚಿ ರೇಖೆಯನ್ನು 'ಇಂಟರ್ ನ್ಯಾಷನಲ್ ಡೇಟ್ ಲೈನ್' (International Date Line) ದಾಟಿ ಬರುವಾಗ ನಮಗಾದ ಆನಂದಕಂಪನ ಹೇಳತೀರದು. ದಿನವೊಂದು, ತಾರೀಕೊಂದು ಬದಲಾವಣೆ ಒಂದು ನಿಮಿಷದೊಳಗೆ ಆಗುವ ವಿಚಿತ್ರ ಸಮಾರಂಭವನ್ನು ಪ್ರತಿಯೊಬ್ಬ ಪ್ರಯಾಣಿಕನಿಗೆ ಉಡುಗೊರೆ ಕೊಟ್ಟು ಸಂಭ್ರಮದಿಂದ ಜರುಗಿಸುತ್ತಾರೆ.

ರಾತ್ರಿ 8–30 ಗಂಟೆಗೆ ಟೋಕ್ಯೋ ತಲುಪಿದೆವು. ನಮ್ಮನ್ನು ಸ್ವಾಗತಿಸಲು ವಿಮಾನ ನಿಲ್ದಾಣಕ್ಕೆ ಬರುವವರಿಲ್ಲ. ಯಾರ ಪರಿಚಯವೂ ಇಲ್ಲ. ಎಲ್ಲೆಲ್ಲೂ ಜಪಾನೀ ಭಾಷೆ – ಅದೇ ಭಾಷೆಯ ಸೂಚೀ ಹಲಗೆಗಳು ಇಂಗ್ಲೀಷ್ ಒಂದಕ್ಷರವೂ ಬಾರದ ಜನ. (ಬರುವುದಿಲ್ಲವೋ, ಮಾತನಾಡಲೊಲ್ಲರೋ ತಿಳಿಯದು!)........

ವಿಮಾನದಿಂದ ನಮ್ಮ ಸಾಮಾನುಗಳು ಬರಲು ತುಂಬಾ ಹೊತ್ತಾಯಿತು. ನಾವಿಬ್ಬರೂ ನವವಿಚಿತ್ರ ಅನುಭವ ಪಡೆದೆವು. ಅಂತೂ ಇತರ ಜನರನ್ನು ಹಿಂಬಾ

ಲಿಸಿ ಒಂದು ಚಿಕ್ಕ ಬಸ್ ಹತ್ತಿ ಹೊಟೇಲ್ ಟಾಕಾನಾವಾ ಎಂಬಲ್ಲಿ ಹೋದೆವು. ಆ ಹೊಟೇಲಿನ ವ್ಯವಸ್ಥಾಪಕರಿಗೆ ಇಂಗ್ಲೀಷ್ ಭಾಷೆ ಬರುವುದು ತಿಳಿದು ಸ್ವಲ್ಪ ಸಮಾಧಾನವಾಯಿತು. ಟೆಲಿಫೋನ್ ಪುಸ್ತಕಗಳಲ್ಲೂ ಎಲ್ಲವೂ ಜಪಾನೀ ಭಾಷೆ. ನಾವು ಪೂರ್ತಿ ಪರಸ್ವಾಧೀನರಾದಂತೆ ಆದೆವು! ನಮ್ಮನ್ನು ಒಂದು ಚೊಕ್ಕಟವಾದ ಕೋಣೆಗೆ ಕರೆದುಕೊಂಡು ಹೋದರು. ಆ ಕೋಣೆಯಲ್ಲಿ ಜಪಾನೀ ಪದ್ಧತಿ ಪ್ರಕಾರ ಹಾಸಿಗೆ ಮೇಲೆ ಎರಡು ಕಿಮೊನೊ ಉಡುಪುಗಳು ಮತ್ತು ಕಾಲಿಗೆ ಹಾಕಿಕೊಳ್ಳಲು ಎರಡು ಜತೆ ಚಪ್ಪಲಿಗಳನ್ನು ಮೊದಲು ಕಂಡೆವು. ಕೋಣೆಯಲ್ಲೇ ರಿಫ್ರಿಜರೇಟರ್ (Refriegerator) ಇದ್ದು ಬೇಕಾದ ಪಾನೀಯಗಳೆಲ್ಲವೂ ಸಿದ್ಧವಾಗಿದ್ದವು........

ಭೂತಳದಲ್ಲಿದ್ದ ಉಪಹಾರ ಗೃಹ (Restaurant) ವೊಂದಕ್ಕೆ ಹೋಗಿ ಬೇಕಾದ ಆಹಾರ (ಜಪಾನೀಯ ಆಹಾರ ಬಿಟ್ಟು!) ತಿಂದು ರಾತ್ರಿ ಕಳೆದೆವು. ನಮಗೆ ಮೋಸ ಮಾಡಿದ ಆ ಭಾರತೀಯನನ್ನು ಶಪಿಸುತ್ತ........

ಇತಿ ನಿಮ್ಮ
ಅಮ್ಮ

* * * * * *

ಟೋಕ್ಯೋ
15 – 4 – 1968

ಮುದ್ದು ಮಕ್ಕಳೇ,

........ಪ್ರವಾಸಿಗಳಿಗೆ ಏರ್ಪಡಿಸಿರುವ ಟೋಕ್ಯೋ ದರ್ಶನದ ಬಸ್ ಟಿಕೇಟು ಪಡೆದೆವು. ನಮ್ಮ ಹಣವನ್ನು ಯೆನ್ (Yen) ಗೆ ಪರಿವರ್ತಿಸಿದೆವು. ಇಲ್ಲಿ ವಾಹನಗಳೆಲ್ಲವೂ ಎಡಗಡೆ ಚಲಿಸುತ್ತದೆ. ಕಾರುಗಳಲ್ಲೆಲ್ಲ ಎಡಗಡೆಯೇ ಚಾಲನ ಚಕ್ರ. ಭೂಗರ್ಭ ಮಾರ್ಗ ರೈಲು ನಿಲ್ದಾಣಗಳು........ಒಂದೇ ಕಂಬಿಯ ಮೇಲೆ ಚಲಿಸುವ ರೈಲುಗಳು. 'ಕಮ್ಯೂಟರ್' (Commutor) ರೈಲುಗಳು ಎಲ್ಲವೂ ದೇಶದ ಅಭಿವೃದ್ಧಿಯನ್ನು ಸೂಚಿಸುತ್ತಿದ್ದವು. ಆದರೆ ರಸ್ತೆಗಳು, ಕಟ್ಟಡಗಳನ್ನು ಹವಾಯಿ ಮತ್ತು ಯು. ಎಸ್. ಎ. ಗಳಿಗೆ ಹೋಲಿಸಿ ನೋಡಿದಾಗ ನಿರಾಸೆ ಪಡುವಂತಿದ್ದವು. ಈ ಜಪಾನೀಯರು ಅದ್ಭುತರು – ಅದ್ವಿತೀಯರು. ತಮ್ಮ ದೇಶವನ್ನು ಕೆಲವೇ ವರುಷಗಳಲ್ಲಿ ಬುದ್ಧಿ ಚಾತುರ್ಯದಿಂದ, ಜಾಣತನದಿಂದ, ದಿನ ರಾತ್ರಿ ಕಷ್ಟಪಟ್ಟು ದುಡಿದು, ಪ್ರಪಂಚದ ಆರ್ಥಿಕ ಅಭಿವೃದ್ಧಿ ಪಡೆದ ದೇಶಗಳ ಮಟ್ಟಕ್ಕೆ ಎತ್ತಿ ತಂದಿರಿಸಿದ್ದಾರೆ. ಅಲ್ಲದೆ ಔದ್ಯೋಗಿಕ ಶಾಸ್ತ್ರ (Technical) ಮತ್ತು ವಿಜ್ಞಾನ ಶಾಸ್ತ್ರ (Electronic) ಅಭಿವೃದ್ಧಿಯಲ್ಲಿ ಜಗತ್ತಿಗೇ ಮುಂದಾಳುಗಳಾಗಿದ್ದಾರೆ. ಜನರು

ಧೈರ್ಯವಂತರೂ, ಯೋಗ್ಯರೂ ಸರಿಯೇ – ನಿಸರ್ಗವನ್ನು ಮಾತ್ರ ಇವರಿಂದ ಗೆಲ್ಲಲು ಸಾಧ್ಯವಿಲ್ಲ. ನಿಸರ್ಗವು ಇವರಿಗೆ ವಿರುದ್ಧವಾಗಿರುವುದು ನಿಜವಾಗಿ ಬೇಸರಪಡುವ ವಿಷಯ. ಜಪಾನ್ ದೇಶದಲ್ಲಿ ಸ್ಥಳಕ್ಕೆ ಕೊರತೆ, ಮನೆಗಳನ್ನು ಕಟ್ಟಲು ಇಕ್ಕಟ್ಟು, ಜನಸಂದಣಿಯ ನೂಕು ನುಗ್ಗಲು (ಟೋಕ್ಯೋ ನಗರದಲ್ಲಿ ಪ್ರಪಂಚದಲ್ಲೇ ಅತಿಯಾದ ಜನಸಂಖ್ಯೆ ಇದೆಯಂತೆ!). ಚಿಕ್ಕದಾದ ಸುಂದರವಾದ, ಅನುಕೂಲವಾದ ಕಾರುಗಳನ್ನು ತಯಾರಿಸುತ್ತಾರೆ. ಆದರೆ ಅವನ್ನೂ ರಸ್ತೆಗಳಲ್ಲಿ ಬಿಡಲು ಸರಿಯಾದ, ಸಾಕಷ್ಟು ಜಾಗವಿಲ್ಲ. ಈ ಜನರು ತಮ್ಮ ಮೆದುಳನ್ನು ಉಪಯೋಗಿಸಿ ಎಷ್ಟು ಸಾಧ್ಯವೋ ಅಷ್ಟು ಅನುಕೂಲತೆಗಳನ್ನು ರಚಿಸಿದ್ದಾರೆ. ಆದರೆ ಅನುಕೂಲವಾದ ನಿಸರ್ಗವನ್ನು ರಚಿಸಲಾರರು! ಅದನ್ನು ಗೆಲ್ಲುವುದೂ ಸಾಧ್ಯವೇ? ಈ ದ್ವೀಪಗಳ ಬಹುಭಾಗ ಜೀವನಕ್ಕೆ ಅಯೋಗ್ಯ – ಭೂಕಂಪಗಳು – ಅಗ್ನಿ ಪರ್ವತಗಳು, ಬಿರುಗಾಳಿ – ಮಳೆ ಮುಂತಾದುವುಗಳು ಈ ಜನರು ಯಾವಾಗಲೂ ಎದುರಿಸಬೇಕಾದ ವೈರಿಗಳು. ಬುದ್ಧನು ಗೆದ್ದ ಈ ನೈಸರ್ಗಿಕ ವಿಕಾರಗಳೆಲ್ಲ ಅವನ್ನು ನಂಬಿದ ಈ ಜನರನ್ನು ಯಾವಾಗಲೂ ದಂಡಿಸುವಂತಿದೆ. ಭೂಕಂಪ ಮುಂತಾದ ಅನಾಹುತಗಳಿಗೆ ಈ ಜನರು ಯಾವಾಗಲೂ ಸಿದ್ಧರಾಗಿಯೇ ಇದ್ದು ತಮ್ಮ ನಿತ್ಯ ಜೀವನವನ್ನು ಅದಕ್ಕೆ ಸರಿಯಾಗಿ, ಸರಳವಾಗಿ ಅಳವಡಿಸಿಕೊಂಡಿದ್ದಾರೆ. ಅವರ ಈ ಮನೋವೃತ್ತಿ ಮತ್ತು ಸ್ಥಿಮಿತ ನಡತೆ ನಿಜವಾಗಿ ಮೆಚ್ಚತಕ್ಕದ್ದು....ಆದರೆ, ಈ ಜಪಾನೀ ಜೀವನ ನೋಡುತ್ತಿದ್ದಂತೆ ಬುದ್ಧನು ಸಾರಿದ ತತ್ವಗಳೆಲ್ಲಿ? ಎನ್ನಿಸುತ್ತದೆ. ಆತನು "ಅಹಿಂಸಾ ಪರಮೋಧರ್ಮಃ" ಎಂಬ ಸತ್ಯವನ್ನು ಸಾರಿದಂತೆ, ಈ ಜನರು ಕೊಂದು ತಿನ್ನದ ವಸ್ತುವಿಲ್ಲ! ನೀರಿನಲ್ಲಿ ಜೀವಿಸುವ ಜಂತುಗಳು, ನೆಲದ ಮೇಲೆ ಚಲಿಸುವ ಯಾವುದೇ ಪ್ರಾಣಿ – ಆಕಾಶದಲ್ಲಿ ಹಾರುವ ಹಕ್ಕಿ – ಯಾವುದನ್ನೂ ಬಿಡದೆ ತಿನ್ನುವ ಜನರು! ಕೋತಿಗಳನ್ನೂ ಹಾವುಗಳನ್ನೂ ತಿನ್ನುವ ಜನ ಎಂದು ತಿಳಿದ ನನಗೆ ಅವರ ಆಹಾರದ ವಿಷಯ ಅಸಹ್ಯವೆನಿಸಿತು. ಬುದ್ಧನ ತತ್ವಗಳನ್ನು ಏತಕ್ಕೆ ಈ ರೀತಿಯಲ್ಲಿ ಅನುಸರಿಸುತ್ತಾರೆ ಎಂಬ ವ್ಯಥೆಯಾಯಿತು........ಆದರೆ ಆಹಾರದ ವಿಚಾರ ಯೋಚಿಸಿದಂತೆ ಪ್ರಪಂಚದ ಜನರಲ್ಲಿ ಶೇಕಡಾ 90 ರಷ್ಟು ಜನ ಮಾಂಸಾಹಾರಿಗಳೇ. ಹಿಂದೂ ದೇಶ ಒಂದೇ ಸಸ್ಯಾಹಾರಿ ಇರಬಹುದೆಂದು ನನಗೆ ಕಾಣುತ್ತದೆ. ಅಲ್ಲದೆ ಹಿಂದೂ ದೇಶದಲ್ಲಿ ಮಾತ್ರ ಜನರು ಕೈಯಿಂದ ತಿನ್ನುವ ರೂಢಿ. ಬೇರೆ ಎಲ್ಲಿಲ್ಲೂ ಚಮಚ – ಚಾಕು – ಮುಳ್ಳು ಅಥವಾ ಕಡ್ಡಿ (Chopsticks) ಮುಂತಾದ ಸಲಕರಣೆಗಳಿಂದ ತಿನ್ನುವ ಅಭ್ಯಾಸ........

ಜಪಾನಿ ಜನರು ಗಂಭೀರಸ್ಥರು. ನಗು – ಆಟ ಅವರ ದಿನಚರಿಯಲ್ಲಿ ಸಾಮಾನ್ಯವಲ್ಲ. ಗಂಡಸರು ಕುಳ್ಳರು – ಸಣ್ಣಗೆ – ಬೆಳ್ಳಗೆ – ಗಟ್ಟಿಜಿನ. ಹೆಂಗಸರು

ಲಾಲಿತ್ಯವಾಗಿದ್ದು ತೆಳ್ಳಗೆ, ಚಿಕ್ಕ ಮೈಯುಳ್ಳ ಅಂದದ ಸ್ತ್ರೀಯರು; ಮಕ್ಕಳಂತೂ ಗುಂಡು ಗುಂಡಗೆ ಇದ್ದು ಹತ್ತಿಯ ಗೊಂಬೆಗಳಂತೆ ಮುದ್ದು ಮುದ್ದಾಗಿವೆ.........

ಈ ದೇಶ, ಸಂಪ್ರದಾಯ, ಸಂಸ್ಕೃತಿ – ಪದ್ಧತಿಗಳಿಂದ ತುಂಬಿರುವ ದೇಶ. ಹಿರಿಯರನ್ನು ಕಂಡರೆ ಭಕ್ತಿ, ಮರ್ಯಾದೆ ಇತ್ಯಾದಿ, ಪ್ರಾಚೀನ ಪರಂಪರೆಗೆ ಕೊಡುವ ಗೌರವ – ಇವನ್ನು ನೋಡಿದರೆ ದೇಶದಲ್ಲಿ ಗಾಂಭೀರ್ಯ, ಚಿತ್ತಸ್ವಾಸ್ಥ್ಯ (Sobriety) ಘನತೆ, (Dignity) ನೆಮ್ಮದಿ (Composure) ಇದ್ದ ಹಾಗೆ ಕಂಡಿತು.........

ಮತ್ತೆ ಬರೆಯುವೆ.

ಇತಿ ನಿಮ್ಮ

ಅಮ್ಮ.

*   *   *   *   *

ಟೋಕ್ಯೋ

15 – 4 – 1968

ಮುದ್ದು ಮಕ್ಕಳೇ,

........ನಾವು ಪ್ರವಾಸಿ ಬಸ್ ಪ್ರಯಾಣ ಮಾಡುವಾಗ ಇಲ್ಲಿನ ಪ್ರಸಿದ್ಧ 'ಚೆರ್ರಿ ಬ್ಲಾಸಮ್' (Cherry blossom) ಮರಗಳಲ್ಲಿ ಹೂಗಳು ಮೆಲ್ಲಮೆಲ್ಲನೆ ಚಿಗುರುವುದನ್ನು ಕಂಡೆವು. ಬರುವ ತಿಂಗಳು ಈ ದೇಶದಲ್ಲಿ ಈ ಹೂಗಳಿಂದ ಅಲಂಕೃತವಾಗುವುದಂತೆ. ಒಬ್ಬ ಜಪಾನೀ ಹೆಂಗಸು ಹೊರದೇಶದವರಾದ ನಮ್ಮನ್ನು ಕಂಡು ತನ್ನ ಭಾಷೆಯಲ್ಲಿ ಅಭಿನಯ ಮಾಡಿ ನಮಗೆ ಆ ಚೆರ್ರಿ ಬ್ಲಾಸಮ್ (Cherry blossom) ಹೂವಿನ ಪರಿಚಯವನ್ನು ಹೆಮ್ಮೆಯಿಂದ ಮಾಡಿಕೊಟ್ಟಳು! ತಮ್ಮಲ್ಲಿರುವ ಒಂದು ಚಿಕ್ಕ ಹುಲ್ಲಿಗೂ ಈ ಜನರಿಗೆ ಎಷ್ಟು ಅಭಿಮಾನ! ಈಗ ದೀಪೋತ್ಸವ (Festival of Lanterns) ಬರಲಿದೆಯಂತೆ. ನಿಜವಾದ ಚೆರ್ರಿಬ್ಲಾಸಮ್ (Cherry blossom) ಹೂ ಇಲ್ಲದಿದ್ದರೆ ಕೃತ್ರಿಮ ಹೂಗಳನ್ನಾದರೂ ರಚಿಸಿ ರಸ್ತೆಗಳನ್ನು ಅಲಂಕರಿಸುತ್ತಾರೆ. ರಸ್ತೆಯಲ್ಲಿ ಜನಸಂದಣಿ, ಕಾರುಗಳು ಚಲಿಸಲು ಜಾಗವಿರುವುದಿಲ್ಲ. ಹೆಂಗಸರು ಬೆನ್ನಮೇಲೆ ಮುದ್ದು ಮುದ್ದಾದ ಮಕ್ಕಳನ್ನು ಹೊತ್ತು ನಡೆಯುತ್ತಿರುತ್ತಾರೆ. ಒಬ್ಬರಿಗೆ ಇನ್ನೊಬ್ಬರು ಡಿಕ್ಕಿಹೊಡೆದು ರಸ್ತೆಯಲ್ಲಿ ಚಲಿಸುವ ಈ ಜನಸಂಖ್ಯೆ ಕಂಡ ನನಗೆ ತಲೆತಿರುಗಿತು. ಅದೇಕೋ ನಾನು ಮುದಿಜನರನ್ನು ದಾರಿಯಲ್ಲಿ ನೋಡಲಿಲ್ಲ. 'ಕಿಮೊನೊ' (Kimono) ಉಟ್ಟುಕೊಂಡ ಸ್ತ್ರೀಯರು ವೇಗವಾಗಿಯೂ ನಡೆಯಲಾರರು! ಅವರು ಮಂದಗಮನೆಯರಾಗಿ ಮೆಲ್ಲಮೆಲ್ಲನೆ ಲಾಲಿತ್ಯವಾಗಿ ಹೋಗುವ ದೃಶ್ಯ ನೋಡಲು ಚೆನ್ನಾಗಿದೆ. ಇವೆಲ್ಲವನ್ನೂ ಪುಸ್ತಕ ಓದಿ ತಿಳಿದಿದ್ದರೂ ನೋಡಿ ಪಡುವ ಅನುಭವವೇ ಬೇರೆ........

ಅಂಗಡಿಗಳಲ್ಲೆಲ್ಲ ಅತ್ಯಾಧುನಿಕ ವಿದ್ಯುತ್‌ಚಾಲಿತ ಯಂತ್ರೋಪಕರಣಗಳು (Electronic equipment) ಸಿಗುತ್ತವೆ. ನಮ್ಮ ಶಿವದೇವನಿಗೆ ಅವನ್ನು ನೋಡಿದರೆ ಹುಚ್ಚು ಹಿಡಿದಂತಾಗುವುದು ಖಂಡಿತ. ನಮಗೆ ಜಪಾನೀ ಭಾಷೆ ಬಾರದೆ ಯಾವ ಅಂಗಡಿಯ ಹತ್ತಿರ ಹೋಗಲು ಧೈರ್ಯವೂ ಇಲ್ಲ – ಸಾಧ್ಯವೂ ಇಲ್ಲ !........

ಪ್ರಪಂಚದಲ್ಲಿ ಅತಿ ಎತ್ತರವಾದ ಟೋಕ್ಯೋ ಟವರ್ (Tokyo Tower) ಹತ್ತಿ ನೋಡಿದೆವು. ಜಪಾನೀ ಮನೆಯಲ್ಲಿ ಅವರ ಸಾಂಪ್ರದಾಯಿಕ ಚಹಾ ಸಮಾರಂಭವನ್ನು (Tea Ceremony) ನೋಡಿದೆವು. ಆ ಚಹಾ ಸಮಾರಂಭ (Tea Ceremony) ನಿಜವಾಗಿ ಬಹಳ ಪರಿಷ್ಕೃತವಾದದ್ದು. ಅದರಲ್ಲಿ ಟೀ ಕುಡಿಯುವುದಕ್ಕಿಂತ ಪ್ರದರ್ಶನವೇ ಹೆಚ್ಚಾಗಿದೆ. ಚಮಚ ಹಿಡಿಯುವುದು ಹೇಗೆ – ಒರಸುವುದು ಹೇಗೆ – ನೀರು ಬಿಸಿಮಾಡಿ ಸುರಿಯುವುದು ಹೇಗೆ – ಹಸುರು ಟೀ ಸೊಪ್ಪನ್ನು ಬೆರೆಸುವುದು ಹೇಗೆ – ಕೊನೆಗೆ ತಯಾರಿಸಿದ ಆ ಟೀ ಕುಡಿಯುವುದರಲ್ಲಿಯೂ ವಿಶಿಷ್ಟ ಸಂಪ್ರದಾಯಗಳಿವೆ ! ಅಂತಹ ಚಹಾ ಸಮಾರಂಭಕ್ಕೆ (Tea Ceremeny) ಒಂದೆರಡು ಗಂಟೆಗಳ ಸಮಯ ಬೇಕಾಗುತ್ತದೆ ! ಪತಿಯವರು ಅಂದಂತೆ ಟೀ ಸಿದ್ಧವಾಗುವುದರೊಳಗೆ ಅದನ್ನು ಕುಡಿಯುವ ಚಪಲ ಎಲ್ಲ ಮಾಯವಾಗುತ್ತದೆ !........ಅಂತೂ ಅದನ್ನೂ ಇಲ್ಲಿ ನೋಡಬೇಕಾದ ದೃಶ್ಯ. ಅವರು ಹೆಮ್ಮೆ ಪಡುವ ವಿಷಯವೆಂದು ! ಜಪಾನೀ ಸ್ತ್ರೀಯೊಬ್ಬಳು ಕೊಟೊ(Koto)ಎಂಬ ಜಪಾನಿ ವಾದ್ಯವನ್ನು ಬಾರಿಸಿ ವಿನೋದಿಸಿದಳು....ಅಲ್ಲಿಂದ ಜಪಾನೀ ಉದ್ಯಾನವನಗಳನ್ನೆಲ್ಲಾ ಸುತ್ತಿದೆವು. ಅಲ್ಲಿ 500–1000 ವರುಷ ವಯಸ್ಸಿನ ಗಿಡ್ಡ ಗಿಡ್ಡ ಮರಗಳನ್ನು (Dwarf Trees) ಕಂಡು ಆತ್ಯಾಶ್ಚರ್ಯವಾಯಿತು ! ಉದ್ಯಾನವನಗಳಲ್ಲೆಲ್ಲ ನೈಸರ್ಗಿಕ ಸೌಂದರ್ಯವೇ ಇದೆ – ಮಾನವನ ಚಾತುರ್ಯ ಅಷ್ಟೊಂದು ಕಾಣಲಿಲ್ಲ. ಇದ್ದುದನ್ನು ಇದ್ದ ಹಾಗೆ ಪ್ರದರ್ಶಿಸುತ್ತಾರೆ; ಆದರೆ ಹೆಚ್ಚಿನ ಸೌಂದರ್ಯೋಪಾಸನೆಯಿಂದ. ಕೆಲವು ಸರೋವರಗಳ ನೀರು ಶುಭ್ರವಾಗಿರಲಿಲ್ಲ. ಅಲ್ಲದೆ ದುರ್ಗಂಧವೂ ಇತ್ತು. ಸ್ವಲ್ಪ ಶುಚಿಮಾಡಿ ಚೆನ್ನಾಗಿಟ್ಟರೆ ನಿಜವಾಗಿ ಈ ಜಾಗಗಳು ಬಲು ಸೊಗಸಾದುವು. ಲೋಸ್ ಎಂಜೆಲಿಸ್ (Los Angeles) ಕ್ಯಾಲಿಫೋರ್ನಿಯಾ (California) ಹವಾಯಿ ತೋಟಗಳನ್ನು ನೋಡಿದ ಅಮಲು ನಮಗೆ ಇನ್ನೂ ಇಳಿಯಲಿಲ್ಲವೇನೋ – ಇಲ್ಲಿನ ನೈಜ ಸ್ಥಿತಿಯನ್ನು ಮೆಚ್ಚಲು ! ಅಂತೂ ಆಗ್ನೇಯ ಏಷ್ಯಾ (S. E.) ಪ್ರಯಾಣ ಮಾಡಿ ಭಾರತಕ್ಕೆ ಹಿಂತಿರುಗುವಾಗ ಮನಸ್ಸನ್ನು ನಮ್ಮ ದೇಶಕ್ಕೆ ಹೊಂದಿಕೊಳ್ಳಲು ಈ ಅನುಭವಗಳು ಸಹಾಯ ಮಾಡುತ್ತವೆ........

ಇತಿ ನಿಮ್ಮ
ಅಮ್ಮ.

* * * * * *

ಟೋಕ್ಯೋ
16 – 4 – 1968

ಮುದ್ದು ಮಕ್ಕಳೇ,

........ಇಲ್ಲಿನ ಜನರು ಆರಾಮ ಪ್ರವೃತ್ತಿಯಿಂದ ಕೂಡಿದ್ದಾರೆ. ಯಾವ ವಿಧವಾದ ಆತುರ–ವೇಗತ್ವ–ಓಡುವಿಕೆ ಇಲ್ಲದೆ ಶಾಂತ–ಪರರಾಗಿದ್ದಾರೆ. ಜನರು ಹೆಚ್ಚಾಗಿ ಕುಟುಂಬ ವಾತ್ಸಲ್ಯ ಉಳ್ಳವರು. ಒಟ್ಟು ಕುಟುಂಬಗಳೇ (Joint Families) ಹೆಚ್ಚು. ಸಾಮೂಹಿಕ ಸಂಗಡಗಳು ಜವಾಬ್ದಾರಿಯಿಂದ ಕೆಲಸ ಮಾಡಿ ಅಸಾಮಾನ್ಯ ಕಾರ್ಯಸಿದ್ಧಿ (Achievements) ಪಡೆಯುತ್ತಾರೆ. ಈ ಜನರ ಬಲ ಸಾಮರ್ಥ್ಯ ಒಗ್ಗಟ್ಟಿನಲ್ಲಿದೆ. ಒಗ್ಗಟ್ಟಿನಿಂದಲೇ ದೇಶದ ಅಭಿವೃದ್ಧಿ ಪಡೆದಿದ್ದಾರೆ. ಒಬ್ಬ ವ್ಯಕ್ತಿ ಹೇಳಿದುದನ್ನು ಹತ್ತು ಜನ ಒಪ್ಪಿ ಕಾರ್ಯರೂಪಕ್ಕೆ ತಂದು ಸಾಧ್ಯತೆ ಪಡೆಯುತ್ತಾರೆ. ಭಾರತದಲ್ಲಿ ಒಬ್ಬೊಬ್ಬರು ಒಂದೊಂದನ್ನು ಹೇಳಿ ಕಾರ್ಯ ಮಾಡುವ ಜನರೇ ಉಳಿದಿರುವುದಿಲ್ಲ........!

ನಾವು ಇಲ್ಲಿನ ಜನಜೀವನವನ್ನು ನೋಡುವಾಗಲೆಲ್ಲ ನಿಮ್ಮನ್ನು ಎಷ್ಟು ಜ್ಞಾಪಿಸಿಕೊಳ್ಳುತ್ತೇವೆ! ವಿಧವಿಧದ ದೇಶ – ಜನರು – ಇತ್ಯಾದಿ. ನೀವೂ ಒಂದಾನೊಂದು ದಿನ ಜಗತ್ತನ್ನು ಖಂಡಿತ ನೋಡುವಿರಿ....ಇಲ್ಲಿ ಪ್ರಾಚೀನತೆಯನ್ನು ಕಾಪಾಡಿಕೊಂಡು ಬಂದಂತೆ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವವೂ ಕಾಣುತ್ತಲಿದೆ. ನಿನ್ನೆ ರಾತ್ರಿ ಪ್ರವಾಸಿಗಳಿಗೆ ಏರ್ಪಡಿಸಿರುವ ರಾತ್ರಿಯ ಟೋಕ್ಯೋ ದರ್ಶನವನ್ನು ಮಾಡಿದೆವು. ದಿನ ಹಗಲೆಲ್ಲ ಟೋಕ್ಯೋ ನಗರ ಭೂಲೋಕದ ಯಾವುದೇ ಇತರ ನಗರದಂತೆಯೇ ಕಾಣುತ್ತದೆ. ಆದರೆ ರಾತ್ರಿಯಾಯಿತೆಂದರೆ ಟೋಕ್ಯೋ ಒಂದು ನಿಜವಾದ ಇಂದ್ರಲೋಕ! ಬಹಳ ಸ್ವಾರಸ್ಯವಾದ, ಪ್ರಚೋದಿಸುವ (Exciting) ನಗರ. ನಾಲ್ಕು ಗಂಟೆಗಳ ಕಾಲ ಇಲ್ಲಿನ ರಾತ್ರಿಯಲ್ಲಿ ನಡೆಯುವ ಜನಜೀವನವನ್ನು ಕಂಡೆವು. ಜಪಾನೀಯರ ಸಾಂಪ್ರದಾಯಿಕ ಕಬೂಕೀ (Kabuki) ರಂಗಮಂದಿರ, ಹಾಗೂ ಕಬೂಕಿ ಪ್ರದರ್ಶನವನ್ನು ನೋಡಿದೆವು. ಕಥೆಗಳೆಲ್ಲಾ ದುರಂತ ಕಥೆಗಳೇ (Melo Drama) ತುಂಬಿದ್ದ ಕಥಾ ವಸ್ತುಗಳೇ ಇವರಿಗೆ ಪ್ರಿಯವಾದುವು. ನಮಗೆ ಭಾಷೆ ತಿಳಿಯದಿದ್ದರೂ ಪ್ರದರ್ಶನದ ಕೌಶಲ್ಯವನ್ನು ತುಂಬಾ ಮೆಚ್ಚಿದೆವು. ಚೆರ್ರಿ ಬ್ಲಾಸಮ್ ಸಮಾರಂಭ (Cherry Blossom Festival) ಕ್ಕಾಗಿ ಪ್ರದರ್ಶಿಸಿದ ರಾಷ್ಟ್ರೀಯ ನೃತ್ಯಗಳನ್ನೂ, ಆಧುನಿಕ ನೃತ್ಯಗಳನ್ನೂ ನೋಡಿದೆವು .... ರಾತ್ರಿಯಲ್ಲಿ ಮಾತ್ರ ಚಟುವಟಿಕೆ ಪಡೆಯುವ ಅತ್ಯಾಧುನಿಕ ಪಾನಗೃಹ (Restaurant) ಒಂದರಲ್ಲಿ ವಿವಿಧ ವಿನೋದವನ್ನು ನೋಡಿದೆವು. ಈ ಸಮಯದಲ್ಲಿ ಟೋಕ್ಯೋ, ಯೂರೋಪಿನ ಪ್ಯಾರಿಸ್ ಮುಂತಾದ ನಗರಗಳ ನೆನಪು ಕೊಡುತ್ತದೆ. ಜಗತ್ಪ್ರಸಿದ್ಧ ಗೈಶಾ

ಸತ್ಕಾರ ಕೂಟ (Geisha Party) ವನ್ನೂ ನೋಡಿದೆವು. ಪುಸ್ತಕಗಳಲ್ಲಿ ಗೈಶಾ ಸತ್ಕಾರ ಕೂಟ (Geisha Party) ಗಳ ವರ್ಣನೆಯನ್ನು ಓದಿದ ಮೇಲೆ ಅವನ್ನು ಕಣ್ಣಾರೆ ಕಾಣಲು ಎಷ್ಟು ಆಸೆ ಪಟ್ಟಿದ್ದೆ ! ಗೈಶಾ ಕೂಟ (Party) ನಿಜವಾಗಿ ನೋಡ ತಕ್ಕ, ಅನುಭವಿಸತಕ್ಕ ವಿಷಯ. ವಿಶಿಷ್ಟ ಜಪಾನೀ ಮನೆಗೆ ಕರೆದುಕೊಂಡು ಹೋಗಿ ಅವರ ಪದ್ಧತಿಯಂತೆ ಕೆಳಗೆ ಕುಳ್ಳಿರಿಸಿದರು. ಅವರ ಹೆಮ್ಮೆಯ ಬಿಸಿ 'ಸಾಕೆ' (Sake) ಪಾನೀಯ ಕೊಟ್ಟರು. ಜಪಾನೀ ಗೈಶಾ ಸ್ತ್ರೀಯರು ಹತ್ತಿರ ಕೂತು ನಮ್ಮನ್ನು ತಮ್ಮ ಭಾಷೆಗೆ ಒಂದೆರಡು ಇಂಗ್ಲಿಷ್ ಬೆರಸಿ ಸತ್ಕರಿಸಿದರು. ಒಬ್ಬಳು ನನ್ನ ಮೂಗುಬೊಟ್ಟು ನೋಡಿ ತುಂಬಾ ಮೆಚ್ಚಿದಳು. ಸಂಗೀತ, ವಾದ್ಯ, ಗೀತ, ನೃತ್ಯಗಳಿಂದ ವಿಧವಿಧವಾಗಿ ಮನರಂಜಿಸಿದರು. ಜಪಾನೀ ಲಲಿತ ಕಲೆಗಳ ಪ್ರದರ್ಶನ ತುಂಬಾ ಚೆನ್ನಾಗಿತ್ತು. ಪತಿಯವರು ಅಂತ್ಯದಲ್ಲಿ ಅ ಕಲಾವಿದರು ಬಾರಿಸಿದ ಚರ್ಮ ವಾದ್ಯಗಳನ್ನು ನೋಡಿ ಅವರ ಒಪ್ಪಿಗೆ ಪಡೆದು, ನಮ್ಮ ಭಾರತೀಯ ಸಂಗೀತ ಪದ್ಧತಿ ಯಲ್ಲಿರುವ ಎಲ್ಲಾ ವಿಧದ ತಾಳ ವೈಚಿತ್ರ್ಯಗಳನ್ನು ಬಾರಿಸಿ ಅಲ್ಲಿ ನೆರೆದ ಜನರನ್ನು ಸಂತೋಷಗೊಳಿಸಿದರು. ಜಪಾನೀಯರಿಗೂ ಅತ್ಯಂತ ಆನಂದವಾಯಿತು. ನಾವು ಕಂಡ ಪ್ರಕಾರ ಜಪಾನೀ ಜನರು ತಮ್ಮ ಸಂಸ್ಕೃತಿ – ಸಂಪ್ರದಾಯ – ಪದ್ಧತಿ – ರೀತಿ – ನೀತಿ – ಲಲಿತ ಕಲೆಗಳಲ್ಲಿ, ತಮ್ಮದೇ ಆದ ವಿನೋದಗಳಲ್ಲಿ, ಸದಾ ಮುಳು ಗಿದ್ದು ಹೊರದೇಶದ ಪ್ರವಾಸಿಗಳಿಗೆ ಅವನ್ನು ಪ್ರದರ್ಶಿಸುವ ಸಡಗರದಲ್ಲಿ ಜಗತ್ತಿನ ಇತರ ದೇಶಗಳ ಲಲಿತ ಕಲೆ ಮುಂತಾದ ವಿಷಯಗಳ ಕಡೆಗೆ ಆಸಕ್ತಿ ಪಡೆಯುವಂತೆ ಕಾಣಲಿಲ್ಲ. ನೋಡುವ ಆಸೆಯೂ ಇದ್ದಂತೆ ಕಾಣಲಿಲ್ಲ.... ಅಂತೂ ಟೋಕ್ಯೋ ರಾತ್ರಿಯ ಹೊತ್ತಿನಲ್ಲಿ ದೇದೀಪ್ಯಮಾನವಾದ ನಗರ. ಮಧ್ಯ ರಾತ್ರಿ ಹನ್ನೆರಡು ಗಂಟೆಯ ಮೇಲೆ ಟೋಕ್ಯೋ ಎಲ್ಲ ನಿಶ್ಶಬ್ದವಾಗಿ ಸ್ತಬ್ಧವಾಗುತ್ತದೆ. ಅಷ್ಟರವರೆಗೆ ಮಿನುಗುವ ನಗರವನ್ನು ನೋಡಲು ಈ ದೇಶಕ್ಕೆ ಭೇಟಿ ಕೊಡುವುದು ಅತ್ಯಗತ್ಯ........

ಇತಿ ನಿಮ್ಮ

ಅಮ್ಮ.

* * * * * *

ಟೋಕ್ಯೋ
16 – 4 – 1968

ಮುದ್ದು ಮಕ್ಕಳೇ,

........ಟೋಕ್ಯೋ ಎಲ್ಲಾ ಸುತ್ತಾಡಿ, ರಾಷ್ಟ್ರೀಯ ಕಟ್ಟಡಗಳು (Diet), ಇಂಪೀರಿಯಲ್ ಅರಮನೆ, ಅದರ ಸುತ್ತಲಿನ ಉದ್ಯಾನವನ ಮತ್ತು ನೀರು ಆವರಣ (Moats), ಇಲ್ಲಿನ ಆಟ ಪಂದ್ಯಗಳ ಕ್ರೀಡಾಂಗಣ (Stadium) ಈಜುವ ಕೆರೆಗಳು–

ಮೈಜೀ (Maiji) ಪ್ರಾರ್ಥನಾ ಸ್ಥಳಗಳು, ಬುದ್ಧನ ದೇವಾಲಯಗಳು-ಶಿಂಟೋ (Shinto) ದೇವಾಲಯಗಳು ಎಲ್ಲವನ್ನೂ ನೋಡಿದೆವು. ಈ ದೇವಾಲಯಗಳ ಅಂದವೇ ಬೇರೆ– ವಾತಾವರಣವೇ ವಿಚಿತ್ರ–ಪ್ರಾರ್ಥಿಸುವ ರೀತಿಯೇ ವಿಶಿಷ್ಟ–ಬಹಳ ಸ್ವಾರಸ್ಯವಾದ ಅನುಭವ. ಈ ಲೇಖನಿಯಿಂದ ಅದನ್ನು ವರ್ಣಿಸಲಾರೆ. ಜಪಾನೀ ಮದುಮಗಳು ಉಟ್ಟುಕೊಳ್ಳುವ ಉಡುಪು, ವೇಷ ಭೂಷಣಗಳ ಪ್ರದರ್ಶನವೂ ಆಯಿತು. ಆ ಉಡುಪು ಎಷ್ಟೊಂದು ಸುತ್ತುಬಳಸಿನದೆಂದರೆ (Elaborate), ಪರಿಷ್ಕಾರ ಅಂದರೆ ಓಡಾಡಲು ಬಹಳ ಅನಾನುಕೂಲವಿರಬಹುದು! ಉಡಲು ತುಂಬಾ ಸಮಯವೂ ಬೇಕು! ಜಪಾನೀ ಹುಡುಗಿಯರು ಸುಂದರಿಯರು–ಮುಖ್ಯವಾಗಿ ಅವರ ಚರ್ಮ ಸೌಂದರ್ಯ; ಒಳ್ಳೇ ಕರ್ಪೂರದ (Celluloid) ಗೊಂಬೆಗಳಂತೆ ಇದ್ದಾರೆ........

ಅಂತೂ ಒಟ್ಟಿನಲ್ಲಿ ನನಗೆ ಟೋಕ್ಯೋ ಸುಂದರ ನಗರವಲ್ಲ ಆದರೆ ಸ್ವಾರಸ್ಯ ನಗರವೆಂದೆನಿಸಿತು. ನಾನು ಎಣಿಸಿದ ಟೋಕ್ಯೋ ಹೀಗಿರಲಿಲ್ಲ. ಕ್ಯೊಟೋ, (Kyoto) ಒಸಾಕ (Osaka) ನೋಡಬಹುದಿತ್ತು. ಇಲ್ಲಿನ ವಿದ್ಯುತ್ ಚಾಲಿತ ರೈಲು (Commuter Rail Service) ಗಂಟೆಗೆ 120 ಮೈಲು ವೇಗದಲ್ಲಿ ಚಲಿಸುತ್ತವೆ. ಆದರೆ ನಮಗೆ ಸಮಯ ಅಭಾವ– 17ನೇ ತಾರೀಕಿಗೆ – ನಾಳೆ – ಹೊಂಗ್‌ಕೊಂಗ್‌ನಲ್ಲಿ ನಮ್ಮ ನೃತ್ಯ ಪ್ರದರ್ಶನ ಏರ್ಪಾಡಾಗಿದೆ.

ಈ ಜಪಾನ್ ದೇಶಕ್ಕೆ "ಸಯೋನಾರಾ" ಹೇಳಿ, ಬೀಳ್ಕೊಟ್ಟು ಹೊಂಗ್‌ಕೊಂಗ್‌ಕ್ಕೆ ಹಾರುತ್ತೇವೆ. ಅಲ್ಲಿಂದ ಬರೆಯುತ್ತೇನೆ.

ಇತಿ ನಿಮ್ಮ
ಅಮ್ಮ.

ಜಪಾನ್ ದೇಶದ

ಟೋಕ್ಯೋ ನಗರದಿಂದ

ಹೊಂಗ್‌ಕೊಂಗ್‌ಗೆ

ಹೊಂಗ್‌ಕೊಂಗ್
17 – 4 – 1968

ಮುದ್ದು ಜಯದೇವ್–ಶಿವದೇವ್,

ಈ ಸಲ ಜಾಲ್ (JAL) ವಿಮಾನದ ಗಗನ ಸುಂದರಿಯರು 'ಏರ್ ಹೊಸ್ಟೆಸ್' ರು ಕಿಮೊನೊ ಉಟ್ಟುಕೊಂಡಿದ್ದರು. ನಮ್ಮ ವಿಮಾನ ಹೊಂಗ್‌ಕೊಂಗ್ ವಿಮಾನ ನಿಲ್ದಾಣಕ್ಕೆ ಸುರಕ್ಷಿತವಾಗಿ ಬಂದು ಸೇರಿತು. ಪರವಾನಗಿ ಪತ್ರದ ತಪಾಸಣೆ, ಸುಂಕದ ಅಧಿಕಾರಿಗಳ ಚಕ್ರವ್ಯೂಹ ದಾಟಿ ವಿಮಾನ ನಿಲ್ದಾಣದಿಂದ ಆಚೆ ಬರಲು ಒಂದು ಗಂಟೆಯಾಯಿತು – ಅಬ್ಬಾ – ಏಷ್ಟು ಸೆಖೆ ಇಲ್ಲಿ! ನಮ್ಮ ವ್ಯವಸ್ಥಾಪಕರು ಪತ್ರಿಕೆಗಳ ಛಾಯಾಚಿತ್ರ ಗ್ರಾಹಕರೊಡನೆ ನಮ್ಮನ್ನು ಸ್ವಾಗತಿಸಿದರು. ವಿಮಾನ ನಿಲ್ದಾಣದ ಸ್ವಾಗತ ಪರಿಧಿಯಲ್ಲಿಯೇ (ರಿಸೆಪ್ಶನ್ ಕೋಣೆ) ನಮ್ಮ ರೇಡಿಯೋ ಸಂದರ್ಶನ ಮಾಡಿದರು! ಹಾಗೆಯೇ ಅಲ್ಲಿಯೇ ಪತ್ರಿಕಾ ಸಂದರ್ಶನ ಕೂಡಾ ಆಯಿತು! ಈ ತರಹದ ಪ್ರಚುರ ದುಂದುಭಿ ನಾವು ಖಂಡಿತ ನಿರೀಕ್ಷಿಸಿರಲಿಲ್ಲ. ಅವರ ಆಸಕ್ತಿಗೆ, ಕಲೆಯ ಆತುರಕ್ಕೆ ಸಂತೋಷಪಟ್ಟೆವು. ನಮ್ಮ ಯೂರೋಪು-ಅಮೇರಿಕಾ ಪ್ರವಾಸದ ಅನುಭವಗಳ ಹಾಗೂ ಕಲೆಯ ವಿಚಾರವಾಗಿ ಹಲವಾರು ಪ್ರಶ್ನೆಗಳನ್ನು ಕೇಳಿದರು. ಇಂದಿನ ಹೊಂಗ್‌ಕೊಂಗ್ ಪತ್ರಿಕೆಯಲ್ಲಿ ನಮ್ಮಿಬ್ಬರ ದೊಡ್ಡದೊಂದು ಚಿತ್ರ ಅಚ್ಚಾಗಿದೆ! ಇಂದು ಮಧ್ಯಾಹ್ನ 'ಸೌತ್ ಚೈನಾ ನ್ಯೂಸ್ ಏಜನ್ಸಿ' ಯ ಬಾತ್ಮೀದಾರರು ನಮ್ಮಿಬ್ಬರನ್ನು ಭೇಟಿ ಮಾಡಿ ಸಂದರ್ಶಿಸುವರಂತೆ. ನಾಳೆ ದಿನ ನಾವು ಪ್ರದರ್ಶನ ಕೊಡುತ್ತಿರುವಾಗಲೇ ಟಿ. ವಿ. ಜನರು ಅಲ್ಲೇ ನಮ್ಮ ಚಲನ ಚಿತ್ರ ತೆಗೆಯುವರಂತೆ. ರಂಗಮಂದಿರದಲ್ಲಿ 600 ಜನ ಕೂತುಕೊಳ್ಳುವ ವ್ಯವಸ್ಥೆ ಇದೆ. ಖಂಡಿತ ಭರ್ತಿಯಾಗುವುದು ಎಂದು ವ್ಯವಸ್ಥಾಪಕರು ಅನ್ನುತ್ತಾರೆ........

ನಮಗೆ ಕೌಲೂನ್‌ನ ಹೊಟೇಲ್ ಇಂಪೀರಿಯಲ್‌ನಲ್ಲಿ ಕೋಣೆ ಕೊಟ್ಟಿದ್ದಾರೆ. ಹೊಂಗ್‌ಕೊಂಗ್‌ನ ಪ್ರಮುಖ ಅಂಗಡಿಗಳ ಕೇಂದ್ರದಲ್ಲಿದೆ ಈ ಹೊಟೇಲ್. ಈ ಹೊಂಗ್‌ಕೊಂಗ್ ಬಹಳ, ಬಹಳ ಸುಂದರವಾದ ಜಾಗ! ಎಲ್ಲೆಲ್ಲೂ ನೀರು, ಸಮುದ್ರ, ಕಾಲುವೆಗಳು – ಕೊಲ್ಲಿಗಳು – ಹಡಗು ನಿಲ್ದಾಣಗಳು – ದೋಣಿಗಳ ಗುಂಪು ಗುಂಪುಗಳು – ಹಡಗುಗಳು – ಪರ್ವತ ಶ್ರೇಣಿ – ಗುಡ್ಡ ಪ್ರದೇಶ ಹಾಗೂ ಆಧುನಿಕ ಕಟ್ಟಡಗಳು. ಪರ್ವತಗಳ ಮೇಲೂ ಗಗನ ತಲುಪುವ ಕಟ್ಟಡಗಳ ಅಂದ. ಹೊಂಗ್‌ಕೊಂಗ್‌ನಲ್ಲಿ ಮಿತ ಭೂಪ್ರದೇಶ ಇರುವ ಕಾರಣ, ಗುಡ್ಡ, ಬೆಟ್ಟಗಳ ಮೇಲೂ ಮನೆಗಳನ್ನು ಕಟ್ಟಿ ಜೀವಿಸುತ್ತಾರೆ. ಸುತ್ತುಮುತ್ತಲೆಲ್ಲ ಅತ್ಯಂತ ರಮಣೀಯ ದೃಶ್ಯಗಳು– ಹೊಂಗ್‌ಕೊಂಗ್ ಒಟ್ಟಿನಲ್ಲಿ ಬಹಳ ಸ್ವಾರಸ್ಯವಾದ ಸ್ಥಳ – ಬಹಳ ಮನೋಹರವಾದ

ಜಾಗ - ಗೆಲುವು ನಲುವಿನ ಪ್ರದೇಶ. ಇಲ್ಲಿನ ಜನ ಮಿಶ್ರಜನ-ಯಾವುದೇ ಒಂದು ರಾಷ್ಟ್ರ - ದೇಶದ ಜನರ ವೈಶಿಷ್ಟ್ಯ ಕಾಣೆವು. ಎಲ್ಲ ಜನತೆಯೂ ಒಂದಾಗಿ ಒಬ್ಬ ರೊಡನೆ ಇನ್ನೊಬ್ಬರು ಬೆರೆತು ಜೀವಿಸುತ್ತಿದ್ದಾರೆ. ಜಗತ್ತಿನ ಅತ್ಯಂತ ಮುಖ್ಯವಾದ ಅನಿರ್ಬಂಧ ಬಂದರಾದ್ದರಿಂದ 'ಫ್ರೀ ಪೋರ್ಟ್' (Free Port) ಹೊಂಗ್‌ಕೊಂಗ್ ನಲ್ಲಿನ ಜೀವನ ವಿವಿಧ ಚಟುವಟಿಕೆಗಳಿಂದ ತುಂಬಿದೆ. ಇಲ್ಲಿಂದ ಜಗತ್ತಿನ ವ್ಯಾಪಾರ ವೆಲ್ಲ ನಡೆಯುತ್ತದೆ........ಹೊಂಗ್‌ಕೊಂಗ್ ನಾನು ಎಣಿಸಿದ ಚಿತ್ರಕ್ಕೂ ಮೀರಿ ಚೆನ್ನಾಗಿದೆ........

ನಮ್ಮ ನಾಳಿನ ನೃತ್ಯ ಪ್ರದರ್ಶನವಾದ ಮೇಲೆ ಬರೆಯುವೆ.

ಇತಿ ನಿಮ್ಮ
ಅಮ್ಮ .

* * * * * *

ಹೊಂಗ್‌ಕೊಂಗ್
(ಸುಗಂಧಿತ ದ್ವೀಪ ಅಥವಾ ಬಂದರು)
18 – 4 – 1968

ಮುದ್ದು ಮಕ್ಕಳೇ,

ನಾವು ಹೊಂಗ್‌ಕೊಂಗ್ ವಿಚಾರವಾಗಿ ಬಹಳ ಕೇಳಿದ್ದೆವು, ಓದಿದ್ದೆವು. ಇಲ್ಲಿನ ಅಪಾರ ವ್ಯಾಪಾರ - ಜನಗಳ ವಿವಿಧತೆ, ಕೌಲೂನ್‌ನಿಂದ ಹೊಂಗ್‌ಕೊಂಗ್, ಹಾಗೆಯೇ ಹೊಂಗ್‌ಕೊಂಗ್‌ನಿಂದ ಕೌಲೂನ್‌ಗೆ ಎಡಬಿಡದೆ ನಡೆಯುತ್ತಿರುವ ಸೀಳು ದೋಣಿಗಳ ಪ್ರಯಾಣ, ಅಂದವಾದ ಕೊಲ್ಲಿ ಇತ್ಯಾದಿ. ಭೂಲೋಕದ ಪೂರ್ವಭಾಗದ ಈ ಅಪೂರ್ವ ಚೇತೋಹಾರಿ ಸ್ಥಳವನ್ನು ನೋಡಿ ನಮಗೆ ಬಹಳ ಆನಂದ. ಇಲ್ಲಿಂದ ಕಮ್ಯೂನಿಸ್ಟರ ಕೆಂಪು ಚೀಣಾ ಕೇವಲ ಮೂವತ್ತು ಮೈಲಿ ದೂರ ಮಾತ್ರ. ಇವುಗಳ ಮಧ್ಯೆ ಬಹಳ ವ್ಯಾಪಾರ ನಡೆಯುತ್ತಿದೆ. ಅಲ್ಲಿನ ಗಡಿಯಲ್ಲಿ ಶಸ್ತ್ರಬದ್ಧ ಯೋಧರು ಕಾವಲಿದ್ದು ಅಪಾಯ ಎದುರಿಸಲು ಯಾವಾಗಲೂ ತಯಾರಾಗಿರುತ್ತಾರಂತೆ. ಕೆಂಪು ಚೀಣಾ ಈ ಹೊಂಗ್‌ಕೊಂಗ್‌ನ್ನು ಸುಲಭವಾಗಿ ನುಂಗಿ ಹಾಕಬಹುದು! ಆದರೆ ಇದು ಅವರಿಗೆ ಮುಖ್ಯವಾದ ವಾಣಿಜ್ಯ ಕೇಂದ್ರ – ಇಡೀ ಜಗತ್ತಿಗೇ ಸಂಬಂಧ-ಸಂಪರ್ಕ ಕೊಡುವ ಸ್ಥಳ-ಅಲ್ಲದೆ ಪಾಶ್ಚಾತ್ಯದ ವ್ಯಾಪಾರಕ್ಕೆ, ಮುಖ್ಯವಾಗಿ, ಬ್ರಿಟನ್‌ನಿಂದ ಬರುವ ಸರಕುಗಳಿಗಾಗಿ ಹೊಂಗ್‌ಕೊಂಗ್‌ನ್ನು ಸ್ವತಂತ್ರವಿರಲು ಬಿಟ್ಟಿದ್ದಾರೋ ಏನೋ !.... ಇಲ್ಲಿ ಈಗ ಬಹಳ ಸೆಖೆ. 2½ ವರ್ಷಗಳ ಅನಂತರ ಇಲ್ಲಿನ ಈ ಸೆಖೆಗೆ ಬೆವತು, ಕುಣಿ ಯಲು ತುಂಬಾ ದಣಿವಾಯಿತು. ನಮ್ಮ ಸಜ್ಜಿಕಾ ಗೃಹದಲ್ಲಿ "ಫ್ಯಾನ್" (ವಿದ್ಯುತ್

ಬೀಸಣಿಗೆ) ಇಟ್ಟರೂ ಸಾಕಾಗಲಿಲ್ಲ. ಅಂತೂ ನಾವು ಮದರಾಸು ತಲುಪುವ ಹೊತ್ತಿಗೆ ಅಲ್ಲಿನ ಸೆಖೆಗೆ ತಯಾರಾಗುತ್ತೇವೆ! ನಿನ್ನೆಯ ನಮ್ಮ ಪ್ರದರ್ಶನ ಬಹಳ ಯಶಸ್ವಿಯಾಯಿತು. ಪತ್ರಿಕೆಗಳ ತುಂಬಾ ನಮ್ಮ ಪ್ರದರ್ಶನವನ್ನು ಕುರಿತು ಒಳ್ಳೇ ವಿಮರ್ಶೆಗಳು--ಚಿತ್ರಗಳು! ಹೊಂಗ್‌ಕೊಂಗ್‌ನಲ್ಲಿ ನಮ್ಮ ಬರುವಿಕೆ ತುಂಬಾ ವಿಜೃಂಭಣೆಯ ಮಾತಾಗಿದೆ.

.......ಒಂದು ಕೈ ಹಿಡಿಕೆಯ ಟೇಪ್ ರೆಕಾರ್ಡರ್ ತರಲಾದೀತೇ ಎಂದು ಮುದ್ದು ಶಿವದೇವ್ ನನಗೆ ಬರೆದಿದ್ದ. ಅವನ ಮನಸ್ಸನ್ನು ತಿಳಿದಂತೆ ಎಂಬಂತೆ ನಮ್ಮ ಇಲ್ಲಿನ ಪ್ರದರ್ಶನದ ವ್ಯವಸ್ಥಾಪಕರು ಹಿಟಾಚಿ TRQ 220 (Hitachi TRQ 220) ಎಂಬ ಕೈಯ್ಯಲ್ಲಿ ಒಯ್ಯಬಹುದಾದ ಧ್ವನಿಮುದ್ರಕ ಯಂತ್ರವನ್ನು (ಟೇಪ್ ರೆಕಾರ್ಡರನ್ನು) ಉಡುಗೊರೆ ಮಾಡಿದ್ದಾರೆ! ಅದು ಅತ್ಯಂತ ಆಧುನಿಕ -- ಅಂದರೆ ಇಂದಿನ "ಮೊಡೆಲ್" (Model) ಅಂತೆ. ಬಹಳ ಚೆನ್ನಾಗಿದೆ. ಹೊರಗಿನ ಯಾವ ಸದ್ದುಗಳನ್ನೂ ಅಡಗಿಸಿ ಮುದ್ರಣ ಮಾಡಿದ ಧ್ವನಿಯೊಂದು ಮಾತ್ರ ಸ್ಪಷ್ಟವಾಗಿ ಬರುವ ವಿಧಾನ ಆ ಯಂತ್ರದಲ್ಲಿಯೇ ಅಳವಡಿಸಲಾಗಿದೆಯಂತೆ! ಶಿವದೇವನಿಗೆ ಅದನ್ನು ಕಂಡು ತುಂಬಾ ಸಂತೋಷವಾಗುತ್ತದೆ.

"ಅಮ್ಮಾ ಜಗತ್ಪ್ರಖ್ಯಾತ ಅನಿರ್ಬಂಧಿತ ರೇವುಪಟ್ಟಣ ಆದ ಹೊಂಗ್‌ಕೊಂಗ್‌ನಲ್ಲಿದ್ದೀರಿ! ನನಗಾಗಿ ಒಂದು ಹಳೆಯ ಕೆಮೆರಾವನ್ನಾದರೂ ತರಲಾದೀತೆ?" ಎಂದು ಜಯದೇವ ಬರೆದುದನ್ನು ಓದಿ ನನಗೆ ಕಣ್ಣಲ್ಲಿ ನೀರು ಬಂತು. ಎಲ್ಲ ಸಾಮಾನುಗಳೂ ತೆರಿಗೆ ಇಲ್ಲದೆ ಮಾರಲ್ಪಡುವ ಈ ಜಾಗ ನೋಡಿದರೆ ನಿಮಗಾಗಿ ಏನು ತೆಗೆದುಕೊಳ್ಳಬೇಕು ಏನುಬಿಡಬೇಕು, ಒಂದೂ ಗೊತ್ತಾಗುವುದಿಲ್ಲ. ಅಷ್ಟೊಂದು ಆಕರ್ಷಕ, ನಿಮ್ಮ ನೆಚ್ಚಿನ, ಮೆಚ್ಚಿನ, ವಿಷಯಗಳ ಸಮೃದ್ಧಿ ಇದೆ. ಇಲ್ಲದ ವಸ್ತುವಿಲ್ಲ. ಆದರೆ ನಮಗೆ ಅದೆಲ್ಲ ಕನ್ನಡಿಯಲ್ಲಿನ ಗಂಟು ಇದ್ದ ಹಾಗೆ! ಜಯದೇವ್, ಹಳೆಯ ಕೆಮೆರಾ ಏತಕ್ಕೆ ಮಗು? ನಿನಗಾಗಿ ಟೋಕ್ಯೋದಲ್ಲಿ ಇಂದಿನ ಕೆಮೆರಾ ಆದ ಮಿನೋಲ್ಟಾ ಎಸ್. ಆರ್. ಟಿ. 101 (Minolta SRT 101) ತೆಗೆದುಕೊಂಡಿದ್ದೇವೆ, ಹೊಂಗ್‌ಕೊಂಗ್‌ನಲ್ಲಿ ವ್ಯಾಪಾರದ ಪೈಪೋಟಿಯಲ್ಲಿ ಸಿಕ್ಕಿಬಿದ್ದು ಮೋಸಹೋಗಬಾರದೆಂದು. ಜಪಾನು ಇತ್ತೀಚೆಗೆ ತಯಾರಿಸಿದ ಹೊಸದಾದ ಈ ಕೆಮೆರಾವನ್ನು ಅವರ ದೇಶದಲ್ಲೇ ಕೊಂಡುಕೊಂಡಿದ್ದೇವೆ ಮಗು-ನಿನಗಾಗಿ. ಈ ಕೆಮೆರಾ ತೆಗೆದುಕೊಳ್ಳಲು ನಾವು ಶ್ರಮಿಸಿ, ನಮ್ಮ ಸುಖವನ್ನು ಹಲವೊಮ್ಮೆ ಬದಿಗಿರಿಸಿ, ಹಣ ಕೂಡಿಟ್ಟು ಅದನ್ನು ಕೊಂಡುಕೊಂಡ ದಿನ ನಮಗಾದ ಸಂತೋಷ, ತೃಪ್ತಿ, ಸಮಾಧಾನ ಅಷ್ಟಿಷ್ಟಲ್ಲ! ನೀನು ನಂಬಲಾರೆ ಮಗು- ನಿಜವಾಗಿ ನೀನು ಈಗ ಒಂದು ಸುಂದರ ಮಿನೋಲ್ಟಾ ಕೆಮೆರಾವಿನ ಮಾಲೀಕ! ....

........ಈಗ, ಇದನ್ನು ಬರೆಯುತ್ತಿರುವಾಗ ಪತ್ರಿಕೋದ್ಯೋಗಿ ಒಬ್ಬರು ನಮ್ಮನ್ನು ಸಂದರ್ಶಿಸಿ, ಅವರ ಪತ್ರಿಕೆಯಲ್ಲಿ ಲೇಖನವನ್ನು ಪ್ರಕಟ ಮಾಡಲು ಬಂದಿದ್ದಾರೆ-

ಒಂದು ಚಿಕ್ಕ ಟೇಪ್ ರೆಕಾರ್ಡರ್ ತೆಗೆದುಕೊಂಡು. ಇಂದಿಗೆ ಇಷ್ಟು ಸಾಕು!

ನಾಳೆ ಮುಂದುವರಿಸುವೆ.

ಇತಿ ನಿಮ್ಮ
ಅಮ್ಮ.

* * * * * *

ಕೌಲೂನ್
(ರಾತ್ರಿಯ ಡ್ರೇಗನ್)
19-4-1968

ಮುದ್ದು ಮಕ್ಕಳೇ,

ಹೊಂಗ್‌ಕೊಂಗ್ ನಮಗಿಬ್ಬರಿಗೂ ಅತಿ ಹಿತಕರ ಅನುಭವವಾಗಿದೆ. ನಮ್ಮ ಸ್ನೇಹಿತರೂ, ಪತ್ರಿಕೋದ್ಯೋಗಿಗಳೂ – ಸಾರ್ವಜನಿಕರೂ ನಮ್ಮನ್ನು ಈ ಹೊಂಗ್ ಕೊಂಗ್‌ನಲ್ಲಿ ಹೊಗಳಿ ಉಬ್ಬಿಸಿದಷ್ಟು ಇನ್ನೆಲ್ಲೂ ಮಾಡಿಲ್ಲ ಎನ್ನಬಹುದು! ಇಲ್ಲಿ ಸಾವಿರಾರು ಭಾರತೀಯರು ಬಂದು ನೆಲೆಸಿದ್ದಾರೆ. ವ್ಯಾಪಾರ ಉದ್ಯೋಗ ಮಾಡಿ ಭಾರತೀಯರು ಕುಬೇರನ ಐಶ್ವರ್ಯ ಪಡೆದಿದ್ದಾರೆ! ಒಬ್ಬ ಸಿಂಧಿ ಶ್ರೀಮಂತರ ಮದುವೆಯ ಆರತಕ್ಷತೆ ಸಮಾರಂಭ (Reception) ಇಲ್ಲಿ ಗಿರಿಯೊಂದರ ಮೇಲೆ ಕಟ್ಟಿರುವ ಅತ್ಯಂತ ಅದ್ಭುತ ಹೊಂಗ್‌ಕೊಂಗ್ ಹಿಲ್ಟನ್ ಹೊಟೇಲಿನಲ್ಲಿ ನಡೆಯಿತು. ನಮಗೂ ಆಹ್ವಾನವಿತ್ತು. ಆ ವೈಭವ ಆ ಶ್ರೀಮಂತಿಕೆ ನಾನು ಬರೆದು ಹೇಗೆ ವರ್ಣಿಸಲಿ? ವಜ್ರ, ವೈಢೂರ್ಯ–ಚಿನ್ನ, ಬೆಳ್ಳಿ – ರತ್ನ ಕಂಬಳಿ – ಆಹಾರ ಸಂಪತ್ತು, ಸಂಗೀತ – ದೀಪಾಲಂಕಾರ ಇವೆಲ್ಲ ಕೂಡಿ ನಮ್ಮನ್ನು ದಂಗುಬಡಿಸಿದುವು! ಅಂದು ಆ ಸಿಂಧೀ ಕುಬೇರ ರಾತ್ರಿ 7 ರಿಂದ 9 ಗಂಟೆ ಒಳಗೆ 40,000 ಹೊಂಗ್‌ಕಾಂಗ್ ಡಾಲರುಗಳನ್ನು ಸುಖವಾಗಿ ನೀರಿನಂತೆ ಖರ್ಚು ಮಾಡಿದರಂತೆ! ಸಂಪತ್ತುಳ್ಳ ಭಾರತೀಯ ವ್ಯಾಪಾರಿಗಳು ಯಾವ ಮಟ್ಟದಲ್ಲಿ ಇಲ್ಲಿದ್ದಾರೆ ಎಂದು ನೀವು ಊಹಿಸಬಲ್ಲಿರಿ – ಅಲ್ಲವೇ? ಅವರು ಇನ್ನು ಮೇಲೆ ಭಾರತಕ್ಕೆ ಹಿಂದಿರುಗಲು ಹೇಗೆ ಸಾಧ್ಯವಾದೀತು? ಆ ರೀತಿಯ ಉನ್ನತ ಅಂತಸ್ತಿನ ಜೀವನವನ್ನು ಇಲ್ಲಿ ಜರುಗಿಸುವ ಅಭ್ಯಾಸವಾದ ಮೇಲೆ ಭಾರತ ಅವರಿಗೆ ಸಪ್ಪೆ – ನೀರಸವಾಗಿ ಕಂಡರೆ ತಪ್ಪೇನಿಲ್ಲ.

ಇಲ್ಲಿನ ನಮ್ಮ ಸ್ನೇಹಿತರು ಹೊಂಗ್‌ಕೊಂಗ್ ನೋಡಲು ನಮಗೆ ತಮ್ಮ ಕಾರನ್ನೂ ಡ್ರೈವರನ್ನೂ ಕೊಟ್ಟಿದ್ದರು. ಭಾರತೀಯರು ಇಲ್ಲಿ ಬಹಳ ಚೆನ್ನಾಗಿರುವ

ಹಿಂದೂ ದೇವಾಲಯವನ್ನು ಕಟ್ಟಿದ್ದಾರೆ. ಎರಡೂವರೆ ವರುಷಗಳ ಮೇಲೆ ಹಿಂದೂ ದೇವಾಲಯ ನೋಡಿ ಪ್ರಾರ್ಥಿಸಿದ ನಮಗೆ ಒಂದು ಮಾನಸಿಕ ತೃಪ್ತಿಯ ಲಾಭ ವಾಯಿತು. ಹೊಂಗ್‌ಕೊಂಗ್ ಚಿಕ್ಕ ಸ್ಥಳ, ಚೊಕ್ಕ ಸ್ಥಳ; ನೋಡಬೇಕಾದ ಎಲ್ಲ ಸ್ಥಳಗಳನ್ನೂ ನೋಡಿದೆವು. Deep-Sea Beach, The Repulse Bay Beach. (ಇಲ್ಲಿ "Love is a many splendoured thing" ಎಂಬ ಚಲನಚಿತ್ರವನ್ನು ತೆಗೆದಿದ್ದರಂತೆ) ಇತ್ಯಾದಿ.

ಪ್ರವಾಸಿಗಳು ನೋಡತಕ್ಕ ಕೆಲವು ದೃಶ್ಯಗಳು – ಎಬರ್ಡೀನ್ (Aberdeen) ಹಳ್ಳಿ ಇತ್ಯಾದಿ. ಇಲ್ಲಿ ಮೀನು ಹಿಡಿಯುವ ಜನ ತಮ್ಮ 'ಸಾಂಪಾನ್' (Sampan) ಎಂಬ ದೋಣಿಗಳಲ್ಲೇ ಮನೆಮಾಡಿ ಸಂಸಾರ ನಡೆಸುತ್ತಾರೆ. ಈ 'ಸಾಂಪಾನ್' ಗಳ ಗುಂಪು ಗುಂಪುಗಳೇ ಇದ್ದು ಒಂದು ಹಳ್ಳಿಯೇ ರಚಿತವಾಗಿದೆ. ಆ ದೋಣಿಯಲ್ಲಿನ ಅವರ ಮನೆ, ಸಂಸಾರ ಜೀವನ ನಮಗೆ ನೋಡಲು ವಿಚಿತ್ರವಾಗಿತ್ತು. ನೀರಿನ ಮೇಲೆ ತೇಲುವ ಉಪಹಾರ ಗೃಹಗಳು ಇಲ್ಲಿನ ಚಾತುರ್ಯದ ವಿಷಯ. ನೀರಿನ ಮಧ್ಯೆ ಹಡಗಿನಂತಿರುವ ಈ ಉಪಹಾರ ಮಂದಿರಗಳಲ್ಲಿ ಹೊಸತಾಗಿ ಆಗತಾನೇ ನೀರಿನಿಂದ ತೆಗೆದ ವಿಧವಿಧವಾದ ಮೀನು ಮುಂತಾದ ಸಮುದ್ರ ಜೀವಿಗಳನ್ನು ಬೇಕಾದ ರೀತಿ ಯಲ್ಲಿ ಕಣ್ಣುಮುಂದೆಯೇ ಬೇಯಿಸಿ ಊಟ ತಯಾರಿಸುವ ಏರ್ಪಾಡು ಇದೆ.......

ಹೊಂಗ್‌ಕೊಂಗ್‌ನಲ್ಲಿ ಪ್ರತಿ ಒಂದು ಅಂಗುಲ ಭೂಮಿಯೂ ಅಮೂಲ್ಯ ವಾಗಿದೆ. ಆದ್ದರಿಂದ ಇಲ್ಲಿಯ ಜನರು ಸಮುದ್ರವನ್ನು ಹಿಂದಕ್ಕೆ ತಳ್ಳಿ, ಹೊಸತಾಗಿ ಪಡೆದುಕೊಂಡ 'ನ್ಯೂಟೆರಿಟರಿಸ್' (New Territories) ಎಂಬ ಹೊಸ ಭೂಮಿ ಯನ್ನು ನೋಡಿದೆವು. ಇಲ್ಲಿನ ಮಾರುಕಟ್ಟೆಗೆ ಹೋಗಿ ಅವರು ಮಾರುವ ವಿಶಿಷ್ಟ ಪದಾರ್ಥಗಳನ್ನು ನೋಡಿದೆವು. ಮಾವಿನ ಹಣ್ಣುಗಳೂ ಮಾರಾಟಕ್ಕಿದ್ದುವು. ಅವನ್ನು ಕೊಂಡುಕೊಂಡು ತಿಂದು ಎರಡೂವರೆ ವರ್ಷಗಳ ಆಸೆ ತೀರಿಸಿಕೊಂಡೆವು.

ಇಲ್ಲಿನ ಗುಡ್ಡ–ಬೆಟ್ಟಗಳನ್ನು ಹತ್ತಿ ಟೈಗರ್ ಬಾಮ್ ಗಾರ್ಡನ್ಸ್ (Tiger Balm Gardens) ಎಂಬ ಉದ್ಯಾನವನವನ್ನು ನೋಡಿದೆವು. ಇದನ್ನು ಒಬ್ಬ ಶ್ರೀಮಂತನು ಜನರ ವಿನೋದಕ್ಕೋಸ್ಕರ ರಚಿಸಿದ ಸ್ವಾರಸ್ಯವಾದ ಉದ್ಯಾನವನ. ಆದರೆ ಕಲಾತ್ಮಕವಲ್ಲ. ಆ ಬೆಟ್ಟವನ್ನು Peak Tram Line ಮೂಲಕ ತಲುಪಿ ದೆವು. ಹತ್ತಿ ಹೋಗುವಾಗ ಸುತ್ತುಮುತ್ತಲಿನ ದೃಶ್ಯ ಅದ್ಭುತವಾಗಿತ್ತು. (ರಾತ್ರಿ ಯಲ್ಲಿ ಇದೇ ದೃಶ್ಯ ತುಂಬಾ ಥಳಕು ಥಳಕಿನ ದೃಶ್ಯ – ಎಲ್ಲೆಲ್ಲೂ ಮಿಂಚು ಹುಳು ಗಳು ಹಾರಾಡುವಂತಿರುತ್ತದೆ – ಬೆಳಕು ನೀರಿನಲ್ಲಿ ಪ್ರತಿಬಿಂಬಿಸಿ ಆಗುವ ಚಂದ – ಬೆಟ್ಟಗಳ ಬಣ್ಣ ಬದಲಾವಣೆ ಇವನ್ನು ನೋಡಿಯೇ ತೀರಬೇಕು. ಬರೆಯಲಾರೆ). ಈ ಗುಡ್ಡಗಳಲ್ಲಿ ದೊಡ್ಡ ದೊಡ್ಡ ಕಟ್ಟಡಗಳ ಜೊತೆಗೆ ಬಡವರ ಗುಡಿಸಲುಗಳು ಅಲ್ಲಲ್ಲಿ

ತುಂಬಿವೆ! ಎರಡೂವರೆ ವರುಷಗಳ ಮೇಲೆ ನಾವು ಬಡವರನ್ನು – ಬಡತನ ನೋಡು ವುದು ಇಲ್ಲೇ ಮೊದಲು! ಪ್ರವಾಸಿಗಳಿಗೆ ತೊಂದರೆ ಕೊಟ್ಟು ಭಿಕ್ಷುಕರು ಹಣ ಪಡೆಯು ತ್ತಾರೆ! ಬೇಡುವವರನ್ನು ಕಂಡು ನನಗೆ ಅಸಹ್ಯವೆನಿಸಿತು. ಸಮಾಜದಲ್ಲಿ ಈ ತರ ಹದ ಜನ ಏತಕ್ಕಿರಬೇಕು ಅನ್ನಿಸಿತು. ಆದರೆ ಈ ಬೇಡುವವರು ನಮ್ಮ ಭಾರತದಲ್ಲಿ ರುವ ರೀತಿಯ ಬೇಡುವವರಲ್ಲ. ಇಲ್ಲಿನ ಬಡತನ ಭಾರತದಲ್ಲಿರುವಂತಿಲ್ಲ- ಈ ಬೇಡು ವವರು ದಿನಕ್ಕೆ 8–10 ಗಂಟೆ ಕೆಲಸ ಮಾಡಿ ಹಣ ಸಂಪಾದಿಸುತ್ತಾರಂತೆ – ಆದರೆ ಆ ಹಣ ಸಂಸಾರಕ್ಕೆ ಸಾಕಾಗದೆ ಬೇಡುವರಂತೆ. ಈ ಕಾರಣದಿಂದ ಹಳೆಯ ಬಟ್ಟೆ ಗಳನ್ನು ಸ್ವೀಕರಿಸುವುದಿಲ್ಲ – ಹಳೆಯ ಹಳಸಿದ ಆಹಾರವನ್ನೂ ತಿನ್ನುವುದಿಲ್ಲ. ಹಣ ಮಾತ್ರ ಬೇಡುವ ಜನ! ಈ ಗುಡಿಸಲುಗಳಲ್ಲಿ 6 ವರುಷದ ಮಗು 6 ತಿಂಗಳ ಮಗು ವನ್ನು ಬೆನ್ನಹಿಂದೆ ಎತ್ತಿ ಹೊತ್ತು ಬೇಡುವ ದೃಶ್ಯ ಚಿಂತಾಜನಕ. ಈ ಬಡತನ, ಕಾಹಿಲೆಗಳು – ಗಲೀಜು – ಅನಾರೋಗ್ಯಕರವಾದ ವಾತಾವರಣವನ್ನು ನಾವು ಎರ ಡೂವರೆ ವರುಷಗಳ ಕಾಲ ಮರೆತಿದ್ದೆವು. ಪುನಹ ನೋಡಿ ನಿಜವಾಗಿ ಸಹಿಸ ಲಾಗಲಿಲ್ಲ.

ಅಮೇರಿಕಾದ ರಸ್ತೆಗಳಲ್ಲಿ ಪಾದಚಾರಿಗಳನ್ನು ನೋಡುವುದೂ ಅಪರೂಪ ವಾಗಿತ್ತು. ಎಲ್ಲೆಲ್ಲೂ ವಾಹನ, ವಾಹನ, ವಾಹನಗಳ ಸಂಚಾರ! ಟೆಕ್ಸಾಸ್‌ನಲ್ಲಿ ನೂರಾರು ಮೈಲುಗಳ ಪ್ರಯಾಣ ಮಾಡುವಾಗಲೂ ರಸ್ತೆಯಲ್ಲಿ ಒಬ್ಬ ಮನುಷ್ಯ ನನ್ನೂ ನೋಡಲಿಲ್ಲ. ಟೋಕ್ಯೋದಲ್ಲೂ, ಇಲ್ಲೂ ರಸ್ತೆಯಲ್ಲಿನ ಜನರ ನೂಕು ನುಗ್ಗಲು ನೋಡಿ ಅತಿ ಜನಸಂಖ್ಯೆಯ ಅರಿವಾಯಿತು. ಸಾವಿರಾರು ಜನರು ಒಮ್ಮೆಲೇ ರಸ್ತೆಯಲ್ಲಿರುವಂತೆ ಇತ್ತು.........

ಇಲ್ಲಿನ ಕೌಲೂನ್--ಹೊಂಗ್‌ಕೊಂಗ್ ಮಧ್ಯ ಎರಡು ನಿಮಿಷಕ್ಕೊಮ್ಮೆ ಓಡಾಡು ತ್ತಿರುವ ಸೀಳು ದೋಣಿ (Ferry Boats) ಗಳು ನನಗೆ ತುಂಬಾ ಪ್ರಿಯ. ಸ್ನೇಹಿತ ರನ್ನು ನೋಡುವುದಕ್ಕೂ, ನಮ್ಮ ಪ್ರದರ್ಶನಕ್ಕೂ ಹಾಗೆಯೇ ಪ್ರಯಾಣ ಮಾಡಿದೆವು. ವಾಹನಗಳನ್ನು ಸಾಗಿಸುವ ದೋಣಿಯಲ್ಲಿ ನಿನ್ನೆ ಪ್ರಯಾಣ ಮಾಡಿದ ಆ ಅನು ಭವವೂ ಸ್ವಾರಸ್ಯ. ಇಲ್ಲಿನ ಜನಜೀವನ ನೀರಿನ ಮೇಲೆ ಹೊಂದಿಕೊಂಡಿದೆ. ನೀರಿಗೂ ಜನರಿಗೂ ನಿಕಟ ಸಂಬಂಧವಿದೆ........

ರಾತ್ರಿಯೆಲ್ಲ ಹೊಂಗ್‌ಕೊಂಗ್ ವಿನೋದ ಸ್ಥಳ. ರಾತ್ರಿಯ ದೀಪದ ಬೆಳಕಿ ನಲ್ಲಿ ಚಕಮಕ ಎಂದು ನಕ್ಷತ್ರಗಳು ಮಿನುಗುವಂತೆ ಗುಡ್ಡಗಳು, ಪಟ್ಟಣವೆಲ್ಲ ಪ್ರಕಾಶಿಸುತ್ತವೆ. ರಾತ್ರಿ ವಿನೋದಕ್ಕಾಗಿ ಎರಡು ಜಾಗಗಳಿಗೆ ಹೋದೆವು. ಒಂದೆಡೆ ಚೀನೀಯರ ಲಿಪಿಸಾಧನೆ ಅದ್ಭುತವಾಗಿತ್ತು, 'ವರ್ಲ್ಡ್ ಬೈ ನೈಟ್' (World by Night) ಸಿನಿಮಾದಲ್ಲಿ ತೋರಿಸಿದ್ದಂತೆ. ಇನ್ನೊಂದೆಡೆ ಕೊರಿಯದ ನೃತ್ಯಗಾತಿ

ಯೊಬ್ಬಳು ಅರೆನಗ್ನ ನೃತ್ಯವನ್ನು ಮಾಡಿದಳು. ಅದು ಕಾಮಪ್ರದರ್ಶಕ ನೃತ್ಯವಾದರೂ ಬಹಳ ಲಾಲಿತ್ಯವಾಗಿ, ಬಹಳ ಚೆನ್ನಾಗಿ, ಆಕರ್ಷಕವಾಗಿ ನರ್ತಿಸಿದಳು. ಬಹಳ ಕಠಿಣ ನೃತ್ಯ. ತನ್ನನ್ನು ತಾನೇ ಮರೆತು ನರ್ತಿಸಿದ ಕಾರಣ ನಿಜವಾಗಿ ಆ ವಿನೋದ ಉನ್ನತ ಮಟ್ಟದಲ್ಲಿತ್ತು. ನಾವು ಯಾವ ಗುರಿಯೂ ಇಲ್ಲವೆ ಹೊಂಗ್ ಕೊಂಗ್‌ನ ರಸ್ತೆಗಳಲ್ಲೆಲ್ಲ ರಾತ್ರಿಯೆಲ್ಲ ಸುತ್ತಾಡಿದೆವು. ಇಲ್ಲಿ ಚೀನೀಯರೂ ಭಾರತೀಯರೂ ಸೌಹಾರ್ದತೆಯಿಂದ, ಸ್ನೇಹಪರತೆಯಿಂದ ಜೊತೆಗೂಡಿ ಜೀವಿಸುತ್ತಾರೆ. ಭಾರತೀಯರ ಮನೆಗಳಲ್ಲಿ ಅಡಿಗೆಯುವರೂ ಡ್ರೈವರುಗಳೂ ಚೀನೀಯರೇ!

ಇನ್ನೇನು ಬರೆಯಲಿ? ಈಗ ಥೈಲ್ಯಾಂಡ್ (ಸಯಾಂ) ಗೆ ಹೊರಟಿದ್ದೇವೆ- ಬಿ. ಒ. ಎ. ಸಿ. (B. O. A. C.) ವಿಮಾನ ಮೂಲಕ ಪ್ರಯಾಣ. ಇನ್ನೊಂದು ಹೊಸ ದೇಶಕ್ಕೆ ಭೇಟಿ....... ಅಲ್ಲಿಂದ ಬರೆಯುತ್ತೇನೆ.

ನಿಮ್ಮ ಹತ್ತಿರ ಹತ್ತಿರ ಬರುತ್ತಿದ್ದಂತೆ ನಿಮ್ಮನ್ನು ಎಂದು ನೋಡುವೆನೋ ಎಂಬ ಆತುರವಾಗಿದೆ........

ಇತಿ ನಿಮ್ಮ
ಅಮ್ಮ

ಹೊಂಗ್ ಕೊಂಗ್ ನಿಂದ

ಬೆಂಕಾಕ್‌ಗೆ

ಥ್ಯಾಲೇಂಡ್ ದೇಶಕ್ಕೆ.

ಆಗ್ನೇಯ ಏಷ್ಯಾದ
ಥ್ಯಾಯಲೆಂಡ್ – ಬೆಂಕೊಕ್
24 – 4 – 1968

ಮುದ್ದು ಮಕ್ಕಳೇ,

ಹೊಂಗ್‌ಕೊಂಗ್‌ನ ಕೈಟಾಕ್ (Kaitak) ವಿಮಾನ ನಿಲ್ದಾಣದಿಂದ ಥ್ಯಾಲೇಂಡಿನ (Thailand) ಡೋನ್ ಮುಆಂಗ್ (Don Muang) ವಿಮಾನ ನಿಲ್ದಾಣಕ್ಕೆ ನಮ್ಮ BOAC ವಿಮಾನ 25 ನಿಮಿಷ ತಡವಾಗಿ ಬಂದು ಸೇರಿತು. ವಿಮಾನವು ನೀಲಗಗನದಿಂದ ಮೆಲ್ಲಮೆಲ್ಲನೆ ಭೂಮಿಗೆ ಇಳಿಯುತ್ತಿರುವಾಗ ಅನೇಕಾನೇಕ ಕಾಲುವೆಗಳ ಸಾಲುಸಾಲುಗಳನ್ನೇ ಕಂಡೆವು. ವ್ಯವಸಾಯ ವೃತ್ತಿ ಪ್ರಧಾನದ ದೇಶ ಥ್ಯಾಲೇಂಡ್ ಎಂದು ತಿಳಿಸಿತು ಆ ದೃಶ್ಯ. ಆಹಾರದ ಕೊರತೆಯನ್ನು ನಿವಾರಿಸುವ ಈ ಥ್ಯಾಲೇಂಡ್ ಹೊರ ದೇಶಗಳಿಗೆ ಅಕ್ಕಿಯನ್ನು ರಫ್ತು ಮಾಡುವುದರಲ್ಲಿ ಮುಂದಾಳುವಾಗಿದೆಯಂತೆ.

ನಮ್ಮ ಬಾಲ್ಯದ ಗೆಳತಿ ಸುಶೀಲಾ ನಮ್ಮನ್ನು ಅಸಾಧಾರಣ ಮಮತೆಯಿಂದ ಸ್ವಾಗತಿಸಿ, ತಮ್ಮ ಮನೆಗೆ ಕರೆದುಕೊಂಡು ಬಂದ ಘಳಿಗೆಯಿಂದ ನಾವು ನಿಜವಾದ " ತವರು ಮನೆಯ " ಸುಖವನ್ನು ಅನುಭವಿಸುತ್ತಿದ್ದೇವೆ. ನಮಗೆ ಬೇಕು ಬೇಕಾದ ಆಹಾರ, ತಿಂಡಿ ಪದಾರ್ಥಗಳಲ್ಲದೆ, ವಿಧವಿಧದ ಹಣ್ಣುಹಂಪಲುಗಳನ್ನೂ, ಮುಖ್ಯವಾಗಿ ನನ್ನ ಪ್ರೀತಿಯ ಮಾವಿನ ಹಣ್ಣುಗಳನ್ನೂ – ದಿನನಿತ್ಯ ತಿನ್ನಿಸುತ್ತಾರೆ.

ಆದರೆ ಬೆಂಕೊಕ್‌ನಲ್ಲಿ ಅಸಾಧ್ಯವಾದ ಸೆಖೆ–ಅಲ್ಲದೆ ಸೊಳ್ಳೆ ಕಾಟ! ಪ್ರತಿಯೊಂದು ಮನೆಗೂ, ಒಳಗೆ ಸೊಳ್ಳೆ ಬಾರದಂತೆ ಕಿಟಕಿಗಳಿಗೆ ತಂತಿ ಬಲೆಯನ್ನು ಹಾಕಿರುತ್ತಾರೆ. ಆದರೂ ಸಾವಿರಾರು ಸೊಳ್ಳೆಗಳು ಮೈಯೆಲ್ಲ ಕಡಿದು ಹಾಕುತ್ತಿರುತ್ತವೆ! ಇಷ್ಟು ದಿನ ನಿಜವಾಗಿ ಸೊಳ್ಳೆ ಕಾಟ ಮರೆತಿದ್ದೆವು!

ಬೆಂಕೊಕ್ ಪ್ರಥಮ ದರ್ಶನಕ್ಕೆ ಸಾಧಾರಣವಾಗಿ ನಮ್ಮ ಕೊಯಮುತ್ತೂರು ಇದ್ದಹಾಗಿದೆ. ಆದರೆ ಸಾಗರ ಛಾಯಾ ಜಲರಾಶಿ ಮತ್ತು ನೀರಮೇಲಿನ ಮಾರು ಕಟ್ಟೆಗಳು ಇಲ್ಲಿನ ವೈಶಿಷ್ಟ್ಯ. ಜನರು ನೋಡಲು ಬಹಳ ಆಕರ್ಶಕ ಜನ! ಆದರೆ ಬೆಂಕೊಕ್ ನಗರ ಶುಚಿಯಾಗಿಲ್ಲ. ದಾರಿಯಲ್ಲೆಲ್ಲಾ ಸಿಕ್ಕಾಪಟ್ಟೆ ವಾಹನ ಸಂಚಾರ! ಯಾವುದೇ ನಿರ್ಬಂಧವಿಲ್ಲ. ಹೊಂಗ್‌ಕಾಂಗ್ ರಸ್ತೆಗಳಲ್ಲಿ ಮನುಷ್ಯರು ಎಳೆಯುವ ರಿಕ್ಷಾಗಳಿದ್ದರೆ, ಇಲ್ಲಿ ರಸ್ತೆಯ ಮೇಲೆ ಆಟೋರಿಕ್ಷಾ ಮತ್ತು ಸೈಕಲ್ ರಿಕ್ಷಾಗಳು ಓಡಾಡುತ್ತಿರುತ್ತವೆ.

ಬೆಂಕೊಕ್‌ನಲ್ಲಿ ಚಿನ್ನಕ್ಕೆ ತೆರಿಗೆ ಇಲ್ಲ! ಕೊಂಡುಕೊಳ್ಳಲು ಹಣವಿದ್ದರೆ ಬಂಗಾರ ಬಹಳ ಅಗ್ಗದ ಸರಕು! ನಮ್ಮ ಭಾರತೀಯರಂತೂ ತಲೆಯಿಂದ ಕಾಲಿನ

ವರೆಗೆ ಆಭರಣ ಧರಿಸಿ, ಮಾಡಿಸಿ, ಸೋತು ಜೀಸತ್ತಿದ್ದಾರೆ! ಅವರಿಗೆ ಚಿನ್ನದ ಆಸೆಯೆಲ್ಲ ಇಂಗಿ ಹೋಗಿದೆ. ಹೊಟ್ಟೆ ತುಂಬಾ ತಿಂದು ತೇಗಿದವರಿಗೆ ಮತ್ತೆ ಔತಣವಿತ್ತು ತಿನ್ನಲು ಬಲವಂತ ಮಾಡಿದಂತಿದೆ ಅವರ ಸ್ಥಿತಿ! ಚಿನ್ನದ ಮಾರುಕಟ್ಟೆಗೆ ಹೋದರೆ ತರಕಾರಿ ಇಟ್ಟಹಾಗೆ ವಿವಿಧ ಜೆಲೆಯ, ರೀತಿಯ ಆಭರಣಗಳನ್ನು ಮಾರಲು ಪ್ರದರ್ಶಿಸುತ್ತಾರೆ. ನಮಗೆ ಅನುಕೂಲವಿದ್ದುದನ್ನು ನಾವು ಆರಿಸಿಕೊಂಡು ಕೊಳ್ಳಬಹುದು. ಭಾರತೀಯ ಜೆಲೆಗಿಂತ ಅರ್ಧ ದರ ಕಡಿಮೆ!! ಆ ಚಿನ್ನದ ಪೇಟೆ ನೋಡಿದಾಗ ನನಗೆ ನಿಜವಾಗಿ ಅಲ್ಲಾವುದ್ದೀನನ ಮಾಯಾ ದೀಪದ ಕಥೆ ಜ್ಞಾಪಕವಾಯಿತು! ಅಷ್ಟೊಂದು ಸಂಪತ್ತಿನ ಸೂರೆಯ ದೃಶ್ಯ ನನ್ನ ಕಣ್ಣು ಕಣ್ಣಾರೆ ಕಂಡರೂ ನಂಬಲಿಲ್ಲ! ಪರಾಂಬರಿಸಲು ದಿಙ್ಮೂಢಳಾದೆ!!

ಇಲ್ಲಿ ಸುಮಾರು 20,000 ಭಾರತೀಯರು ನೆಲಸಿದ್ದಾರಂತೆ! ಆದರೆ ಅವರಲ್ಲಿ ಅರ್ಧ ಜನ ಉತ್ತರ ಹಿಂದೂಸ್ಥಾನದ ಹಾಲು ಮಾರುವ ಪಂಗಡದವರು. ಅವರು ಕೂಲಿ, ಕೈಕೆಲಸ ಮಾಡಿ, ಶ್ರೀಮಂತರಾಗಿ, ಮನೆಗಳನ್ನೂ ಕಟ್ಟಿಸಿಕೊಂಡು ಸುಖವಾಗಿದ್ದಾರಂತೆ. ದಕ್ಷಿಣ ಹಿಂದೂಸ್ಥಾನದ ಜನರು ಸಾಮಾನ್ಯವಾಗಿ ಅಂತರ ರಾಷ್ಟ್ರೀಯ ಸಂಸ್ಥೆಗಳಾದ ಭಾರತದ ರಾಯಭಾರ ಕಛೇರಿ, ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆ, ವಿಶ್ವ ಆರೋಗ್ಯ ಸಂಸ್ಥೆ, ಆಗ್ನೇಯ ಏಶಿಯಾದ ಸಂಘ–ಮುಂತಾದವುಗಳಲ್ಲಿ ಉದ್ಯೋಗ ಪಡೆದಿದ್ದಾರೆ. (Indian Embassy, ILO, WHO, SEATO, FAO) ಬೆಂಕೊಕ್‌ನಲ್ಲಿನ ಭಾರತೀಯರು ಹೆಚ್ಚಾದ ಗೌರವವನ್ನೂ, ಮರ್ಯಾದೆಯನ್ನೂ ಪಡೆಯುವುದಿಲ್ಲ ಎಂಬ ಸುದ್ದಿ ಕಿವಿಗೆ ಬಿತ್ತು. ಏತಕ್ಕಿರಬಹುದು ಎಂದು ನಾನು ಊಹಿಸಿದೆ! ಬಹುಶಃ ಭಾರತೀಯರು ಇಲ್ಲಿಗೆ ಬರುವುದು ಬರೀ ಹಣಗಳಿಸಲಿಕ್ಕೆ, ಚಿನ್ನ ಶೇಖರಿಸಲು ಮತ್ತು ಭೋಗಪ್ರದ ವಸ್ತುಗಳ ಸಂಗ್ರಹಣೆಗೆಂದು. ಭಾರತಕ್ಕೆ ಹಿಂತಿರುಗಿ ಹೋದ ಮೇಲೆ ದೊಡ್ಡ ಬಂಗ್ಲೆ ಕಟ್ಟಿಸಿ ಇಲ್ಲಿ ಗಳಿಸಿದ ಹಣದ ಮೇಲೆ, ಜೀವನಾದ್ಯಂತ ಬದುಕುವ ಪ್ರಯತ್ನ ಮಾಡುತ್ತಿದ್ದಾರೆ ಎಂಬ ತಥ್ಯದ ಮೇಲೆ ಇರಬೇಕು!

ಅದಲ್ಲದೆ ಮತ್ತೇನು ಮಾಡಿಯಾರು? ಎಂಬ ಪ್ರಶ್ನೆಯೂ ಇದೆ. ಜಗತ್ತನ್ನು ಸುತ್ತಾಡುತ್ತಾರೆ, ಬೇಕಾದುದನ್ನು ತಿನ್ನುತ್ತಾರೆ, ಕಂಠಪೂರ್ತಿ ಕುಡಿಯುತ್ತಾರೆ, ಕಂಡದ್ದನ್ನು ಪಡೆಯುತ್ತಾರೆ, ಕಲ್ಪಿಸಿದುದನ್ನು ಅನುಭವಿಸುತ್ತಾರೆ. ಇಷ್ಟೆಲ್ಲ ಮಾಡಿಯೂ ಇನ್ನೂ ಕೈತುಂಬಾ ಹಣ ಉಳಿದಿರುತ್ತದೆ ಅಕ್ಷಯ ಪಾತ್ರೆ ಇದ್ದಂತೆ! ಆಗ ಅದೂ ಒಂದು ಸಮಸ್ಯೆಯೇ ಅಲ್ಲವೇ? ಕಾಲಿಗೊಂದು ಕೈಗೊಂದು ಎಂಬಂತೆ ಮೌನವಾಗಿ ದುಡಿಯುವ ಥಾಯ್ ಜನರು ಲೆಕ್ಕವಿಲ್ಲದಷ್ಟು ಮನೆಗೆಲಸಕ್ಕೆ ಇರುತ್ತಾರೆ. ಹೊತ್ತು ಹೋಗಲು ಕೆಲಸವೂ ಇಲ್ಲ. ಹಣದ ರಾಶಿಯಲ್ಲಿ ಹೂತು ಹೋಗಿ ಉಸಿರು ಕಟ್ಟುವ ಪ್ರಸಂಗ–ಅವ್ಯವಸ್ಥೆ! ಎಷ್ಟೋ ಸಂಸಾರಗಳಲ್ಲಿ ತಂದೆತಾಯಿಯರು ಈ ದೇಶದಲ್ಲಿದ್ದು,

ಮಕ್ಕಳು ಭಾರತದಲ್ಲಿರುವ ಪರಿಸ್ಥಿತಿ ಉಂಟು. ಆಗ ಸಂಸಾರ ಸುಖಕ್ಕೆ ಕೊರತೆ ಇಲ್ಲದೆ ಇರುತ್ತದೆಯೇ ?

ಹೊಂಗ್‌ಕೊಂಗ್‌ನಲ್ಲಿ ಇಂಗ್ಲೀಷ್ ಭಾಷೆ ನಮಗೆ ಸುಲಭವಾಗಿತ್ತು. ಥ್ಯಾ ಜನರು ಜಪಾನೀಯರಂತೆ ಇಂಗ್ಲೀಷ್ ಬಾರದ ಜನ! ಆದ್ದರಿಂದ ಜೊತೆಯಿಲ್ಲದೆ ನಾವು ಓಡಾಡಲಾರೆವು. ಈ ದಿನ ಬೆಳಿಗ್ಗೆ ನಕೋರ್ನ್ ಪಥೋಮ್ (Nakorn Pathom) ಎಂಬಲ್ಲಿಗೆ ಹೋದೆವು. ಈ ಥ್ಯಾ ಶಬ್ದಗಳು ಪಾಲೀ ಅಥವ ಸಂಸ್ಕೃತ ಮೂಲ ಪಡೆದ ಕಾರಣ ಅರ್ಥ ಮಾಡಿಕೊಳ್ಳಲು ಅಷ್ಟು ಕಷ್ಟವಲ್ಲ. “ ನಗರ ಪ್ರಥಮ ” ಎಂಬ ಈ ಜಾಗದಲ್ಲಿ ಬುದ್ಧನ ಶಿಷ್ಯನಾದ ಆನಂದನು ನಗರವನ್ನು ಪ್ರವೇಶಿಸಿ ತನ್ನ ಪ್ರಥಮ ವಚನವನ್ನು ಸಾರಿದನಂತೆ !

ಅಂದು ಅಲ್ಲಿ ಒಬ್ಬ ಬೌದ್ಧ ಸನ್ಯಾಸಿಯ ದೀಕ್ಷಾ ಸಂಸ್ಕಾರ ನಡೆಯುತ್ತಿತ್ತು. ಇಲ್ಲಿ ಇವರಿಗೆ ದೀಕ್ಷೆ ಎಂದರೆ, ನಮ್ಮಲ್ಲಿ ಬ್ರಹ್ಮೋಪದೇಶ ಮಾಡಿದಂತೆ. ಜ್ಞಾನ ಸಾಧನೆಗಾಗಿ ನಡೆಸುವ ಶ್ರಮಕ್ಕೆ ಆತ್ಮಾರ್ಪಣೆಯ ದಾರಿಯಲ್ಲಿ ಇದೊಂದು ಜೀವನ ವಿಧಾನವೇ ಹೊರತು ಧಾರ್ಮಿಕ ಸಂಕುಲತೆಯೇನಲ್ಲ. ಇತರ ಸನ್ಯಾಸಿಗಳೆಲ್ಲ ಹಳದಿ ಬಣ್ಣದ ಬಟ್ಟೆಯನ್ನುಟ್ಟು ತಲೆಯನ್ನು ಗಜ್ಜುಗದಂತೆ ಪೂರ್ತಿ ಕ್ಷೌರ ಮಾಡಿ ಕೊಂಡಿದ್ದರು. ಇಂತಹ ಹಲವಾರು ಸನ್ಯಾಸಿಗಳು ದಾರಿಯಲ್ಲೆಲ್ಲಾ ಓಡಾಡುತ್ತಿರುತ್ತಾರೆ. ಅವರಿಗೆ ಬಸ್‌ಗಳಲ್ಲೆಲ್ಲಾ ಉಚಿತ ಪ್ರಯಾಣವಂತೆ. ಬೇಡಿ ತಿನ್ನುವ ಈ ಭಿಕ್ಷುಗಳಿಗೆ ಯಾವ ಗೃಹಿಣಿಯೂ ಆಹಾರ ಕೊಡದೆ ಇರುವುದಿಲ್ಲ.

ಆದರೆ ಈ ಭಿಕ್ಷುಗಳು ಸಸ್ಯಾಹಾರಿಗಳಲ್ಲ ಎಂದು ತಿಳಿದು ನನಗೆ ಆಶ್ಚರ್ಯ ವಾಯಿತು. ಇದರಿಂದ ಇವರು ಎಷ್ಟರ ಮಟ್ಟಿಗೆ ಧರ್ಮ ಪ್ರವರ್ತಕರಾಗಿರುತ್ತಾರೆ ಎಂಬುದರ ಬಗೆಗೂ ಸಂದೇಹ ಹುಟ್ಟಿತು. ಜಪಾನಿನಿಂದ ಇಲ್ಲಿಯ ವರೆಗೆ ಈ ಅಹಿಂಸೆಯೇ ಪರಮೋದ್ಧರ್ಮವೆಂದುಕೊಂಡಿರುವ ಬೌದ್ದ ಮತಾವಲಂಬಿಗಳು ಎಲ್ಲರೂ ಮಾಂಸಾಹಾರಿಗಳು ಎಂದು ತಿಳಿದು ನನಗೆ ಆದ ದಿಗ್ಭ್ರಮೆಯಿಂದ ನಾನಿನ್ನೂ ಎಚ್ಚೆತ್ತಿಲ್ಲ! ಬಹುಶಃ ಮನುಷ್ಯನನ್ನು ಬಿಟ್ಟು ಈ ಜನರು ಕೊಂದು ತಿನ್ನದ ಜೀವವಿಲ್ಲ! ಅವರ ಬಾಯಿ ಚಪಲಕ್ಕೆ ಜೀವಂತ ಜಂತು, ಮೃಗ, ಕ್ರಿಮಿಕೀಟಗಳನ್ನಲ್ಲದೆ ನೈಸರ್ಗಿಕ ಪ್ರಕೃತಿಯಲ್ಲಿನ ಎಲ್ಲ ಗಿಡ ಮೂಲಿಕೆ, ಎಲೆಗಳು ಮರಗಳನ್ನೆಲ್ಲಾ ಅಡಿಗೆಗೆ ಉಪಯೋಗಿಸುತ್ತಾರೆ. “ಮುಟ್ಟಿದರೆ ಮುನಿ” ಮುಳ್ಳುಗಿಡವನ್ನೂ ಬಿಡದೆ ತಿನ್ನುತ್ತಾರೆ. ದೇವರ ಸೃಷ್ಟಿಯಲ್ಲಿರುವ ಅಣುರೇಣು ತೃಣಕಾಷ್ಟವೆಲ್ಲವನ್ನೂ ಭುಂಜಿಸುತ್ತಾರೆ. ಇಲ್ಲಿ ಕಾಗೆಗಳನ್ನೇ ಕಾಣದೆ ನಾವು ಏನು ಸಮಾಚಾರ ? ಎಂದು ವಿಚಾರಿಸಿದುದಕ್ಕೆ ನಮ್ಮ ಭಾರತೀಯ ಸ್ನೇಹಿತರೆಂದರು– “ ಇವರು ಆ ಜಾತಿಯನ್ನೇ ತಿಂದು ಮುಗಿಸಿಬಿಟ್ಟಿದ್ದಾರೆ” ಎಂದು ! ದಾರಿಯಲ್ಲಿ ನಾಯಿಗಳ ಎಲುಬುಗಳನ್ನು ಕಂಡು ಇವರು “ಅವನ್ನೂ

ತಿನ್ನುವರೇ? ” ಎಂಬ ಅನುಮಾನ ಬಂತು. ಸಧ್ಯ ಇಲ್ಲವಂತೆ! ಆದರೆ ವಿಯಟ್‌ನಾಮ್ ಜನರು ನಾಯಿಗಳನ್ನೂ ತಿನ್ನುವರಂತೆ.

ಹಾರಾಡುವ ಮುದ್ದು ಗುಬ್ಬಿ ಕೂಡ ಈ ಜನರ ಕೈಯ್ಯಲ್ಲಿ “ ಜೀರ್ಣೋಭವವೇ ”! ಹಾವು, ಕೋತಿಗಳನ್ನೂ ಬಿಡುವುದಿಲ್ಲ; ಇವುಗಳನ್ನು ತಿನ್ನುವ ಉಪಹಾರ ಗೃಹಕ್ಕೆ ಹೋದರೆ ವಿವಿಧ ಜಾತಿಯ ಕೋತಿಗಳು ಪಂಜರದಲ್ಲಿರುವುದನ್ನು ನೋಡಿ, ತನಗೆ ಬೇಕಾದ ಕೋತಿಯನ್ನು ಆಶಿಸಿದಂತೆ ಭುಂಜಿಸಲು ಕೊಡುವರಂತೆ! ಕೋತಿಯ ತಲೆಯನ್ನು ಕತ್ತರಿಸಿ ಒಳಗಿನ ಮೆದುಳನ್ನು ತಿನ್ನುವುದು ಪರಿಷ್ಕೃತ ಆಹಾರವಂತೆ! ಜಿರಲೆ, ಓತಿ, ಕಪ್ಪೆ ಮತ್ತು ಹಲ್ಲಿಗಳನ್ನೂ ತಿನ್ನುತ್ತಾರೆ. ಈ ಜನರು ತಿಂದು ಬಿಸಾಡಿದ ಕಪ್ಪೆಗಳ ಹೆಣಗಳನ್ನು ರಸ್ತೆಯಲ್ಲೆಲ್ಲಾ ನೋಡುವುದು ಸರ್ವೇ ಸಾಮಾನ್ಯ ನೋಟ! ಕಪ್ಪೆಯ ಕಾಲುಗಳು ಕಬ್ಬು, ನುಗ್ಗೆಕಾಯಿಯಂತೆ ತಿನ್ನಲು ಬಹಳ ರುಚಿಯಂತೆ! ಭಾನುವಾರದ ರಜಾ ದಿನಗಳಲ್ಲಿ ಈ ಜೀವ ಜಂತು, ಹಕ್ಕಿ ಹಾವುಗಳನ್ನೆಲ್ಲಾ ಇತರ ತರಕಾರಿಗಳ ಜೊತೆಗೇ ಮಾರುವುದನ್ನೂ ನೋಡಿದೆವು. ಓಕರಿಕೆ ಬರುವಂತಹ ದೃಶ್ಯ. ಒಂದು ಜಿರಲೆ, ಒಂದು ಹಕ್ಕಿ, ಒಂದು ತುಂಡು ಹಾವು–ಇವುಗಳನ್ನು ವ್ಯಾಪಾರ ಮಾಡಿ ತಮ್ಮ ಬುಟ್ಟಿಯೊಳಗೆ ಹಾಕಿಕೊಂಡು ಹೋಗುವ ಥ್ಾಯ್ ಜನರನ್ನು ಕಂಡು ನನಗೆ ವಿಚಿತ್ರವೆನಿಸಿತು! ಸಾಮಾನ್ಯವಾಗಿ ಅವರ ಆಹಾರ ಸಮತೂಕದ್ದು. ಅನ್ನ–ಮೀನು, ಹಸಿರು ಸೊಪ್ಪುಗಳು, ತರಕಾರಿ, ಮೊಳಕೆ ತೆಗೆದಿರುವ ದವಸ ಧಾನ್ಯಗಳು, ಎಳೆಯ ಬೊಂಬು ಶ್ಯಾವಿಗೆ ಇತ್ಯಾದಿ. ಥ್ಾಯ್ ಜನರ ಮನೆಗೆ ಊಟಕ್ಕೆ ಹೋಗುವುದು ಅಪಾಯವೇ ಸರಿ! ಅವರ ಆಹಾರದಲ್ಲಿ ಏನಿದೆ, ಏನಿಲ್ಲ ಎಂದೂ ನಾವು ತಿಳಿಯಲಾರೆವು. ಅಮೇರಿಕಾ–ಯೂರೋಪಿನ ಆಹಾರದಲ್ಲಿ ಏನಿರಬಹುದು ಎಂದು ನಾವು ಊಹಿಸ ಬಲ್ಲೆವು. ಆದರೆ ಇಲ್ಲಿನ ಭೋಜ್ಯ ಸಾಮ್ರಾಜ್ಯದಲ್ಲಿ ವಿಶ್ವ ಸ್ವರೂಪವೇ ಇರಲು ಸಾಧ್ಯ ವಿದೆ! ಬುದ್ಧನು ಉಪದೇಶಿಸಿದಂತೆ ಇವರು ಪಶು ಒಂದನ್ನು ಕೊಲ್ಲುವುದಿಲ್ಲ. ನಾವು ಜಯದೇವ ಕವಿಯ ‘ ಗೀತ ಗೋವಿಂದದ ’ ‘ ದಶಾವತಾರ ’ ವನ್ನು ಅಭಿನಯಿಸು ವಾಗ ಬುದ್ಧಾವತಾರದ “ ಸದಯ ಹೃದಯ ದರ್ಶಿತ ಪಶು ಘಾತಂ ” ಎಂಬ ವಾಕ್ಯ ವನ್ನು ಅಭಿನಯಿಸುವಾಗ ನನಗೆ ನಿಜವಾಗಿ ದುಃಖದಿಂದ ಕಣ್ಣಲ್ಲಿ ನೀರು ತುಂಬಿ ಬಂತು! ಆ ಮಾತಿಗೂ, ಇಂದು ನಾನು ಈ ಬೌದ್ಧ ಮತಾವಲಂಬೀ ದೇಶಗಳಲ್ಲಿ ನೋಡುತ್ತಿರುವ ದೃಶ್ಯಗಳಿಗೂ ಎಲ್ಲಿಗೆಲ್ಲಿಯ ಸಂಬಂಧ! ಎಂತಹ ವಿಪರ್ಯಾಸ! ನನ್ನ ಮನಸ್ಸು ಕದಡಿಹೋಗಿದೆ.

ಇಲ್ಲಿ ನಮ್ಮ ನೃತ್ಯಕಲೆಯಲ್ಲಿ ಇಲ್ಲಿನ ಭಾರತೀಯ ರಾಯಭಾರಿಯವರು ಕೂಡ ಆಸಕ್ತಿ ಪಡೆದಿದ್ದಾರೆ. ಥ್ಾಯ್‌ಲೇಂಡ್‌ನ ಅರಸ ಅರಸಿಯರು ಬೇಸಿಗೆಯ ಬಿಡುವೆಂದು ಹುವಾ ಹಿನ್ (Hua Hin) ಎಂಬ ಸಮುದ್ರ ದಂಡೆಗೆ ಹೋಗಿದ್ದಾರಂತೆ. ಅವರು ಇಲ್ಲಿ ಇದ್ದಿದ್ದರೆ ಅವರ ಸಮ್ಮುಖದಲ್ಲಿ ಒಂದು ಪ್ರದರ್ಶನ ಸುಲಭವಾಗಿ ಏರ್ಪಾಡಾಗುತ್ತಿತ್ತು.

ಬರುವ ವಾರ ಇಥಿಯೋಪಿಯದ ಚಕ್ರವರ್ತಿ (Emperor of Ethiopia) ಈ ದೇಶಕ್ಕೆ ಆಗಮಿಸುವವರಿದ್ದಾರೆ. ಅವರಿಗಾಗಿ ಖಂಡಿತ ಸಾಯಮಿಸ್ (Siamese) ನೃತ್ಯಗಳನ್ನು ಏರ್ಪಡಿಸುವರು. ದೇಶದ ಅತ್ಯುತ್ತಮ ನೃತ್ಯ ತಂಡದ ಪ್ರದರ್ಶನ ನೋಡಲು ನಮಗೂ ಆಸೆ, ಆತುರವಿದೆ.

E. C. A. F. E. ಶಾಖೆಯಲ್ಲಿನ ಸುಮಾರು ನಾಲ್ಕು ನೂರು ಮಹಿಳೆಯರಿಗಾಗಿ 29ನೆಯ ತಾರೀಕು ನಮ್ಮ ಉಪನ್ಯಾಸವನ್ನು ನನ್ನ ಬೆಂಗಳೂರಿನ ಸಹಪಾಠಿ ಏರ್ಪಡಿಸಿದ್ದಾಳೆ. ಪತ್ರಿಕೆಗಳಲ್ಲೂ ಪ್ರಚಾರ ದುಂಧುಭಿ ಜೋರಾಗಿಯೇ ಇದೆ. ಟಿ. ವಿ. ಪ್ರದರ್ಶನವಲ್ಲದೆ ಪೂರ್ವ ವಿಶ್ಲೇಷಣೆಯೂ ಆಗಲಿದೆ. ಭಾರತ – ಥ್ಯಾ ಸಂಗಡದವರು ನಮ್ಮ ದೊಡ್ಡ ಪ್ರದರ್ಶನವನ್ನು ಇಲ್ಲಿನ ಅದ್ಭುತ ರಾಷ್ಟ್ರೀಯ ರಂಗ ಮಂದಿರದಲ್ಲಿ ಮೇ 8ನೇ ತಾರೀಖಿಗೆ ಜರುಗಿಸಲಿದ್ದಾರೆ. ಆ ಅತ್ಯಾಧುನಿಕ ರಂಗ ಭವನದಲ್ಲಿ ಸುಮಾರು ಎರಡು ಸಾವಿರ ಜನರು ಕುಳಿತುಕೊಳ್ಳುವ ಅವಕಾಶವಿದೆಯಂತೆ.

ಜಗತ್ಪ್ರಸಿದ್ಧ ಆಂಗ್‌ಕೋರ್‌ವಾಟ್ (Angkorwat) ನೋಡಬೇಕೆಂಬ ಬಲವಾದ ಆಸೆ ನನಗಿತ್ತು. ಆದರೆ ಹತ್ತಿರದ ಕೆಂಬೋಡಿಯಾಗೆ ವಿಮಾನ ಮಾತ್ರ ಹೋಗುತ್ತದೆಯಂತೆ, ಅಲ್ಲದೆ ಥೈಲೇಂಡಿಗೂ ಕೆಂಬೋಡಿಯಾಗೂ ರಾಜಕೀಯ ಸಂಬಂಧ ಈಗ ಅಷ್ಟು ಹಿತವಾಗಿಲ್ಲ. ಕಾರಿನಲ್ಲಿ ಹೋಗುವುದೂ ಸುಲಭವಲ್ಲ. ಅಲ್ಲಿ ನಮ್ಮ ಪ್ರದರ್ಶನ ಏರ್ಪಡಿಸುವುದು ಕಷ್ಟವಿರಲಿಲ್ಲ. ಆದರೆ ನಾವೇ ಆ ವಿಷಯದಲ್ಲಿ ಆಸಕ್ತಿ ತಳೆಯಲಿಲ್ಲ........ಕುಣಿದು ಸಾಕಾಗಿದೆ. ಇನ್ನೊಮ್ಮೆ ಈ ದೇಶಕ್ಕೆ ಬಂದಾಗ ಆಂಗ್‌ಕೋರ್‌ವಾಟ್ (Angkorwat) ನೋಡುವೆವು ಎಂಬ ಸಮಾಧಾನ ಪಡೆದಿದ್ದೇವೆ.

ಇಲ್ಲಿ ಶೆಖೆ ನಿಜ. ಆದರೆ ಸುಖಕ್ಕೇನೂ ಕಡಿಮೆಯಿಲ್ಲ.... ಮತ್ತೆ ಬರೆಯುವೆ.

ಇತಿ ನಿಮ್ಮ
ಅಮ್ಮ.

* * * * * “

ಬೆಂಕಾಕ್
25 – 4 – 1968

ಮುದ್ದು ಮಕ್ಕಳೇ,

ಈಗ ತಾನೇ ಬಾಂಗ್‌ಸೇನ್ ಪಟ್ಟಾಯಾ (Bang Saen Pattaya) ಸಮುದ್ರ ದಂಡೆಯಿಂದ ಹಿಂತಿರುಗಿದ್ದೇವೆ. ಇಲ್ಲಿನ ಸಮುದ್ರದ ಕರಾವಳೀ ಪ್ರದೇಶ ಬಹಳ

ಆಕರ್ಷಣೀಯವಾಗಿದೆ. ನೀರು ಅಷ್ಟೊಂದು ಆಳವಿಲ್ಲದೆ, ಈಜಲು ಅತಿ ಸುಖಕರವಾದ ರಮ್ಯವಾದ ಅನುಕೂಲತೆ. ಥ್ಯಾ ಮತ್ತು ಅಮೇರಿಕದ ಯುವಜನರು ಹೆಣ್ಣು–ಗಂಡು ಒಂದಾಗಿ ಕೂಡಿ ಆಡುವುದನ್ನು ನಾವಿಲ್ಲಿ ಕಣ್ತುಂಬ ನೋಡಿದೆವು. ಈ ಶಾಂತಿಪ್ರಿಯ ಜನರಿಗೆ ಈಗ ಕಮ್ಯೂನಿಸ್ಟರ ತೊಂದರೆ. ಅದನ್ನು ಸರಿಪಡಿಸಲು ಅಮೇರಿಕದಿಂದ ಹೆಚ್ಚಾದ ಆರ್ಥಿಕ ಹಾಗೂ ಮಿಲಿಟರಿ ನೆರವಿದೆ. ಅಲ್ಲದೆ ವಿಯಟ್ನಾಂ ಸಂಗ್ರಾಮದಿಂದ ವಿಶ್ರಾಂತಿ ಬಯಸಿ, ಕೆಲವು ದಿನ ಹಾಯಾಗಿ ಇರಲು ಅಮೇರಿಕನ್ನರು ಬೆಂಕಾಕಿಗೆ ಬರುವುದು ರೂಢಿ. ಇಂತಹ ಸಮುದ್ರ ದಂಡೆಗಳಲ್ಲಿ ಬಿಡಾರ ಹೂಡಿ, ಆರಾಮದಿಂದಿದ್ದು, ಮತ್ತೆ ವಿಯೆಟ್ನಾಮಿಗೆ ಈ ಅಮೇರಿಕನ್ನರು ಹೋಗುತ್ತಾರೆ. ಸುಮಾರು ನೂರು ಮೈಲಿಯ ದಾರಿಯುದ್ದಕ್ಕೂ ಕಾಲುವೆಗಳು, ತೋಟಗಳು, ನೀರಿನ ಮೇಲೆ ಜೀವನ ಜರುಗಿಸುವ ಜನತೆ, ವಿಧವಿಧದ ದೋಣಿಗಳು, ಸ್ವಾರಸ್ಯ ನೋಟಗಳು.

ಬೃಹತ್ ಗಾತ್ರದ ತೆಂಗಿನಕಾಯಿಯ ಮುಕುಟ ಧರಿಸಿದ ಮರಗಳನ್ನು ಕಂಡೆವು. ನಾನು ಇಲ್ಲಿ ನೋಡಿದಷ್ಟು ದೊಡ್ಡ ಗಾತ್ರದ ಹಾಗೂ ರುಚಿಕರವಾದ ತೆಂಗಿನಕಾಯಿಗಳನ್ನು ನನ್ನ ಜನ್ಮದಲ್ಲೇ ನೋಡಿರಲಿಲ್ಲ. ಎಳನೀರಂತೂ ಅಮೃತದಂತೆ ಸಿಹಿ–ಎಳನೀರನ್ನು ಬಹಳ ಚೆನ್ನಾಗಿ ಕತ್ತರಿಸಿ, ಮೇಜಿನ ಮೇಲೆ ಪಾತ್ರೆಯಂತೆ ಇಟ್ಟು, ಕೊಳವೆ ಹಾಕಿ ನೀರು ಕುಡಿಯಲು ಕೊಡುತ್ತಾರೆ. ಹೊಟ್ಟೆ ತುಂಬಿ ಹೋಗುತ್ತದೆ. ಆ ಸಿಹಿ ನೀರಿನಿಂದ ತಿನ್ನಲು ಆ ನೀರಿನಲ್ಲಿ ಎಳೇಕಾಯಿಯ ಚೂರುಗಳು ತೇಲಾಡುತ್ತಿರುತ್ತವೆ. ಆ ಮೇಲೆ ತಾಟಿನುಂಗುವಿನ ಮರಗಳು, ಕಬ್ಬಿನ ಗದ್ದೆಗಳು, ವಿಶಾಲವಾದ ಭತ್ತದಗದ್ದೆಗಳು, ಪೈರುಗಳು, ತರಕಾರಿ ಹೂದೋಟಗಳು, ಹಣ್ಣುಗಳು.... ನಿಸರ್ಗದ ಸಮೃದ್ಧಿ ಕಣ್ಣಿಗೆ ಕಟ್ಟಿತು ಒಟ್ಟಿನಲ್ಲಿ.

ದಣಿದ ಪ್ರಯಾಣಿಕರನ್ನು ಚೇತರಿಸಲು ದಾರಿಯುದ್ದಕ್ಕೂ ಥ್ಯಾ ಜನರು ವಿಧ ವಿಧದ ಪಾನೀಯಗಳನ್ನು ಮಾರಲು ತೊಂದರೆ ಕೊಡುತ್ತಿರುತ್ತಾರೆ. ಪ್ಲಾಸ್ಟಿಕ್ ಚೀಲಗಳಲ್ಲಿ ಕಲ್ಲಂಗಡಿ ನೀರು, ಎಳನೀರು, ಹಣ್ಣಿನ ರಸಗಳು, ತರಕಾರಿ ರಸಗಳನ್ನು ಹಾಕಿ, ಒಂದು ಪ್ಲಾಸ್ಟಿಕ್ ಕೊಳವೆಯನ್ನು ಅದರೊಳಗೇ ಇಟ್ಟು ಚೀಲದ ಬಾಯಿಕಟ್ಟಿ ಒಡನೆ ಕುಡಿಯಲು ತಯಾರು ಮಾಡುತ್ತಾರೆ. ಕಬ್ಬಿನ ಚೂರುಗಳಿಗೆ ಕಡ್ಡಿ ಸಿಕ್ಕಿಸಿ ತಿನ್ನಲು ಕೊಡುತ್ತಾರೆ – ಸ್ವಾರಸ್ಯವಾದ ವ್ಯಾಪಾರ! ಒಟ್ಟಿನಲ್ಲಿ ಥ್ಯಾ ಜನರು ಸೋಮಾರಿಗಳಲ್ಲ. ಪ್ರಕೃತಿಯ ಸಹಾಯವೂ ಅವರಿಗೆ ಪೂರ್ಣವಾಗಿದೆ. ಯಾರೋ ಎಂದಂತೆ – "ಈ ಥ್ಯಾಲೆಂಡ್ ದೇಶದಲ್ಲಿ ಮಣ್ಣಿಗೆ ಕಡ್ಡಿ ಪೊರಕೆ ಬಿಸಾಕಿದರೆ, ಅದೂ ಚಿಗುರುತ್ತದೆ!" ಎಂಬುದು ನಿಜ. ಅಷ್ಟೊಂದು ಅನುಕೂಲವಾದ ಹವೆ – ನೀರು – ಗಾಳಿ – ಬಿಸಿಲು.

ನೈಸರ್ಗಿಕ ಸೌಂದರ್ಯ ಇಷ್ಟು ಚೆನ್ನಾಗಿದ್ದರೂ ಜನಜೀವನದಲ್ಲಿ ಶುಚಿತ್ವ ಅಷ್ಟೊಂದು ಕಂಡು ಬರಲಿಲ್ಲ. ಎಲ್ಲೆಲ್ಲೂ ತುಂಬಾ ಗಲೀಜು – ಅನಾರೋಗ್ಯ

ವಾತಾವರಣ. ಆದರೂ ಇಲ್ಲಿನ ಜನ ಬಹಳ ಚೆನ್ನಾಗಿದ್ದಾರೆ. ಥ್ಯಾ ತರುಣಿಯರಂತೂ ಉದ್ದವಾದ ಕೂದಲಿದ್ದು ಬಂಗಾರದ ಮೈಬಣ್ಣ ಪಡೆದು ಆಕರ್ಷಕರಾಗಿರುತ್ತಾರೆ. ಅದು ಹೇಗೆ ಸಾಧ್ಯವೋ ತಿಳಿಯದು. ಕೆಸರಿನಲ್ಲಿ ಕಮಲವಿದ್ದ ಹಾಗೇ ಎನಿಸುತ್ತದೆ.

ಇಲ್ಲಿ ಹಲಸಿನ ಹಣ್ಣಿನಂತಿರುವ 'ದುರಿಯನ್' ಎಂಬ ಹಣ್ಣು ಸಿಗುತ್ತದೆ. ಇದು ಇಲ್ಲಿನ ಜನರ ಅತಿಪ್ರಿಯ ಹಣ್ಣು. ಆದರೆ ನಮಗೆ ಅದರ ವಾಸನೆ ತಡೆಯಲಾಗಲಿಲ್ಲ. ಮೂಸಿದರೆ ವಾಂತಿಯಾಗುವ ವಾಸನೆ! ಅವರಿಗೆ ಈ ಹಣ್ಣಿನ ಮೇಲೆ ತುಂಬಾ ಅಭಿಮಾನ! ಏಕೆಂದರೆ ಅದನ್ನು ತಿಂದರೆ ಮೈ ಬೆವರುವುದಿಲ್ಲವಂತೆ. ಸೆಖೆಯನ್ನು ತಡೆಯಲು ಸುಲಭವಂತೆ! ಆದರೆ ನಮಗೆ ಬೆವರು ಸೆಖೆಯಾದರೂ ಆದೀತು– ಈ ಹಣ್ಣು ಬೇಡವೆಂದೆನಿಸಿತು.

ಶಿವದೇವ್, ನಿನಗೆ ಅಮೇರಿಕದ ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ (Harvard University) ಪ್ರವೇಶ ಸಿಕ್ಕಿದುದಕ್ಕೆ ಶುಭಾಶಯಗಳು ಮಗೂ! ಹಾರ್ವರ್ಡ್‌ನಲ್ಲಿ ಜಾಗ ಸಿಗುವುದು ಕಷ್ಟವಲ್ಲವೇ? ಅದು ಅಮೇರಿಕದ ಪ್ರಮುಖ ವಿಶ್ವವಿದ್ಯಾಲಯಗಳಲ್ಲಿ ಹೆಸರುವಾಸಿಯಾದುದಲ್ಲವೇ? ನೀನು ನಿಜವಾಗಿ ಅದೃಷ್ಟವಂತನೇ ಆದೆ. ಆದರೆ ಅವರು ನಿನಗೆ ವಿದ್ಯಾರ್ಥಿವೇತನ ಕೊಡದಿದ್ದರೆ ಖಂಡಿತ ಹೋಗಬಾರದು. ನಿನ್ನಂತಹ ಪ್ರತಿಭಾವಂತ ವಿದ್ಯಾರ್ಥಿಗೆ ಅವರು ವಿದ್ಯಾರ್ಥಿವೇತನ ಕೊಟ್ಟೇ ಕೊಡುತ್ತಾರೆ. ಸ್ವಲ್ಪ ಸಮಾಧಾನದಿಂದಿರು. ಕೈಯಿಂದ ಖರ್ಚು ಹಾಕಿಕೊಂಡು ಹೋಗುವ ಅಗತ್ಯವಿಲ್ಲ........ಮುಂದಿನ ವರ್ಷ ಹೋಗುವೆಯಂತೆ.........

........ನಾವು ಇಲ್ಲಿಂದ ಸಿಂಗಪುರಕ್ಕೆ 10 ದಿನ ಪ್ರವಾಸ ಮಾಡಬೇಕೆಂದು ಬಯಸಿದ್ದೇವೆ. ಮಲೇಶಿಯಾಗೂ ಹೋದರೆ ನಾವು ಬೆಂಗಳೂರಿಗೆ ಬರಲು ಸ್ವಲ್ಪ ತಡವಾಗಬಹುದು; ಕ್ಷಮಿಸಿ........

ಇತಿ ನಿಮ್ಮ
ಅಮ್ಮ.

* * * * * *

ಬೆಂಕಾಕ್
27 – 4 – 1968

ಮುದ್ದು ಜಯದೇವ್,

ನಿನ್ನ 'ಕೆಮೆರಾ' ವಿನ ಭದ್ರತೆಯ ವಿಚಾರವಾಗಿ ತಂತಿ ಕಳುಹಿಸುವ ಅಗತ್ಯವೇನಿತ್ತು? ಏನೂ ಹೆದರಬೇಡ! ಅದನ್ನು ಭದ್ರವಾಗಿ ನಾವು ನಿನಗೆ ತಲುಪಿಸು

ತ್ತೇವೆ. ನಿನ್ನ ತಂದೆಯವರಂತೂ ಅದರ ಜಾಗ್ರತೆ, ಜೋಪಾನ ನೋಡಿ ಕಾಪಾಡುವುದನ್ನು ಕಂಡರೆ ಮಿನೊಲ್ಟಾ ಕೆಮೆರಾ ಜಯದೇವನೇ ಎಂಬಂತೆ ಭಾಸವಾಗುತ್ತದೆ!

ಮೇ ತಿಂಗಳು ಹತ್ತಿರ ಬಂತು. ನಾವು ಬೆಂಗಳೂರಿಗೆ ಬರುವ ದಿನಗಳನ್ನು ಲೆಕ್ಕ ಹಾಕುತ್ತಿದ್ದೇವೆ. ಸಿಂಗಪುರದಲ್ಲಿ ನಮ್ಮ ಟಿ. ವಿ. ಪ್ರದರ್ಶನ, ರೇಡಿಯೋ ಸಂದರ್ಶನ, ನೃತ್ಯ - ಉಪನ್ಯಾಸ ಹಾಗೂ ನೃತ್ಯ - ದರ್ಶನ ಏರ್ಪಾಡಾಗಿದೆ. ಸಿಂಗಪುರದಿಂದ ನಿನ್ನ ಕೆಮೆರಾಗೆ ಬೇಕಾದ ಎಲ್ಲಾ ಸಂಬಂಧಿತ ಸಲಕರಣೆಗಳನ್ನು ಖಂಡಿತ ಕೊಂಡು ತರುತ್ತೇವೆ. ಶಿವದೇವನಿಗೂ ಅವನಿಗೆ ಬೇಕಾದ 'ಟ್ರಾನ್ಸಿಸ್ಟರ್' ತರುತ್ತೇವೆ. ಇನ್ನು ಕೈಯಲ್ಲಿರುವ ಹಣ ಖರ್ಚಾದರೂ ಚಿಂತೆಯಿಲ್ಲ. ನಿಮಗಾಗಿ ನೀವು ಬಯಸಿದುದನ್ನು ಕೊಂಡುಕೊಳ್ಳುವುದರಲ್ಲಿನ ಆನಂದಕ್ಕಿಂತ ಮಿಗಿಲಾದುದು ಬೇರೆ ಏನಿದೆ? ಹೆಚ್ಚಿನ ಸರಂಜಾಮುಗಳಿಗೆ ಸ್ವಲ್ಪ ಹೆಚ್ಚು ಹಣ ವಿಮಾನ ಪ್ರಯಾಣದಲ್ಲಿ ಕೊಡಬೇಕಾಗಬಹುದು. ಆದರೂ ನಮಗೆ ಇನ್ನು ಭಯವಿಲ್ಲ! ನಮ್ಮ ಮಾತೃಭೂಮಿ ಹತ್ತಿರವಾಯಿತು. ಬರಿಕೈಯಲ್ಲಿ ಮನೆಗೆ ಬರುವುದಾದರೂ ಏಕೆ? ಹೊಂಗ್‌ಕೊಂಗ್‌ನಲ್ಲಿಯೇ ನಮ್ಮ ಸಂಗೀತಗಾರರಿಗೆ ಮತ್ತು ಟೈಲರ್ ಹನುಮಂತರಾಯರಿಗೆ ಷರಟುಗಳನ್ನು ಕೊಂಡದ್ದಾಯಿತು. ಈ ಊರುಗಳಲ್ಲೆಲ್ಲಾ ಬಹಳ ಒಳ್ಳೆಯ ನೈಲಾನ್ ಸೀರೆಗಳು ಸಿಗುತ್ತವೆ. ನಮ್ಮ ಮನೆಯಲ್ಲಿ 22 ವರ್ಷ ಕೆಲಸ ಮಾಡಿ, ನಿಮ್ಮ ಬೆಳವಣಿಗೆಯನ್ನು ನೋಡಿದ ಗಂಗಮ್ಮನಿಗೂ, ಅಡಿಗೆ ಗೌರಿಗೂ ಒಂದೊಂದು ಸೀರೆ ಕೊಳ್ಳಬೇಕೆಂದಿದ್ದೇವೆ. ಹಾಗೆಯೇ ನಮ್ಮ ಮುದ್ದು ಗಾಯತ್ರಿಗೂ ಒಂದು.

ಪರದೇಶದಿಂದ ಬಂದ ಯಾವುದೇ ವಸ್ತುವಿಗೂ ನಮ್ಮ ದೇಶದಲ್ಲಿ ಹೆಚ್ಚು ಮೌಲ್ಯವಿದೆ. ಅಪರೂಪದ ವಸ್ತುವೆಂದು ಆಕರ್ಷಣೆ ಇದೆ. ಕೊಡಲು, ಪಡೆಯಲು, ಸಂತೋಷವಿದೆ.

ಥ್ಯಾಲೇಂಡಿನ ರಾಜಮನೆತನದವರು ಬೇಸಿಗೆಯ ಶಮನ ಪರಿಹಾರ ಪಡೆಯುವ ಬಾಂಗ್-ಪಾ-ಯಿನ್ (Baang-Pa-In) ಎಂಬ ಅರಮನೆಯನ್ನು ನೋಡಲು ಹೋಗಿದ್ದೆವು. ಆ ಅರಮನೆ ಇಲ್ಲಿಗೆ 50 ಮೈಲಿ ದೂರದಲ್ಲಿದೆ. ತುಂಬಾ ಸ್ವಾರಸ್ಯವಾಗಿರುವ ಈ ಭವನ ಚೀನೀ ಶೈಲಿಯಲ್ಲಿದೆ. ದಾರಿಯಲ್ಲೆಲ್ಲಾ ಕಂಬಗಳ ಮೇಲೆ ಕಟ್ಟಿರುವ ಮನೆಗಳನ್ನು ನೋಡಿದೆವು. ಈ ದೇಶದ ಹಾವುಗಳು ಜಗತ್ಪ್ರಸಿದ್ಧ. ಹಾವುಗಳ ಬಾಧೆಯನ್ನು ತಡೆಯಲು ಮನೆ ಸುತ್ತಲೂ ನೀರು - ಮನೆಗಳನ್ನು ಬೊಂಬುಗಳ ಮೇಲೆ ಎತ್ತರವಾಗಿ ಕಟ್ಟಿರುತ್ತಾರೆ. ಮನೆಯಿಂದ ಭೂಮಿಗೆ ಬರಬೇಕಾದರೆ ಒಂದು ಚಿಕ್ಕ ದೋಣಿಯೋ, ಮರದ ತುಂಡೋ ಚಲಿಸಿ ಹೋಗುತ್ತಾರೆ. ನೀರಿನಲ್ಲಿನ ಮೀನುಗಳು ಸೊಳ್ಳೆ ತಿನ್ನುವ ಕಾರಣ ಇಂತಹ ಮನೆಗಳಲ್ಲಿ ಸೊಳ್ಳೆ ಕಾಟವೂ ಕಡಿಮೆ ಇರುತ್ತದಂತೆ! ಒಂದು ಜೀವ ಇನ್ನೊಂದನ್ನು ತಿನ್ನುವುದೇ ಇಲ್ಲಿ ಸ್ವಾರಸ್ಯ! ಈ ದೇಶ

ಗಳಲ್ಲಿ ಅಸಾಮಾನ್ಯ ಹಾವುಗಳಿವೆಯಂತೆ. ನಾವು ಅಮೇರಿಕಾದ ಸೇಂಟ್‌ಲೂಯಿಸ್‌ನ (St. Louis) ಮೃಗಾಲಯಕ್ಕೆ ಭೇಟಿ ಕೊಟ್ಟಾಗ ಆಗ್ನೇಯ ಏಶಿಯಾದಿಂದ ತಂದಿದ್ದ ಅತಿ ದೊಡ್ಡ, ಅತಿ ಉದ್ದ, ಅತಿ ವಿಷಪೂರಿತ ಹಾವುಗಳನ್ನು ಕಂಡಿದ್ದೆವು. ಇಲ್ಲಿಂದ ಅಲ್ಲಿ ಹೋದ ಆ ಹಾವುಗಳನ್ನು ನಾನು ಪಂಜರದಲ್ಲಿ ನೋಡಿಯೇ ಹೆದರಿದ್ದೆನು. ಈಗ ಅವು ದಾರಿಯಲ್ಲಿಯೇ ಸಿಕ್ಕರೆ!!

ಇಲ್ಲಿನ ಜನ ಪ್ರಕೃತಿಯ ತುಂಟ ಪ್ರವೃತ್ತಿಯೊಂದಿಗೆ ಕೂಡಿ, ಆಡಿ ಜೀವಿಸುವ ಜನ. ಯೂರೋಪು, ಅಮೇರಿಕಾಗಳು ಸ್ವಚ್ಛ, ನಾಗರೀಕ ದೇಶಗಳು ಆದರೂ ಇಲ್ಲಿನ ಜನರಿಗಿದ್ದಷ್ಟು ವ್ಯಾಧಿ ವಿರೋಧ ಗುಣ ಇಲ್ಲ. ನಾಗರೀಕ ದೇಶಗಳಲ್ಲಿ ರೋಗಾಣು ಗಳನ್ನು ನಿರ್ಮೂಲ ಮಾಡಿರುವ ಆಹಾರ ತಿಂದು ಎಲ್ಲಾ ರೋಗಗಳ ಬಾಧೆಯಿಂದ ಮುಕ್ತರಾಗಿದ್ದಾರೆ. ಇಲ್ಲಿನ ಜನ ತಿನ್ನುವ ಆಹಾರವನ್ನು ಕಂಡರೆ ಅಸಹ್ಯವೆನಿಸು ತ್ತದೆ. ಮುಚ್ಚದೆ ಇರುವ ಆಹಾರವನ್ನು ದಾರಿಯಲ್ಲೆಲ್ಲಾ ಮಾರುತ್ತಿರುತ್ತಾರೆ. ಅಕ್ಕಿಗೆ ಪ್ರಸಿದ್ಧಿ ಪಡೆದ ಈ ಜಾಗದಲ್ಲಿ ಬುಟ್ಟಿ ಬುಟ್ಟಿ ತುಂಬಾ ವಿಧವಿಧವಾದ ಅನ್ನ ವನ್ನು ಹೆಗಲ ಮೇಲೆ ಸಮತೂಕವಾಗಿ ಎತ್ತಿಕೊಂಡು ಮಾರುತ್ತಿರುತ್ತಾರೆ. ಆ ಅನ್ನ ಪರ್ವತದ ಮೇಲೆ ರಾಶಿಧೂಳು, ಕಸಕಡ್ಡಿಗಳು, ನೊಣಗಳ ಹಿಂಡು ಹಿಂಡು! ಮಾರ್ಕೆಟ್ಟಿಗೆ ಹೋದರೆ ಅಲ್ಲಿನ ಆ ದುರ್ವಾಸನೆ ಗತನಾತದಿಂದಾಗಿ ಸಾಕ್ಷಾತ್ ನರಕದಂತೆ ತೋರುತ್ತದೆ. ಅದನ್ನು ನೋಡಿದ ನನಗೆ ಹೊಟ್ಟೆ ತೊಳಸಿದಂತಾಗಿ ಯಾವ ಆಹಾರವೂ ಸೇರುವುದಿಲ್ಲ. ಆದರೆ ಇಲ್ಲಿನ ಜನ ಅದನ್ನೇ ತಿಂದು, ಪುಷ್ಟಿಯಾಗಿದ್ದು, ಆರೋಗ್ಯವಂತರಾಗಿರುವುದು ಆಶ್ಚರ್ಯ.

ನಿಸರ್ಗ ತುಂಬಾ ಅನುಕೂಲವಾಗಿದೆ. ಯಥೇಷ್ಟ ನೀರು, ಒಳ್ಳೇ ಮಣ್ಣು, ನೆಲ-ಭೂಮಿ, ಕಾಲುವೆಗಳೇ ಇಲ್ಲಿ ಸಾಮಾನ್ಯವಾಗಿ ರಾಜಮಾರ್ಗಗಳು. ಬೆಂಕಾಕ್ ಪೂರ್ವಖಂಡದ ವೆನಿಸ್ (Venice) ಎಂದು ಕರೆಯಲ್ಪಡುತ್ತದೆ! ಇಲ್ಲಿನ ಜನಜೀವನ ಸಾಮಾನ್ಯವಾಗಿ ನೀರಿನ ಮೇಲೆ, ನೀರಿನಿಂದ, ನೀರಿಗಾಗಿಯೇ ಇದೆ. ಒಂದು ಮನೆ ಯಿಂದ ಇನ್ನೊಂದು ಮನೆಗೆ ದೋಣಿಯಲ್ಲಿ ಪಯಣ! ಇಲ್ಲಿನ ತರಕಾರಿ, ಹಣ್ಣು ಹಂಪಲುಗಳು, ನೈಸರ್ಗಿಕ ವಾತಾವರಣದಲ್ಲಿ ಬೆಳೆದ ಕಾರಣ ಅತ್ಯಂತ ರುಚಿಕರ ಪದಾರ್ಥಗಳು. ಇಂತಹ ರುಚಿ ಕೃತ್ರಿಮ ಗೊಬ್ಬರ ಹಾಕಿ ಬೆಳೆಸಿದ ಅಮೇರಿಕದ ಹಣ್ಣು ಹಂಪಲುಗಳಿಗಿಲ್ಲ. ಇಷ್ಟೊಂದು ಸಸ್ಯಾಹಾರ ಪದಾರ್ಥಗಳಿದ್ದರೂ ಈ ಜನಗಳಿಗೆ ಮಾಂಸಾಹಾರ ಏತಕ್ಕೆ ಬೇಕೋ ತಿಳಿಯದು. ಆದರೂ ಪ್ರಪಂಚದಲ್ಲೆಲ್ಲಾ ಭಾರತ ದಲ್ಲಿ ಮಾತ್ರ ನಾವು ಸಸ್ಯಾಹಾರಿಗಳನ್ನು ಕಾಣುವುದು ; ಇತರ ಎಲ್ಲಾ ದೇಶಗಳಲ್ಲಿ ಮಾಂಸಾಹಾರ ಭಕ್ಷಣ ತೀರಾ ಸಾಮಾನ್ಯ. ಮಾಂಸ ತಿಂದರೆ ರಾಜಸ - ತಾಮಸ ಪ್ರವೃತ್ತಿಗಳು ಉತ್ತೇಜಿತವಾಗುತ್ತದೆ ಎನ್ನುತ್ತಾರೆ. ಆದರೆ ನಾವು ನೋಡಿದ ಥ್ಯಾ ಜನರು ತುಂಬಾ ಶಾಂತಿ ಪ್ರಿಯರು, ಸಾಧು ಜನರು. ಯಾವ ಜಗಳ - ವಾಗ್ವಾದ,

ಕೋಪ, ಕಲಹ, ಕದನ, ಜಿಗುಪ್ಸೆ ಇಲ್ಲದ ಜನ! ಹೆಚ್ಚು ಮಾತೂ ಬೇಡ ಇವರಿಗೆ! ದೊಡ್ಡ ದೊಡ್ಡ ಸಂಸಾರಗಳನ್ನು ನಿಭಾಯಿಸಿ ತಮ್ಮಷ್ಟಕ್ಕೆ ತಾವು ಮೌನವಾಗಿ, ಸರಳತೆಯಿಂದ ಕೂಡಿ, ತೃಪ್ತಜೀವನ ನಡೆಸುತ್ತಾರೆ. (ಇಲ್ಲಿ ನಿಜವಾಗಿ ಕುಟುಂಬ ನಿಯಂತ್ರಣ ಯೋಜನೆಯ ಅಗತ್ಯವಿದೆ.) ಅಜ್ಜಿ, ಮಕ್ಕಳು, ಮೊಮ್ಮಕ್ಕಳು ಬೀದಿಯಲ್ಲಿ ಕುಳಿತು ಸರಸ ಸಲ್ಲಾಪ ಮಾಡುವ ದೃಶ್ಯವಂತೂ ಬಲು ಸೊಗಸು. ಗಂಟೆಗೊಮ್ಮೆ ಅನ್ನ ತಿನ್ನುವ ಜನರು. ಕೈಯಲ್ಲಿ ಒಂದು ಬಟ್ಟಲು, ಅನ್ನ ತಿನ್ನಲು ಒಂದೆರಡು ಕಡ್ಡಿಗಳು ಥ್ಯಾ ಜನರ ಸಂಕೇತ! ಅನ್ನಕ್ಕೆ ಸಾರಿನಂತಿರುವ ನೀರನ್ನು ಹಾಕಿ (ಮೀನು, ಪರಿಮಳದ ಸಸ್ಯಗಳು, ಎಲೆಗಳು ಇತ್ಯಾದಿ ಬೆರೆಸಿದ ಉಪ್ಪಿನಕಾಯಿಯ ರಸವಿದ್ದಂತೆ) ಪ್ರತಿ ಗಂಟೆಗೂ ತಿನ್ನುತ್ತಲೇ ಇರುತ್ತಾರೆ. ಆದರೂ ಈ ಜನಕ್ಕೆ ಬೊಜ್ಜುಮೈ ಬಂದಿಲ್ಲ. ಅನ್ನ ತಿಂದರೆ ಮೈ ಬರುತ್ತದೆ ಎಂಬ ಮಾತು ಸುಳ್ಳು ಎಂಬ ಸತ್ಯವನ್ನು ಈ ಜನ ನಮಗೆ ಉದಾಹರಣಾರ್ಥವಾಗಿ ತಿಳಿಸಿಕೊಟ್ಟಿದ್ದಾರೆ.

ಕಾನೂನು, ಕೋರ್ಟುಗಳು, ವಕೀಲರು – ಇಂತಹವರು ಯಾರೂ ಇಲ್ಲಿ ಇಲ್ಲವಂತೆ! ಚಿಕ್ಕ ಪುಟ್ಟ ಜಗಳಗಳನ್ನು ತಮ್ಮೊಳಗೇ ತೀರಿಸಿಕೊಳ್ಳುತ್ತಾರೆ. ಗಂಡ ಹೆಂಡತಿಯರಲ್ಲಿ ನಿಕಟ ಸಂಬಂಧವೂ ಇಲ್ಲ. 8-10 ಮಕ್ಕಳ ತಾಯಿಯೂ ಫಕ್ಕನೆ ಗಂಡನನ್ನು ಬಿಟ್ಟು ಇನ್ನೊಬ್ಬನನ್ನು ಮದುವೆಯಾಗುತ್ತಾಳೆ! ಹೆಂಡತಿಯನ್ನು ಕಳೆದುಕೊಂಡ ಗಂಡ, ಏನೂ ಯೋಚನೆ ಮಾಡದೆ, ಮರು ಮದುವೆಗೆ ಪ್ರಯತ್ನಿಸುತ್ತಾನೆ. ಮಕ್ಕಳ ಸ್ಥಿತಿ .... ದೇವರೇ ಗತಿ! ಬಹುಶಃ ಅನಾಥಾಲಯವಿರಬಹುದು. ಎಂತಹ ಮನೋ ಸ್ಥಿತಿಯೋ ನಮಗಂತೂ ತಿಳಿಯದು. ಒಟ್ಟಿನಲ್ಲಿ ಇವರು ಶಾಂತಿಪ್ರಿಯ ಸ್ವಭಾವದ, ನಿಜವಾಗಿ ಮೆಚ್ಚತಕ್ಕ ಜನ!

ನಮ್ಮ ನೃತ್ಯ–ಉಪನ್ಯಾಸದ ಜಾಹಿರಾತುಗಳು ಇಲ್ಲಿನ ಎಲ್ಲ ಪತ್ರಿಕೆಗಳಲ್ಲೂ ಪ್ರಕಟವಾಗಿದೆ! ಜನರು ಅತ್ಯಾಸಕ್ತಿಯಿಂದ 'ಜಗತ್ಪ್ರಸಿದ್ಧ ಕೃಷ್ಣರಾವ್ ದಂಪತಿಗಳನ್ನು' ನೋಡಲು ಕಾತುರರಾಗಿದ್ದಾರೆ!!

ಇತಿ ನಿನ್ನ

ಅಮ್ಮ.

* * * * * *

ಬೆಂಕಾಕ್

3 - 5 - 1968

ಮುದ್ದು ಮಕ್ಕಳೇ,

ಥ್ಯಾಲೇಂಡಿನ ಪ್ರಸಿದ್ಧ ಬುದ್ಧ ದೇವಾಲಯಗಳಿಗೆ ಭೇಟಿ ಕೊಟ್ಟೆವು. ಎಂತಹ ಅತ್ಯದ್ಭುತ ದೇವಾಲಯಗಳಿವು! ದೇವಾಲಯದ ಆವರಣದಲ್ಲೆಲ್ಲಾ ಬೌದ್ಧ ಸನ್ಯಾಸಿ

ಗಳು ಹಳದಿ ಬಟ್ಟೆಯನ್ನುಟ್ಟು ಅಲ್ಲಲ್ಲಿ ಮರದಡಿಯಲ್ಲಿ ಮಾತನಾಡುತ್ತ ಇರುವುದು, ಅಥವಾ ಪ್ರಾರ್ಥಿಸುತ್ತಿರುವ ದೃಶ್ಯ ನೋಡಲು ಬಹಳ ಚೆನ್ನಾಗಿ ಇರುತ್ತದೆ. ದಿನಕ್ಕೊಮ್ಮೆ (ಒಪ್ಪತ್ತು) ಈ ಸನ್ಯಾಸಿಗಳಿಗೆ ಒಂದು ಊಟ ಉಚಿತವಾಗಿ ಸಿಗುತ್ತದೆಯಂತೆ. ನಾವು ಅಲ್ಲಿಗೆ ಹೋದಾಗ ಅವರ ಊಟದ ಸಮಯವಾಗಿತ್ತು. ಮೇಜಿನ ಮೇಲೆ ಅವರಿಗೆ ಬಡಿಸಿದ ಊಟ ನೋಡಿ ಕಂಗಾಲಾದೆ! ಒಂದು ದೊಡ್ಡದಾದ ಇಡೀ ಮೀನನ್ನು - ಮೀನಿನ ಆಕಾರದಲ್ಲಿಯೇ - ಬೇಯಿಸಿಟ್ಟಿದ್ದರು. ನೀರಿನಲ್ಲಿ ಬೆಳೆಯುವ ಕೆಲವು ಸಸ್ಯಗಳನ್ನು ಮತ್ತು ಇತರ ಜೀವಜಂತುಗಳಿನ್ನು ಹಾಕಿ ಬೇಯಿಸಿದ ಒಂದು 'ಅವಿಯಲ್' ಮಾದರಿಯ ಪದಾರ್ಥವೊಂದು ಪಾತ್ರೆಯಲ್ಲಿ ತಯಾರಾಗಿತ್ತು! ಮಾವಿನ ಹಣ್ಣು ಮುಂತಾದ ಹಲವಾರು ಹಣ್ಣು ಹಂಪಲುಗಳನ್ನೂ ಇತರ ಆಹಾರಗಳನ್ನೂ ಮೇಜಿನ ಮೇಲೆ ಬೇಕಾದಷ್ಟು ಇಟ್ಟಿದ್ದರು. ಬುದ್ಧನು ಬೋಧಿಸಿದ ತತ್ವಗಳು ಎಲ್ಲಿ? ಇವರೆಲ್ಲಿ? ಎನ್ನಿಸಿತು ನನಗೆ — ಈ ವಿಚಾರವಾಗಿ ಶಂಕಿಸಿದರೆ ಇಲ್ಲಿನ ಜನ ನನಗೆ ಕೊಡುವ ಉತ್ತರ – "ಅದು ಬೇಡ ; ಇದು ಬೇಡ ಎನ್ನಬಾರದು. ಈ ಬೇಡುವ ಬೌದ್ಧ ಸನ್ಯಾಸಿಗಳು – ಬಡಿಸಿದುದನ್ನು, ಕೊಟ್ಟಿದ್ದನ್ನು ತಿನ್ನಬೇಕು" ಎಂಬ ತತ್ವ! ಅವರ ಹೊಟ್ಟೆ ಅನ್ನಬ್ರಹ್ಮ ಸ್ವರೂಪ! ಇರಬಹುದು. ಆದರೂ ಕೊಡುವವರಾದರೂ ಯೋಚಿಸಬಾರದೇ?

ಅದೇನೇ ಇರಲಿ - ಇಲ್ಲಿನ ಬುದ್ಧ ದೇವಾಲಯಗಳು 'ಅಬ್ಬಬ್ಬಾ' ಎನ್ನುವಂತಿವೆ. ರಾಜ ಮನೆತದವರು ಪ್ರಾರ್ಥನೆ ನಡೆಸುವ (Emerald Buddha) ಹಸಿರು ವೈಢೂರ್ಯದ ದೇವಾಲಯವನ್ನು ನೋಡಲು ಹತ್ತು ಕಣ್ಣುಗಳೂ ಸಾಲದು! ಬಹಳ ಕಲಾ ಸಂಪತ್ತಿನಿಂದ ಆಕರ್ಷಕ ವಾಸ್ತುಶಿಲ್ಪದಿಂದ ಮನಸ್ಸನ್ನು ಸೆಳೆಯುತ್ತದೆ. ಈ ದೇವಾಲಯಗಳು ನಮ್ಮ ದೇವಸ್ಥಾನಗಳಂತಲ್ಲ. ಶಿಲ್ಪವೈಭವ ಅಷ್ಟಿಲ್ಲ. ಗೋಡೆಗಳಲ್ಲೆಲ್ಲಾ ರಾಮಾಯಣದ ಕಥಾವಸ್ತುವನ್ನು ಚಿತ್ರಿಸಿದ್ದಾರೆ. ಪ್ರತಿ ಕೃತಿಯನ್ನೂ ಕೂಲಂಕುಷವಾಗಿ ನೋಡುತ್ತ ಹೋದಲ್ಲಿ ಎಷ್ಟು ತಿಂಗಳು ಬೇಕಾಗಬಹುದೋ ತಿಳಿಯದು ಪಚ್ಚೆಕಲ್ಲಿನ ಬುದ್ಧನ ವಿಗ್ರಹ ಅಷ್ಟು ದೊಡ್ಡದಾಗಿಲ್ಲ. ಆದರೆ ಅತ್ಯಂತ ಸುಂದರವಾದ ಪಚ್ಚೆಕಲ್ಲಿನ ಅಮೂಲ್ಯ ವಿಗ್ರಹ.

ಈ ವಜ್ರ ವೈಢೂರ್ಯಮಯ ಪಚ್ಚೆಕಲ್ಲಿನ ಬುದ್ಧನನ್ನು ಕುರಿತು ಪ್ರಚಲಿತದಂತ ಕಥೆಯೊಂದಿದೆ. ಪುರಾಣ ಸಮಯದಲ್ಲಿ ಈ ಬುದ್ಧನನ್ನು ದೇವೇಂದ್ರನು ಪಾಟಲೀಪುರದ ನಾಗಸೇನನಿಗೆ ಕೊಟ್ಟನಂತೆ. ಆಮೇಲೆ ಅವನು ಭಗವಾನ್ ಬುದ್ಧನ ಏಳು ಪೂಜ್ಯ ಅವಶೇಷಗಳನ್ನು ಆ ಮೂರ್ತಿಗೆ ಮಾಯಾ ವಿದ್ಯೆಯ ಮೂಲಕ ಅಳವಡಿಸಿದನಂತೆ. ಕ್ರಿ. ಪೂ. 43ನೆಯ ಇಸವಿಯಲ್ಲಿ ಇದು ನಿರ್ಮಿತವಾದುದೆಂದು ಹೇಳಲಾಗುತ್ತದೆ. ಈಗ ಅದರ ಆಯುಸ್ಸು ಎರಡು ಸಾವಿರ ವರ್ಷಗಳಿಗೂ ಮೇಲ್ಪಟ್ಟಿರಬೇಕು. ಆಮೇಲೆ ಆ ವಿಗ್ರಹವನ್ನು ಕ್ರಿ. ಶ. 1784ರಲ್ಲಿ ಈ ದೇವಾಲಯದಲ್ಲಿ

ಪ್ರತಿಷ್ಠೆ ಮಾಡಿದರಂತೆ. ಈ ಸುಂದರಮೂರ್ತಿಯನ್ನು ನೂರಾರು ಜನರು ಮೂಕರಾಗಿ ಭಕ್ತಿಯಿಂದ ನೋಡುತ್ತಾ ಕುಳಿತುಕೊಳ್ಳಲು ದೇವಸ್ಥಾನದಲ್ಲಿ ವಿಶಾಲವಾದ ಜಾಗವಿದೆ. ವಿಶಾಲವಾದ ಅಂಗಳ. ಬಣ್ಣದ ಕಲ್ಲಿನ ಚಿತ್ರಿತ ಕಂಬಗಳು. - ವಿಚಿತ್ರ ವಿಗ್ರಹಗಳು. ಥಳಥಳಿಸುವ ಚಿನ್ನಾರಿಯಿಂದ ದೇವಸ್ಥಾನದ ಕಂಬ, ಗೋಡೆಗಳನ್ನೆಲ್ಲಾ ಅಲಂಕರಿಸಿದ ಕಾರಣ, ಯಾವತ್ತೂ ಫಳಫಳಿಸುತ್ತಲೇ ಇರುತ್ತದೆ. ಅಲ್ಲದೆ ಸಾಯಂದೇಶ ವಜ್ರ ವೈಢೂರ್ಯಗಳಿಗೆ, ಆರೆಜರಿಯ ವಜ್ರಗಳಿಗೆ ಪ್ರಸಿದ್ಧ. ಆ ಕಲ್ಲುಗಳಿಂದಲೇ ಅಲಂಕೃತ ವಾದ ದೇವಾಲಯಗಳನ್ನು ನೋಡಲು ಚಂದ, ದೇವಾಲಯದ ಒಳಗಡೆ ಪ್ರಾರ್ಥಿ ಸುವ ವಿಧಾನವೂ ವಿಚಿತ್ರ. ಅವರು ದೇವರಿಗೆ ಅರ್ಪಿಸುವ ಕಾಣಿಕೆಯೂ ವಿಚಿತ್ರ. ನಾವು ಕೊಡುವ ಹಾಗೆ ತೆಂಗಿನಕಾಯಿ, ಹಣ್ಣುಗಳನ್ನಲ್ಲ. ಚಿನ್ನಾರಿಯನ್ನು ಬುದ್ಧನ ಮೈಗೆ ಅಂಟಿಸುವುದು ಒಂದು ವಿಧದ ಪ್ರಾರ್ಥನೆ. ಬುದ್ಧನ ವಿಗ್ರಹ ತುಂಬಾ ಅಂಟಿ ಸಿದ ಈ ಚಿನ್ನಾರಿ, ಬಣ್ಣದ ಕಾಗದಗಳು ಗಾಳಿಗೆ ಹಾರಿ ವಿವಿಧ ವರ್ಣ ವೈವಿಧ್ಯದಿಂದ ಮಿರುಗುತ್ತಲೇ ಇರುತ್ತದೆ. ಕಮಲದ ಹೂಗಳನ್ನು ಅರ್ಪಿಸಬೇಕು. ಊದುಬತ್ತಿ ಯೊಂದನ್ನು ನಾವೇ ಹತ್ತಿಸಿ ವಿಗ್ರಹದ ಮುಂದೆ ನಾವೇ ಉರಿಸಬೇಕು. ಪೂಜೆಯ ಸಲಕರಣೆಗಳೇ ಬೇರೆ. ದೇವರ ಮುಂದೆ ಕುಳಿತು 2 ಮರದ ತುಂಡುಗಳನ್ನು ಒಂದ ಕ್ಕೊಂದು ತಟ್ಟಿ ಭವಿಷ್ಯ ತಿಳಿಯುವ ಪ್ರಯತ್ನವನ್ನು ಭಕ್ತರು ಮಾಡುತ್ತಲೇ ಇರು ತ್ತಾರೆ. ಈ ಮರಕ್ಕೆ ಮರತಟ್ಟಿದ ಶಬ್ದ ದೇವಾಲಯಗಳಲ್ಲಿ ಯಾವಾಗಲೂ ಕಿವಿಯ ಮೇಲೆ ಬೀಳುತ್ತಲೇ ಇರುತ್ತದೆ.

ಇಲ್ಲಿನ ಬಂಗಾರ ಬುದ್ಧನ (Golden Buddha) ದೇವಾಲಯ ನೋಡಿದೆವು. ಈ ವಿಗ್ರಹದಲ್ಲಿ 5 ಟನ್ನು ಚಿನ್ನವಿದೆಯಂತೆ. ಒಮ್ಮೆ ಆ ಚಿನ್ನವನ್ನು ಕಾಪಾಡಲು, ಯುದ್ಧ ಕಾಲ ಅದು. ಆಗ ಭಾರವಾದ ವಿಗ್ರಹವನ್ನೇ ಗಾರೆಯಲ್ಲಿ ಹುದುಗಿಟ್ಟು ಸಮು ದ್ರಕ್ಕೆ ಎತ್ತಿ ಎಸೆದಿದ್ದರಂತೆ ; ಯುದ್ಧ ಮುಗಿದ ಮೇಲೆ ಪುನಃ ಪ್ರತಿಷ್ಠೆ ಮಾಡಿದ ರಂತೆ. ಈ ವಿಗ್ರಹ ಅತ್ಯಂತ ಪ್ರಕಾಶಮಾನವಾಗಿ ಥಳಥಳಿಸುತ್ತಿರುತ್ತದೆ. ನಮ್ಮ ದೇವಾಲಯಗಳಲ್ಲಿ 33 ಕೋಟಿ ದೇವಾಧಿದೇವತೆಯರ ವಿಗ್ರಹಗಳೂ, ಫೋಟೋ ಗಳೂ ಇರುತ್ತವೆ. ಇಲ್ಲಿನ ದೇವಾಲಯಗಳಲ್ಲಿ ಬುದ್ಧ, ಬುದ್ಧ, ಬುದ್ಧ ಸಾಲು ಸಾಲಾಗಿ ಬುದ್ಧನ ವಿಗ್ರಹಗಳೇ! ಹಿರಿ, ಮರಿ, ಕಿರಿ ಗಾತ್ರದ ಬುದ್ಧನ ಪ್ರತಿಮೆಗಳಲ್ಲದೆ ಬೇರೇನೂ ಕಾಣುವುದಿಲ್ಲ. ಕೆಲವೊಮ್ಮೆ ಜಾತಕ ಕಥೆಗಳ ಚಿತ್ರಗಳಿರುತ್ತವೆ ಅಷ್ಟೇ!

ನಿದ್ರಾಬುದ್ಧ (Reclining Buddha) ನನ್ನು ನೋಡಿದೆವು. ಈ ಶಯನಾಸನ ಬುದ್ಧನ ದರ್ಶನವನ್ನು ಒಂದೇ ಕಣ್ಣೋಟದಲ್ಲಿ ಪಡೆಯುವುದು ಅಸಾಧ್ಯದ ಮಾತೇ ಸರಿ. ಶ್ರೀರಂಗಪಟ್ಟಣ, ತಿರುವನಂತಪುರದ ಶೇಷಶಾಯಿ ಶ್ರೀರಂಗನಾಥಸ್ವಾಮಿಯ ಮೂರ್ತಿಯಂತೆ ಇರುವ ಈ ಬುದ್ಧನ ಕಲಾಕೃತಿ ಸುಮಾರು 60 ಅಡಿ ಉದ್ದವಾಗಿದ್ದು

ತಲೆಯ ತುದಿಯಿಂದ ಕಾಲಿನ ಕೊನೆ ಮುಟ್ಟಲು ಎಷ್ಟೋ ನಡೆಯಬೇಕು. ರುಂಡ, ಮುಂಡ, ಕೈಕಾಲುಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿಯೇ ನೋಡಬೇಕು. ಆ ಬುದ್ಧನ ಚರಣ ಕಮಲಗಳೆರಡನ್ನು ಸಮುದ್ರದ ಚಿಪ್ಪಿನ ಒಳಗಣ ರಂಜಿತ ಪದರದಿಂದ ಕೆತ್ತಿದ್ದಾರೆ. ಒಂದು ಚರಣಕಮಲ ಅತಿ ದೊಡ್ಡ ಆಕಾರದ, ವಿಸ್ತಾರವಾದ ಹೆಜ್ಜೆ. ಈ ನಿದ್ರಾಬುದ್ಧನ ವಿಗ್ರಹ ಲೋಹದಿಂದ ತಯಾರಿಸಲ್ಪಟ್ಟಿದೆ. ಶಯನಶಾಲಿಯಾದ ಈ ಬುದ್ಧನ ಸುಂದರವದನದ ಮೇಲೆ ಅದೆಷ್ಟು ಸೌಮ್ಯ, ಶಾಂತತೆ!

ಅಮೃತಶಿಲಾ ದೇಗುಲಕ್ಕೊ (Marble Temple) ನಮ್ಮ ಭೇಟಿ ಆಯಿತು. ಅಲ್ಲಿ ಪದ್ಮಾಸನದಲ್ಲಿ ಕುಳಿತಿರುವ ಬುದ್ಧದೇವನ ಚಿನ್ನದ ವಿಗ್ರಹವಿದೆ. ಈ ದೇಶದಲ್ಲಿ ತುಂಬಾ ತಾವರೆ ಹೂಗಳು. ದಾರಿಯುದ್ದಕ್ಕೂ ಈ ಕಮಲ ಪುಷ್ಪಗಳು ನಗುತ್ತಾ ಅರಳಿರುವ ಸರೋವರಗಳು ದೈವಿಕ ವಾತಾವರಣವನ್ನು ಕೊಡುತ್ತವೆ. ದೇವತಾರ್ಚನೆಗೆ ಕಮಲದ ಹೂ ಇಲ್ಲಿ ಅತ್ಯಗತ್ಯ. ಈ ದೇವಾಲಯಗಳಲ್ಲದೆ ಸಯಾಂ ತುಂಬಾ ಅಲ್ಲಲ್ಲಿ ದೇಶೀಯ ವಾಸ್ತು ಕಲಾಸಿರಿ, ವೈಶಿಷ್ಟ್ಯಪೂರ್ಣ ಚಿಕ್ಕಪುಟ್ಟ ದೇಗುಲಗಳು ಕ್ಷೇತ್ರ ಕೀರ್ತಿಯನ್ನು ಹೆಚ್ಚಿಸುತ್ತದೆ.

ಇಲ್ಲಿನ ದೇವಾಲಯಗಳಲ್ಲಿ ಸಿಗುವ ಅನುಭವಗಳು ಎಷ್ಟೊಂದು ಬೇರೆಯಾಗಿವೆ! ಅದೇ ವಿಚಿತ್ರ. ಪ್ರಪಂಚದ ವಿವಿಧ ಜನರು ವಿವಿಧ ರೀತಿಯಲ್ಲಿ ಪ್ರಾರ್ಥಿಸುವ ವಿಷಯ. ಪ್ರಾರ್ಥನೆಯಂತೂ ಎಲ್ಲೆಲ್ಲೂ ಇದೆ. ಅದು ಬೇಕು!

ಬೌದ್ಧ ಭಿಕ್ಷುಗಳನ್ನು ಇಲ್ಲಿ ಎಲ್ಲಾ ಸಮಾರಂಭಗಳಿಗೆ ಕರೆಯಿಸಿಕೊಳ್ಳುವುದು ವಾಡಿಕೆ, ನಂಬಿಕೆ, ಭಕ್ತಿಯಂತೆ! ಒಳ್ಳೆಯ ಸಮಾರಂಭಗಳಿಗೆ ಹೇಗೋ, ಹಾಗೆಯೇ ಅಶುಭ ಸಂದರ್ಭದಲ್ಲಿಯೂ ಈ ಭಿಕ್ಷುಗಳು ಸಾಮಾನ್ಯವಾಗಿ ಇರಲೇಬೇಕಂತೆ!

ಮತ್ತೆ ಬರೆಯುತ್ತೇನೆ.

ಇತಿ ನಿಮ್ಮ
ಅಮ್ಮ.

* * * * * *

ಬೆಂಕಾಕ್
30 – 4 – 1968

ಮುದ್ದು ಮಕ್ಕಳೇ,

'ರುಕ್ಮಿಣಿ' ಯಲ್ಲಿ ಈಗ ಅಮ್ಮ, ಅಪ್ಪ ಇಬ್ಬರೂ ಇಲ್ಲ. ನೀವಿಬ್ಬರೇ ಮನೆ ನಡೆಸುತ್ತಿದ್ದೀರಿ ಎಂದು ಬರೆದಿದ್ದೀರಿ. ಊಟಕ್ಕೆ ಸೋಮಾರಿತನ ಮಾಡಬೇಡಿ.

ಬೇಕಾದ ಅಡಿಗೆಯನ್ನು ಮಾಡಿಸಿ ಸಮಯಕ್ಕೆ ಸರಿಯಾಗಿ ಊಟ, ತಿಂಡಿ ತೆಗೆದು ಕೊಂಡು ಆರೋಗ್ಯ ಕಾಪಾಡಿಕೊಳ್ಳಿ. ಹಣ್ಣು-ಹಂಪಲುಗಳನ್ನು ತಿನ್ನಲು ಮರೆಯ ಬೇಡಿ....ಮಾವಿನ ಹಣ್ಣಿನ ಕಾಲವಲ್ಲವೇ ಇದು!

ಇಲ್ಲಿನ ಟಿ. ವಿ. ವಾಣಿಜ್ಯ ಶಾಖೆಗಾಗಿ 15 ನಿಮಿಷಗಳ ಅವಧಿಯ ನಮ್ಮ ನೃತ್ಯ ಕಾರ್ಯಕ್ರಮವನ್ನು ಚಿತ್ರಿಸಿದರು. ಟಿ. ವಿ. ಚಿತ್ರಣ ಕೇಂದ್ರದಲ್ಲಿ ಯಾರಿಗೂ ಸರಿ ಯಾಗಿ ಇಂಗ್ಲಿಷ್ ಭಾಷೆ ಬರುತ್ತಿರಲಿಲ್ಲ. ನಮ್ಮ ನೃತ್ಯಗಳ ಹೆಸರುಗಳನ್ನು ದೊಡ್ಡ ದೊಡ್ಡ ಇಂಗ್ಲಿಷ್ ಅಕ್ಷರಗಳಲ್ಲಿ ಬರೆದ ಮೇಲೆ ಅವರು ಓದಿ, ಅದನ್ನು ಥ್ಯಾ ಭಾಷೆಗೆ ಭಾಷಾಂತರಿಸಿ ಕಾರ್ಯಕ್ರಮ ಮುಗಿಸಿದರು. ನಮ್ಮ ನೃತ್ಯಗಳಲ್ಲಿನ ಕಾಲು ಹೆಜ್ಜೆ ಗಳನ್ನೂ, ಹಸ್ತ ಮುದ್ರೆಗಳನ್ನೂ, ಮುಖಭಾವಗಳನ್ನೂ ಕಂಡು ಮೆಚ್ಚಿದರು. ಥ್ಯಾಲೇಂಡಿನ ನೃತ್ಯಗಳಲ್ಲಿ ಅವು ಕಂಡುಬರುವುದಿಲ್ಲ. ಆದ್ದರಿಂದ ಇವರಿಗೆ ಹೊಸತು. ಸ್ಟುಡಿಯೋ ಒಳಗಿನ ಹವಾ ನಿಯಂತ್ರಣ ಸೌಲಭ್ಯದಿಂದಾಗಿ, ನೃತ್ಯ ಮಾಡುವಾಗ ಸೆಕೆಯ ತೊಂದರೆ ಇರಲಿಲ್ಲ. ಆದರೆ ಸೊಳ್ಳೆಗಳ ಗುಂಪು ಗುಂಪೇ ಸ್ಟುಡಿಯೋ ತುಂಬಾ ಹಾರಾಡುತ್ತಿದ್ದುವು. ಅವುಗಳ ಕಾಟ ಅಷ್ಟಿಷ್ಟಲ್ಲ! ಸೊಳ್ಳೆಗಳಿಗೆ ಕೂಡ ತಣ್ಣನೆ ಹವೆ ಬೇಕೆಂದು ಒಳಗೆ ಬಂದಿದ್ದವೋ ಏನೋ! ಕಾರ್ಯಕ್ರಮ ಮುಗಿದ ಮೇಲೆ ಒಂದು ಥ್ಯಾ ರೇಷ್ಮೆಯ ವಸ್ತ್ರವನ್ನೂ, ಕೈ ಚೀಲವನ್ನೂ ಕೊಟ್ಟು ಬಗ್ಗಿ ನಮಸ್ಕರಿಸಿ, ಸತ್ಕರಿಸಿ ಬೀಳ್ಕೊಟ್ಟರು.

ನಿನ್ನೆ ಅಂತರರಾಷ್ಟ್ರೀಯ ಮಹಿಳಾ ಸಂಘದವರು ಏರ್ಪಡಿಸಿದ್ದ ನೃತ್ಯ–ಉಪ ನ್ಯಾಸವನ್ನು 'ECAFE' ('ಇಕಾಫೆ') ಸಂಸ್ಥೆಯಲ್ಲಿ ಕೊಟ್ಟೆವು. ಅದೊಂದು ವಿದ್ಯುತ್‌ಚಾಲಿತ ಹವಾ ನಿಯಂತ್ರಿತ ಸಭಾಸದನ. ಸುಮಾರು 300 ಜನ ಕೂಡುವ ವ್ಯವಸ್ಥೆಯಿದೆ. ರಂಗಮಂದಿರ ತುಂಬಿ ಹೋಗಿತ್ತು. ಸಭಾಸದರಲ್ಲಿ ಹೆಚ್ಚು ಜನ ಅಂತರ ರಾಷ್ಟ್ರೀಯ ಹಾಗೂ ಭಾರತೀಯರು ; ಥ್ಯಾ ಜನರನ್ನು ಹೆಚ್ಚಾಗಿ ಕಾಣಲಿಲ್ಲ. ನಮ್ಮ ನೃತ್ಯ–ಉಪನ್ಯಾಸ ಇದೇ ಮೊದಲಾಗಿ ಅವರು ಕೇಳುತ್ತಿದ್ದುದರಿಂದ ಸಮಾ ರಂಭ ಅತ್ಯಂತ ಯಶಸ್ವಿಯಾಯಿತು. ಪ್ರೇಕ್ಷಕರೆಲ್ಲರೂ ಆನಂದದಿಂದ ಮೈಮರೆತರು. ಭಾರತದ ರಾಯಭಾರಿ ಮತ್ತು ಅವರ ಪತ್ನಿಯವರು ರಂಗಸ್ಥಳಕ್ಕೆ ಬಂದು, ಹೆಮ್ಮೆ ಯಿಂದ ಹೊಗಳಿದರು.

ಇಂದಿನ ಪತ್ರಿಕೆ ತುಂಬಾ ಅತ್ಯುತ್ತಮ ವಿಮರ್ಶೆಗಳು ಬಂದಿವೆ. ಅದನ್ನು ಓದಿ ನಮ್ಮ ಜೀವನದಲ್ಲಿ ಹೊಸ ಹುರುಪು, ಚೇತನ ಮೂಡಿ ಬಂದಿದೆ. 'ದಿ ಬೆಂಕಾಕ್ ಪೋಸ್ಟ್' (The Bangkok Post) ಪತ್ರಿಕೆಯಲ್ಲಿ – "ಕೃಷ್ಣರಾಯರು ಮತ್ತು ಅವರ ಪತ್ನಿ ಚಂದ್ರಭಾಗಾದೇವಿಯವರು ಪ್ರದರ್ಶಿಸಿದ ವಿವರಣಾ ಸಹಿತ ನಾಟ್ಯದರ್ಶನ ಚೀನಾ ದೇಶದ ವಿಸ್ಮಯ ಕೌಶಲ್ಯದಷ್ಟು ಸಾಂಕೇತಿಕ ಹಾಗೂ ಜಟಿಲತೆಯಿಂದ ಕೂಡಿತ್ತು........ಈ ನಾಟ್ಯಗಳನ್ನು ಕಂಡು ವಿಸ್ಮಯ, ತಲ್ಲೀನತೆ ಹಾಗೂ ಸಮ್ಮೋಹ

ಕತೆ ಏಕಕಾಲದಲ್ಲಿಯೇ ಉದ್ಭವಿಸಿತು. ನೃತ್ಯದಷ್ಟೆ ಅಗತ್ಯವಾಗಿದ್ದಿತು ಆ ಅರ್ಥ ಪೂರ್ಣ ವಿವರಣೆ. ತಾವು ಚಿಕ್ಕಂದಿನಿಂದ ಈ ನೃತ್ಯಗಳನ್ನು ನೋಡುತ್ತ ಬಂದಿದ್ದರೂ, ಭಂಗಿಗಳ ಆಂತರಿಕ ಅರ್ಥ ಮತ್ತು ಸಂಬದ್ಧತೆಯನ್ನು ಇಂದಿನವರೆವಿಗೂ ಇಷ್ಟು ಕೂಲಂಕುಷವಾಗಿ ಅರ್ಥಮಾಡಿಕೊಂಡಿರಲಿಲ್ಲವೆಂದು ನೆರೆದಿದ್ದ ಭಾರತೀಯ ಪ್ರೇಕ್ಷಕ ಮಹಾಶಯರು ಅಭಿಪ್ರಾಯಪಟ್ಟರು........ಈ ಸಂಜೆಯ ಸುಂದರತೆ, ಆಹಾ! ಭಾವನೆಗಳಲ್ಲಿ ಅದ್ವಿತೀಯ ನೃತ್ಯಗಳು, ಕಲ್ಪನೆಯಲ್ಲಿ ಸಾಟಿಯಿಲ್ಲದ ಸಂಯೋಜನೆಗಳು, ನಿರ್ವಹಣೆಯಲ್ಲಿ ನಿಶ್ಚಿತ ರೂಪುರೇಖೆಗಳು. ಅಲ್ಲದೆ ದಂಪತಿಗಳಲ್ಲಿನ ಸಾಮ್ಯ ನಿಜಕ್ಕೂ ಭಾವನಾ ಜಗತ್ತಿನ ಸುಂದರ ವಾಸ್ತುಶಿಲ್ಪ........ಅದೃಷ್ಟವಶಾತ್ ನಾವು ಈ ಇಬ್ಬರು ಅತ್ಯುತ್ತಮ ಕಲಾವಿದರನ್ನು ಮತ್ತೊಮ್ಮೆ ರಂಗಭೂಮಿಯ ಮೇಲೆ ಈ ಮೇ ಎಂಟರಂದು ನೋಡಲಿದ್ದೇವೆ. ಆ ಮನೋಜ್ಞ ಸಾಯಂಕಾಲದ ಮಧುರ ಅನುಭವಕ್ಕೆ ನಿಮ್ಮ ಮತ್ತೆ ಯಾವ ಕಾರ್ಯಕ್ರಮವೂ ಅಡ್ಡಿ ಬಾರದಂತೆ ನೋಡಿಕೊಳ್ಳಿ" ಎಂದು ಸಾರಿತು.

ಹೌದು! ಮೇ ಎಂಟು! ಆ ಕಾರ್ಯಕ್ರಮಕ್ಕೆ ನಾವೂ ಸಿದ್ಧರಾಗುತ್ತಿದ್ದೇವೆ!

ಇತಿ ನಿಮ್ಮ

ಅಮ್ಮ.

*　*　*　*　*　*

ಬೆಂಕಾಕ್

4 – 5 – 1968

ಮುದ್ದು ಮಕ್ಕಳೇ,

ಮೇ ಎಂಟರ ನಮ್ಮ ನೃತ್ಯ ಪ್ರದರ್ಶನ ನಮ್ಮ ಜೀವಮಾನದಲ್ಲಿಯೇ ಒಂದು ವಿಜೃಂಭಣೆಯ ಸಂಭ್ರಮ ಮಹೋತ್ಸವ. ಇಲ್ಲಿನ ಅತ್ಯುತ್ತಮ ರಾಷ್ಟ್ರೀಯ ರಂಗಮಂದಿರ 'ನೇಶನಲ್ ಥಿಯೇಟರ್' (National Theatre) ನಲ್ಲಿ ಪ್ರದರ್ಶಿತವಾಗಲಿದೆ. ಅದೆಂತಹ ವಿಶಾಲವಾದ, ಅಂದವಾದ ರಂಗಮಂದಿರ! ರಂಗಸ್ಥಳದಲ್ಲಿ 150 ನೃತ್ಯಗಾರರು ಕುಣಿಯುವಷ್ಟು ಸ್ಥಳವಿದೆ. ಅಷ್ಟೊಂದು ಜಾಗವನ್ನು ನಾವಿಬ್ಬರೇ ಹೇಗೆ ತುಂಬಬಲ್ಲೆವು? ಎಂದು ದಿಗಿಲಾಯಿತು! ಬರಲಿರುವ ನಮ್ಮ ಪ್ರದರ್ಶನ ಒಂದು ಚಾರಿತ್ರಿಕ ಘಟನೆಯೆಂಬುದರಲ್ಲಿ ಸಂಶಯವಿಲ್ಲ. ಥ್ಯಾ-ಭಾರತ ಸಾಂಸ್ಕೃತಿಕ ಸಂಘದವರು ಎಲ್ಲಿಲ್ಲದ ಉತ್ಸಾಹದಿಂದ ಕೆಲಸ ಮಾಡುತ್ತಿದ್ದಾರೆ. ನೃತ್ಯ ಪ್ರದರ್ಶನವನ್ನು ಆಕರ್ಷಕ ಭಿತ್ತಿಪತ್ರಗಳ ಮೂಲಕ ಎಲ್ಲ ಪತ್ರಿಕೆಗಳಲ್ಲೂ ವಿವಿಧ ರೀತಿಯಲ್ಲಿ

ಪ್ರಕಟಿಸಿದ್ದಾರೆ. ರಂಗಮಂದಿರದ ಉಪ್ಪರಿಗೆಗಳಲ್ಲೆಲ್ಲಾ ಆಹ್ವಾನಿತ ಅತಿಥಿಗಳಂತೆ. ಜೇಂಕಾಕ್‌ನಲ್ಲಿನ ಅಂತರರಾಷ್ಟ್ರೀಯ ಸಂಸ್ಥೆಗಳ ಹಿರಿಯ ಅಧಿಕಾರಿಗಳಿಗೂ ಸಾಯಂನ ಗಣ್ಯವ್ಯಕ್ತಿಗಳಿಗೂ, ರಾಜಮನೆತನದವರಿಗೂ ಆ ಸ್ಥಳವನ್ನು ಕಾದಿರಿಸಿದ್ದಾರೆ. ಪುರ ಜನರಿಗೆ ಕೆಳಗಿನ ಸ್ಥಳ ಮೀಸಲಾಗಿದೆ. ಸುಮಾರು 1500 ಜನ ಕೂಡಲು ಅವಕಾಶ ವಿರುವ ಈ ರಂಗಮಂದಿರ ನಾವು ಜಗತ್ತಿನಲ್ಲಿ ಕಂಡ ಅತ್ಯುತ್ತಮ ಕಲಾ ಕ್ಷೇತ್ರಗಳಲ್ಲಿ ಒಂದಾಗಿದೆ.

ಇದೇ "ನೇಶನಲ್ ಥಿಯೇಟರ್"ನಲ್ಲಿ ನಾವು ನಿನ್ನೆ ಇಲ್ಲಿನ ಪ್ರಮುಖ ಪಂಗಡ ದವರಿಂದ ಸಾಯಮೀಸ್ ನೃತ್ಯಗಳನ್ನು ನೋಡಿದೆವು. ಇಥಿಯೋಪಿಯಾದ ಚಕ್ರವರ್ತಿ ಹೈಲ್ ಸಾಲಾಸೀಯವರ ಆಗಮನಕ್ಕಾಗಿ ಈ ನೃತ್ಯಪ್ರದರ್ಶನವನ್ನು ಏರ್ಪಡಿಸಿದ್ದರು. ಭಾರತೀಯ ರಾಯಭಾರಿಯವರ ಕಛೇರಿಯಿಂದ ನಮಗೆ ವಿಶೇಷ ಆಮಂತ್ರಣ ಬಂದಿತ್ತು. ನಿನ್ನೆ ಜೇಂಕಾಕ್‌ನಲ್ಲಿ ಅತಿ ದೊಡ್ಡ ಸಮಾರಂಭ. ಆಹ್ವಾನಿತರು ಕಾರ್ಯಕ್ರಮಕ್ಕೆ ಮುಂಚಿತವಾಗಿಯೇ ತಮ್ಮ ಸ್ಥಳಗಳಲ್ಲಿರಬೇಕಾಗಿತ್ತು. ರಾತ್ರಿ ಎಂಟು ಗಂಟೆಗೆ ಪ್ರದರ್ಶನವೆಂದು ನಿಶ್ಚಿತಗೊಳಿಸಿತ್ತು. ನಾವು ರಾತ್ರಿ 7–45ಕ್ಕೇ ನಮ್ಮ ಸ್ಥಳಗಳಲ್ಲಿದ್ದೆವು. ಆದರೆ ಥ್ಯಾಲೇಂಡಿನ ಅರಸ–ಅರಸಿಯರೂ, ಇಥಿಯೋಪಿಯಾದ ಚಕ್ರವರ್ತಿಗಳೂ ಆಗಮಿಸಿದಾಗ ರಾತ್ರಿ 9 ಗಂಟೆ ಮೀರಿ ಹೋಗಿತ್ತು ! ರಾಣಿ ಸಿಕರಿತ್ ಎಷ್ಟು ಸುಂದರಿ ! ರಾಜ ಭೂಮಿಪಾಲ್‌ರವರೂ ಸುಂದರಕಾಯರೇ ! ಅಂತೂ ಅಷ್ಟು ಹೊತ್ತು ಸದ್ದಿಲ್ಲದೆ, ಅಲುಗಾಡದೆ ಕುಳಿತಿರಬೇಕಾದ ನಮ್ಮ ಅವಸ್ಥೆ ಹೇಳತೀರದು ! ಹೊರಗೆ ಹೋಗುವಂತಿಲ್ಲ. ಒಳಗೆ ಕೂತಿರುವಂತಿಲ್ಲ. ಆ ಅವಸ್ಥೆ· ಅಂತೂ ರಾತ್ರಿ 9 ಘಂಟೆ ಹತ್ತು ನಿಮಿಷಕ್ಕೆ ಪ್ರದರ್ಶನ ಆರಂಭವಾಯಿತು.

ಈ ಸ್ಥಳದ ಅಕ್ಕಪಕ್ಕದ ಮುಂದಿನ ಎರಡು ಸಾಲುಗಳಲ್ಲೂ ಥ್ಯಾ ಸಂಗೀತದ ವಿಶಿಷ್ಟ ವಾದ್ಯಗಳೊಂದಿಗೆ ಸಂಗೀತಗಾರರು ಸಿದ್ಧರಾದರು. ಅವರ ವಿಚಿತ್ರ ವಾದ್ಯ ಸಂಗೀತ ಗೋಷ್ಠಿ ಕಂಡು ನಮಗೆ ಅಷ್ಟು ಹೊತ್ತು ಕಾದ ಶ್ರಮವೆಲ್ಲ ಮಾಯ ವಾಯಿತು. ಜೀವಮಾನದಲ್ಲಿನ ಒಂದು ಅಪೂರ್ವ ಅನುಭವವಲ್ಲವೇ ಅದು ! ಅಂದಿನ ಪ್ರದರ್ಶನ ರಾಮಾಯಣದ ಕಥೆ– ಅಶ್ವಮೇಧ ಯಾಗ ಮಾಡಿದ ಸಂದರ್ಭ. ಆ ಕಥೆ ಯನ್ನು ವರ್ಣಿಸಿದ ಪುಸ್ತಕವನ್ನು ಕೊಂಡುಕೊಂಡೆವು. ರಾಮಾಯಣವನ್ನು "ರಾಮ್‌ಕೀಯಾನ್" (Ramkion) ಎಂದೂ, ಸೀತೆಯನ್ನು "ಸೀದಾ" (Sida) ಎಂದೂ, ಲವನನ್ನು "ಲೋಬ್" (Lob) ಎಂದೂ, ರಾವಣನನ್ನು "ದೊಸ್‌ಕಂಥ್" (Dosa Kanth) ಎಂದೂ ಕರೆಯುವ ಈ ಥ್ಯಾ ಜನರು ರಾಮಾಯಣ ತಮ್ಮದೇ ಆದ ಗ್ರಂಥವೆಂದು ತಿಳಿದುಕೊಂಡಿದ್ದಾರೆ. ಶ್ರೀರಾಮನೂ, ಬುದ್ಧನೂ ಅವರ ಸಾಯಂ ದೇಶದಲ್ಲಿಯೇ ಅವತರಿಸಿದರೆಂಬ ಮೂಢ ನಂಬಿಕೆ ಸಾರ್ವಜನಿಕರಲ್ಲಿದೆ. ಆದರೆ ತಿಳು ವಳಿಕೆಯಿರುವ ಇಲ್ಲಿನ ಜ್ಞಾನಿಗಳೂ, ವಿವೇಕಿ ಪರಿಣತರೂ ಈ ಅಭಿಪ್ರಾಯದಿಂದ

ಹೊರತಾಗಿದ್ದಾರೆ. 'ಅಯೂತ್ಯಾ ಎಂಬ ಅಯೋಧ್ಯೆಯು ಇಲ್ಲಿ ಬೇಂಕಾಕ್ ಹತ್ತಿರವೇ ಇದೆ! — ಕಥೆ ಸಾಗುತ್ತಿರುವಾಗ ಹಿನ್ನೆಲೆಯಿಂದ ವೀಕ್ಷಕ ವಿವರಣೆಯನ್ನು ಇಂಗ್ಲಿಷ್ ಭಾಷೆಯಲ್ಲಿ ಕೊಡುತ್ತಿದ್ದರು. ರಂಗಸ್ಥಳದಲ್ಲಿ ಸುಮಾರು 250 ನೃತ್ಯಗಾರರೂ, ಸಂಗೀತಗಾರರೂ ಪ್ರವೇಶ ಮಾಡಿದರು. ಅವರ ವೇಷ ಭೂಷಣಗಳು ಕಣ್ಣು ಕುಕ್ಕುವಂತಿದ್ದುವು. ಪ್ರಕಾಶಮಾನವಾಗಿ ಥಳಥಳಿಸುವ ಥಳಕಿನ ಬಂಗಾರದ ಬಣ್ಣದ ವಸ್ತ್ರಗಳೂ. ತಲೆಗೆ ಧರಿಸಿರುವ ಚಿನ್ನದಂತಿರುವ ಕಿರೀಟಗಳಲ್ಲಿ ಬಣ್ಣಬಣ್ಣದ ಕಲ್ಲುಗಳು ಕೆತ್ತಲ್ಪಟ್ಟು ಪ್ರೇಕ್ಷಕರಿಗೆ ಅದು ಒಂದು ದೇದೀಪ್ಯಮಾನವಾದ ದೃಶ್ಯವಾಗಿತ್ತು.

ಕೈ ಬೆರಳುಗಳ ತುದಿಗೆ ಉದ್ದವಾದ ಲೋಹದ ಉಗುರುಗಳನ್ನು ಸಿಕ್ಕಿಸಿಕೊಳ್ಳುತ್ತಾರೆ. ಎಲ್ಲ ಪಾತ್ರಧಾರಿಗಳೂ ಒಂದೇ ವಿಧವಾದ ಪರಿಷ್ಕೃತವಾದ ವೇಷಭೂಷಣ, ಆಭರಣ, ಭುಜಕಟ್ಟು, ಕಿರೀಟಗಳನ್ನು ಧರಿಸುವುದರಿಂದ ಯಾವ ಪಾತ್ರಧಾರಿ ಯಾವ ಪಾತ್ರ ವಹಿಸಿದ್ದಾನೆ ಎಂಬುದನ್ನು ವೀಕ್ಷಕ ವಿವರಣೆಯನ್ನು ಕೊಡುವಾತನಿಂದ ಕೇಳಿ ಗೊತ್ತಾಗಬೇಕೇ ವಿನಹ ನೋಡಿ ತಿಳಿಯಲು ಸುಲಭವಲ್ಲ. ಅವರ ನೃತ್ಯಗಳು ಲಾಲಿತ್ಯವಾಗಿ, ಮೃದುವಾಗಿ, ಬಳಕು ಬಾಗುವಿಕೆಗಳಿಂದ ಕೂಡಿದ್ದು ನೋಡಿ ಅನುಭವಿಸಿ ಮೆಚ್ಚಲು ಆಕರ್ಷಣೀಯವಾಗಿದೆ. ಆದರೆ ಈ ಸಮ್ಮೋಹನಾಸ್ತ್ರದ ಪ್ರಭಾವ ಸ್ವಲ್ಪ ಹೊತ್ತು ಮಾತ್ರ. ಸುಮಾರು ಒಂದು ಗಂಟೆ ಕಳೆದ ಮೇಲೆ, ದೃಶ್ಯಗಳ ಮೊದಲ ಮೆರಗು ಮಾಸಿದ ಮೇಲೆ, ನೃತ್ಯದಲ್ಲಿನ ಸರಳತೆ ಬೇಸರಗೊಳಿಸುತ್ತದೆ. ನೃತ್ಯಗಳಲ್ಲಿ ಏನೂ ವಿಶೇಷವಿಲ್ಲದಿರುವುದು ಗಮನಕ್ಕೆ ಬರುತ್ತದೆ. ಚಲನೆಗಳು ಮತ್ತೆ ಮತ್ತೆ ಪುನರಾವರ್ತನೆ ಆಗಿ ಮನಸ್ಸಿಗೆ ಬೇಸರ ಬರುತ್ತದೆ. ನೃತ್ಯ-ಸಂಗಡದಲ್ಲಿ 7-8 ವರ್ಷದ ನೃತ್ಯಗಾರರೂ ಇದ್ದಾರೆ. ಅರ್ಥವಿಲ್ಲದ ಅವರ ಚಲನೆಗಳಲ್ಲಿಯೂ, ಕಲಾ ಪ್ರದರ್ಶನ ವಿಧಾನದಲ್ಲಿಯೂ, ಯಾವ ಸ್ವಾರಸ್ಯವೂ ಕಂಡುಬರಲಿಲ್ಲ. ಅಂದಿನ ಪ್ರದರ್ಶನ ಮುಗಿಯುವಾಗ ಮಧ್ಯರಾತ್ರಿಯಾಗಿತ್ತು.

ಥ್ಯಾಲೆಂಡ್‌ನಲ್ಲಿ ನೃತ್ಯಕ್ಕೆ ಬಹಳ ಪ್ರೋತ್ಸಾಹವಿದೆ. ಸರಕಾರವೂ ಸಾರ್ವಜನಿಕರೂ ಕಲೆಗೆ ಬೇಕಾದ ಸೌಕರ್ಯಗಳನ್ನು ನೀಡುತ್ತಾರೆ. ಥ್ಯಾ ಸಂಸ್ಕೃತಿಯಲ್ಲಿ ನೃತ್ಯವು ಒಂದು ಗಣ್ಯ ಸ್ಥಾನ ಪಡೆದಿದೆ. ಪ್ರಾಚೀನ ಥ್ಯಾ ರಾಜರ ಮನೆತನದ ಆಶ್ರಯದಲ್ಲಿ ಈ ನೃತ್ಯಗಳು ಅಭಿವೃದ್ಧಿ ಪಡೆದು ಇಂದು ಸಾರ್ವಜನಿಕರ ಸೊತ್ತಾಗಿದೆ. ಲಲಿತ ಕಲಾ ಸಂಸ್ಥೆಗಳು ನೃತ್ಯಕಲೆಯನ್ನು ಕಾಪಾಡಿಕೊಂಡು ಬಂದಿವೆ. ಅವರ ಮತದಂತೆ ವಿವಿಧ ಪಾತ್ರಗಳಿಗೆ ವಿವಿಧ ರೀತಿಯ ತರಬೇತು ಬೇಕಂತೆ. ಕಥಾಸಾರಾಂಶ ಸಾಮಾನ್ಯವಾಗಿ ರಾಜ್ಯಕ್ಕೂ, ದೇವತೆಗಳಿಗೂ, ಕಿನ್ನರರಿಗೂ ಸಂಬಂಧಪಡುವುದಂತೆ. ಗಂಡಸರ ಪಾತ್ರವನ್ನು ಹೆಂಗಸರು ಧರಿಸುವುದು ಸಾಮಾನ್ಯ. ಥಾಂಡಿಗ ಪಾತ್ರ

ಕ್ಕಾಗಲಿ, ಇಲ್ಲವೇ ಕೋಡಂಗಿ ಪಾತ್ರಕ್ಕಾಗಲಿ ಗಂಡಸರನ್ನು ಆರಿಸುತ್ತಾರೆ. ಅಂತಹ ಪಾತ್ರಗಳಿಗೆ ಮುಖವಾಡವನ್ನು ಉಪಯೋಗಿಸುತ್ತಾರೆ.

ಈ ನೃತ್ಯಗಳಿಗೆ ಅಕ್ಕಪಕ್ಕದ ದೇಶಗಳ ನೃತ್ಯಗಳ ಪ್ರಭಾವವಿದ್ದರೂ ಸಾಯಂ ದೇಶದ ಜನರ ಮೂಲತತ್ವ, ಸಂಪ್ರದಾಯ, ಭಾವನೆ ಹಾಗೂ ಕಲ್ಪನೆಯನ್ನು ಪಡೆದು ದೇಶದ ಸಂಸ್ಕೃತಿಯಲ್ಲಿ ಮಿಲನಗೊಂಡಿದೆ.

ಈ ನೃತ್ಯಗಳನ್ನು ಅವರು ಹೆಮ್ಮೆಯಿಂದ, ಗೌರವದಿಂದ ಇಲ್ಲಿನ ಅಸಂಖ್ಯಾತ ದೊಡ್ಡ ದೊಡ್ಡ ಹೋಟೆಲ್‌ಗಳಲ್ಲಿ ಅಂತರರಾಷ್ಟ್ರೀಯ ಪ್ರವಾಸಿಗಳಿಗಾಗಿ ಪ್ರತಿದಿನ ವೆಂಬಂತೆ ಪ್ರದರ್ಶಿಸಿ, ವಿನೋದಿಸುತ್ತಾರೆ. ಪ್ರೇಕ್ಷಕರ ಕೇವಲ ಐಂದ್ರಿಕ ಆನಂದಕ್ಕೋಸ್ಕರವಲ್ಲ. ಶಾಸ್ತ್ರೀಯ ಮತ್ತು ಸಾಂಪ್ರದಾಯಕ ನೃತ್ಯವೆಂದು ಭೂಷಣ ಪ್ರಾಯವಾಗಿ ಪ್ರದರ್ಶಿಸುವ ಈ ರೀತಿ ನಿಜವಾಗಿ ಮೆಚ್ಚುವಂತಿದೆ.

ಈ ಥ್ಯಾ ನೃತ್ಯಕಲೆಯಲ್ಲದೆ ಥ್ಯಾಲೇಂಡ್ ಮಲ್ಲಯುದ್ಧಕ್ಕೂ ಪ್ರಸಿದ್ಧಿ ಪಡೆದಿದೆ. ಸ್ಪೈನ್‌ನಲ್ಲಿ ಹೇಗೆ ಗೂಳಿ ಕಾಳಗ ವಿಶ್ವವಿಖ್ಯಾತವಾಗಿದೆಯೋ ಹಾಗೆಯೇ ಥ್ಯಾಲೇಂಡ್ ನಲ್ಲಿ ಮಲ್ಲಯುದ್ಧ ಜನಾದರಣೀಯವಾಗಿದೆ. ಇಲ್ಲೂ ಗೂಳಿ ಕಾಳಗ ಇದೆ. ಆದರೆ ಇಲ್ಲಿನ ಗೂಳಿ ಕಾಳಗದಲ್ಲಿ ಎರಡು ಗೂಳಿಗಳೇ ಜಗಳವಾಡುತ್ತಿದೆಯಾದುದರಿಂದ ಮನುಷ್ಯ ಹತ್ಯೆಯ ಪ್ರಶ್ನೆ ಇಲ್ಲ. ಗೂಳಿ, ಗೂಳಿಯನ್ನು ಕೊಲ್ಲುವುದೂ ಇಲ್ಲ.

ಥ್ಯಾ ನೃತ್ಯ ಹೇಗೆ ನೋಡತಕ್ಕ ವಿಷಯವೋ ಹಾಗೆಯೇ ಮಲ್ಲಯುದ್ಧ ಕೂಡ, ಇಲ್ಲಿ ನೋಡಲೇ ಬೇಕಾದ ವಿನೋದ. ಆತ್ಮರಕ್ಷಣೆಗೋಸ್ಕರ ರಚಿಸಿದ ಈ ಮಲ್ಲ ಯುದ್ಧ ಜಪಾನೀಯರ 'ಜುಜುಟ್ಸು' (Jujutsu) ಪಂದ್ಯದಂತಿದೆ. ಈ ಪ್ರದರ್ಶನ ಗಳು ಇಲ್ಲಿ ಯಾವಾಗಲೂ ನಡೆಯುತ್ತಲೇ ಇರುತ್ತವೆ. ಇಲ್ಲಿನ ಸಾರ್ವಜನಿಕರ ಸರ್ವೇ ಸಾಮಾನ್ಯ ವಿನೋದ ಇದು. ಇವಲ್ಲದೆ ಹುಂಜದ ಪಂದ್ಯಗಳೂ; ಮೀನಿನ ಜಗಳಗಳೂ ಸಾಮಾನ್ಯ ಜನರ ಮನರಂಜನಾ ಸಾಮಗ್ರಿಗಳಂತೆ!

ಇತಿ ನಿಮ್ಮ
ಅಮ್ಮ.

* * * * *

ಬೆಂಕಾಕ್
6 – 5 – 1968

ಮುದ್ದು ಮಕ್ಕಳೇ,

"ಪ್ರಪಂಚದ ಪೂರ್ವ 'ವೆನಿಸ್' ನಲ್ಲಿದ್ದೀರಿ. ಚೆನ್ನಾಗಿದೆಯೇ?" ಎಂದು ಕೇಳಿದ್ದೀರಿ. ಇಲ್ಲಿನ ನೀರಮೇಲಿನ ಮಾರುಕಟ್ಟೆಯನ್ನು ನೋಡಿಕೊಂಡು ಬಂದೆವು.

ಅದು 'ಮೇನಂ ಚಾವೊ ಫ್ರಾಯಾ' (Chao Pahraya) ಎಂಬ ನದಿಯಲ್ಲಿದೆ. ಬೆಳಿಗ್ಗೆ ಮನೆಬಿಟ್ಟು ಮೋಟಾರ್ 'ಬೋಟ್' ನಲ್ಲಿ ಪ್ರಯಾಣ ಮಾಡಿ, ಸುಮಾರು 3 ಮೈಲಿಯವರೆಗೆ ನೀರಿನ ಮೇಲೆ ನಡೆಯುವ ವ್ಯಾಪಾರವನ್ನು ಕಂಡು ತುಂಬಾ ಸಂತೋಷಪಟ್ಟೆವು. ರಸ್ತೆಗಳಲ್ಲಿ ವಾಹನಗಳು ಓಡಾಡುವಂತೆ ನೀರಿನ ಮೇಲೆ ವಿಧ ವಿಧವಾದ ದೋಣಿಗಳು ವಿವಿಧ ಸರಕುಗಳನ್ನೂ, ಆಹಾರ ತಿಂಡಿಗಳನ್ನೂ, ಹಣ್ಣು ಹಂಪಲುಗಳನ್ನೂ ಮಾರುವುದನ್ನು ಕಂಡೆವು. ಒಂದು ದೋಣಿಯಿಂದ ಇನ್ನೊಂದು ದೋಣಿಯೊಡನೆ ವ್ಯಾಪಾರವಾಗುವುದನ್ನು ನೋಡಿದೆವು. ದೋಣಿಯಲ್ಲಿರುವ ಗೃಹಿಣಿ ಮನೆಯ ಮುಂದೆ ನಿಂತು ತರಕಾರಿಯ ದೋಣಿಯೊಡನೆ ವ್ಯಾಪಾರ ಮಾಡುತ್ತಾಳೆ. ದೋಣಿಯ ಮೇಲೆಯೇ ಅನ್ನ ಮಾಡಿ, ಸಾರು ಕುದಿಸಿ, ಹಸಿದವರಿಗೆ ಮಾರುವ ದೃಶ್ಯ ಚೆನ್ನಾಗಿತ್ತು. ನಮ್ಮ ಮೋಟಾರ್ 'ಬೋಟ್' ಪ್ರವಾಸಿಗಳು ನೋಡತಕ್ಕ ಕೆಲವು ಜಾಗಗಳಲ್ಲಿ ನಮ್ಮನ್ನು ಇಳಿಸಿತು. ಬೆಂಕಾಕ್‌ನ ವೈಶಿಷ್ಟಪೂರ್ಣ ಆಭರಣಗಳೂ, ಕಲಾತ್ಮಕ ವಸ್ತುಗಳೂ, ಥ್ಯಾ ಸಿಲ್ಕ್ ಸರಕುಗಳೂ ಮತ್ತಿತರ ಅನೇಕ ಸ್ವಾರಸ್ಯವಾದ ವಸ್ತು ಭಂಡಾರ ನೋಡಿದೆವು. ಗುಡಿಸಲ ಕುಶಲ ಕೈಗಾರಿಕೆಗಳು, ರೇಷ್ಮೆ ನೇಯ್ಗೆ, ಬಣ್ಣಬಣ್ಣದ ಕೊಡೆಗಳನ್ನು ರಚಿಸುವುದು, ಕಂಚಿನ ಗಂಟೆಗಳನ್ನು ಮಾಡುವುದು, ಬುದ್ಧನ ವಿಗ್ರಹಗಳನ್ನು ರಚಿಸುವುದು, ಇತ್ಯಾದಿಗಳು ಅವುಗಳಲ್ಲಿ ಕೆಲವು. ಅವರ ದೇಶದ ಸಂಸ್ಕೃತಿ ಪ್ರದರ್ಶಿಸುವ ಹಲವಾರು ಸ್ಥಳಗಳು. ಒಂದು ಮಾದರಿ ಥ್ಯಾ ಮನೆಯನ್ನು ಪ್ರದರ್ಶನಕ್ಕೆ ಇಟ್ಟಿದ್ದರು. ಕೆತ್ತಿದ ಕಂಬಗಳು, ಅಂದವಾದ ಆಕಾರದ ಮೇಲ್ಛಾವಣಿ, ಬಣ್ಣಬಣ್ಣದ ನೆಲ ವಿಶೇಷಗಳು ಅಲ್ಲಿದ್ದವು. 'ವಾಟ್ ಅರೂಣ್' ಎಂಬ ದೇವಾಲಯಕ್ಕೂ ಭೇಟಿಕೊಟ್ಟೆವು. ಆ ದೇವಾಲಯ ಎತ್ತರವಾದ ನೀಲಿ, ಹಸಿರು ಮುಂತಾದ ವರ್ಣರಂಜಿತ ಅದ್ಭುತ ದೇವಾಲಯ. ಇಂತಹ ದೇವಾಲಯಗಳ ಹೆಬ್ಬಾಗಿಲಿನ ಮುಂದೆ ಅತಿ ದೊಡ್ಡ ಭೂತಾಕಾರದ ವಿಗ್ರಹಗಳಿವೆ. ಈ ವಿಗ್ರಹಗಳು ಎರಡೂ ಕೈಗಳಿಂದ ದೇಗುಲದ ಗೋಡೆಯನ್ನು ಎತ್ತಿಹಿಡಿದು ಆಧಾರವಾಗಿ ನಿಂತಂತಿದೆ. ಕೆತ್ತನೆಯ ಕೆಲಸ ವಿಚಿತ್ರ. ತುಂಬಾ ಸ್ವಾರಸ್ಯಮಯ ವಾತಾವರಣ. ಈ ದೇವಸ್ಥಾನ, ಈ ತೇಲುವ ಮಾರುಕಟ್ಟೆ ಇವೆಲ್ಲಾ ಜೀವಮಾನದಲ್ಲಿ ಒಮ್ಮೆಯಾದರೂ ಖಂಡಿತ ನೋಡಲೇ ಬೇಕಾದ ಜಗದಚ್ಚರಿಗಳು. ಅಕ್ಕಪಕ್ಕದಲ್ಲಿ ಕಂಬಗಳ ಮೇಲೆ ಕೆತ್ತಲ್ಪಟ್ಟ ಮನೆಗಳಲ್ಲಿ ಜನರ ಸಂಸಾರ. ಎಲ್ಲೆಲ್ಲೂ ಕಾಲುಜಾರುವ ಜೇಡಿಮಣ್ಣಿನ ನೆಲ. ಜನರು ಬಣ್ಣಬಣ್ಣದ, ಅದೂ ಹೂಗಳಿರುವ ಬಟ್ಟೆಯನ್ನು ಸೊಂಟಕ್ಕೆ ಸುತ್ತಿಕೊಂಡು, ಹೆಂಗಸರು ಉದ್ದ ತೋಳುಗಳಿರುವ ಅಥವಾ ತೋಳುಗಳೇ ಇಲ್ಲದ 'ಚೋಳಿ' ಗಳನ್ನು ಧರಿಸಿ, ಸೂರ್ಯನ ತೀಕ್ಷ್ಣ ತಾಪದಿಂದ ಪಾರಾಗಲು ಅಗಲವಾದ, ಬಿದಿರಿನ ಅಥವಾ ತಾಳೇಗರಿಯ 'ಹ್ಯಾಟ್ (Hat) ಗಳನ್ನು ಧರಿಸಿ ದೋಣಿಯನ್ನು ಚಲಿಸುತ್ತಾ, ವ್ಯಾಪಾರ, ಉದ್ಯೋಗ, ಮುಂತಾದ ದಿನಚರಿಯನ್ನು,

ಈ ತೇಲುಮಾರುಕಟ್ಟೆಯಲ್ಲಿ ಜರುಗಿಸುವ ದೃಶ್ಯಗಳು ಮಾನಸ ಸರೋವರದ ಮೇಲಿಂದ ತೇಲದೆ, ಅಚ್ಚಳಿಯದೆ ನಿಲ್ಲುವಂತಹುದು.

ನಮ್ಮ ದೋಣಿ ಮುಂದಕ್ಕೆ ಹಾದು ಹೋಗುತ್ತಿರುವಾಗ ಅಕ್ಕಪಕ್ಕದ ದಡಗಳಲ್ಲಿನ ಜನಜೀವನ ನೋಡಲು ತುಂಬಾ ರಸಭರಿತವಾಗಿತ್ತು. ನದಿಯ ದಡದಲ್ಲೇ ಅವರ ಮನೆಗಳು, ಹಟ್ಟಿಗಳು, ತರಕಾರಿ ತೋಟಗಳು, ಹೂದೋಟಗಳು; ಅಲ್ಲಲ್ಲಿ ದಾಸವಾಳದ ಹೂಗಳು ಅರಳಿ, ನದಿಯ ನೀರಿನೊಡನೆ ಸರಸ-ಸಲ್ಲಾಪವಾಡುವ ದೃಶ್ಯಗಳು, ಅಗಲವಾದ ಎಲೆಗಳಿರುವ ಕೆಸುವಿನ ಜಾತಿಯ ಗಿಡಗಳು, (ಅವುಗಳನ್ನು ಕಡಿದರೆ ಕೊಡೆಯ ಹಾಗೆ ದೊಡ್ಡದಾಗಿದ್ದು ಮಳೆಗಾಲದಲ್ಲಿ ಮಳೆಯಿಂದಲೂ, ಬೇಸಿಗೆಯಲ್ಲಿ ಬಿಸಿಲಿನ ತಾಪದಿಂದಲೂ ರಕ್ಷಣೆ ಕೊಡುತ್ತವಂತೆ.) ಹಕ್ಕಿಗಳ ಪಂಜರಗಳು, ಸಾಕು ಪ್ರಾಣಿಗಳು. ಇವೆಲ್ಲ ತಮ್ಮ ನಿತ್ಯಕರ್ಮಗಳನ್ನು ಆಚರಿಸುತ್ತಿರುವ ದೃಶ್ಯ, ರಮ್ಯವಾಗಿತ್ತು. ಕೆಲವು ಜನರು ಇದೇ ನೀರಿನಲ್ಲಿ ಈಜುತ್ತಿದ್ದರು. ಕೆಲವರು ಇದರಲ್ಲಿಯೇ ಕಸಮುಸುರೆ ತೊಳೆಯುತ್ತಿದ್ದರು. ಮತ್ತೆ ಕೆಲವರು ಮುಖ ತೊಳೆದು, ಹಲ್ಲುಜ್ಜಿಕೊಳ್ಳುತ್ತಿದ್ದರು. ತಿಂದ ಎಂಜಲನ್ನು ಉಗುಳುವುದು, ಸ್ನಾನ ಮಾಡಲು ಕೂಡ ಈ ನೀರೇ! ಇದನ್ನು ಅಡಿಗೆ ಮಾಡಲು ಕೂಡ ಉಪಯೋಗಿಸುತ್ತಿದ್ದರು! ಇಂತಹ ಅನಾರೋಗ್ಯಕಾರೀ ಸ್ಥಿತಿಯನ್ನು ಕಂಡು ಬೆಚ್ಚಿದೆವು. ಸಪ್ತನರಕದಂತಿರುವ ಈ ನೀರನ್ನು ಅಡಿಗೆಗೂ ಉಪಯೋಗಿಸುವ ಇವರಿಗೆ ರೋಗ-ರುಜಿನಗಳು ಬಾರದೆ ಹೇಗೆ ಇರುವುದು.? ಎಂದು ಆಶ್ಚರ್ಯವಾಯಿತು. ಬಹುಶಃ ಅಹೋರಾತ್ರಿ ಇದನ್ನು ಕುಡಿದು ಅವರ ಮೈಯೆಲ್ಲವೂ ಗೊಡ್ಡಾಗಿ ಹೋಗಿರಬಹುದು. ಥ್ಯಾ ಜನರು ನೋಡಲು ಎಷ್ಟು ಸುಂದರ ಜನತೆ! ಅವರ ಮೈ ಚರ್ಮ ಎಷ್ಟೊಂದು ಮೃದು! ಎಷ್ಟು ಶುಭ್ರ! ಏನು ಹೊಳಪು!! ಅದು ಹೇಗೆ ಸಾಧ್ಯವೋ ತಿಳಿಯದು. ಎಲ್ಲಾ ದೇವರ ವಿಚಿತ್ರ ಸೃಷ್ಟಿ!

ಮೊನ್ನೆ ಟಿ. ವಿ.ಯಲ್ಲಿ ಪಿಚ್ಛಾಯಿ ಎಂಬ ಥ್ಯಾ ಪುರುಷನೊಬ್ಬನು ನಮ್ಮ ನೃತ್ಯ ಕಾರ್ಯಕ್ರಮವನ್ನು ಚಿತ್ರಿಸಿದನು. ಸುಮಾರು ಒಂದು ಗಂಟೆ ಅವಧಿಯ ಈ ಕಾರ್ಯಕ್ರಮದಲ್ಲಿ ಭರತ ನಾಟ್ಯದ ಆರಂಭ, ವಿವರಣೆ, ಮುಂತಾದವು ಇದ್ದು, ಕೊನೆಗೆ 3-4 ನೃತ್ಯ ಜೋಡಣೆಗಳೂ ಇದ್ದವು. ಈ ಕಾರ್ಯಕ್ರಮವನ್ನು ಆಗಿಂದಾಗ್ಯೆ ಬಿತ್ತರಿಸುವ ಪ್ರಯತ್ನವಿದೆಯಂತೆ! ಈ ಕಾರ್ಯಕ್ರಮಕ್ಕೆ ನಮಗೆ ಸಾಕಷ್ಟು ಹಣ ಕೊಟ್ಟು ಸಂತೋಷಪಡಿಸಿದರು. ನಿಮಗಾಗಿ ಸಿಂಗಾಪೂರ್‌ನಲ್ಲಿ ಬೇಕಾದುದನ್ನು ಕೊಂಡುಕೊಳ್ಳಲು ಅನುಕೂಲವಾಯಿತು.

ಪ್ರತಿದಿನ ನಮಗೆ ಇಲ್ಲಿನ ಸ್ನೇಹಿತರಲ್ಲಿ ಔತಣ ಸತ್ಕಾರಗಳಾಗುತ್ತಿವೆ. ಅಡಿಗೆ ಮಾಡಿ ಅತಿಥಿ ಸತ್ಕಾರ ಮಾಡುವುದು ಇಲ್ಲಿನ ಭಾರತೀಯರ ಪ್ರಮುಖ ವೃತ್ತಿ. ವಿವಿಧ ಆಹಾರ ತಿಂಡಿಗಳನ್ನು ಮಾಡಿಸಿ ಬಡಿಸುತ್ತಾರೆ. ಒಬ್ಬರ ಮನೆಯಲ್ಲಿ 15 ಪದಾರ್ಥ

ಗಳಿದ್ದರೆ, ಇನ್ನೊಬ್ಬರಲ್ಲಿ 20, ಮತ್ತೊಬ್ಬರಲ್ಲಿ 25, ಹೀಗೆ ಪೈಪೋಟಿಯಿಂದ ತಿನ್ನಿಸುತ್ತಾರೆ. ಈ ಸಂದರ್ಭಗಳಲ್ಲಿ ಈ ಭಾರತೀಯ ಗುಂಪನ್ನು ಮತ್ತೆ ಮತ್ತೆ ಭೇಟಿಯಾಗುತ್ತೇವೆ. ಥ್ಯಾ ಜನರೂ ಭಾರತೀಯರೂ ಸೇರಿರುವ ಕೂಟಗಳೇ ಇಲ್ಲ. ಆಹಾರ ಭಿನ್ನತೆಯಿಂದಾಗಿರಬಹುದು.

ಅಂತೂ ನಾವಿಲ್ಲಿ ಸುಖವಾಗಿದ್ದೇವೆ-

ಇತಿ ನಿಮ್ಮ

ಅಮ್ಮ .

*　*　*　*　*　*

ಬೆಂಕಾಕ್,

9 – 5 – 1968

ಮುದ್ದು ಮಕ್ಕಳೇ,

ನಿನ್ನೆ 'ನೇಶನಲ್ ಥಿಯೇಟರಿ'ನಲ್ಲಿ ನಮ್ಮ ನೃತ್ಯ ಪ್ರದರ್ಶನ ಅತ್ಯಂತ ಯಶಸ್ವಿಯಾಯಿತು. ರಂಗ ಮಂದಿರ ಕಿಕ್ಕಿರಿದು ತುಂಬಿತ್ತು. ನಿನ್ನೆ ಬೆಳಿಗ್ಗೆ ನಾವಿಬ್ಬರೂ ಅಲ್ಲಿಗೆ ಹೋಗಿ, ಆ ವಿಶಾಲವಾದ ರಂಗಸ್ಥಳವನ್ನು ಅಕ್ಕಪಕ್ಕದ ಪರದೆಗಳನ್ನು ಒಳಗೆ ತಳ್ಳಿ ಹಿಂದಿನ ಪರದೆ ಮುಂದಕ್ಕೆ ಹಾಕಿ, ನಮ್ಮಿಬ್ಬರಿಗಾಗಿ ಚಿಕ್ಕದು ಮಾಡಿದ್ದೆವು ! ಧ್ವನಿವರ್ಧಕದ ಏರ್ಪಾಡನ್ನು ಸರಿಪಡಿಸಿದ್ದೆವು. ನಮ್ಮ ಟೇಪ್ ರೆಕಾರ್ಡರನ್ನು ಉಪಯೋಗಿಸಲು ಅಲ್ಲಿನ ತಾಂತ್ರಿಕ ಸಿಬ್ಬಂದಿಗೆ ಸೂಕ್ತ ಸೂಚನೆಗಳನ್ನು ಕೊಟ್ಟೆವು. ಎಲ್ಲವೂ ಸಿದ್ಧಪಡಿಸಿದೆವು. ಆದರೂ ಆ ದೊಡ್ಡ ರಂಗಸ್ಥಳವನ್ನು ಹೇಗೆ ತುಂಬುವೆವೋ ಎಂಬ ಅಧೈರ್ಯವಾಗಿತ್ತು. ಆದರೆ ಪ್ರದರ್ಶನ ಮುಗಿದ ಮೇಲೆ, ಪ್ರೇಕ್ಷಕರು ನಮಗೆ, ನಟರು ನಾವಿಬ್ಬರೇ ಆದರೂ ರಂಗಸ್ಥಳವನ್ನು ತುಂಬಿದ್ದೆವು ಎಂಬುದಾಗಿ ಆಶ್ಚರ್ಯದಿಂದ ತಿಳಿಸಿದರು.

ಪ್ರದರ್ಶನದ ಕಾರ್ಯಕ್ರಮವನ್ನು ತುಂಬಾ ಉತ್ಸಾಹದಿಂದ ನೆರವೇರಿಸಿದೆವು. ಅಂದು ಸೇರಿದ್ದ ಜನಸಮೂಹದ ಕಾತುರತೆ, ಆತುರತೆ ಆಸಕ್ತಿ ನಮಗೆ ಹುರಿದುಂಬಿಸುತ್ತಿತ್ತು. ಪ್ರತಿಯೊಂದು ನೃತ್ಯದ ಪರಿಚಯವನ್ನು ಕೆಲವು ಮಾತುಗಳಿಂದ ಮುಂದಾಗಿ ನಾನೂ, ಪತಿಯವರೂ ವಿವರಿಸಿದ ಕಾರಣ, ನೃತ್ಯಗಳನ್ನು ಜನರಿಗೆ ಅರ್ಥವಾಗುವಂತೆ ನಟಿಸಲು ಅನುಕೂಲವಾಯಿತು. ಪ್ರದರ್ಶನವಾದ ಮೇಲೆ ಸಜ್ಜಿಕಾಗೃಹಕ್ಕೆ ಬಂದ ಜನಕ್ಕೆ ಲೆಕ್ಕವೇ ಇಲ್ಲ. ಅವರು ನಮ್ಮ ಕಲೆಯನ್ನು ಮೆಚ್ಚಿದುದು ಅತ್ಯಾದರದಿಂದ, ಕೃತಜ್ಞತೆಯಿಂದ. ಅಂತಹ ಕಲೆಯನ್ನು ನೋಡಲು ಅವರಿಗೆ

ಸಿಗುವ ಅವಕಾಶಗಳೂ ಕಡಿಮೆ. ಆದುದರಿಂದಲೇ ಅವರಿಗೆ ಎಣೆಯಿಲ್ಲದ, ಎಲ್ಲಿಲ್ಲದ ಸಂತೋಷ. ನಮಗೆ ಆತ್ಮತೃಪ್ತಿ ತಂದಿತು ಅಂದಿನ ಆ ನೃತ್ಯ ಪ್ರದರ್ಶನ.

ಇಂದು ಬೆಳಿಗ್ಗೆ ಏಳುತ್ತಲೇ ಪತಿಯವರು ಮೌನರಾಗಿದ್ದರು. ಎಂದಿನ ಸರಸ ಮಾತುಕತೆ, ಚಟುವಟಿಕೆ ಇಲ್ಲ. 'ತಲೆನೋವು' ಎಂದರು. ಶಮನ ಪರಿಹಾರಕ ಮಾತ್ರೆ ನುಂಗಿ, ಸಿಂಗಾಪೂರದ ಪ್ರವಾಸಕ್ಕೆ ಟಿಕೇಟು ಪಡೆಯಲು ಹೋದೆವು. ನಾಳೆ ಪ್ರಯಾಣ. ಮಧ್ಯಾಹ್ನದ ಹೊತ್ತಿಗೆ ಸ್ವಲ್ಪ ಜ್ವರ ಕಂಡುಬಂದಿತು. ಪ್ರದರ್ಶನದ ಆಯಾಸ, ಪ್ರಭಾವ ಇರಬಹುದು ಎಂದೆವು. ಆದರೆ ಪ್ರದರ್ಶನ ಶ್ರಮಪಡುವಂತಹುದಲ್ಲ – ಎಂದಿನಂತೆಯೇ ಇತ್ತು. ಅಂತೂ ಸಾಯಂಕಾಲದ ಒಳಗೇ ಸರಿಹೋಗಬಹುದು ಎಂಬ ಆಸೆ! ಆದರೆ ಸಾಯಂಕಾಲ, ಈ ಕಾಗದ ಬರೆಯುತ್ತಿರುವಾಗಲೂ ಪತಿಯವರು ಜ್ವರದ ತೀವ್ರತೆಯಿಂದಾಗಿ ಮಲಗಿದ್ದಾರೆ. ನಾಳೆಯೂ ಹೀಗೇ ಜ್ವರ ಮುಂದುವರಿದರೆ ಸಿಂಗಾಪುರಕ್ಕೆ ಖಂಡಿತ ಹೋಗಬಾರದು ಎಂದು ಹಠ ತೊಟ್ಟಿದ್ದಾಳೆ ನಮ್ಮ ಆತಿಥ್ಯಗಾರ್ತಿ ಸುಶೀಲಾ! 'ತಂತಿ, ಅಥವಾ ದೂರವಾಣಿಯ ಮೂಲಕ ಅವರಿಗೆ ತಿಳಿಸೋಣ' ಎಂದು ಸಮಾಧಾನ ಪಡಿಸುತ್ತಿದ್ದಾಳೆ. ಪತಿಯವರ ಜ್ವರದಿಂದಾಗಿ ಎಲ್ಲವೂ ಸಪ್ಪೆಯಾಗಿದೆ.

ದೇವರ ಕೃಪೆಯಿಂದ ಬೇಗನೆ ವಾಸಿಯಾಗಿ, ಮುಂದಿನ ಕಾರ್ಯಕಲಾಪಗಳನ್ನು ಯಶಸ್ವಿಯಾಗಿ ನೆರವೇರಿಸಿ ಸುಖರೂಪವಾಗಿ ಮನೆ ಸೇರುವಂತೆ ಆಗಲಿ ಎಂದು ಪ್ರಾರ್ಥಿಸುತ್ತಿದ್ದೇನೆ!

ಇತಿ ನಿಮ್ಮ

ಅಮ್ಮ.

* * * * * *

ಬೆಂಕಾಕ್

15 – 10 – 1968

ಮುದ್ದು ಮಕ್ಕಳೇ,

ನಿನ್ನೆ ರಾತ್ರಿಯೆಲ್ಲಾ ನಿಮ್ಮ ತಂದೆಗೆ ಜ್ವರ! ಇಂದು ಬೆಳಿಗ್ಗೆ ' ದಿ ಬೇಂಕಾಕ್ ಪೋಸ್ಟ್ ' (The Bangkok Post) ದಿನಪತ್ರಿಕೆ ತೆರೆದರೆ ನಮ್ಮ ನೃತ್ಯ ಪ್ರದರ್ಶನದ ದೊಡ್ಡದೊಂದು ವಿಮರ್ಶೆ ಪ್ರಕಟವಾಗಿದೆ. ವಿಮರ್ಶಕರ 'ಕುಲ-ಗೋತ್ರ' ತಿಳಿಸಿ ಅವರ ಫೋಟೋ ನೋಡಿದ ಮೇಲೆ ಆ ಮಹಾನುಭಾವರು ನಮ್ಮ ನೃತ್ಯ ಪ್ರದರ್ಶನವಾದ ಮೇಲೆ ಸಜ್ಜಿಕಾ ಗೃಹಕ್ಕೆ ಬಂದು ನಮ್ಮನ್ನು ಭೇಟಿಮಾಡಿ ಶ್ಲಾಘಿಸಿರುವರೆಂದು ತಿಳಿಯಿತು. ಅಂದು ನಮಗೆ ಅವರ ಆ ಹಿರಿಯ ವ್ಯಕ್ತಿತ್ವ ತಿಳಿದಿರಲಿಲ್ಲ. ಅವರು

ನಮ್ಮ ಫೋಟೋ ಒಂದನ್ನು ಕೇಳಿದ್ದರು. ನಮ್ಮ ವೇಷಭೂಷಣಗಳ ಖಜಾನೆಯಲ್ಲಿ ಯಾವಾಗಲೂ ನಮ್ಮ ಫೋಟೋ ಮತ್ತು ಪ್ರಚಾರ ಸಾಧನಗಳು ಇದ್ದೇ ಇರುವ ಕಾರಣ ಒಡನೆಯೇ ಪತಿಯವರು ನಮ್ಮ ಅಂದವಾದ ನೃತ್ಯಭಂಗಿಯ ಫೋಟೋ ಒಂದನ್ನು ಅವರಿಗೆ ಕೊಟ್ಟರು. ಅದಕ್ಕೆ ನಾನು ಆಗ ಅಸಮಾಧಾನಪಟ್ಟಿದ್ದೆ. 'ದಾರಿ ಹೋಕರಿಗೆಲ್ಲಾ ನಮ್ಮ ಒಳ್ಳೆಯ ಫೋಟೋ ಕೊಟ್ಟರೆ ನಮ್ಮ ಹತ್ತಿರ ಮುಂದಿನ ಕಾರ್ಯಕ್ರಮಗಳಿಗೆ ಫೋಟೋ ಇಲ್ಲದೆ ತೊಂದರೆಯಲ್ಲವೇ?" ಎಂದಿದ್ದೆ....ಅದಕ್ಕೆ ಅವರು — "ಎಷ್ಟಾದರೂ ಹೆಣ್ಣು ಬುದ್ಧಿಯಲ್ಲವೇ? ಹೋಗಲಿ ಬಿಡು! ಮಿಂಚಿದ ಕಾರ್ಯಕ್ಕೆ ಚಿಂತಿಸಿ ಫಲವಿಲ್ಲ" ಎಂದು ವಾಗ್ವಾದವನ್ನು ಕೊನೆಗಾಣಿಸಿದ್ದರು. ಇಂದು ಪತ್ರಿಕೆಯಲ್ಲಿ ಅವರ ಫೋಟೋ ನೋಡಿದಾಗ, ಅವರು 'ದಾರಿಹೋಕ' ರಾಗಿರಲಿಲ್ಲ! ಅವರು ಹೊಸ ದೆಹಲಿಯಲ್ಲಿ ಭಾರತೀಯ ನೃತ್ಯ ಕಲಿತು ಬಂದ ಅಮೇರಿಕನ್ನರು. ಆಮೇಲೆ ಅದನ್ನು ನ್ಯೂಯಾರ್ಕಿನಲ್ಲಿ ಹೇಳಿಕೊಟ್ಟವರು! ಆಧುನಿಕ ಬ್ಯಾಲೆಯ ವೃತ್ತಿ ನಟ! ಮಾರ್ತಾ ಗ್ರೇಹೇಂ, ಕಾರ್ಮೆನ್ ದೆ ಲೆವೆಲ್ಲಾ (Carmen De Levella) ಜೋಫ್ರಿ ಹೋಲ್ಡರ್ (Geoffrey Holder) ಮತ್ತು ಜೋರ್ಜ್ ಬೆಲೆಂಶಾನ್ (George Bellachine) ಇವರ ನೃತ್ಯ ಪಂಗಡಗಳಲ್ಲಿ ಭಾಗವಹಿಸಿದರು! ಮೆಟ್ರೋಪಾಲಿಟನ್ ಒಪೆರಾದವರೊಡನೆ ಏಕಾಂಗಿಯಾಗಿ ನೃತ್ಯ ಮಾಡಿರುವ ಯೋಗ್ಯ ಕಲಾವಿದ ಶ್ರೇಷ್ಠರು ಇವರು. ಈಗ ಬೆಂಕಾಕ್‌ನಲ್ಲಿ ಜುಲೈ 2 ರಂದು ಜರುಗಲಿರುವ ಪ್ರಸಿದ್ಧ "ಕಾರ್ಮಿನಾ ಬುರಾನ" ಬ್ಯಾಲೆಯ ನೃತ್ಯ ಜೋಡಣೆಗಾಗಿ ನಾಟ್ಯ ಸಂಯೋಜಕರಾಗಿ ಬಂದಿದ್ದಾರೆ. ಪಾಶ್ಚಾತ್ಯ ಹಾಗೂ ಭಾರತೀಯ ನೃತ್ಯಕಲೆಯ ಶಾಸ್ತ್ರೀಯ ಜ್ಞಾನ ಭಂಡಾರದ ಈ ಅದ್ಭುತ ವ್ಯಕ್ತಿ ನಮ್ಮ ನೃತ್ಯವನ್ನು ಕೂಲಂಕುಶ ವಾಗಿ ವಿಮರ್ಶಿಸಿ ಅಸಾಮಾನ್ಯ ಅಭಿನಂದನೆಗಳನ್ನೂ. ಹೊಗಳಿಕೆಯನ್ನೂ ಕೊಟ್ಟಿರುವು ದನ್ನು ನೋಡಿ ಹೃದಯ ತುಂಬಿ ಬಂದಿತು! ಪಾಪ! ಪತಿಯವರಿಗೆ ಅದನ್ನು ಓದಲೂ ಆಗಲಿಲ್ಲ. ವಿಪರೀತ ಜ್ವರ! ನಾನು ಹತ್ತಿರ ಕುಳಿತು ಆ ವಿಮರ್ಶೆಯ ಪ್ರತಿಯೊಂದು ವಾಕ್ಯವನ್ನೂ ಸಾವಧಾನವಾಗಿ, ಸ್ಪಷ್ಟವಾಗಿ ಅವರಿಗೆ ಓದಿ ಹೇಳಿದ ಮೇಲೆ, ನೋವು ತುಂಬಿದ್ದ ಆ ಮುಖದ ಮೇಲೂ ನಸುನಗೆ ಮೂಡಿಬಂದುದನ್ನು ಕಂಡು ಎಷ್ಟು ಆನಂದಪಟ್ಟೆ!

ಆ ವಿಮರ್ಶೆಯ ಕೆಲ ಭಾಗ ಹೀಗಿತ್ತು: "ಹಸಿವಿನಿಂದ ಬಳಲಿದವನಿಗೆ ಮೃಷ್ಟಾನ್ನ ಭೋಜನದಂತೆ! ಬಾಯಾರಿದ ಕಲಾಜೀವಕ್ಕೆ ಅಮೃತ ಸೇವನೆಯಾಯಿತು ಯಾವುದೋ ಅದೃಷ್ಟದಿಂದ. ಉತ್ತಮ ಅಂಶಗಳನ್ನು ಕೆದಕಿ ನೋಡುವ ಜಾಣ್ಮೆ ಯನ್ನು ತೋರ್ಪಡಿಸಲು ಕೃಷ್ಣ ಮತ್ತು ದೇವಿಯರ ಭಾಷಣದಲ್ಲಿ ಅವಕಾಶವೇ ಇರ ಲಿಲ್ಲ. ಅಧ್ಯಯನ ಶೀಲತೆಯ ದೃಷ್ಟಿಯಿಂದ ಕೂಡ ಪೂರ್ಣ ಹೊಗಳಿಕೆಗೆ ಯೋಗ್ಯ ವಾಗಿತ್ತು. ತರಗತಿಗಳಲ್ಲಿ ತಯಾರಾಗುವ ಅಧ್ಯಯನಾ ತಥ್ಯಕ್ಕಿಂತ, ಉದಾಹರ

ಣಾರ್ಥವಾದ ಉಪನ್ಯಾಸ–ನೃತ್ಯ ಪ್ರದರ್ಶನ ಹೆಚ್ಚು ಪರಿಣಾಮಕಾರಿಯಾಗಬಲ್ಲದು. ಅಂತಹುದೊಂದು ಸವಾಲನ್ನು ಈ ದಂಪತಿಗಳು ಧೈರ್ಯವಾಗಿ ಎದುರಿಸಿದರು. ಪಾಶ್ಚಾತ್ಯ ನಾಗರೀಕತೆಗಿಂತ ನೂರಾರು ವರ್ಷ ಪ್ರಾಚೀನವಾದ ಸಂಸ್ಕೃತಿಯ ಚಾರಿತ್ರಿಕ ಹಾಗೂ ಸಾಮೂಹಿಕ ಕುಲಸಂಬಂಧವಾದ ಭಾವನೆಗಳನ್ನು ಎರಡು ಗಂಟೆಗಳಿಗಿಂತ ಕಡಿಮೆ ಕಾಲದಲ್ಲಿ, ಸಾಂಕೇತಿಕವಾಗಿ ಅಭಿವ್ಯಕ್ತಿಗೊಳಿಸಿದರು. .... ತಿಲ್ಲಾನದಲ್ಲಿಯಂತೂ ಕೃಷ್ಣ ಮತ್ತು ದೇವಿಯರ ನೃತ್ಯ ಲಾಲಿತ್ಯಪೂರ್ಣ ಮತ್ತು ಪಾಂಡಿತ್ಯಯುಕ್ತವಾಗಿತ್ತು. ಸೃಷ್ಟಿಯ ನಾದ ವಾದ್ಯದಂತೆ, ಲಿಪಿ ಸಂಬದ್ಧ ಉಪಕರಣದಂತೆ, ಮಾನವನನ್ನು ಒಂದು ಜೀವಂತ ಕೃತಿಯನ್ನಾಗಿ ತೋರ್ಪಡಿಸುವ, ಮಾರ್ಪಡಿಸುವ ಮಾಯೆ ಭರತನಾಟ್ಯ........ಇಂತಹ ಒಂದು ಪ್ರಚಂಡ ಸತ್ಯದ ಜ್ವಲಂತ ಜ್ವಾಲೆಯಾಗಿ, ಪ್ರಜ್ವಲಿತವಾಗಿ ಕೃಷ್ಣ ಮತ್ತು ದೇವಿಯರ ಭರತನಾಟ್ಯದ ಲಾಸ್ಯಶ್ರೀ ಮನೆ ಮಾಡಿತು.........ಈ ಸಂಜೆಯ ಮನರಂಜನೆಯಂತೂ ಮನೆಯಲ್ಲಿ ತಪ್ಪದೆ ಅಭ್ಯಸಿಸಿ ಹೊರಗೆ ಬಂದ ವೃತ್ತಿ ಕಲಾವಿದರ ಶುದ್ಧ ಅಪರಂಜಿಯ ಕಾಣಿಕೆ! .... ಸಾಂಸ್ಕೃತಿಕ ಮರುಭೂಮಿಯಲ್ಲಿನ ಪಚ್ಚೆಹಸಿರು, ಒಂದು ಶಿಕ್ಷಣ....ಒಂದು ಉತ್ಸವ! !....ಪಾಶ್ಚಾತ್ಯ ಕಲಾ ಸಂಸ್ಕೃತಿಯಲ್ಲಿನ ನನಗಂತೂ, ಕಲಾವಿದನಾಗಿ ಇದನ್ನು ವೀಕ್ಷಿಸಿದಾಗ, ಇದು ಒಂದು ಅತ್ಯುತ್ತಮ ಮಹತ್ವ ವಿಚಾರಪೂರಿತ ವ್ಯಾಖ್ಯಾನ; ಭಾರತೀಯ ಶಾಸ್ತ್ರೀಯ ನೃತ್ಯಕಲೆಯಲ್ಲಿ ಇಂತಹ ಉನ್ನತ ಅಂತಸ್ತು ನಾನು ಕಂಡದ್ದು ಇದೇ ಮೊದಲು. ಕೃಷ್ಣ ಮತ್ತು ದೇವಿಯರಿಗೇ ಅಲ್ಲದೆ ಈ ಮಾಯೆಯನ್ನು ಸತ್ಯಗೊಳಿಸಲು ನೆರವು ನೀಡಿದ ಎಲ್ಲ ದೇವಾಧಿದೇವತೆಗಳಿಗೂ ಹಾರ್ದಿಕ ಪುಷ್ಪಾರ್ಪಣೆ!"

'ಬೆಂಕಾಕ್ ವರ್ಲ್ಡ್' (Bangkok World) ಎಂಬ ಪತ್ರಿಕೆಯಲ್ಲಿಯೂ 'ರಾವ್ ಮತ್ತು ದೇವಿ' ಯರ ನೃತ್ಯದಲ್ಲಿ ಶಾಸ್ತ್ರೀಯ ಶಾಲಿನ್ಯತೆ' ಎಂಬ ಶಿರೋನಾಮದಡಿ ಈ ವಿಮರ್ಶೆ ಇತ್ತು—

"........ಶಾಸ್ತ್ರೀಯ ಭಾರತೀಯ ನೃತ್ಯಕಲೆಯನ್ನು ಬಹಳ ವರ್ಷಗಳಿಂದಲೂ ಜಯಶೀಲರಾಗಿ ಪ್ರದರ್ಶಿಸುತ್ತಾ ಕೃಷ್ಣರಾವ್ ಮತ್ತು ದೇವಿಯವರು ಬಂದಿದ್ದಾರೆ. ಇವರ ನೃತ್ಯ ಪ್ರದರ್ಶನ ಕಾರ್ಯಕ್ರಮದ ಮೊದಲ ಪುಷ್ಪವಾಗಿ ಅರ್ಪಿಸಿದ 'ಗಣೇಶ ವಂದನಾ' ನಾಟ್ಯವಲ್ಲರಿ ತನ್ನ ನಿರ್ಮಲತೆಯಲ್ಲಿ ಅದ್ವಿತೀಯವಾಗಿದ್ದು, ಭಾವನೆಯ ಅಭಿವ್ಯಕ್ತಿಯಲ್ಲಿ ದಿವ್ಯವಾಗಿತ್ತು........ಭಾರತೀಯ ಸಂಸ್ಕೃತಿಯ ಉಚ್ಚದರ್ಜೆಯ ನೃತ್ಯಗಾತಿಯಾಗಿ ಚಂದ್ರಭಾಗಾದೇವಿ ನನಗೆ ತೋರಿದರು. ನೃತ್ಯಕ್ಕೆ ಮುಂಚೆ ಕೊಟ್ಟ ವಿವರಣೆ ಸೂಕ್ತವೂ, ಸಮಂಜಸವೂ ಆಗಿದ್ದಿತು. ಇಂತಹ ಒಂದು ಸೊಬಗಿನ ಕಾರ್ಯಕ್ರಮವನ್ನು ಸಾಧ್ಯಮಾಡಿದ ಥ್ಯಾ–ಭಾರತ ಸಾಂಸ್ಕೃತಿಕ ಸಂಘಕ್ಕೆ ನಮ್ಮ ಅಭಿನಂದನೆಗಳು."

—ಎಂತಹ ಅದ್ಭುತ ವಿಮರ್ಶೆ ! ಈ ವಿಮರ್ಶೆಗಳನ್ನು ಕೇಳಿ ಪತಿಯವರ ಜ್ವರ ಮಾಯವಾಗಬೇಕಿತ್ತು. ಆದರೆ ಅದು 'ಏಶಿಯನ್ ಫ್ಲೂ' ಎಂದು ವೈದ್ಯರ ವರದಿಯಾಯಿತು. ಇನ್ನೂ ಎರಡು ದಿನ ಜ್ವರವಿರಬಹುದು. ಸಿಂಗಪುರದ ಪ್ರಯಾಣ ಮುಂದೂಡಲೇ ಬೇಕು ಎಂದರು. ಥ್ಯಾ ಅಂತರರಾಷ್ಟ್ರೀಯ ವಿಮಾನದ (Thai International) ಟಿಕೇಟನ್ನು ರದ್ದು ಮಾಡಿದ್ದೇವೆ. ಜ್ವರ ನಿಂತೊಡನೆ ಬರುವೆವೆಂದು ಸಿಂಗಾಪೂರದವರಿಗೆ ತಿಳಿಸಿ ಆಯಿತು.

ಬೇಗನೇ ಜ್ವರ ವಾಸಿ ಆಗಲಿ ಎಂದು ದೇವರಿಗೆ ಮೊರೆಯಿಡುತ್ತಿದ್ದೇನೆ.

ಇತಿ ನಿಮ್ಮ
ಅಮ್ಮ.

* * * * * "

ಬೆಂಕಾಕ್
11 – 5 – 1968

ಮುದ್ದು ಮಕ್ಕಳೇ,

ಇಂದು ಬೆಳಿಗ್ಗೆ ಪತಿಯವರ ಜ್ವರ ಕಡಿಮೆಯಾಗಿದೆಯಾದರೂ ಪೂರ್ತಿ ಬಿಟ್ಟಿಲ್ಲ. ಸಿಂಗಾಪೂರಿನ 'ಇಂಡಿಯನ್ ಫೈನ್ ಆರ್ಟ್ಸ್ ಸೊಸಾಯಿಟಿ' ಯ ವ್ಯವಸ್ಥಾಪಕರಿಂದ ಕರೆಯ ಮೇಲೆ ಕರೆ ಬರುತ್ತಿದೆ. 14ನೆಯ ತಾರೀಕಿಗೆ ನಮ್ಮ ನೃತ್ಯ ಪ್ರದರ್ಶನವನ್ನು ಏರ್ಪಡಿಸಿ ಟಿಕೇಟುಗಳನ್ನು ಮಾರಲು ಆರಂಭಿಸಿದ್ದಾರಂತೆ. ಜಾಹೀರಾತುಗಳನ್ನು ಪ್ರಕಟಿಸಿದ್ದಾರಂತೆ. ನಮಗಾಗಿ ಸ್ವಾಗತ ಸಮಾರಂಭವನ್ನು ವಿಜೃಂಭಣೆಯಿಂದ ಇಂದು ರಾತ್ರಿ ಏರ್ಪಡಿಸಿದ್ದಾರಂತೆ. 13ನೆಯ ತಾರೀಕಿನ ನಮ್ಮ ನೃತ್ಯ ಉಪನ್ಯಾಸಕ್ಕಾಗಿ ಜನರು ಕಾತುರತೆಯಿಂದ ಎದುರು ನೋಡುತ್ತಿದ್ದಾರಂತೆ ! ! !........ ಎಂತಹ ಸಂದಿಗ್ಧ ಸಮಯ !

ಜ್ವರ ಅಡಗಿಸುವ ಗುಳಿಗೆ ನುಂಗಿ ಪ್ರಯಾಣ ಮಾಡಬಹುದು........ಮಾಡಲೇ ಬೇಕು ಎಂದು ಪತಿಯವರು ನಿರ್ಧಾರ ಮಾಡಿದ್ದಾರೆ. ಥ್ಯಾಲೇಂಡಿನಲ್ಲಿ 15 ದಿನ ಇರಬೇಕೆಂದು ಬಂದ ನಾವು ಮೂರು ವಾರಗಳ ಕಾಲ ಇರಬೇಕಾಯಿತು.

ಇಂದು ಸಂಜೆಯ 'ಥ್ಯಾ ಇಂಟರ್ ನ್ಯಾಷನಲ್ ಏಯರ್‌ವೇಸ್' – (ಥಾಯ್ ಅಂತರರಾಷ್ಟ್ರೀಯ ಗಗನಯಾನ) ದಲ್ಲಿ ಸಿಂಗಾಪೂರಕ್ಕೆ ಹಾರಲಿದ್ದೇವೆ.

ಅಲ್ಲಿಂದ ಬರೆಯುತ್ತೇನೆ........

ಇತಿ ನಿಮ್ಮ
ಅಮ್ಮ.

ಥ್ಯಾಲೆಂಡ್‌ನ
ಬೆಂಕಾಕ್‌ನಿಂದ
ಸಿಂಗಾಪೂರಕ್ಕೆ

–ಭಾವನಾ ಲಹರಿ – ಮೇಲಿಂದ ಮೇಲೆ ಮನಸ್ಸಿನಲ್ಲಿ ಅಲೆಅಲೆಯಾಗಿ ಬರುತ್ತಿದ್ದ ಬಹುಮುಖ ವಿಚಾರಗಳ ವಾಹಿನಿ.

ಬೇಂಕಾಕ್ ವಿಮಾನ ನಿಲ್ದಾಣ – ಥ್ಯಾಲೆಂಡ್ ನಾಣ್ಯನಾದ 'ಬಾಟ್' (Baht) ಗಳನ್ನು ಸಿಂಗಾಪುರ ಡಾಲರುಗಳಿಗೆ ಬದಲಾಯಿಸಿದೆವು. ಹೆಚ್ಚಿನ ಭಾರದ ಸಾಮಾನು ಗಳಿಗೆ ಹಣ ಕೊಡದೆ ಪ್ರಯಾಣ ಮಾಡಲು ನಮ್ಮ ಅತಿಥೇಯರು ಸಹಾಯ ನೀಡಿದರು. ಆಕಾಶದಲ್ಲಿ ಮೋಡ ಕವಿದು ಒಡನೆಯೇ ಮಳೆ ಆರಂಭವಾಗಿ, ಕೊನೆಗೆ ವಿಮಾನವನ್ನು ಹತ್ತುವಾಗ ಭೋರ್ಗರೆಯುತ್ತಿದ್ದ ಭಾರಿ ಮಳೆ ! ಕೊಡೆಗಳನ್ನು ಹಿಡಿದು, ವಿಮಾನ ಸೇರುವ ಬಸ್ಸು ಹತ್ತುವಾಗ, ನಮ್ಮ ಸರಂಜಾಮುಗಳನ್ನು ಹೊತ್ತು ತಂದು, ಕಣ್ಣೀರಿಟ್ಟು, ಅಪ್ಪಿ ನಮ್ಮನ್ನು ಬೀಳ್ಕೊಟ್ಟು ಸುಶೀಲಾ ನನ್ನ ಮನಃಪಟಲದ ಮೇಲೆ ಮರೆಯಲಾಗದ ಚಿತ್ರ ವಾಗಿದ್ದಾಳೆ . ಪತಿಯವರಿಗೋ ಸಣ್ಣ ಜ್ವರ ಗಾಳಿ, ಮಳೆಗೆ ಮೈ ಒಡ್ಡುತ್ತಿದ್ದೇವಲ್ಲಾ ಎಂಬ ದಿಗಿಲು ; ಅವರ ಸಪ್ಪೆ ಮುಖ, ಸುಸ್ತು ನೋಡಿ, ನಾವಿನ್ನು ಸಿಂಗಾಪುರವನ್ನು ತಲುಪುವುದಾದರೂ ಹೇಗೆ ಎಂಬ ಹೆದರಿಕೆಯಿಂದ ಕಂಗಾ ಲಾದುದು. ಥ್ಾ ಅಂತರರಾಷ್ಟ್ರೀಯ ಗಗನಯಾನದ ಕೆರೆವೆಲ್ ವಿಮಾನ ಹತ್ತಿದೆವು. ಪತಿಯವರಿಗೆ ಸಾಮಾನು ಸರಂಜಾಮುಗಳನ್ನು ಕೈಯ್ಯಿಂದ ಎತ್ತಲೂ ಸಾಕಷ್ಟು ಶಕ್ತಿ ಇರಲಿಲ್ಲ. ಅವರಿಗೆ ಸಹಾಯ ಮಾಡಲು ನನ್ನ ಕೈಯ್ಯಲ್ಲಿ ಸಾಧ್ಯವಿದ್ದಷ್ಟು ಪ್ರಯತ್ನಿಸಿದೆ. ವಿಮಾನದ ತುಂಬಾ ಪ್ರಯಾಣಿಕರು. ಈ ವಿಮಾನವನ್ನು ಎಷ್ಟೊಂದು ಹೊಗಳುತ್ತಾರೆ ! ನಿಜವಾಗಿಯೂ ಚೆನ್ನಾಗಿದೆ. ಗಗನ ಸಖಿಯರಾಗಿದ್ದ ಥ್ಾ ಯುವತಿಯರು ಪ್ರಯಾಣಿಕರಿಗೆ ಎಷ್ಟು ಆದರದಿಂದ ಸ್ವಾಗತಿಸಿ ಸತ್ಕರಿಸುತ್ತಾರೆ ! ಅವರ ಉಡುಪು, ಅಂದಚೆಂದ, ನಡೆನುಡಿ ಎಷ್ಟು ಆಕರ್ಷಕ !

ಬೆಂಕಾಕ್‌ನಿಂದ ಸಿಂಗಾಪುರಕ್ಕೆ 3 ಘಂಟೆ ಅವಧಿಯ ವಿಮಾನ ಪ್ರಯಾಣ, ಆದರೆ ಅಷ್ಟರೊಳಗೆ ಪ್ರಯಾಣಿಕರು ಬಯಸಿದುದೆಲ್ಲ ತರಹದ ಪೇಯವನ್ನೂ ಉಚಿತ ವಾಗಿ ಕೊಡುವ ವ್ಯವಸ್ಥೆ ಈ ಕೆರೆವೆಲ್‌ನಲ್ಲಿಯೇ ಮೊದಲು ಕಂಡುದು. ಈ ವಿಮಾನ ಸಂಸ್ಥೆ ಹೆಚ್ಚು ಹೆಚ್ಚಾಗಿ ಅಭಿವೃದ್ಧಿಯಾಗಲೆಂದು, ಪ್ರಯಾಣಿಕರನ್ನು ಆಕರ್ಷಿಸುವ, ಮೆಚ್ಚಿಸುವ, ಈ ಪ್ರಯತ್ನವಿರಬಹುದು. ಯಾವ ಪೇಯವನ್ನಾಗಲೀ, ಎಷ್ಟೇ ಆಗಲೀ, ಪ್ರಯಾಣಿಕರು ಕೇಳಿ ಪಡೆದು, ಕುಡಿದು ಆನಂದ ಪಡಬಹುದು. ಕುಡಿದ ಅಮಲಿನಿಂದಾಗಿ ಸಿಂಗಾಪುರದಲ್ಲಿ ವಿಮಾನದಿಂದ ಇಳಿಯಲಾಗದೆ ಉರುಳಿ ಬಿದ್ದರೂ ಬೀಳಬಹುದು ! ಆದುದರಿಂದ ಪ್ರಯಾಣಿಕರೆಲ್ಲರೂ ತಮ್ಮ ಶಕ್ತಿಮೀರಿ ಕುಡಿಯುತ್ತಿದ್ದರು. ಆದರೆ ಕೇವಲ 2 – 3 ಘಂಟೆಯೊಳಗಾಗಿ ಎಷ್ಟೊಂದು ಕುಡಿಯ ಬಹುದು.? ಈ ಪ್ರಯಾಣ ಇಷ್ಟು ಕಡಿಮೆ ಅವಧಿಯುಳ್ಳದಾಗಿದುದರಿಂದಲೇ ವಿಮಾನ ಸಂಸ್ಥೆ ಧೈರ್ಯದಿಂದ ಉಚಿತವಾಗಿ ಪಾನೀಯಗಳನ್ನು ಸರಬರಾಜು ಮಾಡಲು ಸಿದ್ಧ

ರಾಗಿದುದು. ಆದರೂ ಸ್ವಾರ್ಥಿ ಮಾನವ ಕುಡಿಯುವುದನ್ನು ಕಡಿಮೆ ಮಾಡುವುದಿಲ್ಲ. ಉಚಿತ ವಸ್ತುವಾದುದರಿಂದ ಬಿಡುವುದಾದರೂ ಏಕೆ? ವಿಮಾನದ ದರವನ್ನು ಅತಿಯಾಗಿ ಕೊಟ್ಟಿಲ್ಲವೇ ? ಇತರ ಪ್ರಯಾಣಿಕರನ್ನು ನೋಡುತ್ತಾ ನಾವಿಬ್ಬರೂ ಕುಳಿತೆವು. ಪತಿಯವರಿಗೆ ಚೇತನ ಬರಲು ಸ್ವಲ್ಪ ಬ್ರಾಂದಿಯನ್ನು ತರಿಸಿದೆವು ಅಷ್ಟೇ. ಹೂವಿನ ಜೊತೆಯಲ್ಲಿ ಅವರು ಕೊಟ್ಟ ಬ್ರಾಂದಿಯನ್ನು ಪತಿಯವರು ತೆಗೆದುಕೊಂಡ ಮೇಲೆ ಸಿಂಗಾಪುರದ ದುಗುಡ ಜೀವನವನ್ನು ಎದುರಿಸಲು ಧೈರ್ಯ ಬಂದಂತಾಯಿತು.

ಸಿಂಗಾಪುರ ವಿಮಾನ ನಿಲ್ದಾಣಕ್ಕೆ ಬಂದೆವು. ವಿಮಾನ ಇಳಿದೊಡನೆಯೇ ದೂರದಿಂದ ನಮ್ಮನ್ನು ಸ್ವಾಗತಿಸಲು ಬಂದ ಸಾಂಸ್ಕೃತಿಕ ಸಂಸ್ಥೆಯ ಸಮಿತಿಯ ಗುಂಪೊಂದನ್ನು ಕಂಡೆವು. ಕೆಲವರ ಕೈಗಳಲ್ಲಿ ಪುಷ್ಪಮಾಲೆಯೊಂದನ್ನು ಕಂಡೆವು. ಕೆಮೆರಾ ಸಮೇತ ಫೋಟೋಗ್ರಾಫರ್ ಕೂಡಾ ಸಿದ್ಧ ! ಎಂತಹ ಸಂಭ್ರಮದ ಆಹ್ವಾನ !! ಖಾಯಿಲೆಯ ಪತಿಯವರನ್ನೂ, ಚಿಂತಾ ವಿಹ್ವಲಳಾದ ನನ್ನನ್ನೂ ಕಂಡು ಅವರು ಏನು ತಿಳಿದುಕೊಳ್ಳುವರೋ ಎಂಬ ಶಂಕೆ ಬಂದಿತು. ಏಕೆಂದರೆ "ನೃತ್ಯ ಕಲಾವಿದರು" ಎಂದರೆ ಸಾಮಾನ್ಯವಾಗಿ ಆರೋಗ್ಯಶಾಲಿಯಾದ ಸುಂದರ ಬಲಾಢ್ಯ ಮೈಕಟ್ಟು, ಲಾಲಿತ್ಯ ನಡೆ, ಹಿತಕಾರಿ ವ್ಯಕ್ತಿತ್ವವಿರುವುದೆಂಬ ನಂಬಿಕೆ ಜನರಿಗಿರುವುದು ಸಹಜ. ಅಂದು ನಮ್ಮಿಬ್ಬರಿಗೂ ಅಂತಹ ಯಾವ ಗುಣವೂ ಹೊರ ನೋಟಕ್ಕೆ ಕಂಡು ಬರಲಾರದು ಎಂದು ಮನಸ್ಸು ಹೇಳಿತು. ಇವರೆಂತಹ ಕಲಾವಿದರು ! ಎಂಬ ನಿರಾಶೆ ಅವರಿಗೆ ಖಂಡಿತ ಆಗುವುದು ಎಂದೆನಿಸಿತು. ಆದರೆ ಪತಿಯವರ ಅಸ್ವಸ್ಥತೆಯ ಸುದ್ದಿ ನಾವು ಅವರಿಗೆ ಮುಂದಾಗಿಯೇ ತಿಳಿಸಿದ್ದುದರಿಂದ ಸಮಾಧಾನವಿತ್ತು. ಅಂತೂ ನಮ್ಮ ಅವಸ್ಥೆಗೆ ಅವರು ಬೇಸರ ಪಡದೆ, ನಮ್ಮನ್ನು ಹೃತ್ಪೂರ್ವಕವಾಗಿ ಆಹ್ವಾನಿಸಿ, ಹಾರಗಳನ್ನು ಅರ್ಪಿಸಿ, ತಮ್ಮ ಸಂಸ್ಥೆಯ ಸ್ವಾಗತ ಸಮಿತಿಯ ಸದಸ್ಯರೆಲ್ಲರ ಪರಿಚಯ ಮಾಡಿಕೊಟ್ಟು, ಫೋಟೋಗ್ರಾಫರ್‌ಗೆ ನಮ್ಮಿಬ್ಬರ ಫೋಟೋ, ಅವರೆಲ್ಲರ ಜೊತೆ ನಮ್ಮಿಬ್ಬರ ಫೋಟೋ ತೆಗೆಯಿಸಿ, ಜಾಹೀರಾತುಗಳಿಗೆ ಸಿದ್ಧಮಾಡಿಕೊಂಡರು.

ಸುಂಕದ ಅಧಿಕಾರಿಗಳ ಚಕ್ರವ್ಯೂಹದಿಂದ ಪಾರಾಗಿ ಹೊರಬರಲು ಎಷ್ಟೋ ಹೊತ್ತಾಯಿತು. ಟೇಪ್ ರೆಕಾರ್ಡರ್‌ನ್ನು ಹೊರಲು ಪತಿಯವರಿಗೆ ಆಗದ ಕಾರಣ ನಾನು ಎತ್ತಿ ಕಷ್ಟಪಟ್ಟೆ. ಭಾರವಾದ ಎಲ್ಲ ಸಾಮಾನಿನ ಹೊರೆ ಹೊತ್ತು ಹೊತ್ತು ಸಾಕಾಯಿತು. ಆದರೆ ಪತಿಯವರಿಗೆ ನಾನು ಆ ವಿಚಾರ ತಿಳಿಯಪಡಿಸಲಿಲ್ಲ. ....ನಟಿಸಿದೆ....ಇಲ್ಲೂ !!

ಶ್ರೀ ಕಾರ್ತಿಗೇಸು ಮತ್ತು ಅವರ ರೂಪವತಿ ಸತಿ ರತಿಯವರ ಶ್ರೀಮಂತ ಅರಮನೆಯಂತಹ ಭವ್ಯಭವನದ ಮಾಳಿಗೆಯ ಮೇಲೆ ಅನುಕೂಲವಾದ ಕೋಣೆಯೊಂದನ್ನು ನಮಗಾಗಿ ಬಿಟ್ಟುಕೊಟ್ಟಿದ್ದರು. ಕಿಟಕಿಯಿಂದ ಹೊರಗೆ ನೋಡಿದರೆ

ವಿಶಾಲವಾದ ಹಸಿರು ಹುಲ್ಲಿನ ಮೈದಾನ, ಅಲ್ಲಲ್ಲಿ ಪುಷ್ಪಭರಿತ ಮರಗಳು, ತೋಟದ ಸುತ್ತಲೂ ವಿವಿಧ ಸುವಾಸನೆಯ ಜಾಜೀ, ಪಾರಿಜಾತ ಮುಂತಾದ ಹೂ–ಗಿಡಗಳು, ಮುಂದಿನ ತೋಟದಲ್ಲಿ ಅಂದಚೆಂದದ ಗಿಡಗಗಳು, ಕುಸುಮ ತುಂಬಿದ ಅನೇಕಾನೇಕ ಬಳ್ಳಿಗಳು ಎಷ್ಟು ಮನೋಹರವಾದ ಮನೆ! ಶಾಂತ ವಾತಾವರಣ! ಅತಿಥೇಯ ದಂಪತಿಗಳಿಬ್ಬರೂ ನಮ್ಮನ್ನು ಆದರದಿಂದ ಸ್ವಾಗತಿಸಲು ತುಂಬಾ ಸಿದ್ಧತೆಗಳನ್ನು ಮಾಡಿದ್ದರು. ಆದರೆ ಪತಿಯವರ, ಖಾಯಿಲೆ, ನನ್ನ ಚಿಂತೆ, ಮನಸ್ಸಿಗೆ ಹರುಷವಿಲ್ಲದ ಕಾರಣ ನಮಗೆ ಅವರ ಸಹವಾಸ, ಸಾಮಿಪ್ಯವೇ ಬೇಡವೆನ್ನಿಸಿತು. ದಣಿವಿನಿಂದಾಗಿ ಮಲಗಿ ವಿಶ್ರಾಂತಿ ಪಡೆಯಬೇಕೆಂಬುದೊಂದೇ ಯೋಚನೆ ಮನಸ್ಸಿಗೆ ಬರುತ್ತಿದ್ದುದು.

"ಸಿಂಗಾಪುರದ ಭಾರತೀಯ ಲಲಿತ ಕಲಾ ಸಂಸ್ಥೆ (The Indian Fine Arts Society) ನಿಮಗಾಗಿ ಸ್ವಾಗತ ಸಮಾರಂಭವನ್ನು ಏರ್ಪಡಿಸಿದೆ. ಸುಮಾರು 200 ಜನ ನಿಮ್ಮನ್ನು ನೋಡಲು ಆತುರದಿಂದ ಎದುರು ನೋಡುತ್ತಿದ್ದಾರೆ....ದಯವಿಟ್ಟು ಸಿದ್ಧರಾಗಿ ಬನ್ನಿ. ವಾಹನ ನಿಮಗಾಗಿ ಹೊರಗೆ ಕಾಯುತ್ತಿರುತ್ತದೆ. ನಾವು ಮುಂದಾಗಿ ಹೋಗುತ್ತೇವೆ." .... ಎಂದು ಶ್ರೀಮತಿ ರತಿ ನಮಗೆ ಎಚ್ಚರಿಸಿ ಹೊರಟು ಹೋದರು. ನಮಗೋ ಇವರ ಸ್ವಾಗತವೂ ಬೇಡ... ಸಮಾರಂಭವೂ ಬೇಡ.... ಕಾಫಿ ತಿಂಡಿ, ಜನರನ್ನು ನೋಡುವುದು ....ಅವರ ಪರಿಚಯ, ಯಾವುದೂ ಬೇಡ ಎಂಬ ಭಾವನೆ! ಸಧ್ಯಕ್ಕೆ ನಮ್ಮಷ್ಟಕ್ಕೆ ನಮ್ಮನ್ನು ಬಿಟ್ಟುಬಿಟ್ಟರೆ ಪತಿಯವರು ಹಾಯಾಗಿ ಮಲಗಲು ಅವಕಾಶವಾದೀತು. ಅದೇ ಮಹತ್ತರವಾದ ಸಹಾಯ ಎಂದು ಮನಸ್ಸು ಆಶಿಸಿತು.

ಆದರೂ ಅವರನ್ನು ನಿರಾಶೆಪಡಿಸುವುದು ಹೇಗೆ? ನಮ್ಮ ಪೆಟ್ಟಿಗೆಗಳನ್ನು ಬಿಚ್ಚಿ, ಒಳ್ಳೆಯ ಬಟ್ಟೆಯನ್ನುಟ್ಟು, ಕರ್ತವ್ಯ ನಿಷ್ಠೆಯಿಂದ ಹೊರಡಲು ಸಿದ್ಧರಾದೆವು. ಮುಖದಲ್ಲಿ ನಲಿವು ಗೆಲುವುಗಳನ್ನು ನಟಿಸಿದೆವು. ರಂಗಭೂಮಿಯ ಮೇಲೆ ಭರತ ನಾಟ್ಯದಲ್ಲಿನ ನಟರಾಗಿ ನಟಿಸುವುದಕ್ಕಿಂತ, ವಿಶ್ವರಂಗದ ಮೇಲೆ ನಾವು ನಾವಾಗಿ ನಟಿಸುವುದು ಅತ್ಯಂತ ಕಷ್ಟವಾದ ನಟನೆಯಾಯಿತು.

ಸಿಂಗಾಪುರದ "ಭಾರತೀಯ ಲಲಿತ ಕಲಾ ಸಂಸ್ಥೆ" ಒಂದು ಸುಂದರ ಕಟ್ಟಡದಲ್ಲಿದೆ. ಅಲ್ಲಿ ನೂರಾರು ಜನರು ನಮ್ಮ ಬರುವಿಕೆಗಾಗಿ ಕಾದುಕೊಂಡಿದ್ದರು. ಮೇಜು ಕುರ್ಚಿಗಳನ್ನು ಜೋಡಿಸಿ ಭಾಷಣಕ್ಕೂ ಅಣಿಗೊಳಿಸಲಾಗಿತ್ತು. ಹೋದ ಕೂಡಲೇ ಅಚ್ಚುಕಟ್ಟಾಗಿ ತಿಂಡಿ ತೀರ್ಥಗಳಾದವು. ಆಮೇಲೆ ಅಧ್ಯಕ್ಷರು, ಕಾರ್ಯದರ್ಶಿಗಳು, ನಾವು ಕುಳಿತು ಸಮಾರಂಭ ಆರಂಭಗೊಳಿಸಿದೆವು. ಪರಿಚಯ ಭಾಷಣವಾದ ಮೇಲೆ ಪತಿಯವರು ಕೆಲವೇ ಮಾತುಗಳಲ್ಲಿ ಕಲೆಯಲ್ಲಿನ ನಮ್ಮ ಕಾರ್ಯಕಲಾಪ, ಆಸೆ, ಆಕಾಂಕ್ಷೆಗಳನ್ನು ತಿಳಿಸಿ, ನಾವು ಸಿಂಗಾಪುರಕ್ಕೆ ಬಂದ ಕಾರ್ಯವನ್ನು ಜಯಪ್ರದವಾಗಿ ಮಾಡುವುವೆಂಬುದಾಗಿ ತಿಳಿಸಿದರು. ಅಧ್ಯಕ್ಷ ಭಾಷಣ, ವಂದನಾರ್ಪಣೆಯಾದ ಮೇಲೆ

ನಾವು ಅಲ್ಲಿ ನೆರದಿದ್ದ ಜನರಲ್ಲಿ ಮುಖ್ಯವಾದ ಕೆಲವರನ್ನು ಭೇಟಿ ಮಾಡಿ, ಅವರ ಕ್ಷಮೆ ಕೇಳಿ ಮನೆಗೆ ಹಿಂತಿರುಗಲು ಅನುಮತಿ ಪಡೆದು ಪಾರಾದೆವು.

ಸಿಂಗಾಪುರ ಕಲಾಯಾತ್ರೆ ಭಾರಿ ಜವಾಬ್ದಾರಿ ಯಾತ್ರೆಯಾಗಿ ಪರಿಣಮಿಸಿತು. ಮನೆಯಲ್ಲಿ ರಾತ್ರಿ ಊಟದ ಶಾಸ್ತ್ರ ಮುಗಿಸಿ ವಿಶ್ರಾಂತಿ ಪಡೆಯಲು ನಮ್ಮ ಕೋಣೆಗೆ ಹೋದೆವು. ಪತಿಯವರ ಜ್ವರ ಏರುತ್ತಲೇ ಇತ್ತು. ನನಗೆ ದಿಕ್ಕೇ ಕಾಣ ದಾಯಿತು. ಬೇರೆಯವರ ಮನೆಯ ಅತಿಥಿಗಳಾಗಿ ಬಂದು ಕಾಹಿಲೆ ಬಿದ್ದು ಅವರಿಗೆ ತೊಂದರೆ ಕೊಡುವುದು ನನಗೆ ಹಿತವೆನಿಸಲಿಲ್ಲ. ಅಲ್ಲದೆ ಮುಂದೆ ಬರಲಿರುವ ಕಾರ್ಯ ಕ್ರಮಗಳೂ ತೊಂದರೆಗೆ ಸಿಲುಕುವುವು. ನನ್ನೊಬ್ಬಳ ಕೈಲಿ ಜರುಗಿಸಲಾಗದ ವಿಷಯ. ಪತಿಯವರು ಜ್ವರದ ತಾಪದಿಂದ, ತಲೆನೋವಿನಿಂದ ನರಳಾಡುವುದನ್ನು ಕಂಡು ಮುಂದೆ ಏನು ಮಾಡಬೇಕೆಂಬುದೇ ತೋಚಲಿಲ್ಲ.

ಪತಿಯವರ ಅಸ್ವಸ್ಥತೆಯ ಕಹಿ ಸುದ್ದಿಯನ್ನು ಮರುದಿನ ಬೆಳಗ್ಗೆ ಶ್ರೀಮತಿ ರತಿಗೆ ಹೇಳಲೇಬೇಕಾಯಿತು. " ಕಲಾವಿದರು " ಎಂದು ಕರೆಯಿಸಿಕೊಂಡವರಿಗೆ ರೋಗಿಗಳ ಶುಶ್ರೂಷೆ ಮಾಡಬೇಕಾದ ಸಂಭವ. ಮನೆಗೆ ಬಂದ ಅತಿಥಿಗಳನ್ನು ಸುಖ ರೂಪವಾಗಿ ಕಳುಹಿಸಿಕೊಡಬೇಕಾದ ಜವಾಬ್ದಾರಿ. ಆದರೆ ಆ ದಂಪತಿಗಳು ಎಷ್ಟು ದೈವಿಕ ಗುಣ ಗಳನ್ನು ಪಡೆದಿದ್ದರು ! ಮನಸ್ಸಿಗೆ ಬೇಸರವಾಗಿದ್ದರೂ ಅದನ್ನು ತೋರ್ಪಡಿಸಲಿಲ್ಲ. ಅವರ ಮನೆ ವೈದ್ಯರಾದ ಒಬ್ಬ ಐರಿಷ್ ಡಾಕ್ಟರನ್ನು ಕರೆಸಿ ಔಷಧವನ್ನು ಕೊಡಿಸಿದರು

ಮರು ದಿನ ನಮ್ಮ ನೃತ್ಯ ಉಪನ್ಯಾಸ ಒಂದು ಅಂದವಾದ ಚಿಕ್ಕ ರಂಗ ಮಂದಿರ ದಲ್ಲಿ, ಸಿಂಗಾಪುರದ ಒಂದು ನೃತ್ಯಶಾಲೆಯ ಆಶ್ರಯದಲ್ಲಿ ಏರ್ಪಾಡಾಗಿತ್ತು. ಮಾಡುವುದೇ ಬಿಡುವುದೇ ತಿಳಿಯದೇ ಕಷ್ಟಪಟ್ಟೆವು, " ನೀನು ಭಾಷಣ ಕೊಟ್ಟು ಬಾ " ಎಂದು ಪತಿಯವರು ಅಂದರು. ನಾನು ನನ್ನ ಜನ್ಮದಲ್ಲಿಯೇ ಅವರನ್ನು ಬಿಟ್ಟು ಕಲಾ ರಂಗದಲ್ಲಿ ಎಂದೂ ಹೆಣಗಾಡಿದವಳಲ್ಲ. ಅವರ ಬೆಂಬಲವಿಲ್ಲದಿದ್ದರೆ ನಾನು ಅಶಕ್ತಳು. ಆದಕ್ಕಾಗಿಯೇ ನಾನು " ಭಾಷಣವನ್ನೇ ರದ್ದು ಮಾಡೋಣ " ಎಂದೆ. ಅವರು ಒಪ್ಪಲಿಲ್ಲ.

ಮೇ 13ನೆಯ ತಾರೀಖು ಉದಯಿಸಿತು. ಪತಿಯವರ ಜ್ವರ ಕಡಿಮೆಯಾಗಿ ದ್ದರೂ ಇನ್ನೂ ಇತ್ತು. ಸಾಯಂಕಾಲದ ಭಾಷಣದ ಸಮಯ ಜ್ವರ ಕಾಣದ ಹಾಗೆ ಗುಳಿಗೆಗಳನ್ನು ನುಂಗಿ ನನ್ನ ಜೊತೆಗೆ ಬಂದರು. ಜೀವಮಾನದಲ್ಲಿಯೇ ಅಂದು ಮೊದಲಬಾರಿಗೆ ಪತಿಯವರು ಕುರ್ಚಿಯ ಮೇಲೆ ಕುಳಿತು ಭಾಷಣಕೊಟ್ಟದ್ದು- ಭರತ ನಾಟ್ಯದ ಶಾಸ್ತ್ರ ವಿಭಾಗವನ್ನು ವರ್ಣಿಸಿದರು. ಅಂದು ನಾನೊಬ್ಬಳೇ ಪ್ರಾಯೋಗಿಕ ನೃತ್ಯಗಳನ್ನೆಲ್ಲಾ ನರ್ತಿಸಿ ಅವರ ಮನವೊಪ್ಪುವಂತೆ ಮಾಡಿ ಮುಗಿಸಿದೆ. ಅವರು ಮಾಡುವ ತಾಂಡವ ನೃತ್ಯದ ದರ್ಶನ ವಿಭಾಗವನ್ನು ಕೊಟ್ಟನೇ ಹೊರತು ಮಾಡಲಿಲ್ಲ.

ಅವರು ಅಲ್ಲಿ ಕುಳಿತಿದ್ದೇ ಸಮಾರಂಭವನ್ನು ಯಶಸ್ವಿಯಾಗಿ ಜರುಗಿಸಿದರು. ಅವರ ಭಾಷಣಕ್ಕೆ ಎಲ್ಲರೂ ತಲೆದೂಗಿದರು. ನಮ್ಮ ಕಲೆಯಲ್ಲಿನ ದಾರ್ಶನಿಕ ಸತ್ಯ ಹಾಗೂ ನಿಗೂಢ ತತ್ವದ ಅರಿವು ಅಲ್ಲಿದ್ದ ಎಲ್ಲರಿಗೂ ಆಯಿತೆನ್ನಬೇಕು. 'ಇಂತಹ ಉಪನ್ಯಾಸ ನಮಗೆ ಅಗತ್ಯವಾಗಿ ಬೇಕಾಗಿತ್ತು' ಎಂದು ಬಾಯಿತುಂಬಾ ಕೊಂಡಾಡಿ ಹೊಗಳಿದರು.

ಪತಿಯವರನ್ನು ಸುರಕ್ಷಿತವಾಗಿ ಮನೆಗೆ ಕರೆದೊಯ್ದು ಮಲಗಿಸುವವರೆಗೆ ನನ್ನ ಮನಸ್ಸಿಗೆ ನೆಮ್ಮದಿ ಇರಲಿಲ್ಲ. ಅಂತೂ ಅಂದಿನ ದಿನ ಕಳೆಯಿತು.

....ಮೇ 14ನೆಯ ತಾರೀಕು ಉದಯಿಸಿತು. ನಮ್ಮ ನೃತ್ಯ ಪ್ರದರ್ಶನವನ್ನು ಏರ್ಪಡಿಸಿದ್ದ ದಿನ ಅಂದು! ಸಿಂಗಾಪೂರದ ಭಾರತೀಯ ಲಲಿತ ಕಲಾ ಸಂಸ್ಥೆಯವರಿಗೆ ಪತಿಯವರ ಕಾಹಿಲೆ ಕಳವಳವನ್ನುಂಟು ಮಾಡಿರಬಹುದು. ಆದರೆ ಕಾರ್ಯಕ್ರಮವನ್ನು ನಡೆಸಿಕೊಡುವೆವೆಂಬ ಆಶ್ವಾಸನೆ ಕೊಟ್ಟ ಮೇಲೆ ಅವರಿಗೆ ಧೈರ್ಯ ಬಂದಿತು. ಐರಿಷ್ ಡಾಕ್ಟರರ ಔಷಧಿಯಿಂದ ಜ್ವರವು ಇಳಿಯುತ್ತಿತ್ತು. ಕಾರ್ಯಕ್ರಮದಲ್ಲಿ ನಾನೇ ಹೆಚ್ಚಾದ ಭಾಗವನ್ನು ವಹಿಸುವುದೆಂದು ತೀರ್ಮಾನವಾಗಿತ್ತು. ಸಾಯಂಕಾಲದ ಹೊತ್ತಿಗೆ ಸಾಂಸ್ಕೃತಿಕ ಸಂಘಕ್ಕೆ ಹೋದೆವು. ಅದು ಬಹಳ ಅನುಕೂಲವಾದ ರಂಗಮಂದಿರ. ರಂಗಸ್ಥಳವೂ ಚೆನ್ನಾಗಿತ್ತು. ಚಿಕ್ಕದು! ಆದರೂ ಬಹಳ ಅಚ್ಚುಕಟ್ಟಾಗಿತ್ತು. ಸಜ್ಜಿಕಾ ಗೃಹ ರಂಗಸ್ಥಳದ ಅಡಿಯಲ್ಲಿ ಇತ್ತು. ಸುತ್ತಲೂ ದೊಡ್ಡ ದೊಡ್ಡ ಕನ್ನಡಿಗಳು, ಅದಕ್ಕೆ ಬೇಕಾದ ದೀಪಗಳು, ವೇಷ-ಭೂಷಣಗಳನ್ನು ಇಡಲು ಹಲಗೆಗಳು, ತೂಗಹಾಕಲು ತಕ್ಕ ಅಟ್ಟಣಿಗೆಗಳು, ನೀರಿನ ವ್ಯವಸ್ಥೆ ಎಲ್ಲವೂ ಚೆನ್ನಾಗಿತ್ತು. ನೃತ್ಯ ಕಾರ್ಯಕ್ರಮ ಎಂಟು ಗಂಟೆಗೆ ಆರಂಭ. ಪತಿಯವರು ಆಗತಾನೇ ಜ್ವರ ಇಂಗಿಸುವ ಗುಳಿಗೆಗಳನ್ನು ಸೇವಿಸಿ ನೃತ್ಯಕ್ಕೆ ಸಿದ್ಧರಾದರು. 'ಗೀತೋಪದೇಶ' ನೃತ್ಯ ಮಾಡುವುದು ಬೇಡವೆಂದರೂ ಕೇಳಲಿಲ್ಲ; ಮಾಡಿದರು. ಅವರು ಅದನ್ನು ನರ್ತಿಸುವಾಗ ಉದ್ವೇಗ ಪೀಡಿತಳಾದ ನನಗೆ ಅದನ್ನು ನೋಡಲು ಆಗಲಿಲ್ಲ! ಕೆಳಗಿನ ಸಜ್ಜಿಕಾ ಗೃಹದಲ್ಲಿ ಬಾಲಸುಟ್ಟ ಬೆಕ್ಕಿನಂತೆ ಅತ್ತಿಂದಿತ್ತ ಶತಪಥ ಹಾಕುತ್ತಾ, ಅವರನ್ನು ಕಾಪಾಡಲು ದೇವರನ್ನು ಪ್ರಾರ್ಥಿಸುತ್ತಾ ಸಮಯ ಕಳೆದೆ. 'ಗೀತೋಪದೇಶ' ಮುಗಿದ ಮೇಲೆ ಮೇಲಿದ್ದ ರಂಗಸ್ಥಳಕ್ಕೆ ಧಾವಿಸಿ ಹೋದೆ. ಅವರನ್ನು ದಿಟ್ಟಿಸಿ ನೋಡುವ ಧೈರ್ಯ ಕೂಡ ನನಗೆ ಬರಲಿಲ್ಲ. ಸಧ್ಯ! ಅವರು ನಾನೆಣಿಸಿದಷ್ಟು ಸುಸ್ತಾಗಿರಲಿಲ್ಲ! ಎಲ್ಲಾ ದೇವರ ದಯೆ! ಆಮೇಲಿನ ಕಾರ್ಯಕ್ರಮ ಹೂವೆತ್ತಿದಂತೆ ಸರಾಗವಾಗಿ ನಡೆಯಿತು. ಕಲಾವಂಚನೆ ಇಲ್ಲದೆ ಆತ್ಮ ತೃಪ್ತಿಯಾಗುವಂತೆ ನೃತ್ಯಗಳನ್ನು ಮಾಡಿ ಮುಗಿಸಿದೆವು. ಸಭಿಕರು ಆನಂದದಿಂದ ಅವುಗಳನ್ನು ಒಪ್ಪಿ ಮೆಚ್ಚಿದರು.

ಆದರೆ ಅಂದಿನ ಪ್ರದರ್ಶನಕ್ಕೆ ಪತ್ರಿಕೋದ್ಯೋಗಿಗಳು ಬಂದಿರಲಿಲ್ಲವೇನೋ.

ಯಾವ ಪತ್ರಿಕೆಯಲ್ಲೂ ವಿಮರ್ಶೆ ಒಂದೂ ಬಂದಿರಲಿಲ್ಲ. "ಇಲ್ಲಿ ಭಾರತೀಯ ನೃತ್ಯಗಳನ್ನು ವಿಮರ್ಶಕರು ಪತ್ರಿಕೆಗಳಲ್ಲಿ ವಿಮರ್ಶಿಸುವುದಿಲ್ಲ" ಎಂದರು ಶ್ರೀಮತಿ ರತಿ. ನಾವು ಏಕೆಂದು ಕೇಳಿದುದಕ್ಕೆ ಅವರು "ಭಾರತೀಯ ನೃತ್ಯ ಬಹಳ ಅಮೋಘವಾದ ಕಲೆ–ಅದರ ಅಪಾರ ಕಲಾಸಂಪತ್ತು ಈ ಜನರ ಮಾಪಕಕ್ಕೆ ಮೀರಿದ ವಿಷಯ. ಅಲ್ಲದೆ ಭಾರತೀಯ ಕಲೆಯ ಪ್ರಭಾವದಿಂದಾಗಿ ಇಲ್ಲಿ ವಾಡಿಕೆಯಲ್ಲಿರುವ ಇತರ ಶಾಸ್ತ್ರೀಯ ಕಲಾ ಪದ್ಧತಿಗಳಿಗೆ ಧಕ್ಕೆಯಾಗಬಹುದೆಂಬ ಭಯ" ಎಂದರು. ಈ ಉತ್ತರ ನಮ್ಮನ್ನು ಸಮಾಧಾನಗೊಳಿಸಲಿಲ್ಲ.

ಸಿಂಗಾಪೂರಿನಲ್ಲಿ ಮಲೇಸಿಯಾದ ನೃತ್ಯಗಳೂ, ಚೀನೀ ನೃತ್ಯಗಳೂ, ಅಲ್ಲದೆ ಪಾಶ್ಚಾತ್ಯರ ಬ್ಯಾಲೆ ಸಂಪ್ರದಾಯವೂ ವಾಡಿಕೆಯಲ್ಲಿದೆ. ಮಲೇಸಿಯಾದ ನೃತ್ಯ ತೀರಾ ಸರಳ ನಿಜ ! ಆದರೆ ಪಾಶ್ಚಾತ್ಯ ಬ್ಯಾಲೆಯನ್ನು ಅತ್ಯಂತ ತಾಳ್ಮೆಯಿಂದ, ನಿರಂತರ ಅಭ್ಯಾಸ ಬಲದಿಂದ, ಅತಿಶಯ ಆಸೆಪಟ್ಟು ಕಲಿಯಬೇಕಾಗಿದೆ. ಸಾಮಾನ್ಯವಾಗಿ ಒಬ್ಬ ಬ್ಯಾಲೆ ವಿದ್ಯಾರ್ಥಿನಿ ತನ್ನ 7ನೇ ಅಥವಾ 8ನೇ ವಯಸ್ಸಿನಲ್ಲಿ ಬ್ಯಾಲೆ ತರಗತಿಗೆ ಸೇರುತ್ತಾಳೆ. ಸಮಾರು 10 ವರ್ಷಗಳ ಸತತ ಅಭ್ಯಾಸವಾದ ಮೇಲೆ ಆಕೆಗೆ ಒಂದು ಬ್ಯಾಲೆ ಕಾರ್ಯಕ್ರಮದಲ್ಲಿ ಚಿಕ್ಕದೊಂದು ಪಾತ್ರ ಸಿಗುವ ಸಂಭವವಿದೆ ! ನಾಯಕಿಯ ಪಟ್ಟ ಸಿಗಬೇಕಾದರೆ ಅನುಭವ ಎಷ್ಟಿದ್ದರೂ ಸಾಲದು ! ಎಷ್ಟು ಉದಾತ್ತವಾದ ಕಲಾ ಶಿಖರದ ಗುರಿ! ಚಿಕ್ಕಮಕ್ಕಳು ಎಂದೂ ಕಲಾವಿದರೆನಿಸಿಕೊಳ್ಳುವುದಿಲ್ಲ. ನಾವು ಪಾಶ್ಚಾತ್ಯದೇಶದಲ್ಲಿದ್ದಷ್ಟೂ ದಿನ ಒಮ್ಮೆಯಾದರೂ ಚಿಕ್ಕ ವಯಸ್ಸಿನ ನರ್ತಕ–ನರ್ತಕಿಯರನ್ನು ಬ್ಯಾಲೆ ನಾಟಕಗಳಲ್ಲಿ ನೋಡಿಲ್ಲ. ನಮ್ಮ ಭಾರತೀಯ ನೃತ್ಯಕಲೆಯನ್ನು ವಿದ್ಯಾರ್ಥಿಗಳು ಎಷ್ಟು ಬೇಗ ಕರಗತ ಮಾಡಿಕೊಳ್ಳಲು ಪ್ರಯತ್ನಿಸುತ್ತಾರೆ ! ಸರಿಯಾದ ವಿದ್ಯೆ ಬರುವುದಕ್ಕೆ ಮುಂಚೆಯೇ ಪ್ರದರ್ಶನ ಕೊಡಲು ಉತ್ಸುಕರಾಗಿರುತ್ತಾರೆ. ನನ್ನ ತಮ್ಮ ಇದಕ್ಕೇ ಹೇಳುವುದು 'ಎಂಟು ತಿಂಗಳ ಕಲಾವಿದರು' ಎಂದು. (Pre mature Birth Natyam) ಅನುಭವ ಬರುವ ಸಮಯಕ್ಕೆ ಕಲಾ ರಂಗದಿಂದ ನಿವೃತ್ತರಾಗಿರುತ್ತಾರೆ. ಚಿಕ್ಕ ಮಗುವಾದಾಗ ಆರಂಭಿಸಿ, ಯುವಾವಸ್ಥೆಯಲ್ಲಿ ನಿಲ್ಲಿಸುವುದು ಚಿಂತಾ ಜನಕ ವಿಷಯ. ಬ್ಯಾಲೆ ವಿದ್ಯಾರ್ಥಿಯರಂತೆ ಸತತ ಅಭ್ಯಾಸವನ್ನು ಇಟ್ಟುಕೊಂಡರೆ ಭಾರತೀಯ ನೃತ್ಯಕ್ಕೂ ಒಳ್ಳೆಯದು !

ಶಾಸ್ತ್ರೀಯ ಬ್ಯಾಲೆ, ಶಾಸ್ತ್ರೀಯ ಭಾರತೀಯ ನೃತ್ಯಗಳೂ ಒಂದೇ ಅಂತಸ್ತಿನಲ್ಲಿವೆ. ಒಂದರಿಂದ ಇನ್ನೊಂದಕ್ಕೆ ಪರಸ್ಪರ ಸಹಾಯವಿದೆ. ಇತ್ತೀಚೆಗೆ ಭಾರತೀಯ ನೃತ್ಯಚಲನೆಗಳನ್ನೂ ಕೆಲವು ಹಸ್ತ ಮುದ್ರೆಗಳನ್ನೂ, ಭಂಗಿಗಳನ್ನೂ ನಾವು ಇಂದಿನ ಆಧುನಿಕ ಬ್ಯಾಲೆಯಲ್ಲಿ ನೋಡುವುದು ಆಶ್ಚರ್ಯ. ಆದ್ದರಿಂದ ಇಲ್ಲಿನ ವಿಮರ್ಶಕರು

ನಮ್ಮ ನೃತ್ಯಗಳನ್ನು ಔದಾಸೀನ್ಯ ದೃಷ್ಟಿಯಿಂದ ನೋಡದೆ ಸ್ವಲ್ಪ ಗಮನ ಕೊಟ್ಟರೆ ಒಳಿತಿತ್ತು.

ಮನಸ್ಸು ಎಲ್ಲೆಲ್ಲೋ ಧಾವಿಸುತ್ತಾ ಹೋಗುತ್ತಿದೆ........

*   *   *   *   *   *

15 – 5 – 1970

ನಮ್ಮ ಜೀವಮಾನದಲ್ಲಿ ಅತಿ ಸಂಕಷ್ಟಪೂರಿತ ದಿನಗಳಲ್ಲಿ ಇದೂ ಒಂದು. ನೃತ್ಯ–ಪ್ರದರ್ಶನದ ಶ್ರಮದಿಂದಾಗಿ ಇಂದು ಬೆಳಿಗ್ಗೆ ಪತಿಯವರ ಜ್ವರ ಏರುತ್ತಾ ಏರುತ್ತಾ ಮಧ್ಯಾಹ್ನ ಸುಮಾರು 2 ಗಂಟೆಗೆ 106° ಗೆ ತಲುಪಿತು ! ಅಷ್ಟು ಜ್ವರ ಅವರಿಗೆ ಎಂದೂ ಬಂದಿದ್ದಿಲ್ಲ. ಜ್ವರದ ತೀವ್ರತೆಯಿಂದಾಗಿ ಜ್ಞಾನ ತಪ್ಪುತ್ತಲಿತ್ತು. ಕೈಕಾಲು ಸೋತು ಹೋಗಿ ಮಾತೇ ಹೊರಡಲಾರದಂತಾಯಿತು !

"ಜಯದೇವನಿಗೆ ಹೇಳಿ ಕಳುಹಿಸು........ಮರು ವಿಮಾನಕ್ಕೇ ಬರಲು ಹೇಳು.... ನಾನಿನ್ನು ಉಳಿಯುವುದಿಲ್ಲ........ಅವನು ಬರಲೇ ಬೇಕು....ಜಯದೇವನಿಗೆ ತಂತಿ ಕೊಟ್ಟು ಕರೆತರಿಸು...." ಎಂದು ಹೇಳಿ ಪತಿಯವರು ಒಡನೆಯೇ ಮೌನವಾದರು. ಅವರಿಗೆ ಸಂಪೂರ್ಣ ಜ್ಞಾನ ತಪ್ಪಿಹೋಯಿತು. ನಾನು ಕುಸಿದು ಬಿದ್ದೆ. ದುಃಖದಿಂದ ಎದೆ ಕಿತ್ತುಹೋದಂತಾಯಿತು. ಕೈಕಾಲುಗಳು ನಡುಗಲಾರಂಭವಾಯಿತು. ಆದರೆ ನಾನು .... ನಾನೇ ಈಗ ಧೈರ್ಯ ಕೆಟ್ಟರೆ ಹೇಗೆ? .... ಹೇಗೆ? ....ಪಕ್ಕದ ಕೋಣೆಯಲ್ಲಿ ಶ್ರೀಮತಿ ರತಿ ವಿಶ್ರಮಿಸಿಕೊಂಡಿದ್ದರು. ಕೋಣೆಯ ಬಾಗಿಲನ್ನು ತಟ್ಟಿ, ಅವರನ್ನು ಎಬ್ಬಿಸಿ, ನನ್ನ ಸ್ಥಿತಿಯನ್ನು ಹೇಳಿ ವೈದ್ಯರಿಗೆ ಒಡನೇ ಬರಲು ಫೋನ್ ಮಾಡಿ ಎಂದು ಬೇಡಿಕೊಂಡೆ. ಅವರು ನನಗೆ ಧೈರ್ಯ ಹೇಳಿ, ಆ ಕೂಡಲೇ ಆ ಐರಿಷ್ ವೈದ್ಯರಿಗೆ ಕಾರು ಕಳುಹಿಸಿ ಕರೆಸಿದರು.

ಅವರು ಬಂದು ಒಂದು ಇಂಜೆಕ್ಷನ್ ಕೊಟ್ಟ ಮೇಲೆ ಪತಿಯವರು ಸ್ವಲ್ಪ ಚೇತರಿಸಿಕೊಂಡರು. ಜ್ವರವನ್ನು ಇಳಿಸಲು ಅನೇಕ ವೈದ್ಯಕೀಯ ಕಸರತ್ತುಗಳನ್ನು ನಡೆಸಿದರು. 'ಹೆದರುವ ಅಗತ್ಯವಿಲ್ಲ. ಇದು 'ಏಷ್ಯನ್ ಫ್ಲೂ' ಅಷ್ಟೇ' ಎಂದರು. ಸಾಯಂಕಾಲದ ಹೊತ್ತಿಗೆ ಪತಿಯವರು ಪುನಹ ಮೊದಲಿನಂತೆಯೇ ಮಾತನಾಡಲು ಆರಂಭಿಸಿದರು. ಜ್ವರವು ಗಂಟೆಗಂಟೆಗೂ ಕಡಿಮೆಯಾಗುತ್ತಾ ಬಂದು ರಾತ್ರಿಯ ಹೊತ್ತಿಗೆ ಪೂರ್ತಿಯಾಗಿ ಇಳಿಯಿತು.

ಅಂದಿನಿಂದ ಜ್ವರ ಮತ್ತೆ ಕಾಣಿಸಲಿಲ್ಲ. ಎಲ್ಲಾ ಭಗವಂತನ ಕೃಪೆ!

ಶ್ರೀಮತಿ ರತಿಯವರ ಮನೆಯಲ್ಲಿನ ಚೀನಿ ಅಡಿಗೆಯಾಕೆ ಪ್ರತಿದಿನ ಜೇಗ್ಗೆ ಪತಿಯವರಿಗೆಂದು ಮಹಡಿಯ ಮೇಲಿನ ಕೋಣೆಗೇ ಆರೋಗ್ಯಕರ ಹಾಗೂ ಪುಷ್ಟಿಕರವಾದ 'ಸೂಪ್' (Soups)ಗಳನ್ನೂ, ಮೊಟ್ಟೆ, ರೊಟ್ಟಿ, ಬೆಣ್ಣೆ, ಹಣ್ಣು, 'ಜೇಮ್' ಗಳನ್ನು ತಂದಿಡುತ್ತಿದ್ದಳು. ಪತಿಯವರು ಅದನ್ನು ಸೇವಿಸುತ್ತಾ ದಿನೇ ದಿನೇ ಶಕ್ತಿ ಪಡೆದರು. ದೇವತಾನುಗ್ರಹ !

* * * * * *

17 – 5 – 1970

ಅವರು ಶಕ್ತಿ ಪಡೆದಂತೆ, ನಮ್ಮ ಮುಂದಿನ ಕಾರ್ಯಕಲಾಪಗಳನ್ನು ಯೋಚಿಸಿದೆವು. ಟಿ. ವಿ. ಕಾರ್ಯಕ್ರಮ ಒಂದು. ಒಂದು ರೇಡಿಯೋ ಸಂದರ್ಶನ. ಅಲ್ಲದೆ ಸಿಂಗಾಪುರ ದರ್ಶನ ಯಾತ್ರೆಯಲ್ಲಿ ಕೊಂಡುಕೊಳ್ಳಬೇಕಾದ ವಿಷಯಗಳು. ಇದು ಒಂದು ಅನಿರ್ಬಂಧ ರೇವು ತಾನೇ ? ಇಲ್ಲಿ ಕೊಂಡುಕೊಳ್ಳದೇ ಇದ್ದರೆ ಇನ್ನೆಲ್ಲೂ ಸಾಧ್ಯವಿಲ್ಲ.

ರೇಡಿಯೋ ಸಂದರ್ಶನದಲ್ಲಿ ನಮ್ಮ ಭೂಪ್ರದಕ್ಷಿಣೆಯ ವಿಚಾರವಾಗಿಯೂ, ನೃತ್ಯಕಲೆಯ ವಿಚಾರವಾಗಿಯೂ ಕೇಳಿದರು. ಟಿ. ವಿ. ಯನ್ನು ತುಂಬಾ ಚೆನ್ನಾಗಿ ತೆಗೆದರು. ಸುಮಾರಾಗಿ ಚಲನ ಚಿತ್ರ ತೆಗೆಯುವಷ್ಟೇ ಕೂಲಂಕುಷವಾಗಿ ಪ್ರತಿಯೊಂದು ಸೂಕ್ಷ್ಮ ವಿಷಯವನ್ನೂ ಗಮನದಲ್ಲಿಟ್ಟು ನೃತ್ಯಕಲೆಯ ಸುಂದರ ಟಿ. ವಿ. ಯಾಗುವಂತೆ ಕಷ್ಟಪಟ್ಟು ತೆಗೆದರು. ನಮಗಂತೂ ತುಂಬಾ ಹಿತವಾಗಿತ್ತು.

ಕೆಲವೊಮ್ಮೆ ಮುನ್ಸೂಚನೆ ಇಲ್ಲದೆ, ಯಾವ ತಯಾರಿಕೆಯೂ ಇಲ್ಲದೆ, ಟಿ. ವಿ. ಕಾರ್ಯಕ್ರಮ ನಡೆಸಿದ್ದೇವೆ. ಹೊಂಗ್‌ಕೊಂಗ್ ಬಿಡುವ ಅರ್ಧ ಗಂಟೆ ಮುಂಚೆ ಟಿ. ವಿ. ಕಾರ್ಯಕ್ರಮಕ್ಕೆ ಆಹ್ವಾನವಿತ್ತಿದ್ದರು. ಆದರೆ ಅವರು ಕೊಡುವ ಹಣ ಅಂದಿನ ಒಂದು ದಿನದ ಹೋಟೆಲು ಖರ್ಚಿಗೂ ಸಾಕಾಗುತ್ತಿರಲಿಲ್ಲ. ಆದ್ದರಿಂದ ನಿರಾಕರಿಸಿದ್ದೆವು. ಕಲಾ ಜೀವನದಲ್ಲಿ ಇಂತಹ ಸಂದರ್ಭಗಳೂ ಬರುತ್ತವೆ.........ಕೈ ತಪ್ಪಿ ಹೋಗುತ್ತವೆ.

ಈಗ ಮಲೇಸಿಯಾದ ಕುಆಲಾ ಲುಂಪುರ್‌ನಿಂದ ನಮಗೆ ಕರೆ ಬಂದಿದೆ. ಅಲ್ಲೂ ಟಿ. ವಿ. ಪ್ರದರ್ಶನ ಒಂದು, ನೃತ್ಯ ಪ್ರದರ್ಶನ ಒಂದು ಏರ್ಪಾಡಾಗಿದೆ. ವಸತಿ ಸೌಕರ್ಯದ ಏರ್ಪಾಟೂ ಆಗಿದೆ. 20ನೇ ತಾರೀಕಿಗೆ ಹೊರಡುವುದೆಂದು ಮಾಡಿದ್ದೇವೆ. ಅಷ್ಟರೊಳಗೆ ಪತಿಯವರು ಪೂರ್ಣ ಗುಣಮುಖರಾಗುವರೆಂದು ನಂಬಿದ್ದೇವೆ. ....ಬೆಂಗಳೂರಿಗೆ ಪತಿಯವರ ಕಾಹಿಲೆ ವಿಷಯ ತಿಳಿಸಲಿಲ್ಲ.

* * * * * *

ಸಿಂಗಾಪುರ,
18 – 5 – 1968

ಮುದ್ದು ಶಿವದೇವ್,

ಇಂಜಿನಿಯರಿಂಗ್‌ನಲ್ಲಿ Ph. d. ಮಾಡಲು ನಿನಗೆ ಒಳ್ಳೆಯ ವಿದ್ಯಾರ್ಥಿ ವೇತನ ಅಮೇರಿಕಾದಿಂದಲೇ ಸಿಕ್ಕಿದೆ ಎಂದು ಕೇಳಿ ಎಷ್ಟು ಸಂತೋಷವಾಯಿತು ! ನಮ್ಮ ಹೃತ್ಪೂರ್ವಕ ಶುಭಾಶಯಗಳು ಮಗು ! ವಿದ್ಯಾರ್ಥಿ ವೇತನ ಸಿಗದೆ ಇದ್ದರೆ ನೀನು ಆ ದೇಶಕ್ಕೆ ಹೋಗುವುದು ಸರಿಯಾಗಿರಲಿಲ್ಲ. ನಿನ್ನಂತಹ ಪ್ರತಿಭಾವಂತ ವಿದ್ಯಾರ್ಥಿ ಸಾಲ ತೆಗೆದು ವಿದ್ಯಾಭ್ಯಾಸ ಪಡೆಯುವ ಅಗತ್ಯವಿರಲಿಲ್ಲ. ನಿನಗೆ ಈ ಅಮೂಲ್ಯ ಅವಕಾಶ ಸಿಕ್ಕಿದ್ದು ನಮಗೆ ಎಲ್ಲಿಲ್ಲದ ಆನಂದ ತಂದಿದೆ. ನಿನಗೆ ಬರುವ ವೇತನದಿಂದ ಅಮೇರಿಕಾ ದೇಶದಲ್ಲಿ ನೀನು ಸುಖವಾಗಿ ಯಾವ ಆರ್ಥಿಕ ಯೋಚನೆಯೂ ಇಲ್ಲದೆ ಓದು ಮುಂದುವರಿಸಬಹುದು. ವಿಮಾನಯಾನದ ಖರ್ಚಿಗೆ ನಾವು ಹಣ ಕೊಡುತ್ತೇವೆ. ಸಮುದ್ರಯಾನವನ್ನಾಗಲೀ ವಿಮಾನಯಾನವನ್ನಾಗಲಿ ಮಾಡು, ನಿನ್ನಿಷ್ಟ ! ಟಿಕೇಟಿನ ದರ ಎಷ್ಟೆಂದು ತಿಳಿದುಕೊಂಡಿರು. ಅಮೇರಿಕಾ ದೇಶದ ಎಲ್ಲ ಸ್ನೇಹಿತರಿಗೆ ನಿನ್ನ ಬರುವಿಕೆಯ ಸುದ್ದಿ ತಿಳಿಸುವೆವು. ನಿನಗೆ ಹೊಸ ದೇಶ, ಹೊಸ ಜನರು ಎಂದು ಮನಸ್ಸು ಕದಡಬಾರದು. ನಿನಗಾಗಿ ಸಹಾಯ ಮಾಡುವ ನಮ್ಮ ಸ್ನೇಹಿತರು ಅಲ್ಲಿ ಇದ್ದಾರೆ. ಏನೂ ಹೆದರಬೇಡ. ದೇವರ ದಯೆಯಿಂದ ಎಲ್ಲವೂ ಸರಿಹೋಗುವುದು.

ನೀನು ಇಂಜಿನಿಯರಿಂಗ್ Ph. D. ಮಾಡುವುದಕ್ಕೆ ಅಮೇರಿಕಾ ದೇಶಕ್ಕೆ 3 ರಿಂದ 5 ವರ್ಷಗಳವರೆಗೆ ಹೋಗುವೆಯೆಂಬ ಸಮಾಚಾರಗಳನ್ನು ಮಿಶ್ರ ಭಾವನೆಗಳಿಂದ ಓದಿದೆವು ಮಗು ! ನಿನ್ನ ಜೀವನದ ಚಿಕ್ಕ ವಯಸ್ಸಿನಲ್ಲಿಯೇ ಆದ ಈ ಅದೃಷ್ಟದ ಹೊಡೆತಕ್ಕೆ ಹೆಮ್ಮೆ ಪಡುವಾಗಲೇ, ನಿನ್ನಿಂದ ಇಷ್ಟು ದಿನ ಅಗಲಿರಬೇಕಾದ ಕಠೋರ ಸತ್ಯ ನಮ್ಮನ್ನು ಕಾಡುತ್ತಿದೆ. ನಮ್ಮ ಪುಟ್ಟ ಸಂಸಾರದಿಂದ ನಿನ್ನನ್ನು ದೂರ ಕಳುಹಿಸಬೇಕೆಂದು ವ್ಯಥೆಯಾಗುತ್ತಿದೆ. ಅದನ್ನು ಯೋಚಿಸಿದರೆ ಈ ಕಾಗದವನ್ನು ಬರೆಯುತ್ತಿರುವಾಗಲೂ ನನಗೆ ಕಣ್ಣಿಂದ ನೀರು ಸುರಿಯುತ್ತಿದೆ.... ಅಶ್ರುಧಾರೆಯನ್ನು ತಡೆಯಲು ವಿಶ್ವಪ್ರಯತ್ನ ಮಾಡಿದರೂ ಅದು ಈಗ ಅಸಾಧ್ಯವಾಗಿದೆ. ಆದರೆ ಜೀವನವೆಂಬುದು ಹಾಗೆಯೇ ! ಒಳ್ಳೆಯದು, ಕೆಟ್ಟದ್ದು, ಸಂಬಂಧವಿಲ್ಲದಿರುವುದು ಇತ್ಯಾದಿ ಹಲವಾರು ಸನ್ನಿವೇಶಗಳು ಜೀವನದಲ್ಲಿ ಬರುತ್ತವೆ, ಮರೆಯಾಗುತ್ತವೆ. ಬಂದ ಹಾಗೆಲ್ಲ ಅದನ್ನು ಎದುರಿಸುವುದರಲ್ಲಿ ಚಾತುರ್ಯವಿದೆ.... ಈ ಸಾಹಸದಲ್ಲಿ ದೇವರು ನಿನ್ನನ್ನು ಕಾಪಾಡಲಿ ಮಗೂ ! ನೀನು ಒಳ್ಳೆಯ ವಿಷಯುಗಳಲ್ಲಿ ಅರ್ಹತೆ ಪಡೆದಿರುವ ವಿದ್ಯಾರ್ಥಿ. ನಿನ್ನ ಜೀವನ ಮಹತ್ವದ ಸಿದ್ಧಿಗಳಿಂದಲೇ ತುಂಬಿ ತುಳುಕಲಿ ! ನೀನು ಅಮೇರಿಕೆಯಲ್ಲಿ ಓದಿ, Ph. D. ಪದವಿ ಪಡೆದು, ನಮ್ಮ ಭಾರತಕ್ಕೆ ಹಿಂತಿರುಗಿ,

ನಮ್ಮ ದೇಶದ ಅಭಿವೃದ್ಧಿಗೆ ಪರಿಶ್ರಮ ಪಡುವಂತಾಗಲಿ ಎಂದೇ ನಮ್ಮ ಆಸೆ. ಈಗ ನಿನ್ನೊಡನೆ ಇರಬೇಕೆಂದು ಮನಸ್ಸು ಬಲವಾಗಿ ಹೇಳುತ್ತಿದೆ.

ಇನ್ನು ಕೆಲವು ದಿನಗಳು ! .... ಇನ್ನು ಕೆಲವೇ ದಿನಗಳು !! ಇನ್ನು 10–12 ದಿನಗಳೊಳಗೆ ನಿಮ್ಮನ್ನು ನೋಡುವೆವು ! ಈಗ ನಾವು ಹಾಕಿರುವ ಕಾರ್ಯಕ್ರಮದ ಪ್ರಕಾರ ಈ ತಿಂಗಳ ಕೊನೆಗೆ ನಾವು ಬೆಂಗಳೂರು ತಲುಪಲೇ ಬೇಕು. ನಿನ್ನ ಜೊತೆ ಕಡೆಯ ಪಕ್ಷ 3 ತಿಂಗಳಾದರೂ ಇದ್ದು ನಿನ್ನನ್ನು ಕಳುಹಿಸಬೇಕು ಎಂಬ ಆಸೆ.

ನಿನ್ನ ಅಣ್ಣನ ಕೆಮೆರಾಗೆ ಬೇಕಾದ ಹೆಚ್ಚಿನ ಎಲ್ಲಾ ಸಲಕರಣೆಗಳನ್ನು ಕೊಂಡಿದ್ದೇವೆ. ಅವನು ಬಯಸಿ ಬರೆದಂತೆ ಪ್ರೊಜೆಕ್ಟರ್ ಕಂಡುಕೊಂಡು ಕೊಂಡಿದ್ದೇವೆ. ನಿನಗಾಗಿ ದೂರದರ್ಶಿ, ಟ್ರಾನ್ಸಿಸ್ಟರ್, ದುರ್ಬೀನುಗಳನ್ನು ಹಿಂದೆ ಹೇಳಿದಂತೆ ಕೊಂಡುಕೊಳ್ಳಲಿಲ್ಲ. ನೀನು ಈಗ ಭಾರತದಿಂದ ಅಮೇರಿಕಕ್ಕೆ ಹೋಗುವವನಲ್ಲವೇ ? ಅಲ್ಲಿ ಬೇಕು ಬೇಕಾದುದನ್ನು ನೀನು ಕೊಳ್ಳಬಹುದು. ನಿರಾಶೆಯಾಗುವುದಿಲ್ಲ ತಾನೆ !! ನಿನ್ನ ತಂದೆಯವರಿಗೆ ಕೆಲವು ದಿನ (Asian Flue) ಏಶ್ಯಿಯನ್ ಫ್ಲೂ ಆಗಿತ್ತು. ಈಗ ಚೆನ್ನಾಗಿದ್ದಾರೆ. ಆದ್ದರಿಂದ ಪಯಣ ಮುಂದಕ್ಕೆ ಹಾಕಿದ್ದೆವು. 21ನೇ ತಾರೀಖಿಗೆ ಕು-ಆಲಾ ಲಾಂಪುರಕ್ಕೆ ಹೋಗಿ ಅಲ್ಲಿ ನಾಲ್ಕೈದುದಿನಗಳ ಕಾರ್ಯ ಮುಗಿಸಿ, 26ಕ್ಕೆ ಕೊಲಂಬೋಗೆ ಹೋಗುತ್ತೇವೆ. 27ನೇ ತೇದಿ ಅಲ್ಲಿ ನಮ್ಮ ಕಾರ್ಯಕ್ರಮ. ಅದಾದ ಮೇಲೆ 30 ಇಲ್ಲವೇ 31 ಮದರಾಸಿಗೆ ಬರುತ್ತೇವೆ.

ಅಮ್ಮ ಮತ್ತು ಅಪ್ಪ ನಮ್ಮನ್ನು ಸ್ವಾಗತಿಸಲು ಪುನಹ ಬೆಂಗಳೂರಿಗೆ ಬರುವವರಿದ್ದಾರೆಂದು ಕೇಳಿ ತುಂಬಾ ಸಂತೋಷವಾಯಿತು.

ಇತಿ ಅಮ್ಮನ ಆಶೀರ್ವಾದಗಳು.

* * * * * *

ಸಿಂಗಾಪುರ
19–5–1960

ಮುದ್ದು ಮಕ್ಕಳೇ,

ಶ್ರೀಮತಿ ರತಿಯವರು ನಮಗೆ ಅಕ್ಕರೆಯಿಂದ ಸಿಂಗಾಪುರದ ದರ್ಶನ ಮಾಡಿಸುತ್ತಿದ್ದಾರೆ. ಸಿಂಗಾಪುರ ಒಂದು ಚಿಕ್ಕ ದ್ವೀಪ. ಅನಿರ್ಬಂಧ ರೇವು ಪಟ್ಟಣ. ಸ್ವತಂತ್ರ ದೇಶ.... " ಸಿಂಹದ ಪುರವಾಗಿದ್ದ " ಇದು " ಸಿಂಗಾಪುರವಾಗಿದೆ "ಯಂತೆ. ಬೆಳಿಗ್ಗೆಯಿಂದ ರಾತ್ರಿಯವರೆಗೆ ನಮಗಂತೂ ಚಕ್ರಭ್ರಮಣ. ಇಂದು ಬೆಳಿಗ್ಗೆ ಇಲ್ಲಿ ಬಹಳ ಚಟುವಟಿಕೆಯಿಂದ ನಡೆಯುತ್ತಿರುವ ಭಾರತೀಯ ನೃತ್ಯ ಶಾಲೆಗಳಿಗೆ ಭೇಟಿ ಇತ್ತೆವು. ಇಲ್ಲಿ ತಮಿಳುನಾಡಿನಿಂದ ಬಂದ ಭಾರತೀಯರು ಹೆಚ್ಚಾಗಿದ್ದಾರೆ. ಇವರು ಭಾರತೀಯ

ಕಲೆಗಳನ್ನು ಬಹಳ ಆಸಕ್ತಿಯಿಂದ ಕಲಿಯುತ್ತಿದ್ದಾರೆ. ವೀಣೆ, ಸಂಗೀತ, ಭರತ ನಾಟ್ಯ ಇತ್ಯಾದಿ ಶಾಸ್ತ್ರೀಯ ಭಾರತೀಯ ಕಲೆಗಳ ಅಭ್ಯಾಸ ಮಾಡುತ್ತಾರೆ. ನಮಗಾಗಿ ಒಂದು ವಿಶೇಷ ಭರತನಾಟ್ಯ ನೃತ್ಯ ಕಾರ್ಯಕ್ರಮವನ್ನು ವಿದ್ಯಾರ್ಥಿಗಳಿಂದ ಮಾಡಿಸಿದರು. ಹೆಣ್ಣು ಮಕ್ಕಳು ಚೆನ್ನಾಗಿ ನರ್ತಿಸಿದರು. ಶಾಲೆಯಲ್ಲಿನ ಎಲ್ಲರೂ ನಮ್ಮನ್ನು ಗೌರವದಿಂದ ಆದರಿಸಿ, ಸತ್ಕರಿಸಿ ಬೀಳ್ಕೊಟ್ಟರು.

ಆಮೇಲಿಂದ ತಮ್ಮ ಕಾರನ್ನು ಸಿಂಗಾಪುರದ ಜಲಮುಖೀ ಹಾದಿಯ ಮೇಲೆ ಹೋಗಲು ಹೇಳಿದೆವು. ಇಲ್ಲಿ ನೀರಿನ ಮೇಲೆ ಭರದಿಂದ ನಡೆಯುವ ದಿನ ನಿತ್ಯದ ಅತ್ಯಗತ್ಯವಾದ ವಾಣಿಜ್ಯ ಪ್ರಪಂಚದ ವಿರಾಟ್ ದರ್ಶನ ಆಯಿತು. ಕಡಲು ನದಿಗಳಲ್ಲೆಲ್ಲಾ ಚೀನೀಯರ ಸಾಂಪಾನ್‌ಗಳು (Sampans) ಮತ್ತು ಟೊಂಕಾಂಗ್‌ಗಳು (Ton Kang) ಸರಕು ಕಟ್ಟೆಗಳೂ (Wharves) ಹಡಗುಗಳಿಗೂ ಇವುಗಳ ಮೂಲಕ ಸಂಚಾರ ಅಹರ್ನಿಶಿ ಸಾಗುತ್ತದೆ. ಪ್ರಪಂಚದ ಸರಕುಗಳನ್ನೆಲ್ಲಾ ಹೊತ್ತು ತರುವ ದೋಣಿಗಳು, ಹಡಗುಗಳು, ಆಮದು ರಫ್ತು ಆಗುತ್ತಿರುವ ರಭಸದ ಸಡಗರದ ಕೆಲಸಗಳು —ಇವೆಲ್ಲಾ ನೋಡಲು ತುಂಬಾ ಸ್ವಾರಸ್ಯ. ಅನಿರ್ಬಂಧ ಬಂದರಾದುದರಿಂದ ಇಲ್ಲಿ ವಿಶ್ವದಲ್ಲಿನ ಯಾವುದೇ ಮಾರಾಟ ವಸ್ತುವಾದರೂ ಸಿಗುತ್ತದೆ. ಇದು ಕೊಳ್ಳುವವರ ಸ್ವರ್ಗ ! ನಿಜವಾಗಿ ಸರಸ-ಸುಂದರ ನಗರ ! ಸಿಂಗಾಪುರದ ನದಿ ನಗರದ ಮಧ್ಯದಲ್ಲಿ ಜನಸಂದಣಿಯನ್ನು ಭೇದಿಸಿ ಎಂಬಂತೆ ಹರಿಯುತ್ತದೆ. ದಡದಲ್ಲಿ ವಿಶ್ವಜನತೆಯ ನೂಕುನುಗ್ಗಲು. ಇಲ್ಲಿನ ಜನಸಂಖ್ಯೆಯಲ್ಲಿ ಭಾರತೀಯರು, ಬ್ರಿಟಿಷರು, ಅಲ್ಲದೆ ಹೆಚ್ಚು ಸಂಖ್ಯೆಯಲ್ಲಿ ಚೀನಿಯರೂ ಇದ್ದಾರೆ. ದಾರಿಯಲ್ಲಿ ನಡೆಯುವಾಗ ಇಲ್ಲಿನ ರಾಷ್ಟ್ರೀಯ ಭಾಷೆ ಮಲೈ, ಮತ್ತು ತಮಿಳು, ಚೀನಿ, ಇಂಗ್ಲಿಷ್ ಭಾಷೆಗಳು ಕಿವಿಯ ಮೇಲೆ ಬೀಳುತ್ತಿರುತ್ತದೆ. ಪೂರ್ವ-ಪಶ್ಚಿಮ ಸಂಗೀತದ ಧ್ವನಿಗಳೂ ತೇಲಿ ಬರುತ್ತವೆ. ಮಲೈ ಜನರು ಮುಸ್ಲಿಮರು. ರಸ್ತೆಗಳಲ್ಲಿ ಇತರ ವಾಹನಗಳೊಂದಿಗೆ 3 ಚಕ್ರದ ಮಾನವ ಚಾಲಿತ ಸೈಕಲ್ ರಿಕ್ಷಾಗಳನ್ನೂ ಕಂಡೆವು.

ಸಾಯಂಕಾಲದ ಮಬ್ಬುಗತ್ತಲಲ್ಲಿ, ಅತಿ ಎತ್ತರದ ಗುಡ್ಡಕ್ಕೆ ಹೋಗಿ, ಪೇಯವೊಂದನ್ನು ಕುಡಿಯುತ್ತಾ, ಸಿಂಗಾಪುರ ರಾತ್ರಿಯ ಬೆಳಕಿನಲ್ಲಿ ಮಿನುಗಿ, ಆಕಾಶವನ್ನು, ಆಶ್ರಿತ ಬಂದರನ್ನು ಬೆಳಗಿಸುವುದನ್ನು ಕಂಡೆವು. ನಗರದ ಪಕ್ಷಿನೋಟ ರಮ್ಯವಾಗಿತ್ತು. ನೀರಿನಲ್ಲಿ ಪ್ರತಿಬಿಂಬಿಸುತ್ತಿದ್ದ ಆ ರಂಗತರಂಗದ ವೈವಿಧ್ಯತೆಯನ್ನು ಕಂಡು ಕುಳಿತಲ್ಲಿಯೇ ಮೈ ಮರೆತೆವು.

"ನೀವು 'ಬೂಗಿಸ್ ಸ್ಟ್ರೀಟ್' ನೋಡದೆ ಸಿಂಗಾಪುರ ಖಂಡಿತ ಬಿಡಬಾರದು" ಎಂದು ಜಯದೇವ ಬರೆದಿದ್ದನಲ್ಲವೇ ? ಅದನ್ನು ನೋಡಲು ನಾವು ಅಪೇಕ್ಷೆಪಟ್ಟಾಗ, ನಮ್ಮ ಅತಿಥೇಯರು – "ನಿಮ್ಮ ಮಗನಿಗೆ ಅದರ ವಿಚಾರ ಗೊತ್ತಾದುದು ಹೇಗೆ ?"

ಎಂದು ಆಶ್ಚರ್ಯಪಟ್ಟರು. 'ನಮ್ಮ ಜಯದೇವನಿಗೆ ಗೊತ್ತಿಲ್ಲದ ವಿಷಯವಿಲ್ಲ!' ಎಂದೆವು. ರಾತ್ರಿಯಲ್ಲಿ ನೋಡಬೇಕಾದ ಆ ಸ್ಥಳಕ್ಕೆ ಅವರು ನಮ್ಮನ್ನು ಕರೆದು ಕೊಂಡು ಹೋದರು – ಹೌದು! 'ಬೂಗಿಸ್ ಸ್ಟ್ರೀಟ್' ಇಲ್ಲಿ ನೋಡಬೇಕಾದದ್ದು! ಓತಿ ತನ್ನ ದೇಹ ಸ್ವಭಾವವನ್ನು ಗಳಿಗೆ ಗಳಿಗೆಗೂ ಹೇಗೆ ಬದಲಾಯಿಸುತ್ತದೆಯೋ ಹಾಗೆ, ಈ ಚೀನಿಯರ ರಸ್ತೆ, ನಮ್ಮ ಕಣ್ಣುಮುಂದೆಯೇ ಹಲವಾರು ಬದಲಾವಣೆ ಗಳನ್ನು ಹೊಂದುತ್ತದೆ. ಜನರ ವಾಸಸ್ಥಾನವಾಗಿದ್ದ ರಸ್ತೆ ಕ್ರಮೇಣ ಮಾರುಕಟ್ಟೆಯ ರಸ್ತೆಯಾಗಿಯೂ, ನಂತರ ಊಟ–ಉಪಹಾರದ ಪ್ರದೇಶವಾಗಿಯೂ, ಕೊನೆಗೆ ಪೇಟೆ ಬೀದಿಯಾಗಿಯೂ ಮಾರ್ಪಾಟಾಗುತ್ತದೆ!

ಈ ರಸ್ತೆಯಲ್ಲಿ ಓಡಾಡುವಾಗ ಆಹಾರ ಪದಾರ್ಥಗಳ ವಿವಿಧ ವಾಸನೆಯು ಗಾಳಿ ಯಲ್ಲಿ ತೇಲಿ ಬರುತ್ತದೆ. ಜನರು ತಮ್ಮ ಅಡಿಗೆ ಮನೆಗಳಲ್ಲಿ ಅಡಿಗೆ ಮಾಡುವುದು ಸಾಲದೆಂದು ಕಾಲುದಾರಿಯ ಮೇಲೂ ಅಡಿಗೆ ಮಾಡುತ್ತಲೇ ಇರುತ್ತಾರೆ. ಸಿಂಗಾ ಪುರದಲ್ಲಿನ ಅತಿ ರುಚಿಕರ ಆಹಾರ ಇಲ್ಲಿ ಸಿಗುತ್ತದೆಯಂತೆ. ರಸ್ತೆ ನೋಡಲು ಅಷ್ಟು ಮನಸೊಪ್ಪುವಂತೆ ಇರದಿದ್ದರೂ, ಚೀನೀ ಆಹಾರ ಶುಚಿಯಾಗಿದೆಯಂತೆ. ಬಣ್ಣ ಬಣ್ಣದ ಜನರು, ಗುಂಪು ಗುಂಪುಗಳು 'ಮಾಯಾ ಬಜಾರ್' ನ ಕಲ್ಪನೆಯನ್ನು ಕೊಡುತ್ತದೆ. ನಮಗೆ ಮಾತ್ರ ಆ ಆಹಾರ ನೋಡಲು ವಿಚಿತ್ರವಾಗಿತ್ತು. ಗುಲಾಬಿ ಬಣ್ಣದ, ಬಾಳೆಹಣ್ಣಿನ ಗಾತ್ರದ 'ಪ್ರಾನ್' ಮೀನುಗಳು, ಏಡಿಗಳು, ಅತಿದೊಡ್ಡ ಕಡಾಯಿಗಳಲ್ಲಿ. ಹಂದಿಮಾಂಸ, ಬೇಯಿಸಿದ ಬಾತುಕೋಳಿಗಳು, ಪಶುಮಾಂಸದ ಉದ್ದುದ್ದದ ಚೂರುಗಳು, ಹಚ್ಚ ಹಸಿರು ತರಕಾರಿ, ಕುತ ಕುತ ಕುದಿಯುತ್ತಿರುವ ಶ್ಯಾವಿಗೆ, ದೊಡ್ಡ ದೊಡ್ಡ ಪಾತ್ರೆಗಳಲ್ಲಿ ಮೆತ್ತಗೆ ಬೇಯುತ್ತಿರುವುದು! ಎಲ್ಲೆಲ್ಲೂ ರಾಶಿ ರಾಶಿಯಾಗಿ ಅನ್ನ. ಬೇಯಿಸಲು ಹೆಚ್ಚಾಗಿ ಇದ್ದಿಲಿನ ಒಲೆಗಳು! ಬೆಳಕಿಗೆ ವಿದ್ಯುದ್ದೀಪ – ಇಲ್ಲದಿದ್ದರೆ ಪೆಟ್ರೋಮ್ಯಾಕ್ಸ್ ದೀಪಗಳು. ರಾತ್ರಿಯಾಗುತ್ತಲೇ ಈ ರಸ್ತೆ ತುಂಬಾ ಮೇಜುಗಳೂ, ಕುರ್ಚಿಗಳೂ, ಆಹಾರ ಅಪೇಕ್ಷಿಸಿ ಬರುವ ಚೀನಿ, ಮಲೈ, ಬ್ರಿಟಿಷ್ ಜನರನ್ನೂ ಕಂಡೆವು.

ಮಧ್ಯರಾತ್ರಿ ಕಳೆದ ಮೇಲೆ ಇಲ್ಲಿ ನಡೆಯುವ ನಾಟಕಗಳೇ ಬೇರೆಯಂತೆ! ಹೆಣ್ಣು ಗಂಡಿನ ಕಣ್ಣು ದೃಷ್ಟಿಯ ಕಣ್ಣು ಮುಚ್ಚಾಲೆ, ಅವರುಗಳ ಸಹಭೋಜನ, ಸರಸ ಕೂಟ, 'ಪುರುಷ ಪ್ರಕೃತಿ ಮಿಲನ!' ಇತ್ಯಾದಿ, ಇತ್ಯಾದಿ........ಬದುಕಲಲ್ಲವೇ ಬದುಕಿರುವುದು?

ಪೇಟೆಗಳನ್ನೆಲ್ಲಾ ಸುತ್ತಾಡಿದೆವು. ನನಗಾಗಿ ನಾಲ್ಕೈದು ಇಲ್ಲಿನ ಸೀರೆಗಳನ್ನು ಕೊಂಡುಕೊಂಡೆವು. ನನಗಾಗಿ ಸೀರೆ ಕೊಂಡುಕೊಳ್ಳುವುದು ನಾವು ಇಲ್ಲೇ ಮೊದಲು. ಶ್ರೀಮತಿ ರತಿಯವರ ತಾಯಿಯವರು ನನಗೆಂದು ಬಹು ಬೆಲೆ ಬಾಳುವ ಒಂದು ಭಾರಿ

ಸೀರೆಯನ್ನು ಉಡುಗೊರೆಯಾಗಿ ಕೊಟ್ಟರು. ಸಿಂಗಾಪುರಕ್ಕೆ ಬಂದ ನೆನಪಿಗೆ ಇರಲೆಂದು! .... ಅವರ ಆತಿಥ್ಯವೇ ಮರೆಯಲಾಗದ ನೆನಪಾಗಿ ಋಣಾನುಬಂಧವಾಯಿತು.

ಆ ಸೀರೆ ಆ ಋಣಾನುಬಂಧದ ಸವಿನೆನಪನ್ನು ಮರುಕಳಿಸಲು ಸಹಾಯ ಮಾಡುತ್ತದೆಯಷ್ಟೇ!

'ಇಲ್ಲಿನ ಟೈಗರ್ ಬಾಮ್ಸ್ ಉದ್ಯಾನವನವನ್ನು (Tiger Balms Gardens) ನೀವು ನೋಡಲೇಬೇಕು' ಎಂದು ಶ್ರೀಮತಿ ರತಿಯವರು ನಮ್ಮನ್ನು ಕಾರಿನಲ್ಲಿ ಕಳುಹಿಸಿದರು. ಜೊತೆಗೆ ಭಾರತೀಯ ಲಲಿತ ಕಲಾ ಸಂಘದ ಅಧ್ಯಕ್ಷರೂ ಬಂದರು. ಹಾಂಗ್‌ಕೊಂಗ್‌ನಲ್ಲಿದ್ದಂತೆಯೇ ಇದೆ ಈ ತೋಟ ಕೂಡ! ಆದರೆ ಇಲ್ಲಿ ಜಾಗ ಮಾತ್ರ ವಿಶಾಲವಾಗಿತ್ತು. ಏರು–ತಗ್ಗುಗಳು, ಗುಡ್ಡ–ಕಣಿವೆಗಳು, ಗುಹೆ – ಕಂದರಗಳು, ವಿವಿಧ ಶೈಲಿಯ ಚಿಕ್ಕಪುಟ್ಟ ವಾಸ್ತುಶಿಲ್ಪ ಜಾಣ್ಮೆಯ ಕಟ್ಟಡಗಳು, ಬೇರೆ ಬೇರೆ ಗಾತ್ರದ ಪ್ರತಿಮೆಗಳು....ಅರ್ಥವಿಹೀನ ಶಿಲ್ಪಕಲಾ (?) ಪ್ರದರ್ಶನ....ಕಲಾತ್ಮಕವೇ ಅಲ್ಲದ ಅನೇಕಾನೇಕ ಸ್ವಾರಸ್ಯ ವಿಷಯಗಳು....ಮಕ್ಕಳಿಗೂ, ಯುವಕರಿಗೂ, ವಯಸ್ಸಾದವರಿಗೂ ವಿನೋದವನ್ನು ಕೊಡುವ ವೈದಿತ್ಯಗಳು ಇವೆಲ್ಲ ಇದ್ದವು. ಸೌಂದರ್ಯೋಪಾಸನೆಗೆ ಇಲ್ಲಿ ಅವಕಾಶವಿಲ್ಲದಿದ್ದರೂ, ಸುತ್ತಾಡಿ ಹೊತ್ತು ಹೋಯಿತು ಅಷ್ಟೇ!

ಈ ಉದ್ಯಾನವನವನ್ನು ನೋಡಿ ಹಿಂತಿರುಗುವಾಗ ನನಗೆ ಛಳಿ ಆರಂಭವಾಯಿತು. ತಲೆನೋವು ತಲೆದೋರಿತು. 'ಸೆಕೆ' ಎಂದು ಗಂಡಸರಿಬ್ಬರು ಎಳನೀರನ್ನು ಬಯಸಿ, ನದಿಯ ದಡದ ಮೇಲಿನ ಒಂದು ಉಪಹಾರ ಗೃಹಕ್ಕೆ ಕರೆದುಕೊಂಡು ಹೋದರು. ಆ ಎಳನೀರನ್ನು ಕುಡಿಯುವಾಗ ಯಾರೂ ನೋಡದಂತೆ ತಲೆನೋವು ಪರಿಹಾರಕ ಮಾತ್ರೆಗಳನ್ನು ನನ್ನ ಕೈಚೀಲದಿಂದ ತೆಗೆದು ನುಂಗಿದೆ. ನನಗೆ ಜ್ವರ ಬಂದ ಚಿಹ್ನೆ ಕಂಡರೂ ಹೇಳಲು ಮನಸ್ಸು ಬಾರದೆ ಮುಚ್ಚಿಟ್ಟೆ.

ಮಲೇಸಿಯಾದ ಕು–ಆಲಾಂಪುರ್ ಕಾರ್ಯಕ್ರಮಗಳನ್ನು ಒಪ್ಪಿಕೊಂಡಿದ್ದೇವೆ. ಅಲ್ಲದೆ ಕೊಲಂಬೋದಲ್ಲಿ ಭಾರತ ರಾಯಭಾರ ಕಛೇರಿಯವರು ಮೇ 27ಕ್ಕೆ ನಮ್ಮ ಕಾರ್ಯಕ್ರಮವನ್ನು ಏರ್ಪಡಿಸಿದ ಸುದ್ದಿ ತಂತಿಯ ಮೂಲಕ ಬಂದಿದೆ. ಸಿಲೋನಿನಲ್ಲಿಯೂ 3 ದಿನಗಳ ಪ್ರವಾಸವಿದೆ.

ಇದನ್ನು ನಿಮಗೆ ಬರೆದು ಬೇಗನೆ ಟಪ್ಪಾಲಿಗೆ ಹಾಕಲು ಅವಸರಿಸುತ್ತೇನೆ. ನನ್ನ ಜ್ವರ ಹೆಚ್ಚುತ್ತಲಿದೆ. ಬಹುಶಃ ನಮ್ಮ ಹಳೇ ಗೆಳೆಯ– ಆ 'ಏಷ್ಯನ್ ಫ್ಲೂ' ನೇ ಇರಬಹುದು. ಪತಿಯವರಿಗೂ, ಇನ್ನ್ಯಾರಿಗೂ ತಿಳಿಸಲಿಲ್ಲ. ರಾತ್ರಿ ಕಳೆದ ಮೇಲೆ ಅವರಿಗೆ ನಾಳೆ ತಾನೇ ತಾನಾಗಿ ಗೊತ್ತಾಗುತ್ತದೆ .... ಪುನಃ ಶ್ರೀಮತಿ ರತಿಯವರಿಗೆ ತೊಂದರೆ........ಏನು ತಿಳಿದುಕೊಳ್ಳುವರೋ ಎಂಬ ಚಿಂತೆ........!

ಮೇ 21ಕ್ಕೆ 'ಮಲೇಸಿಯಾ ಸಿಂಗಾಪುರ್ ಏರ್‌ಲ್ಯಾನ್ಸ್' ವಿಮಾನ ಮೂಲಕ ಕು-ಆಲಾಂಪುರಕ್ಕೆ ಹೋಗುವ ಟಿಕೇಟು ಪಡೆದಿದ್ದೇವೆ. ಇನ್ನೆರಡು ದಿನಗಳಲ್ಲಿ ಜ್ವರ ಹೋಗಿ ಗುಣವಾಗುವೆನೆಂಬ ಆಸೆ ಇದೆ........ಇಲ್ಲಿ ಅನಿರೀಕ್ಷಿತ ಹತ್ತು ದಿನಗಳ ಪ್ರವಾಸವಾಯಿತು.

—ಮುಂದಿನ ಪತ್ರ ಮಲೇಸಿಯಾದಿಂದ—

ಇತಿ ನಿಮ್ಮ
ಅಮ್ಮ.

ಸಿಂಗಾಪೂರದಿಂದ

ಮೆಲೇಸಿಯಾ ದೇಶಕ್ಕೆ

ಕು ಆ ಲಾ – ಲುಂ ಪು ರ್

ನ ಗ ರ ಕ್ಕೆ

ಕು–ಆಲಾಲುಂಪುರ್
25 - 5 - 1968

ಮುದ್ದು ಮಕ್ಕಳೇ,

ನಿಮ್ಮ ಕಾಗದ ಈಗ ನಾವು ನಿರೀಕ್ಷಿಸುತ್ತಿಲ್ಲ. ಏಕೆಂದರೆ ನೀವು ಬರೆದರೂ ಅದು ತಲುಪಲು ಸಂಭವವಿಲ್ಲ. ಒಂದೊಂದು ದೇಶದಲ್ಲಿ ಕೆಲವೇ ದಿನಗಳ ನಮ್ಮ ಪ್ರವಾಸವಿರುವುದರಿಂದ, ನೀವು ಬರೆದು, ಅದು ನಮ್ಮ ವಿಳಾಸ ಮುಟ್ಟುವಷ್ಟರಲ್ಲಿ ಬೇರೊಂದು ದೇಶದಲ್ಲಿ ಇರುತ್ತೇವೆ. ನಿಮ್ಮ ತಂದೆಯವರ ಹಠಾತ್ ಅಸ್ವಸ್ಥತೆ, ಆಮೇಲೆ ನನ್ನ ಜ್ವರದ ವಿಷಯ ಕೇಳಿ ನಿಮಗೆ ತುಂಬಾ ಬೇಸರವಾಗಿರಬೇಕಲ್ಲವೇ....?

ಸಿಂಗಾಪುರದಲ್ಲಿ ಎರಡು ದಿನ ತೀವ್ರ ಜ್ವರದಿಂದ ಮಲಗಿದೆ. ಇಲ್ಲಿಗೆ ಪ್ರಯಾಣ ವನ್ನು ಮುಂದುವರಿಸಲೇ ಬೇಕಾಯಿತು. ಶ್ರೀಮತಿ ರತಿಯವರ ಮನೆಗೂ, ನಮಗೂ ಅದೇನು ಪೂರ್ವಜನ್ಮದ ಋಣಾನುಬಂಧವಿತ್ತೋ? ಅವರೂ ಅವರ ಮುದ್ದು ಪುಟಾಣಿಗಳೂ ಕೂಡ ನಮ್ಮ ಆರೈಕೆ ಮಾಡಿ ಚೆನ್ನಾಗಿ ನೋಡಿಕೊಂಡರು. "ಕು.ಆಲಾಲುಂಪುರ್, ಸಿಲೋನ್ ಪ್ರವಾಸವನ್ನು ಖಂಡಿತ ರದ್ದುಮಾಡಿ ಮದ್ರಾಸಿಗೆ ನೇರ ವಿಮಾನದ ಟಿಕೇಟು ಪಡೆಯೋಣ" ಎಂದು ಪತಿಯವರು ಅಭಿಪ್ರಾಯಪಟ್ಟರು. ಅದಕ್ಕೆ ನಾನು 'ಈಗ ಈ ದೇಶಗಳನ್ನು ನೋಡದಿದ್ದರೆ ಮುಂದೆ ಹೇಗೆ ಸಾಧ್ಯ? ದಯ ವಿಟ್ಟು ನಮ್ಮ ಪ್ರಪಂಚ ಪ್ರದಕ್ಷಿಣೆ ಪೂರ್ತಿಯಾಗುವಂತೆ ನಡೆಸಿಕೊಡಿ' ಎಂದು ಕೇಳಿಕೊಂಡೆ.

ಸಿಂಗಾಪುರದಿಂದ ಇಲ್ಲಿಗೆ ಬರಲು ವಿಮಾನ ನಿಲ್ದಾಣಕ್ಕೆ ಬಂದ ದಿನ ನನಗೆ ಕಣ್ಣುಬಿಡಲೂ ಶಕ್ತಿ ಇರಲಿಲ್ಲ. ಯಾಂತ್ರಿಕವಾಗಿ ಹೇಳಿದ ಕೆಲಸಗಳನ್ನು ಮಾಡಿ, ವಿಮಾನ ಹತ್ತಿದ್ದೆ. ಮಲೇಸಿಯಾ – ಸಿಂಗಾಪುರ ಗಗನಯಾನ (Malasia – Singapore Airlines) 60 ನಿಮಿಷಗಳ ಪ್ರಯಾಣ. ಕಣ್ಮುಚ್ಚಿ ಬಿಡುವುದರೊಳ ಗಾಗಿ ಎಂಬಂತೆ ಇತ್ತು.

ಕು–ಆಲಾಲುಂಪುರ್ ವಿಮಾನ ನಿಲ್ದಾಣ! ಮಲೇಸಿಯಾದ ರಾಜಧಾನಿಯಾದ ಇಲ್ಲಿನ ಈ ವಿಸ್ತಾರವಾದ ಆಧುನಿಕ ನಿಲ್ದಾಣ ಬಹಳ ಸುಂದರವಾಗಿದೆ. ನಮ್ಮನ್ನು ಸ್ವಾಗತಿಸಲು ಪರಿಚಿತರಲ್ಲದ ಶ್ರೀ ಗೋಪಾಲಕೃಷ್ಣನ್ ಅವರು ನಮಗಾಗಿ ಕಾದಿದ್ದರು. ಅವರಿಗೂ ನಮಗೂ ಪತ್ರವ್ಯವಹಾರ ನಡೆದಿತ್ತಾದರೂ ನಾವು ಅವರನ್ನು ಹಿಂದೆಂದೂ ನೋಡಿರಲಿಲ್ಲ. 'ಅವರೇ ಇರಬಹುದು!' ಎಂದು ಊಹಿಸಿ, ನಮ್ಮ ಸರಂಜಾಮುಗಳನ್ನು ಪತಿಯವರ ಜವಾಬ್ದಾರಿಯಲ್ಲಿ ಕೊಟ್ಟು ಮುಂದೆ ಬಂದೆ. 'ನನಗೆ

ಮೈ ಸರಿಯಿಲ್ಲ, ಬೇಗನೆ ಬಿಡುಗಡೆ ಮಾಡಿ' ಎಂದು ಪತಿಯವರು ಸುಂಕದ ಅಧಿಕಾರಿಗಳನ್ನು ಕೇಳಿಕೊಂಡರು. ಸುಂಕದವನ ಮುಂದೆ ಸುಖ-ದುಃಖ ಹೇಳಿಕೊಂಡಂತೆ ಎನ್ನುವಿರೇನೋ !

ಶ್ರೀ ಗೋಪಾಲ ಕೃಷ್ಣನ್ ಅವರು ನನ್ನ ಆರೋಗ್ಯದ ವಿಷಯ ತಿಳಿದುಕೊಂಡು "ಏನೂ ತೊಂದರೆ ತೆಗೆದುಕೊಳ್ಳಬೇಡಿ....ನಿಮ್ಮ ಕಾರ್ಯಕ್ರಮವನ್ನು ನಾವು ಎಂದು ಬೇಕಾದರೂ ಏರ್ಪಡಿಸಿಕೊಳ್ಳಬಹುದು. ಮುಂಚಿತವಾದ ಜಾಹೀರಾತುಗಳನ್ನು ನಾವು ಪ್ರಾರಂಭಿಸಿಲ್ಲ. ಮುಂಗಡವಾಗಿ ಟಿಕೇಟುಗಳನ್ನು ಮಾರಲಿಲ್ಲ. ನಾವು ಬೇಕೆಂದ ದಿನ ರಂಗಮಂದಿರ ಸಿಕ್ಕುತ್ತದೆ. ನೀವು ಪೂರ್ತಿ ಚೇತರಿಸಿಕೊಂಡ ಮೇಲೆಯೇ ನೃತ್ಯಪ್ರದರ್ಶನವಿಡಬಹುದು" ಎಂದು ಅಭಯಪ್ರದಾನ ಮಾಡಿದರು. ದೈವವೇ ಅವರ ಬಾಯಿಂದ ಈ ಮಾತುಗಳನ್ನು ಹೊರಡಿಸಿರಬೇಕು.

ಅವರ ಮನೆ, ಅವರ........ಗೋಪಾಲ ಕೃಷ್ಣರ ಪ್ರಿಯಪತ್ನಿ ರಾಧೆ........ಅವರ ಮುದ್ದು ಮಕ್ಕಳು........ಅವರು ನಮಗಿತ್ತ ವಿಶ್ವಾಸ, ಪ್ರೀತಿಪೂರ್ವಕವಾದ ಆದರ ಸತ್ಕಾರ ನಾವು ಈ ಜನ್ಮದಲ್ಲಿ ಮರೆಯುವಂತಿಲ್ಲ. ಯಾವ ಕಾರ್ಯಕ್ರಮವನ್ನೂ ಏರ್ಪಡಿಸದೆ, ನನಗೆ ಅವರ ಮನೆಯನ್ನು ಶುಶ್ರೂಷಾ ಗೃಹವನ್ನಾಗಿ ಮಾಡಿದರು. ದೊಡ್ಡದೊಂದು ಅನುಕೂಲವಾದ ಕೋಣೆ, ಅದಕ್ಕೆ ಸೇರಿರುವ ದೊಡ್ಡದಾದ ಶೌಚ ಗೃಹ ನಮಗಾಗಿ ಬಿಟ್ಟುಕೊಟ್ಟಿದ್ದರು. ನಾನು ಇಡೀ ದಿನ ಮಲಗಿಯೇ ಕಾಲ ಕಳೆಯುತ್ತಿದ್ದೆ. ಊಟ ತಿಂಡಿಯ ಸಮಯ ಮಾತ್ರ ಕೋಣೆ ಬಿಟ್ಟು ಆಚೆ ಬಂದು ಅವರೊಡನೆ ಕುಳಿತು ಸ್ವಲ್ಪ ಆಹಾರವನ್ನು ಸೇವಿಸುತ್ತಿದ್ದೆ. ಅವರೂ ನನ್ನ ಅವಸ್ಥೆಗೆ ಕನಿಕರಪಟ್ಟು ನನ್ನ ಏಕಾಂತ ವಿಶ್ರಾಂತಿಗೆ ಭಂಗ ತಾರದೆ, ನಾನು ಪುನಹ ಆರೋಗ್ಯ ಪಡೆಯುವಂತೆ ಸಹಾಯ ನೀಡಿದರು. ಅವರು 'ಹೀಗಿರಬಹುದು' ಎಂದುಕೊಂಡಿದ್ದ ಅತಿಥಿಗಳಾಗಿರಲಿಲ್ಲ ನಾವು! ಆದರೂ ಎಷ್ಟು ಸೌಹಾರ್ದತೆ! ಗೌರವ!!

"ನಮ್ಮ ಈ ಮನೆಗೆ ಭಾರತದಿಂದ ನೆಂಟರು ಬರುವ ಮಾತೇ ಇಲ್ಲ. ನಾವೇ ವರ್ಷ, ಎರಡು ವರ್ಷಕ್ಕೊಮ್ಮೆ ಅವರನ್ನು ನೋಡಿಕೊಂಡು ಬರುತ್ತೇವೆ. ನೀವಿಬ್ಬರೂ ಬಂದು ನಮ್ಮ ಎಷ್ಟೋ ವರ್ಷಗಳ ಬಯಕೆಯನ್ನು ಈಡೇರಿಸಿದಿರಿ. ನೀವು ನಮ್ಮ ಸಂಬಂಧಿಕರೆಂಬ ಆತ್ಮೀಯತೆಯೇ ನಮ್ಮ ಮನಸ್ಸಿಗೆ ಬರುತ್ತಿದೆ" ಎಂದು ಶ್ರೀಮತಿ ರಾಧೆ ಒಂದು ದಿನ ಹೇಳಿ ಕೃತಜ್ಞತೆ ವ್ಯಕ್ತಪಡಿಸಿದರು.

ಈಗ, ಇದನ್ನು ಬರೆಯುತ್ತಿರುವಾಗ ಪೂರ್ಣ ಗುಣಮುಖಳಾಗಿದ್ದೇನೆ. ಆದರೆ ಮೈಯಲ್ಲಿ ಏನೂ ಶಕ್ತಿ ಇಲ್ಲ. ಆದರೆ ಕಾಹಿಲೆ, ಜ್ವರ ಏನೂ ಇಲ್ಲದೆ ಚೆನ್ನಾಗಿದ್ದೇನೆ. ಏನೂ ಯೋಚಿಸಬೇಡಿ. ಕೊಲಂಬೋದಲ್ಲಿನ ನಮ್ಮ 27ನೇ ತಾರೀಕಿನ ಪ್ರದರ್ಶನ

ವನ್ನು ದಯವಿಟ್ಟು ರದ್ದು ಮಾಡಬೇಕೆಂದು ನಾನೇ ಹೇಳಿ ಭಾರತೀಯ ರಾಯಭಾರಿ ಕಛೇರಿಗೆ ತಂತಿ ಕಳುಹಿಸಿದ್ದೇನೆ. ನಿಶ್ಶಕ್ತಿಯಿಂದ ನೃತ್ಯ ಪ್ರದರ್ಶನ ಕೊಟ್ಟರೆ ಸರಿ ಹೋಗದು. ಭಾರತಕ್ಕೆ ಬರುವಾಗ ಪೂರ್ಣ ಛಿದ್ರರಾಗಿರಬಾರದು. ಅಲ್ಲದೆ ಕೊಲಂಬೋದಲ್ಲಿ ಭಾರತೀಯ ನೃತ್ಯಕಲೆಗೆ ಒಳ್ಳೆಯ ಪ್ರೋತ್ಸಾಹವಿದೆ. ನೃತ್ಯಕಲೆಗೆ ಉತ್ತಮ ಅಂತಸ್ತಿದೆ. ವಿಮರ್ಶಕರಿಗೆ ಕಲೆಯ ಗುಣ ಗೊತ್ತಿದೆ. ಆದುದರಿಂದ ನಾವು ಇಷ್ಟೊಂದು ಪಣಗಳನ್ನು ಎದುರಿಸುವ ಅವಶ್ಯಕತೆ ಕಂಡುಬರಲಿಲ್ಲ. ಕೊನೆಯ ಘಳಿಗೆಯಲ್ಲಿ ನಾವು ಇಷ್ಟುದಿನ ಕಷ್ಟಪಟ್ಟು ಗಳಿಸಿದ ಕೀರ್ತಿಯನ್ನು ಏಕೆ ಕಳೆದುಕೊಳ್ಳಬೇಕು ? ಅನಾರೋಗ್ಯದ ನಿಮಿತ್ತ ನೃತ್ಯ ಪ್ರದರ್ಶನ ಕೊಡಲಾಗುವುದಿಲ್ಲವೆಂದು ತಿಳಿಸಿದೆವು. ನಮ್ಮ ಈ ಪ್ರಪಂಚ ಪ್ರದಕ್ಷಿಣೆಯಲ್ಲಿ ನಾವು ಇದೇ ಮೊದಲ ಸಲ ನೃತ್ಯ ಪ್ರದರ್ಶನವೊಂದನ್ನು ರದ್ದು ಮಾಡಿದುದು. ಆದರೆ ನರ್ತಿಸುವುದು.... ಈ ಸ್ಥಿತಿಯಲ್ಲಿ.... ಅಸಾಧ್ಯದ ಮಾತು !

ಕೊಲಂಬೋಗೆ ಹೋಗುವುದೇನೋ ಖಂಡಿತ....ಆ ದೇಶ ನೋಡಿ, ನಗರ ವಿಡೀ ಸುತ್ತುಹೊಡೆದು, ಒಂದೆರಡು ದಿನ ಅಲ್ಲಿದ್ದು ಮದ್ರಾಸಿಗೆ ಪ್ರಯಾಣ ಮಾಡುತ್ತೇವೆ.

ಇತಿ ನಿಮ್ಮ

ಅಮ್ಮ.

* * * * * "

ಕು–ಆಲಾಲುಂಪುರ್

27 – 5 – 1968

ಮುದ್ದು ಮಕ್ಕಳೇ,

ನಿನ್ನೆ ಇಲ್ಲಿನ ನಮ್ಮ ನೃತ್ಯ ಕಾರ್ಯಕ್ರಮ ಭಾರಿ ಯಶಸ್ವೀಯಾಯಿತು. ದೊಡ್ಡದಾದ ರಂಗಮಂದಿರದಲ್ಲಿ ಯಾವ ಪೂರ್ವ ಸಿದ್ಧತೆಯೂ ಇಲ್ಲದೆ ಪ್ರದರ್ಶಿತವಾಯಿತು. ಜನರ ಪ್ರೋತ್ಸಾಹ ಚೆನ್ನಾಗಿತ್ತು. ಈ ನಗರದಲ್ಲಿರುವ ಎಲ್ಲ ಭಾರತೀಯರೂ ಎಂಬಂತೆ ಬಂದು ನೃತ್ಯ ಪ್ರದರ್ಶನವನ್ನು ನೋಡಿ ಆನಂದಪಟ್ಟರು. ಶ್ರೀ ಗೋಪಾಲ ಕೃಷ್ಣನ್ ಅವರು ಈ ಸುಸಂದರ್ಭವನ್ನು ಕಲ್ಪಿಸಿಕೊಟ್ಟದುದಕ್ಕಾಗಿ ಎಲ್ಲರೂ ಅಭಿನಂದಿಸಿದರು. ಪ್ರದರ್ಶನವಾದ ಮೇಲೆ ರಂಗಸ್ಥಳದ ಮೇಲೆ ಅವರ ಮಗ, ಪುಟ್ಟ ರಾಮಕೃಷ್ಣ ಓಡಿಬಂದು, ಪತಿಯುವರ ಹೆಗಲ ಮೇಲೆ ಹಾರಿ, 'ಮಾಮಾ ! ಉಂಗ ಪಾಂಬಾಡಿ ರೊಂಬೋ ನನ್ನಾ ಇಂರ್ದದ ! ' ಎಂದು ವಿಮರ್ಶಿಸಿದ. ಎಲ್ಲವೂ ಸುಗಮ

ವಾಗಿ, ಯಾವ ತೊಂದರೆಯೂ ಇಲ್ಲದೆ ನಡೆಯಿತು. ಸಜ್ಜಿಕಾ ಗೃಹದಲ್ಲಿ ನಾವಿಬ್ಬರು.... ರಂಗಸ್ಥಳದಲ್ಲಿ ನಾವಿಬ್ಬರು....ಪರಿಚಯ ಮಾಡಿಕೊಡಲು ಶ್ರೀ ಗೋಪಾಲ ಕೃಷ್ಣನ್.... ಮತ್ತು ಟೇಪ್ ರೆಕಾರ್ಡರ್ ನಡೆಸಲು ನೃತ್ಯ ಶಿಕ್ಷಕರೊಬ್ಬರನ್ನು ಬಿಟ್ಟರೆ ಇನ್ಯಾರೂ ಇಲ್ಲ! ಆದರೆ ರಂಗಮಂದಿರ ಭರ್ತಿಯಾಗಿತ್ತು. ಭಾರತೀಯರೇ ಹೆಚ್ಚು. ಮಲೈ ಜನರು ಇರಲೇ ಇಲ್ಲ ಎನ್ನಬಹುದು! ನಮ್ಮ ವಿಮರ್ಶಕಾ ಗೆಳೆಯರು .... ಯಾಕೋ ನಾಪತ್ತೆ ! ಪ್ರದರ್ಶನವಾದ ಮೇಲೆ, ನಮ್ಮನ್ನು ಊಟಕ್ಕೆ ಕರೆದವರೆಷ್ಟು ಜನ! ಅವ ರೊಡನೆ ಸಮಯವನ್ನು ಸುರಸವಾಗಿ ಕಳೆದೆವು.

ಒಂದು ಟಿ. ವಿ. ಪ್ರದರ್ಶನವೂ ಆಯಿತು. ಅಲ್ಲೊಂದು ಮಲೇಸಿಯಾದ ನೃತ್ಯ ಅಭ್ಯಾಸವನ್ನು ನೋಡಿದೆವು. ಒಂದು ಸರಳವಾದ ವೃಂದ ನೃತ್ಯವದು. ಸುಮಾರು ಅರ್ಧಗಂಟೆ ಅವಧಿಯ ನಮ್ಮ 3 ನೃತ್ಯಗಳನ್ನು ತೀರಾ ಸುಲಭವಾಗಿ ತೆಗೆದರು. ಆದರೆ ನೃತ್ಯ ಪ್ರದರ್ಶನಕ್ಕಿಂತ ಟಿ. ವಿ. ಕಾರ್ಯಕ್ರಮ....ನನ್ನ ಅಶಕ್ತಿಯಿಂದಾಗಿ ತುಂಬಾ ಶ್ರಮ ಕೊಟ್ಟಿತು.

ನಾವು ಇಲ್ಲಿಗೆ ಬಂದ ಎರಡು ದಿನಗಳವರೆಗೆ ಕೋಣೆ ಬಿಟ್ಟು, ಈ ಮನೆ ಬಿಟ್ಟು ಹೊರಗೆ ಹೋಗದೆ ಇದ್ದರೂ, ಆಮೇಲೆ ದಿನಾಗಲೂ ನಗರ ದರ್ಶನಕ್ಕೆ ಹೋಗುತ್ತಿ ದ್ದೆವು. ಶ್ರೀಮತಿ ರಾಧೆ ತಾನೇ ಕಾರನ್ನು ಚಾಲಿಸಿ (ಅವರಲ್ಲಿ ಎರಡು ಕಾರುಗಳಿವೆ) ನಮಗೆ ಪ್ರೇಕ್ಷಣೀಯ ಸ್ಥಳಗಳಿಗೆಲ್ಲ ಕರೆದುಕೊಂಡು ಹೋಗುತ್ತಿದ್ದರು .... ಇಲ್ಲಿನ ಸರ್ಕಾರಿ ಕಟ್ಟಡಗಳನ್ನು ನೋಡಿದೆವು. 'ನೇಷನಲ್ ಪಾರ್ಲಿಮೆಂಟ್ ಹೌಸ್' (National Parliament House)....ನೇಷನಲ್ ಮೊನ್ಯುಮೆಂಟ್....ನೇಷನಲ್ ಮಾಸ್ಕ್....ವಿಕ್ಟರಿ ಮೊನ್ಯುಮೆಂಟ್ ಇತ್ಯಾದಿ. ಇಂದೋ,ನಾಳೆಯೋ ಭಾರತದಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಇಲ್ಲಿಗೆ ಆಗಮಿಸುವ ಕಾರಣ ಈ ಸ್ಥಳಗಳನ್ನೆಲ್ಲಾ ಶುಚಿ ಯಾಗಿರಿಸಿ, ಎಲ್ಲೆಲ್ಲೂ ತೋರಣಗಳನ್ನು ಕಟ್ಟಿ, ಉತ್ಸವದ ಕಳೆಯನ್ನು ಕೊಡುತ್ತಿ ದ್ದಾರೆ. ಮಲಯಾದ ಅತಿ ಪ್ರಖ್ಯಾತ ಕ್ರೀಡಾಂಗಣ (Stadium) ವನ್ನು ನೋಡಿ ದೆವು. ಹಾಗೆಯೇ ಇಲ್ಲಿನ ಜನ ಹೆಮ್ಮೆಯಿಂದ ತೋರಿಸುವ 'ದಿ ಯೂನಿವರ್ಸಿಟಿ ಮಾಸ್ಕ್' ನೋಡಿದೆವು. ಇದೊಂದು ಅತ್ಯಂತ ಆಧುನಿಕ ವಿಶ್ವವಿದ್ಯಾಲಯ; ಇಸ್ಲಾಂ ಧರ್ಮದ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಕಟ್ಟಿಸಿದ ಸುಂದರ ಕಟ್ಟಡಗಳೂ ಇವೆ. ಈ ಕಟ್ಟಡಗಳನ್ನು ನೋಡಿದರೆ, ವಾಸ್ತುಶಿಲ್ಪ ಸಂಪತ್ತು ಈ ದೇಶದಲ್ಲಿ ಚೆನ್ನಾಗಿ ಅಭಿ ವೃದ್ಧಿ ತಳೆದಂತೆ ಕಂಡುಬಂದಿತ್ತು. ಹೆಚ್ಚಾಗಿ ಮುಸ್ಲಿಮರ ಶೈಲಿಯ ಕಟ್ಟಡಗಳು.... ಮಸೀದಿಯ ಶಿಖರಗಳು, ಗೋಪುರಗಳು, ಕಮಾನುಗಳು ಮತ್ತು ಅಲಂಕೃತ ಸ್ತಂಭ ಗಳು, ಕಾರಂಜಿಗಳು, ಎಲ್ಲಾ ಅದೇ ಶೈಲಿಯಲ್ಲಿದೆ. ತುಂಬಾ ಶುಭ್ರ ಹಾಗೂ ಶುಚಿ ಯಾದ ಜಾಗಗಳು ಇವು. ಈ ನಗರದಲ್ಲಿ ಇಸ್ಲಾಂ ಮತೀಯರು ಹೆಚ್ಚಾಗಿದ್ದಾರೆ.

ಮಲೇಸಿಯಾದ ಜನರೂ, ಚೀನೀಯರೂ, ಭಾರತೀಯರೂ, ಮುಸ್ಲಿಮರೂ ಒಂದು ಗೂಡಿರುವ ಇಲ್ಲಿನ ಸಹಬಾಳ್ವೆ ಅತ್ಯಂತ ಸ್ವಾರಸ್ಯವಾಗಿದೆ. ಆಯಾ ಗುಂಪುಗಳು ತಮ್ಮಷ್ಟಕ್ಕೆ ತಾವು ಜೀವಿಸುವುದು ಇಲ್ಲಿನ ಸಹಜೀವನದ ಗುಟ್ಟೆಂದು ಶ್ರೀಮತಿ ರಾಧೆ ತಿಳಿಸಿದರು. ಎಲ್ಲರೂ ಒಮ್ಮೆ ಒಂದೇ ಕಡೆ ಸೇರುವುದು ಅಪರೂಪ. 'ಬಾಳು! ಬಾಳಿ ಬದುಕಲು ಬಿಡು' ಭಾವನೆಯಿಂದಲೋ ಅಥವಾ ಬೂದಿ ಮುಚ್ಚಿದ ಕೆಂಡ ದಂತೆಯೋ?

ನಾವಿರುವ ಈ ಮನೆಯ ಒಂದು ಪಕ್ಕದಲ್ಲಿ ಮಲೇಸಿಯಾದವರೂ, ಇನ್ನೊಂದೆಡೆ ಚೀನಿಯರೂ ಇದ್ದಾರೆ. ಮುಂದಿನ ರಸ್ತೆಯಲ್ಲಿ ಹೊಸತಾದ ಕಟ್ಟಡವಾಗುತ್ತಿದೆ. ಅಲ್ಲಿ ಪ್ರತಿದಿನ ಮಲೇಸಿಯಾದ ಜನರು ಅವರ ಬಣ್ಣಬಣ್ಣದ ಉಡುಪುಗಳನ್ನು ಧರಿಸಿ, ಕೈಯಲ್ಲಿ ವಿವಿಧ ಬಣ್ಣದ ಕೊಡೆಗಳನ್ನು ಹಿಡಿದು ಬಂದು ಕೆಲಸಕ್ಕೆ ತಯಾರಾಗುವುದು ನೋಡಲು ಚೆನ್ನಾಗಿದೆ. ಕಟ್ಟಡಗಳನ್ನು ಕಟ್ಟುವಾಗ ಹೆಂಗಸರೂ ಗಂಡಸರಂತೆಯೇ ಕೆಲಸಕ್ಕೆ ಅಣಿಯಾಗುತ್ತಾರೆ.

ಕು ಆಲಾ-ಲುಂಪುರ್ ಅಂದವಾದ ನಗರ. ಅಲ್ಲಿನ ಹೊಸ ಹೊಸ ಕಟ್ಟಡ ಗಳಿಂದಾಗಿ ಅದು ಪ್ರಸಿದ್ಧಿ. ಇಲ್ಲಿನ ವ್ಯಾಪಾರ ಕೇಂದ್ರಗಳಲ್ಲಿ ಬೇಕು ಬೇಕಾದ, ಜಗ ತ್ತಿನ ಎಲ್ಲಾ ವಸ್ತುಗಳೂ ಸಿಗುತ್ತವೆ.

ಇಂದು ಬೆಳಿಗ್ಗೆ ಇಲ್ಲಿಂದ ಕೆಲವು ಮೈಲಿ ದೂರವಿರುವ ಹಿಂದೂ ದೇವಾಲಯಕ್ಕೆ ಹೋದೆವು. ಬೆಳಗ್ಗೆ ಹೊರಟು ಇಲ್ಲಿನ ಸೃಷ್ಟಿ ಸೌಂದರ್ಯದ ದೃಷ್ಟಿ ಸೌಭಾಗ್ಯವನ್ನು ಪಡೆದೆವು. ವನಸಂಪತ್ತಿಗೆ ಮಲೇಸಿಯಾ ಪ್ರಸಿದ್ಧಿ. ಎಲ್ಲೆಲ್ಲೂ ಹಸಿರು....ಹಸಿರು ಮರಗಳು, ಬಳ್ಳಿಗಳು........, ಹೂ ಗಿಡಗಳು........ಸಸ್ಯ ಸಮೃದ್ಧಿ.

ಬಟೂ ಗುಹೆಗಳು (Batu Caves) ಎಂಬ ಜಾಗವನ್ನು ತಲುಪಿದೆವು. ಎಷ್ಟೋ ಮೆಟ್ಟಿಲುಗಳನ್ನು ಹತ್ತಿದರೆ ಮೇಲೆ ಷಣ್ಮುಖ ಸ್ವಾಮಿಯ ವಿಗ್ರಹವಿದೆಯಂತೆ....ಅದು ಏತಕ್ಕೋ ತಿಳಿಯದು....ಷಣ್ಮುಖ ಸ್ವಾಮಿಯನ್ನು ನೋಡಬೇಕಾದರೆ ಅತಿ ಎತ್ತರ ಮೆಟ್ಟಿಲುಗಳನ್ನು ಹತ್ತಿಯೇ ದರ್ಶನ ಪಡೆಯಬೇಕು....ಆದರಿಂದಾಗಿ ನಾನು ಹತ್ತುವ ಪ್ರಯತ್ನವನ್ನೇ ಮಾಡಲಿಲ್ಲ. ಪತಿಯವರೂ, ಶ್ರೀ ಗೋಪಾಲಕೃಷ್ಣನ್ ಅವರೂ ಮೇಲೆ ಹತ್ತಿ ಸ್ವಾಮಿಯ ದರ್ಶನ ಮಾಡಿ ಕೆಳಗೆ ಬರುವವರೆಗೆ ನಾವು ಕೆಳಗೆ ನಡೆಯು ತ್ತಿರುವ ಜನಜೀವನ ಜೀವನವನ್ನು ನೋಡುತ್ತಾ ಕಾಲ ಕಳೆದೆವು.

"ಮಲೇಸಿಯಾಗೆ ಬಂದು ರಬ್ಬರ್ ತೋಟಗಳನ್ನು ನೋಡದೆ ಹೋಗುವುದು ಹೇಗೆ?" ಎಂದು ಶ್ರೀ ಗೋಪಾಲಕೃಷ್ಣನ್ ಅವರು ನಮಗೆ ರಬ್ಬರ್ ಅರಣ್ಯಗಳ

ದಾರಿಯಾಗಿ ಕರೆದುಕೊಂಡು ಹೋದರು. ನನಗೆ ಅವನ್ನು ನೋಡಿ ಅತ್ಯಾನಂದ ವಾಯಿತು. ಮಲೇಸಿಯಾಕ್ಕೆ ಬಂದುದು ಸಾರ್ಥಕವೆನಿಸಿತು. ಈ ದೇಶದ ವಿಷಯ ವಾಗಿ ಇಲ್ಲಿನ ರಬ್ಬರ್ ತೋಟಗಳ ವಿಷಯವಾಗಿ ಎಷ್ಟೊಂದು ಓದಿ ತಿಳಿದುಕೊಂಡಿದ್ದೆವು ? ಇಲ್ಲಿನ ಮುಖ್ಯ ರಫ್ತು ರಬ್ಬರ್. ಅದು ಜಗತ್ತಿನ ಮೂಲೆ ಮೂಲೆಗಳಿಗೆ ಸಿಂಗಾಪುರದ ಮಾರ್ಗವಾಗಿ ಹೋಗುತ್ತಿದ್ದುದನ್ನು ನೋಡಿಲ್ಲವೇ ?

ಇಂದು ರಾತ್ರಿ ಮೆಲೇಸಿಯಾ ಬಿಡುತ್ತೇವೆ. ಆಸ್ಟ್ರೇಲಿಯಾದ ಕ್ವಾಂಟಸ್ DC 8 ವಿಮಾನದ ಮೂಲಕ ಸಿಲೋನ್ ದೇಶಕ್ಕೆ ಪ್ರಯಾಣ. ಮಧ್ಯ ರಾತ್ರಿಗೆ ಕೊಲಂಬೋ ಸೇರುತ್ತೇವೆ.

ಅಲ್ಲಿಂದ ಭಾರತಕ್ಕೆ ಎರಡೇ ಹೆಜ್ಜೆ ದೂರ ....ಅಲ್ಲವೇ ?

ಇತಿ ನಿಮ್ಮ
ಅಮ್ಮ .

ಮೆಲೇಸಿಯಾ ದೇಶದಿಂದ
ಸಿಲೋನ್ ದ್ವೀಪಕ್ಕೆ

ಕು ಆ ಲಾ - ಲು ಂ ಪು ರ್ ನಿ ಂ ದ
ಕೊಲೊಂಬೋ ನಗರಕ್ಕೆ

27 – 5 – 1968

ಗಗನಯಾನ – ಮಾನಸ ಸರೋವರ – ಆಲೋಚನಾ ತರಂಗ (ಮನಸ್ಸು ಗಟ್ಟಿಯಾಗಿ ಮಾತನಾಡಿದ ಮಾತುಗಳು)

"ಅಬ್ಬಾ ! ಕ್ವಾಂಟಸ್ DC 8 (Quantas DC 8) ಎಷ್ಟು ದೊಡ್ಡ ವಿಮಾನ ! ನಿಲ್ದಾಣದ ವಿಶಾಲ ಮೈದಾನದಿಂದ ನೀಲಗಗನದಲ್ಲಿ ಮೇಲೇರುತ್ತಿದ್ದಾಗ ಒಂದಿಷ್ಟು ತಿಳಿಯಲಿಲ್ಲ. ಸುಮಾರು 150 ಜನರು ಕಾಲುಚಾಚಿ ಕುಳಿತುಕೊಳ್ಳಬಹುದು ! ಎಷ್ಟು ನಿಶ್ಶಬ್ದವಾಗಿ ಈ ವಾಯುಗಾಮಿನಿ ಮುಂದೆ ಹೋಗುತ್ತಿದ್ದಾಳೆ ! ! ರಾತ್ರಿಯ ಪಯಣವೆಂದು ಗಗನ ಸಖಿಯರ ಆತಿಥ್ಯವಿಲ್ಲ....ಗಂಡಸರ ಸತ್ಕಾರ....ಅವರ ಮಾತಿನಲ್ಲಿ ಎಷ್ಟು ವಿನಯ ! ಅವರ ನಡೆ-ನುಡಿ ಎಷ್ಟು ಪರಿಷ್ಕೃತ ! ! ನಾವು ಇಷ್ಟು ಶ್ರೇಷ್ಠ ವಿಮಾನ ಪ್ರಯಾಣ ಮಾಡಿದುದು ಇಂದೇ ಮೊದಲು. ಅಂತರಿಕ್ಷ ಸಾಗರದಲ್ಲಿ ಚಲಿಸುವ ವೈಭೋಗ ಪೂರ್ಣ ಅತ್ಯಾಧುನಿಕ ಹಡಗು ! ಎಷ್ಟು ಸುಗಮವಾದ ಯಾತ್ರೆ! ಎಷ್ಟು ಸುಂದರ ! ! ಎಷ್ಟು ಸಂತೋಷ ಪೂರ್ಣ ! ! !........

....

"........ಪಾಪ ! ಶ್ರೀಮತಿ ರಾಧೆ ನಮ್ಮನ್ನು ಬೀಳ್ಕೊಡುವಾಗ ಅವಳ ಕಣ್ತುಂಬ ನೀರು ತುಂಬಿತ್ತು. ಎಂತಹ ಮೃದುಹೃದಯ....ಸ್ನೇಹಯುಕ್ತ ಸ್ವಭಾವ! ಅವರ ಆರೈಕೆಯಿಲ್ಲದಿದ್ದರೆ ನಾನು ಇಂದು ಈ ಸ್ಥಿತಿಯಲ್ಲಿರುತ್ತಿರಲಿಲ್ಲ. ಮಕ್ಕಳು ಮುತ್ತಿಟ್ಟು ಬೀಳ್ಕೊಟ್ಟರು.....ಮುದ್ದು ಮುದ್ದಾದ ಗಂಡು ಮಕ್ಕಳು !

"....ಅಬ್ಬಾ ! ಕು ಆಲಾ–ಲುಂಪುರದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಅದೆಷ್ಟು ದೊಡ್ಡದು! ನಾವು ಹೊರಡುವಾಗ ನಿಲ್ದಾಣದ ತುಂಬಾ ಅತಿಗಾತ್ರದ ಪತಂಗಗಳು ! ಅಗಲವಾದ ಈ ಪತಂಗಗಳು ರೆಕ್ಕೆ ಬಿಚ್ಚಿ ಎಲ್ಲೆಲ್ಲೂ ಹಾರಾಡುತ್ತಿದ್ದುವು. ಎಲ್ಲೆಲ್ಲೂ ಅವೇ! ಅವುಗಳ ಬರುವಿಕೆ ಶುಭ ಸೂಚನೆಯಂತೆ !........

....

"ಏನೇ ಇರಲಿ....ವಿಮಾನ ಹೊರಡುವ ಈ ಅರ್ಧ ರಾತ್ರಿಯ ಸಮಯ ತುಂಬಾ ಅನಾನುಕೂಲ. ಕೊಲಂಬೋ ತಲುಪುವಾಗ ರಾತ್ರಿ 2 ಗಂಟೆ ಸಮಯ. ಆಹ್ವಾನಿಸಲು ಬರುವವರಿಗೆ ಎಷ್ಟು ತೊಂದರೆ! ಆದರೂ ನಮ್ಮ ಅತಿಥೇಯರು, ನಾವು ಹಿಂದೆಂದೂ ನೋಡಿರದ ಶ್ರೀ ಅಂಬಳವನಾರ್ ಅವರ ತಂಗಿಯನ್ನು ಕಾರಿನೊಡನೆ ಕಳುಹಿಸುವೆನೆಂದು ಪತ್ರ ಬರೆದಿದ್ದಾರೆ. ಅವರ ಆತಿಥ್ಯಕ್ಕೆ ನಾವು ನಿಜವಾಗಿ ತಲೆ ತೂಗಬೇಕು. ಮಧ್ಯರಾತ್ರಿ ಮೀರಿ ಬರುವ ಅತಿಥಿಗಳನ್ನು ಸಹಜ ಸೌಹಾರ್ದತೆ

ಯಿಂದ ಭೇಟಿ ಮಾಡಿ, ಮನೆಗೆ ಕರೆದೊಯ್ಯುವ ಮಾತು ಕೊಡಬೇಕಾದರೆ ಅವರು ನಿಜವಾಗಿ ಒಳ್ಳೆಯ ಜನರಿರಬೇಕು........

"... ....ಅಂತಹ ಸಂದರ್ಭದಲ್ಲಿ ನಾವು ಏನು ಮಾಡುತ್ತಿದ್ದೆವೋ........"

"ವಿಮಾನ ಹೋಗುತ್ತಿರುವುದೇ ಗೊತ್ತಾಗುವುದಿಲ್ಲ. ಒಳಗಿನ ದೀಪದ ಬೆಳಕಿನಲ್ಲಿ ಕೆಲವರು ಓದುತ್ತಿದ್ದಾರೆ........ಕೆಲವರು ಪೇಯಗಳನ್ನು ಸೇವಿಸುತ್ತಿದ್ದಾರೆ........ ಕೆಲವರು ತಿನ್ನುತ್ತಿದ್ದಾರೆ........ಇನ್ನಿತರರು ನನ್ನ ಹಾಗೆಯೇ ತೂಕಡಿಸುತ್ತಿದ್ದಾರೆ.... ಕಿಟಕಿಯಾಚೆ ನೋಡಿದರೆ ಕತ್ತಲು ಕಾರ್ಗತ್ತಲು........ವಿಮಾನದ ಒಳಗೆ ಭೋಗಪ್ರದ ಜೀವನ ... ಅತ್ಯುತ್ತಮ ಹೋಟೆಲಿನ ಸತ್ಕಾರ ಕಕ್ಷೆಯಲ್ಲಿ ಕುಳಿತು ಹರಟೆ ಹೊಡೆಯುವಂತಿದೆ !

"........ಕೊಲಂಬೋ ತಲುಪಲು ಸುಮಾರು ಅರ್ಧಗಂಟೆ ಇರುವಾಗ ಎಚ್ಚರಿಕೆ ಕೊಟ್ಟರು. ಕಿಟಕಿಯಾಚೆ ಈಗ ನೋಡಿದರೆ ಆ ನಗರದ ದೀಪಗಳು ನಕ್ಷತ್ರಗಳಂತೆ ಕಂಡವು. ನಿಧಾನವಾಗಿ ನಮ್ಮ ವಿಮಾನ ಗರುಡ ಪಕ್ಷಿಯಂತೆ ಕೆಳಗಡೆ ಹಾರಾಡುತ್ತಾ ಯಾವ ಸೂಚನೆಯೂ ಇಲ್ಲದಂತೆ ಭೂಮಿಯನ್ನು ತಲುಪಿತು !........ಒಂದಿಷ್ಟೂ ಗೊತ್ತಾಗಲೇ ಇಲ್ಲ........ನಿಜವಾಗಿ ಅದ್ಭುತ ವಿಮಾನ! ಎಷ್ಟು ಹೊಗಳಿದರೂ ಸಾಲದು. ಮಾನವನ ಪಯಣಕ್ಕೆ ಎಷ್ಟೊಂದು ವಿಧವಾದ ಅತ್ಯಾಧುನಿಕ ಗಗನ ಯಾನ ವಾಹನಗಳನ್ನು ವಿಜ್ಞಾನಿಗಳು ರಚಿಸುತ್ತಲಿದ್ದಾರೆ! ನಮ್ಮ ಈ ಪ್ರಯಾಣ ಸೌಭಾಗ್ಯಕ್ಕೆ, ಅದೃಷ್ಟಕ್ಕೆ, ನಾವೇ ಆಶ್ಚರ್ಯಪಟ್ಟೆವು........

" ಕೊಲಂಬೋ ವಿಮಾನ ನಿಲ್ದಾಣ....ಅದನ್ನು ನೋಡಿ ನಿರಾಶೆಯಾಯಿತು. ಬಹಳ ಸಾಧಾರಣವಾಗಿತ್ತು........ಸುಂಕದ ಅಧಿಕಾರಿಗಳು ಏನೂ ತೊಂದರೆ ಕೊಡಲಿಲ್ಲ........ರಾತ್ರಿ ಎರಡು ಗಂಟೆಯಲ್ಲವೇ ! ಎಲ್ಲರಿಗೂ ನಿದ್ದೆಗಣ್ಣು .... ನಿದ್ದೆಯಲ್ಲಿಯೇ ಕೆಲಸ........ನಮಗೂ ಇದು ನಿದ್ದೆಯಲ್ಲಿಯೇ ನಡೆದ ವಿಷಯಗಳಂತೆ ಇದ್ದುವು. ನಮ್ಮ ಸರಂಜಾಮುಗಳನ್ನು ಪಡೆದು ಹೊರಗೆ ಬರುವಾಗ .... ಶ್ರೀ ಅಂಬಳವನಾರ್ ಅವರು ಆಶ್ವಾಸನೆ ಕೊಟ್ಟಂತೆ ತನ್ನ ತಂಗಿಯನ್ನು ವಿಮಾನ ನಿಲ್ದಾಣಕ್ಕೆ ಕಳುಹಿಸಿ ಕೊಟ್ಟಿದ್ದರು. ಅವರು ಮುಂದೆ ಬಂದು ನಮಸ್ಕರಿಸಿ, ಆದರದಿಂದ ಬರಮಾಡಿ, ತಮ್ಮ ಕೆಲಸಗಾರರಿಗೆ ನಮ್ಮ ಸಾಮಗ್ರಿಗಳನ್ನು ಕಾರಿನಲ್ಲಿ ಇಡುವಂತೆ ಹೇಳಿ, ನಮ್ಮನ್ನು ಕಾರಿನಲ್ಲಿ ಕೂಡಿಸಿಕೊಂಡು, ಕ್ಷೇಮ ಸಮಾಚಾರಗಳನ್ನು

ವಿಚಾರಿಸಿದರು. 'ಇಷ್ಟು ಗಾಢ ರಾತ್ರಿಯಲ್ಲಿ ನೀವು ಬರುವ ಅಗತ್ಯವಿರಲಿಲ್ಲ, ಕಾರನ್ನೂ ಆಳುಗಳನ್ನೂ ಕಳುಹಿಸಿ ಕೊಟ್ಟಿದ್ದರೆ ಸಾಕಿತ್ತು' ಎಂದೆವು. ಅದಕ್ಕೆ ಅವರು 'ಅತಿಥಿಗಳಾದ ನಿಮ್ಮನ್ನು ಸ್ವಾಗತಿಸುವುದು ನಮ್ಮ ಕರ್ತವ್ಯ' ಎಂದರು.

"ವಿಮಾನ ನಿಲ್ದಾಣದಿಂದ ಅವರ ಮನೆಗೆ 20 ಮೈಲಿ ದೂರ. ದಾರಿ ಸಾಗುತ್ತಿದ್ದಂತೆ ಅವರ ಸಂಸಾರದ ವಿಷಯವಾಗಿ ಪರಿಚಯ ಮಾಡಿಕೊಟ್ಟರು. ಆಕೆಯ ಅಣ್ಣ ಶ್ರೀ ಅಂಬಳವನಾರ್ ಅವಿವಾಹಿತರೆಂದೂ, ವಕೀಲರೆಂದೂ, ದೊಡ್ಡ ಬಂಗಲೆಯೊಂದರಲ್ಲಿ ಒಬ್ಬರೇ ವಾಸಿಸುತ್ತಿರುವರೆಂದೂ, ನಮಗಾಗಿ ಎಲ್ಲ ಸೌಕರ್ಯಗಳ ಏರ್ಪಾಡುಗಳನ್ನು ಮಾಡಿರುವರೆಂದೂ ತಿಳಿಸಿದರು. ಮರುದಿನ ಬೆಳಿಗ್ಗೆ 75 ಮೈಲಿ ದೂರವಿರುವ ಕೆಂಡೀಗೆ (Kandy) ಹೋಗುವ ವ್ಯವಸ್ಥೆ ಮಾಡಿರುವುದನ್ನೂ ತಿಳಿಸಿದರು.

"ಅಷ್ಟು ಹೊತ್ತಿಗೆ ಕಾರು ಶ್ರೀ ಅಂಬಳವನಾರ್‌ರವರ ಮನೆಯ ಹೊರಬಾಗಿಲನ್ನು ಮುಟ್ಟಿತು. ಕಾರಿನ ಸದ್ದು ಆಗುತ್ತಲೇ ಆ ಪುಣ್ಯಾತ್ಮರು ಎದ್ದು ಬಂದರು. ಸಮಯ ರಾತ್ರಿ ಸುಮಾರು ಮೂರೂವರೆ ಗಂಟೆ ಇರಬಹುದು. ಈ ಹೊತ್ತಿನಲ್ಲಿ ಅವರು ಏಳುವ ಅವಶ್ಯಕತೆಯಿರಲಿಲ್ಲ. ಆದರೆ ಈ ಚಿಕ್ಕಪುಟ್ಟ ವರ್ತನೆಯಿಂದ ಒಬ್ಬ ವ್ಯಕ್ತಿಯಲ್ಲಿ ನಮಗೆ ಎಷ್ಟು ಅಭಿಮಾನ ಉಕ್ಕಿ ಬರುತ್ತದೆ! ಮಬ್ಬು ಬೆಳಕಿನಲ್ಲಿ ಜಗುಲಿಯ ಮೇಲೆ ರಾತ್ರಿ ಪೋಷಾಕಿನಲ್ಲಿದ್ದ ಅವರು ನಮ್ಮ ಕೈಕುಲುಕಿ ಆಹ್ವಾನಿಸಿ, ನಮಗಾಗಿ ಸಿದ್ಧಪಡಿಸಿಟ್ಟಿದ್ದ ಕೋಣೆಗೆ ಕರೆದುಕೊಂಡು ಹೋದರು .... ನಿದ್ದೆಗಣ್ಣು.... ನಮಗಾಗಿ ಥರ್ಮಾಸ್‌ನಲ್ಲಿ ಬಿಸಿಬಿಸಿ ಕಾಫಿಯನ್ನು ಸಿದ್ಧವಾಗಿಟ್ಟಿದ್ದು, ಕುಡಿಯಲು ಹೇಳಿದರು. ಕೋಣೆಯಲ್ಲಿದ್ದ ಹವಾ ನಿಯಂತ್ರಣ ಯಂತ್ರವನ್ನು ಉಪಯೋಗಿಸಲು ಹೇಳಿದರು. ಕೋಣೆಗೇ ಸೇರಿದಂತಿದ್ದ ಶೌಚ ಗೃಹದಲ್ಲಿದ್ದ ಬಿಸಿ-ತಣ್ಣೀರಿನ ಏರ್ಪಾಡು ತಿಳಿಸಿ, "ಸುಖವಾಗಿ ಮಲಗಿಕೊಳ್ಳಿ. ಬೆಳಿಗ್ಗೆ ಬೇಗ ಏಳುವ ಅವಶ್ಯಕತೆ ಇಲ್ಲ....ನೀವು ಏಳುವಾಗ ಮನೆಯಲ್ಲಿ ನಾನಿರುವುದಿಲ್ಲ. ಅಡಿಗೆಯವನಿಗೆ,ನಿಮಗಾಗಿ ಎಲ್ಲವನ್ನೂ ಮಾಡಿ ಬಡಿಸಲು ಹೇಳಿದ್ದೇನೆ. ಬೇಕಾದ್ದನ್ನು ಕೇಳಿ ಪಡೆಯಿರಿ. 'ಗುಡ್‌ನ್ಯಾಟ್' " ಎಂದು ಹೇಳಿ ಮಾಯವಾದರು.........ಅವರು ನಿಜವಾಗಿ 'ಗುಡ್ ಮಾರ್ನಿಂಗ್' ಅನ್ನಬೇಕಿತ್ತು !

"ಸಿಲೋನ್ !........ಹೊಸ ದೇಶ! ಕೊಲಂಬೊ........ಹೊಸ ನಗರ ! ! ಇಲ್ಲಿ ತುಂಬಾ ಸೆಕೆ........ವಿಮಾನ ನಿಲ್ದಾಣದಿಂದ ಮನೆ ಸೇರುವವರೆಗೆ ಅಕ್ಕಪಕ್ಕದಲ್ಲಿ ಕಂಡ ದೃಶ್ಯಗಳು ಅಷ್ಟೇನೂ ಮನಮುಟ್ಟುವಂತಿರಲಿಲ್ಲ........ಸುಮಾರು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನಲ್ಲಿ ಹಾದು ಹೋದಂತಾಗಿತ್ತು........

"........ಇದೇ ಏನು ಎಲ್ಲರೂ ಹೊಗಳುವ ಕೊಲಂಬೋ ಎನಿಸುತ್ತಿತ್ತು. ಕುಮಾರಿ ಬಾಲಸುಂದರಿ ನಮಗೆ ಲಂಡನ್ನಿನಲ್ಲಿ ತನ್ನ ದೇಶದ, ಕೊಲಂಬೋ ನಗರದ ವರ್ಣನೆಯ ಚಿತ್ರ ಈ ರೀತಿಯಿರಲಿಲ್ಲ. ಮನಸ್ಸು ಬೇರೆಯೇ ಚಿತ್ರವನ್ನು ಕಂಡಿತ್ತು. ಹೇಗೂ ಇರಲಿ....ರಾತ್ರಿಯಾಯಿತು....ವಿಶ್ರಮಿಸೋಣ! ಪತಿಯವರು ಸ್ವಲ್ಪ ಕಾಫಿ ಕುಡಿದರು....ಸ್ನಾನ ಮಾಡದೆ, ಕೈಕಾಲು ಮುಖ ತೊಳೆದು....ಸಿದ್ಧವಾಗಿದ್ದ ಹಾಸಿಗೆಯ ಮೇಲೆ ಬಿದ್ದೆವು. ಹವಾ ನಿಯಂತ್ರಣ ಯಂತ್ರವನ್ನು ಚಲಿಸಿದರು....ಅಬ್ಬಾ! ಅದೆಂತಹ ಶಬ್ದ ಮಾಡುತ್ತಿತ್ತು ಆ ಯಂತ್ರ! ಆ ಶಬ್ದಕ್ಕೆ ನಿದ್ರೆಯೇ ಬರಲಿಲ್ಲ. ಸೆಖೆಗಾದರೂ ನಿದ್ದೆ ಬೀಳುತ್ತಿತ್ತೇನೋ! ಅರುಣೋದಯದ ಸಮಯಕ್ಕೆ ಸ್ವಲ್ಪ ಅರೆ ಮರೆವು ಕವಿದಂತಾಯಿತು...ಅಂತೂ ಇದು ಕೊಲಂಬೋ! ನಾನು ಬರಬೇಕೆಂದು ಬಹಳವಾಗಿ ಅಪೇಕ್ಷಿಸಿದ್ದ ಸಿಲೋನಿನ ರಾಜಧಾನಿ....ಕೊಲಂಬೋ....ಎನ್ನುತ್ತಲೇ.... ನಿದ್ದೆ ಆವರಿಸುತ್ತಿದೆ....ನಾಳೆ ನೋಡೋಣ?

* * * * * *

ಕೊಲಂಬೋ
28 – 5 – 1968

ಮುದ್ದು ಮಕ್ಕಳೇ,

ಇಂದು ಬೆಳಿಗ್ಗೆ ಶ್ರೀ ಅಂಬಳವನಾರ್ ಅವರು ತಮ್ಮ ದೊಡ್ಡ ಕಾರನ್ನೂ, ಚಾಲಕನನ್ನೂ ಕೊಟ್ಟು, ನಮಗೆ ಇಲ್ಲಿನ ಪ್ರೇಕ್ಷಣೀಯ ಸ್ಥಳವಾದ 'ಕೇಂಡೀ' (Kandy) ಗೆ ಕಳುಹಿಸಿದರು. ನಮ್ಮ ಜೊತೆಗೆ ಅವರ ತಂಗಿಯನ್ನು ಕಳುಹಿಸಿದ್ದರು. ದಾರಿಯಲ್ಲಿ ಎಲ್ಲೂ ಒಂದು ಕಾಸೂ ಖರ್ಚು ಮಾಡಲು ಬಿಡಲಿಲ್ಲ. ಕೊಲಂಬೋವಿನಿಂದ ಸುಮಾರು 70–75 ಮೈಲು ದೂರವಿರುವ ಈ ಜಾಗಕ್ಕೆ ಹೋಗುವಾಗ ಸಿಲೋನಿನ ಭೂಸಿರಿಯ ಸೌಂದರ್ಯ, ಸ್ವಭಾವ ಎಲ್ಲವೂ ತಿಳಿಯಿತು. ಭಾರತಕ್ಕೂ ಸಿಲೋನಿಗೂ ದೂರದ ಸಂಬಂಧವೇನಲ್ಲ! ಸುಮಾರು ಅದೇ ಪ್ರಕೃತಿ....ಅದೇ ಲಕ್ಷಣಗಳು.... 'ಕೆಂಡ್ಯನ್' (Kandyan) ನೃತ್ಯ ನೋಡಬಹುದಾಗಿತ್ತು ಎಂದು ನಾವು ಆಶಿಸಿದೆವು. ಆದರೆ ಈ ನೃತ್ಯ ಕೇವಲ ಕೆಲವು ಸಂದರ್ಭಗಳಲ್ಲಿ ಮಾತ್ರ ಮಾಡುವುದು; ಇತರೇ ಸಮಯಗಳಲ್ಲಿ ವಿರಳ ಎಂದು ತಿಳಿದು ಬಂತು. ಇದು ನಮ್ಮ ಕೇರಳದ ಕಥಕಳಿ ಪ್ರದರ್ಶನಗಳಿದ್ದಂತಿರಬಹುದು. ಆದರೆ ನಾವು ಕೆಂಡ್ಯನ್ ನೃತ್ಯಗಳನ್ನು ಎಷ್ಟೋ ವರ್ಷಗಳ ಹಿಂದೆ ಬಹಳ ಸಲ ನೋಡಿದ್ದೇವೆ. ಶ್ರೀ ರಾಮಗೋಪಾಲ್‌ರವರ ತಂಡದಲ್ಲಿ ಸಿಲೋನ್ ನೃತ್ಯಗಳನ್ನೂ ಮುಖ್ಯವಾಗಿ ಕೆಂಡ್ಯನ್ ನೃತ್ಯಗಳನ್ನೂ ಮಾಡುವ ಕಲಾವಿದರು ಇದ್ದರು. ಅಲ್ಲದೆ ಇತ್ತೀಚೆಗೆ ಲಂಡನ್ನಿನಲ್ಲೂ ಈ ನೃತ್ಯಗಳನ್ನು ನೋಡಿದೆವು.

ಕೇಂಡ್ಯನ್ ನೃತ್ಯಗಾರರ ವೇಷಭೂಷಣಗಳು ಬಹಳ ಆಕರ್ಷಕ. ನೃತ್ಯ ತುಂಬಾ ತಾಂಡವ ಶೈಲಿಯಲ್ಲಿದ್ದು ಚೇತನಾಯುಕ್ತವಾಗಿರುತ್ತದೆ; ಕೇಂಡಿಯಲ್ಲೇ ಕೇಂಡ್ಯನ್ ನೃತ್ಯ ಹೇಗಿರಬಹುದು ಎಂಬ ಕುತೂಹಲವಿತ್ತು ಅಷ್ಟೇ.......

ಕೇಂಡಿ ತಲುಪಿದ ತಕ್ಷಣ ಅಲ್ಲಿನ ಪ್ರವಾಸಿ ಮಂದಿರಕ್ಕೆ ಹೋಗಿ ತಿಂಡಿ, ಕಾಫಿ ಸೇವಿಸಿದೆವು. ಸ್ವಲ್ಪ ಸುಧಾರಿಸಿಕೊಂಡು ಬೌದ್ಧ ಮಂದಿರಕ್ಕೆ ಭೇಟಿ ಕೊಟ್ಟೆವು. ಅದು ಒಂದು ದೊಡ್ಡ ಬುದ್ಧ ದೇವಾಲಯ. ಸಿಲೋನ್ ದೇಶದಲ್ಲಿಯೂ ಬೌದ್ಧ ಮತಾವ ಲಂಬಿಗಳು ಹೆಚ್ಚು. ಬುದ್ಧನ ಚರಣ–ದಂತ ಮುಂತಾದುವುಗಳನ್ನು ಪೂಜಿಸುವ ದೇವಾಲಯಗಳಿವೆ. ಭಾರತೀಯರೂ – ಹೆಚ್ಚಾಗಿ ತಮಿಳು ನಾಡಿನವರು ಇದ್ದಾರೆ. ದೇವಾಲಯದ ಹೊರಗಿನ ಆವರಣದಲ್ಲಿನ ಸುಂದರ ಸರೋವರವನ್ನೂ ನೋಡಿದೆವು. ಅಲ್ಲಿಂದ ನಮ್ಮ ಲಾಲ್‌ಬಾಗ್‌ನಂತಿರುವ ಸಸ್ಯ ಕ್ಷೇತ್ರವನ್ನೆಲ್ಲಾ ಸುತ್ತಾಡಿ, ಇವರು ಹೆಮ್ಮೆಯಿಂದ ತೋರಿಸುವ 'ತೂಗು ಸೇತುವೆ' (Hanging Garders) ಮೇಲೆ ಸಂಚರಿಸಿದೆವು. ಕೇಂಡಿಯಲ್ಲಿನ ವಿದ್ಯಾರ್ಥಿ ಮಂದಿರದಲ್ಲಿನ ವಸತಿ ಗೃಹ, ಊಟದ ಮನೆ, ಶುಚಿ–ರುಚಿ ಅಡಿಗೆ ತಯಾರಾಗುವ ವಿಶಾಲ ಪಾಕಗೃಹ, ಅಲ್ಲಿನ ಆಧುನಿಕ ಯಂತ್ರೋಪಕರಣಗಳು ಮತ್ತು ಥಳಥಳಿಸುವ ಹೊಳಪು ಹೊಳಪಿನ ಪಾತ್ರೆಗಳನ್ನು ನೋಡಿ ಸಂತೋಷಪಟ್ಟೆವು. ಕೆಂಡಿಯಲ್ಲಿ ಪ್ರಕೃತಿ ಸಂಪತ್ತಲ್ಲದೆ, ಬೇರೆ ನೋಡುವ ವಿಷಯವೇನಿಲ್ಲ. ಆದುದರಿಂದ ಒಡನೆಯೇ ಕೊಲಂಬೋಗೆ ಪ್ರಯಾಣ ಬೆಳೆಸಿ, ರಾತ್ರಿ ಮನೆ ಸೇರಿದೆವು. ಶ್ರೀ ಅಂಬಳವನಾರ್ ಅವರು ನಮಗಾಗಿ ಒಂದು ಕೂಟ ವನ್ನೂ, ಔತಣವನ್ನೂ ಏರ್ಪಡಿಸಿದ್ದರು. ಅವರ ವೃತ್ತಿ ಸ್ನೇಹಿತರು, ಹೊರದೇಶ ದಿಂದ ಬಂದ ಪಾಶ್ಚಾತ್ಯರನ್ನು ಪರಿಚಯ ಮಾಡಿಕೊಟ್ಟರು.

ಇಲ್ಲಿ ನಮಗೆ ಆರಾಮದ ಜೀವನ ...ತಿನ್ನುವುದು .... ಓಡಾಡುವುದು .... ವಿಶ್ರ ಮಿಸುವುದು....ಅಷ್ಟೇ! ಈ ಮನೆಯಲ್ಲಿ ನಮ್ಮ ಮನೆಯಲ್ಲಿದ್ದಂತೆ ಬಹಳ ಪುಸ್ತಕ ಗಳಿವೆ. ಶ್ರೀ ಅಂಬಳವನಾರ್ ತಿಳಿದವರು....ಪ್ರಪಂಚ ಸುತ್ತಾಡಿ ಬಂದವರು.

ಇಲ್ಲಿನ ಹವಾ ನಿಯಂತ್ರಣ ಯಂತ್ರದ ತಾರಕ ಶ್ರುತಿ ಈಗ ನಮಗೆ ಅಭ್ಯಾಸ ವಾಗಿದೆ. ಕಿವಿ ಒಡೆಯುವ ಅದರ ಜೋಗುಳಕ್ಕೆ ನಿದ್ದೆ ತಾನೇ ತಾನಾಗಿ ಬರುತ್ತದೆ!

* * * * * *

29–5–1968

ಇಂದು ಭಾರತ ರಾಯಭಾರ ಕಛೇರಿಗೆ ಹೋಗಿ, ನಮ್ಮ ನೃತ್ಯ ಪ್ರದರ್ಶನವನ್ನು ಅನಿವಾರ್ಯವಾಗಿ ರದ್ದುಗೊಳಿಸಿದುದಕ್ಕೆ ಕ್ಷಮೆ ಕೇಳಿಕೊಂಡೆವು,

ಬೇಗ್ಗೆ ಎಲ್ಲಾ ಕೊಲಂಬೋ ದರ್ಶನವಾಯಿತು. ಪೇಟೆಗಳಲ್ಲಿ ಹುರಿದ ಗೋಡಂಬಿಯನ್ನು ಕೊಂಡು ಮನಃಪೂರ್ತಿ ತಿಂದೆವು. ಎಲ್ಲೆಲ್ಲೂ ಬಿಸಿಲು....ಬಿಸಿಲು! ಬಿಸಿಲಿನ ತಾಪದಿಂದಾಗಿ ಸೆಖೆ. ಪ್ರಾಣಿ ಸಂಗ್ರಹಾಲಯಕ್ಕೆ ಹೋದೆವು. ಅಲ್ಲಿ ಸುಮಾರು 2 ಗಂಟೆ ಕಾಲ ಗೊತ್ತುಗುರಿಯಿಲ್ಲದೆ, ಮೃಗಗಳನ್ನೂ, ಕೋತಿಗಳನ್ನೂ ನೋಡುತ್ತಾ ಕಾಲಕಳೆದೆವು. ಸಿಲೋನಿನ ಕುಶಲ ಕಲಾ ಕೇಂದ್ರಕ್ಕೆ ಹೋಗಿ, ಒಂದೆರಡು ವಸ್ತುಗಳನ್ನು ಕೊಂಡುಕೊಂಡೆವು. ಅಲ್ಲಿ ಹೆಚ್ಚಾಗಿ ದಂತದ ವಸ್ತುಗಳು, ಮರದ ಆನೆಗಳು, ಮತ್ತಿತರ ಸಾಮಾನುಗಳಿದ್ದವು. ನಮಗೇನೂ ಅವು ಹೊಸತಲ್ಲವೆನ್ನಿ. ಪಾನೀಯವೊಂದನ್ನು ಕುಡಿಯುತ್ತಾ ಸಿಲೋನ್ ಜನರ ನಡೆವಳಿಕೆಯನ್ನು ವಿಮರ್ಶಿಸುತ್ತಾ ಕುಳಿತೆವು.

ಈ ದೇಶದ ಜನರು ಶುದ್ಧ ಕೃಷ್ಣವರ್ಣದವರೇನೋ ನಿಜ. ಆದರೆ ಸುಲಕ್ಷಣರಾಗಿದ್ದಾರೆ. ಇಲ್ಲಿನ ಪುರುಷರ ಉಡುಪು ಚೆನ್ನಾಗಿಲ್ಲ. ಮೈ ಸುತ್ತ ಕಟ್ಟುವ 'ಮುಂಡು' (ಒಂದು ಬಟ್ಟೆಯ ತುಂಡು) ; ಮೇಲೆ ಉದ್ದ ತೋಳಿನ ಷರ್ಟು, ಆ ಷರ್ಟನ್ನು ಒಳಗಡೆ ಹಾಕಿ, ಮೇಲೆ ಅಗಲವಾದ ಚರ್ಮದ ಅಡ್ಡಪಟ್ಟಿಯನ್ನು ಕಟ್ಟುತ್ತಾರೆ. ಈ ಉಡುಪಿನಲ್ಲಿ ಘನತೆ ಕಂಡು ಬರುವುದಿಲ್ಲ. ಸ್ತ್ರೀಯರ ಉಡುಪು ತುಂಬಾ ಲಾಲಿತ್ಯವಾಗಿ ನೋಡಲು ಚೆನ್ನಾಗಿದೆ.

ಇಂದು ಮಧ್ಯಾಹ್ನ ಶ್ರೀ ಅಂಬಳವನಾರ್ ಅವರು ನಮಗೆ ಇಲ್ಲಿನ ಅತಿದೊಡ್ಡ, ಆಧುನಿಕ ಅಂತರರಾಷ್ಟ್ರೀಯ ಹೋಟೆಲಿನಲ್ಲಿ ಊಟವನ್ನು ಏರ್ಪಡಿಸಿದ್ದರು........ ಆ ಸುಂದರ ಹೋಟಲಿನ ಹೆಸರು – 'ಹೋಟೆಲ್ ಲಾವಣ್ಯ', ಎಂದು. ಕಡಲ ದಂಡೆಯ ಮೇಲೆಯೇ ಇದೆ. ಬಹಳ ರಮಣೀಯವಾದ ಸ್ಥಳ. ಸುತ್ತಲೂ ಹಿಂದೂ ಮಹಾ ಸಾಗರ. ಅರಬ್ಬೀ ಸಮುದ್ರ ಮತ್ತು ಬಂಗಾಳಕೊಲ್ಲಿಯ ಜಲರಾಶಿಯ ಸಂಗಮ. ಭೋರ್ಗರೆಯುತ್ತಿರುವ ಸಮುದ್ರದ ತೆರೆಗಳು ಹೋಟೆಲಿನ ಅಡಿಗಲ್ಲಿಗೆ ಹೊಡೆಯುತ್ತಲೇ ಇರುತ್ತವೆ! ಆ ದೃಶ್ಯ ಎಷ್ಟು ಚೆಂದ! ಸುತ್ತಮುತ್ತಲೂ ಹಸಿರು.... ಪಚ್ಚೆ ವಸನವನ್ನುಟ್ಟ ವನಶ್ರೀ!! ಅಲ್ಲಲ್ಲಿ ಬಿಸಿಲಿಗೆ ಅರಳಿ ನಿಂತ ಸೂರ್ಯಕಾಂತಿ ಹೂಗಳು.

ದೂರದ ರೈಲು ದಾರಿಯೊಂದರ ಮೇಲೆ ಬಂಡಿಗಳು ಹೋಗುವುದು, ಬರುವುದನ್ನೂ ಕಂಡೆವು. ಹಳೆಯ ಗಾಡಿಗಳು .... ಕೊಲಂಬೋ ಪಟ್ಟಣದಲ್ಲಿಯಾದರೋ ಹೊಸ ಕಟ್ಟಡಗಳೇ ಇಲ್ಲವೆನ್ನಬೇಕು. ಕಟ್ಟಡ, ಮನೆಗಳು, ಅಂಗಡಿ ಸಾಲುಗಳು – ಎಲ್ಲಾ ಹಳೇ ಮಾದರಿಯೇ! ಇಲ್ಲಿನ 'ಸ್ವಾತಂತ್ರ್ಯ ಮಂದಿರ' ವನ್ನೂ ನೋಡಿದೆವು- ಬಹಳ ಸರಳವಾದ ವಾಸ್ತು ಶಿಲ್ಪ! – ಮುಖ್ಯ ಮಂತ್ರಿಯವರು ವಾಸಿಸುವ ಭವನ ಕೂಡ ಸುಮಾರಾಗಿತ್ತು. ನನಗೇನೋ ಇವನ್ನೆಲ್ಲಾ ನೋಡಿ ನಿರಾಶೆಯಾಯಿತು.

'ಹೋಟಲ್ ಲಾವಣ್ಯ' ಮಾತ್ರ ಚೆನ್ನಾಗಿದೆ........ಬಹಳ ಚೆನ್ನಾಗಿದೆ! ಅಂತ ರಾಷ್ಟ್ರೀಯ ಮಾಪಕದಲ್ಲಿ ಕೂಡ ಚೆನ್ನಾಗಿದೆ. ಇಲ್ಲಿಗೆ ಬರುವ ಪ್ರವಾಸಿಗಳು ಭೂಲೋಕದ ಮೂಲೆ ಮೂಲೆಗಳಿಂದ ಬರುವವರು. ಈ ದೇಶದ ತೆಂಗು, ಕಂಗ ಕಡಲು, ಬಿಸಿಲು, ಸೆಕೆ – ಪಾಶ್ಚಾತ್ಯರಿಗೆ ಎಷ್ಟು ಪ್ರಿಯವಾದ ವಸ್ತುಗಳು....!!

ನಮ್ಮ ಅತಿಥೇಯರು ಸಿಲೋನಿನ ವೈಶಿಷ್ಟ್ಯವಾದ ಊಟವನ್ನು ತರಿಸಿದರು. ಅವರೂ, ನಾನೂ ಸಸ್ಯಾಹಾರಿಗಳಾದುದರಿಂದ ನಮಗೆ ಮಾಮೂಲು ಅಡಿಗೆಯಾಗಿತ್ತು. ಹಪ್ಪಳಗಳೆಲ್ಲಾ ಅಂದಿನ ಆ ರಭಸದ ಗಾಳಿಗೆ ಮೇಜಿನ ಮೇಲೆ ಉಳಿಯುತ್ತಲೇ ಇರ ಲಿಲ್ಲ. ತೆಳ್ಳಗಿನ ಆ ಹಪ್ಪಳಗಳು ಎಲ್ಲೆಲ್ಲೂ ಹಾರಾಡುತ್ತಿದ್ದುವು. ಒಮ್ಮೆಯಂತೂ ಪಕ್ಕದ ಮೇಜಿನಲ್ಲಿದ್ದ ಒಂದು ಹಪ್ಪಳ ಹಾರಾಡಿ, ಹಾರಾಡಿ ಕಡೆಗೆ ನನ್ನ ಮುಖಕ್ಕೇ ಬಂದು ಅಪ್ಪಳಿಸಿತು! ಎಷ್ಟು ತಮಾಷೆಯಾಗಿತ್ತು!! ಆಮೇಲೆ ನಾವು ಜಾಗ ಬದ ಲಾಯಿಸಿ, ಗಾಳಿಯನ್ನು ತಡೆಯಲು ಬಾಗಿಲು ಮುಚ್ಚಿ ನಿರಾತಂಕವಾಗಿ ಊಟ ಮಾಡಿ ದೆವು........

—ಸಿಲೋನ್, ಕೊಲಂಬೋ ನೋಡಬೇಕೆಂಬ ಬಲವಾದ ಆಸೆಯಿತ್ತು........ ಅದೂ ಈಡೇರಿತು!

ಇನ್ನು ನಾಳೆ ಮಧ್ಯಾಹ್ನ ಇಲ್ಲಿಂದ ಹೊರಡುವ 'ಏರ್ ಸಿಲೋನ್' (Air Ceylon) ವಿಮಾನದ ಮೂಲಕ ಭಾರತಕ್ಕೆ ಹಿಂತಿರುಗುತ್ತೇವೆ! ನಿಮ್ಮನ್ನು ನೋಡಲು ಇನ್ನು ಕೆಲವೇ ಗಂಟೆಗಳಿವೆ....

ಬಾಕಿ ವಿಷಯ ಎದುರೆದುರಿಗೇ ಕುಳಿತು ಮಾತನಾಡೋಣ! ನಮ್ಮ ವಿಶ್ವ ಪರ್ಯಟನದಲ್ಲಿ ಬರೆದ ಕಡೆಯ ಪತ್ರ ಇದು—

ನಿಮ್ಮ ಅಮ್ಮನ
ಆಶೀರ್ವಾದಗಳು.

ಸಿಲೋನ್ ದ್ವೀಪದಿಂದ

ಭಾ ರ ತ ಕ್ಕೆ

ಕೊಲೊಂಬೋ ನಗರದಿಂದ

ಮದ್ರಾಸು ದಾರಿಯಾಗಿ

ಬೆಂಗಳೂರಿಗೆ !!

1 – 6 – 1968

ಬೆಂಗಳೂರು – ನಮ್ಮ ಮನೆ " ರುಕ್ಮಿಣಿ " ಯಲ್ಲಿ

ಸಿಲೋನ್ ಬಿಟ್ಟೆವು. ಕೊಲಂಬೋ ವಿಮಾನ ನಿಲ್ದಾಣ ಚಿಕ್ಕದು. ಏರ್ ಸಿಲೋನ್ (Air Ceylon) ವಿಮಾನ ಎಷ್ಟು ಚಿಕ್ಕದಾಗಿತ್ತು ! ಏನೂ ಚೆನ್ನಾಗಿರಲಿಲ್ಲ! ಚಲಿಸುವಾಗ ತುಂಬಾ ಶಬ್ದವೂ ಇತ್ತು. ಆ ಪ್ರಯಾಣ ತುಂಬಾ ಒರಟಾಗಿತ್ತು; ವಿಮಾನದೊಳಗೆ ಹೆಚ್ಚು ಪ್ರಯಾಣಿಕರೂ ಇರಲಿಲ್ಲ. ಸೆಖೆ ಹೆಚ್ಚು ! ನಾನು ಈ ವಿಮಾನವನ್ನು ಮೆಚ್ಚದೆ ಇದ್ದುದಕ್ಕೆ ಪತಿಯವರು ತಮಾಷೆಗೆ –"ನೀನು ಏರ್ ಇಂಡಿಯಾ, ಪೆನ್--ಎಮ್, ಬಿ. ಒ. ಎ. ಸಿ., ಲುಫ್ತ್‌ಹನ್ಸಾ, (Air India Pan-Am, B.O.A.C., Lufthansa) ಇತ್ಯಾದಿ, ಕೊನೆಗೆ ಕಲಶಪ್ರಾಯದಂತಿರುವ ಕ್ವಾಂಟಾಸ್ – ಡಿ. ಸಿ. 8 (Quantas D.C.-8) ವಿಮಾನದಲ್ಲಿ ಸಂಚರಿಸಿ (Spoil) ಕೆಟ್ಟು ಹೋಗಿದ್ದೀಯಾ! ಸಾಮಾನ್ಯ ವಿಮಾನ ಈಗ ನಿನಗಾಗದು ಅಲ್ಲವೇ?" ಎಂದರು.

ಸಿಲೋನ್ ಗಗನ ಸಖಿಯರು ಮಾತ್ರ ಆತ್ಮೀಯತೆಯಿಂದ ನೋಡಿಕೊಂಡರು. ನೃತ್ಯ ಕಲಾವಿದರೆಂದರೆ ಅವರಿಗೆ ಅಭಿಮಾನ. ವಿಮಾನದ ಕಿಟಕಿಯಿಂದ ಕೆಳಗೆ ನೋಡಿದರೆ ಭಾರತ ದೇಶದ ರೂಪು-ರೇಖೆ ಸರಿಯಾಗಿ ಕಾಣುತ್ತಿತ್ತು. ನೀಲಿ ಬಂಗಾಳ ಕೊಲ್ಲಿಯ ಮೇಲೆ ವಿಮಾನ ಹಾರಾಡಿತು. ರಾಮೇಶ್ವರ ಎಲ್ಲ ದಾಟಿದೆವು. ಎದೆಯಲ್ಲಿ ಭಾರತ ಸೇರುವ ಉತ್ಸಾಹದಿಂದ ಉದ್ವೇಗ ಪೂರ್ಣವಾಗಿ ಡಪ–ಡಪ ಶಬ್ದವಾಗುತ್ತಿತ್ತು. ಕೊನೆಗೆ ನಿರ್ದಿಷ್ಟ ಸಮಯಕ್ಕೆ ವಿಮಾನ ಭಾರತವನ್ನು ಸೇರಿತು. ಮದ್ರಾಸಿಗೆ ಕಾಲಿಟ್ಟೊಡನೆಯೇ ಪತಿಯವರು ಒಂದು ಹಿಡಿ ಮಣ್ಣನ್ನು "ಭಾರತಮಾತೆಗೆ ಪ್ರಣಾಮಗಳು" ಎಂದು ಹೇಳಿ ತೆಗೆದುಕೊಂಡು, ತಮ್ಮ ತಲೆಯ ಮೇಲೆ ಎರಚಿಕೊಂಡರು !

ಸುಂಕದ ಕಟ್ಟೆಯಲ್ಲಿ ಏನೂ ತೊಂದರೆಯಾಗಲಿಲ್ಲ! ಹೆದರಿದ ಮನಸ್ಸಿನಿಂದ ಅವರನ್ನು ಕಂಡಿದ್ದೆವು. ನಾವು ಸುಮಾರು 3 ವರ್ಷ ಹೊರದೇಶದಲ್ಲಿದ್ದ ಕಾರಣ, ನಾವು ತಂದ ಯಾವ ಸಾಮಾನು ಸರಂಜಾಮುಗಳಿಗೂ ತೆರಿಗೆ ಬೀಳಲಿಲ್ಲ.

ಅಷ್ಟು ಹೊತ್ತಿಗೆ 'ಅಮ್ಮಾ!!!' ಎಂಬ ದೊಡ್ಡದಾದ ಜೋಡಿ ಕಂಠದ ಧ್ವನಿ ಕಿವಿಗೆ ಬಿತ್ತು! ಒಡನೆ ಹಿಂತಿರುಗಿ ನೋಡಿದರೆ "ನಮ್ಮ ಮುದ್ದು ಮಕ್ಕಳು – ಜಯದೇವ್, ಶಿವದೇವ್!! ನಮ್ಮನ್ನು ಕಂಡು ದೂರದಿಂದ ಹಾರಾಡಿದರು........ಅವರನ್ನು ಅಂದು ನಾವು ಮದರಾಸಿನಲ್ಲಿ ನಿರೀಕ್ಷಿಸಿರಲಿಲ್ಲ. ಈ ಅನಿರೀಕ್ಷಿತವಾಗಿ ಆದ ಅವರ ದರ್ಶನಕ್ಕೆ ಅತ್ಯಂತ ಆನಂದಪಟ್ಟೆವು. ಅವರು ಎಂದ 'ಅಮ್ಮಾ' ಶಬ್ದ ಕೇಳಿ ಕಣ್ಣಿಂದ

ಆನಂದ ಬಾಷ್ಪಗಳುದುರಿದುವು. ವಿಮಾನ ನಿಲ್ದಾಣದ ಕಾನೂನು ಬೇಡಿಗಳಿಂದ ಬಿಡುಗಡೆ ಹೊಂದಿ, ಹೊರಗೆ ಬಂದು ಮಕ್ಕಳಿಬ್ಬರನ್ನೂ ಎದೆಗಪ್ಪಿಕೊಂಡು, ಮುತ್ತಿಕ್ಕಿದೆವು........

ನಮ್ಮ ಸ್ವಾಗತಕ್ಕೆ ಜಯದೇವ್ ತನ್ನ ಆಫೀಸ್ ಕಾರನ್ನು ತೆಗೆದುಕೊಂಡ ಬಂದಿದ್ದ. ಕಾರಿನಲ್ಲಿ ಬೆಂಗಳೂರಿಗೆ ಪ್ರಯಾಣ ಮಾಡುವಾಗ ನಮ್ಮ ದೇಶದಲ್ಲಿ ನಮ್ಮ ಕಣ್ಣಿಗೆ ಮೊದಲು ಕಂಡುದು ಪ್ರಜಾ ಸಾಗರ........ಮಕ್ಕಳು ! ಜನಸಂದಣಿ.

ಕಳೆದ ಮೂರು ವರ್ಷಗಳಲ್ಲಿ ನಡೆದ ಸಮಾಚಾರಗಳನ್ನೆಲ್ಲಾ ಸಂಕ್ಷಿಪ್ತವಾಗಿ ಮಕ್ಕಳು ತಿಳಿಸಿದರು. ಬೆಂಗಳೂರಿನಲ್ಲಿ ಆಗಿರುವ ಅಭಿವೃದ್ಧಿಯನ್ನು ಹೊಗಳಿದರು.... ರಸ್ತೆ ರಿಪೇರಿ....ಮೈಸೂರು ಸಂಸ್ಥಾನಕ್ಕೆ ನಾವು ಬಂದೊಡನೆ ಕಾಣುವ ಅನೇಕಾನೇಕ ಸುಧಾರಣೆಗಳು........ಪ್ರವಾಸಿಗಳಿಗೆ ದಾರಿಯಲ್ಲಿ ಮಾಡಿಕೊಟ್ಟಿರುವ ಸರ್ಕಾರಿ ಅನುಕೂಲತೆಗಳು....ಹೊಸಹೊಸ, ಉತ್ತಮ, ಬಹುಮಹಡಿಗಳ ಕಟ್ಟಡಗಳು....ಅತಿ ದೊಡ್ಡ ದೊಡ್ಡ ಹೋಟೆಲುಗಳು....ಅಲ್ಲಿನ ರಾತ್ರಿಯ ಮನರಂಜನಾ ಕಾರ್ಯಕ್ರಮಗಳು.... ಪ್ರಪಂಚದ ಇತರೆಡೆಯಲ್ಲಿರುವಂತೆ ಇಲ್ಲಿಯೂ ಈಗ ನಗ್ನ-ನಾಟ್ಯಗಳಿರುವ ವಿಷಯ (ಬೆಂಗಳೂರಿನಲ್ಲಿರುವಂತಹ ಅಶ್ಲೀಲ ನಗ್ನ–ನೃತ್ಯಗಳು ಇಡೀ ಭಾರತದಲ್ಲಿಯೇ ಇಲ್ಲವಂತೆ!) ಹೊಸ ಹೊಸ ಆಧುನಿಕ ಚಿತ್ರಮಂದಿರಗಳು....ಏಷ್ಯಾದಲ್ಲಿಯೇ ಮೊದಲಾಗಿ ಇಲ್ಲಿರುವ 'ಸಿನೇರಾಮಾ ತೆರೆ' (Cinerama Screen) ಈಗ ನಡೆಯುತ್ತಿರುವ ಸಿನೇರಾಮಾ ಚಲನಚಿತ್ರ .... ಕೆಲವು ಅದ್ಭುತ ಇಲಾಖಾ ಮಳಿಗೆಗಳು....ವಿವಿಧ ಆಹಾರಗಳನ್ನು ಡಬ್ಬಗಳಲ್ಲಿ ಮಾರಲ್ಪಡುವ ಏರ್ಪಾಡು! ಸುಲಭವಾಗಿ ಸಿಗುವ ಗಿಣ್ಣು, ಮುಂತಾದ ಪದಾರ್ಥಗಳು....ಇತ್ಯಾದಿ. ಪ್ರಪಂಚದ ಇತರ ನಗರಗಳಿಗೆ ಸರಿಸಮಾನವಾಗಿರುವ ಬೆಂಗಳೂರಿನ ಇಂದಿನ ಚಿತ್ರ .... ಎಲ್ಲವನ್ನೂ ಕೂಲಂಕುಷವಾಗಿ ತಿಳಿಸಿದರು. ನಮ್ಮ ಅಚ್ಚುಮೆಚ್ಚಿನ, ಒಲವಿನ ನೆಂಟರ, ಸ್ನೇಹಿತರ ಸಮಾಚಾರ ಕೇಳಿ ತಿಳಿದುಕೊಂಡೆವು....ಆತುರದಿಂದ ನಾವು ನಾಲ್ವರೂ ಒಮ್ಮೆಯೇ ಒಂದೊಂದು ಸಲ ಮಾತನಾಡುತ್ತಿದ್ದೆವು!

ಬೆಂಗಳೂರಿನ ನಮ್ಮ ಮನೆ 'ರುಕ್ಮಿಣಿ' ಹತ್ತಿರ ಬರುತ್ತಿರುವಾಗಲೆಲ್ಲಾ ಆನಂದ, ಉದ್ವೇಗದಿಂದ ಮನಸ್ಸು ತುಂಬಿ ಬಂತು! ಕಾರು ಗೇಟಿನ ಒಳಗೆ ಬಂತು! ನಮ್ಮ ತೋಟವೆಲ್ಲ ಹಸಿರು ಹಸಿರಾಗಿ ಕಂಡು ಬಂತು. ಮನೆ ಬಾಗಿಲಲ್ಲಿ ಅಮ್ಮ ನಿಂತು, ಆರತಿ ಎತ್ತಿ ಸ್ವಾಗತ ಬಯಸಿದರು. ಮನೆ ಬಾಗಿಲಿಗೆ ಮಾವಿನ ಎಲೆಯ ತೋರಣ ಅಲಂಕೃತವಾಗಿತ್ತು. ಒಳಗಡೆ ಬಂದರೆ ಶ್ರೀ ನಟರಾಜ ಮೂರ್ತಿಗೆ ಕನಕಾಂಬರ ಹೂವಿನ ಹಾರ ಹಾಕಿತ್ತು. ಮನೆ ಒಳಗೆಲ್ಲಾ ಗಂಧದ ಕಡ್ಡಿಯ ಸುಗಂಧ! 'ಟೇಪ್

ರಿಕಾರ್ಡರ್' ನಿಂದ ನಾಗಸ್ವರದ ಸಂಗೀತ ಮನೆಯನ್ನೆಲ್ಲಾ ಆವರಿಸಿತ್ತು. ನೃತ್ಯ ಶಿಷ್ಯೆಯರಾದ ನಮ್ಮ ಪ್ರಿಯ ಗಾಯತ್ರಿ (ಆಗ 5 ತಿಂಗಳ ಬಸುರಿ) ಮತ್ತು ವೈಜಯಂತಿ (ಆಗ ತಾನೆ ಆಕೆಗೆ ಮದುವೆ ಗೊತ್ತಾಗಿತ್ತಂತೆ!) ಬಂದು ಕಾಲು ಮುಟ್ಟಿ ನಮಸ್ಕರಿಸಿ, ನಮ್ಮಿಬ್ಬರನ್ನು ಕೂರಿಸಿ, ಕುಂಕುಮದ ಆರತಿಯಿತ್ತು, ಅರಿಸಿನ ಕುಂಕುಮ ಕೊಟ್ಟು, ಹೂಮುಡಿಸಿ, ಹಾರಗಳನ್ನು ಹಾಕಿದರು........ನಮಗೆ ಹೆಣ್ಣು ಮಕ್ಕಳಿಲ್ಲದಿದ್ದರೂ, ಅಗತ್ಯಬಿದ್ದ ಸಮಯದಲ್ಲಿ ನಮಗೆ ಯಾವಾಗಲೂ ಇಂತಹ ಹೆಣ್ಣು ಮಕ್ಕಳ ಸೌಭಾಗ್ಯವಿದೆ. ಈ ಪುಣ್ಯಕ್ಕೆ ದೇವರಿಗೆ ಕೃತಜ್ಞರಾದೆವು.

ತೀ|| ತಂದೆಯವರು ಹಿಂದಿನ ದಿನ ಬೊಂಬಾಯಿಯಿಂದ ನಮ್ಮನ್ನು ಕಾಣಲು ಬಂದಿದ್ದರು....ಪೂಜ್ಯ ತಂದೆ–ತಾಯಿಯವರ ಕಾಲುಮುಟ್ಟಿ ನಮಸ್ಕರಿಸಿದೆ. ಸ್ವಲ್ಪ ಹೊತ್ತಿನಲ್ಲೇ ನಮ್ಮ ಸಂಗೀತಗಾರರು ಹೂ ಹಾರಗಳನ್ನೂ, ಹಣ್ಣುಗಳನ್ನೂ ಕೊಟ್ಟು ಸತ್ಕರಿಸಿದರು.

'ರುಕ್ಮಿಣಿ' ಯ ಕೋಣೆ ಕೋಣೆಗೆ ನುಗ್ಗಿ ಓಡಾಡಿದೆ. ನಮ್ಮ ಶಿವದೇವ ಪ್ರತಿಯೊಂದು ಕೋಣೆಯಲ್ಲಿಯೂ ಒಂದೊಂದು ರೇಡಿಯೋವನ್ನು ತನ್ನ ಅಜ್ಜನು ವಾರ್ತೆ ಕೇಳಲೆಂದು ಮಾಡಿಟ್ಟಿದ್ದಾನಂತೆ! ಸತ್ಕಾರ ಕೋಣೆಯ ತುಂಬಾ ಪುಸ್ತಕಗಳು. ಪುಸ್ತಕಗಳನ್ನಿಡಲು ಹೊಸತೊಂದು ಕಪಾಟು....ಜಯದೇವನ ಆರ್ಜನೆ! ಅವನು ಆಸಕ್ತಿ ತೋರಿಸಿದ ವಿಷಯವಿಲ್ಲ – ಪಾಕಶಾಸ್ತ್ರದಿಂದ ಅಂತರಿಕ್ಷ ವಿಜ್ಞಾನದವರೆಗೂ!! ಇನ್ನೊಂದು ಕಡೆ ಶಿವದೇವನ ವ್ಯಕ್ತಿತ್ವ. ಟೇಪ್ ರಿಕಾರ್ಡರ್, ರೆಕಾರ್ಡ್ ಪ್ಲೇಯರ್ ರೇಡಿಯೋ ಇವುಗಳನ್ನೆಲ್ಲಾ ತಾನೇಸ್ವತಃ ರಚಿಸಿದ 'ಎಂಪ್ಲಿಫಾಯರ್' (Amplifier)ಗೆ ಸಂಬಂಧಿಸಿ, ಧ್ವನಿವರ್ಧಕದ ಮೂಲಕ ಬೇಕಾದ ಸಂಗೀತವನ್ನು ಮನೆಯನ್ನೆಲ್ಲಾ ತುಂಬಿಸುವಂತೆ ಮಾಡಿದ್ದ. ಅದರ ಗುಣ, ವೃತ್ತಿ ಕೌಶಲ ಮಟ್ಟದಲ್ಲಿದೆಯೆಂದರು.

ಮನೆ ಸೇರಿದ ಆನಂದದಿಂದ ಎದೆ ಬಿರಿಯಿತು. ನಮ್ಮ ಜೊತೆಗೆ ಪಾಶ್ಚಾತ್ಯಕ್ಕೆ ತೆಗೆದುಕೊಂಡು ಹೋದ, ವಿಶ್ವಪರ್ಯಟನೆ ಮಾಡಿದ, ಮಾಡಿಸಿದ ಪುಟ್ಟ ಗಣಪತಿ ವಿಗ್ರಹವನ್ನು ಪುನಃ ನಮ್ಮ ದೇವರ ಮನೆಯ ಇತರ ವಿಗ್ರಹಗಳೊಂದಿಗೆ ಇಟ್ಟು ಕೃತಜ್ಞತೆಯಿಂದ ಸಾಷ್ಟಾಂಗ ನಮಸ್ಕಾರ ಮಾಡಿದೆ.

ಸಾಯಂಕಾಲ ಮಬ್ಬು ಕವಿದಾಗ ದೀಪದ ಸ್ವಿಚ್ ಒತ್ತಲು ಹೋದೆ. ಮನೆಯ ದೀಪಗಳ ಸ್ವಿಚ್ ಎಲ್ಲಿವೆ ಎಂಬುದು ಮರೆತು ಹೋಗಿತ್ತು! ಹುಡುಕಲು ತಡವರಿಸುತ್ತಿದ್ದಾಗ ಗೌರಿ ಓಡಿಬಂದು ದೀಪ ಹಚ್ಚಿದಳು!

ಅಂದು ರಾತ್ರಿಯೆಲ್ಲಾ, ಒಂದು ನಿಮಿಷವೂ ಮಲಗದೆ ಜಯದೇವ 'ಅವನ' ವಿನೋಲ್ಟಾ ಕೆಮೆರಾವನ್ನು ಬಿಚ್ಚಿ ನೋಡಿ, ಅದನ್ನೂ, ಅದರ ಸಲಕರಣೆಗಳನ್ನೂ,

ಅದರ ವಿಷಯವಾಗಿರುವ ಪುಸ್ತಕಗಳನ್ನೂ ನೋಡುತ್ತಾ ಕಾಲಕಳೆದ ; ಅವನಿಗಾದ ಸಂತೋಷ ಅಷ್ಟಿಷ್ಟಲ್ಲ! ಸ್ವರ್ಗವೇ ಕೈಗೆ ಸಿಕ್ಕಿದಂತಾಯಿತು....ಅವನಿಗೆ!!

ಶಿವದೇವ 'ತನ್ನ' ಹೊರಬಹುದಾದ ಧ್ವನಿಮುದ್ರಣ ಯಂತ್ರವನ್ನು ಅಣಿ ಮಾಡಿ, ಮನೆಯಲ್ಲಿ ನಡೆದ ಎಲ್ಲ ಮಾತುಕತೆಗಳನ್ನೂ, ಗದ್ದಲವನ್ನೂ, ಸಂಭ್ರಮ ವನ್ನೂ ಯಾರಿಗೂ ತಿಳಿಯದಂತೆ ಮುದ್ರಣ ಮಾಡಿಟ್ಟ. ನಾವು ತಂದ ಆ ಹಿತಾಚೀ TRQ 220 ರೇಡಿಯೋ ಕಂಡು ಅದನ್ನು ಹೊಗಳಿದಷ್ಟೂ ಅವನಿಗೆ ಸಾಲದಾಯಿತು. ಅವನಿಗಾದ ಆನಂದ, ಅದಕ್ಕಾಗಿ ಅವನು ಪಟ್ಟ ಅಭಿಮಾನ, ತನ್ನದೆಂಬ ಹೆಮ್ಮೆ ಅಷ್ಟಿಷ್ಟಲ್ಲ!

ಅಂತೂ ಬೆಂಗಳೂರು – ನಮ್ಮ ಮನೆ 'ರುಕ್ಮಿಣಿ' ಯನ್ನು ಮತ್ತೆ ಸೇರಿದೆವು ಹೆತ್ತವರನ್ನೂ, ಮಕ್ಕಳನ್ನೂ ಮತ್ತೆ ಪಡೆದೆವು.

ಮರುದಿನ ಬೆಳಿಗ್ಗೆಯಿಂದ ಮನೆಯ 'ಕರೆಗಂಟೆ' ಬಿಡುವಿಲ್ಲದೆ 'ಕರೆ' ಯುತ್ತಲೇ ಇತ್ತು. ನಮ್ಮನ್ನು ನೋಡಲು ಬಂದ ನೆರೆಹೊರೆಯವರು, ಗೆಳೆಯರು, ಇತರರು. ಬೆಳಿಗ್ಗೆ, ಮೈಸೂರು ಸಂಸ್ಥಾನದ ಮಾಜಿ ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರನ್ನು ಭೇಟಿ ಮಾಡಿ, ನಮ್ಮ ಕೆಲಸ ಕಾರ್ಯಗಳನ್ನು ಅವರಿಗೆ ತಿಳಿಸಿ, ಮೈಸೂರು ಸರ್ಕಾರದ ಸಹಾಯಕ್ಕೆ ಅಭಿನಂದನೆಗಳನ್ನು ಅರ್ಪಿಸಿದೆವು. ಜಯದೇವ ಇಲ್ಲಿನ ಪತ್ರಿಕೋ ದ್ಯೋಗಿಗಳ ಕೂಟವೊಂದನ್ನು ನಮ್ಮಲ್ಲಿ ಏರ್ಪಡಿಸಿ, ನಮ್ಮ ಭೇಟಿ ಮಾಡಿಸಿದನು.

ಮದ್ರಾಸಿನಿಂದ, ಬೊಂಬಾಯಿಯಿಂದ, ಉತ್ತರ ಹಿಂದೂಸ್ಥಾನದಿಂದ ಎಲ್ಲೆ ಲ್ಲಿಂದಲೋ ಸಂಬಂಧಿಕರು ನಮ್ಮನ್ನು ಕಾಣಲು 'ರುಕ್ಮಿಣಿ' ಗೆ ಬಂದರು. ಇದು ಭಾರತ ದೇಶ....ಭಾರತೀಯರ ಸಾಮಾಜಿಕ, ಕೌಟುಂಬಿಕ ಜೀವನ!!

ಪತಿಯವರಿಗೂ, ನನಗೂ ದೇಹಕ್ಕೆ ತುಂಬಾ ಶ್ರಮವಾಗಿತ್ತು. 'ರುಕ್ಮಿಣಿ' ಯಲ್ಲಿ ವಿಶ್ರಾಮವನ್ನು ಬಯಸಿದ್ದೆವು. ಯಾವ ನೃತ್ಯ ಕಲಾವಿದರೂ ನಮ್ಮಂತೆ 3 ವರ್ಷಗಳ ಕಾಲ ಭಾರತ ಬಿಟ್ಟು ನಿರಂತರ ಕಲಾ ಸೇವೆಯನ್ನು ಮಾಡಿರಲಿಲ್ಲ. ಆ ಕೆಲಸದ ಪರಿ ಣಾಮ ಈಗ ಮನೆಗೆ ಬಂದು ಸೇರಿದ ಮೇಲೆ ಕಂಡುಬಂತು. ಇನ್ನು ಈಗ ಸದ್ಯಕ್ಕೆ ನೃತ್ಯಕಲೆಗೆ ರಜಾ ಕೊಡಬೇಕೆಂದಿದ್ದೇವೆ. ನೃತ್ಯಕಲೆಯಿಂದ ದೂರವಿದ್ದರೆ ಹೊಸ ಸೃಷ್ಟಿಗೆ ಅನುಕೂಲವಾಗುತ್ತದೆ. ಹೇಳಿಕೊಡಲು ಈಗ ಶಿಷ್ಯಂದಿರೂ ಇಲ್ಲ. ನಾವು ಭಾರತ ಬಿಟ್ಟು ಹೋಗುವಾಗ ನೃತ್ಯ ಕಲೆಯಲ್ಲಿ ತಯಾರು ಮಾಡಿದ ಅನುಭವಸ್ಥ ಹೆಣ್ಣು ಮಕ್ಕಳೆಲ್ಲರಿಗೂ ಈಗ ಮದುವೆಯಾಗಿದೆ....ಮಕ್ಕಳಾಗಿವೆ....ಮಕ್ಕಳಾಗಲಿವೆ! ನಮ್ಮನ್ನು ಸ್ವಾಗತಿಸಲು ಬರುವಾಗ ಒಬ್ಬಳು ಒಂದು ಮಗು, ಇನ್ನೊಬ್ಬಳು ಎರಡು

ಮಕ್ಕಳು....ಹೀಗೆ ಕಟ್ಟಿಕೊಂಡು ಬರುತ್ತಾರೆ! ಮತ್ತಿತರರು ಗರ್ಭವತಿಯರು. ಇನ್ನು ಕೆಲವರಿಗೆ ಮದುವೆ ಗೊತ್ತಾಗಿದೆ! ಅಂತೂ, ನಾವು ಈಗ ನೃತ್ಯ ಕ್ಷೇತ್ರದಲ್ಲಿ ಹೊಸಬೆಳೆ ಬೆಳೆಸಬೇಕು...."ತೈಯಾ....ತೈ" ಯಿಂದ ಆರಂಭ ಮಾಡಬೇಕು !

ಆದರೆ ನಮಗೆ ಈಗ ತುಂಬಾ ದಣಿವು. ಒಂದೆರಡು ತಿಂಗಳಾದರೂ ವಿಶ್ರಾಂತಿ ಬೇಕು. ಸಂಸಾರದ ಕಡೆ ಗಮನ ಕೊಡಬೇಕು. ಜಯದೇವನಿಗೆ ಹೆಣ್ಣು ತರಬೇಕು! ಶಿವದೇವ ಇನ್ನೆರಡು ತಿಂಗಳಲ್ಲಿ ಅಮೇರಿಕಾಕ್ಕೆ ಹೋಗುವವನು....ಅವರ ಜೊತೆಯಲ್ಲಿರುವ ಪ್ರತಿಯೊಂದು ರಸನಿಮಿಷದ ಸುಖ ಪಡೆಯಬೇಕು.

ನಾವಿಬ್ಬರೂ ಈಗ ಹೆಚ್ಚಾಗಿ ನಮ್ಮ ತೋಟದ ಕಲ್ಲುಬೆಂಚಿನ ಮೇಲೆ ಕುಳಿತು ವಿಶ್ರಮಿಸುತ್ತಲಿದ್ದೇವೆ. ಹಲವೊಮ್ಮೆ ಮೆದುಳಿಗೂ ಕೆಲಸ ಕೊಡುವುದಿಲ್ಲ! ಆದರೆ ಆಕಾಶವನ್ನು ನೋಡುವಾಗ, ಚಂದ್ರನನ್ನೂ, ನಕ್ಷತ್ರಗಳನ್ನೂ ಗಗನದಲ್ಲಿ ನೋಡುವಾಗ....ದಿಗಂತದ ಅನಂತತೆಯನ್ನು ಕಲ್ಪಿಸುವಾಗ, ನಾವಿರುವ ಜಗತ್ತು ಎಷ್ಟು ಚಿಕ್ಕದು ಎಂಬೆನಿಸುತ್ತದೆ. ನಾವು ಅದನ್ನು ಸುತ್ತಿದ್ದೇವೆ! ಎಂಬುದಾಗಿ ಎಚ್ಚೆತ್ತು, ಪಡೆದ ಅನುಭವಗಳನ್ನು ಮೆಲುಕಾಡುತ್ತಲಿದ್ದೇವೆ!!

ತಿದ್ದುಪಡಿ

ಪುಟ	ಪಂಕ್ತಿ	ತಪ್ಪು	ಒಪ್ಪು
2	ಕೊನೆಯ ಪಂಕ್ತಿ	ವೃದಂಕ್ಕೆ	ವೃಂದಕ್ಕೆ
29	23	ಹರಿಯುದ	ಹರಿಯುವ
40	ತಾರೀಕು	21-11-1966	21-1-1966
43	20	ಅನುಭವ.	ಅನುಭವ ;
44	2	ಮಾರುವವರ	ಮಾರುವವರ,
45	8	ಮಾಡುತ್ತೇವೆ.	ಮಾಡುತ್ತೇವೆ,
51	18	ನೃತ್ಯ	ನೃತ್ಯ
57	24	ವ್ಯಕ್ತಿತ್ವ	ವ್ಯಕ್ತಿತ್ವ
62	13	ನೃತ್ಯೋಪನ್ಯಾಸ	ನೃತ್ಯೋಪನ್ಯಾಸ
63	5	ಮೈ ಮೆರೆತು	ಮೈ ಮರೆತು
64	11	ನಮ್ಮೊಡನೆ	ನಮ್ಮೊಡನೆ
69	14	ನೃತ್ಯ	ನೃತ್ಯ
71	30	ಆವರ	ಅವರ
73	4	ಆಭ್ಯಾಗತರು	ಅಭ್ಯಾಗತರು
	20	Womens	Womens'
75	7	ಶಿಷ್ಯೆಯೂಬ್ಬಳು	ಶಿಷ್ಯೆಯೊಬ್ಬಳು
77	8	ವಯಸ್ಸಾದವರೂ.	ವಯಸ್ಸಾದವರೂ,
78	1	ಈ ಕಲೆ	‘ ಈ ಕಲೆ
81	28	ನೆನೆಪಿದೆ	ನೆನಪಿದೆ
85	1	ರಜಾ ದಿನಗಳಲ್ಲಿ.	ರಜಾ ದಿನಗಳಲ್ಲಿ,
	19	ಯಶಸ	ಯಶಸ್ಸ
86	12	ತಾಳವನು	ತಾಳವನ್ನು
	14	ಒಮ್ಮೆಯ್ನೇ	ಒಮ್ಮೆಯೇ
	25	ಮತ್ತು	ಮತ್ತೂ
87	10	ಆಪರಿಚಿತ	ಅಪರಿಚಿತ
	19	ಡೇವರು	ದೇವರು

ಪುಟ	ಪಂಕ್ತಿ	ತಪ್ಪು	ಒಪ್ಪು
88	ಕೊನೆಯ ಪಂಕ್ತಿ	ಹುಟ್ಟುವುದಾಸ್ಫೂರ್ತಿ	ಹುಟ್ಟುವ ಸ್ಫೂರ್ತಿ
97	13	1215)	1215
	17	Wren	Wren)
98	6	ಇದೇ	ಇದೆ
101	24	ದೃಷ್ಟಿ	ದೃಷ್ಟಿ
102	9	ಇಲ್ಲಿ	ಈ ಪದ ಬಿಡಬೇಕು
115	29	ಲೋಲುಪ್ತತೆ	ಲೋಲುಪತೆ
117	18	ಪ್ರಿಯಿ	ಪ್ರಿಯು
131	ತಾರೀಕು	11–9–1666	11–9–1966
132	26	ಪಾಶ್ಚಾತ್ಯರಲ್ಲಿ	ಪಾಶ್ಚಾತ್ಯದಲ್ಲಿ
137	26	ಬ್ಯಾಲ್ಟೆ	ಬ್ಯಾಲೆ
138	15	ಕಾರಣದಿಂದಿರಬಹುದು	ಕಾರಣದಿಂದಿರಬಹುದು–
141	27	ನಮ್ಮಿಚ್ಛೆ	ನಮ್ಮಿಚ್ಛೆ.
144	4	ಲೆಮೆನೊಡ್	ಲೆಮೊನೇಡ್
146	15	ಶೆಪ್ಪೀಲ್ಡ್	ಶೇಫ್ಫೀಲ್ಡ್
153	19	ಇವರೆಲ್ಲ	ಇವರಲ್ಲ
166	25	ಕಣ್ಣು	ಕಣ್ಣು
167	26	(Rolls..Jaguar)	Rolls....Jaguar
169	23	Thomes	Thomas
175	1	ಅದ್ಯಷ್ಟ	ಅದೃಷ್ಟ
181	2	ನೃತ್ಯಗಾತಿ	ನೃತ್ಯಗಾತಿ
	6	ಆವಕಾಶ	ಅವಕಾಶ
183	13	ಶಿ	ಶೇ
186	27	ಜಯದೇನನು	ಜಯದೇವನು
190	20	ಸ್ಫೂರ್ತಿಯನ್ನೂ,	ಸ್ಫೂರ್ತಿಯನ್ನೂ
191	24	ಆಭಾವ	ಅಭಾವ
192	15	ನಮು	ನಮಗೆ
201	21	ಆದೇ	ಅದೇ
204	4	"ಮುಖ್ಯ	ಮುಖ್ಯ

ಪುಟ	ಪಂಕ್ತಿ	ತಪ್ಪು	ಒಪ್ಪು
216	17	ಅಗಲಿ	ಅಗಲಿ
224	4	ಆಲ್ಲದೆ	ಅಲ್ಲದೆ
	16	ಆಹ್ವಾನ	ಅಜ್ಞಾನ
227	8	ಖೈದಿ	ಕೈದಿ
229	2	"Lo,the Morn!	'Lo, the Morn!'
233	6	ಎಷ್ಟ್ಲ	ಎಷ್ಟು
234	20	'ಆಳುಗಳು'	'ಆಳುಗಳು'
239	8	Ducherss	Duchess
240	ಕೊನೆಯ ಪಂಕ್ತಿ	Brobourne	Brabourne
242	ಕೊನೆಯ ಪಂಕ್ತಿ	ನಮ್ಮನ	ನಮ್ಮನ್ನು
247	23	ಒಂದು	ಬಂದು
248	2	ಒಂದು ದಿನ	ಒಂದು ದಿನ.
251	2	ಅಕಾಂಕ್ಷೆ	ಆಕಾಂಕ್ಷೆ
253	17	ಪ್ರದೇಶಕ್ಕೆ	ಪ್ರವೇಶಕ್ಕೆ
268	11	ಒಂದು	ಬಂದು
272	29	ಗಿಡಮರಗಿಳ	ಗಿಡಮರಗಳ
274	14	ಅಗಲವಾಗಿದೆಯೆಂದರೆ	ಅಗಲವಾಗಿವೆಯೆಂದರೆ
276	15	ನಾವು	ತಾವು
290	24	ಪ್ರಯಾಣ	ಪ್ರಮಾಣ
292	2	ಕೃತ್ತಿಮ	ಕೃತ್ರಿಮ
293	6	ಸಿದವಾಗಿದೆ	ಸಿದ್ಧವಾಗಿದೆ
	12	Pardue	Purdue
297	9	cloorado	Colorado
298	6	ದರ್ಶ	ದರ್ಶನ
	25	ಹನಾಯಿ	ಹವಾಯಿ
306	1	ಲೊಸ್ ಎಂಜೆಲಿಸ್	ಸಾನ್ ಫ್ರಾನ್ಸಿಸ್ಕೋ
311	3	ನ್ಯೂಯಾರ್ಕಾ	ನ್ಯೂಯಾರ್ಕಿ
312	21	ದಡದಲ್ಲಿಯೀ	ದಡದಲ್ಲಿಯೇ
313	7	ತರುಣಿಯ	ತರುಣಿಯರು

ಪುಟ	ಪಂಕ್ತಿ	ತಪ್ಪು	ಒಪ್ಪು
319	19	ಚಲಿಸುತ್ತದೆ	ಚಲಿಸುತ್ತವೆ.
320	17	ಅತನು	ಆತನು
324	10	ಅ	ಆ
333	5	ಹೊಂಗ್‌ಕೂಂಗ್	ಹೊಂಗ್‌ಕೊಂಗ್
335	ಕೊನೆಯ ಪಂಕ್ತಿ	ಕಂಡು ಇವರು "ಅವನ್ನೂ	ಕಂಡು "ಇವರು ಅವನ್ನೂ
340	2	ಮಿನೊಲ್ಟಾ	ಮಿನೊಲ್ಟಾ
348	16	ಸಿಕರಿತ್	ಸಿರಿಕಿತ್
	20	ಈ ಸ್ಥಳದ	ರಂಗಸ್ಥಳದ
352	29	ಸತ್ಕಾರಿ	ಸತ್ಕಾರ
354	ತಾರೀಕು	15-10-1968	10-5-1968
355	14	Bellachine	Ballanchine
359	10	ಸಣ್ಣ ಜ್ವರ ಗಾಳಿ,	ಸಣ್ಣ ಜ್ವರ;
365	ತಾರೀಕು	15-5-1970	15-5-1968
366	ತಾರೀಕು	17-5-1970	17-5-1968
368	8	ಕಂಡುಕೊಂಡು	ಕೊಂಡುಕೊಂಡು
	14	ಲಾಂಪುರಕ್ಕೆ	ಲುಂಪುರಕ್ಕೆ
	ತಾರೀಕು	19-5-1960	19-5-1968
369	6	ತಮ್ಮ	ನಮ್ಮ
	10	Ton kang	Tonkong
373	21	ಪ್ರಯಾಣ	ಪ್ರಯಾಣ
374	1	ಎಂದು	ಎಂದಾಗ
375	20	ನೃತ್ಯ	ನೃತ್ಯ
379	14	ಮೃದುಹೃದಯ	ಮೃದು ಹೃದಯ
382	15	ಆವರು	ಅವರು
385	3	ಕಂಗ	ಕಂಗು
389	16	ತೋರಿಸಿದ	ತೋರಿಸದ
	ಕೊನೆಯ ಪಂಕ್ತಿ	ವಿನೋಲ್ಟಾ	ಮಿನೋಲ್ಟಾ
391	1	ಇನ್ನು	ಇನ್ನು

VIJAYA EVENING COLLEGE.
LIBRARY
BANGALORE-4.
ACCN. NO 3268
SECTION
COST 15-00
Date 20.7.72 Librarian.

3218